UNIVERSAL
LIBRARY
OU_200950
UNIVERSAL
LIBRARY

CHECKED 1956
CHECKED. 1951
Checked 1969
Checked 1963

॥ ಶ್ರೀ ॥

वन्देत्वां भूदेवि आर्यमातरम्

ಕರ್ನಾಟಕ

# ನಂದಿನಿ

ಮಾಸಪತ್ರಿಕೆ

"ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂಚೈವ ಯಃಪ್ರಭು ।
ದಾಸ್ಯನ್ತಿ ಮಮಯೇಂಚಾನ್ಯೆ ಹ್ಯದೃಷ್ಟಾ ಪಥಿ ಗೋಚರಾ ॥"

ಸಂಪುಟ ೧ } ನಳಸಂ॥ ಆಶ್ವಯುಜಮಾಸ ೧೯೧೬ನೇ ಅಕ್ಟೋಬರ್ { ಸಂಚಿಕೆ ೧

## ನಂದಿನೀ ಸ್ತುತಿ

ರಾಗ— (ನಲಿದಾಡೆನ್ನ ನಾಲಿಗೆ ಮೇಲ)

ನಲಿದೈತಾರೆಂಬೆ ಹೇ, ಜಗದಂಬೆ । ನಾ ಬೇಡಿಕೊಂಬೆ ॥ ಪ ॥ ಒಲಿದೈತರೆನೀಂ, ನಲವೇರುತೆನಾಂ । ನಲಿದಾರಾಧಿಪೆ ನೆನ್ನೊಲಿದಂಬೇ ॥ ಅ ॥ ಸಿಂಧುನಂದನೆ ಅರವಿಂದನಯನೆ । ಇಂದು ಸೋದರಿ, ಸಿಂಧುರ ಗಮನೆ ಸುಗುಣಾಭರಣೆ । ವಂದಿಪೆ ಶರ-ದಿಂದುವದನೆ ಸುರವಂದಿತ ಚರಣೆ ॥ ಅಂದಿಗೆ ಕಾಲುಂಗುರ ಘಲಿರೆನೆ । ಇಂದಿರೆ ತವಪದ ದ್ವಂದ್ವವ ಸಾರಿ । ವಂದಿಸುವೆನ್ನೀ ಮಂದಿರಮಧ್ಯದಿ । ಚಂದದಿ ನೆಲಸಿರು ನಂದಿನೀ ಜನನೀ ॥ನಲಿದೈ॥ ೧ ॥ ಶರಗೊಡ್ಡಿ ಬೇಡುವೆ ಶ್ರೀನಾರಿ, ನಿನ್ನೆಡೆ ಸಾರಿ । ಪರತರಸುಖ ಸಂಪದವನು ಕೋರಿ । ಕರುಣಾಲಹರೀ, ಕರವಿಡಿದೆನ್ನ ಪೊರೆ ಮೈದೋರಿ ॥ ಪರಿಪರಿ ವಿಧದಾ ಸಿರಿಸಂಪತ್ತಿಯೊಳ್ । ಗುರು ದೈವಂಗಳ ಸೇವಾವೃತ್ತಿಯೊಳ್ । ಕರುಣಿಸು ದೃಢತರ ಭಕ್ತಿಯನೆನ್ನೊಳ್ । ವರಶೇಷ ಗಿರೀಶನ ಅರಸಿಯೆ ಸಮ್ಮುದದೊಳ್ ॥ನಲಿದೈ॥ ೨॥

(ಶ್ರೀಪಾದರೇಣು)

# ಸಂಪ್ರಾರ್ಥನೆ.

|| ಕಂದ ||

ನಂದಿನಿಯುಂ ವತ್ಸಕುಲಾ
ನಂದಿನಿಯುಂ ಚಿಂತಿತಾರ್ಥ ತೋಷಿತ ವಿಬುಧಾ-
ನಂದಿನಿಯುಂ ನೆನೆದಳಲುಂ
ನಂದಿ, ನಿಜಂಪಡೆಗೆ ಮನುಜನಕ್ಷಯ ಸುಖಮುಂ || ೧ ||

ಕನ್ನಡದ ಮಾತೆ ಮಾತೇ
ಕನ್ನಡದೊಳ್ನಾಡೆ ನಾಡೆ ಮಾತುಂ ನಾಡುಂ ||
ಕನ್ನಡ ಮೆಂದೆನೆ ಪಡೆವುದು
ಕನ್ನಡದಾ ಮಾತೆ, ನಾಡೆ ನಂದಿನಿ ಕರುವಂ || ೨ ||

ಇನಿತೊಂದಂ ಕರುಣಿಸು ನಂ
ದಿನಿ, ತಾಯೆನಗೆನ್ನ ಕುಲಮನುದ್ಧರಿಸುವನಂ ||
ವಿನುತಾವದಾತ ಯಶನಂ
ತನಯನ ನೆಂದೆರಗಿದಂಗೆ ಸತ್ಸಂತತಿಯುಂ || ೩ ||

ತನಯರೊಳೆರಕಂ ತಾಯ್ಗೆನಿ
ತನಿತಂ, ಕರುವಿನೊಳಗೊಲ್ಮೆ ಪಯಕೆನಿತನಿತಂ ||
ಮನವೊಲ್ದು ನಾಡೆ ನಿನ್ನೀ
ತನಯರೊಳೊಲ್ಗಿಂದೆ ಮೆರೆಯೆ ನಂದಿನಿ ಮಾತೇ || ೪ ||

ಪಡೆದನಿತರೊಳಾದುದೆ, ಕ
ನ್ನಡಿಗರ ನಂಬೀ, ಎನುತ್ತೆ ಕೂಗುವ ಕರುವಿಂ ||
ಗೊಡನೆಯ್ದಿ ಬರ್ಪ ಪಯನಂ
ತೊಡನೊಡನೆಮಗೀವುದಂಬೆ, ಬೇಡಿದ ಪನದೊಳ್ || ೫ ||

ನಡೆನುಡಿಯೊಳಾಟಪಾಟದೊ
ಳಡಿದಪ್ಪದೆ ನಡೆಗೆ ಪನ್ನತಿಕ್ಕೆಗೆ ಪೆರವರ್ ||
ಪಡೆಯಲ್ಲರೆಂಬಿನಂ ಕೂ
ರ್ತಡೆವಿಡದಂಬೇ, ನಿರಂತರಂ ಪೊರೆಯೆಮ್ಮಂ || ೬ ||

(ರಾಜಗೋಪಾಲ ತಾತಾರ್ಯ, ಎಮ್ ಎ ; ಎಲ್. ಟಿ.)

# ನಿವೇದನ.

ಭೋ ಪಾಠಕವೃಂದ !

ಸುಖಾನಂದ ಪರಿಪೂರ್ಣವಾದ ಕರ್ಣಾಟಕ ಮಂಡಲದಲ್ಲಿ ವಿಜಯಯಾತ್ರೆಯಿಂದ ಆನಂದಿಸಲು ಇಂದಿನ ವಿಜಯದಶಮಿಯೇ ನನಗೆ ಸುದಿನವಲ್ಲವೆ ? ಭಾಷಾಮಾತೆಯ ಮುದ್ದುಗುವರಿಯ ಮುದ್ದು ಮೊಗವನ್ನು ಮುದ್ದಿಸಲು ಶುದ್ಧಾಂತಃಕರಣದ ಸಾಧ್ವಿಯರೂ, ಗುಣ ವೃದ್ಧೆಯರೂ ಬದ್ಧಾದರರಾಗಿಯೇ ಇರುವರು. ಬಾಲಿಕೆಯಾದ ನಾನು ಅವರ ನಿರ್ಮಲಾಂತರಂಗದಲ್ಲಿ ಪ್ರತಿಬಿಂಬಿಸುವಷ್ಟು ಪುಣ್ಯಪರಿಪಾಕ ವನ್ನು ಪಡೆಯಲು ಎಷ್ಟೋ ಭಗವತ್ಪ್ರಾರ್ಥನೆಯನ್ನು ಮಾಡಬೇಕಾ ಯಿತು ಕೃತಕಾರ್ಯೆಯಾದರೂ ವಿದ್ವನ್ಮಣಿಗಳ ಮತ್ತು ವಿದುಷೀಮಣಿ ಯರ ಮನೋರಂಜನವನ್ನನುಗೊಳಿಸುವಷ್ಟು ಸಾಹಸವು ಈ ನಂದಿನಿ ಯಲ್ಲಿರುವುದೇ- ಎಂಬ ಸಂಶಯವು ಮಾತ್ರ ಇನ್ನೂ ಬಿಟ್ಟುಹೋಗಿಲ್ಲ.

ಈ ನಂದಿನಿಯು ಈಗಲೇ ಕಣ್ಣುಬಿಟ್ಟ ಪುಟ್ಟುಮಗುವು. ಏನ ನ್ನೂ–ಕೇಣ ಕವಡುಗಳೆಂಬ ಕೆಟ್ಟ ಚಾಳಿಗಳೇನನ್ನೂ–ಅರಿಯದವಳು ಈಗೀಗ ತನ್ನ ಪುಟ್ಟ–ಪುಟ್ಟಡಿದಾವರೆಗಳಿಂದ ನಡಿಗೆಯನ್ನು ಕಲಿ ಯಲು ಹೊರಟಿರುವಳು ಎಡವದ, ತಡವರಿಸದೆ, ತನ್ನ ಸಡಗರದ ನಡೆನುಡಿಗಳನ್ನು ನೆಲೆಗೊಳಿಸಲಾರಳು. ಇಷ್ಟರಿಂದಲೇ ಕಂದನಲ್ಲಿ ಅದೊಂದು ದೊಡ್ಡ ಕುಂದೆಂದು ತಿಳಿದು ಜರಿದು ದೂಡುವ ನಡೆನುಡಿ ಗಳು ಕನ್ನಡ ನಾಡಿನಲ್ಲಿ ತಲೆಯೆತ್ತಲಾರದಲ್ಲವ ? ನಿಜ. ಹಾಲು ಕಂದನ ತೊದಲ್ನುಡಿಯಾದರೂ, ಲೋಕಾದರಕ್ಕೆ ಅರ್ಹವಲ್ಲದೆ, ದೋಷೋದ್ಘಾಟನಕ್ಕೆ ಕಾರಣವಾಗಲಾರದು

ಎಳಗುವರಿಯಾದ ಈ ನಂದಿನಿಯು ನೀವು ನಡೆಯಿಸಿದಂತೆ ನಡೆ ಯುವವಳು; ನೀವು ನುಡಿಯಿಸಿದಂತೆ ನುಡಿಯುವವಳು, ನೀವು ಕುಣಿ ಯಿಸಿದಂತೆ ಕುಣಿಯುವವಳು, ನಿಮ್ಮ ಆನಂದವೇ ನಂದಿನಿಯ ಆನಂದ;

ನಿಮ್ಮ ಉತ್ಸಾಹವೇ ನಂದಿನಿಯ ಉತ್ಸಾಹ, ನಿಮ್ಮ ಪ್ರೋತ್ಸಾಹವೇ ನಂದಿನಿಯ ಪ್ರೋತ್ಸಾಹ, ನಿಮ್ಮ ಔದಾಸೀನ್ಯವೇ ನಂದಿನಿಯ ಔದಾಸೀನ್ಯ, ಹೆಚ್ಚೇಕೆ, ನಿಮ್ಮ ಸುಖ ಸಂಪದಭ್ಯುದಯಗಳೇ ನಂದಿನಿಯ ಸಕಲ ಸೌಭಾಗ್ಯ ಸಂಪತ್ತಿ, ನೀವು ಹೇಗಿದ್ದರೆ— ಅವಳೂ ಹಾಗಿರಲುಳ್ಳವಳು,— ಆದುದರಿಂದಲೇ ನಂದಿನಿಯು,— ನಿಮ್ಮ ನಂದಿನಿಯು, ನಿಮ್ಮ ಭಾಷಾನಂದನೆಯು, ನಿಮ್ಮ ದೇಶಾನಂದಿನಿಯು! ಮತ್ತೇನು?

ಕೋಟಿಸಂಖ್ಯೆಯ ಸೋದರವರ್ಗದ ಬಾಂಧವ್ಯದಿಂದಾನಂದಿಸುತ್ತಿರುವ ಸೋದರಿಯಾದ ನಂದಿನಿಯನ್ನು ಎಷ್ಟು ಜನರು ಪ್ರೀತಿಸುವರೋ?— ಎಷ್ಟು ಜನರು ತವರ್ಮನೆಯ ಆನಂದವನ್ನು ವೃದ್ಧಿಗೊಳಿಸುವರೋ— ಅದೇ ನಂದಿನಿಯ ಭಾವಿ ಪುರೋವೃದ್ಧಿಯನ್ನು ಸೂಚಿಸತಕ್ಕದಾಗಿರುವುದು ನೂರು ಲಕ್ಷದ ಭ್ರಾತೃವರ್ಗದಲ್ಲಿ ಹತ್ತುಸಹಸ್ರ ಮಂದಿಯ ವಾತ್ಸಲ್ಯವಾದರೂ ಸೋದರಿಯಲ್ಲಿ ಪ್ರಕಟವಾಗದಿರುವುದೇನು? ಕರ್ಣಾಟಕ ಭಾಷಾ ಮಾತೃಸಂತಾನದಲ್ಲಿ, ಸ್ವಜನ-ಸ್ವದೇಶ-ಸ್ವಭಾಷೆಗಳಿಗಾಗಿ ಹೊಡೆದಾಡುತ್ತಿರುವ ಸತ್ಪುತ್ರರು ಹಲವರಿದ್ದಾರೆಂಬ ಭರವಸೆಯುಂಟು ನಂದಿನಿಯ ಆನಂದವು ಅವರಿಂದಲೇ ಸಂಧಿಸುವುದೆಂಬುದು ನಿಜವು. ಆ ಭರವಸೆಯಿಂದಲೇ, ತನ್ನ ಭಗಿನೀ ಬಂಧುವರ್ಗದಲ್ಲಿ ತನ್ನ ಶೈಶವಕ್ಕುಚಿತವಾದ ಬಹುಮಾನವನ್ನು ಸಮರ್ಪಿಸಿ, ಅಭಿನಂದಿಸುವುದಕ್ಕೂ ಮುಂದಾಗಿಯೇ ಇರುವಳು.

ಚೆನ್ನಾಗಿ ನೋಡಿರಿ, ಬಾಂಧವರೇ!

ನಿಮ್ಮ ಈ ನಂದಿನಿಯು ಗೋಸ್ತನಕವಲ್ಲ ದಿವ್ಯಾಮೃತವನ್ನು ಕರೆವುದರ ಮೂಲಕ ತನ್ನ ಎಷ್ಟೋ ಉತ್ತಮವಾದ ಕರುಗಳನ್ನು ವೃದ್ಧಿಗೊಳಿಸಿ, ಕರ್ಣಾಟಕ ಲೋಕಕ್ಕೆಲ್ಲಾ ಅಮೃತಪ್ರಾಶನ ಮಾಡಿಸುವಳಾಗಿರುವಳು. ಹಾಲು ಬೇಡಿದವರಿಗೆ ಹಾಲು, ಮೊಸರು ಬೇಡಿದವರಿಗೆ ಮೊಸರು, ಬೆಣ್ಣೆಯನ್ನು ಬಯಸುವವರಿಗೆ ಬೆಣ್ಣೆ, ತುಪ್ಪವನ್ನು ಕೇಳುವವರಿಗೆ ತುಪ್ಪ, ಬೇಕಾದವರಿಗೆ ಬೇಕೆಂದುದನ್ನು ನೀಡುವ ಕಾಮಧೇನುವೇ ನಂದಿನಿಯಾಗಿರುವಾಗ ನಂದಿನಿಯ ಪ್ರಾದುರ್ಭಾವಕ್ಕೆ ಬೇರೆ ಫಲವಿನ್ನೇನನ್ನು ಹುಡುಕಬೇಕು -

ಮತ್ತೊಂದು ಮಾತು — ವರ್ಷಕ್ಕೊಂದು ಬಾರಿ ನಂದಿನಿಯು, 'ಚಂದಾ' ಎಂಬ ಗ್ರಾಸ [ತೃಣ] ವನ್ನು ತಿಂದು, ಜ್ಞಾನಾಮೃತವನ್ನು ಕರೆಯಲು ಕರ್ಣಾಟಕ ಮಂಡಲವೆಂಬ ನಡುಕೊಟ್ಟಗೆಯಲ್ಲಿ ಒಂದು ನಿಂತಿರುವಳು. ಕ್ಷೀರಪಾನ ಮಾಡುವವರೆಲ್ಲರೂ ಮಾಡಲಿ, ಬೇಕಾದ ವರಿಗೆಲ್ಲಾ ಕುಡಿಸಲಿ ಪಂಚಗವ್ಯದಿಂದ ಶುದ್ಧರಾಗುವವರೂ ಆಗಲಿ ಆದರೆ, ಗೋವಧೆಗಾಗಲೀ, ಗೋಹಿಂಸೆಗಾಗಲೀ, ಅವರ ಮನಸ್ಸು ಪ್ರವರ್ತಿಸದೆ ಪ್ರಸನ್ನತೆಯಲ್ಲಿದ್ದರೆ ತನ್ನಂತಹ ಧನ್ಯರಿಲ್ಲವೆಂಬುದೇ ನಂದಿನಿಯ ಭಾವನೆ ಇದೇ ನಂದಿನಿಯ ತೊದಲ್ನುಡಿ ಇನ್ನು ಇನ್ನಷ್ಟು ಮಾತನಾಡಬಹುದು.

ಆರ್. ಶ್ರೀನಿವಾಸರಾವ್  
ಶೇಷಾದ್ರಿಪುರಂ,  
ಬೆಂಗಳೂರು

ಇಂತು ನಿವೇದಿಸುತ್ತಿರುವ  
ಭಾಷಾಮಾತೆಯ ಮುದ್ದುಗುವರಿ,  
**ನಂದಿನಿ**

## ನಂದಿನಿಯ ಕೋರಿಕೆ

ನನ್ನ ಪರಮ ಪ್ರಿಯ ದೇಶಭಗಿನಿಯರೇ !

ನಮ್ಮ ಕರ್ಣಾಟಕದಲ್ಲಿ ಸ್ತ್ರೀಯರು, ಲೋಕೋಪಯೋಗಿ ಕಾರ್ಯದಲ್ಲಿಯಾಗಲೀ, ಸಮಾಜದ ಕಲ್ಯಾಣಕ್ಕೆ ಬೇಕಾಗುವ ಸುಧಾರಣಾ ವಿಷಯಗಳಲ್ಲಿ ಅಭಿಪ್ರಾಯವನ್ನು ಕೊಡುವುದರಲ್ಲಿಯಾಗಲೀ ಅರ್ಹರಾಗಿಲ್ಲವೆಂದೂ, ಸ್ತ್ರೀಯರು ಗೃಹಕಾರ್ಯವೊಂದಲ್ಲದೆ ಮತ್ತಾವುದರಲ್ಲಿಯೂ ಅನುಭವ ವಿಲ್ಲದವರೆಂದೂ ಅಪವಾದ ಉಂಟಾಗಿದೆಯಷ್ಟೆ? ಅದನ್ನು ತಪ್ಪಿಸ ಲೆಂದೇ ಹುಟ್ಟಿರುವ ನಂದಿನಿಯ ಮೂಲಕ ನಾವೆಲ್ಲರೂ ಏಕಮತ ದಿಂದ ನಮ್ಮವರ ಗೃಹಶಿಕ್ಷಣ, ಶಾಲಾಶಿಕ್ಷಣಗಳೇ ಮೊದಲಾದ ವಿಷಯ ಗಳಲ್ಲಿ ಅನುಭವಸಿದ್ಧವಾದ ಅಭಿಪ್ರಾಯಗಳನ್ನು ಪ್ರಕಟಿಸಿ, ಲೋಕ ಹಿತವನ್ನು ಹೆಚ್ಚಿಸಬೇಕೆಂದು ಕೋರಿದೆ

# ಭಗಿನಿಯರಲ್ಲಿ ಭಿಕ್ಷೆ.

ಪ್ರಿಯ ಭಗಿನಿಯರೇ!

ಹಿಡಿ ಭಿಕ್ಷೆಯನ್ನು ಬೇಡುವೆನು, ಕೊಡುವಿರೋ? ಘುಡುಘುಡಿಸಿ ಹೊಡೆದಟ್ಟುವಿರೋ? ಏನು ಮಾಡುವಿರಿ? ಹೇಳಿರಿ, ತಾಯಿಯರೇ! ಒಲಿದಕ್ಕಂದಿರೇ! ಚಿಕ್ಕ ತಂಗಿಯರೇ!! ಏನು? ಪಡಿನುಡಿಯಿಲ್ಲವೇಕೆ? ಅಭಿಮತವಿಲ್ಲವೋ? ಇಲ್ಲದಿದ್ದರೆ 'ಅಬಲಾ ಸ್ವಭಾವವೇ ವಿಲಕ್ಷಣ' ವೆಂಬುದನ್ನು ಸ್ಪಷ್ಟಪಡಿಸಬೇಕೆಂಬ ಉದ್ದೇಶದಿಂದಲೋ, ಅಥವಾ ಪುರಂಧರ ದಾಸರಾಡಿದ "ಇಕ್ಕಲಾರದ ಕೈಯೆಂಜಲು॥ ಚಿಕ್ಕ। ಮಕ್ಕಳು ಅಳುವರು ಹೋಗೋ ದಾಸಯ್ಯ॥" ಎಂಬ ಪದವನ್ನು ನೆನಪಿಗೆ ತೆಗೆದುಕೊಂಡು ಹೀಗೆ ನಂದಿನಿಯಲ್ಲಿಷ್ಟು ವಿನೋದ ಮಾಡಲೆಳೆಸುತ್ತಿರುವಿರೋ? ಹಾಗಾಗಿರಬೇಕು ಏಕೆಂದರೆ, ಭಿಕ್ಷೆಯನು ಕೊಡುವುದರಲ್ಲಿ ನಮ್ಮ ಭಗಿನಿಯರನ್ನು, ಸಮಸ್ತ ಪುರಾಣೇತಿಹಾಸಗಳೂ, ಸರ್ವತೋಮುಖದಿಂದ ಸ್ತುತಿಸುತ್ತಿರುವವು. ದಯಾಮಯಿಯರಾದ ಆ ನಮ್ಮ ಆರ್ಯಭಗಿನಿಯರು ತಮ್ಮಲ್ಲಿ ಯಾಚಿಸಲು ಬಂದ ಭಿಕ್ಷುಕರಿಗೆ, ಅತಿಥಿ-ಅಭ್ಯಾಗತರಿಗೆ, ಆಶ್ರಿತಾನಾಥರಿಗೆ ತಮ್ಮ ಶಕ್ತಿವಂಚನೆಯಿಲ್ಲದಂತೆ ತಮ್ಮ ಧರ್ಮ, ಧ್ಯೇಯ, ಕರ್ತವ್ಯಗಳಿಗೆ ವಿರೋಧವಾಗದಂತೆ ಭಿಕ್ಷೆ, ಉಪಚಾರ, ಅಭಯಪ್ರದಾನಗಳಿಂದ ಆದರಿಸಿ, ಅವರಿಗೆ ಚಿರಸ್ಮರಣೀಯರಾಗಿದ್ದಾರೆಂಬುದಕ್ಕೆ ಅದಿತಿ, ಮದಯಂತಿ, ದ್ರೌಪದಿ ಮೊದಲಾದ ಮಹಿಳಾಮಣಿಯರ ಸಚ್ಚರಿತ್ರವೇ ಸಾಕಾಗಿದೆ ಹೆಚ್ಚೇಕೆ? ಅನುಕಂಪನ, ದಯಾ, ದಾತೃತ್ವ, ಕಾರ್ಯಾಕಾರ್ಯ ವಿವೇಚನೆಗಳಲ್ಲಿ, ನಮ್ಮ ಭಗಿನೀವೃಂದಕ್ಕೆ ಸಲ್ಲುತ್ತಿರುವ ಸನ್ಮಾನಕ್ಕೆ ಸೀಮೆಯೇ (ಮೇರೆ) ಇಲ್ಲವೆಂಬುದು ನನ್ನ ಭರವಸೆ ಹೀಗಿದ್ದು ನಿಮಗೆ ಅಭಿಮತವಿಲ್ಲವೆಂದು ನಾನು ಹೇಗೆ ಭಾವಿಸಲಿ? ಹೇಗೂ ವಿನೋದಶೀಲರಾದ, ವಿಶುದ್ಧ ವಿಜ್ಞಾನಸ್ವರೂಪಿಯರಾದ ನಿಮ್ಮಲ್ಲಿ ಹೇಳುವದಿಷ್ಟೆ— ಇಲ್ಲಿ ಭಕ್ಷವನ್ನು ಬೇಡುವವರು ದಾರಿಹೋಕರಾಗಿ ಬಂದಿರುವ 'ಭಿಕಾರಿ'ಗಳೇನೂ

ಅಲ್ಲ ಮತ್ತೆ ಬೇಡುವ 'ಭಿಕ್ಷೆ'ಯೆಂದರೆ ನಿಮ್ಮಲ್ಲಿಯ ದವಸ, ಧಾನ್ಯಾದಿಗಳೇನೂ ಅಲ್ಲ. ಅಲ್ಲದೆ, ಇದರಿಂದ—ಈ ಭಿಕ್ಷೆಯನ್ನು ಕೊಡುವುದರಿಂದ—ನಿಮ್ಮನ್ನು ನಷ್ಟಪಡಿಸಬೇಕೆಂದೂ ನಾನು ಬೇಡುತ್ತಿಲ್ಲ. ಮತ್ತೇನೆಂದರೆ—ನನ್ನ ಭಗಿನಿಯರೇ! ನಾನು ಬೇಡುವ ಭಿಕ್ಷೆಯೆಂದರೆ ನಿಮ್ಮ ಒಂದೇ ಒಂದು ಹಿಡಿಯಲ್ಲಿ ಅಡಗಬಹುದಾದ ಆ ನಿಮ್ಮ ಸದಯಾಂತಃಕರಣದ 'ದೈವಿಕ ಪ್ರೇಮ' ವೆಂಬ ರಸವಸ್ತುವನ್ನು ಮಾತ್ರವೇ!

ಅದೇನೆನ್ನುವಿರಿ? ' ಪ್ರೇಮವನ್ನು ನಿಮ್ಮ ಪಾಲುಮಾಡಿದರೆ ನಮಗೇನು ಗತಿ?' ಎನ್ನುವಿರೋ? ಹಾಗೆ ಶಂಕಿಸಬೇಕಾಗಿಲ್ಲ ಸೋದರಿಯರೇ, ನಿಮ್ಮ ಪ್ರೇಮವೆಲ್ಲವನ್ನೂ ನಿಮ್ಮಿಂದ ಹೊರದೆಗೆದು ಹಾಕಬೇಕೆಂದು ನಾನು ಬೇಡುವುದಿಲ್ಲ ಆ ನಿಮ್ಮ ಪ್ರೇಮರಸವು ಹೊರಹೊಮ್ಮುವಂತೆ, ನಿಮ್ಮ ಆದರಾತಿಥ್ಯರೂಪದಿಂದ ಒಂದೊಂದೇ ಹನಿಯಷ್ಟಾದರೂ ಈ ನಿಮ್ಮ 'ನಂದಿನಿ'ಯೆಂಬ ನೂತನ ಶಿಶುವಿಗೆ ಒಲಿದಿತ್ತು ಬೆಳೆಯಿಸಬೇಕೆಂದು ಮಾತ್ರ ಕೋರುವೆನಲ್ಲದೆ ಬೇರೇನೂ ಇಲ್ಲ ಇಲ್ಲಿ ನಂದಿನಿಗೆ ನೀವು ತೋರುವ ಆದರಾತಿಥ್ಯವೆಂಬುದು ಮತ್ತೇನೆನ್ನುವಿರೋ? ಭಗಿನಿಯರೇ ಕೇಳಿರಿ —

ನಾನು ಹುಟ್ಟಿರುವುದು, ಈ ಕರ್ನಾಟಕ ದೇಶ ಮಾತೃಗರ್ಭದಲ್ಲಿ, ಜನ್ಮವನ್ನೆತ್ತಿರುವುದು ಕೇವಲ ಸೇವೆಗಾಗಿ! ಸೇವೆಯೆಂದರೆ ಮುಖ್ಯವಾಗಿ ಭಗಿನೀಸೇವೆಯೇ ಆಗಿರುವುದು ಈ 'ಭಗಿನೀ' ಸೇವೆಯೇ ಮಾತೃಸೇವೆಗೆ ಮಾರ್ಗದರ್ಶಕವಾದುದೆಂದು ನನ್ನ ನಂಬಿಕೆ ಹೀಗಿರುವುದರಿಂದ ಭಗಿನೀ ಸೇವೆಯೊಂದೇ ಮುಖ್ಯ ಗುರಿಯಾಗಿಟ್ಟುಕೊಂಡು ಅಖಂಡವಾದ ಕರ್ಮಕ್ಷೇತ್ರದಲ್ಲಿ ಕಾಲಿಡುತ್ತಿರುವ ಈ ನಂದಿನಿಯು ಇಂದಿನ ಬಲವದುದ್ಯಮಕ್ಕೆ ಉಕ್ಕಂದವಾವುದಿರಬೇಕು? ನಿಮ್ಮ ಸ್ವರ್ಗೀಯ ಪ್ರೇಮದ ಲಾಲನೆಯೊಂದೇ ಆಗಿದೆಯಷ್ಟೆ ಸಾಕು; ಅದೊಂದು ಮಾತ್ರ ನಮಗೆ ಸ್ಥಿರವಾಗಿರಲಿ, ಸಾಕು

ಎಂದರೆ ನೀವು ಬರಿಯ ತುದಿನಾಲಿಗೆಯಿಂದ, " ನಂದಿನಿ, ನನ್ನ ಮುದ್ದಿನ ನಂದಿನಿ, ಆಹ್ಲಾದಿನಿ ಹೃದಯಾನಂದಿನಿ" ಇತ್ಯಾದಿಯಾಗಿ ವರ್ಣಿಸಿದ ಮಾತ್ರಕ್ಕೆ ನಿಮ್ಮ ಪ್ರೇಮಭಿಕ್ಷೆಯು ನಂದಿನಿಗೆ ದೊರೆತಂತಾ

ಗಲಿಲ್ಲ. ಆ ವರ್ಣನೆಯು ನಿಮಗೆ ಸೇರಿದುದಲ್ಲ. ಏಕೆನ್ನುವಿರಿ? ನಂದಿನಿಯ ಹಿತಚಿಂತನೆ, ಅಭ್ಯುದಯಾ ಕಾಂಕ್ಷೆಗಳು ನಿಮ್ಮಲ್ಲಿದ್ದರೆ, ನೀವು ನಂದಿನಿಯನ್ನು ನಮ್ಮ ಭ್ರಾತೃವರ್ಗೀಯರಲ್ಲಿ ಶಾಸ್ತ್ರಪಾರಂಗತರಾದ, ಕವಿತಾಸಂಪನ್ನರಾದ ಮಹನೀಯರು, ಕೇವಲ ಮುಖಸ್ತುತಿ, ಸ್ತ್ರೀ ಗುಣವರ್ಣನೆಗಳಲ್ಲಿ ಮಾತ್ರವೇ ತಮ್ಮ ಪಾಂಡಿತ್ಯಪ್ರಭೆಯನ್ನು ವ್ಯಯ ಮಾಡುತ್ತಿರುವಂತೆ ನೀವು ಮಾಡುವುದು ಸರಿಯಲ್ಲ ಈ ನಂದಿನಿಯು ನಿಮ್ಮ ಅಗ್ರಹವನ್ನಾದರೂ ಸಹಿಸಬಲ್ಲಳಲ್ಲದೆ, ಆ ನಿಮ್ಮ ವರವರ್ಣನೆಯ ವಿಡಂಬನದ ಕಾಲಹರಣವನ್ನು ಮಾತ್ರ ಸಹಿಸುವಳಲ್ಲವಾದುದರಿಂದ ನಂದಿನಿಯಲ್ಲಿರುವ ಕುಂದನ್ನು ತೆಗೆದು ತೋರಿ, ಮುಂದೆ ಎಂದೆಂದಿಗೂ ಕಂದದೆ, ಕುಂದದೆ, ಆನಂದದಾಯಿನಿಯಾಗಿರುವಂತೆ ಪರಿಷ್ಕರಿಸುತ್ತ ಅಡಿಗಡಿಗೂ, ಎಂದರೆ, ನಿಮ್ಮ ಕಂದರನ್ನು ಕೊಂಡಾಡುವ, ಮುದ್ದಾಡುವ ಕಾಲಗಳಲ್ಲಿ, ಇವಳಿಗೂ ಒಂದಿಷ್ಟು ಹೊತ್ತನ್ನು ತೆಗೆದಿಟ್ಟು, ದಿನವೂ ಇವಳ ಆಟಪಾಟಗಳನ್ನು ಲಕ್ಷಪೂರ್ವಕವಾಗಿ ನೋಡಿ, ಕಾಲಕ್ಕೆ ತಕ್ಕಂತೆ ಬುದ್ಧಿಗಲಿಸುತ್ತ ಬರಬೇಕೆಂಬುದೇ ನಂದಿನಿಗೆ ನೀವು ಮಾಡುವ ಆದರಾತಿಥ್ಯ! ಅದೇ ಅವಳಿಗೆ ನೀವು ಕೊಡಬೇಕಾಗಿರುವ ಭಿಕ್ಷೆ!! ಅದೇ ಅವಳ ಅಭ್ಯುದಯಕ್ಕೆ ನೀವು ತೋರಬೇಕಾದ ಆಶ್ರಯಸಂಪತ್ತಿ!!! ಅದೀತೋ?

ಅದೀತೆನ್ನುವಿರಲ್ಲವೇ? ಧನ್ಯ! ನಂದಿನಿಯ ಭಿಕ್ಷಾಯಾತ್ರೆಗೆ ಧನ್ಯತೆ! ಭಿಕ್ಷೆಯನ್ನು ಕೊಡಲೊಪ್ಪಿದ ನಿಮ್ಮ ಆತ್ಮವಿಶ್ವಾಸಕ್ಕೂ ಧನ್ಯವಾದಗಳು. ಆದರೆ ಒಂದೆರಡು ಮಾತುಗಳು— ಸೋದರಿಯರೇ!

ಈ ವರೆಗೆ ನೀವು ಹಲವು ಭಾಷಾಸಂತಾನಗಳನ್ನು ನೋಡಿರುವಿರಿ ಹಲವರನ್ನು ಬರಿಯ ಕಾಗದ ಕಟ್ಟುಗಳೆಂದು ಉಪೇಕ್ಷಿಸಿ, ಮೂಲೆಯಲ್ಲೆಸೆದು, ಕೆಲವು ವೇಳೆಗಳಲ್ಲಿ ನಿಮ್ಮ ಮಕ್ಕಳ ಹೇಸಿಕೆಯನ್ನೆತ್ತುವದಕ್ಕಾಗಲೀ, ಇಲ್ಲವೇ ಮತ್ತಾವುದಾದರೂ ಪೊಟ್ಟಣಗಳನ್ನು ಸುತ್ತುವದಕ್ಕಾಗಲೀ ಉಪಯೋಗಿಸಿಯೂ, ಉಪಯೋಗಿಸುತ್ತಲೂ ಇರುವಿರಿ.

ಹಾಗೆಯೇ ನಂದಿನಿಯುನ್ನೂ ಮಾಡಿದರೆ ಗತಿಯೇನು! ಇದೇ ದೊಡ್ಡ ಭೀತಿ? ಸಹಜವಷ್ಟೆ? 'ಅದೇನು? ಈವರೆಗೆ ಹುಟ್ಟಿರುವ ಪತ್ರಿಕೆಗಳೆಲ್ಲಕ್ಕೂ ನಂದಿನಿಯು ಮೇಲೆಯೋ? ಅದೇನಿವಳ ಹೆಚ್ಚಿಗೆ! ಅವರಿಗಾದ ಗತಿಯೇ ಇವಳಿಗಾಗಬಾರದೇಕೆ?' ಎಂದು ಆಕ್ಷೇಪಿಸುವಿರಲ್ಲವೆ? ಹಾಗಿದ್ದರೆ ನೋಡಿರಿ, ನಂದಿನಿಯಂತೆ ಸೋದರೀಸೇವೆಯೇ ತನ್ನ ಧ್ಯೇಯವಾಗಿಟ್ಟು, ಸೋದರಿಯರ ಪರಸ್ಪರ ಸೌಜನ್ಯಾಭಿವೃದ್ಧಿಯೇ ತನ್ನ ಶ್ರಮಕ್ಕೆ ಪ್ರತಿಫಲವೆಂದು ನಂಬಿ ನಂದಿನಿಯಂತೆ, ಸ್ತ್ರೀಯಾಗಿ, ಸ್ತ್ರೀಯಿಂದ—ಕೇವಲ ಇತಿಕರ್ತವ್ಯತಾ ಪರಿಪಾಲನ ರೂಪದಿಂದ—ಸ್ತ್ರೀಯರ ಅಭ್ಯುದಯ, ಆಕಾಂಕ್ಷೆಗಳನ್ನು ನಿರುಪಾಧಿಕ, ನಿರವಧಿಕ ತೇಜೋರೂಪಗಳಿಂದ ಪ್ರಕಟ ಮಾಡಬೇಕೆಂಬ ಗುರಿಯು ಮತ್ತೆಲ್ಲಿ? ಯಾವ ಕರ್ನಾಟಕ ಸ್ತ್ರೀಕರ್ತೃತ್ವದಿಂದ ವಹಿಸಲ್ಪಟ್ಟಿತು? ಇಲ್ಲವಷ್ಟೆ? ಹಾಗಿದ್ದ ಬಳಿಕ, ಸ್ತ್ರೀ ಸ್ವಭಾವವನ್ನು ಪುರುಷರು ತೆಗದಾಡುತ್ತಿರುವುದಾದರೂ ನಿಮಗೆ ಸಮ್ಮತವೊ? ಅದೂ ಇಲ್ಲ. ಏಕೆಂದರೆ, ಪುರುಷರು ಸ್ತ್ರೀಯರ ವಿಚಾರವನ್ನು ತೆಗೆದೆತ್ತಿಯಾಡುವುದು ಅಸಹ್ಯ ವಿಚಾರವೆಂದು ಹೇಳುವಿರಲ್ಲವ? ಹಾಗಿದ್ದರೆ, ಸ್ತ್ರೀಯರ ಸ್ವಭಾವ ಪರಿವರ್ತನಾ ಸ್ಥಿತಿ, ಸಂಸ್ಕರಣಾಕ್ರಮಗಳನ್ನು ಕುರಿತು ಸ್ತ್ರೀಯರಿಂದಲೇ ಕಾಲಕ್ಕೆ ತಕ್ಕ ವೇಷಭಾಷೆಗಳಿಂದ ಸ್ತ್ರೀಯರಿಗಾಗಿ ಹೊರಡುವ ಸ್ವತಂತ್ರ ಪತ್ರಿಕೆಯು ಕನ್ನಡ ನಾಡಿಗೆಲ್ಲಕ್ಕೂ ಒಂದೇ ಒಂದಾದ ಇದಕ್ಕೆ ನಿಮ್ಮ ಮಾತೃಹೃದಯವು ಅವಕಾಶವನ್ನು ಕೊಡಬಾರದೇನು? ಕೊಡುವಿರಷ್ಟೆ! ದೃಢವಾಗಿರಲಿ! ನಿಮ್ಮಿಂದಿನ ದೃಢಸಂಕಲ್ಪವು ಮತ್ತೆ ಬೇಡುವೆನು, ನಂದಿನಿಯನ್ನು ಸಕ್ಕರೆ ಪೊಟ್ಟಣಗಳನ್ನು ಸುತ್ತುವ ಕಾಗದಗಳೆಂದು ದುರ್ಲಕ್ಷಿಸಿ ಬಿಡಬಾರದು, ಅಕ್ಕರೆಯಿಂದೆತ್ತಿ ನೋಡಿ, ವಿಚಾರ ಮಾಡುತ್ತ ಬರಬೇಕಾದ ಶ್ರಮವನ್ನೂ, ಆಸಕ್ತಿಯನ್ನೂ ಮನಸ್ಸಿಗೆ ವಹಿಸಿಕೊಟ್ಟು, ಶಿಶುಸಂರಕ್ಷಣದ ಬಲವತ್ಕಾರ್ಯವು, ಮಾತೃಪ್ರೇಮ ಪ್ರೇರಿತ ಹೃದಯೆಯರಾದ ನಿಮ್ಮಿಂದಲೇ ವಹಿಸಲ್ಪಡಬೇಕಾಗಿರುವದರಿಂದ, ಈ ವರೆಗೆ ನಾವು ಹಲವು ಪತ್ರಿಕಾಶಿಶುಗಳ ಕಡೆಗೆ ಉಪೇಕ್ಷೆಯನ್ನು ವಹಿಸಿ, ಅನ್ಯಾಯವಾಗಿ ಅವುಗಳನ್ನು ಬಾಲಗ್ರಹ

ಪೀಡಾದಿ ಹಲವು ರೋಗಗಳಿಂದ ಅತ್ಯಲ್ಪಕಾಲದಲ್ಲಿಯೇ ಅಂತಿಮ ಸ್ಥಿತಿಗೆ ಬರುವಂತೆ ಮಾಡಿಬಿಟ್ಟಿವೆಂದೂ, ನಮ್ಮ ಅನಾದರ ಭಾವನೆಯನ್ನು ನೋಡಿ ನಮ್ಮ ಅರಸರೂ ಅವುಗಳ ವಿಚಾರವನ್ನೇ ದೂರ ಮಾಡಿದರೆಂದೂ, ಇದರಿಂದ ದೇಶಮಾತೆಯು ಅಂತಸ್ತಾಪಕ್ಕೂ, ಭಾಷಾಮಾತೆಯು ಅವನತಸ್ಥಿತಿಗೂ ನಾವು ಕಾರಣರೆನ್ನಿಸಿ, ನಮ್ಮ ಸ್ವರ್ಗೀಯ ಪ್ರೇಮವನ್ನು ವೃಥಾ ದುಂದುವೆಚ್ಚ ಮಾಡಿಕೊಂಡೆವೆಂದು ತಿಳಿದು, ಇನ್ನು ಮುಂದೆಯಾದರೂ ಈ ನಿಮ್ಮ ಮುದ್ದಿನ ಕಂದನಾದ ನಂದಿನಿಯ ಇಂದಿನ ದೀನವಾಣಿಗೆ ಸನ್ಮಾನವಿತ್ತು ನಂದಿನಿಯೇ ಮೊದಲಾಗಿ, ಇತರ ಪತ್ರಿಕಾಶಿಶುಗಳ ಮೇಲ್ವಿಚಾರಣೆಯೂ ನಮ್ಮ ಕರ್ತವ್ಯಕ್ಕೆ ಸೇರಿದ್ದೆಂದು ದೃಢವಾಗಿ ಅಭಯಪ್ರದಾನ ಮಾಡುವಿರಾದರೆ, ಅದಕ್ಕೂ ಹೆಚ್ಚಾದ ವರವು ನಮಗೇನು ಬೇಕಾಗಿದೆ ?

ಭಗಿನಿಯರೇ ! ಬಾರಿಬಾರಿಗೂ ಭಗಿನಿಯರಿಗೆ, ತಾಯಿಯರಿಗೆ ಹೀಗೆ ಮೊರೆಯಿಡುತ್ತಿರುವ ನಂದಿನಿಯ ವಿಷಯದಲ್ಲಿ ಎಷ್ಟೇ ಕಠಿಣ ಹೃದಯದವರಾಗಿದ್ದರೂ ಮರುಮರುಗಿ ಮಾತನಾಡಿಸದಿರಲಾರರೆಂಬ ನಂಬುಗೆ ನನಗಿದೆ. ಇಂದು ನೀವು ಒಂದುವೇಳೆ ಈ ನಂದಿನಿಯನ್ನು ಉಪೇಕ್ಷಿಸಿ ತಿರಸ್ಕರಿಸಿದರೂ, ಈ ಉದಾಸೀನವು ಹೀಗೆಯೇ ಇರುವದೆಂದಾಗಲೀ, ಇದನ್ನು ನೀವು ಮನಃಪೂರ್ವಕವಾಗಿ ಮಾಡಿದುದೆಂದಾಗಲೀ ನಾನು ಭಾವಿಸಲಾರೆನು. ಇದರಿಂದ, ಈ ನಿಮ್ಮ ಉಪೇಕ್ಷೆಯಿಂದ "ನಿಮ್ಮ ನಿಮ್ಮ ಅರಸರ, ಹಿತಚಿಂತಕರ ಪುರುಷಹೃದಯವು ಈ ವಿಷಯದಲ್ಲಿ ನಮ್ಮನ್ನು ಎಷ್ಟುಮಟ್ಟಿಗೆ ಪ್ರೇರಿಸುವದೆಂಬುದನ್ನು ಪರೀಕ್ಷಿಸಲಿಕ್ಕೆಂದೇ" ಮಾಡಿರುವಿರೆಂದು ನಂಬುವೆನು ಏಕೆಂದರೆ, ಆ ನಮ್ಮ ಪುರುಷಬಾಂಧವರು ಸಭೆ, ಸಂಘ, ಸಮ್ಮೇಲನ, ಪರಿಷತ್ತುಗಳೆಂಬ ಹಲವು ಕೂಟಗಳನ್ನು ನಿರ್ಮಿಸಿ, ಸಂಘಶಕ್ತಿಯ ಮಹತ್ತ್ವವನ್ನು ಹೊರಗೆಡಹುವ ಪ್ರಯತ್ನದಲ್ಲಿರುವದರಿಂದ, ಆ ತಮ್ಮ ಪ್ರಯತ್ನಕ್ಕೆ ಸ್ತ್ರೀಯರ ಐಕಮತ್ಯವೂ, ಸಹಾನುಭೂತಿಯು ಪ್ರೋತ್ಸಾಹವೂ, ಸಹಕರಿಸುವಂತಾದಲ್ಲದೆ, ತಮ್ಮ ಶ್ರಮಕ್ಕೆ ತಕ್ಕ ಫಲವು ದೊರೆಯಲಾರದೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕೆಂದು ನೀವು ಹಲವು

ಬಗೆಯಾಗಿ ಪರೀಕ್ಷಿಸಲೇಬೇಕೆಂದೂ, ಪರೀಕ್ಷಾನಂತರದಲ್ಲಿ ಪ್ರೋತ್ಸಾಹ ಸಹಾಯಗಳನ್ನು ಕೊಡಲು ಸಿದ್ಧರಾಗಿ ನಿಲ್ಲಬೇಕೆಂದೂ ಮತ್ತೆ ಮತ್ತೆ ಬೇಡುತ್ತಿರುವೆನು

ಇಷ್ಟಾಗಿ, ಇನ್ನು ನಮ್ಮ ಭ್ರಾತೃವರ್ಗದಲ್ಲಿ ಬೇಡುವುದೇನಿದೆ? 'ಭಗಿನಿಯರಲ್ಲಿಯೇ ಪೊರೆಯಿಡುತ್ತಿರುವ ನಂದಿನಿಯನ್ನು ನಾವೇಕೆ ವಿಚಾರಿಸಬೇಕೆಂಬ' ಅಲಕ್ಷಭಾವವನ್ನು ಮಾತ್ರ ವಹಿಸಬೇಡಿರಿ, ಬಂಧುಗಳೇ! ನಂದಿನಿಯು, 'ತಾಯಿಯನ್ನು ಒಲಿಸಿಕೊಂಡರೆ, ತಂದೆಯು ನನ್ನವನಾಗುವ'ನೆಂಬ ತತ್ವವನ್ನು ಚನ್ನಾಗಿ ಮನಗಂಡಿರುವಳು "ಭಗವಂತನ ಸುಪ್ರಸನ್ನತೆಗೆ, ಆತನ ದಯಾರೂಪವಾದ ಆದಿಶಕ್ತಿಯನ್ನೇ— ಆ ಜಗನ್ಮಾತೆಯನ್ನೇ — ಆಶ್ರಯಿಸಬೇಕೆಂಬ" ರಹಸ್ಯವು ಇವಳ ಅನುಭವಕ್ಕೆ ಬಂದೇ ಇರುವುದರಿಂದ, ಹೊರಬಾಗಿಲಲ್ಲಿ ನಿಂತು 'ಭಗವತಿ, ಮಾತೆ, ತಾಯಿ, ಅಕ್ಕ, ಅಮ್ಮ' ಎಂದಿಂತು ಕೂಗಿದರೆ ಬಂಧುಗಳಾದ ನೀವೇ ಮನಗಂಡು, ಮುಂದಾಗಿ ಬಂದು, ನಂದಿನಿಯನ್ನು ಕೂಗಿ ಕರೆದೊಯ್ದು, ನಿಮ್ಮ ಉದಾರಹಸ್ತದಿಂದ ನಿಮ್ಮ ಅರಸಿಯರ ಕೋಮಲ ಹಸ್ತದಲ್ಲಿ ಒಪ್ಪಿಸಿ, ಶಿಶುಪೋಷಣೆಯ ಭಾರವನ್ನೇ ಅವರ ತಲೆಯ ಮೇಲೆ ಹೊರೆಯಿಸಿ, ನೀವು ಸಂತೋಷಪಡುವಿರೆಂದು, ನಾನು ಮನಸ್ಸಾಕ್ಷಿಯಿಂದ ಸಾರಿಸಾರಿ ಹೇಳಬಲ್ಲವಳಾಗಿರುವೆನು. ಆದುದರಿಂದ, ನಿಮ್ಮ ನಿಮ್ಮ ಕರ್ತವ್ಯವನ್ನು ನೀವು ನಡೆಯಿಸಿದರೆ ಸಾಕೆಂದು ಬೇಡುವುದಲ್ಲದೆ, ಮತ್ತೇನನ್ನೂ ಕೋರಲಾರೆನು.

ಭಾಷಣವು ಬಹು ವಿಸ್ತಾರವಾಯಿತು, ಇಂದಿಗೆ ಇಷ್ಟಕ್ಕೆ ಸಾಕಾಗಿರಲಿ; ಮತ್ತೆ ಉಳಿದುದನ್ನು ಮುಂದಿನ ತಿಂಗಳಲ್ಲಿ ಹೇಳುವೆನು ಸೋದರಿಯರೇ! ಮತ್ತೆ ಭಿಕ್ಷೆಯನ್ನು ಬೇಡುವೆನು. ಕೊಡುವೆನೆಂದು ಪಡಿನುಡಿಯಿತ್ತು ಬೀಳ್ಕೊಡಿರಿ, ತಾಯಿಯರೇ! ನೋಡಿರಿ, ನಮ್ಮ ಭಗಿನೀವರ್ಗದಲ್ಲಿ, ಹಿತೈಷಿಣೀ, ನಂದಿನಿಯರಿಗೆ ಆಶ್ರಯವನ್ನು ಕಲ್ಪಿಸಿ, ನವಶಕ್ತಿಯುತ್ಪನ್ನವಾಗುವಂತೆ ಪ್ರೋತ್ಸಾಹಿಸುತ್ತಿರುವ ಮಹಿಳೆಯರೆಂದರೆ, ಶ್ರೀಮತಿ ಸೌಭಾಗ್ಯವತಿ ಪಾರ್ವತಾಂಬಾ (ಕೌನ್ಸಿಲರ್ ಶ್ರೀ॥ ಕೆ. ಎಸ್. ಚಂದ್ರಶೇಖರಯ್ಯರ್ ಬಿ. ಏ, ಬಿ ಎಲ್ ರವರ ಧರ್ಮ

ಪತ್ನಿ) ಯವರೂ, ಶ್ರೀಮತಿ ಸೌಭಾಗ್ಯವತಿ ರಂಗನಾಯಕಮ್ಮ (ಅಮಲ್ದಾರ್ ಶ್ರೀ|| ಎನ್. ಗೋಪಾಲಯ್ಯಂಗಾರ್ಯರ್ ಬಿ ಏ, ಯವರ ಧರ್ಮಪತ್ನಿ) ನವರೂ ಮುಖ್ಯರಾಗಿರುವರು. (ಇವರು ಮಾಡಿರುವ ಆದರಾತಿಥ್ಯ, ಪ್ರೋತ್ಸಾಹ, ಉದಾರಾಶ್ರಯಗಳನ್ನು ಕುರಿತು ಮುಂದೆ ಅವಕಾಶಾನುಸಾರವಾಗಿ ಹೇಳುವೆವು) ಅವರ ಮೇಲ್ಪಙ್ಕ್ತಿಯನ್ನೇ ಅನುಸರಿಸಿ, ನೀವೆಲ್ಲರೂ ನಿಮ್ಮನಿಮ್ಮ ನಿಜವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿ, ನಂದಿನಿಯಲ್ಲಿ ನಿಮ್ಮ ಸಹೃದಯಭಾವವನ್ನು ನೆಲೆಗೊಳಿಸಿ, ಸೋದರೀ ಸಮ್ಮೇಲನದಿಂದ ಸ್ತ್ರೀಸಮಾಜಕ್ಕೆ ಬೇಕಾಗಿರುವ ಮುಖ್ಯ ಮುಖ್ಯ ಸಂಸ್ಕರಣೋಪಾಯಗಳನ್ನು ನಿಮ್ಮ ನಿಮ್ಮ ಅನುಭವಪೂರ್ವಕವಾದ ಹಿತಸೂಚನೆಗಳಿಂದ ಬರೆದು ಕಳುಹಿ, ಉದ್ದೇಶ ಸಾರ್ಥಕ್ಯತೆಯನ್ನು ಹೊಂದುವಂತೆ ಮಾಡಬೇಕೆಂದು ಪ್ರಾರ್ಥಿಸುವುದಲ್ಲದೆ, ನಮ್ಮ ಭಗಿನೀ ವರ್ಗಕ್ಕೆ, ಭಗವತೀ ಮಾತೃದೈವವೇ ಪೋಷಕಳಾಗಿದ್ದು, ಸದಾ ಕಾಲವೂ, ಸುಕ್ಷೇಮ, ಸೌಭಾಗ್ಯ ಸಂಪತ್ತಿಗಳನ್ನು ಅನುಗ್ರಹಿಸುವುದರಿಂದ, ನಂದಿನಿಯನು ಚಿರಜೀವಿನಿಯನ್ನಾಗಿ ಮಾಡೆಂದು ತ್ರಿಕಾಲದಲ್ಲಿಯೂ ಬೇಡುತ್ತಿರುವೆನು

# ಭರವಸೆ.

ಬಾಂಧವರೇ '

ಹಿಂದೆ ಹೆಸರಿಗ ಬಂದು, ಆಶೆಯನ್ನುಂಟು ಮಾಡಿ, ಅತ್ಯಲ್ಪಕಾಲದಲ್ಲಿಯೇ ಅಜ್ಞಾತರಾಗಿ ಹೋಗಿರುವ ಭಾಷಾಸಂತಾನಗಳಂತೆಯೇ ನಂದಿನಿಯೂ ಕೂಡ, ಬಾಲಗ್ರಹ ಪೀಡೆಗೆ ಗುರಿಯಾಗಿ ಹೋಗುವಳೆಂದು ಭಯಪಡಬೇಡಿರಿ ನಂದಿನಿಗೆ ಭಗವತಿಯು ರಕ್ಷೆಯನ್ನು ಕಟ್ಟಿ ಆವದೇ ರೋಗ, ಭಯ, ಕಂಟಕಗಳಿಗೂ ಗುರಿಯಾಗದಂತೆ ವರವಿತ್ತು ಪೊರೆಯುತ್ತಿರುವಳು ಸಂಶಯಕ್ಕವಕಾಶಕೊಡದ ನಂದಿನಿಯಲ್ಲಿ ನಂಬಿಕೆಯನ್ನಿಡಬಹುದೆಂದು ಧೈರ್ಯದಿಂದ ಭರವಸೆಯನ್ನು ಕೊಡಬಲ್ಲೆವು. ಸಹೃದಯದಿಂದ ಸಹಾನುಭೂತಿಯನ್ನು ತೋರಿಸಿ ಧನ್ಯರಾಗಿರಿ.

ಇಂತು ಬೇಡುತ್ತಿರುವ ಬಾಲೆಯಾದ,

**ನಂದಿನಿ.**

# ಸಂದೇಶ

ದೇಶಭಗಿನಿಯರೇ! ದೇಶಬಾಂಧವರೇ!!

ಹಿತೈಷಿಣಿಯೊಡನೆ ಕರ್ಣಾಟಕ ನಂದಿನಿಯನ್ನು ಹೊರಡಿಸಲುದ್ಯಮಿಸಿರುವದರಿಂದ, ಹಾಗೂ ಈ ಘನಘೋರ ಸಂಗ್ರಾಮ ಸಂಬಂಧವಾದ ಕ್ಷಾಮದ ಹಾಹಾಕಾರವು ಹತ್ತಿ, ನಮ್ಮ ಬಂಧುಗಳ ವದನದ್ವಾರಾ ಪತ್ರಚಾಲನವೃತ್ತಿಯ ತಾಪಗಳು ಅನೇಕ ವಿಧವಾಗಿ ಹೊರಹೊರಡುತ್ತಿರುವ ಈ ವಿಷಮಸ್ಥಿತಿಯಲ್ಲಿ, ಹಿಂದುಮುಂದು ನೋಡದೆ ಈ ಬಲವದುದ್ಯಮಕ್ಕೆ ಕೈನೀಡಿ ನಿಂತಿರುವುದರಿಂದ ನಮ್ಮಲ್ಲಿ ನೀವು ಅತ್ಯಾಗ್ರಹಗೊಂಡಿರುವಿರೇನು! ಕ್ಷಮೆಯಿರಲಿ!

ನಾವು ನಮ್ಮ ಸ್ವಬುದ್ಧಿಬಲದಿಂದ ಹೆಮ್ಮೆಗೊಂಡು ಇದನ್ನು ಹಿಡಿಯಲಿಲ್ಲ. ಅಲ್ಲದೆ, ನಮ್ಮ ಬಾಂಧವರಲ್ಲಿ ಆತ್ಮಪ್ರತಿಷ್ಠೆಯನ್ನು ಪ್ರದರ್ಶಿಸಿ, ಹೆಸರುವಾಸಿಗಳಾಗಬೇಕೆಂಬ ಮಹತ್ವಾಕಾಂಕ್ಷೆಯಿಂದಾದರೂ ಪ್ರವರ್ತಿಸಲಿಲ್ಲ. ಮೂರು ವರ್ಷಗಳಿಂದಲೂ ಮನದಲ್ಲಿ ಮಾಡಿದ ಮಂಡಿಗೆಯಂತಿದ್ದು, ಅದು ಈಗ ಅನಿವಾರ್ಯ ಪಕ್ಷದಿಂದ, ನಮ್ಮ ದೇಶಭಗಿನಿಯರು ಮೇಲೆ ಮೇಲೆ ತ್ವರೆಪಡಿಸುತ್ತಿದ್ದುದರಿಂದ, ನಮ್ಮ ಭಗವತೀ ಮಾತೆಯ ಆಜ್ಞಾವಚನದಿಂದ ನಮ್ಮಲ್ಲಿ ನವಶಕ್ತಿಯುತ್ಪನ್ನವಾಗಿ ಗುರುಜನರ ಆಶೀರ್ವಾದವನ್ನು ಹೊಂದಿ, ಈ ಕಾರ್ಯವನ್ನು ಕೈಗೊಳ್ಳುವಂತೆ ಮಾಡಿತು.

ನಂದಿನಿಯ ಜನ್ಮಧಾರಣೆಯು ಆರಿಗೂ ಆವ ಆಗ್ರಹಕ್ಕೂ ಕಾರಣವಾಗದಂತೆ, ಸ್ತ್ರೀಜನಾಂಗದಲ್ಲಿ ಪರಸ್ಪರೈಕಮತ್ಯವುಂಟಾಗುವುದರಿಂದ ನಮ್ಮ ದೇಶದ ವಿದ್ಯಾಸಂಪದಭ್ಯುದಯಗಳು ಹೆಚ್ಚುವಂತೆ ಮಾಡಬೇಕೆಂಬುದೇ ನಮ್ಮ ಮುಖ್ಯ ಗುರಿಯಾಗಿರುವುದು. ಇದಕ್ಕಾಗಿ ಕೆಳಗೆ ವಿವರಿಸುವ ನಿಯಮಗಳನ್ನು ನಮ್ಮ ಆಚರಣೆಗೆ ತರಲು ಸಂಕಲ್ಪಿಸಿರುವೆವು

೧. ದೇಶದ ಏಳಿಗೆಗೆ ಸ್ತ್ರೀಜನಾಂಗದ ಕರ್ತವ್ಯತತ್ಪರತೆಯೇ ಕಾರಣವೆಂಬುದನ್ನು ನಮ್ಮ ಎಳದಂಗೆಯರ ತಿಳಿವಿಗೆ ತರಬೇಕಾದುದು.

೨. ನಮ್ಮ ಹೆಣ್ಣುಮಕ್ಕಳ ವಿದ್ಯಾಭ್ಯಾಸವು ಯಾವ ಬಗೆಯದಾಗಿರಬೇಕು? ಈಗಿನ ಶಾಲಾಶಿಕ್ಷಣದಿಂದಲೇ ನಮ್ಮವರು ಏಳಿಗೆಗೆ ಬರಬಹುದೇ? ಅಥವಾ ಈಗಿನ ಶಾಲಾ ಶಿಕ್ಷಣದಲ್ಲಿ ಮಾಡ

ಬೇಕಾದ ಸುಧಾರಣೆಗಳೇನಾದರೂ ಉಂಟೆ ? ಎಂಬ ವಿಚಾರ ದಲ್ಲಿ ನಮ್ಮವರ ಅಭಿಪ್ರಾಯವನ್ನು ಪ್ರಕಟಪಡಿಸುವುದು

೩ ನಮ್ಮವರ ಆಚಾರ-ವ್ಯವಹಾರದಲ್ಲಿ ಸೇರಿರುವ ಅತಿರೇಕಗಳನ್ನು-ಅನರ್ಥಕ ಇಲ್ಲವ ಪ್ರಯಾಸಕರಗಳಾದ ಅಂಶಗಳನ್ನು-ಕ್ರಮ ಪಡಿಸಿ, ನಮ್ಮವರ ಸ್ವರೂಪ, ಕರ್ತವ್ಯಗಳಿಗೆ ಅವಶ್ಯಕವಾದ ವಿಚಾರಗಳನ್ನು ಸಕಾರಣವಾಗಿ ವಿಮರ್ಶಿಸುವುದು

೪ ನಮ್ಮ ಬಾಲಿಕಾ ಶಿಕ್ಷಣದ ಕಡೆಗೂ, ಸ್ತ್ರೀಯರ ನಿತ್ಯ ಸೇವಾ ವಿಚಾರದ ಕಡೆಗೂ ನಮ್ಮ ದೇಶಬಾಂಧವರು ಕೊಡಬೇಕಾದ ಆಸಕ್ತಿ, ಮತ್ತು ಅನಾಥೆಯರಾಗಿ, ಸಮಾಜಶಾಸನಕ್ಕೆ ಬಲಿ ಬಿದ್ದು ಕ್ಲೇಶ-ರೋಷಗಳಿಂದ ನರಲುತ್ತಿರುವ ಆ ದೀನ ದುಃಖಿ ಯರಾದ ವಿತಂತು ಭಗಿನಿಯರಲ್ಲಿ ನಮ್ಮವರೂ, ನಮ್ಮ ಭ್ರಾತೃವರ್ಗೀಯರೂ ತೋರಿಸಬೇಕಾದ ವಿಶ್ವಾಸಗೌರವ ಇವನ್ನು ಕುರಿತು ವಿಚಾರಮಾಡುವುದು

ಈ ನಾಲ್ಕು ಅಂಶಗಳು ಮುಖ್ಯ ನಿಯಮಗಳಾಗಿದ್ದು, ಕಾಲೋ ಚಿತವಾಗಿ ಇತರ ವಿಚಾರವಿಮರ್ಶನ ಕಡೆಗೂ ಗಮನ ಕೊಡಬೇಕೆಂದು ಮಾಡಿರುವೆವು ಇದಕ್ಕಾಗಿಯೇ ಈಗ ನಾವು ಭಗಿನಿಯರಲ್ಲಿ ಭಿಕ್ಷೆ, ಅಬಲಾದೌರ್ಜನ್ಯ ಎಂಬ ಈ ಎರಡು ಉಪನ್ಯಾಸ ಲೇಖಗಳನ್ನು ಪ್ರಕಟಿಸುತ್ತಿರುವೆವು ನಮ್ಮವರಲ್ಲಿ ಕರ್ತವ್ಯತತ್ಪರತೆಯೂ, ದೈವಭಕ್ತಿ ಯೂ ಹೆಚ್ಚುವಂತೆ ಪ್ರೋತ್ಸಾಹಿಸುವ ಉದ್ದೇಶದಿಂದ ನಂದಿನಿಯ ಕಾಣಿಕೆಯಾಗಿ ಸುಮುಖಿವಿಜಯವೆಂಬ ಸಾಧ್ವೀ ಚರಿತೆಯೊಂದನ್ನು ಸಮರ್ಪಿಸಿರುವವು ಉಳಿದವುಗಳನ್ನು ಮುಂದೆ ಕ್ರಮವಾಗಿ ಪ್ರಕಟ ಪಡಿಸುತ್ತ ಬರುವೆವು.

ಪ್ರಕೃತದಲ್ಲಿ ಈ ನಮ್ಮ ಬಲವದುದ್ಯಮದಲ್ಲಿ ನಮ್ಮನ್ನು ಆಗ್ರಹ ದಿಂದ ನಿಷ್ಕರಪಡಿಸದೆ ಭ್ರಾತೃಸಹಾಯದ ಸಹಾನುಭೂತಿಯನ್ನು ತೋರಿಸಿ ಪ್ರೋತ್ಸಾಹಿಸಬೇಕೆಂದು ನಮ್ಮ ಭಗಿನೀ ಬಾಂಧವರೆಲ್ಲ ರಲ್ಲಿಯೂ ಪ್ರಾರ್ಥಿಸಿ ಮುಂದಕ್ಕಡಿಯಿಡುವೆವು.

ಇತಿ— **ನಂದಿನಿ** ಮತ್ತು **ಹಿತೈಷಿಣಿ.**

॥ ಶ್ರೀ ॥

# ಭಾವನಾಲೋಕ.

"ತ್ವಂ ಯೋಗಿಹೃತ್ಪದ್ಮಜ ಸಂಸ್ಥಿತಾಸಿ-
ಅನೇಕ ರೂಪಾಸಿ ಜಗನ್ತಿ ಪಾಸಿ ॥
ತದೇಕರೂಪಂ ಪರಿಚಿನ್ತ್ಯ ನೈವಿ-
ಯೋಗೇಶ್ವರಿ ! ತ್ವಾಂ ತತ ಆಶ್ರಯಾಮಿ ॥"

## ಪ್ರಥಮ ದೃಶ್ಯ

ಶ್ರಾವಣಮಾಸದ ಮೊದಲು ದಿನ,— ಆ ಪಾಡ್ಯದ ದಿನ,— ಹಗಲು ಮೂರನೆಯ ಜಾವ, ನನ್ನ ಊಟಪಾಟಗಳೆಲ್ಲವೂ ಮುಗಿದಿದ್ದವು. ಮುಂದಿನ ಕಾರ್ಯಕ್ರಮಗಳೇನೆಂದು ನನ್ನಲ್ಲಿ ನಾನೇ ವಿಚಾರಮಾಡುತ್ತ ಕುಳಿತಿದ್ದೆನು ಕುಳಿತಿದ್ದ ನನ್ನ ಮನಸ್ಸಿಗೆ ಏನೋ ಕಳವಳವುಂಟಾಯಿತು ಏತರಿಂದ, ಹೇಗೆ, ಏತಕ್ಕಾಗಿ ಹಾಗಾಯಿತೆಂಬುದು ತಿಳಿಯಲಿಲ್ಲ ಹೇಗೂ ಬಿಕ್ಕಿಬಿಕ್ಕಿ ಅಳುವಂತಾಯಿತು ಇದೇನೆಂದು ತಿರುಗಿ ನೋಡಿದೆನು. ಏನೂ ಕಾಣಲಿಲ್ಲ, ಆದರೂ, ಅಳುವು ಮಾತ್ರ ನಿಲ್ಲಲಿಲ್ಲ, ಅಷ್ಟೇ ಅಲ್ಲ! ಅಲ್ಲಿ ಕುಳಿತಿರುವುದಕ್ಕೂ ನನಗಾಗಲಿಲ್ಲ, ಎದ್ದುನಿಂತೆ, ಕಣ್ಣುತ್ತಲೆ ಸುತ್ತಿತು. ನನ್ನೆರಡು ಕೈಗಳಿಂದಲೂ ಮೋರೆಯನ್ನು ಮುಚ್ಚಿಕೊಂಡು ನಿಂತುಬಿಟ್ಟೆನು. ಒಂದೆರಡು ಗಳಿಗೆ ನಿಂತಿದ್ದೆನಷ್ಟು, ಅಷ್ಟರಲ್ಲಿ ಯಾರೋ ಕೂಗಿ ಕರೆದರು. "ಕಣ್ದೆರೆ, ಕಿರುಮಗಳೇ! ಕಣ್ದೆರೆ!! ಬಾ, ಬೇಗ ಹೊರಟು ಬಾ" ಕಣ್ದೆರೆದು ನೋಡಿದೆನು; ಯಾರೂ ಕಾಣಲಿಲ್ಲ. "ಕೂಗಿ ಕರೆದವರಾರು? ಇದೇನು! ಕ್ಷಣಾರ್ಧದಲ್ಲಿ ನನ್ನ ಅಳುವು ಅದೆಲ್ಲಿ, ಏನಾಗಿ ಹೋಯಿತು?" ಮತ್ತೆ ಮತ್ತೆ ವಿಚಾರಮಾಡುತ್ತ ಸಾವಧಾನದಿಂದ ನೋಡಿದೆನು. ನೋಡವು

ನಾಲ್ಕು ಕಡೆಯಿಂದಲೂ ಮುಸುಕಿಕೊಂಡಿದ್ದಿತು. ಆಡಿಗಡಿಗೆ, ಗಡಗಡ ಗುಡಗುಡ ಶಬ್ದದಿಂದ, ಗಗನವು ಕೂಗುತ್ತಿದ್ದಿತು ಬರಿಯ ಆರ್ಭಟ, ಆತ್ಮವಿಶ್ವಾಸವಿಲ್ಲದ, ಪ್ರಯತ್ನಶೀಲರಲ್ಲದ, ಪರಾನುಕರಣಪಟುಗಳ ವಾಗಾಡಂಬರದಂತೆ ಬರಿಯ ಅಬ್ಬರವೇ ಇದು! ಹೇಗಾದರೂ ಇರಲಿ, ನನ್ನ ದೃಷ್ಟಿಯೇನೋ ಸೂಕ್ಷ್ಮ, ಅತ್ಯಂತ ಸೂಕ್ಷ್ಮವಾಯಿತು ಬಹು ದೂರ ನೋಡಿದೆನು. ಆ ಮೇಘಮಂಡಲದಿಂದ ನಾನಿದ್ದಲ್ಲಿಗೆ ಅದಾವುದೋ ಬೆಂಕಿಯ ಕಿಡಿಯೊಂದು ಬರುತ್ತಿದ್ದಂತೆ ತಿಳಿದೆನು. ಬೆಜ್ಜರಗೊಂಡೆನು. ಮತ್ತೆಮತ್ತೆ ನೋಡಿದೆನು ಬರುತ್ತಿದ್ದುದು ಕಿಡಿಯಲ್ಲ, ಹೆಸರಾದ ಉಡುಪತಿಯೆಂದು ತಿಳಿದೆನು ತಲೆಯೆತ್ತಿ, ಕಿವಿಯನ್ನು ನಿಗರಿಸಿ, ಕಣ್ಣುಗಳನ್ನು ಅರಳಿಸಿ, ಕೈಗಳನ್ನು ಮೇಲಕ್ಕೆತ್ತಿ, ಒಂಟಿಗಾಲಿನಿಂದ ನಿಂತು ಆತುರದಿಂದ ನೋಡತೊಡಗಿದೆನು.

ಒಂದೆರಡು ನಿಮಿಷದಲ್ಲಿ ನಾನಿದ್ದಲ್ಲಿಗೆ ಆ ನಕ್ಷತ್ರವರನು ಬಂದು ನಿಂತು, ನನ್ನನ್ನು ಕುರಿತು ಉಬ್ಬಿನಿಂದ ಹೇಳಿದನು ' ಏಕೆ ನಿಂತಿರುವೆ. ನಡೆ, ಹೊರಡು, ಬೇಗ ಹೊರಡು ! '

ನಾನು ಕೇಳಿದೆನು, ' ಎಲ್ಲಿಗೆ ಹೊರಡುವುದು ಉಡುರಾಜ ? ' (ಉಡುರಾಜ ಎಂದರೆ, ಇಲ್ಲಿ ಚಂದ್ರನೆಂದಲ್ಲ. ನಕ್ಷತ್ರಗಣದಲ್ಲಿ ವಿರಾಜಮಾನನಾಗಿರುವನೆಂದು)

ಉಡುರಾಜ —'ಹೋಗುವದೆಲ್ಲಿಗೆ ? ಕಾಣುವದಿಲ್ಲವೇ ತಂಗಿ ! ಸುತ್ತಮುತ್ತಲಿನ ಪರಿಸ್ಥಿತಿಗಳೇನೆಂದು ತಿಳಿಯಲಿಲ್ಲವೇ ? '

ನಾನು — ' ಏನೆಂದು ಕೇಳುವೆ, ಅಣ್ಣಾ! ನೋಡ, ಗುಡುಗು, ಸಿಡಿಲು ಮಿಂಚುಗಳಿಂದ ಜಗತ್ತೇ ಮಬ್ಬಿನಲ್ಲಿ ಮುಳುಗಿ ಹೋಗಿದೆ ಏನೆಂದು ಹೇಳಲಿ ? '

ಉಡು — " ನಿನಗಿದರ ಮರ್ಮವೇನೆಂಬುದಿನ್ನೂ ಗೊತ್ತಿಲ್ಲ ಹೊರಡು, ತಂಗೀ ! ಮುಂದೆ ಇದೆಲ್ಲವನ್ನೂ ಚನ್ನಾಗಿ ತಿಳಿಯುವೆ, ನಡೆ. "

ನಾನು —ಮತ್ತೆಮತ್ತೆಯೂ ಹೊರಡು ಹೊರಡೆಂದೇಕೆ ಹೇಳುತ್ತಿರುವೆ ? ಎಲ್ಲಿಗೆ ಹೋಗಲಿ ?

ಉಡು — ಎಲ್ಲಿಗೆಂದರ, ಗುಡುಗು-ಸಿಡಿಲುಗಳ ಕಾಟವಿಲ್ಲದ ಕಡೆಗೆ, ಮನದಳಲು ಕಡಿಮೆಯಾಗಿ, ಕಾರ್ಯಸಿದ್ಧಿಯು ಉತ್ತಮ ಫಲವನ್ನು ಹೊಂದುವ ಕಡೆಗೆ, ಮತ್ತೆಲ್ಲಿಗೆ?

ನಾನು — "ಬಿಡು, ಅಣ್ಣ! ಸುಮ್ಮನೆ ಕಾಡದೆ ಬಿಡು, ನಾನು ಬಲು ಬಳಲಿರುವನು, ಜನದ ಸಂದಣಿಯುಲ್ಲಿರಲಾರದೆ, ಇಲ್ಲಿಗೆ ಬಂದೆನು. ಇಲ್ಲಿಯೂ ನಿಲ್ಲಗೊಡದ ನನ್ನನ್ನೇಕೆ ತ್ವರೆಗೊಳಿಸುತ್ತಿರುವೆ? ಬೇಕಾದರೆ ನೀನೊಬ್ಬನೇ ಹೋಗು"

ಉಡು —(ಗುಡುಗನ್ನು ಅಣಕಿಸುವಂತೆ ಒಂದುಬಾರಿ ನಕ್ಕು) 'ಏನಂದ, ತಂಗಿ! 'ಬರಲಾರೆ, ನೀನು ಹೋಗು! ಅಲ್ಲವೇ? ಸರಿ, ಬಿಡು! ನೀನು ಇನ್ನೂ ಈಗ ಕಣ್ತೆರೆಯುತ್ತಿರುವವಳು ಕಣ್ತೆರೆದೊಡನೆ ಮಿಂಚು, ಸಿಡಿಲು, ಗುಡುಗುಗಳನ್ನು ಕಂಡರೆ ಕಂಗೆಟ್ಟು, ತಲ್ಲೀನವಾಗಿ ಹೋಗುವೆ ಹಾಗಾದರೆ ನಿನ್ನಿಂದಾಗಬೇಕಾದ, ನೀನು ಇನ್ನುಮುಂದೆ ಮಾಡಬೇಕಾದ, ಕೆಲಸಗಳ ಬೆಟ್ಟದಷ್ಟು ಹೊರೆಯೂ ಹಾಗೆಯೇ ಬಿದ್ದು ಹೋಗುವುದು. ಹೀಗೆಂದು ತಿಳಿದು ನಿನ್ನನ್ನು ಎಚ್ಚರಿಸಿದೆನು, ನಿನಗಿಷ್ಟವಿಲ್ಲದಿದ್ದರೆ, ಈ ಮೇಘಾವರಣ ಮಧ್ಯದಲ್ಲಿಯೇ ನೀನೂ ಒಬ್ಬಳಾಗಿದ್ದು ನರಲುತ್ತಿರಬೇಕೆಂದಿದ್ದರೆ, ಹಾಗೆಯೇ ಮಾಡು ನಾನಿದೋ ಹೋಗುವೆನು ಹೊರಡಲೋ, ಬೇಗ ಹೇಳು'

ನಾನು — ಎಚ್ಚತ್ತೆನು, ಕೇಳಿದೆನು "ಕೋಪಿಸಬೇಡ, ತಾಳು ತಾಳಣ್ಣ! ಸ್ವಲ್ಪ ನಿಲ್ಲು, ಒಂದೇ ಮಾತಿಗೆ ಮುಳಿದೆದ್ದು ಹೋಗಬೇಡ ಅದೇನೆಂದು ಚೆನ್ನಾಗಿ ತಿಳಿಯಹೇಳು, ಈ ವರೆಗೆ ನೀನೆಲ್ಲಿದ್ದೆ? ಎಲ್ಲಿಂದ ಬಂದೆ? ಮತ್ತೆಲ್ಲಗೆ ಹೋಗುತ್ತಿರುವೆ? ನಾನೆಲ್ಲಿಗೆ ಬರಬೇಕು?"

ಉಡು -- ಸರಿ ಸರಿ, ಬಿಡು ನೀನೇನು ಕಣಿಯ ಕಲ್ಲಕ್ಕನೇ ಆಗಿರುತ್ತೀಯೆ ಎಷ್ಟುಬಾರಿ ಹೇಳಬೇಕು? ಹೋಗಲಿ, ಇದೊಂದೇ ಬಾರಿ ಹೇಳುವೆನು ಕೇಳು ನಾನು ಈವರೆಗಿದ್ದುದು ಈ ಮೇಘಮಂಡಲದ ಮಧ್ಯದಲ್ಲಿಯೇ ಈಗ ಬಂದುದು ಮಾತ್ರ ಮನೋಜಯ ನಂದನದಿಂದ, ಇದೇ ಹೋಗಿದ್ದು ಮರಳಿ ಬಂದೆನು ಏಕೆಂದರೆ, ನಿನ್ನನ್ನು

ಕರೆಯುಲು ನಾನಿನ್ನು ಹೋಗಬೇಕಾದ ಕಡೆ ಇಂತಹದೆಂದು ಈಗಲೇ ಹೇಳುವಂತಿಲ್ಲ ನೀನು ಹೋಗಬೇಕಾದುದೆಂದರೆ ನೋಡು, ಆ ದೈವೀ ಪ್ರೇಮದ ಮನೋಜಯು ನಂದನವನಕ್ಕೆ! ಹೋಗಲೊಪ್ಪೆಯೊ?

ನಾನು —'ಒಪ್ಪದಿಲ್ಲ, ತಪ್ಪದೆ ಒಪ್ಪಿಬರುವೆನು ಆಗಲಿ, ಮೊದಲು ಇಷ್ಟು ಹೇಳು? ಆ ನಂದನದಲ್ಲಿ ನಮ್ಮನ್ನು ಬಿಡಗೊಡುವರಾರು? ನಾವಿರುವದೆಲ್ಲಿ? ನಮ್ಮ ಊಟ-ಪಾಟ ಸವಿನೋಟಗಳ ಪಾಡಿಗೇನು? ಇಲ್ಲಿಂದ ಬಂದರೆ, ನಂಟರಿಷ್ಟರನ್ನುಳಿದು ಬಂದರೆ, ನಮಗೆ ಕುಂದು ಬಾರದೇ?'

ಉಡು — "ಓಹೋ! ಎಷ್ಟು ದೂರದ ಯೋಚನೆಯಿದು, ತಂಗೀ? ಇರಬೇಕು, ಇವೆಲ್ಲವೂ ನಮ್ಮಲ್ಲಿ, ಹಾಗೂ ಮಾತೆಯ ಪ್ರಿಯ ಪುತ್ರಿಯರಾದ ನಿನ್ನಂತಹರಲ್ಲಿ, ಮತ್ತೂ ಚೆನ್ನಾಗಿರಬೇಕು ಆದರೆ ಹೇಳುವನು ಕೇಳು! ನೀನು ಈಗ ಹೋಗುವುದು ಅಲ್ಲಿಯೇ ನೆಲಸುವುದಕ್ಕಲ್ಲ, ಊಟ-ಪಾಟಗಳಿಗಾಗಿ ಅಲ್ಲಿ ನೀನೇನೂ ಎಷ್ಟೂ ದುಡಿಯಬೇಕಾಗಿಲ್ಲ, ಮತ್ತೆ ಬಿಡುವರೋ, ಇಲ್ಲವೂ ಎಂಬ ಶಂಕೆಯು ನಿನಗೇಕೆ? ಹೆತ್ತ ತಾಯಿಯನ್ನು ನೋಡಹೋಗುವವರಿಗೆ, ಆ ತಾಯಿಯ ಆತ್ಮಸಮಾಧಾನಕ್ಕಾಗಿ ಪ್ರಯತ್ನವನ್ನು ಹಿಡಿಯುತ್ತಿರುವ ಮಕ್ಕಳಿಗೆ, ತಡೆಮಾಡುವವರಾರು? ಅಥವಾ ಅಂತಹರ ಮೇಲೆ ಮಿಥ್ಯಾಪವಾದಗಳನ್ನು ಹೊರೆಸುವ ಮೂರ್ಖರಾದರೂ ಯಾರು? ಇದೆಲ್ಲವೂ ಬರಿಯ ಕಾಲಹರಣ ಮಾತ್ರವೇ"

ನಾನು — ಕುತೂಹಲದಿಂದ ಕೇಳಿದೆನು, "ಅಣ್ಣಾ, ಮಿಥ್ಯಾರೋಪಿಗಳಿಗೆ ಕಡಮೆಯಿಲ್ಲ, ಬೇಕಾಗಿದ್ದರೆ ಒಂದುಬಾರಿ ನೋಡು, ನಮ್ಮವರಲ್ಲಿ ತಂದೆ-ತಾಯಿ ಮಕ್ಕಳ ವಿಷಯದಲ್ಲಿಯೇ ಶಂಕಾಪವಾದವನ್ನು ಹೊರೆಯಿಸಿ, ಅನರ್ಥವನ್ನುಂಟು ಮಾಡಿ, ನೋಡಿ, ನಲಿದಾಡುವವರು ಎಷ್ಟೋ ಮಂದಿ ಇರುವರು. ಆಮಾತು ಹಾಗಿರಲಿ; ನಮ್ಮ ತಾಯಿ ಇರುವಳೆಂದು ಹೇಳಿದೆಯಲ್ಲವೇ? ಆದೆಲ್ಲಿರುವಳು?

ಉಡು — ಆ ತಾಯಿಯು, ಈಗ ವನಮಧ್ಯದ ಗುಪ್ತಗೃಹದಲ್ಲಿರುವಳು.

ನಾನು — ಅಲ್ಲೇನು ಮಾಡುತ್ತಿರುವಳು ?

ಉಡು — ನಿಟ್ಟುಸಿರಿಟ್ಟು ಹೇಳಿದನು— " ಏನು ಮಾಡುತ್ತಿರುವಳೆಂದರೆ, ಏನು ಹೇಳಲಿ ತಂಗೀ? ತನಗೆ ಮೊದಲಿಂದಲೂ ಸಲ್ಲುತ್ತಿದ್ದ ಮರ್ಯಾದೆಯು ತಪ್ಪಿಹೋದ ಬಳಿಕ ಏನು ಮಾಡುವಳು ? ಇದ್ದೂ ಅನುಭವಿಸುವುದಕ್ಕಾಗದ ಸಂಪತ್ತನ್ನು ಕಂಡು ಮತ್ತೇನು ಮಾಡುವಳು ? ಅಂತಸ್ತಾಪಗಳಿಂದ—ನೀರವರೋದನದಿಂದ—ದೇಹವನ್ನು ಕೃಶಮಾಡುತ್ತ ನಿರ್ಜನಪ್ರದೇಶದಲ್ಲಿ ತಪಿಸುತ್ತಿರುವಳಲ್ಲದೆ ಮತ್ತೇನು ಮಾಡುವಳು ? "

ನಾನು — ಆತುರದಿಂದ ಕೇಳಿದೆನು,—ಏನೆಂದೆ ? ಅಣ್ಣಾ–ಅಣ್ಣಾ ! ತಪಿಸುತ್ತಿರುವಳೇ ? ನಾವು ಜೀವಿಸಿದ್ದೂ ಆ ನಮ್ಮ ತಾಯಿಗೆ ಈ ಪಾಡೇ ? ನಾವು ಬೇಕಾದಷ್ಟು ಭೋಗ ಭಾಗ್ಯಗಳಿಂದ ಬೀಗಿ ಬಿರಿದು ಹೋಗುವಂತಿದ್ದರೂ ನಮ್ಮ ತಾಯಿಗೆ ಅನುಭವಿಸುವುದಕ್ಕಿಲ್ಲವೇ ? ತಾಯಿಯು ಬಳಿಯಲ್ಲಿದ್ದೂ, ನಾವು ತಬ್ಬಲಿಗಳಂತೆ-ಆ ತಾಯಿಯನ್ನು ಕಳೆದುಕೊಂಡವರಂತೆ ಹೀಗೆ ಅಳುತ್ತಿರಬೇಕೇ ? ಏನಿದು ? ಅಣ್ಣಾ! ಇದೇನೀ ಅನ್ಯಾಯ ? ಹೀಗಾಯಿತೇಕೆ ? ಯಾರಿಂದಾಯ್ತು ?

ಉಡು — ಕಣ್ಣೀರು ತುಂಬಿ ಗದ್ಗದಸ್ವರದಿಂದ ಹೇಳಿದನು,— ತಂಗೀ ! ಅದೆಲ್ಲವನ್ನೂ ವಿವರಿಸಬೇಕೆಂದರೆ ವರ್ಷಾವಧಿಯಾದರೂ ಸಾಲದು ಮುಖ್ಯವಾಗಿ ಭಂಡರೂ ಉಂಡಾಡಿಗರೂ ಆದ ನಮ್ಮವರಿಂದಲೇ— ಆ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದವರೆಂದು ಹೇಳುವುದಕ್ಕೂ ಯೋಗ್ಯರಲ್ಲದಿರುವ ಬಾಹಿರರಾದ ನಮ್ಮಿಂದಲೇ—ನಮ್ಮ ಸ್ವೋದರಂಭರಣದ, ಪರಸ್ವಾಪಹರಣದ ಅನ್ಯಾಯಾಚರಣಯಿಂದಲೇ ಆ ನಮ್ಮ ತಾಯಿಗೆ ವನವಾಸ ಪ್ರಾಪ್ತಿ! ಹೆಚ್ಚೇಕೆ, ದಯಾಶೂನ್ಯರಾದ ನಮ್ಮನ್ನು, ಕೃತಘ್ನರಾದ ನಮ್ಮನ್ನು ನೋಡಿ ಸುಮ್ಮನಿರಲಾರದೆ, ನಮ್ಮನ್ನು ಬಿಟ್ಟು ತಾನೊಬ್ಬಳೇ ಅಲ್ಲಿರುವಳು

ನಾನು — ಗಡಗಡನೆ ನಡುಗುತ್ತ ಕೇಳಿದೆನು,-- ಬೇ-ಬೇಗ- ಹೇಳು, ನಾನು ಸಹಿಸಲಾರೆನು, ಇಷ್ಟನ್ನೂ ಅವಳು ಹೇಗೆ ಸಹಿಸುತ್ತಿರುವಳು ?

ಉಡು — ಹೇಗೆ ಸಹಿಸುವಳೆಂದರೆ, ಬಿಸಿಬಿಸಿಯಾದ ನಿಟ್ಟುಸಿರಿಂದ ಹೊಟ್ಟೆಯ ಅಳಲನ್ನು ಹೊರಗೆಡಹುತ್ತಲೂ, ಕುದಿ-ಕುದಿಯುವ ಕಣ್ಣೀರಿಂದ ಆ ಕಳಕಳಿಸುತ್ತಿದ್ದ ಕಮನೀಯಾನನವನ್ನು ಕಂದಿಸು ತ್ತಲೂ ನೀರವವಾಗಿ ಕುಳಿತು, ಮಕ್ಕಳಾದ ನಮ್ಮೆಲ್ಲರಿಗೂ ವಿಹಿತ ಮಾರ್ಗವನ್ನು ತೋರಿಸಿ, ಪತಿತರಾಗಿರುವ ನಮ್ಮನ್ನು ಉದ್ಧರಿಸಿ, ಅಭ್ಯುದಯ ಶಿಖರವನ್ನೇರಿಸೆಂದು ಒಂದೇ ಬಗೆಯಿಂದ ನಮ್ಮ ಶ್ರೇಯಃ ಪ್ರಾರ್ಥನೆ ಮಾಡುತ್ತಲಿರುವಳು.

ನಾನು — "ಅಣ್ಣಾ! ಕೃತಘ್ನರಾದ ನಮ್ಮೀ ಬಾಳಿತಕ್ಕೆ ಧಿಕ್ಕಾರ! ಧಿಕ್ಕಾರ!! ಮತ್ತೆ ಮತ್ತೆಯೂ ಧಿಕ್ಕಾರ!!! ಅಣ್ಣಾ! ನಮ್ಮಂತಹ ಪಾಪಿಗಳೂ, ಕೃತಘ್ನರೂ, ವಿಚಾರಶೂನ್ಯರೂ, ದೈವದ್ರೋಹಿಗಳೂ, ಮಾತೃ ಘಾತಕರೂ ಆದ ಮಕ್ಕಳನ್ನು ಪಡೆಯುವದಕ್ಕಿಂತ, ಬಂಜೆತನವೇ ಮೇಲು! ಹೀಗೆ ಹೇಳು ಹೇಳುತ್ತ ನಾನು ಮತ್ತೆ ಕಳವಳದಿಂದ ಮೈಮರೆತು ಆರ್ತಸ್ವರದಿಂದ ಕೂಗಿಡಲಾರಂಭಿಸಿದೆನು — "ಅಮ್ಮಾ! ಅಮ್ಮಾ!! ಎಲ್ಲಿರುವೆ? ಅಮ್ಮಾ! ತಪಯುದಾರೆನೇ, ಅಯ್ಯೋ, ಅಮ್ಮಾ! ಈ ಪಾಪಿಮಕ್ಕಳನ್ನು ತೊರೆದು ನೀನೆಲ್ಲಿ ಹೋದೆ? ಕೈ ಬಿಟ್ಟೇ ಬಿಟ್ಟೆಯಾ? ಬೇಡ, ತಾಯೀ! ಕೈಬಿಟ್ಟು ಬಿಡಬೇಡ! ಬಾ, ತಾಯೀ, ಬಾ ಪಶ್ಚಾತ್ತಾಪದಿಂದ ತಪಿಸುತ್ತಿರುವ ನನ್ನನ್ನು—ಈ ನಿನ್ನ ಕೈಗೂ ಸನ್ನು ಕೈಯಿಂದೆತ್ತಿ ಕಾಪಾಡು ಅಮ್ಮಾ! ಇದೇಕೆ ಬರಲೊಲ್ಲೆ? ಅಲ್ಲಿರುವುದೇ ನಿನಗೆ ಸುಖವೇ? ಇಲ್ಲಿಗೆ ಬರಲಾರೆಯಾ? ಅಯ್ಯೋ! ನಾವು ಪಾಪಿಗಳು. ನಮ್ಮ ಬಳಿಗೆ ನೀನೇಕೆ ಬರುವೆ? ನಿನ್ನ ಅಕ್ಕರೆಯ ಮಕ್ಕಳು, ಆ ನಿನ್ನ ಹಿರಿಯ ಮಕ್ಕಳು ನಿನ್ನನ್ನು ಸುತ್ತಿಮುತ್ತಿ ಸೇವಿಸು ತ್ತಿರುವರಲ್ಲವೆ?"

ಉಡುಪತಿಯು ಮತ್ತೆ ಹೇಳಿದನು,—"ತಂಗೀ! ಇಲ್ಲಿಯೇ ನಿಂತು ಅತ್ತು ಸಾಧಿಸುವದೇನು? ಹೊರಡು, ಆ ತಾಯಿಯ ಕಾಲ್ಗಳನ್ನು ಬಿಗಿಯಾಗಿ ಹಿಡಿದು, ಪಶ್ಚಾತ್ತಾಪ ಬಾಷ್ಪದಿಂದ ನೆನೆಯಿಸು, ನಿನ್ನ ದೀನ ವಾಣಿಯಿಂದ ಆ ತಾಯಿಯ ಮನಸ್ಸು, ಪುತ್ರವಾತ್ಸಲ್ಯದಿಂದ ಕರಗಿ ನೀರಾಗಿ, ಮತ್ತೆ ಬಂದು ತನ್ನ ರನ್ನಗದ್ದುಗೆಯಲ್ಲಿ ಕುಳಿತು, ಬೆಳಬೆಳ

ಗುವ ತನ್ನೆರಡು ನಳಿತೋಳ್ಗಳಿಂದ ತನ್ನ ಎಳೆಮಕ್ಕಳನ್ನು ನಲಿದಾಡಿಸು ವಂತೆ ಮಾಡೆಂದು ಬೇಡು ನಡೆ, ಇಲ್ಲಿ ಇನ್ನು ಕ್ಷಣವೂ ನಿಲ್ಲಬೇಡ.'

ನಾನು ತಲೆಯೆತ್ತಿ ಹೇಳಿದೆನು,— " ಹಾಗಿದ್ದರೆ ಹೊರಡು, ನಡೆ ಹೋಗುವ "

ಉಡು — ನಾನು ಈಗಲೇ ನಿನ್ನೊಡನೆ ಬರಲಾರೆನು ನೀನು ಮುಂದೆ ನಡೆ, ನಾನು ಇನ್ನೂ ನನ್ನ ಅಣ್ಣತಮ್ಮಂದಿರನ್ನೂ ಅಕ್ಕತಂಗಿ ಯರನ್ನೂ ಜತೆಗೊಂಡು ಬರುವೆನು.' ಎಂದು ಹೇಳಿ ನಿಲ್ಲದೆ ಹೊರಟೇ ಹೋದನು

ನಾನು ಮಾಡುವದೇನಲ್ಲಿ ? " ಅಮ್ಮಾ! ಬಂದೆನಿದೊ ಬಂದೆ " ಎಂದು ಹೇಳಿ ಹೊರಟು ಬಿಟ್ಟೆನು

( ಬಾಲಕಿಯರಿಗಾಗಿ )

# ದೀಪಾವಳಿಯ ಸುಗ್ಗಿ

———o()o———

( ಕೋಲಾಟದ ಹಾಡುಗಳು )

ರಾಗಾ ಆಂದುಸ್ತಾನಿ—ಬಟುವಾಂಯ್ಯಿಂದನ

ಸಖಿ ಬಾರಿತ್ತಲ್ । ಸರೋಜ ಮುಖಿಯೆ । ಸುಗುಣಗಣಾನ್ವಿತೆಯೇ ॥ಪ॥
ಸುಖದಲಿ ಕೋಲಾಡುವ ಬಾ ಬಾ । ಸರೋಜ ಮುಖಿಯೆ । ಸಖಿಯೆ ॥ಅ॥
ಕುಶಲಮತಿ ಬಾ, ಶಶಿಮುಖಿ ನೀ ಬಾ, ಸುಮಕೋಮಲ ನೀ ಬಾ ಬಾ ॥
ದಶರಥ ಸುತನ-ಮಹಿಮೆಯಿದೆಂದು-ಪೊಗಳುವ ಬಳಿಸಂದು ॥ಸಖಿ॥೧॥
ಚಿನ್ನದ ಕೋಲಂ-ಬಣ್ಣದ ಕೋಲಂ-ನನ್ನಿಯೊಳಾವ್ ಪಿಡಿದು ।
ಚೆನ್ನಿಗ ನೊಲವಿಂ-ದೆನ್ನೊಳಗಾಂಯ್ತೆಂದೆನ್ನುತೆ ಸುಡಿನಲದಿಂ ॥ಸಖಿ॥೨॥
ವರಶೇಷಗಿರೀವರನೊಲವಿಂಧರೆ ಮೆರೆವಳ್ ಮೋಹಿನಿಗೊಲುತಾಂ ॥
ದೊರೆತುದೆ ನಮಗೀ-ಶರದಾಗಮದಿಂ-ದರತೀ ಸುಗ್ಗಿಯು ಸಮಯಾ ॥
ಸಖಿ ॥ ೨ ॥

ನೋಟ್ ॥ ॥ ( ವನಜಾತ ಮುಖಿಯರೆಲ್ಲ ಸಾರಿ )

ಸಖಿ ಬಾರೆ ಬಾರೆ । ಬೆಡಗ ತೋರೆ । ನಡೆದು ಬಾರೆಲೆ ।
ಸುಖದ ಸುಗ್ಗಿಯಿದೆಂದು ಸಾರೆ, ಭ್ರಮರ ಕುಂತಲೆ ॥ ಸಖಿ ॥ ಪ ॥
ಜಲಜಮುಖಿಯೆ, ಒಲಿದು ಬಾರೆ, ಕೋಲನಾಡುವ । ಕಲಕೀರಕಂಠ
ದಿಂದಲಾವು, ನಲಿದು ಪಾಡುವ ॥ ಸಖಿ ॥ ೧ ॥ ಇಳೆಯ ಸುಖದ ಗೆಳ
ಯ ಬಂದ, ಭಳಿರೆ ಭಾವುರೇ ॥ ಬೆಳಗುತಿರುವ ದೀಪಾವಳಿಯೆ, ಬಲಿ
ಯ ಕೀರ್ತಿಯೆ ॥ ಸಖಿ ॥ ೨ ॥ ವಿಜಯಯಾತ್ರೆಗೆಂದು ಹರಕೆ ಯೆತ್ತಿ
ಭರದಲಿ ॥ ಅಜಸುರಾರ್ಚಿತಾಂಘ್ರಿಯುಗನ ಭಜಿಸಿ ಮುದದಲಿ ॥ ಸಖಿ
॥ ೩ ॥ ನೀರನೆಮಗೆ ಮಾರತಾತ-ನೆಂದು ಸಾರುವ ॥ ಶಾರದಾಗಮ
ಸಮಯವಿದಸು ಸಾರಿ ಪಾಡುವ ॥ ಸಖಿ ॥ ೪ ॥ ಶೇಷಶೈಲ ಶಿಖರ

ಧಾಮ-ನೆಮ್ಮ ಮೆಚ್ಚುವ್ವೋಲ್ ॥ ವಿಕಾಸಚೆತ್ರಿ ಯೊಸಗೆ ಪೇಳಿ, ಪೊಸತಿದೆನ್ನುವ್ವೋಲ್ ॥ ಸಖಿ ॥ ೫

( ಎಂದಿಗಾಹುದೂ ತಂದಯುಂ ನಿನ್ನ )

ಲೀಲೆಯಿಂ ಬಾ ಲೋಲನೇತ್ರೆ ಕೋಲನಾಡುವ ॥ಪ॥ ಶೀಲದಿಂದೆ ಮ್ಯಾಳ್ವಭೂಪಗೆ ಜಯವ ಪಾಡುವ ॥ ಅ॥ ಮಂದಗಮನ-ದಿಂದ ಬಾ, ಅರವಿಂದ ಲೋಚನೆ ॥ ಮಂದಗಳಿಗಾ-ನಂದ ಸಮಯ ವಿಂದು ಪೊಸತೆನೆ ॥ ಲೀಲೆ ॥ ೧ ॥ ಬಣ್ಣ ಬಣ್ಣದ ಬೆಳೆಗಳಿಂ । ಪೊಂ-ಬಣ್ಣದುಡುಪಿನಿಂ ॥ ಚನ್ನೆ ಮೆರೆವ ಳೆನ್ನ ಮಾತೆ, ಜನ್ಮ ಭೂಮಿತಾಂ ॥ ಲೀಲೆ ॥೨॥ ಪರಿಣಯೋತ್ಸವ ದಿರವಸೂಚಿಪ ಶರತ್ಸಮಾಗಮಂ ॥ ಮೆರೆವುದರರ ಶೇಷಶೈಲ-ವರದ ನೊಲವಿನಿಂ ॥ ಲೀಲೆ ॥ ೩ ॥

ರಾಗಾ – (ನವೋಂಸ್ತು ಭಾನವ )

ಸರೋಜ ಲೋಚನೇ—ಸಾರಿತ್ತ ಬೇಗನೆ ॥ ಪ ॥ ನೀಲಕುಂತಳೆ ನಲಿದುಬಾರೆ ಕೋಲನಾಡುವ । ನೀಲ ಮೇಘ ಶ್ಯಾಮನೆಮ್ಮ, ಪಾಲಿಸೆನ್ನುವ ॥ ಸರೋಜ ॥ ೧ ॥ ತಂಗಿ ನಮ್ಮ ಅಂಗಳದೊಳು ರಂಗನ ಮುಂದೆ । ಮಂಗಳವಂ ಪಾಡುತಾವು ಸಂಗತದಿಂದೆ ॥ ಸರೋಜ ॥ ೨ ಆರ್ಯಮಾತೆಗೆ ಭೂರಿಸಂಭ್ರಮ ತೋರಿ ಮೆರೆಯುವ । ಶಾರದೋತ್ಸವ ಪಾರ್ಯ ಕೀರ್ತಿಯ ಸಾರವೆನ್ನುವ ॥ ಸರೋಜ ॥ ೩ ॥ ಶೇಷಶೈಲಾವಾಸ ನೊಲವಿಂ ದೇಶಮಾತೆಸಂ । ತೋಷವಾಂತು ಬೆಳಗುವ್ವೊಲ್ ಜಯ ಘೋಷದಿಂದೆ ನೀಂ ॥ ಸರೋಜ ॥ ೪ ॥

ರಾಗಾ— ( ನಮ್ಮ ಮಾವ )

ಕೋಲನಾಡೆ ಲೋಲಾಕ್ಷಿ ಬಾರೆ ॥ ಪ ॥ ಕನ್ನಡಿ ಕದಪುಗಳ್ ಚನ್ನಾಗಿ ಹೊಳೆಯಲ್ । ಚಿನ್ನದ ಕೋಲ್ವಿಡಿದು-ಚೆನ್ನೆ ನೀಂ ನಲಿದು ॥ ಕೋಲ ॥ ೧ ॥ ಪಂಚಬಾಣನಶರ ಹೊಂಚಿಬೀಳುವತೆರ । ಚಂಚಲಾಕ್ಷಿಯೆ, ಅರಸಂಚೆಗಮನದಿಂ ॥ ಕೋಲ ॥ ೨ ॥ ವಿಭವದೇಳಿಗೆಗಿದು ಶುಭದಿನವಹುದೆಂದು । ಅಭಯವಿತ್ತೆಮಗಿಂದು ಪ್ರಭುನೀನೆಂದು ॥ ಕೋಲ ॥ ೩ ॥ ಶಾರದಾಗಮದಿಂದ ಸಾರವಾಂತಿರುವೆಮ್ಮ । ಆರ್ಯ

ಮಾತೆಗೆ ನಲಪೇರಿ ಸಂಭ್ರಮದಿಂ ॥ ಕೋಲ ॥ ೪ ॥ ಭಾರತಮಾತೆಗ ಭವ್ಯಮೂರುತಿಗೆ॥ ಘೋರೆನೆಜಯಭೇರಿ ಮೊರೆವುದು ಮಿಾರಿ॥ ಕೋಲ ॥ ೫ ॥ ತರಳೆಯರಾವೆಲ್ಲ ಪರಿಶುದ್ಧಭಾವದೊಳ್ ॥ ವರಶೇಷಗಿರಿ ದೊರೆ-ಗೆರಗಿ ಬೇಡುವೆವು ॥ ಕೋಲ ॥ ೬ ॥

## (ಕೃಪಣರಿಗೊಂದು ಹರಕೆ)

ಹಳೆಯ ಮಟ್ಟು — [ಒಂದುಸಾವಿರವಾಗು]

ಕೊಡಲಾಗದಿದ್ದರೆ, ನುಡಿಯುವರೇನಣ್ಣ-ಕಷಯಿಂದ ಬಾರೆಂದು ಜಡಿದಿಂದು ॥ ದುಡುಕಿದೆವೆನ್ನುತೆ ಮಿಡುಕದಿರಣ್ಣಯ್ಯ । ಕಡುಮುದ ದಿಂದಾವು ನಡೆದೇವು ॥ ಕೋಲೆ ಕೋಲೆ, ಮುತ್ತಿನ ಕೋಲೆ ॥ ಪ ॥ ಗುಣಯುತರೆನಿಸುವ ಹಿರಿಯರ ವಂದಿಸ ಲೆನುತಲೈತಂದೆವು-ಮಣಿದೆವು ॥ ಹಣಗಾರರೆಂದಿಲ್ಲಿ ಮಣಿಯುಲು ಬರಲಿಲ್ಲ ಹಣದಾಸೆ ನಮಗಿಲ್ಲ ಕೇಳೀಸೊಲ್ಲ ॥ ೧ ॥ ಅಣ್ಣಯ್ಯ ನಿಮಗೀ-ಘನತೆಯು ಸಲ್ವುದು । ಗಣ್ಯರಾದಿರಿ ನೀವು ಜಗದೊಳು ॥ ಪುಣ್ಯವಂತೆಯು ನಿಮ್ಮ ಪಡೆದಾ ಮಾತೆಯು, ಧನ್ಯವಾಯಿತು ನಿಮ್ಮ-ನರಜನ್ಮ ॥ ೨ ॥ ದೋಷರಹಿತ ಶ್ರೀ-ಶೇಷಗಿರೀಶನಾ ಕೇಶವ ನೊಲವೊಂ-ದೆಮಗಿರಲು ॥ ಭಾಷೆಯ ಕೊಡುವೆವು ದೇಶಸೇವಕರಾವು । ಲೇಸಾಗಲಿಳೆಗೆಂದು ಬಗೆದಂದು ॥ ಕೋಲ ಕೋಲೆ ॥ ೩ ॥

ರಾಗ— ಒಂದುಸ್ತ್ರಾನಿ (ಕಿದಿರುಜಾತೆ)

ಲೇಸು ಲೇಸಿದು ಹರ್ಷವಾದುದು, ಕಾಸನಿತ್ತಿರಿ ಭರದಲಿ ।—ಹಾಗದ— ಕಾಸನಿತ್ತಿರಿ ಭರದಲಿ ॥ ವಾಸುದೇವನ ದಯೆಯೆ ಸಾಕು, ಕಾಸು ಬೇಡಿದರಲ್ಲ ನಾವ್ ।—ಕೃಪಣರ—ಕಾಸು ಮುಟ್ಟುವರಲ್ಲ ನಾವ್ ॥ ಲೇಸು ॥ ಪ ॥ ಘನತೆಯೊಂದಿಹ ಧನಿಕರೆಂದು ಗಣಿಸಿ ಸಾರಿದೆವಿಲ್ಲಿಗೆ ।—ನಾವ್—ಮಣಿಯೆ ಬಂದೆವು ಇಲ್ಲಿಗೆ ॥ ಘನತೆಗೊಪ್ಪುವ ಬಗೆಯ ತೋರದೆ, ಧನದ ಮೋಹದಿ ಮೆರೆದಿರೇ ।-ನೀ-ವಣುಗಿಯರೊಳ್ ಮುಳಿದಿರೇ ॥ ಲೇಸು ॥ ೧ ॥ ಒಂದು ಹಣವನು

ಮುಂದೆ ಯಸೆದಿರಿ, ಮಂದಿಯುದಿರೊಳ್ ಪೌನದೀ । - ಸೀ—ವಿಂದು ತೋಭದ ಮಂತ್ರದಿ ॥ ತಂದೆ ನಿಮ್ಮೊ ಒಂದು ಹಣವನು ಕೈಕೊಂಡು ನೀವೇ ಸುಖಿಸಿರ್ಯ ।—ನಿಜ—ಬಂಧು ಮಿತ್ರರ ನೊಲಿಸಿರ್ಯೆ ॥ ಲೇಸು ॥ ೨ ॥ ಭಳಿರೆ ನೀವೌದಾರ್ಯಗುಣದೊಳು ಬಲಿಯು ಮೀರುವರಾದಿರೇ । ಕಲಿಗರ್ಣರೆನ್ನಿಸಿ ಮೆರೆದಿರೆ ॥ ಜಲಜಲೋಚನ—ಶೇಷಶೈಲನಿ—ವಾಸ ನೊಲವಿಂ ಸಂತತಂ। ನಲಿದು ಸುಖಿಸಿರಿ ಸಂತತಂ ॥ ಲೇಸು ॥ ೩ ॥

## ಹರಕೆಯೊಪ್ಪಿಸುವುದು

ರಾಗಾ — [ಸಖಿ ಬಂದ ಕೃಷ್ಣನು]

ಕುಶಲಿಯಾಗಿರ್ಪೈ ಯಶವಪೊಂದಿರ್ಪೈ । ಕುಶಿಕ ತನುಜ ಯಾಗಪಾಲಕ ನೊಲವ ಪಡೆಯಿರ್ಪೈ ॥ ಪ ॥ ಕಾಂತೆ ಪುತ್ರರಿಂ—ಅನಂತ ಭಾಗ್ಯದಿಂ । ಶಾಂತ ಹೃದಯ ವಾಂತು ಧರೆಯೊಳ—ನಂತ ಕಾಲಮುಂ ॥ ಕುಶಲಿ ॥ ೧ ॥ ವಂಶದೀಪನುಂ ಪ್ರಶಂಸನೀಯನುಂ । ಕಂಸದಮನ ಭಕ್ತನುಂ ಎನಿಸಿ ಸಂತತಂ ॥ ಕುಶಲಿ ॥ ೨ ॥ ಶೇಷಗಿರಿವರಂ ಪೋಷಿಸಕ್ಕೆತಾಂ । ದೇಶಸೇವಕರೆನಿಸಿ ಬಾಳಿರಿ ವಾಸಿ ಪಂಥದಿಂ ॥ ಕುಶಲಿ ॥ ೩ ॥

ರಾಗಾ — (ರಾತಿಕೋಲ ಲಾಡಗಾ)

ಕುಶಲದಿಂದ ಬಾಳಿರ್ಪೈ, ಯಶವನಾಂತು ಬೆಳಗಿರ್ಪೈ ॥ ಕುಶೇಶಯಾಕ್ಷನೊಲಿದು ಸಂ—ತೋಷವೀಯಲಿ ॥ ಪ ॥ ಮಾತೃಚರಣಸೇವೆಯಿಂ ಪಿತೃಭಕ್ತರೆನಿಸುತಂ । ಪುತ್ರ ಪೌತ್ರ ಮಿತ್ರರಿಂ, ಕಲತ್ರ ಭಾಗ್ಯದಿಂ ॥ ಕುಶಲ ॥ ೧ ॥ ಕಾರ್ಯಸಿದ್ಧಿಯೊಂದ ನಿಮ್ಮಾರ್ಯಮಾತೆಗೆರಗುತಾ । ಸಾರವೆನಿಪ ಧರ್ಮಮಂ—ಮೀರದಾವಗಂ ॥ ೨ ॥ ದಾನಸೇಂದ್ರನ ತೆರದೊಳು, ದಾನಶೂರರೆನಿಸಿಳೆಯೊಳು । ದೀನ ದುಃಖಿಗಳಿಗೆ ಶ್ರೀ—ನಿಧಾನರೆನ್ನುವೊಲ್ ॥ ೩ ॥ ಈ ಶರತ್ಸಮಾಗಮಂ, ದೇಶಮಾತೆಗೆ ಸಂಭ್ರಮಂ । ದೇಶಭಕ್ತರಿಗುತ್ಸವಂ, ನಮಗೆ ವೈಭವಂ ॥ ಕುಶಲ ॥ ೪ ॥ ತಂದೆ ಶೇಷಗಿರೀಶ ತಾಂ—ನಂದಿನಿಯ ಕೈ ಪಿಡಿಯುತಾನಂದದಾಯಿನಿಯೆನಿಸಲೆಂ—ದೆಂದು ಹರಸುತ ॥ ಕುಶಲ ॥ ೫ ॥

## * ನಂದಿನಿಗೆ ಹರಕೆ *

ಜಂಗಲ್ (ಅರಳಿದ ಮಲ್ಲಿಗೆ)

ವಿಜಯಿಸು ನಂದಿನಿ, ಸುಜನರ ನೆರವಿಂ ನಿಜವೈಭವದಿಂ ॥ ವಿಜಯ ದಶಮಿಯು, ವಿಜಯಯಾತ್ರೆಗೆ, ವಿಜಯಂ-ನಿಜದಿಂ ॥ ಅ ॥ ಆರ್ಯಮಹಿಳೆಯ-ರಾರ್ಯ ಧರ್ಮದ-ಸಾರವ ಸಂಗ್ರಹಿಸಿ ॥ ಸಾರುತೆ ನೀನಾ-ನಾರೀಗಡಣದೆ, ಶಾರದೆಗಭಿನಮಿಸಿ ॥ ವಿಜಯಿಸು ॥ ೧ ॥ ಓವ್ರತೆ ಪಾತಿವ್ರತ್ಯದ ಘನತೆಯ, ಸಾವಗ ಮುತ್ಸಹದಿಂ । ಜೀವನಸಾರರು, ದೇವಿಯರೆಂದೆಸೆ, ದೈವಿಕ ಗುಣಗಣದಿಂ ॥ ೨ ॥ ಬಂಧು ಭಗಿನಿಯರಂದದಿ ನಿನ್ನಂ, ನಂದನೆಯೆಂದೆನುವರೊಳ್ । ಕಂದನ ನುಡಿಗಭಿ-ನಂದಿಸುವಾಒಗೆ, ಯಿಂದಸೆ ನುಡಿ ಮುದದೊಳ್ ॥ ೩ ॥ ಭಾಷಾಸೇವೆಯೆ ಭೂಷಣವಾಗಿಹ ಪೋಷಕರಭಿಮತದಿಂ । ದೂಷಕರನು ನೀಂ, ಪೋಷಕರೆಂದು-ದ್ಘೋಷಿಸು ಸನ್ಮತಿಯಿಂ ॥ ವಿಜ ॥ ೪ ॥ ಪರಮಪಾವನ ಶೇಷಗಿರೀಶನ ಚರಣಾನುಗ್ರಹದಿಂ । ಮೆರೆಯುವ ಕರ್ಣಾಟದಿ ನೀಂ ಮೆರೆ, ನಿರುತಂ ದೃಢದಿಂ ॥ ವಿಜಯಿಸು ॥ ೫ ॥

॥ ಶ್ರೀರಾಮಶ್ಶರಣಮ್ ॥

# ಅಬಲಾ ದೌರ್ಜನ್ಯಂ

" ಶ್ರೀರಂಗೇಶ ಮಯಾ ಕರೋಷಿ ಜಗತಾಂ ಸೃಷ್ಟಿಪ್ರತಿಷ್ಠಾಕ್ಷಯಾ
ನತ್ರಾಮುತ್ರಚ ಭೋಗಮುಕ್ತಿ ಮಸುಖಂ ಮೋಕ್ಷಂಚ ತತ್ತತ್ಕ್ಷಮಾಂ ।
ಕೃತ್ವಾ ತಂತ್ರಮಯಾಸ್ಯ ಕಲ್ಪಿತ ಜಗತ್ಕರ್ಮಾತಿ ಹೃದ್ಯಾಸ್ಯತ ।
ಕ್ಷಾಂತಿಸ್ತೇ ಕರುಣಾಸಖೀ ವಿಜಯತಾಂ ಕ್ಷೇಮಾಯ ಸರ್ವಾತ್ಮನಾಂ ॥ ೧ "

## ( ಕ್ಷಮಾಪಣೆ )

ಕ್ಷಮೆಯಿರಲಿ, ನನ್ನ ಪ್ರಿಯ ಭಗಿನಿಯರೇ ! ಕ್ಷಮೆಯಿರಲಿ —

" ಅಬಲಾದೌರ್ಜನ್ಯಂ " ಎಂಬ ಹೆಸರನ್ನು ಕೇಳಿದ ಮಾತ್ರದಿಂದಲೇ ಉಗ್ರರೂಪವನ್ನು ತಾಳಿ, ಹಿತೈಷಿಣಿ, ಸಂದಿನಿಯರನ್ನು ಒಗೆದೆಸೆದು ಬಿಡಬೇಡಿರಿ ತಾಯಿಯರೇ ! ಕೈನೀಡಿ ಕೇಳುತ್ತಿರುವೆನು ತಾಳ್ಮೆಯನ್ನು ತೆಗೆದುಕೊಳ್ಳಿರಿ; ಹೆಸರೆತ್ತಿದುದೇ ಸಾಕೆಂದು ಮುಳಿದು ಮೂದಲಿಸಬೇಡಿರಿ ಇಷ್ಟುಮಾತ್ರಕ್ಕೆ ಈ ಬಗೆಯ ದೌರ್ಜನ್ಯಾರೋಪದ ವೃಥಾಲಾಪದಿಂದ ಸ್ತ್ರೀಸಮೂಹವನ್ನೇ ತೆಗೆದಾಡಿರುವೆನೆಂದು ಅಲ್ಲದ ಸಲ್ಲದ ಭಾವನೆಯನ್ನು ತೆಗೆದುಕೊಂಡು, ಅರ್ಥವಿಲ್ಲದ ಅನರ್ಥ ಕೋಪಕ್ಕೆ ನಿಮ್ಮ ಕೋಮಲ ಹೃದಯವನ್ನು ಮಾತ್ರ ತೆರಬೇಡಿರಿ

ನನ್ನ ಉದ್ದೇಶವು ಅಷ್ಟು ನಿಂದ್ಯವಾದುದಲ್ಲ, ಸ್ತ್ರೀಜಗತ್ತನ್ನು ನಿಂದಿಸುವುದೇ ನನ್ನ ಉದ್ದೇಶವೆಂದು ನೀವು ಭಾವಿಸುವ ಹಾಗಿಲ್ಲ ಹಾಗೂ ಒಂದುವೇಳೆ ಭಾವಿಸುವುದಾದರೆ ವಿಚಾರಮಾಡಿ ನೋಡಿರಿ ! ಸ್ತ್ರೀಯರ ವರ್ಗದಲ್ಲಿ ನಾನೂ ಒಬ್ಬಳಾಗಿದ್ದು, ಆ ನಮ್ಮ ಸ್ತ್ರೀವರ್ಗವನ್ನು ದೂರಿಗೆಳೆದಾಡುವೆನೆಂದರೆ ನಂಬಬಹುದಾದ ಮಾತೇ ! ಅಂತಹ ಸ್ವರೂಪನಾಶನದ, ಆತ್ಮಘಾತದ ವಿಚಾರದಲ್ಲಿ ಪ್ರವರ್ತಿಸುವುದು ನನ್ನ ಶೀಲವಲ್ಲ ಆ ಪರಮ ಪೂಜ್ಯಳಾದ ಆರ್ಯಮಾತೆಯೇ ನನ್ನ ಪ್ರಿಯ ಮಾತೆಯೂ, ಮತ್ತು ನನ್ನ ಧ್ಯೇಯವಸ್ತುವೂ ಆಗಿರುವಲ್ಲಿ, ಅವಳ ಅಂಶ ರೂಪಿಣಿಯರಾದ ಮಹಿಳಾವರ್ಗವನ್ನು ದೂರಿದರೆ ಅದು, ನನ್ನ ತಾಯಿ

ಗೂ ಸೇರಿದಂತಾದೀತೆಂದು ತಿಳಿದಿರುವ ನಾನು, ನನ್ನ ಭಗಿನಿಯರನ್ನು ದೂರಿಗೆಳೆದು, ಅದರಿಂದ ಅವರ ಪ್ರಾಶಸ್ತ್ಯವನ್ನು ಕೆಡಿಸಿ, ಅನರ್ಥವನ್ನುಂಟು ಮಾಡಬೇಕೆಂದು ಮನಸ್ಸಿನಿಂದಾದರೂ ನೆನೆದಿರುವದಿಲ್ಲ ಚೆನ್ನಾಗಿ ನಂಬಿರಿ. ಹಾಗಿದ್ದರೆ ಅದೇಕೆ ದೌರ್ಜನ್ಯವನ್ನೇ ಹುಡುಕುತ್ತಿರುವುದು ? ನಮ್ಮವರಲ್ಲಿ ಸೌಜನ್ಯವೆಳ್ಳಷ್ಟೂ ಇಲ್ಲವೋ ? " ಎಂದು ಕೇಳುವಿರೇನು ? ಭಗಿನಿಯರೇ ! ಅದಕ್ಕೆ ನೀವೇ ಉತ್ತರವಾದಿಗಳಾಗಿರುವಿರೆನ್ನುವೆನು. ನೋಡಿರಿ, ಅವದೇ ಒಂದು ವಸ್ತುವಿಷಯವಾಗಿ, ಒಂದು ವ್ಯಕ್ತಿವಿಷಯವಾಗಿ ನಾವು ನೋಡಹೋದರೂ, ನಮ್ಮದೃಷ್ಟಿಗೆ ಗುಣಭಾಗಗಳು ಹಲವು ತಿಳಿದುಬಂದು, ಒಂದೆರಡು ದೋಷಗಳು ಕಂಡುಬಂತೆಂದರೂ ಸಾಕು, ನಾವು ಅದರ ದೋಷವನ್ನೇ ಉದ್ಘಾಟನ ಮಾಡುವೆವು ಅದೇಕೆ ? ಅದು ಗುಣಸಮೂಹದಿಂದ ಸುತ್ತುವರಿದಿದ್ದರೂ, ಅಲ್ಪಸ್ವಲ್ಪ ದೋಷಗಳಿಂದ ಕೂಡಿ ನಿರ್ದುಷ್ಟ ವಸ್ತುವೆನ್ನಿಸಲಾರದಿದೆಯೆಂದಲ್ಲವೇ, ಅದನ್ನು ದೋಷನಿರ್ಮುಕ್ತವಾಗಿ ಮಾಡಲು, ಹಾಗೆ ಉದ್ಘಾಟನ ಮಾಡಲೆಳಸುವವು ಹಾಗೆಂದ ಬಳಿಕ ಸಿಟ್ಟೇಕ ?

ನಮ್ಮ ನಾರೀ-ವರ್ಗದಲ್ಲಿರುವ ಸೌಜನ್ಯರೂಪದ ಕೋಮಲತೆಯು, ಪವಿತ್ರತಮವಾದ ಪ್ರೇಮ, ಪರಾನುಕಂಪನ, ಸೌಶೀಲ್ಯಗಳೇ ಮೊದಲಾದ ಸುಗುಣಗಳನ್ನು ಆಶ್ರಯಿಸಿಯೇ ಸಮಾಜವು ತನ್ನ ಮರ್ಯಾದೆಯನ್ನುಳಿಸಿಕೊಂಡು ಬಂದಿದೆಯೆಂದ ಮೇಲೆ, ಆ ನಮ್ಮ ಆರ್ಯಮಹಿಳೆಯರ ವಿಷಯದಲ್ಲಿ ನನ್ನ ಭಾವನೆಯು ಅದೆಂತಹ ಉಚ್ಚಭಾವದಲ್ಲಿರಬೇಕೋ ನೀವೇ ಯೋಚಿಸಿರಿ

ಓಹೋ ! ಇದೇನಿದು ! ನನ್ನ ಧರ್ಮಬಾಂಧವರೇ ! ಹೀಗೇಕೆ ವ್ಯಂಗಭಾವದಿಂದ ನಗುತ್ತಿರುವಿರಿ ? 'ಅಬಲಾದೌರ್ಜನ್ಯ' ವನ್ನು ಹೊರಗೆಡಹುವೆನೆಂದೋ ? ತಡೆಯಿರಿ, ಒಂದೆರಡು ಗಳಿಗೆ ತಡೆದು ಕೇಳಿರಿ ದೌರ್ಜನ್ಯವೃಕ್ಷಕ್ಕೆ ಅಂಕುರಾರ್ಪಣ ಮಾಡಿದವರು ನೀವಾದುದರಿಂದ, ಅದರ ಬಹುಮಾನದ ಫಲಾನುಭವವು ನಿಮ್ಮನ್ನೇ ಸೇರಿರುವದೆಂಬ ಉತ್ತರವು ಹೊರಡುವದು ಆದುದರಿಂದ ದುಡುಕದೆ ಮುಂದಕ್ಕಡಿಯಿಡಿರಿ

ಪ್ರಕೃತದಲ್ಲಿ ನಮ್ಮ ಲೇಖನದ ಗುರಿಯೆಂದರೆ, ನಮ್ಮ ಆರ್ಯ

ಮಹಿಳಾವರ್ಗಕ್ಕೆ ಮೊದಲು ಸಲ್ಲುತ್ತಿದ್ದ ಸನ್ಮಾನವನ್ನು ಪರಾಧೀನಗೊಳಿಸಿ, ಆ ಸ್ಥಾನದಲ್ಲಿ ತಾನೇ ತಾನಾಗಿ ನಿಂತು, ಕಾರ್ಯಭಾರವನ್ನು ವಹಿಸಿ ಮೆರೆಯುತ್ತಿರುವ ಆ ಪ್ರಬಲ ದೌರ್ಜನ್ಯಸಂಬಂಧವಾದ ಅಪವಾದವನ್ನು ಸರ್ವಸಾಹಸ ಪ್ರಯತ್ನದಿಂದಲೂ ಜಯಿಸಿ, ನಮ್ಮವರ ಕೀರ್ತಿಚಂದ್ರಿಕೆಯು ಮತ್ತೆ ನಿಷ್ಕಲಂಕವಾಗಿ ಜಗತ್ತನ್ನೇ ಬೆಳಗುವಂತೆ ಮಾಡಲು ನಮ್ಮ ಮಹಿಳಾಗಣದ ಸಹಾನುಭೂತಿಯನ್ನು ತೋರುವದೆ ಆಗಿರುವದರಿಂದ ಇದರಲ್ಲಿ ತೋರಿಬರುವ ಸ್ಪಷ್ಟೋಕ್ತಿಗೆ ರುಷ್ಟರಾಗದೆ, ಸಹನೆಯಿಂದ ಸಮಾಲೋಚಿಸುತ್ತ ಬರಬೇಕೆಂದು ಮೊದಲು ಕ್ಷಮೆಯನ್ನು ಕೋರಿ, ಮುಂದರಿಯುವೆನು

### (ದೌರ್ಜನ್ಯಕ್ಕೆ ಮೂಲಕಾರಣಗಳಾದ ಆಲಸ್ಯಾದಿಗಳ ಅಲಂಘ್ಯ ಫಲಗಳು)

'ದೌರ್ಜನ್ಯಂ' ಎಂದರೆ, ಧೃಷ್ಟತನವೆಂದು (ದಯಾ ದಾಕ್ಷಿಣ್ಯ ದರ್ಮಶ್ರದ್ಧೆಗಳಿಲ್ಲದ ಪರುಷವೃತ್ತಿಯೆಂದು ಅಭಿಪ್ರಾಯವು) 'ಅಬಲಾದೌರ್ಜನ್ಯ'ವೆಂದರೆ ಅಬಲೆಯರ ಧಿಟ್ಟತನವೆಂದಾಗುವುದು ಇದನ್ನೇ ಸ್ತ್ರೀಯರ ಆತ್ಮೋನ್ನತಿ ಮತ್ತು ಸಮಾಜದ ಸಂಪದಭಿವೃದ್ಧಿಗಳಿಗೆ ಆತಂಕವನ್ನುಂಟು ಮಾಡಿರುವ ದೌರ್ಭಾಗ್ಯವೆಂದೂ ಹೇಳಬಹುದು ಹೇಗೆ? ಯಾವಯಾವ ಬಗೆಯಿಂದ, ಎಲ್ಲೆಲ್ಲಿ, ಎಂದರೆ— ವರ್ತಮಾನ ಸ್ಥಿತಿ ವಿಚಾರದಿಂದ ಅಬಲೆಯರಲ್ಲಿ, ವಿಶೇಷವಾಗಿ ಆಲಸ್ಯ, ಉದಾಸೀನ, ಆತ್ಮಸ್ತುತಿ, ಅಸೂಯೆ, ಆಗ್ರಹ, ಹಠ, ಇತ್ಯಾದಿ ಅಜ್ಞೇಯಗಳಾದ ಹಲವು ಮಹಾ ಗುಣಗಳು ತುಂಬಿಹೋಗಿವೆಯೆಂದೂ, ಎಲ್ಲಿ, ಯಾರಲ್ಲಿ, ನೃಶಂಸೆ ನಿರ್ಘೃಣತೆ, ಪರಸ್ವಾಪಹರಣ, ಪರಪೀಡನಾದಿ ಕ್ರೌರ್ಯವು ತೋರಿಬರುವವೋ, ಅವೆಲ್ಲಕ್ಕೂ ಸ್ತ್ರೀಯರ ದೌರ್ಜನ್ಯವೇ ಕಾರಣವೆಂದೂ, ಇನ್ನೂ ಎಷ್ಟೆಷ್ಟೋ ಬಗೆಯಿಂದ ಸ್ತ್ರೀಯರಲ್ಲಿ, ಇದ್ದುದನ್ನೂ ಇಲ್ಲದುದನ್ನೂ ಸೇರಿಸಿ, ದೌರ್ಜನ್ಯಾಪವಾದದ ದೊಡ್ಡ ಹೊರೆಯನ್ನು ಅವರ ಮೇಲೆ ಹೊರೆಯಿಸಿ ತಾವದನ್ನು ನೋಡಿ ನಲಿಯಬೇಕೆಂದಿರುವ ಮಹನೀಯರು ಬಹುಮಂದಿಯುಂಟೆಂದು ಹೇಳಬಹುದಾಗಿದೆ ಮಾಡತಕ್ಕುದೇನು?

ಆಲಸ್ಯಾದಿಗಳಲ್ಲಿ ಒಂದೊಂದೇ ಮಾನವರ ಸ್ವರೂಪನಾಶಕ್ಕೆ ಸಾಕಾಗಿರುವುವು ಅಂತಹದರಲ್ಲಿ ಎಲ್ಲವೂ ಒಂದೆಡೆಯಲ್ಲಿಯೇ ಇರುವದೆಂದು ಕಲ್ಪಿಸಿ ಹೇಳುವ ಕರ್ಣಕಠೋರವಾದ, ಹೃದಯವಿದ್ರಾವಕವಾದ, ಮರ್ಮಾಂತಿಕ ಯಾತನೆಯನ್ನುಂಟು ಮಾಡುವ ವೃಥಾಪವಾದವನ್ನು ಕೇಳಿಯೂ, ಅದನ್ನು ನಿವಾರಣೆಮಾಡಿಕೊಳ್ಳಲು ಪ್ರಯತ್ನಶೀಲರಾಗದೆ "ಕುಣಿವ ಕಾಲಿಗೆ ಕೊಣಮಿಣಿ ಗಜ್ಜೆ" "ತೂಕಡಿಸುವವರನ್ನು ಕಟ್ಟಿ ಮಲಗಿಸಿದಂತೆ" ಎಂಬ ಗಾದೆಗನುಸಾರವಾಗಿ ನಮ್ಮವರು ಇನ್ನೂ ದುರ್ಲಕ್ಷದಿಂದಿರುವುದು, ಸೋಲದೆ ಹೇಳುತ್ತಿರುವ ದೂಷಕರ ನಾಲಿಗಗೆ ಸವಿಕೊರೋರುವಂತೆಯೇ ಆಗಿದೆಯೆಂದು ತಿಳಿದು ವಿಷಾದಿಸಬೇಕಾಗಿದೆ

ಹಾಗಿದ್ದರೆ, 'ಆಲಸ್ಯವೇ ಆದಿಯಾದ ದುರ್ಗುಣದಿಂದ ಉಂಟಾಗುವ ಫಲವೇನು ?' ಎಂದು ಕೇಳುವಿರಲ್ಲವೇ ನನ್ನ ಭಗಿನಿಯರೇ, ಕೇಳಿರಿ —

**ಆಲಸ್ಯ** — ಆಲಸ್ಯವೆಂಬುದೇ ಸೋಮಾರಿತನವು ಸೋಮಾರಿತನವೇ ಈಗಿನ ನಮ್ಮವರಲ್ಲಿ ಪ್ರಬಲವಾದ ದೋಷವು ಈ ದೋಷವೇ ನಮ್ಮ ಇಂದಿನ ವಿಷಮಸ್ಥಿತಿಗೆ ಅಂಕುರ ಪ್ರಾಯವು ಇದೇ ನಮ್ಮನ್ನು ಆಕ್ರಮಿಸಿರುವ ಅಪವಾದಕ್ಕೆ ಕಾರಣವು ಈ ಆಲಸ್ಯವೆಂಬುದು ನಮ್ಮನ್ನು ಸಮೀಪಿಸಿದಂತೆ ನಾವು ಎಚ್ಚತ್ತಿರಬೇಕು ಒಂದುವೇಳೆ ತಲೆಹಾಕಿದ ಕೂಡಲೇ ಅದನ್ನು ಹೊರಡಿಸುವದಕ್ಕಾದರೂ ನಾವು ಮರೆಯದೆ ಸರ್ವಪ್ರಕಾರದಿಂದಲೂ ಪ್ರಯತ್ನಿಸಬೇಕು ಇಲ್ಲವಾದರೆ, ಇದು ನಮ್ಮ ಅಂತರ್ಬಹಿರಿಂದ್ರಿಯಗಳಲ್ಲಿಯೂ ವ್ಯಾಪಿಸಿ, ತನ್ನ ಅದ್ಭುತ ಶಕ್ತಿಯಿಂದ, ಭಯಂಕರವಾದ ಸನ್ನಿಪಾತ ರೋಗದಂತೆ ಪರಿಣಮಿಸುವುದು. ದೌರ್ಭಾಗ್ಯಕ್ಕೆ ತವರ್ಮನೆಯಾದ ಆಲಸ್ಯವಿದ್ದೆಡೆಯಲ್ಲಿ ನಿಂದೆಯೇ ಮೊದಲಾದ ದುರಾಚಾರದ ದುಷ್ಟಕಣಗಳೂ ಹುಟ್ಟುವುವು

ಆಲಸ್ಯವುಂಟಾಯಿತೆಂದರೆ, ಅದರಿಂದ ಉದಾಸೀನ, ಅದರಿಂದ **ಅವಿಚಾರ, ಅದರಿಂದ ಅಹಂಕಾರ,** ಆಬಳಿಕ ಆತ್ಮಸ್ತುತಿ, ಅದಾದ ಬಳಿಕ ಪರನಿಂದೆ, ಪರನಿಂದೆಯನ್ನೂ ದಾಟ ಬಂದರೆ ಅಸೂಯೆ, ಆಗ್ರಹ,

ಉನ್ಮಾದ ಇವುಗಳು ಕ್ರಮವಾಗಿ ಒಂದರಿಂದ ಮತ್ತೊಂದು ಹೀಗೆ ಶಾಖೋಪಶಾಖೆಗಳಾಗಿ ಹುಟ್ಟುವವು.

ಹೀಗೆ ಆಲಸ್ಯೋದಾಸೀನಗಳಿಂದುಂಟಾದ ಅವಿಚಾರವು ಧರ್ಮದಲ್ಲಿ ಅಶ್ರದ್ಧೆ, ಗುರುದೈವಗಳಲ್ಲಿ ಅವಿಧೇಯತೆ, ಸ್ವಕರ್ತವ್ಯದಲ್ಲಿ ಪರಾಙ್ಮುಖತೆಗಳನ್ನುಂಟು ಮಾಡಿಬಿಡುವುದು. ಈ ಅವಿಚಾರವೆಂಬುದು ಯುಕ್ತಾಯುಕ್ತ, ಸಾರಾಸಾರ, ನ್ಯಾಯಾನ್ಯಾಯ ವಿಚಾರಜ್ಞಾನವಿಲ್ಲದ ಮೂರ್ಖಭಾವನೆಯಿಂದಾಗುವುದು. ಇದರಿಂದ ಕರ್ತವ್ಯವೇನೆಂದಾಗಲೀ, 'ತಾನಾರು ಹೇಗಾದೆ, ಏಕೆ ಹುಟ್ಟಿದೆ, ಏನು ಮಾಡಬೇಕಾಗಿದೆ' ಎಂಬ ಆತ್ಮಸಮಾಧಾನದ ಮಾತನ್ನಾಗಲೀ, ಗಮನಿಸಲಾರದ, ಕೇವಲ ಆಶಾಪೂರಣದಲ್ಲಿ ಮಾತ್ರವೇ ಗುರಿಯಿಟ್ಟು, ನಡೆಯುವಂತೆ ಮಾಡುವುದು. ಈ ಆಶೋತ್ತರವು ಇತಿ ಕರ್ತವ್ಯದ ಶಿಕ್ಷಣೆಗೊಳಪಡದ ಸ್ವೇಚ್ಛೆಯುಳ್ಳದುವದರಿಂದ, ಆವ ವೇಳೆಯಲ್ಲಿ, ಆವ ವಿಷಯಗಳಲ್ಲಿ, ಅವುದರ ಕಡೆಗೆ ಮನಸ್ಸು ಹೋಗುವದೋ, ಅದನ್ನು 'ಸಾಧಿಸಬಹುದೇ, ಕೂಡದೇ? ಅದು ನನಗೆ ಪ್ರಾಪ್ಯವಸ್ತುವೇ, ದುರ್ಲಭವೇ?' ಎಂಬೀ ಪೂರ್ವಾಪರ ವಿಚಾರದ ಸದಸದ್ವಿವೇಕವನ್ನೇ ಹಾಳುಮಾಡಿ, ಹೇಗಾದರೂ, ಹೇಗಿದ್ದರೂ, ಅದನ್ನು ಸಾಧಿಸಿಯೇ ತೀರಬೇಕೆಂಬ ಹಠಮಾರಿತನವನ್ನುಂಟು ಮಾಡುವದು.

ಈ ಹಟವು ಮನದಲ್ಲಿ ನೆಟ್ಟಿತೆಂದರೆ ನಾಕು, ಅದರ ಸಾಧನೆಗಾಗಿ ಆಗ್ರಹ, ನಿರ್ದಯ, ಪರಸ್ವಾಪಹರಣ, ಪರಪೀಡನೆಗಳೇ ಮುಖ್ಯ ಮುಖ್ಯವಾದ ಆಯುಧಗಳಾಗಿ ಪ್ರಯೋಗಿಸಲ್ಪಡುವವು. ಹಾಗಾದ ಬಳಿಕ ಲಜ್ಜೆಯೂ, ಸಾಧುಭಾವನೆಯೂ ದೂರವಾಗುವವು. ಅವುಗಳೆಡೆಯಲ್ಲಿ ಅನೃತ, ಕುತಂತ್ರಗಳು ಬಂದು ಪ್ರಭುತ್ವವನ್ನು ವಹಿಸುವವು. ಇಂತಹ ಹಟವೆಂಬ ಪ್ರಬಲವಾದ ಬ್ರಹ್ಮದಂಡದಿಂದಲೇ ಅಬಲೆಯರು ಪ್ರಬಲವಾದ ಕಾರ್ಯಗಳನ್ನು ಸಾಧಿಸಬಲ್ಲವರಾಗಿ, ಜಗತ್ತಿಗೆ ಕೆಲವು ವೇಳೆಗಳಲ್ಲಿ ಕೌತುಕವನ್ನೂ, ಮತ್ತೆ ಕೆಲವು ವೇಳೆಗಳಲ್ಲಿ ಭೀತಿ, ಶಂಕೆ ವಿಷಾದ, ಬೇಸರಗಳನ್ನೂ ಉಂಟುಮಾಡುತ್ತ 'ಅಬಲಾ' ಎಂಬ ಶಬ್ದಕ್ಕೆ 'ಅತಿಬಲಾ' ಅಥವಾ 'ಬಲಾಪೇಕ್ಷೆಯಿಲ್ಲದವಳು' ಎಂಬ

ವಿಪರೀತಾರ್ಥ ಕಲ್ಪನೆಗೂ ಅವಕಾಶವನ್ನು ಕಲ್ಪಿಸಿಕೊಡುತ್ತಿರುವರು

ಈ ಹಟವೆಂಬುದು ಸ್ತ್ರೀಸಾಮಾನ್ಯದಲ್ಲೆಲ್ಲಾ ತೋರಿಬರುತ್ತಿರುವುದಾದರೂ, ಕೆಲವು ಕಡೆ ಇದು ಸ್ತ್ರೀಯರ ಸದ್ವರ್ತನೆ, ಕರ್ತವ್ಯ ಸಾರ್ಥಕ್ಯತೆಗಳಿಗೆ ಸಹಕಾರಿಯಾಗಿಯೂ, ಮತ್ತೆ ಕೆಲವು ಕಡೆ, ಅವರ ದುರಾಚಾರದ ಅನರ್ಥ ವ್ಯಾಪಾರಕ್ಕೆ ಸಹಕಾರಿಯಾಗಿಯೂ ಪರಿಣಮಿಸುತ್ತಿರುವದು ! ಆದುದರಿಂದ, ಈ ಹಟವೆಂಬುದನ್ನು (೧) ವಿಮರ್ಶಾಪೂರ್ವಕವಾದ ಹಟ (೨) ಅವಿಚಾರದ ಆಶಾಂಧತೆಯ ಹಟವೆಂದು ಎರಡು ಬಗೆಯಾಗಿ ವಿಭಾಗಿಸಬಹುದು ಹೇಗೆಂದರೆ,— ಆರ್ಯಮಹಿಳೆಯರಾದ ನಮ್ಮ ಪ್ರಿಯ ಭಗಿನಿಯರಲ್ಲಿ ಹಲವರು, ತಮ್ಮ ದೇಹಪೋಷಣೆಯ ವಿಚಾರವಾಗಿ ತೋರುವ ಅನಾದರಣೆಯ ಫಲದಿಂದಲೋ, ಅಥವಾ ವಾಯುಗುಣ, ಕಾಲಗುಣಗಳ ವ್ಯತಿರಿಕ್ತ ದೋಷದಿಂದಲೋ, ಹೇಗೋ, ರೋಗಾದ್ಯುಪದ್ರವಗಳಿಂದ ಅಶಕ್ತೆಯರಾಗಿ ನರಳುತ್ತಿದ್ದರೂ ತಮ್ಮತಮ್ಮ ಗೃಹಕಾರ್ಯಗಳನ್ನು ಹೇಗಾದರೂ, ಎಷ್ಟು ಶ್ರಮವಾದರೂ ಸಹಿಸಿಕೊಂಡು, ಹಿಡಿದ ಕೆಲಸಗಳನ್ನು ಕೊನೆಮುಟ್ಟುವವರೆಗೂ ಮಾಡದೆ ಬಿಡರು ಅದನ್ನು ಅವರು ಯಾವ ಶಕ್ತಿಪ್ರಭಾವದಿಂದ ಮಾಡುವರೆಂದು ವಿಚಾರ ಮಾಡುವವಾದರೆ, ಅವರ ಪವಿತ್ರಾಂತಃಕರಣದಲ್ಲಿ ಬಲವಾಗಿ ನಾಟಿರುವ ಹಟದ ಅದ್ಭುತ ಶಕ್ತಿಯಿಂದಾದುದೆಂದು ಚೆನ್ನಾಗಿ ತಿಳಿದುಬರುವುದು ಏಕೆಂದರೆ, ವಿಮರ್ಶಾಪೂರ್ವಕವಾಗಿ ಉಂಟಾದ ಈ ಹಟವು, “ ಈ ಕೆಲಸವು ನನ್ನ ಪಾಲಿಗೆ ಬಂದಿರುವದು, ಇದನ್ನು ನಾನು ಮಾಡದೆ ಬಿಟ್ಟರೆ, ಕರ್ತವ್ಯಕ್ಕೆ ಲೋಪವುಂಟಾಗುವದು, ನನ್ನ ಅಶಕ್ತತೆಗಾಗಿ ಇದನ್ನು ಇತರರ ಪಾಲಿಗೆ ಬಿಟ್ಟರೆ, ನನ್ನ ಸುಖಕ್ಕಾಗಿ ಪರರಿಗೆ ತೊಂದರೆಯನ್ನು ಕೊಟ್ಟ ದೋಷವುಂಟಾಗುವುದು, ಅಷ್ಟಾದರೂ ಈ ನನ್ನದಾಗಿರುವ ಕೆಲಸಗಳನ್ನು ಅನ್ಯರಿಂದ ಮಾಡಿಸಿದರೆ, ನಾನು ಮಾಡಿದಂತಾಗುವದಿಲ್ಲ, ಆದುದರಿಂದ ಇದನ್ನು ಎಷ್ಟು ಕಷ್ಟಪಟ್ಟಾದರೂ ಮಾಡಿಯೇ ತೀರಬೇಕು ” ಹೀಗೆಂಬ ದೃಢಸಂಕಲ್ಪದ ಸ್ವಾಭಿಮಾನವನ್ನುಂಟು ಮಾಡುವದು

(ಸಶೇಷ)

॥ ಶ್ರೀ ॥

ಶ್ರೀರಾಮ ಪ್ರಸನ್ನ

ಸದ್ಗುರುವೇ ನಮಃ

# ಆಳ್ವಾರರ ವೈಭವವು.

## ಪೀಠಿಕೆ

“ ಯದಾ ಯದಾ ಹಿ ಧರ್ಮಸ್ಯ । ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ । ತದಾತ್ಮಾನಂ ಸೃಜಾಮ್ಯಹಂ ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ ॥ ”

ಪ್ರಪಂಚದಲ್ಲಿ ಧರ್ಮಕ್ಕೆ ಚ್ಯುತಿಯುಂಟಾಗಿ, ಅಧರ್ಮವು ವೃದ್ಧಿ ಹೊಂದಿದಾಗಲೆಲ್ಲಾ ಭಗವಂತನು ಭೂಲೋಕದಲ್ಲಿ ಜನ್ಮವೆತ್ತಿ ಧರ್ಮ ಪ್ರತಿಷ್ಠೆಯನ್ನು ಮಾಡುವುದಾಗಿ ಭಗವದ್ಗೀತೆಯಲ್ಲಿ ಹೇಳಿದೆಯಷ್ಟೆ, ಧರ್ಮಾಚರಣೆಯು ಕೇವಲ ಅಪೂರ್ವವಾದಾಗ ಮಾತ್ರ ಹೀಗಾಗುವುದೆಂದು ಭಾವಿಸಬೇಕು ಧರ್ಮದಲ್ಲಿ ಜನರಿಗೆ ಆಸಕ್ತಿ ಕಡಿಮೆಯಾದಾಗಲೂ, ದುಷ್ಕಾರ್ಯಗಳಲ್ಲಿ ಅವರು ವಿಶೇಷವಾಗಿ ಪ್ರವರ್ತಿಸಿದಾಗಲೂ, ಧರ್ಮಾಚರಣೆಗೆ ಕುಂದುಕವುಂಟಾದಾಗಲೂ ವಿಶೇಷವಾಗಿ, ಭಗವತ್ಕೃಪಾ ಪಾತ್ರರಾಗಿ—ಜ್ಞಾನಯುಕ್ತರಾಗಿ—ಭಗವತ್ಸಾನ್ನಿಧ್ಯದಲ್ಲಿ ವಸಿಸುವ ಮಹನೀಯರು, ಭಗವದಿಚ್ಛಾನುಸಾರ ಜನರಿಗೆ ಸನ್ಮಾರ್ಗವನ್ನು ಬೋಧಿಸುವ ಉದ್ದೇಶದಿಂದ ಜನ್ಮವೆತ್ತುವರೆಂದು ಸಕಲ ಶಾಸ್ತ್ರಗಳಿಂದಲೂ ತಿಳಿಯಬರುತ್ತದೆ. ಇಂತಹರು ಒಂದೊಂದು ಸಂದರ್ಭಗಳಲ್ಲಿ ಒಬ್ಬೊಬ್ಬರಾಗಿಯೂ, ಅಥವಾ ಪರಸ್ಪರ ಸಹಾಯಕ್ಕಾಗಿ ಏಕಕಾಲದಲ್ಲಿ ಇಬ್ಬರೂ ಮೂವರೂ ಅವತರಿಸುವದುಂಟು

## ( ಮೂವರು ಆಳ್ವಾರರ ವೃತ್ತಾಂತ )

ಈ ಪ್ರಕಾರವಾಗಿಯೇ ದ್ವಾಪರಯುಗದ ಅಂತ್ಯಭಾಗದಲ್ಲಿ ಪೊಹಿ ಯಾಳ್ವಾರರೂ, ಭೂತಾಹ್ವಯರೆಂಬ ಪೂಥತ್ತಾಳ್ವಾರರೂ ಮಹದಾಹ್ವ ಯರೆಂದು ಪ್ರಸಿದ್ಧರಾದ ಪೇಯಾಳ್ವಾರರೂ ಅವತರಿಸಿದರು

ಇವರಲ್ಲಿ ಪೇಯಾಳ್ವಾರರು ಯಾವಾಗಲೂ, ಭಗವದ್ಧ್ಯಾನಪರ ರಾಗಿ ಆನಂದದಲ್ಲಿ ಮಗ್ನರಾಗಿ ನಗುತ್ತ, ಅಳುತ್ತ, ಕುಣಿಯುತ್ತ, ಇದ್ದುದರಿಂದ ಭ್ರಾಂತಯೋಗಿಗಳೆಂದೂ, ಹೆಚ್ಚಾದ ಭಕ್ತಿಯುಳ್ಳ ವರಾದುದರಿಂದ ಮಹದಾಹ್ವಯರೆಂದೂ ಹೆಸರ್ಗೊಂಡರು. ಈ ಮೂವರೂ ಬೇರೆಬೇರೆ ಸ್ಥಳಗಳಲ್ಲಿ ಹುಟ್ಟಿದುದರಿಂದ ಒಬ್ಬರ ಪರಿ ಚಯವು ಮತ್ತೊಬ್ಬರಿಗಿಲ್ಲದೆ ಬಹುಕಾಲ ದೇಶಾಟನ ಮಾಡುತ್ತಿದ್ದರು.

ಹೀಗಿರಲು ಒಂದಾನೊಂದು ಸಂದರ್ಭದಲ್ಲಿ "ತಿರುಕ್ಕೋವಿ ಲೂರ್" ಎಂಬ ಕ್ಷೇತ್ರದಲ್ಲಿ ಈ ಮೂವರೂ ಸೇರಿದರು ಹೇಗೆಂದರೆ— ಒಂದುದಿವಸ ಪೊಯಿಘಯಾಳ್ವಾರರು ತಿರುಕ್ಕೋವಿಲೂರಿಗೆ ಬಂದು ಸೇರಿದ ಸಮಯಕ್ಕೆ ಸರಿಯಾಗಿ ಬಲವಾಗಿ ಮಳೆಯು ಸುರಿಯುವುದಕ್ಕೆ ಪ್ರಾರಂಭವಾಯಿತು ಆಗ ಅವರು ಒಂದು ಕಿರಿದಾದ ಮನೆಯ ನಡುವ ಯಲ್ಲಿ ಮಲಗಿದ್ದರು. ಅಲ್ಲಿಗೆ ಮಳೆಯಲ್ಲಿ ನೆನೆಯುತ್ತ ಪೂಥತ್ತಾಳ್ವಾ ರರೂ, ಪೇಯಾಳ್ವಾರರೂ, ಒಬ್ಬೊಬ್ಬರು ಒಂದೊಂದು ಕಡೆಯಿಂದ ಬಂದು ಸೇರಿದರು ಜ್ಞಾನಚಕ್ಷುಗಳಾದ ಈ ಮೂವರೂ ಪರಸ್ಪರ ಪರಿ ಚಯುವನ್ನು ಮಾಡಿಕೊಂಡು, ತಮ್ಮತಮ್ಮ ಮನಸ್ಸುಗಳಲ್ಲಿ ಭಗವಂತ ನನ್ನು ಸಾಕ್ಷಾತ್ಕರಿಸಿ, ಅವನನ್ನು ಕುರಿತು ಸ್ತೋತ್ರವನ್ನು ಮಾಡಿದರು

ಪೊಯಿಘಯಾಳ್ವಾರರು, 'ವೈಯ್ಯಂತಹಳಿಯಾ' ಎಂಬುವ ತಿರು ವಂದಾದಿಯಿಂದಲೂ, ಪೂಥತ್ತಾಳ್ವಾರರು 'ಅನ್ಪೇತಹಳಿಯಾ' ಎಂಬುವ ಎರಡನೇ ತಿರುವಂದಾದಿಯಿಂದಲೂ, ಪೇಯಾಳ್ವಾರರು, 'ತಿರುಕ್ಕಂ ಡೇನ್' ಎನ್ನುವ ಮೂರನೇ ತಿರುವಂದಾದಿಯಿಂದಲೂ ಭಗವಂತನ ಮಹಿಮೆಯನ್ನು ಪ್ರಕಾಶಪಡಿಸಿ ದೇಹಳೀಶನನ್ನು ಧ್ಯಾನಿಸುತ್ತ ದಿವ್ಯ ದೇಶದ ಯಾತ್ರೆಯನ್ನು ಮಾಡುತ್ತಿದ್ದರು

## ( ತಿರುಮುಳಿಶಿಯಾಳ್ವಾರರು )

ತಿರುಮುಳಿಶಿಯಾಳ್ವಾರರು ಭೃಗುವಂಶೋತ್ಪನ್ನರು ಕೇವಲ ಬಾಲ್ಯದಲ್ಲಿಯೇ ಅವರಿಗೆ ಮಾತಾಪಿತೃ ವಿಯೋಗವುಂಟಾಗಿ, ತಿರುವಾಳನೆಂಬ ಒಬ್ಬ ಸೋದರವನ ಮನೆಯಲ್ಲಿ ಬೆಳೆದರು ಅವರು ಏಳು ವರ್ಷಗಳವರೆಗೂ ಅಲ್ಲಿದ್ದು, ಅನಂತರ ತೀರ್ಥಯಾತ್ರೆಯನ್ನು ಮಾಡುತ್ತ, ಜಗತ್ಕರ್ತನನ್ನು ತಿಳಿಯಬೇಕೆಂಬ ಉದ್ದೇಶದಿಂದ ಷಣ್ಮತಗಳನ್ನೂ ಪರಿಶೀಲನೆ ಮಾಡಿ, ನಿಶ್ಚಯವನ್ನು ತಿಳಿಯಲಾರದೆ ಕೊನೆಗೆ ಶೈವ ಮತವು ಹೊರತು ಮಿಕ್ಕವುಗಳೆಲ್ಲವೂ ಅಸಾರವಾದವುಗಳೆಂದು ನಂಬಿ, ಶಿವಪರವಾಗಿ ಅನೇಕ ಗ್ರಂಥಗಳನ್ನು ಮಾಡಿ, 'ಶಿವವಾಕ್ಯ'ರೆಂಬ ಬಿರುದಿನಿಂದ ಪ್ರಸಿದ್ಧರಾಗಿ, ಇತರ ಮತಸ್ಥರೊಂದಿಗೆ ಮಾತನ್ನು ಕೂಡ ಆಡದೆ ಮೌನದಿಂದಿರುತ್ತಿದ್ದರು

ಈ ಸಮಾಚಾರವನ್ನು ಪೇಯಾಳ್ವಾರರು ತಿಳಿದು, ಶಿವವಾಕ್ಯರ ನಿಶ್ಚಲಭಕ್ತಿಗೆ ಮೆಚ್ಚಿ, ಅಂತಹ ಮಹನೀಯರನ್ನು ವಿಷ್ಣುಭಕ್ತರನ್ನಾಗಿ ಮಾಡಬೇಕೆಂದೆಣಿಸಿ ಯುಕ್ತಿಯಿಂದ ಅವರನ್ನು ಮಾತನಾಡುವಂತೆ ಮಾಡಿ, ವಾದದಲ್ಲಿ ಜಯಿಸಿ, ತತ್ತ್ವೋಪದೇಶವನ್ನು ಮಾಡಿದರು. ಅನಂತರ ತಿರುಮುಳಿಶಿಯಾಳ್ವಾರರು ಪೇಯಾಳ್ವಾರರ ದಯದಿಂದ ಪಂಚಸಂಸ್ಕಾರವನ್ನು ಹೊಂದಿ, ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತ ಪರತತ್ತ್ವವನ್ನು ತಿಳಿದರು

ಆ ಬಳಿಕ ಅವರು ತಿರುವಲ್ಲಿಕ್ಕೇಣಿಗೆ ಬಂದು, ಕೈರವಣೀ ತೀರದಲ್ಲಿ ಭಗವದ್ಧ್ಯಾನಪರರಾಗಿ ಯೋಗದಲ್ಲಿದ್ದಾಗ ಅವರನ್ನು ಪುನಃ ಶೈವಮತಕ್ಕೆ ತಿರುಗಿಸಬೇಕೆಂದು ಆ ಮತಸ್ಥರಲ್ಲಿ ಕೆಲವರು ಬಹು ಪ್ರಯತ್ನಪಟ್ಟರೂ ವಿಷ್ಣುವಿನಲ್ಲಿ ಅವರ ಭಕ್ತಿಯು ಅವಿಚ್ಛಿನ್ನವಾಗಿದ್ದಿತು. ಆ ಕಾರಣ ಅವರನ್ನು 'ಭಕ್ತಿಸಾರ'ರೆಂದೂ, ಆಹಾರರಹಿತರಾಗಿದ್ದುದರಿಂದ 'ಪರಮಯೋಗಿ'ಗಳೆಂದೂ ಕರೆಯುತ್ತ ಬಂದರು.

ಭಕ್ತಿಸಾರರು ಜನರ ಕೂಟದಲ್ಲಿದ್ದರೆ ತಮ್ಮ ಯೋಗಸಾಧನೆಗೆ ತೊಂದರೆಯುಂಟಾಗುವುದೆಂದು ತಿಳಿದು ಒಂದು ಪರ್ವತದ ಗುಹೆಯೊ

ಳಕ್ಕೆ ಪ್ರವೇಶಮಾಡಿ ಯೋಗಾರೂಢರಾಗಿರಲು, ಪೊಯಿಘಯಾಳ್ವಾರರೂ, ಪೂಧತ್ತಾಳ್ವಾರರೂ, ಪೇಯಾಳ್ವಾರರೂ ದೇಶಾಟನ ಮಾಡುತ್ತ, ಯೋಗಾಭ್ಯಾಸವನ್ನು ಮಾಡುವ ಉದ್ದೇಶದಿಂದ ಅದೇ ಗುಹೆಯನ್ನು ಹೊಕ್ಕು, ಅಲ್ಲಿದ್ದ ಭಕ್ತಿಸಾರರನ್ನು ಕಂಡರು ಭಕ್ತಿಸಾರರು ಆ ಮೂವರನ್ನೂ ನೋಡಿ ಪರಮಾನಂದದಿಂದ ಸನ್ಮಾನಿಸಿದ ನಂತರ ಒಬ್ಬರಿಗೊಬ್ಬರು ಕುಶಲಪ್ರಶ್ನೆಯನ್ನು ಮಾಡಿ, ಹಾಲಿನೊಂದಿಗೆ ಸಕ್ಕರೆಯು ಬೆರತಂತೆ ಕಲವು ಕಾಲವಲ್ಲಿದ್ದರು ಯೋಗಪೂರ್ತಿಯಾದ ನಂತರ ಆ ಮೂವರೂ ಭೂಸಂಚಾರ ಮಾಡುತ್ತ, ದೇಹಳೀಶ ನಗರದಲ್ಲಿ ವಿಷ್ಣುಸಾಯುಜ್ಯವನ್ನು ಪಡೆದರು

* ಭಕ್ತಿಸಾರರು ತಮ್ಮ ಜನ್ಮಭೂಮಿಯಾದ ಮಹೀಸಾರಪುರ (ಕ್ಷೇತ್ರ)ಕ್ಕೆ ಬಂದು, ಅಲ್ಲಿ ಸ್ವಲ್ಪಕಾಲವಿದ್ದು ಆಮೇಲೆ ಕಾಂಚೀಪಟ್ಟಣದಲ್ಲಿ ಯಥೋಕ್ತಕಾರಿಯನ್ನು ಸೇವಿಸುತ್ತ ಪೊಯಿಘಯಾಳ್ವಾರರು ಅವತರಿಸಿದ ಸರಸ್ಸಿನ ತೀರದಲ್ಲಿ ಯೋಗಾಭ್ಯಾಸವನ್ನು ಮಾಡುತ್ತಿದ್ದರು

ಹೀಗಿರಲು, ಬಾಲ್ಯದಲ್ಲಿ ಇವರ ಪರಿಚರ್ಯವೃತ್ತಿಯಲ್ಲಿದ್ದ ಶೂದ್ರಸ್ತ್ರೀಯ ಮಗನಾದ ಕಣಿ ? (ಕ...) ಕಣ್ಣನು ಅಲ್ಲಿಗೆ ಬಂದು ಭಕ್ತಿಸಾರರ ಸೇವೆಯನ್ನು ಮಾಡುತ್ತಿದ್ದನು ಅವರ ಕೃಪೆಯಿಂದ ಅವನೂ ವಿದ್ಯಾವಂತನಾಗಿ ಪರಮ ವೈಷ್ಣವನಾದನು ಅವನು ಪ್ರತಿದಿನವೂ ದ್ವಾದಶನಾಮಂಗಳಿಟ್ಟುಕೊಂಡು, ತುಲಸೀ ಮಾಲಿಕೆಯನ್ನು ಧರಿಸಿ, ಕೈಯಲ್ಲಿ ಬೀಸಣಿಗೆಯನ್ನು ಹಿಡಿದು, ತಲೆಯಲ್ಲಿ ಪ್ರಸನ್ನ ಮಕುಟವನ್ನು (?) ಮುಡಿದು, ಅಕ್ಷಯಪಾತ್ರಹಸ್ತನಾಗಿ ಉಪಾದಾನವನ್ನೆತ್ತಿ, ತನ್ನ ಗುರುವಿನ ಶುಶ್ರೂಷೆಯನ್ನು ಮಾಡುತ್ತಿದ್ದನು ಅವನು ಕವನ ಮಾಡಿ ಹಾಡಿದ ಪದ್ಯಗಳನ್ನು ಕೇಳಿ ಅವನಲ್ಲಿ ಜನರಿಗೆ ಭಕ್ತಿಯುಂಟಾಗಿ, ಅವನ ಯಶಸ್ಸು ಹೆಚ್ಚಿತು ಕೊನೆಗೆ ಅವನ ಹೆಸರು ಆ ದೇಶದ ದೊರೆಯಾದ ಪಲ್ಲವರಾಯನ . . . ಕಿವಿಯನ್ನು ಮುಟ್ಟಲು,

* ಅತ್ಯದ್ಭುತವೂ, ವಿಸ್ತಾರವೂ ಆಗಿರುವ ಈ ಮಹಾತ್ಮರ ಚರಿತೆಯು ಇಲ್ಲಿ ಸಂಗ್ರಹರೂಪದಿಂದ ಪ್ರಚುರಿಸಲ್ಪಟ್ಟಿರುವದು ಕಾಲಾನುಕ್ರಮದಿಂದ ಇವರ ಚರಿತ್ರೆಯನ್ನು ಪ್ರತ್ಯೇಕವಾಗಿ ಪ್ರಚಾರಕ್ಕೆ ತರುವೆವು ಸಂ

ಒಂದಾನೊಂದು ದಿನ, ರಾಯನು ಕಣಿಕಣ್ಣನನ್ನು ಬರಮಾಡಿಕೊಂಡು ಅವನು ಮಾಡಿದ ಗೀತೆಗಳನ್ನು ಕೇಳಿ ಸಂತೋಷಪಟ್ಟು, ಅವನನ್ನು ಬಹುವಾಗಿ ಸನ್ಮಾನಿಸಿ, ತನ್ನ ವಿಷಯವಾಗಿ ಕೆಲವು ಪದ್ಯಗಳನ್ನು ಹೇಳೆಂದನು ಕಣಿಕಣ್ಣನು— 'ಅರಸೇ! ಭಗವಂತನ ಸ್ತುತಿ ಹೊರತಾಗಿ ಇತರ ನರಸ್ತುತಿಯನ್ನು ನಾನು ಮಾಡಲಾರೆನು ಲೋಕದಲ್ಲಿ ಭಗವದ್ಭಾಗವತರ ಸ್ತುತಿಯನ್ನು ಮಾಡುವದು ಶಾಸ್ತ್ರಸಮ್ಮತವಾದುದು ನರಸ್ತುತಿಯನ್ನು ಹೇಗೆ ಮಾಡಲಿ?' ಎಂದನು ಅರಸು, ತನ್ನ ಅಪೇಕ್ಷೆಯನ್ನು ನೆರವೇರಿಸಬೇಕೆಂದು ಎಷ್ಟೋ ನಿರ್ಬಂಧಿಸಿದನು, ಆದರೂ ಆತನದಕ್ಕೆ ಒಪ್ಪದಿರಲು, ಅವನಲ್ಲಿ ಕೋಪಗೊಂಡ ಅರಸು— ಕಣಿಕಣ್ಣನನ್ನು 'ಈಗಲೇ ನನ್ನ ಸೀಮೆಯನ್ನು ಬಿಟ್ಟು ಹೊರಟುಹೋಗ' ಬೇಕೆಂದು ಅಜ್ಞೆಮಾಡಿದನು ಕಣಿಕಣ್ಣನು ಹಾಗೆಯೇ ಆಗಲೆಂದು ಅರಮನೆಯಿಂದ ಹೊರಟು ತನ್ನ ಗುರುಗಳ ಸಮೀಪಕ್ಕೆ ಬಂದು ನಡೆದ ಸಂಗತಿಯನ್ನೆಲ್ಲಾ ತಿಳಿಸಿ, ತಾನು ಹೋಗುವದಕ್ಕೆ ಅವರ ಅನುಜ್ಞೆಯನ್ನು ಕೇಳಲು, ಆಶ್ರಿತವತ್ಸಲರಾದ ಭಕ್ತಿಸಾರರು ಶಿಷ್ಯನನ್ನು ಬಿಟ್ಟಿರಲಾರದೆ ಆತನೊಡನೆ ತಾವೂ ಹೊರಡುವುದಾಗಿ ನಿಶ್ಚಯಿಸಿ ಕಣಿಕಣ್ಣನೊಡಗೊಂಡು, ಯಥೋಕ್ತಕಾರಿ ಸ್ವಾಮಿಯ ಸನ್ನಿಧಿಗೆ ಬಂದು ಸ್ವಾಮಿಯನ್ನು ಸೇವಿಸಿ ಹೊರಟರು ಆ ಸಮಾಚಾರವು ಆ ಊರಿನವರಿಗೆಲ್ಲಾ ತಿಳಿಯಲಾಗಿ ಅವರು ಅರಸನ ದುಷ್ಕೃತನವನ್ನು ನಿಂದಿಸಿದರಲ್ಲದೆ, ಭಕ್ತಿಸಾರರಲ್ಲಿ ನಿಶ್ಚಲಭಕ್ತಿಯುಳ್ಳ ಹಲವರು ಅವರ ಹಿಂದೆಯೇ ಹೊರಟರು ಹೀಗೆ ತನ್ನನ್ನು ಅನುಸರಿಸಿ ಬಂದ ಪರಿವಾರದೊಂದಿಗೆ ಭಕ್ತಿಸಾರರು 'ಉತ್ತರೀ' ಎಂಬ ಗ್ರಾಮಕ್ಕೆ ಬಂದು ಅಲ್ಲಿ ನಿಂತರು

ಪಲ್ಲವರಾಯನು ಜನಗಳ ನಿಂದೆಯನ್ನು ತಡೆಯಲಾರದೆ ನಿರಪರಾಧಿಗಳಾದ ಭಗವದ ಕ್ತರನ್ನು ಅಪಮಾನಗೊಳಿಸಿದುದಕ್ಕಾಗಿ ಪಶ್ಚಾತ್ತಾಪಗೊಂಡು, ತನ್ನ ರಾಣಿಯ ಪ್ರೇರಣೆಯಿಂದ ಕೆಲವು ದಿನಗಳೊಳಗಾಗಿಯೇ ಭಕ್ತಿಸಾರರ ಮತ್ತು ಕಣಿಕಣ್ಣರ ಶರಣುವನ್ನು ಹೊಂದಿದನು.

ಅನಂತರ ಭಕ್ತಿಸಾರರು ತಿರುಕ್ಕೊಡಂದೆ (ಕುಂಭಕೋಣ) ಯಲ್ಲಿ ಅರ್ಚಾರೂಪಿಯಾಗಿರುವ ಶ್ರೀ ಶಾರ್ಙಪಾಣಿ ಸ್ವಾಮಿಯ ಸೇವೆಯನ್ನು ಮಾಡಬೇಕೆಂದು ಹೊರಟರು ಬರುತ್ತಾ ಮಾರ್ಗದಲ್ಲಿ ಪೆರಂಪುಲಿಯೂರೆಂಬ ಗ್ರಾಮವು ಸಿಕ್ಕಲು, ಅಲ್ಲಿ ಒಬ್ಬ ಬ್ರಾಹ್ಮಣನ ಮನೆಯ ಜಗುಲಿಯ ಮೇಲೆ ವೈಷ್ಣವರು ವೇದಾಧ್ಯಯನ ಮಾಡುತ್ತಿದ್ದುದನ್ನು ಕಂಡು, ಅಬಳಿ ಕುಳಿತುಕೊಂಡರು ಆ ವೈಷ್ಣವರು ಭಕ್ತಿಸಾರರ ಪ್ರಭಾವವನ್ನರಿಯದೆ ಶೂದ್ರನೆಂಬ ಕಾರಣದಿಂದ ವೇದಪಠನವನ್ನು ನಿಲ್ಲಿಸಿಬಿಟ್ಟರು ಭಕ್ತಿಸಾರರು ಅದನ್ನರಿತು ಅಲ್ಲಿಂದೆದ್ದು ದೂರವಾಗಿ, ಬೇರೊಂದು ಕಡೆಯಲ್ಲಿ ಕುಳಿತುಕೊಂಡರು ಆ ಸಮಯದಲ್ಲಿ ಅದೇ ಊರಿನಲ್ಲಿ ಯಜ್ಞವನ್ನು ಮಾಡುತ್ತಿದ್ದ ಹರಿಪಾದನೆಂಬ ಸೋಮಯಾಜಿಯು ತಿರುಮುಳಿಶಿಯಾಳ್ವಾರರ ಮಹಿಮೆಯನ್ನು ತಿಳಿದಿದ್ದುದರಿಂದ, ಅವರು ಬಂದ ವರ್ತಮಾನವನ್ನು ಕೇಳಿ ಅವರಿದ್ದಲ್ಲಿಗೆ ಬಂದು ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಅವರನ್ನು ಯಾಗಶಾಲೆಗೆ ಕರೆದುಕೊಂಡು ಹೋಗಿ, ಉನ್ನತಾಸನವನ್ನಿತ್ತು, ವಿಧಿಪೂರ್ವಕವಾಗಿ ಅವರಿಗೆ ಅಗ್ರಪೂಜೆಯನ್ನು ಮಾಡಿದನು ಅಲ್ಲಿ ನೆರೆದಿದ್ದ ಬ್ರಾಹ್ಮಣರು ಅದನ್ನು ನೋಡಿ, ಪಂಡಿತರಾದ ತಮ್ಮೆಲ್ಲರನ್ನೂ ಬಿಟ್ಟು, ಈ ಹರಿಪಾದನು ಶೂದ್ರನನ್ನು ಕರೆತಂದು ಅಗ್ರಪೂಜೆಯನ್ನು ಮಾಡಿದನೆಂದು ಅಸೂಯೆಗೊಂಡು, ಕೋಪದಿಂದ ಪೈಮರೆತು ಯಜ್ಞಶಾಲೆಯನ್ನು ಬಿಟ್ಟು ಹೊರಟುಹೋದರು ಸೋಮಯಾಜಿಯು ಆಳ್ವಾರರನ್ನು ಕುರಿತು—

"ಸ್ವಾಮಿಾ, ಯೋಗಿವರ್ಯರೇ! ಈ ವಿಚಾರಶೂನ್ಯರಾದ ಬ್ರಾಹ್ಮಣರು ತಮಗೆ ಮಾಡಿದ ಅಪಮಾನವನ್ನು ಸಹಿಸಲಾರೆನು ಭಗವದ್ಭಾಗವತ ದೂಷಣೆಗಳನ್ನು ಕೇಳಿದ ಸ್ಥಳದಲ್ಲಿ ನಿಲ್ಲಬಾರದೆಂದುಶಾಸ್ತ್ರವಿದೆ ಆದಕಾರಣ ನಾನು ಈ ಊರನ್ನೇ ಬಿಟ್ಟುಹೋಗಬೇಕೆಂದಿರುವೆನು ಇಲ್ಲಿಗ ತಮ್ಮನ್ನು ಕರೆತಂದು ಹೀಗೆ ಅಪಮಾನಗೊಳಿಸಿದ ನನ್ನ ಮಹಾಪರಾಧವನ್ನು ಕ್ಷಮಿಸಿ ಅನುಗ್ರಹಿಸಬೇಕೆಂದು ಪ್ರಾರ್ಥಿಸುವೆನು." ಎಂದು ಹಲವು ಬಗೆಯಾಗಿ ಪರಿತಪಿಸಿದನು. ಭಕ್ತಿಸಾರರು ಸೋಮಯಾಜಿಗೆ ಕಾಲಕ್ಕೆ ತಕ್ಕ ಮಾತುಗಳನ್ನು ಹೇಳಿ ಸಮಾಧಾನಗೊಳಿಸಿದರು.

ಸ್ವಲ್ಪಕಾಲದಲ್ಲಿಯೇ ಆ ಊರಿನ ಬ್ರಾಹ್ಮಣರಿಗೆ ಭಕ್ತಿಸಾರರ ಯೋಗ್ಯತೆಯು ತಿಳಿಯಬಂದಿತು ಅವರ ದಿವ್ಯಗುಣಗಳೂ, ಭೂತ ದಯೆಯೂ, ದೈವಭಕ್ತಿಯೂ ಗೋಚರಗಳಾದವು ಆಗ ಅವರೆಲ್ಲರೂ ಸೇರಿ ತಮ್ಮ ಅಪರಾಧವನ್ನು ಕ್ಷಮಿಸಬೇಕೆಂದು ಆಳ್ವಾರರನ್ನು ಬೇಡಿ, ಅವರನ್ನು ರಥದಲ್ಲಿ ಕುಳ್ಳಿರಿಸಿ, ಮೆರವಣಿಗೆಯನ್ನು ಮಾಡಿದರು. ಅಲ್ಲಿಂದ ಮುಂದೆ ಆಳ್ವಾರರು ಕುಂಭಕೋಣಕ್ಕೆಬಂದು, ಶಾರ್ಙಪಾಣಿ ಯನ್ನು ಸೇವಿಸಿ, ಪವಡಿಸಿರುವ ಸ್ವಾಮಿಯನ್ನು ನೋಡಿ— 'ವರಾಹಾ ವತಾರದಲ್ಲಿ ಭೂಮಿಯನ್ನು ಎತ್ತಿ ಆಯಾಸವಾಯಿತೋ ?— ತ್ರಿವಿಕ್ರ ಮಾವತಾರದಲ್ಲಿ ಭೂಮಿಯನ್ನು ಅಳೆದು ಆಯಾಸವಾಯಿತೋ ?—' ಎಂಬ ಅಭಿಪ್ರಾಯವುಳ್ಳ ಪದ್ಯಗಳಿಂದ ಸ್ತುತಿಸಿದರು ಸ್ವಾಮಿಯು ಅವರ ಕವಿತೆಗೆ ಮೆಚ್ಚಿ ಏಳಲೆತ್ನಿಸಲು, ಅರ್ಚಾಕೃತಿಗಿದು ಸರಿಯಲ್ಲ ವೆಂದು ಆಳ್ವಾರರು ಬೇಡಿದುದರಿಂದ ಅರ್ಧವೆದ್ದಂತೆಯೇ ಈಗಲೂ ಸ್ವಾಮಿಯುವರು ಅವತರಿಸಿರುವರೆಂದು ಸ್ಥಳ-ಪುರಾಣದಲ್ಲಿ ಹೇಳಿದೆ ಹೀಗೆ ತಿರುಮುಳಿಶಿಯಾಳ್ವಾರರು ಈ ಸ್ವಾಮಿಯನ್ನು ಸ್ತುತಿಸಿದುದಲ್ಲದೆ ಹನ್ನೊಂದು ದಿವ್ಯಸ್ಥಳಗಳನ್ನು ವರ್ಣಿಸಿ, 'ತಿರುವಂದಾದಿ' ಎಂಬ ಗ್ರಂಥವನ್ನೂ ನೂರಿಪ್ಪತ್ತು ಪದ್ಯಗಳುಳ್ಳ 'ತಿರುಚ್ಚಂದ'ವೆಂಬ ಪ್ರಬಂಧ ವನ್ನೂ ಮಾಡಿರುವರು

(ಇಲ್ಲಿಗೆ ತಿರುಮುಳಿಶಿಯಾಳ್ವಾರ್ ವೈಭವದ ಸಂಕ್ಷಿಪ್ತ ವರ್ಣನವು)

"ಶಕ್ತಿ ಪಂಚಮಯ ವಿಗ್ರಹಾತ್ಮನೇ ಶುಕ್ತಿಕಾರ ಜಿತಚಿತ್ತಹಾರಿಣೇ ।
ಮುಕ್ತಿದಾಯಕ ಮುರಾರಿಪಾದಯೋಃಭಕ್ತಿಸಾರ ಮುನಯೇ ನಮೋನಮಃ"

(ಶ್ರೀ ಪ್ರಪನ್ನಾಮೃತ)

——————0

## ( ನಮ್ಮಾಳ್ವಾರರ ಚರಿತೆ )

II

ದ್ವಾಪರಾಂತ್ಯದಲ್ಲಿ ದಕ್ಷಿಣ ದೇಶವನ್ನು ಪಾಂಡ್ಯರು ಆಳುತ್ತಿದ್ದಾಗ ತಾಮ್ರಪರ್ಣೀ ತೀರದೊಳು 'ಕುರುಕಾಪುರಿ' (ಆಳ್ವಾರ್ ತಿರುನಗರಿ) ಎಂಬ ಪಟ್ಟಣವಿದ್ದುದು ಅಲ್ಲಿ 'ಕಾರಿಯಾರ್' ಎಂಬ ಶೂದ್ರನಿದ್ದನು ಅವನು ಉತ್ತಮ ಕುಲದವನು, ಭಗವದ್ಭಕ್ತನು ಆತನಿಗೆ ಒಡೆಯನಂಗಾಯೆಂಬ ಪತ್ನಿಯು ಇದ್ದಳು ಅವರಿಬ್ಬರಿಗೂ ಹರಿಪ್ರಸಾದದಿಂದ, ಕಲಿಯುಗವು ಹುಟ್ಟಿ ನಲವತ್ತ್ಮೂರು ದಿವಸಗಳು ಮಾತ್ರವಾಗಿರಲು, ಪ್ರಮಾದಿ ಸಂವತ್ಸರದ ವೈಶಾಖ ಪೂರ್ಣಿಮಾ ಶುಕ್ರವಾರದ ದಿನ, ವಿಶಾಖಾ ನಕ್ಷತ್ರದಲ್ಲಿ ನಮ್ಮಾಳ್ವಾರರು ಪುತ್ರರಾಗಿ ಹುಟ್ಟಿದರು ಹುಟ್ಟಿದ ಶಿಶುವು ಹಾಲನ್ನು ಕುಡಿಯದಿರಲು ತಾಯಿತಂದೆಗಳು ಅದನ್ನು ದೇವರಿಗೆ ಸಮರ್ಪಿಸುವುದಾಗಿ ಹರಕೆಗೊಂಡು, ಹನ್ನೊಂದನೆಯ ದಿವಸ ಸ್ನಾನವನ್ನು ಮಾಡಿಸಿ, ಮಾರನೆಂದು ಹೆಸರಿಟ್ಟು ಗುಡಿಯ ಬಳಿಯಲ್ಲಿದ್ದ ಹುಣಸೇಮರಕ್ಕೆ ತೊಟ್ಟಿಲನ್ನು ಕಟ್ಟಿ, ಅದರಲ್ಲ ಮಲಗಿಸಿದರು. ಆ ಶಿಶುವು ದೇವರ ಕೃಪೆಯಿಂದ ಅಲ್ಲಿಯೇ ಬೆಳದು ಹದಿನಾರು ವರ್ಷದವರೆಗೂ ಮೌನದಿಂದಿರುತ್ತಿದ್ದುದರಿಂದ ಅದರ ಮಹಿಮೆಯು ಯಾರಿಗೂ ತಿಳಿಯಲಿಲ್ಲ ಅನಂತರ ಬಾಲಕನು ಭಗವತ್ಕಟಾಕ್ಷಕ್ಕೆ ಪಾತ್ರನಾದುದರಿಂದ ಮಹಾಜ್ಞಾನಿಯಾದನು. ಜನರದನ್ನು ಕಂಡು, ಆ ಬಾಲಕನ ಪೂರ್ವವೃತ್ತಾಂತವನ್ನೂ ಪರಿಗಣಿಸಿ, ಹುಟ್ಟಿದಂದಿಂದಲೂ ಜ್ಞಾನಿಯಾಗಿಯೇ ಇರಬೇಕೆಂದೆಣಿಸಿ, ಶಠವಾಯುವನ್ನು ನಿರಾಕರಿಸಿದುದರಿಂದ ಶಠಕೋಪ (ಶಠಾರಿ) ವೆಂದು ಹೆಸರಿತ್ತು ಕರೆದರು. ಅದು ಮೊದಲು ಅವರು ಅದೇ ಹೆಸರಿನಿಂದಲೇ ಭಗವತ್ಸಾನಿಧ್ಯದಲ್ಲಿ ಪ್ರಕಾಶಿಸುತ್ತಿರುವವರಾದರು

॥ ಶ್ರೀ ॥

# ಸ್ತ್ರೀಯರ ನೈಸರ್ಗಿಕ ಸೇವೆ.

## ಪೀಠಿಕಾ ಪ್ರಕರಣ

[ಸಮಾಜರಕ್ಷಣೆಯಲ್ಲಿ ಸ್ತ್ರೀಯರ ಅಧಿಕಾರ]

೧ ಒಂದು ದೇಶವು ಅಥವಾ ಒಂದು ಸಮಾಜವು ಒಂದು ಸ್ಥಿತಿಯಿಂದ ಅದಕ್ಕೆ ಮೇಲಿನ ಸ್ಥಿತಿಗೆ ಹತ್ತಬೇಕಾದರೆ ಅದಕ್ಕೋಸ್ಕರ ಆ ದೇಶಕ್ಕೆ ಅಥವಾ ಆ ಸಮಾಜಕ್ಕೆ ಸೇರಿದ ಪ್ರತಿಯೊಬ್ಬರೂ— ಗಂಡಸರೂ, ಹೆಂಗಸರೂ—ಪ್ರಯತ್ನ ಮಾಡತಕ್ಕದ್ದು ಅವಶ್ಯವಷ್ಟೆ? ಹೀಗೆ ಮಾಡುವುದರಲ್ಲಿ ಸ್ತ್ರೀಯರು ತಾವೂ ಇತರರಂತೆ ಒಬ್ಬರಾಗಿ ಕೆಲಸ ಮಾಡುವದಿಷ್ಟು ಮಾತ್ರವೇ ಸಾಲದೆ ಎಲ್ಲೆಲ್ಲಿಯೂ ಸಮಾಜದಲ್ಲಿ ಅವರಿಗೆ ಕೊಟ್ಟಿರುವ ಅನನ್ಯವಾದ ಸ್ಥಾನವಿಶೇಷದಿಂದ ಹೆಚ್ಚಿನ ಪ್ರಯತ್ನಗಳನ್ನು ಮಾಡಿ ಕೃತಾರ್ಥರಾಗುವುದು ಅವರ ಪಾಲಿಗೆ ಬಂದಿರುತ್ತದೆ.

೨ ಸಾಮಾನ್ಯವಾಗಿ ಯಾವದೇಶದವರ ವಿಷಯಕ್ಕೇ ಆಗಲಿ, 'ನಮ್ಮ ದೇಶದ ಗತಿಯು ಮುಂದೆ ಏನಾಗುವುದು ?' ಎಂದು ಯಾರಾದರೂ ಕೇಳಿದರೆ, ಅದಕ್ಕೆ ಈಗಿನ ಹುಡುಗರು ಮುಂದೆ ದೊಡ್ಡವರಾದಾಗ ಹೇಗಾಗುವರೋ (ಹಾಗೆಯೇ) ಒಟ್ಟಿನಲ್ಲಿ ದೇಶದ ಅಥವಾ ಜನಾಂಗದ ಸ್ಥಿತಿಯೂ ಅದನ್ನು ಅನುಸರಿಸುವುದು 'ನೀವು ನಿಮ್ಮನ್ನು ಹೇಗೆ ಮಾಡಿಕೊಂಡರೆ ಹಾಗೆ ಆಗುವಿರಿ' ಎಂಬ ಉತ್ತರವು ವಾಡಿಕೆಯಾಗಿ ಬರುತ್ತದೆ ಇದೇ "ಯದ್ಭಾವ್ಯಂ ತದ ಭವತಿ" ಎಂಬ ತತ್ವದ ರೂಪಾಂತ

* ಸ್ತ್ರೀ ಸಮುದಾಯಕ್ಕೆ ನ್ಯಾಯವಾಗಿ ಸಲ್ಲಬೇಕಾಗಿರುವ ಹಕ್ಕು ಎಷ್ಟರಮಟ್ಟಿನದೆಂಬುದನ್ನು, ಸ್ತ್ರೀವರ್ಗವನ್ನು ವಿಶೇಷವಾಗಿ ಅವಹೇಳನ ಮಾಡುತ್ತಿರುವ ನಮ್ಮ ಭ್ರಾತೃವರ್ಗೀಯರು ಚನ್ನಾಗಿ ತಿಳಿದುಕೊಳ್ಳಬೇಕೆಂದು ಈ ಲೇಖನವನ್ನು ಸನ್ಮಾನಿಸಿ, ಪ್ರಕಟಿಸಿರುತ್ತೇವೆ.

ರವಾಗಿದೆ ಈ ಉತ್ತರವನ್ನು ಎಷ್ಟು ಒತ್ತಿ ಹೇಳಿದರೂ ಸಾಲದು. ಏಕೆಂದರೆ, ಮಕ್ಕಳ ಶಿಕ್ಷಣೆಯ ವಿಧಾನದಲ್ಲಿ ಅಷ್ಟು ಗುಣವೂ ಮಹತ್ವವೂ ಇರುತ್ತದೆ. ಮಕ್ಕಳ ಪುರೋವೃದ್ಧಿಗಾಗಿ ಪ್ರತಿಯೊಬ್ಬರೂ ನಡಿಸತಕ್ಕ ಪ್ರಯತ್ನಗಳೇ ಜನಾಂಗದ ಭವಿತವ್ಯಕ್ಕೆ ಮುಖ್ಯವಾದ ತಳಹದಿಯಾಗಿರುತ್ತದೆಂಬುದರಲ್ಲಿ ಏನೂ ಸಂದೇಹವಿಲ್ಲ

೩. ಮಕ್ಕಳನ್ನು ಮುಂದಕ್ಕೆ ತರುವ ಕೆಲಸವೇದರೆ ಗಂಡಸರ ಮೇಲೆ ಇರುವ ಭಾರಕ್ಕಿಂತಲೂ ಹೆಂಗಸರ ಮೇಲೆ ಬಿದ್ದಿರುವ ಭಾರವು ಗುರುತರವಾದುದೆಂದು ಸ್ವಭಾವಸಿದ್ಧವಾಗಿಯೇ ನಿರ್ಣಯವಾಗುವದು. ಹೀಗೆ ಹೆಚ್ಚು ಭಾರವನ್ನು ಹಾಕುವುದಾದರೂ ತಮ್ಮ ಮೇಲಿನ ಭಾರವನ್ನು ಮೆಲ್ಲಗೆ ಇತರರ ಮೇಲೆ ಒಲಿಸಿ, ತಾವು ಓರೆಯಾಗಬೇಕೆಂಬ ಪುರುಷರ ಚತುರೋಕ್ತಿಯೆಂದೆಣಿಸಕೂಡದು ಮಕ್ಕಳಿಗೆ ಸಾಮಾನ್ಯವಾಗಿ ತಂದೆಗಿಂತಲೂ ತಾಯಿಯಲ್ಲಿಯೇ ಬಳಕೆ ಹೆಚ್ಚೆಂಬ ಕಾರಣವೂ ಅಷ್ಟು ಮುಖ್ಯವಾದುದಲ್ಲ ಭಾರವನ್ನು ಹೆಚ್ಚುಕಡಮೆಯಾಗಿ (ಪ್ರಕೃತಿಮಾನಕ್ಕೆ ತಕ್ಕಂತೆ) ಹಂಚಿರುವುದು ದೇವರ ಕಟ್ಟಳೆಯೇ ಆಗಿರುತ್ತದೆ. ಎಂದರೆ—ಸೃಷ್ಟಿಯ ನಿಯಮವೇ ಹೀಗೆಂದೆನ್ನಬೇಕಾಗಿರುತ್ತದೆ ಯಾರು ಯಾರಿಗೆ ಎಷ್ಟೆಷ್ಟು ಮಟ್ಟಿನ ಹೊರೆಯನ್ನು ಹೊರಲು ಸಹಜವಾದ ಸಾಮರ್ಥ್ಯವಿರುತ್ತದಯೋ, ಅದಕ್ಕನುಗುಣವಾಗಿಯೇ ಅವರ ಉತ್ತರವಾದಿತ್ವದ ಪರಿಮಿತಿಯನ್ನು ನಿರ್ಣಯಿಸಬೇಕೆಂಬುದೇ ದೇವರ ಕಟ್ಟಳೆ ಅಥವಾ ಸೃಷ್ಟಿನಿಯಮಕ್ಕೆ ಮೂಲಾಧಾರವೆಂಬುದು ನಿಜವಾಗಿರುವ ಪಕ್ಷಕ್ಕೆ ಮಕ್ಕಳ ಶಿಕ್ಷಣೆಯ ಭಾರದ ಹಂಚಿಕೆಯು ನ್ಯಾಯವಾಗಿಯೇ ಆಗಿರುತ್ತದೆಂದು ಎಲ್ಲರೂ ಒಪ್ಪಬೇಕಾಗಿರುವದು

ಚಿಕ್ಕಮಕ್ಕಳ ಶಿಕ್ಷಣೆಯ ಕೆಲಸ ಮಾತ್ರವೇ ಅಲ್ಲ, ದೊಡ್ಡವರನ್ನು ದಾರಿಗೆ ತರುವುದರಲ್ಲಿಯೂ, ಏಕೆ? ಒಟ್ಟಿನಲ್ಲಿ ಆಲೋಚನೆ ಮಾಡಿದರೆ, ಎಲ್ಲಾ ಸಂಘಸಂಸ್ಕರಣ ಕಾರ್ಯಗಳಲ್ಲಿಯೂ, ಸ್ತ್ರೀಯರ ಹಸ್ತಗುಣವು ವಿಶೇಷವಾಗಿ ಕಂಡುಬರುವುದು ಯಾವ ಸಮಾಜದಲ್ಲಿಯೇ ಆಗಲಿ, ಅದರಲ್ಲಿಯೂ ಮುಖ್ಯವಾಗಿ ಹಿಂದೂ ಸಮಾಜದಲ್ಲಿ, ಅದರ ಧರ್ಮವನ್ನು ಸಂರಕ್ಷಣೆ ಮಾಡುವ ಕೆಲಸವು ಹೇಗೆ ನಡೆಯು

ತ್ತಿದೆ ಎಂಬುದನ್ನು ಕುರಿತು ಸ್ವಲ್ಪ ಯೋಚನೆ ಮಾಡಿ ನೋಡಿದರೆ, ಆಗ ಸಮಾಜಸಂರಕ್ಷಣೆಗೆ ಹೆಂಗಸರು ಕೈಹಾಕಿರುವುದರಿಂದಾಗಿರುವ ಮತ್ತು ಆಗುತ್ತಿರುವ ಮಹದುಪಕಾರವು— ಸ್ತ್ರೀಯರ ಆ ನೈಸರ್ಗಿಕ ಸೇವಾ ಮಹಿಮೆಯು— ಪ್ರಕಾಶಕ್ಕೆ ಬರುವುದು ಈಗ ನಮ್ಮಲ್ಲಿ ಯಾವ ಹಳೆಯ ಸಂಪ್ರದಾಯಗಳೂ, ಪೂರ್ವಪದ್ಧತಿಗಳೂ, ಉಳಿದಿವೆಯೋ ಅವೆಲ್ಲವೂ ಮನೆಯಲ್ಲಿರುವ ಹೆಂಗಸರ ದೆಸೆಯಿಂದಲೇ ಉಳಿದಿರುವ ವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು ನಾವು ಗಂಡಸರು, ಅನಾಚಾರ, ದುರಾಚಾರಗಳಿಗೆ ಮನಸೋಲದೆ ಅತ್ತಕಡೆಯ ಚಾಪಲ್ಯ ವನ್ನು ಕೊಂಚಮಟ್ಟಿಗಾದರೂ ನಿಗ್ರಹಿಸಿದ್ದರೆ, ಅದೆಲ್ಲವೂ ನಮ್ಮ ಸ್ತ್ರೀ ಯರ ಮಹಿಮೆಯಿಂದೇ ಹೇಳಬೇಕು ಮನೆಯಲ್ಲಿ ಹೆಂಗಸರ ಆಡಳಿತ ಆತಂಕಗಳು ಮಾತ್ರ ಇಲ್ಲದೆ ಹೋಗಿದ್ದರೆ, ಅನವರತವೂ ಆರ್ಯಧರ್ಮ ಗಳ ತಂತ್ರಜಾಲಕ್ಕೂ, ಪ್ರಬಲವಾದ ಸೆಳೆತಕ್ಕೂ ಸಿಕ್ಕಿಕೊಂಡಿರುವ ನಾವು, ಎಂದೋ ನಮ್ಮ ಧರ್ಮದಿಂದ ಹೊರಗಾಗಿ ಹೋಗಿ ಬಿಡುತ್ತಿ ದ್ದೆವು! ದೂರಾಲೋಚನೆಯಿಲ್ಲದೆ ಮೇಲು-ಮೇಲಿನ ನುಣ್ಪನ್ನು ನೋಡಿ ಕೊಂಡು, ಭ್ರಾಂತಿಯಿಂದ ಮರುಳಾಗಿ ನುಗ್ಗಿ, ಕಲ್ಲು ಮುಳ್ಳುಗಳಲ್ಲಿ ಉರುಳಿಹೋಗುತ್ತಿದ್ದ ನಮ್ಮನ್ನು ಬೀಳದಂತೆ ಎಳದು ಹಿಡಿದುಕೊಂಡು ಉಚ್ಚಸ್ಥಾನದಲ್ಲಿ ನಿಲ್ಲಿಸಿರುವವರಾರು? ಹೆಂಗಸರಷ್ಟೆ! ಹಿಡಿದು ನಿಲ್ಲಿ ಸುವುದೆಂದರೆ ಯಾವ ಭಾಗದಲ್ಲಿಯೂ ಮುಂದುವರಿಯುವುದಕ್ಕೆ ಅವ ಕಾಶ ಕೊಡದೆ, ಹೆಜ್ಜೆ ಹೆಜ್ಜೆಗೂ ವಿಘ್ನಕಾರಿಗಳಾಗಿರುವರೆಂದು ಅರ್ಥ ವಲ್ಲ ಮುಂದೆ ಹೆಜ್ಜೆಯಿಡಬೇಕಾದ ದಾರಿಯನ್ನು ನಿಧಾನವಾಗಿ ಪರೀ ಕ್ಷಿಸಿ, ಸ್ವಲ್ಪಸ್ವಲ್ಪವಾಗಿ ಆ ಕಡೆಗ ಬಗ್ಗುತ್ತ, ಮುಂದುವರಿದರೆ ಅಪಾಯ ವಿಲ್ಲವೆಂದು ಬಂದಹಾಗೆಲ್ಲ ಮೆಲ್ಲಮೆಲ್ಲಗೆ ಹಿಡಿತವನ್ನು ಸಡಿಲ ಬಿಡು ವರು.

೫ ಸ್ತ್ರೀಸಾಮಾನ್ಯದಲ್ಲಿ ನ್ಯೂನತೆಗಳು ಎಷ್ಟೋ ಇರುತ್ತವ ಅನೇಕ ಕುಟುಂಬಗಳಲ್ಲಿನ ದುಃಖ-ದಾರಿದ್ರ್ಯಗಳೆಲ್ಲವೂ ಆ ಕುಟುಂಬ ಗಳಿಗೆ ಸೇರಿದ ಹೆಂಗಸರಿಂದಲೇ ವಿಶೇಷವಾಗಿ ಸಂಭವಿಸಿರುತ್ತವೆಂದು ಧಾರಾಳವಾಗಿ ಹೇಳಬಹುದು ಆದರೂ ಆ ನ್ಯೂನತೆಗಳ ಹರಕನ್ನೆಲ್ಲ

ಮುಚ್ಚಿ, ಮೆರುಗು ಕೊಡುವಷ್ಟು ಶುಭಪ್ರದವಾದ ಗುಣಗಳೂ ಅವರಲ್ಲಿ ಕಂಗೊಳಿಸುತ್ತವೆ "ಒಲಿದರೆ ನಾರಿ ಮುನಿದರೆ ಮಾರಿ" ಎಂದು ಕೂಡ ಅವರ ವಿಷಯದಲ್ಲಿ ವಾಡಿಕೆಯಾಗಿ ಹೇಳುವರು. ಅದು ಹೇಗಾದರೂ ಇರಲಿ, ಯಾವ ವಿಷಯದಲ್ಲಿಯೇ ಆಗಲಿ, ಏರು-ಪೇರುಗಳನ್ನು ತಿದ್ದಿ ನೆಟ್ಟಗೆ ಮಾಡುವುದಕ್ಕೆ ಹೆಂಗಸರಲ್ಲಿ ಕೆಲವು ಅಮೌಲ್ಯವಾದ ಗುಣಗಳಿವೆ. ಆ ಗುಣಗಳು ಗಂಡಸರಲ್ಲಿ ಅಷ್ಟು ಹುಲುಸಾಗಿ ಬೆಳೆಯಲ್ಲವಾದುದರಿಂದಲೇ " ಸಂಘಸಂಸ್ಕರಣ " ಕಾರ್ಯಸಾಧನೆಗೆ ಗಂಡಸರಿಗಿಂತಲೂ ಹೆಂಗಸರು ಹೆಚ್ಚು ಸಮರ್ಥೆಯರಾಗಿರುವರು ಸಾಮರ್ಥ್ಯವೆಂದರೆ, ಅವರು ಯಾರ ಮೇಲೆಯೂ ಭುಜಬಲವನ್ನು ಪ್ರಕಾಶಪಡಿಸುವುದಿಲ್ಲ ಯಾರಾದರೂ ಅವರ ಮಾತನ್ನು ಗೌರವಿಸುವುದಿಲ್ಲವೆಂದರೆ, ಅವರನ್ನು ದಂಡಿಸುವದಿಲ್ಲ ಅವರ ಮೇಲೆ ಕೋಪಗೊಳ್ಳುವುದಿಲ್ಲ (ದ್ವೇಷವನ್ನು ಸಾಧಿಸಿ ಸೇಡು ತೀರಿಸಿಕೊಳ್ಳಬೇಕೆಂಬುವವರೂ, ಯಾವಾಗಲೂ ವಿಷವನ್ನು ಕಾರುತ್ತಿರುವವರೂ, ದಯೆ-ದಾಕ್ಷಿಣ್ಯಗಳಿಲ್ಲದ ಕಲ್ಲೆದೆಯುವರೂ ಅತಿ ವಿರಳ) ಅವರ ಮಾತನ್ನು ನಿಜವೆಂದು ಗೌರವಿಸುವವರಿಗ ಅವರಿಂದ ಯಾವ ಕನಕಾಭಿಷೇಕವೂ ಆಗುವುದಿಲ್ಲ ಹೆಚ್ಚೇಕೆ, ಸಂಘಸಂಸ್ಕರಣಕಾರರು ಉಪನ್ಯಾಸ ಮಂದಿರಗಳಲ್ಲಿಯೂ, ಸಾರ್ವಜನಿಕ ಸಂಸ್ಥೆಗಳಲ್ಲಿಯೂ, ವಿಶೇಷವಾಗಿ ತೋರಿಸುವ ಅಟಾಟೋಪವನ್ನು ಹೆಂಗಸರಲ್ಲಿ ಪಂಜುಹತ್ತಿಸಿಕೊಂಡು ಹುಡುಕಿದರೂ ಅದರ ಸುಳಿವು ಸಿಕ್ಕುವುದಿಲ್ಲ ಆದರೂ, ಜಗತ್ಪ್ರಸಿದ್ಧರೆಂದು ಬಿರುದಾಂಕಿತರಾಗಿರುವ ಮಹಾ ಮಹಾ ಸಂಸ್ಕರಣಕಾರರಿಂದಲೇ ಆಗದಿರುವ ಕಾರ್ಯಗಳು, ಸಾಮಾನ್ಯ ಸ್ತ್ರೀಯರಿಂದ ಸಾಮಾನ್ಯ ರೀತಿಯಲ್ಲಿಯೇ ನಡೆದು ಹೋಗಿರುತ್ತವೆ ಅವರು ನಮ್ಮನ್ನು ತಿದ್ದುತ್ತಿದ್ದಾರೆಂಬುದು ನಮಗೆ ತಿಳಿಯದಂತೆಯೇ ಅಥವಾ ನಾವು ಅದನ್ನು ಗ್ರಹಿಸುವದಕ್ಕೆ ಅಗದಂತೆ ಕೆಲಸವಾಗಿರುತ್ತದೆ ಇದರಲ್ಲಿ ಇನ್ನೂ ಒಂದಾಗಿರುವ ವಿಶೇಷವೆಂದರೆ — ಇಂಥ ಕೆಲಸವನ್ನು ಮಾಡುತ್ತಿದ್ದೇವೆಂದು ಆ ಸ್ತ್ರೀಯರಿಗೂ ಗೊತ್ತಿರುವುದಿಲ್ಲ ಹೀಗೆ ಯಾವಬಗೆಯ ತೋರಗಾಣಿಕೆಯೂ ಇಲ್ಲದೆ, ಏರು-ಪೇರುಗಳು ತಮ್ಮಷ್ಟಕ್ಕೆ ತಾವೇ ನೆಟ್ಟಗಾಗು

ವಂತೆ ಮಾಡುವುದು ಸ್ತ್ರೀಯರ ಕಾರ್ಯಸಾಧನೆಯ ರಹಸ್ಯ ತತ್ವವಾಗಿದೆ.

೬ ಸ್ತ್ರೀಯರಲ್ಲಿ ಸಹಜ ಧರ್ಮವಾಗಿರತಕ್ಕ ಕೋಮಲತೆಯಿಂದ ಕ್ಷಮಾ, ನಿಧಾನ, ಸತ್ಕಾರ, ಉಪಚಾರ-ವಿಚಕ್ಷಣೆ, ಅನುಕಂಪ ಇವೇ ಮೊದಲಾದ ತಾರಕ-ಬೀಜಮಂತ್ರಗಳು, ಯಾರಿಂದಲೂ ಕಲಿಸಲ್ಪಡದೆ ತಾವಾಗಿಯೇ ಬೆಳೆದುಕೊಂಡು, ಫಲಕ್ಕೆ ಬಂದಿರುವವು ಆದಿರಲಿ, ಈವರೆಗೆ ಪ್ರಯತ್ನಪಟ್ಟು ಸಾಗದೆ ಹೋಗಿರುವ ಸಂಘಸಂಸ್ಕರಣೋದ್ದೇಶಗಳು ಹೀಗೆ ನಿಷ್ಫಲವಾದುದಕ್ಕೆ ಕಾರಣವೇನಾಗಿರಬಹುದು? ಪ್ರೇಮ, ವಿಶ್ವಾಸ, ಉತ್ಸಾಹಶಕ್ತಿ ಇವುಗಳನ್ನು ಮೂಲೆಗೊತ್ತರಿಸಿ, ನಡೆವಳಿಯಲ್ಲಿ ಹುಳುಕು ಹುಡುಕುತ್ತ ಹೀಯಾಳಿಸುವುದರಲ್ಲಿಯೇ ನಿರತರಾಗಿದ್ದುದರಿಂದ ಉದ್ದೇಶವು ಎಷ್ಟೇ ಒಳ್ಳೆಯದಾಗಿದ್ದರೂ ಕಾರ್ಯಕಾರಿಯಾಗುವುದಕ್ಕೆ ಬದಲಾಗಿ, ಅನರ್ಥಕಾರಿಗಳಾದವೆಂದು ನಿರ್ಧರಿಸಲಾಗುವುದು ಏಕೆಂದರೆ, ಕೆಳಗೆ ಬಿದ್ದವರನ್ನು ಮೇಲಕ್ಕೆತ್ತಬೇಕಾದರೆ, ಮುಟ್ಟುವುದಲು ಅವರ ಸಂತಾಪದಿಂದ ನಾವು ಕರಗಿ ಹೋಗಬೇಕು, ಅನಂತರ ಆ ಸಂತಾಪವನ್ನು ನಿಶ್ಶೇಷವಾಗಿ ಪರಿಹರಿಸುವಷ್ಟರ ಕರುಣಾತೆಯೂ, ಮನೋಪಾರ್ಥ್ಯವೂ [ನ್ಯಾಯಸ್ಥಾಪನೆಯಲ್ಲಿ ನಿಷ್ಫಲವಾದ ಮನಸ್ಸು] ಇರಬೇಕು. ಅಪೇಕ್ಷ್ಯವಾಗಿರುವ ಈ ಎರಡು ಗುಣಗಳಿಂದಲೇ ಮುಂದೆ ಹೇಳಿರುವ ಸಂಸ್ಕರಣ ಕಾರ್ಯಗಳು ನಡೆಸಲ್ಪಡಬೇಕಾಗಿವೆ

೭ ಯಾರಿಗಾದರೂ ಪೆಟ್ಟುಬಿದ್ದು, ನೋಡುವುದಕ್ಕೆ ಅಸಹ್ಯವಾಗುವಷ್ಟು ಗಾಯದಿಂದ ಕೀವು-ರಕ್ತಗಳು ಸುರಿಯುತ್ತಿದ್ದರೆ, ಆ ದುಃಖಿ ಯಾತನೆಗಳನ್ನು ನೋಡಿ ಮರಗುವವರೆಷ್ಟೋ ಜನರಿರಬಹುದು ಆದರೆ, ಅದನ್ನು ನೋಡುವುದು ಕಷ್ಟವೆಂದು ಓರೆಯಾಗುವುದಾಗಲಿ, ಹೇಸಿಗೆಯನ್ನು ಮುಟ್ಟುವುದು ಕೇವಲ ದೂಷ್ಯವೃತ್ತಿಯೆಂದು ಘನತೆಯನ್ನು ತಾಳಿ ದೂರದಲ್ಲಿ ನಿಲ್ಲುವದಾಗಲಿ, ಅಥವಾ ಗಾಯವನ್ನು ತೊಳೆಯುವುದಕ್ಕೆಂದು ಅದನ್ನು ಮುಟ್ಟಿ ಕೆದರೆದರೆ, ಉರಿಯೂ, ನೋವೂ ಹೆಚ್ಚಾಗಿ ಯಾತನೆಯನ್ನು ಬಲಪಡಿಸಿದಂತಾಗುವುದೆಂಬ ಸಮಾಧಾನ ಹೇಳುವ ಬರಿಯ ಬಾಯಿಮಾತಿನ ಶುಷ್ಕೋಪಚಾರದಲ್ಲಾಗಲಿ, ಇಷ್ಟರಲ್ಲಿಯೇ ನಮ್ಮ ಅನುತಾಪವು ಕಡೆಗಾಣುವುದಾದರೆ,

ಏನು ಪ್ರಯೋಜನ ? ಯಾವ ಕೆಲಸಕ್ಕೆಂದರೆ ಆ ಕೆಲಸಕ್ಕೆ ಹಿಂದೆಸೆಯುದಂತೆ [ ಧರ್ಮಹಾನಿಯುಲ್ಲದುದಕ್ಕೆ ಮಾತ್ರ ] ನಿಂತು ಸಾಧಿಸುವ ಗಟ್ಟಿಗತನವೂ ಜತೆಯಾಗದಿದ್ದರೆ ಬರಿಯ ಮರುಕದಿಂದ ಅಷ್ಟಾಗಿ ಪ್ರಯೋಜನವಾಗಲಾರದು. ಹೀಗಿರುವದರಿಂದ ದೀನೋದ್ಧರಣ ಕಾರ್ಯವು ಸಫಲವಾಗಬೇಕಾದರೆ, ಕೋಮಲತೆಯೂ ಬೇಕು, ಕಾಠಿಣ್ಯವೂ ಇರಬೇಕು ಇವೆರಡೂ ಮಹಿಳೆಯರಲ್ಲಿ ಸ್ವಾಭಾವಿಕ ಧರ್ಮವಾಗಿರುವದೆಂಬುದನ್ನು ತಿಳಿಯಬೇಕಾದರೆ, ವೈದ್ಯಶಾಲೆಗಳಲ್ಲಿ ರೋಗಿಗಳ ಆರೈಕೆಯ ಸಲುವಾಗಿಯೇ ನಿಂತಿರುವ ದಾದಿಯರ ಉದಾಹರಣೆಯೇ ಸಾಕಾಗಿರುವುದು

೮ ಯಾವ ಕಾರಣದಿಂದ ಅಬಲೆಯರೆಂದು ನಾವು ಸ್ತ್ರೀಯರ ದಿಟ್ಟತನವನ್ನು ಅಲ್ಲಗಳೆಯುವೆವೋ, ಅದೇ ಕಾರಣದಿಂದಲೇ ಅವರು ನಮ್ಮನ್ನು ಸಂಪೂರ್ಣವಾಗಿ ಜಯಿಸಲು ಸಮರ್ಥೆಯರಾಗಿರುವರು ಯಾವ ಕಾರಣದಿಂದ ಅವರನ್ನು ಕೋಮಲೆಯರೆಂದೆನ್ನುತ್ತ ಕಷ್ಟ-ಕಡ್ಡಾಯಗಳಿಗೆ ತಡೆಯುವರಲ್ಲವೆಂದು ಹಿಂದಕ್ಕೆ ದೂರುತ್ತೇವೆಯೋ ಅದೇ ಕಾರಣದಿಂದಲೇ ಅವರು, ಎಷ್ಟು ದುಸ್ತರವಾದ ಕಾರ್ಯವನ್ನಾದರೂ ಹೆಚ್ಚು ಸೌಕರ್ಯದಿಂದ ಸಾಧಿಸಬಲ್ಲವರಾಗಿರುವರು. ಹೆಚ್ಚೇಕೆ, ಯಾವದನ್ನು ಕೆಲಸಕ್ಕೆ ಬಾರದುದೆಂದು ನಾವು ನಿರಾಕರಿಸುವೆವೋ ಅದೇ ಅವರಲ್ಲಿ ಕಾರ್ಯಸಾಧನೆಗೆ ಒಂದು ದೊಡ್ಡ ಸಾಧನವಾಗಿ ಪರಿಣಮಿಸುವುದೆಂದರೆ ಸಾಕು

೯ ಹೀಗೆ ಸೇವಾಕಾರ್ಯದಲ್ಲಿ ಸ್ತ್ರೀಯರಿಂದಾಗಬೇಕಾಗಿರುವ ಕಾರ್ಯಗೌರವವನ್ನೂ, ಅವರಿಗೆ ಇರುವ ಅನನ್ಯವಾದ ಅರ್ಹತೆಯನ್ನೂ ತಕ್ಕಮಟ್ಟಿಗೆ ಬಿಡಿಸಿ ಬಿಡಿಸಿ ತಿಳಿಯಿಸಬೇಕಾದುದು ಅವಶ್ಯಕವಾದುದರಿಂದ ಇಲ್ಲಿ ಇಷ್ಟು ವಿವರಿಸಬೇಕಾಯಿತು ಈ ತತ್ವಗಳನ್ನು ಅವರಿಗೆ ತಿಳಿಯಿಸಲಿ, ತಿಳಿಯಿಸದಿರಲಿ, ಅವರಂತು ತಮ್ಮ ಕೆಲಸವನ್ನು ಮಾಡಿಯೇ ಮಾಡುವರು ಎಂದರೆ, ಯಾವ ಆಡಂಬರವೂ ಇಲ್ಲದ, ತಮ್ಮ ನಡೆವಳಿಕೆಯ ಪರಿಣಾಮವು ಹೀಗಾಗುವದೆಂಬ ಅರಿವೇ ತಮಗೆ ಇಲ್ಲದಂತೆ, ಕೀಲುಕೊಟ್ಟ ಗಡಿಯಾರದ ಮುಳ್ಳು ಸುಮ್ಮನೆ ಸುತ್ತುತ್ತಿರುವಂತೆ ತಮ್ಮ ಕೆಲಸಗಳಲ್ಲಿ ತಾವು ನಿರತರಾಗಿರುವರು. ಯಾವ ತತ್ವ

ಬೋಧೆಯನ್ನೂ ನಿರೀಕ್ಷಿಸದೆ ತಾವಾಗಿ ತಮ್ಮ ಕೆಲಸವನ್ನು ಗದ್ದಲವಿಲ್ಲದೆ ಮಾಡುತ್ತಿರುವ ಅವರಿಗೆ ನಾವು ಹೆಚ್ಚಾಗಿ ಎಚ್ಚರಿಸಬೇಕಾದುದಿಲ್ಲವಾದರೂ ಸ್ವಲ್ಪಮಟ್ಟಿಗೆ ತಿಳಿಯಪಡಿಸುವುದರಲ್ಲಿ ಎಷ್ಟೋ ಗುಣವಿರುವದು ಏಕೆಂದರೆ, ಕರ್ತವ್ಯದಲ್ಲಿ ಹೆಚ್ಚು ಜಾಗರೂಕತೆಯುಂಟಾಗಬೇಕಾದರೆ ನಮ್ಮ ಸ್ಥಿತಿಗತಿಗಳನ್ನೂ, ನಮ್ಮ ನೆರೆಹೊರೆಯ— ಅದರಲ್ಲಿಯೂ ಜೂಜಿನಲ್ಲಿ ದೊಡ್ಡ ಹೆಜ್ಜೆಯನ್ನು ಹಾಕಿಕೊಂಡು ಮುಂದು ಮುಂದಾಗಿ ಓಡಿ ಹೋಗುತ್ತಿರುವ ಜನಾಂಗಗಳ ಸ್ಥಿತಿಗತಿಗಳನ್ನೂ, ಈಗ ನಡೆಯುತ್ತಿರುವ ವಿದ್ಯಮಾನಗಳನ್ನೂ ಕುರಿತು ಸ್ವಲ್ಪವಾದರೂ ಮನನ ಮಾಡಿರಬೇಕೆಂದೂ, ಆ ನೆನವು ಪದೇಪದೇ ಬರುತ್ತಿದ್ದರೆ, ಯಾವ ಆಲಸಿಕೆಯಿಂದಲೂ ಕೈಕೊಂಡ ಕೆಲಸವನ್ನು ಬಿಡದೆ, ಒಂದು ಪಟ್ಟಿನಲ್ಲಿ ಹಿಡಿದು ಸಾಧಿಸಲಾಗುವುದೆಂದೂ ಬಹುಜನರ ಅಭಿಪ್ರಾಯವು ಇದರ ಮೇಲೆ ಯಾವ ಕೆಲಸವನ್ನಾದರೂ ತಿಳಿಯದೆ ಮಾಡುವದಕ್ಕೂ ತಿಳಿದು ಮಾಡುವದಕ್ಕೂ ವ್ಯತ್ಯಾಸವಿಲ್ಲವೆ? ತಿಳಿಯದ ಮಾಡುವ ಕೆಲಸವು ಯಾವದೋ ಒಂದು ನಮ್ಮನ್ನು ಮೀರಿದ ಶಕ್ತಿಯು ನಮ್ಮ ಯತ್ನವನ್ನು ಅಪೇಕ್ಷಿಸದೆ, ಮತ್ತು ನಾಗಗೊಡದೆ ನಮ್ಮಿಂದ ಕೆಲಸವನ್ನು ಮಾಡಿಸಿಬಿಟ್ಟಂತೆ, ಅದೇ ಕೆಲಸವನ್ನು ತಿಳಿದು ಮಾಡುವದೆಂದರೆ, ಯಾವ ಕಾಲದಲ್ಲಿ ಹೇಗೆ ಮಾಡಿದರೆ ಉತ್ತಮ ಫಲವು ಕೈಸೇರಬಹುದೆಂಬ ಮುಂದಾಲೋಚನೆಯನ್ನು ಮಾಡಿ, ಸಂದರ್ಭಾನುಸಾರವಾಗಿ, ಸಮಯವರಿತು ಕೆಲಸ ಮಾಡಿದಂತೆ ಹೀಗೆ ತಿಳಿದು ಮಾಡುವುದರಲ್ಲಿ ಹೆಚ್ಚಿನ ಗುಣವಿರುವುದರಿಂದ ಮುಂದಾಗಿ ಎಚ್ಚರಿಸುತ್ತಿರುವುದು ಕೊಂಚಮಟ್ಟಿಗೆ ಅವಶ್ಯಕವೇ ಸರಿ,

೧೦. ಇದಕ್ಕೊಂದು ಸಣ್ಣ ಐತಿಹ್ಯವುಂಟು — ಸುಗ್ರೀವನ ಅಪ್ಪಣೆಯ ಪ್ರಕಾರ ಸೀತಾದೇವಿಯನ್ನು ಹುಡುಕಲು ಹೊರಟ ಕಪಿಸೇನೆಯು ಸಮುದ್ರದ ದಡದವರೆಗೆ ಬಂದು ಸೇರಲು, ಆಗ ಅಲ್ಲಿಂದಾಚೆಗೆ ಯಾರು ಸಮುದ್ರವನ್ನು ದಾಟಿ ಹೋಗಿ, ಕಾರ್ಯಸಾಧನೆಯನ್ನು ಮಾಡಿಕೊಂಡು ಬರಬೇಕೆಂಬ ಪ್ರಶ್ನೆಯು ಚರ್ಚೆಗೆ ಬಂತಷ್ಟೆ? ಕಟ್ಟಕಡೆಗೆ ಆಂಜನೇಯನು ಈ ಕೆಲಸವನ್ನು ಮಾಡಿಕೊಂಡು ಬರಲು ಒಪ್ಪಿ

ಕೊಳ್ಳುವದಕ್ಕೆ ಮುಂಚಿತವಾಗಿ, ಜಾಂಬವಂತನೇ ಮೊದಲಾದ ಪ್ರಮುಖರಾದ ವಾನರ ವೀರರು, ಆಂಜನೇಯನ ಶಕ್ತಿ, ಸಾಹಸ, ಕಾರ್ಯತತ್ಪರತೆಗಳನ್ನು ವಿಶೇಷವಾಗಿ ಕೊಂಡಾಡಿ, ಅವನ ಅಪಾರವಾದ ಸಾಮರ್ಥ್ಯವನ್ನು ಅವನು ತಿಳಿದುಕೊಳ್ಳುವಂತೆ ಮಾಡಿದರೆಂದು ಪುರಾಣವು ಸಾರುತ್ತಿದೆ ಇದರಲ್ಲಿ ಹೀನಯವಾದುದಾಗಲೀ, ಸಲ್ಲದುದಾಗಲೀ ಏನೂ ಇಲ್ಲ. ಮನುಷ್ಯಸ್ವಭಾವವೇ ಹೀಗಿರುತ್ತದೆ " ಉಬ್ಬಿಸಿ ಭುಜವನ್ನು ಚಪ್ಪರಿಸಿದಲ್ಲದೆ ಹುರಿದುಂಬುವುದು ಕಷ್ಟ '

೧೧. ಯಾರೇ ಆಗಲಿ, ಒಂದು ಕೆಲಸವನ್ನು ಮಾಡುವುದಕ್ಕೆ ಮೊದಲು, ಆ ಕೆಲಸವನ್ನು ತಾವು ನಿರ್ವಹಿಸಬಹುದೆಂಬ ಭರವಸೆಯು ಅವರ ಮನಸ್ಸಿನಲ್ಲಿ ಚೆನ್ನಾಗಿ ನಾಟಿದ್ದರೆ, ಅವೇ ವಿಘ್ನ ಮತ್ತು ನಿರಾಶೆಗಳನ್ನು ಅತಿಕ್ರಮಿಸಿ ಕಾರ್ಯತತ್ಪರತೆಯನ್ನು ಬಲಪಡಿಸಿಕೊಳ್ಳುವದಕ್ಕೆ ಬೇಕಾದ ಉತ್ಸಾಹ-ಪ್ರೋತ್ಸಾಹಗಳನ್ನು ಕೊಟ್ಟು, ಅವರಿಂದ ಆ ಕೆಲಸವನ್ನು ಮಾಡಿಸಿಯೇ ಬಿಡುವುದು ಕೆಲಸಕ್ಕೆ ಕೈಹಾಕುವ ಮೊದಲೇ ಅದು ತಮ್ಮ ಯೋಗ್ಯತೆಗೆ ಮೀರಿದುದೆಂದುಕೊಳ್ಳುತ್ತ ಉದಾಸೀನರಾಗಿದ್ದರೆ, ಅದು ಎಷ್ಟೇ ಸುಲಭವಾಗಿದ್ದರೂ ಈಡೇರುವುದಿಲ್ಲ. ಸರಿಯಾಗಿ ವಿಚಾರಮಾಡಿ ಶ್ರದ್ಧೆಯಿಂದ ನಡಯಿಸಿದ ಪ್ರಯತ್ನಕ್ಕೆ ಸಿಲುಕದ ಇರುವುದೊಂದೂ ಈ ಪ್ರಪಂಚದಲ್ಲಿಲ್ಲ 'ಇಲ್ಲ ಇಲ್ಲ' ಎನ್ನುವವರಿಗ ಎಂದಿಗಾದರೂ ಇಲ್ಲವೇ ಇಲ್ಲ ಪುರುಷಪ್ರಯತ್ನದಿಂದ ಮುಂದೆ ಸಾಧ್ಯವಾಗಬಹುದಾದ ವಿಷಯಗಳೋ ಒಂದುಂಟು, ಒಂದಿಲ್ಲವೆಂದಲ್ಲ, ಅನಂತವಾಗಿವೆ ಆದುದರಿಂದ ಪ್ರತಿಯೊಬ್ಬರೂ ತಮಗೆ ಸಹಜವಾಗಿರುವ ಸಾಮರ್ಥ್ಯವನ್ನೂ, ಅದನ್ನು ಹೆಚ್ಚಿಸಿಕೊಳ್ಳುವ ಕ್ರಮವನ್ನೂ, ಆ ಸಾಮರ್ಥ್ಯಕ್ಕೆ ಸಾರ್ಥಕ್ಯವನ್ನು ಕೊಡುವ ಮಾರ್ಗವನ್ನೂ ಸ್ವಲ್ಪಕ್ಕೆ ಸ್ವಲ್ಪವಾದರೂ ತಿಳಿದುಕೊಂಡಿರಬೇಕು ಆಗಲೇ ಭರವಸೆಯು ಹುಟ್ಟುವುದು ಭರವಸೆಯಲ್ಲಿಯೇ ಆತ್ಮಾವಲಂಬನೆಯೂ ಮೊಳಕೆಯಾಗುವುದು ಇಂಥ ತಿಳಿವಳಿಕೆಗೆ ಆದಿಕಾರಣವಾದ ವಿಚಾರತತ್ಪರತೆಯನ್ನು ಹುಟ್ಟಿಸುವುದಕ್ಕೋಸ್ಕರವೆಂದೇ ಈ ವಿಷಯವನ್ನು ಇಲ್ಲಿ ಇಷ್ಟು ಸೂಕ್ಷ್ಮವಾಗಿ ತಿಳಿಸಲಾಯಿತು. (ಪೆಚ್ಚಿನ ವಿಚಾರವು ಮುಂದಿನ ಸಂಚಿಕೆಯಲ್ಲಿ)

॥ ಶ್ರೀಃ ॥

वन्देत्वां भूदेवि आर्यमातरम्.

ಕರ್ನಾಟಕ

# ನಂದಿನೀ

( ಮಾಸಪತ್ರಿಕೆ )

‘ ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂಚೈವ ಯಃ ಪ್ರಭುಃ ||
ದಾಸ್ಯನ್ತಿ ಮಮಯೋ ಬಾನ್ಯೈತ್ಯದೃಷ್ಟಾಃ ಪಥಿ ಗೋಚರಾಃ || ’’

ಸಂ ೧ | ನಲ ಸಂ|| ಕಾರ್ತೀಕಮಾಸ ೧೯೧೬ನೇ ನವಂಬರ್ { ಸಂ ೨

## ಪ್ರಾರ್ಥನೆ

ರಾಗ— (ನೋಡಿದ್ಯಾ ಶ್ರೀರಾಮನ)

ಪಾಲಿಸೆ ಪದ್ಮಾಲಯೆ ॥ ಪಾಲಿಸು ನಿನ್ನನೇ ಓತೈಸುತಿರುವೀ
ಬಾಲೆಯರಭಿಮತ ಪಾಲಿಸುತೊಲವಿಂ ॥ ಪಾಲಿಸೇ ॥ ಅಸು ॥
ಅಂಬುಜನಾಭನ ರಾಣಿ, ನಿನ್ನ—ನಂಬಿದೆ ಪಲ್ಲವಪಾಣಿ, ಚನ್ನೆ—
ಕಂಬುಕಂಧರೆ ಪನ್ನಗವೇಣಿ ॥ ಎನ್ನ—ಬೆಂಬಿಡದಿರೆ ಕಲ್ಯಾಣೀ ॥
ತಾಯೇ ॥ ಜಂಭಾರಿಸುರ ಮುಖ್ಯ ಶಂಭು ವಂದಿತೆ ಸೋಮ ಬಿಂಬ
ವದನೆ, ತಾಯೆ, ಅಂಬುಜೋದ್ಭವನ ಕಾಯು ॥ ಪಾಲಿಸೆ ॥ ೧ ॥

ತತ್ತ್ವವಿಚಾರವನರಿಯೆ— ವರ—ಸತ್ವಗುಣದಾ ನೆಲೆ ತಿಳಿಯೆ ।
ಘನ್ನ— ಸತ್ಯವ ಪೇಳಲಾನರಿಯೆ ॥ ತಾಯೆ— ಮತ್ತೇಭಗಾಮಿನಿ
ಮಜ್ಜನನೀ ॥ ಮತ್ತಾರ ಕಾಣೆನು ಮರೆಹೊಕ್ಕೆ ನಿನ್ನನೆ । ಭಕ್ತಮಂದಾ
ರಣಿ ಭರಿಸೆನ್ನ ಜನನೀ ॥ ಪಾಲಿಸೆ ॥ ೨ ॥

ಘೋರಋಣದಾ ಬಾಧೆ ಕಳೆದು— ಎನ್ನ— ಪಾರುಗಾಣಿಸು
ಪೋದವಸೆದು । ಮುನ್ನ— ದುರಿತವಿದೆನ್ನನು ಬಿಡದು— ನಿನ್ನ—
ಚರಣವ ಭಜಿಸುವದರಿದು ॥ ತಾಯೇ ॥ ವರಶೇಷಗಿರಿದೊರೆಯರಸಿ
ನಿನ್ನಡಿದಾ—ವರೆಗೆನ್ನನಾರಡಿಯೆನಿಸೆಂದು ಬೇಡುವೆ ॥ ಪಾಲಿಸೆ ॥೩॥

(ಶ್ರೀಪಾದರೇಣು)

# ನಂದಿನಿಯ

## ದೇಶಸೇವಾಯಾತ್ರಾ ಮಹೋತ್ಸವವು

ಭಗವತಿಯ ಆಶ್ವಾಸನದಂತೆ ಮೊದಲೇ ನಿಶ್ಚಿತವಾಗಿದ್ದ ಪ್ರಕಾರ ಇಂದಿನ ವಿಜಯ ದಶಮಿಯಲ್ಲಿ ನಂದಿನಿಯ ಯಾತ್ರಾಮಹೋತ್ಸವವು ಸಾಂಗವಾಗಿ ನೆರವೇರಿತು ಇಂದು ಹಿತೈಷಿಣೀ ಮಾತೃಮಂದಿರವು ದೇಶಸೇವಕರಾದ ವಿದ್ಯಾರ್ಥಿಗಳ ಆನಂದೋತ್ಸಾಹಕ್ಕೆ ಆಶ್ರಯವಾಗಿ ಹಿತಚಿಂತಕರೂ ಬೋಧಕರೂ ಆದ ಗುರುಜನರಿಂದಲೂ, ಆಪ್ತೇಷ್ಟ ರಾದ ಬಂಧು ಭಗಿನಿಯರಿಂದಲೂ ಪರಿಶೋಭಿಸುತ್ತಿದ್ದಿತು ಮಂದಿ ರದ ವಿದ್ಯಾರ್ಥಿಗಳು ಉತ್ಸವೋತ್ಸುಕರಾಗಿ ನೆರೆದಿದ್ದ ಗುರುಜನರನ್ನು ವಂದಿಸಿ, "ರಮಾನಂದ"ವೆಂಬ ನಾಟಕವನ್ನು ಅಭಿನಯಿಸಿ ಸಂತೋಷ ವನ್ನು ಹೆಚ್ಚಿಸಿದರು ನಾಟಕಾರಂಭಕ್ಕೆ ಮೊದಲು, ಗುರುಜನರಿಗೆ ವಿದ್ಯಾರ್ಥಿಗಳ ಪರವಾಗಿ ಈ ಕೆಳಗೆ ವಿವರಿಸುವಂತೆ ಸ್ವಾಗತಪೂರ್ವಕ ಪ್ರಾರ್ಥನಾಪತ್ರವು ನಿವೇದಿಸಲ್ಪಟ್ಟಿತು ಹೇಗೆಂದರೆ---

## ಸು ಸ್ವಾ ಗ ತ ವು

ಆರ್ಯಮಹನೀಯರಾದ ಗುರುಜನರಲ್ಲಿ—

ಪರಮಪೂಜ್ಯರಾದ ಗುರುಜನರೇ!

ಪುತ್ರವಾತ್ಸಲ್ಯದಿಂದ ಇಲ್ಲಿಯ ವರೆಗೆ ಚಿತ್ತೈಸಿ ಅನುಗ್ರಹಿಸ ಲಿರುವ ತಮ್ಮೆಲ್ಲರಿಗೂ, ದೇಶಸೇವಕರೂ ವಿದ್ಯಾರ್ಥಿಗಳೂ ಆಗಿರುವ ಬಾಲಕರಾದ ನಾವು ಸ್ವಾಗತಾಭಿವಂದನ ಪೂರ್ವಕವಾಗಿ ಧನ್ಯವಾದ ಗಳನ್ನೊಪ್ಪಿಸಿ ಪ್ರಾರ್ಥಿಸುವೆವೇನೆಂದರೆ,—

ಮಹನೀಯರೇ!

ನಮ್ಮ ಆರ್ಯರ ವಾರ್ಷಿಕೋತ್ಸವಗಳೆಲ್ಲೆಲ್ಲಾ ಈ-ಶರನ್ನವ ರಾತ್ರಿಯು ಅತ್ಯಂತ ಪ್ರಾಮುಖ್ಯವಾದುದಲ್ಲದೆ, ವಿಶಾಲವೂ ವೈಭವ

ಪ್ರದವೂ ಆದುದಾಗಿದೆ. ಅದರಲ್ಲಿಯೂ ಇಂದಿನ ವಿಜಯ ದಶಮಿ ಯಂತೂ, ಉತ್ಸಾಹ—ಆಮೋದಗಳನ್ನು ಹೆಚ್ಚಿಸುವದಾಗಿರುವದು. ಈ ದಿನದಲ್ಲಿ, ಪ್ರಭುಗಳು ತಮ್ಮ ಪ್ರಜಾವರ್ಗೀಯರಿಂದಲೂ, ಗುರು ಜನರು ನಿಜ ಶಿಷ್ಯವರ್ಗದವರಿಂದಲೂ, ಮಾತಾಪಿತೃಗಳು ತಮ್ಮ ತಮ್ಮ ಮಕ್ಕಳಿಂದಲೂ ವಿವಿಧ ಆಟಪಾಟ ಸಂಭಾಷಣಾದಿ ವಿನೋದಗಳನ್ನು ತೋರಿಸಿ ಉತ್ಸವವನ್ನು ಸಾಂಗವೆನ್ನಿಸುವರಷ್ಟೆ ಅದನ್ನು ಅನುಸರಿ ಸಿಯೇ ನಮ್ಮ ಹಿರಿಯರು ಅಂದರೆ- ನಮ್ಮ ತಾಯ್ತಂದಗಳೇ ಮೊದ ಲಾದವರ ಪ್ರೇರಣೆಯಂತೆ, ನಮ್ಮ ವಿದ್ಯಾರ್ಥಿಗಳಿಂದ ನಮಗೆ ತಕ್ಕಂತೆ, ಮತ್ತು ಬಾಲಕರೂ, ದೇಶಸೇವಕರೂ ಆಗಬೇಕಾಗಿರುವ ನಮ್ಮ ಮುಂದಿನ ಪುರೋವೃದ್ಧಿಗೆ ಅನುಕೂಲಿಸುವಂತ "ರಮಾನಂದ" ನಾಟ ಕವನ್ನು ಆಡಿ ತೋರುವದರಿಂದ ತಮ್ಮ ಅನುಗ್ರಹವನ್ನು ಸಂಪಾದಿಸ ಬೇಕೆಂದು ಸಂಕಲ್ಪಿಸಿರುವೆವು ಹಿರಿಯರಾದ ತಾವು, ನಮ್ಮ ಪ್ರಾರ್ಥನೆ ಯನ್ನು ಅನುಮೋದಿಸಬೇಕೆಂದು ಕೋರುವದಲ್ಲದೆ, ನಮ್ಮ ಇಂದಿನ ಪ್ರಥಮಪ್ರಯತ್ನದಲ್ಲಿ ತೋರಿಬಹುದಾದ ದೋಷಗಳನ್ನು ಗಣಿಸದೆ, ಗುಣಸಂಗ್ರಹ ಮಾಡಿ, ದೇಶಸೇವೆಯಲ್ಲಿ ನಮ್ಮನ್ನು ನಿರತರಾಗು ವಂತೆ ಪ್ರೋತ್ಸಾಹಿಸಬೇಕೆಂದು ನಾಟಕಾರಂಭಕ್ಕೆ ಮೊದಲೇ ಪ್ರಾರ್ಥಿ ಸುವೆವು

ಇಂತು ಪ್ರಾರ್ಥಿಸುವ ತಮ್ಮ—

ನಿರಂತರ ವಿಧೇಯರೂ, ದೇಶಸೇವಕರೂ ಆಗಿರುವ

**ಬಾಲಿಶ ವಿದ್ಯಾರ್ಥಿಗಳು**

( ಹೀಗೆ ಪ್ರಾರ್ಥನಾ-ಪತ್ರವನ್ನು ಓದಿದ ಬಳಿಕ, ನಾಟಕವು ಅಭಿನಯಿಸಲ್ಪಟ್ಟಿತು ಆ ಬಳಿಕ ಮತ್ತೆ ಸಭಿಕರಿಗೆ ವಿದ್ಯಾರ್ಥಿಗಳಿಂದ ಅಭಿನಂದನ ಪತ್ರವು ಈ ರೀತಿಯಾಗಿ ನಿವೇದಿಸಲ್ಪಟ್ಟಿತು )

ಇಲ್ಲಿ ಸಾಕ್ಷಾತ್ಕರಿಸಿರುವ ನಮ್ಮ ಪೂಜ್ಯರಾದ ಗುರುಜನರೇ!

ವಾತ್ಸಲ್ಯವಿಟ್ಟು, ಬಾಲಕರಾದ ನಮ್ಮನ್ನು ಅನುಗ್ರಹಿಸಲು ಇಲ್ಲಿಯ ವರೆಗೆ ಚಿತ್ತೈಸಿ ನಮ್ಮೆಲ್ಲರ ಯಥೋಚಿತ ಸತ್ಕಾರಗಳನ್ನು ಸ್ವೀಕರಿಸಿದುದಕ್ಕಾಗಿ, ಈ ನಮ್ಮ "ರಮಾನಂದ ವಿಜಯ ನಾಟಕ ಸಂಘ" ದವರ ಪರವಾಗಿಯೂ, ಈ ನಮ್ಮ ನಾಟಕ ಸಂಘ ನಿರ್ಮಾಣಕ್ಕೆ ಪ್ರೇರಕರೂ, ಈ ಮಾತೃಮಂದಿರದ ಕಾರ್ಯನಿರ್ವಾಹಕರೂ, ಸತೀಹಿತೈಷಿಣೀ ಕರ್ಣಾಟಕ ನಂದಿನಿಯರ ಸಂಪಾದಕಿಯರೂ ಆಗಿರುವ ನಮ್ಮ ಪ್ರಿಯಭಗಿನಿಯರಪರವಾಗಿಯೂ ನಿಮ್ಮೆಲ್ಲರಿಗೂ ಇದೋ ನಮ್ಮೆಲ್ಲರ ಧನ್ಯವಾದಗಳು ನಿಮ್ಮ ಅನುಗ್ರಹಕ್ಕೆ ಕಾರಣವಾದ ಇಂದಿನ ವಿಜಯ ದಶಮಿಯೇ ನಮಗೆ ಚಿರಸ್ಮರಣೀಯವಾದ ಸುದಿನವಾಗಿರುವುದು ಇದನ್ನು ನಾವು ನಮ್ಮ ವಾರ್ಷಿಕೋತ್ಸವಗಳಲ್ಲಿ ಪ್ರಧಾನವಾದ ದಿನವೆಂದು ಭಾವಿಸಿ ನಡಸುತ್ತ ಬರಬೇಕೆಂದು ನಿಶ್ಚಯಿಸಿರುವೆವು

ಪೂಜ್ಯರಾದ ಗುರುಜನರೇ ! ತಮ್ಮಲ್ಲಿ ಮತ್ತೊಂದು ಪ್ರಾರ್ಥನೆ—

ಇಂದಿನ ಉತ್ಸವಕ್ಕೆ ನಮ್ಮ ಕರ್ಣಾಟಕ ನಂದಿನಿಯ ದೇಶ ಸೇವಾಯಾತ್ರೆಯೇ ಮುಖ್ಯ ಕಾರಣವಾಗಿದಯಾದುದರಿಂದ ಯಾತ್ರಾರ್ಥಿಯಾಗಿರುವ ನಂದನಿಯು ನಮ್ಮ ಆರ್ಯಸಂಪ್ರದಾಯದಂತೆ, ಯಾತ್ರಾದಾನಮಹೋತ್ಸವವನ್ನು ಬೆಳಯಿಸುವದರಿಂದ, ಗುರು ಹಿರಿಯರ ಮತ್ತು ಸತ್ಪುರುಷರಾದ ದೇಶಬಾಂಧವರ ಆಶೀರ್ವಾದವನ್ನು ಹೊಂದಿ ಗುರುಜನರ ಉಪದೇಶಮಾರ್ಗದಲ್ಲ ಹೊರಡಲು ಸಂಕಲ್ಪಿಸಿರುವಳು ಈ ಸಂಕಲ್ಪವನ್ನು ತಾವೆಲ್ಲರೂ ಅನುಮೋದಿಸಬೇಕಲ್ಲದೆ, ಹಿತೈಷಿಣೀ ನಂದಿನಿಯರ ಪ್ರಧಾನಪೋಷಕರೂ, ಗುರುವರ್ಯರೂ ಮತ್ತು ನಮ್ಮ ಪರದೈವಸ್ವರೂಪರೂ ಆಗಿ, ಇಂದಿನ ನಮ್ಮ ಈ ಉತ್ಸವ ಕಾರ್ಯಕ್ಕೆ ಬೇಕಾದ ಅನುಕೂಲ್ಯಗಳನ್ನು ಕಲ್ಪಿಸಿಕೊಟ್ಟು ಪ್ರೋತ್ಸಾಹಿಸಿರುವ ನಮ್ಮ ಪಿತೃದೇವರೇ ನಂದನಿಯ ಯಾತ್ರಾಮಹೋತ್ಸವವನ್ನು ಸ್ವಹಸ್ತ

ದಿಂದ ನೆರವೇರಿಸಬೇಕೆಂಬ ನಮ್ಮ ಪ್ರಾರ್ಥನೆಯನ್ನು ಸನ್ಮಾನಿಸಿ ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಿರುವ—

ತಮ್ಮ ನಿರಂತರ ವಿಧೇಯರಾದ

ದೇಶಸೇವಾಸಮಾಜದ 'ವಿದ್ಯಾರ್ಥಿಗಳು'

"ಅಭಿನಂದನ ಪತ್ರಪಠನಾನಂತರದಲ್ಲಿ ಗುರುಜನರ ಆಶೀರ್ವಾದ ಪೂರ್ವಕವಾಗಿ ನಂದಿನಿಯ ಯಾತ್ರಾದಾನಮಹೋತ್ಸವವು ನೆರವೇರಿತು ಮತ್ತು ಗುರುಜನರು ವಿದ್ಯಾರ್ಥಿಗಳಿಗೆ ಹಿತೋಪದೇಶ ಮಾಡಿ ವಿದ್ಯಾರ್ಥಿಗಳನ್ನೂ ಮತ್ತು ನಮ್ಮ ಹಿರಿಯರನ್ನೂ ಅಭಿನಂದಿಸಿ, ಪ್ರಯತ್ನವು ಅವ್ಯಾಹತವಾಗಿ ನೆರವೇರುತ್ತಿರುವಂತೆ ಪರಮಾತ್ಮನು ಅನುಗ್ರಹಿಸತೆಂದು ಸೂಚಿಸಿದರು ಆ ಬಳಿಕ ಅಂದಿನ ಯಾತ್ರಾಮಹೋತ್ಸವವು ಜಯ ಜಯ ಧ್ವನಿಗಳ ಮತ್ತು ಕರತಾಡನಗಳ ಕೋಲಾಹಲದೊಡನೆ ಸಾಂಗವೆನ್ನಿಸಿತು"

॥ ಶ್ರೀ ॥

## ನಂದಿನಿಗೆ

# ಸ್ವಾಗತಾಭಿನಂದನವು.

೧ “ ಅವಳ ಕೈವಿಡಿದಾರಾ—ಜೀವಭವಂ, ನಿಖಿಲ ಲೋಕ ನಿರ್ಮಾಣಕರಾ। ಕೋವಿದನೆನಿಸಿದ ನಾವಾ–ಗ್ದೇವತೆ ಸನ್ಮತಿಯಿತ್ತು ಸಲಹಲೀ ಜಗಮಂ ॥ ” ಎಂದು ಹಿತಬೋಧಕರಾದ ನಮ್ಮ ಆರ್ಯರು ಕಲಿಸಿರುವ ಲೋಕಮಂಗಳವನ್ನೇ ಹೆಚ್ಚು ಕಡಮೆ ಮಾಡದೆ ಸರ್ವ ಕಾಲದಲ್ಲಿಯೂ ಪಾಡುವೆವು

೨ ನಾವು ಆರ್ಯ ವಂಶಜರು ಆರ್ಯ ಧರ್ಮವನ್ನು ಅನುಸರಿಸಿ ಬೆಳೆಯುವದೇ ನಮಗೆ ವಿಹಿತವೂ ಶ್ರೇಯಸ್ಕರವೂ ಆಗಿರುವದು ಈ ತತ್ವವನ್ನು ಮರೆತುಕೊಂಡಾಗಲೀ, ಕೇವಲ ವಿನೋದಮಾತ್ರಕ್ಕಾಗಲೀ ಯಾವನಾದರೂ ಪರಧರ್ಮಾಶ್ರಯವನ್ನು ಹೊಂದುವೆನೆಂದು ಆಶೆ ಪಟ್ಟರೆ, ಅದು ಸಾಗುವುದೇ ಇಲ್ಲ ನಿಂದ್ಯವಾದ ನಾಟಕಾಭಿನಯಕ್ಕಾಗಿ ಗಂಡಸು ಹೆಂಗಸಿನ ಭಾವವನ್ನೂ, ಹೆಂಗಸು ಗಂಡಸಿನ ರೂಪವನ್ನೂ ತಾಳಲು ಮಾಡುವ ಪ್ರಯತ್ನವು, ಪುರುಷಾಯುಃ ಪ್ರಮಾಣದಲ್ಲಿ ಸಫಲವಾದೀತೇ ? ಹೀಗೆಯೇ ಆರ್ಯನಾದವನು, ಅನಾರ್ಯನಾಗುವೆನೆಂದು ಎಣಿಸಿದರೆ, ಆ ಉದ್ದೇಶವು ಈಡೇರದೆ ಕೇವಲ ಕೆಲವು ಕಾಲ ಕುಲದ್ರೋಹಿಮಾತ್ರನಾಗುವನು ಇದಕ್ಕೆ ನಮಗೆ ಅನೇಕ ಮಾದರಿಗಳುಂಟು — ಒಂದೆಡೆ ಪಂಚಕನ್ಯೆಯರು, ಮತ್ತೊಂದೆಡೆ ಹಿರಣ್ಯಾಕ್ಷ, ಹಿರಣ್ಯಕಶಿಪು, ರಾವಣ–ಕುಂಭಕರ್ಣ, ದಂತವಕ್ತ್ರ–ಶಿಶುಪಾಲಾದಿಗಳೂ ಕೆಲವು ಕಾಲ ದೂಷಿತರಾಗಿದ್ದು, ಪುನಃ ಅಂತಿಮದಲ್ಲಿ ಆರ್ಯಧರ್ಮಸಂಸ್ಕಾರ ಬಲದಿಂದ ಉದ್ಧೃತರಾಗಿ, ಈಗಲೂ ನಮಗೆ ಸ್ಮರಣೀಯರಾಗಿರುವರು ಆದುದರಿಂದ ಆರ್ಯ ವಂಶಜರಾರೂ, “ ಧರ್ಮದ್ರೋಹಿ”ಗಳೆಂಬ ದೂರನ್ನು ಹೊತ್ತುಕೊಳ್ಳಬಾರದು.

೩. ಆರ್ಯ ಧರ್ಮವೆಂಬುದು ಬ್ರಹ್ಮಭುವನಕ್ಕೆ ಇರುವ ಸೋಪಾನವು "ಆಚಾರ್ಯ ದೇವೋಭವ" "ಆಚಾರ್ಯಾಧೀನೋಭವ" ಇತ್ಯಾದಿ ಅನುಶಾಸನಗಳು ಒಂದೆರಡನೆಯು ಆ ಸೋಪಾನದ ಮೆಟ್ಟಲುಗಳಾಗಿರುವವು. ಈ ಸೋಪಾನವನ್ನು ಹತ್ತತಕ್ಕವರು ಕ್ರಮವಾಗಿ ಮೊದಲನೆ ಮೆಟ್ಟಲನ್ನು ಹಿಡಿದು ಹೋಗುವುದೇ ಕ್ಷೇಮಕರವಲ್ಲದೆ, ಹಾಗೆ ಮಾಡದೆ, ಮೇಲು ಮೇಲಕ್ಕೆ ಹಾರುವೆನೆಂದು ದುರಾಶೆ ಪಟ್ಟರೆ ಕೈಕಾಲು ಹಲ್ಲು ಮುರಿದು, ಆಶಾಭಂಗವಾಗುವದು.

೪ ನಂದಿನಿ ! ನೀನು ನಮ್ಮ ಇದಿರಿಗೆ ಬಂದು ಬಹಳ ಹೊತ್ತಾಯಿತು ಇನ್ನು ಹೆಚ್ಚುಕಾಲ ನಿನ್ನ ಸ್ವಾಗತಾಭಿನಂದನವನ್ನು ಮಾಡದೆ ಇರುವದು ನಮಗೆ ತಕ್ಕುದಲ್ಲ ಆದರೆ, ಆಚಾರ್ಯ-ಆಮೂಲಕ-ಭಗವರ್ಾ, ಇವರುಗಳ ಸ್ಮರಣಪೂರ್ವಕವಾಗಿಯೇ ನಾವು ಯಾರನ್ನು ಆಶೀರ್ವದಿಸಬೇಕೆಂಬ ಆರ್ಯ ಧರ್ಮವನ್ನು ಕೈಕೊಳ್ಳುವುದರಲ್ಲಿ ಕೆಲವು ಹೊತ್ತು ಕಳೆಯಿತು. ನಿನ್ನ ದರ್ಶನ ಮಾತ್ರದಿಂದಲೇ ನಮ್ಮ ಮನವು ಉಬ್ಬಿ, ಲೋಕಕ್ಕೇ ಮಂಗಳವಾಗಲೆಂದು ಭಗವತೀ ವಾಗ್ದೇವಿಯನ್ನು ನಮ್ರತೆಯಿಂದ ಪ್ರಾರ್ಥಿಸಿರುವೆವು ಎಂದರೆ, ಲೋಕಾಂತರ್ಗತಳೂ, ವಾಙ್ಮಯಿಯೂ ಆದ ನಿನ್ನ ದರ್ಶನವೇ ಅಲ್ಲವೇ— ಈ ದಿನ— ಈ ಸುಪ್ರಭಾತದಲ್ಲಿ ನಮಗೆ ಆಚಾರ್ಯರನ್ನೂ, ಭಗವತಿಯನ್ನೂ ಸ್ಮೃತಿಗೆ ತರಲು ಕಾರಣವಾದುದು ? ಆದುದರಿಂದಲೇ ನೀನು ನಮ್ಮೆಲ್ಲರಿಗೂ ಶ್ರೇಯಸ್ಕಾರಿಣಿ;— ಅತ ಏವ, ನೀನು ಧನ್ಯೆ!!— ವಾಙ್ಮಯಿಯೂ, ವಿಜ್ಞಾನಮಯಿಯೂ, ಅತಏವ,—ಆನಂದಮಯಿಯೂ ಆಗಿರುವ ನಿನ್ನ ದರ್ಶನವು ಅಪ್ರಾರ್ಥಿತವಾಗಿಯೇ ಈ ದಿನ ಲಭಿಸಿದುದರಿಂದ ನಾವೂ ಧನ್ಯರು. ಇನ್ನು ಆಸನದ ಮೇಲೆ ಸುಪ್ರತಿಷ್ಠಿತಳಾಗು ! ?

೫ ನಂದಿನಿ ! ಪ್ರಥಮತಃ ನಿನ್ನ ಪರಿಚ್ಛೇದ (ಬಾಹ್ಯಸ್ವರೂಪ) ವು ನಮಗೆ ಕೇವಲ ಆದರಣೀಯವಾಗಿರುವದು. ಕಾಮಧೇನು ನಂದಿನಿಯನ್ನೇ ಆಶ್ರಯಿಸಿರುವದರಿಂದ ಲೋಕದಲ್ಲಿ ಮಾನವನು ಧರ್ಮಾರ್ಥಕಾಮ ಮೋಕ್ಷಗಳೆಂಬ ಅರ್ಥ ಚತುಷ್ಟಯವನ್ನೂ ಹೊಂದಲು ಗೋ-

ಸೇವೆಯೇ ಪರಮ ಸಾಧನವೆಂಬ ತತ್ವವನ್ನು ಲೋಕಕ್ಕೆಲ್ಲಾ ಬೋಧಿಸುವದಕ್ಕಾಗಿಯೇ ಗೋಪಾಲನಾಗಿ ಅವತರಿಸಿದ ಆ ಪರಮಾತ್ಮನನ್ನು ಆರಾಧಿಸಿ, ಸಾಕ್ಷಾತ್ಕಾರ ಮಾಡಿಕೊಂಡಂತಾದುದಲ್ಲದೆ, ಅಕುಟಿಲವಾದ ದೈವಿಕ ಭಕ್ತಿಯಿಂದ ನಿನ್ನ ನೈಜವಾದ ಸೌಜನ್ಯವೂ ಪ್ರಕಾಶಿಸುವುದು ಎರಡನೆಯದಾಗಿ ನಿನ್ನ ಜನ್ಮಭೂಮಿಯು ವಸ್ತುತಃ ಪವಿತ್ರವಾದ "ಹಿತೈಷಿಣೀ ಮಾತೃಮಂದಿರ" ವಾಗಿರುವಲ್ಲಿ, "ಸುಶೀಲ" ಯು ನಿನ್ನ ಹಿರಿಯಕ್ಕನಲ್ಲವೇ? ಈ ರೀತಿ, ನಿನ್ನ ಕುಲಶೀಲಗಳನ್ನು ತಿಳಿದುದಾಯ್ತು, ಮೂರನೆಯದಾಗಿ— ನಿನ್ನ ವೃತ್ತವು ಕೇವಲ ಪರಿಶುದ್ಧವಾದುದೆಂಬುದು ನಿನ್ನ ಮುದ್ದು ಮುದ್ದಾದ ನುಡಿಗಳಿಂದಲೇ ತಿಳಿಯುತ್ತಿರುವುದು. "ನಂದಿನಿ" ಎಂಬ ನಾಮವು ನಿನ್ನಲ್ಲಿ ಸಾರ್ಥಕವಾದುದೇ ಸರಿ! ನೀನು ನಮ್ಮ ಸನ್ಮಾನಕ್ಕೆ ಅರ್ಹಳೆಂದು ಮತ್ತೆ ಹೇಳಬೇಕೇನು? ಆದರೆ, ನಿನ್ನ ಯೋಗ್ಯತೆಗೆ ತಕ್ಕ ಸನ್ಮಾನವನ್ನು ನಾವು ಏನು ತಾನೇ ಮಾಡಬಲ್ಲೆವು? ಮತ್ತಾವುದೂ ನಮಗೆ ತಿಳಿಯುವದಿಲ್ಲ. ನಿನ್ನನ್ನು ನಮ್ಮ ಮುದ್ದುಗುವರಿಗಳ ಕೋಮಲ ಹಸ್ತದಲ್ಲಿ ಒಪ್ಪಿಸುವೆವು ಅವರು ನಿನ್ನ ಸುಭಾಷಿತಗಳಿಂದ ವರ್ಧಿತೆಯರಾಗಿ ದ್ರೌಪದೀಯ ಸತ್ಯಭಾಮಾದಿಗಳನ್ನು ನೆನೆನೆನೆದು, ಮಂಗಳಮೂರ್ತಿಯರಾದ ಸಾವಿತ್ರಿ, ಅನಸೂಯಾ, ಸೀತಾದೇವಿಯರಂತೆ ಆದರ್ಶಸತಿಯರಾಗಿ ಲೋಕರಂಜಕರೆನ್ನಿಸಲಿ! ಆರ್ಯ ಸಂತಾನವು, ಪುನಃ ಪರಾಕಾಷ್ಠತೆಯನ್ನು ಹೊಂದಲಿ!!! ಇದೇ ನಿನ್ನ ಜನ್ಮೋದ್ದೇಶವಲ್ಲವೆ!

೬ ನಂದಿನಿ! ಇಷ್ಟು ಮಟ್ಟಿಗೆ ಹೇಳಬಲ್ಲೆವು — ಯಾರೂ, ನಿನ್ನನ್ನು ಅನ್ಯಥಾ ಭಾವಿಸಿ ಹಿಂಸಿಸಲಾರರು —"ನ ಹಿಂಸಾಮೋಪಪನ್ನಾನಾಂ ಪ್ರಹರ್ತಾ ವಿದ್ಯತೇ ಕ್ವಚಿತ್।" ಎಂದರೆ, 'ದಮ್ಮಯ್ಯಾ' ಎಂದವರನ್ನು ಹೊಡೆಯುವಷ್ಟು ಹೇಡಿಗಳಾರೂ ಇಲ್ಲವೆಂಬ ಅಂಶವು ನಿನಗೆ ತಿಳಿದೇ ಇರುತ್ತದೆ ಆದುದರಿಂದ ನಿನ್ನ ಪರವಾಗಿ ಇನ್ನು ಹೆಚ್ಚು ನಿವೇದನಗಳು ಬೇಕಿಲ್ಲ. ಮತ್ತು ನೀನು ಭಿಕ್ಷೆಯನ್ನು ಇನ್ನೊಂದು ಬಾರಿ ಬೇಡಬೇಕಾಗಿಲ್ಲ. ನಿನ್ನ ಸಂದೇಶವು ಏಕಕಾಲದಲ್ಲಿ ಮನಮುಟ್ಟುವಂತಿದೆ ಅದನ್ನು ಮಾನ್ಯ ಮಾಡದೆ ಹೋದರೆ,

ಅದು ಆ ಜಡಪ್ರಕೃತಿಯ ದೌರ್ಭಾಗ್ಯವೇ ಸರಿ!! " ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡ " ನೆಂಬ ಸಾಮಿತಿಯು ಆ ನಿರ್ಭಾಗ್ಯ ಪ್ರಕೃತಿಯ ಪಾಲಿಗೆ ಬಂದುದೇ ಅಲ್ಲವೆ? ಹೆಚ್ಚೇಕೆ, ಒಂದೇ ಮಾತಿನಲ್ಲಿ ಮಾನ್ಯರಾದ ಗೃಹಸ್ಥರು, ಗೃಹಿಣೀಯರು, ಮದ ಮಾತ್ಸರ್ಯಗಳಿಲ್ಲದೆ, ನಿನ್ನನ್ನು ತಮ್ಮಗಳ ಮುದ್ದುಗುವರಿಯರ ಒಡನಾಡಿಯಾಗಿರುವಂತೆ ಪ್ರಾರ್ಥಿಸಿ, ಚರಿತಾರ್ಥರಾಗುವರು ನೀನು ಮಾತ್ರ ವಿಕಲ್ಪವನ್ನು ತಾಳದೆ ನಿನ್ನ ನಿಯಮಗಳನ್ನು ನಿನ್ನ ಮನಮುಚ್ಚುವಂತೆ ಅನುಸರಿಸು

೭ ಒಂದು ಭಾಗದಲ್ಲಿ ಮಾತ್ರ— ನಂದಿನಿ! ನಿನಗೆ ಸ್ವಲ್ಪ ಸೂಚನೆಯನ್ನು ಕೊಡುವದು ನಮಗೆ ಉಚಿತವೆಂದು ತೋರಿದುದರಿಂದ ಹೇಳುವೆವು — ನೀನು, ಇನ್ನೂ ಕೇವಲ ಬಾಲಿಕೆಯಾಗಿರುವದರಿಂದ ಮತಸ್ಥಾಪಕದ ಮಹನೀಯರ ದಿವ್ಯಚರಿತವನ್ನು ಮುಮುಕ್ಷುಗಳಾದ ವಾನಪ್ರಸ್ಥರ ಪಾಲಿಗೆ ಬಿಟ್ಟು, ಜ್ಞಾನ ಶೈಶವಾವಸ್ಥೆಯಲ್ಲಿರುವ ನಮ್ಮ ಕುವರಿಯರಿಗೆ " **ಸತ್ಯಂವದ! ಧರ್ಮಂಚರ!!** " " **ಸ್ವಾಧ್ಯಾಯಾತ್ಮಾಪ್ರಮದಃ** " **ಮಾತೃದೇವೋಭವ** " " **ಪಿತೃದೇವೋಭವ** " ' **ಆಚಾರ್ಯದೇವೋಭವ** " ಇತ್ಯಾದಿ ಮೂಲ ಮಂತ್ರಗಳನ್ನು ನಿನ್ನ ಬುದ್ಧಿಯಿಂದ ವಿಶದಗೊಳಿಸಿ, ಇವೆಲ್ಲವೂ ಇಷ್ಟಪ್ರಾಪ್ತಿ ಹೇತುಗಳಾಗಿರುವವೆಂಬುದನ್ನು ಕಲಿಸು ಮತ್ತು 'ಅಬಲಾದೌರ್ಜನ್ಯ ನಿರೂಪಣ'ವನ್ನು ನೀನು ಶ್ಲಾಘ್ಯವಾಗಿ ಕೈಕೊಂಡಿರುವದು ಅನಿಷ್ಟ ನಿವಾರಣೋಪಾಯವಾಗಿರುವುದು ಇಷ್ಟಪ್ರಾಪ್ತಿಯೂ, ಅನಿಷ್ಟ ನಿವಾರಣೆಯೂ, ಸಾರ್ವಜನಿಕವಾದ ಆಶಂಸೆಯಲ್ಲವೆ?

೮ ನಂದಿನಿ! ಇನ್ನು ನಿನ್ನನ್ನು ಬೀಳ್ಕೊಡುವೆವು ನಾವೆಲ್ಲ, ಸಂಸಾರದ ಖಟಪಟಿಯಿಂದ ಒರಟು ಸ್ವಭಾವದವರು ವಾಗ್ವೈಖರಿಯು ಮೊದಲೇ ಇಲ್ಲ ಇದರಿಂದ ನಿನಗೆ ಪೆಟ್ಟುಗಿದ್ದರೂ ನಾವು ತಿಳಿಯಲಾರೆವು ನೀನು ಮಾತ್ರ ಅದನ್ನು ಬೇರೆಯಾಗಿ ಭಾವಿಸದೆ, **ಸರಳವಾದ ಅಂತಃಕರಣದಿಂದಲೂ, ಕೋಮಲವಾದ ಮನೋವೃತ್ತಿಯಿಂದಲೂ ಎಲ್ಲವನ್ನೂ ಸಹಾನುಭೂತಿಯಿಂದೇ ತಿಳಿ! ಈಗ ಹೊರಡು;**

ನಂದಿನಿ! ಸ್ವಲ್ಪ ನಿಲ್ಲು, ಪ್ರಥಮತಃ ನಿನ್ನ ಸ್ವಾಗತಾಭಿನಂದನದಲ್ಲಿ ನಾವು ಮಾಡಿದ ಮಂಗಳವನ್ನು ನೀನು ತಿಳಿದಿರುವಿಯಷ್ಟೆ, — ಅದೇ ಧ್ಯಾನದಲ್ಲಿರಲಿ!

F ನಂದಿನಿ! ಈ ದಿನ ವಿಜಯದಶಮಿ ನೀನು ವಿಜಯೋನ್ಮುಖಿಯಾಗಿರುವೆ ವಿಜಯೋನ್ಮುಖ ತೇಜಶ್ಶಾಲಿಗಳಾದ ನಮ್ಮ ಪ್ರಭುಗಳನ್ನು ಕುರಿತು ಮಂಗಳವನ್ನು ಹೇಳಬೇಡವೇ? ಹೇಳು— ಅದೇನೆಂದು ಹೇಳುವೆ? "ಜಯ ಕೃಷ್ಣಭೂಪತಿ!" ಎಂದಲ್ಲವೇ! ಅಹುದಹುದು ಅದನ್ನೇ ಒತ್ತಿಯೊತ್ತಿ ಹೇಳು, ಕೇಳುವ?

## ಜಯ ಕೃಷ್ಣಭೂಪತಿ!

ಇಂತು ಅಭಿನಂದಿಸುವ ನಿನ್ನ

ಹಿತಾಕಾಂಕ್ಷಿ

# ಕ್ಷಮಾಪಣೆ.

ಈ ವರೆಗೆ ಸತೀಹಿತೈಷಿಣಿಗೆ ಪರಿವೃತ್ತಿಕ್ರಮಬಾಂಧವ್ಯದಿಂದ ಬಂದು-ಬರುತ್ತಿರುವ ಪತ್ರಿಕೆಗಳಿಗೆಲ್ಲಾ, ಇಂದಿನಿಂದ ಕರ್ಣಾಟಕ ನಂದಿನಿಯನ್ನು ಕಳುಹಬೇಕೆಂದು ಸಂಕಲ್ಪಿಸಿ, ಅದರಂತೆ ನಂದಿನಿಯ ಪ್ರಥಮ ಸಂಚಿಕೆಯನ್ನು ಆದರ ಬಹುಮಾನ ಪುಸ್ತಕದೊಡನೆ ಕಳು ಹಿರುವೆವು

ಮೂರು ತಿಂಗಳಿಗೊಮ್ಮೆ ಬರುತ್ತಿದ್ದ ಹಿತೈಷಿಣಿಗೆ ಪ್ರತಿಯಾಗಿ ತಿಂಗಳು ತಿಂಗಳಿಗೂ ಬರುವ ನಂದಿನಿಯಲ್ಲಿ ಹೆಚ್ಚು ಆದರವುಳ್ಳವರಾಗಿ ಸ್ವೀಕರಿಸಿ, ಸಮಯೋಚಿತ ಹಿತಸೂಚನೆಗಳಿಂದ ಎಚ್ಚರಿಸುತ್ತ, ನಂದಿನಿ ಯಲ್ಲಿ ಆಗ್ರಹವನ್ನು ಬಿಟ್ಟು ಅನುಗ್ರಹಬುದ್ಧಿಯಿಂದ ನಂದಿನಿಯು ಅಭಿವರ್ಧಿಸುವಂತೆ ಪ್ರೋತ್ಸಾಹಿಸುತ್ತಿರಬೇಕೆಂದು ಸಮ್ಮ ಸದ್ಧರ್ಮ ಭ್ರಾತೃವರ್ಗೀಯರಾದ ಪತ್ರಕರ್ತರಲ್ಲ ವಿನಯಪುರಸ್ಸರವಾಗಿ ಕ್ಷಮೆ ಯನ್ನು ಕೋರುವೆವು

ಮತ್ತು, ಇಂದಿನ ವರೆಗೆ ನಮ್ಮಲ್ಲಿಗೆ ವಿಮರ್ಶೆ, ಅಭಿಪ್ರಾಯ ನಿವೇದನೆಗಳಿಗಾಗಿ ಬಂದಿರುವ ಪುಸ್ತಕಗಳನ್ನು ಕುರಿತು, ಪ್ರಸ್ತಾಪಿ ಸಲು ಸತೀಹಿತೈಷಿಣಿಯಲ್ಲಿ ಈ ವರೆಗೆ ಅವಕಾಶವೇ ದೊರೆತಿರಲಿಲ್ಲ ವಾದುದರಿಂದಲೂ, “ಬಳಿಗೆ ಬಂದ ಪುಸ್ತಕಗಳ ಗುಣವಿಮರ್ಶೆಯನ್ನು ಅವಕಾಶಾನುಸಾರವಾಗಿ ಕೊಡುತ್ತಬರಬೇಕೆಂದು” ನಮ್ಮ ಭ್ರಾತೃ ವರ್ಗೀಯರಲ್ಲಿ ಕೆಲವರು ಅಭಿಪ್ರಾಯವಿತ್ತಿರುವದರಿಂದಲೂ, ಅವುಗಳ ಸ್ವೀಕಾರ–ಸ್ವಾಭಿಪ್ರಾಯನಿವೇದನೆಗಳನ್ನು ಯಥೋಚಿತವಾಗಿ ನಂದಿ ನಿಯ ತೃತೀಯ ಸಂಚಿಕೆಯಿಂದ ಕೊಡುತ್ತ ಬರಬೇಕೆಂದಿರುವವು ಈ ವರೆಗಿನ ತಾಟಸ್ಥ್ಯಕ್ಕಾಗಿ ಬೇಸರಿಸದೆ, ಮುಂದಿನ ತಿಂಗಳ ವರೆಗೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಅನಮ್ಮ ಗ್ರಂಥಕರ್ತ–- ಪತ್ರಕರ್ತ ಭ್ರಾತೃಗಳೆಲ್ಲರಲ್ಲಿಯೂ ಪ್ರಾರ್ಥಿಸುತ್ತಿರುವೆವು.—

( ಸಂಪಾದಯಿತ್ರಿ )

॥ ಶ್ರೀ ॥

ಶ್ರೀರಾಮಶ್ಶರಣಮ್

# ದೇಶೋನ್ನತಿ.

ಸೋದರೀ ವರ್ಗಕ್ಕೆ ಸೇರಿದ ಸಾಧ್ವೀಮಣಿಯರೇ !

ನೀವುಗಳು ಅನೇಕರಾದ ಪತಿವ್ರತೆಯರ ಚರಿತ್ರೆಗಳನ್ನೂ ಅನುಭವಜ್ಞರಾದ ಸೋದರಿಯರ ಉಪನ್ಯಾಸಗಳನ್ನೂ ಓದಿ, ಕೇಳಿ, ಸುಶಿಕ್ಷಿತೆಯರಾಗಿ, ಗೃಹಗಳಿಗೆ ಅಲಂಕಾರಪ್ರಾಯರಾಗಿಯೇ ಇರುವಿರಿ! ಈಗ ನಾನು ಹೇಳಲಿಕ್ಕಿರುವದು ನಿಮ್ಮ ಶಿಕ್ಷಣಕ್ಕೆಂದು ಭಾವಿಸಬೇಡಿರಿ,— ಮಾನವಜನ್ಮಕ್ಕೆ ಮರೆಯುಂಬುದು ( ಸಾಮಾನ್ಯ? ) ಸಹಜವಾದುದರಿಂದ ನಿಮ್ಮ ಜ್ಞಾಪಕಕ್ಕೆಂದು ಮಾತ್ರವೆ ಭಾವಿಸಿರಿ !

ಪೂರ್ವದಲ್ಲಿ ಗಾರ್ಗಿ ಮೊದಲಾದ ಮಹಿಳೆಯರು ಶಾಸ್ತ್ರಾಭ್ಯಾಸ ಮಾಡಿ, ಪೂರ್ಣವಾದ ಜ್ಞಾನವನ್ನು ಸಂಪಾದಿಸಿ, ಮಹರ್ಷಿಗಳಿಗೆ ಸಮವಾದ ಮರ್ಯಾದೆಯನ್ನು ಪಡೆದು, ಶ್ರೌತ, ಸ್ಮಾರ್ತಕರ್ಮಗಳಿಗೆ ಮುಖ್ಯವಾದ ಋಕ್ಕುಗಳನ್ನು ಉದ್ಧರಿಸಿ, ಕಲ್ಪಾಂತದ ವರೆಗೆ ನಿಲ್ಲುವ ಯಶಸ್ವಿನಿಯರಾಗಿ ಭಾರತಮಾತೆಯನ್ನು ಸಲವೇರಿಸಿದರು ಅವರ ಇಂದ್ರಿಯನಿಗ್ರಹವನ್ನು ವರ್ಣಿಸುವದಕ್ಕೆ ಕುಳಿತರೆ ಕಾಲವೇ ಸಾಲದು. ಕೇವಲ ಪಾತಿವ್ರತ್ಯಪ್ರಭಾವದಿಂದ ಲೋಕವನ್ನೂ ಲೋಕಾಧಿಪತಿಗಳನ್ನೂ ವಶಪಡಿಸಿಕೊಳ್ಳುವಷ್ಟು ಸಮರ್ಥರಾದ ಅನುಸೂಯೆಯೇ ಮೊದಲಾಗಿ, ಪಾತಿವ್ರತ್ಯಪ್ರಭಾವದಿಂದ ಪ್ರಕಾಶಮಾನರಾದ ಸಾಧ್ವೀಮಣಿಯರು ಭಾರತಮಾತೆಗೆ ಅಲಂಕಾರಪ್ರಾಯರಾಗಿದ್ದರು

ಈ ರೀತಿ ಸ್ತುತ್ಯರ್ಹರಾದ ಭಾರತಸಂತಾನಕ್ಕೆ ಸೇರಿದ ನಾರೀಮಣಿಗಳನ್ನೇ ಒಳಗೊಳ್ಳುವಂತೆ, ಈಚೆಗೆ ಸ್ತ್ರೀವರ್ಗವನ್ನೇ—

* " ಅನೃತಂ, ವಂಚನಂ, ಮಾಯಾ, ಮೂರ್ಖತ್ವಮವಿವೇಕತಾ |
ಅಶುಚಿ, ನಿರ್ದಯತ್ವಂಚ–ಸ್ತ್ರೀಣಾಂ ಸಪ್ತಸ್ವಭಾವತಃ || "

ಎಂದು ದೂಷಿಸುವದಕ್ಕೆ ಹೊರಟರು. ಇದಕ್ಕೆ ಸಹಕಾರಿಯಾಗಿ ರಾಮಾಯಣದಲ್ಲಿ ಅಗಸ್ತ್ಯಮಹರ್ಷಿಯೂ ಹೀಗೆಂದು ಹೇಳಿರುವರು—

† " ಶತಹ್ರದಾನಾಂ ಲೋಲತ್ವಂ ಶಸ್ತ್ರಾಣಾಂ ತೀಕ್ಷ್ಣತಾಂ ತಥಾ |
ಗರುಡಾನಿಲಯೋಶ್ಶೈಘ್ರ್ಯ ಮನುಗಚ್ಛಂತಿ ಯೋಷಿತ || "

(ಅ ಸ ೧೩ ಶ್ಲೋ ೬)

ಇದನ್ನು ಪುಷ್ಟೀಕರಿಸಬೇಕೆಂದು ಕಾಳಿದಾಸನು " ವೃದ್ಧಾಯೂನಾ ಸಹ ಪರಿಚಯಾ ತ್ಯಜ್ಯತೇ ಕಾಮಿನೀಭಿ " ಎಂದು ಹೇಳಿರುವನು

ಈ ರೀತಿಯಾಗಿ ದೂಷಿಸುವದಕ್ಕೆ ನಮ್ಮ ಸೋದರಿಯರಲ್ಲಿ ಯಾರಾದರೂ ಕಾರಣರಿರುವರೋ,—ಅಥವಾ ದೂಷಕರ ಮನೋಭಾವವೇ ಕಾರಣವೋ ನಿರ್ಧರಿಸುವದು ಕಷ್ಟ ! ಮೇಲೆ ಹೇಳಿರುವ ಏಳು ಗುಣಗಳೂ ಸ್ತ್ರೀಯರನ್ನು ಅನುಸರಿಸಿರುವದೆಂದು ಹೇಳಬೇಕಾದರೆ ಸ್ತ್ರೀವರ್ಗದಲ್ಲಿ ಸೇರದೆ, ಅವರ ಸದ್ಗುಣಗಳ ಮತ್ತು ಪ್ರಭಾವವನ್ನು ಕಾಣದವನಾಗಿಯೇ ಇರಬೇಕಲ್ಲವೆ ?

ಈ ಎಲ್ಲಾ ದುರ್ಗುಣಗಳೇ ಆಗಲಿ, ಒಂದೆರಡಾಗಲೀ ಇರತಕ್ಕವರು ಎಲ್ಲಿಯಾದರೂ ಒಬ್ಬಿಬ್ಬರಿದ್ದು ಅದು ದೂಷಕರ ಕಣ್ಣಿಗೆ ಬಿದ್ದು, ಮನಸ್ಸಿಗೆ ಈ ರೀತಿ ಗೋಚರವಾಗಿ ಹೇಳಿರಬಹುದೆ?–ಎಂದು ಕೂಡಾ ಭಾವಿಸಬೇಕಾಗುವದು

ಶಾಸ್ತ್ರವು, ಪ್ರಾಚೀನ ಸಂಪ್ರದಾಯವೂ ಹೇಗಿದ್ದವೋ ? ಈಗಿನ ಸುಧಾರಕ ಮಹಾಶಯರು ಹೇಳುವಂತೆ ಸ್ತ್ರೀಯರು ಒಂದಲ್ಲದೆ,—

---

* ೧ ಸುಳ್ಳು ೨ ಮೋಸ, ಮಾಯೆ, ಪರಸಾದನೆ–ವಿಚಾರಶೂನ್ಯತೆ, ನಿರ್ಮಲಭಾವವಿಲ್ಲದಿರುವಿಕೆ, ನಿರ್ದಯೆ (ಕಾಠಿಣ್ಯ) ಈ ಏಳೂ ಸ್ತ್ರೀಯರ ಸ್ವಭಾವಸಹಜಗುಣಗಳೆಂದು ಭಾವವು.

† ಸ್ತ್ರೀಚಿತ್ತವು ಚಂಚಲತೆಯಲ್ಲಿ ಮಿಂಚಿಗೂ, ತೀಕ್ಷ್ಣತೆಯಲ್ಲಿ ಶಸ್ತ್ರಗಳಿಗೂ, ವೇಗದಲ್ಲಿ ವಾಯು–ಗರುಡರಿಗೂ ಸರಿತೂಗುವದು ಎಂದು ಭಾವವು

ಎರಡು ಮೂರು ವಿವಾಹಗಳನ್ನು ಮಾಡಿಕೊಳ್ಳುತ್ತಿದ್ದರೋ,-ಅಥವಾ ಅದನ್ನು ಪ್ರತಿಭಟಿಸುವ ವೇದಪಾರಿಗಳ ಅಭಿಪ್ರಾಯದಂತೆ ಸ್ತ್ರೀಯರಿಗೆ ಶಾಸ್ತ್ರಸಿದ್ಧವಾದ ವಿವಾಹವೊಂದೇಬಾರಿಯಲ್ಲದೆ ನಂತರವಿಲ್ಲವೆಂಬುದೇ ಆಗಿದ್ದಿತೋ ನನ್ನ ಅಲ್ಪ ಬುದ್ಧಿಗೆ ಮೀರಿದುದಾಗಿದೆ

ಈ ಬಗೆಯ ಅನೇಕವಿವಾಹವೆಂಬುದು ಸ್ತ್ರೀಯರಿಗೆ ಕೇವಲ ಕಾಮಪೂರ್ತಿಗೆಂದು ಅರ್ಥಮಾಡುವರಲ್ಲವೆ ? ಅದಾದರೂ ಸಂಭವವೇ ?—ಎಂದರೆ,

"ನ ಜಾತ ಜಾತು ಕಾಮಾನಾಂ ಉಪಭೋಗೇನ ಶಾಮತಿ |
ಹವಿಷಾ ಕೃಷ್ಣವರ್ತ್ಮೇನ ಭೂಯ ಏವಾಭಿ ವರ್ಧತೇ ||"

ಎಂಬುದಾಗಿ ಭಗವದ್ವಾಕ್ಯವಿದೆ ಕಾಮವು ಅನುಭವಿಸಿದಷ್ಟೂ ವೃದ್ಧಿಯೊಗುತ್ತಿರುವುದೇ ಹೊರತು ಶಮನವಾಗುವುದಿಲ್ಲ ಹೇಗೆಂದರೆ—ಉರಿಯುತ್ತಿರುವ ಬೆಂಕಿಗೆ ತುಪ್ಪವನು ಸುರಿದಷ್ಟೂ ವೃದ್ಧಿಯೇ ಆಗುವುದಲ್ಲವೆ ? ಈ ದೃಷ್ಟಾಂತದಿಂದ ಕಾಮಪೂರ್ತಿಗೆಂದು ಮಾಡುವ ಪ್ರಯತ್ನವು ವೃದ್ಧಿಗೆ ಕಾರಣವಾಗುತ್ತಲ್ಲವೆ ? ಹಿಂದೆ ಯಯಾತಿರಾಜನಿಗೆ ಶಾಪದಿಂದ ವೃದ್ಧಾಪ್ಯವು ಪ್ರಾಪ್ತವಾದ ಮೇಲೆ ತನ್ನ ಮಗನಿಗೆ ವೃದ್ಧಾಪ್ಯವನ್ನು ಕೊಟ್ಟು, ಅವನಿಂದ ಯೌವನವನ್ನು ಪಡೆದು, ಬಹುಕಾಲ ವಿಷಯಸುಖವನ್ನು ಅನುಭವಿಸಿದನು ಆದರೂ, ತೃಪ್ತಿಯಾಗಿಲ್ಲವೆಂದೇ ಹೇಳಿದನು ! ಇತಿಹಾಸಿಗಳ ವಿಚಾರವನ್ನು ಬಿಟ್ಟು, ನಮ್ಮ ಅನುಭವವನ್ನು ನೋಡಿದರೂ, ಅದು ತಪ್ಪೆಂದು ಹೇಳುವಂತಿಲ್ಲ. ಆದುದರಿಂದ ವಿವಾಹದ ಉದ್ದೇಶವಲ್ಲವೆಂದೇ ಹೇಳಬೇಕಾಯಿತು.

ಹಾಗಾದರೆ, ಗೃಹಸ್ಥಾಶ್ರಮವನ್ನು ಸ್ವೀಕಾರ ಮಾಡಿ, ಪುತ್ರೋತ್ಪಾದನದಿಂದ ಪಿತೃಋಣವನ್ನು ತೀರಿಸುವುದಕ್ಕೆ ಮಾತ್ರವೇ ವಿವಾಹವೆಂದು ಹೇಳಬೇಕಾಗುತ್ತದೆ. ವಿವಾಹಯೋಗ್ಯತೆ ಬರಬೇಕಾದರೆ ಬ್ರಹ್ಮಚರ್ಯೆಯ ಬಲದಿಂದ—ಎಂದರೆ,— ಜಿತೇಂದ್ರಿಯನಾಗಿ ದೇಹದಾರ್ಢ್ಯವನ್ನು ಪಡೆಯಬೇಕೆಂದು ಹೇಳಿದೆ ಈ ನಿಯಮವು ಸ್ತ್ರೀಪುರುಷರ ಸಾಮಾನ್ಯವಿಧಿಯೇ ಸರಿ. ಬಾಲ್ಯಾರಭ್ಯ ಬ್ರಹ್ಮಚರ್ಯೆಯ

ಲ್ಲಿದ್ದು ದೇಹದಾರ್ಢ್ಯವನ್ನು ಸಂಪಾದಿಸಿದವರಿಗೆ ಯೌವನದಲ್ಲಿ ಇಂದ್ರಿಯನಿಗ್ರಹವೆಂಬುದು ಕಷ್ಟಕರವಾಗಲಾರದು. ಹಾಗಿದ್ದರೆ ದ್ವಿತೀಯಾದಿ ವಿವಾಹವು ಅನವಶ್ಯಕವಾಗುತ್ತದೆ ಹಾಗಾದರೆ ಪುರುಷನಿಗೆ ಏಕೆಂದು ಆಕ್ಷೇಪವುಂಟಾಗುವದಲ್ಲವೆ? ಶಾಸ್ತ್ರದಲ್ಲಿ ಅವಕಾಶವಿರುತ್ತದೆಂಬುದು ಅಷ್ಟು ಮುಖ್ಯವಲ್ಲ. ನಿತ್ಯನೈಮಿತ್ತಿಕ ಕರ್ಮಗಳು ಪುರುಷನಿಗೆ ನಿಯತವಾಗಿ ಹೇಳಲ್ಪಟ್ಟಿವೆ ಅದರಲ್ಲಿ ಪಂಚಮಹಾಯಜ್ಞಗಳು ಆವಶ್ಯಕವಾದವು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸವೆಂಬ ನಾಲ್ಕು ಆಶ್ರಮಗಳಲ್ಲಿ ಒಂದಾಶ್ರಮದಲ್ಲಿ ಪುರುಷನು ಇರಬೇಕಲ್ಲದೆ, ಅನಾಶ್ರಮಿಯಾಗಿರಕೂಡದೆಂದು ನಿಷೇಧವಿದೆ ಬ್ರಹ್ಮಚರ್ಯಾಶ್ರಮದಲ್ಲಿಯೇ ಜನ್ಮಾವಧಿಯಿರಬಹುದು, ಅದನ್ನು ಉತ್ಸರ್ಜನೆ ಮಾಡಿದಲ್ಲದೆ ಗೃಹಸ್ಥಾಶ್ರಮಕ್ಕೆ ಅಧಿಕಾರ ಬರುವದಿಲ್ಲ ಉತ್ಸರ್ಜನಾನಂತರ ಆ ಬ್ರಹ್ಮಚರ್ಯಾಶ್ರಮ ಧರ್ಮವನ್ನು ಸ್ವೀಕರಿಸಲು ಅವಕಾಶವಿರುವದಿಲ್ಲ ಪತ್ನೀವಿಯೋಗವಾದರೆ "ವಿಧುರ"ನೆಂಬ ದುಷ್ಟನಾಮವೊಂದು ಪ್ರಾಪ್ತವಾಗುತ್ತದೆ ಮುಂದಿನ ಸನ್ಯಾಸಾಶ್ರಮಕ್ಕೆ ತಕ್ಕ ಯೋಗ್ಯತೆಯು ಎಲ್ಲರಿಗೂ ಇರುವುದಿಲ್ಲ ಆದುದರಿಂದ ಪುರುಷರು ದ್ವಿತೀಯಾದಿ ವಿವಾಹವನ್ನು ಮಾಡಿಕೊಳ್ಳಬೇಕಾಗುತ್ತದೆ

ಹೀಗೆಯೇ ಸ್ತ್ರೀಯರಿಗೆ ಪಾತಿವ್ರತ್ಯವೆಂಬ ನಿಯಮವೊಂದು ಬಲವತ್ತರವಾಗಿರುವುದು ಒಬ್ಬನಲ್ಲದೆ ಅನೇಕರಾದರೆ ನಿಯಮಕ್ಕೆ ಭಂಗ ಬರುವುದೆಂಬುದು ವೈದಿಕವಿಷಯವಾದುದು 'ದ್ವಿಜವಾಚ್ಯ'ರಾದ ಬ್ರಹ್ಮ ಕ್ಷತ್ರಿಯ, ವೈಶ್ಯರೆಂಬ ಮೂರು ವರ್ಣದವರ ಹೊರತು ಇತರರಲ್ಲಿ ಗತ್ಯಂತರವೆಂಬುವುದು ಅಷ್ಟು ದೂಷ್ಯವಾಗಿಲ್ಲ. ಅವರು ಕೂಡಾ ದ್ವಿತೀಯಾದಿ ವಿವಾಹವಿಟ್ಟಿಲ್ಲ.

ಪುರುಷವರ್ಗದವರು ಶಾಸ್ತ್ರಬದ್ಧರಾಗಿ ನಡೆಯುವ ಪಕ್ಷದಲ್ಲಿ ಆವ ಹೆಂಗಸಾದರೂ ದುಶ್ಶೀಲಳಾಗುವದಕ್ಕೆ ಅವಕಾಶವಿರುವದಿಲ್ಲ. ಹಾಗಾಗದೆ ಪುರುಷವರ್ಗದವರು ನಿರ್ಭೀತರಾಗುತ್ತ ಬಂದುದೇ ಕೇವಲ ಅನರ್ಥಕ್ಕೆ ಕಾರಣವಾಯಿತೆಂದು ಹೇಳುವುದೂ ತಪ್ಪಾಗುವದಿಲ್ಲ.

ಪುರುಷವರ್ಗದವರು ನಿರ್ಭೀತರಾದರೆ ಅವರನ್ನು ತಕ್ಕ ರೀತಿಯಲ್ಲಿ ಸನ್ಮಾರ್ಗಕ್ಕೆ ತಿರುಗಿಸುವದಕ್ಕೆ ಸ್ತ್ರೀಯರು ಸಮರ್ಥೆಯರೇ ಆಗಿರುತ್ತಾರೆ ಎಂದು ತತ್ವಜ್ಞಾನೊಬ್ಬನು ಹೇಳಿರುವ ಸೂತ್ರವೇ ಸಾಕಾಗಿ ತೋರುವದು ಇದು ಅನೇಕ ದೃಷ್ಟಾಂತಗಳಿಂದ ದೃಢಪಡಿಸಲ್ಪಟ್ಟು ಇರುವದು. ಸ್ತ್ರೀಯರು ಸುಶಿಕ್ಷಿತೆಯರಾಗಿ ಬೆಳೆದು ದೃಢಚಿತ್ತರಾಗಿದ್ದರೆ ಅವರಿಗೆ ಅಸಾಧ್ಯವಾದುದು ಅವುದೂ ಇರಲಾರದೆಂದು ತಿಳಿಯುವದು. ಆದುದರಿಂದಲೇ ಪುರುಷವರ್ಗದವರಿಗಾಗಲೀ ಸ್ತ್ರೀವರ್ಗದವರಿಗಾಗಲೀ ಉತ್ತಮ ಶಿಕ್ಷಣವು ಅವಶ್ಯಕವೆಂದು ಹೇಳಿದಂತಾಯಿತು ಇಲ್ಲಿ ಪುರುಷವರ್ಗದವರ ಉತ್ತಮ ಶಿಕ್ಷಣವನ್ನು ಕುರಿತು ವಿಚಾರ ಮಾಡಬೇಕೆಂಬುದು ಈ ಲೇಖನದ ಉದ್ದೇಶವಲ್ಲ. ಈ ಕಾಲಕ್ಕೆ ತಕ್ಕಂತೆ ಬುದ್ಧಿ ತಿಳಿಯುವದಕ್ಕೆ ಮೊದಲೇ ಗ್ರಾಮಾಂತರವೂ ದೇಶಾಂತರವೂಇದ್ದು ವಿದ್ಯಾಭ್ಯಾಸ ಮಾಡುವರಾಗುತ್ತಾರೆ ಅವರವರಿಗೆ ದೊರೆತ ಸಹವಾಸದಂತೆ ಅವರ ಮನಸ್ಸು ಬೆಳೆಯುವದು. ಸ್ತ್ರೀವರ್ಗದವರಿಗಾದರೆ ಆ ನಿರ್ಬಂಧವಿಲ್ಲ ಅವರು ಕೇವಲ ಬಾಲ್ಯ ವಯಸ್ಸಿನವರಾಗಿದ್ದಾಗಲೇ ತಾಯಿಯಿಂದ ಶಿಕ್ಷಿತೆಯರಾಗಿ ಮುಂದಿಯಾದ ಮೇಲೆ ಗೃಹಕಾರ್ಯವನ್ನು ನಿರ್ವಹಿಸುವಂತಹ ಜ್ಞಾನವನ್ನು ಪಡೆಯಬೇಕಾಗಿರುವದು. ಇವರು ತಮಗೆ ಲಭಿಸುವ ವಿರಾಮ ಕಾಲವನ್ನು ನೆರೆಮನೆಯವರೊಡನೆ ಮನಸ್ಸಿಗೆ ತೋರಿದಂತೆ ಕಾಡು ಹರಟೆಗಳಿಂದ ಕಳಯುವದಕ್ಕೆ ಹೋಗದೆ, ತಮ್ಮ ಕರ್ತವ್ಯದಕ್ಷತೆಗೆ ಸಹಕಾರಿಗಳಾಗುವಂತೆ ಸದ್ಗ್ರಂಥಗಳನ್ನು ಸಮಾಲೋಚಿಸುವದಕ್ಕೂ, ಅತ್ಯುತ್ತಮವಾದ ಜ್ಞಾನವನ್ನುಂಟುಮಾಡುವಂತಹ ಪುರಾಣ-ಇತಿಹಾಸಾದಿ ಮಹನೀಯರ ಜೀವನಚರಿತ್ರೆಗಳನ್ನು ನೋಡಿ ತಿಳಿದುಕೊಳ್ಳುವದಕ್ಕೂ ಅವಶ್ಯವಾದ ವಿದ್ಯೆಯನ್ನು ಅಭ್ಯಾಸ ಮಾಡಿದ್ದರೆ, ಉತ್ತರೋತ್ತರ ತಮ್ಮನ್ನಾಳುವ ಪತಿರಾಜರ ಇಷ್ಟಾನುಸಾರ ಶಿಕ್ಷಿತರಾಗಿ ವೃದ್ಧಿಯನ್ನು ಪಡೆಯುವರು.

ಸ್ವದೇಶದಲ್ಲಿಯೋ, ವಿದೇಶದಲ್ಲಿಯೋ, ಸ್ವಕೀಯರಲ್ಲಿಯೋ, ಪರಕೀಯರಲ್ಲಿಯೋ ದುಡಿದು ಕಷ್ಟಪಟ್ಟು ಸಂಪಾದಿಸಬೇಕಾದುದು

ಪುರುಷವರ್ಗದವರ ಪಾಲಿಗೆ ಬಂದಿದೆ  ಪತಿರಾಜರು ದುಡಿದು ತಂದ ದ್ರವ್ಯವನ್ನೂ—ಪದಾರ್ಥಗಳನ್ನೂ-ಭದ್ರವಾಗಿಟ್ಟು, ಸಮಯಕ್ಕೆ ಒದಗುವಂತೆ ವಿತರಣೆಯಿಂದ ಖರ್ಚು ಮಾಡುವ ಶಕ್ತಿಯು ( ನಿಪುಣತೆ ? ) ಸ್ತ್ರೀವರ್ಗಕ್ಕೆ ಸೇರಿದುದಾಗಿದೆ  ಈ ಭಾರವನ್ನು ಪುರುಷವರ್ಗದವರ ಮೇತೆ ಹೊರೆಯಿಸಿ, ಅವರ ಪಾಲಿಗೆ ಬಂದಿದ್ದ ಭಾರವನ್ನು ಸ್ತ್ರೀವರ್ಗದವರು ಹೊರುವದಕ್ಕೆ ಇಚ್ಛಿಸುವ ಪಕ್ಷದಲ್ಲಿ ಹೇಗೂ ಉತ್ತಮವೆನಿಸಲಾರದು  ಮತ್ತು ಪುರುಷವರ್ಗದವರ ಭಾರವನ್ನು ತಾವು ಹೊತ್ತ ಮಾತ್ರಕ್ಕೆ ಸ್ತ್ರೀವರ್ಗದ ಮೇಲೆ ಬಿದ್ದಿರುವ ಎಲ್ಲಾ ಭಾರವನ್ನೂ ಪುರುಷವರ್ಗದವರ ಮೇಲೆ ಹೊರೆಯಿಸುವದಕ್ಕೂ ಸಾಧ್ಯವಿಲ್ಲ  ಅದನ್ನು ಪುರುಷವರ್ಗದವರು ನಿರ್ವಹಿಸುವದಕ್ಕೂ ಸಮರ್ಥರಲ್ಲ  ಇದರ ತತ್ವವನ್ನು ನಮ್ಮ ಸೋದರಿಯರೇ ವಿಚಾರಮಾಡಿ ತಿಳಿದುಕೊಳ್ಳಬೇಕಾಗಿದೆಯೆಂದು ಸೂಚಿಸಿ, ಈ ಲೇಖವನ್ನು ಇಷ್ಟಕ್ಕೆ ನಿಲ್ಲಿಸಿರುವೆನು

( ಮುಂದೆ ಸಾಗುವದು )

**ಬಹುಮಾನ ಸ್ಪರ್ಧೆ!** (ಭಗಿನಿಯರಿಗೆ ಮಾತ್ರವೇ)

# ಸ್ತ್ರೀ ಶಿಕ್ಷಣದ ಸುಧಾರಣೆ

ಎಂಬ ವಿಷಯದಲ್ಲಿ

**ಲೇಖನದ ವರ್ಗಗಳನ್ನನುಸರಿಸಿ,**

## ಸನ್ಮಾನ

೧ ನೇ ತರಗತಿಗೆ—ಸುಶೀಲೆಯಿಂದ ಮೊದಲು ವಿಕ್ರಮದ ವರಗೆ ಎಲ್ಲಾ ಗ್ರಂಥಗಳೂ ಕೊಡಲ್ಪಡುವವು.

೨ ನೇ ತರಗತಿಗ—ಸುಶೀಲೆಯಿಂದ ವಿರಾಗಿಣಿಯ ವರೆಗೆ ಕೊಡಲ್ಪಡುವವು ಉಳಿದವುಗಳಿಗೆ ಅವುಗಳ ಅರ್ಹತೆಯಿದ್ದಂತೆ ಮಾಲೆಯಲ್ಲಿ ಆವದಾದರೂ, ಒಂದೊಂದು ಪುಸ್ತಕಗಳನ್ನು ಕೊಡಲು ಗೊತ್ತಾಗಿರುವದು

## ನಿಯಮವು.

೧. ಲೇಖನದಲ್ಲಿ ನಮ್ಮ ಕರ್ನಾಟಕ ಮಹಿಳೆಯರ ವಿದ್ಯಾಭ್ಯಾಸವು ಯಾವ ಕ್ರಮವನ್ನನುಸರಿಸಬೇಕೆಂಬುದನ್ನೂ, ಶಿಕ್ಷಣದ ಮುಖ್ಯ ಗುರಿಯು ಹೇಗಿರಬೇಕೆಂಬುದನ್ನೂ ಸ್ತ್ರೀಯರ ನೈಜವಾದ ಅಭಿಪ್ರಾಯಗಳಿಗ ತಕ್ಕಂತೆ ಸ್ಪಷ್ಟವಾಗಿ ಬರೆದಿರಬೇಕಲ್ಲದೆ, ಲೇಖನವು ಕಾಲುಗಜದ ೧೦ ಪುಟಗಳಿಗೆ ಮೀರದೆ, ಮತ್ತು ಕಾಗದದ ಒಂದೊಂದೇ ಪಕ್ಕದಲ್ಲಿ ವಿರಳ ವಿರಳವಾಗಿ ಬರೆದು ಕಳುಹಬೇಕು

೨ ಲೇಖನವು ಮಾರ್ಗಶಿರ ಶುದ್ಧ ದ್ವಾದಶಿ (೧೫-೧೨ ೧೮)ಯೊಳಗಾಗಿ ಬಂದರೆ ಸ್ವೀಕರಿಸಲ್ಪಡುವದು, ಆ ಬಳಿಕ ಬಂದವುಗಳಿಗೆ ಸನ್ಮಾನವು ದೊರೆಯಲಾರದು

೩ ಲೇಖನವನ್ನು ಕಳುಹುವ ನಮ್ಮ ಭಗಿನಿಯರು ತಮ್ಮ ಹೆಸರು, ನಿವಾಸ-ಸ್ಥಳ, ಅಂಚೆಗಳನ್ನು ಸ್ಪಷ್ಟವಾಗಿ ಕಾಣಿಸಿರಬೇಕು

**ವಿ. ಸೂ** —ಲೇಖನವನ್ನು ಕಳುಹುವವರು ಈ ಕೆಳಗಿನ ವಿಳಾಸಕ್ಕೇ ಬರೆಯಬೇಕು

**ತಿರುಮಲಾಂಬಾ**

ಸಂಪಾದಯಿತ್ರಿ— ಸತೀಹಿತೈಷಿಣೀ ಮತ್ತು ನಂದಿನಿ,

**ಮಾತೃಮಂದಿರಂ, ನಂಜನಗೂಡು**

॥ ಶ್ರೀಃ ॥

ಸರ್ವಂಸಹಾಯೈ ನಮಃ

# ಭಾವನಾಲೋಕ

"ಅಸತ್ಪಥೇಷು ಸತತಂ ವ್ರಜಾಮಿ । ಗರ್ವೋರ್ಮಿಹಸ್ತೇ ಗತೋಹಂ ಜಪಾಮಿ ॥
ತ್ವಂ ಮುಕ್ತಿದಾತ್ರೀತಿ ಸತಾಂ ಶೃಣೋಮಿ ಯೋಗೇಶ್ವರಿ! ತ್ವಾಂ
ತತ ಆಶ್ರಯಾಮಿ ॥"[1]

## ದ್ವಿತೀಯ ದೃಶ್ಯ.

*

"ಬಂದೆ ನಮ್ಮಾ,—ಬಂದೆ ನಿದೊ ಬಂದ"

ಹೀಗೆಂದುದೇ ತಡೆ,—ನಾನೇನೋ ಹೊರಟುಬಿಟ್ಟೆನು! ಅಮ್ಮನನ್ನು— ಆ ನನ್ನ ಸ್ವರ್ಗೀಯಪ್ರೇಮಕ್ಕೆ ನಿಧಿಸ್ವರೂಪಿಣಿಯಾದ ಅಮ್ಮನನ್ನು,— ನೋಡಿ, ನುಡಿಯಿಸಿ ನಲಿದಾಡಬೇಕೆಂಬುದೊಂದೇ ನನ್ನ ಗುರಿ ಈ ಜಗತ್ತಿನಲ್ಲಿ ಅಮ್ಮನನ್ನು ಬಿಟ್ಟು ನನಗಿನ್ನಾವುದೂ ಬೇಕಾಗಿ ತೋರಲಿಲ್ಲ ಸರಿಯೆ, ಹಿಂದುಮುಂದು ನೋಡದೆ ಹೊರಟು ಬಿಟ್ಟುದೇನೋ ಆಯಿತು,—ಆದರೆ, ಹೋಗುವನದೆಲ್ಲಿಗೆ? ನನ್ನ ಗುರಿಯನ್ನು ಕಂಡುಹಿಡಿಯುವನದೆಂದಿಗೆ? ಆ ನನ್ನ ತಾಯಿಯನ್ನು ನಾನು ಎಲ್ಲಿ, ಹೇಗೆ, ನೋಡುವೆನು? ನನಗೆ ದಾರಿ ತೋರುವರದಾರು? ಅವಳದೆಲ್ಲಿರುವಳೆಂದು ತಿಳಿಯಲಿ? ಆರನ್ನು ಕೇಳಲಿ? ಆರ ಜತೆಗೊಂಡು ಹೋಗಲಿ?

---

[1] ಈ ಶ್ಲೋಕವು, ಕಾಶೀಯೋಗಾಶ್ರಮದ ಮ್ಯಾನೇಜರ (ಕಾರ್ಯದರ್ಶಿ) ರೂ, ನಮ್ಮ ಪೂಜ್ಯ ಭ್ರಾತೃವರ್ಗೀಯರೂ, ಆಗಿರುವ ಶ್ರೀ ಸ್ವಾಮಿ ಶಿವಾನಂದಜೀಯವರು ಕಳುಹಿಕೊಟ್ಟ—'ಮಾಯೋಗೇಶ್ವರಿ"ಯಿಂದ ಉದ್ಧೃತವಾಗಿದೆ. ಇದನ್ನು ಮತ್ತೆ ಕೆಲವು ಕೆಲವು ಅತ್ಯುತ್ತಮ ಜ್ಞಾನೋತ್ತೇಜಕ ಗ್ರಂಥಗಳೊಡನೆ ಕಳುಹಿದ ಆ ನಮ್ಮ ಭ್ರಾತೃಶ್ರೇಷ್ಠರವರ ಸೌಜನ್ಯವು ನಮಗೆ ಚಿರಸ್ಮರಣೀಯವಾಗಿದೆ. (ಸಂ)

ಎಷ್ಟೆಷ್ಟು ಗಣಿಸಿ, ಗುಣಿಸಿ ನೋಡಿದರೂ ಬಗೆಗಾಣದು ! ಮುಂದೋರದು ನಿಂದಿರುವದಕ್ಕೂ ಆಗದು. ಆದರೂ ಒಂದು ಬಾರಿ ಎತ್ತಿ ಮುಂದಕ್ಕಿಟ್ಟ ಹೆಜ್ಜೆಯನ್ನು ಮತ್ತೆ ತೆಗೆದು ಹಿಂದಕ್ಕಿಡಬೇಕೆಂದರೆ, ನನ್ನಿಂದ— ಮಾತೆಯ ಮುದ್ದಿನ ಕಂದನಾದ ನನ್ನಿಂದ— ಅದೆಂದಿಗೂ ಸಾಗದ ಕೆಲಸವೇ !!! ಮತ್ತೇನು ಮಾಡುವೆನು ? ಸುಮ್ಮನಿರಲಾರದ ಚಿಂತನೆಯನ್ನು ಅಡಿಮೇಲು ಮಾಡುತ್ತ ನಿಂತೆನು ಅದರಿಂದಲೂ ಫಲವಿಲ್ಲದೆ ಕಡೆಗೆ ದಶದಿಕ್ಕುಗಳೂ ಪ್ರತಿಧ್ವನಿಸುವಂತೆ ನನ್ನ ಭ್ರಾಂತಿ ಜೀವನವನ್ನು ಹಳಿಯುತೊಡಗಿ, ಆತ್ಮಸಂತಾಪವು ಹೆಚ್ಚಲು, ಆ ತಾಯಿಯ ಜಗದ್ವ್ಯಾಪಕತ್ವವನ್ನು ಕುರಿತು ಹಲುಬಿದೆನು ಹಲುಬುತ್ತಿದ್ದ ನನಗೆ, ಮೊಸಳೆಯ ಬಾಯ್ಗೆ ಸಿಕ್ಕಿದ ಆನೆಯು ಅರೆಬಾಯ್ಬಿಟ್ಟು, ಹಲುಬಿದಂತೆ ಎಚ್ಚರಿಕೆ ಹೊಂದಿ, ಆ ನನ್ನ ತಾಯಿಯ ಬ್ರಹ್ಮಾನಂದಸ್ವರೂಪವನ್ನು ಚಿಂತಿಸಿ ಹೀಗೆಂದು ಪ್ರಾರ್ಥಿಸಿದೆನು—

" ಅಸಾರ ಸಂಸಾರ ಸಮುದ್ರ ಮಧ್ಯೆ | ಭ್ರಾಮ್ಯಂತಿಜೀವಾಃ
ಕೃತಕಾರ್ಯ ಧೀರಾಃ || ವೀಕ್ಷ್ಯೇತಿಮಾತ ಸತತಂ ಬಿಭೇಮಿ |
ಯೋಗೇಶ್ವರಿ' ತ್ವಾಂ ತತ ಆಶ್ರಯಾಮಿ || " ( ೨|| )
" ತವತ್ರಿದೇವಾಸ್ತ್ರಿಗುಣಾವತಾರಾ ಸ್ತ್ವಮೇವ ಧೀರಾ ಭುವ
ನೇಷು ಸಾರಾ || ತದೋದಯಾಸಿಂಧುವರಾಂ ನಮಾಮಿ |
ಯೋಗೇಶ್ವರಿ'ತ್ವಾಂ ತತ ಆಶ್ರಯಾಮಿ || " (೬) ಎಂದು, ಮತ್ತೂ

* " ಅರಣ್ಯೇ ರಣೇ ದಾರುಣೇ ಶತ್ರುಮಧ್ಯೆ | ಅನಲೇ ಸಾಗರೇ
ಪ್ರಾಂತರೇ ರಾಜಗೇ ಹೇ || ತ್ವಮೇಕಾಗತಿರ್ದೇವಿ ನಿಸ್ತಾರ
ಹೇತು | ನಮಸ್ತೆ | ಜಗತ್ತಾರಿಣಿ ತ್ರಾಹಿ ದುರ್ಗೆ || ೪ ||
ಶರಣಮಪಿಸುರಾಣಾಂ | ಸಿದ್ಧವಿದ್ಯಾಧರಾಣಾಂ | ಮುನಿದನುಜ
ನರಾಣಾಂ ವ್ಯಾಧಿಭಿ ಪೀಡಿತಾನಾಂ || ನೃಪತಿ ಗೃಹಗತಾನಾಂ-
ದಸ್ಯುಭಿಸ್ತ್ರಾಸಿತಾನಾಂ | ತ್ವಮಸಿಸರಣಮೇಕಾ ದೇವಿದುರ್ಗೇ
ಪ್ರಸೀದ || ೬ || "

---

* ಈ ಶ್ಲೋಕವು ಕಲ್ಕತ್ತಾ ಧರ್ಮಪ್ರಚಾರ-ಗ್ರಂಥಾವಲಿಯ ಸಂಖ್ಯೆ ೧ ಶ್ರೀ ಭೂಪೇಂದ್ರನಾಥ ಸನ್ಯಾಲಕೃತ ' ದಿನಚರ್ಯ್ಯಾ'' ಪುಟ ೧೨೦, ಶ್ಲೋ ೪-೬ಗಳಿಂದ ಉದ್ಧರಿಸಿವೆ

ಎಂದೂ, ಇನ್ನೂ ಅದೇನೇನನ್ನೋ ಹೇಳುತ್ತಿದ್ದವಳು ಕಡೆಗೆ ಎಲ್ಲಿಗೆ ಕರೆದೊಯ್ದರೆ ಅಲ್ಲಿಗೆ ಹೋಗುವೆನೆಂದು ಒಂದೇ ನಿಶ್ಚಯ ಮಾಡಿ ನಡೆದೆನು.

ನಾಲ್ಕಾರು ಮಾರು ದೂರ ನಡೆದು ಹೋದ ಬಳಿಕ, ಹಾಗೆಯೇ ನೆನಪಾಯಿತು— ಉಡುರಾಜನಾಡಿದ್ದ “ ಮನೋಜಯ ನಂದನದಲ್ಲಿ ನಮ್ಮಮ್ಮನಿರುವಳೆಂಬುದು ” ಹಾಗೆಯೇ ಧ್ಯಾನಿಸಿದೆನು ಆದರೆ, ಆ ನಂದನದ ನೆಲೆ-ಸುಳಿವುಗಳನ್ನು ಮಾತ್ರ ನಾನರಿತವಳಲ್ಲ ಮತ್ತೇನು ಮಾಡಲಿ ? ಹಾಗೆಯೇ ಗುಣಿಸಿ ನೋಡಿದೆನು ಆ ವರೆಗ ವಿಸ್ಮೃತಿ (ಮರವ) ಹೊಂದಿದ್ದ ನನಗೆ ಹಾಗೆಯೇ ನನ್ನ ಅಕ್ಕನ,— ಆ ನನ್ನ, ಒಡನಾಡಿಯೂ, ಹಿತೈಷಿಣಿಯೂ, ಪ್ರಜ್ಞಾಧಾರಿಣಿಯೂ ಆಗಿರುವ ಅಕ್ಕನ ನೆನಪಾಯಿತು ಅಕ್ಕನ ನೆನಪಾದ ಕ್ಷಣದಿಂದಲೇ ನಾನು, ಅಕ್ಕನನ್ನು ಕೇಳದ, ಅಕ್ಕನೊಡಗೂಡದೆ ಹೊರಟು ಬಂದುದಕ್ಕಾಗಿ ಪಶ್ಚಾತ್ತಾಪದಿಂದ ತಪಿಸಿದೆನು ಸಂತಾಪಾತಿಶಯದಿಂದ ಆರ್ತಳಾದ ನಾನು ಆಗ ಬಾಯ್ದೆರೆದು ಅಕ್ಕನನ್ನು ಕುರಿತು ಹುಚ್ಚಳಂತೆ ಮೊರೆಯಿಟ್ಟೆನು — ಓ, ಅಕ್ಕಾ! ಹಿತೈಷಿಣೀ ! ನನ್ನ ಅಕ್ಕಾ ! ಅಕ್ಕಾ!! ನೀನೆಲ್ಲಿ ಹೋದೆ ? ಕೋಪಗೊಂಡು ಹೋದೆಯಾ ? ಈ ತಂಗಿಯಲ್ಲಿ, ಈ ಅರಿವಿಲ್ಲದ ಎಳೆದಂಗೆಯಲ್ಲಿಯೂ ಕೋಪವೇ ? ಹುಡುಗು-ತನದಿಂದ ದುಡುಕಿ ಬಂದು, ಈಗ ಇಲ್ಲಿ ತೊಡಕಿ, ಮಿಡುಕಾಡುತ್ತಿರುವೆನಲ್ಲಾ !! ಕಾಣೆಯೇ ಅಕ್ಕಾ ? ನಿನ್ನ ಪ್ರೀತಿ-ದಯೆ-ಉದಾರ-ಭಾವಗಳೆಲ್ಲವೂ ಅದೇನಾದುವು? ಅಯ್ಯೋ ! ಅಕ್ಕಾ ! ಇಷ್ಟಾದರೂ ಬಾರದೆ ಉಪೇಕ್ಷಿಸುತ್ತಿರುವದನ್ನು ನೋಡಿದರೆ, ಕಾಲಜ್ಞಳಾದ ನೀನು ನನ್ನೀ ಅವಸ್ಥೆಯನ್ನು ನೋಡಿ, ಬೇಕೆಂದೇ ಬಿಟ್ಟು ಹೋಗಿರುವೆಯೆಂದು ಕಾಣುವದು ಅಯ್ಯೋ ! ತಪ್ಪಾಯಿತು, ಅಕ್ಕಾ ! ನನ್ನದು ಬಲು ತಪ್ಪಾಯಿತು. ಮನ್ನಿಸು, ನೀನೊಬ್ಬಳೇ ಅಮ್ಮನ ಬಳಿಗೆ ಹೋಗುವದು ಸರಿಯಲ್ಲ. ನನ್ನನ್ನೂ ಜತೆಗೊಂಡು ಹೋಗು ! ಉಡುರಾಜನಂತೂ ಹೇಳಿ ಹೋದನು ನೀನೇಕೆ ಏನೊಂದೂ ಹೇಳದೆ, ಕೇಳದೆ, ಕೈಬಿಟ್ಟೆ? ಮರೆತಿದ್ದೆನೆಂದೇ ? ಮರವೆಯೆಂಬುದಾರಿಗಿಲ್ಲ ?—ಅಕ್ಕೆ-ಅದರಲ್ಲಿಯೂ ಎಳೆದಂಗೆಯ ಎಳೆ ಮಿದುಳಲ್ಲವೆ ? . ..... ...........’

ಅಳುತ್ತಿದ್ದ ನನಗೆ ಅಕ್ಕನ ಕಂಠರವದಿಂದಲೇ ಉತ್ತರವು ದೊರೆತಿತು,—ಅದೇನೆಂದು ?— ‘ ಎಚ್ಚತ್ತಿರು; ತಂಗೀ ! ಎಚ್ಚತ್ತಿರು ಅಳುವುದು ಕೂಡದು ತಿಳಿಗಣ್ಣುಗಳನ್ನು ತೆರೆ,— ಮೇಲಕ್ಕೇರಿ ಬಾ,—ಪರಿಭಾವಿಸಿ ನೋಡು ಹಿಂದು-ಮುಂದಿರುವದೇನೆಂದು ವಿಚಾರ ಮಾಡು, ಆ ಬಳಿಕ ನೋಡುವೆ—ನಮ್ಮಮ್ಮನನ್ನು ! ’

ನಾನು ಆತುರದಿಂದ ತಲೆಯೆತ್ತಿ ನೋಡಿದೆನು — ಗಗನಮಂಡಲದಲ್ಲಿ ಅದ್ಭುತ ಪ್ರಕಾಶ ! ಮೋಡವಿಲ್ಲ ಹಾಗೆಯೇ ನಿಂತು ನೋಡುತ್ತಿದ್ದೆನು. ಅದೆಲ್ಲಿಂದಲೋ ಬಂದ ಬಿರುಗಾಳಿಯು ಅರೆಗಳಿಗೆಯಲ್ಲಿ ನನ್ನನ್ನು ಸೆಳೆದೊಯ್ದು ಬಿಟ್ಟಿತು ಅದೆಲ್ಲಿಗೆ ? ಗಗನರಾಜ್ಯನದ ವ್ಯಾಖ್ಯಾನ ಮಂಟಪಕ್ಕೆ!!! (?)

ಸರಿ, ಗಾಳಿಯು ನನ್ನನ್ನಲ್ಲಿ ಬಿಟ್ಟದ್ದೇ ತಡ, ನಾನು ಅಮ್ಮನನ್ನೂ ಅಕ್ಕನನ್ನೂ ಕೂಗುತ್ತ ಕಣ್ದೆರೆದು ನೋಡಿದನು ವಿಪರೀತದೃಶ್ಯ !!! ಅಲ್ಲಿಯ ಪ್ರಕಾಶವು ವಿಜಾತೀಯವು, ಅಲ್ಲಿದ್ದ ವ್ಯಕ್ತಿಗಳೂ ವಿಜಾತೀಯಗಳು ಅವರ ವೇಷ ಭೂಷಣಗಳಂತೂ ಹೇಳಬೇಕಾಗುದೇ ಇಲ್ಲ ಇನ್ನು ಅವರು ಮಾಡುತ್ತಿದ್ದುದು ಅದೇನಾಗಿರಬಹುದು ? ಹೀಗೇಕೆ ತರ ಕಳಗಾಗಿ ನಿಂತು, ಗುಂಪುಕಟ್ಟಿಕೊಂಡು ಕೂಗುತ್ತಿರುವರು ? ಇದೇನು—ಸಂತೆಯ ಮಾರಾಟವೋ, ಹೋರಾಟವೋ, ಬರಿಯ ಕೂಗಾಟವೋ ಹೇಳಲಾಗದಂತಿದೆಯೇತರಿಂದ ? ಇವರು, ಹೀಗೆ ಒಬ್ಬರಿಗೊಬ್ಬರು ಹೆಚ್ಚು ಹುರುಪಿನಿಂದ ಕೈಕಾಲುಗಳನ್ನು ಜಡಿದು-ಬಡಿದು ಗಡಿಬಿಡಿಮಾಡುತ್ತಿರುವ ಉದ್ದೇಶವಾದರೂ ಏನಾಗಿರಬಹುದು ?

ನನಗಾವುದೂ ಬಗೆಹತ್ತಲಿಲ್ಲ ನಾನಾ ಹೊಸಬಗೆಯ ನೋಟವನ್ನು ಕಂಡು, ಕಕ್ಕುಬಿಕ್ಕಾಗಿ ಹೋದೆನು,—ಮತ್ತು ಕಂಡು—ಕೇಳದೆಡೆಗೆ ನನ್ನನ್ನೇಕೆ ಕರೆತಂದಳೆಂದು, ವಿಧಿಯನ್ನೂ, ಆ ಹಾಳು ಬಿರುಗಾಳಿಯನ್ನೂ ಬಗೆಬಗೆಯಾಗಿ ಹಳಿದು, ಕಳವಳದಿಂದ ಸುತ್ತಲೂ ನೋಡಿದೆನು ಅದೇ ಕೂಟದ ಒಂದು ಕಡೆಯ ಮೂಲೆಯಲ್ಲಿ ತಲೆಬಾಗಿ ಆಲೋಚನೆಯಲ್ಲಿ ಗಮಕಿಯಾಗಿ ಕುಳಿತಿದ್ದ ವ್ಯಕ್ತಿಯ ಕಡೆಗೆ ನನ್ನ ದೃಷ್ಟಿಯು ಹೋಯಿತು. ನಾನು ಆ ವ್ಯಕ್ತಿಯನ್ನು ಕಂಪಾಕ್ಷ

ಣನೇ, ಕೇವಲ ಆತ್ಮೀಯ ಬಂಧುವನ್ನು ನೋಡಿದಷ್ಟು ಸಂತೋಷ ವನ್ನು ಹೊಂದಿ, ಕೌತುಕಗೊಂಡಲ್ಲಿಂದ ಹಾರಿಬಂದು, ವ್ಯಕ್ತಿಯ ಮುಂದೆನಿಂದು ಆತುರದಿಂದ ನೋಡಿದೆನು ವ್ಯಕ್ತಿಯು ಮತ್ತಾರೂ ಅಲ್ಲ, ನನ್ನ ಮೇಲ್ಮೆಗೆ ಕಾರಣನಾದ ಕಿರಿಯಣ್ಣ " ಕೇಸರಿ " ಯೇ ಅವನೆಂದು ತಿಳಿದೆನು ಉತ್ಸಾಹಗೊಂಡು ಕೇಳಿದೆನು — " ಅಣ್ಣ ! ಅಣ್ಣ !! ಕಿರಿಯಣ್ಣ !!! ಇದೇನಿಲ್ಲಿ? ಹೀಗ ನೆಲವನ್ನೇ ನೋಡುತ್ತ ಕುಳಿತಿರುವುದು ? "

ಕೇಸರಿಯು ತಲೆಯೆತ್ತಿ ನೋಡಿ, ವಾತ್ಸಲ್ಯದಿಂದ ಬಳಿಯಲ್ಲಿ ಕುಳ್ಳಿರಹೇಳಿ, ವಾತ್ಸಲ್ಯದಿಂದ ಕೇಳಿದನು — " ಏಕೆ? ತಂಗಿ! ಇದೇ ಕಿಲ್ಲಿಗೆ ಬಂದೆ? ಆರನ್ನು ಹುಡುಕುತ್ತಿರುವೆ? ಆವ ಕೆಲಸಕ್ಕಾಗಿ? "

ನಾನು — ಆತುರದಿಂದ ಹೇಳಿದೆನು,—" ಅಣ್ಣ ! ನಾನಾಗಿ ಇಲ್ಲಿಗೆ ಬರಲಿಲ್ಲ. ಆ ಕೆಟ್ಟ ಬಿರಿಗಾಳಿಯು ನೆಳತಂದಿಲ್ಲಿ ಬಿಟ್ಟಿತು ಅಮ್ಮನೆಲ್ಲಿರುವಳೆಂದು ನೀನು ಬಲ್ಲೆ? ಆ ಸ್ಥಳವದಾವದೆಂದು ತಿಳಿಯೆ ಹೇಳು ? "

ಕೇಸರಿ —' ಕಿರುದಂಗೆ ! ಅಮ್ಮನು ' ಮನೋಜಾಯ"ಸಂದನ ದಲ್ಲಿರುವಳೆಂದು ಉಡುರಾಜನು ನಿನಗೆ ಹೇಳಲಿಲ್ಲವೆ? ಮರೆತೆಯಾ?

ನಾನು — ಇಲ್ಲ, ಅಣ್ಣಾ! ನಾನು ಮರೆತಿಲ್ಲ ಆದರೆ ಆ ಸಂದನ ಕ್ಕೆ ಹೋಗುವ ದಾರಿಯನ್ನು ನನಗಾತನು ಹೇಳಲಿಲ್ಲ "

ಕೇಸರಿ — ಕಿರುನಗೆಯಿಂದ ಹೇಳಿದನು,—" ಸರಿಯೆ, ಹಾಗಿ ದ್ದರೆ, ನಿನ್ನ ಅಕ್ಕನನ್ನು ಬಿಟ್ಟು ನೀನೊಬ್ಬಳೇ ಇಲ್ಲಿಗೆ ಬಂದೆಯೇಕೆ ? ನಿನಗೆ ಆವಳು ದಾರಿಯನ್ನು ತೋರತೊಡಗಿಲ್ಲನೆಂದಳೋ ! "

ನಾನು — ದುಗುಡದಿಂದ ಹೇಳಿದೆನು,— " ಅಣ್ಣ ! ಅವಳೇ ನನ್ನೂ ಹೇಳಿದುದಿಲ್ಲ ಈ ವಿಷಯದಲ್ಲಿ ನನ್ನಿಂದಲೇ ತಪ್ಪಾಗಿರು ವದು "

ಕೇಸರಿ — ಮೊದಲಿನಂತೆಯೇ—" ಹೇಗೆ? ಅದಾವ ತಪ್ಪು!"

ನಾನು — " ನಾನು ಬಲು ಬಳಲಿ ಬಂದಿದ್ದುದರಿಂದ ಚಿಂತನೆ ಯಲ್ಲಿ ತೊಡಗಿ ಮೈಮರೆತು ಕುಳಿತಿದ್ದಾಗಲೇ ನನ್ನ ಬಳಿಗೆ ಉಡು

ರಾಜನು ಬಂದು ಅವ್ವನ ವಿಚಾರವನ್ನು ಹೇಳಿ ಹೋದನು ಅವ್ವನನ್ನು ಕಾಣಬೇಕೆಂಬ ಒಂದೇ ತವಕದಲ್ಲಿದ್ದ ನನಗಾವೇಳೆಯಲ್ಲಿ ಅಕ್ಕನ ನೆನೆವಾಗಲೀ, ಮತ್ತಾರ ನೆನೆವಾಗಲೀ ಉಂಟಾಗಲಿಲ್ಲ. ನಾನಲ್ಲಿ ಅರಗಳಿಗೆಯೂ ನಿಲ್ಲದೆ, ಆರಲ್ಲಿ ಹೇಳಿ-ಕೇಳದೆ, ಹಾರಿ ಬಂದು ಬಿಟ್ಟೆನು ''

ಕೇಸರಿ , ತತೆದೂಗಿ-'' ಇಷ್ಟು ಅತುರಪಡಬಹುದೇ ತಂಗಿ ? ಆತುರದಿಂದ ಕೆಲಸವು ನೆಟ್ಟಗಾಗುವದೆಂದಿದ್ದೆಯಾ ? '' (ಸಂತಕೂಟದ ಕಡಗೆ ಕೈತೋರಿಸಿ )-- 'ಇತ್ತ ನೋಡು, ಇವರು ಮಾಡುತ್ತಿರುವ ಕೆಲಸವಲ್ಲವೂ ಆತುರದ, ಅವಿಚಾರದ, ಆಶಾಧಿಕ್ಯದ, ಬರಿಯ ಸಾಹಸ ಪ್ರಯತ್ನ ಮಾತ್ರವಾಗಿದೆ '

ನಾನು — ಕುತೂಹಲಗೊಂಡು ಕೇಳಿದೆನು-''ಅಣ್ಣ ! ನನಗೆ ತಿಳಿಯಲಲ್ಲ ಇದಾವ ಸಂತೆ ? ಇವರಾರು ? "

ಕೇಸರಿ —ನಗುವೊಗನಾಗಿ-'' ತಂಗಿ ! ಕೇಳು ಇದೇ ತಾರುಮಾರು ಹೋರಾಟದ, ಬರಿಯ ಕೂಗಾಟದ ಸಂತೆ !! ನಮ್ಮವ್ವನ ಮಕ್ಕಳೆನ್ನಿಸಿರುವ ಮಹಾಜನರಲ್ಲಿ ಇವರೂ ಕಲವರು "

ನಾನು —ಅಣ್ಣ! ನನಗೆ ಅರ್ಥವೇ ಆಗಲಲ್ಲ ನಿನ್ನ ಒಗಟಿನ ಇದೇ ವೇಳೆಯೆಂದು ತಿಳಿದಿಯಾ ? ಬೇಡ-ಅಣ್ಣ ! ಬಿಡಿಸಿ ಹೇಳು ನಾನಿದನ್ನು ಬಿಡಿಸಲರಿಯದ, ತಿಳಿವಿಲ್ಲದ ಎಳದಂಗೆಯೆಂದು ತಿಳಿದೂ ಹೀಗೆ ಹೇಳುವದು ಸರಿಯಲ್ಲ ಇಲ್ಲಿ ನನ್ನ ಅಕ್ಕನಾದರೆ ನಿನ್ನ ಒಗಟೆಯನ್ನು ಬಿಡಿಸಿ, ಮಾರುತ್ತರವಿತ್ತು ಸರಿಯೆನ್ನಿಸುತ್ತಿದ್ದಳು ಇವರು ನಮ್ಮವ್ವನ ಮಕ್ಕಳೆಂದೆಯಲ್ಲವ ? ಹಾಗಿದ್ದರೆ ನಿನಗೂ ನನಗೂ ಒಡಹುಟ್ಟಿದವರೇ ಅಹುದಷ್ಟೇ ?

ಕೇಸರಿ — ತತೆದೂಗಿ ವ್ಯಂಗಸ್ವರದಿಂದ— '' ನಾವು ಮಾತ್ರ ಹಾಗೆಯೇ ಹೇಳಿಕೊಳ್ಳಬೇಕು "

ನಾನು — '' ಹಾಗೆಂದರೆ,— ಮತ್ತಾರೂ ಹೇಳಲಾರರೆಂದಾಯಿತು ? '

ಕೇಸರಿ.—'ಅಹಾ! ಸಂದೇಹವೇನು ? ಮಕ್ಕಳೆನ್ನಿಸುವ ಗುಣ

ಗಿದ್ದರೆ ಮಕ್ಕಳೆಂದೂ, ನಡೆನೋಡಿ, ಒಡನಾಡಿಸಬಲ್ಲ ದೃಢಬುದ್ಧಿ ಯಿದ್ದರೆ ಒಡಹುಟ್ಟಿದವರೆಂದೂ ಹೇಳುವರು ! ಆ ಮಾತು ಹೋಗಲಿ, ಇನ್ನೇನಾದರೂ ಇದ್ದರೇ ಕೇಳು '

ನಾನು — " ಇವರು ಅಡಿಮೇಲಾಗಿ ನಿಂತು ಮಾಡುತ್ತಿರುವ ದೇನು ? '

ಕೇಸರಿ — " ಇದೇ ಈ ಕಾಲದ ನಾಗರಿಕ ಸುಧಾರಕ ಮತ ದಿಂದ ಉದ್ಭೃತವಾಗಿರುವ " ಭ್ರಾಂತಿಯೋಗ " ವೆಂಬ ಹೊಸಬಗೆಯ ತಪಸ್ಸು ! "

ನಾನು – " ಇದನ್ನು ಹೀಗೆ ನಿಂತೇ ಮಾಡಬೇಕೇ ? ಸರಿ ಯಾಗಿ ನಿಂತು ಮಾಡಿದರಾಗದೇ ? "

ಕೇಸರಿ — ' ಹೇಗಾದೀತು ? ತ್ರಿಶಂಕುರಾಯನು ಗುರುವಾಕ್ಯ ವನ್ನು ಮೀರದಿದ್ದರೆ, ಅಥವಾ ದೇವತೆಗಳಿಂದ ದೂಷಿತನಾಗದಿದ್ದರೆ, ಅವನಂತು ಅಡಿಮೇಲಾಗಿ ನಿಂತು ಪ್ರಸಿದ್ಧಿಗೆ ಬರುತ್ತಿದ್ದನೇ ? ಅವ ನಂತು ಮಾಡದುದರಿಂದಲೇ, ತ್ರಿಶಂಕು-ಸ್ವರ್ಗವೆಂದು ಬೇರೊಂದು ಸ್ವರ್ಗವೇ ಪಡಲಾಯಿತು ಹಾಗೆಯೇ ಇವರು ಎಂದಿನಂತೆ ನಿಂತಿ ದ್ದರೆ ಇವರ ವ್ಯವಹಾರದಲ್ಲಿ ಜನರ ಗಮನವಾದರೂ ಬೀಳುತ್ತಿರಲಿಲ್ಲ ವೆಂದು ತಿಳಿ "

ನಾನು — " ಸರಿಯಣ್ಣಾ ! ತ್ರಿಶಂಕುರಾಯನು ಆತುರದಿಂದ ಗುರುವಾಕ್ಯವನ್ನು ಗಮನಿಸದೆ ಸಾಹಸಕಾರ್ಯದಲ್ಲಿ ಪ್ರವರ್ತಿಸಿದನು ಆದರೆ, ಇವರೇನೂ ಹಾಗೆ ಮಾಡಲಿಲ್ಲವಷ್ಟೆ ? "

ಕೇಸರಿ — ತಲೆದೂಗಿ—' ಇಲ್ಲ, ಇಲ್ಲ ಹಾಗೇನೂ ಮಾಡ ಲಿಲ್ಲ "

ನಾನು — ಹಾಗಿದ್ದರೆ, ಇವರೇಕೆ ಹೀಗೆ ತಪಿಸುತ್ತಿರುವರು ? ಈ ಯೋಗಾಭ್ಯಾಸಕ್ಕೆ ವಿಧಾಯಕರಾರಿರಬಹುದು ?

ಕೇಸರಿ — ತಂಗಿ ? ನೀನಿನ್ನೂ ಹಸುಗೂಸು ಅಷ್ಟು ದೂರದ ವಿಚಾರವು ನಿನ್ನ ಸಣ್ಣ ಮಿದುಳನ್ನು ಈಗಲೇ ಹೊಗಬಾರದು ನೀನು ಮಾತ್ರ ಇಂತಹ ಯೋಗಾಭ್ಯಾಸಕ್ಕೆ ಆಶಿಸಬೇಡ ತಿಳಿದೆಯಾ ?

ನಾನು — ಅದೇನಣ್ಣ! ಹಾಗೆ ಹೇಳುವೆ? ಏಕೆ?

ಕೇಸರಿ — ಬಹಳ ಹೊತ್ತು ನಿಂತು ಕೆಲಸವನ್ನು ಕಳೆದುಕೊಳ್ಳ ಬೇಡ, ತಂಗೀ, ಇಷ್ಟು ಹೇಳುವೆನು ಕೇಳು,— ನಮಗೆ ನಮ್ಮ ಆರ್ಯ ಸಂಪ್ರದಾಯವೇ ಶ್ರೇಯಸ್ಕರವು ನಾಗರಿಕತೆಯೆಂದು, ಪರಾನುಕರಣದ ಜಡರೋಗಕ್ಕೆ ಬಲಿಬಿದ್ದು, ನಮ್ಮ ಆರ್ಯರಕ್ತದಲ್ಲಿ ಸೇರಿರುವ ಧರ್ಮಶ್ರದ್ಧೆ, ರಾಜಭಕ್ತಿ, ದೇಶಾಭಿಮಾನ, ಭಾಷಾವಾತ್ಸಲ್ಯ, ಮಾತೃ ಪ್ರೇಮಗೌರವಗಳೇ ಮೊದಲಾದ ಸದ್ಗುಣಗಳನ್ನು, ಅವಿಚಾರದಿಂದ ಹೊಲಗೆಡಿಸಿಕೊಳ್ಳುವ ಆತುರದಿಂದ, ಸ್ವಮತದ ಸಾರತತ್ತ್ವವನ್ನು ತಿಳಿಯಲಾರದೆ, ಅನ್ಯಮತದ ಅರ್ಥಗ್ರಹಣಶಕ್ತಿ ಸಾಲದೆ, ಕಡೆಗೆ, ಹಾಗೂ ಕೆಟ್ಟು, ಹೀಗೂ ಕೆಟ್ಟು ಬೇಗೆಗೊಳಗಾಗುವ ಅಧಮವ್ಯಾಪಾರವು ನಮ್ಮ ಬಳಿಗೂ ಸೇರಬಾರದು ತಿಳಿದೆಯಾ? ತಂಗಿ!

ನಾನು — ತಿಳಿದೆನು ಅಣ್ಣ! ಇವರೆಲ್ಲರೂ ನಮ್ಮಮ್ಮನ ಮಕ್ಕಳೆಂದೆಯಷ್ಟೆ! ಇವರೇನು—ನಾಟಕದ ಬೂಟಕ ವೇಷಧಾರಿಗಳಂತೆಯೇ ಆಟವಾಡುತ್ತಿರುವರು?

ಕೇಸರಿ — ಗೊತ್ತಾಗಲಿಲ್ಲವೇ ತಂಗೀ! ಅಮ್ಮನನ್ನುಳಿದು, ಹಾದಿ-ಬೀದಿಯಮ್ಮನ ಕಾಲುಹಿಡಿದು, ಕಾಡಿ-ಬೇಡಿ ಹಿಡಿದುತಂದಿರುವವರು ಮತ್ತೇನು ಮಾಡಬೇಕು? ತನ್ನ ಕುಲ, ನೆಲೆ, ಕಲೆಗಳೇನಿಂದಿಷ್ಟಾದರೂ ಚಿಂತಿಸದ, ನೆರೆಯಮ್ಮನ ಮನವೊಲಿವಂತೆ ಕುಣಿದಾಡುವದೊಂದೇ ಅಲ್ಲವೆ—ಅವರು ಮಾಡಬೇಕಾದುದು? ಎಂದ ಮೇಲೆ, ಆಟಕ್ಕೆ ತಕ್ಕ ವೇಷ ಭೂಷಣಗಳಿದ್ದೇ ತೀರಬೇಕು?

ನಾನು — ಸರಿ ಇವರಿಲ್ಲಿ ಈಗ ಮಾಡುತ್ತಿದ್ದುದೇನು?

ಕೇಸರಿ — ತಮ್ಮ ಜನಾಂಗವನ್ನು ಏಳಿಗೆಗೆ ತರಲು ಬೇಕಾದ ಸುಧಾರಣೆಗಳನ್ನು ಆಚರಣೆಗೆ ತರಬೇಕಂತೆ! ಅದಕ್ಕಾಗಿ, ಪ್ರತಿಯೊಬ್ಬರೂ ತಮತಮಗೆ ಸರಿತೋರಿದ ಅಂಶಗಳನ್ನು ಇಲ್ಲಿ ಚರ್ಚೆ ಮಾಡುತ್ತಿರುವರು

ನಾನು — ಇದರಿಂದ ಪ್ರಯೋಜನವೇನಾದರೂ ಉಂಟೋ?

ಕೇಸರಿ — ಬರಿಯ ಕೂಗಾಟದಿಂದಲೇ ಫಲವಾಗಬಹುದಾದರೆ, ಗುಡುಗುಗಳ ಆರ್ಭಟವು ಎಷ್ಟೋ ಫಲಕಾರಿಯಾಯ್ತು!

ನಾನು — ಹೋಗಲಿ, ಈ ಪ್ರದೇಶಕ್ಕೆ ಹೆಸರೇನು !

ಕೇಸರಿ — ಕವಿಸೃಷ್ಟಿಯಲ್ಲಿ ಇದೇ ತ್ರಿಶಂಕುಸ್ವರ್ಗವು

ನಾನು — ಹಾಗೆಂದರೆ? ಕವಿಸೃಷ್ಟಿಯೂ ಬೇರೆ ಇದೆಯೋ?

ಕೇಸರಿ — ಇಲ್ಲದೆ? ಧಾರಾಳವಾಗಿದೆ ನೋಡು, ಬ್ರಹ್ಮಸೃಷ್ಟಿಯಲ್ಲಿ ಷಡ್ರಸಗಳಿದ್ದರೆ, ಕವಿಸೃಷ್ಟಿಯಲ್ಲಿ ನವರಸಗಳು ವಿಧಿಸೃಷ್ಟಿಯಲ್ಲಿ, ಇಂತಿಷ್ಟೇ ಪರಿಮಾಣಗಳೆಂಬುದುಂಟು ಇದಕ್ಕೆಂದರೆ, ಕಾಲ, ದೇಶ, ವರ್ತಮಾನಗಳಾವುದಕ್ಕೇ ಆಗಲಿ ಪರಿಮಾಣವೇನೂ ಇರುವದಿಲ್ಲ. ರಾತ್ರಿಯು ಹಗಲಾಗಿಯೂ, ಹಗಲೇ ರಾತ್ರಿಯೂ, ವಿಶಾಲವು ಸಂಕುಚಿತವೂ, ಸಂಕುಚಿತವೇ ವಿಸ್ತಾರವೂ, ಅಸಾರವು ಸಾರವತ್ತಾಗಿಯೂ, ಸಸಾರವು ನಿಸ್ಸಾರವಾಗಿಯೂ ಹೀಗೆ ಕ್ಷಣಾರ್ಧದಲ್ಲಿ ರೂಪಾಂತರಗಳನ್ನು ಹೊಂದಿ ಮುಂದ ಒಂದು ನರ್ತಿಸುತ್ತ, ಆತ್ಯಾಶ್ಚರ್ಯವನ್ನುಂಟು ಮಾಡುವದು ಇಂತಹ ಅದ್ಭುತ ಸೃಷ್ಟಿಯು ಭಾವನಾಲೋಕಕ್ಕೆ ಒಳಪಟ್ಟ ( ಸಮ್ಮೋಹನಾಂತರ್ಗತ ) ಭ್ರಾಂತಿಸ್ವರ್ಗವೇ ಇದಾಗಿರುವದು

ನಾನು — ನೀನೂ ಈ ಸ್ವರ್ಗನಿವಾಸಿಯೋ?

ಕೇಸರಿ — ಇಲ್ಲ ನನ್ನನ್ನು ಇವರ ಗುಂಪಿನಲ್ಲಿ ಸೇರಿಸುವಂತಿಲ್ಲ ಏಕೆಂದರೆ, ನಾನು ನಮ್ಮಮ್ಮನನ್ನು — ಅವಳೆಷ್ಟು ಮುದಿಗೊಡ್ಡಾಗಿ ಕಾಣುತ್ತಿರಲಿ, ಅವಳನ್ನು ಬಿಟ್ಟು ಮತ್ತೊಬ್ಬಳನ್ನು ಅಮ್ಮನೆನ್ನಲಾರೆನು ನಮ್ಮಮ್ಮನಿಗ ಅಹಿತವನ್ನುಂಟುಮಾಡುವ ಕೆಲಸಗಳನ್ನು ಅವುಗಳಿಂದ ಎಷ್ಟೇ ಲಾಭವುಂಟೆಂದು ತೋರಿದರೂ ನಾನವುಗಳನ್ನು ಮಾಡಬೇಕೆಂದು ಮನಸ್ಸಿನಲ್ಲಿಯೂ ಎಣಿಸಲಾರೆನು ಹೀಗಿರುವ ನಾನು ನಮ್ಮಮ್ಮನನ್ನು ಬಿಟ್ಟು, ಅಮ್ಮನ ಸೇವೆಯನ್ನು ಬಿಟ್ಟು, ಈ ಸ್ವರ್ಗದಲ್ಲಿ ವಾಸಿಸಬೇಕೆಂದರೆ ಒಪ್ಪೆನು. ಆದರೆ ಒಂದು ಮಾತು ಭಾವನಾರಾಜ್ಯಕ್ಕೆ ಸೇರಿದ ಪ್ರದೇಶದಲ್ಲೆಲ್ಲಾ ನಾನು ನಿರಾತಂಕವಾಗಿ ಸಂಚರಿಸಿ ಬರಬಲ್ಲೆನು

ನಾನು — ನೀನಿಲ್ಲಿ ಹೀಗೆ ಕುಳಿತಿದ್ದುದರ ಉದ್ದೇಶವೇನು?

ಕೇಸರಿ — "ಇವರ ಸಂತೆಯ ವ್ಯಾಪಾರದ ಒಳಗುಟ್ಟನ್ನು ತಿಳಿದು, ಜಗತ್ತಿಗೆ ಸಾರುವದೊಂದೇ ಉದ್ದೇಶ"

ನಾನು — ಅದರಿಂದ ಪ್ರಯೋಜನ?

ಕೇಶರಿ — "ಇಷ್ಟೆ! ಹಿಂದೆ ನಾನು ನಮ್ಮ ಆತ್ಮೋನ್ನತಿಯ ವಿಚಾರವಾಗಿ ನಮ್ಮಮ್ಮನ, ನಮ್ಮ ಆರ್ಯಧರ್ಮದ ಕರ್ತವ್ಯಜಾಗ್ರತಿ ಹೊಂದಿರೆಂದು, ನಿದ್ರಾಜಡತೆಯಲ್ಲಿದ್ದ ನಮ್ಮ ಬಂಧು-ಭಾಂಧವರೆಲ್ಲರನ್ನು ಎಷ್ಟೆಷ್ಟೊ ಬಗೆಯಾಗಿ ಎಚ್ಚರಿಸಿದೆನು ಆರೂ ಏಳಲಿಲ್ಲ ಕಡೆಗೆ ನಾನು ಹುಡುಗುತನದಿಂದ ಸಿಡಿಮಿಡಿಗೊಂಡು ಗುಡುಗುಟ್ಟುತ್ತ ನಮ್ಮವರಲ್ಲಿ ಗಡಬಿಡಿಯನ್ನುಂಟು ಮಾಡಿದೆನು ಅವರದರಿಂದ ತೆರಳಿ, ಅವರಿವರೊಡಗೊಂಡು ಬಂದು ನನ್ನ ಬಾಯನ್ನು ಕಟ್ಟಿಬಿಟ್ಟರು ಆದು ಮೊದಲು ನಾನು ದುಡುಕಲವದರಿಂದ ಕಾರ್ಯಹಾನಿಯಾಗುವದೆಂದು ಪಶ್ಚಾತ್ತಾಪ ಹೊಂದಿ, ಆತುರಗೊಳ್ಳುವವರನ್ನು ಕೈಲಾದ ಮಟ್ಟಿಗೂ ತಡೆದು, ವಿಚಾರಮಾಡಿ, ಪ್ರಯತ್ನಕ್ಕೆ ಕೈನೀಡಿರೆಂದು ಸಾರುತ್ತಿರುವೆನು ಇದಕ್ಕಾಗಿಯೇ ನಿನಗೂ ಅಷ್ಟಿಷ್ಟಾಗಿ ಹೇಳಿದೆನು

ನಾನು — 'ಹೋಗಲಿ, ನನಗೆ ಹೇಳು ನಮ್ಮಮ್ಮನಿರುವಲ್ಲಿಗೆ ಹೋಗುವ ದಾರಿಯಾವದು?"

ಕೇಸರಿ — ಇಲ್ಲಿಂದ ಬಂದ ದಾರಿಯಲ್ಲಿಯೇ ಹಿಂತಿರುಗು, ಕಾಣುವದು

ನಾನು — ನೀನಲ್ಲಿಗ ಬರುವದಿಲ್ಲವೇ?

ಕೇಸರಿ — ನಾನಲ್ಲಿಗೆ ಬರುವದಿಲ್ಲ ನನಗಿನ್ನೂ ಆಗತ್ಯವಾದ ಕೆಲಸಗಳಿರುವವು ಅವನ್ನು ಮುಗಿಸಿ ಬೇಗ ಬರುವೆನು

ನಾನು — "ನಾನೊಬ್ಬಳೇ ಹೋಗಲೇ?"

ಕೇಸರಿ — ಈಗ ಅದನ್ನೆಲ್ಲಾ ನೋಡಬಾರದು. ನೀನು ಬೇಗ ಹೊರಡು. ಆ ನಂದನದಲ್ಲಿ ನಿನ್ನ ಅಣ್ಣ ಭಾರತ, ಅಕ್ಕ ಹಿತೈಷಿಣಿ

ಅವರಿಬ್ಬರೂ ಅಮ್ಮನ ಮನೋಲ್ಲಾಸಕ್ಕೆ ಬೇಕಾಗುವ ಕೆಲಸಗಳಲ್ಲಿ ನಿರತರಾಗಿರುವರು. ಅವರನ್ನು ನೀನಲ್ಲಿಯೇ ನೋಡುವೆ ನಡೆ.

ನಾನು — " ಏನು ! ಅಕ್ಕನಲ್ಲಿರುವಳೇ ? ನನ್ನನ್ನು ಬಿಟ್ಟೇ ಹೋದಳು ನಾನೀಕ್ಷಣವೇ ಹೋಗುವೆನು "

ಇಷ್ಟು ಹೇಳಿದುದೇ ತಡೆ, ನಾನಲ್ಲಿ ನಿಲ್ಲದೆ ಬಂದ ದಾರಿಯಲ್ಲಿಯೇ ಹಿಂತಿರುಗಿ " ಅಮ್ಮಾ, ಅಮ್ಮಾ " ನಿನ್ನ ಬಳಿಗೆ ನನ್ನನ್ನು ಕರೆಯಿಸಿಕೋ, ಅಮ್ಮಾ ದಾರಿ ತೋರು " ಎಂದು ಹೇಳುತ್ತ ಹಾರಿದೆನು.

## ಸ್ಮೃತಿಯು ಹೇಳದಿದ್ದರೆ ಐತಿಹ್ಯ ಸುಳ್ಳಾಗುವದೆ?

ಕ್ಷಾತ್ರಕುಲದೀಪಕನಾದ ಅಭಿಮನ್ಯು ಮಹಾವೀರನು ಅಸಾಧ್ಯವಾದ ಚಕ್ರವ್ಯೂಹವನ್ನು ಹೊಕ್ಕು ದ್ರೋಣ ಕರ್ಣ ಕೃಪಾಶ್ವತ್ಥಾಮಾದಿ ಮಹಾನ್ ಮಹಾನ್ ವೀರರು ದಮ್ಮಯ್ಯ ದಪ್ಪಯ್ಯ ಎನ್ನುವ ಹಾಗೆ ವಿಲಕ್ಷಣವಾದ ಸಮರ ವೈಚಿತ್ರ್ಯವನು ತೋರಿಸಿ ಕೌರವ ಸೇನೆಯ ಸಂಹಾರವನ್ನು ಮಾಡಿ ತಾನೂ ಮಡಿದುಹೋದನೆಂಬ ವಾರ್ತೆಯನ್ನು ಕೇಳಿ ಸುಭದ್ರಾದೇವಿಗೆ ಮಿತಿಮೀರಿದ ದುಃಖವಾಯಿತು ಜಗದೇಕ ವೀರನಾದ ತನ್ನ ಮಗನ ಗುಣಗಳನ್ನು ನೆನೆನೆನೆದು ಆ ಮಾತೆಯು ಆಕ್ರೋಶ ಮಾಡುತ್ತ ರೋದಿಸಿದಳು ತಂಗಿಯಾದ ಸುಭದ್ರಾದೇವಿಯು ಪುತ್ರಶೋಕದಿಂದಕೊರಗುತ್ತಿರುವದನ್ನು ಕಂಡು ಶ್ರೀಕೃಷ್ಣನು ಅವಳನ್ನು ಮಾತಾಡಿಸಹೋಗಿ "ಸುಭದ್ರಾದೇವಿ, ಅಮರಗಣವೆಲ್ಲ ಬೆರಗಾಗಿ ಬೆರಳು ಕಚ್ಚಿಕೊಂಡು ನಿಲ್ಲುವಂತೆ ಸಮರಕೌಶಲ್ಯವನ್ನು ತೋರಿಸಿ ಮಡಿದುಹೋದ ನಿನ್ನ ಅಭಿಮನ್ಯು ಬಾಲಕನ ಮರಣಕ್ಕಾಗಿ ವೀರಮಾತೆಯಾದ ನೀನು ಹೀಗೆ ದುಃಖಿಸಬಹುದೆ?" ಎಂದು ಪ್ರಶ್ನೆಮಾಡಿದನು

"ಅಣ್ಣಾ, ಶ್ರೀಕೃಷ್ಣಾ, ನಿನಗೂ ಸಕಲರಾದ ಪಾಂಡವರಿಗೂ ಮೀರಿದ ಸಾಹಸವನ್ನು ಮಾಡಿ ಲೋಕವೇ ಕೊಂಡಾಡುವಂತೆ ಶತ್ರುಕ್ಷಯವನ್ನು ಮಾಡಿ ವೀರಸ್ವರ್ಗವನ್ನು ಪಡೆದ ಅಭಿಮನ್ಯುರಾಜನ ವಿಷಯವಾಗಿ ನಾನು ಶೋಕ ಮಾಡುವೆನೆ? ಆದರೂ ನನ್ನದು ಹೆಣ್ಣುಗರುಳೇ ಅಲ್ಲವೇ? ಅಭಿಮನ್ಯುವು ಯುದ್ಧಕ್ಕೆ ಹೊರಟಾಗ ನಾನು ಅವನ ದಿವ್ಯವಾದ ಮುಖವನ್ನು ಕಣ್ಣುತುಂಬಾ ನೋಡಿಕೊಳ್ಳಲಿಲ್ಲವಾದ್ದರಿಂದ ನನಗೀಗ ಆ ಮಾತಿನ ವಿಷಾದವಾಗಿದೆ"

ಅಧೋಮುಖನಾಗಿ ಕುಳಿತಿದ್ದ ಶ್ರೀಕೃಷ್ಣನು ಮೋರೆಯನ್ನು ಮೇಲಕ್ಕೆತ್ತಿ "ಸುಭದ್ರಾ, ಇಷ್ಟೆಯೋ ನಿನ್ನ ವಿಷಾದದ ಕಾರಣವಾಗಿದ್ದರ ಈ ಸಮಯದಲ್ಲಿ ನಾನು ನಿನಗೆ ಅಭಿಮನ್ಯುವೀರನ ದರ್ಶನವನ್ನು ಮುಹೂರ್ತಮಾತ್ರಕ್ಕೆ ಮಾಡಿಸಿದರೆ ನಿನಗೆ ಸಮಾಧಾನವೆ?" ಎಂದು ಗಂಭೀರವಾದ ಮುಖಮುದ್ರೆಯನ್ನು ತಾಳಿ ಕೇಳಿದನು

ಅಣ್ಣನು ಕೊಟ್ಟ ಅಭಿವಚನವನ್ನು ಕೇಳಿ ಸುಭದ್ರಾದೇವಿಯು ಆಶಾಬದ್ಧೆಯಾಗಿ ದುಃಖವನ್ನು ಹಿಂದಿರಿಸಿ ಸೆರಗಿನಿಂದ ಕಣ್ಣೀರೊರಸಿ ಕೊಂಡು ವಿನಯದಿಂದ "ಅಣ್ಣಯ್ಯಾ, ಒಂದೇ ಮುಹೂರ್ತವಾದರೂ ಚಿಂತಿಲ್ಲ, ಲೋಕೋತ್ತರನಾದ ನನ್ನ ಮಗನ ದಿವ್ಯವಾದ ಮೂರ್ತಿ ಯನ್ನು ಕಣ್ಣುತೃಪ್ತಿಯಾಗುವಂತೆ ನೀನು ತೋರಿಸಿದಿಯಾದರೆ ಯಾವ ಜ್ಜೀವ ನಿನಗೆ ನಾನು ಋಣಿಯಾಗಿರುವೆನು" ಎಂದು ಬೆಸಗೊಂಡಳು

ಆಗ ಶ್ರೀಕೃಷ್ಣನು ಪ್ರಶ್ನೆ ಮಾಡಿದ್ದು — "ಅಭಿಮನ್ಯುವನ್ನು ಯಾವ ಅವಸ್ಥೆಯಲ್ಲಿ ನೋಡಬೇಕೆನ್ನುವಿ ? ತಾರುಣ್ಯದ ಭರದಿಂದ ಮೆರೆಯುವ ರಾಜಕುಮಾರನ ಮನೋಹರವಾದ ರೂಪವನ್ನು ನೋ ಡುವ ಅಪೇಕ್ಷೆ ನಿನಗುಂಟೇನು?"

"ಲಲನೆಯರು ಒಲುಮೆಯಿಂದ ಮಾತೆಹಾಕಲಪೇಕ್ಷಿಸುವ ರೂಪ ವದು ! ಆ ರೂಪವನ್ನು ಕಂಡು ನನ್ನ ಮನಸ್ಸಿನಲ್ಲಿ ಅಭಿಮಾನವು ಹುಟ್ಟಬಹುದಾದರೂ ಈಗ ನಾನು ಅಭಿಮನ್ಯುವನ್ನು ಆ ಅವಸ್ಥೆಯಲ್ಲಿ ನೋಡಲಪೇಕ್ಷಿಸುವದಿಲ್ಲ "

"ಸೇನಾಪತಿತ್ವವನ್ನು ಹೊಂದಿ ಸಮರವೇಷವನ್ನು ತೊಟ್ಟು ಸಿಂಹ ನಂತೆ ಗರ್ಜಿಸಿ ಸಂಗ್ರಾಮಕ್ಕೆ ಹೊರಟ ಅತಿರಥಿಯ ಉದ್ರೇಕಪೂರ್ಣ ವಾದ ರೂಪವನ್ನು ತೋರಿಸಲಿಯಾ? "

"ಆ ದುರಂತ ವಿಕ್ರಮನ ರೂಪವನ್ನು ಕಂಡು ಸೈನಿಕರು ಆರ್ಭಟೆ ಯಿಂದ ಜಯಘೋಷವನ್ನು ಮಾಡಬಹುದು! ಯುಧಿಷ್ಠಿರ ಭೀಮಸೇ ನರೇ ಮುಂತಾದ ಮಹಾರಾಜ ಯುವರಾಜರೂ ಧನಂಜಯರೇ ಮುಂ ತಾದ ಧನುರ್ಧರಾಗ್ರೇಸರರೂ ಸಂಪ್ರೀತಿಯಿಂದ ಆ ವೇಷವನ್ನು ಕಂಡು ಇವನೇ ಪಾಂಡವರಿಗೆ ವಿಜಯವನ್ನು ಸಂಪಾದಿಸಿ ಕೊಡುವ ವೀರನೆಂದು ನಂಬಿಗೆಯನ್ನಿಟ್ಟುಕೊಳ್ಳಬಹುದು! ನನಗೆ ಮತ್ತೊಂದು ರೂಪವನ್ನು ನೋಡುವ ಅಪೇಕ್ಷೆಯಾಗಿದೆ "

"ಆಗಲಿ! ಸಿಂಗರದ ಬಾಲಕನನ್ನು ರುಕ್ಮಿಣಿಯು ಅಕ್ಕರತೆಯಿಂದ ಮುದ್ದಿಕ್ಕಿ ತೊಟ್ಟಿಲಲ್ಲಿಡುವಾಗಿನ ಮೋಹಜನಕವಾದ ಮೂರುತಿ ಯನ್ನು ನಿನಗೆ ತೋರಿಸಲಿಯಾ? "

"ಆ ರೂಪವನ್ನು ನೋಡಿಯಾದರೂ ನನ್ನ ಜೀವಕ್ಕೆ ಸಮಾಧಾನ

ವಾಗದೆಂದು ಏಕೋ ನನಗೆ ಅನಿಸುತ್ತದೆ " ಎಂದು ಸುಭದ್ರಾದೇವಿಯು ಮತ್ತೆ ಕಂಬನಿಗಳನ್ನು ತಾಳಿ ನುಡಿದಳು

" ಹಾಗಾದರೆ ಇನ್ನೊಂದು ರೂಪವನ್ನು ತೋರಿಸುವೆನು, ಕೇಳು ! ದ್ವಾರಕೆಯಲ್ಲಿದ್ದಾಗ ಅಭಿಮನ್ಯು ಬಾಲಕನು ಒಮ್ಮೆ ಹಟಮಾಡಿ ನಿನ್ನ ಮಾತು ಕೇಳದಿರಲು ನೀನೊಮ್ಮೆ ಅವನನ್ನು ಬಡಿದಿ! ಆ ಚಿಕ್ಕವೀರನು ಬಳಿತಾಗಿ ಮುನಿಸುಗೊಟ್ಟು ಪ್ರಾಸಾದದ ಒಂದು ಮೂಲೆಯನ್ನು ಹಿಡುಕೊಂಡು ಊಟ ಉಪಚಾರಗಳನ್ನೆಲ್ಲ ನಿರಾಕರಿಸಿ ಯಾರ ಮಾತನ್ನೂ ಕೇಳದೆ ಕುಳಿತನು ಆಗ ನೀನೇ ಹೋಗಿ "ಕಂದಾ, ಅಷ್ಟೇಕೆ ಸಿಟ್ಟಾಗಿರುವಿ? ಏಳು! ನನ್ನ ಮಾತು ಕೇಳುವದಿಲ್ಲವೆ? ಬಾ, ಮಗುವೆ ನಾನು ನಿನ್ನನ್ನು ಕ್ಷಮಿಸಿದ್ದೇನೆ " ಎಂದು ಹೇಳಿದಾಕ್ಷಣವೇ ಆ ಜಗದ್ದರ್ಪಹರನು ಸಮ್ರನಾಗಿ ನಿನ್ನೆಡೆಗೆ ಧಾವಿಸಿ ಬಂದು ತೆಕ್ಕೆ ಬಿದ್ದನು ನಿನಗೆ ನೆನಪಿದ್ದರೂ ಇರಬಹುದು! ಆ ರೂಪವನ್ನು ತೋರಿಸಬಹುದೇನು? "

ಸಂಸ್ಮರಣೀಯವಾದ ಆ ಪ್ರಸಕ್ತಿಯು ನೆನಪಾದ ಕೂಡಲೆ ಸುಭದ್ರಾದೇವಿಯು ಅತಿ ಸಂಭ್ರಮಾನ್ವಿತೆಯಾದಳು ಅವಳ ಮೈಮೇಲೆಲ್ಲ ರೋಮಾಂಚಗಳೆದ್ದವು ಆ ಮಾತೆಯ ಸ್ತನಗಳಲ್ಲಿ ತೊರೆಬಿಟ್ಟ ಭಾವನೆಯು ಕೂಡ ಆಯಿತು ಆತುರಳಾಗಿ ಅವಳು ಶ್ರೀಕೃಷ್ಣನನ್ನು ಕುರಿತು " ಅಂಣಾ, ಅದೇ ರೂಪವನ್ನು ತೋರಿಸು ! ಸದ್ಯಕ್ಕೆ ತೋರಿಸು !! ನಾನಿನ್ನು ತಡೆಯಲಾರೆನು, ತೋರಿಸು !!! " ಎಂದು ಅಂಗಲಾಚಿ ಹೇಳಿಕೊಂಡಳು

ಸೂತ್ರಧಾರನು ತೆರೆಯನ್ನೆತ್ತಿ ರಂಗಭೂಮಿಯ ನೋಟವನ್ನು ಪ್ರೇಕ್ಷಕರಿಗೆ ತೋರಿಸುವಂತೆ, ಭಗವಂತನು ತನ್ನ ಮಾಯಾಜಾಲದಲ್ಲಿರುವ ಅಭಿಮನ್ಯುವಿನ ವಿನೋದಪರವಾದ ನೋಟವನ್ನು ಸುಭದ್ರೆಗೆ ತೋರಿಸಿದನು. ಸುಭದ್ರೆಯು ಭಗವನ್ಮಾಯೆಗೀಡಾಗಿ ಭರದಿಂದ ತನ್ನ ಮಗುವನ್ನಪ್ಪಿಕೊಂಡು ಹರ್ಷಾತಿರೇಕದಿಂದ ಮೈಮರೆದು ಮೂರ್ಛೆ ತಾಳಿ ನೆಲಕ್ಕೆ ಬಿದ್ದಳು. ಮುಂದೊಂದು ಕ್ಷಣದಲ್ಲಿ ಅವಳು ಎಚ್ಚತ್ತು ನೋಡುತ್ತಾಳೆ, ತನ್ನ ಬಾಹುಪಾಶದಲ್ಲಿ ಅಭಿಮನ್ಯುಬಾಲಕನೂ ಇಲ್ಲ; ಸಮೀಪದಲ್ಲಿ ಶ್ರೀಕೃಷ್ಣನೂ ಇಲ್ಲ !

(ಸಚಿತ್ರಭಾರತದ ಶ್ರೀನಿವಾಸ ಸುತ)

॥ ಶ್ರೀ ॥

॥ ಶ್ರೀರಾಮಶ್ಶರಣಮ್ ॥

# ಮಧುರ ಕವಿಯಾಳ್ವಾರರು.

೩

ಮಧುರ ಕವಿಯಾಳ್ವಾರರು ದ್ವಾಪರ ಯುಗದ ಈಶ್ವರ ಸಂವತ್ಸರದ ಚೈತ್ರ ಶುದ್ಧ ಚತುರ್ದಶೀ ಶುಕ್ರವಾರ ದಿನ ಚಿತ್ತಾ ನಕ್ಷತ್ರದಲ್ಲಿ ತಿರುಕ್ಕೋಳೂರಲ್ಲಿ ಒಬ್ಬ ಪುರಶ್ಶೂಡ ಬ್ರಾಹ್ಮಣನಿಗೆ ಪುತ್ರರಾಗಿ ಹುಟ್ಟಿದರು

ಈ ಆಳ್ವಾರರು ಸ್ವಶಾಖೆಯಾದ ಸಾಮವೇದವೇ ಮೊದಲಾದ ಶಾಸ್ತ್ರಗಳನ್ನೋದಿ, ದಿವ್ಯ ದೇಶಯಾತ್ರೆಯನ್ನು ಮಾಡಿ, ಅಯೋಧ್ಯೆಗೆ ಬಂದು ಅಲ್ಲಿರಲು, ಒಂದು ದಿನ ತಿರುಕ್ಕೋಳೂರು ಸ್ವಾಮಿಯನ್ನು ಧ್ಯಾನಿಸುತ್ತಿರುವಾಗ ದಕ್ಷಿಣ ದಿಗ್ಭಾಗದಲ್ಲಿ ಒಂದು ದಿವ್ಯ ತೇಜಸ್ಸನ್ನು ಕಂಡರು ಅದರ ತತ್ತ್ವವನ್ನು ಅರಿಯಬೇಕೆಂದು ಅದರ ಗುರುತನ್ನೇ ಹಿಡಿದು ಹೋಗಲು ಅವರು ಹೋದಹಾಗೆಲ್ಲ ಅದು ಮುಂದು ಮುಂದಕೆ ಸಾಗುತ ಬಂದಿತು ಅದನ್ನೇ ಹಿಡಿದು ಕುರುಕಾಪುರಿಗೆ ಬಂದು, ದಕ್ಷಿಣ ದಿಗ್ಭಾಗದಲ್ಲಿರುವ ಹುಣಸೇಮರದ ಸಮೀಪವನ್ನು ಸೇರಿದರು ಅನಂತರ ಅಲ್ಲಿಯವರಿಂದ ಶಠಕೋಪರ ಚರಿತ್ರವನ್ನು ತಿಳಿದು,—ಹೀಗೆ ಪ್ರಾಕೃತ ಸಂಬಂಧವನ್ನು ತೊರೆದಿರುವ ಅವರ ವಿಷಯದಲ್ಲಿ ಮಧುರಕವಿಯಾಳ್ವಾರರಿಗೆ ಭಕ್ತಿಯುಂಟಾಗಿ ಸಮೀಪವನ್ನೈದಿ ನಮಸ್ಕರಿಸಿ, ಅವರನ್ನು ಕುರಿತು,—"ಜಡಭೂತವಾದ ಪ್ರಕೃತಿಯುದರದಲ್ಲಿ ಜೀವವು ಹುಟ್ಟಿದರೆ, ಅದು, ಅದರಲ್ಲಿ ಎಲ್ಲಿರುತ್ತದೆ?—ಏನನ್ನು ತಿನ್ನುತ್ತದೆ?" ಎಂದು ಕೇಳಲು, ಶಠಕೋಪರು ಕಣ್ದೆರೆದು ನೋಡಿ, "ಅದನ್ನು ತಿಂದು, ಅಲ್ಲಿಯೇ ಇರುತ್ತದೆ" ಎಂದು ಪ್ರತ್ಯುತ್ತರವನ್ನು ಕೊಟ್ಟರು ಅದನ್ನು ಕೇಳಿ ಅವರು ಮಹಾಜ್ಞಾನಿಗಳೆಂದು ತಿಳಿದು

ಅವರಿಗೆ ನಾಷ್ಟಾಂಗವೆರಗಿ, ತಮಗೆ ತತ್ತ್ವೋಪದೇಶವನ್ನು ಮಾಡ ಬೇಕೆಂದು ಬೇಡಿದರು ಆಗ ನಮ್ಮಾಳ್ವಾರರು (ಶಠಕೋಪರು)"**ತಿರು ವೃತ್ತ**"ವೆಂಬ ಋಗ್ವೇದಾರ್ಥವನ್ನೂ, ಶತಗಾಥಾಪ್ರಬಂಧದಲ್ಲಿ ಏಳು ಪದ್ಯಗಳುಳ್ಳ "**ತಿರುವಾಶಿರಿ**" ಎಂಬ ಯಜುರ್ವೇದಾರ್ಥಪ್ರಬಂಧ ವನ್ನೂ, ಎಂಭತ್ತೇಳು ಪದ್ಯಗಳುಳ್ಳ "**ತಿರುವಂದಾದಿ**" ಎಂಬ ಅಥ ರ್ವಣಾರ್ಥವನ್ನೂ, ಸಾವಿರದ ನೂರೆರಡು ಪದ್ಯಗಳುಳ್ಳ"**ತಿರುವಾಯಿ ಮೊಳಿ**" ಎಂಬ ಸಾಮವೇದಾರ್ಥ ಪ್ರಬಂಧವನ್ನೂ ರಚಿಸಿ, ಅವರಿಗೆ ಉಪದೇಶಿಸಿದರು ಮತ್ತು, ತಾವು ಮಾಡಿದ ದಿವ್ಯಪ್ರಬಂಧಗಳಿಂದ ಇತರ ಮತಗಳನ್ನು ಖಂಡಿಸಿ, ವಿಶಿಷ್ಟಾದ್ವೈತ ಮತವನ್ನು ವೃದ್ಧಿಗೊಳಿ ಸಿದುದರಿಂದ ಅವರಿಗೆ "**ಶ್ರೀವರಾಂಕುಶ**" ರೆಂಬ ಹೆಸರು ಪ್ರಸಿದ್ಧಿ ಯಾಯಿತು ಹೀಗೆ ಇವರು ಹುಟ್ಟಿದುದು ಮೊದಲು ಮೂವತ್ತೈದು ವರ್ಷಗಳೊಳಗಾಗಿ ಈ ಲೋಕೋಪಕಾರವನ್ನು ಮಾಡಿ, ಮೋಕ್ಷ ವನ್ನು ಪಡೆದರು ಅನಂತರ ಅವರ ಮುಖ್ಯ ಶಿಷ್ಯರಾದ "ಮಧುರ ಕವಿಯಾಳ್ವಾರ"ರು ಅವರಿಂದ ತತ್ತ್ವಾರ್ಥಗಳನ್ನು ತಿಳಿದು ಅವರನ್ನು ಆಚಾರ್ಯರೂಪವಾಗಿ ಪ್ರತಿಷ್ಠಿಸಿ, ಅವರ ಪ್ರಬಂಧ ಚತುಷ್ಟಯವನ್ನು ವೃದ್ಧಿಪಡಿಸಿದರು ಮತ್ತು ತಮ್ಮ ಆಚಾರ್ಯ ವಿಷಯವಾದ ಹತ್ತು ಪಾಶರಗಳುಳ್ಳ "**ಕಣ್ಣಿನುಣ್ ಶಿರತ್ತಾಂಬು**" ಎಂಬ ದಿವ್ಯಪ್ರಬಂಧ ವನ್ನೂ ಮಾಡಿದರು

---

# ಕುಲಶೇಖರಾಳ್ವಾರರು.

ಳ

ಶ್ರೀ ಕುಲಶೇಖರಾಳ್ವಾರರು ಕೇರಳ ದೇಶಕ್ಕೆ ರಾಜಧಾನಿಯಾದ "ಕೊಳಿ" ಎಂಬ ಪಟ್ಟಣದ ಅರಸನಾದ "ದೃಢವ್ರತ" ನೆಂಬವನಿಗೆ ಪುತ್ರರಾಗಿ ಹುಟ್ಟಿದರು. ಅವರು ಧನುರ್ವೇದವೇ ಮೊದಲಾದ ಸಕಲ ವಿದ್ಯಾಪಾರಂಗತರಾಗಿ, ಶತ್ರುಭಯಂಕರರಾಗಿದ್ದರಲ್ಲದೆ ಭಗವದ್ಭಾಗ ವತ ಸೇವಾ ಧುರೀಣರಾಗಿದ್ದರು ಇವರಲ್ಲಿ ನೆಲೆಗೊಂಡಿದ್ದ ಅಸದೃಶ

ವಾದ ಆ (ಅಹೇತುಕೀ) ಭಕ್ತಿಯನ್ನು ವರ್ಣಿಸುವ ಉದ್ದೇಶದಿಂದ ಬಗೆಬಗೆಯಾದ ಕಥೆಗಳನ್ನು ಹೇಳುತ್ತಾರೆ.(?) ಇವರಿಗೆ ಶ್ರೀಮದ್ರಾಮಾಯಣದಲ್ಲಿ ಬಹಳ ಆಸಕ್ತಿ ಇತ್ತು. ಪ್ರತಿದಿನವೂ ರಾಮಾಯಣ ಪಾರಾಯಣ ಮಾಡುವ ಪದ್ಧತಿಯನ್ನಿಟ್ಟಿದ್ದರು. ಅಲ್ಲಲ್ಲಿಗೆ ಶ್ರೀಸೀತಾ, ರಾಮ, ಲಕ್ಷ್ಮಣರ ಸುಖ ದುಃಖಗಳ ವಿವರವನ್ನು ಕೇಳುತ ಪರವಶರಾಗುತಲಿದ್ದರು. 'ಅಂತಹ ಸಂದರ್ಭಗಳಲ್ಲಿ ಕಥೆಯ ಸಂಗತಿಗಳೆಲ್ಲವೂ ಕಣ್ಣೆದುರಿಗೆ ನಡೆನಡೆಯುವಂತೆಯೇ ಅವರಿಗೆ ಬೋಧೆಯಾಗುತ್ತಿದ್ದಿತು ...... ಶ್ರೀ ವೈಷ್ಣವೋತ್ತಮರಿಂದ ವರ್ಣಿಸಲ್ಪಟ್ಟ ಶ್ರೀರಂಗರಾಜನ ಮತ್ತು ಶ್ರೀರಙ್ಗನಗರಿಯ ವೈಭವವನ್ನು ಕೇಳಿದ ಆಳ್ವಾರರು ರಙ್ಗರಾಜನಲ್ಲಿ ಮನಸೋತು, ಆ ಮಹಾಕ್ಷೇತ್ರಕ್ಕೆ ಹೋಗಿ, ಸ್ವಾಮಿಯನ್ನು ಸೇವಿಸಿ ಕೃತಾರ್ಥರಾಗಬೇಕೆಂದು ಸಂಕಲ್ಪಿಸಿದರು. ಇವರು ಶ್ರೀರಙ್ಗಯಾತ್ರಾಭಿಮುಖರಾಗಿ ಪ್ರಯಾಣ ಹೊರಟಾಗಲೆಲ್ಲಾ, ದೇಶಾಂತರಗಳಿಂದ ಭಾಗವತೋತ್ತಮರು ಇದಿರಿಗೆ ಬರುತ್ತಿರಲು, ಭಗವತ್ಸೇವೆಗಿಂತ ಭಾಗವತ ಸೇವೆಯೇ ಶ್ರೇಷ್ಠವೆಂದು ನಂಬಿದ್ದ ಕುಲಶೇಖರರು, ಇದಿರಾಗಿ ಬಂದವರನ್ನು ಅಭಿವಂದಿಸಿ ಕರೆತಂದು ಉಪಚರಿಸಿ, ಅವರಿಂದ ಜ್ಞಾನಸಂಪಾದನೆಯನ್ನು ಮಾಡಿಕೊಳ್ಳುತ್ತಿದ್ದರು.

ದೈವಸಂಕಲ್ಪದಿಂದ ಕೆಲವು ಕಾಲ ಹೀಗೆಯೇ ಕಳೆಯಿತು. ಕುಲಶೇಖರರಿಗೆ ಜ್ಞಾನಾಧಿಕ್ಯದಿಂದ ಭಕ್ತಿಯು ಹೆಚ್ಚುತ ಬಂದಿತು. ಯಾವಾಗಲೂ ಭಾಗವತ ಮಂಡಲಿಯಲ್ಲಿಯೇ ಕಾಲಕ್ಷೇಪ ಮಾಡುತಿದ್ದರು. ಈ ರೀತಿ ವೈಷ್ಣವರಲ್ಲಿ ಅರಸಿಗೆ ವಿಶ್ವಾಸವು ಹೆಚ್ಚುತ ಬಂದುದನ್ನು ನೋಡಿ, ಇತರರಿಗೆ ಅಸೂಯೆ ಹುಟ್ಟಿತು. ಅವರು ರಾಜನಿಗೆ ವೈಷ್ಣವರಲ್ಲಿ ಪ್ರೀತಿಯನ್ನು ತಪ್ಪಿಸಬೇಕೆಂದು ಸಮಯವನ್ನು ನೋಡುತಿದ್ದರು. ಶ್ರೀರಾಮ ಜಯಂತಿಯ ಉತ್ಸವ ದಿನವು ಬಂದಿತು. ಕುಲಶೇಖರರು ತಾನು ಆರಾಧಿಸುತ್ತಿದ್ದ ರಾಮಮೂರ್ತಿಗೆ ಸರ್ವಾಲಂಕಾರದಿಂದ ಉತ್ಸವವು ನಡೆಯಬೇಕೆಂದು ಕಟ್ಟು ಮಾಡಿದರು.

ವೈಷ್ಣವರಲ್ಲಿ ದ್ವೇಷವನ್ನು ಸಾಧಿಸಬೇಕೆಂದು ಸಮಯವನ್ನು ನಿರೀಕ್ಷಿಸುತ್ತಿದ್ದ ಕೆಲವು ಅಧಿಕಾರಿಗಳು ಸೇರಿ, ದೇವರ ಆಭರಣಗಳಲ್ಲಿ

ಬಹು ಬೆಲೆಯುಳ್ಳ ಒಂದು ಮುತ್ತಿನ ಹಾರವನ್ನು ಎತ್ತಿ ಬೈತಿಟ್ಟರು ಉತ್ಸವವಾದ ಬಳಿಕ ಒಡವೆಗಳನ್ನು ತೆಗೆದಿಡುವಾಗ ಮುತ್ತಿನ ಹಾರ ವಿಲ್ಲದುದನ್ನು ಕಂಡು ಆಳ್ವಾರರು ಕೋಪಗೊಂಡು ಅಲ್ಲಿದ್ದ ಅಧಿ ಕಾರಿಗಳನ್ನು ಕುರಿತು— "ಈ ನಿಮಿಷದಲ್ಲಿ ದೇವರ ಆಭರಣವನ್ನು ಅದನ್ನು ಕದ್ದ ಕಳ್ಳನೊಡನೆ ಕಂಡು ಹಿಡಿದೊಪ್ಪಿಸಬೇಕೆಂದು" ಆಜ್ಞಾ ಪಿಸಿದರು. ಅಧಿಕಾರಿಗಳು ಹುಡುಕಿದಂತೆ ನಟಿಸಿ ಅರಸನಲ್ಲಿಗೆ ಬಂದು "ಸ್ವಾಮೀ! ಎಷ್ಟು ಪ್ರಯತ್ನಿಸಿದರೂ ಒಡವೆಯಾಗಲೀ ಕಳ್ಳನಾಗಲೀ ಸಿಕ್ಕಲಿಲ್ಲ ಹೊರಗಿನವರಾರೂ ಬಂದ ಹಾಗೆ ಕಾಣುವುದಿಲ್ಲ ಒಳ ಗಿನವರಲ್ಲಿಯೇ ಈ ಕಳವು ನಡೆದಿರಬೇಕು ಕೆಲವರ ವಿಷಯದಲ್ಲಿ ಅನುಮಾನವಿದೆ ಅವರ ಹೆಸರನ್ನು ಹೇಳಲು ಅಂಜುತ್ತೇವೆ" ಎಂದರು ಕುಲಶೇಖರರು ಕಳ್ಳರನ್ನು ಹಿಡಿಯಬೇಕೆಂಬ ಕುತೂಹಲ ದಿಂದ, ಹೆದರದೆ ಹೇಳಬಹುದೆಂದು ಅಭಯವನ್ನು ಕೊಡಲು, ಅವರು "ಸ್ವಾಮೀ! ಪರದೇಶದಿಂದ ಬಂದಿರುವ ಈ ವೈಷ್ಣವರೇ ಈ ಕೆಲಸ ವನ್ನು ಮಾಡಿರಬೇಕು" ಎಂದರು.

ಕುಲಶೇಖರರು ಭಾಗವತ ನಿಂದೆಯನ್ನು ಸಹಿಸಲಾರದ ಕಿವಿ ಗಳನ್ನು ಮುಚ್ಚಿ "ರಂಗ ರಂಗ" ಎಂದು ರಂಗನನ್ನು ಸ್ಮರಿಸಿ, ಬಳಿಕ "ಭಾಗವತೋತ್ತಮರಾದ ಈ ವೈಷ್ಣವರು ಎಂದಿಗೂ ಇಂತಹ ದುಷ್ಕಾ ರ್ಯವನ್ನು ಮಾಡುವವರಲ್ಲವೆಂದು ನಾನು ನಂಬಿರುವೆನು" ಎಂದು ಹಾವಿನ ಕೊಡದಲ್ಲಿ ಕೈಯಿಕ್ಕಿ ಪ್ರಮಾಣವನ್ನು ಮಾಡಿ, ಪುನಃ ಅವ ರನ್ನು ನೋಡಿ,—"ನೀವು ಹಾರವನ್ನು ಹುಡುಕಿಕೊಡದಿದ್ದರೆ ಶಿಕ್ಷೆಗೆ ಗುರಿಯಾಗುವಿರೆಂದು" ಗದ್ದರಿಸಿ ಕೇಳಲು, ಅವರ ಆಜ್ಞೆಗೆ ಭಯ ಪಟ್ಟು ತಮ್ಮಿಂದ ತಪ್ಪಾಯಿತೆಂದು ಸರವನ್ನು ತಂದು ಕೊಟ್ಟು, ನಡೆದ ಸಂಗತಿಯನ್ನೆಲ್ಲ ತಿಳಿಸಿದರು ಕುಲಶೇಖರರು ಎಲ್ಲವನ್ನೂ ಕೇಳಿ, ಚಿಂತಾಕ್ರಾಂತರಾಗಿ ಭಗವದ್ಭಕ್ತಿಯಿಲ್ಲದವರ ಸಹವಾಸವು ನಿಂದನೀ ಯವೆಂದು ತಿಳಿದು ಇಹಲೋಕದ ಐಶ್ವರ್ಯದಿಂದ ಮಹಾಪಾತಕಗಳು ಸಂಭವಿಸುವವೆಂದು ವಿರಕ್ತರಾಗಿ ತನ್ನ ಮಗನಾದ ದೃಢವ್ರತನಿಗೆ ಪಟ್ಟವನ್ನು ಕಟ್ಟಿ, ಸಕಲೈಶ್ವರ್ಯವನ್ನೂ ಬಿಟ್ಟು, ಶ್ರೀರಂಗಕ್ಕೆ ಹೋಗಿ

ಶ್ರೀರಂಗನಾಥಸ್ವಾಮಿಯನ್ನು ಸೇವಿಸಿ ಶ್ರೀರಂಗನಾಥನಲ್ಲಿಯೇ ಮನಸ್ಸುಳ್ಳ "ನೀಳಾಭಿದೇ" ಎಂಬ ತನ್ನ ಮಗಳನ್ನು ಸ್ವಾಮಿಗೆ ಕೊಟ್ಟು ಮದುವೆ ಮಾಡಿ, ತನ್ನ ಸಂಪತ್ತನ್ನೆಲ್ಲ ಸಮರ್ಪಿಸಿ, ಭಾಗವತ ಕೈಂಕರ್ಯ ನಿರತರಾಗಿದ್ದರು ಇವರು, ಶ್ರೀವೈಷ್ಣವರು ನಿತ್ಯವೂ ಪಠಿಸುವ "**ಮುಕುಂದಮಾಲಾ**" ಎಂಬ ವೈರಾಗ್ಯ ಪ್ರಬಂಧವನ್ನೂ ಶ್ರೀರಂಗ ವೈಭವವನ್ನೂ ವರ್ಣಿಸುವ "**ಪೆರುಮಾಳ್ ತಿರುಮೊಳಿ**" ಎಂಬ ಪ್ರಬಂಧವನ್ನೂ ರಚಿಸಿ, ಲೋಕಾಭಿನಂದನೀಯರಾಗಿರುವರು ಈ ಪ್ರಕಾರ ಶ್ರೀರಂಗನಾಥನನ್ನು ಸೇವಿಸಿ, ಅಲ್ಲಿಂದ ಮುಂದೆ ಅನೇಕ ದಿವ್ಯ ದೇಶಗಳನ್ನು ನೋಡಿ, ವೈಷ್ಣವರೊಡನೆ ಸೇರಿ, 'ಆಳ್ವಾರು ತಿರುನಗರಿಯ ಸಮೀಪದಲ್ಲಿರುವ ಮನ್ನಾರುಕೋಯಿಲಿಗೆ ಬಂದು, ರಾಜಗೋಪಾಲನಂ ಸೇವಿಸಿ, ಆ ಸ್ವಾಮಿಯ ಸೌಂದರ್ಯಾತಿಶಯಕ್ಕೆ ಅಧೀನರಾಗಿ ಅಲ್ಲಿಯೇ ವಸಿಸಿ, ಇಪ್ಪತ್ತೇಳು ವರ್ಷಗಳವರೆಗೂ-ಜೀವಿಸಿದ್ದರೆಂಬಲ್ಲಿಗೆ ಕುಲಶೇಖರಾಳ್ವಾರರ ಸಂಕ್ಷಿಪ್ತ ಚರಿತ್ರೆಯು—' ಘುಷ್ಯತೇ ಯಸ್ಯ ನಗರೇ ರಙ್ಗಯಾತ್ರಾ ದಿನೇ ದಿನೇ । ತಮಹಂ ಶಿರಸಾವನ್ದೇ । ರಾಜಾನಾಂ ಕುಲಶೇಖರಂ ॥ '

---

# ಪೆರಿಯಾಳ್ವಾರರು

ಶ್ರೀವಿಲ್ಲಿ ಪುತ್ತೂರಿನಲ್ಲಿ ಮುಕುಂದಾಚಾರ್ಯರೆಂಬ ಒಬ್ಬ ಪುರಶ್ಶೂಡ ಬ್ರಾಹ್ಮಣನಿಗ ಕಲಿಯುಗ ೪೭ನೇ ಕ್ರೋಧನ ಸಂವತ್ಸರ ಜ್ಯೇಷ್ಠ ಶುದ್ಧ ಏಕಾದಶೀ ಭಾನುವಾರ ಸ್ವಾತೀ ನಕ್ಷತ್ರದಲ್ಲಿ ಶ್ರೀವಿಷ್ಣುಚಿತ್ತರು ಪುತ್ರರಾಗಿ ಅವತರಿಸಿದರು ಇವರು, ಸ್ವವೇದವಾದ ಯಜುರ್ವೇದನೇ ಮೊದಲಾದ ಸಕಲ ಶಾಸ್ತ್ರಗಳನ್ನೂ ಅರಿತು, ಜನನಾರಭ್ಯ ಭಗವತ್ ಕೈಂಕರ್ಯದಲ್ಲಿಯೇ ನಿರತರಾಗಿದ್ದ ಕಾರಣ, ಹೂವು, ತುಲಸೀ ಮಾಲಿಕೆಯನ್ನು ಮಾಡಿ, ನಿತ್ಯವೂ ಸ್ವಾಮಿಗೆ ಸಮರ್ಪಿಸುತ್ತಿದ್ದರು

ಆಗ ದಕ್ಷಿಣ ಮಧುರೆಗೆ ಧೊರೆಯಾದ ವಲ್ಲಭದೇವನು "ವರ್ಷಾರ್ಥ ಮಷ್ಟೌ ಪ್ರಯತೇತ ಮಾಸಾನ್ ರಾತ್ರ್ಯರ್ಥ ಮರ್ಧಂ ದಿವಸಂ ಯತೇತ | ವಾರ್ಧಿಕ್ಯ ಹೇತೋರ್ವಯಸಾನವೇನ ಪರತ್ರಹೇತೋರಿಹಜನ್ಮನಾಚ ||" ಎಂಬ ಶ್ಲೋಕವನ್ನು ಒಬ್ಬ ಪಂಡಿತನಿಂದ ಕೇಳಿ, ಚಿಂತೆಯಿಂದ ತನ್ನ ಪುರೋಹಿತನಾದ ಶಲ್ವನಂಬಿಯನ್ನು ಕುರಿತು ಪರಮಪುರುಷಾರ್ಥವನ್ನು ತಿಳಿಸಬೇಕೆನಲು, ಆತನು ವಿದ್ವದ್ಗೋಷ್ಠಿಯನ್ನು ನೆರೆಯಿಸಿ, ಅವರಿಂದ ಪರತತ್ತ್ವವನ್ನು ನಿರ್ಣಯಿಸಿ, ಪರಮ ಪುರುಷಾರ್ಥವನ್ನು ತಿಳಿಯಬೇಕೆಂದನು ಧೊರೆಯು ಆ ಮಾತಿಗೆ ಒಪ್ಪಿ ವಿದ್ಯಾಶುಲ್ಕವನಿಟ್ಟು ಅನೇಕ ವಿದ್ವಾಂಸರನ್ನು ಕರೆಯಿಸಿ ಪರತತ್ತ್ವವನ್ನು ನಿರ್ಣಯಿಸಿ ಹೇಳಬೇಕೆನಲು, ಅವರು ಯಾವುದನ್ನೂ ತಿಳಿಸಲಾರದೆ ಮೌನದಿಂದಿದ್ದರು

ಇತ್ತ ವಿಲ್ಲಿಪುತ್ತೂರಿನಲ್ಲಿ ಅದೇ ದಿನದ ರಾತ್ರಿ, ಶ್ರೀವಿಷ್ಣುಚಿತ್ತರ ಸ್ವಪ್ನದಲ್ಲಿ ಸ್ವಾಮಿಯು ಬಂದು ಅವರನ್ನು ಕುರಿತು-"ವಲ್ಲಭದೇವನ ಸಭೆಗೆ ಹೋಗಿ ಪರಮ ಪುರುಷಾರ್ಥವನ್ನು ತಿಳಿಸಿ, ವಿದ್ಯಾಶುಲ್ಕವನ್ನು ಪಡೆಯಬೇಕೆಂದು' ನಿರೂಪಿಸಿದಂತಾಯಿತು. ಮರುದಿನ ಪ್ರಾತಃಕಾಲ ಅದೇಪ್ರಕಾರ ವಿಷ್ಣುಚಿತ್ತರು ಮಧುರೆಗೆ ಬಂದು ವಲ್ಲಭರಾಯನ ಸಭೆಯನ್ನು ಪ್ರವೇಶಿಸಿದರು ದೊರೆಯು ಇವರ ಬರುವಿಕೆಯನ್ನರಿತು ಸನ್ಮಾನದಿಂದ ಕರೆತಂದು ಉಚಿತಾಸನದಲ್ಲಿ ಕುಳ್ಳಿರಿಸಿದನು. ಅಲ್ಲಿದ್ದ ವಿದ್ವಾಂಸರು ಅದನ್ನು ನೋಡಿ ಸಹಿಸಲಾರದೆ ಇವನಿಂದಲೇನಾದೀತೆಂದು ಸಮಯವನ್ನು ನೋಡುತ್ತಿದ್ದರು ಆಗ ವಿಷ್ಣುಚಿತ್ತರು ಪುರುಷಸೂಕ್ತದಲ್ಲಿ ಪೂರ್ವೋತ್ತರಾನು ವಾಕ್ಯಗಳನ್ನು ಹೇಳಿ, ತದನುಸಾರವಾಗಿ ಸ್ಮೃತಿ, ಪುರಾಣೇತಿಹಾಸಗಳನ್ನು ಉದಾಹರಿಸಿ, "**ಅಕಾರವಾಚ್ಯನಾದ ಶ್ರೀಮನ್ನಾರಾಯಣನೇ ಪರತತ್ತ್ವ**" ವೆಂದು ಹೇಳಲು, ವಿದ್ಯಾಶುಲ್ಕವು ಆಳ್ವಾರರ ಸಮೀಪಕ್ಕೆ ಬಂದು ಬಿದ್ದಿತು.

ಆಗ ವಲ್ಲಭರಾಯನು ಸಂತೋಷಾತಿಶಯದಿಂದ ವಿಷ್ಣುಚಿತ್ತರಿಗೆ "**ಪೆರಿಯಾಳ್ವಾರ್ ಪಟ್ಟರ್‌ಪಿರಾನ್**" ಎಂಬ ಬಿರುದನ್ನು ಕೊಟ್ಟು ಆನೆಯ ಮೇಲೆ ಕುಳ್ಳಿರಿಸಿ ಮೆರೆಯಿಸಿದನು. ಹಿಂದೆ ಅವರನ್ನು ದೂಷಿಸಿದ ಪಂಡಿತರು ಛತ್ರ ಚಾಮರವನ್ನು ಹಿಡಿದರು. ಆಗ ವಟಪತ್ರ

ಶಾಯಿಯು ತನ್ನ ಭಕ್ತನ ಸಂಭ್ರಮವನ್ನು ನೋಡಲೋಸುಗ ಅಂತರಿಕ್ಷದಲ್ಲಿ ಶ್ರೀ ಲಕ್ಷ್ಮೀಸಮೇತನಾಗಿ, ಗರುಡಾರೂಢನಾಗಿ ಕಾಣಿಸಿಕೊಳ್ಳಲು, ಪೆರಿಯಾಳ್ವಾರರು, ಆ ದಿವ್ಯಮಂಗಳ ವಿಗ್ರಹವನ್ನು ನೋಡಿ ಈ ಕಲಿಯುಗದಲ್ಲಿ ಅಪ್ರಾಕೃತವಾದ ಈ ದಿವ್ಯರೂಪವು ತನ್ನ ಕಣ್ಣಿಗೆ ಕಾಣಿಸಿತೆಂಬ ಸಂತೋಷದಿಂದ 'ಪಲ್ಲಾಂಡೆ'ಂಬ ಹತ್ತು ಪದ್ಯಗಳುಳ್ಳ ಪ್ರಬಂಧವನ್ನು ಮಾಡಿ, ಸ್ವಾಮಿಗೂ ಸ್ವಾಮಿಯ ಆಯುಧಗಳಿಗೂ ಸಹ ಮಂಗಳಾಶಾಸನವನ್ನು ಮಾಡಿದರು

ಆ ಬಳಿಕ ಆಳ್ವಾರರು ವಲ್ಲಭರಾಯನಿಂದ ಮನ್ನಣೆಯನ್ನು ಹೊಂದಿ ತಮ್ಮ ಊರಿಗೆ ಬಂದು, ವಟಪತ್ರಶಾಯಿಯ ಸನ್ನಿಧಿಯಲ್ಲಿ ತಮಗೆ ಬಂದ ಬಹುಮಾನಗಳನ್ನಿಟ್ಟು ತೀರ್ಥಪ್ರಸಾದಗಳನ್ನು ತೆಗೆದುಕೊಂಡು ಮುನ್ನಿನಂತೆ ಬೃಂದಾವನ ಕೆಲಸವನ್ನು ಮಾಡುತಿದ್ದರು ಇವರಿಗೆ "ವೇದಪ್ಪಯರ್,-ಪಟ್ಟರ್ ಬಿರಾರ್" ಎಂದೂ ಹೆಸರುಂಟು. ಇವರು ಶ್ರೀಕೃಷ್ಣಭಕ್ತರಾಗಿ, ಕೃಷ್ಣಲೀಲೆಯ ವಿಷಯವಾಗಿ "ಪೆರಿಯಾಳ್ವಾರ್ ತಿರುಮೊಳಿ" ಎಂಬ ಗ್ರಂಥವನ್ನು ಮಾಡಿರುವರು. ಇವರ "ಪಲ್ಲಾಂಡು" ಎಂಬ ಪ್ರಬಂಧವು ನಾಲ್ಕುಸಾವಿರ ತಿರುವಾಯಿಮೊಳಿಯೊಳಗೂ ಶ್ರೇಷ್ಠವು ವೇದಕ್ಕೆ ಪ್ರಣವವನ್ನು (ಓಂಕಾರ) ಮುಂಚಿತವಾಗಿ ಹೇಳುವ ರೀತಿಯಲ್ಲಿ 'ತಿರುವಾಯಿಮೊಳಿಗೆ' ಪಲ್ಲಾಂಡನ್ನು ಮೊದಲು ಹೇಳಬೇಕೆಂಬ ನಿಯಮವಾಗಿದೆ ಇದರಿಂದಲೇ ಇವರ ಭಕ್ತ್ಯತಿಶಯದ ಕೀರ್ತಿಯು ಜಗದ್ವಿಶ್ರುತವಾಗಿದೆಯೆನ್ನಬಹುದು.

# ಶೂಡಿಕುಡುತ್ತ ನಾಚ್ಚಿಯಾರ್.

ನೀಳಾತುಂಗಸ್ತನಗಿರಿತಟೀ ಸುಪ್ತಮುದ್ಬೋಧ್ಯ ಕೃಷ್ಣಂ
ಪಾರಾರ್ಥ್ಯಂ ಸ್ವಂ ಶ್ರುತಿ ಶತಶಿರಸ್ಸಿದ್ಧಮಧ್ಯಾಪಯಂತೀ
ಸ್ವೋಚ್ಛಿಷ್ಟಾಯಾಂ ಸ್ರಜಿ ನಿಗಳಿತಂ ಯಾ ಬಲಾತ್ಕೃತ್ಯ ಭುಂಕ್ತೇ
ಗೋದಾತಸ್ಯೈನಮ ಇದಮಿದಂಭೂಯ ಏವಾಸ್ತು ಭೂಯಃ ||

ಶ್ರೀ ವಿಲ್ಲಿಪುತ್ತೂರಿನಲ್ಲಿ ವಟಪತ್ರಶಾಯಿಯಾದ ಶ್ರೀ ಕೃಷ್ಣನ ಅರ್ಚಾವಿಗ್ರಹವು ಪ್ರತಿಷ್ಠಿತವಾಗಿರುವುದು. ಆ ದಿವ್ಯ ಮಂಗಳ ಮೂರ್ತಿಗೆ ಪೆರಿಯಾಳ್ವಾರರು ಪ್ರತಿದಿನವೂ ತುಲಸೀ ಪುಷ್ಪಮಾಲಿಕೆಗಳನ್ನು ಸಮರ್ಪಿಸುತ್ತಿದ್ದರು. ಈ ತಮ್ಮ ಮಾಲಿಕಾಕೈಂಕರ್ಯಕ್ಕಾಗಿ ಅವರೊಂದು ಹೂದೋಟವನ್ನು ರಚಿಸಿ ತಾವೇ ಹೂಗಿಡಗಳ ಪೋಷಣೆಯನ್ನು ಅಕ್ಕರೆಯಿಂದ ಮಾಡುತಿದ್ದರು. ಹೀಗಿರಲು ಕಲಿಯುಗ ೯೮ನೇ ನಲ ಸಂವತ್ಸರದ ಆಷಾಢ ಶುದ್ಧ ಚತುರ್ಥಿ ಮಂಗಳವಾರ ಪುಬ್ಬಾ ನಕ್ಷತ್ರ ತುಲಾಲಗ್ನದಲ್ಲಿ ಪೆರಿಯಾಳ್ವಾರರು ತುಲಸಿಗೆ ಪಾತಿಯನ್ನು ಮಾಡುತಿರುವಾಗ ಒಂದು ಹೆಣ್ಣು ಶಿಶುವು ದೊರಕಿತು. ಆ ಹೆಂಗೂಸನ್ನು ಪೆರಿಯಾಳ್ವಾರರು ಬಹು ಸಂತೋಷದಿಂದ ಕರೆತಂದು ತನ್ನ ಪತ್ನಿಯ ಕೈಯಲ್ಲಿ ಕೊಟ್ಟು, ಇದನ್ನು ಮಾನುಷ ಶಿಶುವೆಂದು ಉದಾಸೀನ ಮಾಡದೆ, ಸಾಕ್ಷಾತ್ 'ಲಕ್ಷ್ಮೀದೇವಿ'ಯೆಂದೇ ತಿಳಿದು ಪೋಷಿಸೆಂದು ಹೇಳಿ "ಗೋದ"ಯೆಂದು ಹೆಸರಿಟ್ಟರು.

ಗೋದೇವಿಯು ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಗೊಳ್ಳುತ್ತಿರುವದನ್ನು ನೋಡಿ ನೋಡಿ ಆಳ್ವಾರರು ಆನಂದಸಮುದ್ರದಲ್ಲಿ ಓಲಾಡುತಿದ್ದರು. ದೇವಿಯು ಕೂಡ, ತನ್ನ ಸೌಂದರ್ಯಾತಿಶಯದಿಂದಲೂ ದೈವಭಕ್ತಿಯಿಂದಲೂ ಮತ್ತು ತನ್ನ ಸಾಕು ತಾಯಿತಂದೆಗಳಲ್ಲಿ ತಾನು ತೋರಿಸುತಿದ್ದ ನಿರತಿಶಯ ಪ್ರೀತಿಗೌರವದಿಂದಲೂ ಅವರ ಆನಂದವು ಮೇರೆ ಮೀರುವಂತೆ ಮಾಡುತಿದ್ದಳು.

ಪೆರಿಯಾಳ್ವಾರರು ನಿತ್ಯವೂ ಹೂವು ತುಲಸಿಯನ್ನು ಮಾಲಿಕೆಯಾಗಿ ಕಟ್ಟಿ, ಸ್ವಾಮಿಗೆ ಸಮರ್ಪಿಸಬೇಕೆಂದು ಬುಟ್ಟಿಯಲ್ಲಿಟ್ಟು,

ತೋಟದ ಕೆಲಸಕ್ಕೆ ಹೋಗುತ್ತಿದ್ದರು ಆ ವೇಳೆಯಲ್ಲಿ ಗೋದಾ ದೇವಿಯು ಮಾಲಿಕೆಗಳನ್ನೆತ್ತಿ ತಲೆಗೆ ಮುಡಿದು, ತಾನು ಸ್ವಾಮಿಯನ್ನು ವರಿಸಲು ಸರಿಯಾಗಿದ್ದೇನೇನೆಂದು ಕನ್ನಡಿಯಲ್ಲಿ ತನ್ನ ಪ್ರತಿಬಿಂಬ ವನ್ನು ನೋಡಿಕೊಂಡು ಪುನಃ ಪುಷ್ಪಮಾಲಿಕೆಯನ್ನೆತ್ತಿ ಬಾಡದಂತೆ ಬುಟ್ಟಿಯಲ್ಲಿ ಇಡುತ್ತಿದ್ದಳು ಒಂದು ದಿನ ವಿಷ್ಣುಚಿತ್ತರದನ್ನು ನೋಡಿ ಇನ್ನು ಮೇಲೆ ಹೀಗೆ ಮಾಡಬೇಡವೆಂದು ಮಗಳಿಗೆ ಬುದ್ಧಿಯನ್ನು ಹೇಳಿ, ಮಗಳು ಮುಡಿದಿದ್ದ ಮಾಲಿಕೆಯು ಸ್ವಾಮಿಗೆ ಅನರ್ಹವೆಂದು ಭಾವಿಸಿ ಆ ದಿನ ಅದನ್ನು ಸಮರ್ಪಿಸಲಿಲ್ಲ ಆ ರಾತ್ರಿ ವಿಷ್ಣುಚಿತ್ತರ ಕನಸಿನಲ್ಲಿ ವಟಪತ್ರಶಾಯಿಯು ಬಂದು–"ಇಂದು ಹುಪ್ಪಿನ ಮಾಲಿಕೆ ಯನ್ನು ತಂದು ಕೊಡಲಿಲ್ಲವೇಕೆ ?" ಎಂದು ಕೇಳಲು, ಆಳ್ವಾರರು– "ಸ್ವಾಮಿಯೇ ! ಈ ದಿನ ನನ್ನ ಮಗಳು ತಿಳಿಯದೆ ಪುಷ್ಪಮಾಲಿಕೆ ಯನ್ನು ಮುಡಿದಿದ್ದಳು ಆದುದರಿಂದ ಅದು ತಮಗೆ ಅಯೋಗ್ಯವೆಂದು ಸಮರ್ಪಿಸಲಿಲ್ಲ," ಎಂದು ಉತ್ತರವಿತ್ತರು ಮತ್ತೆ ಸ್ವಾಮಿಯು "ಅವಳು ಮುಡಿದಿದ್ದ ಹೂವು ನನಗೆ ಬಹಳ ಇಷ್ಟವಾದುದು ಇನ್ನು ಮೇಲೆ ಅದನ್ನೇ ನನಗೆ ತಂದು ಕೊಡಬೇಕು" ಎಂದು ಹೇಳಿ ಪ್ಯೆ ಗರೆದರು ಪ್ರಾತಃಕಾಲ ವಿಷ್ಣುಚಿತ್ತರು ಎದ್ದು ಪರಮಾಶ್ಚರ್ಯದಿಂದ ತಮ್ಮ ಮಗಳಿಗೆ "ಶೂಡಿಕುಡುತ್ತಾಳ್" ಎಂದು ಹೆಸರಿಟ್ಟು, ಅವ ಳನ್ನು ಸಾಕ್ಷಾತ್ 'ಇಂದಿರೆ'ಯೆಂದೇ ಭಾವಿಸಿ, ಗೌರವಿಸುತ್ತ ಬಂದರು

ಕ್ರಮವಾಗಿ ಆಂಡಾಳ್ ಪ್ರಾಪ್ತಯೌವನೆಯಾಗಿ ಅತಿಶಯವಾದ ಭಗವದ್ಭಕ್ತಿಯಿಂದ ಭಗವಂತನಲ್ಲಿಯೇ ಲೀನಮನಸ್ಕಳಾಗಿ, ದ್ವಾಪರ ಯುಗದಲ್ಲಿ ಶ್ರೀಕೃಷ್ಣನಿಂದ ವಿರಹಿತೆಯರಾದ ಗೋಪಸ್ತ್ರೀಯರು, ಕಾತ್ಯಾಯನೀ ವ್ರತವನ್ನು ಮಾಡಿ, ಇಷ್ಟಾರ್ಥವನ್ನು ಪಡೆದಂತೆ, ತಾನೂ ತನ್ನ ಇಷ್ಟಾರ್ಥವನ್ನು ಹೊಂದುವನೆಂದು, ಧನುರ್ಮಾಸದ ವ್ರತವನ್ನು ಹಿಡಿದು ಆ ಅರ್ಥವನ್ನು 'ತಿರುಪ್ಪಾವೆ" ಎಂಬ ಪ್ರಬಂಧ ದಿಂದ ತಿಳಿಯಿಸಿದಳು

ಪೆರಿಯಾಳ್ವಾರರು, ಮಗಳಿಗೆ ತಕ್ಕ ವರನಾರೆಂದು ಯೋಚಿಸಿ, ಆಕೆಯ ಅಭಿಪ್ರಾಯವನ್ನು ಕೇಳಲು, ಗೋದೆಯು ತನಗೆ ಮಾನುಷ

ಬಗೆಯಲ್ಲಿ ಏಕಪ್ರಕಾರವಾಗಿ ಕೆಲಸಗಳು ನಡೆಯುತ್ತಿರುವದಕ್ಕೆ ಪ್ರತಿಫಲವಾಗಿ ಕಣ್ಣು ಮನ(?)ಗಂಡಂತೆ ಎಷ್ಟೋ ಪ್ರಯೋಜನವಾಗಬೇಕಾಗಿತ್ತು. ಆದರೆ, ಶ್ರಮಕ್ಕೆ ತಕ್ಕ ಫಲವು ಇದು ವರೆಗೆ ದೊರೆಯದೆ, ಇನ್ನೂ ಅವಿದ್ಯೆ-ದಾರಿದ್ರ್ಯಗಳ ಉಲ್ಬಣವು ಬಲುಮಟ್ಟಿಗ ಹಿಂದಿನಂತೆಯೇ ದುಃಖಪ್ರದವಾಗಿರುವಂತೆ ತೋರುವದರಿಂದ ಈಗಿನ ಸಮಾಜಸ್ಥಿತಿಯನ್ನು ಇನ್ನೂ ಚನ್ನಾಗಿ ಪರಿಷ್ಕರಿಸಿ ನೋಡಬೇಕಾಯಿತು

೩ ವಿದ್ಯೆಯ ಪ್ರಚಾರಕ್ಕೇ ಎಷ್ಟೋ ಪ್ರಯತ್ನಗಳು ನಡೆಯುತ್ತಿವೆ ವಿದ್ಯಾಪ್ರಚಾರವೂ ದಿನದಿನಕ್ಕೂ ಹೆಚ್ಚುತ್ತಲಿದೆ ಜನರು ವಿದ್ಯಾವಂತರಾಗುತ್ತ ಬಂದಹಾಗೆಲ್ಲಾ ಬಡತನದ ರೂಕ್ಷೆಯೂ ಕಡಮೆಯಾಗುತ್ತ ಬರುತ್ತಿದ ಹೀಗಿದ್ದರೂ ದುರ್ದಶೆಯು ತಪ್ಪಲಿಲ್ಲವಂದ ಮೇಲೆ ಪದ್ಧತಿಯಲ್ಲಿಯೇ ಏನೋ ತಪ್ಪಿರಬೇಕೆಂಬ ಅನುಮಾನ ಬರುವುದು ಈ ಅನುಮಾನವಾದರೂ ಅಸಂಬದ್ಧವೇನೂ ಅಲ್ಲ ಸಾಮಾನ್ಯವಾಗಿ ನೋಡಿದರೆ, ಕಲಿತ ವಿದ್ಯೆಯೆಲ್ಲವೂ ವಿಶೇಷವಾಗಿ ಬರಿಯ ಪುಸ್ತಕ ಪಾಠದಲ್ಲಿಯೇ ಕೊನೆಯಾಗುತ್ತಿರುವುದು ಕಲಿತ ವಿದ್ಯೆಗ ಸಾರ್ಥಕವಾದ ಉದ್ಯೋಗಕ್ಕೆ ಕೈ ಹಾಕುವ ಧೈರ್ಯಸಾಹಸಗಳು ಬೆಳೆಯಲಿಲ್ಲ. ಸಾಧಾರಣವಾಗಿ ವಿದ್ಯೆಯನ್ನು ಕಲಿಯುವ ಉದ್ದೇಶವೇ ಅಷ್ಟು ಸ್ತೋತ್ರಾರ್ಹವಾಗಿರುವುದಲ್ಲ ಅಲ್ಲಲ್ಲಿ ಕೆಲಕೆಲವು, ಮೇಲೆ ಮೇಲೆ ಮುಖ್ಯವಾಗಿ ಕಾಣುವ ವಿಷಯಗಳನ್ನು ಸುಮಾರಾಗಿ ಮುಂದಟ್ಟಾಗಿ ಮಾಡಿಕೊಂಡು ಆ ಬಲಿಯದ ಮೇಲೆ ಪರೀಕ್ಷೆಯಲ್ಲಿ ಉತ್ತೀರ್ಣರಾಗುವದಕ್ಕೆ ಎಷ್ಟು ಬೇಕೋ, ಅಷ್ಟು ಉಪಪತ್ತಿ-ವ್ಯುತ್ಪತ್ತಿಗಳನ್ನು ಮಾತ್ರ ಕಲ್ಪಿಸಿಕೊಳ್ಳುವದೊಂದು— ಅದರ ಮೇಲೆ ಪಾಠಶಾಲೆಯಲ್ಲಿನ ವಿದ್ಯಾಭ್ಯಾಸವು ಮುಗಿದ ಶಾಸ್ತ್ರವಾದ ಮೇಲೆ ಜೀವನದ ಯಾತ್ರೆಗೆ ಬೇಕಾದ ಸಂಬಳವನ್ನು ಕೊಡುವ ಚಾಕರಿಯು ದೊರೆಯುವಂತೆ ಮಾಡಿಕೊಳ್ಳುವದೊಂದು— ಈ ರೀತಿ ಪರೀಕ್ಷಾಕರ್ತರ ಕಡೆಯಿಂದ ಯೋಗ್ಯತಾ ಪತ್ರಗಳು ಬರಬೇಕೆಂಬ ಆಶೆ ಅಲ್ಲಿಂದಾಚೆಗೆ ಹಣಗಾರರ ಕಡೆಯಿಂದ ವೇತನಗಳು ಹೆಚ್ಚುಹೆಚ್ಚಾಗಿ ಬರುತ್ತಿರಬೇ

ಕೆಂಬ ಲವಲವಿಕೆ ಇವಕ್ಕೆ ಮೇಲ್ಪಟ್ಟ ಪ್ರವೃತ್ತಿಯ ಕಡೆಗೆ ಸಾಮಾನ್ಯವಾಗಿ ಯಾರ ಮನಸ್ಸೂ ಹೋಗುವದಿಲ್ಲ.

೪ ಈ ನ್ಯೂನತೆಯನ್ನು ಹೋಗಲಾಡಿಸುವದಕ್ಕೆಂದೇ ಈಚೀಚೆಗೆ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರುವ ಪ್ರಯತ್ನಗಳು ಅನೇಕವಾಗಿ ನಡೆಯುತ್ತಿವೆ, ಮತ್ತು ಅನೇಕರಿಗೆ ಕಾಮಧೇನು ಕಲ್ಪವೃಕ್ಷಗಳಂತೆಯೂ ಆಗಿವೆ. ಆದರೂ ಒಂದು ಕೆಲಸಕ್ಕೆ ಒಬ್ಬರು ಮೊದಲು ಮಾಡಬೇಕಾದರೆ ನಾನಾಕಡೆಗಳಿಂದಲೂ ಬಲವತ್ತರವಾದ ಆಶ್ರಯವು ದೊರೆಯಬೇಕು. ಅನ್ಯರ ಸಹಾಯವಿಲ್ಲದೆ ಸ್ವಸಾಮರ್ಥ್ಯದಿಂದಲೇ ನುಗ್ಗಿ ಸಾಧಿಸುವ ಧೈರ್ಯವು,— ಹಾಗೂ ತನ್ನಲ್ಲಿ ತನಗೆ ನಿಶ್ಚಯಜ್ಞಾನವು— ನಮ್ಮ ಜನರ ಭಾಗಕ್ಕೆ ಇನ್ನೂ ಬಹು ದೂರದಲ್ಲಿರುವದು ನಿಜವಾದ ದೌರ್ಬಲ್ಯಕ್ಕಿಂತಲೂ ಅಧಿಕವಾಗಿ, ಅಸಹಾಯನಾಗಿ ಮುಂದಕ್ಕೆ ಹೋದರೆ ಎಲ್ಲಿ ತಲೆತಿರುಗಿ ಬೀಳುವವೋ ಎಂಬ ತಮ್ಮಲ್ಲಿ ತಮಗೇ ನಂಬಿಕೆಯಿಲ್ಲದ ಪುಕ್ಕಲು(?) ಹತ್ತಿಕೊಂಡು ಬಾಧಿಸುತ್ತಿರುವದು ಹಾಗೂ ಒಂದು ವೇಳೆ ಮುಂದೆ ಬಿದ್ದು ಹೊಸ ಹೊಸ ವಿಷಯಗಳನ್ನು ಗ್ರಹಿಸಿ ಹೆಚ್ಚಿನ ಕೆಲಸಕ್ಕೆ ಕೈಹಾಕುವ ಧೈರ್ಯವನ್ನು ಸಂಪಾದಿಸಿದರೂ, ಇನ್ನೂ ಒಂದು ಪ್ರತಿಬಂಧಕವನ್ನು ಕಳೆಯಬೇಕಾಗಿರುವದು ಈಗಿನ ನಮ್ಮ ಜನರಿಗೆ ಕಷ್ಟಪಟ್ಟು ಕೆಲಸ ಮಾಡುವ ವಾಡಿಕೆಯೇ ತಪ್ಪಿಹೋಗಿದೆ. ಯಾವ ವಿದ್ಯೆ(ಭಾಷೆ?)ಯಲ್ಲಾದರೂ ಎರಡಕ್ಷರಗಳನ್ನು ಓದಿ-ಬರೆಯುವದಕ್ಕೆ ಕಲಿತುಕೊಂಡರೆ ಸಾಕು, ಆಗಲೇ ಕಷ್ಟಾ ಕೆಲಸಗಳನ್ನೆಲ್ಲ ಇತರರ ಮೇಲೆ ತಳ್ಳಿ, ಕುಡಿದ ನೀರು ಅಲ್ಲಾಡದಂತೆ “ ನೀನು ಭತ್ತವನ್ನು ಕುಟ್ಟು, ನಾನು ಭುಜವನ್ನು ಕುಣಿಸುತ್ತೇನೆ ” ಎಂಬ ಗಾದೆಗೆ ಸರಿಯಾಗಿ ನಾಜೂಕಿನಲ್ಲಿ ಕಾಲವನ್ನು ದಬ್ಬುತ್ತ ಲಾಭವನ್ನು ಹೊಡೆಯುವ ಯೋಚನೆಯೇ ತನ್ಮಯವಾಗಿ ಆವರಿಸಿಕೊಳ್ಳುವದು ಮೈಮುರಿದು ದುಡಿಯಬೇಕೆಂದರೆ ಮನಸ್ಸು ಸ್ವಲ್ಪವಾದರೂ ಬಗ್ಗುವದಿಲ್ಲ ಸಾಲದುದಕ್ಕೆ ಬರುತ ಬರುತ ದೇಹಪಟುತ್ವವೂ ನಾಜೂಕಾಯಿತು. ದುಡಿದು ತಿನ್ನಬೇಕೆಂಬ ಮನೋಗತವು ಮತ್ತೂ ನಾಜೂಕಾಯಿತು “ಇತರರು ದೇಹವನ್ನು ದುಡಿಸಿ

ಕೆಲಸ ಮಾಡಬೇಕು, ತಾವು ಮೇಲ್ವಿಚಾರಣೆಯನ್ನು ಮಾಡುತ್ತ ಇತರರ ದೇಹದಂಡನೆಯ ಪ್ರಯೋಜನವನ್ನು ಪಡೆಯಬೇಕು''* ಎಂಬುದು ಈಗಿನ ನವನಾಗರಿಕರ ಮತವಾಗಿದೆ ಒಂದು ಸಮಯದಲ್ಲಿ ಅಸಂದರ್ಭವಾಗಿ ದುಡಿಯುವವರು ಸಿಕ್ಕದೆ ಹೋದರೆ ವಿಶೇಷ ಅನನುಕೂಲವಾಗದಂತೆ ಕೆಲಸವನ್ನು ತೂರಿಸಿಕೊಂಡು ಹೋಗುವದಕ್ಕೆ ಕೂಡ, ಈಗಳಿನವರ ಕೈಲಾಗುವಂತಿಲ್ಲ. ಹೀಗೆ ಈಗಿನ ಪಾಠ-ಪದ್ಧತಿಗಳ ಕ್ರಮದಲ್ಲಿ ದುಡಿಮೆಗೆ ವಿಶೇಷ ಸ್ಥಳವಿಲ್ಲದಿರುವದೊಂದು ಊನವಾಗಿ ಪರಿಣಮಿಸಿ ಪ್ರಯೋಜನಾಂಶವನ್ನು ಕಡಿಮೆ ಮಾಡಿರುವದು

೫೯ ಕಷ್ಟಪಡಬೇಕೆಂಬಲ್ಲಿ ಇಷ್ಟು ಸೂಕ್ಷ್ಮ ಸ್ಥಿತಿ ಇದ್ದರೆ ಮನುಷ್ಯರ ನಡೆನುಡಿಗಳ ಅಭಿರುಚಿಯಲ್ಲಿನ ಸೂಕ್ಷ್ಮಸ್ಥಿತಿಯು ಇನ್ನೂ ಶೋಚನೀಯವಾಗಿ ಪರಿಣಮಿಸಿದೆ ಸಾಮಾನ್ಯವಾಗಿ ಯಾವದು ಇಲ್ಲದಿದ್ದರೆ ಜೀವನದ ಪಥವು ಸುತರಾಂ ಜರಗುವುದಿಲ್ಲವೋ, ಅದರ ಮೇಲಿನ ಅಭಿಮಾನಕ್ಕಿಂತಲೂ ವಿಹಾರ-ವಿಲಾಸಗಳ ಸೊಗಸಿನ ಮೇಲೆ ಅಭಿಮಾನವು ದಿನದಿನಕ್ಕೂ ಹೆಚ್ಚುತ್ತಲಿದೆ ಬಡತನವು ಒಂದು ಕಡೆ ಒದೆಯುತ್ತಲೂ ಆಮುಕುತ್ತಲೂ ಇದ್ದರೂ, ಡಂಭಾಚಾರವನ್ನು ಬಿಡುವದಕ್ಕೆ ಮನಸ್ಸು ಬರುವದಿಲ್ಲ. ಹೊಟ್ಟೆ-ಬಟ್ಟೆಗಳಿಗೆ ನೆಟ್ಟಗಿಲ್ಲದಿದ್ದರೂ ಅಟ್ಟಹಾಸದಿಂದ ಜನಗಳಲ್ಲಿ ಪ್ರಾಶಸ್ತ್ಯವನ್ನು ಪಡೆಯುವದು ಒಂದು ಹೆಚ್ಚಿನ ಕೆಲಸವಾಗಿರುವದು ಈ ರೀತಿಯ ದಸೆಯಿಂದ ಎಷ್ಟು ಜನ ಯುವಕರು ಇದ್ದುದನ್ನೆಲ್ಲ ದುಂದಿನಿಂದ ಹಾಳು ಮಾಡಿಕೊಂಡು, ಸಾಲಗಾರರ ಮಕ್ಕಳಾಗಿ ಕೆಟ್ಟು, ಭ್ರಷ್ಟರಾಗಿಲ್ಲ? ದುಡಿಯುವ ಅಭ್ಯಾಸವು ಕಡಿಮೆಯಾಗುತ್ತ ಬಂದುದರಿಂದ ಸಂಪಾದನೆಯೂ ಕಡಿಮೆಯಾಗುತ್ತ ಬಂತು. ವರಮಾನವು ಹೀಗೆ ಒಂದುಕಡೆಯಲ್ಲಿ ದಿನದಿನಕ್ಕೂ ಕ್ಷೀಣವಾಗುತ್ತಿರಲು ದುಂದುಗಾರಿಕೆಯ ಸೊಗಸು ಹೆಚ್ಚಾಗಿ, ವೆಚ್ಚದ

* ಈ ವಾಕ್ಯವು ನಮ್ಮ ಈ ಕಾಲದ ಮಹಿಳೆಯರಲ್ಲಿ ಅಧಿಕಾರ ಮದದ ಅಹಂಪ್ರಭುತ್ವದಿಂದ ಹಿಗ್ಗಿ ಕರಗುತ್ತಿರುವ ವಿಚಾರಶಕ್ತಿ ಶೂನ್ಯಮತಿಯರಲ್ಲಿ ಅಲ್ಲಿಗಲ್ಲಿಗೆ ತೋರುತ್ತಿರುವದನ್ನು ಬಹು ಜನರು ನೋಡಿ ಅನುಭವ ಮಾಡಿಕೊಂಡಿರುವರೆಂದೇ ಹೇಳಬಹುದಾಗಿದೆ —ಸಂ.

ಪರಿಮಿತಿಯು ಮೀರುತ್ತ ಬಂತು. ಈ ರೀತಿಯಲ್ಲಿ ಎರಡು ಬಗೆಗಳಿಂದಲೂ ಕೆಳಗಣಿಗೆ ದಡಬಡನೆ ಉರುಳಿಕೊಂಡು ಹೋಗುವ ಸಂಭವವೇ ವಿಶೇಷವಾಗಿರುವಲ್ಲಿ ಮೇಲಕ್ಕೆದ್ದು ಉಚ್ಚಸ್ಥಾನವನ್ನು ಸೇರುವ ಯೋಚನೆಗೆ ಅವಕಾಶವೆಲ್ಲಿ ದೊರೆತೀತು?

೬. ಈ ಮೇಲೆ ಹೇಳಿದ ದುರವಸ್ಥೆಯು ಗಂಡಸರಿಗೂ, ಹೆಂಗಸರಿಗೂ, ಮಕ್ಕಳಿಗೂ, ಎಲ್ಲರಿಗೂ ಒಂದೇ ಸಮನಾಗಿ ಅನ್ವಯವಾಗುವ ಹಾಗಿದ್ದರೂ, ಹೆಂಗಸರಲ್ಲಿ ಸ್ವಲ್ಪ ಹೆಚ್ಚಾಗಿರುವದೆಂದೇ ಹೇಳಿದರೆ ತಪ್ಪಾಗಲಾರದು. ಗಂಡಸರೆಂದರೆ, ದುಡಿಯುವ ಮನಸ್ಸಿರಲಿ, ಇಲ್ಲದಿರಲಿ, ಸಂಸಾರದ ಯಜಮಾನಿಕೆಯ ಭಾರವನ್ನು ಹೊತ್ತುಕೊಂಡ ತಪ್ಪಿತಕ್ಕಾಗಿ, ಮನೆಗೆ ಎರಡು ಕಾಸನ್ನು ತಂದು ಹಾಕಲು ಅವರು ಯಾರನ್ನಾದರೂ ಆಶ್ರಯಿಸಲೇ ಬೇಕು. ಹಗುರಾಗಲಿ, ಕಷ್ಟವಾಗಲಿ ಎಲ್ಲಿಯಾದರೂ ಕೆಲಸ ಮಾಡಬೇಕು. ಅವರ ಪಾಲಿಗೆ ಇದೊಂದು ನಿರ್ಬಂಧವಾಗಿಯೇ ಪರಿಣಮಿಸಿದೆ. ಇದರಿಂದಲಾದರೂ ವಿಶೇಷವಾಗಿ ವ್ಯರ್ಥ ಕಾಲಹರಣ ಮಾಡುವದು ಅವರಿಗೆ ಸಾಧ್ಯವಿಲ್ಲ. ದುಡಿಮೆಗೆ ಒಂದು ಗೌರವವುಂಟಾಗುವಂತೆ ಅಂತಃಕರಣ ಶುದ್ಧಿಯಿಂದ ಮಾಡುವದಿಲ್ಲವೆಂಬುದಿಷ್ಟೇ ಗಂಡಸರ ಮೇಲಿನ ಆಪಾದನೆಯಲ್ಲದೆ, ಹೆಚ್ಚಿನ ದೂಷಣೆಗೆ ಅವಕಾಶವಿಲ್ಲ. ಹೆಂಗಸರು ವಿಷಯದಲ್ಲಾದರೆ, ಹಾಗಿಲ್ಲ. ಗೃಹಿಣಿಯೆನ್ನಿಸಿಕೊಂಡರೂ, ಬೇಕಾದುದೂ, ಬೇಡವಾದುದೂ ಎಲ್ಲವನ್ನೂ ಸಾಮಾನ್ಯವಾಗಿ ಗಂಡಸರೇ ನೋಡಿಕೊಳ್ಳುವರು. ಹೆಂಗಸರ ಮೇಲೆ ಬಿದ್ದ ಭಾರವೆಂಬುದು ಅಡಿಗೆಗೆ ಸಂಬಂಧಪಟ್ಟ ಅಲ್ಪಸ್ವಲ್ಪ ಮನೆಗೆಲಸ. ಅದರಲ್ಲಿಯೂ ಉಕ್ಕಿ, ಕೇರಿ ಮಾಡಿ, ಒಲೆಯ ಮೇಲೆ ಹಾಕಲು ಸಿದ್ಧವಾಗಿರುವ ಪದಾರ್ಥಗಳು ಪೇಟೆಯಲ್ಲಿ ಬೇಕೆಂದ ನಿಮಿಷದಲ್ಲಿ ದೊರೆಯುವ ಕಾರಣ, ಮಾಡದೆ ಇದ್ದ ಪದಾರ್ಥಗಳನ್ನು ಮಾಡಿಕೊಂಡು ಹವಣಿಸಿಕೊಳ್ಳಬೇಕೆಂಬ ತೊಡಕೂ ವಿಶೇಷವಾಗಿಲ್ಲ. ಇರುವ ಅಲ್ಪಸ್ವಲ್ಪ ಕೆಲಸವಾದರೂ ಕೂಡ, ನಾಗರಿಕತೆಯ ಅಂತಸ್ತು ಏರುತ್ತ ಏರುತ್ತ ಕಡಮೆಯಾಗುತ್ತ ಬಂದು, ಕೊನೆಗೆ ಶೂನ್ಯಪ್ರಾಯವೇ ಆಗುವದು. ಹೇಗೇ ಆಗಲಿ, ಗಂಡಸರಿ

ಗಿಂತಲೂ ಹೆಂಗಸರಿಗೆ ಎಷ್ಟೋ ಹೆಚ್ಚಿನ ಕಾಲ ಅವರ ಸ್ವಾಧೀನದಲ್ಲಿ ರುವುದು, ಮೇಲಾಗಿ ಎಷ್ಟೋ ಆತಂಕಗಳು ಕಡಮೆಯಾಗಿರುವವು. ಈ ಕಾಲ-ಅನುಕೂಲಗಳನ್ನು ಅವರು ಹೇಗೆ ಉಪಯೋಗಿಸುತ್ತಿದ್ದಾರೆ? ಸಾಕ್ಷಾತ್ತಾಗಿ ದೀನೋದ್ಧರಣ ಕಾರ್ಯದಲ್ಲಿ ಹೊತ್ತು ಕಳೆಯುವವರು ಎಷ್ಟು ಮಂದಿ? ಉದ್ಧರಣಕಾರ್ಯಕ್ಕೆಂದಲ್ಲದಿದ್ದರೆ, ಮನಸ್ಸಿನ ಬೇಸರ, ಆಲಸ್ಯ, ಮುಂತಾದುವುಗಳನ್ನು ಕಳೆಯುವ— ಅದು ಕಾರಣದಿಂದಲೇ ಸುಖಪ್ರದವಾದ ಸಂಗೀತ-ಸಾಹಿತ್ಯ ಮೊದಲಾದುವುಗಳ ವ್ಯಾಸಂಗದಲ್ಲಿ ಕಾಲಕಳೆಯುವ,—ಇನ್ನು ಕೆಲವರನ್ನೂ ವಿನಾಯಿತಿಯಲ್ಲಿ (?) ಸೇರಿಸಿಕೊಂಡರೆ, ಸಾಮಾನ್ಯವಾಗಿ ಸ್ತ್ರೀಯರೆಲ್ಲರೂ ಹಾಳು ಹರಟೆಯಲ್ಲಿಯೋ, ಮೂಳು (?) ಚೇಷ್ಟೆಯಲ್ಲಿಯೋ, ಅಥವಾ ಮತ್ತಾವುದಾದರೂ ಒಂದು ನಿರರ್ಥಕವಾದ ಕ್ರೀಡಾ ವ್ಯಾಪಾರದಲ್ಲಿಯೋ ತಮಗೆ ಯಥೇಷ್ಟವಾಗಿರುವ ವಿರಾಮಕಾಲವನ್ನು ಕಳೆಯುತ್ತಿರುವರು

೭ ಅಧಿಕಾರಕ್ಕೆ ಸಾರ್ಥಕ್ಯವನ್ನು ಕೊಡುವ ಪ್ರಯೋಜನವು ಕೈಸೇರಬೇಕಾದರೆ ಇರುವ ಕಾಲ-ಅನುಕೂಲಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಅವುಗಳ ವಿನಿಯೋಗವು ಹೇಗಾಯಿತೆನ್ನುವದಕ್ಕೆ ಪಟ್ಟ ಶ್ರಮವೇ ಒಂದು ಪರಿಮಾಣ ಆ ಶ್ರಮಕ್ಕೆ ಸಾರ್ಥಕ್ಯವು ಬರಬೇಕಾದರೆ ಅದಕ್ಕೆ ತಕ್ಕಷ್ಟು ಪ್ರಯೋಜನವು ಶ್ರಮೆ ಪಟ್ಟವರ ಸ್ವಂತಕ್ಕಾಗಲೀ ಅಥವಾ ಇತರರಿಗಾಗಲೀ ಉಂಟಾಗಿರಬೇಕು. ಈ ಒರೆಗಲ್ಲಿನಲ್ಲಿ ಪರೀಕ್ಷೆಮಾಡಿ ನೋಡಿದರೆ ಎಷ್ಟು ಜನ ಸ್ತ್ರೀಯರು ತಮ್ಮ ಕರ್ತವ್ಯದಕ್ಷತೆಯ ವಿಷಯದಲ್ಲಿ ತಮ್ಮ ಮನಸ್ಸೆಂಬ ಸಾಕ್ಷಿಯನ್ನೂ ಒಪ್ಪಿಸಬಲ್ಲರು? ಹೆಂಗಸರು ಅಬಲೆಯರಾದುದರಿಂದ ಸಹಜವಾಗಿಯೂ ಹೆಚ್ಚಿನ ಕಷ್ಟಕೆಲಸಗಳನ್ನು ಮಾಡುವದೇನೋ ಅವರಿಂದ ಸಾಧ್ಯವಿಲ್ಲ. ಹೋಗಲಿ-ಎಂದರೆ, ಅವರ ಯೋಗ್ಯತೆಗೆ ತಕ್ಕಷ್ಟನ್ನೂ ಅವರು ಮಾಡುತ್ತಿಲ್ಲ ಅವರ ಕಾಲಹರಣದಿಂದ ಪ್ರಯೋಜನಾಂಶವು ಇಷ್ಟು ತುಸುವಾಗಿರಲು, ಅವರ ವಿಲಾಸ ವಿಭವದಲ್ಲಿ ಅವರ ವರ್ತನೆಯು ಎಷ್ಟು ಶೋಚನೀಯವಾಗಿರಬಹುದು?

# ಕರ್ಣಾಟಕ ನಂದಿನಿ ಮಾಸಪತ್ರಿಕೆ.

ಸಂಪುಟ ೧     ನಳ ಸಂ|| ಮಾರ್ಗಶಿರ     ಸಂಚಿಕೆ ೩



ಶ್ರೀಯುತ ಜಸ್ಟಿಸ್ ಕೆ ಯಸ್ ಚಂದ್ರಶೇಖರ
ಅಯ್ಯರ್, ಬಿ ಏ , ಬಿ ಎಲ್ , ಅವರು



ಶ್ರೀ|| ಸೌ|| ಪಾರ್ವತಾಂಬಾ

[ಶ್ರೀ|| ಜಸ್ಟಿಸ್ ಕೆ ಎಸ್ ಚಂದ್ರಶೇಖರಯ್ಯರ್, ಬಿ ಎ, ಬಿ ಎಲ್,
ಅವರ ಧರ್ಮಪತ್ನಿ ]

॥ ಶ್ರೀ ॥

॥ वदेत्वां भूदेवि आर्यमातरम् ॥

ಕರ್ನಾಟಕ

# ನಂದಿನಿ.

ಸ್ತ್ರೀಜನಾಂಗದ ಸ್ವರ್ಗೀಯ ಸೌಜನ್ಯಾಭಿವೃದ್ಧಿಗಾಗಿ
ಸ್ತ್ರೀಯರಿಂದಲೇ ಪ್ರಕಟವಾಗುವ

ಮಾಸಪತ್ರಿಕೆ

“ ಸಿದ್ಧಾಂ ಸರ್ವಾಣಿ ಭೂತಾನಿ ಭೂತಾನಾಂ ಚೈವಯಃಪ್ರಭು ।
ದಾಸ್ಯನ್ತಿ ಮಮಯೀ ಬಾನ್ಯೇ ಹ್ಯದೃಷ್ಟಾ ಪಥಿಗೋಚರಾ ॥ ”

ಸಂಪುಟ ೧ } ನಳಸಂ॥ ಮಾರ್ಗಶಿರಮಾಸ ೧೯೧೬ನೇ ದಿಶಂಬರ { ಸಂಚಿಕೆ ೩.

## ರಮಾ ಸ್ತುತಿ.

ರಾಗ— (ಕಮಲೋದ್ಭವ ಕಮಲಾ)

ಪದ್ಮಾಲಯೆ ಪೊರೆಯೆ ಸದಯೆ ॥ ಪದ್ಮಸಂಭವೆ ಬೇಡುವೆ
ಕೊಂಡಾಡುವೆ, (ನಿನ್ನ) ಕಾಡುವೆ ॥ ಪದ್ಮಾಲಯೆ ॥ ಪ ॥
ಮನಸಿಜನಯ್ಯನ ಮೋಹದ ರಾಣಿಯೆ ॥ ಮುನಿಸಿಂತೇತಕೆ,
ಭೂಸುತೆ, ಮುನಿಸನ್ನುತೆ, ಕರುಣಾನ್ವಿತೆ ॥ ಪದ್ಮಾಲಯೆ ॥ ೧ ॥
ಸುರನರ ವಂದಿತ ಚರಣ ಸರೋಜದಿ ॥ ಶರಣೆನ್ನುವ ಕಂದ
ನಂ । ಪರಿಸೀದಿನ— ದೀನಮೊಂಬೆನಾಂ ॥ ಪದ್ಮಾಲಯೆ ॥ ೨ ॥
ಮಾತೆಯೆ ಮುಳಿದೊಡೆ ಪೋತನ ಪೊರೆವಾ ॥ ದಾತರು
ಮಿರ್ಪರೆ ನೀಂ ನುಡಿ, ಗತಿನಿನ್ನಡಿ, ಅಣುಗನ ಕೈಪಿಡಿ ॥ ೩ ॥
ಪರಮ ಪಾವನ ಶೇಷಗಿರೀಶನ ಕರುಣಾರೂಪಿಣಿ-ಭಾಮಿನಿ
ಶುಭದಾಯಿನಿ ಜಯ ನಂದಿನಿ ॥ ಪದ್ಮಾಲಯೆ ॥ ೪ ॥

(ಶ್ರೀಪಾದರೇಣು)

# ಪ್ರಣಯತತ್ತ್ವ

“ ಸಮಸ್ತ ಜನನೀಂ ವನ್ದೇ ಚೈತನ್ಯಸ್ತನ್ಯದಾಯಿನೀಂ ।
ಶ್ರೇಯಸೀಂ ಶ್ರೀನಿವಾಸಸ್ಯ ಕರುಣಾಮಿವರೂಪಿಣೀಂ ॥ ”

( “ ಸಮಸ್ತ ಚೇತನಗಳಿಗೂ ಚೈತನ್ಯವನ್ನುಂಟು ಮಾಡುವ ಅಮೃತಸ್ತನಿಯಾಗಿಯೂ, ಸಮಸ್ತವಾದ ಶ್ರೇಯಸ್ಸಿಗೂ ಕಾರಣ-ಕಾರ್ಯಕರ್ತ್ರಿಯಾಗಿಯೂ, ಭಗವಾನ್ ಶ್ರೀನಿವಾಸನ ಕರುಣಾಸ್ವರೂಪಿಣಿಯಾಗಿಯೂ ಇರುವ ಯಾವ ಜಗನ್ಮಾತೆಯುಂಟೋ, ಅಂತಹ ಪರಮ ಕಾರುಣ್ಯಪರಿಪೂರ್ಣೆಯಾದ ಭಗವತಿಯನ್ನು ಕುರಿತು ವಂದಿಸುತ್ತೇನೆ.” ಎಂದು ಭಾವಪ್ರ )

---

ಆರ್ಯ ಭಗಿನಿಯರೇ ! ಆರ್ಯ ಧರ್ಮಾಧಾರಪಾತ್ರೆಯರೇ !!

ಇಲ್ಲಿ ನೆರೆದಿರುವ ನಾವೆಲ್ಲರೂ ಪರಸ್ಪರ ಪ್ರಣಯಾನುಬಂಧಿಗಳಾಗಿರುವೆವು. ಪ್ರಣಯ ಪ್ರೇರಣೆಯಿಂದಲೇ ನಿಮ್ಮ ನಮ್ಮ ಸ್ವಾಗತ ಅಭಿನಂದನರೂಪವಾದ ಇಂದಿನ ಸಮ್ಮೇಲನವುಂಟಾಗಿರುವದು ಆದುದರಿಂದ ಅಂತಹ “ಪ್ರಣಯದ” ನಿಜಸ್ವರೂಪವನ್ನು ಇಲ್ಲಿ ನಾವು ಚೆನ್ನಾಗಿ ವಿಮರ್ಶಿಸಿ, ಪ್ರದರ್ಶನಕ್ಕೆ ತರುವುದೇ ನಮ್ಮ ಪ್ರಥಮ ವಿಚಾರವು

ಆದರೆ, ಆವುದೇ ಒಂದು ವಿಮರ್ಶೆಗೂ, ಶಾಸ್ತ್ರಪ್ರವಚನಗಳನ್ನು ಹಿಡಿದು ಮಾಡಬೇಕೆಂಬುದೂ, ಸೂತ್ರಗಳನ್ನು ಕೊಡದೆ ಹೇಳುವ ನೀತಿಗಳು ಯಾರಿಗೂ ರುಚಿಸದೆಂಬುದೂ, ಪಂಡಿತರ ಅಭಿಪ್ರಾಯವಾಗಿದೆ ಇದನ್ನರಿತು ನಾವು ಕೂಡ ಸೂತ್ರಗಳನ್ನು ಮುಂದಿಟ್ಟೇ

---

* ಇದು, ಪತ್ರಕರ್ತ್ರಿಯು ಕಳೆದ ವರ್ಷ ಎಂದರೆ, ೧೯೧೫೯ ಜೂನ ೧೭ ಬುಧವಾರ, ಬೆಂಗಳೂರು ಮಲ್ಲೇಶ್ವರದಲ್ಲಿ ತನ್ನನ್ನು ನೋಡಲು ಬಂದಿದ್ದ ಭಗಿನಿಯರಲ್ಲಿ ತಮ್ಮ ಅಭಿನಂದನ ಪ್ರದರ್ಶನಾರ್ಥವಾಗಿ ಮಾಡಿದ ಭಾಷಣವು ಇದನ್ನು ಕಾರಣಾಂತರಗಳಿಂದ ಪ್ರಕಟಿಸದಿದ್ದು, “ಈಗಲೇ ನಂದಿನಿಯಲ್ಲಿ ಪ್ರಕಟಿಸಬೇಕೆಂದಾದ” ಭಗವತಿಯ ಆಣತಿಯಿಂದ ಇದನ್ನಿಂದು ಪ್ರಕಟಪಡಿಸಿದೆ

( ಸಂ )

ಭಾಷಣ ಮಾಡಬೇಕೆಂಬ ಅಭಿಲಾಷೆಯಿದ್ದರೂ ಪ್ರಕೃತ ಸ್ಥಿತಿಯಲ್ಲಿ, ಇಲ್ಲಿ ನಮ್ಮ ಈ ಸಮಯಕ್ಕೆ ತಕ್ಕಂತೆ ಅವುಗಳನ್ನು ಒದಗಿಸಿಕೊಳ್ಳುವಷ್ಟು ಸಾಹಿತ್ಯಗಳಿಲ್ಲವಾದುದರಿಂದ, ಕೇವಲ ಸ್ಥೂಲ ವಿಚಾರಗಳಿಂದ ನಮ್ಮ ಅನುಭವಕ್ಕೆ ಕೊಳಪಡಬಹುದಾದ ವಿಚಾರಗಳನ್ನೇ ಹಿಡಿದು, ತಿಳಿದಷ್ಟನ್ನು ಹೇಳುವದು ಈಗ ಸರಿಯಾಗಿ ಕಾಣುತ್ತದೆ ಇದರಿಂದ ನಡನಡುವೆ ಸೇರಬಹುದಾದ ದೋಷಗಳಿಗಾಗಲೀ, ರಸಾಭಾಸಕ್ಕಾಗಲೀ ಆಗ್ರಹಿಸದೆ, ಸಾರಾಂಶವನ್ನು ಮಾತ್ರ ಸಂಗ್ರಹಿಸಬೇಕೆಂಬುದೇ ನನ್ನ ಪ್ರಾರ್ಥನೆಯಾಗಿದೆ ಇದೇ ನಮ್ಮ ಇಂದಿನ 'ಪ್ರಣಯತತ್ತ್ವದ' ಮೂಲಧನವು

ತಾಳ್ಮೆಯಿರಲಿ, ಸೋದರಿಯರೇ!

'ಪ್ರಣಯ'ವೆಂಬ ಶಬ್ದವು ಹೊರಬಿದ್ದ ಮಾತ್ರದಿಂದ ನಿಮ್ಮ ಹೃತ್ಕೋಶದಲ್ಲಿ ವಿಸ್ಮಯ, ಕೌತುಕಗಳುಂಟಾಗಿರುವಂತೆ ನಿಮ್ಮ ನಿಮ್ಮ ಮುಖಲಕ್ಷಣದಿಂದಲೇ ತಿಳಿದುಬರುತ್ತಿದೆ ನಿಮಗೆ ಹೀಗಾಗುವದೇನೂ ಅತಿಶಯವಲ್ಲ. ಏಕೆಂದರೆ- ಅಮೋಘವಾದ, ಆ 'ಪ್ರಣಯಸ್ವರೂಪ' ಜ್ಞಾನವು ಸದ್ಯಸ್ಥಿತಿಯಲ್ಲಿ ನಮ್ಮವರ ಅವಿಚಾರದಿಂದ ಮಲಿನವಾಗಿರುವದೇ ಕಾರಣವಾಗಿದೆ

"ಏನು? ಪ್ರಣಯ ಸ್ವರೂಪಜ್ಞಾನವು ಮಲಿನವಾಗಿದೆಯೇ? ಅದೇ ಎತ್ತಲ್ಲಿಯೂ ಸುತ್ತಿಮುತ್ತಿರುವುದಿಲ್ಲವೇ?" ಎಂದು ನೀವು ಆಕ್ಷೇಪಿಸುವಿರಿ! ಹಾಗಾದರೆ ಆ ಆಕ್ಷೇಪವು ಉಚಿತವಾಗಿ ಕಾಣುತ್ತಿಲ್ಲ. ಹೇಗೆನ್ನುವಿರಲ್ಲವೆ? ಸಾವಧಾನದಿಂದ ಆಲಿಸಿರಿ

'**ಪ್ರಣಯ**'ವೆಂಬ ಪವಿತ್ರ ಶಬ್ದಕ್ಕೆ ಈ ಬಗೆಯ ಲೋಭ ಮೋಹ ಸಂಬಂಧವಾದ ಅಪಾರ್ಥವನ್ನು ಮಾಡುವದು ಸರ್ವದಾ ಸರಿಯಾದುದಲ್ಲ ಈ "ಪ್ರಣಯ" ವೆಂಬುದು ಅನಾದಿಸಿದ್ಧವೂ ಸಾಕ್ಷಾತ್ಪರಮಾತ್ಮನ ಕೃಪಾರೂಪವೂ ಆಗಿರುವದು

"ಪ್ರಣಯ"ವೆಂದರೆ ಇಲ್ಲಿ ಪ್ರಾಣಾಧಾರವಾದ ಸ್ನಿಗ್ಧ (ಸ್ನೇಹ, ಜಿಡ್ಡು) ಮಯ ವಸ್ತುವಿಶೇಷವು ಇದೇ ಸಂದರ್ಭಾನುಸಾರವಾಗಿ ಇಷ್ಟ, ಅಭಿಲಾಷೆ, ಆಕಾಂಕ್ಷೆ ಇತ್ಯಾದಿ ಹೆಸರುಗಳಿಂದಲೂ ಪ್ರಯೋ

ಗಿಸಲ್ಪಡುತ್ತಿರುವದು. ಆದುದರಿಂದ ನಾವು ಈ 'ಪ್ರಣಯ'ವೆಂಬುದರ ನಿಜ[ತತ್ತ್ವ] ಸ್ವರೂಪವನ್ನು ತಿಳಿದು ವರ್ತಿಸಬೇಕಾದುದು ಪ್ರಕೃತ ಕಾಲೋಚಿತ ಕ್ರಿಯೆಯಾಗಿದೆ

ಮೇಲೆ ಹೇಳಿದ 'ಪ್ರಣಯ'ವೆಂಬ ಸ್ನಿಗ್ಧಮಯ ವಸ್ತುವಿಶೇಷವು ಪರಮಾತ್ಮನ ಅಪಾಂಗವೀಕ್ಷಣದಲ್ಲಿ ಸರ್ವದಾ ನೆಲೆಸಿರತಕ್ಕ ಸುಧಾ (ಅಮೃತ) ರಸ ಪ್ರಾಯವಾಗಿದೆ ಈ ಅಮೃತವು ಪ್ರಕೃತಿ ವಿಶಿಷ್ಟದ ಲ್ಲೆಲ್ಲಾ ಒಂದೇ ರೂಪದಿಂದ ಕಾಣುತ್ತಿಲ್ಲ ಕಾಲ, ಕಾರ್ಯ, ಸಂದರ್ಭ ವಿಶೇಷಗಳನ್ನು ಅನುಸರಿಸಿ, ಭಾವನಾಶಕ್ತಿಗೆ ತಕ್ಕಂತೆ ಒಳಪಟ್ಟು, ಎಂದರೆ,- ಅಣುವಿಗೆ ಅಣುವಾಗಿಯೂ, ಮಹತ್ತಿಗೆ ಮಹತ್ತಾಗಿಯೂ ವಿಶೇಷವಾಗಿ ಪ್ರಾಣಿವರ್ಗದಲ್ಲೆಲ್ಲಾ ತನ್ನ ನಿರಂಕುಶ ಪ್ರಭುತ್ವವನ್ನು ಪ್ರದರ್ಶಿಸುತ್ತಿರುವದು. ಭಗವತ್ಸಂಕಲ್ಪದಲ್ಲಿ ಈ ಪ್ರಣಯ ಘಟನೆಯೇ ಇಲ್ಲದಿದ್ದ ಪಕ್ಷದಲ್ಲಿ, ಈ ವಿಶ್ವ (ಪ್ರಪಂಚವು) ಈ ಬಗೆಯ ಸುಖ, ಭೋಗ, ಸಂಪದ, ಅಭ್ಯುದಯ, ಆತ್ಮಾನಂದ ಎಂಬಿವೇ ಪರ್ಯಾಯವಾ ಚಕಗಳಾಗಿರುವ ಸಂತೋಷಕ್ಕೆ ಆಕರವನ್ನಿಸುತ್ತಿರಲಿಲ್ಲ *

ಈ ಸಂತೋಷವೇ ಇಲ್ಲದಿದ್ದಲ್ಲಿ, ಆದಕ್ಕಾಕರಗಳಾದ ನಂದನ ವನ, ಗಿರಿ, ದುರ್ಗ, ಪ್ರಾಸಾದಗಳೆಂಬ ವಿಹಾರ ಸ್ಥಾನಗಳಾಗಲೀ, ತರುಲತಾ, ಗುಲ್ಮವೇ ಮೊದಲಾದ ಮನೋರಂಜಕ ಮತ್ತು ಶಕ್ತ್ಯು ತ್ತೇಜಕಗಳಾದ ಫಲ-ಪುಷ್ಪಜಾತಿಗಳಾಗಲೀ ವಾಪೀ ಕೂಪ ತಟಾಕಾದಿ ಆಯಾಸವಿಶ್ರಾಂತಿಕಾರಕಗಳಾದ ಜಲಾಶಯಗಳಾಗಲೀ, ಇನ್ನೂ ಹಂಸ, ಕಾರಂಡವ, ಚಕ್ರವಾಕಾದಿ ಉತ್ಸಾಹಾಭಿವರ್ಧಕಗಳಾದ ಪಕ್ಷಿ

---

* ( ಸಂತೋಷವೆಂಬುದು ಪ್ರಾಣಿಯ ಪ್ರಣಯ [ ಆಕಾಂಕ್ಷೆ, ಪ್ರಾರ್ಥನ, ಕೋರಿಕೆ ] ಬಲದಿಂದಲೇ ದೊರೆಯತಕ್ಕುದು ಈ ಆಕಾಂಕ್ಷೆಯು, ಪ್ರಾಣಿವರ್ಗ ಗಳಲ್ಲಿ ಅವರವರ ಯೋಗ್ಯತೆಗೆ ತಕ್ಕಂತಹ ವೃತ್ತಿಯಲ್ಲಿ ಗಮನವನ್ನುಂಟು ಮಾಡು ವದಕ್ಕೂ, ಪ್ರವೃತ್ತಿಗೆ ಫಲಪ್ರಾಪ್ತಿಯಾಗಲು ಹಿಡಿಯಬೇಕಾದ ಸಾಹಸವನ್ನು ತೋರಿಸು ವದಕ್ಕೂ ಕಾರಣವಾಗಿದೆ ಇದರಿಂದಲೇ ಎಂದರೆ, ಈ ಪ್ರಣಯಾವಿಷ್ಟವಾಗಿರುವದ ರಿಂದಲೇ ಪ್ರಾಣಿ ಉಜ್ಜೀವಿಸಬೇಕಾಗಿದೆ

ಕುಲವಾಗಲೀ ಈ ಸೃಷ್ಟಿಯಲ್ಲಿ ಇಷ್ಟು ರಂಜನವನ್ನುಂಟು ಮಾಡುತ್ತಿರಲಿಲ್ಲ ಮತ್ತು ಈ 'ಪ್ರಣಯ'ವೆಂಬ ರಸವಸ್ತುವನ್ನೇ ವಿಶೇಷವಾಗಿ ಆಶ್ರಯಿಸಿರುವ ಈ ಮಾನವ ವರ್ಗವೂ, ತನ್ನಿರೂಪಣಕ್ಕೆಂದೇ ಪರಿಕಲ್ಪಿತಗಳಾಗಿರುವ ಈ ಕರ್ಮೇಂದ್ರಿಯ ಮತ್ತು ಜ್ಞಾನೇಂದ್ರಿಯಾದಿ ಉಪಕರಣಗಳೂ, ಅವುಗಳ ಪುಷ್ಟೀಕರಣ ಪಾತ್ರಗಳಾಗಿ ನಿಯಮಿತವಾಗಿರುವ ಪತ್ನೀ, ಪುತ್ರ, ಮಿತ್ರ, ಪರಿವಾರಗಳೂ, ಈ ಸೃಷ್ಟಿಕ್ರಮದಲ್ಲಿ ಇಷ್ಟು ಆಹ್ಲಾದಜನಕಗಳಾಗಿ ಕಾಣುತ್ತಿರಲಿಲ್ಲ ಎಂದಬಳಿಕ, ಸಮಸ್ತ ವಿಧವಾದ ಪ್ರಕೃತಿಗಳಿಗೂ ಈ 'ಪ್ರಣಯ'ವೇ ಮೂಲವೆಂದು ಹೇಳಲು ತಡೆಯೇನು ?

ಸೋದರಿಯರೇ ?

'ಪ್ರಣಯ'ವೆಂಬ ಶಬ್ದಕ್ಕೆ ಪರಸ್ಪರ ಆಕಾಂಕ್ಷಾಬಂಧವೆಂದು ಹೇಳಲಿಕ್ಕೂ ಮೇಲೆ ಹೇಳಿರುವ ವಾಕ್ಯವೇ ಸಾಕಲ್ಲವೆ ? ಹೇಗೆಂದರೆ- ತಾಯಿ ಮಕ್ಕಳು, ಗಂಡ-ಹೆಂಡಿರು, ಗುರು ಶಿಷ್ಯರು, ಸ್ವಾಮಿ-ಭೃತ್ಯರು ಮೊದಲಾದವರಲ್ಲ ಬ್ಬರಲ್ಲಿ ಮತ್ತೊಬ್ಬರು ಒಂದೆಂದು ಬಗೆಯ ಉಪಕಾರ ಪ್ರತ್ಯುಪಕಾರರೂಪವಾದ ಶ್ರೇಯಸ್ಕಾಮಿಗಳಾಗಿರುವರು. ಈ ಅಪೇಕ್ಷೆಯು (ಕಾಮನೆ, ಆಕಾಂಕ್ಷೆ, ಪ್ರಾರ್ಥನೆ) ಸಾಮಾನ್ಯವಾಗಿ ಎಲ್ಲರಲ್ಲಿಯೂ ನೆಲೆಗೊಂಡಿರುವದರಿಂದ' ಈ ಸಂಬಂಧ ಕಲ್ಪನೆಯ ಸ್ನೇಹಪಾಶವು ಅಪ್ರತ್ಯಕ್ಷವಾಗಿಯೋ, ಪ್ರತ್ಯಕ್ಷವಾಗಿಯೋ ನಮ್ಮೆಲ್ಲರನ್ನೂ ಆಳುತ್ತಿರುವದು ಇದಕ್ಕೆ ನಿದರ್ಶನಕ್ಕೆಂದರೆ ಇಲ್ಲಿ ನೆರೆದಿರುವ ನಮ್ಮ ನಮ್ಮ ವಿಚಾರವೇ ಸಾಕು. ಹೇಗೆನ್ನುವಿರಿ ? ನೀವು ಇಂದು ನನ್ನ ಮುಖದಿಂದ ಭಾಷಣ ಮಾಡಿಸಬೇಕೆಂಬ ಆಕಾಂಕ್ಷೆಯುಳ್ಳವರಾಗಿ ಬಂದಿರುವಿರಿ ಈ ಆಕಾಂಕ್ಷೆಯ ಪ್ರೇರಣೆಯೇ ನಿಮ್ಮನ್ನು ಆಯಾಸ ಬೇಸರಗಳ ಕಡೆಗೆ ಗಮನಿಸದೆ ಇಲ್ಲಿಯವರೆಗೆ ಬರುವಂತೆ ಮಾಡಿರುವುದು ನಾನು ಕೂಡ ತಮ್ಮಗಳ ಸೌಜನ್ಯವನ್ನು ಇಂದಿನ ಈ ನನ್ನ ಅಭಿನಂದನರೂಪವಾದ ಭಾಷಣದಿಂದ ದೃಢಪಡಿಸಬೇಕೆಂಬ

ಪ್ರತ್ಯಾಕಾಂಕ್ಷೆಯಿಂದಿರುವೆನು ಹೀಗೆ ನಾವು ಪರಸ್ಪರ ಪ್ರಣಯಾನುಬಂಧಿಗಳಾಗಿರುವೆವು. *

ಪ್ರಣಯವೆಂಬುದರ ನಿಜ (ತತ್ವ) ವು ಹೀಗಿರುವದರಿಂದ ಇದನ್ನು ಅಡ್ಡದಾರಿಗೆ ತಿರುಗಿಸುವದು ಸರಿಯಾದುದಲ್ಲ. ಇನ್ನು ಇದು–ವೆಂದರೆ, ಈ "ಪ್ರಣಯ"ವೆಂಬುದು ಆವಾವ ಪಾತ್ರಗಳಲ್ಲಿ ಆವಾವ ರೂಪದಿಂದ ಸುಸಂಬದ್ಧವಾಗಿರುವದೆಂಬುದನ್ನು ಯೋಚಿಸಬೇಕಲ್ಲವೆ?

ಮೇಲೆ ಹೇಳಿರುವಂತೆ ಈ ಪ್ರಣಯವು, ಭಗವತ್ಕಟಾಕ್ಷದಲ್ಲಿ ನೆಲೆಗೊಂಡಿರುವದರಿಂದ ಅದರ ಸಾಫಲ್ಯ ಹೊಂದಬೇಕಾದರೆ, ಅದಕ್ಕೆ ಆಧಾರವಾಗಿರುವ ಗುರ್ವನುಗ್ರಹವು ಮೊದಲು ದೊರೆಯಬೇಕು ಈ ಗುರುಭಾವನೆಯು ಮೊದಲು ತಾಯ್ತಂದೆಗಳಿಂದಲೇ ಹುಟ್ಟಿ, ಬೆಳೆದು ಆ ಬಳಿಕ ಪೋಷಕ ವರ್ಗಕ್ಕೆ ಸೇರಬೇಕಾಗಿದೆ ಏಕಂದರೆ, ತಾಯ್ತಂದೆಗಳಿಲ್ಲದೆ ನಾವು ಜನ್ಮವೆತ್ತಲಾರೆವಷ್ಟೆ! ಹಾಗೆ ಜನ್ಮಕ್ಕೆ ಕಾರಣರಾದವರಲ್ಲಿ ಮೊದಲು ಗುರುಭಾವನೆಯುತ್ಪನ್ನವಾದಲ್ಲದೆ, ಆ ಕಟಾಕ್ಷಕಾಂತಿಯ ನಿಜವಾದ ಸ್ವರೂಪಜ್ಞಾನವು, ದೊರೆಯುವದೆಂಬುದು ಸುಳ್ಳು.

ತಾಯ್ತಂದೆಗಳಲ್ಲಿ ಗುರುಭಾವವನ್ನಿರಿಸಿ ವರ್ತಿಸುವ ಮಕ್ಕಳಿಗೆ ಅವರ [ಸ್ವರ್ಗೀಯ ಸ್ವಾಭಾವಿಕ] "ಕೃಪೆ" ಎಂಬ ಅಮೃತರಸವು ಅನ

---

* ಈ ಪ್ರಣಯ ತತ್ವಾರ್ಥವನ್ನು ಕವಿತಿಲಕನಾದ ಶ್ರೀಕಾಳಿದಾಸನು ತನ ಮಹಾಕಾವ್ಯವಾದ ರಘುವಂಶದಲ್ಲಿ ಹೀಗೆಂದು ಸಮರ್ಥಿಸಿರುವನು —

"ಸಂಬಂಧಮಾಭಾಷಣ ಪೂರ್ವಮಾಹುರ್ವೃತ್ತಸ್ಸನ್ ಸಂಗತಯೋರ್ವನಾಂತೇ ।
ತದ್ಭೂತನಾಥಾನುಗ ನಾರ್ಹಸಿತ್ವಂ ಸಂಬಂದಿನೋಮೇ ಪ್ರಣಯಂ ವಿಹನ್ತುಂ॥"
(ಸರ್ಗ ೨ ಶ್ಲೋಕ ೫೮)

ಬಲ್ಲವರು ಒಬ್ಬರೊಡನೊಬ್ಬರು ಮಾತನಾಡುವುದೇ ಸ್ನೇಹಕ್ಕೆ ಮೊದಲೆಂದು ಹೇಳುವರು ಈ ಅರಣ್ಯದಲ್ಲಿ ನಿನಗೂ ನನಗೂ ಅಂತಹ ಸಂಭಾಷಣೆಗಳು ನಡೆದವು ಆದುದರಿಂದ ನಾವಿಬ್ಬರೂ ಸ್ನೇಹಿತರಾದೆವು ಇಂತಹ ಮಿತ್ರನಾದ ನನ್ನ ಅಭಿಮತವನ್ನು ಕೆಡಿಸಿ ಮಿತ್ರದ್ರೋಹಕ್ಕೆ ಭಾಗಿಯಾಗುವುದು ನ್ಯಾಯವಲ್ಲ (ಈ ವಾಕ್ಯವು, ಸಿಂಹಕ್ಕೆ ದಿಲೀಪನು ಹೇಳುವ ಮಾತಾಗಿದೆ ಇದರಿಂದಲೇ ಇದು ಪ್ರಾರ್ಥನಾರೂಪವಾಗಿದೆಯೆಂದು ಹೇಳಲು ಸಾಕಾಗಿದೆ )

ಗರ್ಗಳವಾಗಿ ವರ್ಣಿಸಲ್ಪಡುವುದು ಆ ಅಮೃತ ಸೇಚನೆಯಿಂದಲೇ ಮೊದಲು ಜಡಚೇತನರಾಗಿದ್ದ ಮಕ್ಕಳಿಗೆ ಚೈತನ್ಯವುಂಟಾಗುವದು ಎಂದರೆ, ತಾಯ್ತಂದೆಗಳ ವಿಷಯದಲ್ಲಿ ಮಕ್ಕಳು. ನಮ್ರ (ಭಯದಿಂದ ಕೂಡಿದ ಪ್ರೇಮ) ಭಾವದ (ಋಜುಮಾರ್ಗ) ಪ್ರಣಯ (ಪ್ರಾರ್ಥನೆ) ದಿಂದಲೂ, ಮಕ್ಕಳ ವಿಷಯದಲ್ಲಿ ತಾಯ್ತಂದೆಗಳು, ವಾತ್ಸಲ್ಯ ಅದವಾ ವೃದ್ಧಿಯಾಗಬೇಕೆಂಬ ಆಕಾಂಕ್ಷೆ ರೂಪದ ಪ್ರಣಯದಿಂದಲೂ ಪರಸ್ಪರಾನುಬಂಧ ಹೃದಯವುಳ್ಳವರಾಗಿರಬೇಕೆಂದು ಹೇಳಿದಂತಾಯಿತು

ಇನ್ನು ಮುಂದೆ ಈ ಬಗೆಯಾಗಿ ದೊರೆಯಬಹುದಾದ ಪವಿತ್ರ ವಸ್ತುವನ್ನು ಸಾಕ್ಷಾತ್ಕರಿಸಿಕೊಂಡು ಅದರ ಫಲವನ್ನು ಪ್ರದರ್ಶನಕ್ಕೆ ತಂದುಕೊಡಬೇಕಾದರೆ (ಸಾರ್ಥಕಪಡಿಸಿಡಬೇಕಾದರೆ) ಪುರುಷ ವರ್ಗವು-ಗುರ್ವನುಗ್ರಹದ್ವಾರಾ, ಉಪಲಬ್ಧವಾಗಿರುವ ಸ್ವಸ್ತ್ರೀ ಪಾತ್ರಗಳಿಂದಲೂ, ಸ್ತ್ರೀಯರು ನಿಜಭರ್ತೃ (ಪತಿ) ಗಳಿಂದಲೂ ಪರಸ್ಪರ ಭಾವದ ಸಾಮರಸ್ಯ-ಸಮಾನ-ಪ್ರೇಮ (ಕಾಮನೆ) ಪಾಶದಿಂದ ಬಂಧಿಕರಾಗಿಯೂ ಇರಬೇಕು ಹಾಗಿಲ್ಲದೆ ಇವರಿವರಲ್ಲಿ ಅಸಮಭಾವನೆಯು (ಭಿನ್ನಮತ) ಹುಟ್ಟಿದ ಮಾತ್ರಕ್ಕೆ ಸಾಕು, 'ಪ್ರಣಯ ವೆಂಬ ರಸವಸ್ತುವು ನೀರಸ (ಆಶಾರಾಹಿತ್ಯ) ವಾಗಿ ವ್ಯರ್ಥವೆನ್ನಿಸುವುದು, ಹೀಗಾದ ಬಳಿಕ ಇದರಿಂದುಂಟಾಗುವ ಇತರ ರಸವಸ್ತುವು ಕೂಡ ವಿಷಮರೂಪವನ್ನೇ ಹೊಂದಿ ಆ ಪರಮಾತ್ಮನ ಉದ್ದೇಶವನ್ನು ಕೆಡಿಸಿಬಿಡುವುದರಲ್ಲಿ ಸಂದೇಹವೇ ಇಲ್ಲ ಎಂದಮೇಲೆ, ಭಗವತ್ಕಟಾಕ್ಷ, ಗುರ್ವನುಗ್ರಹಗಳಿಗೆ ದೂರವಾಗಿ, "ಪ್ರಣಯ" ದ ದೈವೀ ಸಂಪತ್ತಿಯನ್ನು ಕಳೆದುಕೊಳ್ಳುವದರಿಂದ ಮೃತಜೀವಿಗಳೆಂಬ ಅಪವಾದಕ್ಕಲ್ಲವೆ ತುತ್ತಾಗಬೇಕಾದುದು?

ಸೋದರಯರೇ! ಇಷ್ಟು ಪ್ರಸ್ತಾವನವು ಸಾಕು, ಪ್ರಕೃತ ಸ್ಥಿತಿಯಲ್ಲಿ ಈ "ಪ್ರಣಯ"ವೆಂದರೆ, ಕೇವಲ ವಿಲಾಸ ವಿಭ್ರಮಾದಿಗಳೇ ಪ್ರಧಾನವಾಗಿರುವ ಪ್ರೇಮವಿಲಾಸ (ಪಶುವೃತ್ತಿ) ವೆಂದೂ, ಈ ಪ್ರೇಮವಿಲಾಸವು ಪರಸ್ಪರ ಸ್ತ್ರೀಪುರುಷರ ಅಭಿಸಂಧಿಯಲ್ಲಿಯೇ ಆಡ

ಗಿರುವದೆಂದೂ ನಮ್ಮವರಲ್ಲಿ ಹಲವರ ಮನವರಿಕೆಯಾಗಿದೆ ಇದಕ್ಕೆ ತಕ್ಕಂತೆಯೇ ನಮ್ಮ ಭ್ರಾತೃವರ್ಗೀಯರೆನ್ನಿಸಿರುವ ಪುರುಷವರ್ಗದಲ್ಲಿಯೂ ಕೆಲವರು ಅವಿಚಾರಾಂಧತೆ ಮದೋನ್ಮತ್ತತೆಗಳಿಗೆ ಪರವಶರಾಗಿ, ಸ್ತ್ರೀಯರಲ್ಲಿ ಈ ಬಗೆಯ, ಅರ್ಥಲೇಶವಿಲ್ಲದೆ ಅನರ್ಥಕಾರಿಯಾದ, ಮರುಳಾಟದ ನಟನಾವಳಿಯಲ್ಲಿ ತಿರುಗುತ್ತಿರುವುದೂ, ಇದನ್ನರಿಯದೆ, ಅಭಿಮಾನ ವಿಶೇಷದಿಂದ ಮೂರ್ಖರಾಗಿರುವ ಆ ಮತ್ತಕಾಮಿನೀ ನಿವಹವು ಉಬ್ಬಿ ಉಬ್ಬಿ, ನಲಿನಲಿದು, ಮನಬಂದಂತೆ ಬೆಡಗುಗೊರುತ್ತಿರುವುದೂ ಅತ್ಯಂತ ಹೇಯ, ವಿಷಾದ ಮತ್ತು ಲಜ್ಜಾಸ್ಪದ ವಿಚಾರಗಳಾಗಿವೆ

ವಿಚಾರಮಾಡುವದಾದರೆ ಈ ಬಗೆಯ ವಿಚಾರ ಶೂನ್ಯತೆಯ ದುರಭಿಮಾನಕ್ಕೆ ನಮ್ಮ ಪುರುಷಬಾಂಧವರ ಅಲಸಭಾವನೆಯೂ ಸ್ವಾರ್ಥಪರತೆಯೂ, ಸ್ತ್ರೀಯರ ಕರ್ತವ್ಯತಾಜ್ಞಾನಶೂನ್ಯತೆಯೂ ದುರಾಶೆಯೂಕಾರಣವೆಂದು ಹೇಳಲು ಬಹು ಸಂಕಟವಾಗುತ್ತಿದೆ ಮತ್ತು, ಈ ಕಾರಣದಿಂದಲೇ, ಅನಾದಿಯಾಗಿ ಬಂದ ಇನ್ನೂ ಎಷ್ಟೋ ಪವಿತ್ರ ವಸ್ತುಗಳು ಅಪವಾದ ಗ್ರಸ್ತಗಳಾಗಿ, ಮಲಿನರೂಪಕ್ಕೆ ಬಂದಿರುವದನ್ನು ನಾವು ಪ್ರತ್ಯಕ್ಷವಾಗಿ ನೋಡಿ ನೋಡುತ್ತ ಸುಮ್ಮನಿರಬೇಕಾಗಿದೆ ಅದೆಲ್ಲವನ್ನು ಇಲ್ಲಿ ಹೀಗೆಂದು ವಿವರಿಸಲು ಅವಕಾಶವಿಲ್ಲ ಮೊದಲು ಸಕಲ ಚೈತನಗಳಿಗೂ ಚೈತನ್ಯದಾಯಕವಾದ ಈ ಪ್ರಣಯಧನವನ್ನು ಭದ್ರವಾಗಿಡುವಂತೆ ಮಾಡಬೇಕಾದುದು ನಮ್ಮ ಮುಖ್ಯ ವಿಚಾರವಾಗಿರುವದರಿಂದ ಅದರಲ್ಲಿ ಅಲ್ಪಮತಿಗೆ ತಿಳಿದಷ್ಟು ಮಟ್ಟಿಗೆ ಇಲ್ಲಿ ಪ್ರಸಂಗಿಸಲಾಗಿದೆ. ಇನ್ನು ಮುಂದೆಯಾದರೂ ನಮ್ಮ ಭಗಿನೀ ಬಂಧು ವರ್ಗದವರು ತಿಳಿಗಣ್ತೆರದು, ನಿದ್ರಾಜಡತೆಯನ್ನಳಿದು, ತಮ್ಮ ಹೃತ್ಕೋಶದಲ್ಲಿ ನಿಕ್ಷಿಪ್ತವಾಗಿರುವ ಈ ಪ್ರಣಯಧನದ ನಿಜಸ್ವರೂಪವನ್ನು ಅನುಭವಕ್ಕೆ ತಂದು, ತಮ್ಮ ತಮ್ಮ ಉತ್ತಮ ಸಹಕಾರ ಪಾತ್ರಗಳ ಸಮಯೋಚಿತ ಸಹಾಯದಿಂದ ದೇಶ-ಕಾಲ-ವರ್ತಮಾನಗಳನ್ನು ಅನುಸರಿಸಿ, ಭಗವದುದ್ದೇಶಕ್ಕೆ ತಕ್ಕಂತೆ ಸತ್ಫಲವನ್ನು ಹೊಂದಿ, ದೇಶಮಾತೆಯನ್ನು ಉದ್ಧರಿಸಲು ಬದ್ಧಾದರರಾಗಿ ನಿಲ್ಲುವವರಾದಾ

ರೆಂದು ನಿರೀಕ್ಷಿಸುವೆನು. ಹೀಗಾಗುವದಾದರೆ, ಭಗವತೀ-ಸೀತಾ, ಸಾವಿತ್ರಿ, ಚಂದ್ರಮತಿ, ಸುಕನ್ಯಾ, ದಮಯಂತಿ, ಪದ್ಮಿನಿ, ತಾರಾ, ಅಹಲ್ಯಾದೇವಿ ಮೊದಲಾದ ಪವಿತ್ರ ಪ್ರೇಮಮಯಮೂರ್ತಿಗಳಾದ ಆರ್ಯರಮಣೀ ರತ್ನಗಳಿಗೆಲ್ಲಾ ಮಾತೆಯಾಗಿದ್ದು, ಅಸಾಧಾರಣವಾದ ಕೀರ್ತಿಗೆ ಕಾರಣಳಾಗಿದ್ದ ನಮ್ಮ ಆರ್ಯಭೂಮಾತೆಯು, ನಮ್ಮವರ ದೆಸೆಯಿಂದ ಜೀರ್ಣವಾಗುತ್ತಿರುವ ಈ ತನ್ನ ಮಲಿನತೆಯನ್ನು ಬಿಟ್ಟು, ಮತ್ತೆಯೂ ಮುನ್ನಿನಂತೆಯೇ ಸ್ವರ್ಗೀಯ ರೂಪವನ್ನು ತಾಳುವಳೆಂಬುದರಲ್ಲಿ ಏನೂ ಸಂಶಯವಿರುವುದಿಲ್ಲ.

ನನ್ನ ಪರಮಪೂಜ್ಯ ಭಗಿನಿಯರೇ!

ಇನ್ನು ನಿಮ್ಮ ಸಂಶಯಗಳೆಷ್ಟಿದ್ದರೂ ಕಟ್ಟಿಬಿಸುಡಿರಿ ಪ್ರಣಯವೆಂಬುದರ ಮೂಲತತ್ತ್ವವು ಆಶಾಬಂಧನವೆಂಬುದನ್ನು ಮಾತ್ರ ಮನದಲ್ಲಿ ಚಿಂತನಮಾಡುತ್ತಿರಿ ಈ ಬಂಧವು, ಕೇವಲ ನಮ್ಮ ನಮ್ಮಲ್ಲಿ ಮಾತ್ರವೇ ಇರುವುದಿಲ್ಲ ನಮ್ಮ ತಾಯಿ-ಜಗನ್ಮಾತೆಯ ಕಟಾಕ್ಷವೇ ಜನ್ಮಸ್ಥಲವೆಂಬುದನ್ನು ಮರೆಯಬೇಡಿರಿ ಈ ಕಟಾಕ್ಷಲಾಭವು ಭಗವತ್ಕೃಪೆಯೇ ಸರಿಯೆಂದೂ ಅಡಿಗಡಿಗೆ, ಬಿಡದೆ ನೆನೆನೆದು ಭಜಿಸುತ್ತಿರಿ ಇನ್ನೂ ಕೇಳಿರಿ,— ಮಾತೆಯು, ಮಕ್ಕಳಾದ ನಾವು ಅವಳ ಸೌಶೀಲ್ಯವನ್ನು ಅನುಕರಣ ಮಾಡುವುದರಿಂದ ತನ್ನ ಗರ್ಭಧಾರಣಾಶ್ರಮವು ಸಾಫಲ್ಯವಾಗಬೇಕೆಂಬ ವಾಂಛೆಯಿಂದ 'ನಮ್ಮ ಶ್ರೇಯೋಭಿವೃದ್ಧಿ ಚಿಂತನದಲ್ಲಿರುವಳು ನಾವು ಕೂಡ, ಈ ತಾಯಿಯ ವಾಂಛಿತಾರ್ಥವನ್ನು ಸಾಫಲ್ಯಗೊಳಿಸಿ ಕೃತಕೃತ್ಯರಾಗಲು ಈ ತಾಯಿಯು, ನಮ್ಮನ್ನಾವಾಗಲೂ ಅನುಗ್ರಹಿಸುತ್ತಿರಲೆಂಬ ಪ್ರತ್ಯಾಶೆಯಿಂದ ನಡೆಯುತ್ತಿರಬೇಕು ನೆನಪಿರಲಿ ಇನ್ನು ಹೇಳಿರಿ-ಭಗಿನಿಯರೇ! ಮನಃಪೂರ್ವಕವಾಗಿ ಹೇಳಿರಿ!

ಪ್ರೇಮಮಯಿಯಾದ ನಮ್ಮ ದೇಶಮಾತೆಯೇ ಚೈತನ್ಯಸ್ತನ್ಯದಾಯಿನಿಯಾದ ಜನನಿಯೇ, ಮಾತೆಯ ಪ್ರೀತಿಯೇ ನಮ್ಮ ಜೀವನ ಸರ್ವಸ್ವವು. ಅವಳ ಶ್ರೇಯೋಭಿವೃದ್ಧಿಸಾಧಕಕಾರ್ಯಪ್ರವೃತ್ತಿಯೇ

ನಮ್ಮ ಇಹ ಜೀವನಸಾರ್ಥಕ್ಯವು ಜೀವನಸಾರ್ಥಕ್ಯತೆಗೆ ಆರ್ಯ ಧರ್ಮವೇ ಮುಖ್ಯಭಂಡಾರವು

ಭಗಿನಿಯರೇ! ಭಂಡಾರವನ್ನು ಕೊಂಡೊಯ್ಯುಬರುವ ಪುಂಡು ಪೋಟರ ಬಂಡುಮುರಿಯಲು ನಾವೇ ಮುಂದಾಗಿ ನಿಲ್ಲಬೇಕು ನಮ್ಮ ನಮ್ಮ ದೃಢಪ್ರತಿಜ್ಞೆಗಳಿಂದ ನಮ್ಮ ನಮ್ಮ ಪುರುಷವರ್ಗವೂ ನವಶಕ್ತಿ ಹೊಂದಿ ಮಾತೃಜೀರ್ಣೋದ್ಧಾರ ಕಾರ್ಯದಲ್ಲಿ ಕೃತನಿಶ್ಚಯರಾಗಿ ಉದ್ಯಮಿಸುವಂತಾಗಬೇಕು. ಹಾಗೆ ಮಾಡಬಲ್ಲಿರೇ? ಹುರಿಗೊಳಿಸಲಾರಿರೇ! ಬಲ್ಲಿರಲ್ಲವೆ?—ಹೂಂ, ಹಾಗಿದ್ದಲ್ಲಿ-ಎಲ್ಲ-ಒಮ್ಮೆ ಜಯಧ್ವನಿಮಾಡಿರಿ! ಏನು ಹೇಳುವಿರಿ? "ಪ್ರಣಯ ದೇವತೆಗೆ ವಿಜಯವು! ಭಗವತೀ ವಿಶ್ವಂಭರೆಯ ಪ್ರಣಯಾನುರೋಧಿಯಾಗಿರುವ ಪರಮಾತ್ಮನ ಸಂಕಲ್ಪಕ್ಕೆ ದಿಗ್ವಿಜಯವು!! ಆತನ ಛತ್ರಛಾಯೆಯನ್ನೇ ಆಶ್ರಯಿಸಿ ಜೀವಿಸುತ್ತಿರುವ ನಮ್ಮೀ ಆರ್ಯ ಸಂತಾನಕ್ಕೆ ಎಂದೆಂದಿಗೂ ಕುಂದದ ಮನೋಜಯದ ನಮ್ಮೀ ಶುಭೋದಯವು!!)

"ತಥಾಸ್ತು! ತಥಾಸ್ತು!! ತಥಾಸ್ತು!!!"

# ಬಡತನವು.

[POVERTY ] *

“ಸಿರಿಂಗೊಳ್ ಪರಹಿತ ಮನ, ಮ-
ತ್ಸರ ಮುಳಿಯು ವಿದ್ಯೆಯೊಳ್, ವಿಭುತ್ವದೋಳ್ನಯಮಾ |
ಚರಣಮುನತಿ ಶೌರ್ಯದೊಳೊ-
ಟ್ಟಿರ ವಿನಯಮುನಾಳ್ವ ಬಾಳ್ವವಂಗೆಣೆಯುಂಟೇ ?

(ರಾಜಶೇಖರ ವಿಲಾಸ)

“ಓಡಿಯು” (Oudia) ಎಂಬ ಒಬ್ಬಾನೊಬ್ಬ ಆಂಗ್ಲೇಯ ಕವಿ ವರ್ಯನು, ಬಡತನದ ವಿಷಯವಾಗಿ ಕೆಲವು ಭಯಸೂಚಕ ವಾಕ್ಯಗಳನ್ನು ಬರೆದಿರುವನು. ಅದು (ಬಡತನವು) ಬಲು ಭಯಂಕರವೆಂದೂ ಅದು ಒಂದೊಂದು ವೇಳೆಯಲ್ಲಿ ನಮ್ಮ ಹೃದಯವನ್ನೇ ಭೇದಿಸಿ, ನಮ್ಮ ಇಹಲೋಕದ ಸುಖಸಂತೋಷಾದಿಗಳನ್ನೆಲ್ಲ ಪೂರಾ ಕೆಡಿಸುವದೆಂದೂ ಹೇಳಿರುವನು ಕವಿಗಳೇ ಬಡತನವನ್ನು ಇಷ್ಟರಮಟ್ಟಿಗೆ ಕಂಡಿರುವದರಲ್ಲಿ ಸಾಮಾನ್ಯ ಜನರ ಪಾಡೇನು ? ಕವಿಗಳೇನೋ ಸಾಂಸಾರಿಕ ವಸ್ತುಸಂಗ್ರಹದಲ್ಲಿ ಬಡವರೇ! ಆದರೆ ಜ್ಞಾನದ ಬೆಳಕಾದ ವಿದ್ಯಾಸಂಪತ್ತಿಯಲ್ಲಿ ಅವರು ಬಡವರಲ್ಲ ಇಂದು ನಾವು ಬಡತನವೆಂದರೇನೆಂದು ಮೊದಲು ವಿಚಾರ ಮಾಡಬೇಕೆಂದಿರುವೆವು

ಬಡತನವೆಂದರೇನು ? ಯಾರು ಬಡವರು ? ಸಾಮಾನ್ಯವಾಗಿ ನಾವು ಯಾರಿಗೆ ಲಕ್ಷ್ಮೀಕಟಾಕ್ಷವಿರುವದಿಲ್ಲವೋ, ಅವರನ್ನು ಬಡವರೆಂದು ಕರೆಯುತ್ತೇವೆ ಇದು ಸರಿಯೋ ? ಯಾವಾತನಿಗೆ ಏನೊಂದೂ ಇರುವದಿಲ್ಲವೋ, ಆತನೇ ಬಡವನೆನ್ನಿಸುವನು ಹೀಗಿರುವುದು ಸಾಧ್ಯವೇ ? ಹೇಗೆ ? ಮನುಷ್ಯನು ಒಂದರಲ್ಲಿ ಸಿರಿವಂತನಲ್ಲದಿದ್ದರೆ ಮತ್ತೊಂದರಲ್ಲಿ ಆಗಿರಲೇ ಬೇಕು “ಒಬ್ಬರು ಮತ್ತೊಬ್ಬರನ್ನು

* Poverty is very terrible, and sometimes kills the very soul within us

—*Oudia*

ಕುರಿತು ನಾವು ಸಿರಿಯಲ್ಲಿ ಕಡಮೆಯಾದವರಲ್ಲ ಆದರೆ ನೀವು ಕಡಿಮೆ ಯವರಾಗಿರಬಹುದು ” ಎಂದು ಹೇಳಿದರೆ, ಅದೇ ಸಮಯದಲ್ಲಿ ವಿದ್ಯಾಸಿರಿಯಲ್ಲಿ ಮೊದಲಿನವರನ್ನು ಮೀರಿಸಿರುವಂತಹರೂ ಕಾಣ ಬಹುದು ಹಾಗಾದರೆ ನಾವು ಸಿರಿವಂತರು, ನೀವು ಬಡವರು ಎಂದು ಹೇಳಬಹುದೇ ? ಅದು ನ್ಯಾಯುವೇ ?

ಹಾಗೂ ಅದಾರು ಬಡವರೆಂದು ಹೇಳಿಕೊಳ್ಳುವವರು ? ಮುಂದೆ ಬರಲಿ, ನೋಡುವ ! ಬಡವರಲ್ಲಿ ಅಮೂಲ್ಯವಾದ ಹಲವು ಸುಗುಣ ಗಳಿರುವವು ಅವುಗಳಲ್ಲಿ ಕೆಲವಾದರೂ ಸಿರಿವಂತರಲ್ಲಿಯೋ ಹೇಗೆ? 'ನಮ್ರತೆ'ಯು ಬಡವರಲ್ಲಿ ಒಲದಿದೆ ನಮ್ರಭಾವವನ್ನು ಅದಾರು ತಾನೇ ಪ್ರೀತಿಸದಿರುವವರು ? ಕಾರ್ಯತಃ ಅಲ್ಲದಿದ್ದರೂ, ಮಾತಿನಿಂ ದಾದರೂ ಮನ್ನಿಸದಿರುವರುಂಟೋ ? ಸಾಕು !!!

ಈ ಬಡತನದಿಂದ ನಮಗೆ ಲೆಕ್ಕವಿಲ್ಲದಷ್ಟು ಅನುಭವಗಳುಂ ಟಾಗುವವು ಅನುಭವಗಳಿಲ್ಲದ ಮಾನವನು ಮಾನವನಾದಾನೇ ? ಇತರರದನ್ನೂ ತನ್ನದೆಂದು ಬೊಗಳುವವನು ಮಾನವನೆನ್ನಿಸುವನೇ ? ಆದೆಂದಿಗೂ ಆಗದು ಇರಲಿ ಸಾಧನೆಯು ಬಡತನದ ಅನುಭವವುಳ್ಳ ವರಿಗೆ ಮಾತ್ರವೇ ಗೊತ್ತು. ಪ್ರಪಂಚದ ಮಹತ್ವದ ಕೆಲಸಗಳನ್ನು ಮಾಡಿದವರೆಂದರೆ ಬಡವರೇ ಸರಿ ! ಈಜಿಪ್ತಿನ ಪಿರಾಮಿಡಗಳು (Pyramids of Egypt) ಹೊಟ್ಟೆಗಿಲ್ಲದೆ ಬಳಲುತ್ತಿದ್ದ ಬಡ ಕೂಲಿ ಯವರಿಂದ ಕಟ್ಟಲ್ಪಟ್ಟವಲ್ಲದೆ, ಪೆರೋಹಾರಿಂದಲ್ಲ (Pharaoh- ಈಜಿಪ್ತಿನ ಅರಸರು-)ಕುತುಬ್‌ಮಿನಾರ್ ಸ್ತಂಭವು ಕಾಫರ ಹಿಂದು ಗಳ ಕಷ್ಟದ ಕಣ್ಣೀರಿನ ಜಲಮಯದಿಂದ ಕೂಡಿದುದಾಗಿದೆ ಚೈನಾದ ದೊಡ್ಡ ಗೋಡೆಯು ಬಡಬಗ್ಗರಿಂದ ಸ್ವದೇಶಹಿತಕ್ಕಾಗಿ ಕಟ್ಟಲ್ಪ ಟ್ಟಿತು ಲೋಕಕ್ಕೆ ಶಾಶ್ವತವಾಗಿರುವಂತಹ ಹಿತವಚನಗಳನ್ನು ಬೋಧಿ ಸಿದ ಕಾಳಿದಾಸ, ಷೇಕ್ಸಪಿಯುರರೂ ಬಡವರೇ ಆಗಿದ್ದರು. ಸೊಗಸಾದ ನಾವಿಲ್‌ಗಳನ್ನು ಬರೆದವನು ಕೈಯಲ್ಲಿ ಕಾಸಿಲ್ಲದ ಡಿಕೆನ್ಸ ಮಹಾಶ ಯನು. ದೀಕ್ಷನರಿ (Dictionary) ಯನ್ನು ಪ್ರಥಮತಃ ಬರೆದವನು “ಜಾನ್‌ಸನ್ ಮಹಾನುಭಾವನು.” ಜಾನ್‌ಸನ್ನನ ಬಡತನವು ಲೋಕ

ಪ್ರಸಿದ್ಧವಾಗಿದೆ. ಮತ್ತೆ ಗೋಲ್ಡ್ ಸ್ಮಿತ್‌ನಂತೂ ಆಹಾರವಿಲ್ಲದೆ ಕೊರಗುತ್ತಿದ್ದನು ಇನ್ನೂ ಉದಾಹರಣೆಗಳಾಗಬೇಕೇ - ನೋಡಿರಿ- ಶಕಪುರುಷನಾದ ಏಸುಕ್ರಿಸ್ತನೂ ಕೂಡ, " Blessed be ye poors, for thine is the kingdom of God ' ಎಂದರೆ "ಬಡವರೆ, ಸುಖಿಗಳಾಗಿರಿ ದೇವರ ರಾಜ್ಯವು ನಿಮ್ಮದಾಗಿದೆ " ಎಂದು ಹೇಳಿರುವನು ಇತ್ತ ಪೈಗಂಬರ ಮಹಮ್ಮದನಾದರೋ ಬಡವನೆಂದು ತಾನು ಗರ್ವಪಡುವೆನೆಂದನಂತೆ ! ( I am proud that I am poor) ಆರ್ಯಕುಲೋದ್ಧಾರಕನೂ, ಮಾನವಕೋಟಿ ಸಂರಕ್ಷಕನೂ ಆದ ಶ್ರೀಸ್ವಾಮಿ ದಯಾನಂದ ಸರಸ್ವತಿಯಾದರೋ ಆರ್ಷಗ್ರಂಥಗಳನ್ನು ಕೊಂಡಕೊಳ್ಳಲೂ ಧನವಿಲ್ಲದಿದ್ದ ಬಡಸ್ವಾಮಿಯು ಹೀಗೆಯೇ ಲೋಕೋಪಕಾರಿಗಳೆಲ್ಲರೂ ಬಡವರೇ ಆಗಿದ್ದರು

ಮತ್ತೆ ಬಡತನವನ್ನು ನಾವು ಮೂಲಗೊತ್ತಲಾರೆವೇನು ? ಪ್ರಥಮತಃ ಕೇವಲ ಬಡತನವೆಂಬುದೇ ಇರುವದಿಲ್ಲ. 'ಬಡತನ' ವೆಂಬುದಕ್ಕೆ 'ಧನವಿಹೀನ'ವೆಂಬ ಅರ್ಥವೊಂದೇ ರೂಢಿಯಾಗಿ ಬಂದಿದೆ ಸಿರಿಗೆ ಧನದ ಮಹತ್ವವೇ ಮಹತ್ವವಾಗಿದೆಯಲ್ಲದ ಮತ್ತೇನು ಇಲ್ಲ ಧನವಿಹೀನನಿಗೆ ಕಷ್ಟಗಳು ಪ್ರಾಪ್ತಿಯಾದರೂ ಆಗಬಹುದು ಆದರೇನು ? 'ಕಷ್ಟ ಬೆರಸದ ಸುಖವ ದಾರಿಗೆ ಸಿಕ್ಕುವದು ? ಮುಖ್ಯವಾಗಿ ಅಟ್ಟಹಾಸವನ್ನು ಬಿಡಬೇಕು ಮಿತವ್ಯಯಿಗಳಾಗಬೇಕು ತಿಳಿದಿರೋಣಾಗಲಿ - " Know that it is not abundance, show and pomp make us rich, but Economy."

ಏತಕ್ಕೆ ಬಡವರು ಲೋಕೋಪಕಾರಕಗಳಾದ ಮಹತ್ವದ ಕೆಲಸಗಳನ್ನು ಮಾಡಿದರೆಂದರೆ, ಅವರಿಗೆ ಶಾಶ್ವತ ಶಾಂತಿಯು ಯಥೇಚ್ಛವಾಗಿ ದೊರೆತಿದ್ದಿತು ಈ ಶಾಂತಿಹೃದಯದ ಪ್ರೋತ್ಸಾಹದಿಂದಲೇ ಅವರ ಪ್ರಯತ್ನವೂ, ಉದ್ದೇಶವೂ ಫಲದಾಯಕಗಳಾಗುವವು

ಸಿರಿವಂತ— ಎಂದರೆ ಧನವಂತನಾಗಬೇಕೆಂಬುದು ಬಲುಭ್ರಾಂತಿ. ಏಕೆಂದರೆ ಅದು ಗಾಳಿಗಿಟ್ಟಿಹ ದೀಪದ ಹಾಗೆ ಚಂಚಲ ಸ್ವಭಾವದಂತಹದು. ಸಾಲದುದಕ್ಕೆ ವಿಶ್ವಮೋಹಿನೀ ವೇಶ್ಯಾಸ್ತ್ರೀ

ಯುರ ಹಾಗಿರುವದು ನಾವು ಹೇಗೆ ಈ ವಾರಾಂಗನೆಯು ಕ್ಷಣಿಕ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದು ಭ್ರಾಂತಿಪಡುವೆವೋ, ಹಾಗ ಯೇ ಅವಳು ನಮ್ಮನ್ನು ಕಂಡು ಗರ್ವಿತೆಯಾಗಿ ನಮ್ಮನ್ನು ಅಲ್ಪರನ್ನಾಗಿ ಕಾಣುವಳು ಹೀಗೆ ಅವಳ ಒಲವಿಗೆಂದು ಮಾಡಿದ ದುಷ್ಕೃತ್ಯಗಳೇ (ಅನೃತ, ಮೋಸ, ಸುಲಿಗೆ, ಮುಖಸ್ತುತಿ, ಕಪಟ ಮೈತ್ರಿ, ಕಳ್ಳತನವೇ ಮೊದಲಾದ ಹಲವು ಬಗೆಯ ದುರಾಚಾರಗಳೇ ಈ ವಾರಾಂಗನಾ ಸೇವೆಗೆ ಸಾಧನಗಳೆಂಬ ಭಾವವು) ನಮ್ಮ ಬೆನ್ನ ಹಿಂದೆ...
(ಇದೊಂದು ಎಚ್ಚರಿಕೆ)

"ಎನಿತೆನಿತಂ ಭಂಜಿಸಿದೊಡ ।
ಮಾನಿತನಿತಂ ಮಣಿಯುಲರಿಯುದಣಿಯುರ ಮುರಿಗುಂ॥"

ಮತ್ತೊಂದುಮಾತು—ನಮ್ಮಲ್ಲಿ ಹಲವರು ನಾನು ಮೊದಲು ಹೀಗಿದ್ದೆ, ಈಗ ಹೀಗಾಗಿದ್ದೇನೆ, ಎಂದು ವಿಧಿಯನ್ನು ದೂರುವ ವಾಡಿಕೆಯಿದೆ ಇದು ಬಲುತಪ್ಪು ಕೇಳಿರಿ-ಆಂಗ್ಲ ಉಪನ್ಯಾಸಕನೊಬ್ಬನ ಮಾತು * "ಎಲೈ ಮಾನವಾ! ನೀನು ಪ್ರಸ್ತುತದಲ್ಲಿರುವ ಸ್ಥಿತಿಗತಿಗಳನ್ನು ಕುರಿತು ಆಲೋಚಿಸುವವನಾಗು ನಿನ್ನ ಹಿಂದಿನ-ಎಂದರೆ, ನಿನ್ನ ಬಾಲ್ಯದಲ್ಲಿಯೋ,—ತಾರುಣ್ಯದಲ್ಲಿಯೋ ಇದ್ದ ಸ್ಥಿತಿಗತಿಗಳನ್ನು ಕುರಿತು ವೃಥಾ ದುಃಖಪಡಬೇಡ ಏಕೆಂದರೆ ಅದು ಸಾಮಾನ್ಯವಾಗಿ ಎಲ್ಲರಲ್ಲಿಯೂ ಇರುತ್ತದೆ

ಸ್ವಶಕ್ತಿಯಲ್ಲಿ ನಂಬುಗೆಯಿಟ್ಟು ಗುಣಾಢ್ಯರಾಗಿ, ಕಾರ್ಯಾವಲಂಬಿಗಳಾದರೆ ನಾವೇ ಧನ್ಯರು! ನಾವೇ ಧನಾಢ್ಯರು!! ನಾವೇ ದೇಶಮಾತೆಯ ಸತ್ಪುತ್ರರು ಜ್ಞಾಪಕವಿರಲಿ—ಮಹಾರಾಜಾ ಪ್ರತಾಪಸಿಂಹನ ಆಕಸ್ಮಿಕ ಬಡತನ, ಮತ್ತು ಆತನ ಆ ದೃಢಸಂಕಲ್ಪ!!! ಹಾಗಾದರೆ ನಾವು ಯಾವ ಬಡತನಕ್ಕೂ ಹೆದರಬೇಕಾದುದಲ್ಲ

ಇತಿ (ಬಿ ಎನ್. ಕೃಷ್ಣಮೂರ್ತಿ)

---

"* Reflect upon your present blessings, of which every man has many, not upon your misfortunes of which all men will have some"

# ನಮ್ಮ ಪ್ರಾರ್ಥನೆ

ಪ್ರಿಯ ಭಗಿನೀ ಬಂಧುಗಳೇ!

ನಂದಿನಿಯ ಮೊದಲನೆಯ ಸಂಚಿಕೆಯಲ್ಲಿ ಪ್ರಕಟಿಸಿದ್ದ "ಆಳ್ವಾರರ ಸ್ವಭಾವವು" ಎಂಬ ಲೇಖನವನ್ನು ಕುರಿತು ನಮ್ಮ ಗ್ರಾಹಕ, ಪ್ರೋತ್ಸಾಹಕ ಮತ್ತು ಹಿತಚಿಂತಕರಾದ ಬಂಧು ಭಗಿನಿಯರಲ್ಲಿ ಅನೇಕರು ಮೇಲಿನ ಲೇಖನವು ನಮ್ಮಲ್ಲಿ ಪರಸ್ಪರ ಮತನ್ಯೂನ್ಯತ್ಯಕ್ಕೆ ಕಾರಣವನ್ನುಂಟುಮಾಡುವಂತಿರುವದರಿಂದಲೂ, ಈ ಲೇಖನವು ನಂದಿನಿಯ ಸಂದೇಶವಾದ ಸ್ತ್ರೀಸಮಾಜೋನ್ನತಿಗೆ ಉಪಯುಕ್ತಾಂಶವಿಷ್ಟನ್ನಾದರೂ ಒಳಕೊಂಡಿಲ್ಲವಾದುದರಿಂದಲೂ ಇದನ್ನು ನಿಲ್ಲಿಸಿ, ನಮ್ಮ ಸ್ತ್ರೀಜನಾಂಗಕ್ಕೆ ಮುಖ್ಯ ಮುಖ್ಯವಾದ ಆಚಾರ ವಿಚಾರಗಳನ್ನು ಪ್ರಕಟಿಸುವುದು ಅಗತ್ಯವೆಂದೂ ಅಭಿಪ್ರಾಯಪಟ್ಟರು ಇದರಿಂದ ನಾವು ಲೇಖನವನ್ನು ಅಷ್ಟಕ್ಕೇ ನಿಲ್ಲಿಸಬೇಕಾಯಿತೆಂದೂ, ಹೀಗೆ ನಿಲ್ಲಿಸಿದುದಕ್ಕಾಗಿ ಆ ನಮ್ಮ ಭಗಿನಿಯರಾದ ಶ್ರೀ|| ಸೌ|| ರಂಗನಾಯಕಮ್ಮನವರೂ, ಮತ್ತು ನಮ್ಮ ಇತರ ಭಗಿನಿಯರೂ ಬೇಸರಿಸದೆ, ಯುಕ್ತವೆಂದು ಭಾವಿಸಿ, ಸೋದರಿಯರಿಗೆ ಉಪಯುಕ್ತ ವಿಷಯಗಳನ್ನು ಬರೆದು ಕಳುಹಿ, ಪ್ರೋತ್ಸಾಹಿಸಬೇಕೆಂದೂ ವಿನಯಪೂರ್ವಕವಾಗಿ ಪ್ರಾರ್ಥಿಸುವೆವು

---

# ಸ್ವೀಕಾರ

" ಈ ಕೆಳಗೆ ವಿವರಿಸಲ್ಪಡುವ ಪತ್ರಿಕೆಗಳನ್ನು ಕಳುಹುತ್ತಿರುವ ನಮ್ಮ ಸದ್ಧರ್ಮ ಭ್ರಾತೃ ವರ್ಗೀಯರಾದ ಆಯಾ ಪತ್ರಕರ್ತರನ್ನು ಮನಃಪೂರ್ವಕವಾಗಿ ವಂದಿಸುವದಲ್ಲದೆ, ಆ-ಆ-ಪತ್ರಿಕೆಗಳ ಶ್ರೇಯೋಭಿವೃದ್ಧಿಗಾಗಿ ಭಗವಂತನಲ್ಲಿ ಪ್ರಾರ್ಥಿಸುವೆವು. ಮತ್ತು, ಕಾಲಾನುಕೂಲವಾದಂತೆಲ್ಲ ಇವುಗಳ ವಿಷಯವಾಗಿ ನಮ್ಮ 'ಸ್ವಾಭಿಪ್ರಾಯ ನಿವೇದನವನ್ನು' ಪ್ರಕಟಿಸಲಿರುವೆವು " ಸಂ

1. the Mysore Patriot, Mysore (ಹಾಸಲು ಸೇರಿ ವಾರ್ಷಿಕ ಚಂದಾ ೫-೧೩-೦) 2. ಸಾಧ್ವಿ, ಮೈಸೂರು, (೩-೧೩-೦) 3. ಮೈಸೂರು ಸ್ಟಾರ್, ಮೈಸೂರು (೧-೧೪-೦) 4. ಶಿವಮೊಗ್ಗ ವೃತ್ತಾಂತ, ಶಿವಮೊಗ್ಗ (೧-೧೩-೦) 5 ರಾಜಹಂಸ, ಧಾರವಾಡ. (೨-೪-೦) 6 ಲೋಕಬಂಧು ಧಾರವಾಡ (೧ ೧೩-೦) 7 ಚಂದ್ರೋದಯ,೧ ಧಾರವಾಡ, (೨-೦-೦) ಎಂಬ ಈ ಏಳುವಾರ ಪತ್ರಗಳೂ ಮತ್ತು—

1 ಸಚಿತ್ರಭಾರತ, ಹುಬ್ಬಳ್ಳಿ (ವಾರ್ಷಿಕ ಚಂದಾ ಹಾಸಲು ಸೇರಿ ೩-೬-೦) 2 ವಾಗ್ಭೂಷಣ, ಧಾರವಾಡ(೨-೮-೦) 3 ಬೋಧಿನಿ, ಉಡುಪಿ (೨ ૮-೦) 4 ಕನ್ನಡ ಕೋಗಿಲ, ಮಂಗಳೂರು (೧-೮-೦) 5 ಪರಮಾರ್ಥ, ಬೆಂಗಳೂರು (೧-೮ ೦) 6 ವಿಕಟವಿನೋದಿನಿ, ಬೆಂಗಳೂರು (೧ ೦-૮) 7 ಭಕ್ತಿಸಂದೇಶ, ಬೆಂಗಳೂರು (ಈಗ ತಾನೇ ಹೊರಟಿರುವುದು) (೧-೮ ೦) 8 ಅಕ್ಷರಾಂಜಲಿ, ಮೈಸೂರು (೧-೪-೦) 9 ಕಾದಂಬರೀ ಸಂಗ್ರಹ ಮೈಸೂರು (೧-೪-೦) 10. ಆರ್ಯಮಹಿಳೆ ೨ ನಂಜನಗೂಡು (೦-೯-೦) ಈ ಹತ್ತು ಮಾಸ ಪತ್ರಿಕೆಗಳೂ ಪರಿವೃತ್ತಿಯಲ್ಲಿರುವವು ಮತ್ತು ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ, (ತ್ರೈಮಾಸಿಕ) ವಾರ್ಷಿಕ ಚಂದಾ (೪-೦-೦) ಆನಂದ (ಪಕ್ಷಪತ್ರಿಕೆ) ಬಂಟವಾಳ (೧-೮-೦) ಗಳೂ ವಂದನಾಪೂರ್ವಕ ಸ್ವೀಕಾರವಾಗಿರುವವು (ಸ್ಥಳಾಭಾವದಿಂದ ಇಷ್ಟಕ್ಕೆ ನಿಲ್ಲಿಸಿ ಮುಂದಿನ ಸಂಚಿಕೆಯಲ್ಲಿ ಉಳಿದ ಪುಸ್ತಕಗಳನ್ನು ವಿವರಿಸುವೆವು)

---

೧ ಈ ಪತ್ರಿಕೆಯು ಈ ವರ್ಷ ಎಂದರೆ ತನ್ನ ಮೂರನೆ ವರ್ಷದಲ್ಲಿ ೩-೪ ತಿಂಗಳ ವರೆಗೆ ಮಾಸಪತ್ರಿಕೆಯಾಗಿದ್ದು—ಈಗ ಮತ್ತೆ ಮೊದಲಿನಂತಯೇ ವಾರಪತ್ರಿಕೆಯಾಗಿ ಹೊರಡುತ್ತದೆ.

೨ ಈ ಪತ್ರಿಕೆಯು ಇದೇ ಊರಲ್ಲಿ ಹೊರಡುತ್ತಿದ್ದು, ಈಗ ತನ್ನ ಎರಡನೇ ವರ್ಷದಲ್ಲಿ ಒಂದೆರಡು ತಿಂಗಳು ಹೊರಟು, ಪ್ರೋತ್ಸಾಹವೃಷ್ಟಿಯಿಲ್ಲದೆ ಮುದ್ರಾಲಯದಲ್ಲಿರುವಂತಾಗಿದೆಯೆಂದು ತಿಳಿದು ವಿಷಾದಿಸುವೆವು ಉದಾರಹೃದಯರು ಪ್ರೋತ್ಸಾಹಿಸಬಹುದಾದರೆ ಆರ್ಯಮಹಿಳೆಯು ಅನ್ವರ್ಥನಾಮ್ನಿಯಾದಾಳೆಂದು ನಂಬುವೆವು

# ಸ್ತ್ರೀಯರ ನೈಸರ್ಗಿಕ ಸೇವೆ.

## III

## (ಕೈಕೆಲಸ ಅದವಾ ಆಳುಕೆಲಸ)

ಎಷ್ಟು ಕಷ್ಟದ ಕೆಲಸವಾದರೂ ಸ್ವಂತವಾಗಿ ದುಡಿದು ಸಾಧಿಸುವ ಶ್ರಮವು ವಿದ್ಯಾಭ್ಯಾಸದ ಮುಖ್ಯ ಅಂಗವಾಗಬೇಕೆಂದು ಹಿಂದೆ ಸೂಚಿಸಲಾಯಿತಷ್ಟೆ. 'ಕಷ್ಟಪಟ್ಟರೆ ಸುಖವುಂಟು'' ಎಂಬುದು ಯಾರಿಗೆ ತಾನೆ ತಿಳಿಯದು?

ಕಷ್ಟವೆಂಬುದು ಇರುವದರಿಂದಲೇ ಸುಖವು ಇಷ್ಟವಾಗಿಯೂ, ಸುಖವೆಂಬುದು ಇರುವದರಿಂದಲೇ ಕಷ್ಟವು ಅನಿಷ್ಟವಾಗಿಯೂ ಇದೆ ಎಂದು ಧಾರಾಳವಾಗಿ ಹೇಳಬಹುದು. ಏಕೆಂದರೆ ದುಃಖ ಕಷ್ಟಗಳು ಅನ್ಯೋನ್ಯ ಸಂಬಂಧವಾಚಕ ಶಬ್ದಗಳೇ ವಿನಾ ಸ್ವತಂತ್ರವಾಚಕ ಶಬ್ದಗಳಲ್ಲ. ಹೀಗಿರುವದರಿಂದ 'ನಾನು ಸುಖವಾಗಿದ್ದೇನೆ' ಎಂಬ ಭಾವನೆಯು ನನ್ನಲ್ಲಿ ಹುಟ್ಟಬೇಕಾದರೆ ಅದಕ್ಕೆ ಪೂರ್ವಭಾವಿಯಾಗಿ ಕಷ್ಟದ ಸ್ವರೂಪವು ಮನಗಂಡಿರಬೇಕು. ಕಷ್ಟವೆಂದರೇನೆಂಬುದೇ ತಿಳಿಯದವರಿಗೆ ಸುಖವೆಂದರೇನೆಂಬುದನ್ನು ಹೇಗೆ ತಾನೆ ತಿಳಿಯುವದಕ್ಕಾದೀತು? ಕಷ್ಟ ಸುಖಗಳೆರಡೂ ಒಂದನ್ನೊಂದು ಎಡಬಿಡದೆ ಜತೆಯಲ್ಲಿಯೇ ಹೋಗುತ್ತಿರುವವು. ಹೀಗಿರುವಲ್ಲಿ ಕಷ್ಟಪಡದೆ ಸುಖವನ್ನು ಪಡೆಯುವದು ಎಂದಿಗಾದರೂ ಸಾಧ್ಯವೆ?

೨ ಕಷ್ಟಪಡಬೇಕೆಂದರೆ ಅದರಲ್ಲಿ ಎರಡು ದೊಡ್ಡ ಮುಖ್ಯ ತರಗತಿಗಳಿವೆ. ಕೈಯಿಂದ ಕಷ್ಟ ಮಾಡುವದೊಂದು; ಕೈಕಷ್ಟವಿಲ್ಲದೆ ಕೇವಲ ಸ್ವಕೀಯವಾದ ವಶೀಕರಣ ಶಕ್ತಿಯನ್ನು ಪ್ರಯೋಗಿಸಬೇಕಾದ ಕಷ್ಟವೊಂದು. ಈ ಲೇಖನದ ಅರ್ಥ ಸೌಲಭ್ಯಕ್ಕಾಗಿ ಒಂದನ್ನು ಆಳು ಕೆಲಸವೆಂತಲೂ, ಇನ್ನೊಂದನ್ನು ಅರಸು ಕೆಲಸವೆಂತಲೂ ಕರೆಯೋಣ. ಎರಡೂ ಕಷ್ಟ ಕೆಲಸಗಳೇ. ಆದರೆ, ಯಾವ ಕಷ್ಟಕೆಲಸವನ್ನು ಎಷ್ಟು ಮಟ್ಟಿಗೆ ಗೌರವಿಸಬೇಕು, ಮತ್ತು ಫಲಸ್ವರೂಪವಾದ ಸುಖದಲ್ಲಿ ಎಷ್ಟು

ಅಂತರವಿದೆ - ಎಂಬಿವು ಪ್ರಕೃತ ವಿಚಾರಕ್ಕೆ ವಿಷಯವಾಗಿರುವವು.

೩. ಮೊಟ್ಟಮೊದಲು ಮೈಮುರಿದು ಮಾಡಬೇಕಾದ ಆಳುಕೆಲಸದಲ್ಲಿ ಜನರಿಗೆ ಶ್ರದ್ಧೆ ಇಲ್ಲದಿರುವದೊಂದು ವಿಷಯವು ನಮ್ಮನ್ನು ಬಹುವಾಗಿ ದುರುಗುಟ್ಟಿಕೊಂಡು ನೋಡುತ್ತಿರುವದು. ಆದುದರಿಂದ ಇದನ್ನು ಕುರಿತು ಸ್ವಲ್ಪ ಆಲೋಚಿಸಬೇಕು. ಕಷ್ಟಪಡಬೇಕೆಂದರೆ ಮೊದಲೇ ಯಾರಿಗೂ ಆಗದು ಇದರ ಮೇಲೆ ಕಷ್ಟಪಡತೇಬೇಕಾದ ಆಗತ್ಯವಿಲ್ಲದಿರುವವರಿಗೂ ಗಾಳಿಯನ್ನು ಗುದ್ದಿ ವೃಥಾ ಮೈನೋಯಿಸಿಕೊಳ್ಳಬೇಕಾದ ಗ್ರಹಚಾರವೇನು? ಈ ಕಾರಣದಿಂದ ಕಷ್ಟಪಡಬೇಕಾದ ಕಾಲವನ್ನು ಎಷ್ಟುದೂರ ತಳ್ಳುವದಕ್ಕೆ ಸಾಧ್ಯವಾಗುವದೋ ಅನಪೇಕ್ಷಣೀಯವಾದ ಕಷ್ಟಕೆಲಸವನ್ನು ಮರೆತಿರುವದು ಸ್ವಾಭಾವಿಕವೇ ಸರಿ ಆದರೆ, ಆಳುಕೆಲಸದಲ್ಲಿ ಶ್ರದ್ಧೆ ಹುಟ್ಟದಿರುವದಕ್ಕೆ ಇದಿಷ್ಟೇ ಕಾರಣವಲ್ಲ. ಇದಕ್ಕಿಂತಲೂ ಗುರುತರವಾದ ಕಾರಣಗಳಿವೆ ಅವುಗಳನ್ನೂ ವಿಚಾರಮಾಡೋಣ.

೪ ಈಗಿನ ಕಾಲಸ್ಥಿತಿಯಲ್ಲಿ ಕೋಳಿ ಕೂಗಿದುದು ಮೊದಲು ಕಣ್ಣಿಗೆ ನಿದ್ದೆಹತ್ತುವವರೆಗೂ, ನಿಜವಾಗಿಯೂ ದೇಹವನ್ನು ದಂಡಿಸಿ ಕೆಲಸ ಮಾಡಿದರೂ ಹೊಟ್ಟೆ-ಬಟ್ಟೆಗಳಿಗೆ ನೇರವಾಗಿ ವರಮಾನವು ದೊರೆವುದು ಕಷ್ಟವಾಗಿದೆ. ಇದರ ಸ್ಥಿತಿಯು ಹೀಗಿರುವಲ್ಲಿ ಅವರಿವರನ್ನು ಬೆದರಿಸಿಕೊಂಡು ಕೆಲಸವನ್ನು ತೆಗೆದುಕೊಳ್ಳುತ್ತಾ ಒಳಗಿನ ಹರಕುಗಳನ್ನೆಲ್ಲಾ ಮುಚ್ಚುವಂತೆ ಮೇಲೆ ಮುರುಗನ್ನು ಕೊಟ್ಟುಕೊಂಡು, ಉಪಾಯದಿಂದ ಕಾಲವನ್ನು ಕಳೆಯುವವರೆಗೆ ವರಮಾನವೂ ಹೆಚ್ಚಾಗಿ ಬರುತ್ತದೆ, ಮೈಗೆ ಆಯಾಸವೂ ಹೆಚ್ಚಾಗಿ ಇರುವುದಿಲ್ಲ ಲೌಕಿಕ ವ್ಯವಹಾರದಲ್ಲಿ ಗೌರವವೂ ಹೆಚ್ಚು. ಒಟ್ಟುಮಾಡಿ ಹೇಳಿದರೆ ಆಳು ಕೆಲಸದವನಿಗೆ ಶ್ರಮದ ಅಧಿಕಾಂಶವೂ, ಸೌಕರ್ಯದ ಅಲ್ಪಾಂಶವೂ ಅರಸು ಕೆಲಸದವನಿಗೆ ಸೌಕರ್ಯದ ಅಧಿಕಾಂಶವೂ ಶ್ರಮದ ಅಲ್ಪಾಂಶವೂ ಸಂಘಟಿತವಾಗುವವು. ಹೀಗಿರುವದರಿಂದ ಆಳುಕೆಲಸವು ಕೇವಲ ನೀಚವಾದ 'ಸೇವಾವೃತ್ತಿ' ಎಂದು ಪರಿಗಣಿಸಲ್ಪಟ್ಟು ನಿಕೃಷ್ಟವರ್ಗಕ್ಕೆ ಸೇರಿಸಲ್ಪಟ್ಟಿರುವದು.

೫ ಮೇಲೆ ಹೇಳಿದ ದುರವಸ್ಥೆಯನ್ನು ಕಳೆಯಬೇಕಾದರೆ ಒಂದೇ ಒಂದು ಉಪಾಯವು ಸಾಧ್ಯವಾಗಿ ತೋರುವದು. ಆ ಉಪಾಯವನ್ನಾದರೂ ಸಾಧಿಸಿಕೊಡಬಲ್ಲ ಕರ್ತೃತ್ವವು ಕಾಲವೊಂದೇ ಎಂತಲೂ ತೋರುವದು. ಅದು ಹೇಗೆಂದರೆ, ಹೀಗೆಯೇ ಕೆಲವು ಕಾಲ ನಡೆಯುತ್ತಿದ್ದರೆ, ಈಗ ಆಳಿನ ಕೆಲಸದಲ್ಲಿರುವವರೆಲ್ಲರೂ ತಮ್ಮ ಉದ್ಯೋಗದಲ್ಲಿ ಪ್ರಯೋಜನಾಂಶವು ಕಡಿಮೆಯಾಗುತ್ತ ಬಂದ ಹಾಗೆಲ್ಲ ಅಭಿಮಾನವನ್ನು ತೊರೆದವರಾಗುವರೆಂದು ಸಕಾರಣವಾಗಿ ನಿರೀಕ್ಷಿಸಬಹುದು. ಹೀಗೆ ಆಳು ಕೆಲಸದಲ್ಲಿರುವವರೆಲ್ಲರೂ, ಅಥವಾ ಅವರಲ್ಲಿ ಬಹುಮಂದಿ, ಬೇರೆ ಬೇರೆ ಕಡಿಮೆ ಶ್ರಮದ ಕೆಲಸಗಳನ್ನು ಹುಡುಕಿಕೊಂಡು ಹೊರಟರೆ, ಆಗ ಆಳು ಕೆಲಸದವರ ಸಂಖ್ಯೆಯು ಕಡಿಮೆಯಾಗಿಯೂ, ಇತರ ಕೆಲಸದವರ ಸಂಖ್ಯೆಯು ಹೆಚ್ಚಾಗಿಯೂ ಆಗುವದು. ಈ ಹೆಚ್ಚು ಕಡಿಮೆಗಳು ಒಂದು ನಿಯತವಾದ ಮಿತಿಯನ್ನು ಅತಿಕ್ರಮಿಸುತ್ತಲೇ ಜನಬಾಹುಳ್ಯದಿಂದ ಇತರ ಕೆಲಸಗಳಲ್ಲಿನ ಆಕರ್ಷಣ ಶಕ್ತಿಯು ಬಾಹುಳ್ಯಾನುಗುಣವಾಗಿ ಬಲಹೀನವಾಗುವದು ಮತ್ತು ಜನರ ಅಭಾವದಿಂದ ತದನುಗುಣವಾಗಿ ಆಳು ಕೆಲಸದ ಪ್ರಾಶಸ್ತ್ಯವೂ ಮಹಿಮೆಯೂ ಸಂಪಾದನಾಶಕ್ತಿಯೂ ಹೆಚ್ಚುವವು. ಎಂದರೆ ಆಳು ಕೆಲಸಕ್ಕೆ ನಿಜವಾಗಿ ಸಲ್ಲತಕ್ಕ ಸಾರ್ಥಕ್ಯವನ್ನು ಬರಮಾಡಿಕೊಡಬೇಕಾದರೆ ಅದಕ್ಕೆ ಪಕ್ವವಾದ ಕಾಲವನ್ನು ನಿರೀಕ್ಷಿಸುತ್ತಿರಬೇಕು.

೬ ಹಾಗೂ ಶುಷ್ಕ (ಬರಿ) ಚಾಪಲ್ಯಗಳೆಲ್ಲವನ್ನೂ ಬಿಟ್ಟು ಮನಸ್ಸನ್ನು ಸ್ಥಿರಮಾಡಿಕೊಂಡು ಒಂದು ವೇಳೆ ಕಾದರೂ ನಮ್ಮ ಮನಸ್ಸಿಗೆ ಒಪ್ಪಿಕೆಯಾಗುವಂಥ ಕಾಲಬರುವದು ಸಂಭವವೆ? ಎಂಬುದು ಇನ್ನೂ ಕೇವಲ ಅನುಮಾನಾಸ್ಪದವಾಗಿದೆ. ಅಂತಹ ಕಾಲವು ಬರುವುದು ಅಸಂಭವವೆಂತಲೇ ಹೇಳಬೇಕಾಗಿದೆ. ಅದು ಹೇಗೆಂದರೆ, ತಾನು ಕಷ್ಟಪಟ್ಟು ಕೆಲಸಮಾಡುವದಕ್ಕೂ ಇತರರಿಂದ ಆ ಕೆಲಸವನ್ನು ಮಾಡಿಸುವದಕ್ಕೂ ಎಷ್ಟೋ ತಾರತಮ್ಯ-ಅಂತರಗಳಿವೆ. ತಾನು ಮಾಡಬೇಕಾದ ಕೆಲಸಕ್ಕೆಂದರೆ ದೇಹಪಟುತ್ವವೊಂದು ಅಗತ್ಯವೊಂದು

ಇವೆರಡು ಇದ್ದರೆ ಸಾಕು. ಇನ್ನೊಂದಕ್ಕೆಂದರೆ ಇಷ್ಟೇ ಆದರೆ ಏನೇನೂ ಸಾಲದು. ದೇಹಪಟುತ್ವ ಮತ್ತು ಆಗತ್ಯ ಇವುಗಳ ಜೊತೆಗೆ ಇತರರನ್ನು ಬಿಗಿಯಲ್ಲಿಟ್ಟುಕೊಂಡಿರಲು ಬೇಕಾದ ಚಾತುರ್ಯವು ಸೇರಬೇಕು. ಏಕಕಾಲದಲ್ಲಿ ಅನೇಕ ಕಡೆಗಳಲ್ಲಿ, ಅನೇಕ ಬಗೆಗಳಲ್ಲಿ ನಡೆಯುವ ವಿಶಿಷ್ಟ ಕೆಲಸಗಳ ಆಯುದಾರ್ಯ(?)ವಲ್ಲವನ್ನೂ ಕರತಲಾಮಲಕವಾಗಿ ಮಾಡಿಟ್ಟುಕೊಂಡಿರಬೇಕು. ಕಾಲದೇಶ ವರ್ತಮಾನಗಳ ಗತ್ಯಂತರಗಳನ್ನೂ, ಕಾರ್ಯಸಾಧನೆಗೆ ಬೇಕಾದ ಇಷ್ಟಪ್ರಾಪ್ತಿ, ಅನಿಷ್ಟ ನಿವೃತ್ತಿ ಇವುಗಳ ಸಲುವಾಗಿ ಉಪಾಯಾಂತರಗಳನ್ನೂ, ಹುಡುಕಿ ತಿಳಿದುಕೊಳ್ಳಲು ಸ್ವಯಂಬುದ್ಧಿ ಕಣ್ಣಾಗಿರಬೇಕು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಆಯಾ ಕಾರ್ಯದ ಗೌರವಾನುಗುಣವಾಗಿ ಸರ್ವಾಂತರ್ಯಾಮಿತ್ವವಿರಬೇಕು. ಇತರರು ಮಾಡುವ ಕೆಲಸದ ವಿಷಯದಲ್ಲಿ ಯಜಮಾನಿಕೆಯ ಭಾರವನ್ನು ಹೊತ್ತುಕೊಂಡು ಕಾರ್ಯವನ್ನು ನಿರ್ವಹಿಸಬೇಕೆಂಬಲ್ಲಿ ಇಷ್ಟು ಅನರ್ಘ್ಯವಾದ ಗುಣಗಳು ಜೋಡಣೆಯಾಗಿರಬೇಕೆಂದಮೇಲೆ ಅದಕ್ಕೆ ತಕ್ಕಂತೆ ಧನಾದಿರೂಪವಾದ ಪ್ರತಿಫಲವೂ ಅತಿಶಯವಾಗಿರಬೇಕೆಂತಲೇ ಆಗುವದಿಲ್ಲವೇ? ಅಸಾಧಾರಣ ವ್ಯಕ್ತಿಯು ತನ್ನ ಅಸಾಧಾರಣ ಗುಣಗಳಿಗೆ ಪ್ರತಿಫಲವಾಗಿ ಅಸಾಧಾರಣ ಸಾಫಲ್ಯವನ್ನು ದೊರಕಿಸಿಕೊಂಡರೆ, ಸಾಮಾನ್ಯ ವ್ಯಕ್ತಿಯು ಅದನ್ನು ನೋಡಿ ಸಹಿಸಲಾರದೆ ತನ್ನಂತೆ ಅವನೂ ಪ್ಯಸೋಯಿಸಿಕೊಳ್ಳಲಿಲ್ಲನೆಂಬೊಂದು ಕಾರಣದಿಂದಲೇ ಅವನನ್ನು ಪರಾನ್ನಪುಷ್ಟನೆಂದು ದೂರುವದು ಕೇವಲ ಸಣ್ಣ ಮಾರ್ಗವಲ್ಲವೆ?

೭ ಇದೂ ಅಲ್ಲದೆ ಮೇಲ್ವಿಚಾರಕರ, ಅಥವಾ ಮೇಲಾಳಿನ ಪ್ರಾಶಸ್ತ್ಯಕ್ಕೆ ಇನ್ನು ಒಂದು ಕಾರಣವುಂಟು. ಯಾವದೇ ಆಗಲಿ, “ತಾನು ಮಾಡುವದೇ ಉತ್ತಮ, ಮಗ ಮಾಡುವದು ಮಧ್ಯಮ ಆಳುಮಾಡುವದಂತೂ ಹಾಳೇ ಸರಿ.”—ಎಂಬ ಸಿದ್ಧಾಂತವು ನಿಜವಾದರೂ ಪ್ರತಿಯೊಬ್ಬರೂ ಎಲ್ಲಾ ಕೆಲಸಗಳನ್ನೂ ನಿರ್ವಹಿಸುವದಕ್ಕೆ ಆಗುವದಿಲ್ಲವಾದುದರಿಂದ ಕೆಲಕೆಲವು ಕೆಲಸಗಳನ್ನಾದರೂ ಇತರ

ರಿಗೊಪ್ಪಿಸಿ ಅವರಿಂದ ಮಾಡಿಸಿಕೊಳ್ಳತಕ್ಕದ್ದು ಸರ್ವಸಾಮಾನ್ಯ ನಿಯಮವಾಗಿರುವದು ಈ ನಿಯಮವನ್ನು ವಿಶೇಷ ಪ್ರಯೋಜನಕಾರಿಯಾಗುವಂತೆ, ಎಂದರೆ, ಇತರರಿಂದ ಮಾಡಿಸುವ ಕೆಲಸದ ಸ್ವಲ್ಪ ಹೆಚ್ಚು ಕಡಿಮೆ ತಾಸು ಸ್ವಂತವಾಗಿ ಮಾಡಿದ್ದರೆ ಆಗುತ್ತಿದ್ದಂತೆಯೇ ಆಗುವಂತೆ ಆಚರಣೆಯಲ್ಲಿ ತರುವದೆಂಬುದು ಹೆಚ್ಚಿನ ಸಾಹಸದ ಕೆಲಸವಾದುದರಿಂದ ಅದಕ್ಕೆ ತಕ್ಕಂತೆ ಪ್ರತಿಫಲವು ಹೆಚ್ಚಾಗಿ ಬರುವದರಲ್ಲಿ ವಿಶೇಷವೇನೂ ಇರುವದಿಲ್ಲ.

೮ "ದಕ್ಷಿಣೆ ಎಷ್ಟೋ ಅಷ್ಟೇ ಪ್ರದಕ್ಷಿಣೆ" ಎಂಬಗಾದೆಗೆ ಸರಿಯಾಗಿ ಎಲ್ಲಿ ಫಲಾನುಕೂಲವು ಪುಷ್ಕಳವಾಗಿರುವದೋ ಅಲ್ಲಿ ಕೆಲಸಗಾರರ ಗಮನವು ವಿಶೇಷವಾಗಿ ನೆಲಸಿರುವದಷ್ಟೆ? ಕಾರಣಗಳು ಯಾವವಾದರೂ ಆಗಲಿ, ಆಳು ಕೆಲಸದಲ್ಲಿ ಕೈಕಷ್ಟ ಹೆಚ್ಚಾದರೂ ಸಂಪಾದನೆ ಕಡಿಮೆ ಎಂಬುದು ಸ್ಪಷ್ಟವಿದ್ದುದರಿಂದ ಇಂತಹ ಆಳು ಕೆಲಸಕ್ಕೆ ಹಿಂದುಳಿಯದೆ ಮುಂದೆ ಮುಂದೆ ಸುಗ್ಗಿರೆಂದು ಯಾವ ಕಾರಣಗಳನ್ನು ಉದಹರಿಸಿ, ಯಾವ ಆಶೆಯನ್ನು ತೋರಿಸಿ, ಅಥವಾ ಯಾವ ಯಾವ ಭೀತಿಯನ್ನು ಹುಟ್ಟಿಸಿ ಜನರನ್ನು ಹುರಿದುಂಬಿಸುವದಕ್ಕಾದೀತು? ಎಂಬೀ ಪ್ರಶ್ನಗಳು ಒಂದರಮೇಲೊಂದು ಸಾಲುಸಾಲಾಗಿ ಬಂದು ಎದುರಿಸುವವು ಆದುದರಿಂದ ಆಳು ಕಲಸದಲ್ಲಿ ತುಸವಾದರೂ ಗುಣವಿದೆಯೋ, ಇಲ್ಲವೊ ಎಂಬುದನ್ನು ಮೊದಲು ನೋಡಬೇಕು. ಎಳ್ಳಷ್ಟಾದರೂ ಗುಣವು ಕಂಡುಬಂದರೆ, ಆ ಗುಣಸಂಕೀರ್ತನ ಮಾಡುವದು ನಮ್ಮ ಮುಂದಿನ ಧರ್ಮ. ಒಂದುಕಡೆ ಒಂದು ಗುಣವಿದ್ದ ಮೇಲೆ ಅದು ಎಷ್ಟೋ ಅಲ್ಪವಾಗಿರಲಿ, ಅದರಿಂದಾಗಬಹುದಾದ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳದೆ ಮುಂದಕ್ಕೆ ತೆರಳಬಾರದು. ಹಾಗೆ ತೆರಳುವದಾದರೆ ಆ ಸ್ಥಳದಲ್ಲಿ ಆ ಗುಣವಿದ್ದುದಕ್ಕೆ ಸಾರ್ಥಕವೇ ಇಲ್ಲದಂತಾಗುವದು, ಆದುದರಿಂದ ಸ್ವಲ್ಪ ಗುಣಾನ್ವೇಷ ಮಾಡೋಣ.

೯. ಮೊತ್ತಮೊದಲು ಯಾವ ವಿದ್ಯೆಯಲ್ಲಿಯೋ ಆಗಲಿ, (ಕುಶಲವಿದ್ಯೆಯಾದರೂ ಆಗಲಿ, ಬೇರೆಯಾದರೂ ಆಗಲಿ) ಇದ್ದುದರಲಿ

ಪೂರ್ಣತ್ವವು ಬರಬೇಕೆಂದರೆ ಅದರ ಸರ್ವಾಂಗವೂ ಪೂರ್ಣವಾಗಿರಬೇಕು. ಈಗ ನೋಡಿರಿ, ಈಗೀಗ ನಡೆಯುತ್ತಿರುವ ಉಪಾಧ್ಯಾಯರ ಪರೀಕ್ಷೆ, ಕೈಗಾರಿಕೆಗಳಿಗೆ ಸಂಬಂಧಪಟ್ಟ ಪರೀಕ್ಷೆ, ಪದಾರ್ಥವಿಜ್ಞಾನ ಶಾಸ್ತ್ರಗಳಿಗೆ ಸಂಬಂಧಪಟ್ಟ ಪರೀಕ್ಷೆ, ಇವೇ ಮೊದಲಾದವುಗಳಲ್ಲಿ ಪರೀಕ್ಷೆಯನ್ನೂ ಜ್ಞಾನಪರೀಕ್ಷೆ [Theory] ಮತ್ತು ವಿಜ್ಞಾನಪರೀಕ್ಷೆ [Practice] ಎಂಬೆರಡು ದೊಡ್ಡ ಪಂಗಡಗಳನ್ನಾಗಿ ವಿಂಗಡಿಸಿರುತ್ತಾರೆ. ಎಂದ ಮೇಲೆ ಆಚರಣೆಯೇ ಅಥವಾ ವಿಜ್ಞಾನವೇ ತನ್ಮಯವಾಗಿ ರೂಪುವೆತ್ತಿರುವ ಆಳುಕೆಲಸವು ಪುಸ್ತಕಪಾಠಕ್ಕೆ ಎಣೆಯಾದ ಒಂದಂಗವೆಂದೇ ಹೇಳಬೇಕು ಆ ಒಂದಂಗವನ್ನು ಉದಾಸೀನ ಮಾಡಿದರೆ ಒಟ್ಟಿನಲ್ಲಿ ಒಂದು ಊನವು ನಿಂತಂತೆಯೇ ಆಯಿತು ಆದುದರಿಂದ ಇದ್ದುದರಲ್ಲಿ ಪೂರ್ಣತ್ವವನ್ನು ಪಡೆಯಬೇಕಾದರೆ ಆಳು ಕೆಲಸದ ಕೌಶಲ್ಯವೂ ಕರಗತವಾಗಿರಬೇಕು.

೧೦. ಅಲಂಕಾರಕ್ಕೆ ಪೂರ್ಣತ್ವವನ್ನು ಒಟ್ಟುಗೂಡಿಕೊಡುವದೆಂಬುದು ಮಾತ್ರವೇ ಅಲ್ಲ ಯಾವ ಉದ್ಯೋಗದಲ್ಲಿಯೇ ಆದರೂ ಕೆಲಸವು ತೃಪ್ತಿಕರವಾಗಿ ನಡೆಯಬೇಕಾದರೆ ಆಳು ಕೆಲಸದ ಅನುಭವವು ತುಂಬಾ ಸಹಾಯ ಮಾಡುತ್ತದೆ. ಎಲ್ಲ ಕೆಲಸಗಳ ಮರ್ಮವನ್ನೂ ತಿಳಿದ ಯಜಮಾನನಿಗೂ, ಕಜ್ಞಾ ಕೆಲಸಗಳ ಅನುಭವವಿಲ್ಲದ ಕೇವಲ ಬುದ್ಧಿಬಲವನ್ನೇ ಆಶ್ರಯಿಸಿಕೊಂಡಿರುವ ಯಜಮಾನನಿಗೂ ಎಷ್ಟರ ಅಂತರವಿದೆಯೋ ನೋಡಿರಿ! ಕೇವಲ ಶಾಸ್ತ್ರಜ್ಞಾನವೇ ಪ್ರಧಾನವಾಗಿ ಉಳ್ಳ ಒಬ್ಬನನ್ನೂ, ಪ್ರಪಂಚ ಜ್ಞಾನವು ಪ್ರಧಾನವಾಗಿ ಉಳ್ಳ ಮತ್ತೊಬ್ಬನನ್ನೂ ಆರಿಸಿಕೊಂಡು, ಅವರ ಜೀವನ ಚರಿತ್ರೆಗಳನ್ನು ಪರೀಕ್ಷಿಸುತ್ತ ಹೋದರೆ ಅವರಿಬ್ಬರಲ್ಲಿ ಯಾರನ್ನು ಜಯಶಾಲಿಗಳೆಂದು ನಿರ್ಣಯಿಸುವಿರಿ? ಕೆಲಸಗಾರರು ಕೆಲಸವನ್ನು ಬಲ್ಲ ಯಜಮಾನನಿಗೆ ಬಗ್ಗುವಂತೆ ಇತರರಿಗೆ ಬಗ್ಗುವರೇ? ಒಂದು ಆಡಳಿತದ ಸರ್ವಸ್ವವೂ ಹಿಡಿತದಲ್ಲಿರಬೇಕಾದರೆ ಎಲ್ಲಾ ಕೆಲಸಗಳ ಅನುಭವವೂ ಇರಬೇಕು ಆ ಅನುಭವವು ಎಷ್ಟೆಷ್ಟು ಕಡಿಮೆಯಾಗಿದ್ದರೆ, ಅಷ್ಟೂ ಅಷ್ಟು "ಕಂತೆಗೆ ತಕ್ಕ ಬೊಂತೆ" ಎಂಬಂತೆ ಕೆಲಸದ ಗುಣವು ನಿಕೃಷ್ಟವಾಗುವದು ಅದು

ದರಿಂದ ಯಾವ ಕಾರ್ಯಸಾಧನೆಯಲ್ಲಿಯೋ ಆಗಲಿ ಸಂಪೂರ್ಣ ಫಲ ವನ್ನು ಪಡೆಯಬೇಕೆಂದರೆ ಆಳುಕೆಲಸಕ್ಕೆ ಹೆಗಲು ಕೊಡಲು ಸಿದ್ಧ ವಾಗಿರಬೇಕು. ಸಮಯದಲ್ಲಿ ಆಳು ಬೇಕಾದಾಗ ಆಳಾಗಬೇಕು, ಅರಸು ಬೇಕಾದಾಗ ಅರಸಾಗಬೇಕು ಈ ರೀತಿಯಲ್ಲಿ ಕಾಲ ದೇಶ ವರ್ತಮಾನಗಳನ್ನರಿತು ಅವುಗಳಿಗನುಗುಣವಾಗಿ ಹೊಂದಿಕೊಂಡು ಹೋಗುವದನ್ನು ಮುಖ್ಯವಾಗಿ ಕಲಿಯಬೇಕು ಹಾಗಿಲ್ಲದೆ ಕೆಲ ಸಕ್ಕೆ ಬಾರದ (ಒಣ) ಶ್ರೀಮದ್ಗಾಂಭೀರ್ಯವನ್ನು ಪ್ರೀತಿ ಹಾಕಿ ಕೊಂಡು ಕುಳಿತರೆ ಆಗುವ ಪರಿಣಾಮವನ್ನು ವರ್ಣನೆಗಿಂತಲೂ ಊಹೆ ಯಿಂದ ಚನ್ನಾಗಿ ತಿಳಿಯಬಹುದು

೧೧ ಆಳು ಕೆಲಸವನ್ನು ಭೂಷಿಸುವದಕ್ಕೆ ಮೇಲೆ ಹೇಳಿದ ವ್ಯಾವಹಾರಿಕವಾದ ಸೌಖ್ಯ ಸೌಕರ್ಯಗಳ ಲೋಭಮಾತ್ರವೇ ಕಾರ ಣವಿಲ್ಲ ಯಾವ ಉದ್ಯೋಗದಲ್ಲಿಯೇ ಆಗಲಿ ಔತ್ಸುಕ್ಯವುಂಟಾಗ ಬೇಕಾದರೂ ಅಥವಾ ಉದ್ಯೋಗಕ್ಕೆ ಸಂಬಂಧಪಟ್ಟ ಪ್ರತಿಯೊಂದು ವಿಷಯವೂ ಪ್ರವರ್ತಕರಿಗೆ ಹೃದಯಂಗಮವಾಗಿರಬೇಕಾದುದು ಅವ ಶ್ಯಕ ಈಗ ಯಾವ ಕೆಲಸವನ್ನು ಮಾಡಬೇಕಾದರೂ ಅದರಲ್ಲಿ ಕೊಂಚವಾದರೂ ಪರಿಚಯವಿದ್ದರೆಯೇ ಆ ಕೆಲಸವನ್ನು ಮಾಡಲು ಅಭಿರುಚಿಯೂ ಉತ್ಸಾಹವೂ ಹುಟ್ಟುವವು ಅದರ ತಿಳುವಳಿಕೆ ಇಲ್ಲ ವಿದ್ದರೆ ಆ ಕಡೆಗ ಗಮನವೇ ಹೋಗುವದಿಲ್ಲ ಪರಿಚಯವಿಲ್ಲದೆ ಯೇ ಯಾವ ಉದ್ಯೋಗದಲ್ಲಿ ಪ್ರವರ್ತಿಸುವದೆಂದರೂ ಕಿವುಡನ ಮುಂದೆ ಕಿನ್ನರಿಯನ್ನು ಬಾರಿಸಿದಂತಾಗುವದು

೧೨ ಆಳು ಕೆಲಸಕ್ಕೂ ಅರಸು, ಕೆಲಸಕ್ಕೂ ಎಷ್ಟೋ ತಾರ ತಮ್ಯವಿರುವದು ನಿಜ. ಸಂಪಾದನೆಯ ಶಕ್ತಿಯನ್ನು ಹೆಚ್ಚಿಸಿಕೊಡು ವದರಲ್ಲಿಯಾಗಲಿ, ಯೋಗ್ಯತಾಪಕ್ಷವನ್ನು ವಿಮರ್ಶೆ ಮಾಡಿಕೊಡುವ ದರಲ್ಲಿಯಾಗಲೀ ಅರಸು ಕಲಸದ ಮುಂದೆ ಆಳು ಕೆಲಸವು ಒಂದು ಕಾಲಕ್ಕಾದರೂ ಮುಖಕೊಟ್ಟು ನಿಲ್ಲಲಾರದೆಂಬುದೂ ನಿಜ ಆದ ಮಾತ್ರಕ್ಕೇ ಆಳು ಕೆಲಸವನ್ನು ಅನುಪಯೋಗವಾದುದೆಂದಾಗಲೀ ಅಥವಾ ವಿಶೇಷ ಫಲಪ್ರದವಾದುದಲ್ಲವೆಂದಾಗಲೀ ತಿರಸ್ಕರಿಸಿಬಿಡು

ವದು ಅನುಚಿತವು ಆಳು ಕೆಲಸಕ್ಕೂ ಅರಸು ಕೆಲಸಕ್ಕೂ ಇರತಕ್ಕ ಸಂಬಂಧವನ್ನೇ "ಕೈಕೆಸರಾದರೆ ಬಾಯಿಮೊಸರು' ಎಂಬ ಗಾದೆಯು ಉದಹರಿಸುತ್ತದೆ ಒಂದಕ್ಕೊಂದರ ಪರಸ್ಪರ ಸಂಬಂಧವು ಹೇಗಿರುವದೆಂದರೆ, ಅರಸು ಕೆಲಸದ ಬೆಲೆಯೇನೋ ಅನರ್ಘವಾದುದು ಆದರೆ ಯಾವಾಗಲೂ ಎಲ್ಲಾ ಕಡೆಯಲ್ಲಿಯೂ ಆಳು ಕೆಲಸವು ಮೊದಲು, ಅರಸು ಕೆಲಸವು ಆ ಮೇರೆ ಆಳು ಕೆಲಸವಾಗದಿದ್ದರೆ ಅರಸು ಕೆಲಸವಾಗುವದೇ ಇಲ್ಲ ಒಂದು ವೇಳೆ ಆಗುವದೆಂದಿಟ್ಟುಕೊಂಡರೂ ಅದರ ಅತ್ಯಂತ ಅನರ್ಘವಾದ ಬೆಲೆಯಲ್ಲಿ ಬಹು ಭಾಗವು ಮುಕ್ಕಾಗುವದೂ ಅರಸು ಕೆಲಸವು ಇಷ್ಟು ಮಟ್ಟಿಗೆ ಆಳು ಕೆಲಸವನ್ನು ಆಶ್ರಯಿಸಿಕೊಂಡಿರುವದು ಇನ್ನು ಆಳು ಕೆಲಸವಾದರೋ ಅದರ ರೀತಿಯೇ ಬೇರೆ! ಅದರ ಬೆಲೆಯೇನೋ ಸ್ವಲ್ಪ, ಆದರೆ ಅದು ಅರಕ್ಕೆ ಹೆಚ್ಚುವದಿಲ್ಲ, ಬರಕ್ಕೆ ತಗ್ಗುವದಿಲ್ಲ ಅದಕ್ಕೆ ಇತರ ಯಾವ ಆಶ್ರಯವೂ ಬೇಕಿಲ್ಲ ಅರಸುಕೆಲಸದ ಸಾಂಗತ್ಯವಿಲ್ಲದಿದ್ದರೂ ಅದರ ಬೆಲೆಗೇನೂ ಚ್ಯುತಿಯಿಲ್ಲ. ಹೀಗೆ ಅದು ಸ್ವತಂತ್ರವಾಗಿರುವದು.

೧೩. ಈ ವಿಚಾರಗಳೆಲ್ಲ ಸಾಮಾನ್ಯವಾಗಿ ಪ್ರತಿಯೊಬ್ಬರಿಗೂ ಇಲ್ಲಿ ವಿವರಿಸಿರುವದಕ್ಕಿಂತಲೂ ಚನ್ನಾಗಿಯೇ ತಿಳಿದಿದ್ದರೂ ಅದರಂತೆ ನಡೆಯುವದಕ್ಕೆ ಎರಡು ತೀವ್ರವಾದ ಪ್ರತಿಬಂಧಕಗಳಿರುವವು - ಮೊದಲನೆಯದು ಆಲಸಿಕೆ, ಎರಡನೆಯದು ಲಾಘವಬುದ್ಧಿ ಆಲಸಿಕೆಯನ್ನು ಕಳೆಯಬೇಕಾದರೆ ಬರಿಯ ಉಪದೇಶ ಮಾತುಗಳು ಅಷ್ಟು ಸಹಕಾರಿಯಾಗಲಾರವು. ಮನುಷ್ಯನಲ್ಲಿ ಆ ಚುರುಕೂ, ಆ ಚಟವಟಿಕೆಯೂ ಒಳಗಣಿಂದ ಹುಟ್ಟಿಕೊಂಡು ಬರಬೇಕು. ಸೋಮಾರಿಯಾದ ದನಗಳಿಗೆ ಚುರುಕು ಮುಟ್ಟಿಸಿದರೆ, ಆ ಒಂದು ಕ್ಷಣಕಾಲದೆಬ್ಬಿಗೆ ಜವಾಬಾಗಿ (?) ಅವು ಚಮುಕು ಮಾಡಿಕೊಂಡು ಓಡಿಹೋಗುವಂತೆಯೇ ನಮ್ಮನ್ನು ನಮ್ಮ ಕೈಮೀರಿದ ಸಂದರ್ಭಗಳು ಒತ್ತಾಯಮಾಡಿದಾಗ ನಾವು ಸ್ವಲ್ಪ ಚುರುಕಾಗಿದ್ದರೂ ಅದು ತಾತ್ಕಾಲಿಕವಾದುದೇ ಹೊರತು ನೆಚ್ಚಿಕೆಯಾದುದಲ್ಲ. ಅಂತಹ ಚಟುವಟಿಕೆಯು ಬರುವದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡಬೇಕಾದುದು

ಒಂದು ಕೇ ಸ. ಅದೇ ಲಾಘವ ಬುದ್ಧಿಯನ್ನು ಕಳೆದುಕೊಳ್ಳಬೇಕಾದರೆ ಮಾತ್ರ ವಿಚಾರಮಾಡುವದು ಕೇವಲ ಆವಶ್ಯಕ ಏಕೆಂದರೆ, ಗೌರವವಾಗಲಿ, ಲಾಘವವಾಗಲು ಯಾವದರಲ್ಲಿಯೂ ಸಹಜವಾಗಿ ಇರುವದಿಲ್ಲ ಒಂದು ಉದ್ಯೋಗಕ್ಕೆ ಗೌರವವಾಗಲೀ ಲಾಘವವಾಗಲೀ ಬರಬೇಕಾದರೆ ಅದಕ್ಕೆ ಕೈಹಾಕಿದವರಿಂದಲೇ ಬರುವದು, ಅದುದರಿಂದ ಯಾವ ವಿಧವಾದ ಭೇದಬುದ್ಧಿಯನ್ನೂ ಎಣಿಸದೆ ಪ್ರತಿಯೊಬ್ಬರೂ ಒಂದೇ ಮನಸ್ಸಿನಿಂದ ಆಳು ಕೆಲಸವನ್ನು ಗೌರವಿಸುವಂತಾದರೆ ಮನುಷ್ಯನಿಗೆ ಅವನ ಭವಿತವ್ಯವು ಅವನ ಕೈಯಲ್ಲಿಯೇ ಇರುವದೆಂಬ ಸಿದ್ಧಾಂತವು ಪ್ರತ್ಯಕ್ಷ ಪ್ರಮಾಣವಾಗುವದು [ಒಟ್ಟಿನಲ್ಲಿ ಈ ಪ್ರಕರಣವು ಜನ ಸಾಮಾನ್ಯಕ್ಕೆ ಬೋಧಿಸುತ್ತಿದ್ದರೂ, ಮುಖ್ಯವಾಗಿ ಗೃಹಿಣಿಯರು, ತಮ್ಮ ಗೃಹಕಾರ್ಯ ಭಾರವನ್ನು ಸುಲಲಿತವಾಗಿ ಸಾಗಿಸಬೇಕಾದರೆ, ಅವರಲ್ಲಿ ಎಲ್ಲಾ ವಿಚಾರಗಳ ಅನುಭವವೂ ಚೆನ್ನಾಗಿರಬೇಕೆಂಬುದನ್ನು ಸಮರ್ಥಿಸುವದೆಂದು ಭಾವಿಸಬೇಕು ।

## ಆದರ್ಶ ರಮಣಿಯರಾದ

### ಶ್ರೀಮತಿ, ಸೌಭಾಗ್ಯವತಿ

# ಪಾರ್ವತಮ್ಮನವರು

(ಶ್ರೀಯುತ, ಜಸ್ಟಿಸ್ ಕೆ. ಎಸ್. ಚಂದ್ರಶೇಖರ ಅಯ್ಯರ್ ಬಿ ಎ ಬಿ ಎಲ್ ರವರ ಧರ್ಮಪತ್ನಿ)

ಪ್ರಿಯ ಭಗಿನಿಯರೇ !

ನಮ್ಮ ಸನ್ಮಾನನೀಯ ಭಗಿನಿಯರಾದ ಶ್ರೀ|| ಸೌ|| ಪಾರ್ವತಮ್ಮನವರ ಇತಿವೃತ್ತವನ್ನು ಕಾಲಾನುಕ್ರಮದಿಂದ ವಿವರಿಸುವೆವೆಂದು ಮೊದಲೇ ಸೂಚಿಸಿದ್ದೆವಷ್ಟೆ! ಭಗವತಿಯ ಕೃಪೆಯಿಂದ ನಮ್ಮ ಅಂದಿನ ವಾಗ್ದಾನಕ್ಕೆ ಸಕಾಲವೂ, ಉದ್ದೇಶಕ್ಕೆ ಸಾಫಲ್ಯವೂ ಆದ ಸುಮುಹೂರ್ತವನ್ನು ಭಗವತಿಯು ನಮಗಿಂದು ದಯಪಾಲಿಸಿರುವಳೆಂದು ಹರ್ಷಪಡುವೆವು ಶ್ರೀಮತಿ ಸೌ ಪಾರ್ವತಮ್ಮನವರೆಂದರೆ ಸಾಮಾನ್ಯ ಸ್ತ್ರೀಯರಾಗಿಲ್ಲ ಶ್ರೀಮಂತರ ಮನೆತನದಲ್ಲಿ ಜನ್ಮವೆತ್ತಿ, ಶ್ರೀಮಂತರ ಮನೆಯನ್ನು ಸೇರಿ, ಅತ್ಯುನ್ನತ ಪದವೀಧರರಾದ, ಉತ್ತಮೋತ್ತಮ ಸುಗುಣಾಲಂಕೃತರಾದ ಪತಿಯ ಕೈಹಿಡಿದು, ಪತಿಯ ಸಮಯೋಚಿತ-ಹಿತಬೋಧೆ, ಸಹಾಯ ಪ್ರೇರಣೆ, ಪ್ರೋತ್ಸಾಹಗಳ ಫಲಸ್ವರೂಪರಾಗಿ ಬೆಂಗಳೂರು ಮಹಿಳಾ ಸೇವಾಸಮಾಜಕ್ಕೆ ಅಧ್ಯಕ್ಷರೂ, ಸೇವಾಸದನದ ಪೋಷಕರೂ ಆಗಿರುವ ಸುಪ್ರಸಿದ್ಧ ನಾರೀಮಣಿಯೇ ಇವರು ಸಾಮಾನ್ಯವಾಗಿ ಇವರ ಹೆಸರನ್ನು ಕೇಳದೆ ಇರುವ ಪತ್ರಿಕೆಗಳಲ್ಲಿ, ಇವರ ದೇಶಹಿತಕಾರ್ಯ ಕಲಾಪಗಳ ವರ್ಣನೆಯನ್ನು ನೋಡದೆ ಇರುವವರು ಈ ಕಡೆಯಲ್ಲಿ ವಿರಳವೆಂದರೆ ಅತ್ಯುಕ್ತಿಯಲ್ಲ ಆದರೂ, ಬಹುಮಂದಿಗೆ ಇವರ ವ್ಯಕ್ತಿಪರಿಚಯವಾಗಲೀ ವೃತ್ತಿಪರಿಚಯವಾಗಲೀ ಅಷ್ಟಾಗಿ ಸ್ಪಷ್ಟಪಟ್ಟಿಲ್ಲವೆಂದು ತಿಳಿದು, ಇಂತಹ ಆದರ್ಶರಮಣಿಯರ ಜೀವಿತವನ್ನು ಸಂಗ್ರಹವಾಗಿಯಾದರೂ ನಿಮ್ಮ ಮುಂದಿಡಬೇಕೆಂಬ ಕುತೂಹಲವು ನಮ್ಮನ್ನು ಬಾಧಿಸುತ್ತಿರುವದು

ಈ ನಮ್ಮ ಭಗಿನಿಯರ ಜನ್ಮಸ್ಥಳವು ತಿರುಚನಾಪಲ್ಲಿಗೆ ಸೇರಿದ ಮಣಕ್ಕಾಲ್' ಎಂಬ ಪುಣ್ಯಸ್ಥಳವು ಇವರ ತಾಯ್ತಂದೆಗಳು ತುಳಸಿ ಅಮ್ಮ-ಶ್ರಿ ಸುಬ್ಬಸ್ವಾಮಿ ಅಯ್ಯರು ಎಂಬ ಶ್ರೀಮಂತ ಗೃಹಸ್ಥರು. ಇವರ ಜನ್ಮಧಾರಣವು ೧೮೭೫ನೇ ಇಸವಿ ಎಪ್ರಿಲ್ ತಿಂಗಳಲ್ಲಿ, ಇವರ ವಿವಾಹವು ೧೮೮೪ರಲ್ಲಿ ಬೆಳೆಯಿತು ಎಂದರೆ ಆಗ ಇವರಿಗೆ ಒಂಭತ್ತನೇ ವರ್ಷವು, ಇವರ ಸ್ವಾಮಿಗಳಾಗಿರುವ ಶ್ರೀಯುತ, ಜಸ್ಟೀಸ ಕೆ ಎಸ್ ಚಂದ್ರಶೇಖರ ಅಯ್ಯರ್ ಅವರಿಗೆ ೧೬ನೆ ವರ್ಷವು * ನಡೆಯುತ್ತಿದ್ದಿತೆಂದು ತಿಳಿಯಬೇಕು

ಇವರು ದ್ರಾವಿಡ ದೇಶದವರಾದರೂ, ಇವರ ಸ್ವಾಮಿಯವರು ಮೈಸೂರು ಸೀಮೆಯಲ್ಲಿ ಉದ್ಯೋಗಸ್ಥರಾಗಿ, ಈ ದೇಶದ ನ್ಯಾಯ, ನೀತಿ, ಸಾಂಪತ್ತಿಕ ಸ್ಥಿತಿಗಳನ್ನು ಊರ್ಜಿತಪಡಿಸುವ ಅತ್ಯುತ್ತಮ ಕರ್ತವ್ಯದಲ್ಲಿ ದೀಕ್ಷಾಬದ್ಧರಾಗಿರುವದರಿಂದ, "ಪತಿಗತಿಯನನುಸರಿಸುವುದೆ ಸತಿಯರಿಗೆ ಹಿತವು" ಎಂಬ ಹಿತವಚನವನ್ನನುಸರಿಸಿ, ಪತಿಯ ಧರ್ಮಕಾರ್ಯಗಳಿಗೆ ಸಹಚಾರಿಣೀ ಸಖಿಯರಾಗಿ ನಿಂತು, ಪ್ರೋತ್ಸಾಹನವನ್ನುಂಟು ಮಾಡುತ್ತ, ತಾವು ನೆಲೆಗೊಂಡಿರುವ ಈ ಕರ್ಣಾಟಕದ ಏಳಿಗೆಗಾಗಿ ದಿವಾರಾತ್ರಿಯೆನ್ನದೆ ಶ್ರಮಪಡುತ್ತಿರುವದನ್ನು ನೋಡಿದರೆ ಕರ್ಣಾಟಕಮಾತೆಯ ಪುಣ್ಯೋದಯವೆಂದೇ ಹೇಳಬಹುದಾಗಿದೆ

ಏಕೆಂದರೆ— ಈಗ ನೋಡಿ ಹೇಳಿರಿ, ನನ್ನ ಭಗಿನಿಯರೇ! ನಮ್ಮ ಸನ್ಮಾನ್ಯ ಭಗಿನಿಯರಂತೆ ದೇಶಕ್ಕೂ, ದೇಶಭಾಷೆಗೂ, ದೇಶೀಯರಿಗೂ ದೇಶದ ಸಾಂಪತ್ತಿಕ ಸ್ಥಿತಿಗೂ ಅಭ್ಯುದಯ-ಸ್ಥಿತಿಯನ್ನುಂಟು ಮಾಡಿ

---

* ಶ್ರೀಯುತ, ಚಂದ್ರಶೇಖರ ಅಯ್ಯರವರು ಈ ನಮ್ಮ ಮೈಸೂರು ಸಂಸ್ಥಾನದ ಚೀಫಕೋರ್ಟ (Chief Court) ಜಡ್ಜಿ (Judge) ಗಳಾಗಿರುವರು ಇವರ ವಿದ್ಯಾಭ್ಯಾಸಂಗ, ಉದ್ಯೋಗವೇ ಮೊದಲಾದ ಇವರ ಸಂಕ್ಷಿಪ್ತ ಚರಿತ್ರವು ಸತೀಹಿತೈಷಿಣಿಯ ೧೧ನೇ ಗ್ರಂಥವಾದ ವಿದ್ಯಾವಿನೋದದಲ್ಲಿ ಪ್ರಸ್ತಾಪಿಸಲ್ಪಡುವದರಿಂದ ಇಲ್ಲಿ ಅದನ್ನು ಬಿಟ್ಟಿರುವದು ನಮ್ಮ ಕೋರಿಕೆಯಂತೆ ತಮ್ಮ ಮತ್ತು ತಮ್ಮ ಪತ್ನಿಯರ ಭಾವಚಿತ್ರಗಳನ್ನೂ ಮತ್ತು ಉಪಯುಕ್ತ ವಿಚಾರಗಳಲ್ಲಿ ಸಾಕಷ್ಟು ಸಮಾಧಾನವನ್ನೂ ಕಳುಹಿಸಿ, ಅನುಮತಿಯಿತ್ತು ಪ್ರೋತ್ಸಾಹಿಸಿದುದಕ್ಕಾಗಿ ಆ ನಮ್ಮ ಧರ್ಮಭ್ರಾತೃಗಳ ಸೌಜನ್ಯವು ನಮಗೆ ಚಿರಸ್ಮರಣೀಯವಾಗಿರುವದು.

ದು ತ್ರಿಕರಣ ಶುದ್ಧಿಯಿಂದ ಪ್ರಾರ್ಥಿಸುತ್ತಿರುವವರಾಗಲೀ, ಇವರಂತೆ ದೇಶಹಿತಕಾರ್ಯಕ್ಕಾಗಿಯೇ ತಮ್ಮ ಜನ್ಮಧಾರಣವಾಗಿದೆಯೆಂದು ತಿಳಿದು ತಮ್ಮ ತನು, ಮನ, ಧನಗಳನ್ನು ಸಮರ್ಪಿಸುತ್ತಿರುವ ಮಹಾನುಭಾವರಾಗಲೀ, ತಮಗೆ ಮಕ್ಕಳಿಲ್ಲದಿದ್ದರೂ, ಇವರಂತೆ ಆಶ್ರಿತಾನಾಥರೇ ತಮ್ಮ ಮಕ್ಕಳೆಂದೂ, ಬಂಧುಮಿತ್ರರೆಲ್ಲರೂ ಕುಟುಂಬಕ್ಕೆ ಸೇರಿದವರೆಂದೂ ಭಾವಿಸಿ, ಬಡವರೆಂದು ಮೂದಲಿಸದೆ, ಭಾಗ್ಯವಂತರೆಂದು ಬೀಗದೆ, ಉಚಿತರೀತಿಯಿಂದವರನ್ನು ಆದರದಿಂದ ಸತ್ಕರಿಸುತ್ತಿರುವ ಉದಾರಚರಿತೆಯರಾಗಲೀ, ನಮ್ಮ ಕರ್ಣಾಟಕ ಮಹಿಳೆಯರಲ್ಲಿ ಎಷ್ಟು ಮಂದಿ? ನಮ್ಮ ಆತ್ಮಾವಲಂಬನದ ಆನಂದ ಸುಖಾನುಭವದ ಸಾರವನ್ನು ತಮ್ಮ ಸೋದರಿಯರಿಗೂ, ಅಷ್ಟಿಷ್ಟಾಗಿ ದೊರೆಯಿಸಿ ಕೊಡಬೇಕೆಂಬ ಸಹೃದಯವಾದರೂ, ಎಷ್ಟುಮಂದಿ ವಿದ್ಯಾವತಿಯರೆನ್ನಿಸಿದ ಮಹಿಳೆಯರಲ್ಲಿ ಪ್ರಕಾಶಗೊಂಡಿದೆ? ಪಟ್ಟಾಂಕಿತೆಯರಲ್ಲಿಯಾಗಲೀ, ಪದವೀಧರೆಯರಲ್ಲಿಯಾಗಲೀ, ಉದ್ಯೋಗನಿರತೆಯರಾಗಿ ಮಾಸಿಕ ವೇತನದಿಂದ ಸರ್ಕಾರಕ್ಕೆ ಆದಾಯವನ್ನು ಹೆಚ್ಚಿಸು(?)ತ್ತಿರುವವೆಂದು ಬೀಗಿರುವವರಲ್ಲಿಯಾಗಲೀ ಎಷ್ಟುಮಂದಿ ಕರ್ಣಾಟಕ ಮಹಿಳೆಯರು, ಈ ನಮ್ಮ ಭಗಿನಿಯರಂತೆ ಅನಿಮಿತ್ತ 'ಬಂಧುಸ್ನೇಹದಿಂದ ದೇಶಭಗಿನಿಯರನ್ನು ಉನ್ನತಿಗೆ ತರಲು ದೀಕ್ಷಾಬದ್ಧೆಯರಾಗಿರುವರು? ಈ ಘನಘೋರ ಸಂಗ್ರಾಮದಲ್ಲಿ ನಮ್ಮ ದೇಶೀಯ ಭಟರಿಗೂ ನಮ್ಮ ಬ್ರಿಟಿಶ ದಳಗಳಿಗೂ ಶಕ್ತ್ಯುತ್ಸಾಹವನ್ನೂ, ಶ್ರೀ ಮಹಾರಾಜರ ಮತ್ತು ಚಕ್ರವರ್ತಿಗಳ ಪರವಾಗಿ ಶ್ರೇಯೋಭಿವೃದ್ಧಿಯಾಗಲೆಂದು ಅನೇಕ ವಿಧವಾದ ಪ್ರಯತ್ನಗಳಿಂದ ನಮ್ಮವರನ್ನು ಹುರುಡಿಸುವಷ್ಟು ದೇಶವಾತ್ಸಲ್ಯವಾದರೂ ಮತ್ತಾರಲ್ಲಿರುವದು? ಕೇಳಿರಿ, ಏಕೆ ಮಾತಿಲ್ಲ? ಹೇಳಲಾರೆನೆಂದೋ? ನಿಜ! ಹೇಳುವಂತಿಲ್ಲ "ಉದರ ನಿಮಿತ್ತಂ ಬಹುಕೃತವೇಷಂ" ಎಂಬಂತೆ ಕಾಲಹರಣಕ್ಕೂ, ಜೀವಧಾರಣೆಗೂ ಮಾತ್ರವೇ ತಮ್ಮ ವೃತ್ತಿಯನ್ನವಲಂಬಿಸಿ ಹೊಡೆದಾಡುತ್ತಿರುವೆವಲ್ಲದೆ, ಇದೇ ನಮಗೆ ಮುಖ್ಯ ವೃತ್ತಿಯೆಂದು ನಂಬಿ ಮಾಡುತ್ತಿರುವದಿಲ್ಲ" ಹೀಗೆಂದು ಉದ್ಯೋಗದಲ್ಲಿ ಹೊಡೆದಾಡುತ್ತಿರುವ ಕೆಲವು ಮಂದಿ ಮಹಿಳೆಯರ

ಬಾಯಿಯಿಂದಲೇ ಹೊರಬಿದ್ದುದನ್ನು ಕಿವಿಯಾರ ಕೇಳಿರುವೆವು. ಇನ್ನು ನೀವೇನು ಹೇಳುವಿರಿ ? ಪಾಪ ! ಹೀಗೆ ಬರೆದುದಕ್ಕೆ ಆ ನಮ್ಮ ಭಗಿನಿಯರು ಆಗ್ರಹಯುಕ್ತರಾಗುವರೋ ಹೇಗೋ ತಿಳಿಯದು ಒಂದುವೇಳೆ ಅವರು ವಿಚಾರವಿಮರ್ಶೆಗೆ ಅವಕಾಶ ಕೊಡದ ಆಗ್ರಹಪಟ್ಟು ನಮ್ಮನ್ನು ಆಕ್ಷೇಪಿಸುವ್ರದಾದರೆ ಆಗ ನಾವು ಅನಿವಾರ್ಯ ಪಕ್ಷದಿಂದ ಹೀಗೆ ಹೇಳಬೇಕಾಗುವುದು "ಭಗಿನಿಯರೇ! ತಾಳ್ಮೆಯನ್ನು ತೆಗೆದುಕೊಳ್ಳಿರಿ ನೀವಾರೆಂದು ವಿಚಾರಮಾಡಿ ನೋಡಿರಿ ನೀವು ಆರ್ಯಮಹಿಳೆಯರಲ್ಲದೆ, ಪುರುಷರಲ್ಲ. ಆರ್ಯ ನಾರೀಗಣಕ್ಕೆ ಒಪ್ಪುವ ಗೃಹಕಾರ್ಯದಕ್ಷತೆ, ಮಾನ ಮರ್ಯಾದೆ, ಗುರುದೈವಭಕ್ತಿ ಮತಾಚಾರ, ಧರ್ಮಶ್ರದ್ಧೆಗಳು ನಿಮ್ಮಲ್ಲಿ ಅವಶ್ಯವಾಗಿರಬೇಕಲ್ಲದ, ಕೇವಲ ಪುರುಷರಿಗೆ ಮಾತ್ರನೇ ತಕ್ಕುದಾದ ವ್ಯಾವಹಾರಿಕ, ಔದ್ಯೋಗಿಕ ವ್ಯಸನಗಳು ನಿಮ್ಮ ಕರ್ತವ್ಯದಿಂದ ಅತಿಕ್ರಮಿಸಿರತಕ್ಕವುಗಳಾಗಿವೆ ಅತಿಕ್ರಮ ಮಾರ್ಗದಲ್ಲಿ ಬೋಧಿಸಲ್ಪಡುವ ಆವ ವಿಚಾರವೂ, ನಮ್ಮ ಸ್ತ್ರೀಸಮಾಜವನ್ನು ಉನ್ನತಿಗೆ ತರುವಂತಿಲ್ಲವೆಂಬುದನ್ನು ಖಂಡಿತವಾಗಿ ತಿಳಿದಿಟ್ಟಿರಗೊಳ್ಳಿರಿ-" ಇರಲಿ, ಪ್ರಕೃತದ ವಿಚಾರದಲ್ಲಿ ಮುಂದೆ ಗಮನಿಸುವ—

ಶ್ರೀ|| ಸೌ|| ಪಾರ್ವತಮ್ಮನವರ ಸ್ನೇಹಬಾಂಧವ್ಯವು ಕಳೆದ ೧೯೨೯ನೆ ಇಸವಿ ಎಪ್ರಿಲ ೨೭ ಎಂದರೆ, ರಾಕ್ಷಸ ಸಂ|| ವೈಶಾಖ ಶು|| ದಶಮಿ, ಶನಿವಾರ ಸಾಯಂಕಾಲ ನಾಲ್ಕು ಘಂಟೆ ಸಮಯದಲ್ಲಿ ನಮಗೆ ಭಗವತಿಯ ಅನುಗ್ರಹದಿಂದ ಸುಲಭವಾಗಿ ಲಭಿಸಿತು ಹೇಗೆಂದರೆ— ಸೌ|| ಯವರು ತಮ್ಮ ಪತಿಯೊಡನೆ, ಇಲ್ಲಿ ಅದೇ ದಿನದಲ್ಲಿ ನಡೆಯಬೇಕಾಗಿದ್ದ ಕರ್ಣಾಟಕ ಬ್ರಹ್ಮವಿದ್ಯಾ ಸಮಾಜದ ಆರನೇ ಅಧಿವೇಶನದಲ್ಲಿ ಇಲ್ಲಿಯ ಸೋದರಿಯರಿಗೂ ತಮ್ಮ ಸಂದರ್ಶನದ ಅಲಭ್ಯಲಾಭವನ್ನುಂಟು ಮಾಡಿಕೊಟ್ಟು, ಹಿತವಾದವನ್ನು ಹೇಳಬೇಕೆಂದು ಬಂದಿದ್ದರು ಆ ಸಂದರ್ಭದಲ್ಲಿ, ಇಲ್ಲಿಯ ಸ್ತ್ರೀಮಂಡಳಿಯವರ ಪರವಾಗಿ, ನಮ್ಮ ಭಗಿನಿಯರಿಗೆ ಅಭಿನಂದನ ಪತ್ರವನ್ನು ಒಪ್ಪಿಸಬೇಕಾದ ಕಾರ್ಯಭಾಗವು, ಇಲ್ಲಿಯ ನಮ್ಮ ಸುಹೃತ್ತುಗಳ ಮತ್ತು ನಮ್ಮ ಗುರುಜನರ ಆಜ್ಞಾರೂಪವಾಗಿ ನಮಗೆ ವಹಿಸಲ್ಪಟ್ಟುದರಿಂದ, ಆ

ಸಂದರ್ಭದಲ್ಲಿಯೇ, ಇವರ ಸ್ನೇಹಲಾಭವೂ ಇವರ ಸಮಯದ ಸಕೃತ್ ಸಂದರ್ಶನ ಸಂಭಾಷಣಾದಿ ಕಲಾಪಗಳೂ ಲಭಿಸಿದವು.

ವೇಳಾಗುಣದಿಂದಲೋ, ಅಥವಾ ಭಗವತಿಯ ಪ್ರೇರಣೆಯಿಂದಲೋ, ಇಲ್ಲದಿದ್ದರೆ ಇವರಲ್ಲಿರುವ ಅನನ್ಯಸಾಧಾರಣವಾದ ಸ್ನೇಹಸಂಭಾವನೆಯ ಪ್ರಭಾವದಿಂದಲೂ, ಅದೇ ದಿನವೇ ನಮಗೆ ಇವರು ಚಿರಪರಿಚಿತರಾದ ಆತ್ಮೀಯ ಬಂಧುವರ್ಗೀಯರಾಗಿ ಪರಿಗಣಿತರಾದರಲ್ಲದ, ಮರುದಿನ ತಮ್ಮ ಅಕೃತ್ರಿಮ ಸ್ನೇಹವನ್ನು ವ್ಯಕ್ತಪಡಿಸಲು ನಮ್ಮ ಮಾತೃಮಂದಿರಕ್ಕೂ ಬಂದು ಸಾವಧಾನದಿಂದ ಕುಶಲಪ್ರಶ್ನೆಗಳನ್ನು ಬೆಳಸಿ ತೆರಳಿದರು.

ಇದಾದ ಬಳಿಕ ನಮಗೆ ಪ್ರಥಮ ಪ್ರವಾಸದಲ್ಲಿಯೂ, ದ್ವಿತೀಯ ಪ್ರವಾಸಕಾಲದಲ್ಲಿಯೂ, ಬೆಂಗಳೂರಿನಲ್ಲಿ, ಇವರ ಪರಿಚಯ ಮಾತ್ರವಲ್ಲದೆ, ಇವರ ಸಂಪೂರ್ಣ ಪರಿಚಯ ಲಾಭವೂ ಲಭಿಸಿತು ಅದೇ ಸಮಯದಲ್ಲಿ, ಪರಶ್ರೀಯಸಹಿಷ್ಣುಗಳಾದ ಕೆಲವರ ಅಪಲಾಪವೂ ಹೊರಬಿದ್ದು ನಮ್ಮ ಕಿವಿಗೆ ಉಪದ್ರವವನ್ನುಂಟು ಮಾಡಿತಾದರೂ, ಅದನ್ನು ಕೇವಲ ಕ್ಷುದ್ರವಿಷಯವಾಗಿ ಭಾವಿಸುವಂತೆ ಮಾಡಿದ, ಇವರ ಗೃಹಕಾರ್ಯದಕ್ಷತೆ, ನಿರಹಂಕಾರ ಪ್ರಕೃತಿ, ಸಂಪದ ಅಧಿಕಾರಗಳಲ್ಲಿ ಇವರಿಗಿರುವ ನ್ಯಾಯದೃಷ್ಟಿ, ಸಹನಶಕ್ತಿ, ನಮ್ರತೆ, ನಿರಲಸತೆಗಳು, ನಿಂದಕರ ಕ್ಷುಲ್ಲಕ ವ್ಯಾಪಾರಿಗಳ ವಿಷಯದಲ್ಲಿಯಾಗಲಿ, ಇವರಿಗೆ ಸ್ವಾಭಾವಿಕ ಗುಣವಾಗಿರುವ ಹಿತಚಿಂತನ-ಬುದ್ಧಿಯೂ ಇನ್ನೂ ಇವರ ನಡೆನುಡಿಗಳ ಪರಮೋತ್ಕೃಷ್ಟ ರೀತಿಯೂ ನಮ್ಮನ್ನು ಆಪ್ಯಾಯನಗೊಳಿಸಿದುವು. ಹೆಚ್ಚು ವಿವರಣವೇಕೆ? ಒಂದೇ ಮಾತಿನಲ್ಲಿ ಹೇಳಬೇಕೆಂದರೆ ನಿಜವಾದ ವಿದ್ಯಾವತಿಯೆಂದರೆ ನಮ್ಮ ಸೌ|| ಪಾರ್ವತಮ್ಮನವರಂತಿರುವವರೇ ಸರಿ! ನಿಜವಾದ ದೇಶಭಕ್ತರೆಂದರೆ, ನಮ್ಮ ಸನ್ಮಾನ್ಯ ಭಗಿನಿಯಂತಹರೇ ಅಹುದು'! ನಿಜವಾದ ಆರ್ಯಮಹಿಳಾ ಶಬ್ದಕ್ಕೆ ಪಾತ್ರರೂ, ಗೃಹಿಣಿಯರಿಗೆ ಆದರ್ಶರಮಣಿಯರೂ ಆದವರೆಂದರೆ ಇಂತಹರೇ!!! ಇಂತಹರಿಂದಲೇ— ಇಂತಹರ ಸದ್ವೃತ್ತದ ಅನುಕರಣದಿಂದಲೇ ನಮ್ಮ ದೇಶವೂ, ನಮ್ಮ ಸಮಾಜವೂ, ನಮ್ಮ ಮಹಿಳಾ

ಪ್ರಪಂಚವೂ ಏಳಿಗೆಗೆ ಬರಬೇಕೆಂದರೆ ಸಾಕು

ಇನ್ನು ನಮ್ಮ ಭಗಿನಿಯರ ಇಷ್ಟರ ಪುರಸ್ಕಾರಕ್ಕೂ, ಅವಕಾಶ ಅನುಕೂಲಗಳನ್ನು ಕಲ್ಪಿಸಿಕೊಟ್ಟು ಪ್ರೋತ್ಸಾಹಿಸುತ್ತಿರುವ ಆ ನಮ್ಮ ಸನ್ಮಾನನೀಯ ಭ್ರಾತೃಗಳಾದ ಶ್ರೀಯುತ ಚಂದ್ರಶೇಖರ ಅಯ್ಯರ ಪರವಾಗಿ ನಾಲ್ಕು ಮಾತುಗಳನ್ನು ಹೇಳಬೇಕಾದುದು ಮುಖ್ಯವು

ಇಂದಿನವರೆಗೆ, ನಮ್ಮ ಮಹಿಳಾಪ್ರಪಂಚದ ಮೌಢ್ಯತೆಯನ್ನು ಹೋಗಲಾಡಿಸಬೇಕೆಂದು ಎಷ್ಟೋ ಸಂಘಗಳೇರ್ಪಟ್ಟಿರುವವು ಎಷ್ಟೋ ಮಂದಿ ವಾಚಾಳಿಕರಾದ ಮಹಾನ್ ಮಹಾನ್‌ಗಳೂ, ತಮ್ಮ ಪೌರುಷ-ಪಾಂಡಿತ್ಯಗಳನ್ನೂ, ದೇಶ ಮತ್ತು ದೇಶೀಯರನ್ನು ಉದ್ಧರಿಸುವೆವೆಂದು ಹಲವು ಸಭೆಗಳನ್ನು ಕೂಡಿಸಿ, ಹಲವು ಬಗೆಯಾದ ವ್ಯಾಖ್ಯಾನಗಳನ್ನೂ ಹೊರಚೆಲ್ಲಿ ಗಟ್ಟಿಗರೆನ್ನಿಸಿಕೊಂಡಿರುವರು ಇನ್ನೂ—ಇನ್ನೂ ಇಂತಹ ಎಷ್ಟೆಷ್ಟೋ ಆಗುತ್ತಿರುವುವು ಆದರೇನು? ಯಾವ ಮಹಾಪುರುಷರು ಸಭೆಯಲ್ಲಿ ತಮ್ಮ ವಾಚಾಳತೆಯನ್ನು ಪ್ರದರ್ಶಿಸುತ್ತಿರುವರೋ, ಅವರಲ್ಲಿ ಒಬ್ಬಿಬ್ಬರಾದರೂ ತಮ್ಮ ಪೋಷ್ಯವರ್ಗಕ್ಕೊಳಪಟ್ಟ ನಾರಿಯರನ್ನು, ಮುಖ್ಯವಾಗಿ ತಮ್ಮ ಸಹಕಾರಪಾತ್ರಗಳನ್ನು ಸುಸ್ಥಿತಿಗೆ ತರಲು ಸಮರ್ಥರಾಗಲೀ, ಅವರ ಸೌಜನ್ಯಾಭಿವೃದ್ಧಿಗೆ ಸಹಕಾರವಾಗುವಷ್ಟರ ಸಹೃದಯರಾಗಲೀ ಆಗಿರುವಂತೆ ತೋರುವದಿಲ್ಲ ಆದೇಕೆ? ಒಬ್ಬರು "ತಮ್ಮ ಪತ್ನಿಗೆ ಅಕ್ಷರದ ಹುಟ್ಟೇ ತಿಳಿಯುವದಿಲ್ಲ"ವೆನ್ನುವರು, ಮತ್ತೊಬ್ಬರು ‘ನನ್ನ ಭಾರ್ಯೆಗೆ ಆಂಧ್ರ ದ್ರಾವಿಡ ಭಾಷೆಗಳಲ್ಲಿ ಚನ್ನಾಗಿ ವ್ಯುತ್ಪತ್ತಿಯಿದೆ, ಆದರೆ ಕನ್ನಡ ನುಡಿಯು ತಿಳಿಯುವದಿಲ್ಲ"ವೆನ್ನುವರು, ಇನ್ನೊಬ್ಬರು "ನನ್ನ ಯಜಮಾನನಿಗೆ ನಾನು ಕಷ್ಟಪಟ್ಟು ನಾಲ್ಕು ಭಾಷೆಗಳನ್ನು ಕಲಿಸಿರುವೆನು. ಆದರೇನು, ಬಹು ಚಂಡಿತನವಾದುದರಿಂದ ಅದು ಮಲಿನವಾಗಿ ಹೋಗುತ್ತಿದೆ. ಉಪಯೋಗವಿಲ್ಲ"ವೆನ್ನುವರು ಹೀಗ ಅಂತಹ ಉದ್ದಾಮ ವ್ಯಾಖ್ಯಾತೃಗಳೆ ಪಾಡೇ ಈ ಗತಿಯನ್ನು ಹೊಂದಿರುವಾಗ ಮಿಕ್ಕವರ ಪಾಡೇನು! ಇವರಿಗಿಂತಲೂ "ನನ್ನ ಪತ್ನಿಯು ಅಕ್ಷರಸ್ಥಳಲ್ಲದಿದ್ದರೂ, ವ್ಯವಹಾರ ಜ್ಞಾನದಲ್ಲಿಯೂ, ಗೃಹಕಾರ್ಯದಕ್ಷತೆಯಲ್ಲಿಯೂ ತಕ್ಕಮಟ್ಟಿಗೆ ಶಕ್ತ

ಳಾಗಿರುವಳು" ಎಂದಾಡುವವರ ಸಹೃದಯದ ಸಮಯೋಚಿತ ಕಾರ್ಯಪ್ರವರ್ತನವೇ ಶ್ಲಾಘ್ಯವಲ್ಲವೇ? ಅದಿರಲಿ, ಮೇಲೆ ಹೇಳಿದಂತೆ ಭಾಷಣದಲ್ಲಿ ತಮ್ಮ ಸ್ವಭವವನ್ನು ಪ್ರದರ್ಶಿಸಿ, ಭಾವನಾಲೋಕದಲ್ಲಿ ಬಗೆಬಗೆಯಾಗಿ ಭಾವಿಸುತ್ತಿರುವ ಭ್ರಾತೃಗಳು ನಮ್ಮ ಸನ್ಮಾನನೀಯ ಭ್ರಾತೃಗಳಾದ ಶ್ರೀ|| ಚಂದ್ರಶೇಖರ ಅಯ್ಯರರವರ ಮಾದರಿಯನ್ನು ಅನುಕರಣಕ್ಕೆ ತಂದುಕೊಳ್ಳಬೇಕೆಂದು ಸೂಚಿಸುವೆವು. ಏಕೆಂದರೆ,—ಶ್ರೀಯುತರು ಬಾಹ್ಯಾಡಂಬರದಲ್ಲಿ ಪ್ರವರ್ತಿಸದೆ, ಸ್ತ್ರೀಸಮಾಜಸುಧಾರಣಾಕ್ರಮವನ್ನು ಕಾರ್ಯತಃ ಫಲಕಾರಿಯಾಗುವಂತೆ ಮಾಡಲು, ತಮ್ಮ ಪತ್ನಿಯನ್ನೇ ಪ್ರೇರಿಸಿ, ಅವರಿಂದ ಸೋದರೀಸೇವೆಯನ್ನು ಮಾಡಿಸುತ್ತಿರುವದೂ, ಸೋದರೀ ಸೇವೆಯಲ್ಲಿ ಬೇಕಾಗುವ ಸಮಯೋಚಿತ ಸಹಾಯಗಳನ್ನು ಕಲ್ಪಿಸಿಕೊಡುವದೂ ಕೂಡ,— ನಮ್ಮ ಇತರ ಎಂದರೆ ಸ್ತ್ರೀಯರ ವಿಷಯದಲ್ಲಿ ಸಂಶಯ, ಉದಾಸೀನ, ಆಗ್ರಹ, ಅಸಮಾಧಾನಾದಿ ನೀಚ ಭಾವನೆಗಳುಳ್ಳ ಮಹಾಶಯರ ಮೂರ್ಖಾಂಧತೆಗೆ ಜ್ಞಾನಾಂಜನವೇ ಆಗಿರುವದೆಂದು ಇಲ್ಲಿ ಬೇರೆ ಹೇಳಬೇಕಾಗಿಲ್ಲ ಇಷ್ಟಕ್ಕೆ ಸಾಕಾಗಿರಲಿ

ಒಟ್ಟಿನಲ್ಲಿ, ನಮ್ಮ ಭಗಿನಿಯರಾದ ಸೌ|| ಪಾರ್ವತಮ್ಮನವರು ನಮ್ಮ ಮತ್ತು ಕರ್ನಾಟಕ ದೇಶದ ಹಿತಚಿಂತಕರಾಗಿದ್ದಾರೆಂದೂ, ಇವರು ನಮ್ಮ ಸತೀಹಿತೈಷಿಣಿ ಮತ್ತು ಕರ್ನಾಟಕ ನಂದಿನಿಯ ವಿಷಯವಾಗಿ ಅತ್ಯಧಿಕ ಸಹೃದಯವನ್ನು ತೋರಿಸುತ್ತಿರುವರೆಂಬುದೂ ಇವರು ತಮ್ಮ ಮತ್ತು ತಮ್ಮ ಸ್ವಾಮಿಯವರ ಭಾವಚಿತ್ರಗಳನ್ನು ಚರಿತ್ರೆಗಳೊಡನೆ ಕಳುಹಿಸಿ ಕೊಟ್ಟಿರುವದರಿಂದಲೇ ತಿಳಿಯಬಹುದೆಂದೂ, ಈ ನಮ್ಮ ಭಗಿನಿಯರು ನಂದಿನಿಗೆ ಗ್ರಾಹಕರನ್ನು ಶೇಖರಿಸುವದರಲ್ಲಿಯೂ, ಲೇಖನಗಳನ್ನು ಕಳುಹುವದರಲ್ಲಿಯೂ ತಮ್ಮ ಸೇವಾಸಮಾಜದ ಮತ್ತು ಸೇವಾಸದನದ ಕಾರ್ಯವಿಶೇಷಗಳನ್ನೂ, ಅಲ್ಲಿ ಪ್ರಸಿದ್ಧರಾದ ಉಪನ್ಯಾಸಕಿಯರಾಗಿರುವ ಮಹಿಳೆಯರ ಜೀವನಚರಿತೆಗಳನ್ನು ಕಳುಹುವದರಿಂದ ನಂದಿನಿಗೆ ಕಳೆಯೇರಿಸುವದಾಗಿ ವಾಗ್ದಾನ ಮಾಡಿರುವರೆಂದೂ ಸಂತೋಷದಿಂದ ಸಾರಿಸಾರಿ ಹೇಳಿ, ಇಂದು

ಇವರ ಭಾವಚಿತ್ರ ಮತ್ತು ಆದರ್ಶವೃತ್ತಗಳನ್ನು ಪ್ರಕಟಗೊಳಿಸುವಂತೆ ಅನುಗ್ರಹಿಸಿದ ಭಗವತಿಯೇ ಮುಂದೆಯೂ, ನಮ್ಮ ಈ ಭಗಿನಿಯಂತಹ ಆರ್ಯಮಹಿಳೆಯರ ಉತ್ಕೃಷ್ಟ ವೃತ್ತಗಳನ್ನು ಶೇಖರಿಸಿ, ಪ್ರಕಟಿಸುವಂತೆ ಅನುಗ್ರಹಿಸಲೆಂದು ನಮ್ಮ ಚಿರಸ್ಮರಣೀಯರಾದ ಭಗಿನೀ ಬಂಧುಗಳಾದ ಶ್ರೀ|| ಸೌ|| ಪಾರ್ವತಾಂಬಾ ಶ್ರೀ|| ಚಂದ್ರಶೇಖರ ಅಯ್ಯರವರಿಗ ಇತೋಪ್ಯತಿಶಯವಾದ ಧರ್ಮಶ್ರದ್ಧೆ, ಉದ್ಯೋಗತತ್ಪರತೆಗಳು ಹೆಚ್ಚು ವಂತೆ ಚಿರಾಯುರಾರೋಗ್ಯವನ್ನು ದಯಪಾಲಿಸೆಂದೂ ಪ್ರಾರ್ಥಿಸುತ್ತ ಇಂದು ಇಲ್ಲಿಗೆ ವಿರಮಿಸುವೆವು

ಇತಿ- ಆರ್ಯರಮಣಿಯರ ಚರಣಧೂಳಿ,

—ಸಂಪಾದಯಿತ್ರಿ—

---

## ಗ್ರಾಹಕರಲ್ಲಿ ವಿನಂತಿ

ಸತೀಹಿತೈಷಿಣಿಯ ತೃತೀಯ ಸಂಪುಟದ ದ್ವಿತೀಯ ಸಂಚಿಕೆಯಾದ 'ಪೂರ್ಣಕಲೆಯು' ಈ ಡಿಸೆಂಬರ ತಿಂಗಳಲ್ಲಿಯೇ ಹೊರಡಬೇಕಾಗಿದ್ದಿತು, ಆದರೆ ಗ್ರಂಥಕರ್ತ್ರಿಯ ಪ್ರಕೃತಿಸ್ವಾಸ್ಥ್ಯದ ಆಲಸ್ಯದಿಂದ ಲೇಖನಕಾರ್ಯವು ಸ್ವಲ್ಪ ವಿಳಂಬವಾಗಿ ಸಾಗಬೇಕಾಗಿ ಬಂದುದರಿಂದ ಜನವರಿಯಲ್ಲಿ ಹೊರಡಿಸಬೇಕಾಗಿರುವುದು ಗ್ರಾಹಕರು ಆ ವರೆಗೆ ವಿರಾಮವನ್ನು ಕೊಡಬೇಕಾಗಿ ಕೋರಿಕೆ

ವಿ. ಸೂ — ಕರ್ಣಾಟಕ ನಂದಿನಿಯಲ್ಲಿ ಸಂಚಿಕೆಯಿಂದ 'ವಿಮಲಾದೇವಿ' ಎಂಬ ಐತಿಹಾಸಿಕ ಕಾದಂಬರಿಯು (ತೆಲಗು ಭಾಷೆಯ ಭಾಷಾಂತರ) ಪ್ರಕಟವಾಗುವದಲ್ಲದೆ, ಸಮಯೋಚಿತವಾಗಿ ನಮ್ಮ ಪ್ರಸಿದ್ಧ ಮಹಿಳೆಯರ ಭಾವಚಿತ್ರಗಳೂ ಸಂದರ್ಭಾನುಸಾರವಾಗಿ ಭಾಷಣಪೂರ್ವಕ ಪ್ರಕಟವಾಗುವವು ಉದಾರಮತಿಯರಾದ ಭಗಿನೀ ಬಂಧುಗಳು ಈ ನಮ್ಮ ಉದ್ದೇಶಕ್ಕೆ ತಮ್ಮತಮ್ಮ ಯಥಾಶಕ್ತಿಯಾದ ಸಹೃದಯವನ್ನು ಪ್ರಕಟಿಸಿ ಪ್ರೋತ್ಸಾಹಿಸಬಹುದಾಗಿದೆ.

---

# ಕರ್ಣಾಟಕ ಸಾಹಿತ್ಯಪರಿಷತ್ತು.

ಉತ್ತಮ ಪ್ರಬಂಧ ಬಹುಮಾನದ ಪ್ರಕಟನ

ಬೆಂಗಳೂರು ಕರ್ಣಾಟಕ ಸಾಹಿತ್ಯಪರಿಷತ್ತಿನ ಕಾರ್ಯನಿರ್ವಾಹಕ ಮಂಡಳಿಯವರು ಕರ್ಣಾಟಕ ಭಾಷೆಯ ಏಳಿಗೆಗಾಗಿ ಕೆಳಗೆ ವಿವರಿಸಿರುವ ಬಹುಮಾನವನ್ನೂ ಅದರ ನಿಬಂಧನೆಗಳನ್ನೂ ಭಾಷಾಭಿಮಾನಿಗಳ ಪರಾಮರ್ಶಕ್ಕೆ ತಂದಿರುವರು ಯಾವುವೆಂದರೆ—

೧ "ಕನ್ನಡ ನಾಡುಗಳಲ್ಲಿ ಪ್ರಚುರವಾಗಿರುವ ಗ್ರಾಂಥಿಕ ರೂಪಗಳನ್ನು ಏಕರೂಪತೆಗೆ ತರುವದಕ್ಕಾಗಿ ಮಾಡಬಹುದಾದ ಉತ್ಕೃಷ್ಟೋಪಾಯಗಳು"- ಎಂಬುದು ೧೯೧೬ ನೆಯ ಇಸವಿಗೆ ಪ್ರಬಂಧದ ವಿಷಯವಾಗಿ ಇರತಕ್ಕದ್ದು, ಮತ್ತು ಇದರ ಬಹುಮಾನವು ನಗದು ಒಂದು ನೂರು ರೂಪಾಯಿಯ ಗಂಟಾಗಿಯಾಗಲೀ, ಅದೇ ಮೌಲ್ಯದ ಸುವರ್ಣಪದಕವೊಂದಾಗಿಯಾಗಲೀ ಇರತಕ್ಕದ್ದು, ಮತ್ತು ಇದರ ಜತೆಗೆ ಯೋಗ್ಯತಾಪತ್ರಿಕೆಯೊಂದನ್ನೂ ಕೊಡತಕ್ಕದ್ದು

೨ ಕರ್ಣಾಟಕ ವಿದ್ವಾಂಸರು ಯಾರು ಬೇಕಾದರೂ ಈ ಪ್ರಬಂಧವನ್ನು ಬರೆಯಬಹುದು

೩. ಡೆಮ್ಮಿ ಕಾಗದದ ಅಷ್ಟಪತ್ರಗಳ(Octavo pages)ಆಕಾರದಲ್ಲಿ ಮುದ್ರಿಸಿದ ಪಕ್ಷಕ್ಕೆ ಮೂವತ್ತೆರಡು ಪುಟಗಳಿಗೆ ಮೀರದಂತೆಯೂ ಇಪ್ಪತ್ತುನಾಲ್ಕು ಪುಟಗಳಿಗೆ ಕಡಮೆಯಾಗದಂತೆಯೂ ಪ್ರಬಂಧಗಳ ಪ್ರಮಾಣವು ಇರತಕ್ಕದ್ದು.

೪. ಆಧಾರಗಳನ್ನು ಕೊಡಬೇಕಾಗಿ ಬಂದಲ್ಲಿ ಅವುಗಳನ್ನು ಸಾಧ್ಯವಾಗುವ ಮಟ್ಟಿಗೂ ಸ್ಪಷ್ಟವಾಗಿಯೂ ನಿರ್ಣಯದೊಡನೆಯೂ ತಿಳಿಸಬೇಕು

೫. ಪ್ರಬಂಧವನ್ನು ಗ್ರಾಂಥಿಕವಾದ ಹೊಸಗನ್ನಡದಲ್ಲಿ ಒಳ್ಳೆಯ ಫುಲ್‌ಸ್ಕ್ಯಾಪ್ ಕಾಗದದ ಒಂದೊಂದೇ ಪಕ್ಕದಲ್ಲಿ ಮೋಡಿಯಿಲ್ಲದಂತೆ ಬರೆಯಬೇಕು.

೬ ಪ್ರಬಂಧ ಕರ್ತೃಗಳು ತಂತಮ್ಮ ಕಲ್ಪಿತನಾಮಗಳೊಡನೇ (Psuedonym)ತಂತಮ್ಮ ಪ್ರಬಂಧಗಳನ್ನು ಪರಿಷತ್ತಿನ ಗೌರವ ಕಾರ್ಯ

ದರ್ಶಿಗಳಿಗೆ ೧೯೧೭ ನೆಯ ಜನವರಿ ೩೧ ನೆಯ ತಾರೀಖಿನಲ್ಲಿಯೋ, ಅದಕ್ಕೆ ಮೊದಲೇಯೋ ತಲಪುವಂತೆ ರಿಜಿಸ್ಟರಾದ ಲಕೋಟೆಯಲ್ಲಿಟ್ಟು ಕಳುಹಿಸಬೇಕು ಈ ಮೊಹರಾದ ಲಕ್ಕೋಟೆಯನ್ನು ಪರೀಕ್ಷಕ ಮಂಡಲಿಯ ವರದಿಯು ಬರುವವರೆಗೆ ಪರಿಷತ್ತಿನವರು ಒಡೆಯುವದಿಲ್ಲ.

೭ ಕಾರ್ಯನಿರ್ವಾಹಕ ಮಂಡಲಿಯಿಂದ ನಿಯಮಿತವಾದ ಮತ್ತು ಮೂರು ಮಂದಿಗೆ ಕಡಿಮೆಯಿಲ್ಲದೆಯೂ ಐದುಮಂದಿಗೆ ಮೀರದೆಯೂ ಇರುವ ಪರೀಕ್ಷಕ ಮಂಡಲಿಯು ಪೂರ್ಣಾಂಕಕ್ಕೆ ನೂರನ್ನು ಇಟ್ಟುಕೊಂಡು ಪ್ರಬಂಧಗಳ ಯೋಗ್ಯತೆಗಳನ್ನು ನಿರ್ಣಯಿಸಬೇಕು, ಮತ್ತು ಈ ಮಂಡಲಿಯವರು ತಮ್ಮ ವರದಿಯನ್ನು ವಿಜಯಿಗಳಾದ ಪ್ರಬಂಧಕರ್ತೃಗಳಿದ್ದಲ್ಲಿ ಅವರ ಕಲ್ಪಿತನಾಮಗಳೊಡನೆ ಕಾರ್ಯನಿರ್ವಾಹಕ ಮಂಡಲಿಗೆ ೧೯೧೭ ನೆಯ ಇಸವಿ ಮಾರ್ಚಿ ೩೧ ನೆಯ ತಾರೀಖಿಗೆ ಮೊದಲೇ ತಲಪುವಂತೆ ರವಾನಿಸಬೇಕು

೮. ಸಮಸಮವಾದ ಸಾಮರ್ಥ್ಯವುಳ್ಳ ಪ್ರಬಂಧಕರ್ತೃಗಳು ಇರುವಂತೆ ಕಾರ್ಯನಿರ್ವಾಹಕ ಮಂಡಲಿಗೆ ತೋರಬಂದಲ್ಲಿ ಆ ಇಬ್ಬರಿಗೆ ಬಹುಮಾನವನ್ನು ಹಂಚುವ ಸ್ವಾತಂತ್ರ್ಯವನ್ನು ಕಾರ್ಯನಿರ್ವಾಹಕ ಮಂಡಲಿಯು ಇಟ್ಟುಕೊಳ್ಳತಕ್ಕದು, ಮತ್ತು ಒಪ್ಪಿದ ಪ್ರಬಂಧವನ್ನು ಅಥವಾ ಪ್ರಬಂಧಗಳನ್ನು ಉಚಿತವಾದ ರೀತಿಯಲ್ಲಿ ಮುದ್ರಿಸಿ ಪ್ರಚಾರ ಮಾಡುವ ಸ್ವಾತಂತ್ರ್ಯವು ಕಾರ್ಯನಿರ್ವಾಹಕ ಮಂಡಲಿಗೆ ಇರತಕ್ಕದು.

೯ ಪ್ರಬಂಧಗಳಲ್ಲಿ ತಕ್ಕಷ್ಟು ಸಾಮರ್ಥ್ಯವು ಕಾಣಬಾರದಿದ್ದರೆ ಬಹುಮಾನವನ್ನು ಕೊಡದ ಉಳಿಸಿಕೊಳ್ಳುವ ಅಧಿಕಾರವೂ ಕಾರ್ಯನಿರ್ವಾಹಕ ಮಂಡಲಿಗ ಇರತಕ್ಕದು

೧೦ ೧೯೧೭ ನೆಯ ಇಸವಿ ಮೇ ತಿಂಗಳಲ್ಲಿ ನಡೆಯುವ ಪರಿಷತ್ತಿನ ವಾರ್ಷಿಕ ಸಭೆಯಲ್ಲಿ ಬಹುಮಾನವೂ ಯೋಗ್ಯತಾ ಪತ್ರಿಕೆಯೂ ವಿಜಯಿಯಾದ ಪ್ರಬಂಧ ಕರ್ತೃವಿಗೆ ಅಥವಾ ಕರ್ತೃಗಳಿಗೆ ಕೊಡಲ್ಪಡುವುದು

ಬೆಂಗಳೂರು<br>
ತಾ ೨೨-೧೦-೧

ರಾ ರಘುನಾಥರಾಯ ಬಿ ಎ,<br>
ಗೌರವಕಾರ್ಯದರ್ಶಿ,<br>
ಕರ್ನಾಟಕ ಸಾಹಿತ್ಯಪರಿಷತ್ತು.

॥ ಶ್ರೀ ॥

॥ ಸರ್ವಂ ಸಹಾಯ್ಯೈನಮಃ ॥

# ವಿಮಲಾದೇವಿ.

## ಮೊದಲನೇ ಪ್ರಕರಣ

(ಒಬ್ಬ ಮಾರ್ಗಸ್ಥ)

೧೮೩೮ನೇ ಇಸವಿ ಡಿಶಂಬರ ತಿಂಗಳು; ಒಂದುದಿನದ ಪ್ರಾತಃಕಾಲ, ಸ್ಥಳವಾದರೋ ಹಿಮಾಲಯ ಪರ್ವತದಲ್ಲಿರುವ 'ಕೈಬರ್" ಕಣಿವೆಯ ದಾರಿ, ಮಾರ್ಗಸ್ಥನೆಂದರೆ, ಒಬ್ಬ ವೃದ್ಧನು! ಇವನ ಸ್ಥಿತಿಯನ್ನು ಹೇಳಬೇಕೇ?

ಹಿಮಾಲಯವು ಪರ್ವತಗಳಿಗೆಲ್ಲಾ ಅಧಿಪತಿಯು. ಎತ್ತರದಲ್ಲಿಯೂ, ವಿಸ್ತಾರದಲ್ಲಿಯೂ ಸೃಷ್ಟಿಸೌಂದರ್ಯ-ವೈಚಿತ್ರ್ಯದಲ್ಲಿಯೂ ಇದಕ್ಕಾವ ಪರ್ವತವೂ ಸಮಾನವಾಗಲಾರದು. ಮೇಘಮಂಡಲವನ್ನು ಭೇದಿಸಿಕೊಂಡು ಆಕಾಶಮಾರ್ಗವಾಗಿ ಹೋಗುತ್ತಾ ಸೂರ್ಯಕಿರಣಗಳಿಂದ ಚಿನ್ನದ ಕಲಶಗಳಂತೆ ಪ್ರಕಾಶಿಸುತ್ತಿರುವ ಅಸಂಖ್ಯಾಕ ಶಿಖರಗಳೂ, ನಾನಾವರ್ಣ ಶೋಭಿತವಾದ ಫಲಪುಷ್ಪಗಳಿಂದ ನಿಬಿಡವಾದ ಅಶೇಷವೃಕ್ಷ ಸಮೂಹವುಳ್ಳ ಅರಣ್ಯಗಳೂ, 'ಲಕ್ಷ್ಮೀನಿವಾಸ'ವೆಂಬ

---

ಈ ಐತಿಹಾಸಿಕ ಕಾದಂಬರಿಯು ಆಂಧ್ರಭಾಷೆಯ ಭಾಷಾಂತರೀಕರಣವಾಗಿರುವುದು. ಭಾಷಾಂತರಕಾರರು ಇದರ ಸರ್ವಸ್ವಾತಂತ್ರ್ಯವನ್ನೂ ಹಿತೈಷಿಣಿಗೆ ವಹಿಸಿರುವರೆಂದು ತಿಳಿಸಲು ಸಂತೋಷವಾಗುತ್ತದೆ. ನಂದಿನಿಯಲ್ಲಿ ಕಾದಂಬರಿಗಳನ್ನು ಸೇರಿಸಬೇಕೆಂದು ಆಗ್ರಹಿಸಿದ ನಮ್ಮ ಭಗಿನಿಯರ ಅಭಿಮತವನ್ನು ನಿರಾಕರಿಸಲಾರದೆ, ಕಾದಂಬರಿಗೆ ಕಾದಂಬರಿಯಾಗಿಯೂ, ಆರ್ಯಮಹಿಳೆಯರ ಅತ್ಯುತ್ಕೃಷ್ಟ ದೇಶಭಕ್ತಿ ಪ್ರದರ್ಶನದ ರನ್ನಗನ್ನಡಿಯಾಗಿಯೂ ಇರುವಂತ ಈ ಕಾದಂಬರಿಯನ್ನು ಪ್ರಕಟಿಸಲು ನಂದಿನಿಯು ಸಂಕಲ್ಪಿಸಿರುವದಕ್ಕಾಗಿ ವಾಚಕರ ಕ್ಷಮೆಯನ್ನು ಕೋರಿದೆ. ಸಂ.

ಮಾತನ್ನು ತಮ್ಮ ಸೌಂದರ್ಯಾತಿಶಯದಿಂದ ಸ್ಥಾಪಿಸುವ ಕಮಲ ಸಹಸ್ರಗಳಿಂದಲೂ, ಮಾಧುರ್ಯಕ್ಕೂ ಸ್ವೈರ್ಮಲ್ಯಕ್ಕೂ ಮಾತ್ರ ಭೂಮಿಯೆನಿಸಿದ ಅಮೃತತುಲ್ಯವಾದ ಜಲಸಮೃದ್ಧಿಯುಳ್ಳ ಮಾನಸ ಸರೋವರದೆಂತೆನಿಪ ಸರೋವರಗಳೂ ತಮ್ಮ ಉತ್ಪತ್ತಿ ಸ್ಥಲದಿಂದ ಅಸ್ಪಷ್ಟ ಮಂಜುಲಧ್ವನಿ ಮಾಡುತ್ತಾ ಹೊರಟು ಮೊದಮೊದಲು ಸೂಕ್ಷ್ಮಗತಿಯಿಂದ ಪ್ರವಹಿಸಿ ಕ್ರಮಕ್ರಮವಾಗಿ ವಿಶಾಲರೂಪಗಳನ್ನು ಧರಿಸಿ, ತಾವು ಹೋಗುವ ಪ್ರದೇಶವನ್ನೆಲ್ಲಾ ಸಸ್ಯ-ಸಂಪಚ್ಛೋಭಿತ ವಾಗಿ ಮಾಡುತ್ತ ಜಗದ್ವಿಖ್ಯಾತವಾಗಿರುವ ಗಂಗಾ, ಸಿಂಧು, ಬ್ರಹ್ಮ ಪುತ್ರಾದಿ ನದೀ-ನದಗಳೂ, ಕಣ್ಣೋಟವು ಹೋಗುವವರೆಗೂ ಬೆಳ್ಳಿ ಯ ತಗಡಿನಂತೆ ಕಾಣಿಸುವ ಮಂಜಿನಗಡ್ಡೆಗಳಿಂದಲೂ, ಕಾಡು ಜನರು ವಾಸಕ್ಕಾಗಿ ಕಟ್ಟಿಕೊಂಡಿರುವ ಸಾವಿರಾರು ಮನೆಗಳಿಂದಲೂ, ಪಶು ಗಣದಿಂದಲೂ, ಸಸ್ಯಸಮೂಹದಿಂದಲೂ ಶೋಭಿತವಾದ ಪರ್ವತ ಭೂಮಿಗಳೂ, ಪರಬ್ರಹ್ಮನ ಸೃಷ್ಟಿರಚನಾ ಚಮತ್ಕಾರವನ್ನು ತೋರಿ ಸುವವೆಂಬಂತೆ ಎಲ್ಲಿ ನೋಡಿದಲ್ಲಿ ಆಶ್ಚರ್ಯವನ್ನುಂಟು ಮಾಡುವಂ ತಿದ್ದಿತು

ಹಿಂದೂ ದೇಶದ ಉತ್ತರದಲ್ಲಿ ಸೃಷ್ಟಿದೇವತೆಯಿಂದ ೧೫೦೦ ಮೈಲಿ ಉದ್ದವೂ, ಆರುಮೈಲಿ ಎತ್ತರವಾಗಿಯೂ, ಮೂರು ವರಸೆ ಗಳಾಗಿಯೂ ಇಡಲ್ಪಟ್ಟ ಬ್ರಹ್ಮಾಂಡತುಲ್ಯವಾದ ಆ ಕಲ್ಲಿನ ಗೋಡೆಗೆ ಆ ದೇವತೆಯು ದಾರಿಗಳನ್ನಿಡದಿದ್ದ ಪಕ್ಷದಲ್ಲಿ, ಅದನ್ನು ದಾಟಲು ಮನುಷ್ಯಮಾತ್ರರಿಗಲ್ಲ, ದೇವತೆಗಳಿಗೂ ಸಾಧ್ಯವಲ್ಲವೆಂದು ತೋರು ವದು. ಹಿಂದೂ ದೇಶದ ವಾಯುವ್ಯ ಭಾಗದಲ್ಲಿರುವ ಈ ಪರ್ವತ ಭಾಗ ದಲ್ಲಿ ಅನೇಕ ದಾರಿಗಳಾಗಿರುವುವು ಉತ್ತರ ಭಾಗದಲ್ಲಿ "ಕೈಬರ್" ಕಣಿವೆಯೂ, ದಕ್ಷಿಣದಲ್ಲಿ "ಬೋಲನ್" ಎಂಬ ಕಣಿವೆಯೂ, ಅವು ಗಳಲ್ಲಿ ಮುಖ್ಯವಾದವುಗಳು ಕೈಬರ್ ಕಣಿವೆಯು ಚರಿತ್ರೆಯಲ್ಲಿ ಅನೇಕ ವಿಧವಾದ ಖ್ಯಾತಿಯನ್ನು ಹೊಂದಿರುವದು ಹಿಂದೂ ದೇಶ ದಿಂದ ಕಾಬೂಲ ದೇಶಕ್ಕೆ ಹೋಗಲು ಇದು ಒಂದು ದಾರಿ. ಇದು ೩೦ ಮೈಲಿಗಳಿಗೂ ಹೆಚ್ಚು ದೂರವುಳ್ಳುದಾಗಿದೆ; ವಾಯುವ್ಯ ಸರಹ

ಕ್ಷಿಣ ಸೀಮೆಗಳ ಮುಖ್ಯ ಪಟ್ಟಣವಾದ 'ಪಷಾವರ್' ಪಟ್ಟಣಕ್ಕೆ ಪಶ್ಚಿಮದಲ್ಲಿ ೧೦ ಮೈಲು ದೂರದಲ್ಲಿರುವ ಜಮರೂದ್ ಎಂಬ ಪಟ್ಟಣದಿಂದ ಮೊದಲುಮಾಡಿ, ಕಾಬೂಲ್ ಪಟ್ಟಣಕ್ಕೆ ಸಮೀಪದಲ್ಲಿರುವ ಜಲಾಲಾಬಾದ್ ದುರ್ಗದವರೆಗೂ ಈ ಕಣಿವೆಯು ವ್ಯಾಪಿಸಿರುವದು. ಇದರ ನಡುವೆ ಅಲ್ಲಲ್ಲಿ ಚಿಕ್ಕಚಿಕ್ಕ ಹಳ್ಳಿಗಳೂ ಇರುವವು. ಇವುಗಳಲ್ಲಿ ಜಮರೂದ ಪಟ್ಟಣಕ್ಕೆ ೧೦ ಮೈಲಿ ದೂರದಲ್ಲಿರುವ ಅಲಿಮಜ್ಜಿದ್ ದುರ್ಗವೂ, ಇದಕ್ಕೆ ೧೦ ಮೈಲು ದೂರದಲ್ಲಿರುವ "ಲಂಡೀಕೋಟಾಲ್" ಎಂಬ ಗ್ರಾಮವೂ ಮುಖ್ಯವಾದುವು.

ಇಕ್ಕಡೆಗಳಲ್ಲಿಯೂ ಭಯಂಕರವಾದ ಪರ್ವತಶ್ರೇಣಿಗಳೂ, ಕ್ರೂರಮೃಗ ಸಂಕೀರ್ಣವಾದ ಅಡವಿಗಳೂ, ಪುಷ್ಯ ಮಾಘ ಮಾಸಗಳಲ್ಲಿ ತುಂಬಿ ಹರಿಯುವ ಮಹಾನದಿಗಳೂ, ದೋಣಿಗಳು ಕೂಡ ಸರಿಯಾಗಿ ನಡೆಯಲು ದಾರಿಯಿಲ್ಲದ- ನಿಮ್ನೋನ್ನತ ಶಿಲಾಮಯವಾದ ದುರ್ಗಮ ಮಾರ್ಗವೂ, ಈ ಕಣಿವೆಯಲ್ಲಿ ಬಲುವಾಗಿರುವದರಿಂದ ಪ್ರಯಾಣಿಕರಿಗೆ ಈ ಮಾರ್ಗದಲ್ಲಿ ಪ್ರಯಾಣ ಮಾಡುವುದು ಬಲು ಕಷ್ಟವೇ ಸರಿ ಎಂದರೆ, ಆ ಪರ್ವತ ಪ್ರಾಂತ್ಯದಲ್ಲಿ ಮಾನವ ಸಂಚಾರವೇ ಇಲ್ಲವೆಂದು ಊಹಿಸಬಾರದು. ಮಾನವಬುದ್ಧಿಗೆ ಸಾಧ್ಯವಲ್ಲದ ಸ್ಥಳವಿರುವದೇ? ಇಕ್ಕಡೆಗಳಲ್ಲಿಯೂ ಮಾನವ ನಿವಾಸಕ್ಕೆ ಯೋಗ್ಯವಾದ ಸಮಭೂಮಿಗಳಿರುವದರಿಂದ ಕಾಡುಜನರು ಅಲ್ಲಲ್ಲಿ ಗ್ರಾಮಗಳನ್ನು ಕಟ್ಟಿಕೊಂಡಿರುವರು. ಇಷ್ಟೇ ಅಲ್ಲದ, ಪಶುಗಳನ್ನೂ ಇಟ್ಟುಕೊಂಡು ವ್ಯವಸಾಯ ಮಾಡುತ್ತಾ, ಪರ್ವತದ ಮೇಲ್ಗಡೆಯಲ್ಲಿ ಕೂಡ, ಅನೇಕ ವಿಧವಾದ ಧಾನ್ಯಗಳನ್ನು ಬೆಳೆಯುವರು. ಸೋಪಾನ ಕಟ್ಟಿದಂತೆ ಒಂದು ಪರ್ವತದ ಮೇಲೆ ಮತ್ತೊಂದು ಪರ್ವತವಿದ್ದು ಅಲ್ಲಿಯ ನಿವಾಸಿಗಳು ಅಲ್ಲಿಯೇ ವ್ಯವಸಾಯ ಮಾಡುತ್ತಿರುವದರಿಂದ ಆ ದಾರಿಯಲ್ಲಿ ಹೋಗುವ ಪಾಂಥನು ಬೆಳೆಯ ದಿನಗಳಲ್ಲಿ ತಲೆಯನ್ನೆತ್ತಿ ಮೇಲೆ ನೋಡಿದುದಾದರೆ, ಸ್ವರ್ಗವನ್ನೇರಲು, ಹಸುರುಬಣ್ಣದ ರತ್ನಗಂಬಳಿಗಳಿಂದ ಶೃಂಗರಿಸಲ್ಪಟ್ಟ ಸೋಪಾನಪಂಕ್ತಿಯೋ ಸೃಷ್ಟಿಸಲ್ಪಟ್ಟಿರುವದೋ ಎಂಬಂತೆ, ಫಲದಿಂದ ಕೂಡಿ ಸಸ್ಯರಾಶಿಗಳು, ಆ

ಪಾಂಥನಿಗೆ ಸಂಶಯುವನ್ನುಂಟು ಮಾಡುವಂತಿರುವವು

ಇರಲಿ, ವಿಶೇಷ ವಿವರಣೆಯಿಂದ ಕಥಾಸ್ವಾರಸ್ಯವು ಕೆಡಬಹುದಲ್ಲವೆ! ಹಾಗಿದ್ದರೆ ಬನ್ನಿರಿ ವಾಚಕರೇ ಮುಂಬರಿದು ಪಾಂಥನ ಮಾರ್ಗಾನುಸಂಧಾನ ಮಾಡುವ ನೋಡಿರಿ, ಮಾರ್ಗಸ್ಥನು ದಾರಿಯಲ್ಲಿ ಹೋಗುತ್ತ ತನ್ನಲ್ಲಿ ತಾನೇ ಗೊಣಗುತ್ತಿರುವನು 'ಅದೇನೆಂದು' ' ಅಯ್ಯಯ್ಯೋ! ಏನನ್ಯಾಯವು! ಇಂತಹ ವಿಪರೀತವನ್ನು ಹಿಂದ ಕಂಡು-ಕೇಳಿರಲಿಲ್ಲ. ಅಬ್ಬ! ಎಂತಹ ದಾರುಣ ಕೃತ್ಯ! ಎಳೆಯ ಮಗುವನ್ನು ಕೊಲ್ಲಲು ಕೈಗಳು ತಾನೇ ಹೇಗೆ ಬಂದವು!, ಛೀ! ಛೀ!! ಮಹಮ್ಮದೀಯನಾದರೇನು? ಹಿಂದುವಾದರೇನು? ಖುರಾನವನ್ನು ಓದಿದರೇನು? ಪುರಾಣವನ್ನು ನೋಡಿದರೇನು? ಎಲ್ಲಾ ಒಂದೇ!! ಯಾವ ಶಾಸ್ತ್ರದಲ್ಲಿಯೇ ಆಗಲಿ ದಯಾ-ದಾಕ್ಷಿಣ್ಯಗಳು ಒಳ್ಳೆಯ ಗುಣವಂದು ಹೇಳಲ್ಪಟ್ಟಿವೆಯಲ್ಲದ, ಮೋಸ, ಮಿತ್ರದ್ರೋಹಗಳು ಒಳ್ಳೆಯವೆಂದು ಎಲ್ಲಿಯೂ ಹೇಳಿರುವದಿಲ್ಲ ಹುಂ, ನಡೆದು ಹೋದುದಕ್ಕೆ ನುಡಿದು ಫಲವೇನು? ಮುಂದಿನ ಕಾರ್ಯವನ್ನು ನೋಡಬೇಕು" ಎಂದು ಹೇಳಿ ಒಂದೆರಡು ಹೆಜ್ಜೆಗಳನ್ನಿಟ್ಟು, ಚಳಿಯಿಂದ ನಡುಗುತ್ತ ಮತ್ತೆ ಗೊಣಗಿದನು "ಯಾ ಅಲ್ಲಾ! ಯಾ ಖುದಾ! ಪರ್ವರ್ ದಿಗಾರ್!! ಅಬ್ಬಬ್ಬಾ!! ಏನು ಈ ಚಳಿ! ಪ್ರಾಣವನ್ನು ಹಿಂಡುತ್ತಿದೆಯಲ್ಲಾ! ಬಾವ ಹೊತ್ತಾಗಿದ್ದರೂ ಕಡಮೆಯಾಗಿಲ್ಲವಲ್ಲಾ! ಕೆಳಗೆ ನೋಡಿದರೂ, ಮೇಲೆ ನೋಡಿದರೂ, ಸುತ್ತಲೂ ನೋಡಿದರೂ, ಮಂಜು ಹೊರತು ಮತ್ತೇನೂ ಕಾಣದಿರುವದಿಲ್ಲಾ!! ದಾರಿಯಲ್ಲಿರುವ ಕಲ್ಲುಗಳೆಲ್ಲಾ ತಣ್ಣಗಿರುವುದರಿಂದ ಕಾಲನ್ನೆತ್ತಿಡಲಾಗದೆ, ಮೇಲಕ್ಕೆ ನೆಗೆಯುತ್ತಿರುವುದಲ್ಲಾ! ತಲೆಯೆತ್ತಿ ಯಾವಕಡೆ ನೋಡಿದರೂ ಆಕಾಶವನ್ನು ಭೇದಿಸಿರುವ ಪರ್ವತ ಶಿಖರಗಳೂ, ಅದರ ಮೇಲ್ಭಾಗದಲ್ಲಿ ಮಂಜಿನ ಗಡ್ಡೆಗಳೂ ಕಾಣಬರುತ್ತಲಿವೆ ಈ ಪರ್ವತಗಳಿಗೆ ಹಿಮಾಲಯವೆಂಬ ಹೆಸರು ಸಾರ್ಥಕವಾಯಿತು ಮಂಜಿನ ಬೆಟ್ಟವೆಂದರೆ ಇದೇ ಸರಿ!!

ಶ್ಲೋ॥ ಅನಂತರತ್ನ ಪ್ರಭವಸ್ಯ ಯಸ್ಯ-ಹಿಮಂ ನ ಸೌಭಾಗ್ಯ ವಿಲೋಪಿ ಜಾತಂ।

ಏಕೋ ಹಿ ದೋಷೋ ಗುಣಸನ್ನಿಪಾತೇ, ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ॥

ಊಹೂ! ಏನೀ ಕಾಳಿದಾಸನ ಹುಚ್ಚು? ಹಿಮಾಲಯದಲ್ಲಿ ಚಳಿಯಿರುವದೆಂಬುದು ದೋಷವಂತೆ! ಆದರೆ, ಹಿಮಾಲಯವು ಅನಂತರತ್ನಗಳಿಗೆ ಮಾತೃಭೂಮಿಯಾದುದರಿಂದ ಆ ದೋಷವು, ಚಂದ್ರನ ಕಾಂತಿಯಲ್ಲಿ ಕಳಂಕವು ಲೋಪಿಸಿದಂತೆ ಹೋಗಿದೆಯಂತೆ! ಹೀಗೆ ಹೇಳಿದ ಆ ಕಾಳಿದಾಸನಿಗೆ ಸ್ವಾನುಭವವಿಲ್ಲವೆಂಬುದು ನಿಜವಾಗಿದೆ. ಆ ಕಾಳಿದಾಸನನ್ನು ಹಿಡಿದು ತಂದು ಈ ಕೈಬರ್ ಕಣಿವೆಯಲ್ಲಿ ಒಂದು ಕ್ಷಣವಾದರೂ ನಿಲ್ಲಿಸಿದರೆ ಆತನು, ''ಕುಮಾರ ಸಂಭವ ದಲ್ಲಿ ಹೇಳಿರುವ ಮೇಲಿನ ಶ್ಲೋಕವನ್ನು ತಪ್ಪದೆ ತಪ್ಪದೆ ತೆಗೆದುಹಾಕುವನು. ಊಹೂ, ಹೂ–ಹೂ-ಅಬ್ಬಾ-ಅಬ್ಬಬ್ಬಾ –'

ಹೀಗೆ ಆ ಮುದಿ ಮಾರ್ಗಸ್ಥನು, ಚಳಿಯಿಂದ ಅತಿಯಾಗಿ ನಡುಗುತ್ತ, ತಡೆಯಲಾರದೆ ಕೈಗಳನ್ನು ಬಿಗಿಯಾಗಿ ಹಿಗಿದು ಕಟ್ಟಿಕೊಂಡು, ಮೇಲೆ ಹೇಳಿದಂತೆ ಕೆಲವು ಮಾತುಗಳನ್ನು ಅಸ್ಪಷ್ಟವಾಗಿಯೂ, ಕೆಲವನ್ನು ಗಟ್ಟಿಯಾಗಿಯೂ, ಹೇಳುತ್ತ, ಬರುತ್ತಿದ್ದನು. ಈತನಿಗೆ ೭೦ ವರ್ಷಗಳಾಗಿದ್ದರೂ ಇರಬಹುದು. ತಲೆಗೆ ಕುಚ್ಚಿನ ಟೋಪಿಯನ್ನು ಹಾಕಿಕೊಂಡಿದ್ದರೂ ಚಳಿಯನ್ನು ತಡೆಯಲಾರದೆ ಕಿವಿಯ ಮೇಲೆ ಬಿಳುಪಾದ ವಸ್ತ್ರವನ್ನು ಬಿಗಿದಿದುದನ್ನೂ, ಬೆಳ್ಳಗೆ ನೋಲಾಡುತಿದ್ದ ಗಡ್ಡವನ್ನೂ, ಕಂಠದಲ್ಲಿದ್ದ ನೀಲರತ್ನ ಹಾರವನ್ನೂ, ಕುತ್ತಿಗೆಯಿಂದ ಹಿಡಿದು ಕಾಲವರೆಗೆ ವ್ಯಾಪಿಸಿದ್ದ ಅಂಗರಖಿ–ಬಿಳಿಯ ಷರಾಯಿ,—ಪಾದಗಳಿಗೆ ಮೆಟ್ಟಿದ್ದ ಡಿಲ್ಲಿ ಪಾಪಾಸುಗಳು ಮತ್ತು, ಅಡಿಗಡಿಗೆ ಬಿಗ್ಗರದಿಂದ ಹೊರಡುತ್ತಿದ್ದ–'ಅಲ್ಲಾ! ಯಾಖುದಾ!!' ಎಂಬ ದೇವತಾಸ್ಮರಣವು ಇವೆಲ್ಲವನ್ನೂ ನೋಡಿದುದಾದರೆ, ಮತಾಬಿಮಾನವುಳ್ಳ ಮುಹಮ್ಮದೀಯನೆಂದು ಹೇಳಬಹುದಲ್ಲದ, ಆವನು ನಡನಡುವೆ ಹೇಳುತ್ತಿದ್ದ ಸಂಸ್ಕೃತ ಶ್ಲೋಕಗಳಿಂದ ಹಿಂದುವಾಗಿರಬಹುದೇನೆಂಬ ಸಂಶಯವು ಹುಟ್ಟಬಹುದು. ಆದರೆ, ಆ ಕಾಲದಲ್ಲಿ ಮುಹಮ್ಮದೀಯರು ಕೂಡ ಸಂಸ್ಕೃತವನ್ನು ಕಲಿಯುತ್ತಿದ್ದರು. ಅಕ್ಬರ್ ಚಕ್ರವರ್ತಿಯ ಕಾಲದಲ್ಲಿ "ಅಬುಲ್‌ಫಸಲ್" ಎಂಬವನು ಸಂಸ್ಕೃತದಲ್ಲಿ ಪಂಡಿತನಾಗಿದ್ದು ಅನೇಕ ಕಾವ್ಯಗಳನ್ನು ರಚಿಸಿರುವನೆಂದೂ

ಕ್ಕೇನೆ ತಿಳಿದಿರುವವು ಹಾಗೆಯೇ ಈ ಮಾರ್ಗಸ್ಥನೂ, ಆಗಿರಬಹುದಾಗಿದೆ ಹೇಗೂ ಇರಲಿ, ಪಾಪ! ವೃದ್ಧನು ಚಳಿಯು ಹೊಡೆತವನ್ನು ಹೋಗಲಾಡಿಸಿಕೊಳ್ಳಲು ೫-೬ ಅಂಗರಖೆಗಳನ್ನು ಹಾಕಿಕೊಂಡಿದ್ದರೂ ಹಿಮಾಲಯದಲ್ಲಿದ್ದ ಆ ಚಳಿಗೆ ಅದು ಗಣನೆಯಿಲ್ಲದುದಾಯಿತು!

ಕಡೆಗೆ ವೃದ್ಧನು, ಕೋಪವನ್ನು ತಾಳಿ,–"ಆಗಲಿ, ನೋಡುತ್ತೇನೆ ನಾನು ಗೆಲ್ಲುತ್ತೇನೋ ಚಳಿಯು ಗೆಲ್ಲುವದೋ ನೋಡಿಯೇ ಬಿಡುವೆನು ಏನು! ಈ ಚಳಿಯು ನನ್ನನ್ನು ಮುದುಕನೆಂದು ತಿಳಿದು ತನ್ನ ಪ್ರತಾಪವನ್ನು ತೋರಿಸುತ್ತಿರುವದಲ್ಲವೆ? ಪ್ರಾಣಹೋದರೂ ಭಯವಿಲ್ಲ, ಕೈಕೊಂಡ ಕೆಲಸವನ್ನು ಕೊನೆಮುಟ್ಟಿಸದೆ, ಇಷ್ಟಕ್ಕೆ ಬೆದರಿ ಹೋಗುವವನು ನಾನಲ್ಲ! ರಾಜಭಕ್ತಿಯನ್ನು ಮೀರಿಸಿದ ಕಾರ್ಯವುಂಟೇ? ಆಹಾ! ಆ ಜೇಷ್ಠಮಲ್ಲನು ಎಂತಹ ಪರೋಪಕಾರಿ! ಈ ಅಪ್ಪಣೆ ಚೀಟಿಯನ್ನು ನನಗೆ ಸಂಪಾದಿಸಿಕೊಡದಿದ್ದರೆ, ನಾನು ಮಾಡಬೇಕೆಂದಿರುವ ಕಾರ್ಯಕ್ಕೆ ಭಂಗವಾಗುತ್ತಿದ್ದಿತಲ್ಲವೆ? ಆತನ ಉಪಕಾರವನ್ನು ನಾನು ಎಂದಿಗೂ ಮರೆಯಲಾರೆನು!" ಎಂದು ಹೇಳಿಕೊಳ್ಳುತ್ತಾ-ಮೇಲೆ ನೋಡಿ, ಸಂತೋಷದಿಂದ-'ಭಲೆ! ಮಧ್ಯಾಹ್ನವು ಸಮೀಪಿಸುತ್ತಿದೆ. ಮಧ್ಯಾಹ್ನ ಮಾರ್ತಾಂಡನ ಚಂಡಕಿರಣಗಳಿಂದ ಈ ಚಳಿಯ ಬಾಧೆಯು ಇನ್ನು ಕಡಿಮೆಯಾದಂತೆಯೇ ಸರಿ ಇನ್ನು ಹೀಗೆ ಮೆಲ್ಲನೆಯಿಂದ ಹೋದರೆ ಸಾಗುವದಿಲ್ಲ ಎಂದು ಹೇಳಿ, ವೇಗಗಮನದಿಂದ ನಡೆಯುತ್ತಾ, ಕ್ರಮಕ್ರಮವಾಗಿ ಅಲಿಮಜ್ಜಿದ್ ದುರ್ಗವನ್ನು ದಾಟಿ, ದಾರಿಯಲ್ಲಿ ಸಿಕ್ಕಿದ ಹಳ್ಳಿಗಳನ್ನೆಲ್ಲಾ ನಿರಾಯಾಸವಾಗಿ ದಾಟಿ, ೧೦ ಮೈಲಿದೂರದಲ್ಲಿದ್ದ ಲಂಡೀಕೋಟಾಲ್ ದುರ್ಗವನ್ನು ಸಮೀಪಿಸಿದನು

ಲಂಡೀಕೋಟಾಲ್ ಎಂಬುದು ಕೈಬರ್ ಕಣಿವೆಯಲ್ಲಿ ಬಹಳ ಎತ್ತರವಾದ ಸ್ಥಳವೆಂದು ಹಿಂದೆ ಹೇಳಿದೆಯಷ್ಟೆ. ಆ ಶಿಖರದ ಮೇಲೆ ಹತ್ತಿನೋಡಿದರೆ, ಕೈಬರ್ ಕಣಿವೆಯ ದಾರಿಯು ಸ್ಪಷ್ಟವಾಗಿ ಕಾಣುವುದು. ನಮ್ಮ ದಾರಿಗನು ಆ ಶಿಖರವನ್ನು ಹತ್ತಿ ಕಾಬೂಲ್ ದಾರಿಯ

ಕಣ್ಣ ನೋಡಲು, ಇಬ್ಬರು ಮಹಮ್ಮದೀಯ ಪಠಾಣರು ಖಡ್ಗಪಾಣಿಗಳಾಗಿ ಆವನೋ ಪುರುಷನೋರ್ವನನ್ನು ಬಂಧಿಯಾಗಿ ಹಿಡಿದುಕೊಂಡು, ಬಾರಿಬಾರಿಗೂ ಆತನನ್ನು ಚಿತ್ರಹಿಂಸೆ ಮಾಡುತ್ತ ಕಣಿವೆಯ ದಾರಿಯಲ್ಲಿ ತನಗೆ ಇದಿರಾಗಿ ಬರುತ್ತಿದ್ದುದು ತಿಳಿದು ಬಂದಿತು ಮಾರ್ಗಸ್ಥನು, ತನಗಾವ ಅಪಾಯವು ಸಂಭವಿಸುವದೋ ಎಂಬ ಭಯದಿಂದ, ಅಲ್ಲಿಂದ ತಪ್ಪಿಸಿಕೊಳ್ಳುವ ಉಪಾಯವನ್ನಾಲೋಚಿಸುತ್ತ, ಅಡಿಗಡಿಗೆ ಗಡ್ಡವನ್ನು ಸವರಿಕೊಳ್ಳುತ್ತ ಗಟ್ಟಿಯಾಗಿ- ರಹಿಮಾನ್-ರಸೂಲ್ ಅಲ್ಲಾಹೋ-ಅಕ್ಬರ್!" ಎಂದು ಪರ್ವತದ ಗುಹೆಗಳೂ ಪ್ರತಿಧ್ವನಿಸುವಂತೆ, ಮೇಲೆ ಮೇಲೆ, ಉಚ್ಚಸ್ವರದಿಂದ ದೇವರ ನಾಮಸ್ಮರಣ ಮಾಡಲಾರಂಭಿಸಿದನು ಇಷ್ಟರಲ್ಲಿ ಬಂದಿಯೊಡನೆ ರಾಜಭಟರೂ ಸಮೀಪಿಸಿದರು ಪಥಿಕನು ಗಟ್ಟಿಯಾಗಿ ಹಾಡುತಿದ್ದ ಅರಬ್ಬಿ-ಪಾರ್ಸಿ ಹಾಡುಗಳು ಸ್ವಲ್ಪ ದೂರದಲ್ಲಿಯೇ ಭಟರಿಗೆ ಕೇಳಿ ಬಂದಿದ್ದುದರಿಂದ, ಈತನು ಆವ ಮಹಾತ್ಮನೋ ಆಗಿರಬೇಕೆಂದೂ, ಅಸಾಮಾನ್ಯ ಪಂಡಿತನೆಂದೂ ಊಹಿಸಿ, ಆತನಿಗೆ ಸಲಾಮುಗಳನ್ನು ಮಾಡಿ, ವಿನಯದಿಂದ ನಿಂತರು, ಮತ್ತೂ ಆ ರಾಜಭಟರಲ್ಲಿ ಒಬ್ಬನು ಕೇಳಿದನು— 'ಸ್ವಾಮೀ! ನೀವು ದೊಡ್ಡ ಮನುಷ್ಯರಂತೆ ಕಾಣುತ್ತಿರುವಿರಿ ಆದರೂ ನಮ್ಮ ಕೆಲಸವನ್ನು ನಾವು ಮಾಡಬೇಕಾಗಿರುವದಲ್ಲವೆ? ಅಲಂಘೀರ್ ಬಾದಶಹರ ಅಪ್ಪಣೆ ಚೀಟಿಯಿಲ್ಲದೆ ಈ ದಾರಿಯಲ್ಲಿ ಒಬ್ಬರೂ ಪಯಣಮಾಡಕೂಡದು ಹಾಗೆ ಅಪ್ಪಣೆ ಚೀಟಿಯಿಲ್ಲದೆ ಈ ಮಾರ್ಗವಾಗಿ ಹೋಗುವವರಿಗ ಕಠಿಣವಾದ ಶಿಕ್ಷೆಯನ್ನು ವಿಧಿಸಬೇಕೆಂದು ಬಾದಶಹರ ಶಾಸನವಾಗಿರುವದು ಈಗ ನಿಮ್ಮಲ್ಲಿ ಅಪ್ಪಣೆ ಚೀಟಿಯಿರುವದೋ? ಇದ್ದರೆ ತೋರಿಸಿರಿ, ಇಲ್ಲದಿದ್ದರೆ ಹಿಂತಿರುಗಿ ಹೊರಟು ಹೋಗಿರಿ' ನೀವು ಎಲ್ಲವನ್ನೂ ತಿಳಿದ ಮುಸಲ್ಮಾನರಾದುದರಿಂದ ನಿಮ್ಮನ್ನು ಹಿಂಸಿಸಲಾರೆವು! ಇಷ್ಟು ಕಠಿಣವಾಗಿ ಮಾತನಾಡಿದುದಕ್ಕಾಗಿ ನಮ್ಮನ್ನು ಕ್ಷಮಿಸಿರಿ

ವೃದ್ಧನು ತಲೆದೂಗಿ ನಗುನಗುತ್ತ, ತನ್ನ ಉಡಿಯಲ್ಲಿರಿಸಿದ್ದ ಚೀಟಿಯನ್ನು ತೆಗೆದು ತೋರಿಸಿ,—"ಅರೆ! ಬಚ್ಚಾ" ನೀನು ನನ್ನ ಈ

ಮುದಿಗಡ್ಡಕ್ಕೆ ರಾಜಭಕ್ತಿಯನ್ನು ಕಲಿಸುತ್ತೀಯ? ರಾಜಭಕ್ತಿಯಲ್ಲಿಯೇ ಹುಟ್ಟಿ, ರಾಜಭಕ್ತಿಯಲ್ಲಿಯೇ ಬೆಳೆದು, ರಾಜಭಕ್ತಿಯಲ್ಲಿಯೇ ಈ ಕರೀ ಗಡ್ಡವು ಬಿಳುಪಾಗಿದ ಆಲಂಗೀರ ಬಾದಶಹರೆಂದರೂ, ಅಲ್ಲಾ ಎಂದರೂ ಭೇದವಿರುವುದೇ? ಒಂದು ವೇಳೆ ಅಲ್ಲಾನ ಆಜ್ಞೆಯನ್ನು ಮೀರಿದರೂ ಮೀರಬಹುದು, ಬಾದಶಹರ ಆಜ್ಞೆಯನ್ನು ಮೀರಬಹುದೇ? ನೀವಿನ್ನು ಮೊನ್ನೆ ಹುಟ್ಟಿದ ಹುಡುಗರು ನಾನು, ಆಲಂಗೀರ್ ಬಾದಶಹರನ್ನೇ ಅಲ್ಲ, ಅವರ ತಂದ ಷಹಜಹಾನನನ್ನೂ ಅವರ ತಂದೆ ಜಹಾಂಗೀರರನ್ನೂ ನೋಡಿದ್ದೇನೆ 'ಬಾದಶಹ' ಎಂದರೆ ಜಹಾಂಗೀರು ಬಾದಶಹರೇ ಬಾದಶಹರು ನಾನು ಪ್ರಾಯದವನಾಗಿದ್ದು ಸೈನ್ಯದಲ್ಲಿ ಸುಬೇದಾರನಾಗಿದ್ದಾಗ ಜಹಾಂಗೀರ್ ಬಾದಶಹರ ಅಪ್ಪಣೆಯ ಮೇರೆಗೆ ಚಾಂದಬೀಬಿಯ ಮೇಲೆ ಯುದ್ಧಕ್ಕೆ ಹೋಗಿದ್ದೆನು ದೇವಘುರ್ ಯುದ್ಧದಲ್ಲಿ ನನ್ನ ಇಷ್ಟ ಬಂದಂತೆ ಕಾಫರರನ್ನು ಕಡಿದು ಹಾಕಿದನು ಅಬ್ಬಾ! ಆ ಯುದ್ಧವನ್ನು ಜ್ಞಾಪಿಸಿಕೊಂಡರೆ ಈಗಲೂ ಭಯವಾಗುತ್ತಿದ ಆ ಚಾಂದಬೀಬಿಯು ಎಷ್ಟು ಚತುರೆ!! ಅಂಥವಳನ್ನು ಒಂದೇ ಗಳಿಗೆಯಲ್ಲಿ ಗೆದ್ದುಬಿಟ್ಟೆನು ಆ ಯುದ್ಧದಲ್ಲಿ ಗೆದ್ದು ಬಂದುದಕ್ಕಾಗಿ ಬಾದಶಹರು ಭಂಗಾರದ ಹಿಡಿ ಹಾಕಿದ ಕತ್ತಿಯನ್ನು ತಮ್ಮ ಕೈಯಿಂದಲೇ ನನಗೆ ಇನಾಮು ಕೊಟ್ಟಿರುವರು" ಎಂದು ಹೇಳಿ, ಅಂಗಿಯ ಒಳಗಡೆ ಮರೆಮಾಡಿಕೊಂಡಿದ್ದ ಕತ್ತಿಯನ್ನು ಹೊರತೆಗೆದು ತೋರಿದನು

ರಾಜಭಟರು, ವೃದ್ಧನ ಮಾತಿಗೆ ಆಶ್ಚರ್ಯ ಮಗ್ನರಾದರೇ ಹೊರತು, ಅಕ್ಬರ್ ಚಕ್ರವರ್ತಿಯ ಕಾಲದಲ್ಲಿದ್ದ ಚಾಂದಬೀಬಿಯು ಜಹಾಂಗೀರನ ಕಾಲದಲ್ಲಿ ಹೇಗ ಬಂದಳೆಂಬುದನ್ನು ಯೋಚಿಸದೆ ಹೋದರು ಅಷ್ಟೇ ಅಲ್ಲದೆ, ಪಥಿಕನು ಅನೇಕ ಪೂರ್ವ ಕಥೆಗಳನ್ನು ಹೇಳಿ,—'ಆ ಕಾಲವೆಲ್ಲಾ ಕಳೆದು ಹೋಯಿತು, ಹೆಂಡತಿ ಮಕ್ಕಳೂ ಸತ್ತುಹೋದರು ಇನ್ನು ನನಗೆ ಅಲ್ಲಾನ ಹೊರತು ಮತ್ತಾರೂ ಇಲ್ಲ ನಮ್ಮ ಇಸ್ಲಾಮ್ ಮತವನ್ನು ಅಭಿವೃದ್ಧಿಪಡಿಸಿದ ಪೈಗಂಬರರ ಗೋರಿಗಳನ್ನು ನೋಡುವುದಕ್ಕಾಗಿ ಹೋಗುತ್ತಿದ್ದೇನೆ.

ಬಾದಶಹರ ಅಪ್ಪಣೆ ಬೇಕೆಂಬುದು ನನಗೆ ಮೊದಲೇ ಗೊತ್ತಾಗಿದ್ದು ದರಿಂದ ನಾನೇ ಬಾದಶಹರ ಬಳಿಗೆ ಹೋಗಿ ಅಪ್ಪಣೆ ಚೀಟಿಯನ್ನು ತೆಗೆದುಕೊಂಡು ಬಂದಿರುತ್ತೇನೆ ”

ಪಥಿಕನು ಹೇಳಿದ ಪೂರ್ವಕಥೆಗಳನ್ನು, ಆತನ ಪೂರ್ವೋತ್ತರ ವೃತ್ತಾಂತವನ್ನೂ ಕೇಳಿ ಆಶ್ಚರ್ಯಮಗ್ನರಾದ ರಾಜಭಟರು ಆತನನ್ನು ಅದ್ವಿತೀಯ ಪುಣ್ಯಪುರುಷನೆಂದೇ ನಂಬಿ ವಿನಯದಿಂದ ಸಲಾಮುಮಾಡಿ, ಅಪ್ಪಣೆ ಚೀಟಿಯನ್ನು ಕೇಳಿದುದಕ್ಕಾಗಿ ನಮ್ಮನ್ನು ಕ್ಷಮಿಸಬೇಕೆಂದು ಬೇಡಿಕೊಂಡರು. ಮಾರ್ಗಸ್ಥನು, ಭಟರು ತನಗೆ ಸಂಪೂರ್ಣವಶರಾದರೆಂದು ತಿಳಿದು ಮತ್ತೆ “ಬೇಟಾ! ನಿಮ್ಮ ಕಲಸವನ್ನು ನೀವು ಮಾಡಿದಿರಿ ಆದರಲ್ಲಿ ತಪ್ಪೇನಿರುವದು?” ಎಂದು ಹೇಳುತ್ತಿದ್ದಂತೆಯೇ ಬಂದಿಯಾಗಿದ್ದವನನ್ನು ನೋಡಿ, ಆತನ ಪೂರ್ವೋತ್ತರವನ್ನು ತಿಳಿಯಬೇಕೆಂಬುವ ಕುತೂಹಲದಿಂದ ರಾಜಭಟರಲ್ಲಿ ಹೀಗೆ ಪ್ರಶ್ನಿಸಲಾರಂಭಿಸಿದನು.

“ಈ ಬೈದಿಯು ಯಾರು? ಕಾಫರನ ಹಾಗಯೇ ಕಾಣುವನು ಎಚ್ಚರಿಕೆ! ಎಚ್ಚರಿಕೆ!!”

ರಾಜಭಟರು —‘ ಈತನಾರೋ ತಿಳಿಯದು ಬಾದಶಹರ ಗುಟ್ಟನ್ನೆಲ್ಲಾ ಕಾಬೂಲಿನಲ್ಲಿರುವ ಯಶವಂತಸಿಂಗರಿಗೆ ಹೇಳಲು ಹೋಗುತ್ತಿದ್ದಾನೆ! ಅಪ್ಪಣೆಚೀಟಿಯು ಇವನಲ್ಲಿ ಇಲ್ಲವೇ ಇಲ್ಲ ”

“ಹಾಗೆಯೇ! ದುರ್ಮಾರ್ಗನು!! ಇವನಿಗೆ ಯಾವ ಶಿಕ್ಷೆಯನ್ನು ವಿಧಿಸಿದರೂ ಪಾಪವಿಲ್ಲ ರಾಜದ್ರೋಹಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕೆಂದು ಕುರಾನಿನಲ್ಲಿ ಹೇಳಿರುವದು ನೀವು ಈತನನ್ನೇನು ಮಾಡಬೇಕೆಂದಿರುವಿರಿ?

ಭಟರು – ಬಾದಷಹರ ಹತ್ತಿರಕ್ಕೆ ಕರೆದುಕೊಂಡು ಹೋಗುತ್ತೇವೆ. ಆ ಬಳಿಕ ಅವರು ತುಂಡುತುಂಡಾಗಿ ಕೊಯ್ದು ಹದ್ದು ಕಾಗೆಗಳಿಗೆ ಹಾಕುವರು ’

ವೃದ್ಧ —“ಅಹ್ವಹ್ವಹ್ವ”—ಎಂದು ವಿಕಾರವಾಗಿ ನಕ್ಕು ಮತ್ತೆ ಗಂಭೀರ ಭಾವದಿಂದ ಯೋಚಿಸುವಂತಿದ್ದು ಕಡೆಗೆ ತಲೆದೂಗಿ ಬಳಿಕ

ಆಯಾಸಪಟ್ಟವನಂತೆ ನಟಿಸಿ ಬಳಿಯಲ್ಲಿದ್ದ ಮರದ ನೆರಳಲ್ಲಿ ಕುಳಿತು, ವಿಶ್ರಮಿಸಿಕೊಳ್ಳಬೇಕೆಂದು ಹೇಳಿ, ರಾಜಭಟರೊಡಗೊಂಡು ಬಂದು ಸ್ವಲ್ಪ ಹೊತ್ತು ಕುಳಿತಿದ್ದು, ಆ ಬಳಿಕ ಅವರನ್ನು ಕುರಿತು,—'ಪಾಪ! ನೀವಿಬ್ಬರೂ ಬಲು ಬಳಲಿದಂತೆ ಕಾಣುತ್ತದೆ ಹತ್ತಿರದಲ್ಲಿಯೇ ಒಂದು ತಾಳೆಯಗಿಡವಿರುವುದು ಅದರ ರಸವನ್ನು ಸ್ವಲ್ಪ ಕುಡಿದರೆ, ಬಲವೂ ಚಟುವಟಿಕೆಯೂ ಉಂಟಾಗುತ್ತದೆ ನಾನಿದೇ ಕುಡಿದು ಬಂದೆನು ಅದೆಷ್ಟು ಮಾಧುರ್ಯವಾಗಿದೆಯೆಂದು ಬಲ್ಲಿರಿ? ಅಮೃತ ದಂತೆಯೇ ಇದೆ. ನೀವು ಅದನ್ನು ಸ್ವಲ್ಪ ಕುಡಿದು ನೋಡಿರಿ ಬೇಕಾ ದರೆ ನಿಮಗೆ ಈ ಪಾತ್ರೆಯನ್ನು ಕೊಡುತ್ತೇನೆ ತೆಗೆದುಕೊಂಡು ಹೋಗಿ ಕುಡಿದು ಬನ್ನಿರಿ ಪಾಪ! ಆಯಾಸದಿಂದ ನಿಮ್ಮ ಮುಖ ದಲ್ಲಿ ಬೆವರುಸುರಿಯುತ್ತಿದೆ. ನೀವು ಅಲ್ಲಿಯವರೆಗೆ ಹೋಗಿ ಕಷ್ಟ ಪಡಬೇಕಾಗಿಲ್ಲ. ಇಲ್ಲಿಯೇ ಕುಳಿತು ಸುಧಾರಿಸಿಕೊಳ್ಳುತ್ತಿರಿ ನಾನು ಮುದುಕನಾಗಿದ್ದರೂ, ಪರೋಪಕಾರ ಮಾಡುವದೇ ನನ್ನ ಮುಖ್ಯ ಸಂದೇಶವಾಗಿರುವದರಿಂದ ನಾನೇ ಹೋಗಿ ಅದರ ರಸವನ್ನು ತಂದು ನಿಮಗೆ ಕುಡಿಯಕೊಡುವೆನು ಆ ಮೇಲ ಉಳಿದ ವಿಚಾರವಾಗಲಿ" ಎಂದು ಹೇಳಿ, ಬಗಲಿಗೆ ಬಿಗಿದುಕೊಂಡಿದ್ದ ಗಂಟನ್ನು ಕೆಳಗೆ ತೆಗ ದಿಟ್ಟು, ಅದರೊಳಗಿದ್ದ ಪಾತ್ರೆಯನ್ನು ತೆಗೆದುಕೊಂಡು ಹೋಗಿ, ಅದರ ತುಂಬ ತಾಳೆಯ ರಸವನ್ನು ತುಂಬಿ ತಂದು ಭಟರ ಕೈಗೊ ಪ್ಪಿಸಿದನು ಭಟರು ಆತುರದಿಂದದನ್ನು ಕುಡಿದರು

ಪಾನಮಾಹಾತ್ಮ್ಯದಿಂದುಂಟಾದ ಮತಿಭ್ರಮಣೆಯಿಂದ ಸ್ವಲ್ಪ ಹೊತ್ತಿಗೇ ಗಿಳಿಯಂತೆ ಮಾತನಾಡಲಾರಂಭಿಸಿ, ಕಡೆಗೆ ಬಕಧ್ಯಾನ ಮಾಡುತ್ತ ಕುಂಭಕರ್ಣನಂತೆ ಗಾಢನಿದ್ರೆ ಹೊಂದಿ, ನೆಲದ ಮೇಲೆ ದೊಪ್ಪನೆ ಬಿದ್ದರು ಮಾರ್ಗಸ್ಥನು ತಾನು ಮಾಡಿದ ಉಪಾಯಕ್ಕೆ ಸಂತೋಷಪಡುತ್ತಾ, ಸೆರೆಯಾಗಿದ್ದವನ ಬಳಿಗೆ ಬಂದು, ಆತನ ಭುಜ ವನ್ನು ತಟ್ಟಿ ಮೆಲ್ಲನೆ, "ಅಚ್ಛಾ! ಭಯವಿಲ್ಲ-ಭಯಪಡಬೇಕಾಗಿಲ್ಲ!!" ಎಂದು ಹೇಳಿ ಅವನ ಕೈಗಳನ್ನು ಬಿಚ್ಚಿದನು ಬಂಧವಿಮೋಚನವಾ ದೊಡನೆಯೇ ಬಂದಿಯಾಗಿದ್ದವನು, ಆತನ ಸಹಾಯಕ್ಕೆ ಅತ್ಯಂತ

ಹರ್ಷಿತನಾಗಿ ಕೈಮುಗಿದು ಹೇಳಿದನು — 'ಮಹನೀಯನೇ ! ಆಪ ದ್ಬಾಂಧವನಾಗಿ ಬಂದು, ನನ್ನ ಮಾನ ಪ್ರಾಣಗಳನ್ನು ಉಳುಹಿದೆ ಈ ನಿನ್ನ ಸಹಾಯವು ನನಗೆ ಯಾವಜ್ಜೀವವೂ ಮರೆಯುವಂತಹುದಾಗಿಲ್ಲ ನಿನ್ನಲ್ಲಿ ತೋರಿ ಬರುತ್ತಿರುವ ಭೂತದಯೆ, ಧರ್ಮಶ್ರದ್ಧೆ, ಅನುಕಂಪ ನೆಗಳೇ ಮೊದಲಾದ ಉದಾರ ಗುಣದಿಂದ ನೀನು ನಿಜವಾಗಿಯೂ ಮಹಮ್ಮದೀಯರ ವಂಶದಲ್ಲಿ ಹುಟ್ಟಿದವನೆಂದು ಹೇಳಲಾರೆನು. .

ಮಾರ್ಗಸ್ಥನು ಕಿರುನಗೆಯಿಂದ— 'ಬಾಬೂ ! ನೀನು ಶಂಕಿಸ ಬೇಡ ಧೈರ್ಯವಾಗಿ ಹೇಳು ನೀನಾರು? ಎಲ್ಲಿಗೆ ಹೋಗುತ್ತಿದ್ದೀಯೆ? '

ವೃದ್ಧನ ಪ್ರಶ್ನೆಗೆ ಆತನೇನೂ ಹೇಳಲಾರದ ತಲೆಬಾಗಿ ಸುಮ್ಮನೆ ನಿಂತನು.

ವೃದ್ಧನು ಮತ್ತೆ ಮೊದಲಿನಂತೆಯೇ— '' ಅರೇ, ಬಾಬಾ ! ನೀನೆಂತಹ ಹುಚ್ಚನು ? ಭಯವೇಕೆ ? ನನ್ನನ್ನು ನೋಡಿ ಸಂದೇಹ ಪಡುವೆಯೋ ? ' ಎಂದು ಬೆಸಗೊಂಡು, ಆ ತರುಣನ ಕಿವಿಯಲ್ಲಿ ಏನೇನನ್ನೋ ಹೇಳಿದನು ವೃದ್ಧನ ಮಾತಿನಿಂದ ತರುಣನು ಆನಂದ ಪಾರವಶ್ಯತೆಯಿಂದ ಆತನ ಮುಖವನ್ನೇ ದೃಷ್ಟಿಸುತ್ತ ಮಾತಿಲ್ಲದ ನಿಂತನು

ಮಾರ್ಗಸ್ಥನು ಮತ್ತೆ— ' ಇನ್ನು ವಿಳಂಬಿಸಬೇಡ. ಜಾಗ್ರತೆ ಮಾಡು ! ಆ ಉತ್ತರಪತ್ರವನ್ನು ನನಗೊಪ್ಪಿಸಿ, ನೀನು ತಲೆತಪ್ಪಿಸಿ ಕೊಂಡು ಹೊರಟುಹೋಗು ನಾನು ಕಾಬೂಲಿಗೆ ಹೋಗಿ ಇದನ್ನು ಯಶವಂತಸಿಂಗನಿಗೆ ಮುಟ್ಟಿಸುವೆನು '

ವೃದ್ಧನ ಮಾತಿಗೆ ಮರುನುಡಿ ನುಡಿಯದೆ ತರುಣನು ತನ್ನ ಉಡಿ ಯಲ್ಲಿ ಅಡಗಿಸಿಕೊಂಡಿದ್ದ ಉತ್ತರಪತ್ರವನ್ನು ವೃದ್ಧನ ವಶಕ್ಕೊಪ್ಪಿಸಿ, ಅತ್ತಿತ್ತ ನೋಡದೆ ಹೊರಟುಹೋದನು ವೃದ್ಧನು ಪತ್ರವನ್ನು ತೆಗೆದು ತನ್ನ ಅಂಗಿಯ ಕಿಸೆಯಲ್ಲಿರಿಸಿ ಕೆಳಗೆ ಬಿದ್ದಿದ್ದ ಪಾತ್ರೆಯನ್ನು ತೆಗೆದು ಗಂಟಿಗೆ ಸೇರಿಸಿ, ಮೈಮರೆತು ಬಿದ್ದಿದ್ದ ಭಟರು ಏಳುವದಕ್ಕೆ ಮೊದಲೇ ಅಲ್ಲಿಂದ ತಪ್ಪಿಸಿಕೊಂಡು ಹೊರಟುಹೋದನು

# ಎರಡನೆಯ ಪ್ರಕರಣ.

ವಿಜಯಸಿಂಹ - ವಿಮಲೆ

‘ ಅಪ್ಪಾಜೀ ! ಅರಿಯದ ಹುಡುಗಿಯಾದ ನಾನು ತಮ್ಮ ಮಾತಿಗ ಪ್ರತಿಯಾಗಿ ಹೇಳಲಾರೆನು ತಾವೇ ಯುಕ್ತಾಯುಕ್ತ ವಿಚಾರ ಮಾಡಿ, ಅಣ್ಣನನ್ನು ಕರೆಯಿಸಬೇಕು ? ’

ಮಗು ವಿಮಲಾ ! ನಾನು ಎಷ್ಟು ಬಾರಿ ಹೇಳಿದರೂ ಕೇಳದೆ, ನಿನ್ನ ಅಣ್ಣ ಶಿವಸಿಂಗನು ದುರುಳುತನದಿಂದ ನನ್ನ ಅಪ್ಪಣೆಯನ್ನು ಮೀರಿದನು. ಆತನ ಅವಿಧೇಯತೆಗಾಗಿ ಆ ಶಿಕ್ಷೆಯನ್ನು ವಿಧಿಸಬೇಕಾಯಿತು ನಾನೇನು ಮಾಡಲಿ ? ಮಗು ! ರಜಪೂತರ ಕುಲಕ್ಕೇ ವೈರಿಯಾಗಿರುವ ಆ ಔರಂಗಜೇಬನನ್ನು ಸೇವಿಸುತ್ತ, ತನ್ನ ಕ್ಷಾತ್ರತೇಜಸ್ಸಿಗೇ ಕಲಂಕವನ್ನು ತಂದುಕೊಂಡಿರುವ ಆ ಯಶವಂತಸಿಂಹನೊಡನೆ ಇವನೇಕೆ ಯುದ್ಧಕ್ಕೆ ಹೊರಡಬೇಕು ? ನನ್ನ ಇಷ್ಟಕ್ಕೆ ವಿರೋಧವಾಗಿ ನಡೆಯಬೇಕಾದ ಅಗತ್ಯವೇನಿದ್ದಿತು ? ನನ್ನ ಆಜ್ಞೆಯು ಇವನಿಗೆ ಇಷ್ಟು ದುರ್ಲಕ್ಷ್ಯ . . ”

“ ಅಪ್ಪಾಜೀ ! ಅಷ್ಟರ ಆಗ್ರಹವನ್ನು ವಹಿಸಿದರೆ ಮುಂದೇನು ಗತಿ ? ಅಣ್ಣನು ಮಾಡಿದ ಈ ಕಾರ್ಯದಿಂದ ದುರ್ಲಕ್ಷ್ಯವೆಂದು ಭಾವಿಸಬಾರದು. ಆತನ ಹೃದಯವು ಅಷ್ಟರ ಕೃತಘ್ನತೆಗೆ ಪಾತ್ರವಾಗಿಲ್ಲ. ಆವನಿಗೆ ಸ್ವಾಭಾವಿಕವಾಗಿ ಯುದ್ಧದಲ್ಲಿ ಅಸಾಧಾರಣವಾದ ಪಾಂಡಿತ್ಯವೂ, ಅಷ್ಟೇ ಆಸೆಯೂ ಇರುವುದು ಇದರ ಮೇಲೆ ಯಶವಂತಸಿಂಹನು ಕೂಡ ನಮ್ಮ ಸಮೀಪ ಬಂಧುವೇ ಆಗಿರುವನು ಬಂಧುವಿಗೆ ಸಹಾಯವಾಗಿಯೂ ತನಗ ಉಂಟಾಗಿದ್ದ ಯುದ್ಧೋತ್ಸಾಹದಿಂದಲೂ, ಯಶವಂತಸಿಂಹನೊಡನೆ ಹೋದನೇ ಹೊರತು ತಮ್ಮಲ್ಲಿ ಅಲಕ್ಷ್ಯದಿಂದಾಗಲೀ, ಅವಿಧೇಯತೆಯಿಂದಾಗಲೀ ಹೋಗಿಲ್ಲ. ಇಷ್ಟಕ್ಕೇ ಆತನನ್ನು ವಿರೋಧಭಾವದಿಂದ ತಿರಸ್ಕರಿಸಿ ಬಿಡುವುದು ನ್ಯಾಯವಲ್ಲ !

(ಮುಂದೆ ಸಾಗುವುದು.)

## ಕರ್ನಾಟಕ ನಂದಿನಿಯ ನವೆಂಬರ್ ಸಂಚಿಕೆಯಲ್ಲಿ

# ತಿದ್ದುವುದು

(ರಕ್ಷಾಪತ್ರದಲ್ಲಿ)

| (ಪ್ರಮಾದವಶದಿಂದಾದ ತಪ್ಪುಗಳು) | | (ಓದಿಕೊಳ್ಳಬೇಕಾದ ಬಗೆ) | |
|---|---|---|---|
| ವಿಷಯ | ಲೇಖಕರು | ವಿಷಯ | ಲೇಖಕರು |
| ೩ ಸ್ವಾಗತಾಭಿನಂದನವು | 'ನಂದಿ' | ೨ ಸ್ವಾಗತಾಭಿನಂದನವು | 'A S L' |
| ೨ ದೇಶೋನ್ನತಿ | 'ನಂದಿನಿ' | ೪ ದೇಶೋನ್ನತಿ | 'V K V' |

(ಸ್ವಾಗತಾಭಿನಂದದಲ್ಲಿ)

| ಪುಟ | ಪಙ್ಕ್ತಿ | ತಪ್ಪು | ತಿದ್ದುವದು |
|---|---|---|---|
| ೭ | ೧ | ಬ್ರಹ್ಮಭುವನಕ್ಕ | ಬ್ರಹ್ಮಭವನಕ್ಕೆ |
| ೮ | ೧ | ದ್ವಿಪಟೀಯು | ದ್ವಿಪಟಿ — |
| ,, | ೨೧ | ನಮೋ ಗಾ ವೋಪಪನ್ನಾನಾಂ | ನಮೋ ಗಾವೋಪಪನ್ನಾನಾಂ |
| ೯ | ೧೧ | ಮಹನಾ ಪಕದ | ಮಹನ್ನಾ ಪಕರಾದ |

(ದೇಶೋನ್ನತಿಯಲ್ಲಿ)

| ಪುಟ | ಪಙ್ಕ್ತಿ | ತಪ್ಪು | ತಿದ್ದುವದು |
|---|---|---|---|
| ೨ | (ಶ್ಲೋಕದ ಪೂರ್ವಾರ್ಧ) | ಸ್ವೈಮಾಂ | ಸ್ವಾಮ್ಯಂ |

(ಭಾವನಾಲೋಕದಲ್ಲಿ)

| ಪುಟ | ಪಙ್ಕ್ತಿ | ತಪ್ಪು | ತಿದ್ದುವದು |
|---|---|---|---|
| ೯ | ೧೪ | ಕೃತಕಾರ್ಯದೀಂದಾ | ಕೃತಕಾರ್ಯ ಬಾಧ್ಯಾ । |
| ,, | ೨೪ | ತಮಃ ಸರಾ | ತಮಃ ಶರಾ |

(ಆತ್ಮಾರ ಪ್ರಭವದಲ್ಲಿ)

| ಪುಟ | ಪಙ್ಕ್ತಿ | ತಪ್ಪು | ತಿದ್ದುವದು |
|---|---|---|---|
| ೧೬ | (ಶ್ಲೋಕದಲ್ಲಿ) | ಗಿರಿತಟೀ | ಗಿರಿತಟಿ |
| | | ಪಾರಾದ ಂ | ಪಾರಾದ್ಯಂ |
| | | ಯಾಂಬಲಾ | ಯಾ ಬಲಾ |

---

**ವಿ ಸೂ:— ಇನ್ನೂ ಬಿಟ್ಟು ಹೋಗಿರಬಹುದಾದೆಡೆಗಳಲ್ಲಿಯೂ ಸರಿಪಡಿಸಿಕೊಳ್ಳಬೇಕೆಂದೂ, ಮುಂದಿನ ಸಂಚಿಕೆಯಿಂದ ಹೀಗಾಗಲಾರದೆಂದೂ ಸೂಚನೆ**

ಶ್ರೀ ||

ಶ್ರೀ ಲಕ್ಷ್ಮೀಸಮೇತ ಶ್ರೀವೆಂಕಟೇಶಪ್ರಸನ್ನ

# ಸಮರ್ಪಣೆ

[illegible]

[illegible]

ಮಾತಾಪಿತೃದೇವರ ಚರಣಾರವಿಂದಗಳಲ್ಲಿ ಅವರ ಘನತರವಾದ ಆಶೀರ್ವಾದವನ್ನು ಹೊಂದಿ

“ ಪ್ರಣಯಕಲಾ ”

ನಾಟಕಗ್ರಂಥವನ್ನು

ಭಕ್ತಿಭಾವದಿಂದ ಅಂಕಿತಗೊಳಿಸಿ ಪ್ರಕಟಪಡಿಸಿರುವೆನು

( ಗ್ರಂಥಕರ್ತೃ )

ಶ್ರೀಯುಕ್ತ ವೆಂಕಟಕೃಷ್ಣಯ್ಯಂಗಾರ್ಯರು ಪ್ಲೀಡರ್



(ನಂಬಿಸಿಂ ಕತ್ರೀಯ ಪ್ರ- ...ಕ್ಕಾದೇವರು, ಸಹಜಾತರು )

ಶ್ರೀ, ಸೌ ಲ[illegible]ೀ ಅಮ್ಮನವರು



(ನಂಬಿಸಿಂ ಕತ್ರೀಯ ಪ್ರ- ನಾತಿಯವರು )

॥ श्री ॥

॥ वन्देत्वां भूदेवि आर्यमातरम् ॥

ಕರ್ನಾಟಕ

# ನಂದಿನಿ

ಸ್ತ್ರೀಜನಾಂಗದ ಸರ್ವಾಂಗಾಭಿವೃದ್ಧಿಗಾಗಿ ಸ್ತ್ರೀಯರಿಂದಲೇ ಪ್ರಕಟಿಸಲ್ಪಡುವ

ಮಾಸಪತ್ರಿಕೆ

" ಸಿದ್ಧಿಂ ಸಮಾಗತೇ ಭೂತಲಸ್ಯ ಭಾರತಾನಾಂ ಚೈವ ಯಃ ಪ್ರಭುಃ ।
ದಾಸ್ಯಂತಿ ವಾಮಯೋನ್ಯೋ ಹ್ಯದ್ಯಸಾ ಪಥಿಗೋಚರಾಃ ॥"

ಸಂಪುಟ ೧ ] ೧೮೩೮ ನಳಸಂವತ್ಸರ ಪೌಷ [ ಸಂಚಿಕೆ ೪.

## ವಂದನೆ

ರಾಗ — (ಕಮಲಾಕ್ಷೀ ನಾಂ ಧನ್ಯನಾದೆ)

ನಮಿಸುವಂ ಜಗನ್ಮಾತೆ ನಿನ್ನ—ಮುದದಿಂ—ದೃಢದಿಂ— ಮನವಾರೆ ನಾಂ ॥ ನಮಿ ॥ ಪ ॥ ಉದಯಾದ್ರಿಯೊಳುದಿಸಿದನಾದ್ಯನು । ನಿದೊ ಬಂದೆ ಬಳಿಸಂದೆ-ಪದುಳದಿ ನಿಂದೆ ॥ ೧ ॥ ಮಾಗಿಡಿಸು ಕತ್ತಲೆ-ಯೋಡಿಸು ಭರದಿಂ । ನೋಡಿದೆ ಚಿರಂ—ನಾಡೆ ಬಗೆ —ವೆಗ್ಗಳಿ ಬೆಳಕಿಂ ॥ ೨ ॥ ಭಾಗಿನಿಯರು ಸ-ದ್ಭಾವನೆಯಿಂ, ಭಕ- । ದೇವಿಯು ಸಂ—ಸೇವಿಸು ವೊಳ್ ತಾ, ವರಮಂ ॥ ೩ ॥ ಕೇಷಗಿರೀಶನ ದಾಸರು ನಾನೆನೆ । ಭಾವಾ ವಿಧಿಯಂ—ಬಲಗೊಂಡಾಂ—ಬೇಡುವೆನೆಂದುಂ ॥ ನಮಿ ॥ ೪ ॥

( ಶ್ರೀಪಾದರೇಣು )

# ಪ್ರಭಾತರಾಗ.

ಸುಪ್ರಭಾತವು! ಕರ್ನಾಟಕ ಸೋದರೀ ಸೋದರರೇ!! ನಿಮಗಿದೋ ಸುಪ್ರಭಾತವು!!!

ಏಳಿರಿ, ಬಾಂಧವರೇ! ತಿಳಿಗಣ್ದೆರೆವೇಳಿರಿ!! ಭಗಿನಿಯರೇ, ಭವದಿಂ-ವ್ಯಪುರಿವೇಳಿರಿ?—ಕರ್ತವ್ಯ ಪಾರಾಯಣದಲ್ಲಿ ಶುಚಿರ್ಭೂತರಾಗಿ ನಿಂತು ಸಂಕಲ್ಪ ಮಾಡಿರಿ!!! ನೋಡಿರಿ! ಸುಹೃದರೇ! ನಡೆನೋಡಿರಿ! ಉದಯಾದ್ರಿ ಶಿಖರದಲ್ಲಿ ಉದಯರಾಗವು ಕಂಗೊಳಿಸುತ್ತಿರುವುದು! ಪ್ರಭಾತರಾಗನಾದ ದಿವಾಕರ(ಜ್ಞಾನಸೂರ್ಯ)ನು ಮೇಲೇರಿ ಬರುತ್ತಿರುವನು, ದಿಙ್ಮಂಡಲವನ್ನೂ ಬೆಳಗಿಸುತ್ತಿರುವನು. ಕರ್ತವ್ಯ ಜಾಗ್ರತೆಗಾಗಿ ಪಕ್ಷಿನಿಕರಗಳೂ ನಿಮ್ಮನ್ನು ಬಹುವಿನಯದಿಂದ ಕೂಗಿ ಕೂಗಿ ಎಚ್ಚರಿಸುತ್ತಿರುವವು. ಇನ್ನು ನೀವು ಮಲಗಿರುವುದು ಸರಿಯಲ್ಲ. ಭರದಿಂದೇಳಿರಿ! ಕಣ್ತೆರೆದು ನೋಡಿರಿ!! ಎಚ್ಚರಗೊಳ್ಳಿರಿ!"!

ಇನ್ನೂ ನಿದ್ರೆಯೇ ಭಗಿನಿಯರೇ! ಬಾಂಧವರೇ! ಬೇಗ ಬೇಗ ಏಳಿರಿ. ಇದೇ ನಿಮಗೆ ಎಚ್ಚರಿಕೆಯಾಗುವ ಕಾಲವು! ಇದೇ ನಿಮ್ಮ ನಿದ್ರಾವಸ್ಥೆಯ ಅಂಧಕಾರ ವಿಮೋಚನಕಾಲವು!! ಇದೇ ನಿಮ್ಮ ತಿಳಿಗಣ್ತೆರೆದು, ದೇಶಮಾತೆಯ ಮಂಗಳಮೂರ್ತಿಯನ್ನು ಧ್ಯಾನ-ಧಾರಣಾದಿ ಸೇವನಗಳಿಂದ ನಲಸೇರಿಸುವಂತೆ ಮಾಡುವ ಸುಕಾಲವು!' ಏಳಿರಿ, ಏಳಿರಿ!! ಹೊರಬಾಗಿಲಲ್ಲಿ ಬಂದು ನಿಂದು ಕೂಗಿದುವ 'ನಂದಿನಿ'ಯು "ಅಂಬೇ, ಅಂಬೆ" ಎಂಬ ಕಾರುಣ್ಯ ಸ್ವರವನ್ನು ಕಿವಿಗೊಟ್ಟು ಕೇಳಿರಿ. ಪ್ರಭಾತರಾಗವನ್ನು ಹಾಡುತ್ತ ಸಂಭ್ರಮಿಸುವ 'ನಂದಿನೀ ವತ್ಸ"ವನ್ನು ನೋಡಿ, ಆನಂದೋತ್ಸವವನ್ನು ಹೆಚ್ಚಿಸುವಂತೆ ನೀವು, "ಅಮ್ಮಾ ಅಮ್ಮಾ" ಎಂದೂ, "ತಾಯೇ, ಜನ್ಮಭೂಮಾತೆ! ಕಾಪಾಡು, ಕಲ್ಯಾಣೀ!!" ಎಂದೂ, ನಿಮ್ಮ ನಿಮ್ಮ ಕೋಮಲ ಕಂಠದಿಂದ ಮಾತೃಗೀತೆಯನ್ನು ಹಾಡಿ, ದೇಶಮಾತೆಯ ವದನದಲ್ಲಿ, ಸರ್ವತ್ರ ಶಾಂತತೆ, ಐಕಮತ್ಯ, ಸತ್ಯ, ದಯೆ, ರಾಜಭಕ್ತಿ ಮೊದಲಾದ ಕರ್ತವ್ಯಜಾಗ್ರತೆಯ ಸಮಾವೇಶದಿಂದುಂಟಾಗುವ ಶೋಭಾರಾಶಿಯನ್ನು ನೋಡಿ, ಮಾನವ ಜೀವಿತವನ್ನು ಸಾರ್ಥಕ್ಯಪಡಿಸಿಕೊಳ್ಳಿರಿ!

ಏಳಿರಿ! ತಾಯಿಯರೇ! ತಂದೆಯರೇ!! ಬಂಧು ಭಗಿನಿಯರೇ!!! ಏಳಿರಿ! ನೀವೇ ಹೀಗೆ ಆಲಸತೆಯಿಂದ ಮುಸುಕಿಟ್ಟು ಮಲಗಿದ್ದರೆ, ನಿಮ್ಮ ಮಕ್ಕಳ ಪಾಡೇನು? ನಿಮ್ಮನ್ನು ವಿಚಾರಿಸಬೇಕಲ್ಲವೇ ಅವರು? ಹಾಗಾದರೆ, ನಮ್ಮಮ್ಮನ ಸಂತಾನದ ಸಾಂಪತ್ತಿಕ ಸ್ಥಿತಿಯಾದರೂ ಊರ್ಜಿತವಾಗುವ ಬಗೆ ಹೇಗೆ? ಪ್ರಯತ್ನಶೀಲರಲ್ಲದ, ಶ್ರದ್ಧಾ ಭಕ್ತಿ ಭಾವನೆಗಳಿಷ್ಟಾದರೂ ಇಲ್ಲದ, ಅವಿಚಾರಾಂಧರಾದ ನಮ್ಮನ್ನು ಪಡೆದುದರಿಂದ ಆ ತಾಯಿಗೆ ಅಷ್ಟಕಷ್ಟಕ್ಕೂ ಸಂತಾಪವಲ್ಲದೆ ಸಂತೋಷವೇ? ಹೆತ್ತ ತಾಯಿಯು ಒಡಲನ್ನು ಉರಿಸುವದು ಒಳ್ಳೆಯದೇ? "ದೇಶದ್ರೋಹಿಗಳು, ರಾಜಭಕ್ತಿ ವಿಹೀನರು, ಪ್ರಜಾಕೋಟಿಯಲ್ಲಿ ಹಿಂಸಕರು ಕ್ರೂರಜೀವಿಗಳು, ಮೂರ್ಖರು, ಸ್ವೋದರಂಭರಣಕ್ಕಾಗಿ ಪರಸ್ವಾಪಹಾರಿಗಳಾದ ನರಘಾತಕರು" ಇತ್ಯಾದಿ ಇತ್ಯಾದಿಯಾದ ಹಲವು ದುರ್ವಾಕ್ಯಗಳಿಗೆ ಪಕ್ಕಾಗಿಯೂ ನಮ್ಮ ದಾರಿಯನ್ನು ತಿದ್ದಿಕೊಳ್ಳದ ಜಡರೋಗಿಗಳಾಗಿರುವ ನಮ್ಮನ್ನು ನೋಡಿ, ನಮ್ಮ ನೆರೆಯವರೇನೆನ್ನುವರು? 'ಮಲಗಿದ್ದೆಡೆಯಲ್ಲಿ ಬಿದ್ದು, ಬಿದ್ದಾಡುವ ಆಲಸಗಾರರಿಗೆ ಬಲವು ಗೆಲವು ಎಲ್ಲಿಯದು? ಬಿದ್ದೆಡೆಯಲ್ಲಿಯೇ ಬಾಯ್ದೆರೆದು, ಬಂದ ಬಂದವರನ್ನು ಕಾಡಿ ಬೇಡಿ, ಹೊಟ್ಟೆಯನ್ನು ತುಂಬಿಕೊಳ್ಳುವ ಅಂಗಹೀನರಂತೆ, ಕಣ್ಣು, ಕೈ, ಕಾಲು ಇದ್ದೂ ಸುತ್ತಮುತ್ತಲ ಪರಿಸ್ಥಿತಿಗಳನ್ನು ಪರಿಶೀಲಿಸಲಾರದ, ನಿಜಕರ್ತವ್ಯಕ್ಷೇತ್ರದಲ್ಲಿ ಕೃಷಿಕ್ರಮವರಿತು ಉದ್ಯಮವನ್ನು ಹಿಡಿಯಲಾರದೆ, ಸುಖ ಸ್ವಪ್ನವನ್ನು ಕಾಣಬೇಕೆಂಬ ಭ್ರಾಂತಿಯಲ್ಲಿಯೇ ತಮ್ಮ ನರಜೀವಿತವನ್ನು ಕೊನೆಗಾಣಿಸುವ ಮೂರ್ಖತನಕ್ಕೆ ಮದ್ದೆಲ್ಲಿಯದು? .' ಎಂದೀ ಬಗೆಯಾಗಿ ನಮ್ಮನ್ನು ಹಾಸ್ಯಮಾಡಲಾರರೇ! ಹಾಗಾಗುವದಾದರೆ, ನಮ್ಮ ತಾಯಿಯು ಎಷ್ಟು ಬಗೆಯಿಂದ ಹಂಬಲಿಸಬಹುದೋ ಯೋಚಿಸಿರಿ, ಎಚ್ಚರಗೊಳ್ಳಿರಿ, ಏಳಿರಿ!

ದೇಶಬಾಂಧವರೇ! ಭಾಷಾಭೂಷಣರೇ! ಭ್ರಾತೃವತ್ಸಲೆಯರಾದ ಸಂಭಾವ್ಯ ಭಗಿನಿಯರೇ!! ನೀವಾದರೂ ಯೋಗನಿದ್ರೆಯ ಬಿಸೆ

ಯಿಂದ ಈ ನಮ್ಮವರ ಈಗಿನ ನಿದ್ರಾಲಸ್ಯಗಳ ಮೂಲವನ್ನು ತಿಳಿದೆಚ್ಚರಗೊಳ್ಳುವಂತೆ ಮಾಡಿರಿ ಬೇಸರಪಡಬೇಡಿರಿ, ಮತ್ಸರಿಸಬೇಡಿರಿ, ಆಗ್ರಹದಿಂದೊಗೆದು ಬಿಡಬೇಡಿರಿ!!! ನಿಮ್ಮ ಮಕ್ಕಳು ನಿಮ್ಮ ಊಡಿಯಲ್ಲಿ ಕೂಳಿ ಹೇಸಿಗೆಯನ್ನು ಮಾಡಿದ ಮಾತ್ರಕ್ಕೆ ಅವರನ್ನು ನೀವು ಒಂದೇ ಬಾರಿಗೆ ತ್ಯಾಗ ಮಾಡುವಿರೇನು? ಹಾಗಂತೆಯೇ, ಅಜ್ಞಾನದಿಂದ, ಅವಿವೇಕಾಂಧತೆಯಲ್ಲಿ, ಆಲಸ್ಯವೆಂಬ ಶಯ್ಯೆಯು ಮೇಲೊರಗಿ, ಉದಾಸೀನ ದುರಭಿಮಾನಗಳೆಂಬ ಚಿತ್ತನೆಯ ಹೊದ್ದಿಕೆಯನ್ನು ಹೊದ್ದು, ಆಶಾಪರತೆಯೆಂಬ ಕನವರಿಕೆಯಿಂದ, ವಿಷಯಪರಿತೃಪ್ತಿಯ, ವಿಡಂಬನವ್ಯಾಪಾರದ, ಪ್ರತಿಷ್ಠಾಕಾಮನೆಯ, ವಿವಿಧ ವಿಲಾಸಗಳ ಸಂಬಂಧವಾದ ಸುಖಸ್ವಪ್ನಗಳನ್ನು ಕಾಣುತ್ತ, ಇದೇ ಕಮಗೆ ಸ್ವರ್ಗಸುಖವೆಂದು ನಂಬಿ, ನಲಿದಾಡುತ್ತಿರುವ ನಮ್ಮ ಭಗಿನೀ ಬಂಧುಗಳಿಗೆ ಅಷ್ಟಿಷ್ಟಾದರೂ ತಿಳಿವೆಂಬ ಜಾಗ್ರತೆಯನ್ನು ಉಂಟುಮಾಡಿರಿ ಸುಹೃದರೇ! ಸಹೃದಯದಿಂದ ಸದುಪದೇಶವನ್ನಿತ್ತು ಎಚ್ಚರಿಸಿರಿ

ಇಷ್ಟಕ್ಕೆ ಸಾಕು,- ಬಾಂಧವರೇ! ಕೇವಲ ವಾಙ್ಮಾತ್ರದ ಶುಷ್ಕೋಪಚಾರವು ಇಲ್ಲಿಯವರೆಗೆ ಸಾಕು ಪ್ರಕೃತಿ,- ವ್ಯಕ್ತಿತ್ವಗಳಿಗೆ, ಆತ್ಮ, ಬುದ್ಧಿ-ಪ್ರಜ್ಞಾ, ಚಿತ್ತವೃತ್ತಿಗಳಿಗೆ ವಿಕಾಸವನ್ನುಂಟುಮಾಡುವ ಜ್ಞಾನೋದಯ ಪ್ರಕಾಶವನ್ನು ವಿಚಾರದೃಷ್ಟಿಯಿಂದ ತಿಳಿದು, ಕರ್ತವ್ಯಜಾಗ್ರತೆಯಿಂದ ಆಲಸ್ಯವೆಂಬ ಶಯ್ಯೆಯನ್ನೂ, ಉದಾಸೀನ, ದುರಭಿಮಾನಗಳೆಂಬ ಹೊದ್ದಿಕೆಗಳನ್ನೂ ತೆಗೆದೆಸೆದು, ಸತ್ಯತೀರ್ಥದಿಂದ ಸ್ನಾತರಾಗಿ, ದೇಶಭಕ್ತಿ, ಮಾತೃಪ್ರೇಮ ಗೌರವ, ಗುರುಜನವಿಧೇಯತೆ, ರಾಜಸೇವಾ-ರಾಷ್ಟ್ರಸೇವಾನಿಷ್ಠೆಗಳೆಂಬ ದಿವ್ಯಾಭರಣ ವಸ್ತ್ರವಿಭೂಷಿತ ಸರ್ವಾಂಗರಾಗಿ ಶೋಭಿಸುವದರಿಂದ, ನಮ್ಮ ಜನ್ಮಭೂಮಾತೆಯು ನಮ್ಮನ್ನು ನೋಡಿ ನೋಡಿ ಕಳೆಯೇರಿ, ನಲಿದಾಡುವಂತೆ ಪ್ರಯತ್ನಿಸಿರಿ! ಅದಕ್ಕಿದೇ ಸಕಾಲವು.

ನೋಡಿರಿ! ಹೃದಯಾಕಾಶದಲ್ಲಿ, ವಿವೇಕ ಜಿಜ್ಞಾಸವೆಂಬ ಸೂರ್ಯಬಿಂಬವು ಪ್ರಕಾಶಿಸುವ ಕುರುಹಿದೆಂದು ಸೂಚಿಸುವಂತೆ, ಅನುಕರಣ

ಶೀಲವನೆಂಬ ಅರುಣೋದಯವು ತೋರಿಬರುತ್ತಿದೆ. ಅರುಣೋದಯವನ್ನು ಕಂಡು, ಲೋಕಲೋಚನನ, ಆ ಜಗಜ್ಜೀವನನ, ತ್ರಿಕಾಲವಂದ್ಯನ ವಿಶ್ವವ್ಯಾಪಕತ್ವವನ್ನು ಕೊಂಡಾಡುವ ಪಕ್ಷಿಗಳ ಕೋಲಾಹಲಗಳೆಂಬಂತ ಕರ್ಮನಿಷ್ಠರಾದ ಮಹರ್ಷಿಗಳ ವೇದಪಾರಾಯಣಗಳ ದಿವ್ಯಘೋಷಗಳೆನ್ನುವಂತೆ, ಎಲ್ಲೆಲ್ಲಿಯೂ ಸಂಘ, ಸಮಾಜ, ಸಮುದಾಯ, ಸಭಾ, ಸಮ್ಮೇಲನ, ಸಮಾವೇಶ, ಸನ್ನಿವೇಶ, ಅಧಿವೇಶನಗಳೆಂಬ ಹಲವು ಸಂಸ್ಥೆಗಳೂ ಅವುಗಳ ಶಾಖೋಪಶಾಖೆಗಳೂ, ತಸ್ಸಂಬ ಘನವಾದ ಕಲಕಲನಿನಾದದ ದೇವದುಂದುಭಿಗಳೂ ಭೂನಭೋಂತರಗಳನ್ನು ವ್ಯಾಪಿಸಿ, ಸರ್ವ ಜಡಜೀವಿಗಳ ನಿದ್ರಾಜಡತೆಯನ್ನು ನಿವಾರಿಸಲು ಸಾರುತ್ತಿರುವವು. ಉದಯರಾಗದ ಉತ್ಸಾಹಾಮೋದವನ್ನು ಮನಸ್ಸಿಗೆ ಬೇರೂರುವಂತೆ ಮಾಡುವ ಸುಗಂಧಮಾರುತನ ಸಂಚಲನದಂತೆ, ಪರಸ್ಪರ ಸಹಾಯನಿಷ್ಠೆಯೆಂಬ ಪರಿಶುದ್ಧ ಭಾವನೆಯುತ್ಪನ್ನವಾಗಿ, ಪರಸ್ಪರರ ದೋಷರಾಶಿಗಳನ್ನು ತೂರಿಸಿ ಪವಿತ್ರವಾದ ಶಾಂತಿಸಂತೋಷಗಳನ್ನು ಹೆಚ್ಚಿಸುವ ಭರದಿಂದ ಸರ್ವರ ಘ್ರಾಣೇಂದ್ರಿಯವನ್ನು ಚನ್ನಾಗಿ ವ್ಯಾಪಿಸುತ್ತ ಬರುತ್ತಿರುವವು. ಇಷ್ಟು ಬಗೆಯ ಸನ್ನಾಹಗಳೂ ನಮ್ಮನ್ನು ಎಚ್ಚರಗೊಳಿಸಬೇಕೆಂದಾಗಿದ್ದರೂ, ನಾವು ಮುಸುಕಿಟ್ಟು ಮಲಗಿರುವದು ಸಹಜವಲ್ಲ. ಇದಕ್ಕೇ ಈ ನಿಮ್ಮ "ಸಂಜೀವನಪ್ಪ" ಹಿಂದೊಂದು ಬಾರಿ ಸಾರಿ, ಮತ್ತೆ ಇಂದೂ ಸಾರಿ ಸಾರಿ ನಿಮ್ಮನ್ನು ಎಚ್ಚರಿಸಲು ಬಂದಿರುವದು. ಮುಳಿಯದಿರಿ, ಹಳಿಯದಿರಿ. ಘಳಿಲನೆದ್ದು ಬಂದು, ಒಲಿದು ಹೇಳುವ ಎಳಗುವರಿಯ ತೊದಲ್ನುಡಿಯನ್ನು ಹಸನ್ಮುಖಿಸಿ ಕೇಳಿರಿ! ಅರಿಯದ ಹುಡುಗಿಯಾಡುವ ಅರೆನುಡಿಯೆಂದು ಜರೆದಾಡಬೇಡಿರಿ. ಇದೇ ನಮ್ಮವನು, ನನ್ನಲ್ಲಿ ಆವೇಶಿಸಿ, ಹೇಳಿರುವ "ಬಳ್ಳಿಡೆಗನ್ನಡಿ"ಯೆಂದರಿತು ಅನುಕರಣೆ ಮಾಡಿರಿ. ತಾಯಿಯರೇ! ಅಕ್ಕತಂಗಿಯರೇ!! ತಂದೆಯರೇ! ಎನ್ನೊಡಹುಟ್ಟಿದವರೇ!! ಇನ್ನು ನನ್ನನ್ನು ಬೀಳ್ಕೊಡಿರಿ, ಇಂದಿಗೆ, ಇಷ್ಟಕ್ಕೆ ವಿರಾಮವಿರಲೆಂದು ಬೆಸನಿತ್ತು, ಮತ್ತೆ ಬರುವಂತೆ ಹರಕೆಯೊಪ್ಪಿಸಿ ಕಳುಹಿರಿ. ಇನ್ನು ಹೊರಡುವೆನು, ಮತ್ತೆ ನಿಮ್ಮ ಸಂದರ್ಶನಕ್ಕೆ

ಬರುವ ವೇಳೆಗೆ ನೀವೇ ಮುಂದಾಗಿ ಎದ್ದು ಬಂದು, ಈ ನಿಮ್ಮ ಕಂದನ ನುಡಿಯನ್ನು ಅತ್ಯಾದರದಿಂದ ಅವಧರಿಸಿ, ಆದರಿಸಿ, ಉದ್ಧರಿಸುವವನ್ನು ಎಚ್ಚರಗೊಂಡಿರುವಿರೆಂದು ನಂಬಿ, ನಾನಿಂದು ಹೊರಡುವೆನು ಹೊರಡಲೇ? ಭರವಸೆ ಭಂಗತಾರದ ಭಗವತಿಯನ್ನು ಸಾಕ್ಷಿಯಾಗಿಟ್ಟು ಎಚ್ಚರಗೊಳ್ಳುವೆನೆಂದು ವಾಗ್ದಾನಮಾಡುವಿರಷ್ಟೆ? ಏನೆನ್ನುವಿರಿ? "ತಥಾಸ್ತು ಇದೋ ವಾಗ್ದಾನವಿತ್ತೆವು" ಧನ್ಯನಾದೆನು!!! ಹಾಗಿದ್ದರಿನ್ನು ಮುಂದಕ್ಕೆ ತೆರಳುವೆನು!

ಭಗವತಿ! ಅನುಗ್ರಹಿಸು! ಎಚ್ಚರಿಸು!! ಸುಪ್ರಭಾತದಿಂದ ಪ್ರಕಾಶಿಸು!!! (ಅಪ್ಪು)

---

॥ ಶ್ರೀ ॥

## ನಾನು ಏನಾಗಿರುವೆನು? *

ನಾನು ಏನಾಗಿರುವೆನು? ವಾಚಕರೇ! ನಾನು-ಏನಾಗಿರುವೆನು! ಹೇಳಿರಿ, ತಿಳಿದು ಹೇಳಿರಿ! ಏನು? ಏನಾಗಿರುವೆನು? ಏನೆನ್ನುವಿರಿ! ನಿಮಗೆ ಸ್ಫೂರ್ತಿಯಾಗುವುದಿಲ್ಲವೆನ್ನುವಿರೋ? ಅಹುದು,—ನಾನು 'ಏನಾಗಿರುವೆ' ನೆಂಬುದು ನನಗೇ ತಿಳಿಯದು! ಅಂತಹುದರಲ್ಲಿ ನಿಮಗೆ ಹೇಗೆ ಹೇಳಲಾಗುವುದು?

ಆದರೆ, ಕೇಳಿರಿ,—ನಾನು 'ಏನಾಗಿರುವೆ' ನೆಂಬುದನ್ನು ತಿಳಿಯಬೇಕಾದರೆ, ಮೊದಲು ನನ್ನ ಸ್ಥಿತಿ, ಗತಿ, ವೈಚಿತ್ರ್ಯಗಳನ್ನು ಮನನ ಮಾಡಿಕೊಳ್ಳಬೇಕಾಗುವುದು!

---

* ಈ ಲೇಖನವು ಉಡುಪಿಯಲ್ಲಿ ಹೊರಡುತ್ತಿರುವ ಶ್ರೀಕೃಷ್ಣಸೂಕ್ತಿ ಮಾಸಪತ್ರಿಕೆಯ ೬ನೇ ಸಂಪುಟದ ೬-೯ನೇ ಸಂಚಿಕೆಗಳಲ್ಲಿ [೧೯೧೩ನೇ ಡಿಸೆಂಬರ ೧೯೧೪ನೇ ಜನವರಿ, ಫೆಬ್ರುವರಿ ಮಾರ್ಚ] ಪ್ರಕಟವಾಗಿದ್ದಿತು. ಆದರೆ ಇದರ ಮುಂದಿನ ಲೇಖನಗಳು ಕೃಷ್ಣಸೂಕ್ತಿಯಲ್ಲಿ ಪ್ರಕಟಿಸಲ್ಪಡಲಾಗಲೇ ಇಲ್ಲವಾದುದರಿಂದಲೂ, ನಂದಿನಿಯ ಮೂಲಕ ಲೇಖನದ ಮೂಲತತ್ವವನ್ನು ನಿರ್ದಿಷ್ಟಗೊಳಿಸಬೇಕಾದುದು ಅವಶ್ಯಕವಾಗಿ ತೋರಿಬಂದುದರಿಂದಲೂ ಇದನ್ನು ಕೃಷ್ಣಸೂಕ್ತಿಯಿಂದ ಉದ್ಧರಿಸಿ ಪ್ರಕಟಿಸಿದೆ. ಇದರ ಮುಂದಿನ ಭಾಗವು ಮುಂದಿನ ಸಂಚಿಕೆಯಲ್ಲಿ ಬರುವದು. (ಸಂ.)

ಪ್ರಿಯ ಪಾಠಕರೇ! ನಾನು ಏನಾಗಿರುವೆನು? ನಾನೊಂದು ವಿಜಾತೀಯವಾದ ವ್ಯಕ್ತಿಯಾಗಿರುವೆನೆಂಬುದು ನಿಮಗೆ ತಿಳಿದಿರುವುದೋ! ಇಲ್ಲ; ಅದನ್ನು ಇನ್ನೂ ನೀವು ತಿಳಿದಿಲ್ಲ; ತಿಳಿಯಲೂ ಆರಿರಿ! ಹಾಗಿದ್ದರೆ ನೋಡಿರಿ,-ವಿಜಾತೀಯ ವ್ಯಕ್ತಿಯ ಸ್ವಭಾವ ಗುಣ-ರೂಪ-ಸ್ವಲಕ್ಷಣ್ಯಾಗಳಾವವೂ ಹೇಗಿರುವವೆಂಬುದನ್ನು ನೋಡಿ, ತಿಳಿದು, ಆನಂದಪಡಿರಿ! (?)

ಪ್ರಕೃತ, ನಾನೊಂದು ವಸ್ತುವನ್ನು ಪ್ರೀತಿಸಿರುವೆನು, ಅದನ್ನು ನಾನು, ನನ್ನ ವಶಗೊಳಿಸಲು ಯೋಚಿಸಿರುವೆನು, ಆದರೆ, ಅದು ನನಗೆ ಇನ್ನೂ ಬಹು ದೂರದಲ್ಲಿರುವುದ! ಅದು ನನ್ನ ಕಣ್ಣಿಗೆ ಕಾಣಿಸದು; ಆದರೂ ನಾನು ಅದನ್ನು ಕಂಡು ಹಿಡಿಯಬೇಕೆಂದು ದೃಢಸಂಕಲ್ಪ ಮಾಡಿರುವೆನು! ಅದಕ್ಕೆ ಅನುಗುಣವಾಗಿಯೇ ಸತತಯತ್ನದಲ್ಲೂ ಇರುವೆನು!!! ಆ ನನ್ನ ಪ್ರಿಯವಸ್ತುವನ್ನು ನೋಡುವ ಸಲುವಾಗಿಯೇ ನಾನು ಎಂತಹ ಕಷ್ಟಗಳನ್ನಾದರೂ ಸಹಿಸುತ್ತಲಿರುವೆನು! ಎಷ್ಟು ದೂರ ಬೇಕಾದರೂ ಹೋಗಿ ಬರುವೆನು ಎಂತಹ ಭಾರವನ್ನಾದರೂ ಹೊರಲು ಸಿದ್ಧನಾಗಿರುವೆನು, ಆದರೂ ಅದು ನನ್ನ ದೃಷ್ಟಿಗೆ ಗೋಚರವಾಗದಿರುವುದು!' ಹೀಗಾದ ಬಳಿಕ ನಾನು ಏನಾಗಿರುವೆನು? ವಾಚಕರೆ! ದಯವಿಟ್ಟು ಹೇಳಬಲ್ಲಿರೇ?

ನನ್ನ ಗಮನ ಶಕ್ತಿಯಾದರೂ, ಎಂತಹದೆಂದು ಬಲ್ಲಿರಾ ವಾಚಕರೇ! ನೋಡಿರಿ! ಕಗ್ಗತ್ತಲೆಯು, ಕಾವಳ, ಕಠೋರತಾಮಸಿಯು, ಮಹಾರಣ್ಯವನ್ನಾದರೂ ಭೇದಿಸಿಕೊಂಡು ಹೋಗುವೆನು! ಕಾನನದ ಕ್ರೂರ ಮೃಗಗಳೊಡನಾದರೂ ಹೋರಾಡುವೆನು!! ಅಷ್ಟೇ ಅಲ್ಲ! ಅತ್ಯದ್ಭುತ ಪ್ರಭಾವವನ್ನುಳ್ಳ ನಾನು, ಒಂದು ಸಣ್ಣ ಇರುವೆಯ ದೇಹವನ್ನಾದರೂ, ಹೊಕ್ಕು, ಹೋಗಿ, ಅಲ್ಲಿಯ ವಿಶೇಷ ವಿಷಯಗಳನ್ನು ತಿಳಿದು ಹೊರಡುವೆನು!!! ಅಷ್ಟಾದರೂ,-ಅಂತಹ ಗಮನ ಶಕ್ತಿಯುಳ್ಳವನಾಗಿದ್ದರೂ, ನನಗೆ ಆ ನನ್ನ ಪ್ರಿಯತಮ ವಸ್ತು ಜೀರೆ, ಇನ್ನೂ ದೃಗ್ಗೋಚರವಾಗಿಲ್ಲ! ಆದ್ದರಿಂದ, ನಾನು ಏನಾಗಿರುವೆನೆಂಬುದನ್ನು ಈಗಲಾದರೂ ತಿಳಿದು ಹೇಳಬಲ್ಲಿರೇ!

OSMANIA UNIVERSITY
COLLEGE LIBRARY

ಶರತ್ಕಾಲದ, ಪೌರ್ಣಿಮಾ-ಕೌಮುದಿಯ, ಕಡುಮೋಹನೆಯಾದಾ ವನರಾಜ್ಯಲಕ್ಷ್ಮಿಯು, ದಿವ್ಯಸಾಮ್ರಾಜ್ಯವನ್ನಾದರೂ ಸಮಾಹಿತ ಚಿತ್ತದಿಂದ, ಅವಲೋಕಿಸಿಬಿಡುವೆನು! ಅದರ ಸಮಾಲೋಚನೆಯಿಂದ ಆನಂದವು ಮೇರೆಮೀರುವುದು!! ಮಿತಿಮೀರಿದ ಆನಂದೋತ್ಸಾಹಗಳಿಂದ, ಆ ನನ್ನ ಪ್ರಿಯತಮ ವಸ್ತುವನ್ನು ಹುಡುಕಲು ಸ್ವೇಚ್ಛೆಯಾಗಿ ಸಂಚರಿಸಿಬಿಡುವೆನು!! ಆಗ ನನ್ನನ್ನು ಅಡ್ಡಯಿಸುವುದಕ್ಕಾಗಲೀ, ಆದರಿಸುವುದಕ್ಕಾಗಲೀ, ಆರೂ ಸಮರ್ಥರೆಂದು ಮುಂದೆ ಬರಲಾರರು!' ಇಂತಹ ಸ್ಥಿತಿಯಲ್ಲಿ—'ನಾನೇ ದಿಗ್ವಿಜಯಿ! ನನ್ನನ್ನು ತಡೆದು ನಿಲ್ಲಿಸುವಂತಹ ಸಾಹಸಿಗಳು, ಪೃಥ್ವಿಯಲ್ಲಿಯೇ ಇಲ್ಲ!!" ಹೀಗೆಂದು ನನ್ನಲ್ಲಿ ನಾನೇ, ಭಾವಿಸಿ ಭಾವಿಸಿ, ಉನ್ಮಾದಾವಸ್ಥೆಯಿಂದ ತಿರುಗತೊಡಗುವೆನು ಅಷ್ಟು ಮಾತ್ರದಿಂದಲೇ ನನಗೆ ತೃಪ್ತಿಯಾದೀತೆಂದು ತೋರುವದಿಲ್ಲ! ಇನ್ನೂ ಹಾಡುವೆನು, ತಿರುತಿರುಗಿ ನೋಡುವೆನು, ಕಯ್ನೀಡಿ ಬೇಡುವೆನು!!! ಏತಕ್ಕೋಸುಗ? ಆ ನನ್ನ ಪ್ರಿಯವಸ್ತುವಿನ ಲಾಭಕ್ಕೋಸುಗ! ಅದಕ್ಕೆಂದು, ನನ್ನ ಸರ್ವಸ್ವವನ್ನಾದರೂ ನೀಡುವೆನು!!! ಕಡುದೈನ್ಯದಿಂದ ಗೋಳಿಡುವೆನು'!! ಆಗಲೂ, ಅದು ಸಿದ್ಧಿಯಾಗದೆ ಹೋಗಲು, ಕ್ರೋಧದಿಂದ ಮೆಯ್ಮರೆದು, ಕಡು ಮೋಹನೆಯಾದ ಆ ವನಲಕ್ಷ್ಮಿಯ, ಅನಂತವಾದ ಆ ಆನಂದಸಾಮ್ರಾಜ್ಯದ, ಉನ್ಮಾದಕಾರಿಣಿಯಾದ ಆ ಚಂದ್ರಿಕೆಯ ಆ ಪೌರ್ಣಿಮಾಯುಕ್ತವಾದ ಶರತ್ಕಾಲದ ಸಮಸ್ತಭಾಗಗಳಿಗೂ, ನನ್ನ ದ್ವೇಷ-ರೋಷಾಗ್ನಿ ಶರಪರಂಪರೆಗಳನ್ನು ಪ್ರಯೋಗಿಸಿ, ಕ್ಷಣಮಾತ್ರದಲ್ಲಿಯೇ ಅವುಗಳು, ನಾಮಾವಶೇಷಿತವಾಗಿ, ಭಸ್ಮಾವಸ್ಥೆಯನ್ನು ಹೊಂದುವದನ್ನು ನೋಡಿ, ಹಿಂದಿರುಗಿ ಬಿಡುವೆನು!!! ಆಗಲೂ ನನ್ನ ಮನಸ್ಸು ಶಾಂತವಾಗದು! ರೋದಿಸುವೆನು! ಬರಿಯ ನೀರವ ರೋದನವಲ್ಲ, ಪ್ರಳಯಕಾಲದ ಮಹಾಮೇಘಸಮೂಹದ, ಭಯಂಕರ ನಿನಾದವನ್ನು ಧಿಕ್ಕರಿಸುವಂತೆ, ಆಕ್ರಂದಿಸುವೆನು!! ಆ ನನ್ನ ಆಕ್ರಂದನದಿಂದ ದಿಗ್ದಿದಿಕ್ಕುಗಳೇ ಬೆದರಿ ಹೋಗುತ್ತಿರುವದನ್ನು ನೋಡುವೆನು!!! ಇಷ್ಟಾದರೂ ಆ ನನ್ನ ಪ್ರಿಯವ

ಸ್ತ್ರೀತ್ವ ಗೋಚರನಾಗವಿರಲು, ಮರ್ಮಾಂತಿಕವಾದ ಯಾತನೆಯನ್ನು ತಡೆಯಲಾರದೆ, ಸ್ತಂಭೀಭಾವದಿಂದ ಕುಳಿತುಬಿಡುವೆನು!!! ಆಗಳಿನ ನನ್ನ ಸ್ಥಿತಿಯಾದರೂ ಏನಾಗಿರಬಹುದು? ಹೇಳಬಲ್ಲಿರೇ?

ಅಂತಹ ವಿಷಮ ಸ್ಥಿತಿಗೆ ಕಾರಣವೇನೆಂದು ತಿಳಿದಿರುವಿರಿ? ನನ್ನ ಪ್ರಕೃತಿ, ರೂಪ, ಗುಣ, ಸ್ವಭಾವ, ಅವುಗಳೇ ಅಲ್ಲದೆ ಬೇರೆಯಿಲ್ಲವೆಂದು ತಿಳಿಯಿರಿ! ಆ ನನ್ನ ರೂಪವಾದರೂ ಎಂತಹುದೆಂದು ಕೇಳಬೇಕೆ? ಅಹಾ! ಹಾ! ಹಾ! ಊಹಿಸಲಾಗದ ರೂಪ; ಹೇಗೆನ್ನುವಿರಲ್ಲವೆ? ಆರಾದರೂ ನನ್ನನ್ನು ಪುರುಷ, ಅಥವಾ "ಪುರುಷರೂಪ" ವೆಂದು ಹೇಳಿದರೆ, ಆಗಲೇ ಒಡನೆಯೇ, ನಾನೊಂದು ಸ್ತ್ರೀಜಾತಿ ಮಧ್ಯದಲ್ಲಿ ಸ್ತ್ರೀಪ್ರಕೃತಿಯ ಸಮಾವೇಶದಲ್ಲಿ ಸ್ತ್ರೀಜಾತಿ ಸಾಮಾನ್ಯಚಂಚಲವೃತ್ತಿಯಲ್ಲಿ, ತಲೆದೋರುವೆನು! ಆಗ ನನ್ನನ್ನು ಮೊದಲು ಪುರುಷರೂಪವೆಂದು ಭಾವಿಸಿದವರೇ ತಮ್ಮ ತಿಳಿವಳಿಕೆಗೆ ಮರುಕಗೊಂಡು ಸ್ತ್ರೀರೂಪವೆಂದು, ಮುಂದೆ ಬಂದು ನಿಂದರೆ, ಆ ಕ್ಷಣದಲ್ಲಿಯೇ ನಾನು ಮೆಯ್ಗರೆದು, ಅವರ ಹಿಂದೆಯೇ, ಪುರುಷಸಮೂಹದಲ್ಲಿಯೇ, ಅವರಿದಿರಿನಲ್ಲಿಯೇ ಧೀರ ಮಾನವನಂತೆ ಸಾರಜ್ಞಾನಬೋಧಕನಂತೆ ಕಾಣಿಸಿಕೊಳ್ಳುವೆನು!! ರೂಪನಿರ್ದೇಶದಲ್ಲಿ ಭ್ರಾಂತವಾಗಿ ಹೋದ ಸ್ತ್ರೀಪುರುಷವರ್ಗವನ್ನು ಬಗೆಬಗೆಯಾದ ಪರಿಹಾಸ್ಯವಾಕ್ಯಗಳಿಂದ ಉನ್ಮತ್ತ ಕಪಿಗಳಂತೆ ಕುಣಿಸಿ ಕುಣಿಸಿ ಬಿಡುವೆನು!!! ಅಷ್ಟೇ ಅಲ್ಲ, ಆಗಲಾದ ಭಾವನಾಲೋಕದಲ್ಲಿ ಸ್ಥಿರವಾಗಿ ನಿಲ್ಲುವನೆಂದು ಭಾವಿಸಲಾಗದು! ಕ್ಷಣಮಾತ್ರದಲ್ಲಿಯೇ ಆ ಪುರುಷಭಾವವನ್ನು ಬಿಟ್ಟು, ಮೂಕಜೀವಿಯಾದ ಆ ಜಂಗಮ ಪ್ರಾಣಿಯಂತಾಗಿ ಅವರ ಮುಂದೆ ಬಂದು ನಿಲ್ಲುವೆನ!! ಆಗಲವರ ತಿರಸ್ಕಾರ, ಪರಿಹಾಸ, ಸಮಾದರಗಳನ್ನು ಸಮವಾಗಿ ಕಯ್ಕೊಂಡು ವಿಶೇಷವಾಗಿ ಅವರನ್ನು ಗಾಂಪಿಸುವಂತೆ ತೋರಪಡಿಸುವೆನು!!! ಆಗಳಿನ ನನ್ನ ಸಾಧು ಭಾವನೆಗೆ ಸುಪ್ರೀತರಾದ ವಂದೇಶಧಾರಿಗಳು ನನ್ನನ್ನು ಹಿಡಿಯಬರುವದನ್ನು ನೋಡಿ, ನಾನು ನಿಂತಲ್ಲಿಯೇ ನನ್ನ ಪ್ರಣಯಿತ ವಸ್ತುವನ್ನು ಕಾಣುವ ಕೌತುಕದಲ್ಲಿಯೇ, ಮೆಯ್ಗರೆದು ಬಿಡುವೆನು!!!

ಇಂತಹ ನನ್ನ ಸ್ಥಿತಿ ಗತಿ ರೂಪಗಳಿಂದ ಈ ಅಖಂಡ ಜಗತ್ತನ್ನೇ ಜಯಿಸಿರುವೆನಾದರೂ ನಾನು ಆ ನನ್ನ ಪ್ರಿಯವಸ್ತುವನ್ನು ಬೇರೆ ಕಾಣದಿರುವೆನ! ಅದರೂ ಆ ನನ್ನ ಅತ್ಯುತ್ಕಟೇಚ್ಛೆಯು ಕಯ್ಗೂಡದ ಮುನ್ನ ಈಗ ನಾನು ಏನಾಗಿರುವನೆಂದು ತಿಳಿವಿರಾ' ವಿಜಾತೀಯವ್ಯಕ್ತಿ'ಯೆಂದು ಮೊದಲೇ ಹೇಳಿದ್ದೆನ! ಕೇಳುವಿರೋ ಅದು ಹೇಗೆಂಬುದನ್ನು? ಮೊದಲು ಸಜಾತೀಯ ವ್ಯಕ್ತಿಯೇ ಆಗಿದ್ದನು! ಅವರೆ ನನ್ನ ಸಜಾತೀಯ ಮುಖ್ಯ ಧರ್ಮವಿನಾ, ಉಳಿದ ಕರ್ಮವಿಶೇಷಗಳಿಗೆ ಜಲಾಂಜಲಿಯೊಪ್ಪಿಸಿ, ಅನ್ಯಜಾತೀಯವಾದ ಅನುಚಿತ ವ್ಯಾಪಾರಗಳನ್ನು ನೋಡಿ ಮನಗುಂದಿ ಮಂದತ್ವದಿಂದ ಮಧ್ಯದಲ್ಲಿ ನಿಂದು ಬೇರೊಂದು ಉತ್ತಮೋತ್ತಮ ವಸ್ತುವನ್ನು ಕಾಮಿಸಿ, ಕಾಮಿಸಿ, ಹಂಬಲಿಸುತ್ತಿರುವೆನೆಂಬದಾಗಿ ಈಗ ನಾನು ವಿಜಾತೀಯ ವ್ಯಕ್ತಿಯಾಗಿರುವೆನು!! ಸಾಧಕರೇ! ಈಗ ಹೇಳಿರಿ, ಇನ್ನೊಮ್ಮೆ ಚನ್ನಾಗಿ ನಿರೀಕ್ಷಿಸಿ ಹೇಳಿರಿ, ನಾನು ಏನಾಗಿರುವೆನೆಂಬುದನ್ನು ಮತ್ತೊಮ್ಮೆ ಸ್ಥಿರಚಿತ್ತದಿಂದ ಸಮಾಲೋಚಿಸಿ ತಿಳಿಯಹೇಳಿರಿ!!

ಇನ್ನು ನನ್ನ ಪ್ರಣಯಿತ ವಸ್ತುವು ಅಥವಾ ನನ್ನ ಪ್ರಣಯಿನೀ ಮೂರ್ತಿಯು ಆವುದೆಂಬದನ್ನು ನಾನ ಮುಂದಿನ ಅಂಕದಲ್ಲಿ ನಿಮಗೆ ತಿಳಿಯಿಸ ಬರುವೆನು ಈಗಳಿದೋ ಹೊರಟೆನು! ನಿಮಗೆಲ್ಲರಿಗೂ ವಂದನೆಗಳು!!!

ಇತಿ— "ಅನಾಮಧೇಯ ವ್ಯಕ್ತಿ."

---

## ಸ್ವೀಕಾರ

(ಈ ಕೆಳಗೆ ವಿವರಿಸಲ್ಪಡುವ ಪುಸ್ತಕಗಳು ನಮ್ಮ ಸತೀಹಿತೈಷಿಣೀ ಪುಸ್ತಕಮಂದಿರವನ್ನಲಂಕರಿಸಿರುವುವು ಇವುಗಳನ್ನು ಕಳುಹಿದ ನಮ್ಮ ಸನ್ಮಾನನೀಯ ಭ್ರಾತೃವರ್ಗೀಯರಿಗೆಲ್ಲಾ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಈ ಮೂಲಕ ಸಮರ್ಪಿಸುವದಲ್ಲದೆ, ಅವಕಾಶವಾದಂತೆ ಇವುಗಳ ವಿಷಯಕವಾದ ಅಭಿಪ್ರಾಯವನ್ನು ಪ್ರಕಟಿಸುವೆವೆಂದೂ ಸೂಚಿಸಿರುವೆವು)

1

(ಪಿತೃವತ್ಪೂಜ್ಯರೂ, ಶಿಷ್ಯವತ್ಸಲರೂ, ಹಿತೈಷಿಣೀ-ಸಂದಿನಿಯರ ಮುಖ್ಯ ಪ್ರೋತ್ಸಾಹಕರೂ ಆಗಿರುವ ಶ್ರೀಮಾನ್ ಎಮ್. ವೆಂಕಟ ಕೃಷ್ಣಯ್ಯನವರ ಕಡೆಯಿಂದ ಬಂದವು)

೧ ಬೂಕರ್ ಟಿ ವಾಷಿಂಗಟನ್‌ರವರ ಚರಿತ್ರೆ (ಅಪ್ಪರ್ ಸೆಕೆಂಡರಿ ಟೆಕ್ಸ್ಟ್ ಬುಕ್) ಬೆಲೆ ೧ ರೂ ೨ ಧನಾರ್ಜನೆಯ ಕ್ರಮ [ಅಪ್ಪರಸೆಕೆಂಡರಿ ಟೆಕ್ಸ್ಟ್ ಬುಕ್) ಬೆಲೆ ೮ ಆಣೆ. ೩ ಪರಂತಪ ವಿಜಯ ಬೆಲೆ, ೮ ಆಣೆ ೪ ಹರಿಶ್ಚಂದ್ರ ಚರಿತ್ರೆ ೮ ಆಣೆ ೫ ಚೋರಗ್ರಹಣತಂತ್ರ ೪ ಆಣೆ.

2

(ಶ್ರೀಯುಕ್ತ, ಬಿ. ರಾಮರಾವ ಎಮ್ ಏ, ಎಲ್ಎಲ್ ಬಿ ಇವರಿಂದ)

೬. ಸದಾಚಾರ ವಿವೇಚನೆ (ಕಾದಂಬರಿ ಸಂಗ್ರಹ ಪತ್ರಿಕೆಯ ಗ್ರಂಥ ಸಂಖ್ಯೆ ೧೪) ಬೆಲೆ, ೨ ಆಣೆ ೭ ರಮಾಮಾಧವ (ಸುವಾಸಿನೀ ಪತ್ರಿಕೆಯಿಂದ ಉದ್ಧೃತ, ದ್ವಿತೀಯ ಮುದ್ರಣ, ಮೈಸೂರ ಸೀಮೆಯ ಅಪ್ಪರ ಸೆಕಂಡರಿ ತರಗತಿಯ ಪಠ್ಯಪುಸ್ತಕ) ಬೆಲೆ, ತಿಳಿಸಿಲ್ಲ.

3

(ಶ್ರೀಯುಕ್ತ, ಕೆ ರಾಮಸ್ವಾಮಯ್ಯಂಗಾರ್ಯರು, ಎ ವಿ ಸ್ಕೂಲ್ ಮಾಸ್ತರು ಮಾಗಡಿ, ಇವರಿಂದ)

೮ ಚಂದ್ರಕಲಾಕಲ್ಯಾಣ ಬೆಲೆ ೮ ಆಣೆ, ೯, ಸತೀಹಿತೋಪದೇಶ (ಶ್ರೀಕೃಷ್ಣಸೂಕ್ತಿ ಗ್ರಂಥಮಾಲಿಕೆ ಸಂಖ್ಯೆ ೧೫) ಬೆಲೆ ೩ ಆಣೆ, ಜಾತಿಯರಿಗೆ ಮಾತ್ರ ೨ ಆಣೆ, ೧೦ ಶಿಲ್ಪಪ್ರದರ್ಶಿನಿ ೨ ಆಣೆ, ೧೧ ಸುಕನ್ಯಾಚರಿತ್ರೆ (ವಿನೋದಿನಿ ಪತ್ರಿಕೆಯಿಂದ ಉದ್ಧೃತ, ಪದ್ಯಪುಸ್ತಕ) ಬೆಲೆ ೪ ಆಣೆ, ೧೨ ಬಾಲಿಕಾ ನೀತಿಮಾಲೆ, ೧೩. ರಾಜಭಕ್ತಿಸಾರಂ (ಇವುಗಳಿಗೆ ಬೆಲೆಯನ್ನು ಸೂಚಿಸಿಲ್ಲ)

4

(ಶ್ರೀಮಾನ್ ಹಲಕೂರು ವೆಂಕಟರಮಣಯ್ಯನವರಿಂದ)

೧೪ ಶ್ರೀಹರಿ ಸ್ಮರಣಾನಂದಿನಿ (ಹಾಡಿನ ಪುಸ್ತಕ) ಬೆಲೆ ೨ ಆಣೆ, ೧೫ ಸುಶೀಲಾ ಚರಿತ್ರಂ ಬೆಲೆ ೬ ಆಣೆ, ೧೬ ಶ್ರೀರಾಮಾಭಿಧಾನ ಶ್ರೀ ಸೋಮಾಭಿಧಾನ ಸುಧಾಸಾರಂ ೬ ಪೈ, ೧೭ ಸತಿಯ ಸಹಾಯ ಬೆಲೆ ೬ ಪೈ

5

(ಶ್ರೀಯುಕ್ತ ಉ|| ಭಾ|| ಪಂಡಿತರು ಜಿ ಅಪ್ರಮೇಯ ಅಯ್ಯಂಗಾರ್ಯರ ಕಡೆಯಿಂದ)

೧೮ ಸಕಲ ಪ್ರಮಾಣ ತಾತ್ಪರ್ಯ ಬೆಲೆ ೧ ರೂಪಾಯಿ, ೧೯ ತತ್ವಸಾರಸಂಗ್ರಹ ಬೆಲೆ ೧೦ ಆಣೆ, ೨೦-೨೭ ಪುರುಷಾರ್ಥ ಕಲ್ಪದ್ರುಮ ಪ್ರಥಮಸ್ಕಂಧ ಸಂಖ್ಯೆ ೧, ೨, ೩ ತೃತೀಯಸ್ಕಂಧ, ಸಂಖ್ಯೆ ೧, ೨, ೩, ಪಂಚಮಸ್ಕಂಧ ಸಂಖ್ಯೆ ೧ ಆಂಗ್ಲೇಯ ಸಾಮ್ರಾಜ್ಯವೈಭವ (ಇವುಗಳಾವುದಕ್ಕೂ ಬೆಲೆಯನ್ನು ಸೂಚಿಸಿರುವುದಿಲ್ಲ)

6

(ಶ್ರೀಯುಕ್ತ, ಎಚ್ ಚಿದಂಬರಯ್ಯ, "ಕರ್ನಾಟಕಕವಿರತ್ನ" ಪರಮಾರ್ಥ ಪತ್ರಿಕಾ ಪೂರ್ವ ಸಂಪಾದಕ, ಕುರ್ತಕೋಟಿ, ಶ್ರೀರಾಮಮಂದಿರಂ ಇವರ ಕಡೆಯಿಂದ ಬಂದವುಗಳು)

೨೮ ಹರೇರಾಮ ಮಂತ್ರ ಪ್ರಶಂಸೆ (ಪದ್ಯಪುಸ್ತಕ) ೬ ಪೈ, ಪರಮಾರ್ಥ ಗ್ರಂಥಮಾಲಾ ಸಂಖ್ಯೆ) ೨, ೨೯ ಪರಮಾತ್ಮಸ್ತುತಿ (ಪದ್ಯಪುಸ್ತಕ ಪ ಗ್ರ. ಸಂ ೩ ಬೆಲೆ ೨ ಆಣೆ) ೩೦ ವಾಲ್ಮೀಕಿಯ ಜಯ (ಪ ಗ್ರಂ ಸಂ. ೪ ಬೆಲೆ ೬ ಆಣೆ) ೩೦ ಆರ್ಯಮತಸಾರ (ಪ. ಗ್ರಂ ಸಂ. ೫) ಬೆಲೆ ೩ ಆಣೆ ೩೧ ಸೂಕ್ತಿವಳಿ (ಪ ಗ್ರಂ ಸಂ ೭) ಬೆಲೆ ೨ ಆಣೆ ೩೨ ಭಗವತ್ಸ್ಮರಣಸ್ತೋತ್ರಂ (ಪ ಗ್ರಂ ಸಂ ೬) ಬೆಲೆ ೩ ಆಣೆ ೩೩ ಭಕ್ತಿಯೋಗ (ಪ ಗ್ರಂ. ಸಂ ೮) ಬೆಲೆ ೮ ಆಣೆ ಈ ಎರಡು ಗ್ರಂಥಗಳೂ ಶ್ರೀ|| ವೈ ಸುಬ್ಬರಾಯುಡವರಿಂದ ವಿರಚಿತವಾದವುಗಳು].

7

(ಎಮ್. ಟಿ ವಲ್ಲಭಯ್ಯಂಗಾರ್ಯರವರ ಕಡೆಯಿಂದ ಬಂದವುಗಳು)

೩೩ ಮಾಲಿನೀ (ಕಾದಂಬರೀ ಸಂಗ್ರಹ ಗ್ರಂಥಮಾಲೆ ಸಂಖ್ಯೆ ಲ) ಬೆಲೆ ೨ ಆಣೆ, ೩೪ ಪೇಷ್ವೆ ನಾರಾಯಣರಾವ್ (ಇದರ ಬೆಲೆ ತಿಳಿಸಿಲ್ಲ) ೩೫ ಸಚಿತ್ರ ಕಲಾತರಂಗಭಾಗ ೧, ಬೆಲೆ ೧ ರೂಪಾಯಿ (ಶ್ರೀ ಬಿ ಆರ್ ಗೋವಿಂದರಾಜುಲುಯವರಿಂದ ವಿರಚಿತವಾದದ್ದು)

8

(ಕ್ಯಾಕ್ಸ್ಟನ್ ಬ್ರಾಂಚ ಮುದ್ರಾಲಯದವರ ಕಡೆಯಿಂದ ಬಂದವುಗಳು)

೩೬ ಭಾರತಸಾಮ್ರಾಜ್ಞೀಮಣಿಯರ ಇತಿಹಾಸಮಂಜರಿ ಬೆಲೆ ಲ ಆಣೆ ೩೭ ವಿಕ್ಟೋರಿಯಾ, ಬೆಲೆ ೧ ಆಣೆ, ೩೮ ಗ್ಲಾಡಸ್ಟನ್‌ರವರ ಮಹಿಮೆ ೧ ಆಣೆ, ೩೯ ನನ್ನ ಆಚಾರ್ಯ ೩ ಆಣೆ, ೪೦ ಭಾರತಕಥಾಸಾರಸಂಗ್ರಹ (ದ್ವಿತೀಯ ಮುದ್ರಣ) ೨ ಆಣೆ, ೪೧ ಜನಗಳಲ್ಲಿ ಕಾರ್ಯನಿರ್ವಾಹ ಶಕ್ತಿಯನ್ನು ಹೆಚ್ಚಿಸುವುದು ಹೇಗೆ? ಬೆಲೆ ೪ ಆಣೆ

9.

ಶ್ರೀ. ವೈ ಕೆ ರಾಮಚಂದ್ರರಾವ, ಬಿ ಎ, ಎಲ್. ಟಿ. ಈ. ಯವರಿಂದ)

೪೧ ಕಲಿಯುಗ (ಗ್ಲಾಡಸ್ಟನ್‌ರವರ ಮಹಿಮೆ, ನನ್ನ ಆಚಾರ್ಯ, ಜನರಲ್ಲಿ ಕಾರ್ಯನಿರ್ವಾಹ ಶಕ್ತಿಯನ್ನು ಹೆಚ್ಚಿಸುವದು ಹೇಗೆ? ಭಾರತ ಕಥಾಸಾರಸಂಗ್ರಹ, ವಿಕ್ಟೋರಿಯಾ ಎಂಬೀ ಪ್ರಬಂಧಗಳನ್ನು ಒಳ ಕೊಂಡು, ಸಿಲ್ಕ ಬೈಂಡಿನಿಂದ ಅಂದವಾಗಿ ಕಟ್ಟಲ್ಪಟ್ಟಿರುವುದು )

10

("ಪ್ರಾಕ್ತನವಿಮರ್ಶವಿಚಕ್ಷಣ, ರಾವಬಹಾದ್ದೂರ ಶ್ರೀಯುತ ಆರ್, ನರಸಿಂಹಾ ಚಾರ್ಯ ಎಮ್. ಎ, ಎಮ್. ಆರ್. ಎ. ಎಸ್. ಅವರಿಂದ]

೪೨ ನೀತಿಮಂಜರಿ ಪ್ರಥಮಭಾಗ (ಪದ್ಯಪುಸ್ತಕ) ಬೆಲೆ ೧೨ ಆಣೆ ೪೩ ನೀತಿಮಂಜರಿ ದ್ವಿತೀಯಭಾಗ ೧೦ ಆಣೆ ೪೪ ನಗೆಗಡಲು ೬ ಆಣೆ

11

(ಶ್ರೀ. ಗುರುರಾವ್, ರಾಘವೇಂದ್ರರಾವ್ ಜಮಖಂಡಿ, ಇವರಿಂದ)

೪೫ ಇಂದಿರಾ(ಸಂಗೀತನಾಟಕ) ಬೆಲೆ ೧ ರೂಪಾಯಿ, ೪೬ ತಾರಾ

ಸಂಗೀತನಾಟಕ ಬೆಲೆ ೧೨ ಅಣೆ, ೪೭ ಕೃಷ್ಣಾಕುಮಾರಿ ಸಂಗೀತ ನಾಟಕ ಬೆಲೆ ೮ ಅಣೆ.

12

(ಶ್ರೀಯುಕ್ತ ಸಿ ವೆಂಕಟರಮಣಶಾಸ್ತ್ರಿ, ಕಾದಂಬರೀ ಸಂಗ್ರಹಕರ್ತರು ಮೈಸೂರು ಇವರಿಂದ)

೪೮ ಕಾದಂಬರೀ ಸಂಗ್ರಹ, ಸಂಪುಟ ೧ (ಮೃತ್ಯುಪರೀಕ್ಷೆ, ದೈವಾನುಗ್ರಹ ಏನೋ ಆಗಿ ಹೋಯಿತು ವಿಲಕ್ಷಣ ದೈವಘಟನೆ, ವಿರಕ್ತಳಾದ ಸೌದಾಮಿನಿ, ಬೃಂದಾವನ, ಸುಮನೋರಮಾ ಕುಮಾರಭೀಮಸಿಂಹಗಳೆಂಬ ಕಾದಂಬರೀ ಲೇಖನಗಳನ್ನೊಳಕೊಂಡಿರುವದು ಬೆಲೆ ೧ ರು ೪ ಅಣೆ ೪೯ ದಕ್ಷಿಣಾಮೂರ್ತಿಸ್ತೋತ್ರಂ, ೫೦ ಬಿಳಿಗಿರಿ ರಂಗನಾಥ ಮಹಿಮಾ (ಬೆಲೆ ತಿಳಿಸಿಲ್ಲ )

13

(ಶ್ರೀಯುತ, ಎನ್ ಸುಬ್ರಹ್ಮಣ್ಯಯ್ಯನವರು, ನಂಜನಗೂಡು ಇವರಿಂದ)

೫೧—೫೪ ಸಂಯಮ, ಹಾರ್ಡಿಂಜ್ ಪ್ರಭಾವ, ಮಕ್ಕಳ ಗೋಪಾಲಕೃಷ್ಣ, ನಮ್ಮ ಮಹಾರಾಜರವರು (ಬೆಲೆಯಿಲ್ಲ. ಬೇಕಾದವರು ಹಾಸಲು ಕಳುಹಿಸಿ, ಪುಸ್ತಕಗಳನ್ನು ಪಡೆಯಬಹುದಾಗಿದೆ )

14

(ಶ್ರೀ ಎಮ್ ಎನ್ ಕಾಮತ್. ಬಂಟವಾಳ, ಇವರಿಂದ)

೫೫ ಚಂಡಕೌಶಿಕ, (ಆನಂದ ಪತ್ರಿಕೆಯ ೪-೫ ನೇ ಸಂಚಿಕೆ) ಬೆಲೆ ೨ ಅಣೆ ಮತ್ತು "ಆನಂದ" ಪಕ್ಷಪತ್ರಿಕೆಯ ೧, ೨ ನೆ ಸಂಚಿಕೆಗಳು ಬಂದಿವೆ.

15

ಶ್ರೀಮತಿ, ಸುಂದರವಲ್ಲೀಯವರು ಬೆಂಗಳೂರು, ಇವರಿಂದ)

೫೬ ಸ್ತೋತ್ರಗುಚ್ಛ ೫೭ ಶ್ರೀ ಪ್ರಸನ್ನ ರಾಮಾಶ್ರಮದ ಮಹೋತ್ಸವ ಚಿ-ಪೂ, ೫೮ ನಿಜಪಿತೃದೇವ ಶ್ರೀಯುತ ಪ್ರಾರ್ಥನಾ [ಶ್ರೀಮತಿಯವರು ತಮ್ಮ ಪಿತೃದೇವತಾ, ಷಷ್ಠ್ಯಬ್ದಪೂರ್ತಿ ಶಾಂತಿಮಹೋ

ತ್ಸವ ಸಮಯದಲ್ಲಿ ನಿವೇದಿಸಿದ ಪ್ರಾರ್ಥನೆಗಳನ್ನೊಳಕೊಂಡಿರುವುದು]
(ಈ ಮೂರೂ ಸಂಸ್ಕೃತ ಭಾಷೆಯಲ್ಲಿರುವುವು ಮತ್ತು ಇವುಗಳ ಬೆಲೆಯೂ ನಿರ್ದಿಷ್ಟವಾಗಿಲ್ಲ) ೫೯ ಶ್ರೀನಿವಾಸ ಮಂದಿರಕ್ಕೆ ಬಂದಿದ್ದ "ಮಿಸೆಸ್ ಪಸ್ಟಬ್ರೂಕ್" ಎಂಬ ಆಂಗ್ಲರಮಣಿಗೆ ಒಪ್ಪಿಸಿದ ಅನ್ಯಾಪದೇಶಸ್ತುತಿವಾಚಕವಾದ ಅಭಿನಂದನ ಪತ್ರವು [ಸಂಸ್ಕೃತ ಕನ್ನಡ ಶ್ಲೋಕಗಳಿಂದ ಕೂಡಿದೆ]

16

(ಶ್ರೀಮತಿ, ಸುದೇಮಣಿ[ಮುಕ್ತೇಶ್ವರಮ್ಮ]ಮುಕ್ತೇಶ್ವರಂ, ಬೆಂಗಳೂರು ಇವರಿಂದ)

೬೦ ಚೂಡಾಲ (ಶ್ರೀ ಕಡಬಂ ತಿರುಮಲಾಚಾರ್ಯರಿಂದ ವಿರಚಿತ ವೈರಾಗ್ಯ ಗ್ರಂಥ) ಬೆಲೆ ೬ ಆಣೆ

೬೧ ಭಕ್ತಿ (ಶ್ರೀಮತಿಯವರು ಶ್ರೀನಿವಾಸ ಮಂದಿರದ ಸ್ತ್ರೀ ಶಾಖೆಯಲ್ಲಿ ಕೊಟ್ಟ ಉಪನ್ಯಾಸವು) ಬೆಲೆ ೧ ಆಣೆ

17

(ಶ್ರೀ, ಕೆ, ಶಿವರಾಮದಾಸ, ಆನಂದ ಚಂದ್ರಿಕಾಕರ್ತರು, ಬೆಂಗಳೂರು ಇವರಿಂದ)

೬೨ ಶ್ರೀ ಗೋಪಾಲ ಕೃಷ್ಣ ಗೋಖಲೆ, ಪರಮಹಂಸ (ತೆಲಗು ಭಾಷೆ) ಬೆಲೆ ೬ ಆಣೆ.

೬೩. ಜೀವಕಾರುಣ್ಯವು (ತೆಲಗುಭಾಷೆ) ಬೆಲೆ ೬ ಆಣೆ, ೬೪ ಬಸವನ ಗುಡಿಯಲ್ಲಿರುವ, ಶ್ರೀ ಸನಾತನ ಧರ್ಮಬೋಧಿನೀ ಸಭೆಯ ನಿಬಂಧನಗಳು.

19

(ಶ್ರೀಮಾನ್ ಡಿ ಎಚ್ ಭೀಮರಾವ, ಕನ್ನಡ ಪಂಡಿತರು, ಬಾಸೆಲ್ ಮಿಷನ್ ಕಾಲೇಜ್ ಕಲ್ಲೀಕೋಟೆ, ಇವರಿಂದ)

೬೬- ತಾರಾ (ಮಧುರವಾಣೀ ಗ್ರಂಥಮಾಲಾ ಸಂಖ್ಯೆ ೧೦) ಬೆಲೆ ೩ ಆಣೆ

2)

(ಶ್ರೀ. ಎಸ್ ಏ ಶೀನಪ್ಪ ಹೆಗಡೆ, ಪುತ್ತೂರು, ಶ್ರೀ ಕುಟೀಮಂದಿರ ಇವರಿಂದ)

೬೭. ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಬೆಲೆ ೧ರೂ. ೪ ಆಣೆ

21

(ಶ್ರೀಯುತ, ಎಮ್. ಎಸ್, ರಾವ್ ಮತ್ತು ಕಂಪನಿ, ಬೆಂಗಳೂರು ಇವರಿಂದ)

ಶ್ರೀ ಸದಾಶಿವೇಂದ್ರ ಸರಸ್ವತಿ (ಬೆಲೆ ತಿಳಿಸಿಲ್ಲ)

22

(ಶ್ರೀಯುತ ನರಸಿಂಹಾಚಾರ್ಯ ಪುಣೇಕರ, ಕಾವ್ಯಾನಂದ ಇವರಿಂದ)

೬೯ ಗೃಹಿಣೀ ಭೂಷಣ ಬೆಲೆ ೪ ಆಣೆ

23

[ಶ್ರೀ ಎಸ್. ರಂಗಪ್ಪಯ್ಯ ಸುರತಕಲ್ ಇವರಿಂದ]

೭೦ ದೈವಭಕ್ತಿ, ಬೆಲೆ ೧ ಆಣೆ

ಇವುಗಳಲ್ಲದೆ

ಕರ್ನಾಟಕ ಸಾಹಿತ್ಯ ಪರಿಷತ್ತಿನ ರಚನಾ ಕ್ರಮ, ಮತ್ತು, ನಿಬಂಧನೆಗಳು, ಪೂನೆಯಲ್ಲಿ ಸ್ಥಾಪಿತವಾಗಿರುವ ಕರ್ಣಾಟಕಸೋಶಿಯಲ್ ಕ್ಲಬ್ಬಿನ ನಿಬಂಧನೆ, ಬೆಂಗಳೂರು ಕಂಟೋನ್ಮೆಂಟಿನ, ಶ್ರೀರಾಮಕೃಷ್ಣ ಬಾಲಸನ್ಮಾರ್ಗ ಸಭೆಯ ಉದ್ದೇಶ, ಕ್ರಮ, ಸ್ಥಿತಿ ನಿರೂಪಣ ಪತ್ರವು [ಹಸ್ತ ಲಿಖಿತಪ್ರತಿಯೊಡಗೂಡಿದುದು] ಮುದ್ದೇಬಿಹಾಳದ ಶಾಲಾವಿದ್ಯಾರ್ಥಿ ಗ್ರಂಥಾಲಯದ ವಾರ್ಷಿಕವೃತ್ತವು [ಹಸ್ತಲಿಖಿತ ಪತ್ರ]ಮತ್ತು ಅರ್ಥಸಾಧಕ ಪತ್ರಿಕೆ ಸಂಪುಟ ೧, ಸಂಚಿಕೆ ೧ ವಾರ್ಷಿಕಚಂದಾ— ೨ ರೂಪಾಯಿ, ಮಧುರವಾಣಿ ಸಂಪುಟ ೩. ಸಂಚಿಕೆ ೧, ೨, ೪, [ವಾರ್ಷಿಕ ಚಂದಾ ೧ ರೂಪಾಯಿ ೮ ಆಣೆ. ಇವುಗಳಲ್ಲದೆ, ಮರೆತು ಬಿಟ್ಟು ಹೋಗಿರುವ ಪುಸ್ತಕಗಳು ಕಂಡು ಬಂದರೆ, ಆಯಾ ಪುಸ್ತಕಗಳನ್ನು ಕಳಿಸಿದ ಮಹನೀಯರು ಸಹಜ ಕ್ಷಮೆಯಿಂದ, ಸೂಚಿಸುವರೆಂದು ನಂಬಿರುವೆವು.

ಶ್ರೀ

# ಸ್ವಾಭಿಪ್ರಾಯ ನಿವೇದನ.

## ಭಗಿನೀ ಸಮಾಚಾರ.

"ಭಗಿನೀ ಸಮಾಚಾರ"ವೆಂಬ ಈ ಲಘು ಪ್ರಬಂಧವನ್ನು ಸಾವಧಾನದಿಂದ ಸಮಾಲೋಚಿಸಿದೆನು ಅನ್ವರ್ಥನಾಮದಿಂದ ಸಹಜವಾಗಿ ಸೋದರಿಯರಿಗೆ ವಿಹಿತವನ್ನೇ ಬೋಧಿಸುತ್ತಿರುವ ಈ ಪುಸ್ತಕವು ನಮ್ಮ ಬಾಲಿಕಾ ನಿವಹಕ್ಕೆ ಅತ್ಯಗತ್ಯವಾದ ಪಠ್ಯ ಪುಸ್ತಕವಾಗಿಡಲು ತಕ್ಕುದಾಗಿದೆಯೆಂದು ಧಾರಾಳವಾಗಿ ಹೇಳಬಲ್ಲೆನು ಇದರಲ್ಲಿರುವ ಪ್ರತಿಯೊಂದು ವಿಚಾರವೂ ಸ್ತ್ರೀ ಸ್ವಭಾವವನ್ನು ಚನ್ನಾಗಿ ವ್ಯಕ್ತಪಡಿಸುವುದಕ್ಕೂ ಸ್ತ್ರೀಯರ ಸಹಜವಾದ, ನ್ಯಾಯವಾದ, ನಿರ್ವಿವಾದಾತ್ಮಕವಾದ ಕರ್ತವ್ಯಗಳೇನೆಂಬುದನ್ನು ಸುಲಭರೂಪದಿಂದ ಬೋಧಿಸುವುದಕ್ಕೂ ತುಂಬಾ ಸಹಕಾರಿಯಾಗತಕ್ಕವು ಭಾಷಾ ಶೈಲಿಯೂ, ಬಾಲೆಯರ ಮನಸ್ಸಿಗೆ ಸುಲಭವಾಗಿ ಹಿಡಿಯುವಂತೆ ಸುಲಲಿತವಾಗಿಯೂ ವಿಚಾರಕ್ಕೆ ತಕ್ಕಷ್ಟು ಉದಾಹರಣಗಳುಳ್ಳದಾಗಿಯೂ ಇದೆ ಇದನ್ನು ನಮ್ಮ ಕರ್ಣಾಟಕದ ಬಾಲಕಿಯರಿಗೆ ೨,೩,೪ನೇ ತರಗತಿಯ ಪಾಠ ಪುಸ್ತಕವಾಗಿ ಏರ್ಪಡಿಸಿ, ಆಯಾ ತರಗತಿಗಳಿಗೆ ತಕ್ಕಂತೆ ಈ ಪುಸ್ತಕವನ್ನು ವಿಭಾಗಿಸಿ, ಎಂದರೆ ಇದರಲ್ಲಿಯ ೮ ವಿಷಯಗಳಲ್ಲಿ ಮೊದಲೆರಡು ವಿಷಯಗಳಾದ (೧) ವಿದ್ಯಾರ್ಥಿನಿಯರೂ ವಿದ್ಯಾಭ್ಯಾಸವೂ, (೨) ವಿವಾಹವೂ ವಿಚಾರವೂ, ಎಂಬ ಈ ಭಾಗವನ್ನು ಎರಡನೇ ತರಗತಿಗೂ (೩) ಸೊಸೆಯೂ ಅತ್ತೆಯಮನೆಯೂ, (೪) ಪತ್ನಿಯೂ ಪತಿವ್ರತಾಧರ್ಮವೂ, (೫) ಗೃಹಿಣಿಯೂ ಗೃಹಕೃತ್ಯವೂ ಎಂಬ ಈ ಭಾಗವನ್ನು ೩ನೇ ತರಗತಿಗೂ, ಉಳಿದ ಮೂರು ವಿಷಯಗಳನ್ನು (೬) ತಾಯಿಯೂ ಚಿಕ್ಕಮಕ್ಕಳ ರಕ್ಷಣೆಯೂ, (೭) ತಾಯಿಯೂ ಚಿಕ್ಕಮಕ್ಕಳ ಶಿಕ್ಷಣವೂ, (೮) ಸ್ತ್ರೀಯರೂ ಅಲಂಕಾರಗಳ ಆಶೆಯೂ ಎಂಬವನ್ನು ೪ನೇ ತರಗತಿಗೂ

ಪತ್ಯಭಾಗಗಳಾಗಿ ಏರ್ಪಡಿಸುವುದರಿಂದ, ನಮ್ಮ ಬಾಲೆಯರು, ಶಾಲಾ ವ್ಯಾಸಂಗದೊಡನೆ ಗೃಹಶಿಕ್ಷಣವನ್ನು ಕೂಡ ತಕ್ಕಮಟ್ಟಿಗೆ ಪಡೆಯಲು ಅನುಕೂಲಿಸುವುದು.

ನಮ್ಮ ಬಾಲಕಿಯರಿಗೆ ಅವಶ್ಯಕವಾಗಿ ಬೇಕಾದುದು ಗೃಹಶಿಕ್ಷಣವಲ್ಲದೆ, ಕೇವಲ ವ್ಯಾವಹಾರಿಕ, ಮತ್ತು ಔದ್ಯೋಗಿಕ ಸಂಬಂಧವಾದ ಈಗಿನ ಭಾಷಾಭ್ಯಾಸ ಮಾತ್ರದಿಂದಲೇ, ಬಾಲಕಿಯರು ಏಳಿಗೆಗೆ ಬರುವರೆಂದು ನಂಬುವಂತಿಲ್ಲ ಏಕಂದರೆ, ಈಗಿನ ಶಾಲಾಶಿಕ್ಷಣದಲ್ಲಿ ನಮ್ಮ ಬಾಲೆಯರಿಗೆ ಬೇಕಾದ ವಿಚಾರವು ಒಂದಾದರೂ ಇಲ್ಲದೆ, ಬಾಲಕರಿಗೆ ಗೊತ್ತಾದ ಪಾಠಕ್ರಮವೇ ಇವರಿಗೂ ಏರ್ಪಟ್ಟಿರುವುದರಿಂದ, ಬಾಲೆಯರು, ತಮ್ಮ ಸ್ವರೂಪ, ಧರ್ಮ, ಧ್ಯೇಯ, ಕರ್ತವ್ಯಗಳ ಗಂಧವನ್ನಾದರೂ ತಿಳಿಯಲವಕಾಶವಿಲ್ಲದೆ, ಬರಿಯ ಆಟಪಾಟಗಳಲ್ಲಿಯೇ ಕಾಲ ಕಳೆಯುವುದು ಹೆಚ್ಚಾಗುತ್ತ ಬಂದಿದೆ. ಬಾಲ್ಯದಿಂದಲೂ ಅವರ ಮನಸ್ಸಿಗೆ ಮಾತಾಪಿತೃಗಳಲ್ಲಿ ಭಕ್ತಿ, ಮತಾಚಾರದಲ್ಲಿ ಶ್ರದ್ಧೆ, ಕರ್ತವ್ಯದಲ್ಲಿ ಜಾಗ್ರತೆಯನ್ನುಂಟು ಮಾಡುವಂತಹ ತಿಳಿವುಂಟು ಮಾಡಿಕೊಡುವ ಶಿಕ್ಷಣವೇ ಅವರ ಭಾವಿ ಪುರೋವೃದ್ಧಿಗೆ ಕಾರಣವಾಗುವದಲ್ಲದೆ, ಹುರುಳಿಲ್ಲದ ಎಂದರೆ, ನಿಜವಾದ ಪ್ರಕೃತಿ ವ್ಯಕ್ತಿತ್ವಗಳ ಧರ್ಮಕ್ಕೆ ತಕ್ಕುದಾದ ವಿವೇಕವನ್ನು ಬೋಧಿಸದ, ಅಭ್ಯಾಸವು, ಅವರನ್ನು ಸುಸ್ಥಿತಿಗೆ ತರುವದೆಂದು ಭಾವಿಸುವಂತಿಲ್ಲ ಅವರು ಸುಶಿಕ್ಷಿತರಾಗಿ, ಕರ್ತವ್ಯದಲ್ಲಿ ದಕ್ಷತೆಯನ್ನು ವಹಿಸಿ, ತಮ್ಮ ಪಾಲಿಗೆ ಸೇರಿರುವ ಸಾಂಪತ್ತಿಕ ಸ್ಥಿತಿಯ ಸಂರಕ್ಷಣಾಭಾರವನ್ನು ನಿರ್ವಹಿಸುವಂತಾಗಬೇಕಾದರೆ, ಮೇಲೆ ಹೇಳಿದಂತೆ ಅವರಿಗೆ ಗೃಹಶಿಕ್ಷಣವು ಪ್ರಧಾನವಾಗಿಯೂ, ಸಾಮಾಜಿಕ, ನೈತಿಕ, ವ್ಯಾವಹಾರಿಕ ಸಂಬಂಧವಾದ ಶಿಕ್ಷಣವು ಗೃಹಶಿಕ್ಷಣದ ಅನುಗಾಮಿಯಾಗಿಯೂ ಇರಬೇಕಾದುದು ಅಗತ್ಯವು

ಗೃಹಶಿಕ್ಷಣವನ್ನು, ಅವರವರ ಹಿರಿಯರೇ ಕೊಡಬೇಕಲ್ಲದೆ ಶಾಲಾಶಿಕ್ಷಣದಲ್ಲಿ ಸೇರಿಸಲಾಗುವುದಿಲ್ಲವೆಂದರೆ,– ತಾಯಿತಂದೆಗಳೇ ಮೊದಲಾದ ಹಿರಿಯರು, ಮನೆಯಲ್ಲಿ ಕೊಡುವ ಶಿಕ್ಷಣವು ಎಷ್ಟೇ ಉತ್ಕೃಷ್ಟ ಸ್ಥಿತಿಯಲ್ಲಿದ್ದರೂ, ಶಾಲಾಶಿಕ್ಷಣವು ಅವರ ಪ್ರಕೃತಿ ಧರ್ಮ

ಕ್ಕೆ ಪ್ರತಿಯಾಗಿದ್ದರೆ ಫಲಕಾರಿಯಾಗುವದಿಲ್ಲ ಶಾಲಾ ಶಿಕ್ಷಣವು ಸುಧಾರಿತವಾಗಿದ್ದು, ಅವರಿಗೆ ಸಹಜಗುಣವಾಗಿರುವ, ಭಕ್ತಿ, ಗೌರವ, ಸಯುಭಯ, ದಯೆ, ಸ್ನೇಹಗಳೇ ಮೊದಲಾದ ಕೋಮಲಭಾವವನ್ನು ಮತ್ತಷ್ಟು ಹೊರುವಾಗಿ ಬೆಳೆಯಿಸುವಂತಹ ನೀತಿಬೋಧೆಯನ್ನು ಸುರಿಸುವಂತಿದ್ದರೆ ಅದರಿಂದ ಅವರ ಗೃಹಶಿಕ್ಷಣದ ಬೆಲೆಯು ದಶಗುಣವಾಗಿ ಫಲಿಸುವದು ಆದುದರಿಂದ, ನಮ್ಮ ದಯಾಳು ಸರ್ಕಾರದವರೂ, ಸ್ತ್ರೀ ಶಿಕ್ಷಣ ವಿಚಕ್ಷಣರಾದ ವಿದ್ಯಾಂಗದವರೂ ಇನ್ನು ಮುಂದೆಯಾದರೂ ನಮ್ಮ ಸ್ತ್ರೀ ಶಿಕ್ಷಣದ ವಿಚಾರದಲ್ಲಿ ಅವರ ಪ್ರಕೃತಿ ಧರ್ಮಕ್ಕೆ ಅನುಗುಣವಾದ ಅಭ್ಯಾಸ ಕ್ರಮವನ್ನು ತೃಪ್ತಿಕರವಾಗುವಂತೆ ಏರ್ಪಡಿಸುವರೆಂದೂ, ಅದರಿಂದ ನಮ್ಮ ಸ್ತ್ರೀ ವರ್ಗವು ಸ್ವತಂತ್ರವಾದ ಉದ್ಯೋಗದಿಂದ ಪ್ರಕಾಶಗೊಳ್ಳಬೇಕೆಂಬ ತಮ್ಮ ದುರಭಿಮಾನವನ್ನು ಬಿಟ್ಟು ವಿವೇಕ ಹೊಂದಿ, ತಮ್ಮ ತಮ್ಮ ಪುರುಷ ವರ್ಗದವರು ಉದ್ಯಮಶೀಲರಾಗಿ, ಸಂಪಾದಿಸುವ ವಿತ್ತವನ್ನು ವಿಚಕ್ಷಣೆಯಾಗಿ ವಿನಿಯೋಗಿಸುವುದರಿಂದ ಊರ್ಜಿತ ಪಡಿಸುವದೇ ತಮಗೆ ವಿಹಿತಮಾರ್ಗವೆಂದು ನಂಬಿ, ನಮ್ಮ ಆರ್ಯ ಮಹಿಳೆಯರ ಆದರ್ಶವೃತ್ತವನ್ನು ಅನುಕರಣ ಮಾಡುವಂತಾಗುವರೆಂದೂ ನಂಬಿ ನಿರೀಕ್ಷಿಸುವೆನು ಇರಲಿ, ಈ ವಿಚಾರವನ್ನು ಮುಂದೆ ಪ್ರಸ್ತಾಪಿಸಬೇಕೆಂದಿರುವೆನು. ಪ್ರಕೃತದ ಮಾತೆಂದರೆ,— ನಮ್ಮ ಬಾಲಕಿಯರ ಪ್ರಾಥಮಿಕ ಶಿಕ್ಷಣದ ಅಸ್ತಿಭಾರ ಸ್ಥಾಪನೆಗೆ ಮೇಲೆ ಹೇಳಿದ 'ಭಗಿನೀಸಮಾಚಾರ'ವು ಅತ್ಯಂತ ಸಹಕಾರಿಯಾದುದು. ಇದನ್ನು ಧಾರವಾಡ ಪ್ರಾಂತದವರಿಂದ ರಚಿಸಲ್ಪಟ್ಟುದೆಂದು ಉಪೇಕ್ಷಿಸದೆ, ಇದರ ಗುಣವನ್ನು ತಿಳಿದು, ಮನಸ್ಸಿಗೆ ಒಪ್ಪಿದ ರೀತಿಯಿಂದ ಪರಿಷ್ಕರಿಸಿಯಾದರೂ ಉಪಯೋಗಕ್ಕೆ ತರಬೇಕೆಂಬುದೇ ಹಿತೈಷಿಣಿಯ ನಮ್ರಪ್ರಾರ್ಥನೆ ಇದರ ಬೆಲೆ ೫ ಆಣೆ ಪುಟಸಂಖ್ಯೆ ೯೮ ಗ್ರಂಥಕರ್ತರು— ಶ್ರೀ ಅ ಅ. ಮಂಟಗಣೀಕರ, ಹೆ|| ಮಾಸ್ತರ ಡಂಬಳ ಸ್ಕೂಲ್ ಜಿಲ್ಲಾ ಧಾರವಾಡ.

## (೨) ಆನಂದಚಂದ್ರಿಕೆ.

ಕರ್ನಾಟಕದ ಭಾಗ್ಯೋದಯವೆಂಬಂತೆ ಆನಂದಚಂದ್ರಿಕೆ ಎಂಬ ಅಭಿಧಾನದಿಂದ ಇದೇ ಡಿಶಂಬರ ತಿಂಗಳ ಮೊದಲಲ್ಲಿ ಜನ್ಮವೆತ್ತಿರುವ ಶ್ರೇಷ್ಠವರ್ಗದ ಮಾಸಪತ್ರಿಕೆಯೇ ಇದು ಇದರಲ್ಲಿ ಪ್ರಾಚೀನ, ಅರ್ವಾಚೀನ ಮಹಾಪುರುಷರ ಮತ್ತು ಸ್ತ್ರೀಯರ ಭಾವಚಿತ್ರಗಳೊಡನೆ ಅವರವರ ಪವಿತ್ರ ಜೀವನ ಚರಿತೆಗಳೂ, ಇತರ ಧಾರ್ಮಿಕ, ನೈತಿಕ, ತಾತ್ವಿಕವಿಚಾರಗಳೂ ಪ್ರಕಟವಾಗುತ್ತಿರುವುವು ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಿದುದರಲ್ಲಿ, ಈಗ ನಮ್ಮ ಕರ್ಣಾಟಕ ಮಂಡಲಕ್ಕೆ ವಿಹಿತಮಾರ್ಗ ಪ್ರದರ್ಶಕಗಳಾದ, ಮತ್ತು ನಮ್ಮ ಆರ್ಯಮಹಿಳಾ ವರ್ಗಕ್ಕೆ ನ್ಯಾಯವಾದಷ್ಟು ಮಾನವನ್ನು ಕೊಡುತ್ತಿರುವ ಪತ್ರಿಕೆಗಳೆಂದರೆ, ೧. ಹುಬ್ಬಳ್ಳಿ ಸಚಿತ್ರ ಭಾರತ, ೨. ಬೆಂಗಳೂರು ಬಸವನ ಗುಡಿಯ ಆನಂದ ಚಂದ್ರಿಕೆ, ೩ ಧಾರವಾಡದಲ್ಲಿ ಹೊರಡುವ ವಾಗ್ಭೂಷಣ. ಈ ಮೂರು ಪತ್ರಿಕೆಗಳೇ ಮುಂದೆ ಬಂದು ನಿಲ್ಲುವಂತಿವೆ ನಮ್ಮ ಕನ್ನಡಿಗರು ಈ ಪತ್ರಿಕೆಗಳಿಗೆ ತಮ್ಮ ಉದಾರಾಶ್ರಯವನ್ನು ಕೊಡಬೇಕಾದುದು ಆಗತ್ಯವೆಂಬುದೇ ನಮ್ಮ ಅಭಿಪ್ರಾಯವಾಗಿದೆ.

ಆನಂದ ಚಂದ್ರಿಕೆಯ ವಾರ್ಷಿಕ ಚಂದಾ (ಹಾಸಲು ಸೇರಿ) ೫ - ೦ - ೦

ಬಿಡಿ ಸಂಚಿಕೆಗೆ— ೦ - ೮ - ೦

ವಿಳಾಸ— ಕಾ. ಶಿವರಾಮದಾಸ್,
ಸಂಪಾದಕರು, ಮತ್ತು ಪ್ರಕಾಶಕರು
ಬಸವನಗುಡಿ, ಬೆಂಗಳೂರು ಸಿಟಿ.

---

## (೩) ಕುಚೇಲೋಪಾಖ್ಯಾನ.

ದೃಢಭಕ್ತಿರಸಪ್ರಧಾನವಾದ ಶ್ರೀ ಕುಚೇಲೋಪಾಖ್ಯಾನ (ಸುಧಾಮ ಚರಿತ್ರ) ವನ್ನು ಕೇಳದೆ ಇರುವವರು ನಮ್ಮ ಆರ್ಯರಲ್ಲಿ ವಿರಳವೆನ್ನಬಹುದು. ಭಗವಂತನು ಭಕ್ತಪರಾಧೀನನೆಂಬುದನ್ನು ನಿದ

ರ್ಶನ ಪಡಿಸುವ ಈ ಮಹನೀಯನ ಚರಿತ್ರವು ನಮ್ಮವರಿಂದ ಅನುದಿನವೂ ಹಲವು ಬಗೆಗಳಿಂದ(ಗಾನ, ಕಥನ, ಭಜನ ಮೊದಲಾದ ಮಾರ್ಗದಲ್ಲಿ)ಪರಿಸಲ್ಪಡುತ್ತಿರುವದು ಎಲ್ಲರಿಗೂ ತಿಳಿದ ಮಾತೇ ಸರಿ, ಅಂತಹ ಭಕ್ತಾಗ್ರಗಣ್ಯನಾದ ಕುಚೇಲನ ಉಪಾಖ್ಯಾನವು ಭಾಷಾಭಿಮಾನಿಗಳೂ ದೇಶಸೇವಕರೂ, ಭಕ್ತಿಯುತರೂ ಆದ ಶ್ರೀಯುತ ಕಾರುಪಲ್ಲಿ ಶಿವರಾಮಯ್ಯ [ಪಾಪ) ರವರಿಂದ ಆಂಧ್ರ ಭಾಷೆಯಲ್ಲಿ, ಸುಲಭ ರೀತಿಯಿಂದ, ಪದ ಪದ್ಯ ರೂಪವಾಗಿ ವಿರಚಿಸಲ್ಪಟ್ಟಿರುವುದು ಇದರಲ್ಲಿರುವ ಪ್ರತಿಯೊಂದು ಪದ ಪದ್ಯ ವಚನಗಳೂ ಭಗವದ್ಭಕ್ತಿ, ಕರ್ತವ್ಯನಿಷ್ಠೆ, ಆತ್ಮಸಂಯಮ, ಭೂತದಯೆ ಸರ್ವಭೂತ ಸಮತೆಗಳೇ ಮೊದಲಾದ ಸಾತ್ವಿಕ ಭಾವವನ್ನೂ ಸ್ಫೂರ್ತಿಗೊಳಿಸತಕ್ಕಂತಿವೆಯಾದುದರಿಂದ ಆಂಧ್ರಭಾಷಾಪರಿಚಯವುಳ್ಳ ಸ್ತ್ರೀ ಪುರುಷರೆಲ್ಲರಿಂದಲೂ ಅವಶ್ಯಕವಾಗಿ ಪರಿಸಲ್ಪಡತಕ್ಕುದಾಗಿದೆ ಮೇಲಾಗಿ ಇದು ಉತ್ತರಾರ್ಧದಲ್ಲಿ "ಸಾಧುರಕ್ಷಕ ಶತಕ" ವೆಂಬ ಭಗವತ್ಸ್ವರೂಪ ವರ್ಣನಾತ್ಮಕವಾದ ಆಂಧ್ರಭಾಷಾ ಪದ್ಯವನ್ನೂ ಒಳಕೊಂಡು ಮತ್ತಷ್ಟು ಅತಿಶಯವನ್ನು ಹೊಂದಿರುವುದು ಇದು ಡೆಮ್ಮಿ ಅಷ್ಟಪತ್ರದ ಆಕಾರದಲ್ಲಿ ೬೮ + ೪೪ ಪುಟಗಳುಳ್ಳದ್ದಾಗಿದೆ ಇದರ ಬೆಲೆ ೦—೮—೦ ಮಾತ್ರ ಬೇಕಾದವರು ಗ್ರಂಥಕರ್ತರಿಗೆ ಬರೆದು ತರಿಸಿಕೊಳ್ಳಬಹುದು

---

## (೪) ಸುಜ್ಞಾನ ಚಂದ್ರೋದಯವು.

ಇದೂ ಮೇಲ್ಕಂಡ ಗ್ರಂಥಕರ್ತರಿಂದಲೇ ವಿರಚಿತವಾದುದಲ್ಲದೆ, "ಸತ್ಯಾರ್ಥಪ್ರದೀಪಿಕಾ ಗ್ರಂಥಮಾಲೆ"ಯ ಪ್ರಥಮ ಗುಚ್ಛರೂಪವಾಗಿ ಪ್ರಕಟಿಸಲ್ಪಟ್ಟುದಾಗಿದೆ ಡೆಮ್ಮಿ ಅಷ್ಟಪತ್ರದ ಆಕಾರದ ೩೮೦ ಪುಟಗಳುಳ್ಳ ದೊಡ್ಡ ಪುಸ್ತಕವಾಗಿದೆ ಇದರಲ್ಲಿಯೂ ಗ್ರಂಥಕರ್ತರಲ್ಲಿರುವ ಉತ್ಕಟವಾದ ದೈವಭಕ್ತಿ, ಪ್ರಾಣಿದಯೆ, ಸತ್ಯಸಂಕಲ್ಪ, ಸರ್ವಸಮತಾಭಾವಾದಿ ಸದ್ಗುಣಗಳು ಪ್ರತಿವಾಕ್ಯದಲ್ಲಿಯೂ ಧ್ವನಿಸುವಂತೆ ರಚಿತವಾಗಿದೆ. ಆಂಧ್ರಭಾಷೆಯಲ್ಲಿ ಕೇವಲ

ಅನಭಿಜ್ಞರಾದ ನಮಗೆ ಇದರಲ್ಲಿ ಪ್ರತಿಪಾದಿತವಾಗಿರುವ ಹಲವು ವ್ಯಾವಹಾರಿಕ ವಿಚಾರಗಳನ್ನೂ, ಅದರಲ್ಲಿ ಸಮಾಜಶಾಸ್ತ್ರದಪರವಾದ ಖಂಡನ ಮಂಡನಗಳನ್ನೂ ತಕ್ಕಮಟ್ಟಿಗೆ ಸಂಗ್ರಹವಾಗಿಯಾದರೂ ವಿವರಿಸುವಂತಿಲ್ಲವೆಂಬ ವಿಷಾದವಾದರೂ, ತಿಳಿದುದರಲ್ಲಿ, ನಮ್ಮ ಭಗಿನೀ ಬಂಧುಗಳು ಇದನ್ನು ಅವಶ್ಯವಾಗಿಯೂ ಸಮಾಲೋಚಿಸ ಬೇಕೆಂದು ಮಾತ್ರ ಹೇಳದಿರಲಾರೆವು. ಇದರ ಕ್ರಯವು ಹಾಸಲು ಸೇರಿ ೧—೮—೦ ಮಾತ್ರ

---

## (೫) ಗಾನರಾಮಾಯಣವು

ಶ್ರೀರಾಮಚರಿತ್ರವು ಸಂಗ್ರಹವಾಗಿ ಗಾನರೂಪದಿಂದ, ಸ್ತ್ರೀಯರಿಗೆ ಪಾರಾಯಣಯೋಗ್ಯವಾಗುವಂತೆ, ವಿರಚಿತವಾಗಿರುವ ಈ ಲಘು ಪುಸ್ತಕವು, ಮೇಲ್ಕಂಡ ಗ್ರಂಥಕರ್ತರ ಧರ್ಮಪತ್ನಿಯಾಗಿದ್ದು, ತಮ್ಮ ಅಸಾಧ್ಯದೃಶವಾದ ಭಕ್ತಿ, ಜ್ಞಾನ, ವೈರಾಗ್ಯಗಳಿಂದ ತಮ್ಮ ಪತಿಯ ಆತ್ಮಾನಂದಕ್ಕೆ ಆಧಾರಪಾತ್ರವೆನ್ನಿಸಿ, ಅಕಾಲದಲ್ಲಿ ತಮ್ಮ ಪತಿಯನ್ನೂ, ಪುತ್ರರತ್ನದ್ವಯವನ್ನೂ ಬಿಟ್ಟು ಪರಂಧಾಮನ ಪಾದಾರವಿಂದದಲ್ಲಿ ಐಕ್ಯವಾಗಿ ಹೋಗಿರುವ (ದಿವಂಗತೆ) ಶ್ರೀ. ರಾಮಾಂಬೆಯವರ ಮುಖೋದ್ಗತವಾದುದು ಕೋಮಲ ಹೃದಯೆಯರಾದ ಸ್ತ್ರೀಯರ ವಾಕ್ಯವೇ ಶ್ರಾವ್ಯವೆನ್ನಿಸಿರುವಲ್ಲಿ, ಭಕ್ತಿಜ್ಞಾನ ವಿಭೂಷಿತೆಯರಾದ ಸಾಧ್ವೀಮಣಿಯರ ಪವಿತ್ರ ಪ್ರೇಮದಿಂದ ಪರಿಪೂರಿತವಾಗಿ ಹೊರಟ ಭಗವನ್ನಾಮಸಂಕೀರ್ತನದ ಸ್ವಾರಸ್ಯವು ಎಷ್ಟುಮಟ್ಟಿನ ಆಹ್ಲಾದಜನಕವಾಗಿರುವದೆಂದು ಇಲ್ಲಿ ಹೇಳಬೇಕೆ? ಆಂಧ್ರಭಾಷಾ ಸರಣಿಯಿಂದ ರಚಿತವಾಗಿರುವ ಇದಕ್ಕೆ ಬೆಲೆಯು ನಿರ್ಣಯಿಸಲ್ಪಟ್ಟಿಲ್ಲ. ಇದು ಕೂಡ, ಮೇಲೆ ಹೇಳಲ್ಪಟ್ಟಿರುವ ಗ್ರಂಥಕರ್ತರಿಂದಲೇ ಪಡೆಯಬಹುದಾಗಿದೆ ಬೇಕಾದವರು ಬೇಗ ಬರೆದುಕೊಳ್ಳಬಹುದು

ವಿಳಾಸ—ಶ್ರೀಯುಕ್ತ ಕಾರುಪಲ್ಲಿ ಶಿವರಾಮದಾಸರವರು
ಸಂಪಾದಕರು, “ ಆನಂದಚಂದ್ರಿಕೆ ”
ಚಾಮರಾಜಪೇಟೆ, ಬೆಂಗಳೂರುಸಿಟಿ.

## (೬) ಬೋಧಿನಿ

(ಮಾಸಪತ್ರಿಕೆ)

ಇದು ಉಡುಪಿಯ ಪ್ರಭಾಕರ ಮುದ್ರಾಲಯದಿಂದ ಪ್ರಕಾಶವಾಗುವ ಮಾಸಪತ್ರಿಕೆ ಇದು ಈಗ ಎರಡುವರ್ಷಗಳಿಂದ ತಪ್ಪದೆ ಹೊರಡುತ್ತಿರುವದಲ್ಲದೆ, ಮೊದಲಿಂದಲೂ ಹಿತೈಷಿಣಿಯಲ್ಲಿ ಒಡಹುಟ್ಟಿದ ಮಮತೆಯನ್ನೇ ತೋರಿಸುತ್ತ ಬಂದಿರುವದು. ಕರ್ಣಾಟಕದಲ್ಲಿ ಹೊರಡುವ ಪತ್ರಿಕೆಗಳಲ್ಲಿ, ನಮ್ಮ ಸಮಾಲೋಚನೆಗೆಂದು ಬಂದಿರುವ ಪತ್ರಿಕೆಗಳಲ್ಲಿ ಬೋಧಿನಿಯಂತೆ, ನಿಜವಾದ ದೇಶೋನ್ನತಿ ಭಾಷಾಸೇವೆ, ಸ್ತ್ರೀಧರ್ಮ, ಸಾಹಿತ್ಯ ಸಂಸ್ಕರಣ, ಪರಸ್ಪರ ಸಹಾಯಾಕಾಂಕ್ಷೆ, ಶಿಕ್ಷಣಮಾರ್ಗಗಳೇ ಮೊದಲಾದ ಮಹತ್ವದ ವಿಚಾರಗಳನ್ನು ಸ್ಪಷ್ಟೋಕ್ತಿಗಳಿಂದ ಪುಷ್ಟೀಕರಿಸಿ, ಉದಾರಬುದ್ಧಿಯಿಂದ ವಾಚಕರನ್ನು ಜಾಗ್ರತರನ್ನಾಗಿ ಮಾಡಬೇಕೆಂದು, ಪಾಡುಪಡುತ್ತಿರುವ ಪತ್ರಿಕೆಗಳು ಮತ್ತಾವುದೂ ಇರುವಂತೆ ನಮಗೆ ತಿಳಿದು ಬಂದಿಲ್ಲ. "ಬೋಧಿನಿ"ಯು ಉದ್ದಾಮಪಂಡಿತರ ಅನುಭವ ಸಿದ್ಧವಾದ ಲೇಖನಗಳನ್ನೊಳಕೊಂಡು ತನ್ನ ನಾಮಧೇಯವನ್ನು ಸಾರ್ಥಕ ಪಡಿಸಿಕೊಳ್ಳಲು ಕರ್ನಾಟಕ ಜಗತ್ತಿಗೇ ಬೋಧಿಸುತ್ತಿರುವಳಲ್ಲದೆ, ಆರ್ಯರ ಔದಾರ್ಯಗುಣವೆಂತಹದೆಂಬುದನ್ನು ಸ್ಪಷ್ಟಪಡಿಸುವ ಉದ್ದೇಶದಿಂದ, ವರ್ಷಕ್ಕೊಮ್ಮೆ ನವರಾತ್ರಿಯ ಸನ್ಮಾನ ಅಥವಾ ಉಪಹಾರವೆಂದು ಅನೇಕಾನೇಕ ಉತ್ಸವ ಸಂಗತಿಗಳನ್ನು ಶೇಖರಿಸಿ, ಪುಸ್ತಕರೂಪವಾಗಿ ರಚಿಸಿ, ತನ್ನ ಗ್ರಾಹಕ ವರ್ಗಕ್ಕೆ ಒಪ್ಪಿಸುತ್ತಿರುವದರಿಂದ, ಇತರ ಭಾಷಾಭೂಷಣರಾದ ಪತ್ರಕತೃಗಳಿಗೆ ಕೂಡ ಬೋಧಿನಿಯಾಗಿರುವಳೆಂದರೆ, ಅತ್ಯುಕ್ತಿಯಲ್ಲ. ಹಾಗೂ ಈ ಬಾರಿಯ ಉಪಹಾರವು ಎಂದರೆ ೧೯೧೬ನೇ ಅಕ್ಟೋಬರ್ ನವಂಬರ್ ಸಂಚಿಕೆಗಳೊಡಗೊಂಡು ಬಂದಿರುವ "ದಸರಾಭಾಗವು" ನಮ್ಮಿಂದ ಸಮಾಲೋಚಿಸಲ್ಪಟ್ಟು, ಬೋಧಿನಿಯ ವಿಷಯದಲ್ಲಿ ನಮಗೆ ಮತ್ತೂ ಹೆಚ್ಚಿನ ಗೌರವ ಬುದ್ಧಿಯನ್ನುಂಟುಮಾಡಿರುವುದು ಹೇಗೆಯೋ ಬೋಧಿನಿಯು,

ಚತುರೋಪಾಯಗಳನ್ನೂ ಪ್ರದರ್ಶಿಸಿ, ಕರ್ಣಾಟಕರ ಮೋಹನಿದ್ರೆಯ ಜಡರೋಗವನ್ನು ಪರಿಹಾರಮಾಡುವಂತಹ ಚಿಕಿತ್ಸೆಯನ್ನು ಕೈಕೊಂಡು, ತನ್ನ ಕರ್ತವ್ಯದಲ್ಲಿ ಸಾಫಲ್ಯವನ್ನು ಹೊಂದುವಂತಾಗುವದರಲ್ಲಿ ಸಂಶಯವೇ ಇಲ್ಲವೆಂದು ನಮ್ಮ ಅಭಿಪ್ರಾಯವಾಗಿದೆ. ನಮ್ಮ ಬಾಂಧವರು ಬೋಧಿನಿಯ ಸಂಚಿಕೆಗಳನ್ನು ಮೊದಲಿಂದಲೂ ಸಮಾಲೋಚಿಸಬೇಕೆಂದೂ, ಅದರಲ್ಲಿಯೂ, ಈ ವರ್ಷದ ೪-೫ನೆಯ ಸಂಚಿಕೆಗಳಲ್ಲಿರುವ "ಕರ್ಣಾಟಕಭಾಷೆ" "ಶಾಲೆಗಳಲ್ಲಿ ಕಲಿಸಬೇಕಾದ ದೇಶಭಾಷೆಯ ಕುರಿತು" "ಸಾಹಿತ್ಯಪಂಜಿಕೆ" ಈ ಮೂರು ಲೇಖನಗಳನ್ನಾದರೂ ಅಗತ್ಯವಾಗಿ ನೋಡಿ, ಅದರಲ್ಲಿಯ ಸಾರವನ್ನು ಸಂಗ್ರಹಿಸಿ ಆನಂದಭಾಜನರಾಗಬೇಕೆಂದೂ ಪುನಃ ಪುನಃ ಸೂಚಿಸುತ್ತಿರುವೆವು. ಪ್ರತಿಮಾಸವೂ ತಪ್ಪದೆ, ಕ್ರೌನ್ ನಾಲ್ಕರ ಆಕಾರದ ೩೨ ಪುಟಗಳನ್ನೊಳಕೊಂಡು, ಸಚಿತ್ರವಾಗಿ ಪ್ರಕಾಶವಾಗುತ್ತಿರುವ ಬೋಧಿನಿಯ ವಾರ್ಷಿಕ ವರ್ಗಣಿ ಹಾಸಲು ಸೇರಿ ೨-೦-೦ ಮಾತ್ರ.

ವಿಳಾಸ —ಮ್ಯಾನೇಜರ, 'ಬೋಧಿನಿ"

ಪ್ರಭಾಕರ ಮುದ್ರಾಯಂತ್ರ ಉಡುಪಿ, (ದಕ್ಷಿಣ ಕನ್ನಡ)

---

## (೭) ಶ್ರೀ ಕೃಷ್ಣ

(ಮಾಸಪತ್ರಿಕೆ)

ಇದೊಂದು ನೂತನ ಪತ್ರಿಕೆ. ಇದರ ೧ನೇ ಸಂಪುಟದ ೧ನೇ ಸಂಚಿಕೆಯನ್ನು ನಾವು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ. ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ವತ್ಸ ಶ್ರೀಕೃಷ್ಣನನ್ನು ಕರ್ಣಾಟಭಾಷಾ ಜನನಿಯು ಮುದ್ದಿಸುವಂತೆ ತೋರಿಸುವ ಚಿತ್ರವೂ ಭಾಷಾಜನನಿಯು ವತ್ಸನಿಗೆ ಕೊಟ್ಟಿರುವ ಉತ್ತೇಜನದ ಭಾಷಣವೂ ಹೃದಯಂಗಮವಾಗಿವೆ. ಇದು "ಸತೀಹಿತೈಷಿಣಿ, ನಂದಿನಿ"ಯಷ್ಟೇ ಆಕಾರದ

ಕ್ರೌನ್ ಅಷ್ಟಪತ್ರ ೩೨ ಪುಟಗಳನ್ನೊಳಕೊಂಡು ಹೊರಡುತ್ತಿದೆ ಇದರ ವಾರ್ಷಿಕ ವರ್ಗಣಿ ಹಾಸಲು ಸೇರಿ ೧—೪—೦ ಮಾತ್ರ

ವಿಳಾಸ— ಶ್ರೀಯುತ ಬಿ ಸಿ. ಎಸ್ ರಾಜಗೋಪಾಲಶರ್ಮ
ಸಂಪಾದಕ— "ಶ್ರೀಕೃಷ್ಣ" ಕ್ಷೀರಸಾಗರ ಮುದ್ರಾಲಯ
೧೫ ಬಳೇಪೇಟೆ ಬೆಂಗಳೂರು ಸಿಟಿ

---

ಸ್ವೀಕಾರ ಮತ್ತು ಸ್ವಾಭಿಪ್ರಾಯ ನಿವೇದನಗಳನ್ನು ಕುರಿತು ಲಿಖಿಸುತ್ತಿರುವ ವೇಳೆಯಲ್ಲಿಯೇ ಅಭಿಪ್ರಾಯ ಮತ್ತು ಪ್ರಚಾರಗಳಿಗೆಂದು ನಮ್ಮ ವಾತ್ರಮಂದಿರಕ್ಕೆ ಬಂದಿರುವ ದಿ ಸ್ಟಾರ್ ಟ್ರೇಡಿಂಗ ಅಸೋಸಿಯೇಶನ್‌ದವರ (The Star Trading Association) ಪರಿಮಳ ಚೂರ್ಣವನ್ನೂ ಅದರೊಡನೆ ಬಂದಿರುವ ಸುಗಂಧ ವಸ್ತುಗಳ ಪಟ್ಟಿಯನ್ನೂ ಕುರಿತು, ನಮ್ಮ ಸ್ವಾಭಿಪ್ರಾಯವನ್ನು ಪ್ರಕಟಿಸುವವರಲ್ಲವಾದರೂ "ಸುವಾಸಿನಿಯರು, ತಮ್ಮ ದೇವತಾರ್ಚನ, ಉತ್ಸವಾದಿ ಸಂತೋಷ ಪ್ರದರ್ಶನ ಕಾಲಗಳಲ್ಲಿ ಮಿತವಾಗಿ ಉಪಯೋಗಿಸಲು ಯೋಗ್ಯವೆಂದು ಮಾತ್ರ, ಅದೂ ಸುವಾಸಿನಿಯರ ಅಭಿಪ್ರಾಯದ ಮೇಲೆ, ಹೇಳುವೆವು ಇದರ ಸುವಾಸನೆಯು ಬಹು ವ್ಯಾಪಕವಾಗಿದ್ದು, ತೀವ್ರವಾಗಿರುವದರಿಂದ ಇದು ವಾತ್ರಮಂದಿರದ ಗ್ರಂಥಭಂಡಾರದಲ್ಲಿ ನಿಕ್ಷಿಪ್ತವಾಗಿದೆ. ಬೇಕಾದವರು ಮಾಲಿಕರಿಗೆ ಬರೆದು ತರಿಸಿಕೊಳ್ಳಬಹುದು.

ವಿಳಾಸ—ಶ್ರೀಯುತ ಈ ಲಕ್ಷ್ಮಣದಾಸ ಪ್ರೊಪ್ರೈಟರ,
ದಿ ಸ್ಟಾರ್, ಟ್ರೇಡಿಂಗ್ ಅಸೋಸಿಯೇಶನ್,
ಬೆಂಗಳೂರು ಸಿಟಿ

---

॥ ಶ್ರೀ. ॥

# ಪ್ರಧಾನ ಗುರುಗಳು

" ವಾಗರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿಪತ್ತಯೇ ||
ಜಗತ ಪಿತರೌ ವಂದೇ ಪಾರ್ವತೀ ಪರಮೇಶ್ವರೌ || "

(ರಘುವಂಶ)

ನಾವು ಆವಕಾರ್ಯಗಳನ್ನು ಮಾಡಬೇಕಾದರೂ, ನಮಗೆ ಗುರುಜನರ ಅನುಗ್ರಹವು ಮೊದಲು, ದೊರೆದಿರಬೇಕು ಗುರ್ವನುಗ್ರಹ ಲಾಭಕ್ಕೆ ನಮ್ಮಲ್ಲಿ ಅಚಂಚಲವಾದ ಗುರುಭಕ್ತಿಯು ಮುಖ್ಯ ಗುಣವಾಗಿರಬೇಕು ಗುರುಭಕ್ತಿಯೇ ನಮ್ಮ ಸಮಸ್ತಕಾರ್ಯಸಿದ್ಧಿಗೂ ಸಾಧನಯಂತ್ರವೆಂಬುದು ನಮ್ಮ ಹೃದಯದಲ್ಲಿ ಖಚಿತವಾಗಿದ್ದು, ಆ ಪವಿತ್ರತಮವಾದ ಭಕ್ತಿಯಿಂದ ನಾವು ಗುರುಜನರನ್ನು ಸೇವಿಸಿ, ಅವರ ಪ್ರಸನ್ನತೆಯನ್ನು ಹೊಂದಿದ ಮೇಲೆಯೇ, ನಾವು ಆವುದೇ ಒಂದು ಕಾರ್ಯಕಲಾಪಕ್ಕಾದರೂ ಕೈಹಾಕಬೇಕು ಹಾಗಿಲ್ಲದೆ, ಗುರುಜನರನ್ನು ಉಪೇಕ್ಷಿಸಿ, ಸ್ವಗೌರವವನ್ನೇ ಮುಂದಿಟ್ಟು ಮಾಡುವ ಕಾರ್ಯವು, ಊರ್ಜಿತವಾಗುವದೆಂಬುದು ಸುಳ್ಳು ಇದಕ್ಕಾಗಿಯೇ ನಮ್ಮ ಆರ್ಯರು ಹೀಗೆ ಹೇಳಿರುವರು —

"ಮೊದಲು ಗುರ್ವನುಗ್ರಹಹೊಂದು, ಗುರ್ವನುಗ್ರಹದಿಂದ, ಜಗನ್ಮಾತೆಯ ಅಭಿಮಾನಕ್ಕೆ ಪಾತ್ರನಾಗು ಮಾತೆಯ ಅಭಿಮಾನವು ನಿನ್ನ ಮೇಲಾಯಿತೆಂದರೆ, ಜಗಜ್ಜನಕನು ನಿನ್ನವನೇ ಆಗುವನು '

ಎಂದರೆ ಅಭಿಪ್ರಾಯವೇನು? ಗುರುವೆಂದರೆ ಹಿತಾಹಿತ ವಿವೇಚನೆಯನ್ನುಂಟು ಮಾಡುವ ಜ್ಞಾನಬೋಧಕನೆಂದಾಯಿತು "ಗುರ್ವನುಗ್ರಹದಿಂದ ಜಗನ್ಮಾತೆಯ ಅಭಿಮಾನಕ್ಕೆ ಪಾತ್ರನಾಗು," ಎಂದರೆ, ಬೋಧಕನಿಂದುಪಲಬ್ಧವಾದ ವಿವೇಚನೆಯಿಂದ' ಸಮಸ್ತ ಸನ್ಮಂಗಳ

ಪ್ರದವಸ್ತುವಾದ —ಎಂದರೆ, ಸಕಲ ಶ್ರೇಯೋಽಭಿವೃದ್ಧಿಗಳಿಗೂ ಕಾರಣಭೂತವಾದ ಪ್ರಜ್ಞೆಯನ್ನು ವಶಪಡಿಸಿಕೊಳ್ಳಬೇಕೆಂದಾಯಿತು ಹೀಗೆ ಸದಸದ್ವಿವೇಚನೆಯೇ ಮುಂದಾಗಿರುವ ಪ್ರಜ್ಞೆಯು ನಮ್ಮಲ್ಲಿ ದೃಢಪಟ್ಟಿತೆಂದರೆ "ಆನಂದವೇ ಬ್ರಹ್ಮ"ನೆಂದೆನ್ನಿಸುವ, ವಿಶ್ವಪಿತನ, ವಿರಾಟ್ಸ್ವರೂಪದ ಮೂಲತತ್ವವೇ ಆತ್ಮಾನಂದವೆಂಬಂತೆ, ಪ್ರಜ್ಞಾಲಾಭದಿಂದ ನಮ್ಮ ಚಿತ್ತವೃತ್ತಿಯು ವಿಕಾರವಶವಾಗದೆ, ಸರ್ವದಾ ಸಂತೋಷದಿಂದಲೇ ಇರುವಂತಾದೀತೆಂಬುದು ಸ್ಪಷ್ಟಪಟ್ಟಿತು

ಇನ್ನು ನಮ್ಮ ಶ್ರೇಯಸ್ಸಾಧನೆಗೆ ದಿಗ್ದರ್ಶಕರಾದ ಗುರುಗಳಾರೆಂಬುದನ್ನು ಸ್ವಲ್ಪ ವಿಚಾರಮಾಡುವ. ನಮ್ಮ ಗುರುಜನರಲ್ಲಿ ನಮಗೆ ಪ್ರಧಾನರೆಂದರೆ ಜನ್ಮದಾತರೂ, ಜನ್ಮಕಾರಿಣಿ ಅಥವಾ ನಮ್ಮಲ್ಲಿ ಚೈತನ್ಯವನ್ನುಂಟುಮಾಡಿದ ನಮ್ಮ ಜನನಿಯುರೂ ನಮ್ಮ ಪ್ರಧಾನ ಗುರುಗಳಾಗಿ ಗಣಿಸಲ್ಪಡತಕ್ಕವರು ಈ ಪ್ರಧಾನ ಗುರುಗಳ ಆಶೀರ್ವಾದಬಲದಿಂದಲೇ ನಾವು ಇಹಪರಗಳಲ್ಲಿಯು ಸುಖ ಸಂಪತ್ತಿಯನ್ನು ಅನರ್ಗಳವಾಗಿ ಅನುಭವಿಸಲಾಗುವದು.

ಹೀಗೆ ನಮಗೆ ಪ್ರಧಾನಗುರುಗಳಾಗಿರುವ ತಾಯಿತಂದೆಗಳಲ್ಲಿ ನಾವು ಶ್ರದ್ಧಾಭಕ್ತಿ ಗೌರವಗಳಿಂದ ಅನುವರ್ತಿಸುತ್ತ ಬಂದೆವೆಂದರೆ, ಅವರ ಸಂಪೂರ್ಣಾನುಗ್ರಹವು ನಮಗೆ ಲಭಿಸಿ, ತನ್ಮೂಲಕ ನಾವು, ನಮ್ಮ ನಿಜಸ್ವವನ್ನೂ, ನಿಜಕರ್ತವ್ಯವನ್ನೂ, ನಿಜಧರ್ಮ ಧ್ಯೇಯುಗಳನ್ನೂ ಸ್ವಾನುಭವಕ್ಕೆ ತಂದುಕೊಳ್ಳುವರಾಗುವೆವು ಆಗಲೇ ನಾವು ನಮ್ಮ ಮಾನವ ಜೀವಿತ ಸಾರ್ಥಕ್ಯತೆಗೆ ತಕ್ಕುದಾದ ಉದ್ಯಮವನ್ನು ಕೈಕೊಳ್ಳಲು ಅರ್ಹರಾಗುವೆವು. ಆಗಲೇ ನಮ್ಮ ಹೃದ್ಗತಭಾವವು ನಮ್ಮ ಪ್ರವೃತ್ತಿ ಮತ್ತು ಪ್ರಪತ್ತಿ ಮಾರ್ಗಗಳ ಸಹಕಾರಕರನ್ನು ನಮ್ಮ ಹಿತೈಷಿಗಳೂ, ಗುರುವರ್ಗೀಯರೂ ಆದ ಆಪ್ತಬಂಧುಗಳೆಂದೂ, ನಮ್ಮ ಪ್ರಧಾನ ಗುರುಗಳೆನ್ನಿಸಿರುವ ಮಾತಾಪಿತರನ್ನು ಆ ಸಾಕ್ಷಾತ್ ಜಗನ್ನಿಯಂತನಾದ ವಿಶ್ವಪಿತನ ಅಖಂಡ, ಅಮೋಘ, ಅನಂತಾನಂತ, ವರ್ಣನಾತೀತಗಳಾದ ಅಪ್ರಮೇಯ ಮೂರ್ತಿಯು

ಪ್ರತಿ ಛಾಯಾಸ್ವರೂಪರೆಂದೂ, ಛಾಯೆಯನ್ನು ದೃಢಮುಷ್ಟಿಯಿಂದ ಹಿಡಿಯಬೇಕೆಂಬ ದೃಢಪ್ರಜ್ಞೆಗೆ ಮೂಲಮೂರ್ತಿ ಸ್ಪರ್ಶ ಸುಖಾನುಭವದ ಆನಂದವೇ ಪ್ರಾಪ್ತವಾಗುವುದೆಂದೂ ಹೊಳೆಯುವದು. ಅಂತಹ ಆನಂದ ಲಾಭವು ನಮಗೆ ದೊರೆದಿತೆಂದರೆ ಅಲ್ಲಿಗೆ ನಮ್ಮ ಮಾನವಜನ್ಮ ಜೀವಿತಗಳ ಪರಮಾವಧಿಯ ಅರ್ಥಸಿದ್ಧಿಯಾಯಿತೆಂದೇ ತಿಳಿಯಬಹುದು

ಇದರ ಮೂಲತತ್ವವನ್ನು ತಿಳಿದಿದ್ದುದರಿಂದಲೇ ನಮ್ಮ ಆರ್ಯರು ತಾಯ್ತಂದೆಗಳು ಮಾತನಾಡುವ ದೇವರು ಅಥವಾ ಸಾಕಾರಬ್ರಹ್ಮಸ್ವರೂಪರೆಂದೂ, ಪರಮಾತ್ಮನು ಅಂತರ್ಯಾಮಿಯಾಗಿದ್ದು ನಮ್ಮ ಸುಕೃತದ ಸಾಕ್ಷಿಯಾಗಿ, ಶುಭಾಶುಭ ಫಲಗಳನ್ನು ಅನುಗ್ರಹಿಸುವನೆಂದೂ ನಂಬಿ, ಅದರಂತೆಯೇ "ಮಾತೃದೇವೋ ಭವ, ಪಿತೃದೇವೋ ಭವ" "ಆಚಾರ್ಯದೇವೋ ಭವ" ಎಂಬ ಸೂತ್ರಗಳನ್ನು ಅನುಕರಣ ಮಾಡುತ್ತ ಬಂದರು ಅವರಿಂದ ಅನುಷ್ಠಿತಗಳಾದ ಮಾರ್ಗವೇ ನಮಗೂ ಅನುಷ್ಠೇಯವಾಗಿರುವದು. ಅದನ್ನು ಅನುಸರಿಸುವದರಿಂದಲೇ ನಾವು ಕೃತಕೃತ್ಯರಾಗಬೇಕಾಗಿರುವದು.

ಇಷ್ಟಕ್ಕೆ ಸಾಕು, ಸದ್ಯದಲ್ಲಿ ಈ ವಿಚಾರವು ಇಷ್ಟಕ್ಕೆ ಸಾಕೆಂದೂ, ಇದರ ಮುಂದಿನ ವಿಚಾರವಾಗಿ, ಸ್ವವಿಷಯವಾದ ಪ್ರಸ್ತಾವನವನ್ನು ಸತೀಹಿತೈಷಿಣೀ ಗ್ರಂಥಮಾಲೆಯ ತೃತೀಯ ಸಂಪುಟದ ದ್ವಿತೀಯ ಸಂಚಿಕೆ (ಗ್ರಂಥ ಸಂಖ್ಯೆ ೧೦) ಯಲ್ಲಿ ನೋಡಲಾದೀತೆಂದೂ ಸೂಚಿಸಿ, ಆ ನಮ್ಮ ಪ್ರಧಾನಗುರುಗಳಾಗಿರುವ, ನಮ್ಮ ಪಿತೃ ಮಾತೃಗಳ ಭಾವಚಿತ್ರ ಪ್ರಕಟನೆಯೊಡನೆ, ನಮ್ಮ ಗುರುಭಕ್ತಿಯನ್ನು ಪ್ರದರ್ಶಿಸಿ, ನಮ್ಮ ಮುಂದಿನ ಮಕ್ಕಳ ಮೇಲ್ಮೆಯನ್ನು ಕೋರುತ್ತ ವಿರಮಿಸುತ್ತಿರುವೆವು

---

॥ಶ್ರೀ॥

# ಸಾಂಪ್ರತದ ಸಾಧ್ವೀವರ್ತನಂ

ಸನ್ಮಾನನೀಯರಾದ ನಮ್ಮ ಆರ್ಯಭಗಿನಿಯರೇ!

ನಮ್ಮ ಆರ್ಯ ರಮಣೀಕುಲದ ಸದ್ವರ್ತನವನ್ನು ಕುರಿತು, ನಮ್ಮ ಸಮಸ್ತ ಪುರಾಣ, ಇತಿಹಾಸಗಳೂ ಸರ್ವತೋಮುಖವಾಗಿ ಘೋಷಿಸುತ್ತಿರುವವು ನಮ್ಮ ಆರ್ಯಮಹಿಳೆಯರ ಪ್ರಭಾವಗಳು ದಶದಿಕ್ಕುಗಳನ್ನೂ ಬೆಳಗಿಸುತ್ತಿರುವ ಜಗಜ್ಜ್ಯೋತಿಗಳಂತೆ ಹೊಳೆಯುತ್ತಿರುವವು. ನಾವು ಅವರ ಪವಿತ್ರ ವಂಶದಲ್ಲಿಯೇ ಅವತರಿಸಿರುವವರಾದರೂ, ಅವರ ಆದರ್ಶವೃತ್ತವನ್ನು ಅನುಕರಣ ಮಾಡಬೇಕೆಂದು ಭಾವಿಸುವದಕ್ಕಾದರೂ ಅಶಕ್ತರಾಗಿ ಆರ್ಯಧರ್ಮಾಚರಣಕಾರ್ಯದಲ್ಲಿ ಮಾತ್ರ ನಾವು ನಮ್ಮ "ಅಬಲೆಯರು" ಎಂಬ ಶಬ್ದವನ್ನು ಸಾರ್ಥಕಪಡಿಸುತ್ತಿರುವೆವು ನಮ್ಮ ಆರ್ಯ ನಾರಿಯರು ಕೇವಲ ವ್ಯಾವಹಾರಿಕ ವಿಚಾರಗಳಲ್ಲಿ "ಅಬಲೆ"ಯರೆನ್ನಿಸುತ್ತಿದ್ದರೂ, ಪ್ರತಿಯೊಂದು ಧಾರ್ಮಿಕ, ನೈತಿಕ, ವೈದಿಕ, ವ್ಯಾವಹಾರಿಕ ವಿಚಾರಗಳಲ್ಲಿಯೂ ಪುರುಷರಿಗೆ ನಿಜಸ್ವವನ್ನು ಬೋಧಿಸುವದರಿಂದ (ಎಂದರೆ ತಮ್ಮ ನಿಜಸ್ವರೂಪವೆಂತಹದೆಂಬುದನ್ನು ಅವರು ತಾವಾಗಿ ತಿಳಿಯುವಂತಹ ಜಿಜ್ಞಾಸೆಯನ್ನುಂಟುಮಾಡುವದು) ಅವರ ಅಂತಸ್ಸತ್ವವನ್ನು ಉತ್ತೇಜನಗೊಳಿಸುವ ಆದಿಶಕ್ತಿ ಸ್ವರೂಪಿಣಿಯರೆಂದೇ ಭಾವಿಸಲ್ಪಡುತ್ತಿದ್ದರು ನಾವಾದರೆ ನಮ್ಮ ಆರ್ಯ ಸಂಪ್ರದಾಯಗಳನ್ನು, ಆರ್ಯ ಧರ್ಮಾಚರಣೆಯನ್ನು ಅನುಷ್ಠಾನಕ್ಕೆ ತರುವದರಲ್ಲಿ ಮಾತ್ರವೇ ಅಬಲೆಯರಲ್ಲದೆ, ಉಳಿದ ವಿಡಂಬನ ಕಾರ್ಯಗಳಲ್ಲಿ ಪ್ರಬಲೆಯರೆಂದೇ ಹೆಸರ್ಗೊಂಡಿರುವೆವು ಈಗಿನ ನಮ್ಮ ಸ್ತ್ರೀಜೀವನ ತತ್ವವೆಂಬುದು ಕೇವಲ ಪೌರುಷ ಭಯಾನಕವಾದ ಸ್ವಾತಂತ್ರ್ಯಕ್ಷೇತ್ರದಲ್ಲಿಯೇ ನಿಂತಿರುವುದು

ನಮ್ಮ ಈ ವರ್ತಮಾನಯುಗದ ನಾಗರಿಕ ಮಂಡಲಿಗೆ ಸೇರಿದವರೆನ್ನಿಸಿರುವ ಅವನೇ ಒಬ್ಬ ಪುರುಷನ ಬಾಯಿಂದಲಾಗಲೀ, ಅವಳೇ

ಓರ್ವ ಸ್ತ್ರೀಯಿಂದಲಾಗಲಿ ಹೊರಡುವ ಭಾಷಣವೆಂದರೆ ಅದರಲ್ಲಿಯೂ ಸ್ವಾರಸ್ಯವಾದ ಭಾಷಣವೆಂದರೆ ಅದು "ಸ್ತ್ರೀಸ್ವಾತಂತ್ರ್ಯ"ವಾದವೇ ಸರಿ ಆವ ಪತ್ರಿಕೆಯಲ್ಲಿ ನೋಡಿದರೂ ಸ್ತ್ರೀಜನಾಂಗದ ಏಳಿಗೆ, ಸುಧಾರಣೆಗಳನ್ನು ಕುರಿತು ಮಾಡುವದಾದ ವ್ಯಾಖ್ಯಾನಗಳೆಂದರೆ ಅವು ಕೂಡ ಸ್ತ್ರೀಸ್ವಾತಂತ್ರ್ಯ ಸಮಾನಾಧಿಕಾರಗಳೆಂಬ ಅಭಿಧಾನದಿಂದ ಹೊರಡುವ ಅವರ ವ್ಯವಹಾರೋದ್ಯೋಗಿಕ ಸಂಬಂಧವಾದ ಉಚ್ಛೃಂಕಲ ವರ್ತನದ ಉತ್ತೇಜನಕಾರಕಗಳೇ ಆಗಿರುವವು ಎಂದ ಬಳಿಕ ಈಗಿನ ನಮ್ಮ ಸಾಧ್ವೀವರ್ತನದ ಬಗೆಯಾದರೂ ಹೇಗಿರಬಹುದು? ಯೋಚಿಸಬಾರದೇ ಭಗಿನಿಯರೇ!

ವೃತ್ತಪತ್ರಗಳ ವಿನೋದ ವಾರ್ತಾತರಂಗವೆಂದರೆ, ನಮ್ಮವರ ವಿಡಂಬದ ವ್ಯಾಪಾರವೇ! ಹಾಸ್ಯಾರ್ಣವ, ತುಣುಕು ಮಿಣುಕುಗಳೆಂಬುದರಲ್ಲಿ ನೋಡುವದಾದರೂ ನಮ್ಮವರನ್ನು ಕುರಿತು ಹೇಳುವ ಅನ್ಯಾಪದೇಶದ ಶ್ಲೇಷೋಕ್ತಿಯು ಅಬದ್ಧಕಂತೆಗಳೇ ಸರಿ ಇಷ್ಟಾಗಿಯೂ ಈಗ ನಾವು ಮಾಡುತ್ತಿರುವದೇನು? ಕವಿಗಳ ಪರಿಹಾಸ ಸೂಚಕವಾದ ಗೀತಾರಾಗಗಳನ್ನು ಹಾಡಿ ಹಾಡಿ ಕುಣಿದಾಡಿ ಜಡರಾಗುತ್ತಿರುವುದೇ ಅಲ್ಲವೇ? ಭಗಿನಿಯರೇ!

ಆಗ್ರಹಿಸಬೇಡಿರಿ! ನಿಮ್ಮನ್ನು ಉದ್ದೇಶಿಸಿ ಹೇಳಿದ ಮಾತಿದೆಂದು ತಿಳಿದು ನಂದಿನಿಯನ್ನು ಒಗೆಯಬೇಡಿರಿ! ನಮ್ಮವರ ಉದ್ಧತವರ್ತನದ ಮೇಲೆ ಬಿದ್ದಿರುವ ಅಪವಾದಕ್ಕಾಗಿ ಪಶ್ಚಾತ್ತಾಪದಿಂದ ಅದನ್ನು ನಿವಾರಿಸಿಕೊಳ್ಳಬೇಕಾದ ಮಾರ್ಗವನ್ನು ವಿಚಾರ ಮಾಡುವ ಉದ್ದೇಶವಾಗಿ ಹೇಳಿದುದೆಂದು ಮಾತ್ರ ತಿಳಿದು ಲಾಲಿಸಿರಿ. ತಾಯಿಯರೇ! ವಿಚಾರ ಮಾಡಿರಿ, ಲೋಕಹಿತೇಚ್ಛುಗಳಾದ ಕವಿವರರು ನಮ್ಮವರ ಈಗಿನ ನಡವಳಿಕೆಗಳನ್ನು ಹೇಗೆ ಹಾಸ್ಯಮಾಡಿ ಹಾಡಿ ತೋರಿಸಿರುವರು? ನಮ್ಮಲ್ಲಿ ಸಾಧ್ವೀನಾಮ ಸಾರ್ಥಿಕ್ಯತೆಗೆ ಬೇಕಾದ ಸಹನಶೀಲತೆ, ಭೂತದಯಾಪರತೆ, ಗುರುಜನವಿಧೇಯತೆ, ಗೃಹಕಾರ್ಯದಕ್ಷತೆ, ಸ್ವಾಮಿ-ಪತಿಸೇವಾತತ್ಪರತೆ, ಸತ್ಯಸಂಧತೆಗಳೇ ಮೊದಲಾದ ಸದ್ಗುಣಗಳಿಗೆ ಪ್ರತಿಯಾಗಿ ಈಗ ನಮ್ಮನ್ನು ಆಕ್ರಮಿಸಿ ಆಳುತ್ತಿರುವ ಮಹಾ ಗುಣಗಳನ್ನು ಅವರು

ಹೇಗೆ ವರ್ಣಿಸಿದ್ದಾರೆಂಬುದನ್ನು ಗಣಿಸಿ ಗುಣಿಸಿ ಹೇಳಿರಿ. ಪುರಂಧರ ದಾಸರ ಕೀರ್ತನವು ಕರ್ನಾಟಕದಲ್ಲೆಲ್ಲಾ ಸುಪ್ರಸಿದ್ಧವಾದುದಷ್ಟೇ? ಆ ಮಹಾನುಭಾವನೆಂದಿರುವ ಸಾಂಪ್ರತದ ಸಾಧ್ವೀವರ್ತನದ ವರ್ಣನೆಯನ್ನು ಸ್ವಲ್ಪ ಕೇಳಿರಿ? ಅದಾವದು? ಅದೇ ಒಬ್ಬ ಪರಾನುಕರಣ ಪಟುವಾದ ನಾಗರಿಕ ಯುವತಿಯು ತನ್ನ ನೆರೆಮನೆಯ ಕುಲವಧುವಿನೊಡನೆ ಹೇಳಿಕೊಳ್ಳುವ ಮಾತು?

(ರಾಗ ಪತಿಯಾಗ ಬಂದೆನ್ನ ಸಲಹೊ.)

ತಾನೇಕೆ ಮುನಿದ ನೋಡಮ್ಮಾ ನೋಡಮ್ಮ ॥ ಗಂಡ ತಾ ನೊಂದನೆಂದರೆ ನಾನೆರಡೆಂದೆ ॥ಪ॥

ಸುಮ್ಮನೆ ನಾನಿಂತಿರಲು ಅವನು ಹೆಮ್ಮೆಯಿಂದಲೆ ಬಂದು ಹುಲು ಮಾತನಾಡಿ ॥ ಸುಮ್ಮನೆ ಬಂದೆನ್ನ ಬೈದು ನಾನು ಬಿಮ್ಮನೆ ಮೋರೆಗೆ ಹೊಡೆದೆ ಕಾಣಮ್ಮ ॥೧॥

ಕಾಲಿಗೆ ನೀರ ತಾರೆಂದ ಮೈ-ಆಲಸ್ಯದಿಂದ ನಾನೊಲ್ಲೆ ಹೋಗೆಂದೆ ॥ ಕೋಲಿನಿಂದೆನ್ನ ಚುಚ್ಚಿದನು ನಾನು ತಾಳಲಾರದೆ ಬೀಳಲೊದ್ದೆ ಕಾಣಮ್ಮಾ ॥ ೨ ॥

ಅಡಿಗೆಯ ಮಾಡು ನೀನೆನಲು ನಾನು ಸಿಡಿಮಿಡಿಗುಟ್ಟುತ್ತ ಗಡಿಗಯನೊಡದೆ ॥ ಒಡೆದೆ ಯಾಕೆಂದು ಕೇಳಿದನು ನಾನು ಹಿಡಿದು ಗುದ್ದಿದೆನವನ ನಡುಬೆನ್ನಮೇಲೆ ॥ ೩ ॥

ಗಂಧವ ತೇದು ಕೊಡೆಂದ ನಿನ್ನ ಚಂದ್ರದ ಮೋರೆಗೆ ಗಂಧವೇಕೆಂದೆ ॥ ಬಂದೆನ್ನ ಕೈಯ ಚುಚ್ಚಿದನು ನಾನು ಹಿಂದುಮುಂದು ನೋಡದೆ ಬೈದೆ ಕಾಣಮ್ಮೊ ॥ ೪ ॥

ಹಾಸಿಗ ಹಾಸು ಹೋಗೆಂದ ನನಗೆ ಹೇಸಿಗೆಯಾಗಿದೆ ಒಲ್ಲೆ ಹೋಗೆಂದೆ ॥ ದಾಸೀಬಡ್ಡಿ ಎಂದು ಬೈದ ನಾನು ಕಾಸಿದ ಸವುಟಿಂದ ಕಟವಾಯ ತಿವಿದೆ ॥ ೫ ॥

ನೆರೆಮನೆ ಪ್ರಾಣಿ ಕೇಳಮ್ಮ ಈ ಧರ್ಮಬುದ್ಧಿಯು ನಿನಗೆ ತಿಳಿದಿರಲಮ್ಮಾ ॥ ಈರ್ವರ ಕಲಹ ಕೇಳಮ್ಮ ನೀನು ಕೇಳದಿದ್ದರೆ ಹಾಳಾಗಿ ಹೋಗಮ್ಮ ॥ ೬ ॥

ಬಂದೆನ್ನ ಚರಣಕ್ಕೆರಗಿದ ನಾನು ಹಿಂದಕ್ಕೆ ಓಡಿಹೋದೆ ಕಾಣಮ್ಮ॥
ಭೇದವೆ ಗಂಡಹೆಂಡರಿಗೆ ಇದ ಪುರಂಧರ ವಿಠಲನೆ ಬಲ್ಲ ಕಾಣಮ್ಮ ॥೭॥

(ಕವಿಯ ವರ್ಣನಾ ಕೌಶಲ್ಯದಿಂದ ಕೆಲವು ವಿಷಯಗಳಲ್ಲಿ ಮಾನಿನಿಯ ಮರ್ಯಾದೆಯು ಮಿತಿಮೀರಿ ಕೌತುಕವನಿಸುವಂತಿದ್ದರೂ, ಉಳಿದ ಉದ್ಧೃತ ವರ್ತನದಲ್ಲಿ ಪತಿಯ ಮನೋಗತ ಧರ್ಮಕ್ಕೆ ಸುಖಾನುಭವಕ್ಕೆ ಪ್ರತಿಕೂಲರಾಗಿರುವರೆಂಬ ವಿಚಾರವು ಮಾತ್ರ ಅಲ್ಲಿಗಲ್ಲಿಗೆ ನಮಗೆ ಕಾಣುತ್ತಿರುವಪೆಂದು ತಿಳಿಸಲು ವಿಷಾದಿಸಬೇಕಾಗಿದೆ ಇನ್ನಾದರೂ ನಮ್ಮವರು ತಿಳಿಗಣ್ದೆರೆದಾರೆಂದು ನಿರೀಕ್ಷಿಸುತ್ತೇವೆ ಇನ್ನು ಅತ್ತೆ ಸೊಸೆಯರ ವಿಚಾರವು ಮುಂದಿನ ತಿಂಗಳಲ್ಲಿ ನಿರೂಪಿಸಲ್ಪಡುತ್ತದೆ

---

# ವಿನಂತಿ.

೧ ನಂದಿನಿಯು ಇನ್ನು ಮುಂದೆ ಪ್ರತಿ ತಿಂಗಳ ಮಧ್ಯದಲ್ಲಿಯೂ ಎಂದರೆ ೨೦ನೇ ತಾರೀಖಿನೊಳಗೆ ಚಂದಾದಾರರ ಕೈಸೇರುವಂತೆ ಏರ್ಪಡಿಸಿರುವೆವು ತಾ॥೨೫ರ ವರೆಗೆ ಸಂಚಿಕೆಗಳು ಬರದೆ ಇದ್ದರೆ ತಿಂಗಳ ಕಡೆಯ ತಾರೀಖಿನೊಳಗಾಗಿಯೇ ನಮ್ಮ ಕಾರ್ಯಾಲಯಕ್ಕೆ ಬರೆಯಬೇಕು. ಆ ಬಳಿಕ ಬರುವ ಆಕ್ಷೇಪಗಳು ನಮಗೆ ಗಣ್ಯವಾಗದು

೨ ವರ್ಗಣೀದಾರರು ತಾವು ಬರೆಯುವ ಕಾಗದಗಳಲ್ಲಿ ವರ್ಗಣೀದಾರರ ಸಂಖೆಯನ್ನು ಸ್ಪಷ್ಟವಾಗಿ ಕಾಣಿಸಿದ್ದರೆ ಅನುಕೂಲ

೩ ವಿಳಾಸಗಳನ್ನು ತಿಂಗಳು ಎರಡು ತಿಂಗಳಿಗೊಂದು ಬಾರಿ ಬದಲಾಯಿಸುವುದರಿಂದ ಪತ್ರಿಕೆಯು ಕೈತಪ್ಪಬಹುದು ಅಡಿಗಡಿಗೂ ಬದಲಾವಣೆಯಾಗಬೇಕೆಂದರೆ ಸಾಧ್ಯವಲ್ಲ. ಈ ಕಾರಣದಿಂದ ನಂದಿನಿಯಲ್ಲಿ ಸಹಾನುಭೂತಿಯುಳ್ಳ ಗ್ರಾಹಕ ವರ್ಗವು ತಮ್ಮ ಸರಿಯಾದ ಗೊತ್ತಾದ ವಿಳಾಸಗಳನ್ನೇ ಕಾಣಿಸಬೇಕಲ್ಲದೆ ಪದೇ ಪದೇ ಆಕ್ಷೇಪಿಸುವದಕ್ಕಾಗಲಿ, ತಮ್ಮ ತಪ್ಪು ವಿಳಾಸಗಳಿಂದ ಕೈತಪ್ಪಿನ ಸಂಚಿಕೆಗಳಿಗಾಗಿ ಅಂಚೆಯಾಳುಗಳ ಮೇಲೆ ತಪ್ಪಿತಗಳನ್ನು ಹೊರೆಯಿಸಿ ಇಲ್ಲವೆ ಪತ್ರಚಾಲಕರನ್ನೇ ನಿಂದಿಸುವ ಪ್ರಯತ್ನ ಮಾಡಿ ವೃಥಾ ತೊಂದರೆ ಪಡಿಸಬಾರದೆಂದೂ ಕೋರಿದೆ.

# ವಿಮಲಾದೇವಿ.

(ಮೂರನೇ ಸಂಚಿಕೆಯ ಮುಂದಕ್ಕೆ ಸಾಗಿದ್ದು)

"ನಿನ್ನ ಮಾತನ್ನು ಕೆಟ್ಟೆಡು ವಿಮಲಾ! ಕ್ಷತ್ರಿಯ ಧರ್ಮವನ್ನು ಬಿಟ್ಟು ತುರುಷ್ಕರಿಗೆ ವಿಧೇಯನಾಗಿ ನಡೆಯುತ್ತಿರುವಾತನು, ಎಷ್ಟೋ ಸಮೀಪಬಂಧುವಾಗಿದ್ದರೂ ತ್ಯಾಜ್ಯನೇ ಸರಿ ಈ ಕಾರಣದಿಂದಲೇ ಯಶವಂತಸಿಂಹನನ್ನು ರಾಜಲೋಕವೆಲ್ಲವೂ ದೂಷಿಸುತ್ತಿರುವದು, ನಾನೆಷ್ಟು ಬಗೆಯಾಗಿ ಬೇಡವೆಂದರೂ ಕೇಳದೆ, ನಿಮ್ಮಣ್ಣನಾದ ಶಿವ ಸಿಂಗನು ಯುದ್ಧಕ್ಕಾಗಿ ಅತನೊಡನೆ ಕಾಬೂಲಿಗೆ ಹೋದನು ಯುದ್ಧ ದಲ್ಲಿ ತನಗೆಷ್ಟು ಉತ್ಸಾಹವಿರಲಿ, ಕೌಶಲವಿರಲಿ, ಪೂರ್ವಾಪರ ವಿವೇ ಚನೆಯೋ ಬೇಡವೇ? ಬಾಲ್ಯದಿಂದ ನಿಮ್ಮಿಬ್ಬರಿಗೂ ಸಮವಾಗಿ ಬಾಣ ವಿದ್ಯೆಯನ್ನು ಕಲಿಯಿಸಿದೆನು ನೀನೇನು ಅವನಿಗೆ ಕಡಮೆಯಾದವಳಾ ಗಿಲ್ಲ ನಾನು ಬೇಟೆಗೆ ಹೊರಡುವಾಗಲೆಲ್ಲ ನನ್ನೊಡನೆ ನೀನೂ ಬಂದು, ಭಯಂಕರಗಳಾದ ಮೃಗಗಳನ್ನು ಕೊಲ್ಲುವದರಲ್ಲಿ ಎಷ್ಟು ಬಾರಿ ನಿನ್ನ ಬಾಣಕೌಶಲವನ್ನು ಪ್ರಕಟಿಸಿಲ್ಲ? ಈ ಕಾರಣದಿಂದಲೇ ರಾಜಪುತ್ರ ಸಂಸ್ಥಾನದಲ್ಲೆಲ್ಲಾ ನಿನ್ನ ಕೀರ್ತಿಯು ವ್ಯಾಪಿಸಿರುವದ ಲ್ಲವೇ? ಇದರಿಂದಲ್ಲವೇ, ಸಮಸ್ತ ರಾಜಲೋಕವು ನಿನ್ನಲ್ಲಿ ಅಭಿ ಮಾನಪಡುತ್ತಿರುವದು? ಒಂದು ವೇಳೆ ನಿನ್ನ ಇಷ್ಟದಂತೆ ಶಿವಸಿಂಗ ನನ್ನು ಕರೆಯಿಸಿದುದಾದರೆ, ರಾಜಧರ್ಮನಿಷ್ಠರಾದ ನಮ್ಮ ರಾಜಪು ತ್ರರಿಂದ ನನಗೆ ದೊರೆಯುತ್ತಿದ್ದ ಗೌರವವೆಲ್ಲವೂ ಹೋಗಿ, ಅಪವಾದ ವುಂಟಾಗುವದಿಲ್ಲವೇನು? ಅದಕ್ಕಾಗಿಯೇ ಮಗನನ್ನೂ ಬಿಟ್ಟಿರುವೆನು

"ಅಪ್ಪಾಜೀ! ಇಷ್ಟರಿಂದಲೇ ಹೀಗೆ ಇಷ್ಟರ ಕಠಿಣವನ್ನುವಹಿಸಬಾ ರದು. ಮಕ್ಕಳು ಎಷ್ಟು ತಪ್ಪುಗಳನ್ನು ಮಾಡುವರಾದರೂ, ತಾಯಿ ತಂದೆಗಳು ಅವರ ಅಪರಾಧವನ್ನು ಕ್ಷಮಿಸಿ, ಅವರನ್ನು ಮೇಲ್ಮೆಗೆ ತರುವದು ಅವರ ನಿಸರ್ಗವಾತ್ಸಲ್ಯದ ಗುಣವೇ ಆಗಿದೆ ನೀವೂ ನಮ್ಮ ತಾಯಿ ಗತಿಸಿದುದು ಮೊದಲು ಈ ವರೆಗೆ, ನಮಗೆ ಯಾವ ಭಾಗದಲ್ಲಿಯೂ ಕೊರತೆಯಾಗದಂತೆ ಕಾಪಾಡಿದಿರಿ. ನಮ್ಮನ್ನು ತಮ್ಮ

ಪ್ರಾಣಕ್ಕೂ ಹೆಚ್ಚಾಗಿಯೇ ಭಾವಿಸಿ ಪ್ರೀತಿಸುತ್ತಲೂ ಇರುವಿರಿ- ನಮ್ಮನ್ನು ಸಂತೋಷಪಡಿಸುವುದಕ್ಕಾಗಿಯೇ ತಮ್ಮ ಎಷ್ಟೋ ರಾಜ ಕಾರ್ಯದ ಮಧ್ಯದಲ್ಲಿಯೂ ನಮಗಾಗಿ ವಿನೋದವನ್ನು ಕಲ್ಪಿಸಿ ಕೊಟ್ಟು, ನಮ್ಮ ಆಟಪಾಟಗಳಿಂದ ನಲವೇರಿ, ನಮ್ಮನ್ನು ಉಬ್ಬಿ ಸಿಯೂ ಇರುತ್ತೀರಿ ಅಪ್ಪಾಜೀ, ಜ್ಞಾಪಿಸಿಕೊಳ್ಳಿರಿ! ಒಂದಾನೊಂದು ದಿನ, ನಾನೂ, ನನ್ನ ಅಣ್ಣನೂ, ಹಟತೊಟ್ಟು, ಪಂಥವಿಟ್ಟು, ಧನು ರ್ಬಾಣಗಳಿಂದ ವಿನೋದವಾಡುತ್ತಿರಲು, ನೀವು ನಮ್ಮ ಆಟಗಳಿಗ ಸಂತೋಷಪಟ್ಟು, ನಮ್ಮ ಅಣ್ಣನನ್ನು ಕರೆದು,–'ಶಿವಸಿಂಗ್'! ಆ ದೂರ ದ ರಸಾಲವೃಕ್ಷ ಶಾಖೆಯಲ್ಲಿರುವ ಹಣ್ಣನ್ನು ನಿನ್ನ ಬಾಣದ ಗುರಿ ಯಿಂದ ಕೆಡಹಬಲ್ಲೆಯಾ? ಅದನ್ನು ನೀನು ಗುರಿಕಟ್ಟಿ ಕೆಡಹಿದೆಯಾ ದರೆ ನಿನಗೆ ನಾಲ್ಕು ವರಹಗಳನ್ನು ಬಹುಮಾನವಾಗಿ ಕೊಡುವೆನು" ಎಂದು ಹೇಳಲಿಲ್ಲವೇ? ಅದರಂತೆಯೇ ನಮ್ಮ ಅಣ್ಣನೂ ಪಂಥವನ್ನು ಗೆದ್ದು, ಹಣ ನ್ನು ಕೆಡಹಿ, ತಮ್ಮಿಂದ ಬಹುಮಾನ ಧನವನ್ನು ಪಡೆಯ ಲಿಲ್ಲವೇ? ಅಂತಹ ಪ್ರಾಣಾಧಿಕ ಪುತ್ರನ ವಿಷಯಕವಾಗಿದ್ದ ಪ್ರೀತಿ ಯೆಲ್ಲವೂ ಈಗ ಏನಾಯಿತು? ಇದೊಂದು ಅಲ್ಪವಾದ ಅಪರಾಧ ಕ್ಕಾಗಿ ಇಷ್ಟು ಕಠಿಣವಾದ ಶಿಕ್ಷೆಯನ್ನು ವಿಧಿಸುವುದು ನ್ಯಾಯವಾ ದುದೇ?"

"ಸರಿಸರಿ! ವಿಮಲಾ! ನೀನು ಭ್ರಾತೃಸ್ನೇಹದಿಂದ ಇಷ್ಟು ದೂರ ಹೇಳುತ್ತಿರುವೆ, ಬಲ್ಲೆ! ಕೇಳು, ನೀವಿಬ್ಬರೂ ಸೇರಿ ಆಡುತ್ತಿರುವಾಗ ನಿನ್ನೊಬ್ಬಳನ್ನೇ ಪರೀಕ್ಷಿಸಿಲ್ಲವೆ? ನೀನು ಕುದುರೆಯನ್ನೇರಿ ವಾಯುವೇ ಗದಿಂದ ಹೋಗುತ್ತಿದ್ದರೂ, ನಾನಿಟ್ಟ ಗುರಿಯನ್ನು ನೀನು ಎಷ್ಟು ಬಾರಿ ಹೊಡೆಯಲಿಲ್ಲ? ವಿದ್ಯಾಪ್ರವೀಣತೆಯಿರುವದೆಂದು ದುರ್ಮಾ ರ್ಗದಲ್ಲಿ ಪ್ರವರ್ತಿಸಬಹುದೇ? ನನಗೂ ದಿನಗಳೆಯುತ್ತ ಬಂದಿತು ಕೂದಲು ನರೆಯುತ್ತಿದೆ ದೇಹವೂ ಕೃಶವಾಗುತ್ತಿದೆ ಈ ವೇಳೆಯಲ್ಲಿ ಆಪ್ಯಾಯನನೂ, ಪ್ರಾಯಸಮರ್ಥನೂ ತೇಜಸ್ವಿಯೂ, ರಾಜ್ಯಾಭಿಷಿ ಕ್ತನಾಗಲು ಅರ್ಹನೂ ಆದ ಮಗನಲ್ಲಿ ವೃಥಾವಿರೋಧವನ್ನು ಬೆಳೆ ಯಿಸಲೇಕೆಂದು ಎಷ್ಟೆಷ್ಟೋ ಸಾಹಸಪಟ್ಟು ನೋಡಿದೆನು; ಫಲವಿಲ್ಲ

ವಾಯಿತು ಇನ್ನು ನನಗೆ ಪುತ್ರನೂ ಪುತ್ರಿಯೂ, ನೀನೇ ಆಗಿರುವೆ! ನನ್ನ ಕಾಲಾನಂತರದಲ್ಲಿ ನೀನೇ ನನ್ನ ರಾಜ್ಯಾಧಿಕಾರಿಣಿ---"

"ಬೇಡಿರಿ, ಬೇಡಿರಿ, ಅಪ್ಪಾಜೀ! ಉದ್ರೇಕಭರದಿಂದ ಅಭದ್ರವಾಕ್ಯವೇನನ್ನೂ ಆಡಬೇಡಿರಿ! ನಾನು ತಮ್ಮ ಆಶೀರ್ವಾದ ಮಾತ್ರಕ್ಕೆ ಪಾತ್ರಳಲ್ಲದೆ, ಪದವೀಧಾರಣೆಗೆ ಪಾತ್ರಳಲ್ಲ ಅದಕ್ಕೆ ಪಾತ್ರನು, ನನ್ನ ಭ್ರಾತೃ, ಶಿವಸಿಂಗನಲ್ಲದೆ ಬೇರೆಯಾರೂ ಅರ್ಹರಿಲ್ಲ

ಮೇಲೆ ಹೇಳಿದ ಉತ್ತರ ಪ್ರತ್ಯುತ್ತರಗಳು, ರೂಪನಗರಾಧಿಪತಿಯಾದ ವಿಜಯಸಿಂಹನಿಗೂ, ಆತನ ಮಗಳಾದ "ವಿಮಲಾದೇವಿ"ಗೂ ನಡೆಯುತ್ತಿದ್ದವು ರೂಪನಗರವು ರಾಜಪುತ್ರಸ್ಥಾನದಲ್ಲಿ ಒಂದು ಸಾಮಂತರಾಜ್ಯಕ್ಕೆ ರಾಜಧಾನಿಯಾಗಿದ್ದಿತು ವಿಜಯಸಿಂಹನೇ ರೂಪನಗರದ ರಾಜನು. ಈತನು ಬುದ್ಧಿಚಾತುರ್ಯ, ರಾಜ್ಯತಂತ್ರ, ಸ್ವಧರ್ಮಾನುಷ್ಠಾನಗಳೇ ಮೊದಲಾದ ಉದಾತ್ತ ಗುಣಗಳಲ್ಲಿ ಅದ್ವಿತೀಯ ಪುರುಷನಾಗಿದ್ದನಲ್ಲದೆ, ಪರಿಶುದ್ಧವಾದ ಕ್ಷಾತ್ರತೇಜವನ್ನು ಸಂರಕ್ಷಿಸುವುದರಲ್ಲಿ ಈತನು ತೊಟ್ಟಿದ್ದ ಪ್ರತಿಜ್ಞೆಯು ಆಶ್ಚರ್ಯಕರವೇ ಆಗಿದ್ದಿತು ಪ್ರತಿಜ್ಞಾಪರಿಪಾಲನೆಯಲ್ಲಿ ಈತನಿಗಿದ್ದ ಜಾಗರೂಕತೆ, ಅವಿಶ್ರಾಂತ ಪ್ರಯತ್ನಗಳನ್ನು ನೋಡಿ, ರಾಜಪುತ್ರರೆಲ್ಲರೂ ಈತನಲ್ಲಿ ಭಕ್ತಿಗೌರವವುಳ್ಳವರಾಗಿದ್ದರು ಈತನ ಸಂಸಾರದಲ್ಲಿ 'ಶಿವಸಿಂಗ'ನೆಂಬ ಮಗನೂ, 'ವಿಮಲಾದೇವಿ' ಯೆಂಬ ಮಗಳೂ ಇಬ್ಬರೇ ಮಕ್ಕಳಿದ್ದರು ಈ ಮಕ್ಕಳನ್ನು ಚಿಕ್ಕಂದಿನಲ್ಲಿಯೇ ಹೆತ್ತತಾಯಿಯು, ಬಿಟ್ಟು, ಕಾಲಧರ್ಮವಶಳಾದಳು ವಿಜಯಸಿಂಹನು ತನಗಾದ ಪತ್ನೀವಿಯೋಗ ಸಂತಾಪವನ್ನೂ, ಕೇವಲ ಬಾಲ್ಯಾವಸ್ಥೆಯಲ್ಲಿದ್ದ ತನ್ನ ಮಕ್ಕಳಿಗುಂಟಾದ ಮಾತೃವಿಯೋಗ ದುಃಖವನ್ನೂ, ತನ್ನ ಅಭ್ಯಾಸಬಲದ ಮನೋದಾರ್ಢ್ಯದಿಂದ ತಡೆದು, ಮಕ್ಕಳನ್ನು ಮುಂದಕ್ಕೆ ತರಲು ಸಂಕಲ್ಪಿಸಿ, ಅವರನ್ನು ತನ್ನ ಪ್ರಾಣಕ್ಕೂ ಹೆಚ್ಚಾಗಿ ಪ್ರೀತಿಸಿ, ಅವರಿಗೆ ರಾಜಯೋಗ್ಯವಾದ ವಿದ್ಯೆಯನ್ನು ಕಲಿಸುತ್ತ ಬಂದನು.

ಕ್ರಮವಾಗಿ ಶಿವಸಿಂಗ, ವಿಮಲಾದೇವಿಯರು, ಬಾಣವಿದ್ಯೆ, ರಥ, ಗಜ, ತುರಗಾರೋಹಣವೇ ಮೊದಲಾದ ಅನೇಕ ವಿದ್ಯೆಗಳಲ್ಲಿ ತಮ್ಮ

ಸಂಗಡಿಗರನ್ನು ಮೀರಿಸಿ, ತಂದೆಯಾದ ವಿಜಯಸಿಂಹನಿಗೆ ಸಂತೋಷವನ್ನು ಹೆಚ್ಚಿಸುತ್ತ ಬಂದರು. ಶಿವಸಿಂಗನು ಸಹಜವಾದ ಕ್ಷಾತ್ರತೇಜದಿಂದ ಮೆರೆಯುತ್ತಿರುವವನು, ಮೇಲಾಗಿ ಈತನ ಬಾಣವಿದ್ಯಾಕೌಶಲ್ಯ, ಯುದ್ಧೋತ್ಸಾಹಗಳು ಈತನನ್ನು ರಣಕ್ರೀಡೆಯಲ್ಲಿ ಅತ್ಯಾತುರನನ್ನಾಗಿ ಮಾಡಿದುದರಿಂದ ಇವನು ತನ್ನ ಆಶಾಪೂರ್ಣತೆಗೆ ಕಾಲವನ್ನು ಇದಿರು ನೋಡುತ್ತಿದ್ದನು. ಕಾಲವೂ ದೊರೆದಿತು ಹೇಗೆ? ರಾಜಪುತ್ರರಿಗೆ ಮಹಮ್ಮದೀಯರಲ್ಲದ, ಮತ್ತಾವ ಶತ್ರುಗಳೂ ಆ ಕಾಲದಲ್ಲಿರಲಿಲ್ಲವೆಂದೇ ಹೇಳಬಹುದು. ಭೀತಚಿತ್ತರಾದ ಕೆಲವು ಮಂದಿ ರಾಜಪುತ್ರರು, ಆ ಕಾಲದಲ್ಲಿ, ಪ್ರವರ್ಧಮಾನನಾಗಿದ್ದ ಮೊಗಲ್ ಸಮ್ರಾಟ್ ಔರಂಗಜೇಬನಿಗೆ ವಿಧೇಯರಾಗಿದ್ದರು. ಇದು ಶಿವಸಿಂಗನಿಗೆ ಸರಿಬೀಳಲಿಲ್ಲವಾದರೂ ಮಾಡುವದೇನು? ಅಖಂಡವಾದ, ಮೊಗಲ್ ಸೇನೆಯನ್ನು ತಮ್ಮ ಅತ್ಯಲ್ಪ ಸೈನ್ಯದೊಡನೆ ಪ್ರತಿಭಟಿಸುವುದು ಹೇಗೆ? ವೃಥಾ ಪ್ರಯಾಸದಿಂದ ಅಪಜಯವನ್ನು ತಾನೇ ತಂದಂತಾಗುವದಲ್ಲವೇ? ಹೀಗೆಂದು ಭಾವಿಸಿ, ತನ್ನ ಪೌರುಷವನ್ನು ಕಟ್ಟಿಡಬೇಕಾಯಿತು. ಆದರೆ ಹೆಚ್ಚು ಕಾಲ ಹಾಗೆ ಸುಮ್ಮನಿರಲಾಗಲಿಲ್ಲ. ಯುದ್ಧೋತ್ಸಾಹಿಯಾಗಿದ್ದ ಆ ತರುಣ ರಾಜಪುತ್ರನು, ಔರಂಗಜೇಬನ ಸಾಮಂತರಾಜರಲ್ಲೊಬ್ಬನಾದ ಜೋಧಪುರದ ಯಶವಂತಸಿಂಹನು, ಬಾದಶಹನ ಅಪ್ಪಣೆಯಂತೆ ಕಾಬೂಲಿಗೆ ದಿಗ್ವಿಜಯಕ್ಕಾಗಿ ಹೊರಟುದನ್ನು ಕಂಡು, ತನ್ನ ಕಾಮನೆಯನ್ನು ಈಡೇರಿಸಿಕೊಳ್ಳಲು ಇದನ್ನು ಬಿಟ್ಟರೆ ಮತ್ತೆ ವೇಳೆಯು ಸರಿಯಾಗಿ ದೊರೆಯಲಾರದೆಂದೋ, ಅಥವಾ, ಸಮೀಪಬಂಧುವಾದ ಯಶವಂತಸಿಂಹನ ಸಹಾಯವಾಗಿ ಹೋಗುವುದು ತನಗೆ ಕರ್ತವ್ಯವೆಂದೋ ಹೇಗೂ ಈತನು ಆತನೊಡನೆ ದಂಡಯಾತ್ರೆಗೆ ಹೊರಟನು. ಯಶವಂತಸಿಂಹನು ಕ್ಷತ್ರಿಯ ವೀರನಾಗಿದ್ದರೂ, ಔರಂಗಜೇಬನಿಗೆ ವಿಧೇಯನಾಗಿ, ಆತನನ್ನು ಸೇವಿಸುತ್ತಿದ್ದುದರಿಂದ ರಾಜಪುತ್ರರೆಲ್ಲರಿಗೂ ಆತನು ಶತ್ರುವಾಗಿದ್ದನು. ಈ ಕಾರಣದಿಂದಲೇ ವಿಜಯಸಿಂಹನು; ಯಶವಂತನೊಡನೆ ಸೇರಬೇಡವೆಂದು ತನ್ನ ಮಗನಿಗೆ ಎಷ್ಟೋ ಬಾರಿ ಹೇಳಿದ್ದರೂ, ರಣೋತ್ಸಾಹ ಗರ್ವಿತನಾದ ಶಿವ

ಸಿಂಗನು ತಂದೆಯ ಮಾತುಗಳನ್ನು ಕೇಳದೆ ಹೋದನು. ಇದರಿಂದ ವಿಜಯಸಿಂಹನು ಕುಮಾರನ ಮರ್ಯಾದಾತಿಕ್ರಮಣಕ್ಕೆ ಖತಿಗೊಂಡು, ಔರಂಗಜೇಬನ ದಾಸನಾಗಿರುವ ಯಶವಂತನೊಡನೆ ಸೇರಿ, ತನ್ನ ಮನೆತನದ ಗೌರವಕ್ಕೂ, ಕ್ಷತ್ರಿಯ ಧರ್ಮಕ್ಕೂ ಕಲಂಕವನ್ನು ತಂದ ನೆಂಬ ಆಗ್ರಹದಿಂದ, ಮಗನನ್ನು ತನ್ನ ರಾಜಧಾನಿಯಾದ ರೂಪ ನಗರದಲ್ಲಿರಲಾಗದೆಂದು ಓಡಿಸಿ, ಮತ್ತೆ ಕಾಲಿಡಕೂಡದೆಂದು ಅಲಂ ಘ್ಯವಾದ ಶಾಸನವನ್ನು ವಿಧಿಸಿದನು. ಪಿತನ ಆಗ್ರಹಕ್ಕೆ ಪಾತ್ರನಾಗಿ, ಹೊರಡಿಸಲ್ಪಟ್ಟುದು ಮೊದಲು, ಶಿವಸಿಂಗನು, ಯಶವಂತನಿಗೆ ಬಲ ಭುಜನಾಗಿದ್ದು ಅನೇಕ ಯುದ್ಧಗಳಲ್ಲಿ ಆತನಿಗೆ ಸಹಾಯಮಾಡಿ, ತನ್ನ ಶೌರ್ಯ, ಸಾಹಸ, ಕೌಶಲ್ಯ, ಚಾತುರ್ಯಗಳಿಂದ ಕೆಲವು ದಿನಗ ಳಲ್ಲಿಯೇ ಆರವಲೀ ಪರ್ವತಪ್ರಾಂತ ನಿವಾಸಿಗಳಾದ ಭಿಲ್ಲರಿಗೆಲ್ಲ ನಾಯಕನಾಗಿ ಕಾಲಕಳೆಯುತ್ತಿದ್ದನು.

ಭಾರ್ಯಾಮರಣವೂ, ಪುತ್ರವಿರಹವೂ, ಅತ್ಯಂತ ಸಂತಾಪಕರವಾ ಗಿದ್ದರೂ, ವಿಜಯಸಿಂಹನು, ಧೈರ್ಯಗುಂದದೆ, ಕೇವಲ ಸ್ವಧರ್ಮ, ಸ್ವದೇಶಾಭಿಮಾನಗಳನ್ನು ಕಾಪಾಡುವದೇ ಕರ್ತವ್ಯವೆಂಬ ದೃಢ ನಿಶ್ಚಯಜ್ಞಾನದಿಂದ, ತನಗ ಇನ್ನು ಮುಂದೆ, ಪುತ್ರಿಯೂ, ಪುತ್ರನೂ "ವಿಮಲಾದೇವಿಯೇ" ಆಗಿರುವಳೆಂಬ ಸಮಾಧಾನವನ್ನು ತೆಗೆದು ಕೊಂಡು, ಮಗಳನ್ನು ಅತ್ಯಂತ ಪ್ರೀತಿಯಿಂದ ಕಾಪಾಡುತ್ತಿದ್ದನು. ಮಗಳನ್ನು ಅರೆಗಳಿಗೆಯಾದರೂ ಬಿಟ್ಟಿರಲಾರದೆ, ತಾನು ಬೇಟೆಗಾಗಿ ಅಡವಿಗೆ ಹೊರಟಾಗಲೂ, ಯುದ್ಧಕ್ಕೆ ಹೊರಡುವಾಗಲೂ, ತನ್ನ ಜತೆಯಲ್ಲಿಯೇ ಇವಳನ್ನೂ ಕರೆದುಕೊಂಡು ಹೋಗುತ್ತಿದ್ದನು. ಅಷ್ಟೇ ಅಲ್ಲ! ಒಬ್ಬ ರಾಜಪುತ್ರ ವೀರನಿಗೆ ತನ್ನ ಮಗಳನ್ನು ಕೊಟ್ಟು ಅಳಿಯನನ್ನೂ ತನ್ನ ಮನೆಯಲ್ಲಿಯೇ ಇಟ್ಟುಕೊಳ್ಳಬೇಕೆಂದು ನಿಶ್ಚ ಯಿಸಿದ್ದನು. ತನ್ನ ಕಾಲಾನಂತರದಲ್ಲಿ ತನ್ನ ರಾಜ್ಯಾಧಿಕಾರಕ್ಕೆ ವಿಮ ಲೆಯನ್ನೇ ನಿಲ್ಲಿಸಬೇಕೆಂದು ಕೂಡ ಯೋಚಿಸುತ್ತಿದ್ದನು. ಈತನ ದೃಢಪ್ರತಿಜ್ಞೆಯನ್ನು ನೋಡಿ, ಈತನು ಸಾಮಂತರಾಜನಾಗಿದ್ದರೂ, ಈತನ ವಿಷಯದಲ್ಲಿ ಈತನಿಗೂ ಹೆಚ್ಚಾದ ಅಧಿರಾಜರುಗಳು ಅಧಿಕ

ವಿಶ್ವಾಸಗೌರವಗಳನ್ನಿರಿಸಿದ್ದರು. ಆ ಕಾಲದಲ್ಲಿ, ರಾಜಪುತ್ರ ಕುಲ ದಲ್ಲಿ ಗಣ್ಯನಾಗಿದ್ದ ಉದಯಪುರಾಧೀಶನಾದ— "ರಾಜಸಿಂಹ"ನು ವಿಜಯಸಿಂಹನಿಗೆ ಅಧಿಕಮರ್ಯಾದೆಯನ್ನು ಕೊಡುತ್ತಿದ್ದನು.

ಸುಗುಣಾಲಂಕೃತೆಯಾದ ವಿಮಲಾದೇವಿಯು ಪ್ರೇಮಮಯಿಯಾದ ತಾಯಿಯನ್ನು ಕಳೆದುಕೊಂಡು, ಒಡನಾಡಿಯಾದ ಅಣ್ಣನನ್ನೂ ಬಿಟ್ಟಿ ರುವದು ತನಗ ಬಹುಕಷ್ಟವಾಗಿ ಬೋಧೆಯಾದರೂ, ತನ್ನ ಏಕ ಮಾತ್ರ ದೈವಸ್ವರೂಪನಾದ ಪಿತನ ಮನಸ್ಸಂತೋಷವೇ ತನ್ನ ಸಂತೋಷವೆಂದು ಸಮಾಧಾನವನ್ನು ತಳದು, ತನ್ನ ಸದ್ವೃತ್ತದಿಂದ ವಿಜಯಸಿಂಹನಿಗೆ ಸಂತೋಷವನ್ನುಂಟುಮಾಡುತ್ತಿದ್ದಳು ವಿಮಲೆಯು ಚಿಕ್ಕಂದಿನಿಂದಲೂ, ಅಣ್ಣನೊಡನೆ ಅನೇಕ ವಿದ್ಯೆಗಳನ್ನು ಅಭ್ಯಸಿಸಿ, ತಕ್ಕಮಟ್ಟಿಗೂ ಅವುಗಳಲ್ಲಿ ಪರಿಶ್ರಮ ಹೊಂದಿದ್ದಳಲ್ಲದೆ, ನ್ಯಾಯ ಶಾಸ್ತ್ರದಲ್ಲಿಯೂ ತಕ್ಕಷ್ಟು ಜ್ಞಾನವನ್ನು ಪಡೆದಿದ್ದಳು. ಒಂದೊಂದು ವೇಳೆ ತನ್ನ ತಂದೆಯೊಡನೆ ರಾಜ್ಯಾಂಗ ವಿಚಾರಗಳನ್ನು ಚರ್ಚಿಸಿ, ನ್ಯಾಯಾನ್ಯಾಯಗಳ ಸೂಕ್ಷ್ಮವನ್ನು ತಿಳಿದುಕೊಳ್ಳುತ್ತಿದ್ದಳು. ತಂದ ಯೊಡನೆ ಬೇಟೆಯಾಡಲು ಹೋಗಿ, ಅನೇಕ ಮೃಗಗಳನ್ನು ಲೀಲಾ ವಿನೋದದಿಂದ ಹೊಡೆದು, ತನ್ನ ತಂದೆಯನ್ನು ಮೆಚ್ಚಿಸುತ್ತಿದ್ದಳು. ತನ್ನ ಕೆಳದಿಯರಾದ ಕುಂದ, ಪದ್ಮೆಯರಿಗೆ, ಅಡಿಗಡಿಗೆ ಮತಬೋಧೆ, ಕುಲಾಚಾರ, ದೇಶಾಭಿಮಾನಗಳ ವಿಚಾರವಾಗಿ ಬೋಧಿಸಿ ತಮ್ಮ ಪವಿತ್ರವಾದ ಕ್ಷಾತ್ರತೇಜಸ್ಸನ್ನು ಆವ ರೀತಿಯಿಂದ ಕಾಪಾಡಿಕೊ ಳ್ಳಬೇಕೆಂಬ ಮಾರ್ಗವನ್ನು ಸೂಚಿಸಿ, ತಮ್ಮ ನಿಜಸ್ವವೆಂತಹುದೆಂಬು ದನ್ನು ಅವರ ಮನಸ್ಸಿನಲ್ಲಿ ಚೆನ್ನಾಗಿ ಬಿಂಬಿಸುವಂತೆ ಮಾಡುತ್ತಿದ್ದಳು. ಚದುರಂಗದ ಆಟದಲ್ಲಿ ಯಾರೂ ಈಕೆಗೆ ಸಮಾನರಾಗುತ್ತಿರಲಿಲ್ಲ. ಇದಲ್ಲದೆ, ಈಕೆ ವಿನೋದಕ್ಕಾಗಿ ತನ್ನ ಪ್ರಾಣಸಖಿಯಾದ ಪದ್ಮೆಯೊ ಡನೆ ಪುರುಷವೇಷ-ಧಾರಣಿಯಾಗಿ ಪಂದ್ಯವನ್ನು ಹಾಕಿಕೊಂಡು, ಕುದುರೆಯನ್ನು ಓಡಿಸುವದರಲ್ಲಿ ತನ್ನ ಅಪ್ರತಿಮ ಚಮತ್ಕಾರ ಬುದ್ಧಿ ಯನ್ನು ಪ್ರದರ್ಶಿಸುವದರಲ್ಲಿಯೂ ದಕ್ಷಳಾಗಿದ್ದಳು.

ಎಷ್ಟಾದರೇನು? ಭ್ರಾತೃಸ್ನೇಹವೇ ಬಲವತ್ತರವು. ಅಣ್ಣನಾದ

ಶಿವಸಿಂಗನು ತಂದೆಗೆ ವಿರೋಧವಾಗಿ ನಡೆದು, ಸ್ವದೇಶಚ್ಯುತನಾಗಿ ಹೊರಟುಹೋದಂದಿನಿಂದಲೂ, ವಿಮಲೆಯ ಉತ್ಸಾಹವು ಅಂತಸ್ಥವಾಗಿಯೇ ಇದ್ದಿತು ಅಲ್ಲದೆ, ಪದ್ಮೆಯ ಅಂತರಂಗ ಕ್ಲೇಶವನ್ನು ನೋಡಿ ನೋಡಿ, ಅನುಕಂಪನಹೃದಯಳಾದ ವಿಮಲೆಗೆ ಅತಿಯಾದ ದು ಖವುಂಟಾಗುತ್ತಿದ್ದಿತು ಏಕೆಂದರೆ, ಪದ್ಮೆಯು ವಿಮಲೆಯ ಸೋದರತ್ತೆಯ ಮಗಳು ಪದ್ಮೆಯು ಸ್ವಭಾವತ ತೇಜಸ್ವಿತೆ, ಮೇಲಾಗಿ ವಿಮಲೆಯ ಒಡನಾಡಿಯೂ, ಆಪ್ತಸಖಿಯೂ, ಆಗಿದ್ದುದರಿಂದ ಇವಳಲ್ಲಿ ವಿಮಲೆಗೆ ಪ್ರೀತಿಯು ಎಷ್ಟುಮಟ್ಟಿಗಿದ್ದಿತೆಂದು ಹೇಳಬೇಕಾದುದಿಲ್ಲ ಪದ್ಮೆಯು ಬಾಲ್ಯದಲ್ಲಿಯೇ ಮಾತಾಪಿತೃವಿಯೋಗಹೊಂದಿ, ಮಾತುಲ (ಸೋದರಮಾವ) ನಾದ ವಿಜಯಸಿಂಹನ ಪೋಷಣೆಗೆ ಒಳಪಟ್ಟುದರಿಂದ ವಿಜಯಸಿಂಹನು ಪದ್ಮೆಯನ್ನು ವಿಮಲೆಯಂತೆಯೇ ಪುತ್ರಸ್ನೇಹದಿಂದ ಪಾಲಿಸುತ್ತಿದ್ದನು ಈ ಕಾರಣದಿಂದ ಒಂದೇ ಕಡೆಯಲ್ಲಿ ಬೆಳೆದವರಾದ ಶಿವಸಿಂಗ ಪದ್ಮೆಯರಿಗೆ ಪರಸ್ಪರ ಸ್ನೇಹವಾಶವೂ ಬೆಳೆದಿದ್ದಿತೆಂಬುದು ಸ್ವತಸ್ಸಿದ್ಧವಾದ ಮಾತು. ಆದರ ಮೇಲೆ ವೀರ ರಮಣಿಯರ ಸ್ನೇಹವು ವೀರಪುರುಷರಲ್ಲಿಯೇ ಎರಕವಾಗುವದರಿಂದ ಪದ್ಮೆಯು, ಕ್ಷತ್ರಿಯ ವೀರನೆನ್ನಿಸಿ ಕುಲೋದ್ಧಾರಕನಾಗುವನೆಂದು ನಿರೀಕ್ಷಿಸಲ್ಪಟ್ಟಿದ್ದ ಶಿವಸಿಂಗನಲ್ಲಿ ಮನಸೋತವಳಾಗಿದ್ದಳೆಂದರೂ ಸುಳ್ಳಾಗುವಂತಿಲ್ಲ ಹಾಗೆಂದ ಬಳಿಕ ಶಿವಸಿಂಗನು ಹೊರಟು ಹೋದುದು ಪದ್ಮೆಯ ಮನಸ್ಸಿಗೆ ಎಷ್ಟು ಖೇದವನ್ನುಂಟು ಮಾಡಿರಬೇಕು? ಇತ್ತ ತನ್ನ ಪ್ರಾಣಸಖಿಯಾದ ಪದ್ಮೆಯ ಮನಸ್ತಾಪ, ಅತ್ತ ಭ್ರಾತೃವಿರಹಜನ್ಯ ಸಂತಾಪ, ಇವೆರಡು ತಾಪಗಳೊಡನೆ, ಪಿತನ ಅಂತರಂಗಿಕ ಕ್ಲೇಶವನ್ನು ಕುರಿತು ಅನುತಾಪ, ಹೀಗೆ ತಾಪತ್ರಯಗಳು ವಿಮಲೆಯನ್ನು ಬಾಧಿಸತೊಡಗಿದುವು ವಿಮಲೆಯು ಹೇಗಾದರೂ ಮಾಡಿ, ತಂದೆಯ ಪ್ರಸನ್ನತೆಯನ್ನು ಪಡೆದು, ಶಿವಸಿಂಗನನ್ನು ಕರೆಯಿಸಿ, ಪದ್ಮೆಯನ್ನು ಶಿವಸಿಂಗನ ಮಹಿಷಿಯಾಗಿ ಮಾಡುವದರಿಂದ ಸರ್ವರ ಮನಸ್ಸಮಾಧಾನವೂ ಆಗುವದೆಂದು ಭಾವಿಸಿ, ಅಣ್ಣನನ್ನು ಕರೆಯಿಸಬೇಕೆಂದು ಸಮಯವೊದಗಿದಾಗಲೆಲ್ಲಾ ತಂದೆಯಲ್ಲಿ ಪ್ರಾರ್ಥಿಸುತ್ತಿ

ದ್ದಳು ಅದೇರೀತಿಯಾಗಿಯೇ ಒಂದು ದಿನ ಮೇಲಿನ ಸಂಭಾಷಣೆಗಳು ನಡೆಯುತ್ತಿದ್ದವು

ವಿಮಲಾದೇವಿ-ವಿಜಯಸಿಂಹರ ಸಂಭಾಷಣವು ನಡೆಯುತ್ತಿದ್ದಲ್ಲಿಗೆ ಸೇವಕನೊಬ್ಬನು ಬಂದು ಕೈಮುಗಿದು "ದೇವಾ! ಪಾದಸಂದರ್ಶನಕ್ಕಾಗಿ ಮಹಮ್ಮದೀಯನೊಬ್ಬನು ದಿಲ್ಲಿಯಿಂದ ಬಂದು ನಗರದ್ವಾರದಲ್ಲಿ ನಿಂತು ಕಾದಿರುವನು" ಎಂದು ನಿವೇದಿಸಿದನು.

ವಿಜಯಸಿಂಹನು ಕುತೂಹಲದಿಂದ "ಅದಾವನೋ ನೋಡುವ, ಜಾಗ್ರತೆಯಾಗಿ ಕರೆತಾ" ಎಂದು ಕಟ್ಟಪ್ಪಮಾಡಿ, ಸೇವಕನನ್ನು ಕಳುಹಿ 'ದಿಲ್ಲಿಯಿಂದ ದೂತನು ಬರುವ ಅಗತ್ಯವೇನು? ಹಾಗೂ ಮಹಮ್ಮದಿಯನು ಬಂದಿರುವನೆಂದರೆ ಸಮಯಸಂತಹದಾಗಿರಬೇಕು" ಎಂದೀ ಪರಿಯಿಂದ ಹಲವು ಬಗೆಯಾಗಿ ವಿಚಾರಮಾಡುತ್ತಿದ್ದನು ಇಷ್ಟರಲ್ಲಿ ಆ ಮೊಗಲ ದೂತನು ಅರಮನೆಯನ್ನು ಹೊಕ್ಕು, ವಿಜಯಸಿಂಹನ ಸಮಕ್ಷಮವನ್ನು ಸಾರಿ, ವಿನಯದಿಂದ ಕೈಮುಗಿದು, ತನ್ನ ಅಂಗರಖೆಯೊಳಗಿದ್ದ ಕಾಗದವನ್ನು ತೆಗೆದು ರಾಜನ ಮುಂದಿರಿಸಿದನು ವಿಜಯಸಿಂಹನು ಆ ಪತ್ರವನ್ನು ಆತುರದಿಂದ ಕೈಕೊಂಡು, ಬಿಚ್ಚಿ ಓದಿದನು ಓದುತ್ತಿದ್ದಂತೆಯೇ ಆತನ ಕಣ್ಣುಗಳಿಂದ ಧಾರಾಕಾರವಾಗಿ ಶೋಕಾಶ್ರುಗಳು ಹರಿದು ಸ್ವಲ್ಪದರಲ್ಲಿಯೇ ರಾಜನನ್ನು ಸ್ತಬ್ಧನನ್ನಾಗಿ ಮಾಡಿತು. ವಿಜಯಸಿಂಹನ ಈ ಅವಸ್ಥೆಯನ್ನು ನೋಡಿ, ಆ ಮಹಮ್ಮದೀಯನು ಹೇಳಿದನು 'ಮಹಾರಾಜಾ! ಕ್ಷತ್ರಿಯ ವೀರರು ಹೀಗೆ ವಿಚಾರಪಡುತ್ತ ಕುಳಿತುಕೊಳ್ಳುವದು ಸರಿಯಲ್ಲ ನಡೆದು ಹೋದುದನ್ನು ಕುರಿತು ವ್ಯಾಕುಲಪಡುವದರಿಂದ ಫಲವೇನಾಗುವದು? ಈ ತುರುಷ್ಕರಿಂದ ನಮಗಿನ್ನೂ ಎಷ್ಟು ಕಷ್ಟಗಳು ಪ್ರಾಪ್ತವಾಗುವವೋ ತಿಳಿಯದು ಈ ಘೋರಕೃತ್ಯವು ನಡೆದ ಮರುದಿನವೇ ತಮ್ಮ ಮಿತ್ರನಾದ ಜ್ಯೇಷ್ಠಮಲ್ಲನು, ಈ ಪತ್ರವನ್ನು ತಮಗೆ ಮುಟ್ಟಿಸಬೇಕೆಂದು ನನ್ನ ಕೈಯಲ್ಲಿ ಕೊಟ್ಟು ಕಳುಹಿದನು'

ಮಹಾರಾಜಾ! ನನ್ನ ಈ ವೇಷವನ್ನು ನೋಡಿ ಶಂಕಿಸಬೇಕಾದುದಿಲ್ಲ. ನಾನು ಉತ್ತಮ ಬ್ರಾಹ್ಮಣನು. ಮಾರ್ಗ ಮಧ್ಯದಲ್ಲಿ ಮಹ

ಮ್ಮದೀಯರ ತೊಂದರೆಗಳಿಗೆ ಸಿಕ್ಕದೆ ತಪ್ಪಿಸಿಕೊಂಡು ಬರುವುದಕ್ಕಾಗಿ ಈ ವೇಷವನ್ನು ಧರಿಸಬೇಕಾಯಿತು ಆದರೂ ದಾರಿಯಲ್ಲಿ ಮಹಮ್ಮದೀಯ ಭಟರು ನನ್ನನ್ನು ಬಿಡದೆ ತೊಂದರೆಪಡಿಸಿದರು. ದೈವಾನುಗ್ರಹದಿಂದ ತಂತ್ರಮಾಡಿ, ತಪ್ಪಿಸಿಕೊಂಡು ಬಂದೆನು ಇನ್ನು ವಿಳಂಬಿಸುವುದರಿಂದ ಕಾರ್ಯಹಾನಿಯಾಗಬಹುದು ವಿಚಾರಪೂರ್ವಕವಾಗಿ ಇನ್ನು ಮುಂದಿನ ಕಾರ್ಯದಲ್ಲಿ ಜಾಗರೂಕರಾಗಿರುವದು ಅವಶ್ಯಕವು ”

ವಿಮಲೆಯು, ದೂತನಾಗಿ ಬಂದು ಪತ್ರವನ್ನೊಪ್ಪಿಸಿ, ಹೇಳಿದ ಆ ವೇಷಧಾರಿಯ ಸ್ಫೂರ್ತಿದಾಯಕಗಳಾದ ಹಿತವಚನಗಳನ್ನೂ, ಪತ್ರಪಠನಮಾತ್ರದಿಂದ ಕ್ಲೇಶ ರೋಷಗಳಿಂದ ವಿವರ್ಣನಾಗಿ ಕುಳಿತ ಪಿತನ ರೀತಿಯನ್ನೂ ನೋಡಿ, ಪತ್ರಸ್ಥವಿಚಾರವೇನೋ ಪ್ರಮಾದವಾಗಿಯೇ ಇರಬಹುದೆಂದು ಶಂಕಿಸಿದಳು ಅದನ್ನು ತಾನೊಮ್ಮೆ ನೋಡಬೇಕೆಂದು ಆಶಿಪಟ್ಟಳಾದರೂ, ಆ ವೇಳೆಯಲ್ಲಿ ತಂದೆಯು ಮುಂದೆ ನಿಂತು ಮಾತನಾಡುವಷ್ಟು ಸಾಹಸಪಡಲಾರದೆ ಶಂಕಾತಂಕೆಗಳಿಂದ ತಂದೆಯಾಡುವ ಮಾತುಗಳಿಂದಾದರೂ ವಿಷಯವನ್ನು ತಿಳಿಯಬೇಕೆಂದು ನಿರೀಕ್ಷಿಸುತ್ತಿದ್ದಳು ವಿಜಯಸಿಂಹನು, ವೇಷಧಾರಿಯಾದ ಆ ಬ್ರಾಹ್ಮಣನ ಸವಿನುಡಿಗಳಿಂದ ಸ್ವಸ್ಥತೆಯನ್ನು ಹೊಂದಿ, ಕ್ಷಾತ್ರತೇಜಸ್ಸಿಗೆ ಉಚಿತವಾದ ಗಾಂಭೀರ್ಯದಿಂದ ಆತನನ್ನು ಕುರಿತು ಹೇಳಿದನು “ಆಹಾ! ಎಂತಹ ದಾರುಣ ವ್ಯಾಪಾರವು ನಡೆದುಹೋಯಿತು! ಯಶವಂತಸಿಂಹನಿಲ್ಲದ ವೇಳೆಯಲ್ಲಿ, ನಿಷ್ಕಪಟಿಯಾದ ಕುಮಾರ ಪೃಥ್ವೀಸಿಂಗನನ್ನು ಕೊಲ್ಲಲು ಬಾದಶಹನೆನ್ನಿಸಿದ ಆ ಔರಂಗಜೇಬನಿಗೆ ಮನಸ್ಸಾದರೂ ಹೇಗೆ ಬಂದಿತು? ಈ ಕುಹಕವನ್ನು ಅವನೆಷ್ಟು ದಿನಗಳಿಂದಲೂ ಮನಸ್ಸಿನಲ್ಲಿ ಅಡಗಿಸಿಕೊಂಡಿದ್ದನು? ರಾಜಪುತ್ರಸ್ಥಾನದಲ್ಲಿ ವೀರರಾದ ಕ್ಷತ್ರಿಯರೇ ಇಲ್ಲವೆಂದು ಮಾಡಿದನಲ್ಲವೆ? ಕ್ಷಾತ್ರತೇಜಸ್ಸೇ ಪರಾಭಿಭೂತವಾಗಿ ಹೋಯಿತೆಂದು ತಿಳಿದು, ಈ ಕೃತ್ರಿಮ ಸಂಧಾನವನ್ನು ಮಾಡಿದನಲ್ಲವೆ? ಆಗಲಿ, ಇಂದು ಅವನು ಹತ್ತಿಸಿದ ಈ ಬೆಂಕಿಯೇ ಅವನ ಸರ್ವನಾಶ ಮಾಡುವದಕ್ಕೆ ಸಾಕಾ

ಗಿದೆ ಆದರೆ, ಮೊಗಲ್ ಸಮ್ರಾಟನ ಕೃಪಾಪಾತ್ರನಾದೆನೆಂದು ಹಿಗ್ಗುತ್ತಿದ್ದ ಯಶವಂತಸಿಂಹನು, ತನ್ನ ಪುತ್ರನ ಮರಣವೃತ್ತಾಂತವನ್ನು ಕೇಳಿ ಹೇಗೆ ಸಹಿಸುವನೋ ತಿಳಿಯದು ”

ವಿಮಲೆಯು ಇನ್ನು ಮುಂದೆ ಸುಮ್ಮನಿರಲಾರದೆ ದಿಗ್ಗನೆದ್ದು ಬಂದು ತಂದೆಯ ಬಳಿಯಲ್ಲಿ ಕುಳಿತು, ಆತನ ಕೈಯ್ಯಲ್ಲಿದ್ದ ಪತ್ರವನ್ನು ತೆಗೆದುಕೊಂಡು ಗಟ್ಟಿಯಾಗಿ ಓದಿದಳು ಪತ್ರದಲ್ಲಿ ಈ ಮುಂದೆ ತಿಳಿಸುವ ವಿವರವು ಲಿಖಿತವಾಗಿದ್ದಿತು

ರೂಪನಗರಾಧೀಶರಾದ ಮಾನ್ಯವರೇಣ್ಯ ಶ್ರೀವಿಜಯಸಿಂಹ ಮಹಾರಾಜರಲ್ಲಿ — ದಿಲ್ಲೀ ನಗರದ ನಿವಾಸಿಯಾದ ಜೀಷ್ಣುಮಲ್ಲನು ನಿವೇದಿಸುವದೇನಂದರೆ—

ವಿಜಯಸಿಂಹ ಮಹಾರಾಜಾ! ನಿನ್ನೆ ಸಾಯಂಕಾಲ ಬಾದಶಹನ ದರಬಾರಿನಲ್ಲಿ ಒಂದು ದಾರುಣ ಕೃತ್ಯವು ನಡೆದಿತು ಇಂತಹ ದ್ರೋಹವು ಈ ವರೆಗೆ ಎಂದೂ ನಡೆದುದಿಲ್ಲ ಆಲಂಗೀರ ಪಾದಶಹನ ಅಪ್ಪಣೆಯಂತೆ ಯಶವಂತಸಿಂಹನು ಕಾಬೂಲ ದೇಶದಲ್ಲಿ ನಡೆಯುತ್ತಿರುವ ದಾಂಧಳೆಯನ್ನು ಅಡಗಿಸುವದಕ್ಕಾಗಿ ಹೊರಟು ತನ್ನ ಪುತ್ರನಾದ ಪೃಥವೀಸಿಂಹನನ್ನು ತನ್ನ ಸಿಂಹಾಸನದ ಮೇಲೇರಿಸಿ, ತಾನು ಪತ್ನೀಪರಿವಾರದೊಡನೆ ನಿಜಸೈನ್ಯ ಸಮೇತನಾಗಿ ಹೊರಟು ಹೋಗಿರುವದನ್ನು ತಾವು ತಿಳಿದೇ ಇರುವಿರಷ್ಟೇ? ಔರಂಗಜೇಬನು ಮೊನ್ನೆ ತನ್ನ ಸೇನೆಯನ್ನೂ ಬಂಗಾರದ ಪಲ್ಲಕ್ಕಿಯನ್ನೂ ಕಳುಹಿ ನೂತನ ಪಟ್ಟಾಭಿಷಿಕ್ತನಾದ ರಾಜನನ್ನು ನೋಡಬೇಕೆಂಬ ನೆವದಿಂದ ಪೃಥವೀಸಿಂಗನನ್ನು ತನ್ನ ಅರಮನೆಗೆ ಕರೆಯಿಸಿಕೊಂಡು, ಆತನನ್ನು ಅತ್ಯಾದರದಿಂದ ಸನ್ಮಾನಿಸಿ, ಉಪಚರಿಸಿ ಕೇವಲ ಪುತ್ರವಾತ್ಸಲ್ಯವನ್ನಿರಿಸಿ ಆದರಿಸುವನೆಂಬಂತೆ ಸಲಿಗೆಯಿಂದ ಕುಮಾರನನ್ನು ಕುರಿತು “ರಾಜಕುಮಾರ! ನಿನ್ನ ತಂದೆಯಂತೆಯೇ ನೀನೂ ಪರಾಕ್ರಮಶಾಲಿಯಾಗಿ ನಮ್ಮ ರಾಜ್ಯಕ್ಕೆ ಮುಖ್ಯಾಧಾರನಾಗಿ ಕೀರ್ತಿಯನ್ನು ಹೊಂದುವಿಯೆಂದು ನನಗೆ ಭರವಸೆಯದೆ ” ಎಂದು ಹಲವು ಬಗೆಯಾಗಿ ಹೊಗಳಿ ಆದಿನ ಆತನಿಗೆ ದೊಡ್ಡ ಔತಣವನ್ನು ಮಾಡಿಸಿ, ಆಸ್ಥಾನಕ್ಕೆ ಕರೆ

ಯಿಸಿ ತನ್ನ ಪಕ್ಕದಲ್ಲಿಯೇ ಕುಳ್ಳಿರಿಸಿಕೊಂಡು ಸಭಾಸದರೆಲ್ಲರೂ ನೋಡುವಂತೆ— "ಪೃಥಿವೀಸಿಂಗ! ನೀನು ನನ್ನ ಕುಮಾರನೇ ಹೊರತು, ಯಶವಂತಸಿಂಹನ ಕುಮಾರನಲ್ಲ, ನಿನ್ನನ್ನು ನೋಡಿದರೆ ನನಗೆ ತುಂಬಾ ಸಂತೋಷವಾಗುವದು ನೀನು ಸ್ವಲ್ಪ ಕಾಲದಲ್ಲಿಯೇ ನಮ್ಮ ರಾಜ್ಯಕ್ಕೆ ಕೀರ್ತಿಯನ್ನು ತರುತ್ತೀಯೆಂದು ನಾನು ನಂಬುತ್ತೇನೆ ಸಂತೋಷಪೂರ್ವಕವಾಗಿ ನಾನು ಕೊಡುವ ಈ ಬಹುಮಾನಗಳನ್ನು ಸ್ವೀಕರಿಸಿ ಜೋಧಪುರವನ್ನು ಸುರಕ್ಷಿತನಾಗಿ ಸೇರು" ಎಂದು ಹೇಳಿ, ಆತನ ಕಂಠಕ್ಕೆ ಕೆಲವು ಅಮೌಲ್ಯವಾದ ರತ್ನಹಾರಗಳನ್ನು ಹಾಕಿ, ತನ್ನ ಕೈಯ್ಯಿಂದಲೇ ವಿಷವಸ್ತ್ರಗಳನ್ನುಡಿಸಿ ಕಳುಹಿದನು ಪಾಪ! ನಿಷ್ಕಲಂಕಿಯಾದಾಸುಕುಮಾರನು ಮನೆಯನ್ನು ಸೇರಿದಕ್ಷಣವೇ ವಿಷವಸ್ತ್ರ ಪ್ರಭಾವದಿಂದ ಜ್ಞಾನ ತಪ್ಪಿ ಬಿದ್ದು ಸ್ವಲ್ಪ ಹೊತ್ತಿನಲ್ಲಿಯೇ ಪರಲೋಕಗತನಾದನು ಈ ಸಮಾಚಾರವನ್ನು ತಿಳಿದ ಕೂಡಲೆ ಔರಂಗಜೇಬನು ಅಂತರಂಗದಲ್ಲಿ ಸಂತೋಷಪಡುತ್ತಿದ್ದರೂ ಹೊರಗೆ ಅತ್ಯಂತ ವ್ಯಾಕುಲಪಟ್ಟಂತೆ ನಟಿಸುತ್ತ ಅಯ್ಯೋ! ಸುಕುಮಾರ! ಪೃಥವೀಸಿಂಗಾ!! ಹೋದೆಯಾ? ಇಷ್ಟು ಬೇಗ ನಮ್ಮೆಲ್ಲರನ್ನೂ ಬಿಟ್ಟುಹೋದೆಯಾ? ಅಯ್ಯೋ! ನಾನೆಂತಹ ಬುದ್ಧಿಹೀನನು? ಲೋಕೋತ್ತರನಾದ ಆ ಸುಕುಮಾರನನ್ನು ಕರೆಯಿಸಿ ರಾಜಸಭೆಯಲ್ಲಿ ನಾನು ಎಲ್ಲರ ಮುಂದೆಯೂ ನನ್ನ ಜತೆಯಲ್ಲಿ ಕುಳ್ಳಿರಿಸಿಕೊಂಡು ಸನ್ಮಾನಿಸಿದೆನು ಸಭಿಕರೆಲ್ಲರ ದೃಷ್ಟಿದೋಷದಿಂದಲೇ ಆತನಿಗೆ ಈ ಅಪಮೃತ್ಯು ಉಂಟಾಯಿತು. ಅಯ್ಯೋ ಆತನು ನನಗೆ ಮುಂದೆ ತುಂಬಾ ಸಹಕಾರಕನಾಗುವನೆಂದು ನಂಬಿದ್ದ ನನ್ನ ಆಶೆಯೆಲ್ಲವೂ ನಿರಾಶೆಯಾಯಿತೇ? ದೈವವೇ ನನಗೆ ಹೀಗೆ ವಿರೋಧವಾಗಬಹುದೇ? ಎಂದು ಕಪಟಜಾಲಗಳನ್ನು ಪ್ರದರ್ಶಿಸಿದನು.

ದೇವಾ! ವಿಶೇಷ ವಿವರಣೆಯಿಂದೇನು? ಇಂತಹ ಘೋರಕೃತ್ಯವನ್ನು ಮಾಡುವುದರಿಂದ ತನಗೆ ಎಂತಹ ಪ್ರತಿಫಲವುಂಟಾಗಬಹುದೆಂಬ ವಿಚಾರವೆಳ್ಳಷ್ಟೂ ಇಲ್ಲದೆ ರಾಜಪುತ್ರಸ್ಥಾನದಲ್ಲಿ ತನಗೆ ಇದಿರಾಗುವವರೇ ಇಲ್ಲವೆಂದು ತಿಳಿದು ಪೃಥವೀಸಿಂಗನ ಮರಣದಿಂದ

ಸಫಲಮನೋರಥನಾದೆನೆಂದು ನಲಿಯುತ್ತಿರುವನು. ಈ ಅಧಮ ಕಾರ್ಯ ವನ್ನು ಕೇಳಿದ ಯಾವ ರಾಜಪುತ್ರ ವೀರನಾಗಲಿ, ಸುಮ್ಮನಿರಲಾರನೆಂಧ ಮೇಲೆ, ಇನ್ನು ಈ ನಮ್ಮ ರಾಜಕುಲದಲ್ಲಿ ಪೂಜ್ಯರಾಗಿರುವ ತಮಗೆ ಮತ್ತಿಷ್ಟು ಖತಿಯನ್ನುಂಟು ಮಾಡುವದೆಂದು ನಂಬಿ ನಡೆದ ವಿಚಾರ ವನ್ನು ಸರಿಯಾಗಿ ಬರೆದು ಕಳುಹಿರುವನು ಇತಿ

ಪತ್ರಪಠನಾನಂತರದಲ್ಲಿ ವಿಮಲೆಯು ತನ್ನ ಸಮೀಪಸಬಂಧುವಾ ಗಿದ್ದ ಯಶವಂತಸಿಂಹನಿಗೆ ಉಂಟಾದ ಈ ಪುತ್ರವಿಯೋಗವನ್ನು ಕುರಿತು ದು ಖಿಸುತ್ತ ಕುಳಿತಳು ಪುತ್ರಿಯು ಅಳುತ್ತ ಕುಳಿತುದನ್ನು ನೋಡಿ, ಧೈರ್ಯಾಲಂಕೃತನಾದ ವಿಜಯಸಿಂಹನು ಹೀಗೆ ಹೇಳಿದನು--

"ತಾಯಿ, ವಿಮಲಾದೇವಿ! ದು ಖಪಟ್ಟು ಫಲವೇನು? ದೈವಸಂಘಟ ನವನ್ನು ತಪ್ಪಿಸಲು ಯಾರಿಗೂ ಆಗಲಾರದು ಸಂಕಟಪಟ್ಟ ಮಾತ್ರ ದಿಂದ ಯಶವಂತನಿಗಾಗಲೀ, ಆತನ ಪತ್ನಿಗಾಗಲೀ, ಉಂಟಾಗಿರುವ ಈ ದು ಖವನ್ನು ಹೋಗಲಾಡಿಸಬಲ್ಲೆವೇ? ಶಾಂತಳಾಗು"

ವಿಮಲೆ — ಸ್ಥಿರಭಾವದಿಂದ 'ಅಪ್ಪಾಜೀ! ಕ್ಷತ್ರಿಯ ವಂಶಕ್ಕೆ ಎಂತಹ ದುರ್ಗತಿ ಪ್ರಾಪ್ತವಾಗಿದೆ ನೋಡಿದಿರಾ? ಇನ್ನೂ ಎಲ್ಲಿಯ ವರೆಗೆ ಈ ಕಿರುಕುಳಗಳನ್ನು ಸಹಿಸಬಹುದು? ಘೋರಕೃತ್ಯಗಳನ್ನು ಆಗಾಗ ನಡೆಯಿಸುತ್ತಲೇ ಇರುವ ಔರಂಗಜೇಬನ ವಿಷಯವನ್ನು ಆಲೋಚಿಸದೆ ರಾಜಪುತ್ರರು ಏಕೆ ಸುಮ್ಮನಿರುವರು? ಅವರ ಬಾಹುಗ ಳಲ್ಲಿ ಬಲವಿಲ್ಲವೇ? ಕ್ಷಾತ್ರಧರ್ಮವು ಅಳಿಸಿಹೋಯಿತೇ?

ವಿಜಯ — "ಹೌದು, ತಾಳು! ವಿಮಲಾ! ದುಡುಕಿ ಬೈಯಬೇಡ, ನಿನ್ನ ಮಾತು ನಿಜ! ಈದೆಸೆಯಲ್ಲಿ ನಾವು ಸುಮ್ಮನಿರುವದಾದರೆ ನಮ್ಮ ಕ್ಷತ್ರಿಯವಂಶವೇ ನಾಶವಾಗಬಹುದು ಕೆಲವು ಮಂದಿ ಭೀತಚಿ ತ್ತರಾದ ರಾಜಪುತ್ರರು ಔರಂಗಜೇಬನಿಗೆ ವಿಧೇಯರಾಗಿ ಅವನ ಕ್ರೂರಕೃತ್ಯಕ್ಕೆ ಸಹಾಯಕರಾಗಿರುವರು ಆದರಿಂದಲೇ ಅವನ ಪುಂಡಾಟವು ಮಿತಿಮೀರಿ ಹೋಗುತ್ತಿರುವದು ಇನ್ನು ತಾಳ್ಮೆಯನ್ನು ಬಿಟ್ಟು, ಅವನ ಸರ್ವನಾಶದ ಪ್ರಯತ್ನದಲ್ಲಿ, ಉದ್ಯುಕ್ತನಾಗುವೆನು ಆದರ ಮೇಲೆ ದೈವಯತ್ನವು ಹೇಗಿರುವದೋ ಹಾಗಾಗಲಿ ಏನು

ಮಾಡಬೇಕೆಂದರೂ ನಮ್ಮ ಕ್ಷತ್ರಿಯ ವಂಶದವರಲ್ಲಿ ಐಕಮತ್ಯವೆಂಬುದೇ ಇಲ್ಲವಾಗಿದೆ ಅದು ಕೂಡ ಔರಂಗಜೇಬನ ಹಾವಳಿಯನ್ನು ನೋಡಿ ಸಹಿಸಲಾರದೆ ಅಜ್ಞಾತವಾಸದಲ್ಲಿರುವಂತೆ ಕಾಣುತ್ತದೆ ''

ವಿಮಲಾ —'ಅಪ್ಪಾಜೀ! ಪೃಥವೀಸಿಂಗನ ಮರಣವಾರ್ತೆಯನ್ನು ಕೇಳಿ, ಆ ನನ್ನ ಚಿಕ್ಕಮ್ಮ ಚಂದ್ರಾವತಿಯು ಹೇಗೆ ಸಹಿಸಬಲ್ಲಳೋ-- ತಿಳಿಯದೆಂಬುದೇ ನನ್ನ ವ್ಯಾಕುಲವಾಗಿದೆ ಅಂತಹ ವೀರಮಹಿಷಿಯಾದ ಸಾಧ್ವೀಮಣಿಗೆ ಇಂತಹ ಸಂಕಟವುಂಟಾಗುವದೆಂದು ಕನಸಿನಲ್ಲಿಯೂ ತಿಳಿದಿರಲಿಲ್ಲ ಈ ವೇಳೆಯಲ್ಲಿ ನಾವು ಆ ತಾಯಿಯ ದುಃಖವನ್ನು ವಿಚಾರಿಸುವುದು ಕರ್ತವ್ಯವಾದುದರಿಂದ ನೀವು ಸಮ್ಮತಿಸಿದರೆ, ನಾನಾಕೆಗೆ ಒಂದು ಪತ್ರವನ್ನು ಒರೆಯಬೇಕೆಂದಿರುವೆನು '

ವಿಜಯ 'ತಾಯೀ! ಇದಕ್ಕೆ ಸಮ್ಮತಿಸದೆ ಇರುವೆನೆ? ನಾನೂ ಯಶವಂತಸಿಂಹನಿಗ ಒಂದು ಪತ್ರವನ್ನು ಬರೆಯುವೆನು ಎರಡನ್ನೂ ಒಟ್ಟಿಗೆ ಕಳುಹಬಹುದು ಆಪತ್ಕಾಲದಲ್ಲಿ ಬಂಧುಗಳಿಗೂ ಮಿತ್ರರಿಗೂ ಸಹಾಯ ಮಾಡಬೇಕಾದುದು ಕರ್ತವ್ಯವು ಬಂಧುತ್ವವೊಂದೇ ಅಲ್ಲದೆ, ಬಾಲ್ಯದಿಂದಲೂ ಸ್ನೇಹಬಾಂಧವ್ಯದಲ್ಲಿದ್ದ ಯಶವಂತನನ್ನು ವಿಚಾರಿಸುವುದರಲ್ಲಿ ಹೇಳುವುದೇನು ಆದರೆ, ನನಗೊಂದು ಸಂದೇಹವಿರುವದು ನಮ್ಮ ಪತ್ರಗಳು ಶತ್ರುಗಳ ಕೈಗೆ ಸಿಕ್ಕದೆ ಆತನ ಕೈಸೇರುವದೇನೆಂಬುದೇ ನನ್ನ ಶಂಕೆಯಾಗಿದೆ ಇರಲಿ, ನೀನೇನನ್ನು ಬರೆಯಬೇಕೆಂದಿರುವೆಯೋ ಬೇಗ ಬರೆ. ನಾನು ಚತುರನೂ, ತಂತ್ರಗಾರನೂ, ಆದ ದೂತನನ್ನು ನೋಡಿ ಅವನಲ್ಲಿ ಕಾಗದ(ಪತ್ರ)ಗಳನ್ನು ಕೊಟ್ಟು ಕಳುಹುವೆನು ''

ವಿಮಲೆಯು ಸಮ್ಮತಿಸಿ, ಲೇಖನಕಾರ್ಯಕ್ಕುದ್ಯುಕ್ತಳಾದಳು. ವಿಜಯಸಿಂಹನೂ ಮುಂದಿನಕಾರ್ಯದಲ್ಲಿ ಅಭಿಮುಖನಾದನು (ಈ ಪಿತಾಪುತ್ರಿಯರ ಪತ್ರಗಳು ಈ ಚರಿತ್ರೆಗೆ ಎಷ್ಟು ಸಾಧಕವಾಯಿತೆಂಬದನ್ನು ನಮ್ಮ ವಾಚಕರು ಮುಂದೆ ತಿಳಿಯುವರು.)

---

ಶ್ರೀ

# ಮೂರನೆಯ ಪ್ರಕರಣ.

## ಅಚಲೇಶ್ವರ ಮತ್ತು ವೈಕುಂಠಯೋಗಿ.

"ಅರಾವಲಿ" ಎಂಬ ಪರ್ವತಶ್ರೇಣಿಯು ರಾಜಪುತ್ರಸ್ಥಾನದ ಮಧ್ಯದಲ್ಲಿ ಉತ್ತರ ದಕ್ಷಿಣವಾಗಿ ಕಟ್ಟಲ್ಪಟ್ಟ ಒಂದು ದೊಡ್ಡ ಗೋಡೆಯು ಹಾಗೆ ಹಬ್ಬಿದೆ. 'ಅರಾವಲಿ' ಎಂಬ ಶಬ್ದವು, "ಆದರ್ಶಾವಲಿ" ಎಂಬ ಶಬ್ದದಿಂದ ಉತ್ಪನ್ನವಾಗಿರಬಹುದು 'ಆದರ್ಶಾವಲಿ' ಎಂದರೆ ಕನ್ನಡಿಯ ಸಾಲು ಎಂದು ಅರ್ಥವಾಗುವುದು ಈ ಪರ್ವತದಲ್ಲಿರುವ ಕೆಲವು ಗುಡ್ಡಗಳು "ಸಂಗಮಲಿ" ಎಂಬ ಬಿಳಿಯ ಚಂದ್ರಕಾಂತ ಶಿಲೆಗಳಿಂದ ತುಂಬಿರುವವು ಇವು ಹಗಲು, ಸೂರ್ಯನಿಂದಲೂ, ರಾತ್ರಿ ಚಂದ್ರನಿಂದಲೂ ಕನ್ನಡಿಯಂತೆ ಥಳಥಳನೆ ಹೊಳೆಯುತ್ತಿರುವದರಿಂದ ಇದಕ್ಕೆ 'ಆದರ್ಶಾವಲಿ' ಎಂಬ ಹೆಸರು ಬಂದಿರುವದು. ಈ ಪರ್ವತದ ಸುತ್ತಲೂ ಜಗದ್ವಿಖ್ಯಾತವಾಗಿರುವ ರಾಜಪುತ್ರಸ್ಥಾನಗಳು ಅನೇಕವಾಗಿರುವವು ಈ ಪರ್ವತದ ಈಶಾನ್ಯದಲ್ಲಿ 'ಅಲ್ವಾರ' 'ಭರತಪುರ' ಸಂಸ್ಥಾನಗಳೂ,-ಪೂರ್ವದಲ್ಲಿ ಜಯಪುರ, ಬುಂದೀರಾಜ್ಯಗಳೂ, ಆಗ್ನೇಯ ಭಾಗದಲ್ಲಿ ಸುಪ್ರಸಿದ್ಧವಾದ ಉದಯಪುರ ಸಂಸ್ಥಾನವೂ, ವಾಯುವ್ಯಭಾಗದಲ್ಲಿ ಬಿಕಾನೇರ ರಾಜ್ಯವೂ ಪಶ್ಚಿಮಭಾಗದಲ್ಲಿ ಜೋಧಪುರ ಸಂಸ್ಥಾನವೂ ಈ ಪರ್ವತಕ್ಕೆ ಸ್ವಲ್ಪ ದೂರದಲ್ಲಿಯೇ ಇರುವವು. ಉದಯಪುರ, ರೂಪನಗರವೇ ಮೊದಲಾದ ಕೆಲವು ಪಟ್ಟಣಗಳು ಪರ್ವತದ ಮಧ್ಯಭಾಗದಲ್ಲಿಯೇ ಕಟ್ಟಲ್ಪಟ್ಟಿರುವವು. ಹೀಗೆ ಈ ಪರ್ವತವು ರಾಜಪುತ್ರಸ್ಥಾನಗಳೆಲ್ಲಕ್ಕೂ ಯಾವದಾದರೂ ಒಂದು ಪಕ್ಕದಲ್ಲಿ ಸೇರಿಕೊಂಡಿರುವದರಿಂದ ಆಯಾ ರಾಜ್ಯದ ಅಧಿಪತಿಗಳಿಗೂ, ಪ್ರಜೆಗಳಿಗೂ ಈ 'ಅರಾವಲಿ' ಪರ್ವತದ ವಿಷಯದಲ್ಲಿ ಅಭಿಮಾನವು ವಿಶೇಷವಾಗಿರುವುದು. ಇಷ್ಟೇ ಅಲ್ಲದೆ,

ಜನಗಳಿಗೆ ಉಪಯುಕ್ತವಾದ ಚಿನ್ನ, ಬೆಳ್ಳಿ, ಕಬ್ಬಿಣ, ತಾಮ್ರ, ಉಕ್ಕು ಮೊದಲಾದ ಲೋಹಗಳನ್ನೂ ತಿನ್ನುವುದಕ್ಕೆ ಯೋಗ್ಯವಾದ ನಾನಾ ವಿಧವಾದ ಹಣ್ಣುಗಳನ್ನೂ ಇಂಧನ, ಜೇನತುಪ್ಪ ಮೊದಲಾದ ಪದಾ ರ್ಥಗಳನ್ನೂ ಆರಾವಲಿಯೇ ಕೊಡುತ್ತಿರುವುದು ಹೀಗೆ ಜನರಿಗ ಬೇಕಾದ ಮುಖ್ಯ ದ್ರವ್ಯಗಳನ್ನೆಲ್ಲಾ ಕಾಮಧೇನುವಿನಂತೆ ಕೊಡು ತ್ತಿರುವ ಆರಾವಲಿಯನ್ನು, ಅವರು ಇಷ್ಟದೇವತೆಯಂದೇ ಪೂಜಿಸು ತ್ತಿದ್ದರೆಂದರೆ ಆಶ್ಚರ್ಯವೇನು?

ರಾಜಪುತ್ರರೆಲ್ಲರಿಗೂ ಈ ಪರ್ವತದ ಮೇಲೆ ಅತ್ಯಂತ ಅಭಿಮಾನ ವಿರುವುದಕ್ಕೆ ಮತ್ತೊಂದು ಕಾರಣವೆಂದರೆ —ರಾಜಪುತ್ರರ ಆನುಪೂ ರ್ವಿಕವಾದ ಪುಣ್ಯಚರಿತ್ರೆಗಳನ್ನೂ, ಅವರ ಶೌರ್ಯ ಸಾಹಸಗಳನ್ನೂ ಅವರಲ್ಲಿ ಬೇಡುಗೊಂಡಿದ್ದ ದೇಶಭಕ್ತಿಯನ್ನೂ ಹೊಗಳುವ ಭಟ್ಟ ರಾಜನೆಂದೇ ಇದಕ್ಕೆ ಹೇಳಬಹುದು ರಾಜಪುತ್ರರ ಅನನ್ಯ ಸಾಮಾ ನ್ಯ ಕ್ಷಾತ್ರತೇಜದಿಂದ ಪ್ರಕಾಶಿಸುವ ಕಥಾನಕಗಳನ್ನೂ, ತಮ್ಮ ಸ್ವದೇಶ, ಸ್ವಧರ್ಮಗೌರವಗಳನ್ನು ಸಂರಕ್ಷಿಸುವುದಕ್ಕಾಗಿ, ಹೂವಿನ ಚೆಂಡಿನಂತೆ ತಮ್ಮ ಶಿರಗಳನ್ನು ರಣದೇವತೆಗೊಪ್ಪಿಸಿದ ಅದ್ಭುತಚರಿ ತ್ರರಾದ ವೀರಪುರುಷರ ಪ್ರಭಾವಗಳನ್ನೂ, 'ಶರಣು' ಎಂದೊಡ ನೆಯೇ ತಮ್ಮ ದೀರ್ಘಶತ್ರುವಾಗಿದ್ದರೂ ಅಂತಹರನ್ನು ಕ್ಷಮಿಸಿ, ರಕ್ಷಿ ಸಿದ ಕ್ಷತ್ರಿಯ ಮಹಾಪುರುಷರ ಔದಾರ್ಯ ಗುಣವನ್ನೂ ಆ ಪರ್ವತ ದಲ್ಲಿರುವ ಗಿಡಮರಗಳೂ, ಗುಡ್ಡಗಳೂ ಕಣಿವೆಗಳೂ ಘಂಟಾಘೋ ಷದಿಂದ ಹೇಳುತ್ತಿದ್ದುವು

'ಇದಾವ ಸ್ಥಲವು? ಇದು ಬಪ್ಪಾರಾವಲ್, ಪಾರ್‌ಮಾರ್ ವಂಶ ಜನನ್ನು ಗೆದ್ದ ಸ್ಥಲವು. ಇದಾವ ಪ್ರದೇಶವು? ಇದು ರಾಣಾ, ಮಹಮ್ಮದೀಯರನ್ನು ೨೪ ಸಲ ಓಡಿಸಿದ ಪ್ರದೇಶವು. ಇವೆಂತಹ ಸ್ಥಲವು? ಇದೇ ಕುತುಬುದ್ದೀನನು ಓಡಿಹೋದ ಸ್ಥಲವು ಇದೇ ಅಲ್ಲಾಉದ್ದೀನನನ್ನು ಮೋಸಪಡಿಸಿದ ಸ್ಥಲವು. ಇದು ರಾಣಾಪ್ರತಾ ಪಸಿಂಹನ ೧೦,೦೦೦ ಸೈನಿಕರು ತಮ್ಮ ರಾಜನಿಗಾಗಿ ಪ್ರಾಣವ ನರ್ಪಿಸಿದ ಸ್ಥಲವು

ಹೀಗೆಯೇ ಆ ಪರ್ವತಪ್ರಾಂತ್ಯದಲ್ಲಿ ಹೋಗಿ ಬರುವಾಗಲೆಲ್ಲ ರಾಜಪುತ್ರರು ಪರಸ್ಪರ ಹೇಳಿಕೊಳ್ಳುತ್ತಾ ರೋಮಾಂಚಿತಗಾತ್ರರಾಗುತ್ತಿರುವರು ಈ ಪರ್ವತ ಪ್ರದೇಶವು ರಾಜಪುತ್ರರಿಗೆ ಬಲವಾದ ಕೋಟೆಯಂತಿರುವುದು ರಾಜಪುತ್ರ ಸೈನ್ಯವು ಆ ಪರ್ವತವನ್ನು ಪ್ರವೇಶಿಸಿದ ಕೂಡಲೇ ಎಲ್ಲಿ ಹೋಯಿತೆಂಬುದನ್ನು ತಿಳಿವುದಕ್ಕಾಗಲೀ, ಅವರೊಡನೆ ಯುದ್ಧಮಾಡುವುದಕ್ಕಾಗಲೀ ಎಂತಹ ಪ್ರಬಲ ಶತ್ರುವಿಗಾದರೂ ಅಸಾಧ್ಯವು ಒಂದುವೇಳೆ, ಶತ್ರುಸೈನ್ಯವು ರಾಜಪುತ್ರರನ್ನು ಹಿಮ್ಮೆಟ್ಟಿಸಿ, ಪರ್ವತಾರಣ್ಯ ಪ್ರದೇಶವನ್ನು ಪ್ರವೇಶಿಸಿದುದ್ದಾದರೆ, ಅವರು ಅಲ್ಲಿಂದ ಹಿಂತಿರುಗಿ ಬರುವುದು ದುಸ್ಸಾಧ್ಯವೇ ಸರಿ ಅಲ್ಲಿಯ ಪರ್ವತ ಮಾರ್ಗಗಳೂ, ಕಣಿವೆಯ ದಾರಿಗಳೂ, ಸರ್ವದಾ ಆ ಪರ್ವತಪ್ರಾಂತದಲ್ಲಿ ವಾಸಮಾಡುತ್ತಿದ್ದ ರಾಜಪುತ್ರರಿಗೂ ಅವರ ಸೇವಕರಾದ ಭಿಲ್ಲರಿಗೂ ಮಾತ್ರವೇ ತಿಳಿಯುತ್ತಿದ್ದಿತೇ ಹೊರತು, ಮತ್ತಾರಿಗೂ ತಿಳಿಯುತ್ತಿರಲಿಲ್ಲ ಈ ಕಾರಣದಿಂದಲೇ ತುರುಷ್ಕರು ಅನೇಕಸಲ ಬೆನ್ನಟ್ಟಿ ಬಂದು, ಈ ಪರ್ವತದ ಕಣಿವೆ ದಾರಿಯಲ್ಲಿ ಸಿಕ್ಕಿ ಭಾದೆಪಟ್ಟರು ಆದರೂ ಅಧರ್ಮ ಯುದ್ಧವನ್ನು ಮಾಡಕೂಡದೆಂಬುದು ರಾಜಪುತ್ರರ ಪ್ರತಿಜ್ಞೆಯಾದುದರಿಂದ ತುರುಷ್ಕರು ಹೀಗೆ ಸಿಕ್ಕಿ ಬಾಧೆಪಡುತ್ತಿರುವಾಗ 'ಶರಣು' ಎಂದೊಡನೆಯೇ ಅವರನ್ನು ಮನ್ನಿಸಿಬಿಡುತ್ತಿದ್ದರು ಎಷ್ಟು ದೂರ ಹೇಳಿದರೂ ಹೇಳುತ್ತ ಹೋಗಬಹುದು ರಾಜಪುತ್ರರ ಸದ್ಗುಣ ವೈಭವಾದಿಗಳಿಗೆ ಮೇರೆಯೇ ಇರುವುದಿಲ್ಲವಾದುದಿಂದ ಕೇವಲ ವರ್ಣನ ಮಾಡುವದರಲ್ಲಿಯೇ ನಮ್ಮ ಕಾಲವನ್ನು ಕಳೆಯಬಾರದಲ್ಲವೆ? ವಾಚಕರೇ ಕ್ಷಮಿಸಿರಿ, ಇನ್ನು ಇತ್ತ ಬನ್ನಿರಿ. ಅರಾವಲಿಯ ಮೇಲೆಯೇ ಕುಳಿತಿದ್ದರೆ ಸಾಗುವಂತಿಲ್ಲ ಇನ್ನು ನಮ್ಮ ಕಥಾಭಾಗಕ್ಕೆ ಹೆಚ್ಚು ಸಂಬಂಧವುಳ್ಳ ಅಬೂಪರ್ವತವನ್ನು ಗಮನಿಸುವಾ

(ಮುಂದೆ ಸಾಗುವದು)

॥ ಶ್ರೀ ॥

ಕರ್ನಾಟಕ

# ನಂದಿನಿ

" ಸಿದ್ಧಿಂ ಸರ್ವಾಣಿ ಭೂತಾನಿ, ಭೂತಾನಾಂ ಚೈವ ಯಃ ಪ್ರಭುಃ ।
ದಾಸ್ಯನ್ತಿ ಮಮ ಯೇ ಚಾನ್ಯೇ ಹ್ಯದೃಷ್ಟಾ ಪಥಿಗೋಚರಾ ॥"

ಸಂಪುಟ ೧ ] ೧೮೩೮ ನಳಸಂವತ್ಸರ ಮಾಘ [ ಸಂಚಿಕೆ ೫

## ಕರ್ನಾಟಕ ಭಾರತೀಸ್ತುತಿ.

ರಾಗ॥ (ಕರುಣಿಸು ಕಾರುಣ್ಯ ನಿಧಿಯೆ)

ಸರಿಯಲ್ಲ ನಿನಗಿದು ತಾಯೇ, ಬಂದನರಿಯದ ಕಂದನ ಕಾಯೇ ॥ಪ॥ ಅರಿಗಳಟ್ಟುಳಿಯಿಂದ ಪರಿಪರಿಯಿಂ ನೊಂದೆ ॥ ಪರಿದು ಚಿಂತೆಯ-ನುರಿಯನಾರಿಸಿ । ಅರಿವನಿತ್ತುದ್ಧರಿಸು ಭಗವತಿ, ॥ ಸರಿ ॥ ಅನು ॥ ಕಲಿಕಲುಷಿತ ಮತ್ತ ಯುವತಿಯರ ನಾನಾ ಕಲೆಗಳಂ ಕಪಗಳಂತಲೆ ಯುವದ ॥ ನೆಲೆಕಲೆಯರಿಯದೆ ಅಲಸರಾಗಿರುತಿಹರ ॥ ಬಲುಹಿನಿಂ ಪಿಡಿತಂದು ಭರದಿಂ । ನೆಲಯೊಳ್ಳಿಲ್ಲಿಸಲನಿತು ತಳುವುದ ॥ ಸರಿ ॥೧॥ ಮಮಕಾರವ್ಯಾಧಿ ಪೀಡಿತರ ಬುದ್ಧಿ ಭ್ರಮಣ ಸಂತಪ್ತ ಮಾನಸರ ॥ ವಿಮಲ್ಯವಿಜ್ಞಾನ ಮಹೌಷಧದಿಂದರೆ ॥ ನಿಮಿಷದೊಳೆಚ್ಚರಿಸಿ ಸಲಹುವ ಕ್ರಮವ ತಿಳಿದುಂ ತಿಳುಹದಿರ್ಪುದೆ ॥೨॥ ಜೀವಿಕೋಟಿಗಳಂತು ಧರೆಯೊಳ್ ನಿನ್ನಿಂ ಜೀವಿಸುತಿರೆಯುಂ ಮತಿಯೊಳ್॥ ದೇವಿನಿನ್ನನು ಸಂ-ಭಾವಿಸದಿಹರೇನು? ॥ ಭಾವನಾಲೋಕಟಂದೆನಗತಿ ತೀವ್ರವಾಗಿಹುದ ದೇವನಕ್ಕಟಾ ॥ ಸರಿ ॥೩॥ ಎನ್ನಮ್ಮ ಕನ್ನಡದಂಬೇ ನಾ ನಿನ್ನ ಕಿದನ್ಯರನಂಬೆ ॥ ಮನ್ನಿಸು ನೀನೆಂಬೆ (ಎನ್ನ) ಚನ್ನದ ಕೈಗೊಂಬೆ । ತನ್ನ ತಾನರಿಯದ ಕುನ್ನಿಗಳ ಜನ್ಮಕೆ ನಿನ್ನ ಬೋಧಾಮೃತವನೆರೆದು ಪಾಲಿಸು ॥ ಸರಿ ॥ ೪ ॥ ಶರಣೆಂಬೆನೆಲೆ ತಾಯೆಯುನ್ನ-ರಸನದಿ ಸರಸದಿಂ ನಲಿದಾಡೆ ನಿನ್ನಾ ॥ ವರದಾನ ಮಹಿಮೆಯಿಂ । ಸರಿಯಿಲ್ಲವೆನಿಪೆನಾ ॥ ವರಶೇಷಗಿರಿವರದ ನಂಘ್ರಿಯು । ಸ್ಮರಿಸಿ ಸುಖಿಸುವೆನಾಂ ನಿರಂತರಂ ॥ ೫ ॥

(ನಂದಿನೀ)

ಶ್ರೀಯೈ ನಮಃ

# ಲಕ್ಷ್ಮೀಸ್ತುತಿ-ಸಂಕೀರ್ತನಗಳು.*

(ಭಗಿನಿಯರ ಉಪಯೋಗಕ್ಕಾಗಿ)

## ಲಕ್ಷ್ಮಿಯನ್ನು ಹಸೆಗೆ ಕರೆವುದು

ರಾಗಾ ॥ (ಶಂಕರಿಮಾಂ ಪಾಲಯಾಶು)

ರಾಜಿಸುವೀ ಪೀಠಕೀಗ ರಾಜಮುಖೀ ದಯೆ ಮಾಡು ಬೇಗ ॥ಪ॥ ಚಿತ್ರವಿಚಿತ್ರವಾಗಿ ಮೆರೆವ ರತ್ನಖಚಿತ ಮಂಟಪದಿ ॥ ಕೆತ್ತನೆಯ ಹಸೆಯುಮೇಲೆ । ರತ್ನಗಂಬಳಿಯು ಹಾಸಿ ॥ ರಾಜಿ ॥ ೧ ॥ ಪರಿಪರಿಯ ರಾಗದಿಂದ ತರುಣಿಯರ್ಕಳು ನಿನ್ನ ಪಾಡಿ ॥ ಕರೆಯುತಿಹರೊಳ್ ಕರುಣವಿಟ್ಟು ಅರಸನೊಡನೆ ಸರಸದಿಂದ ॥ ರಾಜಿ ॥೨॥ ಪಂಕಜಾಕ್ಷಿ ನಿನ್ನ ಚರಣಕಿಂಕರರ ಮೊರೆಯ ಕೇಳಿ ॥ ಕನಕಪೀಠದಲ್ಲಿ ಕುಳಿತು ಕಾಂಕ್ಷಿತಾರ್ಥವಿತ್ತು ಸಲಹು ॥ ೩ ॥ ಪರಮಪುರುಷ ಶೇಷಶೈಲ ವರದನರಸಿ ನಿನ್ನ ಗುಣವ ॥ ಸ್ಮರಿಸಿ ಸ್ಮರಿಸಿ ಸುಖಿಸುತಿರುವ । ತರಳೆಯರಂ ಪೊರೆಯೆ ತಾಯೆ ॥ರಾಜಿ ॥ ೪ ॥

---

ರಾಗಾ ॥ (ಶ್ರೀಪತಿ ಬಾರ್ ಹಸೆಗೆ)

ಶ್ರೀರಮಣೀ ಮಣಿ ಬಾರ್ । ಶ್ರೀಕರ ಮಣಿ ಪೀಠಕೆ ॥ ಪ ॥ ಸಾರಸದಳನಯನೆ । ಸುಗುಣಾಭರಣೆ । ಸಾರಸಭವ ವಂದಿತ ಚರಣೆ॥

---

* ಹಿಂದೆ “ಭದ್ರಗೀತಾವಲಿ” ಎಂಬ ಗೀತಾ ಪುಸ್ತಕದ ಪ್ರಸ್ತಾವನೆಯಲ್ಲಿ ಸೂಚಿಸಿದ್ದ “ಆನಂದಗೀತಾವಲಿ”ಯ ಹಾಡುಗಳೇ ಇವು ಇದರಲ್ಲಿಯ ಕೆಲವು ಹಾಡುಗಳು ನಂದಿನಿಯ ಈ ಮೊದಲಿನ ೩ ಸಂಚಿಕೆಗಳಲ್ಲಿಯೂ, ಮತ್ತೆ “ರಮಾನಂದ” “ವಿದ್ಯಾವಿಚಾರ” “ಚಂದ್ರವದನಾ” ಎಂಬ ಪುಸ್ತಕಗಳಲ್ಲಿಯೂ ಬಂದಿರುತ್ತವೆ. ಉಳಿದಿರುವುದನ್ನು ಮುಂದೆ ಸ್ಥಳಾವಕಾಶವಾದಂತೆಲ್ಲಾ ಕೊಡಬೇಕೆಂದಿರುವೆವು. ಭಗಿನಿಯರ ಬಲಾತ್ಕಾರದಿಂದ “ಲಕ್ಷ್ಮೀಸ್ತುತಿ-ಪೂಜಾ, ಸಂಕೀರ್ತನೆ”ಗಳನ್ನು ಮಾತ್ರ ಈ ಸಂಚಿಕೆಯಲ್ಲಿ ಕೊಟ್ಟಿರುತ್ತದೆ

ಕ್ಷೀರಸಾಗರ ನಂದನೇ ಘನ-ಕಾರುಣ್ಯಾಮೃತ ಪರಿಪೂರಿತ ಸದನೆ ॥ ಶ್ರೀ ॥೧॥ ಪವನಾತ್ಮಜಸಂ ಸೇವಿತಾಂಘ್ರಿಯುಗಳೇ । ಪಾಲಿತಾಮರ ಜಾಲೆ॥ ಪಾವನಗುಣಶೀಲೇ ಶಶಾಂಕಫಾಲೇ । ಪಾಲಿಸು ನೀಂ ಪಂಕಜ ಸುಮಮಾಲೆ ॥ ಶ್ರೀ ॥ ೨॥ ಕೇಶವ ಹೃದಯನಿವಾಸಿನೀ ಪದ್ಮಾಸಿನೀ । ಕ್ಲೇಶ ನಿವಾರಿಣಿ ತ್ರಿಭುವನೈಕ ಜನನೀ ॥ ಕಾಮಪಿತ ಶೇಷಗಿರೀಶ ಮನರಂಜಿನಿ ನತಕಾಂಕ್ಷಿತಾರ್ಥಪ್ರದಾಯಿನಿ ॥ ಶ್ರೀ ॥ ೩ ॥

---

## ಆಗಮನ ಸೂಚನೆ.

ರಾಗ॥ (ಎಂದಿಗಾಹುದೊ ತಂದೆಯೇ ನಿನ್ನ)

ಸಿರಿಯು ಬರುವ ಬೆಡಗ ನೋಡಿರೆ ಭರದಿ ಬನ್ನಿರೆ ॥ ಪ ॥ ಶಿರವ ಬಾಗಿ ಚರಣಕೆರಗಿ ಕರವ ಮುಗಿಯಿರೇ ॥ ಅ॥ ಕಾಲಲಂದಿಗೆ ಗೊಲಸುಪಿಲ್ಲಿ ಘಲಿತು ಘಲಿರೆನೆ ॥ ಬಾಲೆಯರ ಬಳಿಗೆ ಬರುವಳೊಲಿದಳೆಂಬೆನೆ ॥ಸಿರಿಯು ॥೧॥ ಮಾತೆಗೆನಿತೋ ಪ್ರೀತಿಯೆಸ್ನೊಳ ಗೈತಂದಳೀದಿನಂ ॥ ಪೂತುದರರೇ ಪೂರ್ವಪುಣ್ಯ ತರುವೆಂದೆಂಬೆನಾಂ॥ ಸಿರಿಯು ॥ ೨ ॥ ಪರಮಪುರುಷ ಶೇಷಶೈಲ ವರದನರಸಿಯಿಂ । ದರರೆ ಒಲಿದಳೆಮಗೆ ಧರೆಯೊಳ್ ಅರಿದದಾವುದಿ ॥ ಸಿರಿಯು ॥ ೩ ॥

---

## ಇದಿರುಗೊಳ್ಳುವದು.

ರಾಗ॥ (ರಘುಕುಲನಾಯಕಾ)

ಭರದಿ ಬನ್ನಿ ಕರೆದುತನ್ನಿ । ಸಿರಿಯುನಿದಿರ್ವಂದು ನೀವ್ ॥ ಸಿರಿಯು ನಿದಿರ್ವಂದು ಭರದಿ ಕರೆದು ತನ್ನಿ ಪೋದದಿ ॥ ಭರದಿ ॥ ಅ ॥ ಕೋಟಿ ಸೂರ್ಯಕಾಂತಿಯನ್ನು ಸಾಟಿಯಾಗಿ ಮಾಡುವಾ । ನೋಟಮಾತ್ರದಿಂದ ಜಗವ । ನಾಟ್ಯರಂಗವೆನ್ನಿಸುವ ॥ ಭರದಿ ॥೧॥ ಕಡಲತನಯೆ ಯೆನಿಸಿ ಮತ್ತೆ ಕಡಲಮಧ್ಯದಲ್ಲಿನೆಲಸಿ ॥ ಕಡಲಶಯನನರಸಿ ಯೆನಿಸಿ ಬಿಡದೆ ಯೆಮ್ಮ ಪೊರೆವಳ ॥ ಭರದಿ ॥ ೨ ॥ ಶೇಷಶೈಲವಾಸನುರದಿ ವಾಸವಾಗಿ ಭಕ್ತರ । ಆಸೆಯನ್ನು ಸಲಿಸುತಿರುವ ಭಾಸುರಾಂಗಿ ಲಕ್ಷ್ಮಿಯ ॥ ಭರದಿ ॥ ೩ ॥

## ಸ್ವಾಗತ.

ರಾಗ॥ (ನೀಲಕಂಠಪದಸರಸಿಜ)

ಬಿಜಯಂಗೈವುದು ತ್ರಿಜಗನ್ಮಾತೆಯೆ । ದ್ವಿಜರಾಜಾನನೆಯೇ ॥ ಅಜರಾಜಾತ್ಮಜ ಸುತನರಸಿಯೆ ಶ್ರೀ ಜಾನಕಿಯೇ ॥ಪ॥ ಪವನಜ ಗರುಡರ ಬಗೆಯಿಂ ನಿನ್ನನು ಸೇವಿಸಲಾನರಿಯೆ । ಕವಿಕುಲ ಚೂಡಾಮಣಿಯೊಲ್ ನಿನ್ನಂ ಭಾವಿಸಲನಗಳವೆ ॥ ಬಿಜಯಂ ॥೧॥ ನೆಲದೊಳ್ ನಿನ್ನೀ ನೆಲೆಯಂ ತಿಳಿಯಲ್ ಬಲ್ಲುವುದಾರೊಳು ಪೇಳ್॥ ಛಲದಿಂ ಪೇಳ್ವರು ಕೆಲಬರು ನಿನ್ನಂ ಚಂಚಲೆಯೆಂದೆನುತ ॥ ಬಿಜಯಂ ॥೨॥ ಎಂತಾದರು ಸುಸ್ವಾಂತರು ನಿನ್ನೀ ಸಿಂಹಾಸನದೊಳ್ ಶಂ ॥ ಶಾಂತ್ಯೌದಾರ್ಯ ಗುಣಾನ್ವಿತೇ ನೀಂ ಮೆರೆ ಸಂತತವು [illegible] ॥ ಬಿಜಯಂ ॥೩॥ ಎಣಿಸಲ್ಕರಿಯದ [illegible]ಣತಾಪದೊಳ್ [illegible] ಹೆಣಗಾಡುತಲಿರುವೀ ॥ ಅಣುಗರ ನೋಟೀ ಕ್ಷಣದೊಳ್ ನಿನ್ನಾ [illegible] ತೋರಿಸು ದೇವೀ ॥ ಬಿಜಯಂ ॥ ೪ ॥ ತಳುವದಿದೇತ[illegible] ನಳಿನದಳಾಂಬಕ ಫಲಿಲನೆ ಬಾರೆಂಬೆ ॥ ಜಲಜತೋಕ್ತನ ಶೇಷಗಿರೀಶನ ಲಲನಾಮಣಿ ಜಗದಂಬೆ ॥ ಬಿಜಯಂ ॥ ೫ ॥

---

## ಪೂಜೆ

ರಾಗ॥ (ತರಣಿವಂಶಾಬ್ಧಿಚಂದ್ರ)

ಪೂಜೆಮಾಡುವ ಬನ್ನಿ ರಾಜೀವನಯನೆಯ ಪೂಜೆ ॥ಪ॥ ಪೂಜೆಮಾಡುವ ಬನ್ನಿ ಮೂಜಗದಂಬೆಯ ॥ ರಾಜರಾಜೇಶ್ವರಿಯ ಪದರಾಜೀವಗಳಿಗೆರಗುತ ॥ ಪೂಜೆ ॥ ಅ ॥ ಸನ್ನುತಾಂಗಿಯರೆಲ್ಲರು ಬನ್ನಿರೆ ಸಂಪನ್ನಗುಣ ಶೋಭಿತರು ॥ ಚಿನ್ನದ ಕಲಶದೊಳ್ತುಂಬಿಹ ಪನ್ನೀರಿಂ । ನನ್ನಿಯಿಂ ತೊಳೆದು ಸಿರಿಪದವನ್ನು ಸಂಸ್ಮರಿಸಿ ಹರಿಯನು ॥ ಪೂಜೆ ॥ ೧ ॥ ಪ್ರೇಮ ಗೌರವವೆಂಬುವ ಹೇಮಾಂಬರವ-ಭಾಮಿನಿಗಳವಡಿಸುವ ಭಾವರಾಗದ ಕುಂಕುಮವಿಟ್ಟು ಫಾಲದಿ ॥ ದೇವಿ ಪಾಲಿಪುದೆಮ್ಮನೆನ್ನುತ । ಭಾವನಾಯೋಗದೊಳು ನಲಿಯುತ ॥ ಪೂಜೆ ॥ ೨ ॥ ಗುರುಗಳಾಣತಿಯಿಂದದಿ ಶ್ರೀಪಾದದೊಳ್ ಶರಣು ಬೇಡಿರೆ ಮೋದದಿ ॥ ವರಶೇಷ

ಗಿರೀಶನ ಕರುಣಾರೂಪಿಣಿಯೆನಿಪ ॥ ಪರಮ ಮಂಗಳೆಗೆರಗಿ ಸಂತಸ । ಭರಿತಮಾನಸರಾಗಿ ಸಂತತ ಪೂಜೆ ॥ ೩ ॥

---

## ಆರೋಗಣೆ

ರಾಗ ॥ (ಮೋಸಹೋದೆನಲ್ಲಾ)

ಆರೋಗಿಸು ತಾಯೆ ಮೋದದಿ ಕ್ಷೀರಾಂಬುಧಿ ತನಯೆ ॥ ಸಾರಸ ನಯನೆ ಮದವಾರಣಗಾಮಿನಿ । ಸಾರಿ ಬೇಡುವೆ ಸರಾಗದೊಳೀಕ್ಷಿಸು ॥ ಅ ॥ ಉಪ್ಪು ಉಪ್ಪಿನಕಾಯಿ ಪೂದಲಿಂ ಹಪ್ಪಳಸಂಡಿಗೆಯುಂ ॥ ತಪ್ಪದೆ ತಂದೊಪ್ಪಿಸುತಿಹೆ ಯೆನ್ನ ಸ್ವಾನ ಒಡಗೊಂಡೊಪ್ಪದಿ ಮಂಡಿಸಿ ॥ ಆರೋ ॥ ೧ ॥ ಚಕ್ಕುಲಿ ಕರಜಿಯುಕಾಯಿ ಅತಿರಸ ಸಕ್ಕರೆ ಹೋಳಿಗೆಯುಂ ॥ ಅಕ್ರೂರವರದನ ಅರಸಿಯೆ ನೀ ಬಂ । ದಕ್ಕರದಿಂದವಲೋಕಿಸಿ ನಲಿಯುತ ॥ ಆರೋ ॥ ೨ ॥ ಕ್ಷೀರದಧಿ ನವನೀತ ಘೃತಮಧುಸಾರವೆನಿಪ ಪರಮಾನ್ನ ॥ ವಾರಿಧಿಶಯನನ ನಾರಿಯೆ ನೀಸೀ । ನೀರೆಯರೊಳಗೊಲಿದಾರೋಗಿಸು ಸಲವಿಂ ॥ ಆರೋ ॥ ೩ ॥ ಮಾವು ನೇರಳೆ ಹಲಸು ಕಿತ್ತಳೆ ಮಾದಲ ದಾಡಿಮವಂ ॥ ಮಾಗಿದ ಕದಳಿಯು ಚಕ್ಕೋತನ ದ್ರಾಕ್ಷಿಯ ॥ ಮೋದದೊಳಿದ ಕೈಕೊಂಡಾದರದಿಂದಲ ॥ ಆರೋ ॥ ೪ ॥ ನಿಗಮಾಗಮವಿನುತೇ ನಮಿಸುವ ನಗಧರ ಸುಪ್ರೀತೆ । ಖಗಪತಿವಾಹನ ಶೇಷಗಿರೀಶನ ಬಗೆಬಗೆ ಗುಣಗಳ ಬಗೆವಾ ಬಗೆಯಿಂದಲಿ ॥ ಆರೋ ॥ ೫ ॥

---

## ಆರತಿ

ರಾಗ ॥ (ನರಹರಿ ನಿನಗಾರತಿ)

ರಂಗನಾಯಕಿಗಾರತಿ ಅಂಗನೆಯರು ಬೆಳಗಿರೆ । ಅಂಗಜನ ಜನನಿಗೆ । ಮಂಗಳರೂಪೆಗೆ ಮಂಗಳವೆನ್ನುತೆ ॥ ಪ ॥ ಪ್ರೇಮಮಯಸ್ವರೂಪೆಗೆ ರಮಣೀಯಕ ಮೂರ್ತಿಗೆ ॥ ಪ್ರೇಮಂದಳೆದಾಮೋದದಿಂ । ಕಾಮಿತ ವೀಯೆನುತಭಿನಮಿಸುತ್ತಂ ॥೧॥ ಮಾತೆಯೋ ಪರದೈವವು ನೀತಿ ತಾನಿದೆ ಸತ್ಯವು ॥ ವಾತಾತ್ಮಜ ಸಂಸೇವಿತೆ ಸೀತೆಯು ತಿಳಿಯಿರಿ ಮಾತೆಯು ಭಜಿ

ಸಿರಿ ॥೨॥ ಕಾಂತ ಶೇಷಗಿರೀಶನ ಅಂತರಂಗದ ದಯೆಯನು ॥ ತ್ರಿಂಶ ವ್ಮ ಸುಸ್ವಾಂತರ್ಕಳೆಂಬಂತೆಸಗುವ ಶ್ರೀಕಾಂತೆಯೆ ತಾನೆನೆ ॥ ೩ ॥

## ಮಂಗಳಂ

ರಾಗ ॥ (ಕಂಕುತದಾಟವನಾಡುವರು)

ಮಂಗಳವೆನ್ನಿರೆ ಭಾಮೆಯರೇ । ರಂಗನರಮಣಿಯ ಭಾವಿಸಿರೇ ॥ ಅಂಗಜ ಜನನಿಯ ಕೃಪೆಯಿಂ ಸತ್ಸಂಗತಿಯೆಡೆವೆವು ನಿಶ್ಚಯದಿಂ ॥ ಪ ॥ ಭೋಗವತೀ ಪತಿಶಾಯಿಯೊಳು-ಅನು-ರಾಗವಗೊಂಡಿಹ ದೇವಿಯು ಸೌಭಾಗ್ಯ ಲಕ್ಷ್ಮಿಯು ಪಾದದೊಳು ಬಾಗುತೆ ಶಿರವನು ರಾಗದೊಳು ॥ ೧ ॥ ವೇದಸಾರದ ವಾಕ್ಯದಲೀ, ಮಾಧವಿಯಂ ಸ್ತುತಿಮಾಡುತಲಿ ॥ ಭೇದವನೆಣಿಸದೆ ಸಲಹೆನ್ನುತಲಿ । ನೋದದಿ ಜಯಜಯವೆನ್ನುತಲಿ ॥ ೨ ॥ ತಾಪತ್ರಯಗಳ ಪರಿಹರಿಸಿ ಆಪತ್ತುಗಳಿಂದುದ್ಧರಿಸಿ ॥ ಕಾಪಾಡುವಳಿವಳೆಂದೆನಿಸಿ । ಈಪರಿ ಮೆರೆವಳ ಸಂಸ್ಮರಿಸಿ ॥ ೩ ॥ ಶರಣಾಗತ ಪರಿಪಾಲಕಗೇ ವರಶೇಷಗಿರೀಸಿಲಯನಿಗೆ ॥ ಕರುಣಾರೂಪಿಣಿ ಜಾನಕಿಗೇ । ಕರಗಳ ಮುಗಿಯಿರಿ ಮಾಧವಿಗೆ ॥ ೪ ॥

## ಮಂಗಳಂ

ರಾಗ॥ (ಮಂಗಳಂ ಶ್ರೀಕೃಷ್ಣರಾಯಗೆ)

ಮಂಗಳಂ ಶ್ರೀಲಕ್ಷ್ಮೀ ದೇವಿಗೆ ಜಯ ಮಂಗಳಂ ಪಕ್ಷಿವಾಹನ ರಾಣಿಗೆ॥ಪ॥ ಮಂಗಳಂ ಮಂತ್ರಮೂರುತಿಗೆ । ಜಯಮಂಗಳಂ ತಂತ್ರ ಸ್ವರೂಪಿಣಿಗೆ ॥ ಮಂಗಳಂ ಯಂತ್ರ ಸ್ವರೂಪಿಣಿಗೆ । ಶುಭ ಮಂಗಳಂ ಪರತಂತ್ರ ಸಾಧಕಿಗೆ ॥೧॥ ಭಾರ್ಗವಿಗೆ ಸೌಭಾಗ್ಯದಾಯಕಿಗೆ ಭಾಗವತರ ಪೂಜೆ ಕೈಗೊಂಬಳಿಗೆ॥ ನಾಗವೇಣಿಗೆ ನಾಗಪೂಜಿತೆಗೆ ಕ್ಷೀರ ಸಾಗರ ನಂದನೆ ಶುಭಲಕ್ಷಣೆಗೆ ॥೨॥ ಸೀತೆಗೆ ಮಂಗಳಗೀತೆಗೆ ಭುವಿ ಜಾತೆಗೆ ಕವಿಕುಲ ಸುಪ್ರೀತೆಗೆ ॥ ಮಾತೆಗೆ ಸದ್ಗುಣ ಪೂತೆಗೆ ವರಪ್ರದಾತೆಗೆ ನಿತ್ಯ ನಿರ್ಮಲೆಗೆ ಮಂಗಳಂ ॥೩॥ ವರಶೇಷ ಗಿರೀಶನ ಉರದಲ್ಲಿ ನೆಲಸಿರ್ಪ ಕರುಣಾನಿಧಿ ಕಮಲಾಂಬೆಗೆ॥ ತರಣಿ ಕುಲೇಂದ್ರನ ಅರಸಿಯೆಂದೆನಿಸಿದ । ತರುಣೀಮಣಿ ಶ್ರೀ ಜಾನಕಿಗೆ ॥ ೪ ॥

## ಪ್ರಾರ್ಥನೆ.

ರಾಗ ||  (ಕರುಣಾದಿ ಕಾಯೊಯನ್ನ)

ವೈದೇಹಿ ಪಾಲಿಸೆನ್ನಂ ನಂಬಿದೆ ನಿನ್ನಂ || ಪ || ವೇದವಿದಿತೇ ತವ ಪಾದವ ಸ್ಮರಿಸುವ, ಸಾಧುಭಾವವನಿತ್ತು ಪರಮಾದರದಿ ಪಿಡಿಯೆನ್ನ ಕರವ || ವೈದೇಹಿ || ಅನು || ಕಾಮಿತಾರ್ಥವ ನೀಡುವಳೆನ್ನುವ ಬಿರುದಾಂಕಿತೆಯಾಗಿರುವ || ಕಾಮಜನನೀ ನಿನ್ನ ನಾಮದ ಸ್ಮರಣೆಯು || ನೇಮದಿಂ ನೆರೆ ಭಜಿಸುವಂದದ ವಿಮಲಮತಿ ಕೊಡು ಸುಪ್ರೇಮದಿಂದಲಿ || ವೈದೇಹಿ || ೧ || ಜನಕನಂದನೆ ಯೆನಿಸಿ । ಜ್ಞಾನಿಗಳಿಂದ ಜಾನಕಿ ನಾಮವ ಧರಿಸಿ || ದಾನವ ಕುಲವೆಂಬ ಕಾನನಂಗಳಿಗೆಲ್ಲ । ಹವ್ಯವಾಹನನೆನಿಪ ರಾಮನ ಕೈಯ್ಯ ಪಿಡಿದಾ ಪರಮ ಪಾವನೆ || ವೈದೇಹಿ || ೨ || ಶಮದಮಾದಿಗಳಿಂದ ಮೆರೆಯುತಲಿರ್ಪ ಕ್ಷಮೆಗೆ ನೀಂ ನೆಲೆಯೆನ್ನುತ || ಯಮಿಕುಲವರ್ಯರು ನಮಿಸಿ ನುತಿಸುತ್ತಿಹರು || ವಿಮಲ ಶೇಷಾದ್ರಿನಾಥನ ರಮಣಿ ನಿನ್ನನದೆನಿತು ವರ್ಣಿಪೆ || ವೈದೇಹಿ || ೩ ||

---

## ಆತ್ಮ ಸಮಾಧಾನ

ರಾಗ  (ಒಂದೇ ನಾಮವೆ ಸಾಲದೆ)

ಧನ್ಯಳಾದೆನು ಇಂದು ದೇವಿಯು ಕಂಡು ಮಾನ್ಯತೆಯುಡೆನೆನೆಂದು ||ಪಲ್ಲ|| ಚಿನ್ಮಯರೂಪನ ಚನ್ನೆಲಕ್ಷ್ಮಿಯು ಸಂಪನ್ನಮೂರ್ತಿಯು ಕಂಡಿನ್ನೆನಗೇಕಿಯಿಲ್ಲೆಂದು || ಧನ್ಯ||ಅ|| ನಾಗವೇಣಿಯರೆಲ್ಲರು ಪಾಡುತ ಶಿರಬಾಗಿ ವಂದಿಸುತಿರಲು || ರಾಗದಿಂ ಫಲನೇರೆ ಭೋಗಭಾಗ್ಯವನಿತ್ತು ಯೋಗಸಿದ್ಧಿಯಿದೆಂದೀಗೆನಗಾದುದರಿಂ || ದನ್ಯ||೧|| ಐದೆಯರತಿ ಮುದದಿ ವೈದೇಹಿಯೆ ಯಮಗಾದರ್ಶಮಹಿಳೆಯೆಂದು || ಆದಿಶಕ್ತಿಯೆ ಈ ಶ್ರೀದೇವಿ ನಿಜವೆಂದು || ಆದರಿಸುತಿರಲಾಮೋದವಾಂತುದರಿಂ || ೨ || ಆರಿದಾವ್ರುದಿನ್ನೆನಗಿಳೆಯೊಳ್ ಶೇಷಗಿರೀಶನ ಅರಸಿಯೆನ್ನವಳಾದಳು || ಸಿರಿ ಮೆರೆಯುತಲಿರೆ ಪರದೈವ ಮುಂದಿರೆ । ದುರಿತರೋಗವು ದೂರ ಸರಿದುದು ಮನವಾರ || ಧನ್ಯಳಾದೆನು || ೩ ||

---

॥ ಶ್ರೀ. ॥

# ಬಿನ್ನಹ.

ಆರ್ಯಭಗಿನಿಯರೇ! ಅಭಿವಂದನೀಯರಾದ ಆರ್ಯಬಾಂಧವರೇ!!

ಕರ್ನಾಟಕ ಮಾತೆಯು ನೂತನ ಶಿಶುವಾಗಿ ಜನ್ಮವೆತ್ತಿರುವ ಈ ನಂದಿನಿಯ ವಿಷಯವಾಗಿ ನಿಮ್ಮ ಅಭಿಪ್ರಾಯವೇನಾಗಿರಬಹುದು? ಆರಿಗೇ ಆಗಲಿ, ನವನವೀನ ವಸ್ತುಪರಿಚಯದಲ್ಲಿ ಉತ್ಸುಕತೆಯುಂಟಾಗುವದು ಸಹಜವಾದುದರಿಂದ ಈ ನಂದಿನಿಯ ವಿಷಯವಾಗಿ ನಿಮ್ಮ ಅಂತರಂಗದಲ್ಲಿ ಹಲವು ಭಾವನಾತರಂಗಗಳೇಳುತ್ತಿರುವದೂ ಸಹಜವಾಗಿಯೇ ಇರುವದಲ್ಲವೇ? ಸಂತೋಷ! ನಿಮ್ಮಾ ಭಾವನಾತರಂಗಗಳು ನಂದಿನಿಯ ಭಾವನಾಲೋಕದ ಭವ್ಯಭವನ ನಿರ್ಮಾಣಕ್ಕೆ ಸಹಕಾರಿಯಾಗಿದ್ದು, ಅಭಿವರ್ಧಿಸುವಂತೆ ಮಾಡಲಿ! ಮತ್ತು ಈ ನಿಮ್ಮ ಪರಿಶುದ್ಧಾಂತಕರಣದ ಭಾವನಾಯೋಗಬಲವು ನಂದಿನಿಯ 'ಅಬಲಾದೌರ್ಜನ್ಯ" ನಿರೂಪಣ ಲೇಖನಕಾರ್ಯಕ್ಕೆ ಉತ್ತೇಜನಕಾರಿಯಾಗಿ, ತನ್ಮೂಲಕ ನಮ್ಮ ನಿಮ್ಮೆಲ್ಲರ ಅಜ್ಞಾತದೋಷಗಳ ಹುಳುಕನ್ನು ಕಂಡು ಹಿಡಿದು ಹೊರಗೆಡಹಿ, ನಮ್ಮೆಲ್ಲರ ಭಾವನಾಲೋಕದಲ್ಲಿಯೂ ಆ ನಮ್ಮ ಪೂರ್ವಜರ ಅಮೋಘಶಾಸನಗಳು ದಿಕ್ಪ್ರಕಾಶತ್ವವನ್ನು ಹೊಂದಿ, ನಮ್ಮ ಮಾನವಜನ್ಮಧಾರಣೆಗೆ ಸಾಫಲ್ಯವನ್ನುಂಟುಮಾಡಿಕೊಡುವಂತಾಗಲಿ!! ಹೀಗಾಗುವದರಿಂದ ಈ ನಂದಿನಿಯು ಭಗವತಿಯೊಲ್ಮೆಗೆ ಪಾತ್ರಳಾಗಿ, ಸಾರ್ಥಕನಾಮಸಂಶೋಭಿತೆಯಾಗುವಂತೆ ಆ ನಮ್ಮ ಧ್ಯೇಯಮೂರ್ತಿಯೇ ನಮಗೆ ಅನುಗ್ರಹಿಸಲಿ!

ಇರಲಿ, ಬಂಧು ಭಗಿನಿಯರೇ! ಮೇಲಿನ ವಾಕ್ಯಗಳಿಂದ ನಂದಿನಿಯನ್ನು ಅಧಿಕ ಪ್ರಸಂಗಿಯೆಂದು ಮಾತ್ರ ಭಾವಿಸಬೇಡಿರಿ. ನೋಡಿರಿ! ನಂದಿನಿಯು ತನ್ನ ಭ್ರಾತೃ, ಭಗಿನೀ, ಗುರುವರ್ಗೀಯರ ಸಮ್ಮುಖದಲ್ಲಿ ತನ್ನ ಮನೋಗತವನ್ನು ನಿವೇದಿಸಲು ಸಂಕುಚಿತಳಾಗುವದಿಲ್ಲ. ಏಕೆಂದರೆ, ಅಣ್ಣತಂಗಿಯರಲ್ಲಿ, ಅಕ್ಕತಂಗಿಯರಲ್ಲಿ, ಹಿತಚಿಂತಕರಾದ ಗುರುಜನರಲ್ಲಿ, ತಿಳಿಯದುದನ್ನು, ತಿಳಿಯಬೇಕಾಗಿರುವದನ್ನು ಹೇಳಿ,

ಕೇಳಿ, ತಿಳಿಯಬೇಕಾದುದರಲಿ ಸಂಕೋಚವೇಕೆ? ಹಾಗೂ ಸಂಕುಚಿತಭಾವದಿಂದ ಸುಮ್ಮನೆ ಕುಳಿತಿದ್ದರೆ ಉದ್ದೇಶಸಾಫಲ್ಯವಾಗಲೀ, ಉದ್ಯಮಕ್ಕೆ ಸಾರ್ಥಕತೆಯಾಗಲೀ, ಲಭಿಸುವದೆಲ್ಲಿ? ಆದುದರಿಂದ ನಂದಿನಿಯು ಸ್ಪಷ್ಟೋಕ್ತಿಗೆ ರುಷ್ಟರಾಗುವದಾಗಲೀ, ಲೇಖನ ವಿಸ್ತಾರಕ್ಕೆ ಬೇಸರಗೊಳ್ಳುವದಾಗಲೀ ಕೂಡದೆಂಬುದೇ ನಂದಿನಿಯು ಪ್ರಥಮ ನಿವೇದನವು. ಪ್ರಥಮದಲ್ಲಿಯೇ ಬಹು ದೀರ್ಘವಾಗಿ ಭಿಕ್ಷೆಯನ್ನು ಬೇಡಿದುದರಿಂದ ಇವಳನ್ನು ಭಿಕ್ಷುಕವೃತ್ತಿಯವಳೆಂದೋ, ಲಂಬವಾಗಿನಿ, ಅಥವಾ ಕೇವಲ ವಾಗ್ಮೀವಿನಿಯೆಂದೋ, ಇಲ್ಲದ ಸಂಶಯಗಳನ್ನು ಕಲ್ಪಿಸಿಕೊಂಡು ಬಗೆಯುವದು ಮಾತ್ರ ನಿಮಗೆ ಸರಿಯಲ್ಲ. ನಂದಿನಿಯು ನಿಮ್ಮ ಸಂಶಯಗಳಿಗೆ ಎಷ್ಟು ಮಾತ್ರಕ್ಕೂ ವಿಷಯಳಾಗುವಂತಿಲ್ಲ! ನಿಮ್ಮ ಮನಸ್ಸಿನಲ್ಲಿ ಮೂಡಿರುವ ವಿವಿಧ ಸಂಶಯಗಳನ್ನು, ಸಮಯೋಚಿತ ವಚನ ರಚನೆಗಳಿಂದ ಸಮಾಧಾನಗೊಳಿಸಿ, ಇದರಿಂದ ಶಾಂತಹೃದಯರಾಗುವ ನೀವು ನಮ್ಮ ಭ್ರಾತೃಸಹಾಯದ ನಿಜಕರ್ತವ್ಯದಲ್ಲಿ ಜಾಗ್ರತರಾಗಿರುವಂತಾದರೆ, ನಮ್ಮ ಸ್ತ್ರೀಯರ ಸ್ವೈಸರ್ಗಿಕ ಸೇವೆಯು ನಿರುಪಾಧಿಕವಾಗಿ ನಡೆಯುವದರಲ್ಲಿ ಏನೇನೂ ಸಂಶಯವಿಲ್ಲವೆಂದು ಸೂಚಿಸುವದೇ ಇಂದಿನ ಭಿಕ್ಷಾಲೇಖನದ ಉದ್ದೇಶವು. ಸಂದೇಶವು ಸೋದರೀವರ್ಗಕ್ಕೆಲ್ಲಾ ಸ್ಪಷ್ಟಪಡಬೇಕೆಂಬ ಭಾವನೆಯಿಂದ ಉದಾಹರಣೆಗಳೊಡನೆ ವಿವರಿಸುವದರಲ್ಲಿ ಲಂಬವಾಗಿ ತೋರಿತು, ಅಷ್ಟೆ! ನಂದಿನಿಯು ಹುಟ್ಟಿದ, ಹೊರಹೊರಟ, ವೇಳೆಯಾಗಲೀ, ರೀತಿಯಾಗಲೀ ಕೆಟ್ಟದಾಗಿಲ್ಲ. ಹುಟ್ಟಿದುದು (ಕೇವಲ ಸಂಕಲ್ಪ ರೂಪದಿಂದ ಮಾತ್ರ) ೧೬-೨ ೧೬ ರಲ್ಲಿ. ದೊರೆತ ಸಾಕ್ಷಾತ್ ಭಗವತೀ ಮಾತೆಯ ಆಶ್ವಾಸನದ ಮೇಲೆ! ಮಾತೃನಂದಿನಿಯಲ್ಲಿ ನೋಡಿರಿ! ಭಗವತಿಯ ಆಶ್ವಾಸನವನ್ನು!! ಹೊರಹೊರಟುದೆಂದರೆ, ವಿಜಯದಶಮಿಯ ವಿಜಯೋತ್ಸವದ ಸಂಭ್ರಮದಿಂದ, ಅದೂ ಯಾತ್ರಾಪ್ರದಾನ ವಿಧಿಪೂರ್ವಕವಾಗಿ, ಗುರುಜನರ ಆಶೀರ್ವಾದವನ್ನೂ ಪಡೆದೇ, ಹೊರಟಿರುವಳು. ಆದುದರಿಂದ ಆರ್ಯರ ಅನುಪೂರ್ವಿಕ ಶಾಸನಗಳನ್ನೇ ಅನುವರ್ತಿಸಿ, ಜೀವಿಸುತ್ತಿರುವ ಈ ನಂದಿ

ನಿಯು ನೀವಿದ್ದಲ್ಲಿಗೆ ಬಂದು, ಹೊರಬಾಗಿಲಲ್ಲಿ ನಿಂದು, "ಅಂಬೇ! ಅಮ್ಮಾ!!" ಎಂದು ಅಕ್ಕರೆಯಿಂದ ಕೂಗಿದರೆ, ಕಕ್ಕಸಗೊಂಡು, ಅವಳನ್ನು ಧಿಕ್ಕರಿಸುವಂತಹ ರಕ್ಕಸರಂತೆ ನೀವು ಮಾಡುವದು ಮಾತ್ರ ಸರಿಯಲ್ಲ ಪ್ರಸ್ತಾವನವಿಲ್ಲಿಗೆ ಸಾಕುಮಾಡಿ ಮುಂದಾಗುವೆನು

ಸುಹೃದರೇ!

ನಂದಿನಿಯನ್ನು ನೋಡಿದ ಮಾತ್ರಕ್ಕೇ ನಿಮಗೇನಾಗುತ್ತದೆ? ಭಾವೋದಯ ಪ್ರಕಾಶವಾಗುತ್ತದೆ? ಹೇಗೆ? "ಕೌತುಕ, ವಿಸ್ಮಯ, ಸಂಶಯ ಆ ಬಳಿಕ ಆಗ್ರಹ ಅಸಹ .. ... ..ಗಳ ತುಮುಲ ಯುದ್ಧವಾಗುವಂತ!!! ಅದು ಪ್ರಕೃತಿ ಸಹಜವೇ ಸರಿಯಷ್ಟೆ? ಆದರೆ ಆದೇನು ನಿಮ್ಮ ಆಕ್ಷೇಪ "ನಂದಿನಿಯ ಜನ್ಮಧಾರಣವು, ನಂಜನಗೂಡಿನ ಸತೀಹಿತೈಷಿಣೀ ಮಾತೃಮಂದಿರದಲ್ಲಿ ಮತ್ತೆ ಪ್ರಕಾಶವಾದರೂ ಅಲ್ಲಿಂದಲೇ ಮಧ್ಯೇ ಅವಳ ಬಾಹ್ಯಪರಿಚ್ಛದವು(ಮುದ್ರಣಾದಿ ಸಂಸ್ಕಾರಗಳು) ಮಾತ್ರ ಹುಬ್ಬಳ್ಳಿಯ ಶ್ರೀಕೃಷ್ಣಮುದ್ರಾಲಯದಲ್ಲಿ! ಕಾರಣ? ಎಲ್ಲಿಂದೆಲ್ಲಿಗೆ ಸಂಬಂಧ? ಅಚ್ಚಗನ್ನಡ ನಾಡೆನಿಸುವ ಮೈಸೂರು ಸೀಮೆಗೆ ಸೇರಿದ ನಂಜನಗೂಡಿಗೂ, ದಕ್ಷಿಣಮಹಾರಾಷ್ಟ್ರವೆನ್ನಿಸಿ, ಒರಟು ಜನರ ಆವಾಸವಾಗಿರುವದೆಂದು ಹೆಸರನ್ನು ಹೊತ್ತಿರುವ ಹುಬ್ಬಳ್ಳಿ ಧಾರವಾಡಗಳಿಗೂ ಎಷ್ಟು ಮೈಲಿಗಳ ಅಂತರವು? ಇಲ್ಲಿಂದಿಲ್ಲಿಗೆ ಹೋಗಲೇಕೆ? ಅಲ್ಲಿಂದಿಲ್ಲಿಗ ಹಾರಿ ಬರಲೇಕೆ? ಧಾರವಾಡದ ಭಾಷೆಯ ಛಾಯೆಯನ್ನಾದರೂ ಇವಳು ತನ್ನ ಭಾಷಾಸರಣಿಯೊಳಗೆ ಅಡಗಿಸಿಕೊಳ್ಳದಿದ್ದರೆ ಸಾಗದೆಂದಿರುವಳೇತರಿಂದ? ಒಳದೇಶದಲ್ಲಿ ತಕ್ಕ ಮುದ್ರಾಲಯಗಳೂ ಮುದ್ರಾಪಕರೇ ಮೊದಲಾದ ಸಂಸ್ಕರಣ ಧುರೀಣರೂ ಅದವರಾರೂ ಇಲ್ಲವೇ? ಇನ್ನೂ ಎಷ್ಟೆಷ್ಟೋ ಆಕ್ಷೇಪಗಳುಂಟು!!! ಇಷ್ಟೆಲ್ಲಕ್ಕೂ ತಕ್ಕ ಸಮಾಧಾನಗಳನ್ನು ಕೊಡದಿದ್ದರೆ ನಮ್ಮ ಕರ್ತವ್ಯಕ್ಕೆ ಕೊರತೆ ತಟ್ಟುವದೆಂಬ ಭೀತಿ! ಸಕಾರಣವಾದ ಸಮಾಧಾನಗಳನ್ನು ಕೊಡುವದೆಂದರೆ ನಿಷ್ಠುರೆಯನ್ನಿಸಬೇಕಾಗುವದೆಂಬ ಶಂಕೆ, ಇದಕ್ಕೇನು ಮಾಡಬೇಕು? ಕರ್ತವ್ಯಕ್ಕೂ ಲೋಪವಿಲ್ಲದಿರಬೇಕು, ನಮ್ಮ ಬಾಂಧವರಿಗೆ ಆಗ್ರಹವನ್ನುಂಟುಮಾಡದೆಯೂ ಇರ

ಬೇಕು; ಎಂದರೆ ಹೇಗೆ? ಇದ್ದ ಸಂಗತಿಯನ್ನೇ ಸಂಗ್ರಹವಾಗಿಯೂ, ಸ್ಪಷ್ಟವಾಗಿಯೂ ಸತ್ಯವಾಗಿಯೂ ತಿಳಿಯುವಂತೆ ಹೇಳಬೇಕು ಹಾಗೂ ರುಷ್ಟರಾಗುವದು ತಪ್ಪದಿದ್ದರೆ? ತಿಳಿದೇ ಇದೆ-'ಖಂಡಿತವಾದಿ ಲೋಕ ವಿರೋಧಿ' ಇದರಿಂದಲೇ ಹಿತ್ಯೈಷಿಣಿಯು ತನ್ನ ಸ್ವಭಾವಸಹಜವಾದ ಖಂಡಿತ ಭಾಷಣಗಳಿಂದಲೇ ಅನೇಕರ- ದೇಹಾನುಬಂಧಿಗಳು ಮತ್ತು ಧರ್ಮಾನುಬಂಧಿಗಳು-ನಿಷ್ಠುರತೆಗೆ ಭಾಜನೆಯಾಗಿ ಹಲವು ಬಗೆಯಾದ ಕಠಿಣೋಕ್ತಿಗಳನ್ನೂ ಕೇಳಿ ಕಡುನೊಂದಿರುವವಳಾದರೂ ಬಿಡುನುಡಿ ಬಿರುನುಡಿಗಳಿಂದ ನೋಯಿಸಿದ ಆ ಬಂಧುಬಾಂಧವರಿಗಿದಿರಾಗದೆ, ತನ್ನ ಕಠಿಣ ಮನೋಯೋಗ ಬಲದಿಂದ ಅವೆಲ್ಲವನ್ನೂ ನುಂಗಿ ನುಂಗುತ್ತ ತನ್ನ ಕೆಲಸವನ್ನು ನಿರ್ವಿಘ್ನವಾಗಿ ನಡೆಯಿಸಿಕೊಂಡು ಒರುತ್ತಿರುವಳು ಎಂದಬಳಿಕ ಹಿತ್ಯೈಷಿಣಿಯು— ನೈಷ್ಠಿಕ ಬ್ರಹ್ಮಚಾರಣಿಯು— ಏಕನಿಷ್ಠೆಯನ್ನನುಸರಿಸಿ ನಡೆಯಬೇಕಾಗಿರುವ ನಂದಿನಿಯ ಭಾಷಣವು ಮತ್ತೆ ಹೇಗಿರುವದು?

ಬಾಂಧವರೇ, ತಾಳ್ಮೆಯನ್ನು ತೆಗೆದುಕೊಳ್ಳಿರಿ, ವಿಚಾರಮಾಡಿ ನೋಡಿರಿ! ನಂದಿನಿಯ ಇಂದಿನ ಬಿನ್ನಹದಲ್ಲಿ ಕುಂದು ಕೊರತೆಗಳೇನಾದರೂ ಕಂಡುಬಂದರೂ ತೆಗೆದೆತ್ತಿ ತೋರಿಸಿ ಕಂದನೆಂದು ಕ್ಷಮಿಸಿ ಮುಂದೆ ತಲೆಯೆತ್ತುವಂತೆ ಎಚ್ಚರಿಸಿರಿ ಕೇಳಿರಿ ನಂದಿನಿಯ ಬಾಹ್ಯಪರಿಚ್ಛೆದಕ್ಕೆ ಬೇಕಾದ ಸಾಹಿತ್ಯಗಳಾಗಲಿ (ಮುದ್ರಣಯಂತ್ರ)ಸುಸಂಸ್ಕೃತರಾದ ಸಂಸ್ಕರಣಕರ್ತರಾಗಲಿಯಿಲ್ಲದೆ ಇಲ್ಲ ಇವೆ; ಅಲ್ಲಿರುವದಕ್ಕೆ ಇವು ಡಿಯಾಗಿಯೂ ಅಂದವಾಗಿಯೂ ಇವೆ. • ಅನುಕೂಲವಿಚಾರವಾಗಿಯೂ ಏನೂ ಹೇಳುವಂತಿಲ್ಲ ಆದರೂ ಮಾಡುವದೇನು? "ಎಲ್ಲಿದ್ದರೆ, ಆರಆದರ್ಶಗುಣಗಳನ್ನು ಅನುಕರಣ ಮಾಡಿದರೆ ಆವ ಮಹನೀಯರ ಸತ್ಸಂಕಲ್ಪದಂತೆ ಆಚರಿಸಿದರೆ ಅಭ್ಯುದಯವನ್ನು ಪಡೆಯಬಹುದೋ ಅವರ ಆದರ್ಶ ಅನುಸರಣೆ ಅಕೃತ್ರಿಮ ಬಂಧುಭಾವನಾ ಸ್ನೇಹ ಸಂಪಾದನೆ ಪ್ರಭಾವದಿಂದ ಕೃತಕೃತ್ಯಳೆನ್ನಿಸು. ಅಂತಹ ಗುಣಗಳು ಎಂದರೆ ಒಂದು ಬಾರಿ ಅಡಿ ತೋರಿಸುವದನ್ನು ಮಾಡಿ ತೋರುವದರಲ್ಲಿ ನಿಪುಣರೂ ಹಟವಾದಿಗಳೂ ಅಪ್ರತಿಹತವಾದ, ಸ್ಫೂರ್ತಿದಾಯಕ

ವಾದ, ಆಶ್ಚರ್ಯ ಕೌತುಕಪ್ರದರ್ಶಕಗಳಾದ ದೇಶಭಕ್ತಿ, ಭಾಷಾಭಿಮಾನ ಪರಾನುಕಂಪನಗುಣಗ್ರಹಣಗಳೇ ಮೊದಲಾದ ಉಜ್ವಲಗುಣಗಳುಳ್ಳವರೂ ಆದ ಆ ನಿನ್ನ ಧಾರವಾಡದ ಬಂಧುಗಳ ಭ್ರಾತೃಸ್ನೇಹವನ್ನು ಸಂಪಾದಿಸಿ ಮೇಲಿನ ಅವರ ಸದ್ಗುಣಗಳನ್ನು ಅನುಕರಣ ಮಾಡು, ಆದರಿಂದಲೇ, ಹಾಗೆಮಾಡುವ ಸಹೃದಯ ಬಾಂಧವ್ಯದ ದೆಸೆಯಿಂದಲೇ ಅಲ್ಲಿಗಿಲ್ಲಿಗೆ ತೋರುವ ತಾರತಮ್ಯಗಳನ್ನು ಎತ್ತಿತೋರಿ, ಮತ್ತೈಕ್ಯವನ್ನು (ಕೇವಲ ಮಾನವಕರ್ತವ್ಯ- ಸ್ವರೂಪ- ಸಾಧನಾಧ್ಯೇಯಗಳ ನಿಜತತ್ವವನ್ನು ತಿಳಿಯುವದು ಮಾತ್ರ ಆಚಾರವಿಚಾರಗಳೆಲ್ಲ) ಉಂಟು ಮಾಡಬೇಕು ಬರಿದೆ ಕೂಗಾಟದಿಂದ ಕೂಟದ ಕೋಲಾಹಲದಿಂದ ಮಾತ್ರವೇ ಭಾಷಾ ಏಕರೂಪತೆಯನ್ನು ಕಲ್ಪಿಸಬೇಕೆಂದರೆ ಹೇಗ ಎಂದಿಗ ಆದೀತು? ಬಾಯಲ್ಲಿ ಭಾಷಾಏಕರೂಪವನ್ನು ಕಲ್ಪಿಸಬೇಕೆಂದು ಹೇಳುವದರಿಂದಲೇ ಭಾಷಾಮಾತೆಗಾದ ಫಲವೇನು? ಪರಸ್ಪರ ಸೌಹಾರ್ದ್ರಭಾವವಿಲ್ಲದೆ ಆವ ಕಾರ್ಯಗಳು ಫಲಕಾರಿಯಾಗುವವು ಇದೆಲ್ಲವನ್ನೂ ಪರ್ಯಾಲೋಚಿಸಿ, ಧಾರವಾಡ ಬಂಧುಗಳಲ್ಲಿ ಸಹಜವಾದ ಸುಹೃದ್ಭಾವವನ್ನು ಹೊಂದಿ, ಮಂಗಳೂರವರನ್ನು ಮರ್ಯಾದಿಸಿ ಮೈಸೂರವರನ್ನು ಮನಃಪೂರ್ವಕವಾಗಿ ಅಭಿನಂದಿಸಿ, ತ್ರಿವರ್ಗದ ಸಹಾಯದಿಂದಲೂ ಅಭ್ಯುದಯವನ್ನು ಹೊಂದುವದೇ ನಿನ್ನ ಕರ್ಮಯೋಗದ ಮುಖ್ಯ ಗುರಿ ಅದೇ ನಿನ್ನೀಮಾತೆಯ ಮನೋಲ್ಲಾಸಕ್ಕೆ ತಕ್ಕಸಿಧಿ" ಹೀಗಂದು ನನಗೆ ಭಗವತಿಯ ಪ್ರೇರಣೆಯಾಗಿರುವದೊಂದೇ ಇಷ್ಟೆಲ್ಲಕ್ಕೂ ಕಾರಣವು. ಆ ತಾಯಿಯ ಮಾತೃಪ್ರೇಮದ ಪ್ರೇರಣೆಯೇ ಅಲ್ಲಿಗಿಲ್ಲಿಗೆ ನಡುವೆ ಇರುವ ಅಂತರಗಳನ್ನು ದಾಟಿ, ನಡೆದಾಡುವಂತೆ ಮಾಡಿರುವದೆಂದು ಧಾರಾಳವಾಗಿ ಹೇಳಬಲ್ಲೆವು. ಇಷ್ಟಲ್ಲದೆ ಹಿಂದೆ ನಮಗಾಗಿರುವ ಭಗವತಿಯ ಆಶ್ವಾಸನ (ಮಾತೃನಂದಿನಿಯನ್ನು ನೋಡಿರಿ!) ದಲ್ಲಿ ಭಾರತಕುಮಾರನು ..

ಇತ್ಯಾದಿ ಆಜ್ಞಾವಚನಗಳೂ ನಮ್ಮ ನಂದಿನಿಗೆ ಮಾರ್ಗದರ್ಶಕವಾಗಿರುವವು ಎಂದ ಬಳಿಕ ಇನ್ನೂ ಹೇಳುವದೇನು? ನಂದಿನಿಯು ಮತ್ತಾವ ಆಶೋತ್ತರದಿಂದಾಗಲಿ, ಅವಿವೇಕ ವಿಚಾರದಿಂದಾಗಲೀ

ಶ್ರೀಕೃಷ್ಣ ಮುದ್ರಾಲಯದಲ್ಲಿ ಸಂಸ್ಕೃತಿ ಹೊಂದಲು ಹೋಗಿ ಬರುತ್ತಿಲ್ಲ ಈ ವಿಚಾರದಲ್ಲಿ ನಿಮ್ಮ ಮನಸ್ಸಿನಲ್ಲಿರುವ ಎಂತಹ ಶಂಕಾಪವಾದಕ್ಕೂ ಇವಳು ವಿಷಯಳಾಗುವಂತಿಲ್ಲ ಭಾರತ ಕುಮಾರನ ವಿಷಯದಲ್ಲಂತೂ ಹೆಚ್ಚು ಹೇಳಬೇಕಾದುದಿಲ್ಲ. ತನ್ನ ತಂಗಿ ನಂದಿನಿಯ ಮುಂದಿಟ್ಟು, ತನ್ನ ಹಿಂದು ಮುಂದಿರುವ ಭಗಿನೀ ಬಾಂಧವರಿಗೆ ಆತ್ಮಾನಂದದ ಆದಾಯವನ್ನುಂಟು ಮಾಡಬೇಕೆಂಬುದು ಭಾರತನ ಉದ್ದೇಶವಾಗಿಯೂ, ಮಾತೃಪ್ರೇರಿತ ಕಾರ್ಯದಲ್ಲಿ ಭ್ರಾತೃಸಂದೇಶವು ಸಮಯೋಚಿತ ಸಹಾಯಗಳಿಂದ ಎಚ್ಚರಿಸುತ್ತಿದ್ದರೆ, ಸ್ವಕರ್ತವ್ಯವನ್ನು ಸುಲಲಿತವಾಗಿ ನಿರ್ವಹಿಸಲಾದೇನೆಂಬ ನಂದಿನಿಯ ಭರವಸೆಯಾಗಿಯೂ ಇದೆ ಇದರ ಮೇಲೆ 'ನಂದಿನಿ'ಯು ನಂದನಂದನನಾದ ಶ್ರೀಕೃಷ್ಣನ ಮಂದಿರದಲ್ಲಿ ಆನಂದದಿಂದ ಪರಿಪೋಷಿತವಾಗಿ ಪ್ರಕಾಶಿಸುವದಂತೂ ನಿಸರ್ಗಸಿದ್ಧವೇ ಆಹುದಷ್ಟೇ! ಇನ್ನೂ ನಿಮ್ಮ ಆಕ್ಷೇಪವುಂಟೋ? ಸುತ್ತಾಟ, ವೃಥಾಕಾಲ! ಸಾಕುಸಾಕು! ಅಷ್ಟಕ್ಕೇ ಗ್ರಹಿಸಿದೆವು ಕೈಕೊಂಡ ಕೆಲಸದಲ್ಲಿ ಕಷ್ಟ, ನಷ್ಟ, ನಿಷ್ಠುರಗಳನ್ನು ನೋಡುವದು ಕಾರ್ಯವಾಸಿಗಳ ಲಕ್ಷಣವಲ್ಲವಷ್ಟೆ ಹಾಗೆಯೇ ಮನಸ್ಸು ಕರ್ಮ ಪ್ರಕೃತಿಗಳು ಒಂದೇ ಆಗಿದ್ದರೆ ಅದರಿಂದ ಆವ ನಷ್ಟಕ್ಕೂ ಅವಕಾಶವಿರುವದಿಲ್ಲ ಇದರ ಮೇಲೆ ಲಾಭ-ನಷ್ಟಗಳ ಅಧಿದೇವತೆಯು ಆದಿಶಕ್ತಿಯಾದ ನಮ್ಮ ತಾಯಿಯೇ ಆಗಿದ್ದು, ಕಾಲವರಿತು ಸಹಕರಿಸುತ್ತಿರುವಳೆಂಬ ಭರವಸೆಯು ನಮಗಿದೆ! ಅಷ್ಟೇಕ! ನೋಡಿರಿ! ನಂದಿನಿಯು ಈ ಸಂಗ್ರಾಮ ಸಂಬಂಧದ ಕ್ಷಾಮಕಾಲದಲ್ಲಿ ಹೊರಡುತ್ತಿರುವದು, ಹಾಗೂ, ಸಕಾಲದಲ್ಲಿ, ಕ್ರಮತಪ್ಪದೆ, ಅಭಿವೃದ್ಧಿ ಲಕ್ಷಣದಿಂದ ಮೇಲೆ ಮೇಲೇರಿ ಬರುತ್ತಿರುವದೂ ಆರ ದಕ್ಷತೆಯಿಂದ? ಆರ ಅನುಗ್ರಹದಿಂದ? ಆರ ಸಹಾಯದಿಂದ!— ಭಾರತನ ಎಚ್ಚರಿಕೆ,— ಭಗವತಿಯ ಅನುಗ್ರಹ, ಶ್ರೀಕೃಷ್ಣಮುದ್ರಾಲಯದವರ ಸಹಾಯ, ಇವೇ ಮೂಲವೆಂದರೆ ಚಕಿತರಾಗುವಿರಲ್ಲವೆ? ಇಷ್ಟಕ್ಕೆ ಸಾಕು

ಬಾಂಧವರೇ! ಏನೋ ಹೇಳಬೇಕೆಂದಿದ್ದುದು ಅದೇನೇನೋ ಆಗಿ ಹೋಯಿತು ಆದರೂ ಅಸಹನೆಪಡಬಾರದು ನಂದಿನಿಯು ತನ್ನ ದೇಶಿ

ಯರನ್ನು ಈ ಮೂಲಕ ಹಾಸ್ಯ ಮಾಡುತ್ತಿರುವಳೆಂಬ ಭಾವನೆಯು ಕೊಡದು. ಈಗಲೇ ಇವಳು, ತಾನು ಕೈಕೊಂಡಿರುವ "ಭಾವನಾ ಲೋಕ, ಅಬಲಾದೌರ್ಜನ್ಯ" ಇವೆರಡು ಲೇಖನಗಳಿಂದಲೂ ಅತ್ತ ಬಾಂಧವರೂ, ಇತ್ತ ಭಗಿನಿಯರೂ, ಕ್ರೂರ ದೃಷ್ಟಿಯಿಂದ ನೋಡು ತ್ತಿರುವರೆಂಬ ವಿಚಾರವು ಕಿವಿಯನ್ನು ಮುಟ್ಟಿರುವುದು ಇಷ್ಟಕ್ಕೇ ಇಷ್ಟರ ರುಷ್ಟರಾದರೆ ಮುಂದೆ ಗತಿ? ಹೇಗೂ ಇರಲಿ,— ಇಂದಿನ ಬಿನ್ನಹದಲ್ಲಿ ಮುಖ್ಯವಾಗಿರುವ ಇನ್ನೊಂದು ಮಾತನ್ನು ಹೇಳಿ, ಆ ಬಳಿಕ ನಂದಿನಿಯ ಸಂದೇಶವೇನೆಂಬುದನ್ನಿಲ್ಲಿ ಕಾಣಿಸಿ, ಮೌನವನ್ನು ಹಿಡಿಯುವೆವು

ನಂದಿನಿಯ ಶ್ರೇಯೋಭಿವೃದ್ಧಿಯನ್ನು ಚಿಂತಿಸುವವರೂ, ಹಿತೈಷಿ ಣಿಯ ಚಿರಸ್ಮರಣೀಯರೂ ಆಗಿರುವ, ಸುವಾಸಿನೀ ಕರ್ತರು, ಮತ್ತು ಭಾರತ, ವೀರಕೇಸರಿಗಳ ಕರ್ತರುಗಳು ಕೊಟ್ಟಿರುವ ಸಲಹೆಗಳಂತೆ ಇನ್ನು ಮುಂದೆ ನಂದಿನಿಯು ಈ ಮೇಲೆ ಹೇಳಲ್ಪಟ್ಟ ಸನ್ಮಾನ್ಯಭ್ರಾತೃ ವರ್ಗೀಯರ ಶ್ರೀಯ ಪ್ರಾರ್ಥನಾ ಪೂರ್ವಕವಾಗಿ ನಂದಿನಿಯಲ್ಲಿ ಈ ಮುಂದೆ ವಿವರಿಸಲ್ಪಡುವ ವಿಚಾರಗಳನ್ನು ಆಚರಣೆಗೆ ತರಬೇಕೆಂದಿರು ವೆವು.

---

## (ಸಂದೇಶ)

೧ ನಮ್ಮ ದೇಶದಲ್ಲಿಯ ಸ್ತ್ರೀವಿದ್ಯಾಭ್ಯಾಸವು ಎಂತಹದಾಗಿದ್ದರೆ ದೇಶದ ಆರ್ಥಿಕಲಾಭವನ್ನು ಹೆಚ್ಚಿಸುವುದೆಂಬುದು.

೨. ನಮ್ಮ ಸಮಾಜದಲ್ಲಿ ಸ್ತ್ರೀಯರ ವಿಚಾರವಾಗಿ ಈಚೀಚೆಗೆ ಸೇರಿಬಂದಿರುವ ವಿರೋಧಭಾವನೆಯನ್ನು ಅಳಿಸಿ, ಸದ್ಭಾವನೆಯನ್ನು ತುಂಬಲು ಮಾಡಬೇಕಾದ ಕಾರ್ಯಗಳು— ಎಂದರೆ, ಸ್ತ್ರೀಯರ ಸೌಜ ನ್ಯಾಭಿವೃದ್ಧಿ, ಧರ್ಮಶ್ರದ್ಧೆ, ದೇಶಭಕ್ತಿ, ಸ್ವದೇಶಭಾಷಾಭಿಮಾನ, ಕರ್ತವ್ಯನಿಷ್ಠೆಗಳನ್ನು ಕುರಿತು,—

೩, ನಮ್ಮ ದೇಶಕ್ಕೆ ಭೂಷಣಪ್ರಾಯರಾಗಿರುವ ಮಹನೀಯರ ಉತ್ಕೃಷ್ಟಗುಣ, ಅವರ ಉತ್ತಮತರದ ಸೇವಾವೃತ್ತಿಯು ಮಾದರಿ, ಇವುಗಳನ್ನು ಅವರ ಸಚಿತ್ರ ಚರಿತ್ರದೊಡನೆ ವರ್ಣಿಸುವದರಿಂದಾಗಬಹುದಾದ ಉತ್ಕಟವಾದ ದೇಶಭಾಷಾಭಿವೃದ್ಧಿ ಸಾಧನ,

ಹೀಗೆ ಈ ಮೂರು ಸದ್ಯದ ಪ್ರಾಮುಖ್ಯ ಭಾಗವಾಗಿದ್ದು ಮುಂದೆ ಸಾಗಿದಂತೆಲ್ಲಾ ಇನ್ನೂ ಹೆಚ್ಚಿನ ಸುಧಾರಣೆಯನ್ನು ಕೈಕೊಳ್ಳಬೇಕೆಂದಿದೆ ಈಗ್ಗೆ ಸದ್ಯಕ್ಕೆ ಎಂದರೆ, ಇಷ್ಟರಲ್ಲಿಯೇ ಮೇಲಿನ ವಿಚಾರಗಳನ್ನು ಆಚರಣೆಗೆ ತರುವುದರಲ್ಲಿರುವಳೆಂಬ ವಿಚಾರವು ೩-೪-೫ನೇ ಸಂಚಿಕೆಗಳನ್ನು ನೋಡಿದರೆಯೇ ಗೊತ್ತಾಗಬಹುದು ಈ ವಿಚಾರದಲಿ ನಂದಿನಿಯು ತನ್ನ ಶಕ್ತಿಮೀರಿ ಪ್ರಯತ್ನಿಸುತ್ತಿರುವಳೆಂಬುದನ್ನು ಬಾಯ್ದೆರೆದು ಹೇಳಬೇಕಾಗಿಲ್ಲ ನೀವಾಗಿಯೇ ತಿಳಿಯಬಹುದು ಇನ್ನು ಈ ನಮ್ಮ ಕಾರ್ಯಗಳಲ್ಲಿ ನಮಗ ಸಹಾನುಭೂತಿಯನ್ನು ತೋರಿಸುತ್ತಿರುವ ಮೈಸೂರು ಮಿಷನ್ ಪ್ರೆಸ್ಸಿನವರ ಉಪಕಾರವನ್ನು ಕುರಿತು ನಮ್ಮ ಕೃತಜ್ಞತೆಯನ್ನು ಪ್ರದರ್ಶಿಸಿ, ನಮ್ಮ ವರ್ಗಣೀದಾರರಲ್ಲಿ ನಮ್ಮಿಂದಿನ ಭಾಷಣದಲ್ಲಿ ಉಂಟಾಗಬಹುದಾದ ಆಗ್ರಹವನ್ನು ಕುರಿತು ಕ್ಷಮೆಕೋರಿ, ಸದ್ಯಕ್ಕೆ ವಿರಮಿಸುವೆವು

(ಇತಿ ನಂದಿನಿ)

# ನೈಸರ್ಗಿಕಸೇವೆ

(ನಂದಿನಿಯ ೨ನೇ ಕಾರ್ತಿಕಮಾಸ) ಸಂಚಿಕೆಯಿಂದ ಮುಂದೆ, ೩ನೇ ಮಾರ್ಗಶಿರಮಾಸ) ಸಂಚಿಕೆಯ ಲೇಖನಕ್ಕೆ ಮೊದಲು ಕೈತಪ್ಪಿ ಬಿಟ್ಟುಹೋಗಿದ್ದ ಭಾಗವನ್ನು ಇಲ್ಲಿ ಪ್ರಕಟಿಸಿದೆ ವಾಚಕರು ಈ ಲೋಪವನ್ನು ಕ್ರಮಪಡಿಸಿಕೊಂಡು, ವಾಚಿಸುವರೆಂದು ನಂಬಿರುತ್ತೇವೆ )

ಅಲ್ಲಿಗೇ ಆಗಲಿ ಕೆಲಸವಿಲ್ಲದೆ ಕುಳಿತರೆ ಯೋಚನೆಗಳು ಕಂಡಕಡೆಗೆಲ್ಲಾ ಹುಚ್ಚುಹುಚ್ಚಾಗಿ ಹರಿದುಕೊಂಡು ಹೋಗುವವು ಆದುದರಿಂದ, ಸಂಸಾರದ ಯಾಜಮಾನ್ಯದ ಭಾರವೂ ತಲೆಯಮೇಲೆ ಇಲ್ಲದಿರುವದರಿಂದ, ಲಲಿತ, ಕಲೋಪಾಸ್ತಿಗಳಲ್ಲಿ ತಮ್ಮನ್ನು ತಾವೇ ಮರೆತು ಬಿಡುವರು ಜೀವನದ ಹೋರಾಟದ ಹುಯಿಲು ಹೆಂಗಸರಿಗೆ ಅಷ್ಟು ತಟ್ಟಿಲ್ಲವಾದುದರಿಂದ ಸಂಸಾರದ ಆದಾಯಕ್ಕೆ ಸ್ವಲ್ಪವನ್ನಾದರೂ ಕೂಡಿಸಿಕೊಡಬೇಕೆಂಬ ಬುದ್ಧಿ ಅವರಲ್ಲಿ ಇನ್ನೂ ಚೆನ್ನಾಗಿ ಬೇರೂರಿಲ್ಲ ನೆರೆಹೊರೆಯವರ ಆಧಿಕ್ಯವನ್ನು ನೋಡಿ, ಹುರುಡುಗೊಂಡು, ವೆಚ್ಚವನ್ನು ಹೆಚ್ಚುಮಾಡುವ ಹುಚ್ಚಾಟವು ಮಾತ್ರ ಯಾರೂ ಕಲಿಸದೆಯೇ ಬಂದಿರುವುದು

ಈ ಹೀಗೆ ಎಚ್ಚರತಪ್ಪಿದ ದಾರಿಯನ್ನು ತುಳಿವುದಕ್ಕೆ ಗಂಡಸರೂ, ಹೆಂಗಸರೂ ಒಂದೇ ಸಮನಾಗಿ ಒಟ್ಟನ್ನು ಮತ್ತೊಬ್ಬರು ವಿಚಾರಿಸಬೇಕೆಂದು ಹೋರಾಡುತ್ತಿದ್ದರೆ, ಅವರಿಗೆ ಅಭ್ಯುದಯ, ಶ್ರೇಯಸ್ಸುಗಳು ಹೇಗೆ ಸಾಧ್ಯವಾಗಬೇಕು? ಸರಳವಾದ ಜೀವನಕ್ರಮವನ್ನು ಬಿಟ್ಟು, ಸೊಗಸಿನ ಕಡೆಯ ಹಂಬಲಕ್ಕೆ ಮೊದಲಾಯ್ತೆಂದರೆ ಅಲ್ಲಿಗೆ ನಮ್ಮ ಏಳಿಗೆಯ ದಾರಿಯು ಕಡಿದುಬಿದ್ದಂತೆಯೇ ಸರಿ ಹೀಗೆ ಜೀವನಕ್ರಮವು ಬದಲಾಯಿಸುವದಕ್ಕೆ ಈಗಿನ ವಿದ್ಯಾಭ್ಯಾಸದ ಪದ್ಧತಿಯೇ ಕಾರಣವೋ, ಅಥವಾ ನಮ್ಮ ಜೀವನದಲ್ಲಿ ಉಂಟಾದ ಬದಲಾವಣೆಗಳಿಗೆ ಅನುಗುಣವಾದ ವಿದ್ಯಾಭ್ಯಾಸಕ್ರಮವು ಹೊಂದಿಸಲ್ಪಟ್ಟಿತೋ, ಅದು ಪ್ರಕೃತ ನಮ್ಮ ವಿಚಾರಕ್ಕೆ ವಿಷಯವಲ್ಲ. ಅನರ್ಥವೆಂದರಿಯು

ಮಾಡಿಕೊಳ್ಳುವದರಲ್ಲಿ ಈಗಿನ ವಿದ್ಯಾಭ್ಯಾಸ ಕ್ರಮವೂ ಸಹಾಯಮಾಡಿದೆಯೆಂದಿಷ್ಟು ಮಾತ್ರ ಧಾರಾಳವಾಗಿ ಹೇಳಬಹುದು ಹೇಗೆಂದರೆ- ಸರಿಯಾದ ವಿಚಾರದಿಂದ ಸಂಗತಿಯನ್ನು ಆಮೂಲಾಗ್ರವಾಗಿ ತಿಳಿದು, ವಿವೇಕವನ್ನು ಹೆಚ್ಚಿಸಿಕೊಂಡು, ವಸ್ತುಜ್ಞಾನವನ್ನು ತೀವ್ರವಾಗಿ ಪಡೆಯುವ ಶಕ್ತಿಯನ್ನು ಸಂಪಾದಿಸಿಕೊಳ್ಳುವದಕ್ಕೂ ಹೆಚ್ಚಾಗಿ, ಪರೀಕ್ಷಾಕರ್ತರಿಂದ ಯೋಗ್ಯತಾಪತ್ರವನ್ನು ಸಂಪಾದಿಸುವದರಲ್ಲಿಯೇ ಗಮನವು ಹೆಚ್ಚಾಗುತ್ತಿರುವದರಿಂದ, ಆಸ್ಥೆಯಿಂದ ವಿದ್ಯೆಯನ್ನು ಕಲಿಯುವ ಸೊಬಗು ಮೆಲ್ಲಮೆಲ್ಲನೆ ಅಳಿಯುತ್ತ ಬಂದು, ಅಭಿಮಾನವಿಲ್ಲದ ಬಣ ಓದುವಿಕೆಯು ಹಬ್ಬಿ, ದೇಹಪಟುತ್ವವನ್ನು ತಗ್ಗಿಸಿರುವದು ಇದರಿಂದ ಆವುದಕ್ಕೂ ಉಲ್ಲಾಸವಿಲ್ಲದಂತಾಯಿತು ಉತ್ಸಾಹವು ಅಲ್ಪಾಯುವೆನಿಸಿತು ಹೀಗೆಯೇ ಅನರ್ಥಪರಂಪರೆಗಳು ಒಂದರ ಹಿಂದೆ ಮತ್ತೊಂದಾಗಿ ಸಾಲುಕಟ್ಟಿ ಬರುತ್ತಿರುವವು

೯. ಇದರ ಮೇಲ ವಿದ್ಯೆಯನ್ನು ಸ್ವಲ್ಪ ಕಲಿತವರು ಮತ್ತು ಉತ್ತಮವರ್ಣದಲ್ಲಿ ಹುಟ್ಟಿದವರು ಸಹ, ಮೈಮುರಿದು ಕೆಲಸ ಮಾಡುವದು ಉಚಿತವಲ್ಲವೆಂದು ಬೇರೆ ಕೆಲವರ ಕಲ್ಪನೆ! ಕೆಲಸವೆಂದರೆ ಸಾಕು, ಸ್ವಾಭಾವಿಕವಾಗಿ ಉಂಟಾಗುವ ಮೈಗಳ್ಳತನದ ಜತೆಗೆ, ನಾಗರಿಕತೆಯ ಅಂತಸ್ತು ಹೆಚ್ಚುತ್ತ ಬಂದಹಾಗೆಲ್ಲ, ಕಷ್ಟಪಟ್ಟು ಕೆಲಸಮಾಡುವದೇ ಅಗೌರವೆಂಬ ಕಲ್ಪನೆಯು ಬೆಳೆದು ಉದ್ಯೋಗಲಕ್ಷಣವನ್ನೇ ಹಾಳುಮಾಡಿ ಬಿಟ್ಟಿರುವದು ದಿನಕ್ರಮದಿಂದ ಪ್ರತಿಯೊಬ್ಬರೂ ವಿದ್ಯೆಯ ಮಹತ್ವವನ್ನೂ, ವಿದ್ಯೆಯ ಬೆಲೆಯನ್ನೂ ಅರಿಯುವವರಾಗಿದ್ದರೂ,— ಸಂಪದಭ್ಯುದಯಕ್ಕೆ ವಿದ್ಯೆಯೊಂದು ಘನವಾದ ಬಂಡವಾಳವೆಂದು ಅವರು ತಿಳಿದಿರುವಂತೆ ಕೆಲಸ ಮಾಡುವ ಶಕ್ತಿಯೂ, ಆ ಶಕ್ತಿಯನ್ನು ಪ್ರಯೋಗಿಸುವದಕ್ಕೆ ಒದಗಿರುವ ಕಾಲವೂ ವಿದ್ಯೆಗೂ ಬಲವಾದ ಆಸ್ತಿಗಳೆಂದುತಿಳಿದುಕೊಳ್ಳುವಷ್ಟು ಪ್ರೌಢಾವಸ್ಥೆಗೆ ಇನ್ನೂ ಬಂದಿಲ್ಲ. ಆದುದರಿಂದಲೇ,— ಅವಿದ್ಯೆ ದಾರಿದ್ರ್ಯಗಳನ್ನು ನಾಶಮಾಡುವದಕ್ಕೆಂದು ನಡೆಯುತ್ತಿರುವ ಪ್ರಯತ್ನಗಳಿಂದ ಕಣ್ಣುಗಂಡಂತೆ ವಿದ್ಯೆಯೂ, ಉದ್ಯೋಗಗಳೂ ಎಲ್ಲೆಲ್ಲಿಯೂ ಹರಡುತ್ತಿದ್ದರೂ ಅದಕ್ಕೆ

ತಕ್ಕಂತೆ ದಾರಿದ್ರ್ಯನಾಶನವಾಗದಿರುವುದು ಹಾಗೆ ಪ್ರಾಥಾವಸ್ಥೆಗೆ ಬರಬೇಕಾದರೆ ದುಡಿಮೆಯ ಅಗತ್ಯವನ್ನೂ, ಕಾಲದ ಬೆಲೆಯನ್ನೂ ಚೆನ್ನಾಗಿ ಕಂಡುಕೊಳ್ಳಬೇಕು. "ಇತರರು ದುಡಿಯಬೇಕು, ನಾವು ಕುಳಿತು ಉಣಬೇಕು" ಎಂಬ ಮನೋವಿಕಾರವನ್ನು ಮೊತ್ತ ಮೊದಲು ನಿರ್ಮೂಲ ಮಾಡಬೇಕು ಇಷ್ಟಾದರೆ ಅಧಿಕಾರಕ್ಕೆ ಸಾರ್ಥಕ್ಯತೆಯುಂಟಾದಂತೆಯೇ ಆಯಿತು.

ಎಚ್- ನಾರಾಯಣರಾವ್, ಬಿ ಏ

---

# ಸ್ತ್ರೀಯರ ನೈಸರ್ಗಿಕ ಸೇವೆ.

## ಚತುರ್ಥ ಪ್ರಕರಣ

### (ಸ್ತ್ರೀಯರ ಆಳುಕೆಲಸ.)

೧ ಕಷ್ಟಪಟ್ಟು ಕೆಲಸ ಮಾಡುವದನ್ನು ಎರಡು ದೊಡ್ಡ ಪಂಗಡಗಳಾಗಿ ವಿಂಗಡಿಸಿ, ಸ್ವಂತವಾಗಿ ದುಡಿದು ಮಾಡುವ ಕೆಲಸವನ್ನು ಆಳುಕೆಲಸವೆಂದೂ, ಮೇಲ್ವಿಚಾರಣೆಯ ಮತ್ತು ಉತ್ತರವಾದಿತ್ವದ ಭಾರವನ್ನು ಮಾತ್ರ ಸ್ವಂತಕ್ಕೆ ಇರಿಸಿಕೊಂಡು ಉಳಿದುದನ್ನು ಇತರರಿಂದ ಮಾಡಿಸುವ ಕೆಲಸಕ್ಕೆ ಅರಸುಕೆಲಸವೆಂದೂ ಹೆಸರಿಟ್ಟುಕೊಂಡು, ಯಾವ ಯಾವ ಕೆಲಸಗಳನ್ನು ಯಾರು ಯಾರು ಎಷ್ಟೆಷ್ಟು ಮಟ್ಟಿಗೆ ಗೌರವಿಸಬೇಕಾಗುತ್ತದೆಂಬುದನ್ನು ಕುರಿತು ಆಲೋಚನೆ ಮಾಡಿ ನೋಡಿದರೆ, ಜಾತಿಭೇದ, ಮತಭೇದ, ವರ್ಣಭೇದ, ಕುಲಭೇದ, ಆಶ್ರಮಭೇದ, ಅವಸ್ಥಾಭೇದ ಇವೇ ಮೊದಲಾದವುಗಳಾವುದೊಂದೂ ಇಲ್ಲದೆ ಪ್ರತಿಯೊಬ್ಬರೂ ಆಳುಕೆಲಸದ ಮೇಲಿನ ಅಭಿಮಾನಕ್ಕಾಗಲೀ, ಅರಸುಕೆಲಸಕ್ಕೆ ಸುಶಿಕ್ಷಿತರಾಗಲು ಮಾಡಬೇಕಾದ ಸನ್ನಾಹರೂಪವಾಗಿಯಾಗಲೀ, ಅವಶ್ಯವಾಗಿ ಆಳು ಕೆಲಸಗಳನ್ನು ಕೈಗೊಳ್ಳಬೇಕಾಗುವುದೆಂದು ಹಿಂದಿನ ಪ್ರಕರಣದಲ್ಲಿ ಸೂಚಿಸಿತಷ್ಟೇ! ಈ ಬಗೆಯ ಆಳು ಕೆಲಸದ ಸ್ವೀಕಾರವು ಸ್ತ್ರೀಯರಿಗೆ ಎಷ್ಟುಮಟ್ಟಿಗೆ ಮಾನ್ಯವಾಗಿದೆಯೆಂಬುದನು

ಕುರಿತು ವಿಚಾರ ಮಾಡಿದರೆ ಅದರ ಪ್ರಾಶಸ್ತ್ಯವು ಮತ್ತೂ ಹೆಚ್ಚು ವದು. ಆದರೆ ಆಳುಕೆಲಸಕ್ಕೂ, ಹೆಂಗಸರಿಗೂ ಹೇಗೆ ಹೊಂದಿಕೆ ಯಾಗುತ್ತದೆಂಬುದನ್ನು ತಿಳಿಯಬೇಕೆಂದರೆ, ಮೊದಲು ಆಳು ಕೆಲಸದ ನಿರ್ವಾಹಕ್ಕೆ ಬೇಕಾದ ಯೋಗ್ಯತೆಗಳನ್ನೂ, ಸಮಾಜದಲ್ಲಿ ಸ್ತ್ರೀಯರಿ ಗಿರುವ ಸ್ಥಾನ ವಿಶೇಷದ ಮಹಿಮೆಯಿಂದ ಆ ಯೋಗ್ಯತೆಗಳಿಗೂ ಸ್ತ್ರೀ ಸ್ವಭಾವಕ್ಕೂ ಅನುಬಂಧವು ಹೇಗೆ ದೃಢಪಡುವದೆಂಬುದನೂ ತಿಳಿಯಬೇಕು.

೨ ವಿಚಾರಕ್ಕೆ ಮೊದಲು ಒಂದು ಮಾತು — ಆಳು ಕೆಲಸವೆಂದ ಮಾತ್ರದಿಂದ 'ಆಳು' ಮಾತಿನ ಶಬ್ದಾರ್ಥವನ್ನು ಮಾತ್ರ ಲಕ್ಷ್ಯದಲ್ಲಿ ಟ್ಟುಕೊಂಡು, ಅದೊಂದು ಹೀನಾಯದ ಗುಲಾಮ ಚಾಕರಿ(?)ಯೆಂದ, ಒಮ್ಮಿಂದೊಮ್ಮೆಗೇ ಒದೆದು ಬಿಡಬಾರದು ನಿಜವಾಗಿ ನೋಡಿದರೆ ಆಳು ಕೆಲಸವಿಲ್ಲದೆ ಅರಸು ಕೆಲಸವಿಲ್ಲ, ಅರಸು ಕೆಲಸವಿಲ್ಲದೆ ಆಳ ಕೆಲಸವಿಲ್ಲ, ಒಂದರಲ್ಲಿ ಮತ್ತೊಂದು ಅಂತರ್ಗತವಾಗಿ ಹೋಗಿದೆ ಒಂದು ಉದ್ಯೋಗದಲ್ಲಿ ಆಳು ಕೆಲಸವು ಇಲ್ಲಿಗೆ ಕೊನೆಯಾಗುತ್ತದೆ ಇಲ್ಲಿಂದ ಅರಸು ಕೆಲಸಕ್ಕೆ ಮೊದಲಾಗುತ್ತದೆ,ಎಂದು ಗೊತ್ತಾಗಿ ಹೇಳುವದಕ್ಕೆ ಆಗುವಂತಿಲ್ಲ ನೆಂದ ಬಳಿಕ 'ಈ ವಿಭಾಗವು ಅರ್ಥವಿಲ್ಲದ ಬರಿಯ ವಾಗಾಡಂಬರವಾಯಿತಲ್ಲ?' ಎಂದರೆ ಹಾಗಲ್ಲ, ಈ ವಿಭಜನೆಯ ಉದ್ದೇಶವು ಒಂದೊಂದು ವಿಭಾಗದ ಆದ್ಯಂತಗಳನ್ನು ಸಮಗ್ರವಾಗಿ ಕಂಡುಹಿಡಿಯಬೇಕೆಂದಲ್ಲ ಕೇವಲ ಶ್ರೇಷ್ಠವಾದ ಬುದ್ಧಿ ಕೌಶಲ್ಯವೇ ಪ್ರಾಧಾನ್ಯವಾಗಿ ಉಳ್ಳದುದೊಂದು, ಮನುಷ್ಯ ಸಾಮಾನ್ಯ ವಾದ ಬುದ್ಧಿಯಿಂದಾಗಬಹುದಾದುದೊಂದು, ಹೀಗೆ ಎರಡು ತರಗತಿ ಗಳಾಗಿ ವಿಂಗಡಿಸಬಹುದೆಂದು ಸರ್ವಸಾಮಾನ್ಯವಾಗಿಯೂ ಸ್ಥೂಲ ವಾಗಿಯೂ ತೋರಿಸುವುದು ಮಾತ್ರವೇ ಉದ್ದೇಶವಲ್ಲದೆ ವಿಭಜನೆಗೆ ಅಕ್ಷರಶ ಅರ್ಥಮಾಡಲಾಗದು

೩ ಅವುದರ ಅರ್ಥವು ಹೇಗಾದರೂ ಇರಲಿ, ಆಳು ಕೆಲಸವೆಂದರೆ ಮನುಷ್ಯತ್ವದ ಹೆಚ್ಚುಗಾರಿಕೆಯನ್ನು ತೋರ್ಪಡಿಸುವದಕ್ಕೆ ಅವಕಾಶ ವನ್ನೇ ಕಾಣದೆ ಕತ್ತೆ ದುಡಿದ ಹಾಗೆ ದುಡಿಯುವದೆಂದೂ, ಅರಸು

ಕೆಲಸವೆಂದರೆ ಬುದ್ಧಿ ಕೌಶಲ್ಯಕ್ಕೆ ಸಾರ್ಥಕ್ಯವನ್ನು ತಂದು ಕೊಟ್ಟು, ಅದನ್ನು ವೃದ್ಧಿಗೊಳಿಸುವ ಚೇತನ ಸ್ವರೂಪವೆಂದೂ ತಿಳಿಯುವ ಬುದ್ಧಿಯೇ ಸಾಮಾನ್ಯವಾಗಿ ಆವರಿಸಿಕೊಂಡು ಬರುವದು ಅದರಿಂದಲೇ ಒಂದರಲ್ಲಿ ತಿರಸ್ಕಾರವೂ, ಮತ್ತೊಂದರಲ್ಲಿ ಪುರಸ್ಕಾರವೂ ಅಭೇದ್ಯವಾಗಿ ಹುಟ್ಟುವವು ಆಳು ಕೆಲಸವು ಅರಸು ಕೆಲಸಕ್ಕೆ ಅರ್ಹತೆಯನ್ನು ಸಂಪಾದಿಸಿ ಕೊಡುವ ಮುಖ್ಯವಾದ ಮೆಟ್ಟಿಲಿನಸೋಪಾದಿಯಲ್ಲಿರುವದೆಂದೂ, ಆಳುಕೆಲಸದ ನಿಪುಣತೆಯೇ ಅರಸುಕೆಲಸದ ಪ್ರವರ್ತನೆಯಲ್ಲಿ ಸುಖ ಸೌಕರ್ಯಗಳನ್ನುಂಟು ಮಾಡುವ ಅಧಾರಸ್ತಂಭವೆಂದೂ ಎಷ್ಟೋ ಮನಗಂಡರೂ ಮನುಷ್ಯನಿಗೆ ಜನ್ಮಕ್ಕೆ ಗಂಟು ಬಿದ್ದ ದುರಭಿಮಾನವು ಅಷ್ಟು ಸುಲಭವಾಗಿ ತೊರೆದು ಹೋಗುವದಿಲ್ಲ ಎಷ್ಟು ಹೇಳಿದರೇನು, ಎಷ್ಟು ತಿಳಿದರೇನು, ಎಷ್ಟೆಷ್ಟು ಪ್ರಯತ್ನ ಮಾಡಿದರೂ ಆಳು ಕೆಲಸದ ವಿಚಾರದಲ್ಲಿ ನಿಕೃಷ್ಟಭಾವನೆಯೂ, ಅರಸು ಕೆಲಸದಲ್ಲಿ ವಿಶೇಷವಾದ ಗೌರವವೂ ನಮ್ಮನ್ನು ಬಿಡದ ತಗಲಿಕೊಂಡೇ ಇರುವವು ಆವುದೇ ಆಗಲಿ ಹಿಡಿದ ದುಃ ನೆಟ್ಟಗಾಗಬೇಕಾದರೆ ಈ ವಿಧವಾದ ಭೇದಬುದ್ಧಿಯು ಮೊದಲು ಹೋಗಬೇಕು ಎಂದರೆ ಅಷ್ಟರ ಸಂಸ್ಕಾರವಾಗಿರಬೇಕು

೪ ಇನ್ನೂ ಸ್ವಲ್ಪ ಆಳವೊಕ್ಕು ವಿಚಾರಮಾಡಿ ನೋಡಿದರೆ ಈ ಭೇದ ಬುದ್ಧಿಯು ಕೃತ್ಯಲ್ಲಿ ಏನೂ ಅರಿಯದಿದ್ದವರ ಕೋಪದ ಪ್ರದರ್ಶನಮಾತ್ರವೆಂದು ಗೊತ್ತಾಗುವದು ಏಕೆಂದರೆ,— ಮಾನಾವಮಾನಗಳು ಯಾವಕೆಲಸದಲ್ಲಿಯೂ ಸಹಜವಾಗಿ ಬಂದುದಿಲ್ಲ. ಹಾಗೆಯೇ ಎಷ್ಟು ಬುದ್ಧಿಯು ಅಗತ್ಯವೇ ಇಲ್ಲದ ಕೆಲಸವಾದರೂ, ಕೆಲಸಗಾರನ ಹಸ್ತಕೌಶಲಕ್ಕೆ ಸಾರ್ಥಕ್ಯವನ್ನುಂಟುಮಾಡಿಕೊಡದಿರುವ ಕೆಲಸವೇ ಇಲ್ಲ ಏನೇನೂ ಕೆಲಸಕ್ಕೆ ಬಾರದುದೆಂದು ನಿರ್ಧರವಾದ ಒಂದು ಉದ್ಯೋಗವನ್ನು ಒಬ್ಬ ಬುದ್ಧಿವಂತನಿಗೂ, ಒಬ್ಬ ದಡ್ಡನಿಗೂ ಒಪ್ಪಿಸಿದರೆ, ಆ ಇಬ್ಬರ ಕೆಲಸವೂ ಎಂದಿಗೂ ಒಂದೇ ಆಗಲಾರದು ಬುದ್ಧಿವಂತನು ತನ್ನ ಬುದ್ಧಿಯ ಮಹತ್ವವನ್ನು ಆ ಕೆಲಸದಲ್ಲಿ ತುಂಬಿ, ನಿಕೃಷ್ಟವೆಂದೆಣಿಸಲ್ಪಟ್ಟದ್ದ ಅದೇ ಕೆಲಸವನ್ನೇ ಎಷ್ಟೋಮಾನ್ಯವಾದುದನ್ನಾಗಿ ಮಾಡುವನು ಹೀಗೆ ನಾವು ಆವದನ್ನೇ ಆಗಲಿ

ಕೆಲಸಕ್ಕೆ ಬಾರದುದೆಂದು ನಿರಾಕರಿಸುವುದು ಸರಿಯಲ್ಲ. ದೃಷ್ಟಾಂತಕ್ಕೆಂದರೆ,- ಎಷ್ಟೋ ವೇಳೆಗಳಲ್ಲಿ ಕಸವನ್ನು ನಾವು ಮನೆಯಿಂದ ಆಚೆ ಬಿಸುಡುತ್ತೇವೆ. ಹಾಗೆ ಅದು ನಮ್ಮ ನಿರಾಕರಣೆಗೆ ಮಾತ್ರವೇ ಯೋಗ್ಯವೆನ್ನಬಹುದೋ? ಇಲ್ಲ. ಅದೇ ಕಸವನ್ನು ನಾವು ಕೂಡಿಹಾಕಿದ್ದು ಸಾಗುವಳಿಯ ಭೂಮಿಗೆ ಕಾಲವರಿತು ಹಾಕಿದರೆ ಅದೇ ಹಸನಾದ ಗೊಬ್ಬರವಾಗಿ, ಬೆಳೆಯನ್ನು ಹುಲುಸಾಗಿ ಮಾಡುವದು. ಹೀಗೆಯೇ ಆವ ವಿಚಾರದಲ್ಲಿಯೂ ನಿಕೃಷ್ಟಭಾವನೆಯು ಇರಬಾರದು. ಒಂದು ಉದ್ಯೋಗವು ಹೇಯವಾದುದೆಂದು ಹೇಳಿದರೆ ಅನನುಭವಿಗಳ, ಅಥವಾ ಶಾಸ್ತ್ರಸಿದ್ಧವಾದ ತಿಳಿವಿಲ್ಲದವರ ಕೈಯಲ್ಲಿ ಸಿಕ್ಕಿರುವದೆಂದು ಮಾತ್ರ ತಿಳಿಯಬೇಕು. ಯಾರಿಗೆ ಯಾವದರ ಗುಣಗ್ರಹಣ ವಿಷಯದಲ್ಲಿ ಅದಕ್ಕೆ ಬೇಕಾದ ಬುದ್ಧಿಯಿರುವದಿಲ್ಲವೋ, - ಅವರ ಭಾಗಕ್ಕೆ ಮಾತ್ರ ಅದು ಅನುಪಯೋಗವಾಗಿ ಪರಿಣಮಿಸುವುದು. ಅದುದರಿಂದ ಭೇದಬುದ್ಧಿ-ನಿಕೃಷ್ಟಭಾವನೆಗಳನ್ನು ಕಳೆದುಕೊಳ್ಳುವದರ ಜತೆಗೆ ಗುಣಗ್ರಹಣಬುದ್ಧಿಯನ್ನು ಸಂಪಾದಿಸಿಕೊಳ್ಳುವದು ಅಗತ್ಯವು.

ಈ ಉದ್ಯೋಗಗಳನ್ನು ಆರಿಸಿಕೊಳ್ಳುವದರಲ್ಲಿಯೂ ಒಂದು ವಿಶೇಷವುಂಟು. ನಮಗೆ ಸ್ವಾಭಾವಿಕವಾಗಿರುವ ಯೋಗ್ಯತೆಯನ್ನೂ ನಮ್ಮ ಉದ್ದೇಶವಿರುವ ಉದ್ಯೋಗಕ್ಕೆ ಬೇಕಾದ ಯೋಗ್ಯತೆಯಾವುದೆಂಬದನ್ನೂ ವಿಮರ್ಶೆಮಾಡಿ, ತಮ್ಮ ನಿಜಸ್ಥಿತಿಗೆ ಒಪ್ಪುವದಾವದೋ, ಅದನ್ನೇ ಸ್ವೀಕರಿಸಿ, ಸಾಫಲ್ಯಹೊಂದುವಂತೆ ಮಾಕೊಳ್ಳಬೇಕೆಂಬುದು ಮುಖ್ಯನಿಯಮ. ಈ ನಿಯಮವನ್ನು ನೆನಪಿನಲ್ಲಿಟ್ಟುಕೊಂಡು ನೋಡಿದರೆ, ಅರಸು ಕೆಲಸಕ್ಕೆ ಬೇಕಾದ ಯೋಗ್ಯತೆಯು ನಮ್ಮಲ್ಲಿಲ್ಲದಿದ್ದರೆ, ಅಥವಾ ಇದ್ದರೂ ನಮಗೆ ಇರುವದಕ್ಕೂ ಹೆಚ್ಚಿನ ಯೋಗ್ಯತೆಯುಳ್ಳವರು ತಿಳಿದು ಬಂದರೆ, ಆ ಕೆಲಸವನ್ನು ಅವರಿಗೆ ಒಪ್ಪಿಸಿ, ನಮ್ಮ ಯೋಗ್ಯತೆಗೆ ಚನ್ನಾಗಿ ಒಪ್ಪುವ ಕೆಲಸಗಳನ್ನು ಮಾತ್ರವೇ ನಾವು ಹಿಡಿಯುವದು ನಮಗೂ ಕ್ಷೇಮ, ಲೋಕಕ್ಕೂ ಕ್ಷೇಮ. ಕ್ಷೇಮವೆಂದಿಷ್ಟೆ ಮಾತ್ರವೇ ಅಲ್ಲ. ಆಳು ಕೆಲಸವನ್ನು ವಹಿಸಿರುವವರಲ್ಲಿ ನಮಗೂ ಹೆಚ್ಚಿನ ಅರ್ಹತೆಯುಳ್ಳವರಿಗೆ ಆ ಆಳು ಕೆಲಸದ ಯೋಚನೆಯನ್ನು

ತಪ್ಪಿಸಿ, ಅವರು ಅರಸುಕೆಲಸವನ್ನು ಸುಲಲಿತವಾಗಿ ನಡೆಯಿಸಿಕೊಂಡು ಹೋಗಲು ಅವಕಾಶವನ್ನು ಕಲ್ಪಿಸಿಕೊಟ್ಟು ನಮಗಿರುವ ಬುದ್ಧಿವಿಶೇಷದಿಂದ ನಾವು ನಮ್ಮಪಾಲಿಗೆ ಬಂದ ಆಳುಕೆಲಸಕ್ಕೆ ಒಂದು ಗೌರವವನ್ನು ಸಂಪಾದಿಸಿಕೊಟ್ಟು, ಕೃತಾರ್ಥತೆಯನ್ನು ಪಡೆಯಬೇಕಾದರೆ, ಮೇಲಿನ ಗುಣಗ್ರಹಣದ ನಿರ್ಮಾತ್ಸರ್ಯದ ಬೆರೆಯನ್ನು ಅಪ್ಪಿಷ್ಟೆಂದು ಹೇಳಿತೀರದು

ಇದರ ಮೇಲೆ ಮನುಷ್ಯನಿಗೆ ಯಾವಾಗಲೂ, ಎಲ್ಲ ಸಂದರ್ಭಗಳಲ್ಲಿಯೂ ಆಶೆಯೊಂದು ಮಹತ್ತರವಾಗಿ ಬಾಧಿಸುತ್ತಿರುವದು ಎಲ್ಲರೂ ಸಿಂಹಾಸನವನ್ನೇರಿ ಕುಳ್ಳಿರಬೇಕೆಂಬುದೇ ಬಯಕೆ ಆದರೆ ಎಲ್ಲರೂ ಪಲ್ಲಕ್ಕಿಯಲ್ಲಿಯೇ ಕೂಡುವವರಾದರೆ ಅದನ್ನು ಹೊರುವವರಾರೆಂಬದನ್ನು ಯೋಚಿಸಬೇಡವೆ? ಆಶೆಗೆ ಮಿತಿಮೇರೆಗಳಿಲ್ಲ, ಸಾಧ್ಯಾಸಾಧ್ಯ ವಿಚಾರಗಳಿಲ್ಲ ಅದೊಂದು ಕೇವಲ ಮಾನಸಿಕವೃತ್ತಿ! ಆದುದರಿಂದ ಅದನ್ನು ಈ ಪ್ರಾಪಂಚಿಕ ಈ ಭೌತಿಕ ಧರ್ಮಗಳೊಂದೂ ನಿರೋಧಿಸಲಾರದು ಆಶೆಯ ಕರ್ತೃತ್ವವು ಒಂದು ವಿಷಯಕ್ಕೆ ಒಳ್ಳೆಯದೇ ಸರಿ ಏಕೆಂದರೆ ಅದರ ಆಶ್ರಯವನ್ನು ಬಿಟ್ಟರೆ ನಮಗೆ ಮುಂಬರಿವುದಕ್ಕೆ ಪ್ರೋತ್ಸಾಹವು ಮತ್ತೆಲ್ಲಿಂದ, ಆವುದರಿಂದಲೂ ಬರುವದಿಲ್ಲ ಆಶೆಯೇ ಪ್ರೋತ್ಸಾಹದ ನಿಧಿ! ಎಂದರೆ ಅದನ್ನು ಮನಬಂದಂತೆ ಹೋಗುವಂತೆ ಬಿಡಬಾರದು. ಅವನ್ನು ಹಾಗೆಯೇ ಹರಿಯಬಿಟ್ಟರೆ ಅದು ನೆಲೆಗೆ ನಿಲ್ಲದೆ ಕಡೆಗೆ ದು ಖದಾಯಕವಾಗಿಯೇ ಪರಿಣಮಿಸುವದು ಆದರೆ ಅದು ಯಾವ ರೀತಿಯಲ್ಲಿ ನಿಲ್ಲಬೇಕು? ಪ್ರಪಂಚವು ನಿರಾತಂಕವಾಗಿ ಸಾಗಬೇಕಾದರೆ ಹಲವು ಜನರು ಹಲವು ಉದ್ಯೋಗಗಳನ್ನು ಹಿಡಿದು ಸಾಧಿಸಬೇಕಷ್ಟೆ? ಎಲ್ಲರೂ ಒಂದೇ ತೆರನ ಉದ್ಯೋಗಕ್ಕೆ ಮೋಹಪಟ್ಟು ಅತ್ತ ಕಡೆಗೇ ಓಲುತ್ತಬಂದರೆ ಕಾರ್ಯನಿರ್ವಾಹಕ್ರಮವು ಖಂಡಿತವಾಗಿಯೂ ಹದಗೆಡುವದು. ಇಂತಹ ಉದ್ಯೋಗವೇ ಬೇಕೆಂದು ಆಶೆಪಡುವುದು ನಿಷ್ಪ್ರಯೋಜನ, ಅದು ವ್ಯರ್ಥವಾದ ಭ್ರಮೆಯೆನಿಸುವದು ಹಿಡಿದ ಉದ್ಯೋಗವು ಎಂತಹದೇ ಆದರೂ ಅದರಲ್ಲಿ ಪರಿಣತೆಯನ್ನು ಪಡೆಯಬೇಕೆಂಬುದೇ ನಮ್ಮ ಆಶೆಗೆ ಮುಖ್ಯ ಗುರಿಯಾಗಿರಬೇಕು.

ಆದುದರಿಂದ ಆಳು ಕೆಲಸಕ್ಕೆ ಅರ್ಹತೆಯನ್ನು ಸಂಪಾದಿಸಿ ಕೊಡುವ ಮತ್ತೊಂದು ದೊಡ್ಡ ಗುಣವು ಆಶಾನಿರೋಧವೆನ್ನಿಸಿಕೊಳ್ಳುವದು

೭ ಆಶೆಗೆ ಒಡನಾಡಿಗಳಾಗಿ ಪ್ರತಿಫಲವನ್ನು ಕೂಡಿದಷ್ಟು ಬೇಗನೆ ಪಡೆಯುವದರ ಸಲುವಾಗಿ ಆತುರವೂ ಮತಿಗೆಟ್ಟ ವ್ಯಾಪಾರವೂ ಅನುಸರಿಸುತ್ತ ಬರುವವು ಈ ಗುಣಗಳು ಅರಸು ಕಲಸದಲ್ಲಿ ಒಂದುವೇಳೆ ಪ್ರಮಾದವಿಲ್ಲದೆ ಸರಿಹೋದರೂ ಹೋಗಬಹುದು ಆಳುಕೆಲಸಕ್ಕೆ ಮಾತ್ರ ಇದಿದ್ದರೆ ಸಾಗಲಾರದು ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಆಳು ಕೆಲಸದಲ್ಲಿ ಹೆಚ್ಚು ಶ್ರಮಪಟ್ಟು ಕಡಿಮೆ ಫಲವನ್ನು ಪಡೆಯುವದಕ್ಕೆ ಸಿದ್ಧವಾಗಿರಬೇಕು ಎಂದಬಳಿಕ ಕಷ್ಟಸಹಿಷ್ಣುತೆಯೂ ಅಸಾಧಾರವಾದ ನಿಧಾನಗುಣವೂ ಜತೆಗೊಂಡಿರಬೇಕು. ಆಳುಕೆಲಸದಲ್ಲಿ ದೇಹಶ್ರಮವೇ ಪ್ರಧಾನವಾಗಿರುವದು ಕಷ್ಟವು ಕಷ್ಟವೆಂದು ತೋರಿದಬಳಿಕ ಆ ಉದ್ಯೋಗದಲ್ಲಿ ಅಭಿರುಚಿಯೂ, ಅಭಿಮಾನವೂ, ತಪ್ಪುವವು. ಮನಸ್ಸಿಗೆ ಕಿರಿಕಿರಿಯೂ ಬೇಸರವೂ ಹೆಚ್ಚುವವು ಕೆಲಸ ಮಾಡದಿದ್ದರೆ ವಿಧಿಯಿಲ್ಲ, ಮಾಡಬೇಕೆಂದರೆ ಚಿತ್ರಹಿಂಸೆ! ಈ ಬಗೆಯ ಉಭಯ ಸಂಕಟದಲ್ಲಿ ಜೀವನಸೇದು ಖಿಮುಖವಾಗಿ ಪ್ರಾಣಧಾರಣೆಯುಕೂಡ ಬಂದು ದೊಡ್ಡ ಹೊರೆಯೆಂಬಂತೆ ಪರಿಣಮಿಸುವದು ಆದುದರಿಂದ ಕಷ್ಟವನ್ನು ಮನಸ್ಸಿಗೆ ತಂದುಕೊಳ್ಳದೆ ಇರುವ ಗುಣದ ಜತೆಗೆ ಚಾಕರಿಗ ಇಟ್ಟುಕೊಂಡವನು ಲಾಭಲೋಭದಿಂದ ಒಂದು ವೇಳೆ ಅವಸರಿಸಿದರೂ ಅದನ್ನು ತಡೆದುಕೊಂಡು ಮನಸ್ಸಿಗೊಂದು ಬೇಸರವನ್ನುಂಟುಮಾಡದೆ ಕೆಲಸಕ್ಕೆ ಯಾವ ಭಾಗದಲ್ಲಿಯೂ ಕೊರತೆಯುಂಟಾಗದಂತೆ ನಡೆಯಿಸಿಕೊಂಡು ಹೋಗುವ ನಿಧಾನ ಗುಣದ ಬಲವೂ ಇರಬೇಕು

೮ ಹೀಗೆ ಆಳುಕೆಲಸದಲ್ಲಿ ಕೈಯಿಟ್ಟಬಳಿಕ ಅದರಲ್ಲಿ ಜಯಶಾಲಿಯಾಗಬೇಕಾದರೆ ಮೊತ್ತಮೊದಲು ಕೆಲಸದ ವಿಷಯದಲ್ಲಿ ದೋಷಾನ್ವೇಷಣ ಬುದ್ಧಿಯು ಹೋಗಿ ಗುಣಗ್ರಹಣಬುದ್ಧಿಯೂ ನಿರ್ಮಾತ್ಸರ್ಯ ಗುಣವೂ ಬರಬೇಕು ಅನಂತರ ಉದ್ಯೋಗದಲ್ಲಿ ಪ್ರವೇಶಕ್ಕೆ ಪ್ರಥಮಪಾದವಾಗಿ ಆಶಾನಿರೋಧವನ್ನು ಅಭ್ಯಸಿಸಬೇಕು ಅಲ್ಲಿಂದ

ಮುಂದೆ ಧಾರಾಳವಾಗಿ ಕೆಲಸಮಾಡುವಷ್ಟರ ಕಷ್ಟಸಹಿಷ್ಣುತೆ ಮತ್ತು ನಿಧಾನಗುಣ ಇವು ದೃಢಮೂಲವಾಗಿರಬೇಕು. ಈ ಯೋಗ್ಯತೆಯು ಬರಬೇಕಾದರೆ ನಮ್ಮ ಕೆಲಸದ ಯಾವ ಭಾಗದಲ್ಲಿಯಾಗಲಿ, ನಮ್ಮ ತಿಳಿವಳಿಕೆಯು ತಪ್ಪಾಗಿದ್ದರೆ ಅಥವಾ ನಮ್ಮಲ್ಲಿ ಒಂದು ಸರಿಯಾದ ನಿರ್ಣಯವಿಲ್ಲದಿದ್ದರೆ ಅದನ್ನು ವಿಚಾರಪರಂಪರೆಯಿಂದ ಸರಿಮಾಡಿಕೊಳ್ಳಬಹುದೇ ಹೊರತು ಸಾಕ್ಷಾತ್ತಾಗಿಯೂ ಕ್ಷಿಪ್ರವಾಗಿಯೂ ಹೆಚ್ಚಿನ ಪ್ರಯೋಜನವು ವಿಚಾರದಿಂದ ಬರುವದಿಲ್ಲ. ಯುಕ್ತಿಪ್ರಮಾಣಗಳಿಗೆ ಕಷ್ಟಪಟ್ಟು ಒಪ್ಪಿಕೊಳ್ಳುವದು ಒಂದು ವಿಷಯ. ಆ ಒಪ್ಪಿಕೆಯನ್ನು ಮನಃಪೂರ್ವಕವಾಗಿ ಆಚರಣೆಯಲ್ಲಿ ತರುವದು ಶುದ್ಧವಾಗಿ ಬೇರೊಂದು ವಿಷಯ. ಇವೆರಡರಲ್ಲಿ ಒಂದರಿಂದೊಂದಕ್ಕೆ ವಿಶೇಷ ಅಂತರವಿದೆ. ಒಪ್ಪಿಕೆಯು ಸ್ವಭಾವಧರ್ಮಕ್ಕನುಗುಣವಾಗಿದ್ದರೆಯೇ ಹೊರತು ಅದರಂತೆ ಆಚರಣೆಗೆ ತರಬೇಕಾದರೆ ಮನಸ್ಸು ಎಷ್ಟೋ ಸಂಸ್ಕಾರವಾಗಬೇಕು. ಈ ಸಂಸ್ಕಾರವು ತನಗೆ ತಾನೇ ಆಗುವದಕ್ಕೆ ಅವಕಾಶವಿಲ್ಲದಿದ್ದರೆ ಪ್ರಯತ್ನಪೂರ್ವಕವಾಗಿಯಾದರೂ ಆ ದಾರಿಯಲ್ಲಿ ಬೀಳಬೇಕು. ಹಾಗೆ ಸಂಸ್ಕೃತರಾದವರೇ ಸಿದ್ಧವಾಗಿದ್ದರೆ ಅವರನ್ನು ಮುಂದಿಟ್ಟುಕೊಂಡು ಹೆಜ್ಜೆಯಿಡುವದು ಉತ್ತಮವಲ್ಲವೆ? ಹಾಗಾದರೆ ಮೇಲೆ ಹೇಳಿರುವ ಯೋಗ್ಯತೆಗಳೆಲ್ಲವನ್ನೂ ಸ್ವಾಭಾವಿಕವಾಗಿಯೇ ಒಳಗೊಂಡು ಸಂಸ್ಕೃತರಾದವರು ಸ್ತ್ರೀಯರೇ ಎಂಬುದನ್ನು ಅವರು ಸಮಾಜದಲ್ಲಿ ಆಕ್ರಮಿಸಿಕೊಂಡಿರುವ ಸ್ಥಾನವಿಶೇಷವೂ ಅವರ ಜನ್ಮವೈಚಿತ್ರ್ಯವೂ ತಿಳಿಸುತ್ತದೆ. ಹೇಗಂದರೆ —

೧. ಸಮಾಜದಲ್ಲಿ ಸ್ತ್ರೀಯರಿಗಿರುವ ಸ್ಥಾನವು ಅನನ್ಯಸಾಮಾನ್ಯವಾದುದು. ಯಾವ ಸಮಾಜದಲ್ಲಿ ನೋಡಿದರೂ,— ಅದರಲ್ಲಿಯೂ ಭಾರತೀಯರಲ್ಲಿ — ಸ್ತ್ರೀಯರಿಗೆ ಯಾವಾಗಲೂ ಯಾವಸಂದರ್ಭದಲ್ಲಿಯೂ ಸ್ವತಂತ್ರವಿಲ್ಲ. ಅವರು ಬಾಲ್ಯದಲ್ಲಿ ಮಾತಾಪಿತೃಗಳ ಅಧೀನ, ಯೌವನದಲ್ಲಿ ಕೈಹಿಡಿದ ಪತಿಗಳ ಅಂಕೆ, ಮುಪ್ಪಿನಲ್ಲಿ ಮಕ್ಕಳ ಯಜಮಾನಿಕೆ. ಹೀಗೆ ಅವರು ಆಜನ್ಮಾಂತವೂ ಪರಾಧೀನದಲ್ಲಿಯೇ ಇರಬೇಕು. ಕವಿಗಳು ಸ್ತ್ರೀಯರನ್ನು ಒಂದು ದೊಡ್ಡಮರದ ಆಶ್ರಯದಲ್ಲಿಯೇ

ಬೆಳೆವ ಬಳ್ಳಿಗೆ ಹೋಲಿಸುವರ. ಈ ಪರಾಧೀನತೆಯು ಕಾರಣವೋ, ಅಥವಾ ಪರಿಣಾಮವೋ ಹೇಗೂ, ಇರಲಿ, ನಾಗರಿಕತೆಯು ಸೀಮೆಯಲ್ಲಿ ಹೆಂಗಸರು ಗಂಡಸರ ಹಿಂದುಳಿದವರೆಂದು ಒಪ್ಪಿಕೊಳ್ಳಬೇಕು ಅವರ ರಾಜ್ಯದಲ್ಲಿ ಎಂದರೆ, ಅವರ ಉಡುಗ ತೊಡುಗೆ ಮುಂತಾದವುಗಳಲ್ಲಿ ಅವರ ನಡೆನುಡಿಗಳೇ ಲೋಕಕ್ಕೆ ಮಾನೆಯಂತಿದ್ದರೂ ಹೊರಗಣ ಪ್ರಪಂಚದಲ್ಲಿ ಸಾಮಾನ್ಯವಾಗಿ ನಾಗರಿಕತೆಯು ಪರಿಮಾಣವನ್ನು ನಿರ್ಧರಿಸುವ ಯಾವವಿಷಯದಲ್ಲಿಯೂ ಹೆಂಗಸರು ಸರಿಯಾಗಿ ಮುಂದುವರಿಯದೆ ಹಿಂದೆ ನಿಂತಿರುತ್ತಾರೆ ಇನ್ನು ಜೀವನದ ಯಾತ್ರೆಯಲ್ಲಿ ನೋಡಿದರೆ ಸತಿಪತಿಗಳಿಗೆ ಇರುವ ಅನುಬಂಧವು ಒಂದೇಸವಾಗಿ ಇದ್ದರೂ, ಪತಿಗಳು ಪತ್ನಿಯರ ವಿಚಾರದಲ್ಲಿ ತಮ್ಮ ಭಾಷೆಗೆ ಎಷ್ಟುಮಟ್ಟಿಗೆ ಕಟ್ಟುಬೀಳುತ್ತಿರುವರೆಂಬ ಅನ್ಯೋನ್ಯಧರ್ಮವನ್ನು ಮನಸ್ಸಿಗೆ ತೆಗೆದುಕೊಳ್ಳದೆಯೇ ಪತ್ನಿಯರು ತಮ್ಮ ಕರ್ತವ್ಯನಿಷ್ಠೆಯಲ್ಲಿ ತಾವು ಜಾಗರೂಕರಾಗಿರುವದರಿಂದ ಅವರಲ್ಲಿ ಸ್ವಾಭಾವಿಕವಾಗಿಯೇ ಆ ಉದಾರ ನಮ್ರತೆಯು ನೆಲಸಿರುವದೆಂದು ಹೇಳಬಹುದು ಹೀಗೆ ಸರ್ವದಾ ಪರಾಧೀನತೆಯಲ್ಲಿದ್ದುಕೊಂಡು ಪಂಕದ ಓಟದಲ್ಲಿ ಜಾಗಳಿಸುತ್ತ ಹೋಗುತ್ತ ಪ್ರತಿಮಾತಿಲ್ಲದ ನಮ್ರತೆಯನ್ನೇ ಪರಮ ಧರ್ಮವೆಂದು ಆಚರಿಸುತ್ತಿದ್ದರೂ, ಬೀದಿಯನ್ನು ಗುಡಿಸುವ ಊಳಿಗವನ್ನು ನೊದಲ್ಗೊಂಡು, ಏಕಛತ್ರಾಧಿಪತ್ಯದವರೆಗೂ, ಯಾವ ಉದ್ಯೋಗದಲ್ಲಿ ನೋಡಿದರೂ ಸ್ತ್ರೀಯರ ವ್ಯಾಸನೆಯು ಇಲ್ಲದುದು ಒಂದೂ ಇಲ್ಲವೆಂದು ಕಂಡುಬರುವದು ಧಾರ್ಮಿಕ ನೈತಿಕ ಮತ್ತು ಸಾಮಾಜಿಕಗಳೇ ನೊದಲಾದ ಎಲ್ಲ ಕಾರ್ಯಭಾಗಗಳಲ್ಲಿಯೂ ನಿರ್ವಿವಾದಾತ್ಮಕವಾದ ಸಮಾನಾಧಿಕಾರದ ಪ್ರಾಮುಖ್ಯತೆಯನ್ನು ಶಾಸ್ತ್ರವು ಸ್ತ್ರೀಯರಿಗೆ ಕೊಟ್ಟಿರುವದು ಆಚರಣೆಯಲ್ಲಿ ಅದಕ್ಕೂ ಹೆಚ್ಚಾಗಿಯೇ ಸ್ತ್ರೀಯರದಾಗಿರುವದು

೧೦ ಜನ್ಮ ವೈಚಿತ್ರ್ಯದಿಂದ ಸ್ತ್ರೀಯರು ಹುಟ್ಟುತ್ತಲೇ ಅಬಲೆಯರೆನ್ನಿಸಿ, ತಮ್ಮನ್ನು ಸಂರಕ್ಷಿಸುವ ಭಾರವು ಕಟ್ಟುಮಟ್ಟಾದ ಪುರುಷ ಜಾತಿಗೇ ಸೇರಿದುದೆಂಬ ಪಾರಂಪರ್ಯವಾದ ಬಾಧ್ಯತೆಯನ್ನು ಸಂಪಾ

ದಿಸಿಕೊಂಡು, ಸೌಂದರ್ಯ, ಸೌಕುಮಾರ್ಯ, ಗಾಂಭೀರ್ಯ, ಮಾಧುರ್ಯ, ಲಾವಣ್ಯಾಗಳೇ ಮೊದಲಾದ ವಿಶೇಷಣಗಳಿಂದ ವರ್ಣಿತವಾಗುವ ಮೋಹನಮೂರ್ತಿತ್ವವನ್ನು ಪಡೆವುದಕ್ಕೆ ಮಾಡಬಹುದಾದ ಪರಿಪೂರ್ಣವಾದ ಅಧಿಕಾರ, ಮತ್ತು ಸೌಕರ್ಯಗಳನ್ನು ಸುಲಭವಾಗಿ ದೊರಕಿಸಿಕೊಳ್ಳುವರು ಆದರೂ ಗಂಡಾಳುಗಳು ಮಾತ್ರವೇ ಕಡಿದಾದ ಕೆಲಸಗಳನ್ನು ಬಿಟ್ಟು, ಉಳಿದ ಎಲ್ಲ ಕೆಲಸಗಳನ್ನೂ, ಅದರಲ್ಲಿಯೂ ತೆರಪಿಲ್ಲದೆ ಒಂದೇಸಮನಾಗಿ ಬಹಳ ಹೊತ್ತು ತಡೆದು ಮಾಡತಕ್ಕ ಕಡುಕಷ್ಟದ ಕೆಲಸಗಳೆಲ್ಲವನ್ನೂ ನಿರ್ವಹಿಸಬಲ್ಲ ಕಟ್ಟಾಳಿಗದ ಕಡುಗಲಿಗಳಾಗಿರುವರು ಪ್ರಸವ, ಪೋಷಣಾದಿ ಕಾರ್ಯಗಳಂತೂ ಶುದ್ಧವಾಗಿ ಸ್ತ್ರೀಯರದೇ ಆಗಿರುವದರಿಂದ ಸ್ವಾರ್ಥಕ್ಕೆ ಹಾನಿಯು ಭಯಪಟ್ಟಿದ್ದರೂ ಯಾವಾಗಲಂದರೆ—ಅವಾಗ ಸಮಾಜಸೇವೆಗೆ ಕೈಕಟ್ಟಿಕೊಂಡು ನಿಲ್ಲಲು ಯತ್ನವಿಲ್ಲದೆ ತಮ್ಮ ದೇಹಧರ್ಮವನ್ನು ನೋಡಿಕೊಂಡು, ಅದಕ್ಕೆ ತಕ್ಕ ಕೆಲಸಗಳಲ್ಲಿ ಮಾತ್ರವೇ ಉದ್ಯುಕ್ತರಾಗಬೇಕಾಗಿದ್ದು, ಒಂದೊಂದು ಬಾರಿಗೆ ಎಷ್ಟೋ ದೀರ್ಘಕಾಲದ ಯಾತನೆಯೂ ಅದಕ್ಕೆ ತಕ್ಕಷ್ಟು ವಿಶ್ರಾಂತಿಯು ಅಗತ್ಯವು ಇದ್ದರೂ ಇವಾವದನ್ನೂ ಗಮನಿಸದೆ ಪರರ ಮೇಲ್ಮೆಗಾಗಿ ತಮ್ಮ ಜೀವವನ್ನೇ ಅರೆದು ಹುಯ್ಯಲು, ಸ್ತ್ರೀಯರು ಅವತರಿಸಿರುವರೆಂದು ಹೇಳಲು ಅಡ್ಡಿಯಿಲ್ಲ ತಾವು ಸಂರಕ್ಷಿತರಾಗುವ ಕ್ರಮವನ್ನು ತೆಗದುಕೊಂಡರೂ ಸರಿಯೆ, ಅವರು ಇತರರನ್ನು ಸಂರಕ್ಷಿಸುವ ಕ್ರಮವನ್ನು ತೆಗೆದುಕೊಂಡರೂ ಸರಿಯೆ, ಸ್ತ್ರೀಯರು ಅವತರಿಸಿರುವದು ಪರರಿಗಾಗಿ–ಎಂಬುದು ಬಹುತರವಾಗಿ ನಿಶ್ಚಯವಾಗುವದು-

೧೧ ಸ್ಥಾನವಿಶೇಷದಿಂದ ಸ್ತ್ರೀಯರಿಗೆ ಯಾವಾಗಲೂ, ಯಾವ ಅಧಿಕಾರಕ್ಕೂ, ಕರ್ತೃತ್ವವಿಲ್ಲದಿದ್ದರೂ, ಯಾವಾಗಲೂ ಎಲ್ಲ ಅಧಿಕಾರಗಳಲ್ಲಿಯೂ ಅವರೇ ಮೇಲಾಡುತ್ತಿರುವರು ಜನ್ಮವೈಚಿತ್ರ್ಯದಿಂದ ಅವರಿಗೇ ಸೊಗಸು, ಸೊಬಗುಗಳೆಲ್ಲಕ್ಕೂ ಪೂರ್ಣಾಧಿಕಾರವಿದ್ದರೂ ಅವರೇ ನಿರಂತರವೂ ಕಷ್ಟಜೀವಿಗಳಾಗಿರುವರು ಒಂದು ದೃಷ್ಟಿಯಲ್ಲಿ ನೋಡಿದರೆ ಅವರು ಪ್ರಕಾಶವಾಗಿ ಏತರಲ್ಲಿಯೂ ಇಲ್ಲ, ನಿಜವಾಗಿ

ಅವರಾವುದರಲ್ಲಿಯೂ ಇಲ್ಲದೆ ಇಲ್ಲ. ಇನ್ನೊಂದು ದೃಷ್ಟಿಯಲ್ಲಿ ನೋಡಿದರೆ ಪ್ರತಿಯೊಬ್ಬರೂ ಪ್ರಕಾಶವಾಗಿ ನನಗೆ ಬೇಕು, ತನಗೆ ಬೇಕು, ಎಂದು ಪೋಲಾಡಿಕೊಂಡು ಬಂದು ಇಚ್ಛಿಸುವಂತಹ ಸೌಭಾಗ್ಯ, ನಿಜವಾಗಿ ನಮ್ಮ ಶತ್ರುಗಳಿಗೂ ಬೇಡವೆನ್ನುವಷ್ಟು ಅವಸ್ಥೆ! ಸ್ತ್ರೀಯರಲ್ಲಿ ಸಾಮಾನ್ಯವಾಗಿ ಇಂತಹ ಗುಣಗಳಿರುವದರಿಂದ ಅವರಲ್ಲಿ ಪ್ರತಿಯೊಂದೂ ಅತಿಯಾಗಿರುವದು. ಅವರು ಪ್ರೀತಿಸುವದೂ ಅತಿ, ದ್ವೇಷಿಸುವದೂ ಅತಿ, ಅಭಿಮಾನವೂ ಅತಿ, ಉದಾಸೀನವೂ ಅತಿ ಗೌರವವೂ ಅತಿ, ತಿರಸ್ಕಾರವೂ ಅತಿ, ಹಾಗೆಯೇ ಅಮಿತವಾದ ಆಶೆ, ಮೇರೆದಪ್ಪಿದ ಮಾತ್ಸರ್ಯ, ಅಸಾಧಾರಣವಾದ ಸ್ವಾರ್ಥತ್ಯಾಗ! ಹೀಗಿರುವದರಿಂದಲೇ— 'ಒಲಿದರೆ ನಾರಿ, ಮುನಿದರೆ ಮಾರಿ!' ಎಂಬುದು ಅವರ ಗುಣಕಥನಕ್ಕೆ ಪಲ್ಲವಿಯಂತಾಗಿರುವದು. ಹೀಗೆ ದುರ್ಗುಣಗಳೇನಾದರೂ ಹುಟ್ಟಿತೆಂದರೆ ಸಾಕು, ಅವುಗಳಿಂದ--ಅವೇ ದುರ್ಗುಣಗಳು ಗಂಡಸರಲ್ಲಿದ್ದರೆ ಆಗುವ ಅನರ್ಥಕ್ಕೂ ಹೆಚ್ಚಾದ ಅನರ್ಥವನ್ನೇ ಉಂಟುಮಾಡುವವು. ಸಾಮಾನ್ಯವಾಗಿ ವಿಚಾರಮಾಡಿ ನೋಡಿದರೆ, ಸ್ತ್ರೀಯರಲ್ಲಿ ಹುಟ್ಟುವ ಮನೋವಿಕಾರವೆಲ್ಲವೂ ತಮ್ಮ ಮತ್ತು ತಮ್ಮವರ ಹೊಟ್ಟೆಬಟ್ಟೆಗಳ ವಿಹಾರ ವಿಭವಗಳ ಸಲುವಾಗಿ ಇರುವವೇ ಹೊರತು ಆ ಎಲ್ಲೆಯನ್ನು ಮೀರಿ ಇತರರ ಸೇವೆಯಲ್ಲಿ ಪ್ರವೇಶಿಸುವದಿಲ್ಲ. ಈ ಪರಿಮಿತಿಯನ್ನು ಧ್ಯಾನದಲ್ಲಿಟ್ಟುಕೊಂಡು ನೋಡಿದುದೇ ಆದರೆ ಸ್ತ್ರೀಯರಲ್ಲಿ ಸಹಜ ಧರ್ಮವಾಗಿರುವ ಸದ್ಗುಣಗಳನ್ನು ಬಲಪಡಿಸಿಕೊಳ್ಳುವದರಿಂದ ಅವರ ನೈಸರ್ಗಿಕ ಸೇವೆಯು ಅಕ್ಷರಶಃ ನೈಸರ್ಗಿಕವಾಗುವದು.

೧೨ 'ಪಾಲಿಗೆ ಬಂದುದು ಪಂಚಾಮೃತ' ವೆಂಬ ನಾಣ್ನುಡಿಯನ್ನು ಬುದ್ಧಿ ತಿಳಿದಂದಿನಿಂದ ಜೀವಿಸಿರುವ ವರೆಗೂ ಪ್ರತಿಕ್ಷಣದಲ್ಲಿಯೂ ಆಚರಿಸಿ ಹೋಗುತ್ತ ತನ್ನಂತೆಯೇ ಅನೇಕ ಊನಗಳುಳ್ಳವನಾಗಿದ್ದರೂ ಆ ಪತಿಯನ್ನೂ ಪರದೈವವೆಂದು ಭಾವಿಸಿ, ವರ್ಣನಾತೀತವಾದ ಪೂಜ್ಯ ಭಾವನೆಯಿಂದ ಸೇವಿಸುವುದೂ, ತಮ್ಮ ಪರಾಧೀನತೆಯೇ ಮೊದಲಾದ ಶ್ರಮಗಳನ್ನು ಇಷ್ಟಾದರೂ ಚಿಂತಿಸದೆ, ಪತಿಯ

ಸಂತೋಷವೇ ತಮ್ಮ ಸಂತೋಷವೆಂದು ತಿಳಿದು ನಡೆಯುತ್ತಿರುವ ಇವರಿಗೆ ಅಲ್ಪವನ್ನು ಹೇಯ ಭಾವನೆಯಿಂದ ಉದಾಸೀನ ಮಾಡದೆ, ಗೌರವ ಬುದ್ಧಿಯಿಂದ ನೋಡುವಷ್ಟರ ಸಂಸ್ಕಾರವು ಆಗಿರುವದೆಂದೇ ಹೇಳಬೇಕು. ಗೌರವ ಬುದ್ಧಿಯು ಬಲಿತ ಮೇಲೆ ಮಾತ್ಸರ್ಯಕ್ಕೆ ಸ್ಥಳವೆಲ್ಲಿರುವದು? ಇನ್ನು ಆಶಾನಿರೋಧ, ಕಷ್ಟಸಹಿಷ್ಣುತೆ, ನಿಧಾನಗಳಿಗೆ ಇವರು ತವರ್ಮನೆಯೆಂದು ಲೋಕವೇ ಅಭಿನಂದಿಸುತ್ತಿರುವದು. ತಮ್ಮ ಸಹಾಯದ ಆಗತ್ಯವಿದ್ದೆಡೆಯಲ್ಲಿ ಇವರು ಇಷ್ಟಾದರೂ ಹಿಂತೆಗೆಯದೆ, ಎಷ್ಟು ಕಷ್ಟವನ್ನಾದರೂ ಸಹಿಸಿ, ತಮ್ಮ ಸಹಾಯದ ಕರ್ತವ್ಯದಲ್ಲಿ ಕೃತಾರ್ಥರಾಗುವರು. ಹೀಗೆ ಒಳಗಿನ ಬೇನೆಗಳೆಲ್ಲವನ್ನು ನುಂಗಿಕೊಂಡು ಪ್ರಕಾಶವಾಗಿ ನಿರಾಳವಾಗಿರುವ ಈ ಸ್ತ್ರೀಯರಿಗೆ— ಜೀವನದ ಹೋರಾಟದಲ್ಲಿ ಸಿಕ್ಕದೆ, ಪ್ರಪಂಚದ ಗಲವಿಲಿಗಳನ್ನು ಕಾಣದೆ ನಿಶ್ಚಿಂತೆಯಾಗಿ ಮನೆಯ ಆಡಳಿತಗಳಲ್ಲಿ ತೊಡಗಿರುವ ಹೆಂಗಸರಿಗೆ, ಮತ್ತೊಬ್ಬರು ಹೇಳಿಕೊಡಬೇಕಾದ ಅವಶ್ಯಕತೆಯೇ ಇಲ್ಲದೆ ನಿಧಾನ ಗುಣವು ತನ್ನಂತೆ ತಾನೇ ಬೆಳೆದು ಕಂಗೊಳಿಸುವದು.

೧೩. ಶಾಸ್ತ್ರ ವಿಚಾರದಲ್ಲಿ ನೋಡಿದರೂ ಪುರುಷ, ಪ್ರಕೃತಿ ಎಂಬ ಈ ಎರಡು ತತ್ವಗಳು ಕಾರಣವಾಗಿರುವವು. ಪುರುಷನು ಕೇವಲ ಸಾಕ್ಷಿಸ್ವರೂಪನಾಗಿಯೂ ಪುರುಷನ ಸಂಸರ್ಗದ ಮಹಿಮೆಯಿಂದಲೇ ಪ್ರಕೃತಿಯು ಸಮಸ್ತ ಜಗತ್ತನ್ನೂ ನಡೆಯಿಸುತ್ತಿರುವ ವಿಚಾರವನ್ನೇ ಶಾಸ್ತ್ರಗಳು ಉದ್ಘೋಷಿಸುತ್ತಿರುವವು. ಇಲ್ಲಿ ಪುರುಷನೇ ಪುರುಷವಾಚಕವು. ಪ್ರಕೃತಿಯೇ ಸ್ತ್ರೀ ವಾಚಕವು. ಈ ಪುರುಷನು ನೆಪಮಾತ್ರಕ್ಕೆ ನೆರವಾಗುವನೇ ಹೊರತು, ಪ್ರಪಂಚ ನಿರ್ವಾಹದ ವಿಶಿಷ್ಟ ಭಾರವೂ ಸ್ತ್ರೀಯರ ಪಾಲಿಗೆ ಬಂದಿರುವದು. ಶಾಸ್ತ್ರಗಳನ್ನು ಬಿಟ್ಟು ಅನುಭವದೃಷ್ಟಿಯಿಂದ ನೋಡಿದರೂ ಇದೇ ಸಿದ್ಧಾಂತವೇ ನೆಲೆಯಾಗುವದು. ಹೊರಗಣ ವ್ಯಾಪಾರವೆಲ್ಲವೂ ಗಂಡಸರದಾಗಿಯೂ ಒಳಗಣ ಯಾಜಮಾನ್ಯವು ಹೆಂಗಸರದಾಗಿಯೂ ಇರುವದು, ಎಂದರೆ ಹೊಸ ಹೊಸದನ್ನು ತರುವದು ಗಂಡಸರ ಭಾರವು; ಇದ್ದುದನ್ನು

ಅಚ್ಚುಕಟ್ಟಾಗಿ ಮಾಡುವದು ಗಂಡಸರ ಭಾರವು. ಯೋಗವು ಪುರುಷರದು, ಕ್ಷೇಮವು ಸ್ತ್ರೀಯರದು ಉದ್ಯೋಗಗಳೆಲ್ಲೆಲ್ಲಾ ಇದ್ದುದನ್ನು ಮೊದಲು ಭದ್ರಮಾಡಿಕೊಂಡು ಅಲ್ಲಿಂದ ಮುಂದೆ ಹೋಗುವದಕ್ಕೆ ಹೊಸ ಮಾರ್ಗಗಳನ್ನು ಕುರಿತು ಹೊರಡುವದು ಪರಮಧರ್ಮವಾದುದರಿಂದ ಅರ್ಥಸಾಧನೆಯಲ್ಲಿ ಹೆಂಗಸರು ತಮ್ಮ ಪಾಲಿಗೆ ಬಂದ ಕಾರ್ಯವನ್ನು ತಾವು ಹಿಂಜರಿಯದೆ ನಿರ್ವಹಿಸುತ್ತ ಬಂದಲ್ಲಿ ಸಮಾಜದುನ್ನತಿಯನ್ನು ವಿಸು ಮಾಡಿದಂತೆಯೋ ಸರಿ ಏಕೆಂದರೆ— ಸ್ತ್ರೀಯರು ಧರ್ಮರಕ್ಷಣೆಯಲ್ಲಿ ಬದ್ಧಕಂಕಣರಾಗಿ ನಿಂತರೆಂದರೆ ಇದ್ದುದೂ ಸೋರಿ ಹೋಗುವಂತಹ ಒಡಕು ಬರುವದಕ್ಕೆ ಕಾರಣವಿರುವದಿಲ್ಲ. ಆಧಿಕ್ಯದ ಕೆಲಸಗಳಿಗ ಸಾಹಸಿಗಳು ಗಮನಕೊಡುವದಕ್ಕೆ ಯಥೇಷ್ಟವಾದ ಅವಕಾಶವು ದೊರೆಯುವದು

ಎಚ್ ನಾರಾಯಣರಾವ್ ಬಿ ಏ

---

## ವಾರ್ತೆ— ಗಂತೃಪಿಣಿಯ ಕ್ಷಮಾಪಣೆ

ಸುಹೃದರಾದ ಗ್ರಾಹಕರೇ !

ಗ್ರಂಥಮಾಲಾ ಕಾರ್ಯವನ್ನು ನಿಯಮಿತಕಾಲಿಕವಾಗಿ ನಡೆಯಿಸಬೇಕೆಂದು ಸಂಕಲ್ಪಮಾಡಿ ಅದರಂತೆ ಸರ್ವ ಪ್ರಯತ್ನಗಳನ್ನೂ ನಡೆಯಿಸಿದ್ದೇವೆ ಮಾಲೆಯ ೧೦ ನೆ ಪುಷ್ಪವಾದ "ಪೂರ್ಣಕಲಾ" ನಾಮಕ ಗ್ರಂಥವು ಅರ್ಧಭಾಗ ಮುದ್ರಣವಾಗಿದ್ದು ಮುದ್ರಣಾಲಯದಲ್ಲಿರುತ್ತದೆ, ಗ್ರಂಥ ಲೇಖಿಕಿಯರೂ, ಪತ್ರಕರ್ತ್ರಿಯರೂ ಆದ ಶ್ರೀಮತಿಯವರು ತಮ್ಮ ಗ್ರಂಥ ಲೇಖನ ಕಾರ್ಯದಲ್ಲಿ ತಕ್ಕಷ್ಟು ಉತ್ಸಾಹಶಕ್ತಿಯಿಲ್ಲದೆ ವಾತರೋಗದಿಂದ ದುರ್ಬಲ ಸ್ಥಿತಿಯಲ್ಲಿರುವದರಿಂದ ಪೂರ್ಣಕಲೆಯು ಈ ತಿಂಗಳೂ ಹೊರಡಲಾಗದೆ ಇದೆ. ದೈವಾನುಗ್ರಹವಿದ್ದರೆ, ಇನ್ನು ಒಂದೆರಡು ತಿಂಗಳಲ್ಲಿಯೇ ಪೂರ್ಣಕಲೆಯು ಷೋಡಶಕಲಾಪರಿಪೂರ್ಣವಾದ ಚಂದ್ರಬಿಂಬದಂತೆ ಸುಪ್ರಕಾಶತ್ವದಿಂದ

ಬಂದು ನಿಮ್ಮನ್ನು ಸಂದರ್ಶಿಸುವಂತಾಗುವಳೆಂದೂ ಅವರಿಗೆ ಬೇಸರಿಸದೆ, ಆಗ್ರಹಿಸದೆ, ಅವಕಾಶವನ್ನು ಕಲ್ಪಿಸಿಕೊಟ್ಟು ಪ್ರೋತ್ಸಾಹಿಸುತ್ತಿರಬೇಕೆಂದೂ ನಮ್ರಭಾವದಿಂದ ಪ್ರಾರ್ಥಿಸಿರುವೆವು. ಪೂರ್ಣಕಲೆಯಲ್ಲಿ ಪ್ರಕಟಿಸುವ ಗ್ರಂಥಕರ್ತ್ರಿಯರ ಸ್ವವಿಷಯ ಪ್ರಸ್ತಾವನೆಯಲ್ಲಿ ಅನೇಕ ವಿಷಯಗಳು ಒಳಗೊಂಡಿರುವವು ಮತ್ತು ಅದರೊಡನೆ ಗ್ರಂಥಕರ್ತ್ರಿಯರ ಪ್ರಧಾನ ಗುರುಗಳಾದ ಪಿತೃಮಾತೃಗಳ ಭಾವಚಿತ್ರಗಳೂ ಪ್ರಕಾಶಗೊಳ್ಳುತ್ತಿರುವವು. ಅದೇ ಭಾವಚಿತ್ರದ ಪ್ರತಿಗಳೇ ನಂದಿನಿಯ ಈ ಬಾರಿಯ ಸಂಚಿಕೆಯಲ್ಲಿಯೂ ಪ್ರಕಟಿಸಲಾಗಿರುವದು. ಹಿತೈಷಿಣಿಯನ್ನು ಇದೊಂದು ಬಾರಿಯೂ ಕ್ಷಮಿಸಿ, ಪ್ರೋತ್ಸಾಹಾಭಿವೃದ್ಧಿಯಾಗುವಂತಹ ಅಭಿನಂದನವನ್ನು ಕಳುಹುವಿರಾದರೆ, ಪೂರ್ಣಕಲೆಯೂ, ಅವಳ ಹಿಂದೆ, ವಿದ್ಯಾವಿನೋದನೂ ಹೊರಟು ಬಂದು ನಿಮ್ಮ ಸೇವೆಗೆ ಸಿದ್ಧರಾಗುವರು. ಈ ವಿಷಯವಾಗಿ ಮತ್ತೆ ಮತ್ತೆಯೂ ಪ್ರಾರ್ಥಿಸಬೇಕಾಗಿಲ್ಲ. ಸಹಜ ಕ್ಷಮಾವಂತರಾದ ನೀವು ನಿಮ್ಮ ಆತ್ಮವಿಶ್ವಾಸದಿಂದಲೇ ಪ್ರೇರಿತರಾಗಿ ಮನ್ನಿಸುವಿರೆಂಬ ಸಂಪೂರ್ಣ ಭರವಸೆಯಿಂದ ಸದ್ಯಕ್ಕೆ ವಿರಮಿಸಿರುವೆನು.

**ಹಿತೈಷಿಣಿ.**

---

## ಸಂಸ್ಮರಣೆ.

ನಮ್ಮ ಸಾಂಪ್ರತದ ಸತೀ ಕುಲಾದರ್ಶ ರಮಣೀಯರಾದ ಶ್ರೀ|| ಸೌ|| ಪಾರ್ವತಮ್ಮನವರು, ಕರ್ಣಾಟಕ ನಂದಿನಿಯ ಶ್ರೇಯೋಭಿವೃದ್ಧಿ ಚಿಂತನೆಯಲ್ಲಿರುವವರೆಂಬದನ್ನು ಈ ಹಿಂದಿನ ಸಂಚಿಕೆಗಳಲ್ಲಿ ಸ್ಪಷ್ಟಪಡಿಸಿದ್ದೆವಷ್ಟೆ! ಈಚೆಗೆ ನಂದಿನಿಯ ಸಹಾಯಾರ್ಥವಾಗಿ ಸ್ವೀಕರಿಸಬೇಕೆಂಬ ಪತ್ರದೊಡನೆ ೧೦ ರೂಪಾಯಿಗಳನ್ನೂ ಕಳುಹಿಸಿದ್ದಾರೆ. ಇವರು ಅನುಗ್ರಹ ಬುದ್ಧಿಯಿಂದ ಕಳುಹಿ ಕೊಟ್ಟಿರುವ ರೂಪಾಯಿಗಳನ್ನೂ, ಅಭಿನಂದನ ಪತ್ರವನ್ನೂ ನಾವು ಅನೇಕ ವಂದನೆಗಳೊಡನೆ ಸ್ವೀಕರಿಸಿರುವೆವಲ್ಲದೆ, ಭಗವತ್ಸಾನ್ನಿಧ್ಯದಲ್ಲಿ ಅವರ ಶ್ರೇಯೋಭಿವೃದ್ಧಿಯಾಗಲೆಂದು ಮನಪೂರ್ವಕವಾಗಿ ಪ್ರಾರ್ಥಿಸುವೆವು. ಶ್ರೀ|| ಸೌ|| ಯವರು ಹಿತೈಷಿಣೀ ಗ್ರಂಥ ಮಾಲೆಗೆ ಇದಕ್ಕೆ ಮೊದಲೇ ೩೦

ರೂಪಾಯಿಗಳ ಪೋಷಣಾದ್ರವ್ಯವನ್ನೂ ಕೊಟ್ಟಿದ್ದುದಲ್ಲದೆ ನಂದಿನಿಗೂ ಕಳುಹಿ ತಮ್ಮ ಸಹಾನುಭೂತಿಯನ್ನು ಪ್ರಕಟಿಸಿದುದಕ್ಕಾಗಿ ಇವರ ಸೌಜನ್ಯವು ನಮಗೆ ಸಂಸ್ಮರಣೀಯವಾಗಿರುತ್ತದೆ ಶ್ರೀ|| ಸೌ|| ಯವರ ಪ್ರೋತ್ಸಾಹವನ್ನು ಅನುಸರಿಸಿಯಾದರೂ ನಮ್ಮ ಮಹಿಳಾ ಮಣಿಯವರು ತಮ್ಮ ಕರ್ತವ್ಯದಲ್ಲಿ ಜಾಗ್ರತರಾಗಿ ನಂದಿನಿಯ ಶ್ರಮಕ್ಕೆ ಸಾಫಲ್ಯವನ್ನುಂಟು ಮಾಡುವಂತಾಗುವರೆಂದು ನಂಬಿ ನಿರೀಕ್ಷಿಸುತ್ತಿರಬೇಕಾಗಿದೆ ಹಿತೈಷಿಣಿ

---

(ನಂದಿನಿಯ ವಿಚಾರವಾಗಿ)
ಪತ್ರಕರ್ತರ ಅಭಿಪ್ರಾಯಗಳಲ್ಲಿ ಕೆಲವು

---

"ಬೋಧಿನಿ" (ಸಂಪುಟ ೨ ಸಂಚಿಕೆ ೫. ನವಂಬರ ೧೯೧೬—
"ಕರ್ಣಾಟಕ ನಂದಿನಿ" ಎಂಬ ನೂತನ ಮಾಸಪತ್ರಿಕೆಯ ಪ್ರಥಮ ಸಂಪುಟದ ಪ್ರಥಮ ಸಂಚಿಕೆಯನ್ನು ಅತ್ಯಾದರದಿಂದ ಸ್ವೀಕರಿಸಿದೆವು. ಸ್ತ್ರೀಯರಿಗೆ ಅವಶ್ಯಕವಾದ ವಿಷಯಗಳನ್ನೊಳಗೊಂಡ ಈ ಪತ್ರಿಕೆಯು ಕರ್ಣಾಟಕದಲ್ಲಿ ಅದ್ವಿತೀಯವಾಗಿರುವ ಉತ್ತಮವಾದ ಮಾಸಪತ್ರಿಕೆಯು ನಂದಿನಿಯಲ್ಲಿ ಸಂಪೂರ್ಣ ಸಂಬಿಕೆಯನ್ನಿಡಬಹುದೆಂದು ನಿರ್ಭೀತಿಯಿಂದ ಭರವಸೆಯನ್ನು ಕೊಡಬಲ್ಲೆವು. (ಸಂಪಾದಯಿತ್ರಿ ತಿರುಮಲಾಂಬಾ ಇವರಿಂದ ಸತೀಹಿತೈಷಿಣೀ ಮಾತೃಮಂದಿರದಲ್ಲಿ ಪ್ರಕಟಿಸಲ್ಪಡುವುದು ವಾರ್ಷಿಕ ಚಂದಾ ೧-೮-೦

ಕನ್ನಡ ಕೋಗಿಲೆ, ಸಂಪುಟ ೧ ಸಂಚಿಕೆ ೮ (ನವಂಬರ ೧೯೧೬) "ಕರ್ಣಾಟಕ ನಂದಿನಿ" ಇದೊಂದು ನೂತನ ಮಾಸಪತ್ರಿಕೆ. ಇದರ ಮೊದಲನೇ ಸಂಚಿಕೆ ನಮಗೆ ಬಂದಿರುವದು ಈ ಪತ್ರಿಕೆಯ ಉದ್ದೇಶವು ಕನ್ನಡಿಗಿರೆಯರಲ್ಲಿ ವಾಚನ ಮತ್ತು ಲೇಖನ ಶಕ್ತಿಗಳನ್ನು ಹೆಚ್ಚಿಸುವದು. ಆದ್ದರಿಂದಲೇ ಇದು ಸ್ತ್ರೀಯರಿಂದಲೇಹೊರಡಿಸಲ್ಪಡುತ್ತದೆ. ಅಲ್ಲದೆ ಸ್ತ್ರೀಯರ ಲೇಖನಕ್ಕೆ ಹೆಚ್ಚಾದ ಮಾನವನ್ನು ಕೊಡುತ್ತದೆ. ಇದರಲ್ಲಿ ಪ್ರಕಟವಾಗುವ ಲೇಖಗಳು ಸರಳವಾಗಿ ಗದ್ಯ ಪದ್ಯಾತ್ಮಕ

ವಾಗಿದ್ದು ಉತ್ತಮ ಸ್ತ್ರೀಯರ ಸ್ವಾಭಾವಿಕವಾದ ನಡತೆಗಳನ್ನು ಪ್ರೋರಿಸುವದಕ್ಕೆ ಅನುಕೂಲವಾಗಿದೆ. ಇದ ಹೆಣ್ಣಾಗಿ ಹೆಂಗಸರೂ ಗಂಡಸರೂ ಓದಲಿಕ್ಕೆ ಯೋಗ್ಯವಾಗಿದೆ. (ವಾರ್ಷಿಕ ಚಂದಾ ೧-೮-೬)

(ಸಂಪದಭ್ಯುದಯ,—ಸಂಪುಟ ೩ ಸಂಚಿಕೆ ೩ (೩ನೇ ನವಂಬರ ೧೯೧೬)

"ನಂದಿನೀ ಸಂಪಾದಕರಾದ ಸೀತಾ ಗಣಪದ ಶ್ರೀ ತಿರುಮಲಮ್ಮನವರು ಇದು ವರೆಗೆ ನೀತಿಮಾಲಾ ಗ್ರಂಥಮಾಲಾ ಎಂಬ ಅಭಿಧಾನದಿಂದ ... ವಿದ್ಯುಲ್ಲತಾ, ವಿರಾಗಿಣೀ, ದಕ್ಷಕನ್ಯಾ, ಮಾತೃನಂದಿನೀ, ರಮಾನಂದ ವಿಕ್ರಮ, ಚಂದ್ರವದನಾ, ಎಂಬ ನೂರೇಕೋತ್ತರ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ರಚಿಸಿ, ತಮ್ಮ ಸಹೋದರಿಯರ ಜ್ಞಾನಾಭಿವೃದ್ಧಿಗೆ ಬಹಳ ಸಹಾಯಮಾಡುತ್ತಲಿದ್ದರು. ಈಗ ನಂದಿನೀ ಎಂಬ ಮಾಸಪತ್ರಿಕೆಯನ್ನು ಮುದ್ರಿಸಿರುವರು. ಇದರ ಮೊದಲನೇ ಸಂಚಿಕೆಯನ್ನು ನಾವು ಕೃತಜ್ಞತೆಯಿಂದ ಪರಿಗ್ರಹಿಸಿರುವೆವು. ಈ ಸಂಚಿಕೆಯಲ್ಲಿ ಪ್ರಾರ್ಥನೆ, ನಂದಿನಿಯ ದೇಶಸೇವಾ ಯಾತ್ರಾ ಮಹೋತ್ಸವ, ಸ್ವಾಗತಾಭಿನಂದನ, ದೇಶೋನ್ನತಿ, ಭಾವನಾಲೋಕ, ನೀತಿಯು ಹೇಳುವದು ನಿತ್ಯ ಸುಖಕ್ಕಾಗುವದೇ, ಆಳ್ವಾರರ ವೈಭವ, ಸ್ತ್ರೀಯರ ನೈಸರ್ಗಿಕ ಸೇವೆ, ಈ ಅಭಿಧಾನಗಳಿಂದ ಲೇಖನಗಳು ಬರೆಯಲ್ಪಟ್ಟಿರುವವು. ಈ ಲೇಖನಗಳಲ್ಲಿ ಪದ್ಯಗಳಾಗಿರುವವು. ಆಳ್ವಾರರ ವೈಭವವನ್ನು ಶ್ರೀ ರಂಗನಾಯಕಮ್ಮನವರು ಬರೆದಿರುವರು. ಕುಲಶೇಖರಾಳ್ವಾರರೂ ಪೆರಿಯಾಳ್ವಾರರೂ ಶೂಡಿಕೊಡುತ್ತ ನಾಚ್ಚಿಯಾರರ ಇವರ ಕಥೆಗಳೂ ಇತರ ಆಳ್ವಾರರ ಕಥೆಗಳಂತೆ ಭಕ್ತಿರಸಪ್ರಧಾನವಾಗಿರುವವು. ವಿದ್ಯಾವಿಶಾರದೆಯರಾದ ಸ್ತ್ರೀಯರು ಈ ಮಾಸ ಪತ್ರಿಕೆಗೆ ಉಪಕಾರಕರಾಗುವದರಿಂದಲೂ ಲೇಖಕರಾಗುವದರಿಂದಲೂ, ಪ್ರೋತ್ಸಾಹವನ್ನುಂಟು ಮಾಡುವರೆಂಬುದಾಗಿಯೂ ಇದನ್ನು ಓದುವವರಿಂದುಂಟಾಗತಕ್ಕ ಪ್ರಯೋಜನವನ್ನು ಪಡೆಯುವರೆಂಬುದಾಗಿಯೂ ನಂಬಿದ್ದೇವೆ."

———



ಶ್ರೀ ಬಿ. ರಾಮರಾವ್, ಎಂ.ಎ., ಎಲ್.ಎಲ್.ಬಿ.

“ಕೃಷ್ಣಾಕುಮಾರಿ,” “ಪದ್ಮಾವತಿ,” “ರಮಾಮಾಧವ,” “ಸುಭದ್ರಾಪರಿಣಯ” ವೇ ಮೊದಲಾದ ಗ್ರಂಥಗಳ ಭಾಷಾಂತರಕಾರರೂ, ಸುಪ್ರಸಿದ್ಧ ಪತ್ರಿಕೆಯಾಗಿದ್ದ ಸುವಾಸಿನೀ ಸಂಪಾದಕರೂ ಆಗಿರುವ ಮಹನೀಯರು



ಶ್ರೀ|| ಸೌ|| ಶಾಂತಾಬಾಯಿ (ರತ್ನಾಬಾಯಿ)

|| ಶ್ರೀ ||

|| वन्देत्वां भूदेवि आर्यमातरम् ।

ಕರ್ನಾಟಕ

# ನಂದಿನೀ.

ಸ್ತ್ರೀಜನಾಂಗದ ಸೌಜನ್ಯಾಭಿವೃದ್ಧಿಗಾಗಿ ಸ್ತ್ರೀಯರಿಂದಲೇ ಪ್ರಕಟವಾಗುವ

ಮಾಸಪತ್ರಿಕೆ

ಸಂಪುಟ ೧ } ನಳಸಂವತ್ಸರದ ಫಾಲ್ಗುಣಮಾಸ { ಸಂಚಿಕೆ ೭

## ಮಾತೃಸಂದರ್ಶನಂ

ರಾಗ|| ಮುಖಾರಿ|| (ನೀವು ಒಳದವರು ಮನವೆ)

ಕಂದನೊಳಗಿಂದಾದರೂ ಕೃಪೆಯಾಯ್ತೆ ಜನನೀ || ಪ ||
ಸಂದರ್ಶನಾನಂದವನು ಬೀರಿಗೆಯೆ ಭವಾನಿ || ಅನು ||

ದಂದುಗದಿ ಪ್ರೇಮರೆದು ಮಂದೋರದತಿಸೊಂದು । ನಿಂದಿಸಿದೆ ನೆನಿತನಿತೂ ಬನೆಯಾಗಿ ಬನೆದು || ಕಂದನಾ ಕುಂದುಗಳ ನೊಂದಾದರೆ ಣಿಸದೆಯೆ ನಂಬಿಸಿಯೆ ನೀನಾಗಿ ಬಂದೆಯೋನಿಂದು || ಕಂದ || ೧ ||

ನಲಿನಲಿದು ನೀನೆನ್ನ ಕೆಲದಲ್ಲಿ ಪೈದೋರೆ । ಎಳೆಗರುವಿನಂದವನು ನೋಡಿಕಣ್ಣಾರೆ || ಫಲಿರೆಂದುಲಿದ ಕೂರಳಗೆಜ್ಜೆಯ ಕರುದನಿಗೆ ಬಲುಹಿಸಿಂದಾಸೆದ್ದನಧಿಕ ಸಂಭ್ರಮದೆ || ಕಂದ || ೨ ||

ಬೇಸತ್ತುನಾಂ ಮಲಗಲಾಸಮುದೊಕ್ಕಿತಂದು ಓಸರಿಸದೇಳೆಂದು ನುಡಿದೆ ನೀನಂದು || ಶೇಷಗಿರೀಶನಾ ವಾಸುದೇವನದಯದೆ । ಲೇಸತ್ಪದಿಳೆಗೆಂದೆವುಸಿಯಲ್ಲಪಂದೆ || ಕಂದ || ೩ || (ಶ್ರೀಪಾದರೇಣು)

(ನಳಸಂ|| ಮಾಘಬಹುಳ ನವಮಿ ಶುಕ್ರವಾರ)

ತಾ|| ೧೧-೨-೧೯೧೭

॥ ಶ್ರೀ ॥

# ಶ್ರೀ ಹರಿದಾಸರ ಆಧಾರ.

ಹರಿಭಜನ ಕೀರ್ತನ, ಗುಣಕಥನ, ಪಾರಾಯಣಾದಿ ಶ್ರೀಹರಿ ನಾಮ ಜಪತಪಗಳಿಂದಲೇ ಜೀವಿಸುತ್ತಿರುವ ಹರಿದಾಸರಿಗೆ, ಅವರ ಆತ್ಮಾನಂದಲಾಭಕ್ಕೆ, ಚಿತ್ತೈಕಾಗ್ರತೆಗೆ, ಸತ್ಕಾವ್ಯ ವಿಧಾಯಕಕ್ಕೆ ಆಧಾರವೆಂದರೆ, ನಾದಯುಕ್ತವಾದ ತಂಬೂರಿಯೇ ಆಗುವುದಷ್ಟೆ. ಹರಿಸ್ಮರಣೆಗೆ ಪ್ರಥಮದಲ್ಲಿಯೇ, ಶುಭಕಾರ್ಯಾರಂಭಕ್ಕೆ ಮೊದಲು ಮಾಡುವ ವಿಘ್ನೇಶ್ವರ ಪ್ರಾರ್ಥನೆಯಂತೆ ಈ ಉತ್ತಮ ಸಾಧನವಾದ ತಂಬೂರಿಯನ್ನು ಕುರಿತು, ದಿವಂಗತ ವೆಂಕಟವರದಾಚಾರ್ಯ*ರೆಂಬ ಕವಿವರರು ಮಾಡಿರುವ ವರ್ಣನೆಯನ್ನು ಈ ಮುಂದೆ ವಿವರಿಸಿ ಆ ಬಳಿಕ ನಮ್ಮ ಲೇಖನಿಯನ್ನು ಮುಂದೋಡಿಸಲಿರುವೆವು. ವಾಚಕರೂ ಇದನ್ನು ತಮ್ಮ ಪ್ರಥಮಪಾಠವಾಗಿ ಭಾವಿಸಬೇಕೆಂದು ಕೋರುವೆವು. ಸಂ

ರಾಗ ॥ (ಅರಳಿದಮಲ್ಲಿಗೆ)

ಹರಿಕೃಪೆಯಿಂದಲೆ ದೊರೆತುದು ಎನಗೀ ಸಿರಿಕರ ತಂಬೂರಿ । ನರಹರಿನಾಮಸ್ಮರಣೆಯಗೈಯ್ವ ನರರಿಗೆ ಸಹಕಾರಿ ॥ ಪ ॥ ತಾಪತ್ರಯವನು ಲೋಪಗೈವ ಸುಖರೂಪನ ತಂಬೂರಿ ॥ ಶ್ರೀಪತಿಭಕ್ತಿನಿರೂಪಣದಿಂದಖಿಲಾಪತ್ಪರಿಹಾರಿ ॥ ೧ ॥ ಅಂಬುಜಭವನ ಕುಟುಂಬಿನಿಯ ಕರಾಲಂಬನ ತಂಬೂರಿ । ತುಂಬುರನಾರದರಂಬುರುಹಾಕ್ಷನ ಹಂಬಲಿ

---

* ಈ ಮಹನೀಯರು ಚಾಮರಾಜನಗರದ ತಾ॥ ಸರಗೂರಿನವರು. ಇವರ ಉದ್ದಾಮಕವಿಗಳೆನ್ನಿಸಿ, 'ವ್ಯಾಘ್ರಾಚಲಮಹಾತ್ಮೆ' 'ರಾಧಾವಿಲಾಸ' "ಗೋಪಿಕಾಗೀತೆ ಮೊದಲಾದ ಸರಸಕವಿತೆಯೊಡಗೂಡಿದ ಸತ್ಕಾವ್ಯಗಳನ್ನೂ, ಹಲವು ಭಗವನ್ನಾಮಪದಗಳನ್ನೂ ಪಡೆದು ತಮ್ಮ ಯಶಸ್ಸಿನಿಂದ ಪ್ರಕಾಶಿಸುತ್ತ ನಮ್ಮೆಲ್ಲರ ಧನ್ಯವಾದಗಳನ್ನು ಕೈಕೊಳ್ಳುತ್ತಿರುವರು. ಈ ಮಹನೀಯರ ಕೃತಿಗಳನ್ನೂ, ಆತ್ಮಚರಿತ್ರವನ್ನೂ ಸಾಧ್ಯವಾದಷ್ಟು ಜಾಗ್ರತೆಯಾಗಿಯೇ ನಂದಿನಿಯ ಮೂಲಕ ಪ್ರಚಾರಕ್ಕೆ ತರಬೇಕೆಂದಿರುವೆವಾದುದರಿಂದ ಇಲ್ಲಿ ಹೆಚ್ಚು ವಿವರಿಸಲಿಲ್ಲ. (ಸಂ ನ)

ಗನುಸಾರಿ ॥ ಹರಿ ॥ ೨ ॥ ವಾಸುದೇವ ನಿಜದಾಸರು ಪಿಡಿಯುವ ಭಾಸುರತಂಬೂರಿ । ವಾಸುಕಿಶಯನ ವಿಲಾಸದಕೀರ್ತಿವಿಕಾಸದಜಯ ಭೇರಿ ॥ ಹರಿ ॥ ೩ ॥ ಗಂಧರ್ವರು ಕರದೊಳು ಪೊಂದಿ ಮೆರೆವಬಲು ಸುಂದರತಂಬೂರಿ । ಸುಂದರಿಯರು ನಲವಿಂದಲೆ ನುಡಿಸುವಾನಂದಸು ಗುಣಧಾರಿ ॥ ಹರಿ ॥ ೪ ॥ ಶ್ರುತಿಯುತವಾಗಲು ಮತಿಯುತರಿಗೆ ಸಮ್ಮತವಹತಂಬೂರಿ । ಶ್ರುತಿಹೀನತೆಯಿಂದತಿಶಯವಾಗದು ಈ ಕ್ಷಿತಿ ಶತವಸುಸಾರಿ ॥ ಹರಿ ॥ ೫ ॥ ಲೋಕದಜನರುಗಳೇಕಸುಕೃತದ ಪರಿಪಾಕದ ತಂಬೂರಿ । ಈಕಲಿದೋಷ ನಿರಾಕರಣೆಗೆಬಲು ಭೀಕರ ಮುಖಧಾರಿ ॥ ಹರಿ ॥ ೬ ॥ ಧರೆಯೊಳ್ ಪುಲಿಗಿರಿವರದ ವಿಠಲನಬಿರು ದಿನತಂಬೂರಿ ॥ ದುರಿತಕುಂಭಮದಕರಿಯನುಸೀಳುವ ಹರಿಯಾಕಾರಿ ॥ ಹರಿ ॥ ೭ ॥

---

# ಭಗವತ್ಪ್ರಾರ್ಥನೆ.

ರಾಗ ॥ (ಸಂಕೃತಂ ಶ್ರೀಕಾಂತಪಾಲಿಸೈ)

ಪಾಲಿಸೈಮುಕುಂದಗೋವಿಂದ ಆನಂದದಿಂದ ॥ ಪಾಲಿಸೈ ॥

ಮಾರಜನಕನೆ ಕೋರಿನಿನ್ನೆಡೆ ಸಾರಿಬೇಡುವೆನೋ ॥ ಗಾರುಗೊಳಿಸದೆ
ತೋರುಕರುಣೆಯ । ಮಾರಹರನುತ ವೀರರಾಘವ ॥ ಪಾಲಿಸೈ ॥ ೧ ॥

ಭಾನುಕೋಟಿಸಮಾನಭಾಸುರ ಜಾನಕೀ ಮನೋಹರ ॥
ದೀನಪಾಲಕ ದಾನವಾಂತಕ ಮಾನಸಿಧಿಯೊಳೆ ಸುಜ್ಞಾನವಾರಿಧಿ ॥ ೨ ॥

ಶೇಷಶೈಲನಿವಾಸಸಜ್ಜನ ಪೋಷಭವಭಯನಾಶನ ॥
ಕ್ಲೇಶಹರಣ ಕೇಶವಾಚ್ಯುತ ಲೇಸುಬೇಡುವೆ ಮೀಸಲಾಗಿಹೆ ॥ ೩ ॥

## ಅನುತಾಪಿಯ ಆಲಾಪ

ರಾಗ॥ (ಆಟವೋದ್ಯಾತಕೊ ರಂಗ)

ಹಸಿವಾಗುತಿದೆಯೆನಗೆ ಬಲು ಬಸವಳಿದೆನೆಹೀಗೆ ॥ ಪ ॥ ಹಸಿವು ಹೆಚ್ಚಿತ ಅಕಟಾ! ತೃಷೆಯಿಂದೆನಗತಿಕಾಟ । ರಸನೆಯೊಳಿನಿತುಂ ರಸವಿಲ್ಲದರಿಂದಂ ಪುಸಿಯಲ್ಲಿದ ಒಣಗಿದ ಕಾಷ್ಟಂ ॥ ಹಸಿ ॥ ೧ ॥ ಅಂಗಜಜನಕಾಶ್ರೀ ರಂಗನಾಯಕ ನಿಮ್ಮ ॥ ಮಂಗಳನಾಮದ ಪೊಂಗಲ ಸವಿಯದೆ ಭವ ಸಂಗತಾಪದಿ ತಪಿಸುತಲೀ ॥ ಹಸಿವಾಗು ॥ ೨ ॥ ವಾಸುದೇವನೆ ನಿಮ್ಮ ಸಾಸಿರ ನಾಮಾಮೃತವ ॥ ಲೇಸಾಗಿ ಕುಡಿಯದೆ ಆಸೆಗೆ ಬೆರೆದೆನೋ । ಸೋಸಪೋದೆನು ಮರುಳನುನಾಂ ॥ ಹಸಿವಾಗು ॥ ೩ ॥ (ಬಂದ) ಅರಿಂದ ಈ ಪಸುಳೆಯನು ಪರಿಭಾವಿಸಿ ನೋಡಿನ್ನು ॥ ವರಶೇಷಗಿರೀವರ ನಿನ್ನಂಘ್ರಿಯ । ಸ್ಮರಿಸಿಜೀವಿಪಾವರಕೊಡುಬೇಯು ॥ ಹಸಿವಾಗು ॥ ೪ ॥

ರಾಗ ॥ (ಈತನೀಗ ವಾಸುದೇವನು)

ನೊಂದೆನಯ್ಯ ನಂದನಂದನ ॥ ನೊಂದನಕಟ ನಂದಕಂದ ಹಿಂದು ಮುಂದನರಿಯದಿಂದು । ತಂದೆ ನೀನೇ ರಕ್ಷಿಸೆಂದೇ ಅನನ್ಯಭಾವದ ॥ (ನಂದಕಂದ) ನೊಂದ ॥ ಅನು ॥ ನೋಡಲಿಲ್ಲ ನಿನ್ನ ಪದವ, ಪಾಡಲಿಲ್ಲ ನಿನ್ನ ಗುಣವ, ಮಾತಲಿಲ್ಲ ನಿನ್ನ ಸೇವೆಯ ಮೂಢಭಾವದಿ ॥ ದೂಡಿ ಸುಜನರ ಸಂಗತಿಯನು । ಬೇಡಿ ಕೃಪಣರ ಕರುಣೆಯನ್ನು । ಕಾಡುಹರಟೆಯಿಂದ ಕಳೆದನಕಟ ಕಾಲಮಂ ॥ (ನಂದಕಂದ) ॥ ೧ ॥ ಉರಿವಗೊಳ್ಳಿಯನ್ನೆ ತುಳಿದೆ, ಸುರಿದೆನೀರ ನುರಿಗೆ ಬರಿದೆ, ಹಿರಿಯರಾಣತಿಯನು ಮೀರಿದೆ, ಮೆರೆದ ಗರ್ವದೆ ॥ ಶರಣರನ್ನು ಜರಿದು ನುಡಿದೆ, ಪರರಹಿಂಸೆಗೈದೆ ಮದದೆ, ಪರಮಪಾಪಿಯಾದೆ ನಿನ್ನ ಸ್ಮರಣೆಮಾಡದೆ ॥ (ನಂದಕಂದ) ॥ ೨ ॥ ಅರಿತು ಅರಿಯದಾಚರಿಸಿದಂಥ, ದುರಿತಕ್ರಿಯೆಯ ಕುರಿತು ಕುರಿತು, ಪರಿಪರಿಯೊಳೊರಲುತಿಹೆನು, ಪರಮಪುರುಷನೆ ॥ ವರದನೆಂಬ ಬಿರುದನೆನೆದು, ಶರಣುಬಿ

ೕ

ಡುವಕಂದನೆಂದು ಕರವಪಿಡಿದು ಪೊರೆಯೊ ಶ್ರೀ-ಶೇಷಗಿರೀಶನೆ ॥
(ನಂದಕಂದ) ॥ ನೊಂದೆನಯ್ಯ ॥ ೩ ॥

(ಶ್ರೀಪಾದರೇಣು )

[ವಿ ಸೂ —ಆರ್ಯ ಜನಾಂಗಕ್ಕೆ ಕಾಂತಿಪ್ರದವಾದ ಭಗವದ್ಭಕ್ತಿಯು ತನ್ನ ಈಗಿನ ಸ್ಥಿತಿಯನ್ನು ಉತ್ತರಿಸಿ, ಪೂರ್ವಸ್ಥಿತಿಗೆ ಬಂದು, ನಮ್ಮನ್ನು ಆರ್ಯರಕ್ತದ ಸಂಚಾರದಿಂದ ನವಶಕ್ತಿ ಸಂಪನ್ನರನ್ನಾಗಿ ಮಾಡಬೇಕಾದರೆ, ಭಕ್ತಿ ನಿಷ್ಠಾ-ತತ್ಪರೆ ಯಾರಾದ ಭಾಮಿನಿಯರೇ ಮುಂದಾಗಿ, ತಮ್ಮ ಮಂಜುಳ ಸ್ವರದಿಂದ ಭಕ್ತಿ ಗೀತೆಯನ್ನು ಹಾಡುವದು ಅಗತ್ಯವೆಂದೂ, ಭಾಮಿನಿಯರ ಗಾನಕ್ಕೆ ಅನುಕೂಲಿಸುವಂತೆ ಅಂತಹ ಭಕ್ತಿನೀತಿಪರಗೀತೆಗಳನ್ನು ಪ್ರಕಟಿಸುವದು ಅಗತ್ಯವೆಂದೂ, ಇಲ್ಲಿ ಈ ಹಾಡುಗಳನ್ನು ಆನಂದಗೀತೆಯಿಂದ ತೆಗೆದು ಪ್ರಕಟಿಸಲಾಗಿದೆ ಸಂ ]

---

॥ಶ್ರೀ॥

# ನಂದನಂದನಸ್ತವ.

### ಪಾದಗಳಿಗೆ

ನಡೆಗುಂ ಕಾಲಾಟಕೆ ಪೋಣ್ ।
ನಡೆಗುಂ ಕೂಟಕ್ಕೆ ಬಟ್ಟೆಗೆಟ್ಟೋಡುಗು ಮಾ ॥
ಗಡೆ ಪೆಳವನ ಕಾಲಾಗದೆ ।
ನಡೆಯದೆ ನಿನ್ನಡಿಗೆ ವಂದವಂದವ ಕಾಲ್ಗಳ್ ॥೧॥

### ಕರಗಳಿಗೆ

ಮುಗಿವುದು ಕೆಯ್ ಕಂಡಾಗಳ್ ।
ಜಗವಂಜುವ ಜನರ್ಗೆ ಕಾಳ ಮೂಳರ ಪೊತ್ತು ॥
ಕೈಗಿದೆತ್ತ್ರ ದೊರ್ವರ್ ಕಂಡುಂ ।
ಮುಗಿಯದೆ ನಿನ್ನಡಿಗೆ ವಂದವಂದವ ಕಯ್ಗಳ್ ॥೨॥

ಕಿವಿಗಳಿಗೆ

ಸವಿಗುಂ ಕಯ್ಪೆಯು ನಿಪ್ಪಿನೆ ।
ಕಿವಿ ಕೇಳ್ದು ಪಿಸುಣರಾಡುವಟ ಮುಟ ಸುಡಿಯುಂ ॥
ಸವಿಯದೆ ಕರ್ಣಾಮೃತಮಂ ।
ಕಿವುಡಾದುದದೇಕ ವಂದವಂದವ ಕಿವಿಗಳ್ ॥೩॥

ಮೂಗಿಗೆ

ನಾರುವ ನಾತಕ್ಕಲ್ಲದೆ ।
ಟೇರಲ್ಲಂ ಮೂಗೆಸುತ್ತ್ರ ಸಸ್ಯದ ರೋಗಂ ॥
ಸಾರಲ್ ನಿನ್ನಡಿ ದೊಳಚಿಯು ।
ಬೀರುವ ಕಂಪಿಂಗೆ ನಂದನಂದನ! ಮೂಗೇ ॥೪॥

ಕಣ್ಗಳಿಗೆ

ಕುಡಿನೋಟ ಮೋರೆನೋಟಂ ।
ಮಿಡುಕದ ಕೂರ್ನೋಟ ಪುಂಬಿಪೆಲ್ಲಾ ನೋಟ ॥
ಕ್ಕೈಡೆಯಾದುದು ಕಾಣದೆ ನಿ ।
ನ್ನಡಿಮಲರಂ ಕುರುಪೆ, ನಂದನಂದನ! ಕಣ್ಗಳ್ ॥೫॥

ನಾಲಗೆಗೆ.

ತುದಿಮೊದಲೆನ್ನದೆ ಚಾಪ ।
ಲ್ಯದೆ ನೀಡುಂ ಸುಳ್ಳನಾಡಿ ಬಾಯ್ಬರ ಬತ್ತಿ ॥
ತ್ತ್ರದ ರೊಳ್ ಪೆಸರೆತ್ತ್ರಲು ಮಾ ।
ರದ ನಾಲಗೆಯೇಕೆ ನಂದನಂದನ ! ಬಳಕಂ ॥೬॥

ಶಿರಸ್ಸಿಗೆ

ಮುರುಕದೆ ಲೋಗರ ಕಂಡಃ ।
ತೆರಗುವ ತಲೆ ನೀಚಸೇವೆಗೆರಗುವ ತಲೆ ಮೇಣ್ ॥
ಪೆರವೆಣ್ಗೆರಗುವ ತಲೆ ತಾ ।
ನೆರಗದೆ ನಿನ್ನಡಿಗೆ ನಂದನಂದನ! ಮರೆದುಂ ॥೭॥

ಮನಸ್ಸಿಗೆ

ಮಿಂದೆಂ ತಿಳಿ ನೀರೊಳಗಾ ।
ನಂದದೆ ಮಡಿಯುಟ್ಟು ಪೋಗೆ ಮನ ವೊಲ್ದೆಡೆಗಾಂ ॥

ಏಂದುಂ ಮುಡಿಯುಟ್ಟುಂ ಗೋ ।
ಏಂದಾ! ಸೇವಿಸನೆ ನಂದನಂದನ! ನಿನ್ನಂ ॥೮॥

ಕಲಿಗೆ

ಎನಿತೆನಿತಂ ಕಲ್ತೋದೆಯು ।
ಮನಿತನಿತಂ ಬಸಿರ್ಗೆ ಸುರಿದು ತಣಿಪದ ಕಲೆಯಾ ॥
ಅನ್ತನಿ ತಾನುಂ ನಿನ್ನಡಿಯುಂ ।
ನೆನೆವಂತಿಲ್ಲಾಯ್ತು ನಂದನಂದನ! ಮರುಳೆಂ ॥೯॥

ಬುದ್ಧಿಗ

ಪಲರಂ ನಂಬಿದೆ ನಕ್ಕಟ ।
ಪಲರಂ ಸೆರಗೊಡ್ಡಿ ಬೇಡಿದೆಂ ಸರಣಾಗೆಂ ॥
ದಲೆದಲೆದೆಂ ನಿನ್ನಡಿ ನರು ।
ಮಲರ್ ನಂಬಲ್ಕೆ ನಂದನಂದನ! ಮರೆತೆಂ ॥೧೦॥

ಕರ್ಮಾಚರಣಕ್ಕೆ

ಎನಗೊಳ್ಳಿತೆಂದು ಬಗೆದಾ
ನೆನಿತಾನುಂ ಗುಂಡು ನೆರೆದು ಸೂರೆದುದನನಿತಂ ॥
ಮನವೋಗಡಿಸದೆ ಗೆಯ್ದೆಂ ।
ನಿನಗೆಂದಿನಿತಲ್ಲ!!! ನಂದನಂದನ! ಕಜ್ಜಂ ॥ ೧ ॥

ಕರ್ಮಾಧಿಕರಣಕ್ಕೆ

ಮಾಡುವ ಕಜ್ಜಂ ನೆರೆಕೆ
ಯ್ಯೂಕಿದೊಡಾಂ ಗೆಯ್ದೆನೆಂದು ಬೀಗಿದೆನೊಮ್ಮೆರ್ಂ ।
ಗಾಡಿದೆ ನಲ್ಲಿಂ ನಿನ್ನಡಿ
ಮಾಡಿದ ಕಜ್ಜಕ್ಕೆ ನಂದನಂದನ! ನಿನ್ನಂ ॥ ೧೨ ॥

ಭಾವನೆಗೆ

ಬಗೆಯೊರೆಗುಂ ಬಗೆ ಕೇಳ್ಗುಂ
ಬಗೆ ತಿಳಿಗುಂ ಬಗೆಯೆ ತಿಳಿವುಗುಂ ನಿನ್ನಯ ಸೇ
ವೆಗೆ ಬಗೆಯುದ ಬಗೆಯೇವಗೆ?
ಬಗೆದುಂ ಬಗೆಗಟ್ಟ್ಯ ನಂದನಂದನ! ಸೊಬಗೇಂ ॥ ೧೩ ॥

### ಮಹತ್ವಕ್ಕೆ.

ಅರೆಗಳಿಗೆ ಯೊಳಾ ನರುಸಾ
ಸಿರಲೆಕ್ಕದ ಪೊಲ್ಲ ಕೆಯ್ತ್ತಮಂ ಮಾಳ್ಪೆನೆನೆ
ನ್ನಿರವಿಂಗೆ ನಕ್ಕು ನಿನ್ನಡಿ
ವೆರಲಿಂ ವೀೞಂಟಲ್ಕೆ ನಂದನಂದನ! ಪಿರಿದೇಂ ॥ ೧೪ ॥

### ಅನುತಾಪಕ್ಕೆ

ಒಂದೆರಡಲ್ಲಪರಾಧಂ
ಸಂದಣಿಸಿದ ಲಕ್ಕ ಸಂಖ್ಯೆಯುರೆಗಳಿಗೆಯೊಳೆಂ
ದಂದೆನ್ನಂ ಮನ್ನಿಸಿ ಗೋ
ವಿಂದಾ! ಪೊರೆಯೆಂದು ನಂದನಂದನ! ಕೇಳೆಂ ॥ ೧೫ ॥

### ಪ್ರಸಾದಕ್ಕೆ

ಕರುಣಿಸಿ ನೀಂ ಮನ್ನಿಸದೊಡೆ
ನರಕದಿ ನಾನೆಂತುಟೇರ್ವೆ ನಿನ್ನೆನ್ನೆವರಂ ॥
ದುರಿತ ಶತಕೋಟಿ ಸಂಖ್ಯೆಯು
ದರೆಗಳಿಗೆಗೆ ತೀವಿ ನಂದನಂದನ! ನೆರೆಗುಂ ॥ ೧೬ ॥

### ಸಾಕ್ಷ್ಯಕ್ಕೆ

ಗಾನದೆ ತಣಿಪಿದ ನೊರ್ವ್ವಂ
ದಾನದೆ ಮತ್ತೊರ್ವ ನೊರ್ವ್ವನಾ ಸದ್ವ್ರತದಿಂ
ದಾನುಂ ತಣಿಯಿಸ ಲಘುಸಂ
ತಾನಂ ನೆರೆದತ್ತು ನಂದನಂದನ! ಇನ್ನೇಂ ॥ ೧೭ ॥

### ಪ್ರಪತ್ತಿಗೆ.

ಸರಣಾರು ಮಿಲ್ಲ ನಿನ್ನಡಿ
ಸರಣಲ್ಲದೆ ಕಾವುದೆನ್ನ ನದರುಂದತ್ತಾ
ದರದಿಂದ ಮೆನ್ನನಂತಾ
ಪರಾಧಮಂ ಕಳೆದು ನಂದನಂದನ! ಪೊರೆಯಾ ॥ ೧೮ ॥

(ಕೆನ್ನಂ.)

(ವಿ ಸೂ —ಭಕ್ತಿ ಕರುಣಾ-ರಸದ್ಯೋತಕವಾದ ಈ ಕಂದಗಳ ಅರ್ಥವನ್ನು ಹೃದ್ಗತಮಾಡಿಕೊಳ್ಳುವದರಲ್ಲಿ ಮನಸ್ಸಿಗೆ ಭಗವದ್ಗುಣಾನುಭವವನ್ನುಂಟುಮಾಡಲು ಇದು ತುಂಬಾ ಸಹಕಾರಿಯಾಗುವದೆಂದು ಇದರ ಭಾವಾರ್ಥವನ್ನೂ ಕವಿಯ ಸಂಕ್ಷಿಪ್ತ ವೃತ್ತವನ್ನೂ ಮುಂದೆ ಕೊಡುವೆವು )

---

ಭಗವಾನ್ ವಂದನಂದವನಲ್ಲಿ

# ನಿವೇದನ.

ಶ್ರೀಯುತ, ರಾಜಗೋಪಾಲಚಾರ್ಯ, ಎಮ್. ಏ ಎಲ್ ಟಿ ಅವರ
ನಂದನಂದನಸ್ತವದ *

॥ ಭಾವಾರ್ಥ ॥

(ಪೀಠಿಕೆ)

**ಹೇ ಭಗವಂತನಾದ ನಂದನಂದನನೇ!**

ಸಕಲ ಚರಾಚರಾತ್ಮಕ ಪ್ರಪಂಚಕ್ಕೂ ಕಾರಣ, ಕಾರ್ಯಕರ್ತನಾಗಿ, ಸರ್ವವ್ಯಾಪಿಯಾಗಿ ಪ್ರಕಾಶಿಸುತ್ತಿರುವ ನಿನ್ನನ್ನು, ನಿನ್ನ ಮಾ

---

* ನಮ್ಮ ಹಿತಚಿಂತಕ ಭ್ರಾತೃವರ್ಗೀಯರಲ್ಲಿ ಪರಿಗಣಿತರಾಗಿರುವ ಶ್ರೀ. ಆರ್ ಚಾಚಾ, ಎಮ್ ಏ ಎಲ್ ಟಿ. ಇವರು ಸುಪ್ರಸಿದ್ಧ ಮಾಸಪತ್ರಿಕೆಗಳೆನ್ನಿಸಿದುವ "ಶ್ರೀಕೃಷ್ಣಸೂಕ್ತಿ ಮಧುರವಾಣಿ"ಗಳ ವಾಚಕರಿಗೂ, ನಮ್ಮ "ಸತೀಹಿತೈಷಿಣೀ" ಮತ್ತು "ಕರ್ಣಾಟಕ ನಂದಿನಿ" ಪತ್ರಿಕೆಗಳ ವಾಚಕರಿಗೂ ಚಿರಪರಿಚಿತರಾಗಿಯೇ ಇರುವರು ಇದಕ್ಕೆ ಮೊದಲೇ ಇವರ ಲಲಿತಪದಬಂಧುರವಾದ ಕವಿತೆಗಳು ನಮ್ಮ ವರ್ಗಣೀದಾರರ ಸಮಾಲೋಚನಕ್ಕೆ ಬಂದಿರುವದೆಂದೂ ನಂಬಿರುವೆವು ಇವರಲ್ಲಿ ತೋರುತ್ತಿರುವ ಕವಿತಾ ಸಂಪನ್ನತೆಯನ್ನೂ, ಇವರಿಗೆ ಕನ್ನಡಭಾಷೆ ಮತ್ತು ಕನ್ನಡನಾಡಿನ ಮೇಲಿರುವ ಉತ್ಕಟವಾದ ಭಕ್ತಿಯನ್ನೂ ಸ್ವಲ್ಪಮಾತ್ರದಿಂದ ವರ್ಣಿಸಬೇಕೆಂದರೆ, ಇವರಿಂದ ವಿರಚಿತವಾಗಿರುವ 'ಮರುನ್ನಂದನ ಶತಕ" [ಇದನ್ನು

ಯೆಯಿಂದ ಆವೃತರಾಗಿ ಜಡರಾಗಿರುವ ನಾವು ಹೇಗೆ ತಿಳಿಯಬಲ್ಲೆವು? ಅಜ್ಞಾನಾಂಧಕಾರದಲ್ಲಿ ಮುಳುಗಿರುವ ನಮಗೆ, ನಿನ್ನ ಸ್ಮರಣಕ್ಕಾದರೂ ಅವಕಾಶವೆಲ್ಲಿರುವದು? ಕರಚರಣಗಳೇ ಮೊದಲಾದ ಉಪಕರಣಗಳನ್ನು ಅನುಗ್ರಹಿಸಿಯೂ ನಿನ್ನ ಉದ್ದೇಶದಂತೆ ಆಚರಿಸದೆ, ಅವುಗಳ ಅಪವ್ಯಯಮಾಡಿ, ಸುಖಬಾಹಿರರೆನ್ನಿಸಿ ಅಂತರ್ದಾಹದಿಂದ ಒರಲೊರತ್ತಿರುವ ಮರುಳರನ್ನು ಕುರಿತು ನೀನೇನು ಹೇಳುವೆ? ಅಂತಹರಿಗೆ ಗತಿಯಾವದು? ಪಶ್ಚಾತ್ತಾಪವೇ ಅಲ್ಲವೆ? ಪಶ್ಚಾತ್ತಾಪದಿಂದ ದಗ್ಧರಾಗುವದೇ ಅವರ ಆತ್ಮ ಮತ್ತು ಜಡದೇಹಗಳಿಗೆ ತಕ್ಕ ಪ್ರಾಯಶ್ಚಿತ್ತವಲ್ಲವೆ? ಹಾಗಿದ್ದರೆ ಹೇ ಭಗವಂತ! ಈ ದೀನ ದುಃಖಿಯ, ಈ ಪಾಪಿಯ ಅನುತಾಪದ ಆಲಾಪಕ್ಕೆ ಇಷ್ಟಾದರೂ ಕಿವಿಗೊಡುವೆಯಾ? ದೀನದಯಾಪರನಲ್ಲವೇ ನೀನು? ಹಾಗಿದ್ದರೆ ನನ್ನ ನಿವೇದನಕ್ಕಿನ್ನು ಮೊದಲು ಮಾಡು ನೀನು ಉದ್ಧರಿಸುವದೂ, ಕ್ರುದ್ಧನಾಗಿ ಒದ್ದು ಕೆಡಹುವುದೂ ನಿನ್ನನ್ನೆ ಹೊಂದಿದ ಭಾರವಾಗಿದೆ ಇನ್ನಿದರ ಮೇಲೆ ನಾನೇನು ಹೇಳಲಿ?

---

ಕುರಿತು ಪ್ರಸ್ತಾವನವು ಕಾಲಾವಕಾಶವಾದಂತೆ ಮಾಡಲ್ಪಡುವದು] ವನ್ನೂ ನಂದಿನಿಯ ಮೊದಲ ಸಂಚಿಕೆಯಲ್ಲಿರುವ 'ಸಪ್ರಾರ್ಥನಾ" ಕಂದಗಳನ್ನೂ ಅವಲೋಕಿಸಿದರೆ ಸಾಕು ಒಟ್ಟಿನಲ್ಲಿ ಹೇಳುವದೆಂದರೆ, ನಮ್ಮ ಕನ್ನಡನಾಡು ಏಳಿಗೆಗೆ ಬರಬೇಕಾದರೆ, ಇಂತಹ ಸತ್ಪುತ್ರರನ್ನು ಮುಂದೆ ನಿಲ್ಲಿಸಿ, ಹುರಿಗೊಳಿಸಿ, ದೇಶದ ಭಾಷಾ ಸಂಪತ್ತಿಯನ್ನೂ, ಜ್ಞಾನಾಭಿವೃದ್ಧಿಯನ್ನೂ ಊರ್ಜಿತಪಡಿಸಿಕೊಳ್ಳಬೇಕೆಂದರೆ ತಪ್ಪಾಗದು ನಮ್ಮ ಮೈಸೂರು ಸಂಪದಭ್ಯುದಯ ಸಮಾಜದವರೂ ಸಾಹಿತ್ಯ ಪರಿಷತ್ತಿನವರೂ ಪ್ರಯತ್ನಪಟ್ಟರೆ, "ಸದೇಶಕ್ಕೆ ಎರವಾಗಿ, ಗುರುಜನರ ಸೇವೆಮಾಡಿ ಹೊಂದಬಹುದಾದ ಭಾಗ್ಯಕ್ಕೆ ದೂರವಾಗಿ, ಅಜ್ಞಾತವಾಸದಲ್ಲಿರುವ ತಮಗೆ ಕನ್ನಡದ ಗೊಡವೆಯೇಕೆಂದು" ನಿರುತ್ಸಾಹಿಗಳಾಗಿ ಈ ನಮ್ಮ ಭ್ರಾತೃಗಳಂತೆ ತಪಿಸುತ್ತಿರುವ, ಈ ದೇಶ ಭಾಷಾ ಸೇವಕರನ್ನು ಸ್ವಾಗತಪೂರ್ವಕವಾಗಿ, ಕರೆಯಿಸಿಕೊಂಡು, ದೇಶ ಸೇವೆಯಲ್ಲಿ ನಿಯೋಜಿಸುವದೂ, ಅಂತದರಿಂದವರು ತಮ್ಮ ದೇಶಮಾತೆಯ ಸೇವೆಗೂ, ದೇಶೀಯರ ಸಹಾಯಕ್ಕೂ, ತಮ್ಮ ಕರ್ತವ್ಯಸಿದ್ಧಿಗೂ ಪಾತ್ರರಾದೆವೆಂದು ಸಂಭ್ರಮಗೊಂಡು,

## ಕಂದಗಳ ಭಾವಾರ್ಥ

೧ ಎಲೈ ನಂದನಂದನನೇ! ನಿನ್ನಿಂದ ಅನುಗ್ರಹೀತವಾದ ಕಾಲುಗಳಿದ್ದೂ, ನಿನ್ನ ಸಾನ್ನಿಧ್ಯಕ್ಕೆ ಬರದೆ, ನಿನ್ನ ದಾಸರ ಭಕ್ತರ ಸಂದರ್ಶನಕ್ಕೆ ಹೋಗದೆ ವಾಯು ವಿಹಾರಕ್ಕೂ, ಕೂಟಕೋಲಂಗಳಿಗೂ ದಿಕ್ಕೆಟ್ಟು ಓಡಿ ಹೋಗುತ್ತವೆ. ಅಂತಹ ಸ್ಥಳಗಳಿಗೆ ಓಡಿ ಹೋಗಲು ಈ ಕಾಲ್ಗಳೇಕೆ ಹೆಳವನ ಕಾಲಾಗಲಿಲ್ಲ?

(ನಿನ್ನ ಸಂದರ್ಶನಕ್ಕಾಗಿ ಉದ್ದೇಶಿಸಿ ನಡೆಯಲಿಲ್ಲವೆಂಬ ಸಂತಾಪ)

೨ ನಂದನಂದನ! ಕ್ರೂರರಿಗೂ, ಕಾಳಮೂಳರಿಗೂ ಎತ್ತಿ ಮುಗಿಯುವ ಈ ಕರಗಳು ನಿನ್ನನ್ನು ಕಂಡಾಗಲಾದರೂ ನಿನ್ನಡಿಗೆ ಕೈಮುಗಿಯದಿರುವದಲ್ಲಾ?

೩ ಹೇ ನಂದನಂದನ! ನಿನ್ನ ನಾಮಾಮೃತವನ್ನು ಸವಿಯದೆ ಆವಾಗಲೂ ಚಾಡಿ ಮಾತುಗಳಿಗೇ ಎರಕವಾಗಿ ಹೋಗುತ್ತಿರುವ ಈ ಕಿವಿಗಳು ಇನ್ನೂ ಕಿವುಡಾಗಲಿಲ್ಲವೇಕೆ?

೪ ಎಲೈ ನಂದನಂದನ! ನಶ್ವರ ರೋಗಕ್ಕೆ ಗುರಿಯಾದ ಮೂಗು ನಾರುವ ನಾತಕ್ಕೆ ಹುಟ್ಟಿದುದಲ್ಲದೆ ಬೇರಿಲ್ಲವೆಂಬಂತೆ ನಿನ್ನ ಪಾದಕ್ಕೆ ಅರ್ಚನೆಯಾದ ಶ್ರೀ ತುಳಸಿಯ ಸುಗಂಧವನ್ನು ಆಘ್ರಾಣಿಸಲು ಇದು ಮೂಗಾಗಿದೆಯಲ್ಲಾ!

---

ತಮ್ಮ ಬುದ್ಧಿ ಮೇಧಾ-ಶಕ್ತಿ ಸಂಪತ್ತುಗಳನ್ನು ಸರಿಯಾದ ರೀತಿ, ತಮಗೆ ಉಪಕರಿಸಿದ ಮೇಲ್ಕಂಡವರ ಉದ್ದೇಶದಂತೆ—ವಿನಿಯೋಗಿಸುವದನ್ನು ಕಾಣುವುದೂ ಅತು ಕಷ್ಟವೆನ್ನಿಸಲಾರದು ಆದರೆ ಅಂತಹ ಅಭ್ಯುದಯಕಾಲವನ್ನು ಕರುಣಿಸುವದು ಕೇವಲ ಭಗವತಿಯ ಪ್ರೇರಣೆಯನ್ನೇ ಅವಲಂಬಿಸಿದೆ ಕೃತ್ಯದಲ್ಲಿ ಇವರಲ್ಲಿರುವ ಭಾಷಾಭಿಮಾನ, ದೇಶಹಿತೇಚ್ಛೆ, ಭಗವದ್ಭಕ್ತಿಗಳ ದಿಗ್ದರ್ಶನಕ್ಕಾಗಿ ಇಲ್ಲಿ ಇಷ್ಟು ಸೂಚಿಸಲಾಯ್ತು ಇನ್ನುಳಿದ ಇವರ ಕೃತಿ ವಿಚಾರವು ಮುಂದೆ ಅವಕಾಶವಾದಾಗ ನಡೆವುದು ಇವರು ಈಗ ತೆಲುಗುದೇಶವಾದ ರಾಜಮಹೇಂದ್ರದ ಕಲಾಶಾಲೆಯಲ್ಲಿ ಗಣಿತಶಾಸ್ತ್ರ ಬೋಧಕರಾಗಿರುವರು ಇವರ ಜನ್ಮಧಾರಣವು ೧೮೭೩ ನೆಯ ಯುವ ಸಂವತ್ಸರದ ಚೈತ್ರದಲ್ಲಿ

೫ ಕೃಪಾಕಟಾಕ್ಷನಾದ ಹೇ ನಂದನಂದನ!—

ಈ ಕಣ್ಣುಗಳಿದ್ದೂ ನಿನ್ನ ಪಾದಪದ್ಮವನ್ನು ನೋಡದೆ ಫಲವೇನು? ಇದು— ಬರಿಯ ಕುಡಿನೋಟ, ಓರೆನೋಟ, ಬಿರುನೋಟಗಳೆಂಬ ಶೃಂಗಾರ ಹಾವ ಭಾವ, ವಿಲಾಸದ ನೋಟಕ್ಕೇ ಎಡೆಯಾಗಿ ಹೋಗಿದೆ! (ಒಂದು ಬಾರಿಯಾದರೂ ನಿನ್ನ ಸಂದರ್ಶನದಲ್ಲಿ ಆತುರಗೊಂಡು ನೋಡ ಬೇಕೆನ್ನದಂತಾಗಿದೆ )

೬ ಹೇ, ನಂದನಂದನ!

ಕೊನೆಮೊದಲಿಲ್ಲದ ಚಾಪಲ್ಯದಿಂದ ಹಲವು ಸುಳ್ಳು ಮಾತುಗಳನ್ನು ಹೇಳಿ, ಈ ನಾಲಿಗೆಯು ಬತ್ತಿ ಹೋಯಿತಲ್ಲದೆ, ನಿನ್ನ ನಾಮಸ್ಮರಣವನ್ನಾದರೂ ಮಾಡಲಿಲ್ಲ!

೭ ನಂದನಂದನ!

ಉತ್ತಮಾಂಗವೆನ್ನಿಸುವ ಈ ತಲೆಯು ಮರೆತಾದರೂ ಪುರುಷೋತ್ತಮನಾದ ನಿನ್ನ ಪಾದಕ್ಕೆರಗದೆ, ನೀಚಸೇವೆಗೂ, ಪರನಾರಿಗೂ ಬಗ್ಗಿದ ತಲೆಯೆನ್ನಿಸಿಕೊಂಡಿತೇ !!

೮ ಎಲೈ ನಂದನಂದನ! ತಿಳಿ ನೀರಿನಲ್ಲಿ ಸ್ನಾನಮಾಡಿದೆನು ಸ್ವಚ್ಛವಾದ ಮಡಿಯನ್ನುಟ್ಟೆನು ಏಕೆ? ನನ್ನ ಮನಸ್ಸು ಬಯಸಿದ ಕಡೆಗೆ ಹೋಗ ಬೇಕೆಂದಲ್ಲದೆ, ಮಿಂದುದೂ, ಮಡಿಯುಟ್ಟುದೂ, ಗೋವಿಂದಾ— ಎಂದು ನಿನ್ನನ್ನು ಸೇವಿಸಬೇಕೆಂದು ಮಾತ್ರ ಮಾಡಿದುದಲ್ಲ!

೯ ನಂದನಂದನ! ಎಷ್ಟೆಷ್ಟು ಕಲೆಗಳನ್ನು ಕಲಿತರೂ ಹೊಟ್ಟೆಗೆ ತುಂಬಿ, ತಣಿಸಲಾರದ ಕಲೆಯೇ ಆಯಿತು ಅಷ್ಟು ಕಲ್ತೂ ನಿನ್ನಡಿಯನ್ನು ಅಷ್ಟಿಷ್ಟಾದರೂ ನೆನೆವಂತಾಗದೆ ಹೋದ ನಾನು ಮರುಳನಾಗಲಿಲ್ಲವೆ?

೧೦. ಅಯ್ಯೋ!—ನಂದನಂದನ! (ಅನಾಥನಾಥನಾದ) ನಿನ್ನನ್ನು ಮರೆತು, ಹಲವರನ್ನು ಆಶ್ರಯಿಸಿ, ರಕ್ಷಕರಾಗಬೇಕೆಂದು ಬೇಡಿದೆನು, ಅಲೆದಲೆದು ಬೇಸತ್ತೆನು (ಇಷ್ಟಾಗಿಯೂ ನನಗಾದುದೇನು?)

೧೧ ಹೇ, ನಂದನಂದನ! ನನಗೆ ಒಳ್ಳೆಯದಾಗಬೇಕೆಂದು, ನಾನು ಎಷ್ಟೆಷ್ಟೋ ಕಲ್ಲು ಗುಂಡುಗಳನ್ನು ಪ್ರಾರ್ಥಿಸಿ, ಆಕೇನು

ಹೇಳಿದರೂ ಇಷ್ಟಾದರೂ ಬೇಸರಿಸದೆ ಅದೆಲ್ಲವನ್ನೂ ಮಾಡಿದೆನು! ಅದರಲ್ಲಿ ನಿನಗೆಂದು, ನಿನ್ನ ಸೇವೆಗೆಂದು ಮಾಡಿದುದು ಇಷ್ಟಾದರೂ ಇಲ್ಲ!!!

೧೨ ನಂದನಂದನ! ಮಾಡುವ ಕೆಲಸವು ಕೈಕೂಡುವದಾದರೆ ನಾನು ಮಾಡಿದೆನೆಂದೇ ಹಿಗ್ಗಿದೆನಲ್ಲದೆ, ನಿನ್ನ ಚರಣಾನುಗ್ರಹದಿಂದಾಯ್ತೆಂದು ಬಾಯಿಮಾತಿಂದಾದರೂ ನಾನು ನಿನ್ನನ್ನು ಕುರಿತು ಹೇಳದೆ ಹೋದೆನು!

೧೩ ನಂದನಂದನ! ಮನಸ್ಸೇ ಹೇಳುವದು, ಮನಸ್ಸೇ ಕೇಳುವದು, ಭಾವನೆಯೇ ತಿಳಿವುದು ಭಾವನೆಯೇ ತಿಳಿಸುವುದು ಹೀಗಿದ್ದು, ನಿನ್ನ ಸೇವೆಗೆ ಹಾರೈಸದ ಈ ಬಗೆಯು (ಮನಸ್ಸು ಭಾವನೆ) ಎಂತಹದು? ಅಥವಾ ಮತಿಗೆಟ್ಟು ಭಾವಿಸಿಯೂ ಹೊಂದುವ ಸುಖವೇನು? (ಭಾವನೆಯೆಂತಿಹುದಂತೆ ಫಲಂಗಳ್ ಎಂಬಂತೆ ನನ್ನ ಭಾವನೆಯು ಸದ್ಭಾವದಲ್ಲಿರಲಿಲ್ಲವೆಂದರೆ ಸುಖವು ಇಲ್ಲವೆಂದೇ ಆಯಿತಷ್ಟೆ!)

೧೪ ನಂದನಂದನ! ಅಹಂಕಾರದಿಂದ ನಾನು, ಅರಗಳಿಗೆಯಲ್ಲಿ ಸಾವಿರಾರು ಲೆಕ್ಕದ ಕುಕರ್ಮವನ್ನು ಮಾಡಿದೆನೆಂದು ಹೇಳಿದರೆ, ನನ್ನ ಈ ಸ್ಥಿತಿಗೆ ನಕ್ಕು ನೀನದನ್ನು ನಿನ್ನ ಕಿರುಬೆರಳ ತುದಿಯಿಂದ ಹಾರಿಸಲು ಅಸಾಧ್ಯವೇ?

೧೫ ನಂದನಂದನ! ಇನ್ನೂ ನನ್ನ ಅಪರಾಧಗಳೆಷ್ಟೆಷ್ಟೋ ಇವೆ ಅವುಗಳನ್ನು ಒಂದು ಎರಡೆಂದು ಎಣಿಸುವಂತಿಲ್ಲ ಅವಾಗಿದ್ದರೂ, ಸಮಸ್ತ ಪಾಪರಾಶಿಯನ್ನು ತೊಲಗಿಸಿ ಉದ್ಧರಿಸಬಲ್ಲ ನಿನ್ನನ್ನು ಕುರಿತು—'ನನ್ನ ತಪ್ಪನ್ನು ಮನ್ನಿಸಿ ಕಾಪಾಡು ಗೋವಿಂದಾ! ಎಂದು ಮಾತ್ರ ನಿನ್ನನ್ನು ಪ್ರಾರ್ಥಿಸುವವನಲ್ಲ!'

೧೬ ನಂದನಂದನ! ಕೃಪೆಯಿಟ್ಟು ನೋಡಿ ನೀನು ನನ್ನನ್ನು ಮನ್ನಿಸದಿದ್ದರೆ, ಶತಕೋಟಿ ಸಂಖ್ಯೆಯಿಂದ ಕೂಡಿದ ಪಾಪರಾಶಿಯು ನನ್ನನ್ನು ಅರೆಗಳಿಗೆಯೊಳಗಾಗಿ ಸುತ್ತಮುತ್ತುವಂತಿರುವಲ್ಲಿ,- ಇನ್ನು ನನಗೆ ನರಕದಿಂದ ಉದ್ಧಾರವಾಗುವದೆಂದಿಗೆ? (ನರಕೋತ್ತಾರಣಕ್ಕೆ ನರಕಾರಿಯಾದ ನೀನೇ ಕೃಪೆಮಾಡಬೇಕಲ್ಲದೆ, ಮತ್ತಾರಿಂದಲೂ ಇದಾಗಲಾರದು!)

೧೭ ಹೆ! ನಂದನಂದನ!

(ನಿನ್ನನ್ನು ಮೆಚ್ಚಿಸಿ, ನಿನ್ನ ಪ್ರಸಾದವನ್ನು ಪಡೆದು, ನಿನ್ನ ಭಕ್ತರಲ್ಲಿ ಅಗ್ರಗಣ್ಯರೆಂದು ಪ್ರಸಿದ್ಧರಾದವರು ಹಲವರಿರುವರು ಅವರಲ್ಲಿ ಸುಪ್ರಸಿದ್ಧರಾದವರು ಮೂವರು ಆರೆಂದರೆ ನೋಡು!)-- ನಾರದನು ನಿನ್ನನ್ನು ಗಾನದಿಂದ ತೃಪ್ತಿಪಡಿಸಿದನು. ಬಲಿದಾನವೇಂದ್ರನು, ದಾನದಿಂದ ನಿನ್ನನ್ನು ತೃಪ್ತಿಪಡಿಸಿದನು ಅಂಬರೀಷ ಮಹಾರಾಯನು ದ್ವಾದಶೀ ವ್ರತಾಚರಣದಿಂದ ನಿನ್ನನ್ನು ತೃಪ್ತಿಪಡಿಸಿದನು ಆದರೆ ನಾನು ನಿನ್ನನ್ನು ಆವವಿಧದಿಂದ ತೃಪ್ತಿಪಡಿಸಲಿ? ನನ್ನಲ್ಲಿ ಅಘಸಂತಾನ-(ಪಾತಕರಾಶಿ) ವಲ್ಲದೆ ಮತ್ತೇನಿರುವದು? (ಆದರೂ)

೧೮ ಎಲೈ ಆರ್ತತ್ರಾಣಪರಾಯಣನಾದ ನಂದಕಂದನೇ! ದೀನನಾಗಿರುವ ನನಗೆ ಈ ವೇಳೆಯಲ್ಲಿ ಮತ್ತಾರೂ ಆಶ್ರಯರಿಲ್ಲ ನಿನ್ನ ಪಾದವೇ ಗತಿಯೆಂದು ನಿನ್ನನ್ನೇ ಆಶ್ರಯಿಸಿ, ಪರಿಪಾಲಿಸೆಂದು ಪ್ರಾರ್ಥಿಸುವ ನನ್ನಲ್ಲಿ ಕೃಪಮಾಡಿ, ಕೈ ಹಿಡಿದು ನನ್ನ ಅನಂತಾಪರಾಧವನ್ನೂ ಕ್ಷಮಿಸಿ ಕಾಪಾಡಲಾರೆಯೋನು? (ಮೊದಲೇ ನೀನು ಮಾಡಿದಂತಾಗಲೆಂದು ಮನವಿಮಾಡಿದೆನಲ್ಲವೆ? ನನಗಿನ್ನೇಕೆ ಕಾತರವು? ಕೊಲ್ಲುವದೂ, ಕಾಪಾಡುವುದೂ ನಿನ್ನದೆಂದು ಸುಮ್ಮನಾಗುವೆನು )

ಕ್ಷಮಾಪಣ — ನಮ್ಮ ಭ್ರಾತೃವರ್ಗೀಯರಾದ ತಾತಾರ್ಯರ ಉದ್ದಾಮ ಪಾಂಡಿತ್ಯಕ್ಕೆ ಒಳಪಟ್ಟ ಮೇಲಿನ ಕವಿತೆಗಳಿಗೆ ಕೇವಲ ಬಾಲಿಶವಿದ್ಯಾರ್ಥಿನಿಯಾಗಿರುವ ನಾನು ಭಾವಾರ್ಥವನ್ನು ಬರೆಯಲು ದ್ಯಮಿಸಿದುದು ನಗೆಯಾಟವೇ ಆಹುದಾದರೂ 'ಅಳಲಭಕ್ತಿ ಮಳಲ ಸೇವೆ"ಯೆಂಬ ಗಾದೆಯಂತೆ ಅಲ್ಪಬುದ್ಧಿಗೆ ತಕ್ಕ ಮಟ್ಟಿಗೆ ನಂದನಂದನಸ್ತವದ ಭಾವವನ್ನು ನಮ್ಮ ಭಗಿನಿಯರ ಉಪಯೋಗಕ್ಕೆಂದು ತೆಗೆದು ಮುಂದಿಟ್ಟಿನು ಇದರಲ್ಲಿ ನ್ಯೂನಾತಿರಿಕ್ತ ದೋಷಗಳೇನಾದರೂ ಕಂಡುಬರುವದಾದರೂ ನಮ್ಮ ಭಗಿನೀ ಬಾಂಧವರ. ಆಗ್ರಹಿಸದೆ, ಅಪಹಾಸ್ಯಮಾಡದೆ, ಕವಿತಾಸ್ವಾರಸ್ಯವನ್ನು ಸಂಗ್ರಹಿಸಿ ಅದರ ಗುಣಾನುಭವ ಮಾಡಿಕೊಳ್ಳಬೇಕೆಂದು ನಮ್ರಭಾವದಿಂದ ನಿವೇದಿಸುವೆನು

ಇತಿ,— ಶ್ರೀಪಾದ ರೇಣು

# ದೇಶೋನ್ನತಿ

(ಎರಡನೆಯ ಸಂಚಿಕೆಯಿಂದ ಮುಂದಕ್ಕೆ ಸಾಗಿದುದು)

II

ದೇಶೋನ್ನತಿಗೆ ಎಲ್ಲರೂ, ವಿದ್ಯಾವಂತರೂ, ಐಶ್ವರ್ಯವಂತರೂ, ಮತ್ತು ಬಲಿಷ್ಠರೂ ಆದ ಮಾತ್ರಕ್ಕೆ ಆ ದೇಶವು ಉನ್ನತಿಗೆ ಬಂದಿತೆಂದು ಹೇಳಲಾಗದು. ದೇಶೀಯರೆಲ್ಲರೂ ಸತ್ಯಾತ್ಮರೂ, ನಿಸ್ಪೃಹರೂ, ಪರೋಪಕಾರಪ್ರಿಯರೂ, ಆಚಾರಶೀಲರೂ, ಮತ್ತು ಕಾರ್ಯತತ್ಪರರೂ ಆಗಿದ್ದರೆ ಅವರು ಅಭ್ಯುದಯ ಸ್ಥಿತಿಯಲ್ಲಿರುವರೆಂದೂ, ಆ ದೇಶವು ಉನ್ನತಿಗೆ ಬಂದಿತೆಂದೂ ಹೇಳಬಹುದು. ಈ ಮೇಲಿನ ಗುಣಗಳೇ ಸಾಧುಗಳ ಲಕ್ಷಣವೆನ್ನಿಸುವವು. ಸಾಧುಗಳನ್ನು ಸೇರಿದ ವಿದ್ಯೆಯೂ, ಐಶ್ವರ್ಯವೂ, ಮತ್ತು ಶಕ್ತಿಯೂ ಕೂಡ, ತಮಗೂ ಮತ್ತು ಇತರರಿಗೂ ಹಿತಕರವಾಗುವವು. ಅದೇ ವಿದ್ಯೆಯು ದುರ್ಜನರನ್ನು ಸೇರಿದರೆ, ತಮಗೂ, ಇತರರಿಗೂ ಎಂದಾದರೊಂದು ಕಾಲದಲ್ಲಿ ಅನರ್ಥಕರವೇ ಆಗುವದು. ಅದಕ್ಕಾಗಿಯೇ ಅನುಭವಜ್ಞರು ಹೀಗೆ ಹೇಳಿರುವರು.

"ವಿದ್ಯಾವಿವಾದಾಯ, ಧನಂಮದಾಯ ಶಕ್ತಿಸ್ತತಾನಾಮಪಿ ಪೀಡನಾಯ ।
ಖಲಸ್ಯ ಸಾಧೋರ್ವಿಪರೀತಮೇತತ್-ಜ್ಞಾನಾಯ ದಾನಾಯ ಚ ಪಾಲನಾಯ ॥"*

ಹೀಗೆ ಪ್ರಪಂಚ ಸೃಷ್ಟಿಯೇ ಎರಡು ತೆರನಾಗಿವೆ. ಉತ್ತಮವೆಂದರೆ ಅಲ್ಲಿ ನೈಚ್ಯವಿದ್ದೇ ಇರುವದೆಂದು ಸ್ಪಷ್ಟವಾಗುವದು. ಆದುದ

---

* ಈ ಶ್ಲೋಕವನ್ನು ಉದಾಹರಣಪೂರ್ವಕವಾಗಿ ವಿದ್ಯುಲ್ಲತೆಯ ಕಥಾನಕವು ಹೇಗೆ ಸಮರ್ಥಿಸುವದೆಂಬುದನ್ನು ಕುರಿತ ಭಾಷಣವು ಸತೀಹಿತೈಷಿಣಿಯ ೩ನೆಯ ಗ್ರಂಥವಾದ ವಿದ್ಯುಲ್ಲತೆಯ ಉಪೋದ್ಘಾತದಿಂದಲೂ, ಸಮಗ್ರ ಕಥಾವಲೋಕನದಿಂದಲೂ ತಿಳಿಯಬಹುದಾಗಿ ಸೂಚನೆ. ಸಂ

ರಿಂದ ಕವಿರಾಜನಾದ ಕಾಳಿದಾಸನು ಬ್ರಹ್ಮರಾಕ್ಷಸನ ಸಮಸ್ಯಾವಾಕ್ಯವಾದ 'ಸರ್ವಸ್ಯಾದ್ಯೇ' ಎಂಬ ಪ್ರಶ್ನೆಗೆ । "ಸರ್ವಸ್ಯಾದ್ಯೇ । ಸುಮತಿ ಕುಮತಿ । ಸಂಪದಾಪತ್ತಿ ಹೇತು ॥" ಎಂದು ಉತ್ತರವನ್ನು ಹೇಳಿರುವನು ನಮ್ಮ ಪೂರ್ವಿಕರಾದ ಆರ್ಯ ಮಹರ್ಷಿಗಳು, ಜೀವವು ಪುಂವರ್ಗಕ್ಕೆ ಸೇರಿದುದೇ ಅಲ್ಲದೆ, ಜೀವಕ್ಕೆ ಪುರುಷ ಸ್ತ್ರೀ ಎಂಬ ಭೇದವಿಲ್ಲವೆಂದು ಹೇಳುತ್ತಾರೆ ಆ ಭೇದವು ಸ್ಥೂಲವಾದ ದೇಹಜನ್ಯವೆಂದು ಕೂಡ, ಹೇಳಿರುವರು ಈ ಭೇದವು ಮನುಷ್ಯ ಅಥವಾ ದ್ವಿಪಾದ, ಚತುಷ್ಪಾದ ಪ್ರಾಣಿಗಳಿಗೆ ಮಾತ್ರವೇ ಅಲ್ಲ ಕ್ರಿಮಿ, ಕೀಟ, ವೃಕ್ಷ, ಗುಲ್ಮಲತಾದಿಗಳಿಗೂ ಇರುತ್ತದೆ ಜೀವನು ತನ್ನ ಮನೋಭಾವದಿಂದಲೂ, ಕರ್ಮದಿಂದಲೂ ದೇಹಗಳನ್ನು ಸಂಪಾದಿಸಿಕೊಳ್ಳುವನು ಜೀವನು ಮಾತೃಗರ್ಭದಲ್ಲಿ, ಶಕ್ತಿಶೂನ್ಯನಾಗಿ ಕಟ್ಟುಬಿದ್ದಿರುವ ಕಾಲದಲ್ಲಿ ಸೃಷ್ಟಿಗೆ ಬಂದುದು ಮೊದಲು ಆ ವರೆಗೆ ತನ್ನಿಂದ ಆಚರಿಸಲ್ಪಟ್ಟ ಸುಕೃತ ದುಷ್ಕೃತ ಕರ್ಮಗಳ ಆ ಕರ್ಮ ಸಂಬಂಧದಿಂದ ತನಗೆ ಪ್ರಾಪ್ತವಾಗಿದ್ದ ದೇಹಗಳ, ಆ ಜನ್ಮದಲ್ಲಿ ತಾನು ಜನಿಸಿದ ನಂತರ ತಾನು ಅನುಭವಿಸುವ ಸುಖ ದುಃಖಗಳ ನೆನಪು ಅವನಿಗಿರುವದೆಂದೂ, ಆಗವನು ತನ್ನ ದುಷ್ಕೃತ್ಯಕ್ಕಾಗಿ ಪಶ್ಚಾತ್ತಾಪಪಡುತ್ತಾ ಸೃಷ್ಟಿಕರ್ತನಾದ ಭಗವಂತನನ್ನು ಪ್ರಾರ್ಥಿಸುವನೆಂದೂ, ಜನನಕಾಲ ಪ್ರಾಪ್ತವಾಗಿ, ಬಹಿರ್ಮುಖನಾದೊಡನೆಯೇ ಅವೆಲ್ಲವೂ ಮರೆಯಾಗಿ ಹೋಗುವವೆಂದೂ ಹೇಳುವರು ಅದೂ ಹಾಗಿರಲಿ ಈ ಕಾಲದಲ್ಲಿರುವ ಕೆಲವು ಮುದಿ ಮಹನೀಯರು ಹೇಳುವದೆಂದರೆ, 'ಪ್ರತಿಯೊಬ್ಬರೂ ಪ್ರತಿದಿನದ ರಾತ್ರಿಯಲ್ಲಿ, ಅಂದಿನ ತನ್ನ ಕಾರ್ಯಕಲಾಪಗಳೆಲ್ಲವನ್ನೂ ಮುಗಿಯಿಸಿ, ವಿಶ್ರಾಂತಿಗಾಗಿ ಮಲಗುವದಕ್ಕೆಂದು ಹಾಸಿಗೆಯ ಮೇಲೆ ಮಲಗಿದೊಡನೆ, ಆ ದಿನದಲ್ಲಿ ತಾನು, ಮನಸ್ಸಿನಿಂದಲೂ, ವಾಕ್ಕಿನಿಂದಲೂ, ಕರ್ಮದಿಂದಲೂ, ನಡೆಯಿಸಿದ ಕಾರ್ಯ

* (ಭೋಜಚರಿತ್ರ ಪುಟ ೧೯೬, ಶ್ಲೋಕ ೬೩೩ ಕಾಳಿದಾಸ ಬ್ರಹ್ಮರಾಕ್ಷಸ ಸಂವಾದವನ್ನು ನೋಡುವದರಿಂದ ವಿಷಯವು ಸ್ಪಷ್ಟಪಡುತ್ತದೆ ಸಂ )

ಕಲಾಪಗಳ ವಿಚಾರಮಾಡಿಕೊಂಡು, ದೋಷವೆಂದು ತಿಳಿದುಬಂದವುಗಳನ್ನು ನೆನಪಿನಲ್ಲಿಟ್ಟು, ಮುಂದೆ ತಾನು ಅಂತಹ ದೋಷಕರವಾದ ಕ್ರಿಯಾ ಕಲಾಪಗಳಲ್ಲಿ ಪ್ರವರ್ತಿಸುವುದಿಲ್ಲವೆಂದು ಸಂಕಲ್ಪಮಾಡಿ, ಹಿಂದೆ ನಡೆದು ಹೋದ ತಪ್ಪಿತಕ್ಕಾಗಿ ಭಗವಂತನಲ್ಲಿ ಕ್ಷಮೆಯನ್ನು ಪ್ರಾರ್ಥಿಸಿ, ನಿದ್ರಿಸುತ್ತಾ ಬಂದರೆ, ದಿನಕ್ರಮದಲ್ಲಿ ಅವರೂ ಭೂತ ಭವಿಷ್ಯದ್ವರ್ತಮಾನಗಳೆಂಬ ತ್ರಿಕಾಲಜ್ಞಾನಿಗಳಾಗುವರೆಂಬುದೇ " ಆಗಿದೆ ಇದು ಅನುಭವದಿಂದ ಎಲ್ಲರೂ ತಿಳಿಯತಕ್ಕದ್ದೂ ಆಗಿರುವದು.

ಜೀವನು, ಸ್ತ್ರೀಪುಂ ಭೇದವುಳ್ಳವನಲ್ಲವೆಂಬುದರಿಂದಲೇ ಮೇಲೆ ಹೇಳಿದ ಸುಗುಣಗಳನ್ನು ಸಂಪಾದಿಸಿ, ಅಭಿವೃದ್ಧಿಪಡಿಸಿಕೊಳ್ಳುವದಕ್ಕಾಗಿ ಪ್ರಯತ್ನಪಡಬೇಕು ಪ್ರತಿಯೊಂದು ಪ್ರಾಣಿಯೂ ಸುಖ ಸಂತೋಷಗಳನ್ನು ಬಯಸುವದೇ ಹೊರತು, ಕಷ್ಟವನ್ನೂ ದುಃಖವನ್ನೂ ಅಪೇಕ್ಷಿಸುವದಿಲ್ಲ ಇನ್ನು ಮನುಷ್ಯರನ್ನು ಕುರಿತು ಹೇಳುವದೇನು? ಆದರೆ ಅಪೇಕ್ಷಿಸಿದ ಮಾತ್ರದಿಂದ ಸುಖ ಸಂತೋಷವು ಲಭಿಸುವುದಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ ಕಷ್ಟ-ಸುಖ, ದುಃಖ-ಸಂತೋಷಗಳು ತಮ್ಮ ಕಾರ್ಯಕಲಾಪದಿಂದಲೇ ಸಂಭವಿಸುವವೆಂದು ತಿಳಿದು ಆಚರಿಸಬೇಕು ಇದರಲ್ಲಿಯೂ ಸ್ತ್ರೀ ಪುಂ ಭೇದವಿಲ್ಲ

ಜಗತ್ಕರ್ತನು ಈ ರೀತಿ ಸ್ತ್ರೀ. ಪುಂ ಭೇದಗಳನ್ನು ಕಲ್ಪಿಸಿದ ಉದ್ದೇಶವೇನಾಗಿರಬಹುದೆಂಬುದನ್ನು ವಿಚಾರ ಮಾಡದೆ ಮನಸ್ಸು ಪರಿಪಕ್ವವಾಗುವದಿಲ್ಲ 'ಪುರುಷ-ಸ್ತ್ರೀಯರು, ಕೇವಲ ಸೇವ್ಯ-ಸೇವಕ ಭಾವದಿಂದ ವರ್ತಿಸುತ್ತಿರಬೇಕೆಂದೇ, ಈ ಭೇದಕಲ್ಪನೆಯೋ? ಎಂದಿಗೂ ಆದಾಗಲಾರದು ಮತ್ತೆ? ಶಕ್ತನಾದ ಜೀವನಿಗ ಜಡವಾದ ದೇಹವು ಲಭಿಸದಿದ್ದರೆ ಹೇಗೆ ಅಶಕ್ತನಾಗುವನೋ, ಜೀವಸಾನ್ನಿಧ್ಯವು ತಪ್ಪಿದರೆ ದೇಹವು ಹೇಗೆ ನಿರರ್ಥಕವಾಗುವುದೋ, ಹಾಗೆಯೇ ಪುರುಷ-ಸ್ತ್ರೀಯರ ಸಂಬಂಧವಿರಬೇಕೆಂದು ಜಗತ್ಕರ್ತನು ಈ ಭೇದವನ್ನು ಕಲ್ಪಿಸಿರಬೇಕೆಂದರೆ ತಪ್ಪೆನಿಸದು ದೇಹಕ್ಕೆ ಉಪಾಧಿ ತಟ್ಟದಂ

ತೆಯೂ, ಮರ್ಯಾದೆಯು ಬರುವಂತೆಯೂ ಜಾಗರೂಕತೆಯಿಂದ, ಕೈ-ಕಾಲು-ಕಣ್ಣು ಮೊದಲಾದವುಗಳು ಜೀವನಿಗೆ ಹಿತಕರವಾಗಿ ಆಚರಿಸುವಂತೆ, ತನ್ನ ಅಧೀನವಾದ ಮನಸ್ಸು, ಬುದ್ಧಿ, ಇವುಗಳ ಪ್ರೇರಣೆಯಿಂದ ಜೀವನು ನೋಡಿಕೊಳ್ಳಬೇಕು ಹಾಗಿದ್ದರೆ ಈ ದೇಹವು ಸುಖ-ಸಂತೋಷಗಳನ್ನು ಅನುಭವಿಸಬಹುದು. ವ್ಯತಿರೇಕವಾದರೆ ಕಷ್ಟ-ದುಃಖಗಳೇ ಬರುವವು ಈ ಭಾವನೆಯೇ ಸ್ತ್ರೀಪುರುಷರೆಲ್ಲರಲ್ಲಿಯೂ ಇರಬೇಕು.

ಪ್ರತ್ಯಕ್ಷದಲ್ಲಿ ಗೋಚರವಾಗುವದು ದೇಹದ ಕಾರ್‍ಯಕಲಾಪಗಳೇ ಆದುದರಿಂದಲೂ, ಜೀವನ ಪ್ರೇರಣೆಯು ವಿಚಾರದಿಂದ ತಿಳಿಯಬೇಕಾದುದರಿಂದಲೂ ಮೊದಲು, ಸ್ತ್ರೀಯರ ಕಾರ್‍ಯ-ಕಲಾಪಗಳೇ ಮೊದಲಾದವುಗಳನ್ನು ಪ್ರಸ್ತಾಪಿಸುವೆವು

ಪ್ರಪಂಚ ವ್ಯಾಪಾರದಲ್ಲಿ ಸ್ತ್ರೀಯರ ಮೇಲೆ ಬಿದ್ದಿರುವ ಹೊರೆ ಹೆಚ್ಚೋ ಪುರುಷರ ಮೇಲೆ ಬಿದ್ದಿರುವ ಹೊರೆಹೆಚ್ಚೋ ಎಂಬ ವಿಚಾರವೇ ಮೊದಲನೆಯದು ನಿಸ್ಸಂದೇಹವಾಗಿಯೂ ಸ್ತ್ರೀಯರ ಮೇಲೆ ಬಿದ್ದಿರುವ ಹೊರೆಯೇ ಹೆಚ್ಚೆಂದರೆ ತಪ್ಪಾಗುವಂತಿಲ್ಲ. ಸ್ತ್ರೀಯರು ಗೃಹರಾಜ್ಯಭಾರವನ್ನು ಸರಿಯಾಗಿ ನಿರ್ವಹಿಸತಕ್ಕವರೂ, ಗೃಹಪತಿಗೆ ಮಾನಮರ್ಯಾದೆಯನ್ನುಂಟುಮಾಡತಕ್ಕವರೂ, ತಮ್ಮ ಸೌಶೀಲ್ಯಾದಿ ಗುಣಗಳಿಂದ ಗೃಹರಾಜ್ಯಕ್ಕೂ ಗೃಹಪತಿಗೂ ಸಂಭವಿಸಬಹುದಾದ ದುರ್ದಶೆಯನ್ನು ತಪ್ಪಿಸಲು ಶಕ್ತರೂ ಆಗಿರುತ್ತಾರೆ. ಈ ವಿಚಾರದಲ್ಲಿ ಹಿಂದೆ ನಡೆದಂತೆ ಇತಿಹಾಸಬದ್ಧವಾಗಿರುವ ತ್ರಿಪುರ ಸಂಹಾರದ ಕಥೆಯನ್ನು ನಮ್ಮ ಧರ್ಮಭಗಿನಿಯರ ಮುಂದೆ ಉದಾಹರಣವಾಗಿಟ್ಟು ದಾದರೆ ನಮ್ಮ ಅಭಿಪ್ರಾಯವು ತಪ್ಪೆನಿಸಲಾರದು —

* ತ್ರಿಪುರಾಧಿಪತಿಗಳು, ಪರಮೇಷ್ಠಿ (ಬ್ರಹ್ಮ) ಯ ವರದಿಂದ ಗರ್ವಿತರಾಗಿ, ಅಂತರಿಕ್ಷದಲ್ಲಿ ಸಂಚರಿಸತಕ್ಕ ಮೂರು ಪಟ್ಟಣ

---

* ಮುಂದೆ ಕಾಲಾವಕಾಶವಾದಂತೆ ಮೇಲಿನ ಕಥಾಭಾಗವನ್ನು ಪ್ರಚುರಪಡಿಸುವೆವು.

ಗಳನ್ನು ನಿರ್ಮಾಣಮಾಡಿಕೊಂಡು ದೇವತೆಗಳಿಗೂ, ಋಷಿಗಳಿಗೂ, ಕಂಟಕಪ್ರಾಯರಾಗಿ ಹೆಮ್ಮೆಯಿಂದ ಸಂಚರಿಸುತ್ತಿದ್ದರು ಇವರನ್ನು ನಿಗ್ರಹಿಸಿ, ಪ್ರಪಂಚಕ್ಕೆ ಉಂಟಾಗುತ್ತಿದ್ದ ಬಾಧೆಯನ್ನು ತಪ್ಪಿಸಬೇಕೆಂದು ಪರಮೇಶ್ವರನೇ ಮೊದಲಾದ ದೇವತೆಗಳು ಮಿತಿಮೀರಿದ ಸಾಹಸ ಮಾಡಿದರೂ, ತ್ರಿಪುರನಾರಿಯರ ಪಾತಿವ್ರತ್ಯ, (ಸೌಶೀಲ್ಯ)ದ ಮಹಿಮೆಯಿಂದ ಅವರ ಪ್ರಯತ್ನವೆಲ್ಲವೂ ನಿಷ್ಫಲವಾಗುತ್ತಲೆ ಬಂದವು. ಇದನ್ನರಿತು, ದುಷ್ಟ-ನಿಗ್ರಹ ಶಿಷ್ಟಪರಿಪಾಲನದಲ್ಲಿ ಸಮರ್ಥನಾದ ಜಗತ್ಕರ್ತನು ತ್ರಿಪುರದಲ್ಲಿ ಬೌದ್ಧಾವತಾರವನ್ನು ತಾಳಿ, ಮಾಯೆಯಿಂದ ತ್ರಿಪುರ ಮಹಿಷಿಯರ ಪಾತಿವ್ರತ್ಯವನ್ನು ಭಂಗಪಡಿಸಿದನೆಂದೂ ಆ ತರುವಾಯದಲ್ಲಿಯೇ ತ್ರಿಪುರವನ್ನು ದಹಿಸಲು ಪರಮೇಶ್ವರನು ಶಕ್ತನಾದನೆಂದೂ ಹೇಳಿರುವದು ಇದರಿಂದಲೇ ಸ್ತ್ರೀಯರ ಪಾತಿವ್ರತ್ಯ ಅಥವಾ ಅವರ ಸದ್ವರ್ತನದ ಮಹತ್ವವು ಎಷ್ಟು ಅಜೇಯವಾಗಿರುವದೆಂಬುದನ್ನು ತಿಳಿಯಬಹುದಾಗಿದೆಯಲ್ಲವೆ ? ಇರಲಿ

ಸ್ತ್ರೀವ್ಯಕ್ತಿಗೆ ಜ್ಞಾನಾಂಕುರವಾದುದು ಮೊದಲು ಕಡೆಯವರೆಗೂ ಲಾಲನ-ಪಾಲನ ಕ್ರಮದಲ್ಲಿಯೇ ಪ್ರವರ್ತಿಸುತ್ತಿರುವದೆಂಬುದನ್ನು ನಮ್ಮ ಸೋದರಿಯರು ಮನಗಂಡೇ ಇರಬಹುದು. ಏಕೆಂದರೆ ಸ್ತ್ರೀವ್ಯಕ್ತಿಯ ಆಟಪಾಟಗಳಿಗೂ, ಪುರುಷವ್ಯಕ್ತಿಯ ಆಟಪಾಟಗಳಿಗೂ ಶೈಶವದಿಂದ ಎಷ್ಟೋ ಭೇದಗಳಿರುವವು ಸ್ತನ್ಯಪಾನವೇ ಆಧಾರವಾಗಿಯುಳ್ಳ ಸ್ತ್ರೀವ್ಯಕ್ತಿಯು ತನ್ನ ಜೀವನಾಧಾರಪಾತ್ರವಾದ ಆ ಸ್ತನಗಳನ್ನೇ ಅನೇಕ ವಿಧದಿಂದ ಲಾಲಿಸುತ್ತ ಬರುವದೂ, ಸ್ವಲ್ಪ ದೊಡ್ಡದಾಗಿ ನಡೆ-ನುಡಿಗಳನ್ನು ಕಲಿತಬಳಿಕ, ಗೃಹರಾಜ್ಯಭಾರ ನಿರ್ವಹಣಕ್ಕೆ ಆವಶ್ಯಕವಾದ ಆಟಗಳನ್ನೂ, ಶಿಶುಪಾಲನೆಗೆ ಬೇಕಾದ ಆಟಗಳನ್ನು ಆಡುವದಕ್ಕಾಗಿ, ಬೇಕಾಗುವ ವಸ್ತುಗಳನ್ನು ಅಪೇಕ್ಷಿಸಿ, ವಯಸ್ಸಿನಲ್ಲಿ ತನಗೆ ಸ್ವಲ್ಪ ಅಧಿಕರಾದವರ ಸಹಾಯವನ್ನು ಹೊಂದಿ, ಆ ಆಟದಲ್ಲಿ ಪ್ರವರ್ತಿಸುತ್ತಿರುವದೂ ಅನುಭವಕ್ಕೆ ಬಂದ ವಿಷಯವಷ್ಟೆ! ಇದರಿಂದಲೇ ಹೆಣ್ಣುಮಕ್ಕಳು ಮೊದಲಿಂದಲೂ ಈ ಬಗೆಯ ಪ್ರವೃತ್ತಿಮಾರ್ಗದಲ್ಲಿ ಗಮನಿಸುವದು ಕೂಡ ದೈವಪ್ರೇರಣೆಯಿಂದೂ,

ಜಗತ್ಕರ್ತನು ಸ್ತ್ರೀಜಾತಿಯನ್ನು ನಿರ್ಮಿಸಿದ ಉದ್ದೇಶವೇ ಇದಾಗಿರುವದೆಂದೂ ಸ್ಪಷ್ಟಪಡುವದಲ್ಲವೆ? ಹಾಗಾದರೆ ಲಾಲನ-ಪಾಲನಗಳಲ್ಲಿ ನಿಸರ್ಗ (ಸ್ವಾಭಾವಿಕ) ವಾದ ದಕ್ಷತೆಯುಳ್ಳವರಾಗಿರುವ ಸ್ತ್ರೀಯರ ಏಳಿಗೆಯೇ ದೇಶೋನ್ನತಿಗೆ ಮುಖ್ಯವೆಂದು ಹೇಳಲು ತಡೆಯೇನು? ಎಲ್ಲಿ ಸ್ತ್ರೀಯರು ನಿರ್ದಯೆಯುಳ್ಳವರೂ, ದುಶ್ಚರಿತೆಯರೂ, ಆಗಿರುವರೋ, ಆ ದೇಶವು ಅವನತಿ ಹೊಂದಿತೆಂದೇ ತಿಳಿಯಬೇಕಲ್ಲದೆ, ಉನ್ನತಿಗೆ ಬರುವದೆಂದು ಭಾವಿಸುವಂತೆಯೂ ಇಲ್ಲ. ಹಾಗೆ ಸ್ತ್ರೀಯರ ನಡೆನುಡಿಗಳಲ್ಲಿರುವ ತಪ್ಪುಗಳನ್ನು ತಿದ್ದಿಕೊಳ್ಳುವದಕ್ಕೂ, ಚರಿತ್ರಾರ್ಹರಾದ ಆರ್ಯರಮಣಿಯರ ಇತಿವೃತ್ತಗಳನ್ನರಿತು, ಅವರ ಮಾದರಿಯನ್ನು ಅನುಸರಿಸಿ, ತಮ್ಮ ಸದ್ವರ್ತನವನ್ನು ವೃದ್ಧಿಪಡಿಸಿಕೊಳ್ಳುವದಕ್ಕೂ, ಗೃಹಪತಿಯ ಕಾರ್ಯಕಲಾಪಗಳಲ್ಲಿ ಕಾಲಕ್ಕೆ ತಕ್ಕಂತೆ ಹಿತಸೂಚನೆಗಳನ್ನು ಕೊಡುತ್ತ, ಅವರಿಗೆ ಮಾನಮರ್ಯಾದೆಗಳನ್ನು ಹೆಚ್ಚಿಸುವದಕ್ಕೂ ಸ್ತ್ರೀಯರಿಗೆ ವಿದ್ಯಾಭ್ಯಾಸವು ಅವಶ್ಯವೆಂದು ಹೇಳುವದು ಸರಿಯೇ! ಆದರೆ, ಆ ವಿದ್ಯಾಭ್ಯಾಸವು ಸ್ವಭಾವಸಿದ್ಧವಾದ ಗುಣಕರ್ಮಗಳಿಗೆ ವಿರುದ್ಧವಾದರೆ ಅನರ್ಥವನ್ನೇ ಉಂಟುಮಾಡುವದಲ್ಲದೆ, ಆರ್ಥಿಕ ಲಾಭಕ್ಕೆ ಸ್ವಲ್ಪಮಾತ್ರವೂ ಸಹಕಾರಿಯಾಗುವದೆಂದು ಭಾವಿಸುವಂತಿಲ್ಲ.

ಸ್ತ್ರೀಯರಿಗೆ ಉಚಿತವಾದ ವಿದ್ಯಾಭ್ಯಾಸವೆಂದರೆ, ಮೊದಲು ದೇಶಭಾಷಾಭ್ಯಾಸವು, ಆಬಳಿಕ ಎಲ್ಲಾ ಭಾಷೆಗಳಿಗೂ ಮೂಲವೆನ್ನಿಸುವ ಗೀರ್ವಾಣಭಾಷಾಭ್ಯಾಸವೂ ಎಲ್ಲರಿಗೂ-ವಿಶೇಷವಾಗಿ ಕಡ್ಡಾಯವಾಗಿ ಸ್ತ್ರೀಯರಿಗೆ- ಅತ್ಯಾವಶ್ಯಕವು. ಅನ್ಯಭಾಷೆಯಾದ ಆಂಗ್ಲಭಾಷೆಯು ಸರ್ವತ್ರ ವ್ಯಾಪಕವಾಗಿದ್ದು ವ್ಯಾವಹಾರಿಕ ಯುಗದ ರಾಜಭಾಷೆಯೆನಿಸಿರುವದರಿಂದ ಆ ಭಾಷೆಯ ಪರಿಚಯವು ಅವಶ್ಯಕವೇ ಸರಿ, ಆದರೂ, ಅದರಲ್ಲಿ ಸಾಮಾನ್ಯ ಪರಿಚಯವು ಸ್ತ್ರೀಯರಿಗೆ ಸಾಕಾಗಿರುವದಲ್ಲದೆ, ಪುರುಷರಿಗೆ ದೊರೆಯುವಷ್ಟರ ಪ್ರೌಢ ಶಿಕ್ಷಣವು ಸ್ತ್ರೀಯರಿಗೆ ಅಗತ್ಯವಾಗಿಲ್ಲ. ಹಾಗೆ ಸ್ತ್ರೀಯರಿಗೆ ಪ್ರೌಢಕಲಾಶಿಕ್ಷಣದ ಅಭ್ಯಾಸಕ್ಕೆ ಮೊದಲು ಮಾಡಿದರೆ ಅದಕ್ಕೆ ಕೊನೆಯೇ ಇಲ್ಲ. ಅಭ್ಯಾಸವು ನಡೆದ

ಷ್ಟು ಆಲೋಚನೆಯೂ ಹೆಚ್ಚುತ್ತದೆ. ಇದರಿಂದ ಸ್ತ್ರೀಯರ ಪಾಲಿಗೆ ಬಂದಿರುವ ಕರ್ತವ್ಯಕ್ಕೆ ಹಲವು ಬಗೆಯ ಆತಂಕಗಳುಂಟಾಗುವದೆಂದರೂ ಸುಳ್ಳಾಗುವಂತಿಲ್ಲ.*

ಸ್ತ್ರೀವರ್ಗಕ್ಕೆ ಸೇರಿದವರು ತಮ್ಮ ವಿದ್ಯಾಭ್ಯಾಸ ಕಾಲದಲ್ಲಿ ವ್ಯಾಯಾಮವನ್ನು ತೆಗೆದುಕೊಳ್ಳುವದೆಂದರೆ, ಅವರ ಗೃಹಶಿಕ್ಷಣಕ್ಕೆ ಸಂಬಂಧಪಟ್ಟ ಕಾರ್ಯಗಳಲ್ಲಿ ಕ್ರಮಕ್ರಮವಾದ ಪರಿಶ್ರಮವನ್ನೂ ಪಡೆಯುತ್ತ ಬರುವದೇ ಅಲ್ಲದೆ, ಪುರುಷರು ಮಾಡುವಂತೆ, ವಾಯುಸೇವನೆ, ಚೆಂಡಾಟ-[ಫುಟ್‌ಬಾಲ]ಕ್ರಿಕೆಟ್-ಟೆನ್ನಿಸ್ ಮೊದಲಾದವುಗಳಿಗೂ ಅಂಗಸಾಧನೆಗೂ ತೊಡಗುವದು, ಅವರ ಪ್ರಕೃತಿಧರ್ಮಕ್ಕೆ ಉಚಿತವಾದ ವ್ಯಾಯಾಮವೆನಿಸುವದಿಲ್ಲ. ಹಾಗೂ ಒಂದು ವೇಳೆ, ಅಭ್ಯಾಸ ಸಾಧನಗಳ ಬಲದಿಂದ ಸ್ತ್ರೀಯರು ಪುರುಷರಂತೆ ತಾವೂ ಆಚರಿಸಲು ಅಧಿಕಾರವಿದೆಯೆಂದು ನಡೆಯುತ್ತ ಬಂದರೆ, ಅಂತಹ ಕರ್ತವ್ಯಪರಾಙ್ಮುಖಿಯರಾಗಿರುವ ಸ್ತ್ರೀಯರು ಬಹುವಿಧವಾದ ದೂಷಣೆಗೆ ಕೂಡ ಗುರಿಯಾಗಬೇಕಾಗುತ್ತದೆ. ಎಂದರೆ, ಪ್ರೌಢಶಿಕ್ಷಣ ಹೊಂದಿ, ಪುರುಷರಂತೆ ವ್ಯಾಯಾಮ, ಅಂಗಸಾಧನೆ ಮೊದಲಾದವುಗಳಿಂದ ದೇಹದಾರ್ಢ್ಯವನ್ನು ಹೆಚ್ಚಿಸಿಕೊಂಡು, ಧೈರ್ಯದಿಂದ ಅಧಿಕಾರದಲ್ಲಿ ಪ್ರವರ್ತಿಸಿ, ಹೆಚ್ಚುಹೆಚ್ಚಾದ ವೇತನವನ್ನು ಸಂಪಾದಿಸುವದರಿಂದ ಅವರಿಗೆ ಮತ್ತ

---

* ವಿ. ಸೂ.— ಸ್ತ್ರೀಯರಿಗೆ ಎಂತಹ ಶಿಕ್ಷಣವು ಉಚಿತವಾದುದೆಂಬುದನ್ನು ಇದಕ್ಕೆ ಮೊದಲೇ (ಸ॥ ಶಿ॥ ಗ್ರಂ. ೬) ಮಾತೃನಂದಿನಿ [ಪರಿಚ್ಛೇದ ೫, ೧೩, ೧೬ ಭಾಗಗಳನ್ನು ಅಗತ್ಯವಾಗಿ ನೋಡಿರಿ] ಯಲ್ಲಿಯೂ ಚಂದವದನೆ [ಸ॥ ಶಿ॥ ಗ್ರಂಥಮಾಲಾ ಸಂಪುಟ ೫ ಅಂಕ ೧ ಅಧ್ಯಾಯವಾಗಿ ನೋಡಿರಿ.] ಯಲ್ಲಿಯೂ ತಕ್ಕಷ್ಟು ಹೇಳಿರುವದಲ್ಲದೆ, ಮುಂದೆ ಕೊಡುವದರಲ್ಲಿರುವ ಪೂರ್ಣಕಳೆಯು (ಗ್ರಂಥಮಾಲೆ ೧೦) ಷಷ್ಠಪರಿಚ್ಛೇದದಲ್ಲಿ ಸಮಗ್ರವಾಗಿ ಸಮಾಲೋಚನೆಗೆ ತಂದಿರುವೆವು. ಇವುಗಳಿಗೆ ನಮ್ಮ ದೇಶಬಾಂಧವರೂ, ದೇಶೋದ್ಧಾರದಲ್ಲಿ ಬದ್ಧದೀಕ್ಷರಾಗಿರುವ ವಿದ್ಯಾಂಗದವರೂ, ಮತ್ತು ಸ್ತ್ರೀಶಿಕ್ಷಣ ಸುಧಾರಣಾವಾದಿಗಳೂ ಸಂಪೂರ್ಣ ಲಕ್ಷ್ಯವನ್ನಿತ್ತು, ಆಚರಣೆಗೆ ತರಬಹುದೆಂಬುದನ್ನು ಸೂಚಿಸಿದರಾದರೆ ಮುಂದೆ "ಬಾಲಿಕಾಶಿಕ್ಷಾವಲ್ಲರಿ" ಎಂಬ ಬಾಲಪಾಠವನ್ನೂ ಬರೆದು ಪ್ರಚಾರಕ್ಕೆ ತರಬೇಕೆಂದಿರುವೆವು.

(ಸಂ. ನಂದಿನಿ)

ಷ್ಟು ಗೌರವವುಂಟಾಗುವದಲ್ಲವೇ ? " ಎಂದು ನಮ್ಮ ಸೋದರಿಯರು ಕೇಳಬಹುದು ಅದಕ್ಕೆ ನಮ್ಮ ಉತ್ತರವು ಇಷ್ಟೇ ! ಮೇಲೆ ಹೇಳಿದ ಆಚರಣವು ಪಾಶ್ಚಾತ್ಯ ಸ್ತ್ರೀಯರಿಗೆ ಮಾತ್ರ ರೂಢಮೂಲವಾಗಿರುವದಲ್ಲದೆ ನಮ್ಮ ಆರ್ಯರಮಣಿಯರಿಗೆ ಉಕ್ತವಾಗಿಲ್ಲ ಹಾಗೂ ಅವರ ಮಾರ್ಗವನ್ನೇ ಅನುಕರಣ ಮಾಡಬೇಕೆನ್ನುವವರು ತಮ್ಮತಮ್ಮ ಆರ್ಯ ಜನ್ಮಧಾರಣವನ್ನು ಕೂಡ ಬಿಟ್ಟುಕೊಡಬೇಕಾಗುತ್ತದೆ, ಅದರ ಮೇಲಿನ್ನೇನು ? *

ಇನ್ನು ಆರ್ಯಮಹಿಳೆಯರ ದಿನಚರ್ಯೆಯನ್ನು ಕುರಿತು ಒಂದೆರಡು ಮಾತುಗಳನ್ನಿಲ್ಲಿ ಹೇಳುವದು ಮುಂದೆ ನಿಂತಿರುವುದು ಅದನ್ನು ನಾವಾಗಿ ನಮ್ಮ ಸ್ವಂತ ಭಾಷಣದಿಂದ ಹೇಳುವದಕ್ಕಿಂತಲೂ, ಪತಿಸೇವಾತತ್ಪರತೆಯೂ, ಪ್ರಾತಸ್ಮರಣೀಯಳೂ, ದೈವಭಕ್ತಿಯುತೆಯೂ, ಕರ್ತವ್ಯನಿಷ್ಠಳೂ ಆದ ದ್ರೌಪದೀದೇವಿಯು ಸತ್ಯಭಾಮೆಯೊಡನೆ ಹೇಳಿರುವ ವಾಕ್ಯಗಳನ್ನೇ ಇಲ್ಲಿ ಎತ್ತಿ ಹೇಳುವದರಲ್ಲಿ ಅಧಿಕ ಗುಣವಿರುವದೆಂದು ಅದನ್ನೇ ಇಲ್ಲಿ ಕಾಣಿಸಿರುವೆವು ಅದೇನು ? "ಎಲೆ ಸತ್ಯಭಾಮೆ! ಪತಿಯು ಮನಸ್ಸನ್ನು ಸ್ವಾಧೀನ ಮಾಡಿಕೊಳ್ಳುವದಕ್ಕಾಗಿ ಅಜ್ಞಾನನಿವರ್ತಕವಾದ ಒಂದು ಮಾರ್ಗವನ್ನು ಹೇಳುವೆನು ಕೇಳು ಆ ಮಾರ್ಗದಲ್ಲಿ ನೀನು ನಡೆದರೆ, ನಿನ್ನ ಪತಿಯು ನಿನ್ನಲ್ಲಿ ಆಸಕ್ತನಾಗುವನು ಮೂರುಲೋಕವಲ್ಲಿಯೂ ಸ್ತ್ರೀಯರಿಗೆ ಪತಿಗೆ ಸಮಾನನಾದ ದೈವವು ಯಾವುದೂ ಇಲ್ಲ ಪತಿಯು ಸಂತುಷ್ಟನಾದರೆ ಸ್ತ್ರೀಯರಿಗೆ ಸಕಲೇಷ್ಟವೂ ಸಿದ್ಧಿಸುವುದು. ಆತನು ಕೋಪಗೊಂಡರೆ ಸಂಹಾರವನ್ನೇ ಮಾಡುವನು ಸ್ತ್ರೀಯರಿಗೆ ಪತಿಯಿಂದಲೇ ಸಂತಾನ, ನಾನಾ

---

* ಈ ವಿಷಯವಾಗಿ ಎಂದರೆ, ಮುಖ್ಯವಾಗಿ ಸ್ತ್ರೀಶಿಕ್ಷಣ, ಆರೋಗ್ಯಾಭಿವೃದ್ಧಿ, ಜ್ಞಾನಾರ್ಜನಗಳಿಗೆ ಸಹಕಾರಿಯಾದ ಅಂಗಸಾಧನದ ಪರವಾಗಿಯೂ, ಅವರ ಅಭ್ಯಾಸದ ಪರವಾಗಿಯೂ ಸಚಿತ್ರಭಾರತದ ಮೂರನೆ ವರ್ಷದ ಐದನೆ ಸಂಚಿಕೆಯಲ್ಲಿ ಪ್ರತಿಪಾದಿತವಾಗಿರುವ " ಜನನಿಯ ಜಾಗರೂಕತೆಯು " ಎಂಬ ಲೇಖನವನ್ನು ನಮ್ಮ ಭಗಿನೀ-ಬಂಧುಬಾಂಧವರೂ— ಮುಖ್ಯವಾಗಿ ಸ್ತ್ರೀಶಿಕ್ಷಣವಾದಿಗಳೂ ಅಗತ್ಯವಾಗಿ ಸಮಾಲೋಚಿಸಬೇಕೆಂದು ಅಭಿಪ್ರಾಯಪಡುವೆವು (ಸಂ ನಂದಿನಿ).

ವಿಧವಾದ ಸುಖ, ಶಯನ, ಆಸನ, ಭೋಜನ, ವಸ್ತ್ರ, ಪುಷ್ಪ, ಗಂಧ, ಉತ್ತಮವಾದ ನೋಟ, ಯಶಸ್ಸು, ಸ್ವರ್ಗ ಇವೆಲ್ಲವೂ ಪ್ರಾಪ್ತಿಸುವವು ಎಲೆ ಸತ್ಯಭಾಮೆ, ಸುಖದಿಂದ ಸುಖವು ಲಭಿಸಲಾರದು ಶ್ರಮಪಟ್ಟರೆ ಸುಖವುಂಟಾಗುವದು ಆದುದರಿಂದ ಪತಿಯು ಪ್ರೀತಿ ಮಾಡಲಿ ಎಂದು ಒಳ್ಳೇ ಮನಸ್ಸಿನಿಂದಲೂ, ವಿಶ್ವಾಸದಿಂದಲೂ ಕಾಯಕ್ಲೇಶವನ್ನು ಮಾಡುತ್ತ, ಆತನ ಶುಶ್ರೂಷೆಯಲ್ಲಿ ಆಸಕ್ತಳಾಗಿ, ಆತನಿಗೆ ಭೋಜನ, ಗಂಧ, ಮಾಲಿಕೆ, ಮೊದಲಾದವುಗಳಿಂದ ಉಪಚಾರ ಮಾಡುತ್ತ ದಾಕ್ಷಿಣ್ಯಪರಳಾಗಿರು ಇದನ್ನು ತಿಳಿದು ನಿನ್ನ ಪತಿಯು ನಿನ್ನವನಾಗುವನು ನಿನ್ನ ಪತಿಯು ಮನೆಗೆ ಬಂದರೆ ಆತನಿಗೆ ಪೀಠವನ್ನು ಕೊಟ್ಟು, ಪಾದವನ್ನು ತೊಳೆದು ಸತ್ಕರಿಸು ಆತನು ದಾಸಿಯರಿಗೆ ಆವದಾದರೂ ಕಾರ್ಯವನ್ನು ಹೇಳಿದರೆ ನೀನೇ ಎದ್ದು ಹೋಗಿ ಆ ಕೆಲಸವನ್ನು ಮಾಡು . ನಿನ್ನ ಪತಿಯು ನಿನ್ನ ಸಮೀಪದಲ್ಲಿ ಯಾವದಾದರೂ ಮಾತನಾಡಿದರೆ ಅದನ್ನು ಗೋಪ್ಯವಾಗಿಡು.... .ಆತನಿಗೆ ಪ್ರಿಯರಾದವರನ್ನು ಉಪಚಾರದಿಂದ ಭೋಜನ ಮಾಡಿಸು ಆತನಿಗೆ ಅಹಿತರಾದವರನ್ನು ತ್ಯಜಿಸು ಆತನಲ್ಲಿ ಅಹಂಕಾರ ಮದಗಳನ್ನು ಬಿಟ್ಟು ಸಹಜವಾದ ಅಭಿಪ್ರಾಯವನ್ನು ತೋರಿಸು. ಸುಶೀಲೆಯರೂ, ಕುಲೀನೆಯರೂ ಆಗಿರುವ ಸ್ತ್ರೀಯರ ಸಹವಾಸ ಮಾಡು ..... ದುರ್ನಾರಿಯರ ಸಂಗಡ ಮಾತನಾಡಬೇಡ " ಇತ್ಯಾದಿಯಾಗಿ ಹೇಳಿರುವಳು [ಇನ್ನು ಹೆಚ್ಚು ವಿವರವನ್ನು ತಿಳಿಯಲುಳ್ಳವರು ಮಹಾಭಾರತದ ಅರಣ್ಯಪರ್ವದ ೨೩೨-೨೩೩ನೆ ಅಧ್ಯಾಯಗಳನ್ನು ನೋಡಿರಿ)

ಇದಲ್ಲದೆ ಸ್ತ್ರೀಯರ ದಿನಚರ್ಯೆಯಲ್ಲಿ ಇನ್ನೂ ಹಲವು ಕಾರ್ಯಭಾಗಗಳು ಅಡಕವಾಗಿರುವವು. ಒಟ್ಟಿನಲ್ಲಿ--ಗೃಹರಾಜ್ಯಪಾಲನೆಯಲ್ಲಿ ಗೃಹಿಣಿಯೂ, ಗೃಹಪತಿಯೂ ಸಮಾನಾಧಿಕಾರವುಳ್ಳವರೇ ಆಗಿದ್ದರೂ, ಗೃಹಕಾರ್ಯನಿರ್ವಹಣದಲ್ಲಿ ದೇಹಶ್ರಮವೂ ಸುಖದುಃಖಗಳೂ ಗೃಹಿಣಿಗೆ ವಿಶೇಷವಾಗಿಯೇ ಇರುವದೆಂಬುದು ಎಲ್ಲರಿಗೂ ತಿಳಿದ ಅಂಶವೇ ಆಗಿದೆ.

ಮಕ್ಕಳು, ಮೊದಲು ತಾಯಿಯ ಗುರುತನ್ನೂ, ಧ್ವನಿಯನ್ನೂ
ತಿಳಿದುಕೊಂಡು, ಅವಳ ಮುಖದಿಂದ ಇತರರ ಗುರುತನ್ನೂ ಧ್ವನಿ
ಯನ್ನೂ ತಿಳಿದುಕೊಳ್ಳುವರು, ಗರ್ಭಧಾರಣವು ಮೊದಲು, ಜನನವಾದ
ನಂತರ ಶಿಶುವು ಅವಯವಗಳ ಸ್ವಾಧೀನತೆಯನ್ನು ಹೊಂದುವವರೆಗೂ
ತಾಯಿಯಾದವಳು ತನ್ನ ದೇಹಪೋಷಣೆಗೂ, ಭೋಗಕ್ಕೂ ಆಶೆಪಡದೆ
ಗರ್ಭ ಮತ್ತು ಶಿಶುಸಂರಕ್ಷಣದಲ್ಲಿ ನಿರತಳಾಗಿ, ವಿಚಿತ್ರತರವಾಗಿ ಒದ
ಗುವ ಯಾತನೆಗಳನ್ನು ಅನುಭವಿಸುವಳು ಅಷ್ಟಾದರೂ, ಗರ್ಭಕ್ಕಾ
ಗಲಿ, ಶಿಶುವಿಗಾಗಲಿ, ಹಾನಿತಟ್ಟಲೆಂದು ಅವಳು ಮನಸ್ಸಿಂದ ಕೂಡ
ಚಿಂತಿಸುವದಿಲ್ಲ ಇಂತಹ ಪರಮ ಕಾರುಣ್ಯಮಯಸ್ವರೂಪಿಣಿಯೂ,
ಸಂತಾನಾಭಿವೃದ್ಧಿಯಲ್ಲಿ ನಿರಂತರವಾದ ಚಿಂತನವುಳ್ಳವಳೂ, ಕ್ಷಮಾ
ವತಿಯೂ ಆಗಿರುವ ಮಾತೃದೈವದಲ್ಲಿ ಮಕ್ಕಳು ಎಷ್ಟರಮಟ್ಟಿಗೆ ಕೃತ
ಜ್ಞರಾಗಿರಬೇಕೆಂಬುದನ್ನು ಈ ಶುಷ್ಕ ಲೇಖನಿಯು ವರ್ಣಿಸಲಾರದು
ದಾಗಿದೆ ಆದುದರಿಂದಲೇ, 'ನಾರಿ' ಎಂದರೆ [ನ-ಅರಿ] ಶತ್ರುತ್ವಬುದ್ಧಿ
ಯಿಲ್ಲದವಳೆಂಬ ಹೆಸರು ಸ್ತ್ರೀವರ್ಗಕ್ಕೆ ಪ್ರಸಿದ್ಧವಾಗಿರುವದು

ಸಾರಾಂಶ-- ಬಾಲೆಯರು ತಮ್ಮ ಆಟಪಾಟಗಳಿಂದ ತಾಯಿ
ತಂದೆಯರನ್ನು ಸಂತೋಷಪಡಿಸುತ್ತಿದ್ದು, ಕನ್ಯೆಯರಾಗಿ, ತಮ್ಮ ಪಾಣಿ
ಗ್ರಹಣ ಮಾಡುವದಕ್ಕಾಗಿ ಬರುವ ತರುಣರ ದೃಷ್ಟಿಗೆ ಸಂತೋಷ
ಪಡಿಸುತ್ತಿದ್ದು, ಗೃಹಿಣಿಯರಾಗಿ ಪತಿರಾಜರ ಮನೆಯನ್ನು ಸೇರಿ,
ಅತ್ತೆ ಮಾವಂದಿರನ್ನೂ, ಅತ್ತಿಗೆ-ನಾದಿನಿಯರನ್ನೂ, ಭಾವ-ಮೈದುನ
ರನ್ನೂ ತನ್ನ ವಿನಯ ಕರ್ತವ್ಯದಕ್ಷತೆಗಳಿಂದ ಸಂತೋಷಪಡಿಸುತ್ತ,
ಪತಿರಾಜರನ್ನು ಪರಮಾತ್ಮ ಭಾವನೆಯಿಂದ ಸೇವಿಸುತ್ತ, ಪುತ್ರವತಿಯ
ರಾಗಿ ಮಾತೃಭಾವವನ್ನು ಹೊಂದಿ, ಪುತ್ರ-ಪುತ್ರಿಯರನ್ನು ತಮ್ಮ
ಸದ್ವರ್ತನದ ಆದರ್ಶಪೂರ್ವಕವಾದ ಉತ್ತಮ ಶಿಕ್ಷಣದಿಂದ ಅಭ್ಯು
ದಯ ಸ್ಥಿತಿಗೆ ತಂದು, ಹೀಗೆ ತನ್ನ ಕಾರ್ಯದಕ್ಷತೆಯಿಂದ ಗೃಹರಾಜ್ಯಕ್ಕೆ
ಸೇರಿದ ಸಮಸ್ತರಿಗೂ ಚಕ್ರವರ್ತಿನಿಯರಂತೆ ನಿಷ್ಕಲಂಕವೂ ದಿಗಂತ
ವ್ಯಾಪಕವೂ ಆದ ಯಶೋಧಾವಲ್ಯದಿಂದ ಪ್ರಕಾಶಿಸುವಂತಾಗುವದೇ
ಸ್ತ್ರೀಜನ್ಮಧಾರಣದ ಸಾರ್ಥಕತೆಯು. ಹೀಗಾಗಬೇಕೆಂಬ ಉದ್ದೇಶವೂ,

ತಕ್ಕಂತೆ ಪ್ರಯತ್ನವೂ ನಮ್ಮ ಸೋದರೀ ಸಾಮಾನ್ಯಕ್ಕೆಲ್ಲಾ ಇರಬೇಕಾದುದೂ ಅವಶ್ಯಕವು ಮೇಲೆ ಹೇಳಿದ ಸದ್ಗುಣಗಳು ನಮ್ಮವರಲ್ಲಿ ದಿಕ್ಪ್ರಕಾಶತ್ವವನ್ನು ಹೊಂದುವಂತಾದ ಮೇಲೆಯೇ ನಮ್ಮ ದೇಶವು ಉನ್ನತಿಗೆ ಬರಬೇಕಾಗಿರುವದು ಹಾಗಿಲ್ಲದೆ ಸ್ತ್ರೀಯರು ದುರಾಚಾರಕ್ಕೆ ಒಳಗಾದರೆ ಅವರಿಂದ ಅವರ ಕುಲವೂ, ಕುಲದಿಂದ ಸಮಾಜವೂ, ಅವೆರಡರ ದೆಸೆಯಿಂದ ದೇಶವೂ ಹೀನಸ್ಥಿತಿಗಿಳಿಯುವದು. ಇದಕ್ಕಾಗಿಯೇ "ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರ" ಎಂದು ಗೀತೆಯಲ್ಲಿ ಹೇಳಿಲ್ಲವೆ? ಸ್ತ್ರೀಯರು ತಮ್ಮ ಸೌಶೀಲ್ಯವನ್ನು ಭದ್ರವಾಗಿ ಸಂರಕ್ಷಿಸಿಕೊಳ್ಳುತ್ತಿರುವವರಾದರೆ, ಅವರಿಗೆ ಪುರುಷರಿಂದ ಯಾವತರದ ಭಂಗವೂ ಉಂಟಾಗಲಾರದೆಂದು ಮತ್ತೆ ಮತ್ತೆಯೂ ಹೇಳಬೇಕೆ? ಸದ್ಯಕ್ಕೆ ಇಂದಿನ ಭಾಷಣವನ್ನು ಇಷ್ಟಕ್ಕೆ ನಿಲ್ಲಿಸುವದು ಒಳ್ಳೆಯದೆಂದು ತೋರಿದುದರಿಂದ, ನಮ್ಮ ಧರ್ಮಭಗಿನಿಯರೇ! ಈ ವರೆಗೆ ಹೇಳಿದುದರಲ್ಲಿ ಕಟುವಾದ ಅಂಶವೇನಾದರೂ ಇದ್ದರೂ ಕ್ಷಮಿಸಿ, ಸ್ತ್ರೀವರ್ಗಕ್ಕೆ ಹೊದ್ದಿರುವ ಅಪವಾದವನ್ನು ಹೋಗಲಾಡಿಸಿ, ಕರ್ತವ್ಯತತ್ಪರರಾಗಿ, ಸೌಶೀಲ್ಯಾದಿ ದೇದೀಪ್ಯಮಾನವಾದ ಸದ್ಗುಣಗಳಿಂದ ಭಾರತಮಾತೆಯು ಸಂತೋಷವನ್ನೂ, ಕೀರ್ತಿಯನ್ನೂ, ಸಂಪತ್ತಿಯನ್ನೂ ಹೆಚ್ಚಿಸಲು ಸಹಸಾ ಪ್ರಯತ್ನಪಡುವಿರೆಂಬ ನಂಬುಗೆಯಿಂದ ಇಂದಿನ ಈ ಭಾಷಣಕ್ಕೆ ಇಷ್ಟಕ್ಕೆ ವಿರಮಿಸುತ್ತೇವೆ

[ಸಶೇಷ]

ವೃತ್ತಮಣಿ ವೆಂಕಟ ಕೃಷ್ಣಯ್ಯಂಗಾರ್ಯ

॥ ಶ್ರೀ ॥

# ಈಶ್ವರಲಕ್ಷಣಮ್

(ಅವತಾರಿಕಾ)

"ಯಥಾರ್ಥವಾದ ಪರಮಾತ್ಮಬೋಧೆಯು ಮಾನವಪ್ರಜ್ಞಾತೀತವೆಂದು ಸಾಮಾನ್ಯವಾಗಿ ತಿಳಿಯಲ್ಪಟ್ಟಿದೆ ಸಂಶಯಾವಿಷ್ಟಚಿತ್ತರಾದವರು, ಕರ್ಮೇಂದ್ರಿಯಗಳಿಂದಲೂ, ಜ್ಞಾನೇಂದ್ರಿಯಗಳಿಂದಲೂ ಭಗವದ್ಬೋಧೆಯು ಅಸಾಧ್ಯವೆಂದೇ ಹೇಳುವರು ಪುಣ್ಯಶೀಲನಾದ ಭಕ್ತನಿಗಾದರೋ,-- ತಾದೃಶ-- [ಅಂತಹ (ಸಂ ನಂ)] ಬೋಧೆಯು ಸಾಧ್ಯವಾಗಿ ತೋರುವದಲ್ಲದೆ ಸ್ಪಷ್ಟವಾಗಿಯೂ ಕಾಣುವದು

೨ ಲೋಕದಲ್ಲಿ, ಪ್ರತಿಯೊಬ್ಬನೂ ತನಗೆ ಯಾವ ವಿಚಾರದಲ್ಲಾದರೂ ಸಂದೇಹವು ತೋರಿದರೆ, ಆ ವಿಚಾರದಲ್ಲಿ ನಿಪುಣರಾದವರನ್ನು ಪ್ರಶ್ನೆಮಾಡಿ, ನಿಜಾಂಶವನ್ನು ಅವರಿಂದ ತಿಳಿದು, ಅದರಂತೆ ನಡೆಯಬೇಕಾದುದು ಮಾನವ ಸಹಜಪ್ರವೃತ್ತಿಯಾಗಿರುವದು ಅಜ್ಞನಾಗಿ [ತಿಳಿವಿಲ್ಲದೆ—(ಸಂ ನಂ)] ಕೆಲಸ ಮಾಡುವವನೂ, ನಂಬಿಕೆಯಿಲ್ಲದಿರುವವನೂ ಬಹುವಾಗಿ ಕ್ಲೇಶವನ್ನು ಅನುಭವಿಸುವದು, ಸಾಮಾನ್ಯವಾದ ಅನುಭವವಾಗಿದೆ ಆದುದರಿಂದ—

* "ಅಜ್ಞಶ್ಚ, ಅಶ್ರದ್ದಧಾನಶ್ಚ, ಸಂಶಯಾತ್ಮಾ ವಿನಶ್ಯತಿ" ಎಂಬ ಗರ್ಹಣೆಯು [ನಿಂದೆ, ಆಕ್ಷೇಪ, ದೋಷ ಇತ್ಯಾದಿ-(ಸಂ, ನಂ.)] ನಮಗೆ ದೂರವಾಗಿರಲಿ, ಭಕ್ತರಿಗೆ ನಮ್ಮ ವಂದನೆಗಳಿರಲಿ ।

೩. ಇವರು, (ಭಕ್ತರು) ಹೇಳುವಂತೆ ಈಶ್ವರಬೋಧೆಯು ಸಂಭಾವ್ಯವೆಂದೂ ಸಾಧ್ಯವೆಂದೂ ಅಂಗೀಕರಿಸಿದರೆ, ಅದರ ಘಟನೆಯು ಹೇಗೆ ಆಗುವದೆಂಬ ಪ್ರಶ್ನೆಯು ಹುಟ್ಟುವದು ಯದ್ಯಪಿ,

---

* [ತಿಳಿವಿಲ್ಲದವನಿಗೂ ನಂಬಿಕೆಯಿಲ್ಲದವನಿಗೂ ಕೇಡುಂಟಾಗುವದೆಂಬ ಭಾವವು] — ಸಂ. ನಂದಿನಿ.

[ಆದರೂ (ಸಂ ನಂ.)] † " ಸಮೋಽಹಂ ಸರ್ವ ಭೂತೇಷು, ನಮೇ ದ್ವೇಷ್ಯೋಽಸ್ತಿ ನ ಪ್ರಿಯಃ " ಎಂಬಂತೆ ಪರಮೇಶ್ವರನು ಸಮಸ್ತ ದೇಹಿಗಳಿಗೂ ಸರ್ವಸಮನಾಗಿದ್ದರೂ, "ಪ್ರಾಣಿನ ಕರ್ಮವಶಗಾ " ಎಂಬ ರೀತ್ಯಾ ದೇಹಿಗಳು ಸ್ವಕೀಯ ಶುಭಾಶುಭ ಫಲಗಳನ್ನು ಅನುಭವಿಸುತ್ತಿರುವದು ಆರಿಗೆ ತಾನೆ ಅರವಿಲ್ಲ? ತತ್ತತ್ಕರ್ಮಾನುಗುಣಫಲಪ್ರದನಾದುದರಿಂದಲೇ ಪರಮೇಶ್ವರನಿಗೆ 'ವಿಧಾತಾ' ಎಂಬ ನಾಮಾಂತರವೂ ಇರುವದು

೪ " ಅಹಂ ಬ್ರಹ್ಮಾಸ್ಮಿ" " ಅಯಮಾತ್ಮಾಬ್ರಹ್ಮ" " ಸರ್ವಂ ಖಲ್ವಿದಂ ಬ್ರಹ್ಮ" ಇತ್ಯಾದಿ ಉಪನಿಷದ್ವಾಕ್ಯಗಳ, ಮತ್ತು ಕೇವಲ ಶಬ್ದಾರ್ಥತೃಪ್ತರಾದ ವಿದ್ವನ್ಮಣಿಗಳ 'ಸೋಽಹಂ' ಭಾವವನ್ನು ಮಾನ್ಯ ಮಾಡಿದರೂ, ವಿಶ್ವರೂಪದಲ್ಲಿ ಒಂದುಕಡೆ, ಸ್ಥಾವರ-ಜಂಗಮಗಳಿಗೂ ಮತ್ತೊಂದು ಕಡೆ, ಕ್ರಿಮಿ-ಕೀಟ-ಪಶ್ವಾದಿಗಳಿಗೂ, ಇನ್ನೊಂದು ಕಡೆ ತಿರ್ಯಗ್ಜಂತು ಮಾನವರಿಗೂ ಪರಸ್ಪರ ವೈಲಕ್ಷಣ್ಯವು ಸ್ಪಷ್ಟವಾಗಿ ಕಾಣುತ್ತ, ವಿಚಾರಣಾಶಕ್ತಿಯುತನಾದುದರಿಂದ ಸೃಷ್ಟಿಯಲ್ಲಿ ಮನುಷ್ಯನೇ ಶ್ರೇಷ್ಠನೆಂದು ಮನುಷ್ಯರೆಲ್ಲರೂ ಅರಿತಿರುವರು ಈ ವಿಧವಾದ ಅಹಂಭಾವವನ್ನು ನಾವೂ ದೂರೀಕರಿಸುವದಿಲ್ಲ ಏಕೆಂದರೆ—

" * ವಿದ್ಯಾ ವಿನಯಸಂಪನ್ನೆ ಬ್ರಾಹ್ಮಣೇ ಗವಿ ಹಸ್ತಿನಿ-।
ಶುನಿ-ಚೈವ, ಶ್ವಪಾಕೇಚ, ಪಂಡಿತಾ ಸಮದರ್ಶಿನಃ ॥ "

ಎಂಬ ತತ್ವಶಾಸ್ತ್ರಾನುಶಾಸನವು, ಪರಸ್ಪರ ಭೇದಬುದ್ಧಿಯಿಂದ ನಾವು ಯಾರಿಗೂ ಹಿಂಸೆಯನ್ನುಂಟು ಮಾಡದೆ ಸಾಮಾನ್ಯವಾಗಿ ಎಲ್ಲರಿಗೂ ಹಿತಕಾರಿಗಳಾಗಿರಬೇಕೆಂಬ

---

† [ಇವನು ತನ್ನವನು, ಅವನು ಪರಕೀಯನು, ಎಂಬ ಭೇದವನ್ನಿಡದೆ ಸಮಸ್ತರಲ್ಲಿಯೂ ಸಮಭಾವವನ್ನಿಡುವದೆಂದು ಭಾವವು] (ಸಂ ನಂ)

* ವಿದ್ಯಾವಿನಯಸಂಪನ್ನನಾದ ಬ್ರಾಹ್ಮಣನಲ್ಲಿಯೂ, ಹಸುವಿನಲ್ಲಿಯೂ ಆನೆಯಲ್ಲಿಯೂ, ನಾಯಿಯಲ್ಲಿಯೂ, ಮತ್ತು ಚಂಡಾಲನಲ್ಲಿಯೂ ಜ್ಞಾನಿಗಳು ಪರಮಾತ್ಮನನ್ನು ಸಮಭಾವದಿಂದ ನೋಡುವರು ಎಂದು ಭಾವವು [ಸಂ ನಂ]

ಧರ್ಮಬೋಧಕಪರಮಾತ್ರವಾಗಿರುವದು * (ಹಾಗಿಲ್ಲದೆ) ತಾನು "ಆತ್ಮಜ್ಞಾನಿ" ಎಂದು ಯಾವನಾದರೂ ಒಬ್ಬನು, "ಮನುಷ್ಯ"ನನ್ನು "ನಾಯಿ" ಯಂತೆ ಕಾಣುವನೆಂದರೆ, ಅಂತಹ ಮುಮುಕ್ಷುವಿಗೆ (?) "ವಾತುಲಾಶ್ರಮ" ವೇ ಉಚಿತಸ್ಥಾನವೆಂದು ನಮಗೆ ತೋರುವದು

ಈ ಮಾನವಸಾಮಾನ್ಯದಲ್ಲಿಯೂ ತತ್ವಜ್ಞನಾಗಿ, ಸಚ್ಚರಿತನಾಗಿ, ಹಾಗೂ ಲೋಕೋಪಕಾರಿಯಾದವನು, ಸರ್ವರಿಗೂ ಮಾರ್ಗದರ್ಶಕನೆಂದು ಪರಿಷ್ಕರಾದವರು ಪ್ರಮಾಣಿಸುವರು. ಮಾನುಷಸಾಮಾನ್ಯ ಧರ್ಮಾಚರಣ ಪಾರೀಣರಾಗಿ, ವಿಶೇಷ ಧರ್ಮಾನುಷ್ಠಾನ ತತ್ಪರರಾದ ತಾದೃಶ ಮಹನೀಯರ ವಿಚಾರದಲ್ಲಿ ಭಗವನ್ನುಬೋಲ್ಲಾಸವು, ವಿಶೇಷತ ಉಂಟಾಗಿ, ತತ್ಫಲರೂಪ ದಿವ್ಯಜ್ಞಾನಚಕ್ಷುಸ್ಸಿನಿಂದ ಅನುಗೃಹೀತರಾಗಿ ಅವರು —

"। ಯತ್ತೇರೂಪಂ ಕಲ್ಯಾಣತಮಂ ತತ್ತೇರೂಪಂ ಪಶ್ಯಾಮಿ" ಎಂಬ ಉಪನಿಷದ್ವಾಕ್ಯದಂತೆ ಮಾನವ ಪ್ರಕೃತಿಗೆ ಉಚಿತ ರೀತಿಯಲ್ಲಿ ಭಗವದ್ದಿವ್ಯಮಂಗಳಮೂರ್ತಿಯನ್ನು ಸಾಕ್ಷಾತ್ಕರಿಸಿ ಸರ್ವದಾ, ಹೃದಯಭವನದಲ್ಲಿ ಆರಾಧಿಸುವರು ಪುಣ್ಯಪುರುಷರಾದ ಅವರಿಗೆ ಮಾತ್ರವೇ ಅನಿರ್ವಚನೀಯವಾದ ಪರಮಾತ್ಮಬೋಧೆಯುಂಟಾಗುವದೆಂಬ ಅಂಶವು—

---

"ಮತ್ಕರ್ಮಕೃತ್, ಮತ್ಪರಮ, ಮದ್ಭಕ್ತ ಸಂಗವರ್ಜಿತ ।
ನಿರ್ವೈರ ಸರ್ವಭೂತೇಷು ಯ ಸ ಮಾಮೇತಿ ಪಾಂಡವ ॥"
—ಗೀ ಅ ೧೧ ಶ್ಲೋಕ ೫೫ [ಸಂ. ನಂ]

* Lunatic Asylum—ಹುಚ್ಚರ ಆಸ್ಪತ್ರೆ— [ವಾತುಲಾಶ್ರಮ]
[ಸಂ ನಂದಿನಿ]

। "ನಿನ್ನ [ಪರಮೇಶ ರನನ್ನು ಕುರಿತು] ಅನಂತರೂಪಗಳಲ್ಲಿ ಕೇವಲ ಮಂಗಲಕರವಾದ ಸ್ವರೂಪವಾವದೋ, ಅದನ್ನು ನಾನು (ಇಲ್ಲಿ ಭಕ್ತನು ಹೇಳಿಕೊಳ್ಳುವದು) ನೋಡುತ್ತೇನೆ" ಎಂಬ ಅಭಿಪ್ರಾಯವು ಇದಕ್ಕನುಸಾರವಾಗಿ—

"ತದೇವಮೇ ದರ್ಶಯ ದೇವ ರೂಪಂ ಪ್ರಸೀದ ದೇವೇಶ, ಜಗನ್ನಿವಾಸ—"

ವಿಶ್ವರೂಪಸಂದರ್ಶನಾನಂತರದಲ್ಲಿ ಭಗವಂತನನ್ನು ಕುರಿತು ಅರ್ಜುನನೂ ಹೀಗೆ ಹೇಳಿರುವನು—

—ಭಗವದ್ಗೀತಾ ಅ. ೧೧ ಶ್ಲೋ ೪೫ [ಸಂ. ನಂದಿನಿ]

'ಯಮೇವೈಷ ವೃಣುತೇ ತೇನ ಲಭ್ಯ । ತಸ್ಯೈಷ ಆತ್ಮಾ ವಿವೃಣುತೆ ತನೂಂ ಸ್ವಾಂ ॥" * ಎಂಬ ಕಠೋಪನಿಷದ್ವಾಕ್ಯದಿಂದ ಸ್ಪಷ್ಟವಾಗಿರುವದು

೬ ಹೀಗೆ ಭಗವತ್ಕೃಪಾವಿಶೇಷದಿಂದ ಭಗವದ್ಬೋಧೆಯುಂಟಾಗುವದೆಂದು ನಂಬಿದರೆ, ಸೃಷ್ಟ್ಯಾದಿಯಿಂದಲೂ ಯಾರು ಯಾರಿಗೆ, ಆವಾವ ದೇಶಕಾಲಗಳಲ್ಲಿ, ಹೇಗೆ ಭಗವತ್ಸಾಕ್ಷಾತ್ಕಾರವು ಲಭಿಸಿರುವದು– ಎಂಬ ಪ್ರಶ್ನೆಯು ಸಹಜವಾಗಿ ಹುಟ್ಟುವದು. ಈ ಭಾಗದಲ್ಲಿ ನಮಗೆ ಆಪ್ತವಾಕ್ಯವೇ ಪ್ರಮಾಣವು ಶಾಂತರಾಗಿ, ಭಕ್ತಿಯಿಂದ ಉಪಾಸನೆ ಮಾಡಿದ ಧನ್ಯಾತ್ಮರಿಗೆ ಅಪ್ರಾಕೃತ ಪುರುಷರೂಪದಲ್ಲಿ ಭಗವದ್ದಿವ್ಯಮಂಗಳಮೂರ್ತಿ ದರ್ಶನವು ಲಭಿಸಿರುವದೆಂಬುದಕ್ಕೆ, ಅದ್ಭುತಮಹಿಮಾವಿಶಿಷ್ಟ ಭಗವದ್ಗೀತಾದಿ ತತ್ವಶಾಸ್ತ್ರಗಳೇ ದರ್ಶಕಗಳು ಅವ್ಯಾಜಕೃಪಾವಿಷ್ಟರಾದ ಮುನಿಶ್ರೇಷ್ಠರು ಕೇವಲ ಲೋಕಾನುಗ್ರಹ ಬುದ್ಧಿಯಿಂದ ಪರಮಾತ್ಮ ಸಾಕ್ಷಾತ್ಕಾರ ರೂಪ ಸ್ವಾನುಭವವನ್ನು ಪುರಾಣೇತಿಹಾಸಾದಿ ರೂಪದಿಂದ ಪ್ರತಿಪಾದಿಸಿರುವರು ಹೀಗೆಯೇ ತತ್ವಬೋಧೆಯು, ತತ್ತದ್ದೇಶಕಾಲ ಆಚಾರಾನುಗುಣವಾಗಿ ಇತರ ಅನೇಕ ಜನಾಂಗಗಳಲ್ಲಿ ಮಹರ್ಷಿಯರಿಗೆ ಆಗಿರುವದೆಂಬುದಕ್ಕೆ 'ಬೈಬಲ್'' ''ಖೊರಾನ್'' ಮುಂತಾದ ಗ್ರಂಥರತ್ನಗಳ ಸದ್ಭಾವವೇ ನಿಶ್ಶಂಕವಾದ ನಿದರ್ಶನವು ಈ ಆಶಯವನ್ನೇ 'ಅಂತಸ್ತದ್ಧರ್ಮೋಪದೇಶಾತ್" ಎಂಬ ವೇದಾಂತಸೂತ್ರವು ಪ್ರತಿಪಾದಿಸುವದಾಗಿ, ಭಗವಾನ್ ಶ್ರೀರಾಮಾನುಜರು—

* "ಪರಮಾತ್ಮನ ಕೃಪಾವಲೋಕನವು ಆವನ ವಿಷಯದಲ್ಲುಂಟಾಗುವದೋ ಅಂತಹನಿಗೆ ಮಾತ್ರವೇ ಪರಮಾತ್ಮನು ತನ್ನ ದಿವ್ಯಾಕೃತಿಯನ್ನು ತೋರುವನು" ಎಂಬ ಭಾವವು. ಇದನ್ನೇ ಸಮರ್ಥಿಸುವಂತೆ ಭಗವದ್ವಾಕ್ಯವೂ ಹೀಗಿರುವುದು—

"ಭಕ್ತ್ಯಾ ತು ಅನನ್ಯಯಾ ಶಕ್ಯ । ಅಹಂ ಏವಂ ವಿಧ. (ಹೇ,) ಅರ್ಜುನ, ॥
ಜ್ಞಾತುಂ ದ್ರಷ್ಟುಂ ಚ, ತತ್ತ್ವೇನ, ಪ್ರವೇಷ್ಟುಂ ಚ, ಪರಂತಪ"

—ಗೀತಾ ಅ ೧೧ ಶ್ಲೋಕ ೫೪. [ಸಂ. ನಂದಿನಿ]

* “ ತದಿದಂ ಸ್ವಾಭಾವಿಕ ಮೇವರೂಪ ಮುಪಾಸಕಾನುಗ್ರಹೇಣ ।
ತತ್ಪ್ರತೀತಿ ಗುಣಾಕಾರಂ ದೇವ ಮನುಷ್ಯಾದಿ ಸಂಸ್ಥಾನಂ ॥
ಕರೋತಿ ಸ್ವೇಚ್ಛಯೈವ ಪರಮ ಕಾರುಣಿಕೋ ಭಗವಾನ್ ॥ ”

ಎಂದರೆ, ‘ ಕೇವಲ ಕರುಣಾಶಾಲಿಯಾದ ಪರಮೇಶ್ವರನು ಭಕ್ತಜನಾನುಗ್ರಹ ಬುದ್ಧಿಯಿಂದ ಅವರವರುಗಳ ದೃಢಪ್ರತ್ಯಯ, ಅಭಿಲಾಷೆ ಇತ್ಯಾದಿಗಳನ್ನು ಅನುಸರಿಸಿ ತನ್ನ ದಿವ್ಯಾಕೃತಿಯನ್ನು ದೇವ ಮನುಷ್ಯಾದಿ ರೂಪದಲ್ಲಿ ಪ್ರಕಟಿಸುವನು ’ ಎಂದು ನಿರೂಪಿಸಿರುವರು

೭ ಹೀಗೆ ಭಗವತ್ಸಾಕ್ಷಾತ್ಕಾರವು ದೇವ ಮನುಷ್ಯಾದಿ ರೂಪದಲ್ಲಿ ಪರಿಮಿತಬುದ್ಧಿಶಕ್ತಿಯುತರಾದ ಮಾನವರಿಗೆ ಸಾಧ್ಯವೆಂದು ನಂಬಿದರೆ, ತಾದೃಶ ಭಗವದ್ರೂಪವು ಶರೀರ, ಬುದ್ಧಿ, ನೀತಿ, ಧಾರ್ಮಿಕತೆ ಮುಂತಾದ ಸಮಸ್ತ ಭಾಗಗಳಲ್ಲಿಯೂ ಅಖಂಡ ಮಹಿಮಾಯುತವೆಂದು ಹೇಳಿದಲ್ಲಿ, ಅಸಾಮಂಜಸ್ಯವೇನೂ ಇರಲಾರದು ಏಕೆಂದರೆ, ಶರೀರಸೌಷ್ಠವ, ಬುದ್ಧಿವಿಕಾಸ, ನೀತಿತತ್ಪರತೆ ಧಾರ್ಮಿಕಜ್ಞಾನ ಇತ್ಯಾದಿ ಗುಣಗಳು ಅಲ್ಪಾಯುವಾಗಿಯೂ, ಅಲ್ಪಜ್ಞನಾಗಿಯೂ, ಪರಿಮಿತ ಶಕ್ತಿಯುತನಾಗಿಯೂ ಇರುವ ಮನುಷ್ಯನಲ್ಲಿಯೇ ಪರಾಕಾಷ್ಠತೆಯನ್ನು ಹೊಂದಿರಬೇಕೆಂದು ನಿರ್ವಿವಾದವಾಗಿ ಆಶಿಸುವ ನಾವು, ಪರಮೇಶ್ವರನು ಅನಿರ್ವಚನೀಯ ವೈಭವಖಣಿಯೆಂದು ಹೇಳಿದರೆ ಅತಿಶಯೋಕ್ತಿಯಾಗುವದೇ ? ಪರಂತು, (ಅದರೆ) ಪ್ರಾಣಿಸಂಬಂಧವಾದ ಜನ್ಮ, ಮೃತ್ಯು, ಜರಾ, ವ್ಯಾಧಿ, ಕ್ಷುತ್-ತೃಷ್ಣಾ, ಭಯ-ಶೋಕ-ಮೋಹಾದಿ ದುರ್ಗುಣರಹಿತನಾದುದರಿಂದ ಪರಮೇಶ್ವರನು “ಅಖಿಲ ಹೇಯ ಪ್ರತ್ಯನೀಕಾಸನ್ನ ಜ್ಞಾನಾನಂದಾದಿ ಕಲ್ಯಾಣ ಗುಣಗಣನಿಧಿ ” ಎಂದು ಸ್ತುತಿಸಲ್ಪಟ್ಟಿರುವನು

೮. ಈ ಅವತಾರಿಕೆಯನ್ನು ಇಷ್ಟಕ್ಕೆ ನಿಲ್ಲಿಸಿ, ಇನ್ನುಮುಂದೆ ಪರಮೇಶ್ವರನ ಪ್ರಧಾನ ಲಕ್ಷಣಗಳ ದಿಗ್ದರ್ಶನವನ್ನಿಲ್ಲಿ ತೋರಿಸಿ.

---

* ಯೋ ಯೋ ಯಾಂ ಯಾಂ ತನುಂ ಭಕ್ತ: | ಶ್ರದ್ಧಯಾ ಅರ್ಚಿತುಂ ಇಚ್ಛತಿ || ತಸ್ಯತಸ್ಯ ಅಚಲಾಂ ಶ್ರದ್ಧಾಂ ತಾಮೇವ ವಿದಧಾಮಿ ಅಹಂ ||
—ಗೀತಾ ಅ ೭ ಶ್ಲೋಕ ೨೧. [ಸಂ. ಸಂಪಾ]

ಅವುಗಳ ಅನುವಾದವನ್ನು ಕಾಲಕ್ರಮದಿಂದ ವಿಚಾರಮಾಡುವ —
ಅವು ಅವಾವುವೆಂದರೆ—

೧ ತ್ರಿಪಾದ್ವಿಭೂತಿನಾಯಕ
೨ ಅಪ್ರಾಕೃತ ಅಕರ್ಮನಿಮಿತ್ತ ಸ್ವಾಸಾಧಾರಣ ದಿವ್ಯಸ್ವರೂಪ
೩ ಅಸಾಧಾರಣ ದೀಪ್ತಿಯುಕ್ತ
೪ ಅಖಿಲ ಹೇಯ ಪ್ರತ್ಯನೀಕಾನನ್ತ ಜ್ಞಾನಾನಂದಾದಿ ಕಲ್ಯಾಣ ಗುಣಗಣನಿಧಿ
೫ ಷಾಡ್ಗುಣ್ಯನಿಧಿ
೬ ಅಖಿಲ ಜಗದುದಯ ವಿಭವ ಲಯಲೀಲ
೭ ಅಶೇಷ ಚರಾಚರ ಭೂತ
೮ ಅಖಿಲ ಚೇತನಾಚೇತನ ಭಯಾಭಯ ಹೇತು
೯ ಅಸಾಧಾರಣ್ಯಾವ್ಯತತ್ವ ಪ್ರಾಪ್ತಿಹೇತು
೧೦ ಚೇತನಾಚೇತನ ವಸ್ತುಜಾತ ಸಕಲವಿಧ ಬಂಧು
೧೧ ಸರ್ವವ್ಯಾಪಕ
೧೨ ಚೇತನಾಚೇತನ ಪೋಷಕ
೧೩ ಸಮಸ್ತ ಚಿದಚಿದಾತ್ಮ ಪ್ರಪಂಚೇಶಾನ
೧೪ ಸರ್ವವ್ಯಾಪೀ
೧೫ ಸತ್ಯಪರಾಕ್ರಮ
೧೬ ಸರ್ವೋಪಾಸ್ಯ

**ಸೂಚನೆ** — ಈ ಷೋಡಶ ಗುಣಗಳ ತತ್ವಾರ್ಥಗಳೇನು.. ಈಶ್ವರನಲ್ಲಿ ಇವುಗಳ ಸಮರ್ಥನೆಯು ಹೇಗೆ-- ಎಂಬಿವೇ ಮೊದಲಾದ ವಿವೇಚನೆಗಳನ್ನು ಉಪನಿಷದ್ವಾಕ್ಯಗಳೇ ಮೊದಲಾದ ಸಾಧನಗಳಿಂದ ಯಥಾರ್ಥವಾಗಿ ತಿಳಿಯಬಹುದು. [ಸಶೇಷ]

ಇತಿ,

A S G.

(ವರ್ಗಣೀದಾರರಲ್ಲಿ)

# ನಂದಿನಿಯ ನಿವೇದನವು.

ಬಂಧು-ಭಗಿನಿಯರೇ!

ನಂದಿನಿಯನ್ನು ನಿಂದೆಗೆ ಈಡು ಮಾಡದೆ ಅಭಿನಂದನ ಯೋಗ್ಯವಾಗುವಂತೆ ತೃಪ್ತಿಕರವಾದ ರೀತಿ-ನೀತಿಗಳಿಂದ ನಡೆಯಿಸಿಕೊಂಡು ಬರಬೇಕೆಂದು ನಮ್ಮ ಶಕ್ತಿವಂಚನೆಯಿಲ್ಲದೆ ಪ್ರಯತ್ನಪಟ್ಟಿದಾಯಿತು ಪ್ರಯತ್ನಕ್ಕೆ ಒಂದೆರಡು ಭಾಗಗಳಲ್ಲಿ ಮಾತ್ರ ಕೆಲವು ಲೋಪಗಳುಂಟಾದರೂ ಉಳಿದ ಭಾಗಗಳಲ್ಲಿ ತಕ್ಕಮಟ್ಟಿಗೂ, ಸಂಕಲ್ಪವನ್ನನುಸರಿಸಿ ನಡೆಯಿಸುತ್ತ ಬಂದಿರುವೆವೆಂದು ಬೇರೆ ಹೇಳಿಕೊಳ್ಳಬೇಕಾಗಿಲ್ಲ ಆದರೂ ೪-೫ನೆಯ ಸಂಚಿಕೆಯನ್ನು ನೋಡಿ ಕಾಗದವು ಸುಲಭತರಕ್ಕಿಳಿದಿತೆಂದೂ, ಪುಟಸಂಖ್ಯೆಯು ಕಡಮೆಯಾಯಿತೆಂದೂ, ಇದ್ದುದರಲ್ಲಿಯೂ ೧೬ ಪುಟಗಳಷ್ಟಕ್ಕೆ ಬರಿಯ ಸ್ವೀಕಾರ ಸ್ವಾಭಿಪ್ರಾಯ ನಿವೇದನಗಳೆಂಬುದನ್ನು ತುಂಬಿಸಿ ಬೇಕಾದ ಅಗತ್ಯ ವಿಷಯ-ವಿಚಾರಗಳನ್ನು ಬಿಟ್ಟಿರುವದೆಂದೂ, ಕೆಲವರಾಡುತ್ತಿರುವದನ್ನು ಕೇಳಿ ತಿಳಿದೆವು ನಾವು ಇದನ್ನು ಹೀಗೆ ಮನಪೂರ್ವಕವಾಗಿ ಮಾಡಲಿಲ್ಲ ಅನಿವಾರ್ಯದಿಂದ ಮಾಡಲೇಬೇಕಾಗಿ ಬಂದ ಪ್ರಸಂಗದಲ್ಲಿಯೂ ಆಕ್ಷೇಪವನ್ನು ಸಮಾಧಾನದಿಂದ ಸ್ವೀಕರಿಸಲೇಬೇಕಷ್ಟೆ! ಭೂಷಿಸುವವರಿಗಿಂತಲೂ ದೂಷಕರೇ ನಮ್ಮ ಮಾರ್ಗದರ್ಶಕರೆಂಬುದು ನಮ್ಮ ನಂಬಿಕೆಯಾಗಿದೆ

ಯುದ್ಧ ಸಂಬಂಧದ ದುರ್ಭಿಕ್ಷದಿಂದ, ಕಾಗದದ ಅಭಾವವಾಗಿ ಆದರಿಂದ ಈ ಹಿಂದಿನ ಸಂಚಿಕೆಗಳಲ್ಲಿ ಉಂಟಾಗಿರುವ ಲೋಪಗಳನ್ನು ತುಂಬಿಸಿಕೊಂಡು, ನಮ್ಮ ಭಗಿನೀ-ಬಂಧುಗಳ ಅಭಿನಂದನವನ್ನು ಪಡೆಯಲು ಉದ್ದೇಶಿಸಿ, ಈ ಪ್ರಥಮ ವರ್ಷಾಂತ್ಯದ ಕಾಣಿಕೆಯಾಗಿ "ಜಾವಕೀ ಕಲ್ಯಾಣ"ವೆಂಬ ನಾಟಕ ಪುಸ್ತಕವನ್ನು ಉತ್ತಮ ತರದ ಕಾಗದ, ಅಂದವಾದ ಮುದ್ರಣಗಳಿಂದ ಮನೋಹರವಾಗು

ವಂತೆ ಮಾಡಿ, ತನ್ನ ಭಗಿನೀ ಬಂಧುಗಳಲ್ಲಿ ಒಪ್ಪಿಸಲು ನಿಶ್ಚಯಿಸಿರು ವಳು. ಈ ತಿಂಗಳ ಸಂಚಿಕೆಯಲ್ಲಿ ನಮ್ಮ ಭಗಿನಿಯರ ಮನವೊಪ್ಪುವಂತೆ ವಿಶೇಷಾಂಶಗಳನ್ನೊಳಕೊಂಡ ಉತ್ತಮ ಗದ್ಯಪದ್ಯ ಲೇಖನಗಳನ್ನು ಪ್ರದರ್ಶಿಸಿರುವಳು ಇನ್ನುಮುಂದೆಯೂ ಇದೇ ಬಗೆಯ ಪ್ರಾಮುಖ್ಯ ವಿಷಯಗಳನ್ನೇ ಪ್ರತಿಪಾದಿಸಲಿರುವಳು ಇದರಿಂದಲಾದರೂ ಆ ನಮ್ಮ ಆಕ್ಷೇಪಕ ವರ್ಗಕ್ಕೆ ಸಮಾಧಾನವಾಗಬಹುದೇನೆಂದು ಆಲೋಚಿಸು ತ್ತಿರುವೆವು

ಇನ್ನು ಪತ್ರಿಕಾ ಸಂದೇಶದಲ್ಲಿ ಮುಖ್ಯವಾದ ನಾಲ್ಕು ಮಾತುಗಳು—

೪-೫ನೇ ಸಂಚಿಕೆಗಳಲ್ಲಿ ಸೂಚಿಸಿರುವಂತೆ, ನಮ್ಮ ಕರ್ಣಾಟಕ ದಲ್ಲಿ ಸುಪ್ರಸಿದ್ಧರಾಗಿರುವ ದೇಶಭಕ್ತರ ಮತ್ತು ಆದರ್ಶ ಮಹಿಳೆಯರ ಸಚಿತ್ರವೃತ್ತಗಳನ್ನು ಪ್ರದರ್ಶಿಸುವವೆಂಬ ವಾಗ್ದಾನವನ್ನನುಸರಿಸಿ, ನಮ್ಮ ಸುಹೃದ್ಭೃತ್ಯವರ್ಗೀಯರಲ್ಲಿ ಮುಖ್ಯರೂ, ಹಿತೈಷಿಣೀ ನಂದಿನಿಯರ ಮುಖ್ಯಪ್ರೋತ್ಸಾಹಕರೂ, ದೇಶಭಕ್ತಾಗ್ರಣಿಗಳಲ್ಲಿ ಪರಿ ಗಣಿತರೂ ಆಗಿರುವ ಶ್ರೀಯುತ ಬೆನಗಲ್ ರಾಮರಾವ ಎಮ್ ಎ., ಎಲ್ ಎಲ್. ಬಿ ಯವರ ಮತ್ತು ಅವರ ಪತ್ನೀ-ಪುತ್ರಿಯರ ಭಾವಚಿತ್ರ ಗಳನ್ನು ಪ್ರದರ್ಶಿಸಿರುವೆವು ಅವರ ಆದರ್ಶಯೋಗ್ಯವಾದ ಚರಿತ್ರವನ್ನು ಸವಿಸ್ತರವಾಗಿ ಪ್ರಕಟಿಸಲು ಯೋಚಿಸಿ ತಕ್ಕಷ್ಟು ಪ್ರಯತ್ನವನ್ನು ಮಾಡುತ್ತಿರುವೆವು ಚರಿತ್ರೆಗ ಸಂಬಂಧಪಟ್ಟ ನಾಲ್ಕಾರು ಭಾವಚಿತ್ರ ಗಳು (ಬ್ಲಾಕುಗಳು) ಇನ್ನೂ ಸಿದ್ಧವಾಗಿಲ್ಲಾದುದರಿಂದಲೂ, ಚರಿತ್ರ ಲೇಖನವನ್ನು ಪರಿಶೋಧಿಸಲು ಪತ್ರಸಂಪಾದಕಿಯರು ಸದ್ಯಸ್ಥಿತಿಯಲ್ಲಿ ತುಂಬಾ ಆಯಾಸದಲ್ಲಿರುವದರಿಂದಲೂ ಈ ತಿಂಗಳಲ್ಲಿ ಪ್ರಕಟಿಸಲಾಗ ಲಿಲ್ಲ ಇದಕ್ಕಾಗಿ ಬಾಂಧವರಲ್ಲಿ ಕ್ಷಮೆಯನ್ನು ಕೋರಬೇಕಾಗಿದೆ ಯೇನು ?

ಇನ್ನು ಮುಂದಿನ ಎಂದರೆ ಏಳನೇ ಸಂಚಿಕೆಯಲ್ಲಿ, ನಮಗೆ ಪಿತೃವತ್ಪೂಜ್ಯರೂ, ದೇಶಸೇವಕರಲ್ಲಿ ಪ್ರಸಿದ್ಧರೂ, ದೇಶೋದ್ಧಾರಕ ಸಮಾಜದಲ್ಲಿ ಪರಿಗಣಿತರೂ ಆಗಿರುವ ಶ್ರೀಯುಕ್ತ ಎಮ್. ವೆಂಕಟ ಕೃಷ್ಣಯ್ಯನವರ ಸಚಿತ್ರ ಚರಿತ್ರವನ್ನೂ, ಮತ್ತು ಆರ್ಯ ಸ್ತ್ರೀಸಮಾ

ಜೋತ್ಕರ್ಷತೆಯಲ್ಲಿ ಅವಿಶ್ರಾಂತ ಶ್ರಮದಿಂದ ಪ್ರಯತ್ನಪಡುತ್ತಿರುವ ಬೆಂಗಳೂರು ಸೇವಾಸದನದ ಕಾರ್ಯನಿರ್ವಾಹಕರು, ಶ್ರೀ ಸೌ॥ ರಂಗಮ್ಮನವರ ಮತ್ತು ಅವರ ಪತಿಯಾದ ಶ್ರೀ ಆರಾವ ಮುದಯ್ಯಾಂಗಾರ್ಯರ ಬಿ ಏ, ಬಿ ಎಲ್ (ಮುಜರಾಯಿ ಸುಪರಿಂಟೆಂಡೆಂಟ) ಅವರ ಸಚಿತ್ರವೃತ್ತವನ್ನು ಪ್ರಕಟಿಸಲು ನಿಶ್ಚಯಿಸಿ ಪ್ರಯತ್ನಿಸಿರುವುದು. ಎಂಟನೆಯ ಸಂಚಿಕೆ (ಪಿಂಗಳ ವೈಶಾಖ ೧೯೧೭ನೇ ಮೇ) ಯಲ್ಲಿ ಶ್ರೀ ನಮ್ಮ ಹಿತಚಿಂತಕ ಭ್ರಾತೃಗಳಾದ ಬಿ. ರಾಮರಾಯರ ಚರಿತ್ರವನ್ನು ಪ್ರಕಟಮಾಡಿದ್ದೆವು ಒಟ್ಟಿನಲ್ಲಿ ಇನ್ನು ಮುಂದಿನ ಸಂಚಿಕೆಗಳು ತಕ್ಕಮಟ್ಟಿಗೆ ಉತ್ತಮ ಚಿತ್ರಲೇಖನಗಳೊಡನೆ ಪ್ರಕಾಶವಾಗುವಂತಾಗವವು ಇಷ್ಟಾಗಿ ಇನ್ನು ಒಂದು ವಿಚಾರವುಳಿಯಿತು ಮುದ್ರಣಾದಿ ದೋಷಗಳು ಅದು ಕೂಡ ಪತ್ರಕರ್ತ್ರಿಯರ ಆಲಸ್ಯಕಾರಣದಿಂದಾದುದು ಅಲ್ಲದೆ, ಆ ಕಾರಣದಿಂದ ಈ ತಿಂಗಳ ಸಂಚಿಕೆಯೂ ಕಾಲವನ್ನು ಅತಿಕ್ರಮಿಸಿ ಹೊರಟಿರುವದು ಆದರೂ ಹಿಂದುಮುಂದಿನ ಸಂದರ್ಭಗಳನ್ನು ಸಮಾಲೋಚಿಸಿದರೆ ಕ್ಷಮಾರ್ಹವೇ ಆಗಬಹುದು!

ಪ್ರಸ್ತುತವಲ್ಲಿ ನಮ್ಮ ಪ್ರಾರ್ಥನೆಯಂದರೆ ಇಷ್ಟೇ! ನಂದಿನಿಯ ಶೈಲಿಯೂ ಹಿತೈಷಿಣಿಯ ಶೈಲಿಯಂತೆಯೇ ಕಠಿಣವೆಂದೂ, ಸ್ತ್ರೀಯರಿಗೆ ಬೋಧೆಯಾಗುವದಿಲ್ಲವೆಂದೂ ನಮ್ಮ ಬಾಂಧವರಲ್ಲಿ ಕೆಲವರಾಡಿಕೊಳ್ಳುತ್ತಿರುವರು ಹಾಗಾಯಿತೇಕೆಂಬುದೇ ನಮಗೆ ತಿಳಿಯಲಿಲ್ಲ! ನಮ್ಮ ಸೋದರಿಯರ ತಿಳಿವಿಗೆ ತರಬೇಕಾದುದು ಆ ನಮ್ಮ ಸೋದರರ ಕೆಲಸವಲ್ಲವೇನು? ಅವರು ತಾವಾಗಿ ತಮ್ಮ ಮಹಿಳೆಯರಿಗೆ, ಅಕ್ಕತಂಗಿಯರಿಗೆ, ತಾಯಿ-ಮಕ್ಕಳಿಗೆ ಅದೇಕೆ ಬೋಧೆಯಾಗುವಂತೆ ಮಾಡಬಾರದು? ಕ್ಲಿಷ್ಟಭಾಗದಲ್ಲಿ ಅರ್ಥವನ್ನು ವಿವರಿಸಿ ಸಮರ್ಥನ ಮಾತನೇಕಾದ ತಮ್ಮ ಕೆಲಸದಲ್ಲಿ ಹಾಗೇಕೆ ಆಲಸರಾಗಿರಬೇಕು! ತಮ್ಮತಮ್ಮಲ್ಲಿ ಗೊಣಗುಟ್ಟುವದೊಂದೇ ಅವರ ಪಾಲಿಗೆ ಬಿದ್ದಿರುವ ಕರ್ತವ್ಯವೇನು? ಇತ್ಯಾದಿಯಾಗಿ ನಾವು ಶಂಕಿಸುತ್ತಿರುತ್ತೇವೆ ಶೈಲಿಯನ್ನು ಸುಲಭವಾಗಿ ಮಾಡಲು ಪ್ರಯತ್ನಪಡುತ್ತಿದ್ದರೂ, ಮೇಲಿನ ನಮ್ಮ ಶಂಕೆಗೆ ತಕ್ಕಷ್ಟು ಸಮಾಧಾನವು ಲಭಿಸುವಂತೆ ಇನ್ನುಮುಂದೆ

ನಮ್ಮ ಬಾಂಧವರು ಇದೊಂದಾದ ತಮ್ಮ ಕರ್ತವ್ಯವನ್ನು ಗಮನಿಸು ವರಾದಾರೆಂದು ನಿರೀಕ್ಷಿಸುತ್ತೇವೆ ಮತ್ತು ಈ ವರೆಗೆ ನಮ್ಮ ದೇಶ ಸೇವಾಕಾರ್ಯದಲ್ಲಿ ಸಹೃದಯದಿಂದ ಪ್ರೋತ್ಸಾಹಿಸಿ-- ಪ್ರೋತ್ಸಾಹಿಸು ತ್ತಿರುವ ನಮ್ಮ ಭಗಿನೀ-ಬಂಧುವರ್ಗಕ್ಕೂ, ನಮ್ಮಲ್ಲಿ ನವಶಕ್ತಿಯು ತ್ಪನ್ನವಾಗುವಂತೆ ವಿಶೇಷವಾಗಿ ಪ್ರೋತ್ಸಾಹಿಸಿದ ನಮ್ಮ ಮೈಸೂರು ಮದರಾಸು ವಿದ್ಯಾಭ್ಯಾಸದ ಇಲಾಖೆಯವರಿಗೂ, ಮದರಾಸು ಲಿಟ ರೇಚರ್ ಸೊಸೈಟಿ, ಧಾರವಾಡದ ವಿ॥ ವ॥ ಸಂಘದವರುಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸಿ, ಮೇಲ್ಕಂಡವರ ಶ್ರೇಯೋಭಿವೃದ್ಧಿಯನ್ನು ಮಾಡುತ್ತಿರುವವಲ್ಲದೆ, ನಮ್ಮ ಕರ್ಣಾಟ ದೇಶದ ಮತ್ತು ಕರ್ಣಾಟಕ ಸಿಂಹಾಸನಾರೂಢರಾದ ಶ್ರೀಮನ್ಮಹಾ ರಾಜರ ಶ್ರೇಯ ಪ್ರಾರ್ಥನೆಯನ್ನು ಸರ್ವಕಾಲವೂ ಮಾಡುತ್ತಿರುವೆ ವೆಂದು ನಿರವಿಸಿ ವಿರಮಿಸುತ್ತಿರುವ

— ನಂದಿನಿ —

---

## ವಿಶೇಷ ಸೂಚನೆ.

ಕರ್ಣಾಟಕ ನಂದಿನಿಯ ಪ್ರಾಣ್ಮಾಸಿಕೋತ್ಸವವು ಯುಗಾದಿ ಹಬ್ಬದ ದಿನದಲ್ಲಿ ನಡೆಯಬೇಕಾಗಿದ್ದಿತು ಆದರೆ ಮೂಕ್ಯಮಂದಿರದ ರಾತ್ರಿ ಪಾಠಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಆ ವೇಳೆಗೆ ಪರೀಕ್ಷಾಸಮಯವಾಗಬಹುದಾದುದರಿಂದ ಉತ್ಸವವನ್ನು ಇದೇ ಮಾರ್ಚ ೧೮ನೇ ಭಾನುವಾರ ಫಾಲ್ಗುನ ಬ॥ ೮॥ ಶ್ರೀ ಶಾರದಾ ಪೂಜಾಸಮಾರಂಭ ರೂಪದಿಂದ ನೆರವೇರಿಸುವಂತೆ ಗೊತ್ತುಮಾಡಿರು ವೆವು ಮುಂದಿನ ವಾರ್ಷಿಕೋತ್ಸವವು ಆಶ್ವಯುಜ ಶುದ್ಧ ನವಮಿ-ದಶಮಿ (ಮಹಾನವಮಿ) ವಿಜಯದಶಮಿಯಲ್ಲಿ ನಡೆಯುವದಾಗಿರು ವದು. ಉತ್ಸವದ ವಿಶೇಷ ವಿಷಯಗಳನ್ನು ಮುಂದಿನ ಸಂಚಿಕೆಯಲ್ಲಿ ವಿವರಿಸಲಾದೀತೆಂದು ನಂಬುವೆವು

[ಕಾರ್ಯನಿರ್ವಾಹಕರು ೧೪.೩.೧೭ ]

# ವಿಮಲಾದೇವಿ.

ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು —

ಅಬೂ ಪರ್ವತವು ಅರಾವಳಿಯ ಒಂದು ಭಾಗವು ಅಣ್ಣಾತಮ್ಮಂದಿರಂತೆ ಎರಡು ಪರ್ವತಗಳೂ ಪರಸ್ಪರ ಸಮೀಪವಾಗಿಯೇ ಇರುವುವು ಮುಖ್ಯ ಪರ್ವತಕ್ಕೂ ಅಬೂ ಪರ್ವತಕ್ಕೂ ನಡುವೆ ೧೨ ಮೈಲಿಗಳ ಉದ್ದವಿರುವ ಅಗಾಧವಾದ ಕಣಿವೆಯ ದಾರಿಯೊಂದಿರುವುದು. ಅರಾವಲಿ ಪರ್ವತದಲ್ಲಿ ಹುಟ್ಟಿದ ಒಂದು ನದಿಯು ಈ ಕಣಿವೆಯಲ್ಲಿ ಹರಿದು ಬರುವುದು ದಕ್ಷಿಣ ಹಿಂದುಸ್ಥಾನದಲ್ಲಿ ನೀಲಗಿರಿ, ಮಹಾಬಲೇಶ್ವರಗಳು ಹೇಗೆ ಆರೋಗ್ಯಸ್ಥಾನವೆಂದು ಹೆಸರುಗೊಂಡಿವೆಯೋ, ಹಾಗೆಯೇ ಅಬೂಪರ್ವತವೂ ರಾಜಪುತ್ರಸ್ಥಾನಕ್ಕೂ, ಗುಜರಾತಿಗೂ ಆರೋಗ್ಯಸ್ಥಾನವೆಂದು ಗಣಿಸಲ್ಪಟ್ಟಿರುವುದು ಈ ಪರ್ವತದ ಮೇಲೆ ಸುಂದರವಾದ ಅನೇಕ ದೇವಾಲಯಗಳೂ, ಜೈನಮಂದಿರಗಳೂ ಇರುವುವು

ನಮಗೆ ತಿರುಪತಿ, ಯಮುಗಿರಿ ಮೊದಲಾದುವು ಹೇಗೆ ಪವಿತ್ರಕ್ಷೇತ್ರಗಳಾಗಿರುವುವೋ, ಹಾಗೆ ಉತ್ತರ ಹಿಂದುಸ್ಥಾನದವರಿಗೆ ಅಬೂಪರ್ವತವೂ ಪವಿತ್ರ ಕ್ಷೇತ್ರವಾಗಿರುವುದು ಪೂರ್ವದಲ್ಲಿ ದೇವತೆಗಳಿಗೂ, ಮಹರ್ಷಿಗಳಿಗೂ ಹಿಮಾಲಯವು ಮೊದಲನೆಯ ಸ್ಥಾನವಾಗಿತ್ತೆಂದೂ, ಅಬೂಪರ್ವತವು ಎರಡನೆಯ ಸ್ಥಾನವಾಗಿತ್ತೆಂದೂ ಹೇಳುವರು ಅಷ್ಟೇ ಅಲ್ಲ, ಹಿಮಾಲಯದಲ್ಲಿ ವಸಿಸುವ ಶಿವನೂ, ಅತನ ಗಣಗಳೂ ವಿಹಾರಾರ್ಥವಾಗಿ ಬಂದು ಅಡಿಗಡಿಗೆ ಅಬೂಪರ್ವತದ ಮೇಲೆ ವಿಹರಿಸುತ್ತಿದ್ದರೆಂದೂ, ಕಲಿಮಹಿಮಾ ಪ್ರಾಬಲ್ಯದಿಂದ, ಅವರಿತ್ತ ಬರುವುದನ್ನು ನಿಲ್ಲಿಸಿದರೆಂದೂ, ಅವರ– ಎಂದರೆ, ರಾಜಪುತ್ರಸ್ಥಾನದವರ ನಂಬಿಕೆಯಾಗಿದೆ. ಇದರ ವಿಷಯವಾಗಿ ಅವರು ಅನೇಕ ಕಥೆಗಳನ್ನೂ ಹೇಳಿಕೊಳ್ಳುತ್ತಿರುವರು. (ಅದಕ್ಕೆ ಸಂಬಂಧಿಸಿದ ಒಂದು ಕಥೆಯೇ ಈ ಮುಂದೆ ವಿವರಿಸಲ್ಪಡುವುದು )

ತ್ರೇತಾಯುಗದಲ್ಲಿ ಈ ಪರ್ವತದ ಮೇಲೆ ಶಿವಭಕ್ತಿಪರಾಯಣ

ಋಷಿಗಳು ತಪಸ್ಸು ಮಾಡುತ್ತಿದ್ದರು. ಈ ಋಷಿಗಳೆಲ್ಲರಿಗೂ ಭಗವಾನ್ ವಸಿಷ್ಠರು ಕುಲಪತಿಗಳಾಗಿದ್ದರು ಇವರು, ಸೂರ್ಯೋದಯಕ್ಕೆ ಮೊದಲೇ ಎದ್ದು, ಅಘಮರ್ಷಣ ಸ್ನಾನವನ್ನು ಮಾಡಿ, ಸ್ವಾಧ್ಯಾಯ, ಬ್ರಹ್ಮಯಜ್ಞ, ಪಿತೃತರ್ಪಣ, ಯಜನ, ಯಜ್ಞ, ಜಪತಪಾದಿ ಪವಿತ್ರತಮಗಳಾದ ನಿತ್ಯ ಕರ್ಮಗಳನ್ನು ನೆರವೇರಿಸಿ, ಆ ಕಾಮಧೇನುವಿನ ಅಮೃತೋಪಮವಾದ ಹಾಲನ್ನು ಕುಡಿದು, ದೇಹಪೋಷಣ ಮಾಡಿಕೊಳ್ಳುವದು ಆ ಋಷಿಪುಂಗವರ ನಿತ್ಯ ಕರ್ಮಾನುಷ್ಠಾನವಾಗಿದ್ದಿತು ಆದುದರಿಂದಲೇ ಆ ಕಾಲದಲ್ಲಿ ಶಾಂತಿಯೂ, ಬ್ರಹ್ಮತೇಜಸ್ಸೂ, ಸತ್ವಗುಣಪ್ರಭಾವವೂ ಆ ಪರ್ವತದಲ್ಲೆಲ್ಲಿ ನೋಡಿದರೂ ಕಾಣಬರುತ್ತಿದ್ದುವು. ಮೃಗ-ಪಕ್ಷಿಜಾತಿಗಳೆಲ್ಲವೂ, ಜಾತಿವೈಷಮ್ಯವನ್ನು ಬಿಟ್ಟು, ಪರಮಪಾವನ ಶಾಂತಿಕ್ಷೇತ್ರವಾದ ಈ ಸ್ಥಳದಲ್ಲಿ ಪರಸ್ಪರಾನುರಾಗದಿಂದ ವರ್ತಿಸುತ್ತಿದ್ದುದನ್ನು ನೋಡಿ, ಅಲ್ಲಿಯ ತಪಸ್ವಿಗಳೂ, ತಪಸ್ವಿನಿಯರೂ ತಾಪಸಕನ್ಯೆಯರೂ ಆನಂದಪಡುತ್ತಿದ್ದರು. ಇದರ ಮೇಲೆ, ಅಲ್ಲಿಯ ಶಾಂತತೆಯನ್ನು ನೋಡಿ ನಲಿನೇರಿ, ಶಂಕರಾದಿ ದೇವತೆಗಳು ಕೂಡ, ಅಲ್ಲಿಗೆ ಬಂದು ಅಲ್ಲಿಯ ನಿವಾಸಿಗಳ ಆನಂದ ಸಂಭ್ರಮಗಳನ್ನು ಮೇಲೆ ಮೇಲೆ ಹೆಚ್ಚಿಸುತ್ತಿದ್ದರು

ಹೀಗಿರಲು ಒಂದಾನೊಂದು ದಿನ ಮೇಯುವುದಕ್ಕೆ ಹೋಗಿದ್ದ ಕಾಮಧೇನುವು ಹಳ್ಳದಲ್ಲಿ ಕಾಲುಜಾರಿ ಬಿದ್ದುಬಿಟ್ಟಿದು ಆ ಹಳ್ಳವು ಆಳವಾಗಿದ್ದುದರಿಂದ ಇನ್ನು ತಮಗೆ ಧೇನುವು ಲಭಿಸಲಾರದೆಂದು ಋಷಿಗಳು ಚಿಂತಾಕ್ರಾಂತರಾಗಿ, ಕಾಮಧೇನು ಧ್ಯಾನದಲ್ಲಿಯೇ ಇದ್ದರು ಇವರ ತಪಃಪ್ರಭಾವದಿಂದ ಸ್ವಲ್ಪದಿನಗಳಲ್ಲಿಯೇ ಆ ಹಳ್ಳದಲ್ಲಿ ಗಂಗಾದೇವಿಯುದ್ಭವಿಸಿ, ಕಾಮಧೇನುವನ್ನು ಮೇಲಕ್ಕೆ ತಂದು, ಋಷಿಗಳಿಗೆ ಒಪ್ಪಿಸಿದಳು ಮುಂದೆ ಇಂತಹ ಸಂಕಟವುಂಟಾಗದಿರಬೇಕೆಂದು ಭಗವಾನ್ ವಸಿಷ್ಠರು ಆ ಹಳ್ಳವನ್ನು ಮುಚ್ಚಿಸಬೇಕೆಂದು ಶಿವನನ್ನು ಪ್ರಾರ್ಥಿಸಿದರು ಭಕ್ತಪರಾಧೀನನಾದ ಶಿವನು ಭಕ್ತಾಗ್ರಗಣ್ಯರಾದ ವಸಿಷ್ಠರ ಪ್ರಾರ್ಥನೆಯನ್ನು ಮನ್ನಿಸಿ, ಹಿಮಾಲಯದ ಕುಮಾರನನ್ನು ಬಳಿಗೆ ಕರೆದು— "ಅಬೂಪರ್ವತದ ವಸಿಷ್ಠಾ

ಕ್ಷೇತ್ರದಲ್ಲಿರುವ ಹಳ್ಳದಲ್ಲಿ ವಾಸಮಾಡಲು ನಿಮ್ಮಲ್ಲಿ ಆರಾದರೂ ಒಪ್ಪುವಿರೋ ?" ಎಂದು ಕೇಳಲು, ಕುಮಾರರಲ್ಲಿ ಒಬ್ಬರೂ ಒಪ್ಪದ ಹೋದರು. ಆದರೆ, ಅವರಲ್ಲಿ ಕಡೆಯವನು ಕುಂಟನಾಗಿದ್ದುದರಿಂದ ತನ್ನ ಅಣ್ಣಂದಿರೊಡನೆ ವಿಹರಿಸುವುದಕ್ಕೆ ಶಕ್ತಿಯಿಲ್ಲವೆಂದೂ, ಹಳ್ಳದಲ್ಲಿ ಸುಖವಾಗಿರಬಹುದೆಂದೂ ಯೋಚಿಸಿ, ತಾನು ಅಲ್ಲಿಗೆ ಹೋಗುವೆನೆಂದು ಒಪ್ಪಿದನು. ಈ ಮಾತಿಗೆ ಶಿವನು ಸಂತೋಷಪಟ್ಟು, ಅವನ ಸಹಾಯಕ್ಕಾಗಿ ತಕ್ಷಕನನ್ನು ಕಳುಹಿದನು. ಆ ಕುಂಟ ಪರ್ವತವು ಕೂಡಲೇ ತಕ್ಷಕನ ಮೇಲೇರಿ, ಹೊರಟು, ಬಂದು ವಸಿಷ್ಠಾಶ್ರಮವನ್ನು ಹೊಕ್ಕು, ಶಿಷ್ಯರೊಡನೆ ಆ ಋಷಿಪುಂಗವನಿಗೆ ನಮಸ್ಕರಿಸಿ, ಆ ಹಳ್ಳದೊಳಕ್ಕೆ ಧುಮ್ಮಿಕ್ಕಿತು. ಕುಂಟಾಗಿದ್ದುದರಿಂದಲೂ, ಮತ್ತು ವಿಶಾಲವಾಗಿದ್ದುದರಿಂದಲೂ, ಗಾಳಿ ಬಂದಾಗ ನಡುಗುತ್ತಾ ಅತಿಯಾಗಿ ವ್ಯಸನಪಡುತ್ತಿದ್ದಿತು. ಇದನ್ನು ಕಂಡ ಋಷಿಗಳು ಇದೊಂದು ಸಂಕಟವು ಪ್ರಾಪ್ತವಾಯಿತೆಂದು ಭೀತರಾಗಿ, ಮತ್ತೆ ಪಾರ್ವತೀಪತಿಯನ್ನು ಪ್ರಾರ್ಥಿಸಿದರು. ಕಾಮಿತಾರ್ಥಪ್ರದನಾದ ಶಿವನು, ಪರ್ವತವನ್ನು ಚಲಿಸದಂತೆ ಮಾಡಿ, ಪರ್ವತದ ಮತ್ತು ಋಷಿಗಳ ಸಂಕಟಗಳನ್ನು ಪರಿಹರಿಸಿ, ಅನುಗ್ರಹಿಸಿದನು. ಶಿವಾನುಗ್ರಹ ಪ್ರಭಾವದಿಂದ ಅಚಲತೆಯನ್ನು ಹೊಂದಿದ ಬಳಿಕ ಆ ಪರ್ವತದ ಮೇಲೆ ಋಷಿಗಳು ದೇವಾಲಯವನ್ನು ಕಟ್ಟಿಸಿ, ಅಲ್ಲಿಯ ಅಂತರ್ರೂಪಿಯಾದ ದೇವರಿಗೆ 'ಅಚಲೇಶ್ವರ'ನೆಂದು ಹೆಸರಿಟ್ಟರು.

ಈ ಪರ್ವತದ ಮೇಲೆ ಒಂದು ಸೊಗಸಾದ ಭಾವಿಯಿರುವದು. ಇದಕ್ಕೆ 'ನಖಿ'ಯೆಂದು ಹೆಸರು. ಪೂರ್ವದಲ್ಲಿ ಮಹಿಷಾಸುರನು ದೇವತೆಗಳನ್ನು ಬಾಧಿಸುತ್ತಿರಲು ಅವನ ಬಾಧೆಯನ್ನು ತಡೆಯಲಾರದೆ ದೇವತೆಗಳು ಈ ಪರ್ವತಕ್ಕೆ ಬಂದು ತಮ್ಮ ನಖಗಳಿಂದ ಒಂದು ದೊಡ್ಡ ಹಳ್ಳವನ್ನು ತೋಡಿ, ಅಲ್ಲಿ ರಹಸ್ಯವಾಗಿದ್ದರು. ಹೀಗೆ ನಖಗಳಿಂದ ಮಾಡಲ್ಪಟ್ಟ ಈ ದೊಡ್ಡ ಭಾವಿಗೆ 'ನಖಿ'' ಎಂದು ಹೆಸರು ಬಂದಿರುವುದಂತೆ ! ಹೀಗೆಯೇ ಇನ್ನೂ ಆ ಪರ್ವತದಲ್ಲಿಯ ದೇವಸ್ಥಾನದ ಮೇಲೆಯೂ, ಗೋಪುರಗಳ ಮೇಲೆಯೂ, ಹಳ್ಳಗಳ ಮೇಲೆ

ಯೂ, ಆ ದೇಶದ ಜನರು ಅನೇಕ ವಿಧವಾಗಿ ಕಥೆಗಳನ್ನು ಹೇಳಿಕೊಳ್ಳುತ್ತಿರುವರು. ಈ ಪೌರಾಣಿಕ ಕಥೆಗಳು ನಿಜವೋ ಸುಳ್ಳೋ ಎಂದು ವಿಚಾರಮಾಡುವುದು ನಮ್ಮ ಕೆಲಸವಲ್ಲ. ಅಲ್ಲಿಯವರಿಂದ ಆ ಪರ್ವತವು ಪವಿತ್ರ ಸ್ಥಲವೆಂದು ಭಾವಿಸಲ್ಪಡುವುದೆಂಬುದಕ್ಕೆ ಹೇಳಿದ ಕಥೆಗಳೇ ದೃಷ್ಟಾಂತವೆಂದರೆ ಸಾಕು.

ಆಬೂ ಪರ್ವತದಲ್ಲಿ ಅಸ್ವರ ಅದ್ಭುತಶಕ್ತಿಯಿರಲಿ, ಅದರಲ್ಲಿ ತೋರುತ್ತಿರುವ ಸೃಷ್ಟಿಯ ನೈಸರ್ಗಿಕ ಸೌಂದರ್ಯವೊಂದೇ ಸಾಕು. ಈ ಪರ್ವತ ಶಿಖರವು ೫೬೫೩ ಅಡಿ ಎತ್ತರವಿರುವುದು. ಇಲ್ಲಿಗೆ ರಾಜಪುತ್ರ ಸಂಸ್ಥಾನವೆಲ್ಲವೂ ಸರಿಯಾಗಿ ಕಾಣುವುದು. ಕೆಳಗಡೆಯಲ್ಲಿರುವ ಅರಾವಳೀ ಪರ್ವತಪರಂಪರೆಯ ಗುಹೆಗಳೂ, ಕಣಿವೆಗಳೂ, ಅರಣ್ಯಗಳೂ ಭಿಲ್ಲರ ನಿವಾಸಸ್ಥಳಗಳೂ, ಸ್ವಾದೋದಕ ಪರಿಪೂರ್ಣವಾದ ಗಿರಿನದಿಗಳೂ, ಸಂರಕ್ಷಕ ಭಟರಂತೆ, ಆ ಪರ್ವತದ ಸುತ್ತಲಿರುವ ಚಿತೋರ್, ಉದಯಪುರ, ಜೋಧಪುರ, ರೂಪನಗರ, ಬುಂದಿ ಮೊದಲಾದ ಕ್ಷಾತ್ರತೇಜೋವಿರಾಜಿತಗಳಾದ ದುರ್ಗಗಳೂ, ಏಕಕಾಲದಲ್ಲಿ ಗೋಚರಿಸುತ್ತಾ ಭೂದೇವಿಯ ಸೌಭಾಗ್ಯಸಂಪತ್ತಿನೆಲ್ಲವೂ ಏಕೀಭವಿಸಿದಂತೆ ಕಾಣುತ್ತಿರುವುವು. ಇಂತಹ ಅಪ್ರತಿಮ ಸೃಷ್ಟಿಸೌಂದರ್ಯದಿಂದ ಪ್ರಕಾಶಿಸುತ್ತಿರುವ ಈ ಪರ್ವತ-ಪ್ರದೇಶವನ್ನು ದೇವಭೂಮಿಯೆಂದು ಹೇಳುವುದು ಆಶ್ಚರ್ಯವೇನು?

ಇರಲಿ, ಪ್ರಸ್ತುತದ ಕಥಾನಕವು ನಡೆಯುತ್ತಿದ್ದ ಕಾಲದಲ್ಲಿ ಆ ಪರ್ವತದ ಮೇಲೆ ಒಬ್ಬ ಯೋಗಿಯು ವಾಸಮಾಡಿಕೊಂಡಿದ್ದನು. ಆತನ ಹೆಸರು "ವೈಕುಂಠಯೋಗಿ" ಆ ಪರ್ವತದ ಮೇಲೆ ಯೋಗಾಭ್ಯಾಸ ಮಾಡುತ್ತಿದ್ದವರೆಲ್ಲರಿಗೂ ಆತನೇ ಗುರುವಾಗಿದ್ದನು. ಅಲ್ಲಿಯ ಜನರೂ, ರಾಜಪುತ್ರಸ್ಥಾನದ ಸಮಸ್ತ ರಾಜಪುಂಗವರೂ, ಈತನನ್ನು ಸಾಕ್ಷಾತ್ ಭಗವಾನ್ ವಸಿಷ್ಠ ಮಹರ್ಷಿಯ ಅಂಶಾವತಾರನೆಂದೇ ನಂಬಿ, ಭಕ್ತಿಯುತರಾಗಿ, ತಮಗೆ ಎಂತಹ ಆಪತ್ತು ಪ್ರಾಪ್ತವಾದರೂ ಈತನಲ್ಲಿ ಹೇಳಿಕೊಳ್ಳುತ್ತ, ಈತನಿಂದ ಉಪದಿಷ್ಟಗಳಾದ ಸದುಪಾಯಗಳನ್ನು ಸಂಗ್ರಹಿಸಿ ಅದರಂತೆ ನಡೆಯುತ್ತಿದ್ದರು. ಈತನು ತನ್ನ ಸದಾಭವನಾಯೋಗಬಲದಿಂದ ಭೂತ-ಭವಿಷ್ಯತ್-ವರ್ತಮಾನ ವಿಚಾರಗಳನ್ನು

ತಿಳಿದು ರಾಜಪುತ್ರಕುಲಕ್ಕೂ, ಹಿಂದೂಸಮಾಜಕ್ಕೂ ತುರುಷ್ಕರ ದೆಸೆಯಿಂದಾಗಬಹುದಾದ ಅಪಾಯಗಳಿಂತಹವೆಂದು ಮುಂದಾಗಿ ಸೂಚಿಸಿ, ಅವರನ್ನು ಜಾಗ್ರತರನ್ನಾಗಿ ಮಾಡುತ್ತಿದ್ದನು. ಈತನ ಅನಿಮಿತ್ತ ದೈವಿಕಪ್ರೇಮದ ಸಹಾಯದಿಂದಲೇ ರಾಜಪುತ್ರರ ಸ್ವಾತಂತ್ರ್ಯಕ್ಕೆ ಅಪ್ರತಿಹತವಾದ ಉತ್ಸಾಹವುಂಟಾಗುತ್ತಿದ್ದಿತು.

ಈ ಯೋಗಿಪುಂಗವನು ೬೦ ವರ್ಷದ ವಯಸ್ಸು ಮಾನವ ಜೀವಿತದ ವಾರ್ಧಕ್ಯಾವಸ್ಥೆಯಲ್ಲಿಯೂ ಪ್ರಬುದ್ಧಮಾನವಾದ ಕಾಯಶಕ್ತಿ, ಕಾಂತಿ, ವರ್ಚಸ್ಸುಗಳಲ್ಲಿ ತರುಣನಂತೆಯೇ ಇದ್ದನು. ಈತನು ಪಾದಚಾರಿಯಾಗಿ ಆ ಪರ್ವತಪ್ರಾಂತದಲ್ಲಿ ಕೂಡ ನಡೆಯುತ್ತಿದ್ದ ವೇಗವನ್ನು ನೋಡಿದರೆ ಆರಿಗೇ ಆಗಲಿ ಆಶ್ಚರ್ಯವಾಗದಿರದು. ಈ ಯೋಗಿಪುಂಗವನಿಗೆ, ಆ ಪರ್ವತನಿವಾಸಿಗಳಾದ ಭಿಲ್ಲರೂ, ಭಿಲ್ಲಾಂಗನೆಯರೂ ಭಕ್ತರಾಗಿ, ನಿತ್ಯವೂ ಕಂದಮೂಲ ಫಲಾದಿಗಳನ್ನು ತಂದೊಪ್ಪಿಸುತ್ತಿದ್ದರು.

ಈ ಯೋಗಿಯು ಸಾಧಾರಣವಾಗಿ ಅಚಲೇಶ್ವರಾಲಯದಲ್ಲಿ ಹೋಮ ತಪಸ್ಸು ಮಾಡುತ್ತಿದ್ದನು. ಈತನ ಶಿಷ್ಯವರ್ಗಕ್ಕೆ ಸೇರಿದವರಲ್ಲಿ ಮುಖ್ಯರಾದ ನಾಲ್ವರು ಬೈರಾಗಿಗಳೂ ಈತನ ಅನುಗ್ರಹದಿಂದ ಯೋಗರಹಸ್ಯವನ್ನು ತಿಳಿದು ಗುಹೆಗಳಲ್ಲಿ ತಪಸ್ಸು ಮಾಡುತ್ತಿದ್ದರು.

ಈ ಯೋಗಿಯ ಪೂರ್ವವೃತ್ತಾಂತವು ಯಾರಿಗೂ ತಿಳಿಯದು. ಈತನು ಪುರಾಣಪುರುಷನೆಂದೇ ರಾಜಪುತ್ರರ ನಂಬಿಕೆ. ಈತನು ಬ್ರಾಹ್ಮಣನೋ, ಕ್ಷತ್ರಿಯನೋ ಎಂಬುದನ್ನು ವಿಚಾರಮಾಡಬೇಕೆಂಬ ಭಾವನೆಯು ಕೂಡ ಅವರಿಗಿರಲಿಲ್ಲ. ಏಕೆಂದರೆ, ಆತನ ಸಂದರ್ಶನಾರ್ಥವಾಗಿ ಬಂದ ಪಂಡಿತರೊಡನೆ ವೇದ-ವೇದಾಂತಾದಿ ಪರತತ್ವ ವಿಚಾರಗಳನ್ನು ವಿಮರ್ಶಿಸುವದರಿಂದಲೂ, ಸಂಶಯಗ್ರಸ್ತರನ್ನು ಸದುದಾಹರಣೆಗಳೊಡನೆ ಸಮಾಧಾನಪಡಿಸಿ, ಆತ್ಮಬೋಧೆಯನ್ನುಂಟು ಮಾಡುವದರಿಂದಲೂ ಈತನು ಬ್ರಹ್ಮವೇತ್ತೃವಾದ ಮಹಾಪುರುಷನೆಂದು ನಿಶ್ಚಿತವಾಗಿ ಬೋಧೆಯಾಗುತ್ತಿದ್ದಿತು. ಇನ್ನಿದರ ಮೇಲೆಯೂ ವಿಚಾರ ಮಾಡಬೇಕಾದುದೇನು? (ಇಷ್ಟಕ್ಕೆ ಅಚಲೇಶ್ವರ ವೈಕುಂಠಯೋಗಿಗಳ ಗುಣಸ್ವಭಾವ ನಿರೂಪಣವು ಇಲ್ಲಿಗೆ ವಿರತಿಹೊಂದಲಿ)

# ಅರ್ಭಕರ ಮರಣವು

(ಲೀಹಂಟ ಎಂಬ ಪಾಶ್ಚಾತ್ಯ ಗ್ರಂಥಕಾರನ ಲೇಖನದ ಆಧಾರದಿಂದ)

ಪುತ್ರವಿರಹದಿಂದ ಶೋಕಾಗ್ರಸ್ತನಾಗಿ ಅಬಲೆಯರಂತೆ ಕಣ್ಣೀರು ಇಕ್ಕುತ ಕುಳಿತಿರುವ ಪಂಡಿತನೋರ್ವನಿಗೆ ಅವನ ಸ್ನೇಹಿತನೊಬ್ಬನು ಪ್ರಶ್ನೆಮಾಡಿದ್ದೇನಂದರೆ, 'ಪಂಡಿತರೆ, 'ಗತಾಸೂನಗತಾಸೂಂಶ್ಚನಾನುಶೋಚಂತಿ ಪಂಡಿತಾ' ಎಂಬ ಶ್ಲೋಕವನ್ನು ನಿಶ್ಯದಲ್ಲಿಯೂ ಪಠಿಸುತ್ತಿರುವವರಾದ ನೀವು ರೋದನವು ವ್ಯರ್ಥವಾದದ್ದೆಂಬದನ್ನು ಅರಿತವರಾಗಿದ್ದರೂ ಹೀಗೆ ಅಳುತ್ತಿರುವದೇಕೆ ? ''

'ಅದಕ್ಕಾಗಿಯೇ ನಾನು ಅಳುತ್ತಿರುವದು'' ಎಂದು ಪಂಡಿತರು ಉತ್ತರವನ್ನಿತ್ತರು ಈ ಉತ್ತರವು ಪಂಡಿತರ ಜ್ಞಾನಕ್ಕೆ ಶೋಭಿಸುವಂಥದೇ ಆಗಿತ್ತು. ನೋಡುವದಕ್ಕಾಗಿ ಕಣ್ಣುಗಳು ಇರುವಂತೆಯೇ ಅಶ್ರುಗಳನ್ನು ಸುರಿಸುವದಾದರೂ ಅವುಗಳ ಧರ್ಮವಾಗಿದೆ. ಹೀಗಿದ್ದು, ಯೋಗ್ಯವಾದ ಪ್ರಸಂಗಗಳಲ್ಲಿ ಕೂಡ ಕಣ್ಣೀರಗಳನ್ನಿಕ್ಕಕೂಡದೆಂದು ನಿಷ್ಠುರರಾದ ಹಲವು ಹಠವಾದಿಗಳು ಪ್ರತಿಪಾದಿಸುತ್ತಾರೆ. ಉಕ್ಕಿಬರುವ ಕಣ್ಣೀರುಗಳನ್ನು ಬಿಗಿದು ಹಿಡಿಯುವದು ಕೆಲವು ಪ್ರಸಂಗಗಳಲ್ಲಂತೂ ಮೂರ್ಖತನದ ಸಾಹಸವೇ ಆಗುವದು. ದುಃಖಾವೇಗವು ತೀರ ಕಡಿಮೆಯಾದ ಬಳಿಕಾದರೂ ಅಶ್ರುಗಳ ಧಾರೆಯು ನಡೆದೇ ಇರುತ್ತದೆ. ದುಃಖದ ಅಸಹ್ಯವಾದ ಜ್ವಾಲೆಗಳನ್ನು ಶಾಂತಗೊಳಿಸಲು ಅಶ್ರುಗಳ ಸಂತತವಾದ ಧಾರೆಯೇ ಸಾಧನವಾಗಿರುವದು. ಅಶ್ರುಗಳ ವರ್ಷಾವವು ಆಗದೆ ಹೋಗಿದ್ದರೆ, ಅಂತಃಕರಣವು ಬಾಡಿ, ಅಕಾಲದಲ್ಲಿ ವಾರ್ಧಕ್ಯದ ಚಿಹ್ನಗಳು ತೋರಹತ್ತಿ, ಮನುಷ್ಯನು ಪ್ರೇತಪ್ರಾಯನಾಗುತ್ತಿದ್ದನು. ದುಃಖದ ಅಸಹ್ಯಕರವಾದ ವೇದನೆಗಳಿಂದ ಹೃದಯವು ಸುಟ್ಟು ಹೋಗಬಾರದೆಂದೇ ಸೃಷ್ಟಿಕರ್ತನು ಕಣ್ಣೀರುಗಳನ್ನು ಕಲ್ಪಿಸಿದ್ದಾನೆ.

ಶೋಕವು ಯಾವದೇ ಸಂಕಟದ ಮೂಲಕವಾಗಿ ಉದ್ಭವಿಸಿರಲಿ, ಅದರ ವೇಗವು ಎಷ್ಟೇ ಬಲವಾಗಿರಲಿ, ಅದು ಅಶ್ರುಧಾರೆಯಿಂದ ನೊಂದಲೇಬೇಕೆಂದು ಮಾತ್ರ ನಾವು ಹೇಳುವದಿಲ್ಲ. ಹಲಕೆಲವು ಸಾರೆ ಅಶನಿಪಾತಕ್ಕೆ ಸಮಾನವಾದ ದುರ್ಧರ ಪ್ರಸಂಗಗಳು ನಮ್ಮ

ಮೇಲೆ ಬಂದೊದಗುತ್ತವೆ ಅಂಥ ಪ್ರಸಂಗಗಳಲ್ಲಿ ಅಶ್ರುಪಾತದ ಉಪಾಯವನ್ನು ಯೋಜಿಸುವದೆಂದರೆ, ಅದು ಬುದ್ಧಿಗೇಡಿತನದ ಲಕ್ಷಣ ವಾಗುವದು ಆ ಸಮಯದಲ್ಲಿ ನಮ್ಮ ಭಾವನೆಗಳನ್ನೆಲ್ಲ ಬಿಗಿದಿಟ್ಟು, ಬಂದ ಸಂಕಟವನ್ನು ಧೈರ್ಯದಿಂದ ಸಹಿಸುವದೇ ಉತ್ತಮವಾದ ಮಾರ್ಗವು ಆದರೆ, ಕಣ್ಣೀರುಗಳನ್ನು ಉದರಿಸುವದರಿಂದ ನಮ್ಮ ಚಿತ್ತಕ್ಕೆ ತುಸುಮಟ್ಟಿಗಾದರೂ ವಿರಾಮ ದೊರೆಯುವದೆಂದು ನಮಗೆ ಖಂಡಿತವಾಗಿ ಗೊತ್ತಿದ್ದಾಗ ಮಾತ್ರ ಅಶ್ರುಗಳನ್ನು ಬಚ್ಚಿಡುವದು ಜಾಣತನದ ಕೆಲಸವಲ್ಲ

"ಎಷ್ಟು ಅತ್ತರೂ ಸತ್ತ ಮನುಷ್ಯನು ತಿರುಗಿ ಬರಲಾರನು" ಎಂದು ಹೇಳುವ ಸಮಾಧಾನದ ಮಾತಿನಿಂದ ಹೃತ್ತಾಪವು ಕಡಿಮೆಯಾ ಗಲಾಗದು ದು ಖಕ್ಕೆ ನಿಜವಾದ ಔಷಧನೆಂದರೆ, ಅಶ್ರುಮೋಚನವೇ

ಎಷ್ಟೋ ದುಃಖಗಳು ಸ್ವರೂಪತ ಸೌಮ್ಯವಾಗಿರುತ್ತವೆ ಅವು ಗಳನ್ನು ಮನ್ನಿಸದಿರುವದು ಧೈರ್ಯವಾಗಿರದೆ, ಅಮಾನುಷದ ಆಚರಣ ವಾಗಿರುತ್ತದೆ ಇಂಥ ಪ್ರಸಂಗಗಳೆಂದರೆ, ಚಿಕ್ಕಮಕ್ಕಳ ಮರಣವು ಎಷ್ಟರಮಟ್ಟಿಗ ಶೋಕದ ಅಧೀನವಾಗಬೇಕೆಂಬದು ಮಾತ್ರ ಆಯಾ ಸ್ಥಿತಿಗನುಸಾರವಾಗಿರುವದು ಆದರೆ, ತಂದೆತಾಯಿಗಳು ಯತ್ಕಿಂಚಿ ತ್ತಾದರೂ ಅಳುಕೂಡದೆಂದು ಹೇಳುವದೆಂದರೆ, ಕೂಸಿನ ಲೀಲೆಯನ್ನು ನೋಡಿ ನಗಕೂಡದೆಂದೂ ಅಥವಾ ಯಾವದೇ ಬಗೆಯ ಆನಂದವನ್ನು ಪ್ರಕಟಿಸಕೂಡದೆಂದೂ ಹೇಳುವಂತಾಗಿದೆ ಸುಖದು ಖಗಳು ಅಂತ. ಕರಣದ ಭಾವನೆಗಳಾಗಿರುವದರಿಂದ ಅವುಗಳನ್ನು ಬಿಡುವದು ಭಾವ ನಾಯುಕ್ತರಾದ ಮನುಷ್ಯರಿಗೆ ಶಕ್ಯವಾಗಿಲ್ಲ ಬಹಳಾದರೆ, ಅವರು ಅವುಗಳನ್ನು ಬಚ್ಚಿಡಬಹುದು

ನಮಗೆ ಅತ್ಯಂತ ಪ್ರಿಯವಾಗಿರುವವನು ಮರಣಹೊಂದಿದಾಗ ಮೊಟ್ಟಮೊದಲು ನಮಗ ಅಸಹ್ಯಕರವಾದ ದು ಖವಾಗುತ್ತದೆ. ಮುಂದೆ ಕೆಲವು ದಿವಸಗಳಾದ ಬಳಿಕ ದು ಖದ ವೇಗವು ಕಡಿಮೆ ಯಾಗಿ ಮೃತನ ಸದ್ಗುಣಗಳು ನಮ್ಮೆದಿರಿನಲ್ಲಿ ಬಂದು ನಿಲ್ಲುತ್ತವೆ ಮೃತನ ಸದ್ಗುಣಗಳನ್ನು ನೆನೆಯುವದು ಆನಂದದಾಯಕವಾದ ಸಂಗತಿ

ಯಾದ್ದರಿಂದ ಅವನು ನಮ್ಮ ಹೃದಯದಲ್ಲಿ ಚಿರವಾಗಿ ವಾಸಮಾಡಿಕೊಂಡು ಇರತಕ್ಕುತ್ತಾನೆ ಇದರಿಂದ ಅವನ ವಿಷಯಕವಾಗಿದ್ದ ನಮ್ಮ ಪ್ರೇಮವು ಹೆಚ್ಚಾಗಿ ಅವನು ಅಮರನಾಗುತ್ತಾನೆ

ಈ ಲೇಖನಕಾರ್ಯವು ನಡೆದಿರುವ ಮಂದಿರಕ್ಕೆ ಇದಿರಾಗಿ ಒಂದು ಸ್ಥಳವಿರುವದು. ಆ ಸ್ಥಳವು ನಮಗೆ ಅತಿ ವಂದ್ಯವಾಗಿರುವ ಮಹನೀಯಳ ನಿಧನಶಯ್ಯೆಯು. ಅದನ್ನು ಸುತ್ತುಗಟ್ಟಿರುವ ಗಿಡಗಳೂ ಹತ್ತರದಲ್ಲಿಯೇ ಇರುವ ದೇವಾಲಯವೂ ಬೆಳೆಗಳಿಂದ ತುಂಬಿ ನಿಂತಿರುವ ನೆರೆಹೊರೆಯ ಹೊಲಗಳೂ ಸ್ಪಷ್ಟವಾಗಿ ಕಾಣುತ್ತಲಿವೆ. ದಿನಮಣಿಯ ಪ್ರಖರವಾದ ಬಿಸಿಲನ್ನು ಮಂದಮಾಡುವ ಮೋಡಗಳೂ ಮುಗಿಲಲ್ಲಿ ಓಡಾಡುತ್ತಲಿವೆ. ಗ್ರೀಷ್ಮಋತುವಿನ ಆಗಮನಸೂಚಕನಾದ ದಕ್ಷಿಣ ಮಾರುತನು ಮಂದವಾಗಿ ಬೀಸುತ್ತಿರುವಾಗ ಭವನಾಗಾರದ ಪರತೀರದ ನೆನಪು ನಮಗೆ ಆಗಹತ್ತಿದೆ, ಯಾಕೆಂದರೆ, ಇದೇ ತೀರದ ವಿಹಾರದಲ್ಲಿ ಅವಳು ಹಗಲಿರುಳು ಮಗ್ನಳಾಗಿರುತ್ತಿದ್ದಳು. ಆದರೆ ಈ ಸ್ಥಳವನ್ನು ನೋಡಲು ನಮಗೆ ಈಗ್ಗೆ ರವಷ್ಟಾದರೂ ದುಃಖವಾಗದೆ ಅದು ನಮ್ಮ ಮಾತೆಯ ನಿಧನಶಯ್ಯೆಯಾಗಿರುವದರಿಂದ ಬಹು ರಮ್ಯವಾಗಿ ತೋರುತ್ತದೆ. ನಮ್ಮ ಬಾಲ್ಯಾವಸ್ಥೆಯೊಳಗಿನ ಸುಖದ ಪರಿಪಾಕವು ಪ್ರೌಢಾವಸ್ಥೆಯೊಳಗಿನ ಸುಖದಲ್ಲಾಗುವದಕ್ಕೆ ಈ ಸ್ಥಳದಲ್ಲಿ ಮಲಗಿರುವ ಪ್ರೇಮಯುತಳಾದ ಮಹನೀಯಳೇ ಕಾರಣಳು. ಇಲ್ಲಿಯ ಗಾಳಿಯು ಶೀತಲವೂ ಮಂದವೂ ಆಗಿ ಬೀಸುತ್ತದೆ, ಸುತ್ತಲಿನ ಸೃಷ್ಟಿಯು ಸೌಖ್ಯವಾದ ಆನಂದದಲ್ಲಿ ಮಗ್ನವಾಗಿರುತ್ತದೆ. ಇಹಪರಲೋಕಗಳ, ನಿತ್ಯಾನಿತ್ಯತೆಗಳ, ಕೃತ್ರಿಮ ನೈಸರ್ಗಿಕಗಳ ಕಲ್ಪನಾತೀತವೂ ಭಿನ್ನಭಿನ್ನವೂ ಆದ ಶೋಭೆಗಳ ಏಕೀಕರಣವು ಇಲ್ಲಿಯಾಗಿರುವದರಿಂದ ಸೃಷ್ಟಿಯೇ ಮಾತೃದೈವತವೆಂಬ ಕಲ್ಪನೆಯು ಮನಸ್ಸಿನಲ್ಲಿ ಹಠಾತ್ತಾಗಿ ಬಿಂಬಿಸುತ್ತದೆ. ಹಡೆದ ತಾಯಿಯ ಅಡಿಯಲ್ಲಿ ಕೂಸು ಚೆಲ್ಲಾಟವನ್ನು ಆಡುತ್ತಿರುವಂತೆ, ಮಾತೃಸ್ಥಾನವಾದ ಈ ಸ್ಥಳದಲ್ಲಿ ಆನಂದದಿಂದ ವಿಹರಿಸಲು ಮನಸ್ಸು ಯತ್ಕಿಂಚಿತ್ತಾದರೂ ಹಿಂಜರಿಯುವದಿಲ್ಲ.

ಈ ಶಯ್ಯೆಯ ಮೇಲೆ ಮಲಗಿರುವ ಸ್ತ್ರೀವರೇಣ್ಯಳು ತನ್ನ ಮೇಲೆ

ಯಾವ ಬಗೆಯ ಸಂಕಟವು ಬಂದು ಒದಗಿದರೂ ತನಗೆ ಎಷ್ಟು ಬೇಸರವಾಗಿದ್ದರೂ ಪರರಿಗೆ ಸುಖವನ್ನೀಯುವದರಲ್ಲಿಯೇ ಯಾವಾಗಲೂ ಮಗ್ನಳಾಗಿ ಇರುತ್ತಿದ್ದಳು ಅದಕ್ಕಾಗಿಯೇ ಸುಖವನ್ನು ನೀಡುವದರಿಂದಲೂ ಸುಖವನ್ನು ಭೋಗಿಸುವದರಿಂದಲೂ ನಾವು ಅವಳ ಆತ್ಮಕ್ಕೆ ತುಷ್ಟಿಯನ್ನೀಯುತ್ತೇವೆಂದು ನಮ್ಮ ದೃಢವಾದ ನಂಬಿಗೆಯಾಗಿದೆ. ಪರರ ಅಭಿವೃದ್ಧಿಯನ್ನು ನೋಡಿ ಅಸೂಯಾ ದ್ವೇಷಗಳನ್ನು ಮಾಡದೆ, ಪರಕಂಟಕರಹಿತವಾದ ಆನಂದವನ್ನು ಭುಂಜಿಸುವದು, ತಾಯಿಯ ತೊಡೆಯ ಮೇಲೆ ಆಡುತ್ತಿರುವ ಮಗುವಿನಂತೆ ಯಾವಾಗಲೂ ಲೋಭನೀಯವಾಗಿದೆ

ಮೃತರಾದ ಪ್ರೌಢರು ತಮ್ಮ ಸದ್ಗುಣಗಳಿಂದ ಚಿರಜೀವಿಗಳಾಗುತ್ತಿದ್ದರೆ, ಬಾಲಕರು ತಮ್ಮ ತೊದಲು ನುಡಿಗಳಿಂದಲೂ, ನಿಷ್ಪಾಪಾಚರಣದಿಂದಲೂ ಪ್ರೇಮಮಯವಾದ ಬಾಲಲೀಲೆಗಳಿಂದಲೂ ಸಂಸ್ಮರಣೀಯರಾಗಿರುತ್ತಾರೆ ಚಿಕ್ಕಮಕ್ಕಳಿಗೆ ಸ್ನೇಹವನ್ನು ಸಂಪಾದಿಸುವ, ದಯೆಯನ್ನು ವ್ಯಕ್ತಪಡಿಸುವ ಹಾಗೂ ಸಂಕಟಸಮಯದಲ್ಲಿ ಸಹಾಯವನ್ನು ನೀಡುವ ಶಕ್ತಿಯಿರದಿದ್ದರೂ ಅವರು ತಮ್ಮ ಸುಖದುಃಖಗಳಲ್ಲಿ ಪರರನ್ನು ಪಾಲುಗಾರರನ್ನಾಗಿ ಮಾಡಿಕೊಳ್ಳುತ್ತಾರೆ ಉದ್ದೇಶಪೂರ್ವಕವಾಗಿ ಅವರು ಯಾರಿಗೂ ದುಃಖವನ್ನು ಕೊಡುವದಿಲ್ಲ ಅವರ ನೆನಪಾಗಿ ದುಃಖವಾದರೆ, ಅದು ಅವರ ಮರಣದ ಸಲುವಾಗಿಯೇ ಹೊರತು ದುಷ್ಟಾಚರಣದ ಸಲುವಾಗಲ್ಲ, ಮನಸ್ಸು ಖಿನ್ನವಾಗಬಹುದು, ಆದರೆ, ಉದ್ವಿಗ್ನವಾಗಲಾರದು ಈ ಖೇದದ ಕಾಲಾವಧಿಯನ್ನು ಮರ್ಯಾದಿತಮಾಡುವದೇ ಸೃಷ್ಟಿಕರ್ತನ ಸಂಕಲ್ಪವಾಗಿ ತೋರುತ್ತದೆ ಯಾಕೆಂದರೆ, ಮೃತನು ನಿಷ್ಪಾಪನಾಗಿರುತ್ತಾನೆ ಸೂರ್ಯನು ಅಸ್ತಂಗತನಾಗಲು ಅವನ ಪ್ರಕಾಶವು ಚಂದ್ರನ ದ್ವಾರದಿಂದ ದೊರೆಯುವಂತೆ, ಬಾಲಕನು ಅಸ್ತನಾದರೂ ಅವನ ಅಕಾರಣಸ್ಮಿತವು ನಮಗೆ ನಮ್ಮ ಸ್ಮೃತಿಯ ದ್ವಾರದಿಂದ ದೊರೆಯುತ್ತದೆ

"ಸುಖಮೇವ ಮೇ ಸ್ಯಾತ್ ದುಃಖಂ ಮನಾಗಪಿ ಮಾಭೂತ್" ಎಂಬ ದುಃಖರಹಿತವಾದ ಸುಖವು ಕಲ್ಪನಾತೀತವಾಗದಿದ್ದರೂ ಈ ಕಲ್ಪನೆಯು ಕವಿಕೋಟಿಗೊಳಗಿನದಾಗಿದಲ್ಲದೆ, ಶಕ್ಯಕೋಟಿಯೊಳ

ಗಿನದಲ್ಲ. ಸುಖದ ಸಾಧನಗಳು ಎಷ್ಟೇ ಹೇರಳವಾಗಿ ದೊರೆತರೂ ಮರಣವನ್ನು ನಿಯಂತ್ರಿತ ಮಾಡುವದಕ್ಕಾಗಿ ವಿಶ್ವಪ್ರಯತ್ನ ಮಾಡಿದರೂ ಮೃತ್ಯುವು ಮೃತ್ಯುವೇ 'ಜಾತಸ್ಯಹಿಧ್ರುವೋ ಮೃತ್ಯು' ಎಂಬದು ಸೃಷ್ಟಿಯ ನಿಯಮವು ಹುಟ್ಟಿದವನಿಗೆ ಒಂದಿಲ್ಲೊಂದು ದಿನ ಬೇನೆಯು ಬರುವದೇ, ಮೃತ್ಯುವು ತನ್ನ ಕಾರ್ಯವನ್ನು ಮಾಡುವದೇ, ಹಾಗೂ ಸುಖದಲ್ಲಿ ದು ಖವು ಕಲೆಯುವದೇ

ಚಿಕ್ಕ ಹುಡುಗರು ಮೃತ್ಯುವಿನ ವಶರಾಗಿ, ಮನುಷ್ಯರ ಸುಖವು ದು ಖಮಿಶ್ರಿತವಾಗಿರಬೇಕೆಂದು ಸೃಷ್ಟಿಯ ಸಂಕಲ್ಪವಿದ್ದಂತೆ ತೋರುತ್ತದೆ ಈ ವಿಧಾನದಿಂದ ಪ್ರತಿಯೊಂದು ಕುಟುಂಬದಲ್ಲಿ ಚಿಕ್ಕದಾದ ಬಾಲಕವೊಂದು ಸಾಯುತ್ತೇಬೇಕೆಂಬ ಅರ್ಥವಲ್ಲ ಹುಡುಗರ ಮರಣದ ಸಂಖ್ಯೆಯು ಕಡಿಮೆಯಾದಷ್ಟು ಇಷ್ಟವಾದದ್ದೇ. ಆದರೆ, ಜಗತ್ತಿನಲ್ಲಿ ಒಂದು ಕೂಸು ಕೂಡ ಮಡಿಯದಂತಾದರೆ, ಅದರಿಂದ ಕೇವಲ ಇಷ್ಟವಾದ ಪರಿಣಾಮವೇ ಸಂಭವಿಸುವದೋ ಅಥವಾ ಅದರಿಂದ ಕಿಂಚಿತ್ತಾದರೂ ಅನಿಷ್ಟವುಂಟಾಗುವ ಸಂಭವವಿದೆಯೋ ಎಂಬದೊಂದು ವಿಚಾರಾರ್ಹವಾದ ಪ್ರಶ್ನವಾಗಿದೆ ಬಾಲಕರ ಮೇಲಿನ ಮರಣದ ಸಂಕಟವು ತಪ್ಪಿಹೋದರೆ, ಪ್ರತಿಯೊಬ್ಬ ಬಾಲಕನ ಬಾಲ್ಯತ್ವವು ನಮ್ಮ ಕಣ್ಣೆದುರಿನಲ್ಲಿದ್ದು ಕೊಳ್ಳದೆ, ಅದು ನಮ್ಮ ಮುಂದೆ ಯಾವಾಗಲೂ ಪ್ರೌಢನಾದ ಪುರುಷನ ಇಲ್ಲವೆ ಸ್ತ್ರೀಯಳ ರೂಪದಲ್ಲಿಯೇ ನಿಂತುಕೊಳ್ಳುವದ, ಇಂಥ ಅವಸ್ಥೆಯು ಅವರಿಗ ಪ್ರಾಪ್ತವಾಗತಕ್ಕದ್ದೇ ಎಂಬ ತಿಳವಳಿಕೆಯಿಂದ ನಾವು ಚಿಕ್ಕಬಾಲಕರಲ್ಲಿ ಇಷ್ಟು ಎಚ್ಚರಪಡುತ್ತಿರುವದು, ಇಷ್ಟೊಂದು ಮಾಯೆ-ಮಮತೆಯ ಭಾವನೆಯು ನಮ್ಮ ಮನಸ್ಸಿನಲ್ಲಿ ಸಹಜವಾಗಿಯೇ ಉತ್ಪನ್ನವಾಗುವದು, ತತ್ಸಂಬಂಧವಾದ ಆಶಾಂಕುರವು ಮೊಳೆತು ಅವರ ಬೆಳವಣಿಗೆಯ ಕೂಡಲೆಯೇ ಅದೂ ದೃಢಮೂಲವಾಗುತ್ತದೆ, ಮುಂತಾದ ಈ ಭಾವನೆಗಳೆಲ್ಲ ಅನವಶ್ಯಕ ಭಾವವುಗಳಾದ್ದರಿಂದ ಲಯಹೊಂದಿ. ಆ ಬಾಲ್ಯದ ಮುಗ್ಧತ್ವವೂ ಅದರ ಕೂಡಲೆಯೇ ಇಲ್ಲದಂತಾಗುವದು ಬಾಲ್ಯತ್ವದ ಕಲ್ಪನೆಯೂ ಕಣ್ಮರೆಯಾದಂತಾಗಿ, ಯಾವಾಗಲೂ ಪ್ರೌಢರಾದ ಪುರುಷ ಇಲ್ಲವೆ

ಸ್ತ್ರೀಯರ ತೆರದಿಂದಲೇ ಈ ಬಾಲಕರು ನಮ್ಮ ಮನಸ್ಸಿನಲ್ಲಿ ವಾಸಮಾಡಹತ್ತಿದರೆ, ಜನ್ಮದಾರಭ್ಯವೇ ಈ ಅವಸ್ಥೆಯು ಅವರಿಗೇಕೆ ಪ್ರಾಪ್ತವಾಗಬಾರದೆಂದು ನಮಗೆ ತೋರಲಾಗುವುದು. ಆದರೆ ನಾವು ಮಕ್ಕಳನ್ನು ಕಳೆದುಕೊಳ್ಳುತ್ತೇವಾಗ, ಅವು ನಮ್ಮ ಹಾಗೂ ಇತರರ ಕನಸು ಮನಸ್ಸಿನಲ್ಲಿಯೂ 'ಬಾಲಕ'ರೆಂಬಂತೆಯೇ ಉಳಿಯುವವು. ಉಳಿದ ಮಕ್ಕಳು ಬಾಲ್ಯ, ತಾರುಣ್ಯ, ಪ್ರೌಢ ಹಾಗೂ ವಾರ್ಧಕ್ಯಾವಸ್ಥೆಗಳೊಳಗಿಂದ ಹಾಯ್ದು ಹೋಗಿ ಕೊನೆಯಲ್ಲಿ ಮೃತ್ಯುಮುಖಕ್ಕೀಡಾಗುತ್ತವೆ. ಆದರೆ ಬಾಲ್ಯಾವಸ್ಥೆಯಲ್ಲಿಯೇ ಮಡಿದವರ, ಎಂದೂ ಮಾಗಿಯಲಾರದಂಥ ಬಾಲ್ಯವು ನಿರಂತರವಾಗಿದ್ದು ಒಂದು ಬಗೆಯಿಂದ ಅವರು ಅಮರರಂತೆಯೇ ಆಗುವರು. ಅವರ ಬೆಳವಣಿಗೆಯನ್ನು ನಿಲ್ಲಿಸಿ ಮೃತ್ಯುವು ತೋರಿಸಿದ ನಿರ್ಘೃಣತನವು, ನಿಜವಾಗಿ ಮೃತ್ಯುವಿನ ದಯೆಯೇ ಎಂದೆನ್ನಬೇಕಾಗುತ್ತದೆ. ಅವನ— ಆ ಮೃತ್ಯುವಿನ— ದಯಾಪರತೆಯಿಂದಲೇ ನಮ್ಮ ಮನಸ್ಸಿನಲ್ಲಿಯೊಂದು, ನಿಷ್ಪಾಪವಾದ ಮುದ್ದು ಬಾಲನ ಮೂರ್ತಿಯು ಸತತವೂ ಇದ್ದುಕೊಂಡಿರುತ್ತದೆ. ಕಲ್ಪನಾತರಂಗಗಳಲ್ಲಿ ಇಂಥ ಮೂರ್ತಿಗಳೇ ನಮ್ಮ ಮುಂದೆ ನಿಲ್ಲುವವು, ಹಾಗೂ ಪರಲೋಕದಲ್ಲಿಯೂ ಈ ಮೂರ್ತಿಗಳ ಸಾಕ್ಷಾತ್ಕಾರವೇ ನಮಗಾಗುವದೆಂಬ ಆಶೆಯು ದೃಢವಾಗಹತ್ತುತ್ತದೆ. ಸ್ವರ್ಗದಲ್ಲಿಯಾದರೂ, ಇವರಿಗಿಂತಲೂ ಹೆಚ್ಚು ಮೋಹಕವಾದ ಮೂರ್ತಿಗಳೆಲ್ಲಿಂದ ಬರಬೇಕು? ಇಲ್ಲವ, ಸ್ವರ್ಗವಾಸಿಗಳಿಗೂ ಇದೇ ಅವಸ್ಥೆಯು ಪ್ರಾಪ್ತವಾಗುತ್ತಿದ್ದೀತು. ಅದರಲ್ಲಿಯೂ, ಆ ಬಾಲ್ಯದ ಮುಗ್ಧತೆ, ಆ ಅವ್ಯಾಜಪ್ರೇಮ, ಬೇರಾದವರ ಮಾತಿನ ಮೇಲೆ ಶ್ರದ್ಧೆ ಇಡುವಷ್ಟು ತಾತ್ಕಾಲಿಕವಾದ ಪ್ರವೃತ್ತಿಯು, ಹಾಗೂ ಬಾಹ್ಯಸೃಷ್ಟಿಯ ಮೇಲೆ ಅಂತರಸೃಷ್ಟಿಯನ್ನಾರೋಪಿಸುವಂಥ ಮನಸ್ಸಿನ ಆ ಅಭ್ಯಾಸವು ವಾಸಿಸುತ್ತಿರಬೇಕು. ಐಹಿಕ ದುಃಖಕ್ಕೆ ಕಾರಣೀಭೂತವಾದ ಹಾಗೂ ನರಕಕ್ಕೆಳೆದೊಯ್ಯುವ, 'ಆಪಪರ, ಒಳಿತು ಕೆಡಕು' ಎಂಬೀ ತೆರದ ಭಾವನೆಗಳು ಸಮೂಲ ನಾಶವಾಗಿ 'ಸರ್ವಮೇಕಂ' ಎಂಬೀ ಪ್ರತ್ಯಯವೇ ಎಲ್ಲರಲ್ಲಿಯೂ ಜಾಗೃತವಾಗಿರಬೇಕು.

# ವಿನಂತಿ.

೧ ನಂದಿನಿಯು ಇನ್ನು ಮುಂದೆ ಪ್ರತಿತಿಂಗಳ ಮಧ್ಯದಲ್ಲಿಯೂ, ಎಂದರೆ ೨೦ನೆ ತಾರೀಖಿನೊಳಗೆ ಚಂದಾದಾರರ ಕೈಸೇರುವಂತೆ ಏರ್ಪಡಿಸಿರುವೆವು ತಾ। ೨೫ರ ವರೆಗೆ ಸಂಚಿಕೆಗಳು ಬರದೆ ಇದ್ದರೆ ತಿಂಗಳ ಕಡೆಯ ತಾ|| ನೊಳಗಾಗಿಯೇ ನಮ್ಮ ಕಾರ್ಯಾಲಯಕ್ಕೆ ಬರೆಯಬೇಕು ಆ ಬಳಿಕ ಬರುವ ಆಕ್ಷೇಪಗಳು ನಮಗೆ ಗಣ್ಯವಾಗದು

೨ ವರ್ಗಣೀದಾರರು ತಾವು ಬರೆಯುವ ಕಾಗದಗಳಲ್ಲಿ, ವರ್ಗಣೀದಾರರ ಸಂಖ್ಯೆಯನ್ನು ಸ್ಪಷ್ಟವಾಗಿ ಕಾಣಿಸಿದ್ದರೆ ಅನುಕೂಲ

೩ ವಿಳಾಸಗಳನ್ನು ತಿಂಗಳು-ಎರಡು ತಿಂಗಳಿಗೊಂದು ಬಾರಿ ಬದಲಾಯಿಸುವುದರಿಂದ ಪತ್ರಿಕೆಯು ಕೈತಪ್ಪಬಹುದು ಅಡಿಗಡಿಗೂ ಬದಲಾವಣೆಯಾಗಬೇಕೆಂದರೆ ಸಾಧ್ಯವಲ್ಲ. ಈ ಕಾರಣದಿಂದ ನಂದಿನಿಯಲ್ಲಿ ಸಹಾನುಭೂತಿಯುಳ್ಳ ಗ್ರಾಹಕವರ್ಗವು ತಮ್ಮ ಸರಿಯಾದ—ಗೊತ್ತಾದ ವಿಳಾಸಗಳನ್ನೇ ಕಾಣಿಸಬೇಕಲ್ಲದೆ, ಪದೇಪದೇ ಆಕ್ಷೇಪಿಸುವದಕ್ಕಾಗಲೀ, ತಮ್ಮ ತಪ್ಪು ವಿಳಾಸಗಳಿಂದ ಕೈತಪ್ಪುವ ಸಂಚಿಕೆಗಳಿಗಾಗಿ ಅಂಚೆಯಾಳುಗಳ ಮೇಲೆ ತಪ್ಪಿತಗಳನ್ನು ಹೊರೆಯಿಸಿ ಇಲ್ಲವೆ ಪತ್ರಚಾಲಕರನ್ನೇ ನಿಂದಿಸುವ ಪ್ರಯತ್ನಮಾಡಿ, ವೃಥಾ ತೊಂದರೆ ಪಡಿಸಬಾರದೆಂದೂ ಕೋರಿದೆ

---

# ಕೃತಜ್ಞತೆ.

ವ್ಯಾವಹಾರಿಕಯುಗದ ನವಸಂವತ್ಸರದ ಶುಭಾಗಮನವನ್ನು ಬಯಸಿ ನಮ್ಮ ಕಡೆಗೆ ಬಂದಿರುವ ಪತ್ರಗಳಿಗಾಗಿ ತತ್ಪ್ರೇಷಕರಾದ ನಮ್ಮ ಸದ್ಭಾವಬಾಂಧವರಲ್ಲಿ ಈ ಮೂಲಕ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸಿರುವವಲ್ಲದೆ, ವರ್ಷಪ್ರತಿಪದೆಯ ಶುಭೋದಯವನ್ನು ಕುರಿತು, ನಮ್ಮ ಭಗಿನೀ ಬಂಧುಬಾಂಧವರಲ್ಲೆಲ್ಲ ನಿಷ್ಕಲಂಕವಾದ ಬಂಧುಸ್ನೇಹವು ದೃಢಮೂಲವಾಗಿ, ರಾಷ್ಟ್ರೋನ್ನತಿ ವಿಚಾರದಲ್ಲಿ ಸರ್ವತ್ರ ಐಕಮತ್ಯವುಂಟಾಗುವಂತೆ ಅನುಗ್ರಹಿಸೆಂದು, ಸರ್ವೇಶರನಲ್ಲಿ ಪ್ರಾರ್ಥಿಸುತ್ತಿರುವೆವು.

## ವಿಶೇಷ ಸೂಚನೆ—

೧. ಬಹುಮಾನಸ್ಪರ್ಧೆಯ ವಿಷಯದಲ್ಲಿ ನಮ್ಮ ಭಗಿನಿಯರಿನ್ನೂ ಮೌನವ್ರತಧಾರಿಣಿಯರೇ ಆಗಿರುವದರಿಂದ ಮುಂದಿನ ಎಪ್ರಿಲ ತಿಂಗಳ ಕೊನೆಯ ವರೆಗೂ ಅವಧಿಯನ್ನು ಹೆಚ್ಚಿಸಲಾಗಿದೆ ಅಷ್ಟರಲ್ಲಿಯಾದರೂ, ನಮ್ಮ ಭಗಿನಿಯರ ಬಾಯಿ ಕಟ್ಟಿರುವಿಕೆಯು ತೆರೆಯಲ್ಪಟ್ಟು, ತಮ್ಮ ತಮ್ಮ ಅಭಿಪ್ರಾಯಗಳನ್ನು ಬರೆದು ಕಳುಹುವರೆಂದು ನಿರೀಕ್ಷಿಸಲ್ಪಟ್ಟಿದೆ

೨ ನಂದಿನಿಯಲ್ಲಿ ಪ್ರಕಟಿಸಲು ಲೇಖಗಳನ್ನು ಕಳುಹುವೆವೆಂದು ಕೆಲವು ಕಡೆಯಿಂದ ಪತ್ರಗಳು ಬಂದಿವೆ ಸದ್ಯದಲ್ಲಿ ಸಾಕಷ್ಟು ಲೇಖನಗಳೊದಗಿರುವದರಿಂದಲೂ, ಈಗಿನ ನಮ್ಮ ಗುರಿಯು ಸ್ತ್ರೀಯರ ಸ್ವಾನುಭವ ಲೇಖನಗಳ ಮೇಲಿರುವದರಿಂದಲೂ, ಹೊಸದಾಗಿ ಕಳುಹಬೇಕೆಂದಿರುವ ಬಂಧುವರ್ಗೀಯರ ಲೇಖನವನ್ನು ಅಲ್ಲಿಯೇ ತಡೆದಿಟ್ಟಿರುವಂತೆ ನಿವೇದಿಸಿರುವೆವಲ್ಲದೆ ನಮ್ಮ ಭಗಿನಿಯರ ಸ್ಫೂರ್ತಿದಾಯಕಗಳಾದ ಲೇಖನಗಳನ್ನೂ ಅಪೇಕ್ಷಿಸುತ್ತಿರುವೆವೆಂದು ಸೂಚಿಸಿದೆ

## ಕ್ಷಮೆ

ನಮ್ಮ ಸತೀಹಿತೈಷಿಣೀ ಮತ್ತು ನಂದಿನೀ ವರ್ಗಣಿದಾರರಲ್ಲಿಯೂ, ಪ್ರೋತ್ಸಾಹಕ, ಪೋಷಕ, ಹಿತಚಿಂತಕರಲ್ಲಿಯೂ ಹಲವು ಕಡೆಗಳಿಂದ ಕುಶಲ ಪತ್ರವ್ಯವಹಾರವನ್ನು ಬೆಳಯಿಸಬೇಕೆಂಬ ಪತ್ರಗಳು ಬಂದಿರುವುವು ಪತ್ರಸಂಪಾದಕಿಯರು, ತಮ್ಮ ಕಾರ್ಯಬಾಹುಳ್ಯದಲ್ಲಿ ಪತ್ರವ್ಯವಹಾರವನ್ನು ಬೆಳೆಯಿಸಲು ಅಶಕ್ತರಾಗಿರುವದರಿಂದಲೂ, ಕಾಲಾವಕಾಶವು ದೊರೆಯದಿರುವದರಿಂದಲೂ, ಆ ನಮ್ಮ ಬಾಂಧವರೆಲ್ಲರಲ್ಲಿಯೂ ಕ್ಷಮೆಯನ್ನು ಕೋರುತ್ತಿರುವರಲ್ಲದೆ, ಇಷ್ಟಕ್ಕೆ ಆಗ್ರಹಗೊಂಡು ತಿರಸ್ಕರಿಸದೆ, ಸಹಜ ಸೌಜನ್ಯದಿಂದ ಭ್ರಾತೃಸಹಾಯಕರಮ್ಮ ಅವಶ್ಯ ಕರ್ತವ್ಯವನ್ನು ತಿಳಿದು, ಕಾಲವರಿತು ಸಹಾನುಭೂತಿಯಿಂದ ಪ್ರೋತ್ಸಾಹಿಸಬೇಕೆಂದೂ ಪ್ರಾರ್ಥಿಸುತ್ತಿರುವರು.

(ಕಾರ್ಯನಿರ್ವಾಹಕರು)

# ಕರ್ಣಾಟಕ ನಂದಿನೀ.

1917 ನೆ ಏಪ್ರಿಲ್ | ಸಂಪುಟ ೧ ಸಂಚಿಕೆ ೭ | ಪಿಂಗಳ ಚೈತ್ರ



ವೃದ್ಧರೂ ಪ್ರಸಿದ್ಧರೂ ಕರ್ನಾಟಕ ದೇಶಭಕ್ತರೂ ಆಗಿರುವ ಶ್ರೀಯುಕ್ತ
ಎಮ್ ವೆಂಕಟಕೃಷ್ಣಯ್ಯನವರು

(ಕನ್ನಡದ ರನ್ನಗನ್ನಡಿ ಮಣಿ ೧)

॥ ಶ್ರೀ ॥

वन्देत्वां भूदेवीं आर्यमातरम्

ಕರ್ನಾಟಕ

# ನಂದಿನೀ

ಸ್ತ್ರೀಯರ ಸ್ವರ್ಗೀಯ ಜ್ಞಾನಾಭಿವೃದ್ಧಿಗಾಗಿ ಸ್ತ್ರೀಯರಿಂದಲೇ ಪ್ರಕಟವಾಗುತ್ತಿರುವ

ಮಾಸಪತ್ರಿಕೆ

" ಸ್ತ್ರೀಣಾಂ ಸರ್ವಾಂಗೀ ಭೂಷಣಂ, ಧರ್ಮೇಣ ಸಾಕಂ ತ್ರಿವರ್ಗ ಸಖಾ ॥
ದಾಸ್ಯಂತಿ ಮಮಯೇ ಲಕ್ಷ್ಮೀರ್ದೃಷ್ಟಾ ಸುಗೋಚರ ॥ "

ಸಂಪುಟ ೧ | ಸಿಂಗಳಕೃತ ೧೯೩೧ ಏಪ್ರಿಲ್ | ಸಂಚಿಕೆ ೭

## ಭಗವತ್ಪ್ರಾರ್ಥನೆ

(ರಾಗ-ದೇಶ ನಾರಿ)

ಕಂದನ ಕೈಪಿಡಿ ಬಾರೊ । ವಂದಿಪೆ ಕಂದ-ಬಾರೊ ॥ ಅ ॥

ಸರಸಿಜಭವಮುಖ ಸನ್ನುತಚಾರಿ । ಸುರನರವಂದಿತ ಚರಣಾಬ್ಜ ಶೌರಿ। ಪರಿಪರಿಬೇಡುವೆ ನಿನ್ನನು ಬಾರೊ । ಅರಿಯದ ಕಂದನ ಪೊರೆ ದಯೆ ತೋರೊ ॥ ಅರಿಯೆನು ಸಾಧನವನು । ಮರೆಯುವ ನಿನ್ನನು । ಕರುಣಾಕರ ನೆಂಬೀ ಬಿರುದ ನೆನೆದಿನ್ನು ॥ ಕಂದನ ॥ ೧ ॥ ವಸ್ತ್ರಧ ಪೀತ ಬಾ, ಸುಂದರ ಕಾಯ । ಮನ್ನಿಸು ಬಿನ್ನಪವ ಜೀಯ । ಚಿನ್ಮಯರೂಪನೆ ಚೆನ್ನಿಗರಾಯ । ಅನ್ಯರ ಸೇರೆನು ನೀ ಕೇಳಯ್ಯ ॥ ಎನ್ನೊಳಗೀಬಗೆ ನಿರ್ಣಯವೇಸನ್ನ । ಇನ್ನಾದರು ಕೈಪಿಡಿ ದಮ್ಮಯ್ಯ ॥ ೨ ॥ ಮಂದರಗಿರಿಧರ ಗೋವಿಂದನೇ ಬಾ । ನಂದಕುಮಾರನೆ ತಡೆಯದೆ ನೀ ಬಾ । ನಂದಿಸಿಗೊಲಿದಾನಂದವಕೊಡು ಬಾ–ಬೃಂದಾವನ ವಿಹಾರನೇ ಬಾ ಬಾ ॥ ಇಂದಿರೆಯರಸನೆ ಶೇಷಗಿರೀಶನೆ । ಇಂದೆನಗೊಲಿದ್ದು ತಂದೆಯ ಧಳಿರನೆ ॥ ಕಂದನ ಕೈಪಿಡಿ ಬಾರೊ ॥ ೩ ॥ [ಶ್ರೀಪಾದರೇಣು]

॥ ಶ್ರೀ ॥

वन्देत्वां भूदेवीं आर्यमातरम्

ಕರ್ನಾಟಕ

# ನಂದಿನೀ

ಸ್ತ್ರೀಯರ ಸ್ವರ್ಗೀಯ ಸ್ವಜನಾಭಿವೃದ್ಧಿಗಾಗಿ ಸ್ತ್ರೀಯರಿಂದಲೇ ಪ್ರಕಟವಾಗುತ್ತಿರುವ

ಮಾಸಪತ್ರಿಕೆ

---

"ಋದ್ಧಿಂ ಸರ್ವಾಣಿ ಭೂತಾನಿ, ಭೂತಾನಾಂ ಹೃದಯ ಪ್ರಭು ॥
ದಾಸ್ಯಸ್ತಿ ಮಮಯೇ ಭಾಸ್ಯೇತ್ಯದೃಷ್ಟಾ ಪದಿ ಗೋಚರ ॥"

ಸಂಪುಟ ೧ | ಪಿಂಗಳ-ಚೈತ್ರ, ೧೮೪೦ ಕ್ರಿ ೧೯೧೮ ಏಪ್ರಿಲ್ | ಸಂಚಿಕೆ ೩

## ಭಗವತ್ಪ್ರಾರ್ಥನೆ.

(ರಂಜಕದಲ್ಲಿ ಸಾರಿ)

ಕಂದನ ಕೈಬಿಡಿ ಶೌರಿ । ವಂದಿಪೆ ಕಂಸಾರಿ ॥ ಪ ॥

ಸರಸಿಜಭವಮುಖ ವಿನುತ ಶೌರಿ । ಸುರನರವಂದಿತ ಚರಣಾವ ಕೋರಿ।
ಪರಿಪರಿ ಬೇಡುವೆ ನಿನ್ನತಿ ಸಾರಿ । ಅರಿಯದ ಕಂದನ ಪೊರೆ ದಯ
ತೋರಿ ॥ ಅರಿಯೆನಾಧಾರನು । ಮರೆಯುಸು ನಿನ್ನನು । ಕರುಣಾಕರ
ನೆಂಬೀ ಬಿರುದ ನೆನೆದಿನ್ನು ॥ ಕಂದನ ॥ ೧ ॥ ನಿನ್ನಧಿಪತಿ ಬಾ,
ಸುಂದರ ಕಾಯ । ಮನ್ನಿಸು ಎನ್ನಪರಾಧದ ಜೇಯ । ಚಿನ್ಮಯರೂ
ಪನೆ ಚೆನ್ನಿಗರಾಯ । ಅನ್ಯರ ಸೆರೆಯುಸು ಸೀ ಕೇಳಯ್ಯ ॥ ಎನ್ನಾಳಿ
ಗೀಬಗೆ ನಿರ್ದಯವೇಸಯ್ಯ । ಇನ್ನಾದರು ಕೈಬಿಡ ದಮ್ಮಯ್ಯ ॥ ೨॥
ಮಂದರಗಿರಿಧರ ಗೋವಿಂದನೇ ಬಾ । ಸಂಗರಭವಹರನೆ ತಡೆಯದೆ
ನೀ ಬಾ । ನಂದಿಸಿ ಗೋಪಿಯಾನಂದವ ಕೊಡು ಬಾ--ಬೃಂದಾವನ ವಿಹಾರ
ನೇ ಬಾ ಬಾ ॥ ಇಂದಿರೆಯರಸನೆ ಶೇಷಗಿರೀಶನೆ । ಇಂದೆನಗೊಲಿದ್ದು
ತಂದೆಯೆ ಧೀರನೆ ॥ ಕಂದನ ಕೈಬಿಡಿ ಶೌರಿ ॥ ೩ ॥ [ಶ್ರೀ...]

### ಮಾತೃಮಂದಿರಂ

### ಕರ್ನಾಟಕ ನಂದಿನಿಯ ಷಾಣ್ಮಾಸಿಕೋತ್ಸವದ

# ಶಾರದಾ ಪೂಜಾ ಸಮಾರಂಭವು.

"ಸರಸ್ವತ್ಯೈ ನಮೋ ನಿತ್ಯಂ - ಭದ್ರಕಾಳ್ಯೈ ನಮೋನಮಃ ॥
ವೇದ ವೇದಾನ್ತ-ವೇದಾಙ್ಗ - ವಿದ್ಯಾಸ್ಥಾನೇಭ್ಯ ಏವಚ ॥"

ಹಿಂದಿನ (ಮಾರ್ಚ-ಫಾಲ್ಗುನ) ಸಂಚಿಕೆಯಲ್ಲಿ ಸೂಚಿಸಿದ್ದಂತೆ ನಂದಿನಿಯ ಷಾಣ್ಮಾಸಿಕೋತ್ಸವದ ಶಾರದಾ ಪೂಜಾ ಸಮಾರಂಭವು, ಫಾಲ್ಗುನ ಬಹುಳ ದಶಮಿ ಭಾನುವಾರ (ಮಾರ್ಚಿ ೧೮) ರಾತ್ರಿ, ಸಡಗರದಿಂದ ನೆರವೇರಿತು. ಮಾತೃಮಂದಿರದ ರಾತ್ರಿಪಾಠಶಾಲೆಯ ವಿದ್ಯಾರ್ಥಿಗಳೆಲ್ಲರೂ, ಶ್ರದ್ಧಾ-ಭಕ್ತಿ-ಗೌರವಗಳಿಂದ ಪೂಜಾಕಾರ್ಯವನ್ನು ನಡೆಯಿಸಿದರು. ಉತ್ಸವಕ್ಕೆ ನಂದಿನೀ ಪತ್ರಿಕೆಯ ಸ್ಥಳೀಯ ಗ್ರಾಹಕ, ಪೋಷಕ, ಪ್ರೋತ್ಸಾಹಕ, ಹಿತಚಿಂತಕರೆಲ್ಲರಿಗೆ ಆಹ್ವಾನವನ್ನು ಕಳುಹಿಸಿದ್ದಿತು. ಮಾತೃಮಂದಿರವು ಅಲಂಕೃತವಾಗಿದ್ದಿತು. ಸಾಯಂಕಾಲ ಏಳು ಗಂಟೆಗೆ, ಇಲ್ಲಿಯ ಮುನಸೀಫರು ಶ್ರೀಯುಕ್ತ ಸಿ. ಬಿ. ನಾಗಭೂಷಣರಾಯರು, ಅಮಲ್ದಾರರು ಶ್ರೀಯುಕ್ತ ಎನ್. ಗೋಪಾಲಯ್ಯಂಗಾರ್ಯರು, ಮುನಿಸಿಪಲ್ ವೈಸ್‌ಪ್ರೆಸಿಡೆಂಟರು ಶ್ರೀಯುಕ್ತ ಕೆ. ವೆಂಕಟಸ್ವಾಮಿ ಅಯ್ಯರವರು, ಸಬ್‌ರಜಿಸ್ಟ್ರಾರ್ ಶ್ರೀಯುಕ್ತ ಎಮ್. ಲಕ್ಷ್ಮೀಕಾಂತಯ್ಯಂಗಾರ್ಯರು, ಪೋಸ್ಟ್‌ಮಾಸ್ಟರು ಶ್ರೀಯುಕ್ತ ಸಿ. ಸೀತಾರಾಮಯ್ಯರವರು, ಮೊದಲಾದ ಅಧಿಕಾರಿಗಳೂ, ಶಿಕ್ಷಕರುಗಳಾದ ಲಕ್ಷ್ಮಣಯ್ಯಂಗಾರ್ಯರು, ಬಿ. ಸುಬ್ಬರಾಯರು, ಸಿ. ಕೇಶವಯ್ಯನವರು ಮೊದಲಾದ ಪ್ಲೀಡರುಗಳೂ, ಮತ್ತು ಇತರ ಉದ್ಯೋಗಸ್ಥರೂ ಕೂಡ ಸಹೃದಯದಿಂದ ಬಂದು, ಮಾತೃಮಂದಿರವನ್ನು ಶೋಭಾಯಮಾನವನ್ನಾಗಿ ಮಾಡಿದರು. ಮತ್ತು ವಿದ್ಯಾರ್ಥಿಗಳೂ, ಸುವಾಸಿನಿಯರೂ ಬಂದು, ಮತ್ತಷ್ಟು ರಂಜನೆಯನ್ನುಂಟುಮಾಡಿದರು.

ಪೂಜಾ ಕಾರ್ಯವು ೭ವರೆ ಘಂಟೆಗೆ ಮೊದಲಾಯಿತು. ಸಭಿಕರಿಗೆ ಸ್ವಾಗತಾಭಿವಂದನ ಪತ್ರವನ್ನು ಓದಿದ ಬಳಿಕ, ಸಂಪಾದಕಿಯರ ಸಮೀಪ ಬಂಧುವಾಗಿರುವ 'ಜಿ ಎಸ್ ನಾರಾಯಣ್' ಎಂಬ ವಿದ್ಯಾರ್ಥಿಯು, ಶಾರದಾ ಪೂಜೆಯನ್ನು ಕುರಿತು ಆಂಗ್ಲಭಾಷೆಯಲ್ಲಿ ಉಪನ್ಯಸಿಸಿ, ಸಭಿಕರ ಸಂತೋಷೋತ್ಸಾಹಗಳನ್ನು ಹೆಚ್ಚಿಸಿದನು (ಅದನ್ನು ಕನ್ನಡದ ಅನುವಾದದೊಡನೆ ಪ್ರತ್ಯೇಕ ಪ್ರಕಟಿಸುವ ಅಭಿಪ್ರಾಯವಿದೆ) ಆ ಬಳಿಕ ವಾತ್ಸ್ಯಮಂದಿರದ ಸಂಕ್ಷಿಪ್ತ ವೃತ್ತವನ್ನು ಒಳಕೊಂಡ ವಿಜ್ಞಾಪನ ಪತ್ರವು, ಪತ್ರಕರ್ತ್ರಿಯ ಕನಿಷ್ಠ ಸೋದರ- 'ವಿ ಕೆ. ನಾರಾಯಣ್' ಎಂಬ ವಿದ್ಯಾರ್ಥಿಯು ಸಭಿಕರಿಗೆ ಓದಿದನು. ಅದಾದ ಬಳಿಕ ಶ್ರೀರಾಮರಿಗೂ, ಸರಸ್ವತಿಗೂ, ಮಂಗಳಾರತಿಗಳಾದವು. ಬಳಿಕ, ಸಭಿಕರಿಗೆಲ್ಲಾ, ಫಲಪುಷ್ಪತಾಂಬೂಲಗಳು ವಿನಿಯೋಗವಾದವು ಈ ಮಧ್ಯದಲ್ಲಿ ಶ್ರೀಯುಕ್ತ ಲಕ್ಷ್ಮಣಯ್ಯಂಗಾರ್ಯರು ವಾತ್ಸ್ಯಮಂದಿರದ ವಿದ್ಯಾರ್ಥಿಗಳ ಶ್ರದ್ಧಾಭಕ್ತಿಗಳಿಗೂ, ವಿದ್ಯಾರ್ಥಿಗಳಿಗೆ ತಕ್ಕಂತೆ ಅನುಕೂಲ-ಅವಕಾಶಗಳನ್ನು ಕಲ್ಪಿಸಿಕೊಟ್ಟ ಹಿರಿಯರ ಸದಯಾಂತಃಕರಣಕ್ಕೂ ಸಂತೋಷಪಟ್ಟು, ಸಭಿಕರಪರವಾಗಿ, ವಿದ್ಯಾರ್ಥಿಗಳಿಗೆ ಹಿತೋಪದೇಶ ಮಾಡಿದುದಲ್ಲದೆ, ವಾತ್ಸ್ಯಮಂದಿರದ, ವಿದ್ಯಾರ್ಥಿಗಳ, ಹಿತೈಷಿಣೀ-ಸಂದಿನಿಯರ, ಮತ್ತು ಸಂದಿನೀ ಕರ್ತ್ರಿಯ ಗುರುಜನರ, ಶ್ರೇಯೋಭಿವೃದ್ಧಿಯನ್ನು ಕೋರಿ ತಮ್ಮ ಅಭಿನಂದನವನ್ನು ವ್ಯಕ್ತಪಡಿಸಿದರು ಆ ಬಳಿಕ, ಸಂದಿನೀ ಕರ್ತ್ರಿಯ ಪೂಜ್ಯಪಿತೃದೇವರು, ಉತ್ಸವೋತ್ಸುಕರಾಗಿ ಬಂದಿದ್ದವರೆಲ್ಲರಿಗೂ ತಮ್ಮ ಸಂತೋಷವನ್ನು ಸೂಚಿಸಿ, ಸಭಿಕರಿಗೂ, ಸ್ವದೇಶಕ್ಕೂ, ನಮ್ಮ ಪ್ರಜಾವತ್ಸಲರಾದ ಶ್ರೀಮನ್ಮಹಾರಾಜರಿಗೂ, ಸುಖ-ಸಂಪದಭ್ಯುದಯಗಳನ್ನು ಕೋರಿ, ಧನ್ಯವಾದವನ್ನರ್ಪಿಸಿದರು ರಾತ್ರಿ ೯ ಘಂಟೆಯ ವೇಳೆಗೆ, ಶ್ರೀಮನ್ಮಹಾರಾಜರ, ಚಕ್ರವರ್ತಿ ಸಾರ್ವಭೌಮರ, ಮತ್ತು ಪ್ರಭುವರ್ಗೀಯರ ಶ್ರೇಯಃ ಪ್ರಾರ್ಥನಾಪೂರ್ವಕವಾದ ಮಂಗಳ ಗೀತವಾದ್ಯಗಳ, ಮತ್ತು ಸಭಿಕರ ಕರತಾಡನಗಳ, ಕಲಕಲನಿನಾದಗಳೊಡನೆ ಉತ್ಸವವು ಸಾಂಗವೆನ್ನಿಸಿತು,

ಇಂದಿನ ಉತ್ಸವಕ್ಕೆ ಅಧಿಷ್ಠಾತ್ರಿಯಾದ ನಮ್ಮ ಭಗವತೀ ವಾಗ್ದೇವಿಯು ನಮ್ಮಲ್ಲಿ ಸರ್ವದಾ ನೆಲೆಗೊಂಡು, ನಮ್ಮ ಸೇವೆಯನ್ನು ಕೈಕೊಳ್ಳುತ್ತಿರಬೇಕೆಂದೂ, ಇನ್ನು ನಾಲ್ಕಾರು ದಿನಗಳಲ್ಲಿ ನಾವು ಇದಿರುಗೊಳ್ಳುತ್ತಿರುವ ಪಿಂಗಳ ಸಂವತ್ಸರವು ಮಂಗಳದಾಯಕವಾಗಿ ಹೀಗೆಯೇ ಅಡಿಗಡಿಗೆ ಆನಂದೋತ್ಸವಗಳನ್ನು ನಡೆಯಿಸುವಂತೆ ಅನುಗ್ರಹಿಸಿ, ತನ್ಮೂಲಕ ಸತ್ಪುರುಷರ ಸಂದರ್ಶನದ ಅಲಭ್ಯಲಾಭವನ್ನು ಹೊಂದುವಂತೆ ಕೃಪೆಗೈಯುತ್ತ ಬರಬೇಕೆಂದೂ ಪ್ರಾರ್ಥಿಸಿ, ಈ ನಮ್ಮ ಲೇಖವನ್ನು ಇಷ್ಟಕ್ಕೆ ಪೂರ್ಣಗೊಳಿಸುವೆವು

ಇತಿ (ಕಾರ್ಯನಿರ್ವಾಹಕರು)

---

( ವಿದ್ಯಾರ್ಥಿಗಳು ಸಭಿಕರಿಗೊಪ್ಪಿಸಿದ )

## ಸ್ವಾಗತವು.

ಆಪ್ತಬಾಂಧವರೇ !

ಕರ್ಣಾಟಕ ನಂದಿನಿಯು ವಾರ್ಷಿಕೋತ್ಸವದ ಪ್ರದರ್ಶನಕ್ಕಾಗಿ ಇಂದು ನಡೆಯುವ ಈ ನಮ್ಮ ಮಾತೃಮಂದಿರದ "ಶ್ರೀಶಾರದಾ ಪೂಜಾ" ಸಮಾರಂಭಕ್ಕೆ ತಾವುಗಳೆಲ್ಲರೂ, ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿ ಚಿತ್ತೈಸಿದುದಕ್ಕಾಗಿ ತಮ್ಮೆಲ್ಲರಿಗೂ,— ಮಾತೃಮಂದಿರದವರ ಪರವಾಗಿಯೂ, ಹಿತೈಷಿಣೀ ನಂದಿನೀ-ಸಂಪಾದಕಿಯರ ಪರವಾಗಿಯೂ, ಮತ್ತು ನಮ್ಮೀ ವಿದ್ಯಾರ್ಥಿಸಂಘದವರ ಪರವಾಗಿಯೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸಿ, ತಮ್ಮೆಲ್ಲರ ಸ್ವಾಗತವನ್ನು ಕೋರುವೆವು

ಕರ್ಣಾಟಕ ನಂದಿನಿಯು ಆಶ್ವಯುಜ ಶುದ್ಧ ವಿಜಯ ದಶಮಿಯಲ್ಲಿ ಹೊರ ಹೊರಟಾಗ, ಅಂದು, ತನ್ನ ಯಾತ್ರಾದಾನಮಹೋತ್ಸವ ಸಮಯದಲ್ಲಿ ತಮ್ಮೀ ಸಂದರ್ಶನದ ಅನುಗ್ರಹ-ಲಾಭವನ್ನು ಸಕ್ಕ

ದಾವರ್ತಿ ಮಾತ್ರ ಪಡೆದಿದ್ದಳು. ಇಂದು ಅದನ್ನು ಪುಷ್ಟೀಕರಿಸಿಕೊಳ್ಳಬೇಕೆಂದು ತಮ್ಮೆಲ್ಲರ ಸಂದರ್ಶನವನ್ನು ಕುರಿತು ಮಾತ್ರ ಕೋರಿದಳು ತಾವುಗಳೂ, ಅನುಗ್ರಹಬುದ್ಧಿಯಿಂದ ದಯಮಾಡಿದಿರಾದುದರಿಂದ, ತಮ್ಮೀ ಸೌಜನ್ಯವು ಸಂಧ್ಯಾ ಹಿತೈಷಿಣಿಯರಿಗೆ ಚಿರಸ್ಮರಣೀಯವಾಗಿ ತೋರುವಂತಾಯ್ತಲ್ಲದೆ, ಉದ್ದೇಶವು ಸಾರ್ಥಕವಾದಂತೆ ಭಾವನೆಯೂ ಉಂಟಾಗಿರುವದು

ಈ ಮಾತೃಮಂದಿರದಲ್ಲಿ, 'ಸತೀಹಿತೈಷಿಣಿ"ಯು ಜನ್ಮವೆತ್ತಿ ಮೂರು ವರ್ಷಗಳಾದುವು 'ನಂದಿನಿ'ಯು ಹುಟ್ಟಿ ಇಂದಿಗೆ ಆರು ತಿಂಗಳಾದವು ಮಾತೃಮಂದಿರದ 'ರಾತ್ರಿಪಾಠಶಾಲೆ"ಯು ಏರ್ಪಟ್ಟು ಕೂಡ ಆರು ತಿಂಗಳಾದುವು ಆರು ತಿಂಗಳಿಂದಲೂ ಇಲ್ಲಿ ಲೋವರ್ ಸೆಕಂಡರೀ ಪರೀಕ್ಷೆಯ ಪಾಠವು ಅಭ್ಯಾಸ ಮಾಡಲ್ಪಡುತ್ತಿರುವದು ಪರೀಕ್ಷೆಯು ಇನ್ನು ವಾರಾವಧಿಯಲ್ಲಿ ನಡೆಯತಕ್ಕುದಿದೆಯಾದುದರಿಂದ, ಪರೀಕ್ಷೆಯಲ್ಲಿ ಉತ್ತೀರ್ಣರಾಗುವಂತೆ ನಮ್ಮನ್ನು ನಮ್ಮ ಹಿರಿಯರು ಆಶೀರ್ವದಿಸಬೇಕೆಂದೂ, ನಮ್ಮ ವಾಗಧಿಷ್ಠಾತ್ರೀ ದೇವಿಯಾದ ಸರಸ್ವತಿಯು, ನಮಗೆ ಪ್ರಸನ್ನಳಾಗಿ, ನಮ್ಮ ಮೇಧಾಶಕ್ತಿ, ಬುದ್ಧಿಶಕ್ತಿ, ಜ್ಞಾಪಕಶಕ್ತಿಗಳನ್ನು ಹೆಚ್ಚಿಸಬೇಕೆಂದೂ, ಮತ್ತು ಇಂದಿನ ನಮ್ಮ ಉತ್ಸಾಹಾಮೋದಕ್ಕೆ ಕಾರಣರಾದ 'ಹಿತೈಷಿಣಿ + ನಂದಿನಿ" ಯರ ಉದ್ದೇಶವೂ ಪ್ರಯತ್ನವೂ ಸಾಫಲ್ಯಹೊಂದುವಂತೆ ತಾವೆಲ್ಲರೂ ನಿರ್ಮಲಾಂತಃಕರಣದಿಂದ ಭಗವತಿಯಲ್ಲಿ ಪ್ರಾರ್ಥಿಸಬೇಕೆಂದೂ ತಮ್ಮಲ್ಲಿ ಸಂಪ್ರಾರ್ಥಿಸಿ, ಈ ನಮ್ಮ ಸ್ವಾಗತಾಭಿವಂದನದ ಭಾಷಣವನ್ನಿಲ್ಲಿಗೆ ಪೂರ್ಣಗೊಳಿಸುವೆವಲ್ಲದೆ, ಶಾರದಾ ಪೂಜೆಗೆ ತಮ್ಮ ಅನುಗ್ರಹವನ್ನು ಕೋರುತ್ತಿರುವೆವು —

ಇಂತು ತಮ್ಮೆಲ್ಲರ ವಿಧೇಯರಾದ,
ಮಾತೃಮಂದಿರದ ವಿದ್ಯಾರ್ಥಿಗಳು.

ಶ್ರೀ

## ಸಭಿಕರಿಗೆ ಓದಿದ

## ವಾಕ್ಯಮಂದಿರದ ಸಂಕ್ಷಿಪ್ತ ವೃತ್ತವು.

ಯಯಾವಿನಾ ಜಗತ್ಸರ್ವಂ ಮೂಕಮುನ್ಮತ್ತವತ್ಸದಾ |
ವಾಗಧಿಷ್ಠಾತ್ರೀಯಾ ದೇವೀ ತಸ್ಯೈ ವಾಣ್ಯೈ ನಮೋನಮ ||"

**ಪೂಜ್ಯರೇ! ಮಹನೀಯರಾದ ಆರ್ಯಬಾಂಧವರೇ ||**

ನಾವು ವಾಕ್ಯಮಂದಿರದ ವಿದ್ಯಾರ್ಥಿಗಳೆಂದೂ, ಮತ್ತು ಮಂದಿರದ ಷಾಣ್ಮಾಸಿಕೋತ್ಸವಕ್ಕೂ, ಇಂದಿನ ನಮ್ಮ ಆನಂದೋತ್ಸಾಹಕ್ಕೂ ಕಾರಣವೇನೆಂದೂ ವಿವರಿಸುವದಾದ ಸ್ವಾಗತಾಭಿನಂದನ ಪತ್ರವನ್ನು ಮೊದಲೇ ತಮ್ಮ ಘನಸನ್ನಿಧಾನದಲ್ಲಿ ಒಪ್ಪಿಸಿರುವೆವಷ್ಟೆ! ಪ್ರಸ್ತುತದಲ್ಲಿ,— ವಾಕ್ಯಮಂದಿರದ ಉದ್ದೇಶವೇನು? ಈ ಮಂದಿರದಲ್ಲಿ ರಾತ್ರಿಪಾಠಶಾಲೆಯನ್ನು ಏರ್ಪಡಿಸಿಕೊಂಡು, ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳ ನೈಜವಾದ ಅಭಿಪ್ರಾಯವೇನು? ಎಂಬಿವನ್ನು ಕುರಿತು ವಿಜ್ಞಾಪಿಸಲುಳ್ಳವರಾಗಿ ತಮ್ಮ ಅಪ್ಪಣೆಯನ್ನು ಕೋರುವೆವು.

**ಮಹನೀಯರೇ!—**

ಆರ್ಯಜನಾಂಗಕ್ಕೆ ಸೇರಿದ ಮಾನವಜನ್ಮಧಾರಿಗಳಾದವರು— ಸ್ತ್ರೀಪುರುಷರೆಲ್ಲರೂ— ಸತ್ಯಸಂಧರಾಗಿಯೂ, ಸದಾಚಾರ ಸಂಪನ್ನರಾಗಿಯೂ, ದೇಶವತ್ಸಲರಾಗಿಯೂ, ಕರ್ತವ್ಯನಿಷ್ಠರಾಗಿಯೂ, ದೈವಭಕ್ತಿ, ರಾಜಭಕ್ತಿ, ರಾಷ್ಟ್ರಭಕ್ತಿಯುಳ್ಳವರಾಗಿಯೂ ಆಗಬೇಕೆಂಬುದು,— ಮತ್ತು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಜಿತೇಂದ್ರಿಯರಾಗಿಯೂ, ಪರಸ್ಪರ ಪ್ರೀತಿ, ಐಕಮತ್ಯಗಳುಳ್ಳವರಾಗಿಯೂ, ವಿದ್ಯೆಯಲ್ಲಿ ಆಸ್ಥೆ-ಸ್ವಾಸ್ಥ್ಯಗಳುಳ್ಳವರಾಗಿಯೂ, ಗುರುಜನರಲ್ಲಿ ವಿಧೇಯರಾಗಿಯೂ ಆಗಬೇಕೆಂಬುದು— ಸಹ ಈ ಮಂದಿರದ ಉದ್ದೇಶವು ಇದನ್ನು ಕಾರ್ಯಕಾರಿಯಾಗಿ ಮಾಡಬೇಕೆಂದೇ ಈ ಮಂದಿರದಿಂದ ಮೂರು

ತಿಂಗಳಿಗೊಂದು ಪೂರ್ಣಪುಸ್ತಕದಂತೆ ಪ್ರಕಟವಾಗುವ "ಸತೀಹಿತೈಷಿಣೀ ಗ್ರಂಥಮಾಲಾ" ಎಂಬ ಪುಸ್ತಕಾವಲಿಯೂ, ಪ್ರತಿತಿಂಗಳಲ್ಲಿಯೂ ಅನೇಕಾಂಶಗಳನ್ನು ಪ್ರತಿಪಾದಿಸುತ್ತ ಹೊರಡುವ "ಕರ್ಣಾಟಕ ನಂದಿನಿ" ಎಂಬ ಮಾಸಪತ್ರಿಕೆಯೂ ಹೊರಡುತ್ತಿವೆ

ಸ್ತ್ರೀಪುರುಷರು, ತಮ್ಮನ್ನು ಬಲಾತ್ಕಾರದಿಂದ ಆಕ್ರಮಿಸುತ್ತಿರುವ ಕುಂದು ಕೊರತೆಗಳನ್ನು ತಿದ್ದಿಕೊಳ್ಳುವದಕ್ಕೂ, ಆದರ್ಶನಾರಿಯರ, ಮಾರ್ಗದರ್ಶಕರಾದ ದೇಶಭಕ್ತರ, ಸದ್ವರ್ತನಗಳನ್ನು ತಿಳಿದು, ಅದರಂತೆ ನಡೆಯಲು ಅಭ್ಯಾಸ ಮಾಡುವದಕ್ಕೂ, ಮುಖ್ಯವಾಗಿ ಬೇಕಾಗುವ ವಿಷಯಗಳನ್ನು ಆರಿಸಿ ತೆಗೆದು ಮುಂದಿಟ್ಟು ಎಚ್ಚರಿಸುವದೇ ನಂದಿನೀ ಹಿತೈಷಿಣಿಯರ ಧ್ಯೇಯವಾಗಿದೆ

ಈ ವರೆಗೆ ಈ ಗ್ರಂಥಮಾಲೆಯಲ್ಲಿ ಪ್ರಸಿದ್ಧವಾಗಿರುವ ಒಂಭತ್ತು ಪುಸ್ತಕಗಳೊಳಗೆ, ಎರಡು ಪುಸ್ತಕಗಳು ದ್ವಿತೀಯ ಮುದ್ರಣವಾಗಿವೆಯಲ್ಲದೆ, ಮತ್ತೆರಡು ದ್ವಿತೀಯ ಮುದ್ರಣಕ್ಕೆ ಹೊರಡುವದರಲ್ಲಿವೆ. ನಮ್ಮ ಘನತೆ ಹೊಂದಿರುವ ಮೈಸೂರ ಸಂಸ್ಥಾನದ ವಿದ್ಯಾಭ್ಯಾಸದ

---

೧ ದಕ್ಷಕನ್ಯೆಯ ವಿಷಯದಲ್ಲಿ ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದ ವಿದ್ಯಾಭ್ಯಾಸ-ವ್ಯವಸಾಯ ಶಾಖೆಗಳ ಸೆಕ್ರೆಟರಿಗಳ ಸಮ್ಮುಖದಿಂದ ಅನುಗ್ರಹಿಸಲ್ಪಟ್ಟಿರುವ ೨೨-೬-೧೯೧೬ನೇ ತಾರೀಖಿನ 7443/22-16ನೇ ಜ್ಞಾಪಕಪತ್ರ (Memorandum) ದಿಂದ ಹೀಗೆ ತಿಳಿಯುತ್ತದೆ —"With reference to her petition dated 17th November 1915 requesting patronage to her book 'Dakshakanya", Tirumalamba is informed that the Inspector General of Education in Mysore has arranged to purchase 50 copies of the book, to be given as Prize books in the Kannada Schools of the State"

೨ ರಮಾನಂದದ ವಿಷಯವಾಗಿ ೧೯೧೭ನೇ ಫೆಬ್ರುವರಿ ೧ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಹೀಗೆ ಪ್ರಸಿದ್ಧವಾಗಿದೆ—"Edu-

ಇಲಾಖೆಯವರು ಇವುಗಳೆಲ್ಲದರಲ್ಲಿಯೂ ತಕ್ಕಮಟ್ಟಿಗೆ ಪ್ರತಿಗಳನ್ನು ಸ್ವೀಕರಿಸಿ ಪ್ರತಿಫಲರೂಪವಾಗಿ ದ್ರವ್ಯಸಹಾಯವನ್ನಿತ್ತು ನಮ್ಮನ್ನು ವಿಶೇಷವಾಗಿ ಪ್ರೋತ್ಸಾಹಿಸಿ-ಪ್ರೋತ್ಸಾಹಿಸುತ್ತ ಬರುತ್ತಿರುವರಲ್ಲದೆ, ಗ್ರಂಥಮಾಲೆಯ ೫ನೆಯ ಪುಸ್ತಕವಾದ ದಕ್ಷಕನ್ಯೆಯನ್ನು ಮೈಸೂರ ಸಂಸ್ಥಾನದ ಕರ್ನಾಟಕ ಪಾಠಶಾಲೆಗಳ ಬಹುಮಾನಪುಸ್ತಕವಾಗಿ ನಿರ್ಧರಿಸಿರುವದೂ, ಗ್ರಂಥಮಾಲೆಯ ೭ನೆಯ ಪುಸ್ತಕವಾದ ರಮಾನಂದವನ್ನು ಇತ್ತಕಡೆಯ ಫೋರ್ಥಫಾರ್ಮಿಗೆ (IV Form) 1917-18ರ ಪಠ್ಯಪುಸ್ತಕವನ್ನಾಗಿ ನಿಯಮಿಸಿರುವದೂ ೨ ಮತ್ತು ಗ್ರಂಥಮಾಲೆಯ ೧-೩ನೇ ಪುಸ್ತಕಗಳಾದ ಸುಶೀಲೆ ವಿದ್ಯುಲ್ಲತೆ, ಮಾತೃನಂದಿನಿಯರ ವಿಷಯದಲ್ಲಿ ತಮ್ಮ ಸಹೃದಯವನ್ನು ಲಿಖಿತ ಮೂಲಕ ವ್ಯಕ್ತಪಡಿಸಿರುವದೂ, ಇವು ನಮ್ಮ ಅಧ್ಯವಸಾಯದಲ್ಲಿ ನಮಗೆ ನವಶಕ್ತಿಯನ್ನುಂಟುಮಾಡುವಂತಹ ಪರಮೋತ್ಕೃಷ್ಟ ಸಹಾಯವಾಗಿವೆ. ಅಲ್ಲದೆ, ಮದರಾಸು ವಿದ್ಯಾಪೀಠದವರು ವಿದ್ಯುಲ್ಲತೆಯನ್ನು ಮದರಾಸು ಯೂನಿವರ್ಸಿಟಿ ಇಂಟರಮೀಡಿಯೇಟ್ ಪರೀಕ್ಷೆಗೆ ೧೯೧೮ನೆ ವರ್ಷದ

---

Notification D No. 79 dated 29th January 1917 'Ramanandi' .. .. .. has become the Kannada Text for IV Form for the year 1917 1918."

೩ ಸುಶೀಲೆ ಮತ್ತು ವಿದ್ಯುಲ್ಲತೆಗಳಿಗಾಗಿ ಮೈಸೂರ ಶ್ರೀಮನ್ಮಹಾರಾಜರವರ ಸರ್ಕಾರದ ವಿದ್ಯಾಭ್ಯಾಸ-ವ್ಯವಸ್ಥಾಯ ಖಾತೆಯ ಸೆಕ್ರೆಟರಿಯವರ ಸಮ್ಮುಖದಿಂದ ಬಂದಿರುವ ಜ್ಞಾಪಕಪತ್ರಗಳ —

೧ ವಿದ್ಯುಲ್ಲತೆಗೆ } No 2865/Edn 28 14 838 ಜ್ಞಾಪಕ ಪತ್ರ
dated 16th February 1915
[Memorandum]

"With reference to her petition dated 25th December 1914 praying patronage to her book 'Vidyullata', the undersigned is directed to inform

ಪದ್ಯ ಪುಸ್ತಕವಾಗಿಟ್ಟು, ಅದರ ಪ್ರಯೋಜನದ ವಿಷಯದಲ್ಲಿ ತಮ್ಮ ಗೌರವಬುದ್ಧಿಯನ್ನು ವ್ಯಕ್ತಪಡಿಸಿರುತ್ತಾರೆ. I ಮತ್ತು ಮದರಾಸು ವಿದ್ಯಾಭ್ಯಾಸದ ಇಲಾಖೆಯವರು ಸುಶೀಲೆಯನ್ನು ಸರ್ಕಾರ ಪಾಠ ಶಾಲೆಗಳಲ್ಲಿ ಪಾಠಪುಸ್ತಕವಾಗಿಡಲು ತಮ್ಮ ಒಪ್ಪಿಗೆಯನ್ನು ಸೂಚಿಸಿ, ಮೆಚ್ಚಿಗೆಯನ್ನು ಪ್ರಕಟಿಸಿರುತ್ತಾರೆ. II ಸುಶೀಲೆಯ ವಿಷಯದಲ್ಲಿ ಬೊಂಬಾಯಿಯ ಕಡೆಯವರ ಸದಭಿಪ್ರಾಯವು ದೊರೆತಿದ್ದು, ಅದರ ಫಲಪ್ರಾಪ್ತಿ ಸಮಯವು ಮುಂದೆ ಕಾಣತಕ್ಕದಾಗಿದೆ.

ಇದಲ್ಲದೆ, ಪತಿಹಿತೈಷಿಣೀ ಗ್ರಂಥಮಾಲೆಗೆ ಮದರಾಸು ಸ್ಕೂಲ ಬುಕ್ ಲಿಟರೇಚರ ಸೊಸೈಟಿಯವರು ಕಳೆದ ವರ್ಷ ೭೫ ರೂಪಾಯಿಗಳ ಬಹುಮಾನದ್ರವ್ಯವನ್ನೂ, ಈ ವರ್ಷ ೯೫ ರೂಪಾಯಿಗಳ ಬಹುಮಾನ ದ್ರವ್ಯವನ್ನೂ ಕಳುಹಿಸಿ, ವಿಶೇಷವಾದ ಪ್ರೋತ್ಸಾಹವನ್ನು ತೋರಿಸಿರುತ್ತಾರೆ. ೧ ಇದಲ್ಲದೆ, ಧಾರವಾಡ ವಿದ್ಯಾವರ್ಧಕಸಂಘದವರೂ ಗ್ರಂಥಮಾಲೆಯ ೨ನೇ ಪುಷ್ಪವಾದ ಸಭೆಗೆ ಬಹುಮಾನ ದ್ರವ್ಯವನ್ನು ಇತ್ತು ಪ್ರೋತ್ಸಾಹಿಸಿರುವರು. ಇಂತಹ ಪ್ರಬಲಾಶ್ರಯ

---

Tirumalamba that 100 copies of the book have been ordered by the Inspector General of Education in Mysore to be purchased for the use of the Education

೨ (ಸುಶೀಲೆಗಾಗಿ) ೨೯-೮-೧೯೧೫ನೇ ತಾರೀಖಿನ No 581/Edn 23-11 1573 ಜ್ಞಾಪಕಪತ್ರ (Memorandum).

"With reference to her petition dated 25th June 1915 expressing gratitude for the patronage already accepted to her books and submitting two copies of her 'Sushile' as edited a second time the undersigned is directed to inform the petitioner that 50 copies of the Second Edition of 'Sushile' have been ordered by the Inspector General of Education in Mysore for the use of Girls' Schools." (ಸಂ. ಸ. ಹಿ.)

ಗಳಲ್ಲದೆ, ನಮ್ಮ ಕರ್ಣಾಟಕ ದೇಶ ಭಗಿನೀ-ಬಾಂಧವರಲ್ಲಿಯೂ ಅನೇಕ ಕಡೆಗಳಿಂದ, ತಕ್ಕಮಟ್ಟಿಗೆ ತೃಪ್ತಿಕರವಾಗಿಯೇ ಉದಾರವಾದ ಆಶ್ರಯ-ಪ್ರೋತ್ಸಾಹ-ಸಹಾಯಗಳು ದೊರೆತಿರುತ್ತವೆ. ಇವೆಲ್ಲವನ್ನೂ ನೋಡುವದರಿಂದ ನಮ್ಮ ಮಾತೃಮಂದಿರದ ಉದ್ದೇಶವು ತಕ್ಕಷ್ಟು ಕಾರ್ಯಕಾರಿಯಾಗಿಯೂ, ಕರ್ಣಾಟಕ ಬಾಂಧವರಿಗೆ ಉಪಯೋಗಕರವಾಗಿಯೂ ಇರುವದೆಂದು ಧಾರಾಳವಾಗಿ ಹೇಳಬಹುದಾಗಿದೆ.

(ಇಲ್ಲಿ)-ಮಾತೃ-ಎಂದರೆ "ತಾಯಿ" ಎಂದು ಎಲ್ಲರೂ ಬಲ್ಲರಷ್ಟೆ! "ಮಂದಿರ"ವೆಂದರೆ-ಮಾನ್ಯವಾದ ಗೌರವಾರ್ಹವಾದ ಮನೆ, ಅಥವಾ ವಾಸಸ್ಥಳವೆಂದೂ ರೂಢಿಯಾಗಿಯೇ ಇದೆ "ಗೃಹಿಣೀ ಗೃಹಮುಚ್ಯತೆ" ಎಂಬ ನ್ಯಾಯವನ್ನು ಅನುಸರಿಸಿ ಅರ್ಥೈಸಿಕೊಂಡು ಅರ್ಥಾಂತರವನ್ನೂ ಮಾಡಬಹುದು ಇರಲಿ,

" ಮಾತಾಸಮೋ ನಾಸ್ತಿ, ಶರೀರ ಪೋಷಣೇ । ಭಾರ್ಯಾಸಮೋ ನಾಸ್ತಿ ಶರೀರ ತೋಷಣೆ ॥ ವಿದ್ಯಾ ಸಮೋ ನಾಸ್ತಿ ಶರೀರ

---

೪ ಮಾತೃನಂದಿನಿಯ ವಿಷಯದಲ್ಲಿ ನಮ್ಮ ಘನತೆಹೊಂದಿದ ಮೈಸೂರ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳವರ ಸನ್ನಿಧಾನದಿಂದ ಅನುಗ್ರಹಿಸಲ್ಪಟ್ಟು ಬಂದಿರುವ ಆಜ್ಞಾಪತ್ರಗಳಲ್ಲಿ—

ತಾ॥ 13/20-9-1916ನೆಯ ಆಜ್ಞಾಪತ್ರದಲ್ಲಿ ಬಂದಿರುವದು:—

"With reference to her letter dated the 24th April 1916 requesting patronage to her book 'Matru-Nandini', the undersigned has the honour to request her to be good enough to supply to this office 50 copies of the book at 14 annas a copy and to send a bill of cost for the same"

ಮತ್ತೆ ತಾ॥ 29-9-1916 ನೇ ನಂಬರ 7920/7976ರ ಅಭಿನಂದನ ಪತ್ರದಲ್ಲಿರುವದು —

"Madam.

With reference to your letter dated the 22nd

ಭೂಷಣೇ" ಎಂದು ಆರ್ಯರು ಹೇಳಿಯೇ ಇರುವರಲ್ಲವೆ? ಹೀಗೆ ಈ ಮೂರು ಬಗೆಯ ಸುಖ-ಸಂತೋಷ-ವೈಭವಗಳು ಈ ಗ್ರಂಥಮಾಲೆಯನ್ನು ಚೆನ್ನಾಗಿ ಸಮಾಲೋಚಿಸಿ, ಅನುಷ್ಠಾನಕ್ಕೆ ತರುವವನಿಗೆ ಉಂಟಾಗುವದರಲ್ಲಿ ಸಂಶಯವಿಲ್ಲ

ನಮ್ಮ ಸರ್ಕಾರಿ ಪಾಠಶಾಲೆಗಳಲ್ಲಿ ಬೋಧಕರು ಮಕ್ಕಳಿಗೆ ಅಕ್ಕರೆಯಿಂದ ಹೇಳುವ ಪಾಠಗಳನ್ನು ಎಚ್ಚರಿಕೆಯಿಂದಲೂ, ಆಶೆಯಿಂದಲೂ, ಮನನಮಾಡಿಕೊಳ್ಳದಿದ್ದರೆ ಅವು ಚಿರವಾಗಿ ನಿಲ್ಲುವದಿಲ್ಲ. ಅದನ್ನು ಅಡಿಗಡಿಗೆ ಚಿಂತನ ಮತ್ತು ಪಠನಮಾಡುತ್ತ ಬಂದರೆಯೇ ಅದು ಮನಸ್ಸಿಗೆ ಚೆನ್ನಾಗಿ ನಾಟುವದು ಅದರಲ್ಲಿಯೂ ವಿದ್ಯಾರ್ಥಿಗಳೂ ಒಟ್ಟುಸೇರಿ, ಸಮಾಲೋಚಿಸಿ ಮನನಮಾಡಿಕೊಳ್ಳುವದಾದರೆ ಮತ್ತಷ್ಟು ಫಲಕಾರಿಯಾಗುತ್ತದೆ. ಇದಕ್ಕಾಗಿಯೇ "ಸತೀಹಿತೈಷಿಣಿ"ಯು ಸೂಚನೆಯಂತೆ ನಡೆಯುತ್ತ, ನಮ್ಮ ನಡೆನುಡಿಗಳನ್ನು ಕ್ರಮಪಡಿಸಿಕೊಂಡು ನಾವು, ದೇಶಸೇವಕರೂ, ಸಮಾಜ ಹಿತೈಷಿಗಳೂ, ಮತ್ತು ಮಾತಾ-ಪಿತೃ-ಗುರು ಸೇವಾನಿಷ್ಠರೂ, ರಾಜಭಕ್ತ ಸಂಪನ್ನರೂ ಆಗ

---

ultimo sending 50 copies of the book Matru Nandini as per this Office No 7001/760 dated 13-9-1916 and 50 copies of the book Bhadragita-vali, sent for presentation to school children, I have the honour to acknowledge with thanks the receipt of these books and to state that the bill for Rs 4-8-0 of the value of 50 copies of Matru Nandini will be paid shortly" (ಸಂ ಸ ಹಿ)

(1) ಮದ್ರಾಸು ಯೂನಿವರ್ಸಿಟಿ ರಜಿಸ್ಟ್ರಾರರವರ ಸನ್ನಿಧಾನದಿಂದ ಒಪ್ಪವಾಗಿರುವ ತಾ|| ೧೧-೯-೧೭ನೇ ನಂಬರ ೬೫ನೇ ಸೂಚನಾಪತ್ರವು ಹೀಗೆ ವಿದಿತವಾಗಿರುತ್ತದೆ —"...... I have the honour to inform you that 'Vidyullata (Sathi Hithaishini Series)' is one of the text-books in Kanarese prescribed for the Intermediate Examination in arts [under part III Group III] of 1918."

ಬೇಕೆಂಬ ಉದ್ದೇಶದಿಂದ ಇಲ್ಲಿಯು ಈ ರಾತ್ರಿಪಾಠಶಾಲೆಯು ಏರ್ಪಟ್ಟಿತು ಈ ನಮ್ಮ ಉದ್ದೇಶವು ಆರು ತಿಂಗಳಿಂದಲೂ ನಡೆಯುತ್ತ ಬಂದಿದ್ದು ಇಂದು ನಮ್ಮ ಪ್ರಯತ್ನವು ಸಫಲ್ಯವಾದಂತೆ ಗುರುಜನರ ಆಶೀರ್ವಾದದಿಂದ ಈ ಉತ್ಸವವು ನಮಗೆ ಲಭಿಸಿದುದಕ್ಕಾಗಿ ನಾವು ನವಶಕ್ತಿಯನ್ನು ಹೊಂದಿದವರಂತೆ ತಿಳಿದು ಉತ್ಸಾಹಪಡುತ್ತಿರುವೆವು

ಇಂದಿನ ನಮ್ಮ ಈ ಸೂತಸೋತ್ಸವವು, ನಮ್ಮ ಹಿತೈಷಿಣೀ-ನಂದಿನಿಯರ ಚಿರಸ್ಮರಣೀಯರಾಗಿರುವ ಪೂಜ್ಯರಾದ ಮಹನೀಯರ ಮತ್ತು ತಮ್ಮಗಳ ಕಾಯೋಚಿತ ಸಹಾಯ-ಪ್ರೋತ್ಸಾಹಗಳ ಬಲದಿಂದ ಉತ್ತರೋತ್ತರ ಫಲಕಾರಿಯಾಗುವಂತೆ ಭಗವಂತನು ಅನುಗ್ರಹಿಸಲೆಂದೂ, ಕಳೆದ ಎರಡೂವರೆವರ್ಷಗಳ ದೀರ್ಘಕಾಲದಿಂದ ನಡೆಯುತ್ತಿರುವ ಸಂಗ್ರಾಮದಲ್ಲಿ ನಮ್ಮ ಚಕ್ರವರ್ತಿಗಳಿಗೆ ವಿಜಯವುಂಟಾಗಿ ನಮ್ಮನ್ನು ಪರಿಪಾಲಿಸುವ ನಮ್ಮ ಧರ್ಮಪ್ರಭುಗಳಾದ ಶ್ರೀಮನ್ಮಹಾರಾಜರವರಿಗೂ, ಶ್ರೀಮಾನ್ ಯುವರಾಜರವರಿಗೂ ಸತ್ಪುತ್ರಸಂತಾನ, ಆಯುರಾರೋಗ್ಯೈಶ್ವರ್ಯತ್ತು ಕಾಲಕಾಲಕ್ಕೆ ಬರುವಂತೆಯೂ, ನಮ್ಮ ಭಾರತೀಯರಿಗೆ ಸುಖ-ಸಂತೋಷಗಳು ಹೆಚ್ಚುವಂತೆಯೂ ಮಹನೀಯರಾದ ಪೀಠಸ್ಥರಿಗೆ ನಿರ್ಮಲ ಮನಸ್ಸಿನಿಂದ ಭಗವಂತನಲ್ಲಿ ಪ್ರಾರ್ಥಿಸಬೇಕೆಂದು ನಿಮ್ಮಲ್ಲಿ ನಾವು ದೈನ್ಯಭಾವದಿಂದ ಸಂಪ್ರಾರ್ಥಿಸುವೆವು

---

( ) ಸುಶೀಲೆಯ ವಿಷಯದಲ್ಲಿ ಮದರಾಸು ಪಬ್ಲಿಕ ಇನ್‌ಸ್ಟ್ರಕ್ಶನ್ಸ ಡೈರೆಕ್ಟರರವರ ಸಮ್ಮತಿಪಿಸಿದ ಬಂದಿರುವ ತಾ|| ೨೦-೧-೧೯೧೭ ನಂಬರ ೪೧೪ನೇ ಸರ್ಕಲಿನಲ್ಲಿ ಹೀಗೆ ತಿಳಿಯ ಬರುತ್ತದೆ "... Tirumalamma is informed that her book entitled 'Susheela' has been approved by the text-book committee for use in public schools in this Presidency ..." (ಸಂ. ಸ. ಹಿ.)

ಈ ವರ್ಷದಲ್ಲಿ ಬಹುಮಾನವನ್ನು ಕಳುಹುವ ಮುಂದೆ ಸೊಸೈಯಿಟಿಯವರಿಂದ ನಮ್ಮಲ್ಲಿಗೆ ಬಂದಿರುವ ಸೂಚನಾ ಪತ್ರದ ಕೆಲವು ಪ್ರಾಮುಖ್ಯ ವಿಷಯಗಳನ್ನು ಮಾತ್ರ ಇಲ್ಲಿ ಪ್ರಕಟಿಸಿ, ಈ ಮೂಲಕ ನಮ್ಮ ಕೃತಜ್ಞತೆಯನ್ನು ಪ್ರದರ್ಶಿಸುತ್ತೇವೆ (ಸಂಪಾದಕಿ.)

## ಭಗವತ್ಕೃಪೆಯಿಂದ

ನಮ್ಮ ಚಕ್ರವರ್ತಿ-ಸಾರ್ವಭೌಮರಿಗೆ ವಿಜಯವಾಗಲಿ! ನಮ್ಮನ್ನಾಳುವ ಶ್ರೀಮನ್ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ, ಜಿ ಸಿ ಎಸ್. ಐ ಯವರಿಗೆ ಸತ್ಸಂತಾನ-ದೀರ್ಘಾಯುರಾರೋಗ್ಯಗಳುಂಟಾಗಲಿ !! ನಮ್ಮ ಯುವರಾಜರವರಿಗೆ ಸತ್ಸಂತಾನ-ದೀರ್ಘಾಯುರಾರೋಗ್ಯಗಳುಂಟಾಗಿ ಪ್ರಕಾಶಿಸಲಿ !!'

ನಿರಂತರ ವಿಧೇಯರಾದ ದೇಶಸೇವಾಸಮಾಜದ ವಿದ್ಯಾರ್ಥಿಗಳೆನ್ನಿಸುವಂತೆ ವಾಗ್ದೇವಿಯು ನಮಗೆ ಪ್ರಸನ್ನೆಯಾಗಿ ವರವೀಯಲಿ! ಸ್ವಸ್ತಿ

ಸರ್ವೇ ಜನಾಸ್ಸುಖಿನೋ ಭವಂತು! ಸವ ಸ್ವಸ್ತ್ಯಂಗಳಾನಿ ಭವಂತು [ತಥಾಸ್ತು-ತಥಾಸ್ತು ತಥಾಸ್ತು!!!]

ಇಂತಾಶಿಸುವ ಮಾತೃಮಂದಿರದ ವಿದ್ಯಾರ್ಥಿಗಳು

---

" From,

The Rev Canon Sell D D President,
Madras School Book and Literature Society
Church Mission House, Vepery-Madras.

Feb 23rd 1917

Extract from the proceedings of the M S B and L Society dated February 21st 1917

8 (*b*) Recd letters from Tirumalammal, Nanjangudd dated June 7th and December 30th 1916

### RESOLUTION

The Committee sanction *Rs* 35 *for Ramananda*, *Rs* 40 *for Matru-Vandini* and *Rs* 20 *for Chandra Vadana*

(True Extract.) . ............... '

(ಸಂ. ಸ ಹಿ.)

# ಮಹಿಳಾ ಸೇವಾಸಮಾಜ.

( ಬೆಂಗಳೂರು )

ಮಹಿಳಾ ಸೇವಾಸಮಾಜದ ಪ್ರೆಸಿಡೆಂಟರಾದ ಶ್ರೀ|| ಸೌ|| ಪಾರ್ವತಮ್ಮನವರು ಬೆಂಗಳೂರು ಥಿಯಾಸೊಫಿಕಲ್ ಸೊಸೈಟಿಯ ಮಂದಿರದಲ್ಲಿ, ಈಚೆಗೆ ಲಖನೌ ಪಟ್ಟಣಕ್ಕೆ ಸಂಬಂಧಪಟ್ಟ ಸಂಗತಿಗಳನ್ನು ಕುರಿತು ಕನ್ನಡದಲ್ಲಿ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಕೊಟ್ಟರು.* ಅನೇಕ ಜನ ಹೆಂಗಸರು ಉಪನ್ಯಾಸಕ್ಕೆ ಬಂದಿದ್ದರು. ಲಖನೌ ಪಟ್ಟಣದ ಸ್ಥಾನ, ವಾಯುಗುಣ, ಪೂರ್ವಚರಿತ್ರೆ, ಈಗ ಇಂಡಿಯಾದೇಶದಲ್ಲಿ ಅದಕ್ಕೆ ಇರುವ ಪ್ರಾಶಸ್ತ್ಯ, ಸುಂದರವಾದ ಕಟ್ಟಡಗಳನ್ನೂ ಮನೋಹರವಾದ ಉದ್ಯಾನಗಳನ್ನೂ ಒಳಕೊಂಡಿರುವದು. ಇವೇ ಮೊದಲಾದ ಸಂಗತಿಗಳನ್ನು ತಿಳಿಸಿದ ನಂತರ ಕಳೆದ ಡಿಸೆಂಬರ ತಿಂಗಳಿನಲ್ಲಿ ತಮ್ಮ ಯಜಮಾನರ ಸಂಗಡ ಅಲ್ಲಿಗೆ ಹೋಗಿದ್ದ ಸಂದರ್ಭವನ್ನು ಅಲ್ಲಿ ಹಿಂದೂಗಳಿಗೆ ಅತ್ಯುತ್ತಮವಾದ ಮಾರ್ಗಶೀರ್ಷ

---

* ಹಿಂದಿನ ೩ ನೆ ಸಂಚಿಕೆಗಳಲ್ಲಿ ಉಲ್ಲೇಖಿತವಾಗಿರುವ ನಮ್ಮ ಸನ್ಮಾನ್ಯ ಭಗಿನಿಯರಾದ ಶ್ರೀ|| ಸೌ|| ಪಾರ್ವತಮ್ಮನವರು ನಮ್ಮ ಕರ್ಣಾಟಕ ದೇಶದ, ಕರ್ಣಾಟಕ ಮಹಿಳಾ ಪ್ರಪಂಚದ ಅಭ್ಯುದಯವಾಗಬೇಕೆಂದು ಪಡುತ್ತಿರುವ ಅವರ ಸತತೋದ್ಯಮವನ್ನು ಕುರಿತು ನಮ್ಮ ಸ್ವಂತ ವಾಕ್ಸರಣಿಯಿಂದ ಮಾತ್ರ ಪ್ರಸ್ತಾಪಿಸಿದ್ದೆವು. ಶ್ರೀ| ಸೌ| ಯವರ ಪ್ರಯತ್ನಗಳಲ್ಲಿ ಒಂದಾಗಿರುವ ಈ ಉಪನ್ಯಾಸದ ಸಾರಾಂಶವನ್ನು ಇಂದು ನಮ್ಮ ಸೋದರಿಯರ ಅವಗಾಹನೆಗಾಗಿ ಇಲ್ಲಿ ಸಂತೋಷದಿಂದ ಪ್ರಕಟಿಸಿರುವೆವು. ನಮ್ಮ ಭಗಿನಿಯರು ಇದನ್ನು ಸಾವಧಾನದಿಂದ ಸಮಾಲೋಚಿಸಿ ಉಪಯುಕ್ತಾಂಶಗಳನ್ನು ಸಂಗ್ರಹಿಸಿ, ಅನುಕರಣಕ್ಕೆ ತರುವವರಾದಾರೆಂದು ನಿರೀಕ್ಷಿಸುತ್ತೇವಲ್ಲದೆ, ಇದನ್ನೀಗ ಕೇಳುವಂತೆ ಮಾಡಿದ ನಮ್ಮ ಸನ್ಮಾನ್ಯ ಭಗಿನಿಯರಿಗೂ, ಇದನ್ನು ಕಳಿಸಿಕೊಟ್ಟ, ಶ್ರೀ| ಟಿ| ರಾಮಯ್ಯನವರು ಬಿ.ಎ., ಶ್ರೀ| ಬಿ. ಎನ್ ಶ್ರೀಕಂಠಯ್ಯ ಇವರಿಗೂ ನಮ್ಮ ಮನಃಪೂರ್ವಕವಾದ ವಂದನೆಗಳೊಡನೆ ಧನ್ಯವಾದಗಳನ್ನರ್ಪಿಸುವೆವು

ಮಾಸವೂ, ಕ್ರೈಸ್ತರಿಗೆ ಅತಿಪಾವನವಾದ ಕ್ರಿಸ್‌ಮಸ್‌ವಾರವೂ ಆದ ಆ ಕಾಲದಲ್ಲಿ ನಡೆದ ಬಹು ಮುಖ್ಯ ಮುಖ್ಯವಾದ ಸಂಗತಿಗಳನ್ನೂ ತಿಳಿಸಿದರು 'ಮತಸಾಂಘಿಕ, ರಾಜಕೀಯ, ವಿದ್ಯಾ, ಕೈಗಾರಿಕೆ ಇವೇ ಮೊದಲಾದ ಅನೇಕ ಸರ್ವಜನೋಪಯೋಗವಾದ ಕಾರ್ಯಗಳಲ್ಲಿ ಉದ್ಯುಕ್ತರಾಗಿ, ಸಾವಿರಾರು ಜನರು ಅಲ್ಲಿಗೆ ಬಂದು ಆಯಾ ಸಂಘಗಳಲ್ಲಿ ತಮ್ಮ ತಮ್ಮ ಬುದ್ಧಿಶಕ್ತಿಗಳನ್ನು ಪಯೋಗಿಸಿ, ಕೆಲಸ ಮಾಡಿದರು ಯಾವ ಜಾತಿಯವರು,-ಯಾವ ಪಂಗಡದವರು, ಯಾವ ಸೀಮೆಯವರು ಎಂಬ ಭೇದವಿಲ್ಲದೆ ಎಲ್ಲರೂ ಒಂದೇ ಭಾರತಮಾತೆಯ ಮಕ್ಕಳೆಂದು ಭಾವಿಸಿ ಐಕಮತ್ಯದಿಂದ ಮೆರೆಯುತ್ತಿದ್ದರು ನಮ್ಮ ಹಿಂದೂ ಜನಾಂಗದ ಏಳಿಗೆಗೆ ಅಡ್ಡಿಯುಂಟುಮಾಡುವ ಹಿಂದೂ-ಮುಸಲ್ಮಾನರು, ಬ್ರಾಹ್ಮಣ-ಬ್ರಾಹ್ಮಣೇತರರು ಮುಂತಾದ ಭೇದಗಳೊಂದೂ ಅಲ್ಲಿ ಕಾಣಬರಲಿಲ್ಲ ಅಲ್ಲಿ ನೆರೆದಿದ್ದವರೆಲ್ಲರೂ ಒಂದೇ ವಿಧವಾದ ಏಳಿಗೆಯನ್ನು ಬಯಸುವವರಾದುದರಿಂದ ಎಲ್ಲರೂ ಸಹೋದರ ಭಾವದಿಂದಲೂ, ಒಮ್ಮನದಿಂದಲೂ, ಆಸಕ್ತಿಯಿಂದಲೂ, ತಮ್ಮ ತಮ್ಮ ಕಾರ್ಯಗಳನ್ನು ನೆರವೇರಿಸಿದರು. ವಿದ್ಯುಚ್ಛಕ್ತಿಯು ದೀಪಗಳನ್ನುಂಟಿಸುವದಕ್ಕೂ, ಬೀಸಣಿಗೆಯನ್ನು ತಿರುಗಿಸುವದಕ್ಕೂ, ಅಡಿಗೆ ಮಾಡುವದಕ್ಕೂ, ಯಂತ್ರಗಳಿಂದ ಕೆಲಸ ಮಾಡಿಸುವದಕ್ಕೂ ಇವೇ ಮುಂತಾದ ಕೆಲಸಗಳಿಗೆ ಉಪಯೋಗವಾಗುವಂತೆಯೇ ಭಗವಂತನ ಶಕ್ತಿಯು ಒಂದೇ ವಿಧವಾದದ್ದಾದರೂ ಮಾಡತಕ್ಕ ಕೆಲಸ ಮತ್ತು ಪ್ರಯೋಗಿಸತಕ್ಕ ಸಾಧನ, ಇವುಗಳಿಗನುಸಾರವಾಗಿ ನಾನಾ ಬಗೆಯಲ್ಲಿ ಕೆಲಸಮಾಡುತ್ತದೆ ಹಾಗೆಯೇ ಲಕ್ನೌ ಪಟ್ಟಣದಲ್ಲಿಯೂ ಜನಗಳ ಆಸಕ್ತಿಯು ಅನೇಕ ರೀತಿಯಾಗಿ ಪರಿಣಮಿಸಿತು." ಎಂದು ಹೇಳಿ ಉಪನ್ಯಾಸಕರು ಅನಂತರ ಅಲ್ಲಿ ನಡೆದ ಸಂಘಗಳನ್ನೂ ಸಮಾಜಗಳನ್ನೂ ಅವುಗಳ ಉದ್ದೇಶಗಳನ್ನೂ ಅಲ್ಲಿ ಉಪನ್ಯಾಸಗಳನ್ನು ಕೊಟ್ಟವರನ್ನೂ ತಿಳಿಯಿಸಿದರು. ಅವುಗಳ ಪೈಕಿ, ಮೂರು ಸಂಘಗಳಲ್ಲಿ ಶ್ರೀಮತಿ ಅನಿಬೆಸಂಟರವರೂ, ಸರೋಜಿನಿ ನಾಯುಡುರವರೂ ಮತ್ತು

ಕೂಚ್‌ಬಿಹಾರ ಸಂಸ್ಥಾನದ ದೊಡ್ಡ ಮಹಾರಾಣಿಯುವರೂ ಅಗ್ರಾಸನವನ್ನು ವಹಿಸಿದ್ದರು, ಮತ್ತು ಉಪನ್ಯಾಸ ಕೊಟ್ಟರು, ಎಂಬ ಸಂಗತಿಯನ್ನು ತಿಳಿಯಪಡಿಸಿದರು.

ಮತ್ತು ಆ ವಾರದಲ್ಲಿ ಭಾರತ ಮಹಾಸಭೆ (Indian National Congress) ನಡೆದುದೇ ಬಹು ಪ್ರಾಮುಖ್ಯವಾದ ವಿಷಯವು. ಈ ಸಭೆಯು ಕೆಲವು ವರ್ಷಗಳ ಹಿಂದೆ ಸುರತ ಪಟ್ಟಣದಲ್ಲಿ ಒಡೆದು ಹೋಗಿ, ಈ ಸಲ ಎರಡು ಕಕ್ಷಿಗಳವರೂ ಒಂದಾಗಿ ಸೇರಿ, ಶ್ರೀಮಾನ್ ಲೋಕಮಾನ್ಯ ತಿಲಕರವರು ಸಂಯುಕ್ತ ಸಂಸ್ಥಾನಗಳಲ್ಲಿ ಇಂಗ್ಲಿಷಿನಲ್ಲಿ- ಈಗ ಭಾಗ್ಯ' ಎಂಬ ಅರ್ಥಕೊಡುವ 'ಲಕ್ನೌ' ಎಂಬ ಪಟ್ಟಣದಲ್ಲಿ ಮಿಳಿತವಾಗಿದೆ ಎಂಬ ಮಾತನ್ನು ಸಾರ್ಥಕಗೊಳಿಸರುತ್ತದೆ ಮುಸಲ್ಮಾನರೂ ಹಿಂದುಗಳೂ ಒಟ್ಟಾಗಿ ಸೇರಿದ್ದರು ಮುಸಲ್ಮಾನರ ಮುಖಂಡರು ಹಿಂದೂಗಳ ಸಭೆಗಳಲ್ಲಿಯೂ, ಹಿಂದುಗಳ ಮುಖ್ಯಸ್ಥರು ಮುಸಲ್ಮಾನರ ಸಭೆಗಳಲ್ಲಿಯೂ ಉಪನ್ಯಾಸಗಳನ್ನು ಕೊಟ್ಟು ಜನಗಳ ಮರ್ಯಾದೆಗೆ ಪಾತ್ರರಾದರು ಈ ರೀತಿಯಾಗಿ ಜನಾಂಗವು ಪುನ ಒಟ್ಟಿಗೆ ಸೇರಿ ಜಾರ್ಜ ಸಾರ್ವಭೌಮರವರ ಆಳ್ವಿಕೆಗೊಳಪಟ್ಟ ಸ್ವರಾಜ್ಯವನ್ನು ಹೊಂದುವದಕ್ಕೆ ಪ್ರಯತ್ನಪಟ್ಟರುವದೂ, ಭಗವಂತನ ದಿವ್ಯ ಚಿತ್ತವೇ ಸರಿ ನಮ್ಮ ಇಂಡಿಯಾ ದೇಶೀಯರು ರಾಜ್ಯಾಡಳಿತ ನಿರ್ವಾಹಕರಾಗಿಯೂ ನ್ಯಾಯಾಧಿಪತಿಗಳಾಗಿಯೂ, ಲಾಯರುಗಳಾಗಿಯೂ, ವಿದ್ಯಾಪ್ರಸಾರಕರಾಗಿಯೂ, ಯಂತ್ರವಿದ್ಯಾವಿಶಾರದರಾಗಿಯೂ, ವ್ಯಾಪಾರದಲ್ಲಿ ನಿಪುಣರಾಗಿಯೂ, ಈ ರೀತಿಯಲ್ಲಿ ಎಲ್ಲಾ ಕಸಬುಗಳಲ್ಲಿಯೂ ಸಂಪೂರ್ಣ ಯೋಗ್ಯತೆಯನ್ನು ಪಡೆದಿರುವದನ್ನು ವ್ಯಕ್ತಪಡಿಸಿರುತ್ತಾರೆ ಆದುದರಿಂದ ಶ್ರೀಮಾನ್ ಸಾರ್ವಭೌಮರವರ ರಾಜ್ಯಕುಟುಂಬದಲ್ಲಿ ಈಗಿನಂತೆ ಚಿಕ್ಕವರೆಂದೂ ಅನುಚರರೆಂದೂ, ಎನ್ನಿಸಿಕೊಳ್ಳುವದು ಬಿಟ್ಟು, ರಾಜ್ಯಾಡಳಿತ ಕಾರ್ಯದಲ್ಲಿ ತಾವೂ ಭಾಗಿಗಳಾಗಿ, ತಮಗೆ ಯೋಗ್ಯವಾದ ಗೌರವಸ್ಥಾನವನ್ನು ಹೊಂದಲು ದೃಢಸಂಕಲ್ಪರಾಗಿರುವರು.

“ ಈ ದೇಶದಲ್ಲಿ ಹೆಂಗಸರು ಅರ್ಧ ಜನಸಂಖ್ಯೆಗೆ ಮೀರಿದ್ದಾರೆ ನಮ್ಮ ಜನಾಂಗವು ಅದಕ್ಕೆ ಯೋಗ್ಯವಾದ ಸ್ವರಾಜ್ಯವನ್ನು ಹೊಂದ ಬೇಕಾದರೆ ನಮ್ಮಗಳ ಏಳಿಗೆಗೆ ಆಕರವಾದ ಆಯಾ ಏರ್ಪಾಟುಗಳಿಗೆ ತಕ್ಕ ಪ್ರೋತ್ಸಾಹವು ಹೆಂಗಸರಿಂದಲೂ ಸಹ ಉಂಟಾಗಬೇಕಾಗಿದೆ ಪೂರ್ವದಿಂದಲೂ ತುಂಟ ಎಮ್ಮೆಯ ಕುತ್ತಿಗೆಗೆ ಕಟ್ಟಲ್ಪಟ್ಟ ಮರದ ತುಂಡಿನಂತೆಯೂ, ನೀರಿನಲ್ಲಿ ಈಜುವವನ ಕುತ್ತಿಗೆಗೆ ಕಟ್ಟಿದ ಕಲ್ಲಿ ನಂತೆಯೂ ಹೆಂಗಸರು ಅಭಿವೃದ್ಧಿಗೆ ಅಡ್ಡಿಯಾಗಿದ್ದರು ಗಂಡನು ಸಂಘಪರಿಷ್ಕರಣಾಕಾಂಕ್ಷಿಯಾಗಿ ಸಭೆಗಳಲ್ಲಿ ನಮ್ಮ ಪದ್ಧತಿಗಳ ವಿಚಾ ರವಾಗಿ ಬಲವಾಗಿ ಮಾತನಾಡುವನು ಮನೆಯಲ್ಲಿ ಹೆಂಡತಿಯು ತನ್ನ ಮಗಳನ್ನು ಚಿಕ್ಕವಯಸ್ಸಿನಲ್ಲಿಯೇ ಮದುವೆ ಮಾಡಿಸಬೇಕೆಂದು ನಿರ್ಬಂಧಪಡಿಸುವಳು ತನ್ನ ಹೆಣ್ಣು ಮಗುವಿಗೆ ಭಾಗ್ಯವಂತನಾದ ಗಂಡನು ಸಿಕ್ಕಬೇಕೆಂದೂ ಹೆಚ್ಚಾಗಿ ಕನ್ಯಾಶುಲ್ಕ ಕೊಡಬೇಕೆಂದೂ ಮೂರ್ಖತನ ಹಿಡಿಯುವಳು! ಗಂಡನು ಮಿತವ್ಯಯವನ್ನು ಎಲ್ಲರಿಗೂ ಸಾರುವನು, ಹೆಂಡತಿಯು ತಾನು ಆಹಾರ, ಬಟ್ಟೆಗಳನ್ನೂ ಬಿಟ್ಟು, ಒಡವೆಗಳಿಗಾಗಿಯೂ, ವಿವಾಹದ ಖರ್ಚುಗಳಿಗಾಗಿಯೂ ಬಹಳ ಹಣ ವನ್ನು ದುಂದು ಮಾಡುವಳು. ಗಂಡಸರು ಹೊರಗಡೆ ಐಕಮತ್ಯ ವನ್ನು ಬೋಧಿಸುವರು, ಹೆಂಗಸರು ಮನೆಯಲ್ಲಿ ಕೂಡ ಐಕಮತ್ಯಕ್ಕೆ ಚ್ಯುತಿಯುಂಟು ಮಾಡುವರು ಇವರುಗಳ ಜಗಳಗಳಿಂದಲೇ ಅನೇಕ ವೇಳೆ ಅಣ್ಣತಮ್ಮಂದಿರು ಭಾಗಗಳನ್ನು ಮಾಡಿಕೊಂಡು ಬೇರೆ ಹೋಗಿ ವಾಸಮಾಡುವರು ನಮ್ಮ ಜನಗಳು ಅಡ್ಡಿಯಿಲ್ಲದೆ ಏಳಿಗೆಗೆ ಬರಬೇ ಕಾದರೆ, ನಾವು ಎಲ್ಲಾ ವಿಷಯಗಳಲ್ಲಿಯೂ ಮುಂದಕ್ಕೆ ಬರಬೇಕಾ ದರೆ, ಗಂಡಸರು ನೆರವೇರಿಸತಕ್ಕ ಕಾರ್ಯಗಳಲ್ಲಿ ಹೆಂಗಸರು ಅಡಚಣೆ ಮಾಡದೆ, ಅವರಿಗೆ ಸಹಾಯಕರಾಗಬೇಕು. ಇದಕ್ಕಾಗಿ ಅವರು ಸರಿ

---

ವಿ ಸೂ — ಈ ಘಟದಲ್ಲಿ ವಿವರಿಸಲ್ಪಡುವ ವಿಚಾರಗಳು ಕೇವಲ ನಮ್ಮ ಅಭಿಪ್ರಾಯಕ್ಕೊಪ್ಪಿದ್ದೆಂದು ಭಾವಿಸಬಾರದೆಂದೂ, ಉಪನ್ಯಾಸಕರು ಸಮುದಾ ಯದ ಪರವಾಗಿ ಹೇಳಿದ ಭಾಷಣವೆಂದು ತಿಳಿಯಬೇಕೆಂದೂ ಕೋರಿದೆ (ಸಂ ನಂ)

ಯಾಗಿ ವಿದ್ಯೆಯನ್ನು ಪಡೆದು ತಮ್ಮ ಮಕ್ಕಳಿಗೂ ವಿದ್ಯೆಯನ್ನು ಕಲಿಯಿಸಿ, ತರಬೇತು(?) ಮಾಡಬೇಕು ನಮ್ಮ ಹೆಂಗಸರು ಬುದ್ಧಿವಂತರಾಗಿಯೂ, ಪತಿಪರಾಯಣೆಯರಾಗಿಯೂ, ಭಕ್ತಿಯುತರಾಗಿಯೂ ಇರುವರೆನ್ನುವದರಲ್ಲಿ ಯಾವ ಸಂದೇಹವೂ ಇಲ್ಲ ಆದರೆ, ವಿದ್ಯೆ ಮತ್ತು ತರಬೇತು ಇಲ್ಲದೆ ಇರುವದರಿಂದ ಪಾಕವಾಗದ ಹಸಿ ಪದಾರ್ಥದಂತೆ ಇರುವರು.

ಸ್ತ್ರೀವಿದ್ಯಾಭ್ಯಾಸವೆಂಬುದು ಈಚೆಗೆ ನಾವು ಉಂಟುಮಾಡಿಕೊಂಡುದಲ್ಲ ಪೂರ್ವಕಾಲದಲ್ಲಿ ಈಗಿನ ಭಾರತ ಮಹಿಳೆಯರಿಗೆ 'ಮಾದರಿ' ಎಂದೆನ್ನಿಸಿಕೊಂಡಿರುವ ಸ್ತ್ರೀಯರೆಲ್ಲರೂ ಬುದ್ಧಿಯಲ್ಲಿಯೂ ಪಾಂಡಿತ್ಯದಲ್ಲಿಯೂ ಪುರುಷರಿಗೆ ಕಮ್ಮಿಯಿಲ್ಲದ ಆಕಸ್ಮಿಕವಾಗಿ ಒದಗಿದ ಕಷ್ಟಕಾಲಗಳಲ್ಲಿ ಧೈರ್ಯ ಸಾಹಸಾದಿ ಸದ್ಗುಣಗಳನ್ನು ಪ್ರದರ್ಶಿಸಿರುತ್ತಾರೆ (ದೃಷ್ಟಾಂತಕ್ಕೆಂದರೆ) ಸಾಧ್ವೀಶಿರೋಮಣಿಯಾದ ಸೀತೆಯು ದಾನವೇಂದ್ರನಾದ ರಾವಣನ ಪ್ರಣಯವಚನಗಳನ್ನು ತೃಣೀಕರಿಸಿ, ಖರದೂಷಣರ ಸಾವಿರಾರು ರಾಕ್ಷಸ ಸೈನ್ಯಗಳೊಡನೆ ಶ್ರೀರಾಮನು ಏಕಾಂಗಿಯಾಗಿ ಯುದ್ಧ ಮಾಡಿದ ಕಾಲದಲ್ಲಿ ತನ್ನ ಗಂಡನಿಗೆ ಸಹಾಯ ಮಾಡಲಿಲ್ಲವೇ ? (?) ಯಮಧರ್ಮರಾಯನು ಸತ್ಯವಾನನ ಪ್ರಾಣವನ್ನು ತೆಗೆದುಕೊಂಡು ಹೋಗುತ್ತಿದ್ದ ಕಾಲದಲ್ಲಿ ಆತನ ಹೆಂಡತಿಯಾದ ಸಾವಿತ್ರಿಯು ಅದನ್ನು ಉಳಿಸಿಕೊಂಡು ಬರಲಿಲ್ಲವೇ ? ಅಪಾರವಾದ ಕಷ್ಟವೊದಗಿದ ಕಾಲದಲ್ಲಿ ದಮಯಂತಿಯು ಧೈರ್ಯವನ್ನೂ ಸಾಹಸವನ್ನೂ ಭಕ್ತಿಯನ್ನೂ ಬಿಟ್ಟಳೇ ? ದುಷ್ಯಂತರಾಯನು ಹೆಂಡತಿಯಾದ ಶಕುಂತಲೆಯನ್ನು ಬಹಿರಂಗವಾದ ರಾಜಾಸ್ಥಾನದಲ್ಲಿ ದೂರೀಕರಿಸಿದರೂ ಶಾಸ್ತ್ರವಿಧಿಯಾಗಿ ತಾನು ಆತನ ಹೆಂಡತಿಯೆಂದು ನಿರ್ಧರಪಡಿಸಿ, ಗೃಹಿಣಿಯ ಹಕ್ಕು ಬಾಧ್ಯತೆಗಳನ್ನು ಸಾಧಿಸಿದಳು. ಸತ್ಯಭಾಮೆಯು ಶ್ರೀಕೃಷ್ಣನ ಪಕ್ಕದಲ್ಲಿ ನಿಂತು ಶತ್ರುಗಳೊಡನೆ ಯುದ್ಧಮಾಡಿದಳು. ಸುಭದ್ರೆಯು ರಣರಂಗದಲ್ಲಿ ಅರ್ಜುನನ ರಥವನ್ನು ನಡೆಯಿಸಿದಳು. ಋಷಿಪತ್ನಿಯರಾದ ಗಾರ್ಗಿ, ಮೈತ್ರೇಯಿ

ಯರು ದೊಡ್ಡ ದೊಡ್ಡ ಸಭೆಗಳಲ್ಲಿ ತಮ್ಮ ವಾಗ್ಝರಿಯನ್ನು ಪ್ರಕಾಶಪಡಿಸಿ, ಬಹು ಕ್ಲಿಷ್ಟವಾದ ಸಂಗತಿಗಳಲ್ಲಿಯೂ ಸಹ ಅನೇಕ ಪಂಡಿತೋತ್ತಮರ ಸಂಗಡ ವಾದಮಾಡಿ ಅವರನ್ನು ಸೋಲಿಸಿದರು ಈಗಿನ ಕಾಲದಲ್ಲಿಯೂ ಸಹ ರಾಜಪುತ್ರಕುಲರಮಣಿಯರು ಅಪ್ರತಿಮ ಸಾಹಸಕಾರ್ಯಗಳನ್ನು ನೆರವೇರಿಸಿರುತ್ತಾರೆ ಉದಯಸಿಂಹನ ಹೆಂಡತಿಯೂ, ತಂಗಿಯೂ, ಪುರುಷರ ವೇಷವನ್ನು ಧರಿಸಿ, ಅಕ್ಬರನು ಜಯಿಸಿದ್ದ ರಾಜ್ಯವನ್ನು ಸ್ವಾಧೀನಪಡಿಸಿಕೊಂಡರು ಈಗ, ಸಮಾಧಾನ ಕಾಲವಾಗಿಯೂ, ಇಂತಹ ಸಾಹಸಕಾರ್ಯಗಳಿಗೆ ಅವಕಾಶವಿಲ್ಲವಾಗಿಯೂ ಇರುವದು ಆದರೂ ಈಗಲೂ ಸಹ ಭಾರತಮಹಿಳೆಯರು ತಮಗೆ ಅವಕಾಶವಾದ ವೈದ್ಯಭಾಗದಲ್ಲಿಯೂ, ವಿದ್ಯಾಪ್ರಚಾರಕಾರ್ಯದಲ್ಲಿಯೂ ಯೋಗ್ಯತೆಯನ್ನು ಹೊಂದಿರುತ್ತಾರೆ ಮತ್ತೆ ಕೆಲವರು ರಾಜ್ಯಾಡಳಿತದಲ್ಲಿ ಕೂಡ ಶಾಶ್ವತವಾದ ಕೀರ್ತಿಯನ್ನು ಪಡೆದಿರುತ್ತಾರೆ

ಸ್ತ್ರೀಯರು ಸರ್ಕಾರದಲ್ಲಿ ಉದ್ಯೋಗಗಳನ್ನು ಸಂಪಾದಿಸುವ ಅಭಿಪ್ರಾಯದಿಂದ ವಿದ್ಯೆಯನ್ನು ಕಲಿಯಬೇಕೆಂದು ತಿಳಿದುಕೊಳ್ಳಕೂಡದು. ಮತ್ತು ಸ್ತ್ರೀಯರೆಲ್ಲರೂ ಪ್ರೌಢವಿದ್ಯಾಭ್ಯಾಸ ಮಾಡಿ ದೊಡ್ಡ ದೊಡ್ಡ ಪಾಂಡಿತ್ಯ ಚಿಹ್ನಗಳನ್ನು ಹೊಂದಬೇಕೆಂದಲ್ಲ! ಹೆಣ್ಣುಮಕ್ಕಳಿಗೆ ಕೊಡತಕ್ಕ ವಿದ್ಯಾಭ್ಯಾಸವು ಉತ್ತರೋತ್ತರ ಅವರನ್ನು ಗೃಹಿಣೀಸ್ಥಾನಕ್ಕೆ ಯೋಗ್ಯತೆಯುಂಟುಮಾಡುವದಾಗಿಯೂ, ತಮ್ಮ ಗಂಡಂದಿರಿಗೆ ಸಹಾಯಕರಾಗಿ ಕೆಲಸಗಳನ್ನು ನಡೆಯಿಸಲು ಶಕ್ತಿಯುಂಟುಮಾಡತಕ್ಕದಾಗಿಯೂ, ಮಕ್ಕಳನ್ನು ವಿಚಕ್ಷಣೆಯಿಂದ ಸಾಕಿ, ತರಬೇತು ಮಾಡುವ ಬುದ್ಧಿ ಕುಶಲತೆಯನ್ನು ಕೊಡತಕ್ಕದಾಗಿಯೂ, ರಾಜ್ಯದ ಸಾಂಘಿಕ ವ್ಯಾಪಾರಗಳಲ್ಲಿ ಕಾರ್ಯಾಸಕ್ತಿಯುಂಟುಮಾಡುವದಾಗಿಯೂ ಇರಬೇಕು ಉಡುಪಿನಲ್ಲಿಯೂ, ಆಹಾರ ಮತ್ತು ಸಾಂಘಿಕ ಪದ್ಧತಿಗಳಲ್ಲಿಯೂ ಹೊರಗಿನವರನ್ನು ಅನುಕರಿಸುವದು ಬಹು ಅಯೋಗ್ಯವಾದುದು. ನಮ್ಮ ಪುರಾತನ ಪದ್ಧತಿಗಳಿಂದಲೂ, ಮರ್ಯಾ

ದೆಗಳಿಂಪಲೂ ಕೆಡುಕುಂಟಾದ ಹೊರತು— ಸಾಂಘಿಕ ಸೇವೆಯನ್ನು ವಿಚಕ್ಷಣೆಯಿಂದ ನಡೆಯಿಸಲು ಅಡ್ಡಿಯಾದ ಹೊರತು,— ಅವುಗಳ ಬದಲಾವಣೆಯನ್ನು ಮಾಡಬೇಕೇವಿನಾ, ಸೊಗಸಿಗೋಸ್ಕರವೂ, ಅನ್ಯ ದೇಶೀಯರ ಸಂತೋಷಕ್ಕೋಸ್ಕರವೂ ಬಿಟ್ಟುಬಿಡಬಾರದು ಈಚೆಗೆ ಮದರಾಸು ಬಿಷಪ್‌ರವರ ಪತ್ನಿಯವರಾದ ವೈಟ್‌ಹೆಡ್ ದೊರೆಸಾನಿ ಯವರು ಸೇವಾಸಮಾಜದ ಮೆಂಬರುಗಳಿಗೆ ಕೊಟ್ಟ ಉಪನ್ಯಾಸದಲ್ಲಿ, ಇಂಗ್ಲಾಂಡಿನಲ್ಲಿರುವ ಭಾಗ್ಯವಂತರ ಕುಟುಂಬದ ಸ್ತ್ರೀಯರು ದೇಶ ಸೇವಾಕಾರ್ಯಕ್ಕಾಗಿ ತಮ್ಮ ಸೊಗಸುಗಳನ್ನು ಬಿಟ್ಟಿರುವ ಸಂಗತಿಯು ನ್ನೂ, ದೊಡ್ಡ ಮನೆತನದ ಹೆಣ್ಣುಮಕ್ಕಳು ಹುಟ್ಟಿದಾರಭ್ಯ ಅಭ್ಯಾಸ ವಾಗಿದ್ದ ಪದಾರ್ಥಗಳನ್ನು ಬಹು ಸಂತೋಷಚಿತ್ತದಿಂದ ದೂರೀ ಕರಿಸಿ ದೇಶಸೇವೆಯಲ್ಲಿ ನಿರತರಾಗಿರುವ ಸಂಗತಿಗಳನ್ನೂ ತಿಳಿಯಿಸಿದ ರಷ್ಟೆ ! ಅವರುಗಳು ಸೊಗಸಿನ ಉಡುಪುಗಳನ್ನೂ, ನವೀನ ಪದ್ಧತಿ ಗಳನ್ನೂ ಇತರರ ಸಂತೋಷಕ್ಕಾಗಿ ಬಿಟ್ಟವರಲ್ಲ ದೇಶಸೇವೆಗಾಗಿ ಬಿಟ್ಟರು ಆದುದರಿಂದ ಈಚೆಗೆ ಲೇಡಿ ಚಲ್ಮಸ್‌ಫರ್ಡ್ ದೊರೆಸಾನಿ ಯವರು ತಮ್ಮ ಭಾಷಣದಲ್ಲಿ ಸೂಚಿಸಿರುವಂತೆ, ಭಾರತಮಹಿಳೆಯರ ಆವಶ್ಯಕತೆಗಳಿಗೆ ತಕ್ಕಂತೆ ಇಂಡಿಯಾ ದೇಶದಲ್ಲಿ ಈಗಿನ ವಿದ್ಯಾಭ್ಯಾಸ ಕ್ರಮವನ್ನೂ ತರಬೇತನ್ನೂ ಕ್ರಮಪಡಿಸಿಕೊಳ್ಳಬೇಕಾಗಿದೆ

ಇದರಿಂದ, ( ಉಪನ್ಯಾಸಕರು ಮಹಿಳಾ ಸೇವಾಸಮಾಜದ ಉದ್ದೇಶಗಳ ವಿಚಾರವಾಗಿ ಮಾತನಾಡಲು ಅವಕಾಶವಾಯಿತು— " ಈ ಸಮಾಜವು ಭಾರತಮಹಿಳೆಯರ ಪ್ರಯೋಜನಕ್ಕಾಗಿ ವಿಶೇಷ ವಾಗಿ ಸ್ತ್ರೀಯರ ಪ್ರಯಾಸದಿಂದಲೇ ಏರ್ಪಡಿಸಲ್ಪಟ್ಟಿರುತ್ತದೆ. ಪಾಠ ಶಾಲೆಗಳಿಗೆ ಹೋಗುವ ವಯಸ್ಸು ಮೀರಿದ ಹೆಂಗಸರಿಗೆ ವಿದ್ಯೆಯನ್ನೂ ಕೈಗಾರಿಕೆಯನ್ನೂ ಹೇಳಿಕೊಡುತ್ತಿದೆಯಲ್ಲದೆ, ಆವಶ್ಯಕವಿದ್ದವರಿಗೆ ವಿದ್ಯಾರ್ಥಿವೇತನಗಳನ್ನೂ ಇತರ ವಿಧವಾದ ದ್ರವ್ಯಸಹಾಯವನ್ನೂ ಕೊಡುತ್ತಿದೆ" ಎಂದು ತಿಳಿಸಿದರು.

ಮತ್ತು 'ಉದಾರರಾದ ಸರ್ಕಾರದವರು ಸಮಾಜಕ್ಕೆ ತಿಂಗಳು

ಗಟ್ಟಳೆ ಗ್ರಾಂಟನ್ನೂ, ನಾವಮಾಸಗಳಿಗಾಗಿ ಸಹಾಯದ್ರವ್ಯವನ್ನೂ, ಕಟ್ಟಡಕ್ಕಾಗಿ ಒಂದು ಖಾಲಿ ನಿವೇಶನವನ್ನೂ ದಯಪಾಲಿಸಿರುತ್ತಾರೆಂದು ಉಪನ್ಯಾಸಕರು ಬಹು ಕೃತಜ್ಞತಾಪೂರ್ವಕವಾಗಿ ತಿಳಿಯಪಡಿಸಿದ್ದಲ್ಲದೆ ಇಂತಹ ಜನಸಾಮಾನ್ಯದ ಏಳಿಗೆಗೆ ಆಕರವಾದ ಕಾರ್ಯಗಳಲ್ಲಿ ಕೇವಲ ಸರ್ಕಾರದ ಸಹಾಯವನ್ನೇ ನಿರೀಕ್ಷಿಸಿಕೊಂಡಿರಬಾರದೆಂದೂ ಹೇಳಿದರು. ಮತ್ತು ಜನಗಳೂ ಸಹ ದ್ರವ್ಯರೂಪವಾಗಿಯೂ ಸೇವಾರೂಪವಾಗಿಯೂ ಇತರ ವಿಧಗಳಿಂದಲೂ ತಮ್ಮ ಕೈಯಲ್ಲಾದ ವಟ್ಟಿಗೂ ಸಹಾಯ ಮಾಡಬೇಕಾಗಿದೆ. ಈ ವಿಧಗಳಲ್ಲಿ ಇಲ್ಲಿಯೂ ಹೊರಗಡೆಯೂ ಭಾರತಮಹಿಳೆಯರು ಇದುವರೆಗೆ ಬಹಳ ಸಹಾಯವನ್ನು ಕೊಟ್ಟಿದ್ದಾರೆ. ಮುಂದೆಯೂ ಸಹಾಯಕ್ಕಾಗಿ ಬೇಡಿ ಕಳಿಸಿಕೊಟ್ಟಲ್ಲಿ ಯಾರೂ ತೊಂದರೆಯೆಂದು ಭಾವಿಸದೆ ತಮ್ಮ ಕೈಯಲ್ಲಾದ ವಟ್ಟಿಗೆ ಸಂತೋಷಚಿತ್ತದಿಂದ ಸಹಾಯಮಾಡಿ, ಮಹಿಳಾಸೇವಾಸಮಾಜವು ನಮ್ಮ ಭಾರತಮಹಿಳೆಯರಿಗೆ ಅತ್ಯಂತೋಪಯುಕ್ತವಾದ ಸಮಾಜವಾಗಿ ಪರಿಣಮಿಸುವಂತೆ ಮಾಡುವದರಲ್ಲಿ ತಮ್ಮ ಶಕ್ತಿಯನ್ನು ತಕ್ಕಮಟ್ಟಿಗೆ ಉಪಯೋಗಿಸಿದೆವಲ್ಲಾ ಎಂಬ ಮನೋಲ್ಲಾಸವನ್ನು ಪಡೆಯಬೇಕು. ನಮ್ಮಗಳಿಗೆ ಈಗೀಗ ಜಾಗ್ರತೆ ಜಾಗ್ರತೆಯಾಗಿ ನವೀನಸ್ಥಿತಿಗಳುಂಟಾಗುತ್ತಿರುವಲ್ಲಿ ಭಾರತಮಹಿಳೆಯರಿಗೆ ಇತ ಪರ ಬಹು ಉಪಕಾರ ಮಾಡಲು ಈ ಸಮಾಜಕ್ಕೆ ಅಪಾರವಾದ ಚೈತನ್ಯವಿರುವದೆಂದೂ, ಈ ಮಹತ್ಕಾರ್ಯದಲ್ಲಿ ಸಭೆಗೆ ಸೇರಿದ್ದವರೆಲ್ಲಾ ಭಾಗಿಗಳಾಗಬೇಕೆಂದೂ ತಿಳಿಸಿ ಉಪನ್ಯಾಸವನ್ನು ಮುಕ್ತಾಯ ಮಾಡಿದರು.

ಗೌರವಕಾರ್ಯದರ್ಶಿ, ಮಹಿಳಾಸೇವಾಸಮಾಜ )

---

ವಿ ಸೂ — ಈ ಲೇಖನದಲ್ಲಿ ಹಲವು ಭಾಗವು ನಮ್ಮ ಮಹಿಳೆಯರ ಮತ್ತು ಮಹಿಳಾಪ್ರಪಂಚದ ಉದ್ಧಾರಕರ್ತರ ಸಮಾಲೋಚನೆಗೆ ತರಲು ಅತ್ಯಾವಶ್ಯಕವೆಂದು ಸೂಚಿಸುವದಾಗಿದೆ. ಈ ನಮ್ಮ ಸೂಚನೆಯನ್ನು ನಮ್ಮ ಭಗಿನಿಯರೆಲ್ಲರೂ ಗಮನಿಸಿ, ತಮ್ಮ ತಮ್ಮ ಸಾನುಭವಪೂರ್ಣವಾದ ಶಿಕ್ಷಣವಿಚಾರದಲ್ಲಿ ತಮ್ಮ ತಮ್ಮ ಅಮೂಲ್ಯಾಭಿಪ್ರಾಯಗಳನ್ನು ಕೊಡುವವರಾದಾರೆಂದು ನಂಬಿರುವೆವು. (ಸಂ ಸಂ.)

॥ ಶ್ರೀ ॥

## ವಂಗ ಕವಿಯಿತ್ರಿ

# ಶ್ರೀಮತಿ ಗಿರೀಂದ್ರಮೋಹಿನೀ ದೇವಿ

ಭವಭವಾಂತರ ಪುಣ್ಯದಿಂದು । ದ್ಭವಿಪ ದೆ ಐಕ ಶಕ್ತಿಯೆನಲದ ।
ಕವಧಿಯೆತ್ತಣ ದಮಮ' ಕವಿತಾಬಲವು ಕೇವಳಮೇ॥—

(ಚಿತ್ರಗುಪ್ತ)

ಸುಮಾರು ನಲವತ್ತು ವರ್ಷಗಳಿಗೆ ಹಿಂದೆ ವಂಗಬಾಲೆಯೊಬ್ಬಳು ರಚಿಸಿದ "ಕವಿತಾವಿಹಾರ" ವೆಂಬ ಗ್ರಂಥವು ಪ್ರಚುರವಾದಾಗ, ಅದನ್ನು ಕುರಿತು ವಂಗಸಾಹಿತ್ಯಚಕ್ರವರ್ತಿಯಾದ ರಾಯ್ ಬಹದ್ದೂರ ಬಂಕಿಮಚಂದ್ರ ಚಟ್ಟರಜಿಯವರು "ವಂಗದರ್ಶನ"ವೆಂಬ ತಮ್ಮ ಮಾಸಪತ್ರಿಕೆಯಲ್ಲಿ ಇಂತೆಂದು ಬರೆದರು —

" ಈ ಕಾವ್ಯದಲ್ಲಿ ಅಲ್ಲಲ್ಲಿ ಕಾಣಬರುವ ವರ್ಣನಾದಿಗಳು ಕೇವಲ ಪ್ರತಿಭಾಪೂರ್ಣಗಳಾಗಿವೆ. ಈ ಗ್ರಂಥವನ್ನು ಅಲ್ಪವಯಸ್ಸಿನ ಬಾಲೆಯೊಬ್ಬಳು ಬರೆದಳೆಂದು ಹೇಳಿದರೆ ಯಾರೂ ಅದನ್ನು ನಂಬಲಾರರು "

ಹೀಗೆ ಯಾರ ಶೈಶವದಲ್ಲಿಯ ಉಜ್ವಲವಾದ ಪ್ರತಿಭೆಯನ್ನು ನೋಡಿ, ಶ್ರೀಯುತ ಬಂಕಿಮ್‌ಚಂದ್ರಸಂಥ ಸಾಹಿತ್ಯಾಚಾರ್ಯನೇ ಮರುಳಾದನೋ ಆ ರಮಣೀಮಣಿಯ ಚರಿತ್ರೆಯು ಕರ್ಣಾಟ ಮಹಿಳೆಯರಿಗೂ ತಿಳಿದುಬರುವಂತೆ ಇಲ್ಲಿ ಸಂಕ್ಷಿಪ್ತವಾಗಿ ಕೊಡುವೆವು

ಶ್ರೀಮತಿ ಗಿರೀಂದ್ರಮೋಹಿನಿಯು ಕ್ರಿ ಶ ೧೮೬೮ (ವಂಗಾಬ್ದ ೧೨೭೫) ರಲ್ಲಿ, ಭಾದ್ರಪದ ಶುಕ್ಲ ತೃತೀಯೆಯ ದಿನ, ಕಲಿಕತ್ತೆಗೆ ಸೇರಿದ 'ಭವಾನಿಪುರ'ವೆಂಬ ಉಪನಗರದಲ್ಲಿ ತನ್ನ ಸೋದರಮಾವನ ಮನೆಯಲ್ಲಿ ಜನ್ಮವೆತ್ತಿದಳು. ಇವರು ಕುಲೀನ ಕಾಯಸ್ಥ ಜಾತಿಗೆ ಸೇರಿದವರು ಇವಳ ತಂದೆಯಾದ ' ಹಾರಾ

# ಕರ್ಣಾಟಕನಂದಿನೀ

1917 ನೆ ಏಪ್ರಿಲ್ | ಸಂಪುಟ ೧ ಸಂಚಿಕೆ ೭ | ಪಿಂಗಳ ಚೈತ್ರ

ವಂಗಕವಯಿತ್ರಿ

## ಶ್ರೀಮತಿ ಗಿರೀಂದ್ರಮೋಹಿನೀದೇವಿ



"ಕವಿತಾಹಾರ", "ಸ್ವದೇಶಿನಿ", "ಅಶ್ರುಕಣಾ", ಮೊದಲಾದ ಕಾವ್ಯ ಗ್ರಂಥಗಳನ್ನು ರಚಿಸಿರುವ ಸುಪ್ರಸಿದ್ಧ ದೇಶಭಕ್ತಾಗ್ರಣಿ

**Srimati Gireendra Mohinidevi**

ಚಂದ್ರಮಿತ್ರ'ರೆಂಬುವರು ಕಲಿಕತ್ತೆಗೆ ನಾಲ್ಕು ಮೈಲಿ ಉತ್ತರದಲ್ಲಿರುವ 'ವಾಣಿಹಾಟಿ' ಎಂಬ ಗ್ರಾಮದವರು. ಕಲಿಕತ್ತೆಯಲ್ಲಿ ಹುಟ್ಟಿದವ ಳಾದರೂ ಗಿರೀಂದ್ರ ಮೋಹಿನಿಯ ಬಾಲ್ಯವೆಲ್ಲ ಇಪ್ಪತ್ತುನಾಲ್ಕು ಪರಗಣೆಗಳಿಗೆ ಸೇರಿದ " ಮಜಿಲಪುರ " ವೆಂಬ ಗ್ರಾಮದಲ್ಲಿ ಕಳೆ ಯಿತು. ಈ ಗ್ರಾಮದಲ್ಲಿಯೇ ಅವಳ ಹೆತ್ತವರು ವಾಸವಾಗಿದ್ದರು. ಶ್ರೀಯುತ ಹಾರಾಣಚಂದ್ರರ ಮನೆಯಲ್ಲಿಯೇ ಒಂದು ಬಾಲಿಕಾ ಪಾಠಶಾಲೆ ಇದ್ದಿತು. ಮತ್ತು ಇಲ್ಲಿಯೇ "ಗಿರೀಂದ್ರಮೋಹಿನಿ"ಯು ಕೂಡ ತನ್ನ ಪ್ರಾಥಮಿಕ ಶಿಕ್ಷಣವನ್ನು ಪಡೆದಳು ಚಿಕ್ಕಂದಿನಿಂದಲೂ ಗಿರೀಂದ್ರಳಿಗೆ ವಿದ್ಯಾಭ್ಯಾಸದಲ್ಲಿ ತುಂಬ ಮೆಚ್ಚಿಕೆಯಿದ್ದಿತು. ತನ್ನ ವಯೋನುಗುಣವಾದ ಆಟಪಾಟಗಳು ಅವಳಿಗೆ ಸೇರುತ್ತಿರಲಿಲ್ಲ. ಹೀಗಾಗಿ ಶಾಲೆಯಲ್ಲಿಯ ಉತ್ತಮೋತ್ತಮವಾದ ಪಾರಿತೋಷಿಕ ಗಳೆಲ್ಲ ಅವಳಿಗೆ ಬಂದುವು ಈ ಶಾಲೆಯಲ್ಲಿ ಓದು, ಬರೆಹ, ಲೆಕ್ಕ ಮುಂತಾದ ವಾಡಿಕೆಯ ಅಭ್ಯಾಸವೆಲ್ಲ ತನ್ನ ತಂದೆಯ ಮೂಲವಾ ಗಿಯೇ ಗಿರೀಂದ್ರಳಿಗೆ ದೊರೆಯಿತು ಆ ಮೇಲೆ ಅವಳು ಅಭ್ಯಾಸ ಕ್ಕಾಗಿ ಯಾವ 'ಶಾಲೆಯನ್ನೂ ಸೇರಲಿಲ್ಲವು ತಥಾಪಿ ( ಆದರೂ ) ವಿದ್ಯಾಭಿರುಚಿಯು ಅವಳಲ್ಲಿ ದೃಢಮೂಲವಾಗಿದ್ದುದರಿಂದ ಆ ಗ್ರಾಮ ದಲ್ಲಿದ್ದ ಕೆಲವು ಪಂಡಿತರಿಂದ ಬಾಲ್ಯದಲ್ಲಿಯೇ ಸಂಸ್ಕೃತವನ್ನೂ, ಫಲಜ್ಯೋತಿಷವನ್ನೂ ತಿಳಿದುಕೊಂಡಳು ಸಾಲದುದಕ್ಕೆ ಈ ಕಾಲ ದಲ್ಲಿಯೇ ಗಾನ-ವಾದನಾದಿ ಲಲಿತಕಲೆಗಳಲ್ಲಿಯೂ ಪ್ರಾವಿಣ್ಯವನ್ನು ಸಂಪಾದಿಸಿದಳು. ವೀಣೆ (ಬೀನು), ಸತಾರು, ಹಾರ್ಮೋನಿಯಮು ಮುಂತಾದ ವಾದ್ಯಗಳನ್ನು ಅವಳು ಚೆನ್ನಾಗಿ ನುಡಿಸಬಲ್ಲವಳಾಗಿ ದ್ದಳು.

ಏಳೆಂಟು ವರ್ಷ ವಯಸ್ಸಾಗುವದರೊಳಗಾಗಿಯೇ ಗಿರೀಂ ದ್ರ ಮೋಹಿನಿಯಲ್ಲಿದ್ದ ಕಾವ್ಯ ಪ್ರತಿಭೆಯು ಪ್ರಕಟವಾಗತೊಡ ಗಿತು. ಈ ಚಿಕ್ಕ ವಯಸ್ಸಿನಲ್ಲಿ ಗೋಡೆಯ ಮೇಲೆ ಬಿದ್ದ ತನ್ನ ನೆರಳಿ ನೊಡನೆ ಅವಳು ಪದ್ಯರೂಪವಾಗಿ ಮಾತನಾಡುತ್ತಿದ್ದಳಂತೆ! ಹೀಗಾಗಿ

ಇದು ಮುಂದೆ ಉನ್ಮಾದ (ಮರುಳು) ರೋಗವಾಗಿ ಪರಿಣಮಿಸಬಹುದೆಂದು ಅಜ್ಞಳಾದ ಅವಳ ತಾಯಿಯು ಹೆದರತೊಡಗಿದಳಾದರೂ, ಅವಳ ತಂದೆಯು ಮಾತ್ರ ತನ್ನ ಮಗಳು ಮುಂದೆ ದೊಡ್ಡ ಕವಿಯಿತ್ರಿಯಾಗುವಳೆಂದು ನಿಶ್ಚಿಕೆಯಾಗಿ ತಿಳಿದುಕೊಂಡನು

ಹಾರಾಣ ಚಂದ್ರನಲ್ಲಿಯೂ ಒಂದಿಷ್ಟು ಕವಿತಾಶಕ್ತಿಯಿದ್ದಿತು ಆತನು ಕೂಡ ಇಂಗ್ಲಿಷ್ ಭಾಷೆಯಲ್ಲಿ ಪ್ರೀತನಾಗಿ ಆಗಿಂದಾಗ ಇಂಗ್ಲಿಷಿನಲ್ಲಿ ಪದ್ಯಗಳನ್ನು ಬರೆಯುತ್ತಿದ್ದನು. ಗಿರೀಂದ್ರಮೋಹಿನಿಯು ಹನ್ನೆರಡು ವರ್ಷದವಳಾಗಿದ್ದಾಗ ಒಂದು ದಿನ ತಂದೆಯು ಅವಳಿಗೆ ಒಂದು ಇಂಗ್ಲಿಷ್ ಕಾವ್ಯವನ್ನು ಭಾಷಾಂತರಗೊಳಿಸಿ ಹೇಳುತ್ತಿದ್ದನು ಕಿಂಚಿತ್ಕಾಲದೊಳಗಾಗಿ ಗಿರೀಂದ್ರಳು, ಆ ಕವಿತೆಯನ್ನು ರಸಭರಿತವಾದ ವಂಗಕಾವ್ಯವಾಗಿ ಮಾರ್ಪಡಿಸಿ, ತಂದೆಗೆ ತೋರಿಸಿದಳು ಅದನ್ನು ನೋಡಿ ಹಾರಾಣನಿಗೆ ಅತ್ಯಧಿಕವಾದ ಆಶ್ಚರ್ಯವುಂಟಾಯಿತು ಈ ಕಾವ್ಯವು ಮುಂದೆ ಗಿರೀಂದ್ರಮೋಹಿನಿಯ "ಭಾರತ ಕುಸುಮ" ವೆಂಬ ಕಾವ್ಯಗ್ರಂಥದಲ್ಲಿ "ತಪೋವನ"ವೆಂಬ ಹೆಸರಿಂದ ಪ್ರಕಟವಾಗಿದೆ ತದನಂತರ ಗಿರೀಂದ್ರಳ ಕಲ್ಪನಾಬಲವು ವಿಕಾಸವಾಗುವಂತೆ ತಂದೆಯು "Paul & Virginia", 'Theodocious', 'Constancia" ಮುಂತಾದ ಇಂಗ್ಲಿಷು ಕಾವ್ಯಗಳನ್ನೂ ಕಥೆಗಳನ್ನೂ ಅವಳಿಗೆ ಬಂಗಾಳಿಯಲ್ಲಿ ಆಗಿಂದಾಗ ಹೇಳತೊಡಗಿದನು ಇವುಗಳನ್ನು ಗ್ರಹಿಸಿಯೂ, 'ಮಹಾನಾಟಕ', 'ಕೋಕಿಲದೂತ', 'ಯೋಜನಗಂಧಾ, 'ವಾಸವದತ್ತಾ', 'ಯುಸುಫ್ ಜಿಲೇಖಾ', 'ಕವಿಕಂಕಣ ಇತ್ಯಾದಿ ವಂಗ ಪುಸ್ತಕಗಳ ಪಠನದಿಂದಲೂ ಗಿರೀಂದ್ರಳ ಪ್ರತಿಭೆಯು ಶತಾಧಿಕವಾಗಿ ಉದ್ದೀಪ್ತವಾಯಿತು

ಗಿರೀಂದ್ರಳಿಗೆ ಅವಳ ಹತ್ತುವರ್ಷ ವಯಸ್ಸಿನಲ್ಲಿ ವಿವಾಹವಾಯಿತು ಬೋಬಾಜಾರಿನ ಶ್ರೀಮಂತ ಭೂಸ್ವಾಮಿಯಾದ 'ದುರ್ಗಾಚರಣದತ್ತ' ಎಂಬುವರ ಕನಿಷ್ಠ ಕುಮಾರನಾದ "ವರೇಶಚಂದ್ರ"ನಿಗೆ ಅವಳನ್ನು ಕೊಟ್ಟರು. ವಿವಾಹಾನಂತರದಲ್ಲಿ ಅವಳ

ವಿದ್ಯಾಭ್ಯಾಸಕ್ಕೆ ಒಂದಿಷ್ಟು ತೊಡಕು ಉಂಟಾಯಿತಾದರೂ ಅವಳ ಕಾವ್ಯಾನುರಕ್ತಿಯು ಮಾತ್ರ ಕಿಂಚಿತ್ತಾದರೂ ಕಡಿಮೆಯಾಗಲಿಲ್ಲ. ಶಿಕ್ಷಣದ ಬಲದಿಂದ ಅವಳ ಬುದ್ಧಿಯು ಹಲವು ಕಡೆಗಳಿಗೂ ಹರಿಯಿತ , ಮತ್ತು ಅಡಿಗೆ, ಹೊಲಿಗೆ, ಕಸೂತಿ ತೆಗೆಯುವದೇ ಮುಂತಾದ ಕಲೆಗಳಲ್ಲಿಯೂ ಅವಳು ಪ್ರವೀಣೆಯಾದಳು.

ಗಿರೀಂದ್ರಳ ಮೊದಲನೆಯ ಕಾವ್ಯವು "ಗಣೇಶ ವಂದನ"ವೆಂಬುದು ಮುಂದೆ ೧೮೭೧ರಲ್ಲಿ "ಕವಿತಾಹಾರ"ವೆಂಬ ಅವಳ ಕಾವ್ಯಗ್ರಂಥವು ಪ್ರಚುರವಾಯಿತು. ಈ 'ಕವಿತಾಹಾರ'ಕ್ಕೆ ಸೇರಿದುದಾಗಿ ಒಂದು ಸಣ್ಣ ಕಥೆಯಿರುವದು. ೧೮೭೦ ರಲ್ಲಿ ಗಿರೀಂದ್ರಳ ಪತಿಯ ಆಪ್ತಮಿತ್ರನೊಬ್ಬನು ಗಿರೀಂದ್ರಳು ಗದ್ಯವಾಗಿಯೂ ಪದ್ಯವಾಗಿಯೂ ತನ್ನ ಸ್ವಾಮಿಗೆ ಬರೆದಿದ್ದ ಕೆಲವು ಪತ್ರಿಕೆಗಳನ್ನು "ಹಿಂದೂ ಮಹಿಳೆಯೊಬ್ಬಳ ಪತ್ರಿಕೆಗಳು" ಎಂಬದಾಗಿ ಪ್ರಸಿದ್ಧಗೊಳಿಸಿ ಬಿಟ್ಟನು. ಹೀಗೆ ತನ್ನ ಪತ್ರಿಕೆಗಳು ಪ್ರಚುರವಾದುದನ್ನು ನೋಡಿ ಬಾಲವಧುವಾದ ಗಿರೀಂದ್ರಳು ಲಜ್ಜೆಯಿಂದ ಮೃತಪ್ರಾಯಳಾದಳು, ಮತ್ತು ಆಗ ಪರ್ಯಟನದಲ್ಲಿದ್ದ ತನ್ನ ಸ್ವಾಮಿಗೆ— "ನನ್ನ ರಚನೆಯು ಜಗತ್ತಿನಲ್ಲಿ ಪ್ರಸಿದ್ಧವಾಗಬೇಕೆಂದು ತಾವು ಅಷ್ಟು ಆತುರವುಳ್ಳವರಾಗಿದ್ದರೆ, ನಾನೇ ತಮಗ ಬೇರೆ ಏನನ್ನಾದರೂ ಬರೆದು ಕೊಡುತ್ತಿರಲಿಲ್ಲವೇ? ನನ್ನ ಪತ್ರಿಕೆಗಳನ್ನೇಕೆ ಪ್ರಕಟಗೊಳಿಸಿದಿರಿ?" ಎಂದು ಆಕ್ಷೇಪಿಸಿ ಬರೆದಳು.

ಇದಾದ ಕೆಲವು ದಿನಗಳಲ್ಲಿಯೇ 'ಕವಿತಾಹಾರ'ವು ಪ್ರಚುರವಾಯಿತು. ಈ ಕವಯಿತ್ರಿಯ ಗ್ರಂಥಗಳಲ್ಲಿ ಇದೇ ಮೊತ್ತ ಮೊದಲು ಪುಸ್ತಕರೂಪವಾಗಿ ಪ್ರಚುರವಾಗಿದ್ದುದರಿಂದ ಬಂಗಾಳದ ವೃತ್ತಪತ್ರಿಕೆಗಳಲ್ಲಿ ಈ ಕಾವ್ಯವು ಬಹಳ ಆದರದಿಂದಲೂ ಕೌತುಕದೊಡನೆಯೂ ಪರಿಶೀಲಿಸಲಾಯಿತು. ಇದರ ವಿಷಯವಾಗಿ ಬಂಕಿಮ್‌ಚಂದ್ರ ಕವಿಯ ಅಭಿಪ್ರಾಯವು ಈ ಮೊದಲೇ ಕೊಡಲಾಗಿದೆ. ಇದಲ್ಲದೆ, ಈ ಗ್ರಂಥವನ್ನು ಓದಿ ನೋಡಿ ವಂಗ ನಾಟಕಕಾರರಲ್ಲಿ ಅಕ್ಷ

ಕವಿಯಾದ ಶ್ರೀಯುತ ದೀನಬಂಧು ಮಿತ್ರನು ಕೂಡ ಮುಗ್ಧನಾಗಿ ಹೋಗಿ ತನ್ನ ಯಾವತ್ತು ನಾಟಕಗಳನ್ನು ಆಕೆಗೆ ಅರ್ಪಿಸಿದನು ಇನ್ನು "ಇಂಡಿಯನ್ ಪೇಟ್ರಿಯಟ್', 'ಸ್ಟೇಟ್ಸ್‌ಮನ್" ಮುಂತಾದ ಇಂಗ್ಲಿಷು ಪತ್ರಿಕೆಗಳಲ್ಲಿ ಈ ಗ್ರಂಥದ ವಿಷಯವಾಗಿ ಬಂದಿರುವ ಸ್ತುತಿಯನ್ನು ನೋಡಿ ಅಮೇರಿಕದ ಪ್ರಸಿದ್ಧ ವಿದುಷಿಯೂ, ಭಾರತರಮಣಿಯರ ಪರಮ ಹಿತೇಚ್ಛುವೂ ಆದ ಶ್ರೀಮತಿ ಮೇರಿ ಕಾರ್ಪೆಂಟರ್ (Mary Carpenter) ಎಂಬಾಕೆಯು ಇವಳನ್ನು ಕಂಡು ಪ್ರತ್ಯಕ್ಷ ಪರಿಚಯ ಮಾಡಿಕೊಳ್ಳಬೇಕೆಂದು ಆತುರಪಟ್ಟಳು ಆದರೆ, ದುರದೃಷ್ಟದಿಂದ ಈ ಯೋಗವು ಮಾತ್ರ ಕೂಡಿಬರಲಿಲ್ಲ ಈ ಕಾವ್ಯವು ಮೊತ್ತಮೊದಲು ಪ್ರಚುರವಾದಾಗ ಲೇಖಿಕಳ ಹೆಸರು ಹಾಕಿ ಅಚ್ಚಾಗಿರಲಿಲ್ಲವೆಂಬ ಅಂಶವನ್ನು ಇಲ್ಲಿ ಹೇಳಬಹುದಾಗಿದೆ

ಆ ತರುವಾಯ ಸ್ವಲ್ಪ ಕಾಲದೊಳಗಾಗಿ "ಭಾರತ ಕುಸುಮ" ವೆಂಬ ಗಿರೀಂದ್ರಮೋಹಿನಿಯ ಎರಡನೆಯ ಗ್ರಂಥವು ಪ್ರಚುರವಾಯಿತು ಈ ಕಾವ್ಯವನ್ನು ಕುರಿತು "ರಯಿಸ್ ಮತ್ತು ರಯತ್" ಎಂಬ ಪತ್ರಿಕೆಯಲ್ಲಿ ಡಾ|| ಶಂಭುಚಂದ್ರ ಮುಕರಜಿಯವರು ಹೀಗೆಂದು ಬರೆದರು — 'ಇದರೊಳಗಣ ಕೆಲಕೆಲವು ಕವಿತೆಗಳು "ಆರ್ಯದರ್ಶನ","ವಂಗದರ್ಶನ"ವೇ ಮೊದಲಾದ ಮಾಸಪತ್ರಿಕೆಗಳಲ್ಲಿ ಬಂದಿವೆ ಹೀಗಾದ ಬಳಿಕ ಈ ಕಾವ್ಯದ ಶ್ರೇಷ್ಠತೆಯೆಷ್ಟಿದೆಯೆಂಬುದು ತಾನಾಗಿಯೇ ತಿಳಿದುಬಾರದಿರದು ಈ ಕವಯಿತ್ರಿಯು ಯಾವ ವಿಧವಾದ ವಿದ್ಯಾಭ್ಯಾಸವನ್ನೂ ಮಾಡಿದವಳಲ್ಲ, ಆಕೆಯ ಕಾವ್ಯವೆಲ್ಲ ಕೇವಲ ದೈವಿಕ ಸ್ಫೂರ್ತಿಯಿಂದಲೇ ಬರೆದುದಾಗಿದೆಯೆಂಬುದನ್ನು ವಿಶೇಷವಾಗಿ ಗಮನಿಸಬೇಕಾಗಿರುವದು ಈ ರಮಣಿಯು ಅಂತಃಪುರದಲ್ಲಿಯೇ ಬೆಳೆದವಳು, ಇವಳ ಶಿಕ್ಷಣವೆಲ್ಲ ಸ್ವಪ್ರಯಾಸದಿಂದ ದೊರೆತುದಲ್ಲದೆ ಬೇರೊಂದಿಲ್ಲ 'ಕವಿತಾ ಬಲವು ಕೇವಲ ಈಶ್ವರಾನುಗ್ರಹದ ಫಲವು' ಎಂಬ ವಚನವು ಈಕೆಯ ವಿಷಯದಲ್ಲಿ ಅಕ್ಷರಶಃ ಅನ್ವಯಿಸುವುದು ಕಾವ್ಯದಲ್ಲಿ ಕಂಡುಬರುವ ಸೌಜನ್ಯವೂ,

ಸಾತ್ವಿಕವಾದ ಸ್ವಾರ್ಥತ್ಯಾಗವೂ, ಇವೆಲ್ಲ ಒಂದಾಗಿ ಸೇರಿರುವ ಇಂಥ ರಮಣಿಯು ಯಾವ ದೇಶಕ್ಕಾದರೂ ಗೌರವವನ್ನು ತರತಕ್ಕವಳಾಗಿರುವಳಲ್ಲವೇ?"

ಕ್ರಿ. ಶ. ೧೮೮೪ ರಲ್ಲಿ ಗಿರೀಂದ್ರ ಮೋಹಿನಿಯ ಸ್ವಾಮಿಯಾದ ನರೇಶಚಂದ್ರನು ತೀರಿಕೊಂಡುದರಿಂದ ಅವಳ ಮೇಲೆ ವೈಧವ್ಯದ ಅಸಹ್ಯವಾದ ಹೊರೆಯು ಬಿದ್ದಿತು. ಆ ಕಾಲದಲ್ಲಿ ಪ್ರೇಮಪೂರ್ಣವಾದ ಅವಳ ಹೃದಯವು ಹೇಗೆ ಕಳವಳಿಸಿತೋ! ಶೋಕದಿಂದ ಹೇಗೆ ವಿದೀರ್ಣವಾಯಿತೋ! ಅದರ ಕಿಂಚಿತ್ಕಲ್ಪನೆಯು ಆ ಬಳಿಕ ಸ್ವಲ್ಪ ಕಾಲದಲ್ಲಿಯೇ ಪ್ರಸಿದ್ಧವಾದ "ಅಶ್ರುಕಣಾ" ಎಂಬ ಅವಳ ಕಾವ್ಯದಿಂದ ತಿಳಿಯಬಹುದಾಗಿದೆ. ಇದರೊಳಗಣ ಸ್ವಾಭಾವಿಕವಾದ ಕರುಣಾರಸವು ವಾಚಕರ ಹೃದಯವನ್ನು ನಿಮಿಷಮಾತ್ರದೊಳಗಾಗಿ ಕರಗಿಸಿ ಬಿಡುವದು. ಕರುಣಾರಸಪೂರ್ಣವಾದ ಇಂಥ ಗ್ರಂಥಗಳು ಪ್ರತಿಭಾಷೆಯಲ್ಲಿಯೂ ನೂರಾರು ಇರಬಹುದಾದರೂ ಸಾಹಿತ್ಯ ಪ್ರಪಂಚದಲ್ಲಿ ಸ್ಥಿರಂಜೀವಿಗಳಾಗಿ ಉಳಿಯುವವುಗಳ ಸಂಖ್ಯೆ ಮಾತ್ರ ಅತ್ಯಲ್ಪವು. ತಥಾಪಿ (ಆದರೂ) ಗಿರೀಂದ್ರ ಮೋಹಿನಿಯ "ಅಶ್ರುಕಣಾ" ಕಾವ್ಯವು ವಂಗಸಾಹಿತ್ಯದಲ್ಲಿ ಮಾತ್ರವಲ್ಲದೆ, ಭೂಮಂಡಲದಲ್ಲಿರುವ ಯಾವ ಸಾಹಿತ್ಯದಲ್ಲಿಯಾದರೂ ಚಿರಕಾಲಿಕವಾದ ಶ್ರೇಷ್ಠ ಪದದಲ್ಲಿ ನಿಲ್ಲತಕ್ಕುದಾಗಿದೆಯೆಂದು ಧಾರಾಳವಾಗಿ ಹೇಳಬಹುದು. ಲೋಕದಲ್ಲಿ ಉಂಟಾಗಿರುವ ಶೋಕಮಯವಾದ ಕಾವ್ಯಗಳ ರೀತಿಗೂ "ಅಶ್ರುಕಣಾ" ಕಾವ್ಯದ ರೀತಿಗೂ ಅಜಗಜಾಂತರವಿರುವದು. ಇದರಲ್ಲಿ ಕಾಣಬರುವ ಶೋಕವು 'ಸಂಕೀರ್ಣ' ಜಾತಿಯದಲ್ಲ. ಕೇವಲ ಉದಾತ್ತ, ದಿವ್ಯ ಸ್ವರೂಪವನ್ನು ವಹಿಸಿದೆ. ಒಬ್ಬರ ಹಾನಿಯಿಂದಲೂ ಲೋಕಕ್ಕೆ ಮಹತ್ತರವಾದ ಪ್ರಯೋಜನವಾಗುವದುಂಟು:- ಪತಿಯ ನಿಧನದಿಂದ ಗಿರೀಂದ್ರ ಮೋಹಿನಿಯು ಮಹಾ ಸಂಕಟಕ್ಕೊಳಗಾದಳು. ನಿಜ. ಆರ್ಯಮಹಿಳೆಯರಿಗೆ ಇದಕ್ಕೂ ಅಧಿಕವಾದ ದುಃಖ ವಿಷಯವಿಲ್ಲ. ಪರಂತು [ಆದರೆ] ಗಿರೀಂದ್ರಳ

ಈ ದುಃಖಪ್ರ ಸಾಹಿತ್ಯ ಪ್ರಪಂಚದಲ್ಲಿ ದಿವ್ಯವಾದ ಒಂದು ಕಾವ್ಯವು ಹುಟ್ಟುವದಕ್ಕೆ ಅವಕಾಶ ಕೊಟ್ಟಿತು. ಅವಳ ಹೃದಯದಲ್ಲಿ ತೀವ್ರ ಜ್ವಾಲೆಯಿಂದ ದಹಿಸುತ್ತಲಿದ್ದ ದುಃಖಾಗ್ನಿಯೇ ಮೂರ್ತಸ್ವರೂಪದಿಂದ ಈ 'ಅಶ್ರುಕಣಾ' ಕಾವ್ಯದಲ್ಲಿ ಗೋಚರಿಸಿರುವುದೆನ್ನಬಹುದು. ಈ ಕಾವ್ಯಕ್ಕೂ ಗಿರೀಂದ್ರಳ ಇತರ ಕಾವ್ಯಗಳಿಗೂ ಭೂಮ್ಯಾಕಾಶಗಳಷ್ಟು ಭೇದವು ತೋರಿಬರುತ್ತದೆ. ಇದರಲ್ಲಿ ಅವಳ ದೃಷ್ಟಿಕೋನವೇ ಬದಲಾಗಿ ಹೋಗಿ, ಜಗತ್ತು, ಅವಳು ಈ ನೋಡಲು ಬಯಸಿದ್ದುದಕ್ಕಿಂತ ಅಧಿಕ ಗೂಢವೂ ವಿಶಾಲವೂ ಪವಿತ್ರವೂ ಆಗಿದೆ. ಉದಾರಚರಿತೆಯರಾದ ಆರ್ಯಕುಲ ಲಲನಾಮಣಿಯರ ಮನೋಭಾವನೆಗಳ ಪ್ರತಿಬಿಂಬವು ಇದರಲ್ಲಿ ಚೆನ್ನಾಗಿ ಬಿಂಬಿಸಲ್ಪಟ್ಟಿರುವುದು. ಈ ಕಾವ್ಯದಲ್ಲಿ ಮಾರ್ದವವೇ ಪ್ರಧಾನ ಲಕ್ಷಣವಾಗಿರುವುದಾದರೂ ತನ್ಮೂಲಕ ಓಜಸ್ಸು [ ಸತ್ವ ಅಥವಾ ಧೈರ್ಯ ] ಕೆಟ್ಟಿರುವದಿಲ್ಲ. ಒಟ್ಟಾಗಿ ಹೇಳುವುದಾದರೆ, ಈ ಕಾವ್ಯವು ಅತಿಮೃದು,-- ಅತ್ಯುದಾತ್ತ.—ಅತ್ಯಂತ ಪ್ರೇಮಪೂರ್ಣವಾಗಿ ನಿರ್ಮಿಸಲ್ಪಟ್ಟು, ಜಗನ್ಮೋಹಿನಿಯೇ ಹಾಡಿದ್ದರೆ ಹೇಗೋ ಹಾಗೆ ಅಷ್ಟು ಲಲಿತವಾಗಿದೆ! ಪೃಥಿವಿಯೂ, ಸ್ವರ್ಗವೂ ಇದರಲ್ಲಿ ಒಂದಾಗಿ ಸೇರಿದೆ. ಕೃತ್ರಿಮತೆ ಅಥವಾ ಆಡಂಬರದ ಲೇಶವೂ ಇರುವುದಿಲ್ಲ.

" ಅಶ್ರುಕಣಾ " ಕಾವ್ಯವನ್ನು ಓದಿದ ಮಾತ್ರದಿಂದ ವಂಗಕುಲಲಲಾಮನಾದ ಶ್ರೀಯುತ ಅಕ್ಷಯಚಂದ್ರ ಚೌಧುರಿಯು ಮರುಳಾದನು. ಆತನು ಈ ಕಾವ್ಯವನ್ನು ಚೆಲುವಾಗಿ ವರ್ಣಿಸಿದನಷ್ಟೇ ಅಲ್ಲದೆ ಅದರ ಕರ್ತ್ರಿಯನ್ನು ಉದ್ದೇಶಿಸಿ ಒಂದು ಕವಿತೆಯನ್ನೂ ಬರೆದಿರುವನು. "ಈ ಕಾವ್ಯವನ್ನು ಓದುತ್ತಿರಲಿಕ್ಕಾಗಿ ಕವಿಯಿತ್ರಿಯು ಉದ್ದೇಶಪೂರ್ವಕವಾಗಿ ಕುಳಿತು ಬರೆದಳೆಂಬ ಭಾವನೆಯು ಎಲ್ಲಿಲ್ಲಿಯೂ ಗೋಚರಿಸುವುದಿಲ್ಲ. ಮಂಜಿನ ನೀರು ಗರಿಕೆಯ ಹುಲ್ಲಿನ ಮೇಲೆ ಬಿದ್ದು ಮುತ್ತಿನ ರೂಪವನ್ನು ವಹಿಸುವ ರೀತಿಯಾಗಿ ಗಿರೀಂದ್ರ ಮೋಹಿನಿಯ ಕಾವ್ಯದಲ್ಲಿ ಅವಳ ಕಲ್ಪನೆಗಳ ಉಚ್ಛ್ವಾಸಗ

ಳೇ ಅಕ್ಷರಗಳಾಗಿ ಅವತರಿಸಿರುವುವೆಂಬಂತೆ ತೋರುತ್ತಿದೆ ಎಂಬುದಾಗಿ ಆ ಕವಿ ಮಹಾತ್ಮೆಯನು ವರ್ಣಿಸಿರುವನು

ಶ್ರೀಯುತ ‘ ಚಂದ್ರನಾಥ ವಸು ’ ಎಂಬ ಸುಪ್ರಸಿದ್ಧ ವಂಗಲೇಖಕರಾದರು — This is poetry in life and its expression of that poetry ‘ ಅಶ್ರುಕಣಾ ’ is the history of the soul of a noble Hindu woman ” ಎಂಬುದಾಗಿ ಬರೆದಿರುವನು.

ಈ ‘ ಅಶ್ರುಕಣಾ ’ ಗ್ರಂಥವು ಈ ವರೆಗೆ ನಾಲ್ಕುಬಾರಿ ಅಚ್ಚಾಗಿರುವದೆಂದು ಹೇಳಿದ ಬಳಿಕ ಇದು ಎಂಥ ಉದಾತ್ತವು ಕಾವ್ಯವೆಂದೂ ಎಷ್ಟು ಜನಪ್ರಿಯವೆಂದೂ ಕರ್ನಾಟಕ ಮಹಾಜನರುಗಳಿಗೆ ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲವೆಂದು ನಂಬುವೆವು

“ ಅಶ್ರುಕಣಾ ” ಕಾವ್ಯದ ತರುವಾಯ ಗಿರೀಂದ್ರ ಮೋಹಿನಿಯು ಒಂದರ ಹಿಂದೊಂದಾಗಿ ಬರೆದ “ಆಭಾಸ”, “ಶಿಖಾ”, “ಅರ್ಘ್ಯ” ಮತ್ತು “ಸಿಂಧುಗಾಥಾ” ಎಂಬ ಬೇರೆ ನಾಲ್ಕು ಕಾವ್ಯ ಗ್ರಂಥಗಳು ಪ್ರಕಟವಾಗಿವೆ ಈ ಕಾವ್ಯಗಳಲ್ಲಿ ‘ಅಶ್ರುಕಣಾ’ ಕಾವ್ಯದೊಳಗಣ ಶೋಕಪ್ರವಾಹವೇ ಮುಂದೆ ಹರಿದಿದೆ ಅವುಗಳೊಳಗೆ ಒಂದೊಂದು ಕಡೆ ತೀವ್ರವಾಗಿಯೂ ವಿಸ್ತಾರವಾಗಿಯೂ, ಬೇರೆ ಕೆಲವೆಡೆಗಳಲ್ಲಿ ಮಂದವಾಗಿಯೂ ಗುಪ್ತವಾಗಿಯೂ—ಅಂತು ಆ ಶೋಕಪೂರವೇ ಅವ್ಯಾಹತವಾಗಿ ಪ್ರವಹಿಸುತ್ತ ಹೋಗಿದೆ ಪತಿಯ ಧ್ಯಾನ ಪೂಜನಗಳೇ ಅವಳ ಕಾವ್ಯಜೀವನದ ಮುಖ್ಯ ವ್ರತವು ಅವಳ “ಶಿಖಾ” ಕಾವ್ಯವು ಪತಿಯುಜ್ಞದ ಉಜ್ವಲವಾದ ಹೋಮವಹ್ನಿಯ ‘ಶಿಖೆ’ಯು ! “ಅರ್ಘ್ಯ”ವು ಪತಿದೇವನ ಪೂಜೆಗಾಗಿ ! “ಸಿಂಧುಗಾಥಾ” ಗ್ರಂಥವು ಸ್ವಾಮಿಯ ಸ್ಮರಣೆಯಿಂದ ಉದ್ಬುದ್ಧ ಹೃದಯಸಿಂಧುವಿನ ಗಂಭೀರವಾದ ಗರ್ಜನೆಯು !!

ಗಿರೀಂದ್ರಳು ಎಲ್ಲಕ್ಕಿಂತ ಈಚೆಗೆ ಬರೆದುದು “ ಸ್ವದೇ

ಶಿನೀ" ಎಂಬ ಕಾವ್ಯವು. ಇದರಲ್ಲಿ ಆ ಕವಿಯಿತ್ರಿಯ ಪರಮ ತೀವ್ರವಾದ ದೇಶಾಭಿಮಾನವು ಪ್ರಕಟವಾಗಿದೆ.

ಗಿರೀಂದ್ರ ಮೋಹಿನಿಯ ಸ್ವಭಾವವೂ ವರ್ತನವೂ ನಿಜವಾದ ಕವಿಯಿತ್ರಿಗೆ ಸರ್ವವಿಧದಿಂದಲೂ ಉಚಿತವಾಗಿಯೇ ಇದೆ. ಆಕೆಯಲ್ಲಿ ಅಟ್ಟಹಾಸ, ದ್ವೇಷ, ಅಹಂಕಾರಗಳ ಲವಲೇಶವೂ ಇರುವುದಿಲ್ಲ. ಚಿಕ್ಕಂದಿನಿಂದಲೂ ಪರರ ದುಃಖದಿಂದ ಕರಗುವ, ಪರಮ ದಯಾಳುವಾದ ಹೃದಯವುಳ್ಳವಳು. ಬಾಲ್ಯದಲ್ಲಿ ತನ್ನ ಮಯ್ಯ ಮೇಲಣ ಒಡವೆಗಳನ್ನು ಕೂಡ ಅನಾಥರಿಗೂ ವಿಕಲಾಂಗರಿಗೂ ಹಿಂದು ಮುಂದು ನೋಡದೆ ಕೊಟ್ಟು ಬಿಡುತ್ತಿದ್ದಳೆಂದು ಬಲ್ಲವರು ಹೇಳುವರು. ಗಿರೀಂದ್ರಳು ಚಿಕ್ಕತನದಲ್ಲಿ ಶಾಲೆಗೆ ಹೋಗುತ್ತಿದ್ದಾಗ ಅವಳ ಸಹಾಧ್ಯಾಯಿನಿಯಾದ ಬಡಹುಡುಗಿಯೊಬ್ಬಳಿದ್ದಳು. ಒಂದು ದಿನ ಆ ಹುಡುಗಿಯು ಕಿವಿ ಚುಚ್ಚಿಕೊಂಡರೂ ಚಿನ್ನದ ಕರ್ಣಾಭರಣ ಹಾಕಿಕೊಳ್ಳಲು ದುಡ್ಡಿಲ್ಲದೆ ನೂಲು ಹಾಕಿಕೊಂಡು ಶಾಲೆಗೆ ಬಂದಳು. ಇದು ಸರಳ ಹೃದಯೆಯಾದ ಗಿರೀಂದ್ರಳ ಕಣ್ಣಿಗೆ ಬಿದ್ದು.- 'ಇದೇಕೆ ಕಿವಿಗೆ ನೂಲು ಹಾಕಿಕೊಂಡಿರುವೆ?'' ಎಂದು ಸಖಿಯನ್ನು ವಿಚಾರಿಸಿದಳು. ಬಡಹುಡುಗಿಯಾದ ಆ ಒಡನಾಡಿಯು ಖಿನ್ನಳಾಗಿ-'ಗಿರಿ! ನಾವು ಬಡಪಾಪಿಗಳು, ನಿಮ್ಮಂತೆ ಚಿನ್ನಮುತ್ತಿನ ಒಡವೆಗಳು ನಮಗೆಲ್ಲಿ ಸಿಕ್ಕುವುವು, ತಾಯಿ?'' ಎಂದು ಕಣ್ಣೀರು ತುಂಬಿ ಉತ್ತರ ಕೊಟ್ಟಳು. ಇದನ್ನು ನೋಡಿ ಗಿರೀಂದ್ರಳ ಹೃದಯವು ಕಳವಳಿಸಿತು, ಮತ್ತು ಒಡನೆಯೇ ತನ್ನ ಕಿವಿಯ ಆಭರಣವನ್ನು ತೆಗೆದು ಗೆಳತಿಯ ಕಿವಿಗೆ ಹಾಕಿಯೂ ಬಿಟ್ಟಳು! ಇಂಥ ಪರೋಪಕಾರ ಕೃತ್ಯಗಳನ್ನು ಮಾಡುವಲ್ಲಿ ಗಿರೀಂದ್ರಳು ತನ್ನ ಹೆತ್ತವರ ಅನುಮತಿಯನ್ನು ಕೂಡ ಕೇಳುತ್ತಿರಲಿಲ್ಲವಾಗಿ ಒಂದೊಂದು ಬಾರಿ ಅವರ ಆಗ್ರಹಕ್ಕೂ ಗುರಿಯಾಗುತ್ತಿದ್ದಳು; ಆದರೂ ಇದಿರಾಡದೆ- "ಏನು ಮಾಡಲಮ್ಮ! ಆ ಬಡ ಹೆಣ್ಣಿಗೆ ತಾಯಿತಂದೆಗಳಿಲ್ಲವಲ್ಲ!" ಎಂದು ಹೆತ್ತವರನ್ನು ಸಮಾಧಾನಪಡಿಸುತ್ತಿದ್ದಳು.

ಗಿರೀಂದ್ರ ಮೋಹಿನಿಯ ಅದ್ಭುತವಾದ ಚಾತುರ್ಯವು ಕೇವಲ ಕಾವ್ಯಲೇಖನದಲ್ಲಿಯೇ ಪರ್ಯವಸಾನ ಹೊಂದಿರುವುದಿಲ್ಲ ಗೃಹಕರ್ಮಗಳಲ್ಲಿಯೂ, ಸರ್ವವಿಧವಾದ ಲಲಿತಕಲೆಗಳಲ್ಲಿಯೂ, ವಿಶೇಷವಾಗಿ-ಚಿತ್ರಕಲೆಯಲ್ಲಿಯೂ ಆಕೆಗೆ ಉತ್ತಮವಾದ ಹಸ್ತಲಾಘವವಿರುವದು ಆಕೆಯು ಬರೆದ ಎಷ್ಟೋ ಚಿತ್ರಗಳಿಗೆಲ್ಲ ಬಂಗಾಳಾದೇಶದಲ್ಲಿ ನೆರೆದ ಬೇರೆಬೇರೆ ಪ್ರದರ್ಶನಗಳಲ್ಲಿ ಪ್ರಶಂಸೆಯೂ, ಬಹುಮಾನ ಪದಕಗಳೂ ದೊರೆತಿವೆ ಈ ಕಲೆಯನ್ನು ಕೂಡ ಆಕೆಯು ಮನೆಯಲ್ಲಿಯೇ ಅಭ್ಯಸಿಸಿದ್ದಳಂತೆ !

ಗಿರೀಂದ್ರಳ ಸಂಸಾರವು ಮೊದಲಿಂದಲೂ ನಿರಂತರ ದುಃಖಮಯವಾದುದು ಅವಳ ಸ್ವಾಮಿಯ ಆರೋಗ್ಯವು ಸರ್ವದಾ ರೋಗಗ್ರಸ್ತವಾಗಿದ್ದುದರಿಂದ ಪರ್ಯಟನವೂ, ಚಿಂತೆಯೂ ಅವಳ ಬೆನ್ನು ಹತ್ತಿದ್ದುವು. ಒಂದು ನಿಮಿಷವಾದರೂ ಪತಿಯನ್ನು ಬಿಟ್ಟು ನಿಂತವಳಲ್ಲ, ನೆರಳಿನಂತೆ ಹಗಲು ರಾತ್ರಿ ಸ್ವಾಮಿಯನ್ನು ಅನುಸರಿಸಿ ಇರುತ್ತಿದ್ದಳು. ಆರ್ಯರಮಣಿಯರಿಗೆ ಇದಕ್ಕೂ ಅಧಿಕವಾದ ಭೂಷಣವಾವುದು? ಪತಿಗಾಗಿಯೇ ತನ್ನ ಜೀವನವು, ಪತಿಯಿಂದ ಪ್ರತ್ಯೇಕವಾಗಿ ತನಗೆ ಯಾವ ಸ್ವಾತಂತ್ರ್ಯವೂ ಇರುವುದಿಲ್ಲವೆಂಬುದು ಅವಳ ದೃಢವಾದ ಮನೋಭಾವವು ಈ ಭಾವನೆಯನ್ನೇ ಕಣ್ಣಿದಿರಿಗಿಟ್ಟುಕೊಂಡು ಅವಳು ತನ್ನ ಕಾವ್ಯಗಳನ್ನು ರಚಿಸಿದಳು, ಮತ್ತು ಈ ಭಾವನೆಯಿಂದಲೇ ರಸಿಕಮಹಾಜನರು ಆಕೆಯ ಕಾವ್ಯರಸವನ್ನು ಆಸ್ವಾದಿಸುತ್ತಿರುವರು

ಕರ್ನಾಟಕ ಸಾಹಿತ್ಯ ಪ್ರಪಂಚದಲ್ಲಿ ಈ ಹಿಂದೆ, ಗಿರೀಂದ್ರಳಂಥ ಹಲವು ರಮಣಿಯರು ಅವತರಿಸಿರುವರು, ಆದರೆ, ವರ್ತಮಾನ ಸ್ಥಿತಿಯಲ್ಲಿ ಮಾತ್ರ ನಮ್ಮ ಮಾತೃಭೂಮಿಯನ್ನು, ಈ ವಿಷಯದಲ್ಲಿ ವಂಗಭೂಮಿಯೊಡನೆ ಹೋಲಿಸಲು ಧೈರ್ಯಪಡಲಾರೆವು. ಆದರೂ ಈ ದುರವಸ್ಥೆಯು ಬಹುಕಾಲ ಉಳಿಯಲಾರದೆಂದೂ, ನಮ್ಮ ದೇಶವು ಕೂಡ, ಕ್ಷಿಪ್ರದಲ್ಲಿಯೇ ವಂಗಭೂಮಿಯ ಸಾಮ್ಯವನ್ನು

ಹೊಂದುವ ಸುಲಕ್ಷಣಗಳು ಗೋಚರಿಸತೊಡಗಿರುವುದೆಂದೂ ಭಾವಿಸಲು ಆಸ್ಪದವಿದೆ. ಇದನ್ನು "ಕರ್ನಾಟಕ ನಂದಿನಿ"ಯ ವಾಚಕರಿಗೆ ನಾವು ವಿಶೇಷ ಹೇಳಬೇಕೇ?

"ಭಾರದ್ವಾಜ"

---

# ಗೋವಿಂದನ ಗುಮಾಜ್ಞೆ.

'ನವೀನ ನೀರದ ಶ್ಯಾಮಂ ನೀಲೇಂದೀವರಲೋಚನಂ ।
ವಲ್ಲವೀ ನಂದನಂ ವಂದೇ ಕೃಷ್ಣಂ ಗೋಪಾಲ ರೂಪಿಣಂ ॥'

"ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಮ್।
ಯತ್ಕೃಪಾ ತಮಹಂ ವಂದೇ ಪರಮಾನಂದ ಮಾಧವಮ್ ॥"

'ನಮೋ ಬ್ರಹ್ಮಣ್ಯ ದೇವಾಯ ಗೋಬ್ರಾಹ್ಮಣ ಹಿತಾಯ ಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋನಮಃ ॥' *

ಹೇ ಗೋವಿಂದ! ನಂದ ಕಂದ! ಸದಾನಂದ!! ಇದೊ ಇದೆ ನಿನಗೆ, ಈ ನಿನ್ನ ಕಂದನ ಕೋಟಿ ಕೋಟಿ ವಂದನೆಗಳು!! ಗೋಪಾಲನಾದ, ಗೊಲ್ಲರೂಪಿಯಾದ, ಗೋವ್ರಜಪರಿಪಾಲಕನಾದ, ಗೋಕುಲಾನಂದ ವಿವರ್ಧನನಾದ ಎಲೈ ಗೋಪಾಲನೇ! ನಿನಗೆ,—ಗೋಪಿಜನ ಹೃದಯಾಹ್ಲಾದಕರವಾದ ಈ ನಿನ್ನ ಮಂದಸ್ಮಿತ ಸುಂದರ ವದನಾರವಿಂದಕ್ಕೆ, ತ್ರಿಲೋಕ ಸಂರಕ್ಷಣಾ ಕರ್ತೃತ್ವ ಶಕ್ತಿಯಿಂದ ರಾರಾಜಿಸುತ್ತಿರುವ ಈ ನಿನ್ನ ಅಭಯ ಹಸ್ತಕ್ಕೆ, ಧರ್ಮ ಸಂಸ್ಥಾಪನಾಚಾರ್ಯನೆನ್ನಿಸುವ ಈ ನಿನ್ನ ದಂಡಕ್ಕೆ,— ಜಗತ್ಪಾವನತಮವೆನ್ನಿಸಿ ಭಕ್ತಜನಾಶ್ರಯ ಕಲ್ಪತರುವೆಂದು ಸ್ತುತಿಸಲ್ಪಡುತ್ತಿರುವ ಈ ನಿನ್ನ ಚರಣಕಮಲ ಯುಗಳಕ್ಕೆ,— ಮತ್ತು—ಐಹಿಕಾಮುಷ್ಮಿಕಗಳೆರಡರ

* ದಿನಚರ್ಯಾ ಪುಟ ೯೮ ಶ್ಲೋಕ [illegible]

ಸುಖ-ಭೋಗ-ಸಂಪದ್-ವೈಭವಗಳಿಗೂ ಸಾಧನೋಪಾಯವೆನ್ನಿಸುವ ಗೋ-ಬ್ರಾಹ್ಮಣ-ಸೇವೆಯೇ ಮುಖ್ಯವೃತ್ತಿಯೆಂದು ತೋರಿಸುತ್ತಿರುವ ಈ ನಿನ್ನ ಗೊಲ್ಲ-ಗೋಪಾಲ ಬಾಲ ವೇಷಕ್ಕೆ ಸಹಸ್ರಸಹಸ್ರ-ಶತಸಹಸ್ರ ವಂದನೆಗಳನ್ನು ಸಮರ್ಪಿಸುತ್ತಿರುವೆನು. ಕೃಪೆಮಾಡು—ಕೃಪೆಮಾಡು—ಕೈ ಹಿಡಿದು ಕಾಪಾಡು " ಗೋವಿಂದಾ! ಕೃತಾರ್ಥತೆಯುಂಟು ಮಾಡು!!!

ಭಗವನ್! ಕಟ್ಟುಮಾಡು --ಏನೆನ್ನುವೆ? ವಿವರವಾಗಿ ಬೋಧಿಸಬಾರದೇ? ನಂದನಂದನ! ನಿನ್ನಲ್ಲಿ ಇನ್ನೆಷ್ಟು ಮೊರೆಯಿಡಲಿ? ನಿನ್ನ ಹೃದಯವು ಅಪಾರಕೃಪಾಮಯವೆಂದು ಹೇಳುವ ವಾಕ್ಯಗಳೆಲ್ಲವೂ ಏನಾದವು ಏಕೆ ಮಾತಿಲ್ಲ? ಕರ್ಮಫಲವೆಂದು ಹೇಳಿ ಸುಮ್ಮನಿರುವೆಯೋ? ಅಹುದಲ್ಲವೇ ಹಾಗಿದ್ದರೆ ಹೋಗು, ದೂರ ಹೋಗು! ನಿನ್ನಿಂದನನಗಾಗಬೇಕಾದುದೇನು? ನಿನ್ನನ್ನು ಪ್ರಾರ್ಥಿಸಿ ಪಡೆಯುವಂತಹುದಾದರೂ ಏನಿದೆ? ನಿನ್ನಲ್ಲಿ ಮೊರೆಯಿಟ್ಟು ಇಷ್ಟು ಕಾಲದಲ್ಲಿ ಅಷ್ಟತ್ತಾಗಿಯಾದರೂ ಆ ನನ್ನ ತಾಯಿಯಲ್ಲಿ, ಸಕಲ ಜೀವನ ಚೈತನ್ಯದಾಯಿನೀ-ಅಮೃತಸ್ತನಿಯಾಗಿರುವ ನನ್ನ ಪ್ರೇಮದ ತಾಯಿಯಲ್ಲಿ, ನಿನ್ನ ಹೃದಯೇಶ್ವರಿಯಾದಾ ಸುಧಾಮಾತೆಯ ಬಳಿಯಲ್ಲಿ,—ಮೊರೆಯಿಡುತ್ತಿದ್ದೆನಾಗಿದ್ದರೆ, ನನಗೆಷ್ಟೋ ಮೇಲಾಗುತಿದ್ದಿತು! ತಾಯಿಯನ್ನು ಬಿಟ್ಟು, ನಿನ್ನನ್ನು ಕಾಡಿದೆನು,—ಬೇಡಿದೆನು—ಕೊಂಡಾಡಿದೆನು! ಏನಾಯ್ತು? "ಗೋವಿಂದ-ಗೋವಿಂದಾ!" ಎಂದು ಕೂಗಿ ಕೂಗಿ ನಾಲಿಗೆಗೆ ಗುರುತ್ವವುಂಟಾದುದು ಮಾತ್ರವಲ್ಲದೆ ಮತ್ತೇನೂ ಆದಂತೆ ಕಾಣಲಿಲ್ಲ!

ಕಲ್ಯಾಣೀ! ಕ್ಷಮಾಮಣಿ! ಭಕ್ತಜನ ಚಿಂತಾಮಣಿ!! ಜನನೀ! ಚೈತನ್ಯಸ್ವಸ್ತ್ಯದಾಯಿನಿ! ಕೃಪೆ ಮಾಡು ನಿನ್ನನ್ನು ಕಾಣದೆ, ನಿನ್ನನ್ನು ನೆನೆಯದೆ, ಜಡಭಾವದಲ್ಲಿದ್ದ ಈ ಕಂದನನ್ನು ಒಂದಿಷ್ಟು ಕೃಪಾದೃಷ್ಟಿಯಿಂದ ನೋಡು! ವಿವಿಧ ರೋಗ-ಭಯ-ವ್ಯಾಕುಲಗಳಿಂದ ಹೀಗಾಗಿದೆ-ನೋಡಬಾರದೇ?—ಕಾಣಲಿಲ್ಲವೇ-ಅಮ್ಮಾ? ಸಂತಾಪಾತಿಶಯ

ದಿಂದ ಬುದ್ಧಿನಷ್ಟ ಕಾಲನಷ್ಟ, ಕ್ರಿಯಾನಷ್ಟ,-ಕಡೆಗೆ ಅಪಾರವಾದ ದ್ರವ್ಯನಷ್ಟ!!! ಇಷ್ಟೊಂದು ನಷ್ಟಪರಂಪರೆಯನ್ನೂ ನಿನ್ನೀ ಹಾಲು ಕಂದನು ಹೇಗೆ ಸಹಿಸಬಲ್ಲದು? ಕೇಳು ಕೇಳು!-ಕಂಗೆಟ್ಟ ಕಂದನು ಅರೆ ಬಾಯಿಬಿಟ್ಟು ಅದೇನನ್ನು ಹೇಳುತ್ತಿದೆ?-

"ಅನಾಥೋ ದರಿದ್ರೋ ಜರಾರೋಗಯುಕ್ತೋ ।
ಮಹಾಕ್ಷೀಣ ದೀನ ಸದಾ ಜಾಡ್ಯವಕ್ತ್ರ ॥
ವಿಪತ್ತೌ ಪ್ರವಿಷ್ಟ ಪ್ರನಷ್ಟ ಸದಾಹಂ ।
ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾಭವಾನಿ!" *

ಇನ್ನಾಗದು, ಅವ್ವಾ ಇದೋ ಕೇಳಿಸಿ ಎದ್ದೆ-ಬಿದ್ದೆನು-

"ಏಳೇಳು! ಬೇಗ ಏಳು!—ಕರು-ತುರುಗಳನ್ನು ನೋಡೇಳು!!-ತುರುಗಾವಲಿಗೇಳೇಳು !'!"

ಹಾ! ಎದ್ದೆನು,-ಎದ್ದೆನು ಕೂಗಿದವರಾರು? ತಿಳಿದೆನು-ತಿಳಿದೆನು ಬಂದೆಯಲ್ಲೇ ಗೋವಿಂದ? ಇಂದಿಗಾದರೂ ಕೃಪೆಬಂದಿತೇ-ಮುಕುಂದ? ಅದಾರು ನಿನ್ನೆ ಹಿಂದೆ? ಇದಾವ ನಿನ್ನ ವೇಷ? ಏನೀ ನಿನ್ನ ಲೀಲಾವಿನೋದ? ಅವ್ವಾ, ಗೋಪಾಲ ಗೋಪ ಬಾಲ! ನಿನಗೆ ಇದೇ ರೂಪವೇ ಇಷ್ಟವಾಯಿತೇ? ನಿನ್ನ ಅನಂತಾನಂತ ರೂಪಗಳಲ್ಲಿ ಇಂದು ನೀನು ತೋರಿಸಿದೀ ಬಾಲ ಗೋಪಾಲ ವೇಷವೇ ನಿನಗೆ ಸೊಗಸಿತೇ? ಈ ಕೈಗೋಲು-ಈ ಕರಿಯ ನಿಲುವಂಗಿ, ಈ ಕಸ್ತೂರಿಯ ತಿಲಕ, ಇವಿಷ್ಟೇ ನಿನಗೆ ಸಾಕಾದ ಅಲಂಕಾರವಾಯ್ತೇ? ಬೇರೆ ರೂಪದಿಂದ ಮೈದೋರಿದ್ದರೆ ನಿನಗೇನಾಗುತ್ತಿದ್ದಿತು? ಆ ನಿನ್ನ ಪೀತಾಂಬರ ಗದಾ ಶಂಖ ಚಕ್ರಗಳನ್ನು ಧರಿಸಿದ್ದರೆ ನಿನಗಾಗುತ್ತಿದ್ದ ನಷ್ಟವೇನು?

ಅದೇನು ಹೇಳುವೆ ಗೋಪಾಲ? "ನೋಡು ನೋಡು" ಆರನ್ನು ನೋಡಲಿ? "ಕರುವನ್ನು ನೋಡು ತುರುವನ್ನು ನೋಡು" ಎಲ್ಲಿ ನೋಡಲಿ? ಹೋ! ಕಂಡೆನು, ನಿನ್ನ ಹಿಂದೆ ನಿಂದಿರುವ

* ದಿನಾತ್ಯಯಾ ಪುಟಾಂಕ ಶ್ಲೋಕ ೮

ವರನ್ನು ಕಂಡೆನು. ಅಯ್ಯೋ! ಇದೇಕೆ-ಗೋವಿಂದ! ಹೀಗಾದಳೇಕೆ? ಇವಳಾರು-ನಮ್ಮ ಗೋಮಾತೆಯಲ್ಲವೇ? ಅಹುದು, ಬನ್ನಿನ ಕಾಯೀ ಗೋಮಾತೆ ಕ್ರಮಾಕಾಂತೆ!! ಸುರಭೀ ನಾಮ ಸಂಬೋಧಿತೇ!!! ಜೀವನ ಪ್ರದಾತೆ! ನೀನೇಕೆ ಹೀಗೆ ಕೃಶಳಾದೆ? ಅಯ್ಯೋ! ನಿನ್ನ ವತ್ಸಕ್ಕೆ ಸಾಕಾಗುವಷ್ಟು ಅಮೃತವೂ ದುರ್ಲಭವಾಯಿತೇ? ಆತ್ಮಜರಲ್ಲದೆ ಆಶ್ರಿತಾನಾಥರಿಗೂ, ಅತಿಥಿ ಅಭ್ಯಾಗತರಿಗೂ-ಆದರೋಪಚಾರಪೂರ್ವಕವಾಗಿ ಯಥೇಷ್ಟವಾದಷ್ಟು ಅಮೃತವನ್ನು ದಾನ ಮಾಡುತ್ತಿದ್ದ ನೀನು .. .. ”

—ಹಾ ಹಾ! ಮೋಸ ಹೋದೆನು, ಮೋಸ ಹೋದೆನು ಮೋಸ ಮಾಡಿ ನೀನೆಲ್ಲಿಗೆ ಹೋದೆ ಗೋವಿಂದ! ಗೋಪಬಾಲ, ಗೋಪಾಲ ನೀನೆಲ್ಲಿಗೆ ಹೋದೆ? ನಿಂದಂತೆಯೇ ಹೀಗೇಕೆ ಕಣ್ಮರೆಯಾದೆ? ಹಾ ಮೈತ್ರಿಯೂ ಮೋಸವೇ? ತಾಯಿ ಗೋಮಾತೆಯೆಲ್ಲಿ? ಅವಳೆಲ್ಲಿಗೆ ಹೋದಳು? ವತ್ಸನೊಡಗೂಡೇ ಹೋದಳು!! ಗೋಪಾಲನೀವನ್ನು ಕಾಣಲಿತ್ತ ತಿರುಗಿದೆನೆಂದು ತಾನೂ ಮುಳಿದತ್ತ ಮರೆಯಾದಳೇ? .. .

“ಸ್ವತಂತ್ರಳಾಗಿ ಸಮಾಲೋಚಿಸು ಇದೆಲ್ಲವೂ ನಿನ್ನ ಸ್ಥೂಲ ದೇಹ ಸಂಬಂಧವಾದ ರೋಗಾದ್ಯುಪದ್ರವಗಳನ್ನು ಸೂಕ್ಷ್ಮ ದೇಹಕ್ಕೆ ಆವರಿಸಿರುವ ಮೋಹಾದಿ ಮಾಯಾಪಾಶಬಂಧಗಳನ್ನೂ ಪರಿಹರಿಸುವದಕ್ಕಾಗಿಯೇ ಭಗವಂತನು ದಿಗ್ದರ್ಶನ ಮಾಡಿ ತೋರಿಸಿರುವ ಚಿಕಿತ್ಸಾ ಕರ್ತವ್ಯ ಬೋಧೆಯೆಂದು ತಿಳಿದೆಚ್ಚರಗೊಂಡೇಳು, ಸಂಶಯವನ್ನುಳಿದು, ಸ್ವಾನುಭವಪೂರ್ವಕವಾಗಿ, ವಾಕ್ಯವನ್ನು ಸಿದ್ಧಾಂತಗೊಳಿಸು”

ಸುಹೃದರೇ! ರುಗ್ಣಶಯ್ಯೆಯಲ್ಲಿ, ಬುದ್ಧಿಮಾಂದ್ಯ ಸ್ಥಿತಿಯಲ್ಲಿ, ಶಕ್ತಿ ಶೂನ್ಯ ಪ್ರಕೃತಿಯಲ್ಲಿ—ಚೇಷ್ಟಾರಹಿತೆಯಾಗಿ ಒರಗಿದ್ದೆನಗೆ ಮೇಲೆ ವಿವರಿಸಿರುವ ವಿಸ್ಮಯಾನಕ ದೃಶ್ಯವಾಯಿತು;— ಭಯ ವಿಸ್ಮಯ, ಕೌತುಕಗಳಿಂದ ಧಿಗ್ಗನೆದ್ದೆನು ವಿಚಾರಾಧಿಕ್ಯದಿಂದ ಉನ್ಮಾದಾ

ವಸ್ಥೆ ಹೊಂದಿ, ಸ್ಮೃತಿಯಿಲ್ಲದೆ ಪರಿತಪಿಸುವಂತಾದೆನು. ಆ ವೇಳೆಯಲ್ಲಿ ನನ್ನ ಮನಶ್ಶಾಂತಿಗೆಂದು ಮೇಲಿನ- “ಸ್ಥಿರಚಿತ್ತ ಚಿತ್ತಳಾಗಿ ಸಮಾಲೋಚಿಸು ... .......’ ಇತ್ಯಾದಿಯಾದ ಉಪದೇಶವು ಲಭಿಸಿತು. ಆ ಧ್ವನಿಯು, ಆ ದೈವಿಕ ಶಕ್ತಿದ್ಯೋತಕವಾದ ಆತ್ಮೀಜನ ವಾಕ್ಯವು, ನನ್ನ ಕಿವಿಗಳಿಗೆ ಬಿದ್ದು ಬಹುದಿನಗಳಾಗಿದ್ದುವು. ಇಂದು ಕರ್ತವ್ಯತಾಮೂಢೆಯಾಗಿ ಕುಳಿತಿದ್ದ ನನ್ನನ್ನು ಎಚ್ಚರಿಸಲು ಅನುಗ್ರಹಿಸಿದ ಆ ನನ್ನ ಪರದೈವದ ಅಭಯವಾಣಿಯಿಂದ ನಾನು, ಆ ಸ್ವಾಮಿಯ ಅನುಗ್ರಹವು ನನ್ನನ್ನು ಬಿಟ್ಟು ಹೋಗಿಲ್ಲವೆಂದೂ, ಅಂತಸ್ಥವಾಗಿದ್ದು ಸಂದಿಗ್ಧ ಸಮಯದಲ್ಲಿ ಸೂಕ್ತ ವಿಚಾರಬೋಧೆಯಿಂದ ಸಮಾಧಾನವನ್ನುಂಟು ಮಾಡುವ ಅಂತರಂಗ ಸಹಾಯಕನಂತಿರುವದೆಂದೂ ತಿಳಿದೆನು. ಜೀವನ ಸಂಶಯದಿಂದ ಆಯಾಸಗೊಂಡಿದ್ದ ಮನಸ್ಸನ್ನು ಮೇಲೆ ಹೇಳಿದ ಸತ್ಶಕ್ತಿಯ ದೆಸೆಯಿಂದ ಹುರಿಗೊಳಿಸಿ ಎಬ್ಬಿಸಿದೆನು. ಉಬ್ಬಿನಿಂದ ಬಂದು ಗುರುಹಿರಿಯರಲ್ಲಿ ಹೇಳಿಕೇಳಿ ಅವರ ಸಮಯೋಚಿತ ಸಮಾಧಾನ ವಾಕ್ಯಗಳನ್ನೂ ಸಂಗ್ರಹಿಸಿದೆನು, ಮತ್ತೆ ನಿತ್ಯಕೃತ್ಯದಲ್ಲಿ ನಿರತಳಾದೆನು! ಆದರೇನು? ಕಾರ್ಯಕ್ಕೆ ಕೈಚಾಚಿ ಕುಳಿತೊಡನೆಯೇ ಮೇಲಿನ ವಿದ್ಯಮಾನದ ಅರ್ಥವೇನೆಂಬುದನ್ನು ತಿಳಿಯಬೇಕೆಂಬ ಜಿಜ್ಞಾಸೆಯು ಮಿದುಳನ್ನು ಹೊಕ್ಕು ಇತರ ಕಾರ್ಯಗಳಲ್ಲಿ ಪರಾಙ್ಮುಖತೆಯನ್ನುಂಟು ಮಾಡಿತು. ಹಾಗೆಯೇ ಕುಳಿತಂತೆಯೇ— ಅಕ್ಷಯ ಲೇಖಿನಿಯನ್ನು ( Fountain pen ) ಹಿಡಿದು ಕುಳಿತಂತೆಯೇ— ನನ್ನಲ್ಲಿ ನಾನೇ ವಿಚಾರ ಮಾಡಿದೆನು. ಕಡೆಗೆ ಸ್ವಾಮಿ ಪ್ರೇರಣೆಯಿಂದ ಈ ಮುಂದೆ ವಿವರಿಸುವಂತೆ ನಿರ್ಧಾರಣ ಮಾಡಿದೆನು. ಹೇಗೆಂದರೆ—

‘ ಸತಿಗೆ ಪಾತಿವ್ರತ್ಯವೂ, ಯತಿಗೆ ಪರತತ್ವ ನಿಶ್ಚಯಜ್ಞಾನವೂ ಹೇಗೆ ಮುಖ್ಯ ಧರ್ಮವೆನ್ನಿಸಿರುವವೋ- ಹಾಗೆಯೇ ಗೋಸೇವೆಯೇ ಪರಮಾತ್ಮನ ಸುಪ್ರಸನ್ನತೆಗೆ ಸಾಧನವೆನ್ನಿಸಿ, ಬ್ರಹ್ಮಚರ್ಯದಿಂದ ಮೊದಲು, ಸನ್ಯಾಸಿಯ ವರೆಗೂ, ಬಾಲೆಯಿಂದ ಮೊದಲು, ಜರತೆಯ

ವರೆಗೂ ಅವಶ್ಯ ಕರ್ತವ್ಯವೆನ್ನಿಸಿರುವುದು ಯಾವ ಮನೆಯಲ್ಲಿ ಗೋಸೇವೆಯು ನಿಯತವಾಗಿ ನಡೆಯುತ್ತಿರುವದೋ, ಅವರ ಭಾಗ್ಯಗೃಹವು ಗೋಮಾತೆಯ ಚರಣಧೂಳಿಯಿಂದ ಪುನೀತವಾಗಿರುವುದೋ, ಅವ ಧನ್ಯಾತ್ಮರು ಗೋದೇವಿಯನ್ನು ತ್ರಿಕಾಲಗಳಲ್ಲಿಯೂ ತ್ರಿಕರಣಶುದ್ಧಿಯಿಂದ ಆರಾಧಿಸಿ, ಆ ತಾಯಿಯನ್ನು ದರ್ಶನ-ಸ್ಪರ್ಶನಗಳೇ ಮೊದಲಾದ ಉಪಚಾರಗಳಿಂದ ಸಂತೋಷಗೊಳಿಸಿ ಆ ಮಾತೆಯ ಪೂರ್ಣಾನುಗ್ರಹಕ್ಕೆ ಪಾತ್ರರಾಗಿರುವರೋ ಸುಜ್ಞಾನಾನಂದ ಧಾಮವೆನ್ನಿಸುವ ಅಂತಹ ಶ್ರೀನಿಲಯವೂ ಆ ಮಹನೀಯರೂ ಪ್ರಾತಃಸ್ಮರಣೀಯರೆನ್ನಿಸಲು ಸಂಶಯವಿಲ್ಲ. ಇದಕ್ಕೆ ಸಮಾಧಾನವು ಬೇಕೆಂದರೆ—

ತಪಸ್ವಿಗಳಲ್ಲಿ ಗರಿಷ್ಠರಾದ ವಸಿಷ್ಠರು ನಂದಿನಿಯನ್ನು ಸೇವಿಸಿ- ಅವಳ ಅನುಗ್ರಹದಿಂದ ಹೊಂದಿರುವ ಅರ್ಥಸಿದ್ಧಿ ಯಶೋವೃದ್ಧಿಗಳನ್ನೂ, ಗುರುವಚನಾನುಸಾರವಾಗಿ ದಿಲೀಪ ಮಹಾರಾಯನು ಬ್ರಹ್ಮಚರ್ಯ ಏಕನಿಷ್ಠೆಯಿಂದ ನಂದಿನೀ ಸೇವೆಯನ್ನು ಮಾಡಿ, ದೇವಿಯ ವಾತ್ಸಲ್ಯಾಮೃತಪಾನದಿಂದ ಹೊಂದಿದ, ಸಂತಾನಾಭಿವೃದ್ಧಿ ಕೀರ್ತಿ-ಸುಖ-ವೈಭವಗಳನ್ನೂ ಸ್ಮೃತಿಪಥಕ್ಕೆ ತೆಗೆದುಕೊಂಡರೆ ಸಾಕು ಮತ್ತು ಚ್ಯವನ ಮಹರ್ಷಿಯು ನಹುಷನಿಗೆ ಹೇಳಿದ ಧರ್ಮೋಪದೇಶದಲ್ಲಿ ಗೋದೇವಿಯ ಪ್ರಭಾವವು ಚನ್ನಾಗಿ ವ್ಯಕ್ತವಾಗುವದಲ್ಲವೆ! ಮತ್ತು ಮುಂದೆ ಬಂದರೆ— ಸಮಸ್ತದಾನಕ್ಕೂ ಗೋದಾನವು ಗುರುತ್ವವಾಗಿರುವದೆಂದೂ ಗೋಸೇವಾವ್ರತಕ್ಕೆ ಮಿಂಚಿದ ವ್ರತವು ಮತ್ತೊಂದಿಲ್ಲವೆಂದೂ ಸಕಲಾರ್ಥಸಿದ್ಧಿಗೂ ಗೋಸೇವೆಯು ಮೂಲಮಂತ್ರದಂತಿರುವದೆಂದೂ ಬಾದರಾಯಣರು ಮತ್ತೆ ಮತ್ತೆಯೂ ಒತ್ತಿ ಒತ್ತಿ ಹೇಳಿರುವರಲ್ಲವೆ? ಇದಕ್ಕೂ ಹೆಚ್ಚಿನ ವಿವರವನ್ನು ತಿಳಿಯಬೇಕೆಂದರೆ, ರಾಮಾಯಣ-ಮಹಾಭಾರತ ಭಾಗವತಗಳನ್ನು ಸಮಾಲೋಚಿಸುವುದು ಅಗತ್ಯವೆಂದಿಲ್ಲಿ ಹೇಳಬೇಕೆ?—

ಗೋ ಮಹಾತ್ಮೆಯು ಇಷ್ಟು ಅದ್ಭುತವಾಗಿರುವದರಿಂದಲೇ ಹಿಂದೆ ಭೂದೇವಿಯು ಗೋರೂಪವನ್ನು ತಾಳಿದ್ದಳು ಧರ್ಮದೇವ

ತೆಯು ಗೋರೂಪವನ್ನು ಧರಿಸಿದ್ದಳು. ಸಾಕ್ಷಾತ್ ಜ್ಞಾನಾಧಿಷ್ಠಾತ್ರಿಯೂ ಲೋಕರಕ್ಷಣಾರ್ಥವಾಗಿ ಗೋರೂಪವನ್ನು ಧರಿಸಿ ವಸಿಷ್ಠರೇ ಮೊದಲಾದ ಬ್ರಹ್ಮರ್ಷಿಗಳಿಂದ ನಿರಂತರ ಸೇವೆಯನ್ನು ಕೈಕೊಂಡು ಮತ್ತೂ ಕೈಕೊಳ್ಳುತ್ತ, ಜ್ಞಾನ ವಿಜ್ಞಾನ-ಆನಂದ, ಸುಖ ಸಮಾಧಾನ, ಸಂತೃಪ್ತಿ-ಸನ್ಮಾನಗಳೇ ಮೊದಲಾದ ತನಿರಸಗಳನ್ನು ಜಗತ್ತಿಗೆ ವರ್ಷಿಸುತ್ತಿರುವಳು.

ಹೀಗೆ ಭೂದೇವಿಯಾಗಿಯೂ, ವಾಗ್ದೇವಿಯಾಗಿಯೂ ಧರ್ಮದೇವತೆಯಾಗಿಯೂ, ಶ್ರೀದೇವಿಯಾಗಿಯೂ, ಪಾವನ ಸ್ವರೂಪಿಣಿಯಾದ ಸುರಭಿಯಾಗಿಯೂ ಪ್ರಕಾಶಿಸುತ್ತಿರುವ ಗೋಮಾತೆಯಲ್ಲಿ ಪರಮಾತ್ಮನ ಸಾಕ್ಷಾತ್ಕಾರವಾಗಿರುವದೆಂಬುದನ್ನು ಸೂಚಿಸುವ ಉದ್ದೇಶದಿಂದಲೇ ಭಗವಂತನು ಶ್ರೀಕೃಷ್ಣಾವತಾರವನ್ನೆತ್ತಿ ವಸುದೇವ ದೇವಕೀದೇವಿಯರ ಆತ್ಮಜನಾಗಿ ಜನ್ಮಿಸಿದರೂ, ಅಲ್ಲಿರದೆ— ಅವರ ಲಾಲನ ಪಾಲನಗಳನ್ನು ಅಪೇಕ್ಷಿಸದೆ, ಗೋಸೇವಾತತ್ಪರನೂ ಗೋಪರಾಜನೂ -ಪಶುಪಾಲನದಲ್ಲಿ ದಕ್ಷನೂ ಆಗಿದ್ದ ನಂದಗೋಪನ— ಮತ್ತು ಗೋಶುಶ್ರೂಷಾನಿರತವ್ರತೆಯೂ ವತ್ಸ ಧೇನುಗಳಲ್ಲಿ ವಾತ್ಸಲ್ಯಗೌರವವುಳ್ಳವಳೂ ಪ್ರೇಮಪೂರ್ಣಹೃದಯೆಯೂ ಆಗಿದ್ದ ಯಶೋದೆಯ ಬಳಿಯನ್ನೂ ಸೇರಿ, ನಂದಕಂದನೆನ್ನಿಸಿಯೂ, ಯಶೋದಾನಂದವಿವರ್ಧನನೆನ್ನಿಸಿಯೂ, ತನ್ನ ಬಾಲಲೀಲೆಗಳಿಂದ ಅವರಿಬ್ಬರನ್ನಲ್ಲದೆ ಸಮಸ್ತ ಗೋಪ ಗೋಪಿಕಾ ಸಮೂಹವನ್ನೂ ನಲಿವೇರಿಸಿ, ಗೋಕುಲವನ್ನು ಬೆಳಗಿಸಿ ಗೋವ್ರಜಪರಿಪಾಲಕನೆಂದೂ ಗೋವಳನೆಂದೂ ಗೊಲ್ಲಗೋಪಾಲನೆಂದೂ ಹೊಗಳಿಸಿಕೊಂಡನು. ಅಷ್ಟೇಕೆ! ಗೋವಿಂದನಿಗೆ ಗೋವೃಂದವೇ ಪರಿವಾರವು, ಬೃಂದಾವನವೇ ಸುಖಾಗಾರವು, ಗೋರಕ್ಷಣವೇ ಪರಮೋತ್ಕೃಷ್ಟವಾದ ವ್ರತವು. ಇಷ್ಟು ಹೇಳಿದರೆ ಸಾಕು. ಇನ್ನು ಗೋವಿಂದನು ಇಂದೆನಗೆ ಗೋಪಾಲ ಬಾಲರೂಪದಿಂದ ಗೋಚರಿಸಿದುದರ ಅಭಿಪ್ರಾಯವೇನಿರಬಹುದು?-

“ ಭಗವಂತನಲ್ಲಿ ಗೌರವ ಬುದ್ಧಿಯನ್ನಿರಿಸಿ ಭಾವಿಸುವವನಿಗೆ ಆತನ

ದರ್ಶನವು ಕಷ್ಟಸಾಧ್ಯವೆನ್ನಿಸುವುದು ಆದರೆ ಅದೇ ಭಗವಂತನು ತನ್ನಲ್ಲಿ ಕೇವಲ ಸಲಿಗೆಯನ್ನಿರಿಸಿ ಮಕ್ಕಳನ್ನಾಡಿಸುವಂತೆ, ಎಳೆಮಕ್ಕಳನ್ನು ಒಲುಮೆಯಿಂದ ನುಡಿಯಿಸಿ ಮುದ್ದಿಸುವ ಬಗೆಯಿಂದ ಭಾವಿಸಿ, ಲೀಲಾನಂದನಿರತನಾದ ಗೋವಿಂದನ ಬಾಲಲೀಲೆಯನ್ನೇ ಬಯಸಿ ಬೇಡುವವರಿಗೆ ಆತನು ತನ್ನಲ್ಲಿ ಅಕ್ಕರೆಯಿಂದ ಹಾಡಿಕರೆವವರಲ್ಲಿಗೆ ಹಾರಿ ಬಂದು ಮೇಲೆ ಬಿದ್ದು, ಗಲ್ಲವನ್ನು ಹಿಡಿದು, ಮುತ್ತಿಟ್ಟು ಪ್ರೇಮವನ್ನು ಸುರಿಸುವ ಬಾಲನಂತೆ ಆತನ ಪ್ರೇಮವು ಉಕ್ಕೇರುವದರಿಂದ ಭರದಲ್ಲಿ ಪ್ರಸನ್ನನಾಗುವನು '' ಇದು ಅನುಭವಪೂರ್ವಕವಾದ ವಿಚಾರವು

ಇರಲಿ, ಕರಿಯ ನಿಲುವಂಗಿಯನ್ನು ತೊಟ್ಟಿದ್ದುದರ ಅರ್ಥವನ್ನು ವಿಚಾರಿಸುವ— ಕಲಿಪ್ರೇರಿತರಾಗಿ, ಕುತ್ಸಿತ ಕಾರ್ಯದಲ್ಲಿ ತೊಡಗಿ, ಕರ್ಮವಶದಿಂದ ಕಷ್ಟಕ್ಲೇಶಗಳಲ್ಲಿ ಬಿದ್ದು, ಗತಿಗೆಟ್ಟು, ಕಡೆಗೆ ತನ್ನ ಮರೆಹೊಗುವ ಪತಿತರನ್ನು ಉದ್ಧರಿಸುವುದು ಕೂಡ, ತನಗ ಸೇರಿದ ಕರ್ತವ್ಯವೆಂಬುದನ್ನು ಸೂಚಿಸುವದಕ್ಕೂ, ಶರಣಾಗತರ ಪಾಪರಾಶಿಯೆಲ್ಲವನ್ನೂ ತಾನು ಅದರಿಂದ ಬೆಣ್ಣೆಯಂತೆ ತೆಗೆದು ನುಂಗಿ, ತಾನು ನುಂಗಿದ ಪಾಪವನ್ನು ಮತ್ತೆ ಅವರಲ್ಲಿಗೆ ಹೋಗಗೊಡದೆ ತನ್ನ ಅನಂತವಾದ ಮಹಿಮೆಯಲ್ಲಿ ಬಂಧಿಸಿ, ಅದನ್ನು ತನ್ನಲ್ಲಿಯೇ ಭದ್ರವಾಗಿಟ್ಟಿರುವನೆಂಬದನ್ನು ಸೂಚಿಸುವದಕ್ಕೂ ಕೂಡ ಭಗವಂತನು ಹೀಗೆ ಮಾಯಾಪಾಶಬದ್ಧವಾದ ಕರಿಯ ನಿಲುವಂಗಿಯನ್ನು ಧರಿಸಿದನೆಂದು ತಿಳಿದೆನು ಮತ್ತು ಅತುಲ ಪ್ರೇಮವೇ ವಶೀಕರಣ ಯಂತ್ರವೆಂಬುದನ್ನು ಸೂಚಿಸುವಂತೆ, ಜಗನ್ಮೋಹಕ ಮುದ್ರೆಯಾಗಿ ಕಸ್ತೂರಿಯ ತಿಲಕವನ್ನು ಧರಿಸಿ, ತನ್ನ ಮೇಲಿನ ಭಕ್ತರ ಪ್ರೇಮಕ್ಕೆ ಅತಂಕವುಂಟಾಗದಿರಲೆಂಬ ಅನುಗ್ರಹ ಬುದ್ಧಿಯಿಂದ ಹಾಗೆ ಸಹಾಸ್ಯವದನವನ್ನು ತೋರಿಸಿದನೆಂದೂ ತಿಳಿದೆನು.

ಇನ್ನು ಗೋಪಮಾತೆಯ ಕೃತಕೃತ್ಯಕ್ಕೆ ಮಾಡಿದ ಸಮರ್ಥನವೆಂದರೆ ಇಷ್ಟೇ!—''ನಮ್ಮವರಲ್ಲಿ ಮಾತೃಭಕ್ತಿ, ಕರ್ತವ್ಯತತ್ಪರತೆ, ಸ್ವಸ್ವರೂ

ಪಕ್ಷತೆ, ಸ್ವಧರ್ಮಾನುಷ್ಠಾನ-ಅನುಕಂಪನಾದಿ ಆರ್ಯತ್ವದ ಉತ್ತಮ ಗುಣಗಳು ಅಳಿಸಿ ಹೋಗಿ, ಆ ಆ ಸ್ಥಾನಗಳಲ್ಲಿ ಅವಿಧೇಯತೆ, ಇತಿಕರ್ತವ್ಯತಾ ಮೂರ್ಖತೆ, ಪರಾನುಕರಣ-ಸ್ವಪ್ರತಿಷ್ಠಾ ಕಾಮನೆಯು ದುರಭಿಮಾನ ಇತ್ಯಾದಿ ರಾಜಸ-ತಾಮಸ ಭಾವಗಳೇ ಹೆಚ್ಚಿದುವು ನಮ್ಮವರ ಮಾತೃಭಕ್ತಿ, ಪ್ರೇಮ-ದಯೆಗಳೆಲ್ಲವೂ ಬರಿಯ ಬಾಹ್ಯಾಡಂಬರ ಮಾತ್ರವಾದ ಸಭಾಮುಖದಲ್ಲಿಯೇ ಹೊರಡುತ್ತಿರುವದಾಯಿತು ಹೀಗಾಗಿ, ತಾಯಿಯ ಪಾದಸೇವೆಯ ಮಾತು ಹಾಗಿರಲಿ' ಅವಳ ಮನಸ್ಸಮಾಧಾನ ಹೊಂದುವಂತೆ ಒಂದೆರಡು ಗಳಿಗೆಯು ಹೊತ್ತಾದರೂ ನಾವು ಆ ತಾಯಿಯ ಆನಂದೋತ್ಸವಕ್ಕೆ ಆಕರವಾದ ಕಾರ್ಯದಲ್ಲಿ ತೊಡಗುವದನ್ನು ಕಷ್ಟವೆಂದು ತಿಳಿದು, ಬಿಟ್ಟುಕೊಟ್ಟೆವು. ಹೀಗೆ ಪುಷ್ಟಿಕರವಾದ ಸತ್ಕಾರವೇ ಇಲ್ಲದೆ, ಸುಖ-ಸಂಪದಭ್ಯುದಯಗಳಿಗೆ ಎರವಾಗಿ ತಿರುಗುತ್ತಿರುವ ಮಕ್ಕಳ ಮರುಳತನವನ್ನು ನೋಡಿ ಮಾತೆಯು ಮರುಮರುಗುತ್ತಿರುವಳೆಂದೂ, ಮಾತೆಯ ಮನಸ್ತಾಪದ ದೆಸೆಯಿಂದ ಅಮೃತವು ಕುದಿಕುದಿದು ಇಂಗಿ, ತನಗೆ ಸಾಕಷ್ಟು ಅಮೃತವು ದೊರೆಯದೆಯೂ, ಆದರದಿಂದ ತನ್ನನ್ನು ಹಿಡಿದಾಡಿಸಿ, ಉಪಚರಿಸುವ ಪಾಲಕರನ್ನು ಕಾಣದೆಯೂ ವತ್ಸ[ಕರು]ವು ಹೀಗೆ ಕಂಗೆಟ್ಟಿರುವಂತೆಯೂ ತಿಳಿದೆನು ಮತ್ತು ಗೋವಿಂದನ ಕೈಗೋಲನ್ನು ಕುರಿತು ಭಾವಿಸಿದೆನು,-" ಈಗಲಾದರೂ ಕಾಲಕ್ಕೆ ತಕ್ಕ ಗ್ರಾಸಗಳಿಂದ ಕರುವನ್ನು ಬಲಪಡಿಸುವದೂ, ಕೃಶರೂಪದಲ್ಲಿದ್ದ ಗೋಮಾತೆಯನ್ನು ಶ್ರದ್ಧಾ, ಭಕ್ತಿ, ಭಾವನೆಗಳಿಂದ ಸೇವಿಸಿ, ಆ ಮೂಲಕ, ಗೋಮಾತೆಯ ಮತ್ತು ಗೋಮಾತೆಯಲ್ಲಿ ಸಾಕ್ಷಾತ್ಕಾರವಾಗಿರುವ ತನ್ನ ಪ್ರಸಾದಕ್ಕೆ ಪಾತ್ರರಾಗುವುದೂ ಪ್ರತಿಯೊಬ ಮಾನವವ್ಯಕ್ತಿಗೂ ಅವಶ್ಯ ಕರ್ತವ್ಯವೆಂದೂ, ಇದಕ್ಕೆ ತಪ್ಪಿ ಅನೀತಿಯಿಂದ ಅನ್ಯಥಾ ನಡೆದರೆ, ಕಾಲದಂಡವು ಸುಮ್ಮನೆ ಬಿಡುವಂತಿಲ್ಲವೆಂಬುದನ್ನು ತಿಳಿದೆಚ್ಚರಗೊಂಡು, ಗೋಸೇವಾವ್ರತದಲ್ಲಿ ದೀಕ್ಷೆಯನ್ನು ವಹಿಸಬೇಕೆಂದೂ ಸೂಚಿಸುವದಕ್ಕಾಗಿ, ಗೋಪಾಲನು ಪರಮ ಪವಿತ್ರತಮವಾದ ಬಾಲ

ರೂಪದಿಂದ ಬಂದು ಎಚ್ಚರಿಸಿ ಅಂತರ್ಧಾನವಾದನೆಂದೂ ನಿರ್ಧರಿಸಿ ದೆನು

ಇಷ್ಟು ದೂರದ ವಿವರಣೆಯಿಂದ ಬೇಸರಿಸಿದಿರೇ—ಸುಹೃದರೇ! ಹಾಗೆ ಬೇಸತ್ತು ಓಸರಿಸುವುದು ನನ್ನ ಪರಮ ವಿಶ್ವಸನೀಯರಾದ ಕರ್ಣಾಟಕ ಬಂಧು ಭಗಿನಿಯರೆನ್ನಿಸಿರುವ ನಿಮ್ಮ ಶೀಲವಲ್ಲವೆಂದು ನಂಬಿರುವೆನು ಇವಕ್ಕಾಗಿ ಇನ್ನೂ ಒಂದೆರಡು ನಿವೇದನಗಳನ್ನು ಅವಧರಿಸಬೇಕೆಂದು ಪ್ರಾರ್ಥಿಸುತ್ತಿರುವೆನು ಅದೇನೆಂಬಿರಲ್ಲವೆ?—

ನಮಗೆ ಗೋಚರಿಸಿದ ಗೋಮಾತೆಯು ಮತ್ತಾರೂ ಅಲ್ಲ ನಮ್ಮ ಪರಮ ಪ್ರೀತ್ಯಾಸ್ಪದಳಾದ ಕರ್ಣಾಟ ಭೂಮಾತೆಯೇ ಆಗಿ ಳೆಂಬುದೂ — ವತ್ಸವೆಂದರೆ, ಆ ತಾಯಿಯ ಅಂತರಂಗದ ಅಪಾರ ಕೃಪೆಯೇ ಹೀಗೆ- ವತ್ಸೆಯಾಗಿ ಬಂದು ಜಗತ್ತಿನ ಮುಂದೆ ಸೊಗಸು ತೋರಲು ನಲಿದಾಡುತ್ತಿರುವದೆಂಬುದೂ ನನ್ನ ದೃಢಭರವಸೆಯಾಗಿದೆ ಆದುದರಿಂದಲೇ, ಮೊದಲು ಪೃಥುಚಕ್ರವರ್ತಿಯು ಇಷ್ಟದಂತೆ ಗೋರೂಪ ಧಾರಣಮಾಡಿ ಪ್ರಸನ್ನಳಾಗಿ ನಿಂತ ಧರಾಮಾತೆಯನ್ನು ದೇವ, ದಾನವ, ಮಾನವ, ಯಕ್ಷ, ಗಂಧರ್ವ-ಕಿನ್ನರ-ವಿದ್ಯಾಧರರೇ ಮೊದಲಾದ ಸಮಸ್ತರೂ ತಮ್ಮ ತಮ್ಮ ಅಭಿಮಾನ ಯೋಗ್ಯಪಾತ್ರರನ್ನೇ ಕರುಗಳನ್ನಾಗಿ ಮಾಡಿಕೊಂಡು ಆ ಮೂಲಕ ತಾಯಿಯಿಂದ ತಮತಮಗೆ ಬೇಕುಬೇಕಾದ ಅಭೀಷ್ಟವಸ್ತುಗಳನ್ನು ಕ್ಷೀರರೂಪದಿಂದ ಪಡೆದಂತೆ,— ನಮ್ಮಲ್ಲಿ ದೃಢವಾಗಿರುವ ಭರವಸೆಯನ್ನೇ ನಮ್ಮ ಗೋಮಾತೆಯ ವತ್ಸೆಯನ್ನಾಗಿ ಮಾಡಿಕೊಂಡು, ಆ ತಾಯಿಯ ಅನುಗ್ರಹದಿಂದ ವತ್ಸೆಗ "ನಂದಿನೀ" ಎಂಬ ನಾಮವನ್ನೇ ಅಂಕಿತಗೊಳಿಸಿ, ನಂದಿನಿಯನ್ನು ಮುಂದಿಟ್ಟು ನಮ್ಮ ಜನಾಂಗದ ಏಳಿಗೆಗೆ ಬೇಕುಬೇಕಾದ ವಸ್ತುಗಳನ್ನು ಪಡೆಯಬೇಕಾದುದು ನಮ್ಮ ಕರ್ತವ್ಯದಲ್ಲಿ ಮುಖ್ಯವಾಗಿರುವದೆಂದು ತಿಳಿದಿರುವೆವು ಇದನ್ನು ಅಭಿಜ್ಞರಾದ ನಿಮ್ಮ ಮುಂದೆ ವಿಶೇಷವಾಗಿ ಹೇಳಬೇಕಾದುದಿಲ್ಲವಷ್ಟೆ! ಹಾಗಿದ್ದ ರಿನ್ನು—ಪ್ರಿಯಭಗಿನಿಯರೇ! ಧರ್ಮಭೀರುಗಳಾದ ಬಾಂಧವರೇ!!

ಮುಂದೆ ಬಂದು ನಿಲ್ಲಲು ತಡೆಯುವಿರೇಕೆ? ವತ್ಸೆಯಾದ 'ನಂದಿನಿ''ಗೆ ತಕ್ಕಂತೆ, ಸೊಗಯಿಸುವಂತೆ, ಮುಳ್ಳು ಕಡ್ಡಿ-ಕಸಗಳಿಲ್ಲದ ಎಳಗರುಕೆಯಂದದ, ಲಲಿತಪದಬಂಧುರಂಜಿತವಾದ ನೀತಿವಾಕ್ಯಗಳಿಂದಲೂ, ತಿಳಿನೀರಿನಂತೆ ಸಲಪೇರಿಸುವ ನವನವೀನ ಭಾವಪ್ರಕಾಶಕಗಳಾಗಿರುವ ಕರುಣಾರಸಕಲಿತ ಕವಿತೆಗಳಿಂದಲೂ ನಿಮ್ಮ ನಿಮ್ಮ ಶಕ್ತಿ-ಪ್ರಕೃತಿ, ವ್ಯಕ್ತಿತ್ವ ಧರ್ಮಕ್ಕನುಸಾರವಾಗಿ "ನಂದಿನಿ"ಕರುವನ್ನು ಪುಷ್ಟಿಗೊಳಿಸಿ ಪೋಷಿಸುತ್ತ ಬರುವದರಲ್ಲಿ ಇನ್ನು ಮುಂದೆ ಪಾಲು ವೂರಲಾರಿರೆಂದು ನಂಬಬಹುದೇ? ವಾಗ್ದಾನ ಮಾಡುವಿರೇ? ತಥಾಸ್ತು!" ಹಾಗಾದರೆ ನಾವೇ ಕೃತಾರ್ಥರು!

ಇದ್ದೆನ್ನ ಬಾ—ಗೋಪಾಲ! ಪಿಂಗಳ ವತ್ಸರದ ಪಶುನಾಯಕನೇ ನೀನಹುದಷ್ಟೆ? ಹಾಗಿದ್ದರೆ ನಂದಿನಿಯನ್ನು ಚಿಂತಿಸದೆ ಕಾಪಾಡುತ್ತಿರುವಿಯೆಂದೂ, ನಂದಿನಿಯನ್ನು ನಿಗ್ರಹಿಸಲು ಬರುವ ಗೋಮುಖವ್ಯಾಘ್ರಗಳ ಪುಂಡುತನವನ್ನು ಅಡಗಿಸಿ ಆನಂದವನ್ನುಂಟುಮಾಡುವಿಯೆಂದೂ ನಂಬಿ ನಿರೀಕ್ಷಿಸುವೆನು. ಗೋವಿಂದ!— ಗೋ-ಬ್ರಾಹ್ಮಣಹಿತಕ್ಕಾಗಿಯೇ ಜನ್ಮವೆತ್ತಿರುವ ಮುಕುಂದ!! ಬ್ರಹ್ಮದ್ವೇಷಿಗಳ ಬಂಡಾಟವನ್ನು ದಿಂಡುಗೆಡಿಸಿ, ಬ್ರಹ್ಮನಿಷ್ಠರಾದ ಬ್ರಾಹ್ಮಣರನ್ನು ಉದ್ಧರಿಸುವ ಪ್ರಭುವೇ ನೀನಾಗಿರುವಲ್ಲಿ ಬ್ರಹ್ಮಚಾರಿಣಿಯಾದ ಪಿತ್ರೈಷಿಣಿಗಾಗಲೀ ಕೋಮಲ ಬಾಲೆಯಾದ ನಂದಿನಿಗಾಗಲೀ ಭಯವೆಲ್ಲಿಯದು? ಮಂಗಳಾಂಗ! ಭರವಸೆಗೆ ಭಂಗತಾರದೆ, ಮಂಗಳೋತ್ಸವಂಗಳಿಂದ ಕಣ್ಮನಂಗಳಿಗೆ ಹಬ್ಬಗಳನ್ನುಂಟುಮಾಡುತ್ತಿರು. ನಿನ್ನ ಶಾಸನದ ಬಲವು, ಈ ನಿನ್ನ ಪಾದಧೂಳಿಯಾಗಿರುವ ನನ್ನಿಂದ ಪ್ರತ್ಯಹದ ಪ್ರತಿಮುಹೂರ್ತದಲ್ಲಿಯೂ,- ಗೋಸೇವೆ, ಸದ್ಗುರುಸೇವೆ ಸ್ವಾಮಿಸೇವೆ, ಸಮಾಜಸೇವೆಗಳನ್ನು ಮಾಡಿಸಿ, ಧನ್ಯಾತ್ಮಳೆನ್ನಿಸು!! ಗೃಹಕಾರ್ಯಗಳಲ್ಲಿ ಪ್ರಧಾನಾಂಗವೆನ್ನಿಸುವ ಗೋಶುಶ್ರೂಷೆಯಲ್ಲಿಯೂ, ಸಂಕಲ್ಪಿತ ಕಾರ್ಯವಾದ ನಂದಿನೀ ಪೋಷಣೆಯಲ್ಲಿಯೂ- ನನಗೆ ಮತ್ತೆ ಮತ್ತೆಯೂ ಉತ್ತೇಜನವನ್ನು ಕೊಡುತ್ತಿದ್ದು, ನನ್ನಿಂದ ಈ ಸೇವಾಕಾರ್ಯವನ್ನು ಚಿರಕಾಲವೂ

ಸಮರ್ಪಕವಾಗಿ ನಡೆಯಿಸುತ್ತಿರು. ಅಪ್ಪಾ ಗೋಪಾಲ! ಅಭಯವನ್ನು ದಯಪಾಲಿಸು!

ಶ್ರೀಮಾತೆ—ಗೋಮಾತೆ! ಇತ್ತ ಬಾ ನನ್ನ ಮುಂದೆಯೇ ನೆಲೆಗೊಂಡಿರು. ಕಾಮಧೇನು—ನಂದಿನೀ! ನೀನಿತ್ತ ಬಂದು ನನ್ನ ತೊಡೆಯ ಮೇಲೇರಿ ಕುಳಿತು, ನನ್ನ ಆನಂದವನ್ನು ಹೆಚ್ಚಿಸುವಂತೆ ನಲವಿಂದ ನಲಿನಲಿದಾಡು. ಇನ್ನಿದಕ್ಕೂ ಹೆಚ್ಚಿದ ಆನಂದವು ನನಗಿನ್ನಾವುದು? ಗೋವಿಂದ! ನಿತ್ಯಾನಂದ! ಇದೇ ನನಗೆ ಬ್ರಹ್ಮಾನಂದವಲ್ಲವೇ? ಈ ಆನಂದದ ಮುಂದೆ ಬೇರೊಂದು ಆನಂದವೆನ್ನಿಸುವದಿದೆಯೋ? ಇಲ್ಲ ಇದೇ ಆನಂದ! ಗೋವಿಂದ! ಇದೇ ನಿನ್ನ ಸಾಕ್ಷಾತ್ಕಾರದ ಬ್ರಹ್ಮಾನಂದ!! ಇದೇ ನನಗೆ ಪ್ರಾರ್ಥನೀಯವಾದ ಆನಂದ — "ಅಭಯವಿತ್ತೆನು, ಭಯವಿಂದುತ್ತರಿಸಿದೆನು. ಬೇಡಿದ ದೆಲ್ಲವನ್ನೂ ಕೈಕೂಡಿಸುವೆನೆಂದು ವರವಿತ್ತೆನು. ವತ್ಸ! ಎಚ್ಚರದಲ್ಲಿರು, ಸಚ್ಚರಿತೆಯಾಗಿ ಬಾಳು. ನೆಚ್ಚಿಕೆಯಿಂದ ಕೈಕೊಂಡ ಕಾರ್ಯವನ್ನು ನಿಶ್ಚಲಮನದಿಂದ ನಡೆಯಿಸುತ್ತಿರು."

ಧನ್ಯ! ಧನ್ಯ!! ಗೋವಿಂದ! ನಿನ್ನಿಂದ ಗುರ್ವಾಜ್ಞೆಯುಪರಿಯಾದುದರಿಂದ ನಾನೇ ಧನ್ಯ!!' [ಅ ತ್ರ]

ಫಾಲ್ಗುಣ ಬ॥ ಅಷ್ಟಮಿ ಗುರುವಾರ<br>ರೋಹಿಣೀ ನ ೨೧ ಗಂಟೆ<br>೧೯೧೭ನೇ ಮಾರ್ಚ ತಾರೀಖು ೧ } — ಇತಿ

ಶ್ರೀಪಾದರೇಣು

# ಸತಿಯರ ಪ್ರಾಶಸ್ತ್ಯ.

ಕಶ್ಯಪ ಪ್ರಜಾಪತಿಯು ತನ್ನ ಪತ್ನಿಯಾದ ದಿತಿಯೊಡನೆ ಹೇಳುವನು --

"ಪ್ರಿಯೆ! ಪುರುಷರಿಗೆ ಸ್ತ್ರೀಯರಿಂದ ಧರ್ಮ ಅರ್ಥ-ಕಾಮ-ಪ ಚಾನಂದಗಳುಂಟಾಗುವವು ಅಂಬಿಗನು ನಾವೆಯ ದೆಸೆಯಿಂದ ಸಮುದ್ರವನ್ನು ದಾಟುವಂತೆ, ವಿವೇಕಿಯಾದ ಗೃಹಸ್ಥಾಶ್ರಮಿಯು, ಬ್ರಹ್ಮಚಾರಿ, ವಾನಪ್ರಸ್ಥ, ಸನ್ಯಾಸಿಗಳೆಂಬ ಇತರಾಶ್ರಮಿಗಳ ಸ್ಥಿತಿಗತಿಗಳನ್ನು ನೋಡಿ ರಕ್ಷಿಸುತ್ತಾ ನಿಜಾಶ್ರಮದಲ್ಲಿ, ವ್ಯಸನಾಂಬುಧಿಯನ್ನು ದಾಟುವಂತೆ ಮಾಡುವ ಭಾರ್ಯೆಯನ್ನು ಅರ್ಧಾಂಗಿಯೆಂದು ಭಾವಿಸಿ ಸಕಲ ಗೃಹಕಾರ್ಯಗಳನ್ನು ಆಕೆಗೆ ವಹಿಸಿ, ತಾನು ನಿಶ್ಚಿಂತನಾಗಿ ಸುಖಿಸುವನು ಮತ್ತು ಇತರಾಶ್ರಮಿಗಳಿಂದ ದುರ್ಜಯಂಗಳಾದ ಇಂದ್ರಿಯಗಳೆಂಬ ವೈರಿವರ್ಗವನ್ನೂ ಭಾರ್ಯಾಸಹಿತನಾದ ಗೃಹಸ್ಥನು ಬಲವತ್ತರವಾದ ದುರ್ಗಕ್ಕೆ ಒಡೆಯನಾದ ರಾಜನು, ಶತ್ರುಗಳನ್ನು ಓಡಿಸಿ ಜಯಿಸುವಂತೆ, ಲೀಲಾಮಾತ್ರವಾಗಿ ಜಯಿಸುವನು. ಇಂತಹ ಸತೀರತ್ನಕ್ಕೆ ಪ್ರತ್ಯುಪಕಾರವನ್ನು ಮಾಡುವದಕ್ಕೆ ಸಮಸ್ತ ಸದ್ಗುಣಾನ್ವಿತರಾದ ಸುಜನರು ನೂರು ವರುಷಗಳಾದರೂ ಜನ್ಮಾಂತರಗಳಾದರೂ ಸಮರ್ಥರಾಗಲಾರರು! ಎಂದೆನ್ನುವಾಗ ನಮ್ಮಂತಹರು ಸಮರ್ಥರಾಗುವರೇ? ಆದರೂ ನನ್ನ ಪ್ರಿಯವಚನದಿಂದಾದರೂ ನಿನ್ನ ಮನೋವ್ಯಥೆಯನ್ನು ಉಡಿಗಿಸಿ, ನನ್ನನ್ನು ಆನಂದಪೊಂದಿಸು ಸುಗುಣಿಯಾದ ಸತಿಯು ಇಷ್ಟಾರ್ಥವನ್ನು ನೆರವೇರಿಸುವದಕ್ಕೆ ಪ್ರಯತ್ನಿಸುವದೇ ಪತಿಯಾದವನ ಕರ್ತವ್ಯವು

ಪತ್ನಿಯನ್ನು ಅಪಮಾನಗೊಳಿಸುವಾತನು ಮನುಷ್ಯನೆನ್ನಿಸಲಾರನು ಆವ ಮನೆಯಲ್ಲಿ ಸದ್ಗುಣವತಿಯಾದ ಸತಿಯು ಬಹುಮಾನಿಸಲ್ಪಡುತ್ತಿರುವಳೋ ಅದೇ ಭವನ! ಮರ್ಯಾದಾರ್ಹಳಾದ ಸತಿಯಿಲ್ಲ

ದ ಮನೆಯೇ ವನ, ಅಥವಾ ಕಾನನ ಎಂದು ಆರ್ಯರು ಹೇಳುವರು. ಆದುದರಿಂದ ಪ್ರತಿಯೊಬ್ಬ ಸ್ತ್ರೀಯೂ ತನ್ನ ನೈಜವಾದ ಸದ್ಗುಣಗಳಿಂದ ಬಹುಮಾನಿಸಲ್ಪಡುವವಳಾಗಬೇಕು! ಪ್ರತಿಯೊಬ್ಬ ವ್ಯಕ್ತಿಯೂ ಸದ್ಗುಣಯುಕ್ತನಾಗಿ ಸ್ತ್ರೀಯರಿಗೆ ಉಚಿತವಾದ ಮರ್ಯಾದೆಯನ್ನು ಕೊಟ್ಟು, ತಾನೂ ಮರ್ಯಾದಾವಂತನಾಗಿ ನಡೆದು, ಧನ್ಯನಾಗಬೇಕೆಂಬುದೇ ಈ ಲೇಖನದ ಮುಖ್ಯ ಸಂದೇಶವು —

॥ವೃತ್ತ॥

ಪಡೆದಾ ಮಾತೆಯ ರೀತಿ ಪೋಷಿಸುವಳಾ ತೊತ್ತಾಗಿ ಕಾರ್ಯಂಗಳಂ।
ಬಿಡದಂತಾ ಚರಿಪಳ್, ಪ್ರಧಾನಿಯತೆರಂ ಮಂತ್ರಂಗಳೊಳ್ ಭಾಗಿಯಂ॥
ಗೊಡೆಯಂಗಿಷ್ಟಮನಾಗಿಪಳ್ ಹಿತರವೋಲ್ ಸತ್ಪ್ರೀತಿ (ಸತ್ಕೃತಿ?)
ಯಂ ತೋರುವಳ್।
ಬಿಡನಲ್ತೇ? ಹಿತದಿಂದೆ ಕಾಣದನರಂ ಸನ್ಮಾರ್ಗೆಯಂ ಕಾಂತೆಯಂ॥

ಹುಲಕೋಡು, ಗೋರಂಟಿದನೂರು ತಾ|

ತಾರೀಖು ೨|೪|೧೯೬೦

ಇತಿ ಸಜ್ಜನ ಕಿಂಕರ,
ತ್ಯಾ|| ವೇಂಕಟರಮಣಯ್ಯಾ,
ಅಲಕಪುರಿ ಧಾರ್ಮಿಕ ವಾಚನಾಲಯ,
ಕಾರ್ಯದರ್ಶಿ

# ಕನ್ನಡದ ರನ್ನಗನ್ನಡಿ

## ಮಣಿ ೧

ನಮಗೆ ಪಿತೃವತ್ಪೂಜ್ಯರೂ, ದೇಶಭಕ್ತಾಗ್ರಣಿಗಳೂ, ಕರ್ನಾಟಕದ
ಪಿತಾಮಹರೆಂದು ಪ್ರಸಿದ್ಧ ಪುರುಷರೂ ಆಗಿರುವ

## ಶ್ರೀಯುಕ್ತ ಎಮ್. ವೆಂಕಟಕೃಷ್ಣಯ್ಯನವರು

( ಪೀಠಿಕೆ )

"ಆವಳ ಕೈವಿಡಿದಾರಾ ಜೀವಭವಂ, ನಿಖಿಲ ಲೋಕ ನಿರ್ಮಾಣಕಲಾ।
ಕೋವಿದ ನೆನಿಸಿದ ನಾ ವಾಗ್ದೇವತೆ ಸನ್ನುತಿಯಿತ್ತು ಸಲಹಲೀ ಜಗಮಂ।"

ಎಂದು ಜಗತ್ತಿಗೇ ಮಂಗಳಾಶಾಸನ ಮಾಡುವಂತಹ ಪ್ರಭಾವವು ಮಹಾತ್ಮರಾದ ಸಿದ್ಧಪುರುಷರ ಪಾಲಿಗೆ ಮಾತ್ರವೇ ಸೇರಿದುದು! ಏಕೆಂದರೆ ಲೋಕಸ್ಥಿತಿಯಲ್ಲಿ ನೋಡಿದ ವಾದರೆ,— "ಸಾಮಾನ್ಯವಾಗಿ, ಸ್ವಸುಖಕ್ಕೆಂದು ಪರರನ್ನು ಹಿಂಸಿಸದಿರುವವರೇ ವಿರಳರು. ಅಂತಹರನ್ನೇ ವರ್ತಮಾನಸ್ಥಿತಿಯಲ್ಲಿ ಮಧ್ಯಮವರ್ಗದ ಸಾಧುಗಳೆನ್ನಬಹುದು!" ಎಂದ ಬಳಿಕ ಪರರಿಗೆ ಹಿತವನ್ನು ಕೋರಿ, ಪರಹಿತಕಾರ್ಯದಲ್ಲಿ ಅಷ್ಟಿಷ್ಟಾಗಿ ಪ್ರವರ್ತಿಸುವವರನ್ನು ಉತ್ತಮವರ್ಗದ ಸಾಧುಗಳೆನ್ನಲು ಅಡ್ಡಿಯೇನುಂಟು? ಅವರಲ್ಲಿಯೂ, ಕೇವಲ ಒಬ್ಬಿಬ್ಬರ ಅಥವಾ ಒಂದೆರಡು ಸಂಸಾರ ಸಮಾಜಗಳ ಕ್ಷೇಮವನ್ನು ಮಾತ್ರವೇ ಕೋರದೆ, ಜಗತ್ತಿನ ಕ್ಷೇಮವೇ ತಮ್ಮ ಕ್ಷೇಮವೆಂದೂ, ಜಗತ್ತಿನ ಕ್ಷೇಮಲಾಭಕ್ಕೆ ಪ್ರಜ್ಞಾಘನವೇ ಮೂಲವೆಂದೂ, ಅಂತಹ ಪ್ರಜ್ಞಾ-ಕ್ಷೇಮಾಭ್ಯುದಯಗಳಿಗೆ ಅಧಿದೇವತೆಯಾದ ವಾಗ್ದೇವಿಯನ್ನು ಕುರಿತು—'. . . . ವಾಗ್ದೇವತೆ ಸನ್ನುತಿಯಿತ್ತು ಸಲಹಲೀ ಜಗಮಂ ॥' ಎಂದು ಪರಿಶುದ್ಧಾಂತಃಕರಣದಿಂದ ಪ್ರಾರ್ಥಿಸಿ, ಪ್ರಾರ್ಥಿಸುತ್ತಿರುವ ಪುಣ್ಯಮೂರ್ತಿಯನ್ನು ಸಿದ್ಧಪುರುಷನೆಂದು ಸಂಭಾವಿಸುವುದರಲ್ಲಿ ಅಭ್ಯಂತರವೇನಿದೆ?

ಮತ್ತಿಯ ಭಗಿನಿಯರೇ! ಕರ್ಣಾಟಕ ಬಾಂಧವರೇ!!

ಮೇಲೆ ಹೇಳಿದಂತಹ ಸಿದ್ಧಪುರುಷರು ನಮ್ಮ ಭಾರತ ಮಾತೃಗರ್ಭದಲ್ಲಿ ಹಿಂದೆ ಎಷ್ಟೋ ಮಂದಿ ಜನ್ಮವೆತ್ತಿದ್ದರು, ಈಗಲೂ ಎತ್ತಿರುವರು,— ಮುಂದೆ ಜನ್ಮವೆತ್ತುವರೆಂದೂ ಹೇಳಲು ತಡೆಯಿಲ್ಲ. ಆದರೂ ನಮ್ಮ ಕರ್ಣಾಟಕದಲ್ಲಿ ೧೯।೨೦ನೆಯ ಶತಮಾನದ ಸಿದ್ಧಪುರುಷರ ಸಮೂಹದಲ್ಲಿ ವಿಶೇಷವಾಗಿ ಶೋಭಿಸುವವರೆಂದರೆ, ಪ್ರಥಮಸ್ಥಾನದಲ್ಲಿ ಪ್ರಕಾಶಿಸುತ್ತಿರುವವರೆಂದರೆ, ಈ ನಮ್ಮ ಪಿತೃವತ್ಪೂಜ್ಯರಾದ ಶ್ರೀಯುತ ಎಮ್. ವೆಂಕಟಕೃಷ್ಣಯ್ಯನವರೇ ಸರಿ!!! ಜ್ಞಾನದಲ್ಲಿಯೂ, ವಯೋಮಾನದಲ್ಲಿಯೂ, ಉತ್ಕಟವಾದ ದೇಶಾಭಿಮಾನದಲ್ಲಿಯೂ ಸ್ವಾಮಿನಿಷ್ಠೆ-ಸಮಾಜಸೇವೆ, ಸದ್ವಿದ್ಯಾಪ್ರಸಾರ-ಸುಧಾರಣೆಯೇ ಮೊದಲಾದ ದೇಶಾಭ್ಯುದಯಕಾರ್ಯನಿರ್ವಹಣ ಸಾಮರ್ಥ್ಯದಲ್ಲಿಯೂ ಇವರೇ ನಮ್ಮೀ ಕರ್ಣಾಟಕದಲ್ಲಿ ದೊಡ್ಡವರೆಂದು ನಾವು ಮನಸ್ಸಾಕ್ಷಿಯಾಗಿ ಹೇಳಬಲ್ಲೆವು. ಈ ಸ್ತುತಿಯು ಕೇವಲ ನಮ್ಮ ಅಭಿಪ್ರಾಯಮಾತ್ರವೇ ಆಗಿಲ್ಲ. ಇವರ ದೀರ್ಘೋದ್ಯಮದ ಪರವಾಗಿಯೂ ಇವರ ದೇಶಹಿತಚಿಂತನ ಬುದ್ಧಿಯ ಪರವಾಗಿಯೂ ನಮ್ಮ ಕರ್ಣಾಟಕದ ವೃತ್ತಪತ್ರಕರ್ತೃಗಳೂ, ಇತರ ದೇಶಸೇವಾನಿಷ್ಠರಾಗಿರುವವರೂ ಕೂಡ ಬಹುವಿಧದಿಂದ ಇವರ ಸದ್ಗುಣಗಳನ್ನು ಸಕಾರಣವಾಗಿ ಪ್ರಶಂಸೆ ಮಾಡಿರುವರು. ಮತ್ತು ಇವರ ಹೃದಯದಲ್ಲಿ ತುಂಬಿತುಳುಕುತ್ತಿರುವ ಶಿಷ್ಯವಾತ್ಸಲ್ಯ-ಅನುಕಂಪನೆಗಳೆಂಬ ಔದಾರ್ಯಗುಣವನ್ನು ನೋಡಿ-ನಲವೇರಿ ಸುಪ್ರಸಿದ್ಧ ಪತ್ರಿಕೆಯೆನ್ನಿಸಿಕೊಂಡಿದ್ದ 'ಶ್ರೀಕೃಷ್ಣಸೂಕ್ತಿ'ಯು ಪ್ರಥಮದಲ್ಲಿಯೇ ಇವರನ್ನು 'ಕರ್ಣಾಟಕದ ಪಿತಾಮಹ'ರೆಂದು ಉದ್ಘೋಷಿಸಿರುವದೆಂದ ಬಳಿಕ ನಾವು ಮತ್ತೇನು ಹೇಳುವದಿದೆ?

ಪ್ರಸ್ತುತದಲ್ಲಿ,—ನಂದಿನಿಯು ತನ್ನ ೭ನೇ ಸಂಚಿಕೆಯಲ್ಲಿ ಸೂಚಿಸಿದ್ದಂತೆ ಕರ್ಣಾಟಕದೇಶಭಕ್ತರ ಮತ್ತು ಆದರ್ಶನಾರಿಯರಾದ ಭಾರತ ಮಹಿಳೆಯರ ಸಚಿತ್ರಚರಿತ್ರೆಗಳನ್ನು ನಿಮ್ಮ ಮುಂದೆ ಪ್ರದರ್ಶಿಸಲು

ಸಂಕಲ್ಪಿಸಿ, ಅದರಂತೆಯೇ, ದೇಶಭಕ್ತರೆಂಬ ನಕ್ಷತ್ರಸಮೂಹದಲ್ಲಿ ನಕ್ಷತ್ರರಾಜನಂತೆ ರಾರಾಜಿಸುತ್ತಿರುವ ಈ ನಮ್ಮ ಪೂಜ್ಯರಾದ 'ಸಿದ್ಧಯೋಗಿ ಶ್ರೀಯುಕ್ತ ವೆಂಕಟಕೃಷ್ಣಯ್ಯನವರ ಸಚಿತ್ರ ಸಂಕ್ಷಿಪ್ತ ಚರಿತ್ರವನ್ನು "ಕನ್ನಡದ ರನ್ನಗನ್ನಡಿ"ಯ "ಪ್ರಥಮಮಣಿ"ಯಾಗಿ ಇಂದು ಪ್ರಕಾಶಪಡಿಸುವಂತೆ ಅನುಕೂಲಪಡಿಸಿಕೊಟ್ಟುದಕ್ಕಾಗಿ ಭಗವಂತನನ್ನೂ ಮತ್ತು ಗುರುಜನರನ್ನೂ ಭಕ್ತಿಪೂರ್ವಕವಾಗಿ ವಂದಿಸಿ, ಇನ್ನು ಸ್ವಪ್ರಯಾಸದಿಂದಲೂ, ಸುಹೃದ್‌ಭ್ರಾತೃವರ್ಗೀಯರ ಪ್ರಯಾಸಪೂರ್ವಕವಾದ ಸಮಯೋಚಿತ ಸಹಾಯಗಳಿಂದಲೂ 'ಕನ್ನಡದ ರನ್ನಗನ್ನಡಿ''ಯ ಒಂದೊಂದು ಮಣಿಯನ್ನು ಅಂದವಾಗಿ ಪೋಣಿಸಿ ನಿಮ್ಮ ಮುಂದಿಡುವೆವು

---

[ ಕಥಾರಂಭವು ]

ಪೂಜ್ಯರಾದ ಎಂ ವೆಂಕಟಕೃಷ್ಣಯ್ಯನವರು, ಹೆಗ್ಗಡದೇವನ ಕೋಟೆ ತಾಲೂಕಿಗೆ ಸೇರಿದ 'ಮಗ್ಗೆ' ಎಂಬ ಗ್ರಾಮದಲ್ಲಿ ೧೮೪೪ನೆ ಆಗಸ್ಟು ತಿಂಗಳು ಜನ್ಮವೆತ್ತಿದರು ಪ್ರಾಯ ತಾಯ್ತಂದೆಗಳ ಶೀಲಸ್ವಭಾವಗಳೇ ಮಕ್ಕಳಲ್ಲಿ ಬಿಂಬಿಸುವವೆಂಬ ಲೋಕೋಕ್ತಿಯಂತೆ ಶ್ರೀಯುತರ ತಾಯ್ತಂದೆಯರು ಸತ್ಕುಲಪ್ರಸೂತರೂ, ಸದಾಚಾರಸಂಪನ್ನರೂ, ನಿರಲಸರೂ, ಭಗವದ್ಭಕ್ತರೂ ಆಗಿದ್ದರೆಂದು ಇಲ್ಲಿ ಬೇರೆ ಹೇಳಬೇಕಾಗಿಲ್ಲವಷ್ಟೇ

ನಮ್ಮ ಪೂಜ್ಯರು, ೧೮೫೬ರಲ್ಲಿ ಎಂದರೆ ತಮ್ಮ ೧೦-೧೧ ನೇ ವರ್ಷ ವಯಸ್ಸು ನಡೆಯುತ್ತಿದ್ದಾಗ ಮೈಸೂರಿಗೆ ವಿದ್ಯಾಭ್ಯಾಸಕ್ಕಾಗಿ ಬಂದರು ಅದು ಮೊದಲು ತಮ್ಮ ೨೨ ನೆ ವರ್ಷ ಪ್ರಾಯದ ವರೆಗೆ ಎಂದರೆ ೧೮೬೮ ರ ವರೆಗೆ ಇಂಗ್ಲೀಷು, ಸಂಸ್ಕೃತ, ಕನ್ನಡ ವಿದ್ಯಾಭ್ಯಾಸವನ್ನು ಮಾಡಿದರು

೧೮೬೮ರಲ್ಲಿ ದಿವಂಗತ [ ಲೇಟ್-Late ] ಮುಮ್ಮಡಿ ಕೃಷ್ಣರಾಜ ಒಡೆಯರವರು ಸ್ವರ್ಗಸ್ಥರಾದರು ಆ ತರುವಾಯ ಈ ಸಂಸ್ಥಾ

ನದ ಮೊದಲನೆ ದಿವಾನ [ಮಂತ್ರಿ] ರಾದ ಗತಿಸಿದ ಶ್ರೀ॥ ಸಿ ರಂಗಾಚಾರ್ಯರವರು ಇಲ್ಲಿಗೆ ಕಂಟ್ರೋಲರರಾಗಿ ದಯೆ ಮಾಡಿಸಿದರು ಆ ತರುವಾಯ ಕೆಲವು ದಿನಗಳಲ್ಲಿಯೇ, ಕೀರ್ತಿಶೇಷರಾಗಿರುವ ಶ್ರೀಮಚ್ಚಾಮರಾಜೇಂದ್ರ ಒಡೆಯರಿಗೆ ಪಾಠಕ (Teacher) ರಾಗಿ ಶ್ರೀ-ಜಯರಾಮರಾಯರವರು ದಯೆ ಮಾಡಿಸಿದರು ಈ ಸಂಸ್ಥಾನದಲ್ಲಿ ಇವರಿಬ್ಬರಿಂದ ಇಂಗ್ಲೀಷು ವಿದ್ಯಾಭ್ಯಾಸಕ್ಕೆ ಅಸಾಧಾರಣವಾದ ಪ್ರೋತ್ಸಾಹವುಂಟಾಯಿತು *

ಆ ಕಾಲದಲ್ಲಿ ವಿದ್ಯಾಭ್ಯಾಸದ ವಿಷಯದಲ್ಲಿಯೂ ರಾಜ್ಯಕಾರಭಾರದ ವಿಷಯದಲ್ಲಿಯೂ ಶಾಸ್ತ್ರಾಭ್ಯಾಸದ ವಿಷಯದಲ್ಲಿಯೂ ಲೋಕವ್ಯವಹಾರದ ವಿಷಯದಲ್ಲಿಯೂ, ಸಂಪದಭಿವೃದ್ಧಿಯ ವಿಷಯದಲ್ಲಿಯೂ ಜ್ಞಾನಾಭಿವೃದ್ಧಿಗೋಸ್ಕರ ಗ್ರಂಥರಚನೆಯನ್ನು ಮಾಡುವ ವಿಷಯದಲ್ಲಿಯೂ, ವರ್ತಮಾನ ಪತ್ರಿಕೆಗಳನ್ನು ನಡೆಯಿಸತಕ್ಕ ವಿಷಯದಲ್ಲಿಯೂ ಜನಗಳು ತಮ್ಮ ಹಕ್ಕು ಬಾಧ್ಯತೆಗಳನ್ನು ತಿಳಿದು ನಡೆದುಕೊಳ್ಳತಕ್ಕ ವಿಷಯದಲ್ಲಿಯೂ ಧರ್ಮನಿರತ ರಾಜ್ಯಭಾರಕ್ರಮದ ವಿಷಯದಲ್ಲಿಯೂ ವಿಧರ್ಮಿಗಳನ್ನು ನಿಗ್ರಹಿಸುವ ವಿಷಯದಲ್ಲಿಯೂ ಲಂಚವೇ ಮೊದಲಾದ ಸುಲಿಗೆಗಳಿಂದ ಜೀವಿಸತಕ್ಕವರನ್ನು ಕೆಲಸಗಳಿಂದ ತೆಗೆದುಹಾಕುವ ವಿಷಯದಲ್ಲಿಯೂ ಸ್ತ್ರೀಪುರುಷರಲ್ಲಿ ಸೌಶೀಲ್ಯವನ್ನು ಹೆಚ್ಚಿಸತಕ್ಕಮಟ್ಟಿಗೆ ಎಲ್ಲಾ ಜನರಲ್ಲಿಯೂ ವಿದ್ಯಾ ವಿನಯಾದಿ ಸದ್ಗುಣ ಸಂಪತ್ತಿಯನ್ನು ಹೆಚ್ಚಿಸಬೇಕೆಂಬ ವಿಷಯದಲ್ಲಿಯೂ ಸಕಲರೂ ತಮ್ಮ ಹಕ್ಕು ಬಾಧ್ಯತೆಗಳನ್ನು ತಿಳಿದುಕೊಂಡು ತಮ್ಮ ಕರ್ತವ್ಯವನ್ನು ಮಾಡಿ ಹಕ್ಕುಬಾಧ್ಯತೆಗಳಿಗಾಗಿ ಜಗಳವಾಡಿ

---

* ಮೈಸೂರು ಸಂಸ್ಥಾನದ ಪ್ರಜಾಕ್ಷೇಮ-ಸಂಪದಭ್ಯುದಯ ಕಾರ್ಯಗಳಿಗೆ ಮಾರ್ಗದರ್ಶಕರಾಗಿರುವ ಈ ಮಹನೀಯರ ಸಚಿತ್ರ ಚರಿತ್ರೆಗಳನ್ನು ಸಾಧ್ಯವಾದಷ್ಟು ವಿಸ್ತಾರವಾಗಿ ನಂದಿನಿಯಲ್ಲಿ ಪ್ರಕಟಿಸಲು ಸಂಕಲ್ಪಿಸಿ, ಪ್ರಯತ್ನವನ್ನು ಕೈಕೊಂಡಿರುವೆವು ಸಾಧ್ಯವಾದಷ್ಟು ಜಾಗ್ರತೆಯಾಗಿಯೇ ಪ್ರಕಟಿಸುವೆವೆಂಬ ಆಶ್ವಾಸನವನ್ನು ಈ ಮೂಲಕ ವಾಚಕವೃಂದದಲ್ಲಿ ಸಮರ್ಪಿಸುತ್ತಿರುವೆವು

(ಸಂ ನಂದಿನಿ.)

ತಮ್ಮ ಸದಿಷ್ಟಾರ್ಥಸಿದ್ಧಿಯನ್ನು ಹೊಂದುವದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂಬ ವಿಷಯದಲ್ಲಿಯೂ ದುಷ್ಟನಿಗ್ರಹ-ಶಿಷ್ಟಪರಿಪಾಲನೆಯಲ್ಲಿ ಪ್ರಭುತ್ವ ಮಾಡತಕ್ಕವರು ಆಸಕ್ತರಾಗಬೇಕೆಂಬ ವಿಷಯದಲ್ಲಿಯೂ ಪ್ರತಿದಿನವೂ ಚರ್ಚೆಗಳು ನಡೆವುದಕ್ಕೆ ಶ್ರೀ ರಂಗಾಚಾರ್ಯರವರು ಏರ್ಪಾಡನ್ನು ಮಾಡಿದರು ಇದಕ್ಕೆ ವಿದ್ಯಾವಂತರಲ್ಲಿ ಅನೇಕರನ್ನು ಉಪಯೋಗಿಸಿಕೊಂಡರು ಹಾಗೆ ಉಪಯೋಗಿಸಲ್ಪಟ್ಟವರಲ್ಲಿ ಈ ನಮ್ಮ ಪೂಜ್ಯ ವೆಂಕಟಕೃಷ್ಣಯ್ಯನವರೂ ಒಬ್ಬರಾಗಿದ್ದರು.

ಜ್ಞಾನವಿಹೀನರಾದವರಿಗೆ ಇಹಪರಗಳೆರಡೂ ಇಲ್ಲವೆಂಬ ಪ್ರತ್ಯಯವನ್ನುಂಟುಮಾಡಿ ಜನಗಳು ದುರ್ವ್ಯಾಪಾರಗಳನ್ನು ಬಿಟ್ಟು ಸ್ವಶಕ್ತಿಯಿಂದ ಯಾವುದಾದರೂ ಉದ್ಯೋಗದಲ್ಲಿ ಪ್ರವರ್ತಿಸಿ, ಆತ್ಮಾವಲಂಬನೆಯಿಂದ ಎಲ್ಲರೂ ಸುಖಜೀವಿಗಳಾಗುವಂತೆ ಮಾರ್ಗದರ್ಶನವನ್ನು ಮಾಡಬೇಕೆಂಬುದೇ ಶ್ರೀ ರಂಗಾಚಾರ್ಯರವರ ಮುಖ್ಯೋದ್ದೇಶವಾಗಿತ್ತು ಅಂಥ ಮಾರ್ಗದರ್ಶನವನ್ನು ಮಾಡುವದಕ್ಕೆಂದು ಅವರು ಬಹು ಜನಗಳನ್ನು ನಿಯೋಜಿಸಿದರು ಈ ಕೆಲಸಕ್ಕೆ ವರ್ತಮಾನ ಪತ್ರಿಕೆಗಳೂ, ಪುಸ್ತಕ ಭಂಡಾರಗಳೂ, ಉಪನ್ಯಾಸಗಳೂ ಗ್ರಂಥ ರಚನೆಗಳೂ ಅತ್ಯಂತ ಸಾಧಕಗಳೆಂದು ಅನೇಕರಿಗೆ ಶ್ರೀ ರಂಗಾಚಾರ್ಯರು ಉಪದೇಶ ಮಾಡಿ, ಅವರು ಈ ಭಾಗದಲ್ಲಿ ಕೃಷಿಮಾಡುವಂತೆ ಪ್ರೇರಿಸಿದರು ಹಾಗೆ ಪ್ರೇರಿತರಾದವರಲ್ಲಿ ಇವರೂ ಪರಿಗಣಿತರು

೧೮೬೦ನೆ ಇಸವಿಯಿಂದ ಪುದಚೆರಿ ತಾತರೆಂಬವರು ಒಂದು ಪುಸ್ತಕ ಭಂಡಾರವನ್ನೂ, ಒಂದು ವಾಚನ ಶಾಲೆಯನ್ನೂ ಇಟ್ಟು, ಲೋಕವ್ಯವಹಾರಜ್ಞಾನವು ಪ್ರಸಾರವಾಗುವಂತೆ ಮಾಡಿ ೧೮೭೫ರ ವರೆಗೆ ಅದನ್ನು ನಡೆಯಿಸಿದರು ಅನೇಕ ಅಧಿಕಾರಿಗಳೂ ಮತ್ತು ಇತರರೂ ಅದಕ್ಕೆ ಮೆಂಬರುಗಳಾಗಿ ವಾರಕ್ಕೊಂದುಬಾರಿ ಉಪನ್ಯಾಸ ಮೊದಲಾದುವುಗಳನ್ನು ನಡೆಯಿಸುತ್ತ ಇದ್ದರು ೧೮೭೬ರಲಿ ಈ ಭಂಡಾರವೂ, ವಾಚಕಶಾಲೆಯೂ ನಿಂತುಹೋದುವು. ಆಗ ಶ್ರೀ ರಂಗಾಚಾರ್ಯರವರು ಅದನ್ನು ಜೀರ್ಣೋದ್ಧಾರ ಮಾಡಿದರು ಈಗಲೂ, ರಂಗಾಚಾರ್ಯರವರ ಮೆಮೋರಿಯಲ್ ಹಾಲ್ [Memorial

Hall] ನಲ್ಲಿ ಲಿಟರರಿ ಯೂನಿಯನ್ [Literary Union] ಎಂಬ ಅಭಿಧಾನದಿಂದ ಈ ಭಂಡಾರವೂ, ವಾಚಕಶಾಲೆಯೂ ನಡೆಯುತ್ತಲಿರುವದು. ಆ ಭಂಡಾರಕ್ಕೆ ನಮ್ಮ ವೆಂಕಟಕೃಷ್ಣಯ್ಯನವರೇ ಕಾರ್ಯದರ್ಶಿಗಳಾಗಿರುವರು.

೧೮೩೧ರಲ್ಲಿ ನಗರದ ದಂಗೆ ಮೊದಲಾದವುಗಳು ನಡೆದ ಕಾಲದಲ್ಲಿ ಬ್ರಿಟಿಶ್ ಗೌರ್ನ್ಮೆಂಟಿನವರು ಈ ರಾಜ್ಯಭಾರವನ್ನು ವಹಿಸಿ, ಈ ದೇಶವನ್ನು ಉತ್ತಮ ಸ್ಥಿತಿಗೆ ತಂದು ೧೮೮೧ರಲ್ಲಿ ಶ್ರೀಮಚ್ಚಾಮರಾಜೇಂದ್ರ ಒಡೆಯರವರಿಗೆ ಒಪ್ಪಿಸಿದರು. ಆಗಲೇ ಶ್ರೀಮಾನ್, ಸಿ. ರಂಗಾಚಾರ್ಯರವರು ಮೊದಲನೆಯ ದಿವಾನರಾಗಿ ಮಾಡಲ್ಪಟ್ಟರು. ಅವರು ೨೨ ತಿಂಗಳು ದಿವಾನ್‌ಗಿರಿಯನ್ನು ಮಾಡಿ, ಈ ಭರತಖಂಡದಲ್ಲಿ ಸಾಂಕುಶಪ್ರವರ್ತನಕ್ಕೆ ಮೈಸೂರಿನ ಮಟ್ಟಿಗೆ ಇನ್ನಾವ ರಾಜ್ಯವೂ ಇರುವುದಿಲ್ಲವೆಂದು ಪ್ರತಿಷ್ಠೆಯನ್ನು ಹೊಂದುವಂತೆ ಮಾಡಿ, ಸ್ವರ್ಗಸ್ಥರಾದರು. ಆ ೨೨ ತಿಂಗಳಲ್ಲಿ ಪ್ರಜಾರಂಜನೆಯ ಕೆಲಸಗಳಿಗಾಗಿ ಅನೇಕರು ಉಪಯೋಗಿಸಲ್ಪಟ್ಟರು. ಅವರಲ್ಲಿ ಇವರೂ ಒಬ್ಬರಾಗಿದ್ದರು. ಈ ಸಭೆಯು ಪ್ರತಿಷ್ಠಿಸಲ್ಪಟ್ಟಿದೆ. ಮೊದಲು ೧೮೯೧ರ ವರೆಗೆ ಪರೋಕ್ಷವಾಗಿಯೂ, ಅಲ್ಲಿಂದೀಚೆಗೆ ಸಾಕ್ಷಾತ್ತಾಗಿಯೂ ಇವರು ಪ್ರತಿನಿಧಿಸಭೆಯ ಮೆಂಬರುಗಳಾಗಿ ಕೆಲಸಮಾಡುತ್ತಿರುವರು.

ಇವರು, ಪ್ರಜೆಗಳ ಪಕ್ಷವನ್ನು ವಹಿಸಿ, ನಿರ್ಭಯವಾಗಿ ಕೆಲಸ ಮಾಡುತ್ತ ಬಂದುದರಿಂದ ನಿರಂಕುಶ ಪ್ರವರ್ತಕರಾದ ಅನೇಕ ಅಧಿಕಾರಿಗಳ ದ್ವೇಷಕ್ಕೆ ಪಾತ್ರರಾಗಿ ಹೇಗೆ ಅನಿರ್ವಚನೀಯವಾದ ತೊಂದರೆಗಳಿಗೆ ಗುರಿಯಾಗಿದ್ದರೋ,— ಅವುಗಳೆಲ್ಲಾ ಈಗ ಹೇಗೆ ಪರಿಹಾರವಾಗಿರುವುದೋ— ಅದು, ಮೈಸೂರು ಚರಿತ್ರಗತವಾಗಿರುವುದರಿಂದ ಈ ಸಂದರ್ಭದಲ್ಲಿ ಅದರ ಪ್ರಸ್ತಾವನವು ಈಗ ಅಪ್ರಕೃತವೆಂದು ಬಿಟ್ಟಿದೆ.

ಈ ನಮ್ಮ ಪೂಜ್ಯವರ್ಗೀಯರು, ಶ್ರೀ--ರಂಗಾಚಾರ್ಯರ ಕಾಲದಿಂದ ಈ ವರೆಗೂ ಜನಗಳಲ್ಲಿ ಲೋಕವ್ಯವಹಾರಜ್ಞಾನವನ್ನು ಹೆಚ್ಚಿಸುವುದಕ್ಕಾಗಿ ಕೆಲವು ಗ್ರಂಥಗಳನ್ನು ರಚಿಸುವುದರ ಮೂಲಕವೂ

ಪ್ರತಿನಿಧಿಸಭೆಗೂ, ಎಕನಾಮಿಕ್ ಕಾನ್‌ಫರೆನ್ಸ್ ಸಭೆಗೂ ಲೆಜಿಸ್ಲೇಟಿವ್-ಕೌನ್‌ಸಿಲ್ ಸಭೆಗೂ ಇನ್ನೂ ಇತರ ಅನೇಕ ಸಭೆಗಳಿಗೆ ಮೆಂಬರುಗಳಾಗಿ ಸ್ವಸಂತೋಷದಿಂದ ಕೆಲಸಮಾಡುವದರ ಮೂಲಕವೂ, ಅಲ್ಲಿಗಲ್ಲಿಗೆ ಉಪನ್ಯಾಸಗಳನ್ನು ಮಾಡಿ ವಿಚಾರಶಕ್ತಿಯನ್ನು ಹೆಚ್ಚಿಸುವುದರ ಮೂಲಕವೂ ಯಾವಜ್ಜೀವವೂ ಪಾಠಕರಾಗಿರುವದರ ಮೂಲಕವೂ,ಅನಾಥರಾದ ವಿದ್ಯಾರ್ಥಿಗಳ ಯೋಗಕ್ಷೇಮಚಿಂತನೆಯಲ್ಲಿ ನಿರತರಾಗಿರುವದರ ಮೂಲಕವೂ,— ಮತ್ತು ಹಿತಬೋಧಿನಿ, ವೃತ್ತಾಂತಚಿಂತಾಮಣಿ, ಉದಂತ ಚಿಂತಾಮಣಿ ಮೈಸೂರು ಹೆರೆಲ್ಡ್, ಸಾಧ್ವೀ ಸಂಪದಭ್ಯುದಯ, ಮೈಸೂರು ಪೇಟ್ರಿಯಟ್ ಮೊದಲಾದ ಪತ್ರಿಕೆಗಳಿಗೆ ಪ್ರೇರಕರಾಗಿಯೂ ಸಹಾಯಕರಾಗಿಯೂ ನಿಂತು ಪ್ರೋತ್ಸಾಹಿಸುವುದರ ಮೂಲಕವೂ, ಈ ಸಂಸ್ಥಾನದ ಆಬಾಲವೃದ್ಧರ ವರೆಗೆ ಸಮಸ್ತರ ಪ್ರೀತಿ-ಗೌರವಗಳಿಗೂ ಪಾತ್ರರಾಗಿರುವರು

ಇವರಿಂದ ರಚಿತವಾಗಿರುವ ಗ್ರಂಥಗಳಲ್ಲಿ ಉತ್ತಮ ತರದ ನೀತಿ ಸೂತ್ರಗಳನ್ನೊಳಕೊಂಡು ಅನೇಕ ಮಹತ್ವ ವಿಚಾರಗಳನ್ನು ಪ್ರತಿಪಾದಿಸುವ ' ಧನಾರ್ಜನೆಯ ಕ್ರಮ " ಎಂಬ ಪ್ರಬಂಧವು ದ್ವಿತೀಯ ಮುದ್ರಣದಿಂದ ಪರಿಷ್ಕೃತವಾಗಿ " ಅರ್ಥಸಾಧನಕ್ರಮ " ವೆಂಬ ಹೆಸರಿಂದ, ಮೈಸೂರು ವಿದ್ಯಾಂಗದವರಿಂದ ಬಹುಮಾನಿಸಲ್ಪಟ್ಟು, ಅಪ್ಪರ್ ಸೆಕೆಂಡರೀ ಪರೀಕ್ಷೆಗೆ ಪಠ್ಯಪುಸ್ತಕವಾಗಿಯೂ, " ಬೂಕೆರ್ ಟಿ ವಾಷಿಂಗಟನ್‌ರವರ ಚರಿತ್ರೆಯು ಕೂಡ ಅದೇ ಪರೀಕ್ಷೆಗೆ ಪಠ್ಯಪುಸ್ತಕವಾಗಿಯೂ ಏರ್ಪಡಿಸಲ್ಪಟ್ಟಿರುವವು " ವಿದ್ಯಾರ್ಥಿಕರ ಭೂಷಣ"ವೆಂಬ ಪ್ರಬಂಧವು ಲೋವರ್ ಸೆಕೆಂಡರೀ ಪರೀಕ್ಷೆಗೆ ೧೯೧೬ — ೧೯೧೭ ನೆ ವರ್ಷದ ಪಠ್ಯಪುಸ್ತಕವಾಗಿಡಲ್ಪಟ್ಟಿದ್ದಿತು. ಇವುಗಳಲ್ಲದೆ, "ಹರಿಶ್ಚಂದ್ರ ಚರಿತೆ " ಎಂಬ ಇತಿಹಾಸವೂ, ' ಚೋರಗ್ರಹಣ ತಂತ್ರ, ಪರಂತಪವಿಜಯ " ಗಳೆಂಬ ಕಲ್ಪಿತ ಪತ್ತೇದಾರಿ ಕಾದಂಬರಿಗಳೂ ಇವರ ರಚನೆಗಳಲ್ಲಿ ಮುಖ್ಯವಾಗಿರುವವು

ಈ ಮಹನೀಯರು ಯಾವಜ್ಜೀವವೂ ಪಾಠಕರಾಗಿರಬೇಕೆಂಬ ತಮ್ಮ ಪವಿತ್ರ ಸಂಕಲ್ಪದಂತೆ, ಮೈಸೂರು ಮರಿಮಲ್ಲಪ್ಪನವರ ಹೈ-

ಸ್ಕೂಲಿನ ಅಧ್ಯಕ್ಷರೂ, ಮುಖ್ಯೋಪಾಧ್ಯಾಯರೂ, ಮತ್ತು ಅದರ ಉನ್ನತಸ್ಥಿತಿಗೆ ಮುಖ್ಯ ಪಾತ್ರರೂ ಆಗಿ, ಶಿಷ್ಯವರ್ಗವನ್ನು ಅವ್ಯಾಜತಮವಾದ ಪುತ್ರವಾತ್ಸಲ್ಯದಿಂದ ನೋಡುತ್ತ, ತಮ್ಮ ಕೈಕೊಂಡ ಕಾರ್ಯದಲ್ಲಿ ನಿಷ್ಕಾಮಬುದ್ಧಿಯಿಂದ ನಿರಲಸರಾಗಿ ಅಹೋರಾತ್ರಿಯೂ ಶ್ರಮಸಹಿಷ್ಣುಗಳಾಗಿ ಕಾರ್ಯವನ್ನು ನಿರ್ವಹಿಸುತ್ತಿರುವರು ಇವರು ತಮ್ಮ ಶ್ರಮಕ್ಕೆ ಪ್ರತಿಫಲವನ್ನು ಅಪೇಕ್ಷಿಸುವವರಾಗಿದ್ದರೆ, ಈ ವೇಳೆಗೆ ಎಷ್ಟೋ ದ್ರವ್ಯರಾಶಿಯನ್ನು ಸಂಪಾದಿಸಬಹುದಾಗಿತ್ತಲ್ಲದೆ, ಎಷ್ಟೆಷ್ಟೋ ಅಟ್ಟಹಾಸದ ಪಟ್ಟಗಳನ್ನೂ ಪಡೆಯಬಹುದಾಗಿದ್ದಿತು ಆದರೆ ಈ ಮಹನೀಯರು ಭಗವದರ್ಪಿತಬುದ್ಧಿಯಿಂದ ಪ್ರತಿಕಾರ್ಯದಲ್ಲಿಯೂ ನಿಸ್ಪೃಹರಾಗಿ ವರ್ತಿಸುವದನ್ನು ಮಾತ್ರ ಬಲ್ಲರಲ್ಲದೆ, ಉಳಿದ ಪ್ರತಿಫಲಾಪೇಕ್ಷೆಯಿಂದ ಮಾಡುವದನ್ನು ಅರಿತವರಲ್ಲ

ದೇಶಾಭ್ಯುದಯದಲ್ಲಿಯೇ ಆಗಲೀ, ದೇಶೋನ್ನತಿಗೆ ಬೇಕಾದ ದೇಶೀಯರ ಜ್ಞಾನಾಭಿವೃದ್ಧಿ -ದೇಶಭಾಷಾಭಿವೃದ್ಧಿ ಕ್ರಿಯೆಯಲ್ಲಿಯೂ ಆಗಲೀ ಇವರಷ್ಟು ಅನುಭವಶಾಲಿಗಳಾಗಿರುವವರು ವಿರಳವೆಂದು ನಾವು ನಂಬಿರುವೆವು ಅಲ್ಲದೆ, ಈ ನಮ್ಮ ಪೂಜ್ಯಪಿತೃಸದೃಶರು ನಮ್ಮ ಮೈಸೂರು ಸಂಸ್ಥಾನದ ವಿದ್ಯಾಪೀಠದವರಲ್ಲಿ ಕರ್ಣಾಟ ಮಹಿಳೆಯರಿಗೆ ಉಚಿತವಾದ ಪ್ರಾಥಮಿಕ ಶಿಕ್ಷಣದ ವಿಚಾರದಲ್ಲಿ ಮಾಡಬೇಕಾದ ಸುಧಾರಣೆಗಳಿಗೆ ಅಗತ್ಯದ ಸೂಚನೆಗಳನ್ನು ಕೊಡುವವರಾಗಿದ್ದಾರೆಂದೂ ನಿರೀಕ್ಷಿಸಿರುವೆವು

ದಯಾಮಯಿಯಾದ ನಮ್ಮ ಭಗವತಿಯು, ನಮ್ಮ ಪೂಜ್ಯವರ್ಗೀಯರೂ, ಕರ್ಣಾಟದ ಪ್ರಿಯಪುತ್ರರೂ ಆಗಿರುವ ಶ್ರೀಯುತ ಎಮ್. ವೆಂಕಟಕೃಷ್ಣಯ್ಯನವರನ್ನು ಚಿರಕಾಲ ದೇಶಾಭ್ಯುದಯ ಕಾರ್ಯದಲ್ಲಿ ದಕ್ಷರಾಗಿ ವರ್ತಿಸುತ್ತ, ತಮ್ಮ ದೇಶೀಯರ ಅತಿಭರವಸೆಗಳನ್ನು ಸಾರ್ಥಕಪಡಿಸುವಂತೆ ಅವರಿಗೆ ಆರೋಗ್ಯ-ಉತ್ಸಾಹ--ಯಶೋವೃದ್ಧಿಗಳನ್ನು ದಯೆಪಾಲಿಸುತ್ತ ಬರಬೇಕೆಂದು ಪ್ರಾರ್ಥಿಸುತ್ತಿರುವೆವು.

# ವಿಮಲಾದೇವಿ

## ನಾಲ್ಕನೆ ಪ್ರಕರಣವು

೬ನೆಯ ಸಂಚಿಕೆಯಿಂದ ಮುಂದೆ ಸಾಗಿದುದು—

"ದುರ್ಗಾದಾಸ! ನಾವು ಕಾಬೂಲ್ ದೇಶವನ್ನು ಪ್ರವೇಶಿಸಿ, ಪ್ರಜಾಕಲಹವನ್ನು ನಿವಾರಿಸಿ, ಔರಂಗಜೇಬನ ಆಜ್ಞೆಯನ್ನು ನೆರವೇರಿಸಿದೆವು. ಇನ್ನು ನಾವಿಲ್ಲಿ ಮಾಡಬೇಕಾದ ಕಾರ್ಯವೇನದೆ?"

"ಮಹಾರಾಜ! ತಮಗೆ ಈ ಕೆಲಸವು ಒಂದು ಗಣನೆಯೇ?"

"ಅಯ್ಯಾ! ಸಕಲಸೈನ್ಯಗಳನ್ನೂ ವಶದಲ್ಲಿಟ್ಟುಕೊಂಡು ಎಂತಹ ಆಪತ್ತುಗಳನ್ನಾದರೂ ತಪ್ಪಿಸಲು ಸಮರ್ಥನಾದ ನೀನಿರುವಲ್ಲಿ ನನಗಿದು ಗಣನೆಯಿಲ್ಲವೆಂಬುದು ನಿಜವೇ!"

"ದೇವ! ಅದು ಹಾಗಿರಲಿ. ಔರಂಗಜೇಬನು ನಮ್ಮನ್ನು ಮೋಸಪಡಿಸುವುದಕ್ಕಾಗಿ ಇಲ್ಲಿಗೆ ಕಳುಹಿರುವನೆಂದು ನಾನು ಶಂಕಿಸುತ್ತಿರುವೆನು."

"ಹಾ! ಹಾಗೇಕೆ ಶಂಕಿಸುವೆ? ದುರ್ಗಾದಾಸ! ಆತನು ನನ್ನನ್ನು ಆತನ ತಂದೆಯಾದ ಷಹಜಹಾನನಂತೆಯೇ ಪ್ರೀತಿಸುತ್ತಿರುವನಲ್ಲಾ! ನನ್ನನ್ನು ಆವ ಅಪರಾಧಕ್ಕಾಗಿ ಮೋಸಪಡಿಸುವನೆಂದು ಶಂಕಿಸಬೇಕು?"

"ಯಶವಂತಮಹಾರಾಜಾ! ನೀವು ಇಷ್ಟುಬೇಗ ಮರೆತು ಹೋದಿರೋ? ಷಹಜಹಾನನ ಕಾಲದಲ್ಲಿ ಆತನ ಅಪ್ಪಣೆಯಂತೆ ಔರಂಗಜೇಬನನ್ನು ಲಕ್ಷ್ಮಣಾಪುರಿಯ ಬಳಿ ಸೋಲಿಸಿ, ಓಡಿಸಲಿಲ್ಲವೆ? ಆತನಿಗೆ ಈ ವಿಷಯವು ಜ್ಞಾಪಕವಿಲ್ಲವೆಂದು ತಿಳಿದುಕೊಂಡಿರುವಿರೋ?"

"ಪ್ರಭುಚಿತ್ತಾನುಸಾರವಾಗಿ ನಡೆಯಬೇಕಾದುದರಿಂದ ನಾನು ಆಗ ಹಾಗೆ ಮಾಡಿದೆನು. ಈ ಸಂಗತಿಯು ಔರಂಗಜೇಬನಿಗೆ ಗೊತ್ತಿಲ್ಲವೆ? ಇಂತಹ ವಿಷಯದಲ್ಲಿ ನನ್ನ ಮೇಲೆ ಮೋಸ ಬುದ್ಧಿಯನ್ನು ವಹಿಸುವನೆ? ಒಂದುವೇಳೆ, ಔರಂಗಜೇಬನೇ ತನ್ನ ಮಗನ ಮೇಲೆ

ಯುದ್ಧಕ್ಕೆ ಹೋಗೆಂದು ಆಜ್ಞಾಪಿಸಿದ್ದರೆ ಆ ಕಾರ್ಯವು ನನಗೆ ತಪ್ಪುತ್ತಿದ್ದಿತೆ? ರಾಜ್ಯಾಂಗ ವಿಚಾರವೆಲ್ಲವನ್ನೂ ತಿಳಿದು ರಾಜ್ಯಭಾರ ಮಾಡುತ್ತಿರುವ ಔರಂಗಜೇಬನು ಇಂತಹ ಅನ್ಯಾಯವನ್ನು ಮಾಡುವನೇ?”

“ರಾಜೇಂದ್ರ! ಒಬ್ಬರನ್ನು ಮೋಸಪಡಿಸಬೇಕೆಂದು ಪ್ರಯತ್ನಿಸುವವರು, ಇಷ್ಟು ನ್ಯಾಯಗಳನ್ನು ಆಲೋಚಿಸುವದಿಲ್ಲ. ದುಷ್ಟರಿಗೆ ಯುಕ್ತಾಯುಕ್ತ ವಿವೇಕವೆಲ್ಲಿಯದು?”

ಮೇಲಿನ ಉತ್ತರಪ್ರತ್ಯುತ್ತರಗಳು ಯಶವಂತಸಿಂಹನಿಗೂ ದುರ್ಗಾದಾಸನಿಗೂ ನಡೆಯುತ್ತಿದ್ದುವು. ಈ ವೇಳೆಗೆ ಯಶವಂತಸಿಂಹನು ಕಾಬೂಲನ್ನು ಜಯಿಸಿ ಸುಸ್ಥಿತಿಗೆ ತಂದಿದ್ದನು.

ಯಶವಂತಸಿಂಹನು ಪ್ರಜಾಪರಿಪಾಲನೆಯಲ್ಲಿಯೂ, ರಾಜಕಾರ್ಯನಿರ್ವಹಣದಲ್ಲಿಯೂ ದಕ್ಷನಾಗಿದ್ದರೂ ಆತನಿಗೆ ದುರಾಲೋಚನೆಯು ಅಷ್ಟಾಗಿರಲಿಲ್ಲ. ಷಹಜಹಾನನ ಆಡಳಿತದಲ್ಲಿ, ಆತನಿಗೆ ಈತನು ಸಾಮಂತರಾಜನಾಗಿ, ಬಾದಷಹನ ಅನುಗ್ರಹಕ್ಕೆ ಪಾತ್ರನಾಗಿದ್ದನು. ಔರಂಗಜೇಬನಿಗೆ ಈತನ ಮೇಲೆ ಅಸೂಯೆ ಹುಟ್ಟಲು ಇದೇ ಮೊದಲನೆಯ ಕಾರಣವು. ಷಹಜಹಾನನು ತನ್ನ ಮಗನಾದ ಔರಂಗಜೇಬನೊಡನೆ ವೈರವನ್ನು ಹೊಂದಿ, ಆತನನ್ನು ಅನೇಕಬಾರಿ ರಾಜ್ಯದಿಂದ ಓಡಿಸಿದ್ದನು. ಯಶವಂತಸಿಂಹನನ್ನು ಆತನ ಮೇಲೆ ಯುದ್ಧಕ್ಕೆ ಕಳುಹಲು, ಯಶವಂತಸಿಂಹನು, ಲಕ್ಷ್ಮಣಪುರಿಯ ಬಳಿಯಲ್ಲಿ ಔರಂಗಜೇಬನನ್ನು ಸೋಲಿಸಿ, ಓಡಿಸಿದನು. ಈ ಕಾರಣದಿಂದ ಔರಂಗಜೇಬನಿಗೆ ಯಶವಂತಸಿಂಹನ ಮೇಲೆ ದ್ವೇಷವು ದ್ವಿಗುಣವಾಯಿತು. ತನ್ನ ತಂದೆಯು ಸಿಂಹಾಸನದ ಮೇಲಿರುವ ವರೆಗೂ ತನ್ನ ಕಾರ್ಯಗಳಾವವೂ ಸಾಗುವದಿಲ್ಲವೆಂದು ತಿಳಿದು ಸುಮ್ಮನಿದ್ದು ಸಮಯವನ್ನು ನಿರೀಕ್ಷಿಸುತ್ತಿದ್ದನು. ಕ್ರಮಕ್ರಮವಾಗಿ ಆತನು ತನ್ನ ತಂದೆಯನ್ನು ಮೋಸಪಡಿಸಿ ಸಿಂಹಾಸನಾಧಿಪತಿಯಾದಂದಿನಿಂದ ಯಶವಂತಸಿಂಹನ ಮೇಲೆ ಒಂದು ಕಣ್ಣನ್ನಿಟ್ಟೇ ಇದ್ದನು. ಆತನು ಸಿಂಹಾಸನವನ್ನೇರುವದಕ್ಕೆ ಮೊದಲು ಷಹಜಹಾನನ ಹಿರಿಯ ಮಗನಾದ ‘ದಾರಾ’ ಎಂಬುವನೊಡನೆ ಯಶ

ವಂತಸಿಂಹನು ಸೇರಿ ಔರಂಗಜೇಬನನ್ನು ಸೋಲಿಸಿದ್ದುದರಿಂದ ಅವನಲ್ಲಿದ್ದ ದ್ವೇಷವು ದಿನದಿನಕ್ಕೂ ಹೆಚ್ಚುತ್ತಲೇ ಇದ್ದಿತು.

ಕೃತ್ರಿಮ ಸಂಧಾನಿಯಾದ ಔರಂಗಜೇಬನು ಪಟ್ಟಕ್ಕೆ ಬಂದಮೇಲೆ ದೂರಾಲೋಚನೆಯಿಲ್ಲದ ಯಶವಂತಸಿಂಹನು ಔರಂಗಜೇಬನು ತನ್ನನ್ನು ಮೋಸಪಡಿಸುವನೆಂದು ತಿಳಿಯಲಾರದೆ, ಮೊದಲಿನಂತೆಯೇ ಸಾಮಂತರಾಜನಾಗಿ ಆತನನ್ನು ಸೇವಿಸುತ್ತಿದ್ದನು. ಯಶವಂತನಲ್ಲಿ ಪೂರ್ಣ ದ್ವೇಷಿಯಾಗಿದ್ದರೂ ಯಶವಂತಸಿಂಹನ ಶೌರ್ಯ-ಧೈರ್ಯ ಸಾಹಸಾದಿಗಳನ್ನು ಚೆನ್ನಾಗಿ ತಿಳಿದಿದ್ದ ಔರಂಗಜೇಬನು ಅನೇಕ ಯುದ್ಧಗಳಲ್ಲಿ ಆತನನ್ನೇ ಮುಂದೆಮಾಡಿ ಜಯವನ್ನು ಸಂಪಾದಿಸಿಕೊಳ್ಳುತ್ತ ಬಂದನು. ಹಠಾತ್ತಾಗಿ ಯಶವಂತಸಿಂಹನಿಗೆ ಏನಾದರೂ ಕೆಡಕುಮಾಡಿದರೆ ರಾಜಪುತ್ರರೆಲ್ಲರೂ ಒಟ್ಟಾಗಿ, ತನ್ನಮೇಲೆ ಬೀಳುವರೆಂಬ ಭಯದಿಂದ ಆತನು ತಕ್ಕ ಉಪಾಯವನ್ನೇ ಯೋಚಿಸುತ್ತಿದ್ದನು. "ವಿರೋಧದಿಂದ ಒಬ್ಬರಿಗೆ ಹಾಲನ್ನು ಕುಡಿಯಿಸಲಾಗುವದಿಲ್ಲ, ಒಳ್ಳೆಯತನದಿಂದ ವಿಷವನ್ನಾದರೂ ಕುಡಿಸಬಹುದು." ಎಂಬ ವಿಚಾರವನ್ನು ಅವನು ಚೆನ್ನಾಗಿ ಅರಿತಿದ್ದುದರಿಂದ, ಯಶವಂತಸಿಂಹನನ್ನು ಕುಟಿಲಮರ್ಯಾದೆಯಿಂದ ಗೌರವಿಸುತ್ತ, ಆತನಲ್ಲಿ ತಾನು ಅತ್ಯಂತ ಪ್ರೀತಿಯುಳ್ಳವನಂತೆ ನಟಿಸುತ್ತಿದ್ದನು. ಪಾಪ! ನಿಷ್ಕಪಟಿಯಾದ ಯಶವಂತಸಿಂಹನು ಈ ಮಾಯೆಯನ್ನರಿಯದೆ, ತನಗೆ ಮಾಡುವ ಮರ್ಯಾದೆಗಳೆಲ್ಲವೂ ನಿಜವಾದುವೆಂದೇ ನಂಬಿದ್ದನು. ಈತನ ಸೇನಾಪತಿಯಾದ ದುರ್ಗಾದಾಸನು ಔರಂಗಜೇಬನ ಕೃತ್ರಿಮಗಳನ್ನು ತಿಳಿದು, ಸಮಯದೊರೆತಾಗಲೆಲ್ಲಾ ಯಶವಂತಸಿಂಹನೊಡನೆ ಪಾದಷಹನ ಕಾರ್ಯಗಳನ್ನು ಕುರಿತು ವಿಚಾರಮಾಡುತ್ತಿದ್ದನು. ದುರ್ಗಾದಾಸನೆಂದರೆ ಬುದ್ಧಿಚಾತುರ್ಯದಲ್ಲಿಯೂ, ಪರಾಕ್ರಮದಲ್ಲಿಯೂ, ರಾಜಪುತ್ರ ವೀರರಲ್ಲಿ ಹೆಸರುಗೊಂಡವನೇ ಸರಿ!

ಔರಂಗಜೇಬನು ಮೊದಲು ಮಹಮುದ್ ಅಮೀರ್‌ಖಾನ್ ಎಂಬವನನ್ನು ತನ್ನ ಪ್ರತಿನಿಧಿಯನ್ನಾಗಿ ಮಾಡಿ, ಕಾಬೂಲಿಗೆ ಕಳುಹಿದನು.

ಅಮೀರ್‌ಖಾನನು ೧೬೭೨ನೆಯ ಇಸವಿಯಲ್ಲಿ ತನ್ನ ೪೦೦೦೦ ಸೈನಿಕರೊಡನೆ ಕಾಬೂಲಿಗೆ ಹೋಗುತ್ತಿರುವಾಗ ಕೈಬರ್ ಕಣಿವೆಯಲ್ಲಿದ್ದ ಕಾಡುಜನರು ಅವರ ಮೇಲೆ ಶಿಲಾವೃಷ್ಟಿ (ಕಲ್ಲಿನಮಳೆ) ಯನ್ನು ಕರೆದು, ಅನೇಕರನ್ನು ಕೊಂದುಬಿಟ್ಟರು ಆ ಯುದ್ಧದಲ್ಲಿ ಅಮೀರ್‌ಖಾನನು ಪೂರ್ಣವಾಗಿ ಅಪಜಯವನ್ನು ಹೊಂದಿದನು ಈ ಸುದ್ದಿಯನ್ನು ಕೇಳಿದ ಕೂಡಲೇ ಪಾದಷಹನು ಯಶವಂತಸಿಂಹನನ್ನೇ ಸೇನಾಧಿಕಾರಿಯಾಗಿ ಮಾಡಿ, ಅಲ್ಪ ಸೈನ್ಯದೊಡನೆ ಆತನನ್ನು ಕಳುಹಿದನು. ಯಶವಂತಸಿಂಹನನ್ನೇ ಯುದ್ಧಕ್ಕೆ ಕಳುಹಿದುದರ ಕಾರಣವು ಇಷ್ಟೇ! ಯಶವಂತಸಿಂಹನು ಕಾಬೂಲನ್ನು ಸೇರಿ, ದಂಗೆಯನ್ನಡಗಿಸಿದರೆ, ತನ್ನ ಕೋರಿಕೆಯಲ್ಲಿ ಅರ್ಧ ಫಲಿಸುವದೆಂಬದೂ ಒಂದುವೇಳೆ ಯಶವಂತಸಿಂಹನೇ ಯುದ್ಧದಲ್ಲಿ ಮಡಿದರೆ ತನ್ನ ಕೋರಿಕೆಯು ಪೂರ್ಣ ಫಲವಾಗುವದೆಂಬದೂ ಔರಂಗಜೇಬನ ಮನೋಗತವಾಗಿದ್ದಿತು

ಯಶವಂತನು ತಾನು ಕೈಕೊಂಡ ಕಾರ್ಯದಲ್ಲಿ ಕೀರ್ತಿಯನ್ನು ಹೊಂದುವಂತೆ ಕಾಬೂಲನ್ನು ಸೇರಿ, ದಂಗೆಯನ್ನು ಅಡಗಿಸಿ, ಜಯವನ್ನು ಸಂಪಾದಿಸಿಕೊಂಡನು ಆದರೆ ಹಿಂದುಮುಂದಿನ ವಿಚಾರವನ್ನು ಆತನು ಹೇಗೆ ತಾನೇ ಊಹಿಸಿ ತಿಳಿಯಬಲ್ಲನು ಜಯಶಾಲಿಯಾದೆನೆಂದು ಸಮಾಧಾನ ಚಿತ್ತನಾಗಿ ದುರ್ಗಾದಾಸನೊಡನೆ ಮಾತನಾಡುತ್ತ ಶಿಬಿರದಲ್ಲಿ ಕುಳಿತಿದ್ದನು. ಅಷ್ಟರಲ್ಲಿಯೇ ಒಬ್ಬ ಮಹಮ್ಮದೀಯನು ಬಂದು—"ದಿಲ್ಲೀ ನಗರದಿಂದ ಆಲಂಗೀರ್ ಪಾದಷಹರು ಈ ಕಾಗದವನ್ನು ತಮಗೆ ಮುಟ್ಟಿಸಬೇಕೆಂದು ನನ್ನನ್ನು ಕಳುಹಿರುವರು" ಎಂದು ಹೇಳಿ ತನ್ನ ಅಂಗಿಯ ಕಿಸೆಯಲ್ಲಿದ್ದ ಪತ್ರವನ್ನು ತೆಗೆದು ಮುಂದಿಟ್ಟನು ಯಶವಂತನು ಆತುರದಿಂದ ಪತ್ರವನ್ನು ಬಿಚ್ಚಿ ನೋಡಿ ಆರ್ತಸ್ವರದಿಂದ—"ಹಾ! ಹಾ! ಕುಮಾರ!! ಪೃಥವೀಸಿಂಗ! ಅಯ್ಯೋ--" ಎಂದು ಎದೆಯನ್ನು ಹೊಡೆದುಕೊಳ್ಳುತ್ತ ಕೆಳಗೆ ಬಿದ್ದು ಮೂರ್ಛಿತನಾದನು ತತ್ಕ್ಷಣವೇ ಪರಿವಾರವೆಲ್ಲವೂ ಆತನ ಸುತ್ತಲೂ ಸೇರಿತು ದುರ್ಗಾದಾಸ-ಶಿವಸಿಂಗರು ಪತ್ರದ ವಿಚಾರವನ್ನು ತಿಳಿದು ಶೋಕದಿಂದ ಅಳತೊಡಗಿದರು ಪೃಥವೀಸಿಂಗನು ಸತ್ತಸುದ್ದಿಯನ್ನು

ಕೇಳಿ, ಇಂದಿರಾ-ಚಂದ್ರಾವತಿಯರೂ, ದಾಸದಾಸಿಯರೂ ದುಃಖವನ್ನು ತಡೆಯಲಾರದೆ ಬಿದ್ದುಬಿದ್ದು ಅಳತೊಡಗಿದರು. ದೈವಸಂಕಲ್ಪವನ್ನು ಬಲ್ಲವರಾರು? ಯಾವ ಕ್ಷಣದಲ್ಲಿ ಏನಾಗುವದೆಂಬುದನ್ನು ಮುಂದಾಗಿ ತಿಳಿಯಲಾರಿಗೆ ಸಾಧ್ಯವು? ಒಂದು ಗಳಿಗೆಗೆ ಮೊದಲು ಜಯಲಾಭದಿಂದ ನಲಿಯುತ್ತಿದ್ದ ಪರಿವಾರವೆಲ್ಲವೂ-ಈಗ ಶೋಕದಿಂದ ಕಣ್ಣೀರು ಸುರಿಸುತ್ತ ನಿಸ್ತೇಜವಾಗಿ ಹೋಯಿತು! ಗರ್ಭವತಿಯಾಗಿದ್ದ ಚಂದ್ರಾವತಿಯು ಸಂಕಟವನ್ನಂತೂ ಹೇಳಲು ಅಳವಲ್ಲದಂತಾಯಿತು.

ಅಬ! ಔರಂಗಜೇಬನ ಕ್ರೌರ್ಯವೆಂತಹದು? ಪೃಥಿವೀಸಿಂಗನನ್ನು ನೋಡಬೇಕೆಂದು ಕರೆಯಿಸಿ, ನೆರೆದ ಸಭೆಯಲ್ಲಿ ಆತನನ್ನು ಪ್ರೀತಿಸಿದಂತೆ ನಟಿಸಿ, ಅಷ್ಟು ಮಾತ್ರದಿಂದಲೇ ಆತನಿಗೆ ರಾಜದೃಷ್ಟಿಯು ತಗಲಿ ಸತ್ತುಹೋದನೆಂದು, ಆ ಪಾಪಾತ್ಮನಾದ ಔರಂಗಜೇಬನು ಯಶವಂತಸಿಂಹನಿಗೆ ಕಾಗದವನ್ನು ಬರೆದನು! ಎಷ್ಟು ಸಾಹಸವು! ಕುಮಾರನ ಮರಣವಾರ್ತೆಯು ಶೂಲದಂತೆ ಆತನ ಹೃದಯದಲ್ಲಿ ನಾಟಿ, ಅದೇ ಹೃದ್ರೋಗವೇ ಆತನ ಆರೋಗ್ಯವನ್ನು ತಪ್ಪಿಸಿತು. ಯಶವಂತಸಿಂಹನು ಬರಬರುತ್ತ ಸಿದ್ಧಾಹಾರಗಳನ್ನು ತೊರೆದು ಕೃಶನಾಗುತ್ತ ಬಂದನು. ರಾಗ್ಯತ್ಯಾಗಿತನಾಗಿದ್ದ ಆತನಿಗೆ ಅಂತ್ಯದಿನವೂ ಬಂದು, ಆತನ ಸ್ಮೃತಿಯನ್ನು ತಪ್ಪಿಸಿತು. ಹಾಸಿಗೆಯ ಸುತ್ತಲೂ ದುರ್ಗಾದಾಸನೇ ಮೊದಲಾದವರು ಸುತ್ತುವರಿದು ಕುಳಿತು ಕಣ್ಣೀರು ಸುರಿಸುತ್ತಿದ್ದರು. "ಉರುಳುತ್ತಿನ ಮೇಲೆ ಒನಕೆಯು ಬಿದ್ದಂತೆ" ಮೊದಲೇ ಪುತ್ರಶೋಕಸಂತಪ್ತೆಯಾಗಿದ್ದ ಚಂದ್ರಾವತಿಗೆ ಪತಿವಿಯೋಗದ ದುಃಖವು ಪ್ರಾಪ್ತಿಯಾಗುವ ಸಮಯವು ಸಮೀಪಿಸಿತೆಂದು ತಿಳಿದಾಗ ಅವಳ ಮನಸ್ಸು ಹೇಗಾಗಿರಬಹುದೆಂಬುದನ್ನು ವಿವರಿಸುವದು ಅಸಾಧ್ಯ ವಿಚಾರವು.

ಹೀಗೆ ಪರಿವಾರವೆಲ್ಲವೂ ದುಃಖಿಸುತ್ತಿದ್ದ ವೇಳೆಯಲ್ಲಿ ಒಬ್ಬ ಮಹಮ್ಮದೀಯ ಸೇವಕನು ದುರ್ಗಾದಾಸನನ್ನು ಸಮೀಪಿಸಿ ಆತನ ಕೈಯಲ್ಲಿ ಒಂದು ಕಾಗದವನ್ನು ಕೊಟ್ಟನು. ಆತನದನ್ನು ನೋಡಿ, ಔರಂಗಜೇಬನು ಪೃಥಿವೀಸಿಂಗನಿಗೆ ಮೋಸದಿಂದ ವಿಷವಸ್ತ್ರಗಳನ್ನು ತೊಡಿಸಿ,

ಕೊಲ್ಲಿಸಿದನೆಂದು ತಿಳಿದು, ಈ ಸಮಾಚಾರವನ್ನು ಯಶವಂತನಿಗೆ ತಿಳಿಸಿದನು

ಪೃಥಿವೀಸಿಂಗನ ಮರಣ ವೃತ್ತಾಂತವನ್ನು ರಾಜಪುತ್ರರಾರಾದರೂ ಲಿಖಿತಮುಖದಿಂದ ಯಶವಂತನಿಗೆ ತಿಳಿಸುವರೆಂಬ ಭೀತಿಯಿಂದ, ಔರಂಗಜೇಬನು ಕಾಬೂಲಿಗೆ ಯಾರನ್ನೂ ಹೋಗಗೊಡದಂತೆ ಕಟ್ಟು ಮಾಡಿ, ದೆಹಲಿಯಿಂದ ಯಾರೂ ಹೋಗದಂತೆ ನಿರ್ಬಂಧವನ್ನುಂಟು ಮಾಡಿದ್ದನು. ಈ ಕಾರಣದಿಂದಲೇ ಈ ಪತ್ರವು ಇಷ್ಟು ಕಾಲಾನಂತರದ ಮೇಲೆ ಹೇಗೋ ತಪ್ಪಿಸಿಕೊಂಡು ಬಂದು ದುರ್ಗಾದಾಸನ ಕೈಸೇರಿತು

ಯಶವಂತಸಿಂಹನು ತನ್ನ ಅವಸಾನಕಾಲದಲ್ಲಿ ದುರ್ಗಾದಾಸನನ್ನು ಬಳಿಗೆ ಕರೆದು ಕೈಹಿಡಿದು, 'ಆಪ್ತಮಿತ್ರ ದುರ್ಗಾದಾಸ! ನಾನು ಪರಲೋಕಯಾತ್ರೆಗೆ ತೆರಳುತ್ತಿರುವೆನು. ಜೋಧಪುರವಂಶವು ಇಲ್ಲಿಗೆ ಮುಕ್ತಾಯವಾದೀತೆಂದು ಭಯಪಡುತ್ತಿರುವೆನು ಚಂದ್ರಾವತಿಯು ಸಮಮಾಸ ಗರ್ಭಿಣಿಯಾಗಿರುವದರಿಂದ ನನ್ನೊಡನೆ ಸಹಗಮನ ಮಾಡದಂತೆ ಹೇಳು ಆಕೆಯನ್ನು ಶತ್ರುಗಳ ಕೈಯ್ಗೆ ಸಿಕ್ಕದಂತೆ, ಜೋಧಪುರಕ್ಕೆ ಕರೆದುಕೊಂಡು ಹೋಗಿ ನನ್ನ ವಂಶವನ್ನು ಅಭಿವೃದ್ಧಿಪಡಿಸಲು ಸಹಾಯಮಾಡುವೆನೆಂದು ನೀನು ವಾಗ್ದಾನ ಮಾಡಿದೆಯಾದರೆ ನಿರ್ವಿಚಾರವಾಗಿ ಪ್ರಾಣಬಿಡುವೆನು' ಎಂದು ದೈನ್ಯವಾಣಿಯಿಂದ ಕೇಳಿಕೊಂಡನು

ದುರ್ಗಾದಾಸನು ಕಣ್ಣೀರುಸುರಿಸುತ್ತ ಯಶವಂತನ ಪಾದಗಳನ್ನು ತನ್ನೆರಡು ಕೈಗಳಿಂದಲೂ ಹಿಡಿದು ಗದ್ಗದಸ್ವರದಿಂದ—"ದೇವ! ಎಷ್ಟು ಕಷ್ಟಗಳನ್ನಾದರೂ ಸಹಿಸಿ, ಈ ನಿಮ್ಮ ಜೋಧಪುರ ವಂಶವನ್ನು ಕಾಪಾಡುವೆನು" ಎಂದು ಪ್ರಮಾಣ ಮಾಡಿದನು ಶಿವಸಿಂಗನೇ ಮೊದಲಾದ ಆತನ ಪರಿವಾರದವರೆಲ್ಲರೂ ಅದೇ ರೀತಿಯಾಗಿ ವಾಗ್ದಾನ ಮಾಡಿದರು ಆಬಳಿಕ ಯಶವಂತಸಿಂಹನು ೧೬೭೮ನೆಯ ಡಿಸಂಬರ್ ತಿಂಗಳ ೮ನೆಯ ತಾರೀಖಿನ ದಿವಸ ಕೀರ್ತಿಶೇಷನಾದನು

(ಮುಂದೆ ಸಾಗುವದು)

## ಸ್ವೀಕಾರ

೧ ಮರುಸ್ಸಂದನ ಶತಕಂ ೦—೪—೦ (ಶ್ರೀ ಆರ್ ತಾತಾಚಾರ್ಯ ಎಮ್. ಏ, ಎಲ್. ಟಿ ಇವರಿಂದ )

೨ ಶ್ರೀ ಸುಬ್ರಹ್ಮಣ್ಯಕ್ಷೇತ್ರ ಮಹಾತ್ಮ್ಯೆ ೦—೪—೦ (ಶ್ರೀ|| ವೆಂಕಟ ರಮಣಯ್ಯ ಹಲಕೂರು ಇವರಿಂದ )

೩ ಕರ್ಣಾಟ ವಿದ್ಯಾವರ್ಧಕ ಸಂಘದ ವಾರ್ಷಿಕವೃತ್ತ ಮಂಗಳೂರು

೪ ಕರ್ಣಾಟಕ ಸೋಷಿಯಲ್ ಕ್ಲಬಿನ ವಾರ್ಷಿಕ ವೃತ್ತ ಪುಣೆ

ಈ ಪುಸ್ತಕಗಳನ್ನು ವಂದನಪೂರ್ವಕವಾಗಿ ಸ್ವೀಕರಿಸಿರುವುದಲ್ಲದೆ, ಅವುಗಳನ್ನು ಕಳುಹಿಕೊಟ್ಟುದಕ್ಕೆ ಆ ಆ ಕರ್ತರುಗಳಾದ ನಮ್ಮ ಬಾಂಧವರಿಗೆ ನಮ್ಮ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಈ ಮೂಲಕ ಸಮರ್ಪಿಸಿರುವೆವು

---

## ನಮ್ರ ಸೂಚನೆ

ನಮ್ಮ ಚಿರಸ್ಮರಣೀಯಳಾದ ನಂದಿನಿಯು ತನ್ನ ೧೯೧೭ ಜನವರಿ—ಫೆಬ್ರವರಿ ತಿಂಗಳ ಸಂಚಿಕೆಯಲ್ಲಿ ದಕ್ಷಿಣೆಸ್ನೇಹಪರವಾದ ತನ್ನ ಅಸ್ತ್ರಲೇಖಕರ ಅಭಿಪ್ರಾಯನ್ನು ಪ್ರಕಟಿಸಿರುವದಕ್ಕಾಗಿ ನಾವು ಈ ಮೂಲಕ ವಾಣಿಗೂ, ವಾಣೀಕರ್ತರಿಗೂ ಮತ್ತು ಅಭಿಪ್ರಾಯವ ನ್ನಿತ್ತ R ನಾಮದ ಲೇಖಕರಿಗೂ ಕೃತಜ್ಞತಾಪೂರ್ವಕ ಧನ್ಯವಾದವನ್ನರ್ಪಿಸಿರುವೆವಲ್ಲದೆ, ಲೇಖಕರ ಮತ್ತು ಪ್ರಕಾಶಕರ ಸಂದೇಹ ನಿವಾರಣೆಗೆ ಉತ್ತರವನ್ನು ಹಿತೈಷಿಣಿಯು ಇಷ್ಟರಲ್ಲಿ ಪ್ರಕಟಪಡಿಸುವಳೆಂದೂ ನಮ್ರಭಾವದಿಂದ ಸೂಚಿಸುವೆವು

---

## ಸ್ವಾಭಿಪ್ರಾಯನಿವೇದನ.

**ಹರಿದಾಸಿ** — ಶ್ರೀಯುತ ದಿ ಶ್ರೀನಿವಾಸ ಶರ್ಮರಿಂದ ಭಾಷಾಂತರಿಸಲ್ಪಟ್ಟು, ಕರ್ಣಾಟಕ ಚಂದ್ರಿಕೆಯ ೫೫ನೇ ಪುಸ್ತಕವಾಗಿ ಪ್ರಕಟವಾಗಿರುವ, ಡೆಮ್ಮಿ ಅಷ್ಟಪತ್ರದ ಆಕಾರದಲ್ಲಿ ೫೬ ಪುಟಗಳನ್ನೊಳಕೊಂಡಿರುವ ಪುಸ್ತಕವು ಕ್ರಯ ಅತ್ಯಲ್ಪ ೦—೪—೦ ಮಾತ್ರ.

ವಿದ್ಯಾವಂತನಾಗಿದ್ದರೂ ಮೃದ್ಯಪಾಯಿಯಾಗುವ ಮಾನವನು ವರ್ತಿಸಬಹುದಾದ ವರ್ತನವನ್ನೂ, ಮದ್ಯಪಾಯಿಯಾದ ಪತಿಯಿಂದ ಪತಿಗತಪ್ರಾಣಳಾಗಿರುವ ಸಾಧ್ವೀಮಣಿಯಾದ ಪತ್ನಿಯು ಹೊಂದಬಹುದಾದ ಕಷ್ಟ--ಕ್ಲೇಶಗಳನ್ನೂ ಹೃದಯವಿದ್ರಾವಕವಾಗುವಂತೆ ತೋರಿಸಿಕೊಡುವ ಈ ಕಾದಂಬರಿಯು ನಮ್ಮ ಭಗಿನೀ ಬಾಂಧವರೆಲ್ಲರಿಗೂ ಸಂಗ್ರಹಿಸಲ್ಪಡತಕ್ಕದಾಗಿದೆ ಸುಲಭ ಶೈಲಿ. ಪರಿಶುದ್ಧವಾದ ಭಾಷೆ ಅಂದವಾದ ಮುದ್ರಣ ಪವಿತ್ರ ಸಂದೇಶ !

ಪುಸ್ತಕವು ದೊರೆಯುವ ಸ್ಥಳ — ಮ್ಯಾನೇಜರ್,
ಶ್ರೀ ಶಾಂತನಿಕೇತನ ಸ್ಕೂಲ್, ಮೈಸೂರು.

## ವಿಜ್ಞಾನ

ಸಂಪಾದಕರು — ಶ್ರೀ ಪಿ ವೆಂಕಟನಾರಣಪ್ಪನವರು ಎಮ್ ಏ, ಶ್ರೀ. ಎಸ್ ವೆಂಕಟೇಶಯ್ಯಂಗಾರ್ಯರು ಬಿ. ಏ, ಪ್ರಕಾಶಕರು:— ಸೆಕ್ರೆಟರಿ, ' ಕರ್ಣಾಟ ವಿಜ್ಞಾನ ಪ್ರಚಾರಿಣೀ ಸಮಿತಿ ' ಬಸವನಗುಡಿ, ಬೆಂಗಳೂರು ಸಿಟಿ ಡೆಮ್ಮಿ ಅಷ್ಟಪತ್ರದ ಆಕಾರ, ೩೨ ಪುಟಗಳ ಮಾಸಪತ್ರಿಕೆ ವಾರ್ಷಿಕ ವರ್ಗಣಿ ೩—೦—೦ ಪತ್ರಿಕೆಯ ಉದ್ದೇಶವು ಸ್ತುತ್ಯವಾದುದು ಕರ್ಣಾಟಕ ಜನಾಂಗದಲ್ಲಿ ವ್ಯವಹಾರ ಜ್ಞಾನವನ್ನು ಬೆಳೆಸುವದಕ್ಕಾಗಿಯೇ ವಿವಿಧ ವಸ್ತುವಿಚಾರವಿಮರ್ಶಪೂರ್ವಕವಾದ ಲೇಖಗಳನ್ನು ಸಚಿತ್ರವಾಗಿ ಪ್ರಕಟಿಸುವಂತೆ ಸಂಕಲ್ಪಿಸಿ ಪ್ರಕಟವಾಗುತ್ತಿದೆ ಪತ್ರಿಕೆಯ ಲೇಖಕರೂ, ಸಂಪಾದಕರೂ, ಪ್ರಕಾಶಕರೂ ಸಹ, ಉತ್ತಮ ಪದವೀಧರರೂ, ವಿಜ್ಞಾನಾಗಮಕೋವಿದರೂ, ಉತ್ತಮ ತರದ ಬೋಧಕರೂ, ಲೋಕಾನುಭವಿಗಳೂ ಆಗಿ

ರುವ ಪಂಡಿತರು ದೇಶಹಿತಕಾರ್ಯದಲ್ಲಿ ಬದ್ಧದೀಕ್ಷರಾಗಿ ಕೈಕೊಂಡಿರುವ ಇವರ ಪ್ರಯತ್ನಕ್ಕಾಗಿ ನಾವು ಇವರನ್ನು ಭ್ರಾತೃಗೌರವಬುದ್ಧಿಯಿಂದ ಅಭಿನಂದಿಸುತ್ತಿರುವೆವು ಭಗವಂತನು ಈ ನಮ್ಮ ಭ್ರಾತೃವರ್ಗೀಯರ ಶ್ರಮಸಹಿಷ್ಣುತೆಗೆ ತಕ್ಕಂತೆ ಉತ್ತಮೋತ್ತಮ ಫಲಗಳನ್ನು ಕೃಪೆಗೆಯ್ಯ, ಕರ್ಣಾಟಕದ ಜ್ಞಾನಪ್ರಸಾರವಾಗುವಂತೆ ಮಾಡಬೇಕೆಂದೂ, ವಿಜ್ಞಾನವು ನಮ್ಮ ಬಾಂಧವರಲ್ಲಿ ಜಿಜ್ಞಾಸೆಯನ್ನು ಹೆಚ್ಚಿಸುತ್ತ ಚಿರಕಾಲ ಪ್ರಕಾಶಿಸುತ್ತಿರಲೆಂದೂ ಪ್ರಾರ್ಥಿಸುವೆವು

---

# ಗ್ರಾಹಕರಲ್ಲಿ ಸೂಚನೆ.

ಫಾಲ್ಗುಣ ಸಂಚಿಕೆಯಲ್ಲಿ ಪ್ರಕಟಿಸಿದ 'ಜಾನಕೀ ಕಲ್ಯಾಣ" ನಾಟಕದ ಬಹುಮಾನಕ್ಕೆ ಈಗಲೇ ಎಂದರೆ ವಾರಾವಧಿಯಲ್ಲಿಯೇ ತಗಾದೆಗಳು ಬರುತ್ತಿವೆ "ಜಾನಕೀ ಕಲ್ಯಾಣ" ನಾಟಕ ಪುಸ್ತಕವು ಇನ್ನೂ ಮುದ್ರಣಕ್ಕೆ ಹೋಗಿಲ್ಲ ವರ್ಷಾಂತ್ಯದಲ್ಲಿ ಕೊಡುವ ಬಹುಮಾನವಾಗಿರುವದರಿಂದ ಅವರೆಗೆ ಗ್ರಾಹಕರು ತಾಳ್ಮೆಯನ್ನೇ ವಹಿಸಬೇಕೆಂಬುದು ನಂದಿನಿಯ ನಮ್ರಸೂಚನೆಯಾಗಿದೆ ಮತ್ತು ನಂದಿನಿಯ ೧-೨ನೆ ಸಂಚಿಕೆಗಳಲ್ಲಿ ಪ್ರಕಟವಾಗಿ ಅರ್ಧಕ್ಕೆ ನಿಲ್ಲಿಸಲ್ಪಟ್ಟಿರುವ 'ಅಬಲಾ ದೌರ್ಜನ್ಯ" ಮತ್ತು "ಭಾವನಾಲೋಕ' ಗಳನ್ನು ನಂದಿನಿಯಲ್ಲಿಯೇ ಪ್ರಕಟಿಸಲು ಸ್ಥಳ ಸಂಕೋಚವಾಗಿ ತೋರಿದುದರಿಂದ ಅವೆರಡನ್ನೂ ಇನ್ನೂ ಕೆಲವು ಲೇಖನಗಳೊಡನೆ "ಮಾತೃಮಂದಿರದ ವಾರ್ಷಿಕವೃತ್ತ"ವೆಂದು ಮುಂದಿನ ಅಕ್ಟೋಬರ ತಿಂಗಳಲ್ಲಿ ಪ್ರಕಟವಾಗುವ ವಾರ್ಷಿಕ ಪುಸ್ತಕದಲ್ಲಿ ಸೇರಿಸಿ ನಂದಿನೀ ಮತ್ತು ಪಿತೃಸೇವಿನೀ ವರ್ಗಣೀದಾರರಿಗೆ ಉಚಿತವಾಗಿ ಕಳುಹಬೇಕೆಂದಿರುವೆವು, 'ನಾನು ಏನಾಗಿರುವೆನು?" ಎಂಬ ಲೇಖನದ ಮುಂದಿನ ಅಂಕವು ನಂದಿನಿಯ ೮ ಅಥವಾ ೯ನೆಯ ಸಂಚಿಕೆಯಲ್ಲಿ ಪ್ರಕಟವಾಗುವದು. ಅವರೆಗೆ ಜಿಜ್ಞಾಸುಗಳು ಅವಕಾಶವನ್ನು ಕೊಟ್ಟಿರಬೇಕೆಂದು ಮತ್ತೊಂದು ಸೂಚನೆ. ಇತಿ.

(ಕಾರ್ಯನಿರ್ವಾಹಕರು.)

## —ವಾಚಕರು ತಿದ್ದಿಕೊಳ್ಳಬೇಕು—

(ನಂದಿನಿಯ ೬ನೇ ಸಂಚಿಕೆಯಲ್ಲಿ ಅರ್ಥವಿಪರ್ಯಾಸವಾಗಿ ತೋರುವ
ಮುದ್ರಣ ದೋಷಗಳನ್ನು ತಿದ್ದಬೇಕು

| ಪುಟ | ಸಾಲು | ಅಶುದ್ಧ | ಶುದ್ಧ |
|---|---|---|---|
| ೧ | ಕಡೆಯ ಸಾಲು | ೧೭ ೨-೧೯೧೭ | ೧೬ ೨ ೧೯೧೭ |
| ೨೨ | ೧೧ | ಸೇವಾತತ್ಪರತೆಯೂ | ಸೇವಾತತ್ಪರರೆ |
| ೪೫ | ೯ | ಶ್ರೇಯೋಭಿವೃದ್ಧಿಯನ್ನು | ಶ್ರೇಯೋಭಿವೃದ್ಧಿಚಿಂತನೆಯನ್ನು |
| ೪೬ | ೧೪ | ಯಮಗಿರಿ | ಯದುಗಿರಿ |

(ಇನ್ನುಳಿದ ಅಕ್ಷರಸ್ಖಾಲಿತಗಳನ್ನು ಕೂಡ ವಾಚಕರು ತಿದ್ದಿಕೊಂಡು ಓದುವರೆಂದು ನಂಬಿರುವೆವು ಮುಂದಿನ ಸಂಚಿಕೆಯಿಂದ ಮುದ್ರಣ ದೋಷಗಳಾಗಲೀ, ಮತ್ತಾವ ದೋಷಗಳಾಗಲೀ ಆಗದಂತೆ ಎಚ್ಚರಗೊಳ್ಳುವೆವು)

---


# ಸಚಿತ್ರ ಭಾರತ

ಕರ್ನಾಟಕದಲ್ಲೆಲ್ಲ ಒಂದೇ ಆಗಿರುವ ಉತ್ತಮವರ್ಗದ
ಮಾಸಪತ್ರಿಕೆ

ಐತಿಹಾಸಿಕ, ಸಾಮಾಜಿಕ, ನೈತಿಕ, ತಾತ್ವಿಕ, ಪ್ರಗತಿಪರ ವಿಚಾರಗಳನ್ನು ಸುಲಭಶೈಲಿಯಲ್ಲಿ ಕಥಾ-ಪ್ರಬಂಧ-ಸಂಭಾಷಣಾದಿಗಳ ರೂಪದಿಂದ ಚರ್ಚಿಸಿ, ವಾಚಕರ ಮನಸ್ಸಿಗೆ ಉತ್ಸಾಹ, ಇತಿಕರ್ತವ್ಯತೆ, ಸತ್ಪ್ರವೃತ್ತಿಗಳನ್ನುಂಟುಮಾಡುವ ಉತ್ತಮವರ್ಗದ ಮಾಸಪತ್ರಿಕೆಯು. ಡಬಲ್‌ಡೇಮಿ ಅಷ್ಟಪತ್ರ ಆಕಾರದ ೬೪ ಪುಟಗಳು ವಾರ್ಷಿಕ ವರ್ಗಣಿ ೩ ರೂ. ೯ ಆಣೆ ಬಿಡಿಸಂಚಿಕೆಗೆ ೬ ಆಣೆ

ಮ್ಯಾನೇಜರ, "ಸಚಿತ್ರಭಾರತ"
ಶ್ರೀಕೃಷ್ಣ ಪ್ರೆಸ್, ಹುಬಳಿ.

## ಸಾಪ್ತಾಹಿಕ ಹೊಸ ವರ್ತಮಾನಪತ್ರವು

# ಶುಭೋದಯ.

**ತಾ॥ ೨೮-೪-೧೯೧೬ ರಿಂದ ಪ್ರತಿಶುಕ್ರವಾರ ಪ್ರಕಟಿಸಲ್ಪಡುತ್ತಿದೆ**

**ಸಂಪಾದಕ — ಶ್ರೀಯುತ, ವಾಸುದೇವಾಚಾರ್ಯ ಕೆರೂರ**

ಈ ಪತ್ರದಲ್ಲಿ ರಾಜಕೀಯ ಸಾಮಾಜಿಕ, ವ್ಯಾವಹಾರಿಕ ಮುಂತಾದ ಪ್ರಚಲಿತ ವಿಷಯಗಳನ್ನು ಕುರಿತು ಕಾಲ ಕಾಲಕ್ಕೆ ಚರ್ಚಿಸಿ ಕರ್ನಾಟಕದ ವಾಚಕರಲ್ಲಿ ಆಯಾ ವಿಷಯಗಳ ಯಥಾರ್ಥವಾದ ಜ್ಞಾನವನ್ನುಂಟುಮಾಡಲಿಕ್ಕೆ ಮನಃಪೂರ್ವಕವಾಗಿ ಯತ್ನಮಾಡಲ್ಪಡುವದು

ಯುರೋಪದಲ್ಲಿ ಈಗ ನಡೆದಿರುವ ಮಹಾ ಯುದ್ಧದ ಸಾಧಾರವಾದ ವರ್ತಮಾನಗಳನ್ನು ಪ್ರಕಟಿಸುವದಲ್ಲದೆ ಪ್ರಸಂಗವಿಶೇಷಗಳಲ್ಲಿ ಯುದ್ಧದ ವಾರ್ತೆಗಳ ಸಿಂಹಾವಲೋಕನವನ್ನು ಕೂಡ ಸುಸಂಗತವಾಗಿ ಮಾಡುವೆವು

ಸಾಮಾಜಿಕ ಮತ್ತು ಧಾರ್ಮಿಕವಾದ ವಿಷಯಗಳ ಮೇಲೆ ಮಹಾತ್ಮರು ಕೊಟ್ಟ ವ್ಯಾಖ್ಯಾನಗಳನ್ನೂ, ಇಲ್ಲವ ಅಭಿಪ್ರಾಯಗಳನ್ನೂ ಪರಿಶ್ರಮಪಟ್ಟು ಸಂಪಾದಿಸಿ ವಾಚಕರ ಉನ್ನತಿಗಾಗಿ ಈ ಪತ್ರದಲ್ಲಿ ಪ್ರಕಟಿಸುವೆವು

**ಚಂದಾವಿವರ ಅಂಚೆವೆಚ್ಚ ಸಹ**

**ವಾರ್ಷಿಕ ೨—೧೨—೦ ಬಿಡಿಸಂಚಿಕೆಗೆ ೯ ಪೈ**

ಶುಭೋದಯ ಕಾರ್ಯಾಲಯ,
ಧಾರವಾಡ

ಮ್ಯಾನೇಜರ,
ಶುಭೋದಯ.

ಶ್ರೀಃ

ಶ್ರೀ ಅರವಿಂದ ನಾಯಕೀ ಸಮೇತ

ಶ್ರೀರಾಮಾಪ್ರಮೇಯ ಪ್ರಸನ್ನಃ



" ಶ್ರೀವತ್ಸ ಕೌಸ್ತುಭ ರೂಪ |
ವಿಶ್ವಂಭರೋದ್ಧರಣ ದರ್ಶಿತ ಭೂರಿಶೌರ್ಯ ||
ಪ್ರಹ್ಲಾದ ಭಕ್ತಿ ಭರಣಾಯ ಕೃತಾವತಾರ |
ಶ್ರೀಶಾಪ್ರಮೇಯಹರಣ

ಶ್ರೀಃ

ಪ್ರಸೀದತು.

---

ಶ್ರೀ

ಅರವಿಂದ ನಾಯಕೀ ಸಮೇತ

# ಶ್ರೀರಾಮಾಪ್ರಮೇಯ ಪರಬ್ರಹ್ಮಣೇ.

---

ಹನ್ನೆರಡು ವರ್ಷಗಳ ಒಳಗೆ ತನ್ನ ಬಾಲ್ಯದಲ್ಲಿಯೇ ಶ್ರೀ ಪರಂಧಾಮನ
ಪಾದಾರವಿಂದವನ್ನು ಸೇರಿದ ನನ್ನ ಸಹಜಾತ ರಾಮಾಪ್ರಮೇಯ
ಶರ್ಮನ ಚಿರಸ್ಮರಣೆಗಾಗಿ, ಆತನಲ್ಲಿದ್ದ ನಿಜವಾದ
ವಿದ್ಯಾರ್ಥಿ ಲಕ್ಷಣ, ವಿಶ್ವಾಸಗೌರವ, ದೈವ
ಭಕ್ತಿಗಳನ್ನು ನೆನೆನೆನೆಯುತ್ತ ಈ
ಗ್ರಂಥವನ್ನು ಭಗವನ್ನಾಮಾಂ
ಕಿತದಿಂದ

ಇಂದು

ಪ್ರಕಾಶಪಡಿಸಿದೆ

[ಗುರುವಾರ] [ಗ್ರಂಥಕರ್ತೃ]

ಕ್ಯಾಕ್ಸ್ಟರ್ ಪ್ರಿಂಟ್ ಪ್ರೆಸ್



ಶ್ರೀಯುಕ್ತ ಆರಾಮುದಯ್ಯಂಗಾರ್ಯರು, ಬಿ.ಎ., ಬಿ.ಎಲ್



ಶ್ರೀ ಸೌ|| ರಂಗಮ್ಮನವರು.

॥ ಶ್ರೀ ॥

वन्देत्वां भूदेवी आर्यमातरम्

ಕರ್ನಾಟಕ

# ನಂದಿನೀ.

ಸ್ತ್ರೀಯರ ಸ್ವರ್ಗೀಯ ಸೌಜನ್ಯಾಭಿವೃದ್ಧಿಗಾಗಿ ಸ್ತ್ರೀಯರಿಂದಲೇ ಪ್ರಕಟವಾಗುತ್ತಿರುವ

## ಮಾಸಪತ್ರಿಕೆ

" ಸಿದ್ಧಿಂ ಸರ್ವಾಣಿ ಭೂತಾನಿ, ಭೂತಾನಾಂ ಚೈವಯ ಪ್ರಭು ॥
ಪಾಸ್ಯನ್ತಿ ಮಮಯೇ ಲಾಸ್ಕೇತ್ಯದ್ದೃಷ್ಟ್ವಾ ಸಧಿಗೋಚರಾ ॥ "

ಸಂಪುಟ ೧ { ಪಿಂಗಳ-ವೈಶಾಖ ೧೮೩೯ ✤ ೧೯೧ ಮೇ } ಸಂಚಿಕೆ ೮

## ಪ್ರಾರ್ಥನೆ

( ಶ್ರೀ ಭುವನಯ ಇಂದುಸೋದರೀ )

ಅಪ್ರಮೇಯ, ಎನ್ನಪಾಲಿಸೈ — ಅಪ್ಪ ನಿನ್ನ ಪದವ ನಂಬಿರ್ಪೆ ಲಾಲಿಸೈ ॥
ಸರ್ಪಶಯನ ಕಂದರ್ಪಜನಕ — ಕೃಪೆಯ ತೋರಿಸೀಗ ಎನ್ನ-ತಪ್ಪುಗಳನು
ಒಪ್ಪಿಸಿರುವೆ ಒಪ್ಪದಿಂದ ಮನ್ನಿಸಿಂದು । ಅಪ್ರಮೇಯ ॥

ಕರಿಯು ಬಾಧೆಯನ್ನು ಬಿಡಿಸದೆ — ಕರುಗ್ಗಿಗಂದು ಕರುಣದಿಂದ ತವವನೀಡಿದೆ ॥
ಕರೆಯೆ ಕಂಭದಿಂದ ಬಂದು, ದುರುಳದೈತ್ಯನನ್ನು ಕೊಂದು — ತರಳನನ್ನು ಪೊರೆದೆ
ಯೆಂದು — ಶರಣುಹೊಕ್ಕೆ, ದೀನಬಂಧು ಅಪ್ರ । ೧ । ರಾಜೇಂದ್ರ ಪುರವ
ರಾಧಿಪ — ರಾಜರಾಜ, ಮಾಜದೆನ್ನ ಮೊರೆಯ ಕೇಳುತ ॥ ಸುಜನಪಾಲ ನಿನ್ನ ಪದವ,
ಭಜಿಸ್ಯೈಯ್ಯ ವಿಮಲಮತಿಯ — ಭುಜಗಶಯನ ಪಾಲಿಸೆಂದೆ — ತ್ರಿಜಗವಂದಿತ ಭಜಿಸ
ಲ್ಕೆ ॥ ಅಪ್ರಮೇಯ ॥ ೨ ॥

# ಮಕ್ಕಳ ಗೋಳು.

(ಕವಿತೆ)

ಮನವೊಲ್ಪು ನಿನ್ನ ಸುತರಂ ।
ವನಾಂತರಕ್ಕಟ್ಟಿ ಸವತಿ ಮಕ್ಕಳ ಬಲ್ಲಾ— ।
ಳ್ತನದಿಂ ಬೆರಗಪ್ಪುತೆ ಮು
ನ್ನಿನ ಕದ್ರುವೆ ನಿನಗೆ ತನಯುಳಾಗಿರೆ ಪೇಳಾ? ॥ ೧ ॥
ದೂರೀಕರಿಸಿದೆ ಯುಗಾಗರ—
ನಾರಯ್ಯದೆ ನಾಡೆ ಮಾತೃಸೇವಾ ಪರರಂ ।
ಸಾರಾಸಾರವನರಿಯದ—
ಮಾರಿಯು ಪಡೆಗೆಂತು ಪೊತ್ತುನಿತ್ತರಿಸಿದಪಯ್? ॥ ೨ ॥
ಕಂದಯ್ ವಿಯೋಗವುಂ ನೀ—
ನೊಂದಿದರ್ ತಂದೆ-ಮಕ್ಕಳ ಬೇರ್ಪಡಿಸ— ।
ಲ್ಕಂದಿನ ಕೈಕೇಗೆ. ವಿಟಾಂ
ಬಂದಿನ ನೀನಾಗಿ ನಾಡೆ ಮೂಗೆದಿರ್ತೋಳ್ವಂ ! ॥ ೩ ॥
ಕುರುಡರೆ? ಕಿವುಡರೆ? ಪೆಳವರೆ?-
ಮರುಳರೆ? ನೀಂ ಪಡೆದ ಸುತರದೇಂ-ಪೇಳಿಗಳೇ? ॥
ಶ್ವರಮುಂ ದಾಂಟಿಸಿ ಯುಟ್ಟದೆ
ಯುರಗ್ಯಾಕಾಕ್ಕೈಕೆ ನಿನಗೆ ಸಮಜಾತೆಗಡಂ ! ॥ ೪ ॥
ನಾಡಂ ಬಿಟ್ಟಣುಗರ ಮಾ--
ತಾಡದಿರಲ್ ಸವತಿ ಮಕ್ಕಳಂ ಪೋಷಿಸಿ ಕೊಂ— ।
ಡಾಡಲ್ ಕೈಕೆಗೆ ನೀನೊಡ—
ನಾಡಿದೊ-ಮುತ್ತಟ್ಟಿಯುಲ್ಲದಟ್ಟಿಯೊ-ಮಗಳೋ! ॥ ೫ ॥
ಬಸಿರೊಳಗೆ ಬಂದ ಮಕ್ಕಳ್—
ನೊಸೆದೋಡಿಸಿ ಸವತಿ ಮಕ್ಕಳಂ ಧರ್ಮದೆ ಪೋ—

ಪಿಸುಣಗುಣಂ ನಿನಗುಚಿತಂ ।
ಪುಸಿಯಲ್ಲಂ ನೀನೇ ಸುರುಚಿ ಗಟ್ಟಿಕೆಯೊ ಗಡಂ ! ॥ ೬ ॥
ಸಮಯಕ್ಕೆ ತಕ್ಕ ಸೇವೆಯ—
ನಮರ್ಚದಾಂ ನಾಡನುಳಿದು ದೇಸಿಗರಪ್ಪಂ—
ತೆಮಗೊಸೆದಿರ್ದೊಡೆ ನೀಂ ತಾ—
ಯು ಮಲ್ಲೆಯಾವಂತು ನಿನಗೆ ಮಕ್ಕಳು ಮಲ್ಲೆಂ ॥ ೭ ॥
ತಣ್ಣನೆ ತಾಯ್ಮಂ ಕಾ
ಕಣ್ಣರಿಕೆಯ ತಿಣ್ಣಮಾಗೆ ತಪ್ಪಿಲಿಯೆಂತಂ—
ತುಣ್ಣದೆ ಪೇಳಿಗೆ ಮಯ್ಯಂ—
ಸಣ್ಣಿಸಿದೆಂ ಪಾಪಿಯೆಂ-ಸದಾಶಿವತಂಭೋ ! ॥ ೮ ॥

(ಶಿಗಬ)

## ಅಭಿಪ್ರಾಯವು ಬೇಕು

ಬಂಧುಭಗಿನಿಯರೇ !

ನಂದಿನಿಯಲ್ಲಿ ಕಂದಪದ್ಯಗಳನ್ನು ಮತ್ತು ಹಾಡುಗಳನ್ನು ಪ್ರಕಟಿಸಬೇಕಾದ ಅಗತ್ಯವಿಲ್ಲೆಂದು ಕೆಲವರೂ, ಗದ್ಯಭಾಗವನ್ನವಲೋಕಿಸಿದ ಮನಸ್ಸಿಗೆ ಕವಿತೆಯಿದ್ದರೆ ಉತ್ಸಾಹವುಂಟಾಗುವುದಾದುದರಿಂದ ಅವು ಪ್ರತಿಸಂಚಿಕೆಯಲ್ಲಿಯೂ ತಕ್ಕಷ್ಟು ಬರುತ್ತಿರಬೇಕೆಂದು ಮತ್ತೆ ಕೆಲವರೂ ನಮಗೆ ಹೇಳುತ್ತಿರುವರು ಆದರೆ, ಆ ಸ್ವಲ್ಪಮಂದಿಗಳ ಅಭಿಪ್ರಾಯದ ಮೇಲಿಂದಲೇ ನಾವು ಯಾವುದನ್ನೂ ನಿರ್ಧರಿಸಲಾರೆವಾದುದರಿಂದ, ಈ ವಿಷಯದಲ್ಲಿ ನಂದಿನಿಯು ಅವುದನ್ನು ಅನುಮೋದಿಸಬೇಕೆಂಬುದಕ್ಕೆ ನಮ್ಮ ನಂದಿನಿಯ ಗ್ರಾಹಕ-ವಾಚಕ ಮತ್ತು ಪ್ರೋತ್ಸಾಹಕ ವರ್ಗಕ್ಕೆ ಸೇರಿದ ಬಂಧುಭಗಿನಿಯರು ತಪ್ಪದೆ ತಮ ತಮಗೆ ತೋರಿದ ಅಭಿಪ್ರಾಯವನ್ನು ಪತ್ರಮುಖದಿಂದ ತಿಳುಹಬೇಕೆಂದು ಕೋರುತ್ತಿರುವೆವು

( ಸಂ ನಂ. )

## (ಮಳೂರು) ಶ್ರೀರಾಮಾಪ್ರಮೇಯಸ್ವಾಮಿಯ

# ರಥೋತ್ಸವ.

ಬೆಂಗಳೂರು ಡಿ|| ಚನ್ನಪಟ್ಟಣದ ತಾಲ್ಲೂಕು, "ದೊಡ್ಡ ಮಳೂರು" ಎಂಬ ಪುಣ್ಯಸ್ಥಳವು ಬಹುಪುರಾತನವೂ ಪುರಾಣಪ್ರಸಿದ್ಧವೂ ಆಗಿದೆ. ಇದನ್ನು ರಾಜೇಂದ್ರನೆಂಬ ರಾಜನು (ಸಾರಂಗಧರನ ತಂದೆ) ಆಳುತ್ತಿದ್ದನೆಂದೂ, ಈ ರಾಜನಿಂದ ಪರಿಪಾಲಿತವಾದ ಈ ಸ್ಥಳಕ್ಕೆ "ರಾಜೇಂದ್ರಪುರ"ವೆಂಬ ಹೆಸರು ಬಂದಿತ್ತೆಂದೂ, ಇಲ್ಲಿಯ ಬಹುಪುರಾತನ ಮೂರ್ತಿಯಾಗಿರುವ ಶ್ರೀರಾಮಾಪ್ರಮೇಯಸ್ವಾಮಿಯನ್ನು ಮಹರ್ಷಿ ಕಣ್ವರು ಆರಾಧಿಸುತ್ತಿದ್ದರೆಂದೂ ಇಲ್ಲಿರುವ ತೊರೆಗೆ "ಕಣ್ವಾನದಿ"ಯೆಂಬ ಹೆಸರಿರುವದೆಂದೂ ತಿಳಿಯುತ್ತದೆ *

ಈ ಮಳೂರು ಶ್ರೀರಾಮಾಪ್ರಮೇಯಸ್ವಾಮಿಯ ರಥೋತ್ಸವವು ಇದೇ ತಿಂಗಳ ೪ರಲ್ಲಿ [ಪಿಂಗಳ-ವೈಶಾಖಶುದ್ಧ ದ್ವಾದಶೀ ಶುಕ್ರವಾರ] ಸಂಭ್ರಮದಿಂದ ನೆರವೇರಿತು. ಸ್ವಾಮಿಸಂದರ್ಶನಾರ್ಥವಾಗಿ ಸಾಸಿರ ಗಟ್ಟಲೆಯಿಂದ ಜನರು ಬಂದು ಸೇರಿದ್ದರು. ಈ ಸ್ವಾಮಿಯು ಸಂಪಾದಿಕೆಯ ಪಿತೃಗೃಹಕ್ಕೆ ಇಷ್ಟದೇವತೆಯಾಗಿರುವುದರಿಂದಲೂ, ಈ ಸ್ವಾಮಿಯು ಆಗಿಗಾಗಿ ಸ್ವಪ್ನದ್ವಾರಾ ಸಂದರ್ಶನಲಾಭವನ್ನಿತ್ತು ಸೇವೆಗೆ ಬರುವಂತೆ ಪ್ರೇರಿಸಿದುದರಿಂದಲೂ, ಸಂಪಾದಿಕೆಗೂ ರಥೋತ್ಸವವನ್ನು ನೋಡಿಬರುವ ಯೋಗವು ದೊರೆತುದು. ಈ ಸಂದರ್ಭದಲ್ಲಿಯೇ ಅಲ್ಲಿಯ ಕೆಲಕೆಲವು ಸ್ಥಳಮಾಹಾತ್ಮ್ಯಗಳನ್ನು ಕೇಳಿ-ನೋಡಿ-

* ಈ ರಾಜೇಂದ್ರಪುರದ ಸ್ಥಳಪುರಾಣವನ್ನು ಮುದ್ರಿಸಿ ಪ್ರಚಾರಕ್ಕೆ ತರಬೇಕೆಂದು ನಮಗೆ ದೈವಪ್ರೇರಣೆಯೂ, ಹಿರಿಯರ ಆಜ್ಞೆಯೂ, ಅಲ್ಲಿಯವರ ಪ್ರೋತ್ಸಾಹವಾಕ್ಯಗಳೂ ದೊರೆತಿರುವುದರಿಂದ ಸ್ಥಳಪುರಾಣದ ಸಂಸ್ಕೃತ ಪ್ರತಿಯನ್ನು ಪರಿಷ್ಕರಿಸುವುದಕ್ಕೆ ಮತ್ತು ಕನ್ನಡಿಸುವುದಕ್ಕೆ ಸಹ ಪಂಡಿತರ ವಶದಲ್ಲಿ ಒಪ್ಪಿಸಿರುತ್ತೇವೆ. ಸಾಧ್ಯವಾದಷ್ಟು ಜಾಗ್ರತೆಯಾಗಿ ಅದನ್ನು ಪ್ರತ್ಯೇಕ ಮುದ್ರಿಸಿ ಪ್ರಕಾಶಕ್ಕೆ ತರುತ್ತೇವೆ.
( ಸಂ ನಂ )

ತಿಳಿದುಕೊಳ್ಳುವುದೂ, ಅಲ್ಲಿಯ ರಮ್ಯಮಹಾತ್ಮ್ಯಗಳನ್ನು ಬೋಧಿಸುವ ಪವಿತ್ರ ಸ್ಥಳಪುರಾಣಗ್ರಂಥವನ್ನು ಮತ್ತು ಇತರ ಕರ್ಣಾಟಕ ಗ್ರಂಥಗಳ ಹಸ್ತಪ್ರತಿಯನ್ನು ಸಹ ಸಂಗ್ರಹಿಸುವುದೂ ಆವಶ್ಯಕವಾಗಿ ತೋರಿತು. ಈ ವ್ಯಾಜದಿಂದ ಒಂದು ವಾರದವರೆಗೆ ಅಲ್ಲಿ ಶ್ರೀ ಸ್ವಾಮಿ ಸಂದರ್ಶನದ ಸೌಭಾಗ್ಯವಿಶೇಷವು ನಮಗೆ ಲಾಭವಾಯಿತು. ಶ್ರೀ ಸ್ವಾಮಿಕೃಪೆಯಿಂದ ಅಲ್ಲಿ ಮಾಡಬೇಕೆಂದಿದ್ದ ಕೆಲಸಗಳು ಸುಮುಖವಾಗಿಸಿದ್ಧಿಸುವುವೆಂಬ ಶುಭಸೂಚನೆಗಳೂನಮಗಲ್ಲಿ ತೋರಿಬಂದುವು.

ಈ ಪುಣ್ಯಕ್ಷೇತ್ರದ ಮತ್ತು ಕ್ಷೇತ್ರಾಧಿನಾಥನಾದ ಶ್ರೀಸ್ವಾಮಿಯ ವಿಷಯವಾಗಿ ನಾವು ಇನ್ನೂ ವಿಸ್ತಾರವಾಗಿ ಬರೆಯಬೇಕೆಂದಿದ್ದರೂ, ಅಲ್ಲಿಯ ಸ್ಥಳಪುರಾಣವನ್ನು ಪ್ರತ್ಯೇಕ ಪ್ರಕಟಿಸುವ ಉದ್ದೇಶವಿದ್ದು ಅದಕ್ಕಾಗಿ ಬೇಕಾಗುವ ಆ ಕ್ಷೇತ್ರದ ಮತ್ತು ದೇವಸ್ಥಾನದ ನಕ್ಷೆಗಳನ್ನೂ ಇನ್ನೂ ಇತರ ಚರಿತ್ರಾರ್ಹವಾದ ವಿಷಯಗಳನ್ನು ಶೇಖರಿಸಲು ಪ್ರಯತ್ನಿಸಿರುತ್ತೇವೆ ಅವು ಕೈಕೂಡಿತೆಂದರೆ ಒಡನೆಯೇ ಪುಸ್ತಕವನ್ನು ಸಂಸ್ಕೃತ ಮತ್ತು ಕನ್ನಡ ಭಾಷೆಗಳಿಂದ ಪ್ರಕಾಶಕ್ಕೆ ತರುತ್ತೇವೆ

ಪ್ರಕೃತದಲ್ಲಿ,— ನಮಗಾದ ಉತ್ಸವಸಂದರ್ಶನದ ಆನಂದ ಲಾಭದಲ್ಲಿ ಅಷ್ಟುಪತ್ಯಾಗಿ, ನಮ್ಮ ಬಂಧುಭಗಿನಿಯರಿಗೂ ಉಂಟುಮಾಡಬೇಕೆಂಬ ಆಶೆಯಿಂದ ಇಂದು ಉತ್ಸವಾಭಿಮುಖನಾಗಿ ನಿಂತಿರುವ ಸ್ವಾಮಿಯ ಚಿತ್ರವನ್ನು ಇಲ್ಲಿ ಪ್ರಕಟಗೊಳಿಸಿರುವೆವಲ್ಲದೆ, ಶ್ರೀಸ್ವಾಮಿ ಸಂದರ್ಶನದಿಂದಾಗುವ ಆನಂದದಿಂದ ನಂದಿಸಿಯ ಈ ಕಾಲವಿಳಂಬದ ದೋಷವನ್ನು ಮನ್ನಿಸಿ, ಅಭಿನಂದಿಸುವರೆಂದೂ ನಂಬಿರುವೆವು

———

## ಸ್ವೈರ ವಿಚಾರ

ಪ್ರಸಂಗವಶಾತ್ ಒಂದು ಅಡವಿಯಲ್ಲಿ ಪಡ (ಬಂಜರು) ಬಿದ್ದ ಕೆಲವು ನಂಬರುಗಳನ್ನು ಕಂಡೆನು. ದಾರಿಯೊಳಗೇ ಒಂದು ಜಾಲೀ ಮರವಿದ್ದಿತು. ಅದರಿಂದ ದೂರದಲ್ಲಿ ಬಿದ್ದ ನೆಳಲೊಳಗೆ ಕೂತು ವಿಶ್ರಮಿಸಿ ಅತ್ತಿತ್ತ ನೋಡತೊಡಗಿದೆನು. ಹತ್ತಿರವೇ ಒಂದು ಆಡು ಓಡಾಡುತ್ತಿತ್ತು. ಸಾಗುವಳಿಯಾದ ಹೊಲಗದ್ದೆಗಳೂ ಹಣ್ಣುಹೂವಿನ ಗಿಡಗಳೂ ಎಲ್ಲಿಯೂ ಕಾಣಲಿಲ್ಲ. ಒಬ್ಬನೇ ಒಬ್ಬ ತರತರದ ವಿಚಾರಗಳು ಬರಲಾರಂಭಿಸಿದವು. ಹತ್ತರ ಬಿದ್ದಿರುವ ಒಂದು ಕಟ್ಟಿಗೆಯಿಂದ ನೆಲವನ್ನು ಕೆದರುತ್ತ ಮತ್ತೂ ವಿಚಾರಮಗ್ನನಾದೆನು. ಕೈಗೆ ಒಂದು ಜೇಕಿನಗಡ್ಡೆ ಸಿಕ್ಕಿತು. ಅದನ್ನು ಚಿವುಟುತ್ತ ಮೂಸಿ ನೋಡುತ್ತ ವಿಚಾರಿಸಿದೆನು. "ಈ ನಂಬರಗಳು ಒಳ್ಳೆಯವು ಕಾಣಿಸುತ್ತವೆ. ಹೊಡೆದು ಹಸನ ಮಾಡಿದರೆ, ಗೋದಿ ಜೋಳ ತೊಗರಿ ಬತ್ತ ಮುಂತಾದ ಧಾನ್ಯಗಳೂ ಹಲಸು ಮಾವು ಮೊದಲಾದ ಮರಗಳೂ ಗುಲಾಬಿ ಸಂಪಿಗೆ ಬಟ್ಟಲು ಮಲ್ಲಿಗೆ ಪವಮಾದಿ ಸುಗಂಧ ಗಿಡಬಳ್ಳಿಗಳೂ, ನೀರಿನ ಆಸರ ಮಾಡಿದರೆ ಅಡಕೆ ತೆಂಗು ಎಲೆವಳ್ಳಿಗಳೂ ಬರಬಹುದು. ಒಕ್ಕಲಿಗರು ಎಷ್ಟು ಕೈಲಾಗದವರು? ಅವರಿಗೆ ವಿಚಾರವೇ ಹರಿಯುವದಿಲ್ಲ. ಮಾಡಿದರೆ ಬೇಕಾದುದಾಗುವದು. ಸುಮ್ಮನೆ ಪಡಗೆಡವಿರುವರು."

ಅಷ್ಟರಲ್ಲಿ ಆ ಆಡು ಮೇಯುತ್ತ ಮೇಯುತ್ತ ಬಂದು ಮೈದಡವಿತು. ಅದರ ಕಡೆ ತಿರುಗಿ ನೋಡಿದೆನು. "ಪಾಪ, ನಿರುಪದ್ರವಿ!! ಇಂಥಹದನ್ನು ಕೆಲಜನರು ಆಹಾರವೆಂದು ಸ್ವತ್ವವನ್ನು ಸ್ಥಾಪಿಸಿ ಕೊಂದು ತಿಂದು ಬಿಡುತ್ತಾರೆ." ಆಡು ಗಪಗಪ ತಿನ್ನುವದರೊಳಗೆ ಜಾಲೀಕಾಯಿ ಬಾಯಿಂದ ಕಳಚಿತು. ಜಾಲೀಗಿಡವು ಮತ್ತೆ ನೆನಪಾಯಿತು. ಎಂಥ ಗಿಡ, ಎಷ್ಟು ಮುಳ್ಳು, ನೆಳಲಲ್ಲಿ ಕೂಡುವದಕ್ಕೂ ಭಯ, ಎನ್ನುತ್ತ ಕೈಯೊಳಗಿನ ಜೇಕಿನ ಗಡ್ಡೆಯನ್ನು ಪುನಃ

ಆಘ್ರಾಣಿಸಿ " ಬುಕ್ಕಿಟ್ಟಿಗಾರರಾದರೂ ಇತ್ತ ಬರಬಾರದೇ? ಬುಟ್ಟಿ
ಗಟ್ಟಲೆ ಬೇಕಿನಗಡ್ಡೆಗಳು ಸಿಕ್ಕುತ್ತಿವೆ ಅಷ್ಟಗಂಧ ಬುಕ್ಕಿಟ್ಟು ಮಾಡ
ಲಿಕ್ಕೆ ಎಷ್ಟು ಅನುಕೂಲ ಬುಕ್ಕಿಟ್ಟೇ ಏಕೆ, ಈ ಜಾಲೇಮರದಿಂ
ದೂ ಹಸನಾದ ಕಟ್ಟಿಗೆ ತೊರದಬಹುದು ಬಡಿಗರು ಬೇಕು ಈ
ಆಡನ್ನು ಕೊಲ್ಲುತ್ತಾರಲ್ಲ! ಉಪಾಯವಿಲ್ಲ ಅದರ ಕರುಳುಗಳ
ನ್ನಾದರೂ ಕಾಯ್ದಿಟ್ಟರೆ ಬೇವು ಎಂಬ ತಂತಿಗಳಾಗುತ್ತವೆ ಜಾಲಿಯ
ಕಟ್ಟಿಗೆಯನ್ನೂ ಉತಗೊರೆದಿನಿಂದ ನುಣುಪು ಮಾಡಿ ಪಿಟೀಲನ್ನು
ಮಾಡಬಹುದು. ಬೇವು ಬಿಗಿದು ಕಿವೀ ತಿರುವಿದರೆ ಸುಸ್ವರವಾಗು
ವದು ಈ ಹೂದೋಟದಲ್ಲಿ ಕೂತು ಎಲೆಯಡಕೆ ಹಾಕಿಕೊಂಡು
ಬುಕ್ಕಿಟ್ಟು ಹಚ್ಚಿಕೊಂಡು ಪಿಟೀಲಿನ ನಾದ ಕೇಳಿದರೆ ಹೇಗಾದೀತು!
ಬಹಳ ಒಳ್ಳೇಯದಾದೀತು, ಎಷ್ಟು ಸೊಗಸಾದೀತು ಒಹಾರು!

ತಟ್ಟನೆ ನೆನಪಾಯಿತು ಎಷ್ಟು ಹೊತ್ತು ವಿಚಾರಮಗ್ನನಾದೆ,
ಬಿಸಿಲಾಯಿತು. ಮುಂದಿನ ಹಳ್ಳಿಯು ಇನ್ನೂ ದೂರವಿದೆ. ಎಂದು
ಹೊರಟೆನು ನಡೆಯುತ್ತ ಮತ್ತೆ ವಿಚಾರಿಸಿದೆನು ನಾನೆಲ್ಲ ಮನ
ಸಿನಲ್ಲಿ ಮುಂದಿಗೆ ಮಾಡಿದೆನು, ಗೋದಿ ರೊಕ್ಕ ಕೊಡುವವರಾರು!
ನಮ್ಮಲ್ಲೇನು ಅರ್ಥಸಾಧಕ ಸಭೆಯಿರುವದೇ? ಲೋಕಹಿತೈಕಬುದ್ಧಿ
ಯ ದಿವಾನರಿರುವರೇ? ಸನ್ಮಂತ್ರಿಯುಪದೇಶದಂತೆ ನಡೆದು ಪ್ರಜಾಕ
ಲ್ಯಾಣೈಕದಕ್ಷನಾದ ಧೊರೆ ಇರುವನೇ? ಇರಲಿ, ಅವಿಲ್ಲದಿರಲಿ, ನಾವು
ನಮ್ಮ ಸ್ವಂತ ಪ್ರಯತ್ನದಿಂದ ನಮ್ಮನ್ನು ನಮ್ಮ ಸುತ್ತುಮುತ್ತಲಿನ
ಜನರನ್ನೂ ಸುಧಾರಿಸಿಕೊಂಡು ಕಾಲವನ್ನು ಸಾರ್ಥಕ ಮಾಡುತ್ತಿದ್ದೇ
ವೆಯೆ? ನಮ್ಮ ನೆರೆಹೊರೆಯ ಜೀನ ಸಾಹುಕಾರರಿಗೆ ಬುದ್ಧಿ ಹುಟ್ಟಿ
ದರೆ ಎಷ್ಟು ಜನರಿಗೆ ಹಿತವಾದೀತು? ನಮ್ಮೊಳಗಿನ ಹುಂಬರು ಸತ್ಕಾ
ರ್ಯದಲ್ಲಿ ಮೈಮುರಿದು ದುಡಿಯುವಂತೆ ಮಾಡಿದರೆ ಹೇಗಾದೀತು!
" ಕುಂಯಿ ಕುಂಯಿ " ಎಂದು ಬೆಕ್ಕಿನಮರಿಯಂತೆ ಓಡಾಡುವ ಹು
ಡುಗರು ದಕ್ಷಿಣ ದೇಶಕ್ಕೆ ಹೋಗಿ ಗವಯಿಗಳಾಗಿ ಬಂದರೆ, ನಾವು
ನಮ್ಮ ಪ್ರತಿಭಾ ಶಕ್ತಿಯನ್ನೂ ಯೋಗ್ಯವಾಗಿ ವಿರಾಮವಿಲ್ಲದೆ ಸತ್ಕಾ

ತ್ರದಲ್ಲಿ ವೆಚ್ಚ ಮಾಡುತ್ತಿದ್ದರೆ ಹೇಗಾದೀತು? ಮನುಷ್ಯನಿಗೆ ತನ್ನ ದೋಷಗಳು ತನಗೆ ಕಾಣುವದಿಲ್ಲ ಇವನನ್ನು ಹಿಡಿದು ಯೋಗ್ಯ ಕಾರ್ಯದಲ್ಲಿ ಯೋಜಿಸುವವರೂ ಇಲ್ಲ! ತೀರಿತು

नीतिज्ञा नियतिज्ञा वेदज्ञा अपिभवाति शास्त्रज्ञा. ॥
ब्रह्मज्ञा अपिलभ्याः स्वाज्ञान ज्ञानिनो विरलाः ॥
अमन्त्रमक्षरन्नास्ति नास्ति मूलमनौषधम् ॥
अयौग्य पुरुषोनास्ति योजकस्तत्र दुर्लभ· ॥

ಇಷ್ಟು ವಿಚಾರ ಮಾಡುತ್ತ ನಡೆಯುವದರೊಳಗೆ ಉದ್ದಿಷ್ಟ ಹಳ್ಳಿಯು ಬಂದಿತು ಹಳ್ಳಿಯಲ್ಲಿ ಕೂತು ದಾರಿಯಲ್ಲಿ ಬಂದ ಸ್ವೈರವಿಚಾರವನ್ನು ಸಂದಿಸಿಯು ಮುಂದೆ ತಂದು ಚೆಲ್ಲಿರುವೆನು

ಮತ್ತೆ " ಯಥಾಪೂರ್ವಮಕಲ್ಪಯತ್ "

(ಕಾವ್ಯಾನಂದ)

| ಶ್ರೀ |

# ಭಾರತ ಮಹಿಳಾ ಸಮಾಜ.

( The condition of woman in India )

[*From B C 5000 to A D 1917*]

(1)

ಮಹಿಳಾ ಸೃಷ್ಟಿಗೆ ಪೂರ್ವದಲ್ಲಿ ಈ ಧರಿತ್ರಿಯು ಪಾಡೇನಾಗಿದ್ದಿರಬಹುದು? ವಿಹಾರವನವು ಅರಣ್ಯದಂತೆ ಕಂಡುಬಂದಿದ್ದಿತು ಎಲ್ಲೆಲ್ಲಿಯೂ ದುಃಖಧರಿತ್ರಿಯ ನಿವಾಸಿಕನಾದ ಮಾನವನು ಚಿಂತಿಸುತ್ತಿದ್ದನು ಎಷ್ಟು ಕಾಲ ಚಿಂತಿಸಿದನು? ಮಹಿಳೆ ಬರುವವರೆಗೆ!

—'The world was sad-the garden was a wild
And man the hermit sighed-tell women smiled
—Campbell"

ಮಹಿಳೆ ಬಂದಳು ಮಾನವ ಸಮಾಜದಲ್ಲಿ ಸ್ವರ್ಗರಾಜ್ಯವು ಪ್ರತಿಷ್ಠಿತವಾಯಿತು. ಜೀವನವನ್ನು ಉನ್ನತಸ್ಥಿತಿಗೆ ತರಲು ಎಲ್ಲರೂ ಪ್ರಯತ್ನಿಸಹತ್ತಿದರು ಸೌಂದರ್ಯವೂ ಧರಿತ್ರಿಯಲ್ಲಿ ಉಂಟಾಯಿತು. ಸೌಂದರ್ಯವು ಎಲ್ಲರನ್ನೂ ಈಗ ಮುಗ್ಧ ಮಾಡುತ್ತಿದ್ದಂತೆ ಆಗಲೂ ಮಾಡುತ್ತಿದ್ದಿತು ಇದಕ್ಕೆ ಉದಾಹರಣೆಯೆಂದರೆ— ಅಹಲ್ಯಾ ಮತ್ತು ಇಂದ್ರದೇವ. ಆದರೆ ಇಂತಹ ಕುನಡತೆ ಈಗಿನಷ್ಟು ಆಗ ಆಚರಣೆಯಲ್ಲಿರಲಿಲ್ಲ ಏಕೆಂದರೆ, ಆಗಿನ ಮಹಿಳೆಯರು ಗೃಹರಾಜ್ಯ ಪಾಲನೆಯಲ್ಲಿ ಸಮರ್ಥೆಯರಾಗಿದ್ದರು. ತಮ್ಮ ಪತಿಗಳು ಕೆಟ್ಟ ನಡತೆಗೆ ಕಾಲಿಟ್ಟರೆ ಅದನ್ನವರು ತಿದ್ದುವುದಕ್ಕೂ ಅಂತಹರನ್ನು ತಿರಸ್ಕರಿಸಿಯಾದರೂ ಒಳ್ಳೆಯ ನಡತೆಗೆ ತರುವುದಕ್ಕೂ ಭಾರತಮಹಿಳೆಯರು ದಕ್ಷರಾಗಿದ್ದರು ಏಕೆಂದರೆ, ಅವರು ಪತಿಯೇ ಪರಮ ದೈವವೆಂದು ಭಾವಿಸುತ್ತಿದ್ದರು. ಪತಿಯು ಪರದೈವವಾಗದೇಕಾದರೆ ಸರ್ವವಿಧದ

ಲ್ಲಿಯೂ ಸಮಸ್ತ ಸದ್ಗುಣಗಳಲ್ಲಿಯೂ ಆತನು ಸಂಪನ್ನನಾಗಿರಬೇಕೆಂಬ ದೃಢಭಾವನೆಯು ಅವರಲ್ಲಿದ್ದಿತು, ಪತಿಯನ್ನು ಸಮರ್ಥನನ್ನಾಗಿ ಮಾಡುವುದೇ ತನ್ನ ಮುಖ್ಯ ಕರ್ತವ್ಯವೆಂಬುದು ಮಹಿಳೆಯ ನಂಬಿಕೆ! ಆ ತನ್ನ ಕರ್ತವ್ಯವನ್ನು ಅವರು ಸರ್ವಪ್ರಯತ್ನದಿಂದಲೂ ಅನೂನವಾಗಿ ನಡೆಯಿಸಿಕೊಂಡು ಬರುತ್ತಿದ್ದರು ಅದಕ್ಕಾಗಿ ಅವರೆಲ್ಲರಿಗೂ ಆಗ ವಿದ್ಯೆ ಕೊಡಲ್ಪಡುತ್ತಿದ್ದಿತು. ಆ ವಿದ್ಯೆ ಈಗಿನವರಿಗೆ ಕೊಡುತ್ತಿರುವ ಗಂಡಸರ ಧನಾರ್ಜನೆಯ ವಿದ್ಯೆಯಲ್ಲ ಅದು ಬೇರೆ ಒಂದು ವಿದ್ಯೆ ಮಾನವ ಸಂತಾನವು ಆವಾವ ಮನೋವೃತ್ತಿಗಳಿಂದ ಕೂಡಿ ಜನ್ಮ ಗ್ರಹಣ ಮಾಡಿರುವುದೋ ಅಂಥಹ ಹುಟ್ಟು ಮನೋವೃತ್ತಿಗಳನ್ನು ಬಿಟ್ಟಿರಲು ಮಾನವನಿಂದಾದೀತೇ? ಅದು ಮಾನವಶಕ್ತಿಗೆ ಮೀರಿದುದು ಇದನ್ನು ನಮ್ಮ ಪೂರ್ವಜರಾದ ಮಹಿಳೆಯರು ನಂಬಿದ್ದರು ಆದುದರಿಂದಲೇ ಅವರು ಅವರ ಮಹಿಳೆಯರಿಗೆ ಕೇವಲ ಉದರಪೋಷಣೆಯ ವಿದ್ಯೆಯನ್ನು ಕಲಿಸದೆ ಮಹಿಳೆಗೆ ತಕ್ಕ ವಿದ್ಯೆಯನ್ನು ಕಲಿಸುತ್ತಿದ್ದರು. ಮಹಿಳೆಯರು ಸಂತಾನಪಾಲನದಲ್ಲಿಯೂ ಗೃಹಕಾರ್ಯ ನಿರ್ವಹಣದಲ್ಲಿಯೂ ಅಧಿಕ ಆಸಕ್ತಿಯನ್ನು ತೋರಿಸುತ್ತಾರೆ ಆದುದರಿಂದ ಅಂತಹ ವಿದ್ಯೆಯೇ ಅವರಿಗೆ ಕೊಡಲ್ಪಟ್ಟಿದ್ದಿತು. ಇಂತಹ ವಿದ್ಯೆಯಲ್ಲಿ ಉತ್ತೀರ್ಣೆಯರಾದ ಮಹಿಳೆಯರೆಂದರೆ—'ಭಾರತಿದೇವಿ' 'ದ್ರೌಪದೀದೇವಿ' ... . ...... ಮೊದಲಾದವರು ಆದುದರಿಂದಲೇ ಪೂರ್ವಕಾಲದಲ್ಲಿ ಅಷ್ಟು ಸಂತೋಷವು ನಮ್ಮವರ ಗೃಹಗಳಲ್ಲಿದ್ದಿತು ಪೂರ್ವದ ಸ್ತ್ರೀಪುರುಷರೆಲ್ಲರೂ ಸುಶಿಕ್ಷಿತರಾಗಿದ್ದರು ಸುಶಿಕ್ಷಿತರಾದ ದಂಪತಿಗಳೀರ್ವರು ಸೇರಿ ಪರಸ್ಪರ ಶ್ರದ್ಧಾಭಕ್ತಿ ಸಂಪನ್ನರಾಗಿ ಪರಸ್ಪರ ಮಂಗಳಭಾವವನ್ನು ಆದಾನ-ಪ್ರದಾನ ಮಾಡುತ್ತ ಜೀವನಯಾಪನೆಯನ್ನು ಮಾಡುತ್ತಿದ್ದರು ಚಿರಸ್ಥಾಯಿಯಾದ ಶಾಂತಿ, ಸರ್ವತ್ರ ನೆಲೆಗೊಂಡಿದ್ದುದರಿಂದ ಸಮಾಜವು ಏಳಿಗೆಗೆ ಬಂದಿತು. ನಾಗರಿಕತೆಯು ಆವಿರ್ಭವಿಸಿತು

ಶಾಶ್ವತ ಮತ್ತು ಸ್ಥಿರವಸ್ತುಗಳೊಂದೂ ಈ ಲೋಕದಲ್ಲಿಲ್ಲ.

ಪರಮಾತ್ಮನನ್ನು ಅಚಂಚಲನೆಂದು ಹೇಳಬಹುದು ಕೆಲವರು ಆತನನ್ನೂ ಚಂಚಲನೆಂದು ತರ್ಕಿಸುವರು ಆದುದರಿಂದ ಪ್ರತಿಒಂದೂ ಅಶಾಶ್ವತ ವಸ್ತುವೇ ಇಹಲೋಕದಲ್ಲಿ ತುಂಬಿರುವುದು ಪ್ರತಿಒಂದೂ ಕ್ಷಣಿಕವಾದುದು ಪ್ರತಿಯೊಂದೂ ಕಾಲಚಕ್ರಕ್ಕೆವಶವಾಗಿರುವುದು. ಇದರ ದೆಸೆಯಿಂದಲೇ ದೇಶಗಳು ಮೇಲೆ ಬರುವುವು ಮತ್ತೆ ಮುಳುಗುವುವು.

ಹಾಗೆಯೇ ಕಾಲಚಕ್ರವು ತಿರುಗಿತು ಮಹಿಳಾಸಮಾಜವು ಕೆಟ್ಟಿತು ಕುಮತಿಗಳು ಕುತ್ಸಿತ ಲೇಖನಗಳನ್ನು ಬರೆದು, ಕುಲಕಾಮಿನಿಯರಲ್ಲೊಂದು ಕಳಂಕವನ್ನು ತಂದಿಟ್ಟರು ಇದಕ್ಕನುಸರಿಸಿ ಕೆಲವು ರಮಣಿಯರೂ ಆಡಿದರು ದೇಶವು ಕೆಟ್ಟಿತು, ಕಳಂಕದಿಂದ ಮಲಿನವಾದ ಪುರುಷ ಜಾತಿಗೆ ಸ್ತ್ರೀ ಜಾತಿಯಲ್ಲಿ ನಂಬಿಕೆಯೂ ಭರವಸೆಯೂ ಹೋದವು ಸುಖದ ಬದಲು, ದುಃಖವು ಭಾರತೀಯರ ಗೃಹಗಳಲ್ಲಿ ನೆಲೆಗೊಂಡಿತು ಕಾರಣವಾದರೋ ಅತಿ ಹಾಸ್ಯಾಸ್ಪದವಾದುದು ಕುಮತಿಗಳ ಕೆಲವು ಕುತ್ಸಿತ ಲೇಖನಗಳು !!!

ಆರ್ಯಮಹಿಳೆ, ವಿದ್ಯಾವಿಹೀನೆಯಾದಳು ವಿದ್ಯಾವಿಹೀನೆಯಾದ, ಪಶುಸಮಾನೆಯಾದಾಕೆ, ಕುರುಚಿಪೂರ್ಣರಾದ ಯುವಕರ ಮನಸ್ಸಂತೋಷಕ್ಕೇ ಇರುವುದೆಂದು ತಿಳಿದರು ಅದು ಅವರ ತಪ್ಪೇನು ? 'ಎಪಿಕ್ಟೇಟಸ್' ಎಂಬ ಗ್ರೀಕ್ ದೇಶಸ್ಥನೋರ್ವನು ಈ ವಿಷಯದಲ್ಲಿ ನಾಲ್ಕು ವಾಕ್ಯಗಳನ್ನು ಬೋಧಿಸಿರುವನು —

* 'ಹುಡುಗಿ ಹದಿನಾಲ್ಕು ವರ್ಷವಾಯುದವಳಾಗುವುದೇತಡೆ-

---

*"From the age of fourteen years, women are flattered and worshipped by men. Seeing thus, that there is nothing else for them but to serve the pleasures of men they begin to beautify themselves and to place all their hopes in this. It were well, then, that they should perceive

ಎಲ್ಲರೂ ಆಕೆಯನ್ನು ಸ್ತುತಿಸುವರು , ಆಕೆಯೋ 'ಸುಂದರಿ' ಎಂದೊಪ್ಪುವರು ಏನೂ ಅರಿಯದ ಆ ಕನ್ಯೆಯಾದರೋ ತನ್ನ ಕರ್ತವ್ಯವನ್ನೇ ತಿಳಿಯಳು ಮಾನವರ ಇಂದ್ರಿಯ ತೃಪ್ತಿಯೇ ತನ್ನ ಮುಖ್ಯ ಕರ್ತವ್ಯವೆಂದು ತಿಳಿದು ಅವರ ಮನಸ್ಸಂತೋಷಪಡಿಸಲೆತ್ನಿಸುವಳು' ಇದಕ್ಕೆ ಪ್ರಾಜ್ಞರಾದ ನಾವೇನೆಂದು ಕರೆಯುವೆವು? "ಪಶ್ಚಾತ್ತಾಪ" ಎಂದಲ್ಲವೆ? ಇದಾರ ತಪ್ಪು?

ನಮ್ಮ ನಾರಿಯರಿಗೂ ಇದೇ ಗತಿ ಸಂಭವಿಸಿತು ಮಧ್ಯಕಾಲದಲ್ಲಿ ರಾಜಪೀಡನೆಯು ಪ್ರಬಲಿಸಿ ನಾರೀಕುಲಕ್ಕೆ ಗುರುಪ್ರಾಯವಾದ ಸತೀತ್ವವನ್ನು ಕಳೆದುಕೊಂಡರು ಆಗಲೀಗ ಮೂಲೆಮೂಲೆಯಲ್ಲಿ ಒಂದೊಂದು ನಕ್ಷತ್ರವು ಉದಯಿಸುತ್ತಿತ್ತು. ಆ ನಕ್ಷತ್ರಗಳ ಪರಿಚಯವನ್ನು ಮಾಡಿಸಲು ಈ ಚಿಕ್ಕ ಲೇಖನವನ್ನು ನಾವು ಬರೆದಿರುವೆವು ಲೇಖಕರು ಕರ್ಣಾಟಕರಾದುದರಿಂದಲೂ ಲೇಖನಕ್ಕವಕಾಶವಿತ್ತ ಈ 'ನಂದಿನೀ' ಪತ್ರವು ಕರ್ಣಾಟಕ ಭಾಷೆಯದಾದುದರಿಂದಲೂ ಕರ್ಣಾಟಕ ರಮಣಿಯರ ವಿಷಯಗಳನ್ನೇ ಕುರಿತು ವಿಚಾರಿಸುವ —

ಹನ್ನೊಂದನೆಯ ಶತಮಾನದಲ್ಲಿ ನವಿಲೆನಾಡಾಧಿಪತಿಯಾದ ಏಚನ ಪತ್ನಿಯು ತನ್ನ ಪತಿಯೊಡನೆ ಸಹಗಮನವನ್ನು ಮಾಡಿದಳು ಈಕೆ, ಬಲು ಶೀಲವತಿ ಪತಿಯೇ ಪರಮದೈವವೆಂದು ಭಾವಿಸಿ ಸಾವಿತ್ರಿಯಂತೆ ಪತಿಯನ್ನನುಸರಿಸಿದಳು.

" . ............ . ............... . ದೇ ॥
ವರದೇವಂ ಗತ್ತಿಯುಂಕೆಯ್ಯಾಗಿದುರಿವ್ವರಿಯುಂ
ಪೊಕ್ಕುದೇ ಕಚ್ಚಿ ತನ್ನಂ ।

---

themselves to be prized for nothing else than modesty and decorum "

Epictetus xx-169.

ಧರೆಯೆಲ್ಲಂ ಮೆಚ್ಚೆನಿಚ್ಚಂ ಪೊಗಳೆ ನೆಗಳೆತುಂ
ದೇವಲೋಕಕ್ಕೆ ಪೋದಳ್ ॥ " *

ಇದರಿಂದ ಸತೀತ್ವವು ಹನ್ನೊಂದನೆಯ ಶತಮಾನದಲ್ಲಿಯೂ ಕೊಂಚಮಟ್ಟಿಗೆ ಇದ್ದಿತೆಂದೂಹಿಸಬಹುದು ಇನ್ನೂ ಮುಂಬರಿಯುವ —

ಹತ್ತನೆಯ ಶತಮಾನದಲ್ಲಿ ದಾನಚಿಂತಾಮಣಿಯೆಂದು ಪ್ರಸಿದ್ಧಿಗೊಂಡಿದ್ದ ಅತ್ತಿಮಬ್ಬೆಯನ್ನು ನಾವು ಮರೆಯಬಾರದು. ಕವಿ ರನ್ನನು (೯೯೦ ಕ್ರಿ ಶ) ಈಕೆಯ ವಿಷಯವನ್ನು ಅಜಿತಪುರಾಣದಲ್ಲಿ ಬರೆದಿರುತ್ತಾನೆ ಅತ್ತಿಮಬ್ಬೆ, ಗುಂಡಮಬ್ಬೆ ಎಂಬೀ ಅಕ್ಕತಂಗಿಯರನ್ನು ಚಾಳುಕ್ಯಚಕ್ರವರ್ತಿಯ ಪ್ರಧಾನ ಮಂತ್ರಿಯಾದ ದಲ್ಲಿಪನಮಗ-ನಾಗದೇವನು ವಿವಾಹಮಾಡಿಕೊಂಡನು ಯಾವತ್ತೂ ಸುಖವು ಸ್ಥಿರವಾಗಿರುವುದಿಲ್ಲವಷ್ಟೆ. ಒಂದಾನೊಂದು ಕಾಳಗದಲ್ಲಿ ನಾಗದೇವನು ಮಡಿದನು. ಆಗ ಸವತಿಯಾದ ಗುಂಡಮಬ್ಬೆಯು ತನ್ನ ಅಕ್ಕನಬಳಿಗೆ ಬಂದು— 'ಅಕ್ಕಾ! ನೀನು ಪುತ್ರವತಿಯಾದುದರಿಂದ ಮಗನನ್ನು ನೋಡಿಕೊಂಡಿರು. ಅಪುತ್ರವತಿಯಾದ ನಾನು ವಿಧವೆಯಾಗಿ ಬದುಕಿ ಫಲವೇನು? ನಾನು ಪತಿಯೊಡನೆ ಸಹಗಮನ ಮಾಡುವೆನು' ಎಂದು ಹೇಳಿಪತಿಯೊಡನೆ ದೇಹತ್ಯಾಗವನ್ನು ಮಾಡಿದಳು ಅಂದಿನಿಂದ ಅತ್ತಿಮಬ್ಬೆಯು ಅತಿವ್ರತನಿಷ್ಠಳಾಗಿ ಸಾವಿರಾರುಹೊಳಕನಕಯುಚಿನಪ್ರತಿಮೆಗಳನ್ನು ಮಾಡಿಸಿ, ವಿಶೇಷ ಪ್ರಖ್ಯಾತಿಯನ್ನು ಹೊಂದಿದುದಲ್ಲದೆ ತನ್ನ ತ್ಯಾಗದಿಂದ ಜಗತ್ತಿನಲ್ಲೆಲ್ಲಾ 'ದಾನ ಚಿಂತಾಮಣಿ' ಎಂದು ಹೊಗಳಿಸಿಕೊಂಡಳು ಇದರಿಂದಸವತಿಯರೆಷ್ಟುಅಂದದಿಂದಒಗತನ(ಸಂಸಾರ)ವನ್ನು ಮಾಡುತ್ತಿದ್ದರೆಂದು ತಿಳಿಯಬಹುದು

ಹನ್ನೆರಡನೆಯ ಶತಮಾನದಲ್ಲಿ ಕರ್ಣಾಟಕ ರಾಷ್ಟ್ರದಲ್ಲಿ ರಮಣಿಯರು ಅತ್ಯುತ್ತಮ ಸ್ಥಿತಿಯಲ್ಲಿದ್ದರೆಂದು ಹೇಳಬೇಕಾಗುತ್ತದೆ.

---

* Inscriptions in the Mysore District. Pt II p. p. 192.

ಏಕೆಂದರೆ, ಈ ಶತಮಾನದಲ್ಲಿಯೇ ಅನೇಕ ಮಂದಿ ಪಂಡಿತೆಯರನ್ನು ನಾವು ನೋಡಬಹುದು. ಪ್ರಥಮದಲ್ಲಿ ಕಂತಿದೇವಿಯ ವಿಷಯವನ್ನು ವಿಚಾರಿಸುವ ದ್ವಾರಸಮುದ್ರದ ಬಲ್ಲಾಳರಾಯನ ಸಭೆಯಲ್ಲಿ ಪಂಡಿತೆಯಾಗಿ ವಾಸಿಸುತ್ತಿದ್ದೀಕೆ, ಬಲು ಸಮರ್ಥೆ “ ........... ಆಕೆಯಂ ರಾಜಸಭೆಗೊಪ್ಪಿಸೆ ವಿದ್ವತ್ಸಮೂಹದೊಳ್ ಅಧಿಕ ಕವೀಶ್ವರಿಯಾಗಿರ್ದಳ್ ” ಎಂಬ ದೇವಚಂದ್ರನ ವಾಕ್ಯವನ್ನು ಮನಸ್ಸಿಗೆ ತಂದರೆ ಅವರೋಧದ ಪದ್ಧತಿಯು ಸ್ತ್ರೀಯರಿಗೆ ಆ ಕಾಲದಲ್ಲಿ ಅದೆಲ್ಲಿದ್ದಿತು? ಎಂಬ ಪ್ರಶ್ನೆಯು ಹುಟ್ಟುತ್ತದೆ ಕವಿತಾಂಗನೆಯರಲ್ಲಿ ಈಕೆಯೇ ಮೊದಲನೆಯವಳು ಬಾಹುಬಲಿಯ ನಾಗಕುಮಾರಚರಿತೆಯಲ್ಲಿರುವ ಈ ಕೆಳಗಣ ಪದ್ಯವನ್ನು ಓದಿದರೆ ಈಕೆಯ ಪ್ರಖ್ಯಾತಿಯೆಷ್ಟಿತ್ತೆಂಬುದನ್ನು ತಿಳಿಯಬಹುದು.

ವಿಬುಧಜನಸ್ತುತ ಶ್ರೀವೀರದೇವರ
ಸಭೆಗೆ ಮಂಗಳಲಕ್ಷ್ಮಿಯೆನಿಪ ॥
ಶುಭಗುಣಚರಿತೆ ಕಂತಿಕೆಯರ ಪೊಗಳ್ವೆನಾ
ನಭಿನವ ವಾಗ್ದೇವಿಯರ ॥

ಉಡುತಡಿನಗರದ ಮಹದೇವಿಯಕ್ಕನನ್ನು ಅರಿಯದವರಾರು? ಮತ್ತೆ, ಬಸವನ ಪತ್ನಿಯಾದ ನೀಲಮ್ಮನನ್ನು ಆಕೆಯ ‘ತ್ರಿವಿಧಿ’ಯಿಂದ ಎಲ್ಲರೂ ಅರಿತಿರುವರು ಮತ್ತೆ— “ತಾಯಿಯಿಲ್ಲದ ತಬ್ಬಲಿಯಾದುದರಿಂದ ಶಿವನಿಗೆ ತಲೆಯೆಲ್ಲಾ ಜಡೆಗಟ್ಟಿಕೊಂಡು ಮೈಯೆಲ್ಲಾ ಬೂದಿಯಾಗಿದೆಯೆಂದು ಹಲುಬಿ, ಆತನಿಗೆ ತಾನಾದರೂ ತಾಯಿಯಾಗಿ ಸಲಹುವೆನೆಂದು ನಿಜಲಿಂಗವನ್ನು ನೋಡಲು ಅದು ಶಿಶುರೂಪವನ್ನು ತಾಳಿದುದನ್ನು ನೋಡಿ ಪ್ರೀತಿಯಿಂದದನ್ನು ಸಲಹಿ, ಅದರ ಬಾಲಲೀಲೆಯನ್ನು ನೋಡಿ ಆನಂದಿತಳಾದ ಜಿಜ್ಜಳದೇವಿ(ಗ್ರಂಥಕರ್ತ್ರಿ)ಯನ್ನರಿಯದವರಾರು? ಕಗ್ಗಲ್ಲಿನಿಂದ ಹಾಲನ್ನು ಕರೆದು ಗಿರೀಶನಿಗೆ ಕುಡಿಸಿದ ಕಾಳವ್ವೆಯನ್ನು ಕೇಳದವರಾರಾದರೂ ಇದ್ದಾರೆಯೇ? ಕನ್ನಡಿಗರೆಲ್ಲರೂ ಈ ಮಹಿಳಾಮಣಿಯರನ್ನು ಅವರು ರಚಿಸಿದ ಗ್ರಂಥಗಳಿಂದ ತಿಳಿದಿರಲೇಬೇಕು

ಹದಿಮೂರನೆಯ ಶತಮಾನದ ಆದಿಯಲ್ಲಿ ಉದ್ಘಟಾರಮಣಿಯು ಜೀವಿಸಿದ್ದಳು. ಈಕೆ ಅಸಾಧಾರಣ ಪತಿವ್ರತೆ ವಿರಕ್ತನಾದ ತನ್ನ ಪತಿಗೆ ಅನುಕೂಲೆಯಾಗಿ ತಾನೂ ವಿರಕ್ತೆಯಾದಳು ಹದಿನಾಲ್ಕನೆಯ ಶತಮಾನದಲ್ಲಿ ಸವಿಗ್ಗೆಂದದ ಮಾವಿರಾಜನ ಪತ್ನಿಯು ಸುಶೀಲೆಯಾಗಿದ್ದಳು

" . . ..... .. ನಿತ್ಯಮಾಂ ।
ಗಲ್ಯಸುಶೀಲೆಯುಕ್ತೆ ಸದೇವಿ......"

ಹದಿನೇಳನೆಯ ಶತಮಾನದಲ್ಲಿ ಸಂಚಿಯ ಹೊನ್ನಮ್ಮನು ಸತಿಯರಿಗೆಂದು ಹದಿಬದಿಯ ಧರ್ಮವನ್ನು ವಿರಚಿಸಿದ್ದಾಳೆ ಹದಿನೆಂಟನೆಯ ಶತಮಾನದಲ್ಲಿ* 'ಚೆಲುವಾಂಬೆ' ಎಂಬಾಕೆ, " ಕೃಷ್ಣಕರ್ಣಾಮೃತಟೀಕೆ " ಎಂಬ ಗ್ರಂಥವನ್ನು ರಚಿಸಿ ತನ್ನ ಭಗವದ್ಭಕ್ತಿಯನ್ನು ತೋರಿದ್ದಾಳೆ ಸಾಂಗತ್ಯರೂಪದಲ್ಲಿ ಬರೆದ ಹೆಳವನ (ಕಟ್ಟೆ) ಗಿರಿಯಮ್ಮನ ಚಂದ್ರಹಾಸನ ಕಥೆಯನ್ನು ಪ್ರತಿಬರ್ವ ರಮಣಿಯೂ ತಿಳಿದಿರಬೇಕು ಇದು ಸರ್ವೋತ್ತಮವಾದ ಗ್ರಂಥವು ಹತ್ತೊಂಬತ್ತನೆಯ ಶತಮಾನದಲ್ಲಿ ಸ್ತ್ರೀವಿರಚಿತ ಗ್ರಂಥಗಳು ಕಾಣಬರುವುದೇ ಇಲ್ಲ ಆದಾಗ್ಯೂ ಪದ್ಮಾವತಮ್ಮನವರಂತೆ, ಯಕ್ಷಗಾನ ರೂಪದಲ್ಲಿ 'ರಾಮ' ಯನ್ನು ಬರೆದಿರುವರಂತೆ ಈ ಪ್ರತಿಯು ನಮಗಿನ್ನೂ ದೊರೆತಿಲ್ಲ ಈಕೆಯ ವಿಷಯವೂ ಸ್ಪಷ್ಟವಾಗಿ ತಿಳಿದುಬಂದಿರುವುದಿಲ್ಲ

ಹನ್ನೆರಡನೆಯ ಶತಮಾನದ ವರೆಗೆ ಅಂದರೆ, ' ವಿಜಯನಗರ ' ರಾಜ್ಯದ ಅತ್ಯುನ್ನತ ಸ್ಥಿತಿಯಲ್ಲಿ ಕರ್ಣಾಟಕ ಮಹಿಳೆಯರೆಲ್ಲರೂ ವಿದ್ಯಾವತಿಯರಾಗಿದ್ದರು ವಿಜಯನಗರರಾಜ್ಯವು ನಾಶವಾಗಲಿಕ್ಕೆ ತೊಡಗಿದೊಡನೆಯೇ ಕನ್ನಡಿಗರ ಸರ್ವಸಂಪತ್ತೂ ನಾಶವಾಗತೊಡ

---

* 'ವರನಂದೀಕಲ್ಯಾಣ' ಎಂಬ ಗ್ರಂಥವನ್ನು ಚೆಲುವಾಂಬೆ ಮಾಡಿದುದಾಗಿ ತಿಳಿಯಬರುತ್ತದೆ ಆದರೆ ಈ ಚೆಲುವಾಂಬೆಗೂ ' ಕೃಷ್ಣಕರ್ಣಾಮೃತಟೀಕೆ 'ಯ ಚೆಲುವಾಂಬೆಗೂ ಸಂಬಂಧವೇನು ' ಒಬ್ಬಾಕೆ, ಹಲವಕ್ಕೆ; ಇನ್ನೊಬ್ಬಾಕೆ, ಹರಳಕ್ಕೆ; ಬಹುಶ ಇನ್ನೊಬ್ಬಾಕೆ ಇರಬಹುದಲ್ಲವೇ ?

ಗಿತು. ಅವರ ತರುವಾಯ ಕನ್ನಡನಾಡಿನ ಭಾಗವೊಂದಕ್ಕರಸರಾದ ಪೂರ್ವದ ಮಹಿಸೂರಿನ ಅರಸರು ಈ ವಿಷಯದಲ್ಲಿ ಯಾವ ಅಭಿರುಚಿಯನ್ನೂ ತೆಗೆದುಕೊಳ್ಳಲಿಲ್ಲವಾಗಿ ಎಲ್ಲವೂ ಮೂಲೆಗೆ ಬಿತ್ತು.

ಹತ್ತೊಂಬತ್ತು, ಇಪ್ಪತ್ತನೆಯ ಶತಮಾನಗಳಲ್ಲಿ 'ಇಂಗ್ಲಿಷ್' ವಿದ್ಯಾಭ್ಯಾಸದ ಮಹಿಮೆಯಿಂದ ನಮ್ಮ ಮಹಿಳೆಯರು 'ಲೇಡಿ'ಗಳಾಗ ತೊಡಗಿದರು ಕರ್ಣಾಟಕ ಮಾಸಪತ್ರಗಳನ್ನು ಹಿಡಿದರೆ ಕೈಕಳಂಕವಾದೀತೆಂದು ಭಯಪಡುವರೆಂದು ವಿಕಟಚಕ್ರವರ್ತಿಯು ಸಾರಿಸಾರಿ ಹೇಳುತ್ತಿರುವನು !

ಈ ಶತಮಾನದಲ್ಲಿ ಕನ್ನಡಿಗರಲ್ಲಿ ಕೆಲವು ನಾರೀನಕ್ಷತ್ರಗಳು ಉದಯಿಸಿರುವುವು. ಇವುಗಳಿಗೆ ಭಗವಂತನು ಚಿರಾಯುವೀಯಲೆಂಬುದೇ ನಮ್ಮ ಪ್ರಾರ್ಥನೆ.

ಇತಿ—

ವಿದ್ಯಾವರ್ಧಕಸಂಘ<br>ಮಡಕೇರಿ, (ಕೊಡಗು) — ಬಿ. ಎಸ್. ಕೃಷ್ಣಮೂರ್ತಿ.

---

॥ ಶ್ರೀ ॥

## ಆದರ್ಶ ದಂಪತಿಗಳಾದ
## ಶ್ರೀ॥ ಸೌ॥ ರಂಗಮ್ಮನವರು
## ( ಮತ್ತು ಅವರ ಪತಿ )
## ಶ್ರೀ॥ ಟಿ ಅರಾವ ಮುದಯ್ಯಂಗಾರ್ ಬಿ ಎ ಬಿ ಎಲ್.ರವರು

ಬಂಧುಭಗಿನಿಯರೇ !

ಹಿಂದೆ, ಎಂದರೆ- ನಳಸಂವತ್ಸರದ ಫಾಲ್ಗುಣ ಸಂಚಿಕೆಯಲ್ಲಿ ನಿವೇದಿಸಿದ್ದಂತೆ ನಮ್ಮ ಪ್ರಿಯಭಗಿನಿಯರಾದ ಶ್ರೀ॥ ಸೌ॥ ರಂಗಮ್ಮನವರ ಮತ್ತು ಅವರ ಸ್ವಾಮಿಯವರ 'ಸಂಕ್ಷಿಪ್ತ ಸಚಿತ್ರ ಚರಿತ್ರವನ್ನು ಇಂದು ಪ್ರಕಟಿಸುವಂತಾಯ್ತೆಂದು ತಿಳಿಸಲು ಸಂತೋಷಪಡುತ್ತೇವೆ.

ಸತ್ಪುರುಷರ ಸಂಗತಿಯೇ ಸುಖಪ್ರದವೆಂಬ ಸೂಕ್ತಿಯನ್ನರಿತಿರುವ ನಿಮಗೆ ಕೂಡ ಅವರ ಸಚ್ಚರಿತ್ರವನ್ನವಲೋಕಿಸಲು ಉತ್ಸಾಹವಿರಬಹುದೆಂದೂ ನಂಬುತ್ತೇವೆ

ಅನ್ಯಮತಾಚರಣದ ಆವೇಶದಿಂದ ವಿಭ್ರಾಂತಚಿತ್ತರಾಗಿ ನಮ್ಮವರೆಲ್ಲರೂ ಆರ್ಯಧರ್ಮಚ್ಯುತರಾಗಿ ಹೋಗುವರೇನೆಂಬ ಶಂಕಾತಂಕವು ದೇಶಭಕ್ತರ ಹೃತ್ಕೋಶದಲ್ಲಿ ತಲೆ[illegible] ಅವರನ್ನು ತಪಿಸುವಂತೆ ಮಾಡಿಮಾಡುತ್ತಿರುವಲ್ಲಿ— ದೇಶಸೇವಕರು ದೇಶೋನ್ನತಿಗೆಂದೂ ಧರ್ಮೋಜ್ಜೀವನಕ್ಕೆಂದೂ ಸುಧಾರಣಾಮಾರ್ಗವನ್ನು ಹುಡುಕುತ್ತಿರುವಲ್ಲಿ— ಪರಾಧೀನತೆಯ ದೆಸೆಯಿಂದ ಮತ್ತು ಅಜ್ಞಾನಾಂಧಕಾರದ ಮಹತ್ತಿನಿಂದ ಮಹಿಳಾಪ್ರಪಂಚವು ಕಂಗೆಟ್ಟಿರುವಲ್ಲಿ— ದೈವಕೃಪೆಯಿಂದ ದೇಶಭಕ್ತರ ಸುಧಾರಕರ ಸದುದ್ದೇಶಸಾರ್ಥಕ್ಯತೆಗೆ ಸಾಧನರೂಪವಾಗಿಯೂ, ಮಹಿಳಾಸಮಾಜದ ಅಜ್ಞಾನನಿವೃತ್ತಿಗೆ ಮತ್ತು ಆತ್ಮಾವಲಂಬನೆಗೆ ಮಾರ್ಗದರ್ಶಕವಾಗಿಯೂ ಬೆಂಗಳೂರು ಮಹಿಳಾ ಸೇವಾಸಮಾಜವು ನಿರ್ಮಾಣವಾಯಿತೆಂಬುದೂ, ಈ ಸಮಾಜದ ನಿರ್ಮಾಣಕ್ಕೂ ಉತ್ಕರ್ಷತೆಗೂ ನಮ್ಮ ಸನ್ಮಾನ್ಯಭಗಿನಿಯರಾದ ಶ್ರೀ|| ಸೌ|| ಪಾರ್ವತಮ್ಮನವರು ಮೂಲಕರ್ತ್ರಿಯರೆಂಬುದೂ ನಿಮಗೆ ತಿಳಿದೇ ಇರಬೇಕಲ್ಲವೆ? ಈ ಸಮಾಜದಲ್ಲಿ ಸೇವಾವೃತ್ತಿಯ ಪಾಠಗಳನ್ನು ನಿಯಮಾನುಸಾರವಾಗಿ ಅಭ್ಯಸಿಸುತ್ತಿರುವ ಮಹಿಳೆಯರೆಲ್ಲರೂ ಸ್ವಸ್ವರೂಪ ಸ್ವಕರ್ತವ್ಯ-ಸ್ವಧರ್ಮಗಳ ವಿಧಾನವನ್ನರಿತು ಕರ್ತವ್ಯಜಾಗ್ರತೆಯಿಂದ ಆರ್ಯಧರ್ಮವನ್ನು ಊರ್ಜಿತಪಡಿಸಲು ಸಾಮರ್ಥ್ಯಹೊಂದುವಂತಾಗಬೇಕಾದ ರೀತಿಯಲ್ಲಿ ಈ ಸೇವಾಸಮಾಜದ ಕಾರ್ಯಭಾಗಗಳನ್ನು ನಿರ್ವಹಿಸಬೇಕೆಂದರೆ ಸಾಮಾನ್ಯವಾದ ಕೆಲಸವಲ್ಲ. ಅದಕ್ಕೆ ತಕ್ಕಂತೆ ಸ್ಥಿರಪ್ರಜ್ಞೆ, ದೈವಿಕ ಪ್ರೇಮ ಪರಿಶುದ್ಧಭಾವನೆ, ಸಹನಶೀಲತೆ,—ಸಾರಾಸಾರ ವಿವೇಚನೆ ಇತ್ಯಾದಿ ಸದ್ಗುಣಗಳುಳ್ಳವರಾಗಿರಬೇಕು. ಪ್ರಕೃತದಲ್ಲಿ ಅಂತಹ ಬಲವತ್ಕಾರ್ಯದಲ್ಲಿ ಬದ್ಧಕಂಕಣರಾಗಿರುವ ನಮ್ಮ ಶ್ರೀ|| ಸೌ|| ರಂಗಮ್ಮನವರು

ಮೇಲೆ ಹೇಳಿದ ಗುಣಗಳುಳ್ಳವರಾಗಿರುತ್ತಾರೆಂಬುದನ್ನು ನಾನಿಲ್ಲಿ ಬೇರೆ ಹೇಳಬೇಕಾಗಿಲ್ಲ ಅವರ ಪ್ರಸನ್ನಮುಖಭಾವದಿಂದ ಮತ್ತು ಅವರ ಪ್ರಕೃತಿ-ಕೃತಿವಿಚಾರಗಳಿಂದ ತಿಳಿದುಕೊಳ್ಳಬಹುದಾಗಿದೆ.

ಶ್ರೀ|| ಸೌ|| ರಂಗಮ್ಮನವರು, ರಾಜಕಾರ್ಯಪ್ರವೀಣ, ರಾವ ಬಹಾದ್ದೂರ ಎ ರಂಗಸ್ವಾಮಿ ಅಯ್ಯಂಗಾರ, ಬೀ ಏ ಬೀ ಎಲ್ ಇವರ ಜ್ಯೇಷ್ಠಪುತ್ರಿಯಾಗಿ ೧೮೮೬ನೇ ಇಸವಿ ಫೆಬ್ರವರಿಯಲ್ಲಿ ಜನಿಸಿದರು

ಇವರು ಮೈಸೂರು ವೆಸ್ಲಿಯನ್ನ ಬಾಲಿಕಾ ಪಾಠಶಾಲೆಯಲ್ಲಿ (The Wesleyan Girls School at Mysore) ಮತ್ತು ಬೆಂಗಳೂರಿನ ಸರ್ಕಾರೀ ಬಾಲಿಕಾ ಪಾಠಶಾಲೆಯಲ್ಲಿ (Government Girls School at Benglore) ವಿದ್ಯಾಭ್ಯಾಸ ಮಾಡಿದರು ಇವರು ತಮ್ಮ ಅಭ್ಯಾಸದಲ್ಲಿ— ಕನ್ನಡ ತಮಿಳು ಭಾಷೆಗಳನ್ನೂ ತಕ್ಕಮಟ್ಟಿಗೆ ಸಂಸ್ಕೃತ ಮತ್ತು ಇಂಗ್ಲೀಷು ಭಾಷೆಗಳನ್ನೂ ಕಲಿತರು ಶೀಲ ವಯೋ ವಿದ್ಯಾ ರೂಪ-ಗುಣಸಂಪತ್ತಿಗಳಿಂದ ಪ್ರಕಾಶಿಸುವ ಮಹಿಳೆಯರ ಭಾಗ್ಯಕ್ಕೆಣೆಯುಂಟೆ? ನಮ್ಮ ಭಗಿನಿಯರ ಸಂಪನ್ನತೆಗೆ ತಕ್ಕಂತೆಯೇ ಇವರಿಗೆ ಅನುರೂಪರಾದ ಪತಿಯೂ ದೊರೆತರು ಇವರ ವಿವಾಹವು ೧೦ನೇ ವರ್ಷದಲ್ಲಿ ಎಂದರೆ ೧೮೯೬ರಲ್ಲಿ ನಡೆಯಿತು ಆಗ ಇವರ ಪತಿಗೆ ೧೬ನೆಯ ವರ್ಷವು ನಡೆಯುತ್ತಿತ್ತು ಇವರ ಪತಿಯಾಗಿರುವ ನಮ್ಮ ಧರ್ಮಭ್ರಾತೃ ಶ್ರೀ|| ಆರಾವಮುದಯ್ಯಂಗಾರ್ಯರು [illegible] ಸರಕಾರಗಳಲ್ಲಿ ತಹಶೀಲ್ದಾರರಾಗಿದ್ದ ಶ್ರೀಯುತ ಗೋಪಾಲಯ್ಯಂಗಾರ್ಯರ ಪುತ್ರರು ಇವರು ೧೮೭೯ನೆ ಇಸವಿ ಆಗಸ್ಟು ೧೩ರಲ್ಲಿ ಜನಿಸಿದರು. ಇವರ ವಿದ್ಯಾಭ್ಯಾಸವು ನಾಗಪಟ್ಟಣ ತಿರುಚಿನಾಪಳ್ಳಿ ಮತ್ತು ಮದ್ರಾಸ ಪಟ್ಟಣಗಳಲ್ಲಿ ಕ್ರಮವಾಗಿ ನಡೆಯಿತು ಹಿಂದೆ ಹೇಳಿರುವಂತೆ ೧೮೯೬ರಲ್ಲಿ ಇವರ ವಿವಾಹವು ನಡೆಯಿತು ಇವರು ೧೮೯೦ರಲಿ ಬಿ. ಏ. ಪರೀಕ್ಷೆಯಲ್ಲಿಯೂ ೧೮೯೬ರಲ್ಲಿ ಎಂದರೆ ತಮ್ಮ ೨೭-ನೆ ವರ್ಷ

ದಲ್ಲಿ ಬಿ ಎಲ್ ಪರೀಕ್ಷೆಯಲ್ಲಿಯೂ ತೇರ್ಗಡೆ ಹೊಂದಿದರು. ಅದೇ ೧೮೯೫ರಲ್ಲಿಯೇ ಚೀಫ್ ಕೋರ್ಟಿನ ಅಡ್ವೋಕೇಟರಾದರು ಎರಡು ವರ್ಷಕ್ಕೆ ಹೆಚ್ಚಾಗಿಯೇ ಈ ಉದ್ಯೋಗದಲ್ಲಿದ್ದರು

ಆ ಬಳಿಕ ೧೮೯೭ರಲ್ಲಿ ಮೈಸೂರು ಸಿವಿಲ ಸರ್ವಿಸನ್ನು ಸೇರಿದರು ಕ್ರಮವಾಗಿ ಪೋಲೀಸ್ ಅಸಿಸ್ಟೆಂಟ ಸೂಪರಿಂಟೆಂಡೆಂಟ (Assistant Superintendent of Police) ಅಸಿಸ್ಟೆಂಟ ಕಮಿಷನರ್ (Asst Commissioner) ಮ್ಯಾಜಿಸ್ಟ್ರೇಟ (Magistrate ಮೊದಲಾದ ಅಧಿಕಾರಿಗಳಾಗಿಯೂ, ರೆವಿನ್ಯೂ ಆಫೀಸಿಗೆ ಅಸಿಸ್ಟೆಂಟ (Asst to the Revenue Office) ರಾಗಿಯೂ ಆ ಬಳಿಕ ಸಬ್ ಡಿವಿಜನ್ ಆಫೀಸರ (Sub Division) ಸಿಟಿ ಮ್ಯಾಜಿಸ್ಟ್ರೇಟ (City Magistrate) ಮತ್ತು ಗವರ್ನಮೆಂಟ ಅಂಡರ ಸೆಕ್ರೆಟರಿ (Under Secretary to Government) ಮೊದಲಾದ ಅಧಿಕಾರಿಗಳಾಗಿಯೂ ಇದ್ದು ೧೯೧೩ರಲ್ಲಿ ಮುಜರಾಯಿ ಸೂಪರಿಂಟೆಂಡೆಂಟ [Muzrai Superintendent] ರಾಗಿ ನಿಯಮಿಸಲ್ಪಟ್ಟಿದ್ದರು ಇತ್ತಲಾಗಿ ಇವರು ಮುಜರಾಯಿ ಇಲಾಖೆಗೆ ಸರಕಾರದ ಸೆಕ್ರೆಟರಿಗಳಾಗಿ ನಿಯಮಿಸಲ್ಪಟ್ಟು ನಿಸ್ಪೃಹತೆಯಿಂದಲೂ ದಕ್ಷತೆಯಿಂದಲೂ ಕಾರ್ಯನಿರ್ವಹಣವಮಾಡುವವರೆಂಬ ಪ್ರಖ್ಯಾತಿಗೆ ಪಾತ್ರರಾಗಿ ದೇಶಸೇವಕರ ಸಮಾಜದಲ್ಲಿ ಪರಿಗಣಿತರಾಗಿರುವರು

ಈ ಸಮ್ಯ ಸನ್ಮಾನ್ಯಪ್ರಾಜ್ಞರಾದ ಶ್ರೀ ಎಸ್. ಆರಾವಮುದಯ್ಯಂಗಾರ್ಯರು ದೇಶಾಭ್ಯುದಯ, ಮಹಿಳಾಸಮಾಜೋತ್ಕರ್ಷ, ಆರ್ಯಧರ್ಮ ಪ್ರಸಾರಗಳಲ್ಲಿ ಗಣನೀಯ ಸ್ತುತ್ಯರ್ಹವಾದ ನೀತಿಮಾರ್ಗದಲ್ಲಿ ಸೇವಾಕಾರ್ಯನಿರ್ವಹಣ ಮಾಡುವಂತೆ ತಮ್ಮ ಸಹಧರ್ಮಿಣಿಯನ್ನು ಪ್ರೇರಿಸಿ, ತಕ್ಕಮಟ್ಟಿಗೆ ಅನುಕೂಲ್ಯ ಮತ್ತು ಅವಕಾಶಗಳನ್ನು ಕಲ್ಪಿಸಿಕೊಟ್ಟಿರುವದಕ್ಕಾಗಿ ನಾವು ಇವರನ್ನು ಮನ ಪೂರ್ವಕವಾಗಿ ವಂದಿಸುವೆವು

ನಮ್ಮ ಭಗಿನಿಯರಾದ ಶ್ರೀ|| ಸೌ|| ರಂಗಮ್ಮನವರಿಗೆ ನಾಲ್ಕು ಮಂದಿ ಕುಮಾರರಿರುವರು. ಇವರಲ್ಲಿ ಹಿರಿಯರು ಪೂನಾ ಪಟ್ಟಣದ ಎಂಜಿನೀರಿಂಗ ಕಾಲೇಜಿನಲ್ಲಿ ವ್ಯಾಸಂಗಿಸುತ್ತಿದ್ದು, ಇದೇ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಬಂದುದಾಗಿ ತಿಳಿಯುತ್ತೇವೆ ಮತ್ತು ಇವರ ಎರಡನೆ ಕುಮಾರರು ಮದರಾಸಿನಲ್ಲಿ ಉಚ್ಚ ತರಗತಿಯಲ್ಲಿ ವ್ಯಾಸಂಗಿಸುತ್ತಿರುವುದಾಗಿಯೂ ತಿಳಿಯುತ್ತೇವೆ

ಹೀಗೆ ತುಂಬಿದ ಸಂಸಾರಿಗಳಾಗಿರುವ ನಮ್ಮ ಪ್ರಿಯಭಗಿನಿ—ರಂಗಮ್ಮನವರು ತಮ್ಮ ಸ್ತ್ರೀಜನೋಚಿತ ಮತ್ತು ಸ್ವಕರ್ತವ್ಯಕ್ಕೆ ಸೇರಿದ ಗೃಹಕಾರ್ಯ ಭಾಗಗಳೇ ತಮಗೆ ಬೇಕಾದಷ್ಟಿದ್ದರೂ ದಕ್ಷತೆಯಿಂದ ಅವೆಲ್ಲವನ್ನೂ ನಿರ್ವಹಿಸಿಕೊಂಡು, ತಮ್ಮ ವಿರಾಮಕಾಲವನ್ನು,—ಮಹಿಳಾಸೇವಾಸಮಾಜದ ಕಾರ್ಯನಿರ್ವಹಣದಲ್ಲಿ ವಿನಿಯೋಗಿಸುತ್ತಿರುವುದು, ನಮಗೆ ಅತ್ಯಂತ ಸಂತೋಷವನ್ನುಂಟು ಮಾಡುವಂತಹದಾಗಿದೆ ಇವರು ಈ ರೀತಿಯಾಗಿ ೧೯೧೪ ರಿಂದ ನಮ್ಮ ಸನ್ಮಾನ್ಯ ಭಗಿನಿ ಶ್ರೀ|| ಸೌ|| ಪಾರ್ವತಮ್ಮನವರಿಗೆ ಸಹಾಯಕರಾಗಿ ಎಡೆಬಿಡದೆ ಮಹಿಳಾ ಸೇವಾ ಸಮಾಜದ ಗೌರವ ಕಾರ್ಯದರ್ಶಿಯವರಾಗಿಯೂ ಮತ್ತು ಧನಾಧ್ಯಕ್ಷರಾಗಿಯೂ ಸೇವಾಕಾರ್ಯವನ್ನು ನಡೆಯಿಸುತ್ತ, ನಮ್ಮ ಸೋದರಿಯರಿಗೆ ಅನುಕರಣೀಯವಾದ ಆಚಾರ ವಿಚಾರಗಳನ್ನು ಬೋಧಿಸುತ್ತಿರುವರು ಇಂತಹ ನಾರೀಮಣಿಯರ ನೈತಿಕ ಶಿಕ್ಷಣ, ಹಿತಬೋಧನೆಗಳಿಂದಲೇ ನಮ್ಮ ಮಹಿಳಾ ಪ್ರಪಂಚವು ಮೌಢ್ಯವನ್ನು ಬಿಟ್ಟು ಬುದ್ಧಿ ವಿಕಸನ ಹೊಂದಬೇಕಾಗಿದೆಯಾದುದರಿಂದ ಈ ನಮ್ಮ ಭಗಿನಿಯರ ಉದ್ದೇಶ-ಪ್ರಯತ್ನ-ಶ್ರಮಗಳು ಸಾಫಲ್ಯಹೊಂದುವಂತೆ ನಮ್ಮ ಇತರ ಭಗಿನಿಯರೂ ಸಾನುಭೂತಿಯನ್ನು ಪ್ರದರ್ಶಿಸಿ ತಮ್ಮ ತಮ್ಮ ಅರಸರ ಅನುಮತಿಯಿಂದ ದೇಶಸೇವೆಯಲ್ಲಿ ಬದ್ಧಾದರರಾಗಿ ನಮ್ಮ ನಿರಂತರದ ಧನ್ಯವಾದಗಳನ್ನು ಕೈಕೊಳ್ಳುತ್ತ ಬರಬೇಕೆಂದೂ, ದೇಶ ಮತ್ತು ಸಮಾಜ ಸೇವೆಯಲ್ಲಿ ಅವಿಶ್ರಾಂತ ಶ್ರಮದಿಂದ ಸತತೋದ್ಯಮಿಗಳಾಗಿರುವ ನಮ್ಮ ಮಹಿಳಾಸೇವಾಸಮಾಜದ ಕಾರ್ಯನಿರ್ವಾ

ಹಳರಾದ ಶ್ರೀ|| ಸೌ|| ಪಾರ್ವತಮ್ಮ, ಶ್ರೀ|| ಸೌ|| ರಂಗಮ್ಮನವರುಗಳಿಗೂ ಮತ್ತು ಅವರವರ ಪತಿಗಳಾದ ಶ್ರೀ|| ಚಂದ್ರಶೇಖರಯ್ಯನವರು ಮತ್ತು ಶ್ರೀ|| ಅರಾವ ಮುದಯ್ಯಂಗಾರ ಅವರುಗಳಿಗೂ ಇತೋಪ್ಯತಿಶಯವಾದ ಸುಖ, ಸತ್ಕೀರ್ತಿ, ಆಯುರಾರೋಗ್ಯ ಭಾಗ್ಯಗಳನ್ನು ಪರಮಾತ್ಮನು ಅನುಗ್ರಹಿಸಿ, ಅವರುಗಳಿಂದ ದೇಶ ಸೇವಾ ಮಹತ್ಕಾರ್ಯವನ್ನು ಚಿರಕಾಲ ನಡೆಯಿಸಿಕೊಂಡು ಬರಬೇಕೆಂದೂ ಭಗವಂತನಲ್ಲಿ ಪ್ರಾರ್ಥಿಸತ್ತಿರುವೆವಲ್ಲದೆ, ಈ ನಮ್ಮ ಮಾನ್ಯ ಭಗಿನಿಯರ ಚರಿತ್ರವೃತ್ತವನ್ನು ಪ್ರಕಟಿಸಲು ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ' ಶ್ರೀ|| ಸೌ|| ಪಾರ್ವತಮ್ಮನವರಿಗೂ, ನಮಗೆ ಇವರ ಭಾವಚಿತ್ರಗಳನ್ನು ಕಳುಹಿದ ನಮ್ಮ ಧರ್ಮಭ್ರಾತೃ- ಶ್ರೀ|| ಬಿ ರಾಮಯ್ಯನವರಿಗೂ ನಮಗೆ ಅವಶ್ಯಕವಾದ ವಿಚಾರಗಳನ್ನೂ ತಿಳಿಯಪಡಿಸಿ ಪ್ರೋತ್ಸಾಹಿಸಿದ ಶ್ರೀ|| ಸೌ|| ರಂಗಮ್ಮ ಮತ್ತು ಅವರ ಸ್ವಾಮಿಯವರುಗಳಿಗೂ ಈ ಮೂಲಕವಾಗಿ ನಮ್ಮ ಕೃತಜ್ಞತಾಪೂರ್ವಕ ಧನ್ಯವಾದಗಳನ್ನೊಪ್ಪಿಸಿ ಸದ್ಯಕ್ಕೆ ವಿರಮಿಸುತ್ತಿರುವೆವು ಇತಿ—

ಆರ್ಯರಮಣಿಯರ ಶ್ರೀ ಚರಣಧೂಳಿ—

॥ ಶ್ರೀ ॥

# ಮಹಾರಾಣಿ ರುದ್ರಮ್ಮದೇವಿ

" अगारे कातारे कुचकलशहारे मृगदृशा ।
मणेस्तुल्य मूल्य सहज सुभगस्य द्युतिमत ॥"

(ರತ್ನವೆಂದ ಬಳಿಕ ಅದು ಮನೆಯಲ್ಲಿರಲಿ, ಅಡವಿಯಲ್ಲಿ ಬಿದ್ದಿರಲಿ, ಹರಿಣಾಕ್ಷಿಯರ ಸ್ತನಹಾರದಲ್ಲಿ ಅಡಕವಾಗಿರಲಿ, ಅದರ ಯೋಗ್ಯತೆಯು ಸಮಾನವಾದುದೇ; ಏಕೆಂದರೆ ಅದು (ರತ್ನವು) ನಿಸರ್ಗತ ಸುಂದರವೂ ತೇಜಸ್ವಿಯೂ ಆಗಿರುತ್ತದೆ)

ಆರ್ಯಕುಲಾಂಗನೆಯರು ಪಾತಿವ್ರತ್ಯ, ಸದಾಚರಣೆ, ಗುರುದೈವಭಕ್ತಿ, ಆಶ್ರಿತಪಾಲನ, ಭೂತದಯಾದಿ ಗೃಹ್ಯಕಾರ್ಯಗಳನ್ನೇ ತಮ್ಮ ಮುಖ್ಯೋದ್ದೇಶವಾಗಿಟ್ಟುಕೊಂಡು ಬಹು ಪೂರ್ವಕಾಲದಿಂದಲೂ ಅಜರಾಮರವಾದ ಕೀರ್ತಿಯನ್ನು ಸಂಪಾದಿಸಿರುವರಲ್ಲವೇ? ತಥಾಪಿ (ಆದರೂ) ನಿಸರ್ಗ [ಸಹಜ ಸ್ವಭಾವಿಕ] ಕೋಮಲೆಯರಾದ ಈ ರಮಣಿಯರೇ ಸಂದರ್ಭಾನುಸಾರವಾಗಿ ಪುರುಷರನ್ನು ಮೀರಿಸಿ ದೊಡ್ಡ ದೊಡ್ಡ ರಾಜ್ಯಗಳನ್ನು ಕಟ್ಟಿ, ಯುದ್ಧಗಳಲ್ಲಿ ಅದ್ಭುತವಾದ ಪರಾಕ್ರಮವನ್ನು ಪ್ರಕಟಗೊಳಿಸಿ, ದುಷ್ಟನಿಗ್ರಹ-ಶಿಷ್ಟರಕ್ಷಣಗಳನ್ನು ಮಾಡಿರುವ ವಿಷಯವು ಕೂಡ, ನಮ್ಮ ಪುರಾಣಗಳಿಂದ ಹೇಗೋ ಅರ್ವಾಚೀನ ಚರಿತ್ರೆಯಿಂದಲೂ ಹಾಗೆಯೇ ತಿಳಿಯಬರುತ್ತದೆ ದ್ರೌಪದಿ, ಕೈಕೇಯಿ, ಪ್ರಮೀಳೆಯೇ ಮೊದಲಾದ ಸ್ತ್ರೀಯರ ಚರಿತ್ರೆಗಳು ಪುರಾಣಗಳಲ್ಲಿ ವ್ಯಾವರ್ಣಿತವಾಗಿರುವವು ಅರ್ವಾಚೀನ ಇತಿಹಾಸವನ್ನು ಹುಡುಕಹೋದರೂ ಇಂದೋರಿನ ಅಹಲ್ಯಾಬಾಯಿ, ಝಾನಸಿಯ ಲಕ್ಷ್ಮೀಬಾಯಿ ಮುಂತಾದ ವೀರಾಂಗನೆಯರ ಚರಿತ್ರೆಗಳು ನಮ್ಮ ಕಣ್ಣಿದಿರಲ್ಲಿ ನಿಲ್ಲುತ್ತಿವೆ ನಮ್ಮ ಈ ಪ್ರಬಂಧದ ಕಥಾನಾಯಿಕೆಯಾದ "ರುದ್ರಮ್ಮದೇವಿ"ಯು ಕೂಡ, ಇದೇ ರತ್ನಮಾಲೆಯಲ್ಲಿ ಪೋಣಿಸಲು ತಕ್ಕವಳಾಗಿರುವಳೆಂದು ಧಾರಾಳವಾಗಿ ಹೇಳಬಹುದಾಗಿದೆ.

ರುದ್ರಮ್ಮದೇವಿಯು, ದೇವಗಿರಿಯ ರಾಜನ ಒಬ್ಬಳೇ ಒಬ್ಬಳಾದ ಮಗಳು. ಈ ರಾಜ್ಯವು ಕ್ರಿ ಶ ೧೧೮೭ ರಿಂದ ೧೩೧೮ ರ ಪರ್ಯಂತ ದಕ್ಷಿಣಾಪಥದಲ್ಲಿ ನಾಶಿಕದಿಂದ ದೇವಗಿರಿಯವರೆಗೂ ವ್ಯಾಪಿಸಿಕೊಂಡಿದ್ದುದು ಚರಿತ್ರೆಯಲ್ಲಿ ಬಹು ಪ್ರಸಿದ್ಧವಾಗಿದೆ * ಇದನ್ನು ಪ್ರಥಮತಃ ಮಧುರೆಯಿಂದ ದ್ವಾರಕೆಗೂ ಅಲ್ಲಿಂದ ಮುಂದೆ ದೇವಗಿರಿಗೂ ಬಂದವರಾದ ಯಾದವ ವಂಶದ ರಾಜರುಗಳು ಆಳುತ್ತಿದ್ದರು. ರುದ್ರಮ್ಮದೇವಿಯು ಯಾದವ ವಂಶದ ಯಾವರಾಜನ ಮಗಳೆಂಬುದು ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಅವಳು ಯಾದವ ರಾಜಕುಮಾರಿಯೆಂಬುದು ನಿಜವಾದ ಪಕ್ಷದಲ್ಲಿ ಭಿಲ್ಲಮ ರಾಜನ ಮಗಳಾಗಿಯೋ

---

* ಅಲ್ಲಾವುದ್ದೀನನು ಕ್ರಿ ಶ ೧೨೯೪ರಲ್ಲಿ ದೇವಗಿರಿಗೆ ಮುತ್ತಿಗೆಹಾಕಿ ಆಗಳಿನ ರಾಜನಾದ ರಾಮಚಂದ್ರ ದೇವನನ್ನು ಸೋಲಿಸಿ ಆತನಿಂದ ತುಂಬಾ ಧನವನ್ನು ಪಡೆದು ಪ್ರತಿವರ್ಷವೂ ಪೊಗದಿಕೊಡುವಂತೆ ಒಡಂಬಡಿಕೆ ಮಾಡಿಕೊಂಡು ಹೊರಟುಹೋದನು. ಆದರೆ ರಾಮಚಂದ್ರನು ಒಡಂಬಡಿಕೆಯಂತೆ ಕಪ್ಪವನ್ನು ಒಪ್ಪಿಸದಿರಲು ೧೩೦೭ ರಲ್ಲಿ ಮಾಲಿಕ್‌ಕಾಫರನೆಂಬ ಅಲ್ಲಾವುದ್ದೀನನ ದಳವಾಯಿಯು ದೊಡ್ಡ ಸೈನ್ಯದೊಡನೆ ದಂಡೆತ್ತಿಬಂದನು. ಆಗ ರಾಮಚಂದ್ರನು ಕ್ಷಮೆಬೇಡಿ ಅಲ್ಲಾವುದ್ದೀನನ ಮಾಂಡಲಿಕನಾಗಿರಲು ಒಪ್ಪಿಕೊಂಡನು. ಮುಂದೆ ಕ್ರಿ ಶ ೧೩೧೮ರಲ್ಲಿ ರಾಮಚಂದ್ರನ ಅಳಿಯನಾದ ಹರಪಾಲನೆಂಬವನು ಅಲ್ಲಾವುದ್ದೀನನಿಗೆ ವಿರುದ್ಧವಾಗಿ ದಂಗೆಯೇಳಲು ಪ್ರಯತ್ನಪಡಲಾಗಿ ಆತನನ್ನು ತುರುಷ್ಕರು ಹಿಡಿದು ಸಜೀವವಾಗಿ ಚರ್ಮವನ್ನು ಸುಲಿದು ಕೊಂದು ಬಿಟ್ಟರು. ಇಲ್ಲಿಗೆ ದೇವಗಿರಿಯ ರಾಜ್ಯವು ನಾಮಶೇಷವಾಯಿತು. ಮುಸಲ್ಮಾನರು ದೇವಗಿರಿಗೆ ದೌಲತಾಬಾದೆಂದು ಹೆಸರು ಕೊಟ್ಟರು. ಈ ಪಟ್ಟಣವು ಆಗ ದಕ್ಷಿಣದಲ್ಲಿ ಅಷ್ಟು ಪ್ರಸಿದ್ಧವಾಗಿದ್ದುದರಿಂದಲೇ ತೊಘಲಕ್ ವಂಶದ ಮಹಮ್ಮದೆಂಬ ರಾಜನು ದೇಹಲಿಯಿಂದ ತನ್ನ ರಾಜಧಾನಿಯನ್ನು ಇಲ್ಲಿಗೆ ತರಲು ಪ್ರಯತ್ನಪಟ್ಟನು. ಈ ವಿಷಯವು ಚರಿತ್ರಗಳಲ್ಲಿ ಹೇಳಲ್ಪಟ್ಟಿರುವುದು. ಪ್ರಕೃತದಲ್ಲಿ ದೌಲತಾಬಾದು ಪಟ್ಟಣವು ನಿಜಾಮ ರಾಷ್ಟ್ರದಲ್ಲಿ ಅವರಂಗಾಬಾದ ಸುಭೆಗೆ ಸೇರಿರುವುದು

ಮಮ್ಮಗಳಾಗಿಯೋ ಇರಬಹುದು. ಆದರೆ ಈ ವಿಷಯವು ಇನ್ನೂ ವಾದಗ್ರಸ್ತವಾಗಿ ನಿಂತಿದೆ.

ಈ ದೇವಗಿರಿಯ ರಾಜ್ಯಕ್ಕೆ ತಗುಲಿಕೊಂಡು ಪೂರ್ವದಿಕ್ಕಿಗೆ ಓರಂಗಲ್ಲೆಂಬ ಬೇರೊಂದು ರಾಜ್ಯವಿದ್ದಿತು. ಇದನ್ನು *ಕಾಕತೀಯ ವೆಂಬವಂಶದ ಆಂಧ್ರ ರಾಜರುಗಳು ಆಳುತ್ತಿದ್ದರು. ಈ ಉಭಯರಾಜ್ಯಗಳೊಳಗೆ ತೀವ್ರವಾದ ವೈಮನಸ್ಯವಿದ್ದು ಆಗಿಂದಾಗ ಯುದ್ಧಗಳು ನಡೆಯುತ್ತಿದ್ದುವು. ಓರಂಗಲ್ಲಿನ ಮೊದಲನೆಯ ಪ್ರತಾಪರುದ್ರರಾಜನನ್ನು ಆತನ ತಮ್ಮನಾದ ಮಹಾದೇವರಾಜನೆಂಬವನು ಕ್ರಿ. ಶ. ೧೧೭೮ರಲ್ಲಿ ಕೊಂದು † ತಾನೇ ಪಟ್ಟವೇರಿದನು. ಮುಂದೆ ಈತನು ಕ್ರಿ. ಶ. ೧೧೯೦

---

*ಈ ವಂಶದವರ ಮೂಲವು ಚನ್ನಾಗಿ ತಿಳಿಯದು. ಮೊತ್ತಮೊದಲು ಓರಂಗಲ್ಲಿಗೆ ಸಮೀಪದ ಹನುಮಕೊಂಡವೆಂಬ ಗ್ರಾಮದಲ್ಲಿ ಮಾಂಡಲಿಕ ರಾಜರಾಗಿರುತ್ತಿದ್ದ ಇವರು ಕ್ರಿ. ಶ. ೧೨-೧೩ ಶತಮಾನಗಳಲ್ಲಿ ಬಹು ಪ್ರಬಲರಾಗಿ ಬೆಳೆದು ಆಂಧ್ರದೇಶಕ್ಕೆಲ್ಲ ಒಡೆಯರಾದರು. ಇವರಲ್ಲಿ ರುದ್ರಮ್ಮದೇವಿಯ ಮೊಮ್ಮಗನಾದ ಎರಡನೆಯ ಪ್ರತಾಪರುದ್ರನು ಬಹಳ ಕೀರ್ತಿಗೊಂಡು, ಕ್ರಿ. ಶ. ೧೨೯೬ರಿಂದ ೧೩೨೩ರವರೆಗೆ ಆಳಿದನು. ಕ್ರಿ. ಶ. ೧೩೦೩ರಿಂದ ಮೊದಲ್ಗೊಂಡು ಮುಸಲ್ಮಾನರಿಗೂ ಓರಂಗಲ್ಲು ರಾಜರುಗಳಿಗೂ ಯುದ್ಧಕ್ಕೆ ಪ್ರಾರಂಭವಾಯಿತು. ೧೩೨೩ರಲ್ಲಿ ನಡೆದ ಕೊನೆಯ ಯುದ್ಧದಲ್ಲಿ ಪ್ರತಾಪರುದ್ರನು ತುರುಷ್ಕರಿಗೆ ಸಂಪೂರ್ಣವಾಗಿ ಸೋತು ಬಂದಿಯಾಗಿ ದೇಹಲಿಗೆ ಒಯ್ಯಲ್ಪಟ್ಟನು. ಈತನ ತರುವಾಯ ಇವರ ಮಗನಾದ ಕೃಷ್ಣನೆಂಬುವನೂ ಬೇರೆರಾಜರೂ ಆಳಿದರಾದರೂ ಪ್ರತಾಪರುದ್ರನೊಂದಿಗೇ ಓರಂಗಲ್ಲು ರಾಜ್ಯದ ಪ್ರಾಬಲ್ಯವು ನಿಂತುಹೋಯಿತು. ಅವನ ತರುವಾಯ ಆ ರಾಜ್ಯವು ತಲೆಯೆತ್ತಲಿಲ್ಲ, ಹೇಗೋ ಹಾಗೆ ಕಾಲಕ್ರಮಣ ಮಾಡಿಕೊಂಡಿದ್ದು ಕೊನೆಗೆ ಬ್ರಾಹ್ಮಣೀ ರಾಜ್ಯದಲ್ಲಿ ವಿಲೀನವಾಗಿ ಹೋಯಿತು.

† ಪ್ರತಾಪರುದ್ರನು ಪ್ರಮಾದವಶಾತ್ ತನ್ನ ತಂದೆಯನ್ನು ಕೊಂದನೆಂದೂ ಆ ಕೋಪದಿಂದ ವೈರವನ್ನು ಸಾಧಿಸಿ ಮಹಾದೇವನು ಪ್ರತಾಪರುದ್ರನನ್ನು ಕೊಂದನೆಂದೂ ತಿಳಿಯಬರುತ್ತಿದೆ.

ಲ್ಲಿ ದೇವಗಿರಿಯ ಮೇಲೆ ದಂಡೆತ್ತಿಹೋಗಿ ದೇವಗಿರಿಯ ಅಗಳಿನ ರಾಜನಾದ ಭಿಲ್ಲಮನಿಂದ ಕೊಲ್ಲಲ್ಪಟ್ಟನು.

ಮಹಾದೇವರಾಜನ ತರುವಾಯ ಆತನ ಅಣ್ಣ ಪ್ರತಾಪನ ಮಗನಾದ § ಗಣಪತಿದೇವನು ಪಟ್ಟವೇರಿದನು. ತನ್ನ ಚಿಕ್ಕಪ್ಪನನ್ನು ಕೊಂದ ಕೋಪದಿಂದ ಈ ರಾಜನು ದೊಡ್ಡ ಸೇನೆಯೊಡನೆ ಪುನಃ ದೇವಗಿರಿಯ ಮೇಲೆ ದಂಡೆತ್ತಿಹೋಗಿ (೧೧೯೧ರಲ್ಲಿ) ಅಗಳಿನ ರಾಜನಾದ ಜೈತ್ರಪಾಲನನ್ನು ಸಂಪೂರ್ಣವಾಗಿ ಸೋಲಿಸಿಬಿಟ್ಟನು. ಆಗ ಜೈತ್ರಪಾಲನಿಗೆ ತುಂಬ ಪಶ್ಚಾತ್ತಾಪವುಂಟಾಗಿ, ಈ ಮುಂದೆ ದೇವಗಿರಿಯ ಮತ್ತು ಓರಂಗಲ್ಲಿನ ರಾಜರೊಳಗೆ ಕಲಹವಿಡಲಾಗದೆಂಬ ಭಾವನೆಯಿಂದ ಆತನು ತನ್ನ ಮುದ್ದುಗುವರಿಯಾದ ರುದ್ರಮ್ಮದೇವಿಯನ್ನು ಗಣಪತಿದೇವನಿಗೆ ವಿವಾಹಮಾಡಿ ಕೊಟ್ಟನು ‡ ಈ ವಿವಾ

---

§ ಗಣಪತಿದೇವನು ಮಹಾದೇವನ ಮಗನೇ ಹೊರತು ಪ್ರತಾಪರುದ್ರನ ಮಗನಲ್ಲವೆಂದು ಕೆಲಕೆಲವು ಶಾಸನಗಳಲ್ಲಿ ಸೂಚಿತವಾಗಿದೆ. ಪ್ರತಾಪರುದ್ರನ ಮಗನಾಗಿದ್ದರೆ ತನ್ನ ತಂದೆಯ ಕೊಲೆಗಾರನಾದ ಚಿಕ್ಕಪ್ಪನ ಮರಣದಿಂದ ಆತನು ಅಷ್ಟೊಂದು ಕ್ರುದ್ಧನಾದನೆಂದು ನಂಬುವದು ಕಷ್ಟ.

‡ ರುದ್ರಮ್ಮನು ಗಣಪತಿದೇವನ ವಿಧವೆಯೆಂದು ಮಾರ್ಕೊಪೋಲೋ ಎಂಬ ವಿದೇಶೀಯ ಪ್ರವಾಸಿಯು ಬರೆದಿಟ್ಟಿರುವನು. ಈ ಅಭಿಪ್ರಾಯವು „ ಹಿಂದೂದೇಶಕಥಾಸಂಗ್ರಹದ ರಚಕರಾದ ಮ|| ಕೆ ವಿ ಲಕ್ಷ್ಮಣರಾವ್ ಎಮ್. ಎ, ಯವರಿಗೂ ರಾವ್‌ಬಹಾದ್ದೂರ್ ವೀರೇಶಲಿಂಗಂಪಂತುಲುಯವರಿಗೂ ಸಮ್ಮತವಾಗಿದೆ. ಸ್ಥಳೀಯವೃತ್ತಾಂತಗಳೂ ಹೀಗೆಯೇ ಹೇಳುತ್ತಿವೆ „ ವಚನ ಸೋಮದೇವರಾಜೀಯ" ವೆಂಬ ಆಂಧ್ರಗ್ರಂಥವೂ ಇದಕ್ಕೆ ಅನುಕೂಲವಾಗಿದೆ. ಆದರೆ ಕಂಚಿಯಲ್ಲಿ ದೊರೆತ (ಗಣಪತಿದೇವರ ಕಾಲದ) ಒಂದು ತಾಂಬ್ರ ಶಾಸನವನ್ನು ಪ್ರಕಟಿಸುವಲ್ಲಿ (Indian Autiquary, July 1892) ಡಾ|| ಹುಲ್ಟ(Hultysch) ಯವರು ಹೀಗೆಂದಿರುವರು.—

„ಅವಳ ತಂದೆಯಾದ ಗಣಪತಿಯು ಪುತ್ರಸಂತತಿಯಿಲ್ಲದುದರಿಂದ ರುದ್ರಮ್ಮನನ್ನೇ ಗಂಡುಮಗುವೆಂದು ರಾಜ್ಯದಲ್ಲಿ ಪ್ರಚುರಗೊಳಿಸಿರುವನೆಂದು ಹೆಸರುಹಾಕಿದನು.

ಹದ ಪರಿಣಾಮವಾಗಿ ಈ ಉಭಯ ರಾಜ್ಯಗಳೊಳಗೆ ಉಂಟಾದ ಸ್ನೇಹ ಸಂಬಂಧವು ಓರಂಗಲ್ಲು ರಾಜ್ಯವಿರುವಷ್ಟು ಕಾಲವೂ ನಿರಾತಂಕವಾಗಿ ನಡೆಯಿತೆಂದು ಹೇಳುವರು

ರಾಜಾ ಗಣಪತಿದೇವನು (೧೧೯೦—೧೨೫೬) ಆಂಧ್ರಚರಿತೆಯಲ್ಲಿ ಬಹು ಪ್ರಸಿದ್ಧನು ಈತನು ದೀರ್ಘವಾದ ತನ್ನ ಆಳ್ವಿಕೆಯಲ್ಲಿ ಕೇವಲ ರಾಜ್ಯವಿಸ್ತಾರವೊಂದನ್ನೇ ಗಮನಿಸದೆ ದೇಶದಲ್ಲಿ ವಿದ್ಯೆಯೂ, ಕಲಾಕೌಶಲ್ಯಗಳೂ ಅಭಿವೃದ್ಧಿಗೆ ಬರುವಂತೆ ತುಂಬ ಪ್ರೋತ್ಸಾಹ ಕೊಟ್ಟನು "ಮನೋಳಿ" ಎಂಬಲ್ಲಿಯ ಒಂದು ಶಾಸನದಲ್ಲಿ ಈತನನ್ನು 'ತೆಲುಂಗಾಣ್ಯ ರಾಜ್ಯಕ್ಕೆ ವ್ಯವಸ್ಥಿತ ಸ್ವರೂಪಕೊಟ್ಟವನು" ಎಂಬುದಾಗಿ ಸ್ತುತಿಸಿರುವರು * ಈತನು ತನ್ನ ರಾಜ್ಯವನ್ನು ಉತ್ಕಲದಿಂದ ನೆಲ್ಲೂರಿನ ವರೆಗೆ ಬೆಳೆಯಿಸಿದ್ದನು

ಗಣಪತಿದೇವನಿಗೆ ೧೨೫೬ರಲ್ಲಿ ಮರಣವುಂಟಾಯಿತು ಆತನಿಗೆ ಪುತ್ರಸಂತತಿಯಿರಲಿಲ್ಲ ರುದ್ರಮ್ಮನು ಗಣಪತಿಯ ಪತ್ನಿಯೆನ್ನುವ ಪಕ್ಷದವರು ಆತನಿಗೆ ರುದ್ರಮ್ಮನಲ್ಲಿ ಹುಟ್ಟಿದ ಉಮ್ಮಕ್ಕ (ಮುಮ್ಮಕ್ಕ

---

ಇವಳು ಸರ್ವದಾ ಪುರುಷವೇಷದಿಂದಲೇ ಇರುತ್ತಿದ್ದಳು ಆತನ ಮರಣಾನಂತರದಲ್ಲಿ ರುದ್ರದೇವ ಮಹಾರಾಜನೆಂಬ ಹೆಸರಿಂದ ರುದ್ರಮ್ಮನು ಪಟ್ಟಕ್ಕೆ ಬಂದಳು" "ಪ್ರತಾಪರುದ್ರೀಯ" ವೆಂಬ ಲಕ್ಷಣಗ್ರಂಥ ನಾಟಕಪ್ರಕರಣದಲ್ಲಿ ಪ್ರರೋಚಕನು ರುದ್ರಾಂಬೆಯೊಡನೆ "ತವಮಾತಾ ಶಿವಾಸಾಕ್ಷಾದ್ದೇವೋ ಗಣಪತಿ ಪಿತಾ"— ಎಂದರೆ ನಿನ್ನ ತಾಯಿಯಾದ ಸೋಮಾಂಬೆಯೇ ಪಾರ್ವತಿಯೆಂದೂ, ತಂದೆಯಾದ ಗಣಪತಿಯೇ ಶಿವನೆಂದೂ ಹೇಳಿರುವನು ಬೇರೆಕೆಲವು ಶಾಸನಗಳಲ್ಲಿ ಮಲ್ಲದೇವನೆಂಬುವನು ಗಣಪತಿಗೆ ರುದ್ರಾಂಬೆಯಲ್ಲದೆ ಗಣಾಂಬೆ ಎಂಬ ಬೇರೊಬ್ಬ ಮಗಳಿದ್ದಂತೆಯೂ ತಿಳಿದು ಬರುತ್ತದೆ ಈ ವಿಷಯವು ಈ ವರೆಗೆ ಪರಿಷ್ಕಾರವಾಗಿ ತೀರ್ಮಾನವಾದಂತೆ ತೋರುವದಿಲ್ಲ

* ೧೯೧೭ನೇ ಇಸವಿ ಮಾರ್ಚತಿಂಗಳ ವಾಗ್ಭೂಷಣದ ೩೧ನೇ ಪುಟದಲ್ಲಿ ಈತನ ರಾಜ್ಯಭಾರಕ್ಕೆ ಸಂಬಂಧಪಟ್ಟ ಕೆಲಕೆಲವು ವಿಶೇಷಗಳು ಹೇಳಲಾಗಿವೆ.

ಅಥವಾ ಮುಮ್ಮಡಮ್ಮ ಎಂದೂ ಒಂದು ಪುಸ್ತಕದಲ್ಲಿ ಹೇಳಿದೆ) ಮತ್ತು ರುಯ್ಯಮ್ಮ ಎಂಬ ಪುತ್ರಿಯರಿಬ್ಬರು ಇದ್ದರೆನ್ನುವರು. ವಿರುದ್ಧ ಪಕ್ಷದವರು ಈ ಹುಡಿಗಿಯರು ರುದ್ರಮ್ಮನ ಮಕ್ಕಳೆಂದೂ ರುದ್ರಮ್ಮ-ಗಣಪಾಂಬೆಯರೇ ಗಣಪತಿಯ ಕುವರಿಯರೆಂದೂ ಸಾಧಿಸುವರು ಇದು ಹೇಗಾದರೂ ಇರಲಿ ಗಣಪತಿಯ ತರುವಾಯ ರುದ್ರಾಂಬೆಯು ಸಿಂಹಾಸನವನ್ನೇರಿದಳು ಮತ್ತು ಗಣಪತಿಯ ಕಾಲದಿಂದಲೂ ಮಂತ್ರಿಯಾಗಿದ್ದ ಶಿವರುದ್ರಯ್ಯನೆಂಬ ಆರಾಧ್ಯಬ್ರಾಹ್ಮಣನನ್ನೂ ಸೇನಾಧಿಪತಿಯಾಗಿದ್ದ ಜಗನ್ನಿದೇವನೆಂಬವನನ್ನೂ ಆಯಾ ಪಕ್ಷದಲ್ಲಿ ಸ್ಥಿರಗೊಳಿಸಿ ೧೨೯೫ನೇ ಇಸವಿಯ ಪರ್ಯಂತ ಮೂವತ್ತೆಂಟು ವರ್ಷಗಳ ಕಾಲ ಅನನ್ಯಸಾಧಾರಣವಾದ ಕುಶಲತೆಯಿಂದ ಓರಂಗಲ್ಲು ರಾಜ್ಯವನ್ನು ಆಳಿದಳು

ರುದ್ರಮ್ಮನ ಆಡಳಿತವು ದರ್ಪಯುಕ್ತವಾಗಿಯೂ, ಸ್ವಭಾವವು ದಯಾಪೂರ್ಣವಾಗಿಯೂ ಇದ್ದಿತು ಪ್ರಜೆಗಳನ್ನು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೂ ಹೆಚ್ಚಾದ ಮಮತೆಯಿಂದ ಕಾಪಾಡಿದಳು ಹೀಗಾದುದರಿಂದ ಪ್ರಜಾಜನರು ಅವಳನ್ನು ಕೇವಲ ಭಗವತಿಯ ಅಪರಾವತಾರವೆಂದೆಣಿಸಿ ಭಯಭಕ್ತಿಗಳುಳ್ಳವರಾಗಿ ನಡೆಯುತ್ತಿದ್ದರು ರುದ್ರಮ್ಮದೇವಿಯು ಪ್ರಯಾಣಿಕರುಗಳಿಗೆ ಆಯಾಸವಾಗದಂತೆ ದಾರಿಯುದ್ದಕ್ಕೂ ವಿವಿಧವಾದ ಸಾಲುಮರಗಳನ್ನೂ ನೆಡಿಸಿದಳು ಕೆರೆಬಾವಿಗಳನ್ನು ಅಗಿಸಿದಳು ಧರ್ಮಶಾಲೆಗಳನ್ನು ಕಟ್ಟಿಸಿ, ಅನ್ನಸತ್ರಗಳನ್ನು ಇಡಿಸಿದಳು ಸಜ್ಜನರೂ ವಿದ್ವಾಂಸರೂ ಸತ್ಪಾತ್ರರೂ ಆದ ಬ್ರಾಹ್ಮಣೋತ್ತಮರಿಗೆ ಅಪಾರವಾಗಿ ದಾನಗಳನ್ನು ಕೊಟ್ಟಳು. ಗೋವುಗಳ ಕೊಂಬುಗಳಿಗೆ ಬಂಗಾರದ ಕಟ್ಟುಗಳನ್ನು ತೊಡಿಸಿ ಬ್ರಾಹ್ಮಣರಿಗೆ ಅರ್ಪಿಸಿದಳೆಂದು ಕೂಡ ಹೇಳುವರು ಹೀಗಾಗಿ ಈ ಮಹಾರಾಣಿಯ ಕೀರ್ತಿಯು ದಿಗಂತ ವಿಶ್ರಾಂತವಾಗಿ ವ್ಯಾಪಿಸಿತು

ರುದ್ರಮ್ಮದೇವಿಯು ರಾಜಪದದಲ್ಲಿದ್ದಾಗ ಇಟಲಿದೇಶದ ವೆನೀಸಿನ ಮಾರ್ಕೊಪೋಲೋ [Marcopolo] ಎಂಬ ವರ್ತಕನೊಬ್ಬನು

ಪರ್ಯಟನಕ್ಕಾಗಿ (೧೨೯೦-೯೩ರ ನಡುವೆ) ಈ ದೇಶಕ್ಕೆ ಬಂದಿದ್ದನು. ಆತನು ಕಣ್ಣಾರ ನೋಡಿ ಬರೆದಿಟ್ಟ ಪುಸ್ತಕದಲ್ಲಿ ಈ ಮಹಾರಾಣಿಯನ್ನು ಕುರಿತು ಹೀಗೆ ಹೇಳಿದೆ —"ಮಲೆಬಾರು ಬಿಟ್ಟು ಸಾವಿರ ಮೈಲಿ ಉತ್ತರಕ್ಕೆ ಹೋದರೆ, "ಮುಟ್ಟಪಲ್ಲಿ" ಎಂಬ ರಾಜ್ಯವು ತಗಲುವುದು. ಈ ರಾಜ್ಯವು ಪೂರ್ವದಲ್ಲಿ ಒಬ್ಬ ರಾಜನ ಕೈಯಕೆಳಗಿದ್ದಿತು. ಈ ರಾಣಿಯು ತುಂಬಾ ವಿವೇಕಶಾಲಿನಿಯಾಗಿ ಸುಮಾರು ನಲವತ್ತು ವರ್ಷಗಳ ಕಾಲ ರಾಜ್ಯಭಾರ ಮಾಡಿದಳು ಈ ಕಾಲದಲ್ಲಿ ಅವಳು ತನ್ನ ಮೃತಭರ್ತೃವಿಗಿಂತ ಅಧಿಕ ಮತ್ತು ಉತ್ತಮರೀತಿಯಲ್ಲಿ ಆಳಿದಳೆಂದು ದೃಢವಾಗಿ ಹೇಳಬಲ್ಲೆನು ಇವಳು ತನ್ನ ರಾಜ್ಯದಲ್ಲಿ ದಯೆ, ಶಾಂತಿ, ನ್ಯಾಯವೇ ಮೊದಲಾದುದನ್ನು ನಿರಂತರವಾಗಿ ಅಭಿವೃದ್ಧಿಪಡಿಸುತ್ತಿದ್ದಳು . ... ... "

ಹೀಗೆ ಈ ಮಹಾರಾಣಿಯು ಪ್ರಜಾರಂಜನೈಕಪರಾಯಣೆಯಾಗಿ ದರ್ಪದಿಂದಲೂ ಧರ್ಮದಿಂದಲೂ ರಾಜ್ಯಭಾರಮಾಡಿದಳಾದರೂ, ಅವಳು ಹೆಂಗಸೆಂಬ ತಿರಸ್ಕಾರಭಾವವೂ ಅಸಮಾಧಾನವೂ ಇವಳ ಮಾಂಡಲಿಕರಾದ ಕೆಲಕೆಲವು ನಾಯಕರಲ್ಲಿ ಇಲ್ಲದೆ ಇರಲಿಲ್ಲ. ಆಂಧ್ರಸಾಮ್ರಾಜ್ಯಸಿಂಹಾಸನವನ್ನು ಒಬ್ಬ ಅಬಲೆಯು ಏರುವುದೂ ಅವಳ ಪಾದಗಳಿಗೆ ವೀರರಾದ ಪುರುಷರು ನಮಸ್ಕರಿಸುವುದೂ ಅವರಿಗೆ ಕೇವಲ ಅಸಹ್ಯವಾಗಿ ತೋರಿತು ಇವರೊಳಗೆ ಹರಿಹರದೇವ ಮುರಾರಿದೇವರೆಂಬ ನಾಯಕರಿಬ್ಬರು ಮುಖ್ಯರಾಗಿದ್ದರು ಇವರು ದೇವಗಿರಿಯ ರಾಜನಾದ ಮಹಾದೇವರಾಜ(೧೨೬೦-೧೨೭೧)ನೊಡನೆ ಒಳಸಂಚು ನಡೆಯಿಸಿ ಓರಂಗಲ್ಲಿನ ಮೇಲೆ ದಂಡೆತ್ತಿ ಬರುವಂತೆ ಆತನನ್ನು ಹುರಿದುಂಬಿಸುತಿದ್ದರು ಈ ರಾಜನ ಅಣ್ಣನಾದ ಕೃಷ್ಣಭೂಪತಿಯು ಓರಂಗಲ್ಲಿನ ಗಣಪತಿರಾಜನು ಮರಣಹೊಂದಿದ ಸಂವತ್ಸರದಲ್ಲಿಯೇ ಮೃತನಾಗಿದ್ದನು ಹೀಗಾಗಿ ಆಗಲೇ ಸಿಂಹಾಸನಸ್ಥನಾಗಿದ್ದ ಮಹಾದೇವರಾಜನನ್ನು — " ಮಹಾದೇವರಾಜನು ಪಟ್ಟಾಭಿಷಿಕ್ತನಾದೊಡನೆ ಆತನ ಪ್ರತಾಪಕ್ಕೆ ಭಯಪಟ್ಟು ವೀರನಾದ ಆತನು

ಸ್ತ್ರೀಯರ ಮತ್ತು ಬಾಲಕರ ಮೇಲೆ ಶಸ್ತ್ರವೆತ್ತುವವನಲ್ಲವೆಂದು ತಿಳಿದು ಆಂಧ್ರರು ಸ್ತ್ರೀಯನ್ನೂ, ಮೂಳವ್ಯರು ಶಿಶುವನ್ನೂ ರಾಜ್ಯಪದದಲ್ಲಿಟ್ಟರು''ಎಂದು ಮುಂತಾಗಿ ಈ ದುರಾತ್ಮರುಗಳು ವ್ಯಂಗಸೂಚಕವಾಗಿ ಹೊಗಳಿ ಉಬ್ಬಿಸಿ, ಯುದ್ಧೋದ್ಯುಕ್ತನಾಗುವಂತೆ ಮಾಡಿದರು.

ಇತ್ತ ರುದ್ರಮ್ಮದೇವಿಯು ತನ್ನ ಸುಕುಮಾರಿಯಾದ ಉಮ್ಮಕ್ಕನಲ್ಲಿ ಪುತ್ರಸಂತಾನವಾಗಬೇಕೆಂಬ ಅಭಿಲಾಷೆಯಿಂ. ಬುದ್ಧಗಣಪತಿಸ್ವಾಮಿಯು ಆರಾಧನೆಗಾಗಿ ಒಡ್ಡಪಲ್ಲಿ ಎಂಬಲ್ಲಿಗೂ, ಅಲ್ಲಿಂದ ಮುಂದೆ ಏಕವೀರಮಹಾದೇವಿಯು ಸೇವೆಗಾಗಿ ಮೊಗಲಿಚೆರ್ಲ ಎಂಬಲ್ಲಿಗೂ ಹೋಗಿದ್ದಳು ಆ ಕಾಲವನ್ನು ಸಾಧಿಸಿ ಮೇಲೆ ಹೇಳಿದ ಹರಿಹರ-ಮುರಾರಿ ದೇವರುಗಳು ಅವರನ್ನು ಹಿಡಿಯಲು ಪ್ರಯತ್ನಪಟ್ಟರಾದರೂ ಯಾವುದೋ ಉಪಾಯಾಂತರದಿಂದ ತಪ್ಪಿಸಿಕೊಂಡು ಅವಳು ಮಗಳೊಡನೆ ಪುನಃ ಓರಂಗಲ್ಲಿಗೆ ಬಂದುಮುಟ್ಟಿದಳು ಇವರ ಈ ಅಪರಾಧವು ಕೇವಲ ರಾಜದ್ರೋಹವಾಗಿದ್ದುದರಿಂದ ಅವರನ್ನು ಹೇಗೆ ಶಿಕ್ಷಿಸಿದರೂ ಅನ್ಯಾಯವಾಗುತ್ತಿರಲಿಲ್ಲ ತಥಾಪಿ (ಆದರೂ) ರುದ್ರಮ್ಮನು, ಮೊದಲನೆಯ ಅಪರಾಧವು ಕ್ಷಮ್ಯವೆಂದು ತಿಳಿದು ಅವರನ್ನು ಯಾವ ಶಿಕ್ಷೆಗೂ ಒಳಪಡಿಸದೆ ಬಿಟ್ಟುಬಿಟ್ಟಳು. ಆದರೂ ಹರಿಹರ-ಮುರಾರಿದೇವರು ಕೃತಜ್ಞತೆಯಿಂದ ಸುಮ್ಮನಾಗದೆ "ಕೆಡುವ ಕಾಲದ ಬುದ್ಧಿ"ಯಿಂದ ತಿರುತಿರುಗಿ ಒಳಸಂಚು ನಡೆಯಿಸತೊಡಗಿದರಾಗಿ, ಕೊನೆಗೆ ನಿರುಪಾಯದಿಂದ ಅವರ ಮೇಲೆ ಸ್ವಲ್ಪ ಸೈನ್ಯವನ್ನು ಕಳುಹಿ ಅವರನ್ನು ಹಿಡಿದು ಕೊಲ್ಲಿಸಿ, ಅವರ ಧನ ಸಂಪತ್ತನ್ನೆಲ್ಲ ಮುಟ್ಟುಗೋಲು ಹಾಕಿ ಅದರಿಂದ ಪದ್ಮಾಕ್ಷಿದೇವಿಗೆ ಮಹೋತ್ಸವಗಳನ್ನು ಮಾಡಿಸಿದಳು.

ಈ ಸಮಾಚಾರವನ್ನು ಕೇಳಿ ದೇವಗಿರಿಯ ಮಹಾದೇವರಾಜನು ಕೋಪೋದ್ದೀಪ್ತನಾಗಿ ಒಡನೆಯೇ ಓರಂಗಲ್ಲಿನಮೇಲೆ ದಂಡೆತ್ತಿ ಹೋಗಲು ಸಿದ್ಧನಾದನು. ಅದನ್ನು ತಿಳಿದು ರುದ್ರಮ್ಮದೇವಿಯೂ ವಿಳಂಬಿಸದೆ ತಾನೂ ಆತನಿಗೆ ಇದಿರಾಗುವುದಕ್ಕೆ ಓರಂಗ

ಲ್ಲಿನ ಕೋಟೆಯನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಈ ಮೊ
ದಲೇ ಗಣಪತಿದೇವನು ಕೈಕೊಂಡಿದ್ದನಾದರೂ ನಡುವೆ ಆತನಿಗೆ
ಮರಣಪ್ರಾಪ್ತವಾದುದರಿಂದ ಕೆಲಸವು-ಅರ್ಧದಲ್ಲಿಯೇ ನಿಂತಿದ್ದಿತು
ಈ ಉದ್ಯೋಗವನ್ನು ರಾಣಿಯು ಪುನಃ ಕೈಕೊಂಡು ಪಟ್ಟಣದ ಸು
ತ್ತಲೂ ಆಳವಾದ ಅಗಳೆಯನ್ನು ಅಗೆಯಿಸಿ, ಮೊದಲೊಂದು ಮುಳ್ಳು
ಗೋಡೆಯನ್ನೂ ಅದರಿಂದೊಳಗೆ "ಭೂಮಿಕೋಟ" ಎಂಬ ಒಂದು
ಮಣ್ಣುಗೋಡೆಯನ್ನೂ ಎಲ್ಲಕ್ಕೂ ಒಳಗೆ "ಪೆದ್ದಕೋಟ" ವೆಂಬ
ಕಲ್ಲಿನ ಗೋಡೆಯನ್ನೂ ಹಾಕಿಸಿ ಅದನ್ನು ಭದ್ರಪಡಿಸಿ, ರಕ್ಷಣೆಗಾಗಿ
ತಕ್ಕಂತೆ ಸೈನ್ಯವನ್ನು ಇಟ್ಟಳು ಹಾಗೆಯೇ ತನ್ನ ರಾಜ್ಯದ ಬೇರೆ
ಬೇರೆ ಕಡೆಗಳಲ್ಲಿದ್ದು ಕೆಟ್ಟುಹೋಗಿದ್ದ ಇತರ ಸಮಸ್ತ ಕೋಟೆ
ಗಳನ್ನೂ ಪುನ ಕಟ್ಟಿಸಿ ಧೈರ್ಯದಿಂದ ಶತ್ರುವಿನ ಆಗಮನವನ್ನು
ನಿರೀಕ್ಷಿಸತೊಡಗಿದಳು

ಇಷ್ಟರೊಳಗಾಗಿ ದೇವಗಿರಿಯ ರಾಜನು ಮೂರುಲಕ್ಷ ಭಟ
ರುಳ್ಳ ಪ್ರಚಂಡವಾದ ಸೇನೆಯೊಡನೆ ಬಂದು ಓರಂಗಲ್ಲಿಗೆ ಮುತ್ತಿಗೆ
ಹಾಕಿದನು ಆಗ ನಿಸರ್ಗವೀರಳಾದ ರುದ್ರಮ್ಮನು ಕಿಂಚಿತ್ತಾದರೂ
ಭಯಪಡದೆ ತಾನೇ ಶಸ್ತ್ರಪಾಣಿಯಾಗಿ ಮುಂದೆ ಬಂದು ನಾಯಕತ್ವ
ವನ್ನು ವಹಿಸಿ ತನ್ನ ಸೈನಿಕರನ್ನು ಪ್ರೋತ್ಸಾಹಿಸಿದಳು ಉಭಯ ಪಕ್ಷ
ದವರಿಗೂ ಹದಿನೈದು ದಿನಗಳಕಾಲ ಘೋರವಾದ ಯುದ್ಧವು ನಡೆ
ಯಿತಾದರೂ ಮಹಾದೇವರಾಜನು ಭಗ್ನಮನೋರಥನಾಗಿ ಹಿಂದಿರುಗ
ಬೇಕಾಯಿತು ಓರಂಗಲ್ಲಿನ ವೀರರು ಬಿಡದೆ ಅವನನ್ನು ದೇವಗಿರಿಯ
ವರೆಗೂ ಬೆನ್ನುಹತ್ತಿ ಓಡಿಸಿ ಬಲವಾಗಿ ಶಿಕ್ಷಿಸಿದರು ಇದರಿಂದ ಮಹಾ
ದೇವರಾಜನು ತುಂಬ ನೊಂದು ತನ್ನ ಅವಿವೇಕಕೃತ್ಯಕ್ಕೆ ಪಶ್ಚಾತ್ತಾಪ
ಪಟ್ಟು ರುದ್ರಮ್ಮನಿಗೆ ಶರಣಾಗತನಾಗಿ ಒಂದುಕೋಟಿ ಹೊನ್ನುಗ
ಳಷ್ಟು ದ್ರವ್ಯವನ್ನು ಅಪರಾಧವಾಗಿ ಒಪ್ಪಿಸಿ ಒಡಂಬಡಿಕೆ ಮಾಡಿ
ಕೊಂಡು ಬಂದ ವಿಪತ್ತಿನಿಂದ ತಪ್ಪಿಸಿಕೊಂಡನು ಬಳಿಕ ರುದ್ರಮ್ಮ
ದೇವಿಯು ತನ್ನ ದೇಶಕ್ಕೂ ದೇವಗಿರಿಗೂ ನಡುವಣ ಎಲ್ಲೆಯಲ್ಲಿ

ಎಂಟು ಜಯಸ್ತಂಭಗಳನ್ನು ನೆಡಿಸಿ, ಅವುಗಳ ಮೇಲೆ ಶಾಸನಗಳನ್ನು ಕೊರಯಿಸಿ, ಐವತ್ತು ಲಕ್ಷ ಹೊನ್ನುಗಳನ್ನು ಸೇನಾಜನರುಗಳಿಗೆ ಹಂಚಿಸಿ ಅವರನ್ನು ಸಂತುಷ್ಟರಾಗಿ ಮಾಡಿದಳು.

ರುದ್ರಮ್ಮನು ತನ್ನ ಹಿರಿಯಮಗಳಾದ ಉಮ್ಮಕ್ಕನನ್ನು ಚಾಳುಕ್ಯ ವಂಶಕ್ಕೆ ಸೇರಿದ ವೀರಭದ್ರರಾಜನೆಂಬಾತನಿಗೂ ಎರಡನೆಯವಳಾದ ರುಯ್ಯಮ್ಮನನ್ನು ಇಂದೂರಿನ ಅನ್ನಮದೇವನೆಂಬಾತನಿಗೂ ಕೊಟ್ಟು ಮದುವೆ ಮಾಡಿಸಿದ್ದಳು. ಈ ಅಳಿಯಂದಿರ ವಿಷಯವಾಗಿ ನಮಗೆ ಬೇರೆ ಯಾವ ವಿಶೇಷ ಸಮಾಚಾರವೂ ತಿಳಿದು ಬರುವುದಿಲ್ಲ. ಬಹುಶಃ ಇವರಿಬ್ಬರೂ ಅವಳ ಮಾಂಡಲಿಕ ಕೋಟಿಗೆ ಸೇರಿದವರಾಗಿರಬಹುದೆಂದು ಭಾವಿಸಬೇಕಾಗಿದೆ.

ದೇವಗಿರಿಯವರೊಡನೆ ಯುದ್ಧವು ನಡೆದ ಸ್ವಲ್ಪಕಾಲಾನಂತರದಲ್ಲಿ ರುದ್ರಮ್ಮನ ಹಿರಿಯ ಮಗಳಾದ ಉಮ್ಮಕ್ಕನು ಗರ್ಭವತಿಯಾದಳು. ಇದು ರುದ್ರಮ್ಮಗೆ ಅತ್ಯಾನಂದಕರವಾದ ವಿಷಯವಾಗಿದ್ದಿತು. ಬಳಿಕ ನವಮಾಸಗಳು ತುಂಬಿ ಶಾಲಿವಾಹನ ಶಕದ ೧೧೬೬ ನೇ (ಕ್ರಿ. ಶ. ೧೨೪೪) ನಂದನ ಸಂವತ್ಸರದ ಚೈತ್ರ ಶುಕ್ಲ-ಪಂಚಮಿ ಗುರುವಾರ ಬ್ರಾಹ್ಮೀ ಮುಹೂರ್ತದಲ್ಲಿ, ಚಂದ್ರನು ರೋಹಿಣೀ ನಕ್ಷತ್ರದಲ್ಲಿ ಉಚ್ಚನಾಗಿಯೂ, ರವಿ-ಕುಜ ಗುರುಗಳು ಕೂಡ ಉಚ್ಚಸ್ಥಾನಗಳಲ್ಲಿಯೂ, ಶನಿಯು ಸ್ವಕ್ಷೇತ್ರದಲ್ಲಿಯೂ ಇದ್ದಾಗ ಉಮ್ಮಕ್ಕನು ಪುತ್ರರತ್ನವನ್ನು ಹಡೆದಳು. ಆಗ ಓರಂಗಲ್ಲಿನ ಪ್ರಜಾಕೋಟಿಯೆಲ್ಲವೂ ಆನಂದಸಮುದ್ರದಲ್ಲಿ ಓಲಾಡತೊಡಗಿತು. ರಾಣಿಯು ಮುಕ್ತಹಸ್ತಳಾಗಿ ದಾನಧರ್ಮಗಳನ್ನು ಮಾಡಿ, ಮಂತ್ರಿಯಾದ ಶಿವದೇವಯ್ಯನ ಅಭಿಪ್ರಾಯದಂತೆ ಕುಮಾರನಿಗೆ "ಪ್ರತಾಪರುದ್ರದೇವ"ನೆಂದು ನಾಮಕರಣ ಮಾಡಿಸಿದಳು. ಮತ್ತು ಒಡನೆಯೇ ಓಲಗಶಾಲೆಯಲ್ಲಿ ಪ್ರಜಾಪ್ರಮುಖರನ್ನೆಲ್ಲ ನೆರೆಯಿಸಿ ಈ ಕುಮಾರನೇ ತನಗೆ ದತ್ತಪುತ್ರನೆಂದೂ ರಾಜ್ಯದ ಯುವರಾಜನೆಂದೂ ಪ್ರಕಟಗೊಳಿಸಿದಳು.

ಆ ಮುಂದೆ ಉಮ್ಮಕ್ಕನಿಗೆ "ಅನ್ನಮದೇವ"ನೆಂಬ ಇನ್ನೊಬ್ಬ

ಮಗನೂ ಹುಟ್ಟಿದನು. ರುಯ್ಯಕ್ಕನಲ್ಲಿ ಮಾತ್ರ ಯಾವ ಸಂತಾನವೂ ಉಂಟಾಗಲಿಲ್ಲವೆಂದು ತಿಳಿಯಬರುತ್ತಿದೆ.

ರುದ್ರಮ್ಮದೇವಿಯು ಮೂವತ್ತೆಂಟು ವರ್ಷಗಳ ವರೆಗೆ ಆಳಿ, ಬಳಿಕ ಮುದಿಪ್ರಾಯದಲ್ಲಿ ಕ್ರಿ ಶ ೧೨೯೫ರಲ್ಲಿ ಮೃತಪಟ್ಟಳೆಂದೂ ಆಗ ಪ್ರತಾಪರುದ್ರನು ಅಪ್ರಾಪ್ತವಯಸ್ಕನಾಗಿದ್ದುದರಿಂದ ಆತನ ತಾಯಿಯಾದ ಉಮ್ಮಕ್ಕನು ಹನ್ನೆರಡು ವರ್ಷಗಳ ಪರ್ಯಂತ ಆಳಿದ ಳೆಂದೂ ಒಂದು ಕಡೆಯಲ್ಲಿ ಹೇಳಿದೆ ರುದ್ರಮ್ಮನ ತರುವಾಯ ಪ್ರತಾಪರುದ್ರನೇ ಪಟ್ಟಕ್ಕೆ ಬಂದನೆಂದು ಉಳಿದವರು ಅಭಿಪ್ರಾಯಪಡುತ್ತಿರುವರು ಪ್ರತಾಪರುದ್ರನು, ಕ್ರಿ ಶ ೧೨೪೪ರಲ್ಲಿ ಹುಟ್ಟಿದುದೂ ರುದ್ರಮ್ಮನು ಕ್ರಿ ಶ ೧೨೯೫ರಲ್ಲಿ ಸತ್ತುದುದೂ ನಿಜವಾದಪಕ್ಷದಲ್ಲಿ ರುದ್ರಮ್ಮನ ಅವಸಾನಕಾಲದಲ್ಲಿ ಪ್ರತಾಪರುದ್ರನಿಗೆ ೫೧ ವರ್ಷ ವಯಸ್ಸಾಗುವುದು ಬಳಿಕ ಅಪ್ರಾಪ್ತ ವಯಸ್ಕತೆಯು ಮಾತೆಲ್ಲಿ ಉಳಿಯಿತು? ರುದ್ರಮ್ಮನು ಕ್ರಿ ಶ ೧೨೫೬ರಲ್ಲಿ ಸತ್ತಳೆಂದರೂ ಆಗ ಕೂಡ ಪ್ರತಾಪರುದ್ರನಿಗೆ ಇಪ್ಪತ್ತೊಂದು ವರ್ಷ ವಯಸ್ಸಾಗುವುದು ಹೀಗಾದುದರಿಂದ ಉಮ್ಮಕ್ಕನ ರಾಜ್ಯಭಾರವು ಕೇವಲ ಕಲ್ಪನಾಸೃಷ್ಟಿಯೆಂಬುದು ಸ್ಪಷ್ಟವು.

ಇಷ್ಟೇ ಅಲ್ಲದೆ ಪ್ರತಾಪರುದ್ರನ ಜನನಕಾಲವೆಂದು ಹೇಳುವ ವರ್ಷವೂ ತಪ್ಪೆಂದು ತಿಳಿಯಲು ಬಲವಾದ ಆಧಾರವಿದೆ ಆತನು ಕ್ರಿ ಶ. ೧೨೪೪ರಲ್ಲಿ ಹುಟ್ಟಿದವನಾದರೆ ಆಗ ಗಣಪತಿದೇವನು ಜೀವಿಸಿದ್ದನಾಗಿ ಆತನೇ ಸಿಂಹಾಸನಕ್ಕೆ ಅರ್ಹನಾಗುತ್ತಿದ್ದನಲ್ಲದೆ, ರುದ್ರಮ್ಮದೇವಿಯು ಪಟ್ಟಕ್ಕೆ ಬರಲು ಕಾರಣವೇ ಇರುತ್ತಿರಲಿಲ್ಲ. ಅಥವಾ ಆತನು ವಯಸ್ಕನಾಗುವ ಪರ್ಯಂತ ಮಾತ್ರ ಆತನ ಕಡೆಯಿಂದ ಆಳಬೇಕಾಗಿರುತ್ತಿತ್ತೇ ವಿನಾ ಮೂವತ್ತೆಂಟು ವರ್ಷಗಳ ಕಾಲ ಆಳಲು ಕಾರಣವಿರುತ್ತಿರಲಿಲ್ಲ. ಆದುದರಿಂದ ಪ್ರತಾಪರುದ್ರನ ಜನನ ಕಾಲವು ಕೂಡ ಆತನ ಮುಂದಿನ ಕೀರ್ತಿಗೆ ಸರಿಹೋಗುವಂತೆ ಹೇಳಲ್ಪಟ್ಟಿರುವದೆಂದು ಗ್ರಹಿಸಬೇಕಾಗಿದೆ.

ರುದ್ರಮ್ಮನ ವಯಸ್ಸಿನ ವಿಷಯವೂ ಒಂದಿಷ್ಟು ಸಂದಿಗ್ಧವಾಗಿದೆ ಗಣಪತಿದೇವನು ಪಟ್ಟಕ್ಕೆ ಬಂದ ಸ್ವಲ್ಪಕಾಲದೊಳಗಾಗಿ ಎಂದರೆ ಸುಮಾರು ಕ್ರಿ ಶ ೧೧೯೦ ರಲ್ಲಿ ಆಕೆಯನ್ನು ಮದುವೆಯಾದನೆನ್ನುವರಷ್ಟೆ? ಆಗ ಆಕೆಗೆ ಹತ್ತೇವರ್ಷ ವಯಸ್ಸೆಂದರೂ ಸಾಯುವಾಗ (೧೨೯೫ರಲ್ಲಿ) ಆಕೆ ೧೧೫ ವರ್ಷದವಳಾಗಿರಬೇಕಾಗುವುದು. ಇದನ್ನು ನೋಡಲಾಗಿ ಅವಳು ಬಹುಶಃ ೧೨೬೫ರಲ್ಲಿಯೇ (ಎಂದರೆ ೮೫ ವರ್ಷ ವಯಸ್ಸಿನಲ್ಲಿ) ಸತ್ತಳೆಂದು ಹೇಳುವುದೇ ನಿಜವಾಗಿರಬಹುದೇನೋ–ಎಂಬ ಸಂದೇಹವುಂಟಾಗುತ್ತದೆ ಆದರೆ ಪ್ರತಾಪರುದ್ರನು ೧೨೯೬ರಲ್ಲಿ ಪಟ್ಟಕ್ಕೆ ಬಂದನಾದರೆ ನಡುವಣ ಮೂವತ್ತು ವರ್ಷಗಳ ಕಾಲದಲ್ಲಿ ಯಾರು ಆಳಿದರೆಂಬುದು ಗೊತ್ತಾಗುವುದಿಲ್ಲ

ಇದು ಹೇಗಾದರೂ ಇರಲಿ, ಕಾಲವ್ಯತ್ಯಾಸಗಳನ್ನು ನಾವು ಗಣಿಸಬೇಕಾದುದಿಲ್ಲ ಅದು ನಮ್ಮ ಉದ್ದೇಶವಲ್ಲ ರುದ್ರಮ್ಮದೇವಿಯೆಂಬ ಮಹಾರಾಣಿಯೊಬ್ಬಳು ಆಂಧ್ರಸಾಮ್ರಾಜ್ಯವನ್ನು ಮಹಾವೈಭವದಿಂದಲೂ ಪರಾಕ್ರಮದಿಂದಲೂ ಆಳಿದ ವಿಷಯವನ್ನು ವ್ಯಾವರ್ಣಿಸುವುದೇ ಈ ಲೇಖನದ ಉದ್ದೇಶವಾಗಿದೆ ಈ ಕಾರ್ಯವು ಸರಿಯಾಗಿ ನೆರವೇರಿ ವಾಚಕರ ಮನಸ್ಸಿನಲ್ಲಿ ಆರ್ಯರಮಣಿಯರ ಸಾಮರ್ಥ್ಯದ ವಿಷಯವಾಗಿ ಶ್ರೇಷ್ಠವಾದ ಅಭಿಪ್ರಾಯವುಂಟಾದ ಪಕ್ಷದಲ್ಲಿ ನಾವು ಪಟ್ಟ ಪ್ರಯಾಸವು ಸಾರ್ಥಕವಾಯಿತೆಂದು ತಿಳಿಯುವೆವು.

ಇಲ್ಲಿಗೆ ನಮ್ಮ ಕಥಾನಕವು ಮುಗಿಯಿತು ಪ್ರತಾಪರುದ್ರ ಮಹಾರಾಜನು ಕ್ರಿ ಶ ೧೩೨೩ರ ಪರ್ಯಂತ ಬಹುದರ್ಪದಿಂದ ಆಳಿ, ಅದ್ಭುತವಾದ ಕೀರ್ತಿಪಡೆದು ಮೆರೆದನು ಈ ಪುಣ್ಯಪುರುಷನು ಸತ್ತು ಆರುನೂರು ವರ್ಷವಾಯಿತು ಆತನ ವಂಶವೇ ನಿರ್ನಾಮವಾಯಿತು ತಥಾಪಿ, ಈ ವರೆಗೂ ಆತನ ಹೆಸರು ಆಂಧ್ರಜನಪದದಲ್ಲಿ ಬಹುಗೌರವದೊಡನೆಯೂ ಅಭಿಮಾನಪುರಸ್ಸರವಾಗಿಯೂ ಸ್ಮರಿಸಲ್ಪಡುತ್ತಿರುವುದು.

—ಭಾರದ್ವಾಜ.

## ನಂದಿನಿಯ ವಿಷಯವಾಗಿ

### (ನಮ್ಮ ಕರ್ಣಾಟಕ ಭಗಿನೀ ಬಾಂಧವರ ಅಭಿನಂದನಗಳು)

[ನಂದಿನಿಯ ವಿಷಯವಾಗಿ ನಮ್ಮ ಭಗಿನಿಯರ ಅಭಿಪ್ರಾಯವು ಹೇಗಿರಬಹುದೆಂಬದೂ, ನಂದಿನಿಯ ಆವಿರ್ಭಾವ ಮತ್ತು ಪ್ರಯತ್ನ ಗಳು ಮಹಿಳಾವರ್ಗಕ್ಕೆ ಎಷ್ಟುಮಟ್ಟಿಗೆ ಹಿತಕರ ಮತ್ತು ಪ್ರಯೋಜಕ ವಾಗಿರಬಹುದೆಂಬದೂ ನಮ್ಮ ವಿಚಾರವಾಗಿದೆ. ಇದನ್ನು ಕುರಿತು ನಾವು ಈಗಲೇ ಏನನ್ನೂ ಹೇಳಲಾರೆವು ಏಕೆಂದರೆ ನಂದಿನಿಯ ವಿಷಯದಲ್ಲಿ ಈ ವರೆಗಿದ್ದ ಸಂದೇಹವನ್ನು ಳಿದು ಈಗೀಗ ನಮ್ಮ ಭಗಿನಿಯರೂ ಮತ್ತು ಬಂಧುಗಳು ತಮ್ಮಅಭಿಪ್ರಾಯಗಳನ್ನು ಹೊರಪಡಿಸಿ ಅಭಿನಂದಿಸುವುದರಲ್ಲಿರುತ್ತಾರೆಂದು ತಿಳಿದು ಆನಂದಿಸುತ್ತಿರುವೆವು. ಅವರಲ್ಲಿ ಒಬ್ಬಿಬ್ಬರ ಅಭಿಪ್ರಾಯಗಳನ್ನಿಲ್ಲಿ ಉದಾಹರಣೆಗಾಗಿ ಮುಂ ದಿಟ್ಟಿರುವೆವು ಸಂ ನಂ]

---

“ Nellyalam Palace
Pundlur-Nilgiris,
10-3-1917.

ಪ್ರಿಯ ಭಗಿನಿ!

ಸತೀಹಿತೈಷಿಣಿಯ ಸಂಬಂಧದ ಪುಸ್ತಕಗಳನ್ನು ವಿಶದೀಕರಿಸುವ ಪ್ರತಿಯೊಂದು ಕರಗತವಾಗಿ ಸಾಧ್ವೀಮಣಿಯರ ಪುರೋಽವೃದ್ಧಿಗಾಗಿ ನೀವು ಮಾಡುತ್ತಿರುವ ಸಾಹಸಕ್ಕೆ ಅಭಿನಂದಿಸುವೆನಲ್ಲದೆ, ವಿಷಯ ಸಂಗ್ರಹ ಮಾಡಲು ಕುತುಕಿಯಾಗಿರುವೆನು. ದಯಯಿಟ್ಟು ೧-೨ ಉಪಯುಕ್ತ ಪುಸ್ತಕಗಳನ್ನೂ ನಂದಿನಿಯನ್ನೂ ವಿ ಪಿ ಮೂಲಕ ಕಳಿಸಬೇಕಲ್ಲದೆ ಸ್ತ್ರೀಸಮಾಜ ಸೇವೆಗೆ ನನ್ನ ಲೇಖನಗಳನ್ನು ಉಪ ಯೋಗಿಸುವದಾದರೆ,—ತಿಳಿಸಿದರೆ—ಯಥಾಶಕ್ತಿ ಬರೆಯಲು ಉದ್ಯಮಿ ಸುವೆನು. ನಿಮ್ಮ ಉದ್ಯಮವು ಶ್ಲಾಘ್ಯವಾದುದು; ಮತ್ತೂ ಕರ್ಣಾಟ

ರಾಷ್ಟ್ರಕ್ಕೇ ಭೂಷಣರೂಪವಾದುದು ಸರ್ವೇಶನು ಇದನ್ನು ಅಭಿವೃದ್ಧಿಗೊಳಿಸಲಿ!

ಕನಿಷ್ಠಯುಸೀ,
ಗಿರಿಜಮ್ಮಣ್ಣಿ."

(ಈ ನಮ್ಮ ಧರ್ಮಭಗಿನಿಯರ ಲೇಖನಕ್ಕೆ ಈ ಮೊದಲೇ ಸ್ವಾಗತವನ್ನು ಕೋರಿರುವೆವಲ್ಲದೆ ಈ ಮೂಲಕ ಅವರ ಲೇಖನದ ನಿರೀಕ್ಷೆಯಲ್ಲಿರುವೆವೆಂದೂ ಈ ನಮ್ಮ ಭಗಿನಿಯರಂತೆಯೇ ಇನ್ನೂ ಇತರ ಶ್ರೀಮಂತ ಭಗಿನಿಯರು ಮತ್ತು ವಿದ್ಯಾವತಿಯರಾದ ಮಾನ್ಯಭಗಿನಿಯರು ಸ್ತ್ರೀಶಿಕ್ಷಣದ ಸಂಬಂಧಪಟ್ಟ ತಮ್ಮ ತಮ್ಮ ಅಭಿಪ್ರಾಯಗಳನ್ನು ಲಿಖಿತಮೂಲಕ ಕಳುಹುವದಾದರೆ ವಂದನಾಪೂರ್ವಕವಾಗಿ ಸ್ವೀಕರಿಸಿ, ಸಕಾಲದಲ್ಲಿ ಪ್ರಕಟಿಸುವೆವೆಂದೂ ನಿವೇದಿಸುವೆವು ಸಂ.)

ಶ್ಯಾ. ವೆಂಕಟರಮಣಯ್ಯ, ಹಲಕೂರು ಇವರಿಂದ (೨೧—೩ ೧೩):—"......ಏತತ್ಕಾಲದ ನಮ್ಮ ಸೋದರೀ ವರ್ಗಕ್ಕೆ ಮಾತ್ರವಲ್ಲದೆ, ಸೋದರರಿಗೂ ಸನ್ಮಾರ್ಗದರ್ಶಕಗಳಾದ ತಮ್ಮ "ಸುಶೀಲೆ-ಸಭಾ-ವಿದ್ಯುಲ್ಲತಾ" ಈ ಗ್ರಂಥಗಳನ್ನು ಮಾತ್ರ ಓದಿ ಮೋದಗೊಂಡಿದ್ದ ನಾನು ಈ ಪತ್ರಿಕೆಯ ದರ್ಶನದಿಂದಲೂ, ಇದರಲ್ಲಿನ ಸರ್ವಜನಾನುಕೂಲವಾದ ವಿಷಯಗಳಿಂದಲೂ, ಈ ವರೆಗೆ ಬೂದಿಮುಚ್ಚಿದ ಕೆಂಡದಂತಿದ್ದ ನಮ್ಮ ಸೋದರೀ ಸಂದೋಹದಿಂದಲೇ ಈ ನಮ್ಮ "ನಂದಿನಿ"ಯು ಪ್ರಕಾಶಿಸಲ್ಪಡುತ್ತಿರುವುದರಿಂದಲೂ ಅಮಂದಾನಂದ ತುಂದಿಲನಾದೆನು ......... .. ಈ ನಂದಿನೀ ನಾಮಕ ಶಿಶುವು ಅನ್ವರ್ಥನಾಮರೂಪಕ್ರಿಯೆಗಳಿಂದ ಈ ಲೋಕದಲ್ಲಿ ಚಿರಸ್ಥಾಯಿಯಾಗಿ ಸಮ್ಮೋದದಾಯಿನಿಯಾಗಲೆಂದೂ ಅದರದೊಡನೆ ಸರ್ವರೂ ತಕ್ಕ ಅನುಕೂಲ್ಯಗಳನ್ನು ಕಲ್ಪಿಸಿಕೊಟ್ಟು ಪೋಷಿಸಲಿ ಎಂದೂ ಸರ್ವಾಂತರ್ಯಾಮಿಯಾದ ಭಗವಂತನಲ್ಲಿ ಅಹರ್ನಿಶಿಯೂ ಪ್ರಾರ್ಥಿಸುವೆನು.

ಕಂದ|| ನಂದಿನಿ ಬಂದಾಸಗರಸ ।
ನಂದನರಿಗೆ ಸುಖವನಿತ್ತಪಾಂಗಿನೊಳಿಂದೀ ॥
ನಂದಿನಿ ಯೊಗೆದೀ ಲೋಕಕೆ ।
ನಂದನಮಿತ್ರೋವೃದಿದುವೆ ಸಾರ್ಥಕಮಸ್ತು!॥

---

M N Kamath, Editor, Bodhm Bantval ಇವರಿಂದ (೧೫ ೩-೧೬) —ನಂದಿನಿಯ ಮೊದಲನೆಯ ಹಾಗೂ ೪-೫ನೆಯ ಸಂಚಿಕೆಗಳು ಮಾತ್ರ ನಮ್ಮ ಕಯ್ಗೆ ಸೇರಿವೆಯಾದರೂ ನಡುವಣ ಸಂಚಿಕೆಗಳನ್ನು ಕಾಣುವ ಕುತೂಹಲವು ಹೆಚ್ಚಿದೆಯಲ್ಲದೆ, ಇದುವರೆಗೆ 'ನಂದಿನಿ'ಯು ಸ್ತ್ರೀವರ್ಗದ ಹಿತಕ್ಕಾಗಿ ನಡೆಸಿರುವ ಉಪಕಾರ ಪ್ರಯತ್ನಗಳನ್ನು ಸುಲಭವಾಗಿ ಗೊತ್ತುಮಾಡಿಕೊಳ್ಳಬಹುದಾಗಿದೆ. ಸ್ತ್ರೀವರ್ಗದ ಹಿತಚಿಂತನೆಯಿಂದಹೊರಟ ಹಾಗೂ ನಡೆಸಲಾಗುವ ಈ ಮಾಸಪತ್ರಿಕೆಯು ಇನ್ನಲ್ಪಕಾಲದೊಳಗಾಗಿ ಆಕಾರ-ಪರಿಮಾಣಗಳಲ್ಲಿ ವಿಶೇಷ ಪರಿವರ್ತನಗಳನ್ನೊಳಕೊಳ್ಳಲು ಹಿಂದೆಗೆಯಲಾರದೆಂದು ಈ ಸಂಚಿಕೆಗಳನ್ನು ಕಂಡವರಿಗೆ ತಿಳಿಯದಿರದು ಕರ್ನಾಟಕ ಭಾಷಾ ವಿಷಯದಲ್ಲಿ ಅಭಿಮಾನವು ಗಂಡಸರಿಗಿಂತಲೂ ಹೆಂಗಸರಿಗೇ ಹೆಚ್ಚೆನ್ನಬಹುದು ಮಾತ್ರವಲ್ಲ— ಅಧಿಷ್ಠಾತ್ರಿಯಾದ ಸರಸ್ವತಿಯೇ ಸ್ತ್ರೀಯೆನಿಸಿರುವಲ್ಲಿ ಸ್ತ್ರೀವರ್ಗದ ಮೂಲಕವಾಗಿ ಭಾಷಾಸೇವೆಗೆ ವಿಶೇಷ ಪುರಸ್ಕಾರವೂ ಉತ್ತೇಜನವೂ ದೊರೆವಂತಿವೆ ಇದು ಕನ್ನಡಿಗರಿಗೆ ಭಾಗ್ಯವಾಗಿದೆ ಸ್ತ್ರೀಯರಲ್ಲಿ ಓದುಗಾರಿಕೆಯು ಪ್ರಬಲವಾಗಿದ್ದಲ್ಲಿ ವಾಸ್ತವವಾಗಿಯೂ "ನಂದಿನಿ"ಯು ಆದರ್ಶವಾಗಿ ಬಳೆವಂತೆ ಯಾವ ಆತಂಕವೂ ಇಲ್ಲವೆಂದು ದೃಢವಾಗಿ ಹೇಳಬಹುದಾಗಿದ್ದಿತು. ಕ್ರಮೇಣ ಅಂತಹ ಸತ್ಕಾಲವು ನಂದಿನಿಗೆ ಒದಗಲೆಂದು ಹಾರೈಸಿರುವೆವು."

ಉ॥ ಭಾ॥ ಪಂಡಿತರು ಶ್ರೀ. ಜೆ ಅಪ್ರಮೇಯ
ಅಯ್ಯಂಗಾರ, ಚಿಕ್ಕಮಗಳೂರು ಇವರಿಂದ—

"ಅಯಿ ಭಗಿನಿ!

ಪೂರ್ವಂ ಯೋಗಕ್ಷೇಮ ವಿಷಯಕ ಪತ್ರಿಕಾ ಸಹಿತಾಂ ಸುಶೋಭಾಂ-ನಭಾಂ-ವಿದ್ಯುಲ್ಲತಾಮಪ್ಯುಪಲಭ್ಯ ಭಗಿನ್ಯಾಸ್ಸಕಾಶಾದ್ದೇಶದ್ವಿನ ಪರ್ಯಂತಮಂತಶಃ ಪತ್ರಿಕಾಮಪ್ಯಲಭಮಾನೋನೂನಂ ವಿದ್ಯುಲ್ಲತಾ ಏವ ಭಗಿನ್ಯಾಃ ಪ್ರೀತಿರಿತಿ ತರ್ಕಯನ್ನತರ್ಕಿತೋಪಗತಾಮಾನಂದ ನಿಷ್ಯಂದಿನೀಂ ನಂದಿನೀಂ ಭ್ರಾತೃನಂದಿನೀಂ ಪ್ರೇಷಿತಾಂ ವಿದಿತ್ವಾನಿತರಾಮಾನಂದತುಂದಿಲಸ್ತೇ ಭ್ರಾತೃಜನೋಯಮಾಶಾಸ್ತೇ ನಿಷ್ಪ್ರತ್ಯೂಹ ವಿಜಯತಾಂ ಭಗಿನ್ಯಾಸ್ಸತೀಹಿತೈಷಿಣೀ ಕಾರ್ಯ ಸಮಾರಂಭಃ— ಇತಿ"

# ವಂದನಾಪೂರ್ವಕ ಸ್ವೀಕಾರ

ಜೇಮ್ಸ್ ಎಬ್ರಾಮ್ ಗಾರ್ಫೀಲ್ಡ ಚರಿತ್ರೆ — (ಕರ್ನಾಟಕ ಸಾಹಿತ್ಯಪರಿಷತ್ತಿನ ಸರಳ ಗ್ರಂಥಾವಳಿ ಸಂ ೧) ಬೆಲೆ ೮ ಆಣೆ. ಪುಟ ೧೫೯.

ಈ ಪುಸ್ತಕವು ಶ್ರೀಯುಕ್ತ ವೈ ಕೆ ರಾಮಚಂದ್ರರಾಯರಿಂದ ಭಾಷಾಂತರಿಸಲ್ಪಟ್ಟು, ಪರಿಷತ್ತಿನವರ ಪರಿಶ್ರಮದಿಂದ ಪರಿಷ್ಕೃತವಾದ ರೂಪಾಂತರಹೊಂದಿ, ಪರಿಷದ್ಗ್ರಂಥಾವಳಿಯ ಪ್ರಕಟನೆಗೆ ಮಾರ್ಗಪ್ರದರ್ಶಕವಾಗುವಂತೆ ಪರಿಷತ್ತಿನವರಿಂದಲೇ ಪ್ರಕಾಶಕ್ಕೆ ತರಲ್ಪಟ್ಟಿದೆ ಅಭಿಪ್ರಾಯಕ್ಕೆಂದು ಬಂದಿರುವ ಈ ಪುಸ್ತಕವನ್ನು ನೋಡಿ ಮೂಲಭಾಷಾಂತರಕಾರರ ಹಲವು ಪುಸ್ತಕಗಳನ್ನು ವಾಚಿಸಿದ್ದ ನಮಗೆ ಇದು ಆ ಗ್ರಂಥಕಾರರ ನಿಜವಾದ ಭಾಷಾಂತರವಿರಲಾರದೆಂಬ ಶಂಕೆಯುಂಟುಮಾಡಿ ಹೊಸಬಗೆಯಾಗಿರುವಂತೆ ಕಂಡು ಬಂದುದರಿಂದಲೂ ಮತ್ತು ಸಾಹಿತ್ಯ ಪರಿಷತ್ತಿನವರಿಂದ ಸಂಸ್ಕಾರ ಹೊಂದಿ-ಮತ್ತೂ ಹೊಂದುತ್ತಿರುವ ಈ ಪುಸ್ತಕದ ವಿಚಾರವಾಗಿ ನಮ್ಮ ಅಭಿಪ್ರಾಯವನ್ನು ಪ್ರಕಟಿಸುವದೂ ಅಪ್ರಕೃತವೆಂದೂ ಮೌನವನ್ನವಲಂಬಿಸಿರುವೆವು ಇದನ್ನು ನಮಗೆ ಕಳುಹಿದ ಪರಿಷತ್ತಿನ ಗೌರವಕಾರ್ಯದರ್ಶಿಗಳ ಸೌಜನ್ಯಕ್ಕಾಗಿ ನಾವು ಚಿರಕೃತಜ್ಞತೆಯಿಂದ ಅವರ ಸೋದರ ವಾತ್ಸಲ್ಯವನ್ನು ಸ್ಮರಿಸುವದಲ್ಲದೆ ಈ ಮೂಲಕ ವಂದನಾಪೂರ್ವಕ ಧನ್ಯವಾದಗಳನ್ನೊಪ್ಪಿಸಿರುವೆವು

ಸಂ ನಂ

# ಕರ್ಣಾಟಕನಂದಿನಿ.

1917ನ ಸಂಪುಟ ೧ ಸಂಚಿಕೆ ೯ ಪಿಂಗಳ ಜ್ಯೇಷ್ಠ



ಶ್ರೀಯುಕ್ತ, ಎಸ್ ಎಂ. ವರಹರಯ್ಯ ಬಿ. ಏ. ಎಲ್ ಎಲ, ಬಿ. ಯವರು

॥ ಶ್ರೀ ॥

वन्देत्वां भूदेवि आर्यमातरम्

ಕರ್ಣಾಟಕ

# ನಂದಿನೀ.

ಮಾಸಪತ್ರಿಕೆ

" ಸಿದ್ಧಿಂ ಸರ್ವಾಣಿ ಭೂತಾನಿ, ಭೂತಾನಾಂ ಚೈವಯ ಪ್ರಭು ॥
ದಾಸ್ಯನ್ತಿ ಮಮಯೇ ಚಾನ್ಯೇಹ್ಯದೃಷ್ಟಾ ಪಥಿಗೋಚರಾ ॥ "

ಸಂಪುಟ ೧ { ಪಿಂಗಳ-ಜ್ಯೇಷ್ಠ (೧೮೪೯ ಕ್ರಿ ೧೯೧೭) ಜೂನ } ಸಂಚಿಕೆ ೯

## ಕ್ಷಮಾಪಣೆ

ರಾಗ— ( ತರಣಿ ವಂಶಾಬ್ಧಿ ಚಂದ್ರ)

ಕರುಣದಿಂ ಕಾಯೊಯನ್ನ — ಕಾರುಣ್ಯನಿಧಿ — ಕರುಣದಿಂ ಕಾಯೊಯನ್ನ ॥ಪ॥
ಚರಣಸೇವಕ ಭಯ-ಹರಣ, ಶ್ರೀಕೌಸ್ತುಭ ಭರಣ, ಸೌಖ್ಯವಿತರಣ
ನಿನ್ನಯ ಚರಣಯುಗಳದಿ ಶರಣುಹೊಕ್ಕೆನು ॥ಅನು॥
ಕರ್ಮತಂತ್ರವನರಿದು — ಕಾಮಿಸಿಮನ - ನಿರ್ಮಲತ್ವವನುಳಿದು ॥
ಹೆಮ್ಮೆಯಿಂದಲಿ ಮೋಹ-ವಿಮ್ಮಳಿಸುತ ಬಲು ॥ ದುಮ್ಮಾನಗೊಂಡು ಕಾಮವ
ಹೊಮ್ಮುತಿದೆ ಪರ ಬೊಮ್ಮ ಮೂರುತಿ ॥ ಕರುಣದಿಂ ॥೧॥
ಸ್ನಾನಪಾನವ ತೊರೆದು — ಸಂಧ್ಯಾರ್ಘ್ಯನು-ಷ್ಠಾನ ಮಾನವ ಮರೆದು ॥
ಮಾನಸಪೂಜಾ ವಿಧಾನವನರಿಯದೆ — ದೀನಜನ ಸುರಧೇನು ನಿನ್ನಯ —
ಧ್ಯಾನಮಾಡದೆ ದೀನನಾದೆನು ॥ ಕರುಣದಿಂ ॥೨॥
ತರುಣಜನಪಾಲನೆ — ಶಾಸ್ತ್ರ[illegible] — ವಿಚಾರ [illegible] ॥
[illegible] ಭವ [illegible] — [illegible] ॥ [illegible]
[illegible] ವರದ [illegible] ॥ ಕರುಣದಿಂ ॥೩॥

(ದಿವಂಗತ ವೆಂಕಟವರದಾಚಾರ್ಯರ ಕೃತಿ)

॥ ಶ್ರೀ ॥

ಪ್ರಜಾರಂಜನಶೀಲರಾದ

ಶ್ರೀಮತ್ಕರ್ನಾಟಕ ಸಿಂಹಾಸನಾರೂಢ ಶ್ರೀ

ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ ಜಿ. ಸಿ. ಎಸ್. ಐ

ಅವರ

( ವರ್ಧಂತ್ಯುತ್ಸವದ )

# ಶ್ರೇಯಃ ಪ್ರಾರ್ಥನೆ.

( ಕವಿತೆ )

ಆಯುಮನಾರೋಗ್ಯಮನೊಂ ।
ದಾಯತಿಯಿಂ ತವದನಂತ ಶುಭಸಂತಾನ ॥
ಶ್ರೀಯುಂ, ಶ್ರೀಕೃಷ್ಣಮಹಾ ।
ರಾಯಂಗೊಲ್ದೀಗೆ, ಯದುಗಿರೀಶ್ವರನೆಂದುಂ ॥

ಧರೆಯುಂ ಶ್ರೀಕೃಷ್ಣಮಹೀ ।
ಶ್ವರನಾಳ್ಗೆಂದುಂ ನೆಗಳ್ಗೆ ಕನ್ನಡಿಗರ್ಗ್ಗೆಲ್ಲ ॥
ಸಿರಿ, ಮೆಯ್ಸಿರಿಗಳ್ ಬೆಳ್ಗೆ ।
ಕೈರಂಗರೊಳಂ ನೆಗಳ್ಗೆ ಕಲೆಗಳೆನಿತೊಳವನಿತುಂ ॥

ಕರ್ನಾಟಕಬಂಧು ಭಗಿನಿಯರೇ!

ಹೇಳಿರಿ, ಶ್ರೀಮನ್ಮಹಾರಾಜರವರಿಗೆ ಸ್ವಸ್ತಿಯನ್ನು ಹೇಳಿರಿ! ಮಹಾರಾಜರವರ ಜನ್ಮೋತ್ಸವದ ಈ ಶುಭದಿವಸದಲ್ಲಿ ನಾವೆಲ್ಲರೂ ಆ ನಮ್ಮ ಮಹಾಪ್ರಭುಗಳವರ ಶ್ರೇಯಃಪ್ರಾರ್ಥನೆಯನ್ನು ಮಾಡುತ್ತ ಕಣ್ಮನಂಗಳಿಗೆ ಹಬ್ಬವನ್ನುಂಟುಮಾಡುವಂತೆ ಸಡಗರದಿಂದಿರಬೇಕಾದುದು ನಮ್ಮ ಕರ್ತವ್ಯವು. ರಾಜಭಕ್ತಿ ದೇಶಾಭಿಮಾನಗಳಲ್ಲಿ ನಿಷ್ಠೀ



...ಜನಕಿ ಆದಾದ ಶ್ರೀಮತ್ಕರ್ನಾಟಕ ಸಿಂಹಾಸನಾರೂಢ ಶ್ರೀ



ಶ್ರೀಮನ್ ಯುವರಾಜರವರು

ಮರಾಗಿರುವ ನಮ್ಮ ಕರ್ನಾಟಕ ಜನಪದವು ಉತ್ಸಾಹಾಮೋದಗಳಿಂದಾಚರಿಸಬೇಕಾದ ಉತ್ಸವದ ದಿನವೇ ಇದು. "ರಾಜಾಪ್ರತ್ಯಕ್ಷದೇವತಾ" ಎಂಬ ಸೂತ್ರವನ್ನು ಮುಂದಿಟ್ಟು ನಡೆಯುತ್ತಿರುವ ನಮಗೆ ಸಾಕ್ಷಾತ್ ಪರಮೇಶ್ವರಾಂಶದಿಂದ ಅಭಯಪ್ರದಾನಮಾಡಿ, ಪ್ರಜೆಗಳಾದ ನಮ್ಮೆಲ್ಲರ ಕ್ಷೇಮಾಭ್ಯುದಯವನ್ನೇ ಮುಖ್ಯಗುರಿಯಾಗಿರಿಸಿಕೊಂಡು, ನಮ್ಮನ್ನು ಧರ್ಮ—ನ್ಯಾಯ ದಯೆಗಳಿಂದ ಪರಿಪಾಲಿಸುತ್ತಿರುವ ಈ ನಮ್ಮ ಪ್ರಭುಗಳನ್ನು ನಾವು ತ್ರಿಕಾಲ —ತ್ರಿಕರಣಗಳಲ್ಲಿಯೂ—ಪರಮಾತ್ಮಭಾವನೆಯಿಂದ ಸಂಭಾವಿಸಿ, ನಿರಂತರವೂ ಆ ಮಹಾಸ್ವಾಮಿಯವರ ಶ್ರೀಯಸ್ವಾಮಿಗಳಾಗಿರಬೇಕಾದುದೇ ನಮ್ಮ ಆದ್ಯಕರ್ತವ್ಯವು ಆದುದರಿಂದ - ಇಂದಿನ - ಈ ಶುಭದಿವಸದಲ್ಲಿ ಪರಿಶುದ್ಧಾಂತಃಕರಣರಾಗಿ ಭಗವತ್ಸಾನ್ನಿಧ್ಯದಲ್ಲಿ ನಮ್ಮ ಶ್ರೀಮನ್ಮಹಾರಾಜರವರಿಗೆ ಸ್ವಸ್ತಿವಾಚನವನ್ನು ನಡೆಯಿಸುವುದಕ್ಕೆ ಸಿದ್ಧರಾಗಿರುವಿರಷ್ಟೆ!

ಹಾಗಾದರೆ— ಎಲ್ಲಿ, ಪ್ರಾರ್ಥಿಸಿರಿ!

ನಮ್ಮ ಮಹಾರಾಜರವರಿಗೆ ಆಯುರಾರೋಗ್ಯ—ಸತ್ಕೀರ್ತಿ, ಸತ್ಸಂತಾನಗಳನ್ನು ದಯೆಪಾಲಿಸೆಂದೂ, ಸಾನುಜ-ಸಪರಿವಾರರಾದ ನಮ್ಮ ಮಹಾರಾಜರು ಸುಕ್ಷೇಮದಿಂದ ನಮ್ಮೀ ಕರ್ನಾಟಕ ಭೂಮಾತೆಯನ್ನು ಚಿರಕಾಲ ಪರಿಪಾಲಿಸುತ್ತಿರಬೇಕೆಂದೂ, ರಾಜವಂಶಪ್ರದೀಪನೆನ್ನಿಸುವ ಸತ್ಪುತ್ರರತ್ನಲಾಭದಿಂದ ನಮ್ಮ ರಾಜವಂಶವೂ- ಕರ್ನಾಟಕ ಪ್ರಪಂಚವೂ- ನೂತನಪ್ರಕಾಶವನ್ನು ಹೊಂದಿ- ನಮ್ಮೆಲ್ಲರಿಗೂ ಅರ್ಥಸಿದ್ಧಿಯಾಗುವಂತೆ ಕೃಪೆಗೈಯಬೇಕೆಂದೂ- ಪ್ರಾರ್ಥಿಸಿರಿ! ಬಂಧುಭಗಿನಿಯರೇ! ಸಂದೇಹಪಡಬೇಡಿರಿ- ದೃಢಭರವಸೆಯಿಂದ ಅವಧರಿಸಿರಿ- ಸಂಭಾವಿಸಿರಿ —

ನೋಡಿರಿ, ಅಂದಿನ ದಿಲೀಪಮಹಾರಾಯನೇ, ಇಂದಿನ ಈ ನಮ್ಮ ಶ್ರೀಮತ್ಕೃಷ್ಣಮಹೀಪಾಲರೆಂದೂ, ಅಂದಾರಾಯನಿಗೆ ಒಲಿದು—

“ ಉತ್ತಿಷ್ಠ ವತ್ಸ.........ಪ್ರೀತಾಸ್ಮಿತೇ ಪುತ್ರ,
ವರಂವೃಣೀಷ್ವ ನ ಕೇವಲಾನಾಂ ಪಯಸಾಂ
ಪ್ರಸೂತಿಂ ಅವೇಹಿಮಾಂ ಕಾಮದುಘಾಂ ಪ್ರಸನ್ನಾಂ॥ ”

ಎಂದಿಂತು ಅಭಯಪ್ರದಾನ ಮಾಡಿ, ಆ ಬಳಿಕ ತನ್ನಲ್ಲಿ ಭರವಸೆ ಹುಟ್ಟಿ, “ ವಂಶಸ್ಯಕರ್ತಾರಮನಂತಕೀರ್ತಿಂ ಸುದಕ್ಷಿಣಾಯಾಂ ತನಯಂ,... . ...” ಎಂದು ಪ್ರಾರ್ಥಿಸಿದ ರಾಯನಿಗೆ ಪುತ್ರಲಾಭವನ್ನುಂಟು ಮಾಡಿ, ರಾಜನನ್ನೂ ರಾಜವಂಶವನ್ನೂ ರಾಜಾಶ್ರಿತರಾದ ಪ್ರಜಾವರ್ಗವನ್ನೂ ಅನುಗ್ರಹಿಸಿದ ಆ ಧರ್ಮದೇವತೆಯೇ ಅಂದಿನ ಆ ಸುರಭಿಯೇ-ಆ ನಂದಿನಿಯೇ ಇಂದಿನ ಈ ನಮ್ಮ ಕರ್ಣಾಟಭೂಮಾತೆಯಾಗಿ ಪ್ರಸನ್ನಭಾವದಿಂದ ವರಪ್ರದಾನಕ್ಕೆ ಸಿದ್ಧಳಾಗಿರುವಳೆಂದೂ ಭಾವಿಸಿರಿ. ಆ ನಮ್ಮ ನಂದಿನೀ ತಾಯಿಯಲ್ಲಿ ನಮ್ಮೆಲ್ಲರ ಆನಂದೋತ್ಸಾಹಾಭಿವರ್ಧನರಾದ ನಮ್ಮ ಶ್ರೀಮನ್ಮಹಾರಾಜರ ಪರವಾಗಿ ನಾವು ಮೇಲೆ ಹೇಳಿರುವ—

“ ಆಯುಮನಾರೋಗ್ಯಮ— ” ಎಂಬೀ ಪ್ರಾರ್ಥನೆಯನ್ನು ನಿವೇದಿಸಿ—ಈ ಮೂಲಕ ಈ ನಂದಿನೀವತ್ಸಕನ್ನೂ ಆ ನಮ್ಮ ನಂದಿನೀ ತಾಯಿಯ ಅನುಗ್ರಹವುಂಟಾಗುವಂತೆ ಪ್ರಾರ್ಥಿಸುವ ಹಾಗಿದ್ದರೆ ಕೈಮುತ್ತಿ ಮತ್ತೆ ಹೇಳಿರಿ—

ಆಯುಮನಾರೋಗ್ಯಮನೊಂ ।
ದಾಯತಿಯಂ ತವದನಂತ ಶುಭಸಂತಾನ ॥
ಶ್ರೀಯಂ ಶ್ರೀಕೃಷ್ಣಮಹಾ ।
ರಾಜಂಗೊಲ್ದೀಗೆ ಯದುಗಿರೀಶ್ವರನೆಂದುಂ ॥

( ಮತ್ತು )

ಧರೆಯಂ ಶ್ರೀಕೃಷ್ಣಮಹೀ ।
ಶ್ವರ ನಾಳ್ಗೆಂದುಂ ನೆಗಳ್ಗೆ ಕನ್ನಡಿಗರ್ಗ್ಗೆ ॥

ಸಿರಿ ಮೆಯ್ಸಿರಿಗಳ್ ಬೆಳ್ಗೆ ।
ಕ್ಕರಿಗರೊಳಂ ನೆಗಳ್ಗೆ ಕಲೆಗಳೆನಿತೊಳವನಿತುಂ ॥

( ತಥಾಸ್ತು। ತಥಾಸ್ತು॥ ತಥಾಸ್ತು!!! )

---

ವಿ. ಸೂ — ಇಂದಿನ ಉತ್ಸವವನ್ನು ಮಾತೃಮಂದಿರದಲ್ಲಿ ಸಂಭ್ರಮದಿಂದ ನಡೆಯಿಸಬೇಕೆಂದು ಉದ್ದೇಶಿಸಿದ್ದೆವು ಆದರೆ ಪ್ರವಾಸದಲ್ಲಿದ್ದುದರಿಂದ ಆ ಉದ್ದೇಶವು ಮುಂದಕ್ಕಿಡಲ್ಪಟ್ಟಿತು ಎಂದರೆ ಬರುವ ವಿಜಯದಶಮಿಯ ನಂದಿನೀ ಪಾರ್ಷಿಕೋತ್ಸವದಲ್ಲಿ ನಮ್ಮ ಇಂದಿನ ಉತ್ಸವದ ಭಾಷಣವನ್ನು ಎಂದರೆ ನಮ್ಮ ಮಹಾರಾಜರ ಗುಣಕಥನವನ್ನು ಸಂಭ್ರಮದಿಂದ ನಡೆಯಿಸಲು ನಿಶ್ಚಯಿಸಿ, ಇಂದಿನ ಉತ್ಸವದಲ್ಲಿ ನಮ್ಮ ಮನೋರಾಜ್ಯದಲ್ಲಿ ತೋರಿಬರುವ ರಾಜಭಕ್ತಿಪ್ರದರ್ಶನಕ್ಕಾಗಿಯೂ — ಈ ನಮ್ಮ ಪ್ರಭುವರೇಣ್ಯರ ಪ್ರಜಾನುರಾಗದ ದಿಗ್ದರ್ಶನಕ್ಕಾಗಿಯೂ ಪ್ರಭುವರೇಣ್ಯರಾದ ಶ್ರೀಮನ್ಮಹಾರಾಜರ ಮತ್ತು ಶ್ರೀಮದ್ಯುವರಾಜರವರ ಭಾವಚಿತ್ರಗಳನ್ನು ನಮ್ಮ ಬಂಧುಭಗಿನಿಯರ ಸಮ್ಮುಖದಲ್ಲಿ ಪ್ರದರ್ಶಿಸಿರುವೆವಲ್ಲದೆ ಪ್ರಭುಗಳು ಈ ನಮ್ಮ ನಂದಿನಿಯ ವಿಷಯದಲ್ಲಿ ತೋರಿಸಿರುವ ಅನುಗ್ರಹವನ್ನು ಕುರಿತು ನಮಗುಂಟಾದ ಸಂತೋಷವನ್ನು ಪ್ರಕಾಶಪಡಿಸಲು ಪ್ರಭುಸನ್ನಿಧಿಯಿಂದ ಉಪಲಬ್ಧವಾಗಿರುವ ಪತ್ರದ ಸಾರಾಂಶವನ್ನಿಲ್ಲಿ ಪ್ರಕಟಿಸಿ, ನಿರಂತರವೂ ಘನಸನ್ನಿಧಾನದ ಶ್ರೇಯ ಪ್ರಾರ್ಥನೆ ಮಾಡುತ್ತಿರುವೆವು

ಪಿಂಗಳ ಕೃಷ್ಣ ಷಷ್ಠಿ
ತಾರೀಖು ೧-೬-೧೯೧೭.
ಮಂಗಳವಾರಪೇಟೆ ಧಾರವಾಡ

ಇತಿ ನಿರಂತರಶ್ರೇಯಃಕಾಂಕ್ಷಿಣಿ,
ಸಂಪಾದಿಕೆ

(ನಮ್ಮ ಪ್ರಭುವರೇಣ್ಯರ ಘನಸನ್ನಿಧಾನದಿಂದ ಬಂದ
ಅನುಗ್ರಹ ಪತ್ರದಸಾರಾಂಶ)

**No**. 3917 Fern-Hill-Ootacamand
17th April 1917

........ ...... . ...His highness has however been pleased to order a donation of Rs 50 being given towards the upkeep of the journal and the palce controller is being requested to send you a remittance for the amount A copy of the journal may kindly be sent to the adress of His Highness and another to that of the palace controller Mysore Subscription due will be remitted on receipt of a bill from you ",

Yours faithfully
T THUMBOO CHETTY
Assistant Secretary,
to H H the Maharaja of Mysore

" ದಯೆಯಿಟ್ಟು ಶ್ರೀಮಾನ್ ಕಂಟ್ರೋಲರವರು ಅನುಗ್ರಹಿಸಿ ಕಳುಹಿಸಿದ ೫೦ ರೂಪಾಯಿಗಳನ್ನು ವಂದನಾಪೂರ್ವಕ ಸ್ವೀಕರಿಸಿದೆವಲ್ಲದೆ ಶ್ರೀಮನ್ಮಹಾರಾಜರವರ ಮತ್ತು ಕಂಟ್ರೋಲರ ಅನುಗ್ರಹವನ್ನು ಕುರಿತು ಅನುದಿನವೂ ಸ್ಮರಿಸುತ್ತ ಅವರೆಲ್ಲರ ಅಭ್ಯುದಯವನ್ನೇ ಕೋರುತ್ತಿರುವೆವು.

|| ಶ್ರೀಃ ||

# ವಿಮಲಾದೇವಿ.

(೭ನೆಯ ಸಂಚಿಕೆಯಿಂದ ಮುಂದೆ ಸಾಗಿದುದು)

## ಐದನೆಯ ಪ್ರಕರಣ

### ಔರಂಗಜೇಬನ ಪ್ರತಿಜ್ಞೆ

ಔರಂಗಜೇಬನ ಪಟ್ಟಮಹಿಷಿಯಾದ ಉದಯಪುರಿಯ ಅಂತಃಗೃಹದಲ್ಲಿ ಅಲ್ಲಕಲ್ಲೋಲವಾಗಿದ್ದಿತು ಪರಿಚಾರಕರೆಲ್ಲರೂ ಗಡಗಡನೆ ನಡಗುತ್ತ ಭೀತಚಿತ್ತರಾಗಿದ್ದರು. ಉದಯಪುರೀ ಮಹಾರಾಣಿಯು ಬಾರಿಬಾರಿಗೂ ತನ್ನ ಕೈಯಲ್ಲಿದ್ದ ಪತ್ರವನ್ನು ನೋಡುತ್ತ ಕೆಂಗಣ್ಣುಗಳಿಂದ ದಾಸದಾಸೀಜನಗಳನ್ನು ಹೊರಗೆ ಹೋಗಿರೆಂದು ಗದರಿಸುತ್ತಿದ್ದಳು ರಾಣಿಯು ಕವಾಚೀ ಮಂಚದ ಮೇಲೆ ಮಲಗಿಕೊಂಡು ಪತ್ರವನ್ನೋದುತ್ತ - ಅದರಲ್ಲಿದ್ದ ವಿಷಯಗಳನ್ನು ಕುರಿತು ಕೆರಳಿ, ಅದನ್ನು ಒಗೆದು ಬಿಸುಡುತ್ತಲೂ, ಒಂದೆರಡು ನಿಮಿಷದಲ್ಲಿ ಮತ್ತೆ ಅದನ್ನು ಕೈಕೊಂಡು ಓದುತ್ತಲೂ, ಹೀಗೆ ತನ್ನ ಆಗ್ರಹವನ್ನು ಹೆಚ್ಚಿಸಿಕೊಂಡು, ಭಯಂಕರವಾದ ಮುಖಮುದ್ರೆಯನ್ನು ತಾಳಿ, ಪರಿಜನಗಳಾರೂ ಸಮೀಪಕ್ಕೆ ಬಾರದಂತೆ ತೋರುತ್ತಿದ್ದಳು ಇವಳ ಈ ಬಗೆಯ ರೋಷಾವೇಷಕ್ಕೆ ಕಾರಣವೇನೆಂಬುದನ್ನು ಅವರಾರೂ ತಿಳಿಯಲಾರದೆ ಪರಸ್ಪರ ಪ್ರಶ್ನೆಮಾಡುತ್ತಿದ್ದರು

ಈಕೆಗೆ "ಉದಯಪುರಿ"ಯೆಂದು ಹೆಸರು ಬರಲು ಕಾರಣವೇನೆಂದರೆ,— ಉದಯಪುರದಲ್ಲಿರುವ ರಾಜಪುತ್ರ ಸ್ತ್ರೀಯರಲ್ಲಿ ಯಾರನ್ನಾದರೂ ಮದುವೆ ಮಾಡಿಕೊಳ್ಳಬೇಕೆಂಬ ಆಸೆಯು ಔರಂಗಜೇಬ

ನಿಗೆ ಬಹುಕಾಲದಿಂದಿದ್ದಿತು ಆದರೆ, ಉದಯಪುರದಲ್ಲಿದ್ದ ರಾಜಪುತ್ರರು ನಿರುಪಮ ಪರಾಕ್ರಮಶಾಲಿಗಳಾಗಿದ್ದುದರಿಂದ ಆ ಕಾರ್ಯವು ಬಹುಕಾಲದ ವರೆಗೆ ಸಾಧ್ಯವಾಗಲಿಲ್ಲ ಕಡೆಗೆ ಆತನು ತನ್ನ ಕೋರಿಕೆಯನ್ನು ನೆರವೇರಿಸಿಕೊಳ್ಳಬೇಕೆಂದು, ಅಲ್ಲಿದ್ದ ಒಬ್ಬ ಬಡ ರಜಪೂತನಿಗೆ ಲಂಚವನ್ನು ಕೊಟ್ಟು ಆತನ ಮಗಳನ್ನು ಮದುವೆ ಮಾಡಿಕೊಂಡು ಆಕೆಗೆ "ಉದಯಪುರಿ" ಎಂದು ಹೆಸರನ್ನಿಟ್ಟು ತನ್ನ ಪಟ್ಟದ ರಾಣಿಯನ್ನಾಗಿ ಮಾಡಿಕೊಂಡನು

ಉದಯಪುರಿಯು ಅತ್ಯಂತ ಚತುರೆ !— ತನ್ನ ಮಾತುಗಳಿಂದಲೇ ಔರಂಗಜೇಬನನ್ನು ತನ್ನ ಬಲೆಯಲ್ಲಿ ಸಿಕ್ಕಿಸಿಕೊಂಡು, ಆತನನ್ನು ತಾನು ಹೇಳಿದಂತೆ ನಡೆಯುವ ಹಾಗೆ ಮಾಡಿದ್ದಳು ತನಗೆ ದುಃಖವಿಲ್ಲದಿದ್ದರೂ ಅಧಿಕ ದುಃಖಾಕ್ರಾಂತೆಯಾದಂತೆ ನಟಿಸುವದರಲ್ಲಿ ಈಕೆಗೆ ಸಮಾನರಾರೂ ಇಲ್ಲ ನೆನ್ನಬಹುದು ಹೀಗೆ ಚತುರೆಯಾದ ಉದಯಪುರಿಯು ರೋಷಾವೇಶದಿಂದ ಮಲಗಿಕೊಂಡಿರಲು, ಔರಂಗಜೇಬನು ಇವಳ ಮಹಲನ್ನು ಪ್ರವೇಶಿಸಿ, ಮೂಲೆಮೂಲೆಯಲ್ಲಿ ಗುಸಗುಟ್ಟುತ್ತ ಭೀತಚಿತ್ತರಾಗಿದ್ದ ಸೇವಕರನ್ನು ನೋಡಿ, ಆಶ್ಚರ್ಯದಿಂದ ಕಾರಣವೇನಿರಬಹುದೆಂದು ಯೋಚಿಸತೊಡಗಿದನು ಬಾದಶಹನನ್ನು ಕಂಡಕೂಡಲೇ ಸೇವಕರೆಲ್ಲರೂ ತಮ್ಮ ತಮ್ಮ ಕಾರ್ಯಗಳಲ್ಲಿ ಉದ್ಯುಕ್ತರಾದರು. ಕ್ರಮಕ್ರಮವಾಗಿ ಔರಂಗಜೇಬನು ಉದಯಪುರಿಯ ಅಂತಃಪುರವನ್ನು ಪ್ರವೇಶಿಸಿ, ದೀರ್ಘಾಲೋಚನೆಯಲ್ಲಿ ಮುಳುಗಿದ್ದ ಉದಯಪುರಿಯನ್ನು ಕಂಡು ಆಕೆಯ ಸಮೀಪದಲ್ಲಿ ಸ್ವಲ್ಪಹೊತ್ತು ನಿಂತುಕೊಂಡನು ತಾನು ಮಹಲನ್ನು ಪ್ರವೇಶಿಸಿದ ಕೂಡಲೇ ರಾಣಿಯು ಇದಿರ್ಗೊಂಡು ಬಂದು ಹಸ್ತಲಾಘವವನ್ನಿತ್ತು ಕರೆದುಕೊಂಡುಬಂದು ಆಸನದಮೇಲೆ ಕುಳ್ಳಿರಿಸಿ, ಮೃದುಮಧುರಭಾಷಣಗಳಿಂದ ಸಂತೋಷವನ್ನುಂಟುಮಾಡುತ್ತಿದ್ದ ಉದಯಪುರಿಯು ಈ ದಿನ ತನ್ನ ಸಮೀಪಕ್ಕೂ ಬಾರದಿದ್ದುದರಿಂದ ಅವುದೋ ಒಂದು ಕಾರಣವಿರಬಹುದೆಂದು ತಿಳಿದು ಆತನು ಆಕೆಯ ಇದಿರಿಗೆ ಹೋಗಿ ನಿಂತನು.

ತತ್‍ಕ್ಷಣವೇ ಉದಯಪುರಿಯು ಪತಿಯನ್ನು ಕಂಡು ಮೇಲಕ್ಕೆದ್ದು ಅತ ನನ್ನು ಉಚಿತಾಸನದ ಮೇಲೆ ಕುಳ್ಳಿರಿಸಿ, ತಾನೂ ಬಳಿಯಲ್ಲಿ ಕುಳಿತು ಕೊಂಡಳು. ಔರಂಗಜೇಬನು ಆಕೆಯ ಮುಖಭಾವವನ್ನು ನೋಡಿ ಕೌತುಕದಿಂದ ಕೇಳಿದನು —

"ಸುಂದರಿ! ಈದಿನ ನೀನು ಇಷ್ಟು ಚಿಂತಾಕ್ರಾಂತೆಯಾಗಿರಲು ಕಾರಣವೇನು? ನಾನು ಕಳುಹಿದ ಕಾಗದಗಳನ್ನು ಓದಿದೆಯಾ?"

ಉದಯಪುರಿ — ಮುಖವನ್ನು ತಗ್ಗಿಸಿ, ಕಣ್ಣುಗಳಲ್ಲಿ ನೀರುಸುರಿ ಸುತ್ತ "ಮಹಾರಾಜಾ! ಎಲ್ಲವನ್ನೂ ಓದಿದೆನು." ಎಂದು ಹೇಳಿ ದಳು

ಔರಂಗ — ಪ್ಯಾರೀ! ಕಾರಣವನ್ನೇಕೆ ಹೇಳದಿರುವೆ? ನಾನಿರು ವಾಗ ನಿನಗಾವ ಕೊರತೆಯುಂಟಾಗುವುದು?

ಉದಯ — ತಿಳಿಸುವುದೇನಿರುವದು? ಮೊಗಲಾಯಿ ಸಾರ್ವಭೌ ಮನಾದ ನಿಮ್ಮನ್ನು ವರಿಸುವುದರಿಂದ ಮಗಳು ಸಕಲ ಸೌಖ್ಯವನ್ನು ಹೊಂದುವಳೆಂದು ತಿಳಿದು ನನ್ನ ತಂದೆಯು ನನ್ನನ್ನು ನಿನಗೆ ಕೊಟ್ಟಿ ರುವನು ಆದರೆ, ಅಪನಿಂದೆಯು ಬರುವುದೆಂಬುದನ್ನು ಯೋಚಿಸದೆ ಹೋದನು!

ಔರಂಗ — ಹಾ! ಹಾಗೆಂದರೆ! ಮೊಗಲ್ ಸಮ್ರಾಟನಾದ ನನ್ನನ್ನೂ ಮದುವೆಯಾದ ನಿನ್ನನ್ನು ನಿಂದಿಸಿದವರಾರು?

ಉದಯ — ಮಹಾರಾಜ! ನಿಮ್ಮ ಕೈಹಿಡಿದ ನಾನು ಈವರೆಗೆ ಎಲ್ಲ ಸೌಖ್ಯವನ್ನು ಅನುಭವಿಸುತ್ತ ಶಚೀದೇವಿಯಂತಿದ್ದೆನು ಆದರೆ ಈದಿನ ನನಗೂ ತಮಗೂ ಋಣವು ತೀರಿತೆಂದು ಹೇಳಬೇಕಾಗಿ ಬಂದಿ ರುವುದು!

ಔರಂಗ — ಏಕೆ? ಹೇಳೆಂದರೆ ಸುಮ್ಮನೇಕೆ ಸಾವಕಾಶಮಾಡು ವೆ! ನಿನ್ನನ್ನು ಯಾರೇನೆಂದಿದ್ದರೂ ಅವರನ್ನು ನಿನ್ನಿದಿರಿಗೆ ಕರೆಯಿಸಿ ಕಠಿಣ ಶಿಕ್ಷೆಯನ್ನು ವಿಧಿಸುವೆನು. ತಡೆಮಾಡದೆ ಬೇಗಹೇಳು.

ಉದಯ:—ಗದ್ಗದಸ್ವರದಿಂದ— "ನಾಥ! ನಾನಿನ್ನು ಈ ಅಪ ನಿಂದೆಯನ್ನು ಸಹಿಸಿರಲಾರೆನು. ಭಾವಿಯಲ್ಲಿ ಬಿದ್ದಾದರೂ ಪ್ರಾಣಬಿಡು ವೆನು. ಈ ಅಪಮಾನವನ್ನು ಹೊಂದಿ, ಉಳಿದಿರುವ್ವದಕ್ಕಿಂತ ಸತ್ತು ಸ್ವರ್ಗವನ್ನು ಸೇರುವುದು ಉತ್ತಮ ನಾನು ಸತ್ತು ಹೋದ ಮಾತ್ರ ದಿಂದ ನಿಮಗಾವ ಲೋಪವೂ ಸಂಭವಿಸದು ನಿಮಗೆ ನನ್ನಂತಹ ಹೆಂಡ ತಿಯರನೇಕರಿರುವರು ಪೊಟ್ಟೆಯು ಬಂದು ಮರಿಯನ್ನು ಧಿಕ್ಕರಿಸಿ ದಂತೆ ಈ ದುಷ್ಟಾತ್ಮಳು ನನ್ನನ್ನು ದೂಷಿಸಿರುವಳು. ಮಹಾರಾಜ! ನನಗೆ ಅಪ್ಪಣೆಯನ್ನು ಕೊಡಿರಿ."

ಔರಂಗ —ಪ್ಯಾರಿ! ನಾನು ಎಷ್ಟು ಬೇಡಿದರೂ ಸ್ಪಷ್ಟವಾಗಿ ಹೇಳದಿರುವೆಯೇಕೆ? ಯಾವ ದುಷ್ಟಾತ್ಮಳು ನಿನ್ನನ್ನು ದೂಷಿಸಿರುವಳು? ಆ ಕಾಗದದಲ್ಲಿರುವ ಸಂಗತಿಯೇನು? ಆ ದುಷ್ಟಾತ್ಮಳು ಅವಳೇ ಆಗಿ ದ್ದರೂ, ಅವಳನ್ನು ನಿನ್ನ ಇದಿರಿಗೆ ಶೂಲಕ್ಕೇರಿಸುವೆನು ಇನ್ನು ತಡೆ ಯದೆ ಬೇಗ ಹೇಳು

ಔರಂಗಜೇಬನು ಹಲವು ಬಗೆಯಾಗಿ ಧೈರ್ಯವನ್ನು ಹೇಳಿ ಪ್ರಾರ್ಥಿಸಿಕೊಳ್ಳಲು ಉದಯಪುರಿಯು ಕೈಯಲ್ಲಿದ್ದ ಕಾಗದವನ್ನು ಬಿಚ್ಚಿ ತನ್ನ ದುಃಖವನ್ನು ಶಮನಮಾಡಿಕೊಂಡು ಔರಂಗಜೇಬನಿಗೆ ಮೆಲ್ಲಮೆಲ್ಲನೆ ಓದಲಾರಂಭಿಸಿದಳು:

" ಮಹಾಲಕ್ಷ್ಮೀಸಮಾನಳಾದ ನನ್ನ ಚಿಕ್ಕಮ್ಮ-ಚಂದ್ರಾವತೀ ಮಹಾರಾಣಿಯವರ ದಿವ್ಯಸಮ್ಮುಖಕ್ಕೆ— ರೂಪನಗರಾಧೀಶನಾದ ವಿಜಯಸಿಂಹ ಮಹಾರಾಜನ ಮಗಳಾದ ವಿಮಲಾದೇವಿಯು ಬರೆದು ಕೊಂಡ ವಿಜ್ಞಾಪನಪತ್ರಿಕೆ-ಏನೆಂದರೆ,—

ಶ್ರೀ ಯಶವಂತಸಿಂಹ ಮಹಾರಾಜಾಜಿಯವರೊಡನೆ ನೀವು ಕೂಡ ಕಾಬೂಲದೇಶಕ್ಕೆ ಹೋಗಿರುವಿರೆಂದು ಕೇಳಿದಂದಿನಿಂದ ನನ್ನ ಮನಸ್ಸಿನಲ್ಲಿ ಒಂದು ವಿಧವಾದ ಅನುಮಾನವು ಜನಿಸಿ ಬಾಧಿಸುತ್ತಿ ದ್ದಿತು. ಅದಕ್ಕೆ ಸರಿಯಾಗಿ ಔರಂಗಜೇಬನು ನಮ್ಮ ವಂಶವೃಕ್ಷವನ್ನು ಬೇರಳಿನಿಂದ ಕಿತ್ತುಹಾಕಲು ಪ್ರಯತ್ನಿಸಿರುವನು. ಆ ಮಾಯಾವಿಯಾದ

ಪಾದಶಹನು ನಮ್ಮ ಪೃಥ್ವೀಸಿಂಗನನ್ನು ತನ್ನ ಸಭೆಗೆ ಕರೆಯಿಸಿ, ಹಲವು ಕುಟಿಲ ನಟನೆಯ ಮರ್ಯಾದೆಗಳಿಂದ ಗೌರವಿಸಿ, ಕಡೆಗೆ ವಿಷವಸ್ತ್ರಗಳನ್ನು ತೊಡಿಸಿ ಕೊಲ್ಲಿಸಿರುವನು ಭೀತಚಿತ್ತರಾದ ಕೆಲಜನ ರಾಜಪುತ್ರರು ಆ ನೀಚನಿಗೆ ವಿಧೇಯರಾಗಿರುವದರಿಂದಲ್ಲವೆ ನಮಗಿಷ್ಟು ಕಷ್ಟನಷ್ಟಗಳುಂಟಾಗಿರುವವು ? ನಮ್ಮ ಕ್ಷತ್ರಿಯ ವಂಶದಲ್ಲಿ ಐಕಮತ್ಯವಿಲ್ಲದಿರುವುದೇ ಇಷ್ಟು ಅನರ್ಥಕ್ಕೆ ಕಾರಣವಲ್ಲವೇ ? ಸಮಯ ಸಿಕ್ಕಿದರೆ ರಾಜಕನ್ನಿಕೆಯರೆಲ್ಲರನ್ನೂ ಒಟ್ಟಿಗೆ ಮದುವೆ ಮಾಡಿಕೊಳ್ಳಬೇಕೆಂಬ ಅಪೇಕ್ಷೆಯು ಔರಂಗಜೇಬನಿಗಿರುವುದು ಉತ್ತಮ ರಾಜಪುತ್ರಸ್ತ್ರೀಯು ಪ್ರಾಣವನ್ನಾದರೂ ತ್ಯಜಿಸುವಳಲ್ಲದೆ ಇಂತಹ ಅಕೃತ್ಯವನ್ನು ಎಂದಿಗೂ ಮಾಡಲಾರಳು ಆ ಉದಯಪುರಿಯೊಬ್ಬಳುಮಾತ್ರ ಈ ನಮ್ಮ ವಂಶಕ್ಕೆ ಅಪಕೀರ್ತಿಯನ್ನು ತಂದಿರುವಳು ತುರುಷ್ಕರ ಕೈಹಿಡಿವಲು ಆ ಮೂರ್ಖಳು ಹೇಗೆ ಸಹಿಸಿದಳೋ ತಿಳಿಯದು ! ಇಂತಹ ನೀಚಸ್ತ್ರೀಯರು ಭೂಮಿಗೆ ಭಾರವೇ ಹೊರತು ಪ್ರಯೋಜನವೇನಿರುವದು ? ಔರಂಗಜೇಬನು ನಡೆಯಿಸಿರುವ ಈ ಘೋರ ಕೃತ್ಯವು ರಾಜಪುತ್ರಸ್ಥಾನದಲ್ಲೆಲ್ಲಾ ಈ ವರೆಗೆ ವ್ಯಾಪಿಸಿಯೇ ಇರುವುದು ನಮಗೆ ಈ ನಿರ್ಭಾಗ್ಯದೇವತೆಯು ಎಷ್ಟರವರೆಗಿರುವುದೋ ಅಷ್ಟರವರೆಗೂ ಅನುಭವಿಸಲೇಬೇಕು ಶರೀರವು ಕ್ಷಣಭಂಗುರವೆಂದು ತಿಳಿದು ನೀವು ದುಃಖವನ್ನು ಸಹಿಸಿ ಮಹಾರಾಣಿಯವರನ್ನು ಸಮಾಧಾನ ಪಡಿಸಬೇಕು

"ವಿಮಲಾದೇವಿ"

ಉದಯಪುರಿಯು ಓದಿದುದೆಲ್ಲವನ್ನೂ ಕೇಳಿ ಔರಂಗಜೇಬನು ದುರಾಗ್ರಹಪರವಶನಾಗಿ— "ಪ್ಯಾರೀ ! ನೀನಿನ್ನು ವಿಚಾರಮಾಡಬೇಡ ಪ್ರಚಂಡವಾದ ನನ್ನ ಸೇನಾಸಮೂಹವನ್ನು ರೂಪನಗರದ ಮೇಲೆ ಕಳುಹಿಸಿ, ಆ ಪುರವನ್ನು ಧ್ವಂಸ ಮಾಡಿಸಿ, ವಿಮಲೆಯನ್ನು ಹಿಡಿದುತರಿಸಿ ನಿನಗೆ ದಾಸಿಯನ್ನಾಗಿ ಮಾಡುವೆನು ಇದಕ್ಕೆ ತಪ್ಪಿದರೆ ನಾನು ಮಹಮ್ಮದೀಯ ವಂಶದಲ್ಲಿ ಹುಟ್ಟಿದವನಲ್ಲ. ಈ ಮಾತು

ಎಂದಿಗೂ ಸುಳ್ಳಾಗುವುದಿಲ್ಲ ಹಿಂದುಮುಂದನ್ನು ಕಾಣದೆ ಹೀಗೆ ನಮ್ಮಿಬ್ಬರನ್ನೂ ನಿಂದಿಸಿದ ಮದೋನ್ಮತ್ತಳಾದ ಆ ವಿಮಲೆಯನ್ನು ನಮ್ಮ ಮಸಾವದನಿಗೆ ಮದುವೆಮಾಡಿ ಅಪಮಾನಪಡಿಸುವೆನು ನೀ-ನೇನ್ನು ವಿಚಾರಮಾಡದಿರು ಇದು ಆಲಂಘೀರ್ ಪಾದಶಹನ ಪ್ರತಿಜ್ಞೆ!" ಎಂದು ಹೇಳಿ, ಅಲ್ಲಿಂದಲ್ಲಿಯೇ–ಆಗಲೇ—"ಇನ್ನು ಮೂರು ದಿನಗಳೊಳಗಾಗಿ ನಾಲ್ವತ್ತು ಸಾವಿರ ಸೇನೆಯನ್ನು ಸೇರಿಸಿಕೊಂಡು ರೂಪನಗರದ ಮೇಲೆ ದಂಡೆತ್ತಿ, ಪಟ್ಟಣವನ್ನೆಲ್ಲಾ ಹಾಳುಮಾಡಿ ವಿಮಲೆಯನ್ನು ಹಿಡಿದು ತರಬೇಕು" ಎಂಬ ನಿರೂಪವನ್ನು ಸಾದತ್‌ಖಾನನ ಹೆಸರಿಗೆ ಬರೆದು ಉದಯಪುರಿಗೆ ತೋರಿಸಿದನು ಅದನ್ನು ನೋಡಿ ಉದಯಪುರಿಯು ಅಮಂದಾನಂದತುಂದಿಲ ಸ್ವಾಂತಳಾಗಿ ತನ್ನ ಪತಿಯನ್ನು ಹೊಗಳಲಾರಂಭಿಸಿದಳು ಪಾದಷಹನು ರಾಣಿಯು ಸಂತೋಷಪಟ್ಟುದನ್ನು ನೋಡಿ ಸಮಾಧಾನಹೊಂದಿ, ಹೊರಗೆ ನಿಂತಿದ್ದ ಮಸಾವದನೆಂಬ ಕಾವಲುಗಾರನನ್ನು ಕರೆದು ಆತನ ಕೈಯಲ್ಲಿ ಆಜ್ಞಾಪತ್ರವನ್ನಿತ್ತು ತತ್‌ಕ್ಷಣವೇ ಸಾದತ್‌ಖಾನನಿಗೆ ಮುಟ್ಟಿಸಬೇಕೆಂದು ಕಟ್ಟುಮಾಡಿದನು ಮಸಾವದನು ಉದಯಪುರಿಯ ಅಂತಪುರದ ಕಾವಲಿಗಾಗಿ ನಿಯಮಿತರಾಗಿದ್ದ ನಪುಂಸಕರ ಜಾತಿಗೆ ಸೇರಿದವನೂ, ಮತ್ತು ಅವರೆಲ್ಲರ ಮೇಲ್ವಿಚಾರಣಾಕರ್ತನೂ ಉದಯಪುರಿಯ ಅಸ್ತ್ರಭೃತ್ಯನೂ ಆಗಿದ್ದನು ರೂಪದಲ್ಲಿಯೂ ಗುಣದಲ್ಲಿಯೂ ವರ್ಣದಲ್ಲಿಯೂ ಇವನು ಸಾಕ್ಷಾತ್ ಯಮದೂತನಂತೆಯೇ ಭಯಂಕರನಾಗಿ ತೋರುತ್ತಿದ್ದನು ಇರಲಿ, ಉದಯಪುರಿಯ ಆಪ್ತಭೃತ್ಯನಾಗಿದ್ದ ಮಸಾವದನು ಪಾದಷಹನು ಕೊಟ್ಟ ಆಜ್ಞಾಪತ್ರವನ್ನು ಕೈ-ಕೊಂಡು, ಅಪ್ಪಣೆಯನ್ನು ಶಿರಸಾವಹಿಸಿ ನಯಭಯದಿಂದ ಕೈಮುಗಿದು ಹೊರಟುಹೋದನು

ಪೃಥಿವೀಸಿಂಗನ ಮರಣವೃತ್ತಾಂತವನ್ನು ಕಾಬೂಲಿನಲ್ಲಿರುವ ಯಶವಂತಸಿಂಹನಿಗೆ ಯಾರಾದರೂ ತಿಳಿಯಪಡಿಸಿ ತನ್ನ ರಹಸ್ಯವನ್ನು ಹೊರಪಡಿಸುವರೇನೋ ಎಂದು ಪಾದಷಹನು, ತನ್ನ ಅಪ್ಪಣೆ ಚೀಟಿ

ಯಿಲ್ಲದೆ ಕಾಬೂಲಿಗೆ ಹೋಗುವವರನ್ನು ತಡೆದು ಅವರ ಹತ್ತಿರ ಏನಾದರೂ ಕಾಗದಗಳಿದ್ದಲ್ಲಿ ಅವನ್ನು ತನ್ನ ಸಮೀಪಕ್ಕೆ ಕಳುಹಿಸಬೇಕೆಂದು ಅಪ್ಪಣೆಯಿತ್ತು ಕೆಲವು ಭಟರನ್ನು ಮಾರ್ಗಮಧ್ಯದಲ್ಲಿ ಕಾವಲಿಟ್ಟಿದ್ದನು ಪಾದಷಹನ ಅಪ್ಪಣೆಯಂತೆ ಭಟರು ಮಾರ್ಗಸ್ಥರನ್ನು ಹಿಡಿದು ಬೆದರಿಸಿ, ಅವರಲ್ಲಿದ್ದ ಕಾಗದಗಳನ್ನು ತೆಗೆದುಕೊಂಡು ಔರಂಗಜೇಬನ ಹತ್ತಿರಕ್ಕೆ ಕಳುಹಿಸುತ್ತಿದ್ದರು ಇಂಥ ಕಾಗದಗಳು ವಿಶೇಷವಾಗಿ ಮಾರ್ವಾಡ ಭಾಷೆಯಲ್ಲಿಯೇ ಬರೆಯಲ್ಪಡುತ್ತಿದ್ದುವು ಔರಂಗಜೇಬನು, ಮಾರ್ವಾಡ ಭಾಷೆಯು ತನಗೆ ತಿಳಿಯದಿದ್ದುದರಿಂದ ಮಾರ್ವಾಡದೇಶಸ್ಥಳಾದ ಉದಯಪುರಿಗೆ ಆ ಭಾಷೆಯು ಬರಬಹುದೆಂದು ತಿಳಿದು, ಆ ಕಾಗದಗಳನ್ನು ಅವಳಲ್ಲಿಗೆ ಕಳುಹಿಸಿ, ಅವುಗಳ ವಿವರವನ್ನು ತಿಳಿಸಬೇಕೆಂದು ಹೇಳಿದ್ದನು ಪತಿಯ ನಿಯಮಾನುಸಾರವಾಗಿ ಉದಯಪುರಿಯು ಈ ದಿನವೂ ತನ್ನಲ್ಲಿಗೆ ಕಳುಹಲ್ಪಟ್ಟ ಕಾಗದಗಳನ್ನು ಒಂದೊಂದನ್ನಾಗಿ ಓದಿ ಕಡೆಗೆ ವಿಮಲಾದೇವಿಯು ಬರೆದಿದ್ದ ಕಾಗದವನ್ನೂ ತೆಗೆದುಕೊಂಡಳು ಕಾಗದದಲ್ಲಿದ್ದ ಅಕ್ಷರಗಳು ಸ್ಪಷ್ಟವಾಗಿದ್ದುದರಿಂದ ಅವಳೇ ನಾರೀಮಣಿಯು ಈ ಕಾಗದವನ್ನು ಬರೆದಿರುವಳೆಂದು ತಿಳಿದು ಅದನ್ನು ಅವ್ಯಗ್ರವಾಗಿ ಓದಿಕೊಂಡಳು ಅದರಲ್ಲಿದ್ದ ಒಂದೊಂದು ಮಾತೂ ಒಂದೊಂದು ಶೂಲದಂತೆ ಅವಳ ಹೃದಯದಲ್ಲಿ ನಾಟ, ಬಾಧಿಸತೊಡಗಿತು ಕಡೆಗೆ ತನ್ನ ಹಗೆಯನ್ನು ತೀರಿಸಿಕೊಳ್ಳಲು ಪಾದಷಹನಿಂದ ಪ್ರತಿಜ್ಞೆಯನ್ನು ಮಾಡಿಸಿದರೂ ಅವಳ ಮನಸ್ಸಂತಾಪವು ಶಮನವಾಗಲಿಲ್ಲ ಪಾದಷಹನು ರಾಣಿಯನ್ನು ಬಹುವಿಧವಾಗಿ ಸಂತೈಸಿ, ಉಳಿದ ಕಾಗದಗಳನ್ನೂ ಓದಿಸಿ, ಸಮಾಚಾರವನ್ನು ತಿಳಿದನು ಅವುಗಳಲ್ಲಿ ಪ್ರತಿಯೊಂದೂ ಒಬ್ಬೊಬ್ಬ ರಾಜಪುತ, ರಾಜರಿಂದ ಪೃಥ್ವೀಸಿಂಗನ ಮರಣವಾರ್ತೆಯನ್ನು ವಿವರಿಸುವಂತೆ ಬರೆದುದಾಗಿದ್ದಿತು ಈ ವರೆಗೆ ತನ್ನ ರಹಸ್ಯವು ಯಾರಿಗೂ ತಿಳಿಯದೆಂದು ಸಂತೋಷಚಿತ್ತನಾಗಿದ್ದ ಪಾದಷಹನು ಈ ಕಾಗದಗಳನ್ನು ನೋಡಿ ಆಶ್ಚರ್ಯಸ್ವಾಂತನಾಗಿ—

"ಅಬ್ಬ! ರಾಜಪುತ್ರರಿಗೆ ದಿವ್ಯದೃಷ್ಟಿಯಿರುವುದೇನು? ನನ್ನ ರಹಸ್ಯವನ್ನೆಲ್ಲಾ ಎಷ್ಟು ಬೇಗ ತಿಳಿದಿರುವರು" ಎಂದು ತನ್ನಲ್ಲಿ ತಾನೇ ವಿಚಾರಮಾಡಲಾರಂಭಿಸಿದನು. ಬೆಕ್ಕು ಮಡಕೆಯಲ್ಲಿದ್ದ ಹಾಲನ್ನು ಕಣ್ಣು ಮುಚ್ಚಿಕೊಂಡು ಕುಡಿಯುತ್ತಿದ್ದು, ತನ್ನ ಕಳ್ಳತನವನ್ನು ಯಾರೂ ನೋಡಲಿಲ್ಲವೆಂದು ಭಾವಿಸುವುದಲ್ಲವೆ? ಹಾಗೆಯೇ ಔರಂಗಜೇಬನು ಕೂಡ, ತಾನು ಮಾಡಿದ ಕಾರ್ಯವು ಯಾರಿಗೂ ತಿಳಿಯದೆಂದಿದ್ದನು

ವಿಜಯಸಿಂಹನು ತನ್ನ ಮಗಳಿಂದ ಇಂತಹ ಕಾಗದವನ್ನು ಬರೆಯಿಸಲು ಸ್ವಲ್ಪ ಸಂದೇಹಪಟ್ಟನಾದರೂ, ಒಡನೆಯೇ ಧೈರ್ಯವನ್ನು ತಂದುಕೊಂಡು—"ಆಗಲಿ, ನೋಡುವ! ಒಂದುವೇಳೆ, ಯಶವಂತಸಿಂಹನಿಗೆ ಈ ಕಾಗದವು ಸೇರಿದರೆ ನಮ್ಮ ಮನೋಗತವು ಆತನಿಗೆ ತಿಳಿಯುವುದು ಹಾಗಲ್ಲದೆ ಪಾದಷಹನಿಗೆ ಸಿಕ್ಕಿದರೆ ಅವನೊಡನೆ ಯುದ್ಧವಾದರೂ ಸಂಭವಿಸುವುದು ಆಗ ನನ್ನ ಪರಾಕ್ರಮವನ್ನು ತೋರಿಸಬಹುದು" ಹೀಗೆ ಯೋಚಿಸಿ ಕಾಗದವನ್ನು ಬರೆಯಿಸಿದನು

# ಆರನೆಯ ಪ್ರಕರಣ.

## ಚಂದ್ರಾವತಿ

ಕುಮಾರನ ಮರಣವೂ, ತದನಂತರ ಪತಿಯ ಮರಣವೂ ಚಂದ್ರಾವತಿಯನ್ನು ದುಃಖಸಾಗರದಲ್ಲಿ ಮುಳುಗಿಸಿದುವು ಸಹಜ ಧೈರ್ಯಾಲಂಕೃತೆಯಾದ ಇಂದಿರೆಯು ಆಕೆಯನ್ನು ಸಮಾಧಾನಪಡಿಸುತ್ತಿದ್ದರೂ, ದುಃಖವನ್ನು ಸಹಿಸಲಾರದೆ ಆಕೆ, ಪತಿಯೊಡನೆ ಸಹಗಮನ ಮಾಡಲುದ್ಯುಕ್ತಳಾದಳು ಆದರೆ ಸೇನಾಧಿಪತಿಗಳಾದ ದುರ್ಗಾದಾಸ, ಶಿವಸಿಂಗ ಮೊದಲಾದವರು ಜೋಧಪುರವಂಶಾಭಿವೃದ್ಧಿಯಲ್ಲಿ

ಕಂಕಣಬದ್ಧರಾಗಿದ್ದುದರಿಂದ ಆಕೆಯ ಧೈರ್ಯಕ್ಕೆ ಭಯಪಟ್ಟು, ಹೀಗೆ ಪ್ರಾರ್ಥಿಸಿಕೊಂಡರು —" ಮಾತೆ, ಚಂದ್ರಾವತಿ! ಇಂದಿಗೆ ಜೋಧಪುರವಂಶವು ನಾಶವಾಗಲಾರಂಭಿಸಿರುವುದು. ನೀನು ಗರ್ಭವತಿಯಾಗಿರುವದರಿಂದ ಪ್ರಾಣತ್ಯಾಗ ಮಾಡಿದಲ್ಲಿ ನಿನಗೆ ಅತ್ಯಂತ ಪಾಪವು ಸಂಭವಿಸುವುದು. ನಿನ್ನ ಗರ್ಭದಲ್ಲಿರುವ ಮಗನನ್ನು ಸ್ಮರಿಸಿಕೊಂಡು ಆದರಿಂದ ಧೈರ್ಯಚಿತ್ತಳಾಗಿ ನಿನ್ನ ವಂಶವನ್ನು ಕಾಪಾಡಬೇಕೆಂದು ನಾವೆಲ್ಲರೂ ಕಂಕಣಬದ್ಧರಾಗಿರುವೆವು. ಈ ನಮ್ಮ ಆಶೆಯನ್ನು ನಿರಾಶೆಯಾಗಿ ಮಾಡಬೇಡ" ಎಂದು ಅನೇಕ ವಿಧವಾಗಿ ಪ್ರಾರ್ಥಿಸಲು, ಚಂದ್ರಾವತಿಯು ತನ್ನ ಸಾಹಸವನ್ನು ಬಿಟ್ಟುಬಿಟ್ಟಳು. ದುಃಖಾತಿಶಯದಿಂದ ಸಹಗಮನವನ್ನು ಮಾಡಲಿಚ್ಛಿಸಿದಳೇ ಹೊರತು ಚಂದ್ರಾವತಿಯು ಅಷ್ಟು ಅವಿವೇಕಿಯಿಲ್ಲ. ಅವಳನ್ನು ಸಾಮಾನ್ಯಸ್ತ್ರೀಯೆಂದು ಎಂದಿಗೂ ಹೇಳಕೂಡದು. ಚಂದ್ರಾವತಿಯ ಮೇಲೆ ಅಭಿಮಾನವೂ ಪೂಜ್ಯಭಾವವೂ ಇಲ್ಲದವರೊಬ್ಬರೂ ರಾಜಪುತ್ರಸ್ಥಾನದಲ್ಲಿ ಇಲ್ಲ. ರಾಜಪುತ್ರರು ಯಶವಂತ ರಾಜನನ್ನು ತಿರಸ್ಕರಿಸಿದರೂ ಚಂದ್ರಾವತಿಯನ್ನು ಕುಲದೇವತೆಯನ್ನಾಗಿ ಭಾವಿಸಿಕೊಂಡಿದ್ದರು. ಯಶವಂತಸಿಂಹನು ಷಹಜಹಾನನ ಹಿರಿಯಮಗನಾದ ದಾರಾನ ಪಕ್ಷವನ್ನು ವಹಿಸಿ ಪಾದಷಹನನ್ನು ಸೋಲಿಸಿ, ಆತನಿಗೆ ಶತ್ರುವಾಗಿ, ಪುನ ಆತನ ಹತ್ತಿರದಲ್ಲಿಯೇ ಇದ್ದುದು ರಾಜಪುತ್ರರಿಗೆ ಸಮ್ಮತವಿರಲಿಲ್ಲ. ಆದುದರಿಂದ ಎಲ್ಲರೂ ಆತನಲ್ಲಿ ಅಸೂಯಾಪರರಾಗಿದ್ದರು. ಆದರೆ, ಚಂದ್ರಾವತಿಯ ಮೇಲೆ ರಾಜಪುತ್ರರಿಗೆ ಯಾವ ಅಸೂಯೆಯೂ ಇರಲಿಲ್ಲ. ಈಕೆ, ಉದಯಪುರ ರಾಜಪುತ್ರಿ. ವೀರಮಹಿಳೆಗೆ ಇರಬೇಕಾದ ಸದ್ಗುಣಗಳೆಲ್ಲವೂ ಈಕೆಯಲ್ಲಿದ್ದುವು. ಈಕೆಯ ವಿಷಯದಲ್ಲಿ ರಾಜಪುತ್ರರಿಗೆ ವಿಶೇಷವಾಗಿ ಪೂಜ್ಯಭಾವವಿರಲು ಒಂದು ಕಾರಣವಿರುವುದು.

ಕ್ರಿಸ್ತಶಕೆ ೧೬೫೮ನೆಯ ವರ್ಷದಲ್ಲಿ ಔರಂಗಜೇಬನು ದಕ್ಷಿಣದೇಶದಿಂದ ಬಂದು ತಂದೆಯ ಮೇಲೆ ತಿರುಗಿಬಿದ್ದನು. ಯಶವಂತ

ಸಿಂಹನು ಆತನನ್ನೆದುರಿಸಲು ಷಹಜಹಾನನ ಅಪ್ಪಣೆಯನ್ನು ಪಡೆದು ಹೊರಟನು ಉಭಯ ಸೈನ್ಯಗಳಿಗೂ ಮಾಳವ ದೇಶದ 'ಉಜ್ಜಯನೀ' ಪಟ್ಟಣದ ಬಳಿಯಲ್ಲಿ ಘೋರವಾದ ಯುದ್ಧವಾಯಿತು ಇದರಲ್ಲಿ ಯಶವಂತಸಿಂಹನು ತನ್ನ ಬಾಹುಪರಾಕ್ರಮವನ್ನು ಪೂರ್ಣವಾಗಿ ತೋರಿಸಿದನಾದರೂ, ತನ್ನ ಸೈನ್ಯವೆಲ್ಲವೂ ಯುದ್ಧದಲ್ಲಿ ವೀರಸ್ವರ್ಗ ವನ್ನು ಹೊಂದಲು ಆತನು ಉಳಿದ ಹತ್ತು ಜನ ಭಟರೊಡನೆ ತನ್ನ ರಾಜಧಾನಿಯನ್ನು ಕುರಿತು ಓಡಿಹೋದನು ತನ್ನ ಪತಿಯು ಅಪ ಜಯವನ್ನು ಹೊಂದಿ, ಓಡಿಬರುತ್ತಿರುವನೆಂಬ ಸಮಾಚಾರವನ್ನು ಕೇಳಿದ ಕೂಡಲೇ ವೀರಮಹಿಷಿಯಾದ “ಚಂದ್ರಾವತಿ” ಯು ತನ್ನ ಪಟ್ಟಣದ ಕೋಟೆಯ ಬಾಗಿಲುಗಳೆಲ್ಲವನ್ನೂ ಮುಚ್ಚಿಸಿ, ತನ್ನ ಅಪ್ಪಣೆಯಿಲ್ಲದೆ ಯಾರನ್ನೂ ಒಳಕ್ಕೆ ಬಿಡಕೂಡದೆಂದು ದ್ವಾರಪಾಲಕ ರಿಗೆ ಕಠಿಣವಾಗಿ ಆಜ್ಞಾಪಿಸಿದಳು ಚಂದ್ರಾವತಿಯು ಪರಮಪತಿವ್ರತೆ ಯಾದರೂ ಆಕೆಯಲ್ಲಿ ವೀರ್ಯವೂ ಶೌರ್ಯವೂ ಇದ್ದುದರಿಂದ ಇಂತಹ ಸಾಹಸಕಾರ್ಯಕ್ಕೆ ಪ್ರಯತ್ನಿಸಿದಳು ಕ್ಷತ್ರಿಯನಾಗಿ ಹುಟ್ಟಿದ ಮೇಲೆ ಯುದ್ಧದಲ್ಲಿ ಜಯವನ್ನಾಗಲೀ ಇಲ್ಲವೆ ಮರಣವನ್ನಾಗಲೀ ಹೊಂದಬೇಕಲ್ಲದೆ ಶತ್ರುಗಳಿಗೆ ಭಯಪಟ್ಟು ಓಡಿಬರಕೂಡದೆಂಬುದು ಈಕೆಯ ಪ್ರತಿಜ್ಞೆಯು, ಪತಿಯು ಶೂರವಂಶಜನೂ ಪರಾಕ್ರಮಶಾ ಲಿಯೂ ಆಗಿದ್ದರೂ ಯುದ್ಧದಲ್ಲಿ ಸೋತು ಓಡಿಬಂದಿದ್ದುದರಿಂದ ಕ್ಷತ್ರಿಯವಂಶಕ್ಕೆ ಕಳಂಕವು ಪ್ರಾಪ್ತವಾಯಿತೆಂದು ತಿಳಿದು ಯಶವಂತ ಸಿಂಹನು ಒಳಗೆ ಬರದಂತೆ ದ್ವಾರವೆಲ್ಲವನ್ನೂ ಮುಚ್ಚಿಸಿ, ಆತನನ್ನು ಮತ್ತೆ ಯುದ್ಧಕ್ಕೆ ಹೋಗುವಂತೆ ಮಾಡಬೇಕೆಂದು ನಿಶ್ಚಯಿಸಿದಳು.

ಯಶವಂತಸಿಂಹನು ಶತ್ರುಗಳ ಕೈಗೆ ಸಿಕ್ಕದೆ ವೇಷಧರನಾಗಿ ಹತ್ತು ಜನ ಭಟರೊಡನೆ ತನ್ನ ರಾಜಧಾನಿಯಾದ ಜೋಧಪುರದ ಮಾರ್ಗವನ್ನು ಸಮೀಪಿಸಿದನು ಧ್ವಾರಗಳೆಲ್ಲವೂ ಮುಚ್ಚಲ್ಪಟ್ಟಿದ್ದುದ ರಿಂದ ಒಳಗೆ ಹೋಗಲು ಅವಕಾಶವಿಲ್ಲವಾಯಿತು ತಾನು ಜೋಧ ಪುರಾಧೀಶನಾದರೂ ತನ್ನ ರಾಜಧಾನಿಯನ್ನು ಪ್ರವೇಶಿಸಲು ಮಾರ್ಗ

ತಿಳಿಯದೆ ಆಶ್ಚರ್ಯಪರನಾದನು ದ್ವಾರಪಾಲಕರೆಲ್ಲರಿಗೂ ತನ್ನ ಹೆಸರನ್ನು ತಿಳಿಸಿ ನಯಭಯದಿಂದ ಬೋಧಿಸಿದರೂ ಅವರು ಮಹಾರಾಣಿಯವರ ಅಪ್ಪಣೆಯಿಲ್ಲದೆ ಬಾಗಿಲುಗಳನ್ನು ತೆರೆಯುವುದಿಲ್ಲವೆಂದು ಗಟ್ಟಿಯಾಗಿ ಹೇಳಿದರು ಕೋಟೆಯ ಬುರುಜಿನ ಮೇಲೆ ಚಂದ್ರಾವತಿಯೂ ಪೃಥ್ವೀಸಿಂಗನೂ ತಮ್ಮನ್ನು ನೋಡುತ್ತಿರುವರೆಂದು ತಿಳಿದ ಕೂಡಲೇ ಯಶವಂತಸಿಂಹನು ಭಟರೊಡನೆ ಬುರುಜಿನ ಸಮೀಪಕ್ಕೆ ಬಂದನು ನಾಚಿಕೆಯಿಂದ ಯಶವಂತಸಿಂಹನು ಚಂದ್ರಾವತಿಯನ್ನು ನೋಡಲಸಮರ್ಥನಾಗಿ ಬುರುಜಿನ ಕೆಳಗೆ ನಿಂತನು ಆತನ ಭಟರಲ್ಲೊಬ್ಬನು ಚಂದ್ರಾವತಿಯನ್ನು ನೋಡಿ– "ಅಮ್ಮಾ! ಮಹಾರಾಣಾ ಯಶವಂತಸಿಂಹ ಮಹಾರಾಜರವರು ಬಂದಿರುವರು ದುರ್ಗದ್ವಾರಗಳನ್ನು ತೆರೆಯಿಸಿರಿ" ಎಂದು ಪ್ರಾರ್ಥಿಸಿದನು

ಭಟನ ಮಾತನ್ನು ಕೇಳಿ ವೀರಮಹಿಷಿಯಾದ ಚಂದ್ರಾವತಿಯು ಆತನನ್ನು ನೋಡಿ—"ಅಯ್ಯಾ! ಉದಯಪುರ-ಜೋಧಪುರಗಳಲ್ಲಿರುವ ವೀರನಾರಿಯರಲ್ಲಿ ಜನಿಸಿದ ಪುರುಷರು ಹಗೆಗಳಿಗೆ ಬೆನ್ನುಕೊಟ್ಟು ಎಂದಿಗೂ ಬರಲಾರರೆಂದು ನಾನು ದೃಢವಾಗಿ ನಂಬಿರುವೆನು ನಾಚಿಕೆಯಿಲ್ಲದ ನೀವು ಮಾತ್ರ ಕಾಲಿಗೆ ಬುದ್ಧಿಹೇಳಿ ರಾಜಪುತ್ರರಿಗೆ ಅಪಕೀರ್ತಿಯನ್ನು ತಂದಿರುವಿರಿ ಯುದ್ಧದಲ್ಲಿ ನನ್ನ ಪತಿಯು ವೀರಸ್ವರ್ಗವನ್ನು ಹೊಂದಿರುವನೆಂಬುದು ನಿಜವು ಆತನೊಡನೆ ನೀವೂ ಪ್ರಾಣವನ್ನೊಪ್ಪಿಸದೆ ಬಂದಿರುವಿರಿ ನಾಚಿಕೆಯಿಲ್ಲದೆ ಹೆಂಗಸರಂತೆ ಬಳೆಗಳನ್ನು ತೊಟ್ಟುಕೊಂಡಿರೊ? ಮಹಾರಾಣಾರವರು ಬಂದಿರುವರೆಂದು ನನ್ನೊಡನೆ ಸುಳ್ಳನ್ನು ಹೇಳಲು ನಿಮಗೆ ನಾಲಿಗೆ ಹೇಗೆ ಬಂದಿತು? ಪೌರುಷವನ್ನು ಬಿಟ್ಟು ಎಂದಿಗಾದರೂ ನನ್ನ ಪತಿಯು ನಿಮ್ಮಂತೆ ಓಡಿ ಬರುವರೆ? ಹೊರಡಿರಿ-ಬೇಗಹೊರಡಿರಿ, ನೀವೆಲ್ಲರೂ ಪುನ ರಣಭೂಮಿಯಲ್ಲಿ ಪುರುಷರಂತೆ ಯುದ್ಧಮಾಡಿ ವೀರಸ್ವರ್ಗವನ್ನು ಹೊಂದಿರಿ" ಎಂದು ಮಾರುತ್ತರವನ್ನಿತ್ತಳು

ಚಂದ್ರಾವತಿಯ ಮಾತನ್ನು ಕೇಳಿ ಸೇವಕರು ಮರುನುಡಿ ನುಡಿ

ಯದೆ, ಯಶವಂತಸಿಂಹನ ಮುಖವನ್ನು ನೋಡುತ್ತ ನಿಂತರು ಬುರುಜಿನ ಮೇಲೆ ಆವಿತಿದ್ದ ಯಶವಂತಸಿಂಹನು ಏನುಮಾಡುವದಕ್ಕೂ ತಿಳಿಯದೆ ನಾಚಿಕೆಯಿಂದ ಮೃತಪ್ರಾಯನಾಗಿ ಹೊರಗೆ ಬಂದು ಚಂದ್ರಾವತಿಯನ್ನು ನೋಡಿ—“ದೇವಿ! ನಾನು ನಿಜವಾಗಿಯೂ ಯಶವಂತಸಿಂಹನು ಬಾಗಿಲನ್ನು ತೆರೆ” ಎಂದನು ಚಂದ್ರಾವತಿಯು ಈ ಮಾತನ್ನು ಕೇಳಿದರೂ ಕೇಳದವಳಂತೆ ನಟಿಸಿ, ಕೆಳಗೆ ನಿಂತಿದ್ದ ಸರದಾರನನ್ನು ನೋಡಿ ಅತ್ಯಂತ ಕೋಪದಿಂದ—“ಇನ್ನೂ ಯುದ್ಧಭೂಮಿಗೆ ಹೋಗಲಿಲ್ಲವೊ! ನೀವು ಹೋಗದಿದ್ದರೆ ನನ್ನ ಸೈನ್ಯವನ್ನು ಕರೆದು, ರಣಭೂಮಿಯಲ್ಲಿ ನನ್ನ ಪತಿಯೊಬ್ಬನನ್ನೇ ಬಿಟ್ಟು ಬಂದುದರಿಂದ ನಿಮ್ಮ ತಲೆಗಳನ್ನೆಲ್ಲಾ ಭೂದೇವಿಗೆ ಅರ್ಪಿಸುವಂತೆ ಮಾಡುವೆನು” ಎಂದ ಬಣವಾಗಿ ಕೇಳಿದಳು ಒಳಗೆ ಹೋಗಲು ಎಷ್ಟು ಪ್ರಯತ್ನಿಸಿದರೂ ಯಶವಂತಸಿಂಹನಿಗೆ ದಾರಿಯೇ ತೋರಲಿಲ್ಲ ಕಡೆಗೆ ಚಂದ್ರಾವತಿಯನ್ನು ಬಹಳ ಬೆದರಿಸಿದನು. ಚಂದ್ರಾವತಿಯು ಅದಕ್ಕೆ ಸ್ವಲ್ಪವೂ ಹೆದರದೆ—“ಶತ್ರುಗಳಿಗೆ ಸೋತು ಓಡಿಬಂದವರಿಗೆ ಸ್ತ್ರೀಯರನ್ನು ಹೆದರಿಸುವುದಲ್ಲದೆ ಮತ್ತಾವ ಪೌರುಷವಿರುವುದು! ಶತ್ರುಗಳನ್ನು ನೋಡಿ ಬೆದರಿಬಂದವರಿಗೆ ಹೆಂಗಸರು ತಾನೆ ಏಕೆ ಭಯಪಡುವರು?” ಎಂದು ಪ್ರತ್ಯುತ್ತರವನ್ನಿತ್ತಳು.

ಮುಂದೆ ಏನುಮಾಡುವುದಕ್ಕೂ ತೋಚದೆ ಯಶವಂತಸಿಂಹನು ಭಟರೊಡಗೊಂಡು ಸಮೀಪದಲ್ಲಿದ್ದ ಒಂದು ದೇವಾಲಯವನ್ನು ಸೇರಿ ಅಲ್ಲಿ ನಿಂತನು. ಯುದ್ಧದಲ್ಲಿ ಹಲವು ಘಾಯಗಳು ತಗಲಿದ್ದುದರಿಂದಲೂ, ಪತ್ನಿಯಿಂದಾದ ಅಪಮಾನದಿಂದಲೂ ಆ ದಿನ ರಾತ್ರಿ ಆತನಿಗೆ ಜ್ವರವು ಪ್ರಾಪ್ತವಾಗಿ ೧೫ ದಿನಗಳ ವರೆಗೂ ಬಿಡದೆ ಕಾಡಿತು ಕಡೆಗೆ ಈ ಸಮಾಚಾರವು ಅರಮನೆಯ ದಾಸೀಜನರಿಗೆ ತಿಳಿಯಲು ಅವರು ಮಹಾರಾಣಿಗೆ ಈ ವಿಷಯವನ್ನು ತಿಳಿಯಪಡಿಸಿದರು. ಆಕೆಯು ಆ ಮಾತನ್ನು ನಂಬದೆ ನಿಜಾಂಶವನ್ನು ತಿಳಿಯಬೇಕೆಂದು ತಾನು ದಾಸಿಯಂತೆ ವೇಷವನ್ನು ಧರಿಸಿ ದೇವಾಲಯವನ್ನು

ಪ್ರವೇಶಿಸಿದಳು ಅಲ್ಲಿ ಯಶವಂತಸಿಂಹನು ಜ್ವರದ ತಾಪದಿಂದ ನಿದ್ರಾಹಾರಗಳಿಲ್ಲದೆ ಕೃಶನಾಗಿ ಪ್ರಾಣಮಾತ್ರಾವಶಿಷ್ಟನಾಗಿದ್ದನು ತನ್ನ ಪತಿಯನ್ನು ನೋಡಿದ ಕೂಡಲೇ ಚಂದ್ರಾವತಿಯು ತಾನು ಮಾಡಿದ ಸಾಹಸಕ್ಕೆ ಅತ್ಯಂತ ಪಶ್ಚಾತ್ತಾಪಪಟ್ಟು, ಆತನ ಪಾದಗಳ ಮೇಲೆ ಬಿದ್ದು ಅಪರಾಧವನ್ನು ಕ್ಷಮಿಸಬೇಕೆಂದು ಪ್ರಾರ್ಥಿಸುತ್ತ ರೋದಿಸ ತೊಡಗಿದಳು ಯಶವಂತಸಿಂಹನು ಪತ್ನಿಯಮೇಲೆ ಅತ್ಯಂತ ಕ್ರೋಧವನ್ನು ತಾಳಿದ್ದರೂ ಕಡೆಗೆ ಆಕೆಯನ್ನು ಕ್ಷಮಿಸಿ ಸಮಾಧಾನಪಡಿಸಿದನು ಸಾಧ್ವೀಮಣಿಯಾದ ಚಂದ್ರಾವತಿಯು ಕೆಲವು ದಿನಗಳವರೆಗೂ ಅಲ್ಲಿಯೇ ಪತಿಸೇವೆ ಮಾಡುತ್ತಿದ್ದು ಪತಿಗೆ ಜ್ವರವು ಶಮನವಾದ ಬಳಿಕ ಆತನನ್ನೂ ಜತೆಗೊಂಡು ಪಟ್ಟಣದೊಳಕ್ಕೆ ಬಂದಳು.

ಹೀಗೆ ಈ ಸಾಧ್ವೀಮಣಿಯು ಮೊದಲು ತೋರಿಸಿದ ಶೂರತ್ವದಿಂದಲೂ ಅನಂತರ ತೋರಿಸಿದ ಪಾತಿವ್ರತ್ಯದಿಂದಲೂ ಈಕೆಯ ಕೀರ್ತಿಯು ರಾಜಪುತ್ರಸ್ಥಾನದಲ್ಲೆಲ್ಲ ವ್ಯಾಪಿಸಿ ಎಲ್ಲರೂ ಆಕೆಯನ್ನು ದೇವತೆಯನ್ನಾಗಿ ಭಾವಿಸುವಂತೆ ಮಾಡಿತು. ಔರಂಗಜೇಬನು ಮಾಡಿದ ಕುಟಿಲನಟನೆಗಳಿಂದ ಯಶವಂತಸಿಂಹನಿಗೆ ಉಂಟಾದ ಸಂಕಟಗಳಲ್ಲಿ ಚಂದ್ರಾವತೀದೇವಿಯು ತನ್ನ ಪತಿಭಕ್ತಿಯನ್ನೆಲ್ಲ ಪ್ರಕಾಶಪಡಿಸಿದಳು ಕಾಬೂಲ್ ದೇಶಕ್ಕೆ ಹೋಗುವಾಗ ಕುಮಾರನಾದ ಪೃಥಿವೀಸಿಂಗನಿಗೆ ಪಟ್ಟವನ್ನು ಕಟ್ಟಿ—"ನೀನು ನಿನ್ನ ಕುಮಾರನೊಡನೆ ಇರು" ಎಂದು ಯಶವಂತಸಿಂಹನು ಎಷ್ಟು ಹೇಳಿದರೂ ಗರ್ಭವತಿಯಾಗಿದ್ದ ಚಂದ್ರಾವತಿಯು ಅದಕ್ಕೆ ಸಮ್ಮತಿಸದೆ, ಪುತ್ರವಾತ್ಸಲ್ಯವನ್ನು ಕೂಡ ಬಿಟ್ಟು, ಸೀತಾದೇವಿಯಂತೆ ಭರ್ತಾರನೊಡನೆ ಹೊರಟಳು ಅಲ್ಲಿಗೆ ಹೋದ ಮೇಲೆ, ಪುತ್ರನ ಮರಣವೂ, ಪತಿವಿಯೋಗವೂ ಸಂಭವಿಸಿದುದರಿಂದ ಆ ಶೂರವನಿತೆಯು ತನ್ನ ಶೌರ್ಯಧೈರ್ಯಾದಿ ಪೌರುಷ ಲಕ್ಷಣಗಳೆಲ್ಲವನ್ನೂ ತನ್ನ ಪತಿಯು ಹಿಂದೆಯೇ ಕಳುಹಿ, ತಾನು ಓರ್ವ ಸಾಮಾನ್ಯ ಸ್ತ್ರೀಯಂತೆ ಅಬಲೆಯಾದಳು

ಪತಿಯೊಡನೆ ಸಹಗಮನ ಮಾಡಲೆಳ್ಸಿದಳಾದರೂ ದುರ್ಗಾ

ದಾಸನೇ ಮೊದಲಾದ ಸರದಾರರ ಪ್ರಾರ್ಥನೆಯನ್ನು ಮನ್ನಿಸಿ ತನ್ನ ಸಾಹಸವನ್ನು ನಿಲ್ಲಿಸಿದಳು. ಶತ್ರುಗಳ ಭಯವಿಲ್ಲದಂತೆ ದುರ್ಗಾದಾಸ ಮೊದಲಾದವರು ಆಕೆಯನ್ನು ಕಾಪಾಡುತ್ತಿದ್ದರು. ಕಾಲ ದೇಶಜ್ಞಳಾದ ಇಂದಿರೆಯು ಪ್ರಸಿದ್ಧರಾದ ಪೂರ್ವಜರ ಕಥೆಗಳನ್ನು ಹೇಳುತ್ತ ಚಂದ್ರಾವತಿಗೆ ಸಮಾಧಾನವನ್ನುಂಟು ಮಾಡುತ್ತಿದ್ದಳು. ಈಕೆ ತನ್ನ ಅಣ್ಣನಾದ ದುರ್ಗಾದಾಸನಂತೆಯೇ ಚತುರೋಪಾಯಜ್ಞಳಾಗಿ, ಚಂದ್ರಾವತಿಗೆ ಪ್ರಾಣಸಖಿಯಾಗಿ ಆಕೆಯ ಸಂಪೂರ್ಣಾನುಗ್ರಹಕ್ಕೆ ಪಾತ್ರಳಾಗಿದ್ದಳು. ಚಂದ್ರಾವತಿಯು ತನ್ನ ದುಸ್ಥಿತಿಯನ್ನು ಸ್ಮರಿಸಿಸ್ಮರಿಸಿ, ಇನ್ನೂ ಮುಂದೆ, ಎಷ್ಟೆಷ್ಟು ಕಷ್ಟಗಳು ಸಂಭವಿಸುವವೋ- ಎಂದು ತಲ್ಲಣಿಸುತ್ತಿದ್ದಳು.

ಹೀಗೆಯೇ ಎರಡು ದಿನಗಳು ಕಳೆದುಹೋದವು. ಮೂರನೆಯ ದಿನ ಪ್ರಾತಃಕಾಲ, ಶುಭಮುಹೂರ್ತದಲ್ಲಿ ಚಂದ್ರಾವತೀ ಮಹಾರಾಣಿಯು ಪುತ್ರನನ್ನು ಪಡೆದಳು. ಪುತ್ರೋತ್ಸವವಾದ ಶುಭವರ್ತಮಾನವನ್ನು ಕೇಳಿ, ಇಂದಿರಾ ಚಂದ್ರಾವತಿಯರೂ, ದಾಸದಾಸೀಜನಗಳೂ ಆನಂದಪರವಶರಾಗಿ ತಮ್ಮ ದುಃಖವನ್ನು ಮರೆತರು. ಆದರೆ ಈ ಸಂತೋಷವು ಬಹುಕಾಲ ನಿಲ್ಲಲಿಲ್ಲ. ಯಶವಂತಸಿಂಹನ ಮರಣವನ್ನೂ, ಚಂದ್ರಾವತಿಯ ಕುಮಾರನಾದ ಅಜಿತಸಿಂಹನ ಜನನವನ್ನೂ, ಔರಂಗಜೇಬನು ತಿಳಿದಿದ್ದೇ ಆದರೆ ತಮಗೆ ಎಂತಹ ಮೋಸವು ಪ್ರಾಪ್ತವಾಗುವದೋ- ಎಂದು ದುರ್ಗಾದಾಸನು ಸದಾ ವಿಚಾರಪರನಾಗಿದ್ದನು. ಆದರೆ ಧೈರ್ಯಶಾಲಿಗಳಾದ ದುರ್ಗಾದಾಸ, ಶಿವಸಿಂಹರು ಎಂತಹ ಕಷ್ಟಗಳನ್ನಾದರೂ ಸಹಿಸಿಕೊಂಡು, ಜೋಧಪುರ ವಂಶವನ್ನು ಕಾಪಾಡುವೆವೆಂದು ಕಂಕಣಬದ್ಧರಾಗಿದ್ದುದರಿಂದ ಔರಂಗಜೇಬನಿಗೆ ಭಯಪಡುತ್ತಿರಲಿಲ್ಲ. ಆಕಾಲದ ರಾಜಪುತ್ರವೀರರಲ್ಲಿ ಇವರಿಬ್ಬರೂ ಹೆಸರುಗೊಂಡವರಾಗಿದ್ದರು. ದೇಶಾಭಿಮಾನವನ್ನೂ, ರಾಜಭಕ್ತಿ, ರಾಜಕಾರ್ಯನಿರ್ವಹಣಚಾತುರ್ಯವನ್ನೂ ಇತರರು ಇವರಿಂದ ಕಲಿಯಬೇಕೆನ್ನುವಂತಿದ್ದುವು. ದುರ್ಗಾದಾಸನ ತಂಗಿಯಾದ ಇಂದಿರೆಯು

ಕೂಡ ಸದ್ಗುಣಗಳಲ್ಲಿ ತನ್ನ ಅಣ್ಣನಿಗೆ ಸರಿಯೆನ್ನಿಸುತ್ತಿದ್ದಳು. ಆಕೆಯಲ್ಲಿದ್ದ ಶೌರ್ಯ, ಧೈರ್ಯ, ಗಾಂಭೀರ್ಯಾದಿ ಗುಣಗಳನ್ನು ಎಷ್ಟು ವರ್ಣಿಸಿದರೂ ಸಾಲದು. ಜೋಧಪುರ ವಂಶಾಭಿವೃದ್ಧಿಯಲ್ಲಿ ಕಂಕಣಬದ್ಧರಾಗಿರುವ ಈ ಮೂವರ ಸದ್ವರ್ತನಗಳನ್ನೂ ವಾಚಕರು ಮುಂದೆ ಮುಂದೆ ತಿಳಿಯಬಹುದು. ಹಲವು ದಿನಗಳು ಕಳೆದಬಳಿಕ ಕಾಬೂಲ್ ದೇಶದಿಂದ ಚಂದ್ರಾವತಿಯನ್ನೂ, ಅಜಿತಸಿಂಹನನ್ನೂ ಹೇಗಾದರೂ ಮೂತಿ ತಪ್ಪಿಸಿ ಜೋಧಪುರವನ್ನು ಸೌಖ್ಯವಾಗಿ ಸೇರಿಸಬೇಕೆಂದು ಮೂವರೂ ಆಲೋಚಿಸುತ್ತಲೇ ಇದ್ದರು. ಹೀಗೆ ಇವರ ಪ್ರಯತ್ನವು ಕೊನೆಸಾಗುವದಕ್ಕೆ ಮೊದಲೇ ಒಂದು ದಿನ ಮಧ್ಯಾಹ್ನ ಒಬ್ಬ ಮಹಮ್ಮದೀಯನು ದುರ್ಗಾದಾಸನ ಬಿಡಾರವನ್ನು ಸಮೀಪಿಸಿ, ದ್ವಾರಪಾಲಕನನ್ನು ಕೇಳಿದ ಕೂಡಲೆ ಒಳಗಿದ್ದ ದುರ್ಗಾದಾಸನು ಹೊರಗೆ ಬಂದು ನಿಲ್ಲಲು ಮಹಮ್ಮದೀಯನು ಆತನ ಕೈಗೆ ಒಂದು ಕಾಗದವನ್ನು ಕೊಟ್ಟನು. ತತ್‌ಕ್ಷಣವೇ ದುರ್ಗಾದಾಸನು ಆತ್ಯಾತುರದಿಂದ ಕಾಗದವನ್ನು ಬಿಚ್ಚಿ ಹೀಗೆ ಓದಲಾರಂಭಿಸಿದನು.

> “ಯಶವಂತಸಿಂಹಮಹಾರಾಜರ ಸೇನಾಧಿಪತಿಯಾದ ದುರ್ಗಾದಾಸನಿಗೆ— ದಿಲ್ಲೀನಗರಾಧಿಪನಾದ ಔರಂಗಜೇಬ ಪಾದಷಹನು ಬರೆದ ಸಂಗತಿಯೇನೆಂದರೆ—

ಪುತ್ರಶೋಕದಿಂದ ಯಶವಂತಸಿಂಹನು ಪರಲೋಕಗತನಾದನೆಂದು ಕೇಳಿದಂದಿನಿಂದಲೂ ನನ್ನ ಮನಸ್ಸು ದುಃಖಸಾಗರದಲ್ಲಿ ಮುಳುಗಿರುವುದು. ದೂರ ದೇಶವಾದ ಕಾಬೂಲಿನಲ್ಲಿರುವುದರಿಂದ ಚಂದ್ರಾವತಿಗೆ ಯಾವುದಾದರೂ ಕಷ್ಟವು ಸಂಭವಿಸುವದೋ--ಏನೋ ಎಂಬ ಸಂದೇಹದಿಂದ ಆಕೆಗೆ ಸಹಾಯವಾಗಿ ನನ್ನ ಸೇನಾನಾಯಕನಾದ ನಯನಪಾಲನನ್ನು ಸೇನಾಸಮೇತವಾಗಿ ಕಳುಹಿರುವೆನು. ಆದುದರಿಂದ ನೀನು ಚಂದ್ರಾವತಿಯನ್ನು ಕರೆದುಕೊಂಡು ನಯನಪಾಲನ ಸಹಾಯವನ್ನು ಪಡೆದು ದಿಲ್ಲೀ ನಗರಕ್ಕೆ ಬರಬೇಕು.

“ಔರಂಗಜೇಬ”

ಕಾಗದವನ್ನು ಓದಿದ ಕೂಡಲೆ ದುರ್ಗಾದಾಸನು ಅತ್ಯಂತ ಭಯಕ್ರಾಂತನಾಗಿ ಶಿವಸಿಂಗನನ್ನು ಕರೆದು ಆತನಿಗದನ್ನು ತೋರಿಸಿ, ಆತನೊಡನೆ ಬಿಡಾರದಿಂದ ಸ್ವಲ್ಪ ದೂರ ಹೋಗಿ ನಿಂತನು ಆಗ ಆತನಿಗೆ ದೂರದಲ್ಲಿ ಕೆಲವು ಸೈನ್ಯಗಳು ಬರುತ್ತಿದ್ದಂತೆ ಗೋಚರ ವಾಯಿತು ಚಿಂತಾಕ್ರಾಂತರಾಗಿದ್ದ ಅವರಿಬ್ಬರೂ ಆಶ್ಚರ್ಯಾನ್ವಿತ ರಾಗಿ ಸ್ವಲ್ಪಹೊತ್ತು ಆಕಡೆಯೇ ತಮ್ಮ ದೃಷ್ಟಿಯನ್ನು ಪ್ರಸರಿಸಿ ನಿಂತಿ ರಲು ಸ್ವಲ್ಪಹೊತ್ತಿಗೆ ಭೀಕರಾಕಾರನಾದ ಅಶ್ವಾರೋಹಿಯೊಬ್ಬನು ಬಂದು ದುರ್ಗಾದಾಸನ ಮುಂದೆ ನಿಂತನು.

ದುರ್ಗಾದಾಸ—ಓಹೋ! ನಯನಪಾಲಾ! ಎಲ್ಲಿಗೆ ಹೋಗು ತ್ತಿರುವೆ?

ನಯನ—ಅಯ್ಯೋ! ನಿನ್ನ ಸಹಾಯಾರ್ಥವಾಗಿಯೇ ಬಂದಿರು ವೆನು ಪುತ್ರಶೋಕದಿಂದ ಯಶವಂತಸಿಂಹನು ಪರಲೋಕಗತನಾದ ನೆಂಬ ವಾರ್ತೆಯನ್ನು ಕೇಳಿ ಆಲಂಘೀರ್ ಪಾದಷಹನು ಚಂದ್ರಾವತಿಗೆ ಯಾವ ತೊಂದರೆಯನ್ನೂ ಬರಗೊಡಿಸಕೂಡದೆಂದು ಪ್ರತಿಜ್ಞೆಮಾಡಿ ಆಕೆಯನ್ನು ಕರೆತರಲು ನನ್ನನ್ನು ಕಳುಹಿಸಿರುವನು ಯಶವಂತಸಿಂಹ ನಿಗೆ ಶತ್ರುಗಳಾದ ದಾಯಾದಿಗಳು ಅನೇಕರಿರುವದರಿಂದ ತನ್ನ ಸೈನ್ಯ ವನ್ನು ನನ್ನೊಡನೆ ಕಳುಹಿರುವನು ಎಲ್ಲಿ? ಚಂದ್ರಾವತಿ ಎಲ್ಲಿರುವಳು? ಆಕೆಯನ್ನು ಜಾಗ್ರತೆಯಾಗಿ ದಿಲ್ಲೀ ನಗರಕ್ಕೆ ಪ್ರಯಾಣಗೊಳಿಸು

ನಯನಪಾಲನ ಮಾತುಗಳನ್ನು ಕೇಳಿ ದುರ್ಗಾದಾಸನ ಹೃದಯ ದಲ್ಲಿ ಕಂಪನವುಂಟಾಯಿತು. ದೈವವು ಯಾವ ಕ್ಷಣದಲ್ಲಿ ಎಂತಹ ಅಪ ತ್ತನ್ನುಂಟು ಮಾಡುವದೋ ತಿಳಿಯದಲ್ಲವೆ? ಕರ್ತವ್ಯಪರಾಯಣನಾದ ದುರ್ಗಾದಾಸನು, ಹೇಗಾದರೂ ಮಾಡಿ ಚಂದ್ರಾವತಿಯನ್ನು ಜೋಧ ಪುರಕ್ಕೆ ಸೇರಿಸಬೇಕೆಂದು ಪ್ರಯತ್ನಿಸುತ್ತಾ ತನ್ನ ಅಭಿಪ್ರಾಯವನ್ನು ಹೊರಪಡಿಸದೆ, ನಯನಪಾಲನೊಡನೆ ಅತ್ಯಂತ ಸಂತೋಷದಿಂದಿರು ವಂತೆ ನಟಿಸುತ್ತ ನಯನಪಾಲನನ್ನು ನೋಡಿ, ಹೀಗೆ ಹೇಳಿದನು —

"ಅಯ್ಯಾ, ಇದಕ್ಕಿಂತಲೂ ನಮಗೇನು ಬೇಕು! ಅಲಂಘೀರ್ ಪಾದಷಹರೇ ನಮ್ಮ ಚಂದ್ರಾವತೀದೇವಿಯ ಮೇಲೆ ಪೂರ್ಣಾನುಗ್ರಹವನ್ನಿಟ್ಟಿರಲು ಆಕೆಗೆ ಎಂತಹ ಆಪತ್ತಾದರೂ ಒದಗುವುದೇ? ಆದರೆ ನಾನು ಒಂದು ವಿಷಯಕ್ಕೆ ಮಾತ್ರ ಹಿಂತೆಗೆಯುವೆನು. ಆಕೆಯು ಮೊನ್ನೆಯ ದಿನವೇ ಸ್ನಾನಮಾಡಿರುವಳು. ಆಕೆಯ ಶರೀರವು ಬಹಳ ಕೃಶವಾಗಿರುವುದು. ಇಷ್ಟೇ ಅಲ್ಲದೆ ಯಶವಂತಸಿಂಹನ ಉತ್ತರಕ್ರಿಯೆಗಳನ್ನು ಮಾಡಬೇಕು. ಈ ಹನ್ನೊಂದು ದಿನಗಳು ಮುಗಿಯದೆ ಇಲ್ಲಿಂದ ಹೊರಡಕೂಡದು. ನೀವು ಕೂಡ ರಾಜಪುತ್ರರಲ್ಲವೆ? ನಮ್ಮ ಕುಲಾಚಾರಗಳು ನಿಮಗೆ ತಿಳಿಯದೆ? ಆದುದರಿಂದ ಇದಕ್ಕೆ ನೀವು ಸಮ್ಮತಿಸಿ ನನ್ನ ಕೋರಿಕೆಯನ್ನು ನೆರವೇರಿಸಬೇಕು. ಅನಂತರ ನಿಮ್ಮ ಅಪ್ಪಣೆಯಂತೆ ನಡೆಯಲು ಸಿದ್ಧನಾಗಿರುವೆನು" ಎಂದು ಹೇಳಲು ನಯನಪಾಲನು ಆನಂದಭರಿತನಾಗಿ ದುರ್ಗಾದಾಸನು ತನ್ನ ಮೋಸಕ್ಕೆ ಸಿಕ್ಕಿಬಿದ್ದಿರುವನೆಂದು ನಿಶ್ಚಯಿಸಿ ಹೇಳಿದನು--

"ಅಯ್ಯಾ! ಆಕೆಯ ಇಷ್ಟಾನುಸಾರವಾಗಿ ಯಾವ ಕೊರತೆಯೂ ಇಲ್ಲದಂತೆ ಕರೆದುಕೊಂಡು ಬರಬೇಕೆಂದು ಪಾದಷಹರ ಅಪ್ಪಣೆಯಾಗಿದೆ. ಇನ್ನು ನಾಲ್ಕು ದಿನಗಳು ಇಲ್ಲಿಯೇ ಇದ್ದು, ಆಕೆಯನ್ನು ಕರೆದುಕೊಂಡು ಹೋಗೋಣ"

ನಯನಪಾಲನ ಮಾತಿಗೆ ದುರ್ಗಾದಾಸನು ಸಮ್ಮತಿಸಿದಂತೆ ನಟಿಸಿದನು. ನಯನಪಾಲನು ದುರ್ಗಾದಾಸನ ಗುಡಾರದ ಬಳಿಯಲ್ಲಿಯೇ ತನ್ನ ಗುಡಾರವನ್ನು ಹಾಕಿಸಿ, ಚಂದ್ರಾವತಿಯ ಗುಡಾರದ ಸುತ್ತಲೂ ತನ್ನ ಸೈನಿಕರನ್ನು ಕಾವಲಿರಿಸಿ, ಜಾಗರೂಕರಾಗಿರುವಂತೆ ಆಜ್ಞಾಪಿಸಿದನು. ದುರ್ಗಾದಾಸನೂ, ತನ್ನ ಮಾಯೆಯಲ್ಲಿ ನಯನಪಾಲನು ಸಿಕ್ಕಿಬಿದ್ದಿರುವನೆಂದು ಸಂತೋಷಪಡುತ್ತ ಚಂದ್ರಾವತಿಯನ್ನೂ, ಅಜಿತಸಿಂಹನನ್ನೂ ಹೇಗಾದರೂ ಮಾಡಿ, ತಪ್ಪಿಸಬೇಕೆಂದು ಉಪಾಯಗಳನ್ನು ಯೋಜಿಸುತ್ತಿದ್ದನು. ಆದರೇನು? ಪ್ರಬಲವಾದ ಶತ್ರುಸೈನ್ಯವು ತನ್ನನ್ನು ಸುತ್ತಿಮುತ್ತಿದ್ದುದರಿಂದ ಆತನ ಉಪಾಯಗಳೆಲ್ಲವೂ ನಿರರ್ಥ

ಕಗಳಾದುವು ಜೋಧಪುರ ವಂಶಕ್ಕೆ ಎಂತಹ ಆಪತ್ತು ಬಂದರೂ
ಅದನ್ನು ತೊಲಗಿಸುವ ಭಾರವು ದುರ್ಗಾದಾಸನ ಮೇಲೆ ಇದ್ದುದ
ರಿಂದ ಆತನ ಮನಸ್ಸು ಬಗೆಬಗೆಯಾಗಿ ಚಿಂತಿಸುತ್ತಿದ್ದಿತು ನಯನ
ಪಾಲನು ತನ್ನ ಸೈನ್ಯವನ್ನೆಲ್ಲ ಗುಡಾರದ ಸುತ್ತಲೂ ಕಾವಲಿರಿಸಿ,
ದುರ್ಗಾದಾಸ, ಇಂದಿರೆ ಇವರು ಹೊರತು ಮತ್ತಾರೂ ಹೊರಕ್ಕೆ ಬರ
ಲಾಗದೆಂದು ಕಟ್ಟುಮಾಡಿದನು ದುರ್ಗಾದಾಸನು ಆದಿನ ರಾತ್ರಿ ತನ್ನ
ತಂಗಿಯಾದ ಇಂದಿರೆಯೊಡನೆ ಉಪಾಯಗಳನ್ನು ಕುರಿತು ಆಲೋಚಿ
ಸತೊಡಗಿದನು

ದುರ್ಗಾ — ಇಂದಿರಾ! ಮಾಡಬೇಕಾದ ಕಾರ್ಯಗಳು ಬಹುವಾ
ಗಿದ್ದರೂ ಉಪಾಯವೇನನ್ನೂ ತಿಳುಹದೆ ಸುಮ್ಮನಿರುವೆಯಲ್ಲ!

ಇಂದಿರಾ -- ಅಣ್ಣಯ್ಯ! ದೈವಘಟನೆ ಹೇಗಿರುವದೋ ಹೇ
ಳುವವರಾರು? ಕುಮಾರನೊಡನೆ ಚಂದ್ರಾವತಿಯನ್ನು ಶತ್ರುಗಳ
ಮುತ್ತಿಗೆಯಿಂದ ತಪ್ಪಿಸುವದು ತಿಳಿಯದೆ ಚಿಂತಿಸಬೇಕಾಗಿದೆ. ನಾವು
ಯಶವಂತಮಹಾರಾಜಾಜಿಯವರ ಋಣವನ್ನು ಹೇಗೆ ತೀರಿಸಬೇಕು!

ದುರ್ಗಾ — ನಾನೂ ಇದಕ್ಕಾಗಿಯೇ ಯೋಚಿಸುತ್ತಿರುವೆನು
ನೀನು ಇಂತಹ ಸಂದಿಗ್ಧ ಸಮಯಗಳಲ್ಲಿ ತಕ್ಕ ಉಪಾಯಗಳನ್ನು
ತಿಳುಹಬಲ್ಲೆಯೆಂದು ನಿನ್ನಲ್ಲಿ ಆಲೋಚಿಸಲು ಬಂದಿರುವೆನು ಈ
ನಯನಪಾಲನು ನಮ್ಮನ್ನು ಮೋಸಪಡಿಸುವುದಕ್ಕಾಗಿಯೇ ಬಂದಿರು
ವನು. ಅವನನ್ನು ಹೇಗಾದರೂ ಮಾಡಿ ಮೋಸಪಡಿಸಬೇಕೆಂಬುದು
ನನ್ನ ಅಭಿಲಾಷೆ

ಇಂದಿರಾ — ಅಣ್ಣಯ್ಯ! ನಯನಪಾಲನ ಸೈನ್ಯವನ್ನು ಜಯಿಸ
ಬೇಕೆಂದರೆ ನಮಗಿರುವ ಸೈನ್ಯವು ಅತ್ಯಲ್ಪವು ಅದರಲ್ಲಿಯೂ ಅರ್ಧ
ವೆಲ್ಲ ತುರುಷ್ಕರೆ—

ದುರ್ಗಾ — ಇಂದಿರಾ! ಈಗ ಅದು ನಮಗೆ ಅನುಕೂಲವಾದ
ಕಾರ್ಯವಲ್ಲ ಹಾಗೆ ಮಾಡಿದರೆ ನಮಗೆ ಖಂಡಿತವಾಗಿಯೂ ಮೋ
ಸವು ಸಂಭವಿಸುವುದು. ನಯನಪಾಲನೊಡನೆ ಸ್ನೇಹದಿಂದಲೇ ಇದ್ದು

ಒಳಸಂಚಿನಿಂದ ಕಾರ್ಯವನ್ನು ಸಾಧಿಸಬೇಕು ಅವನು ಸಾಮಾನ್ಯನಲ್ಲ ಅವನಿಗೆ ತಿಳಿದಿರುವಷ್ಟು ಮಾಯೆಗಳು ಮತ್ತಾರಿಗೂ ತಿಳಿಯವು ಇಂತಹವನನ್ನು ಪ್ರತಿಭಟಿಸಿ ಗೆಲ್ಲುವದು ಪ್ರಯಾಸವು ಉಪಾಯದಿಂದಲೇ ಗೆಲ್ಲಬೇಕು ಬುದ್ಧಿಶಾಲಿನಿಯಾದ ನೀನು ತಕ್ಕ ಉಪಾಯದಿಂದ ಜೋಧಪುರ ವಂಶವನ್ನು ರಕ್ಷಿಸು ನನ್ನ ಬುದ್ಧಿ ಚಾತುರ್ಯ, ಬಲಗಳೆಲ್ಲವೂ ಯಶವಂತನೊಡನೆಯೇ ಹೋಗಿರುವವು ಆದರೂ ನನಗೆ ಒಂದು ಉಪಾಯವು ತೋರುತ್ತಿರುವದು. ಇದು ನಿನಗೆ ಸಮ್ಮತವಾಗುವದೇ-ತಿಳಿದು ಹೇಳು--ಎಂದು ಇಂದಿರೆಯ ಕಿವಿಯಲ್ಲಿ ಏನನ್ನೋ ಹೇಳಿ ಆ ಬಳಿಕ—"ಇಂದಿರಾ! ಈ ಉಪಾಯಕ್ಕೆ ನೀನು ಅಂಗೀಕರಿಸದಿದ್ದರೆ ಕಾರ್ಯ ಸಾಧನೆಯಾಗುವದಿಲ್ಲ." ಎಂದು ಹೇಳಿದನು

ಇಂದಿರಾ —ಅಣ್ಣಾ! ನಾನು ನಿನಗೆ ಪ್ರತಿಯಾಡತಕ್ಕವಳಲ್ಲ ಈ ವಿಚಾರದಲ್ಲಿ ನಿನಗೆ ಸಂದೇಹವೇ ಬೇಡ ಈವರೆಗೆ ನಮ್ಮನ್ನು ರಕ್ಷಿಸಿದ ಆ ಯಶವಂತಸಿಂಹನಿಗೆ ನಮ್ಮ ರಾಜಭಕ್ತಿಯನ್ನು ತೋರಿಸುವುದು ನಮ್ಮ ಕರ್ತವ್ಯವು ಶರೀರವು ಸ್ಥಿರವಲ್ಲ ರಾಜವಂಶ ಸಂರಕ್ಷಣೆಗಾಗಿ ನನ್ನ ಪ್ರಾಣವನ್ನೊಪ್ಪಿಸಬೇಕಾಗಿ ಬಂದರೂ ಹಿಂದೆಗೆಯದೆ ನಾನದನ್ನು ನಿರ್ವಹಿಸುವೆನು ಆಪತ್ತುಗಳು ಸತ್ಪುರುಷರಿಗೆ ಶಾಶ್ವತವಾಗಿರುವವಲ್ಲ ನಿನ್ನಿಂದ ನಿಯೋಜಿಸಲ್ಪಟ್ಟ ನಾನು ಈ ಕಾರ್ಯವನ್ನು ಇನ್ನು ನಾಲ್ಕಯ್ದು ದಿನಗಳಲ್ಲಿಯೇ ಸಾಧಿಸುವೆನು ನೀನಿನ್ನು ನಿರಾತಂಕದಿಂದ ಹೋಗಿ ನಿದ್ರಿಸಬಹುದು" ಎಂದು ಹೇಳಿ ಇಂದಿರೆಯು ಅಣ್ಣನನ್ನು ಮಲಗುವದಕ್ಕೆ ಕಳುಹಿದಳು

ಇಂದಿರೆಯು ಸಾಹಸದಲ್ಲಿಯೂ ಪೌರುಷದಲ್ಲಿಯೂ ಚಂದ್ರಾವತಿಗೆ ಸಮಾನಳಾಗಿದ್ದಳು ಯುದ್ಧದಲ್ಲಿ ಸೋತು ಓಡಿಬಂದ ಯಶವಂತಸಿಂಹನನ್ನು ಚಂದ್ರಾವತಿಯು ತಿರಸ್ಕರಿಸಿ ಪಟ್ಟಣಕ್ಕೆ ಬರದಂತೆ ಮಾಡಿದಾಗ ಇಂದಿರೆಯೂ ಆಕೆಯ ಹತ್ತಿರದಲ್ಲಿದ್ದಳು ಯುದ್ಧದಲ್ಲಿ ಸೋತು ಓಡಿಬಂದವರಲ್ಲಿ ಇಂದಿರೆಯ ಪ್ರಾಣಪ್ರಿಯನೂ ಇದ್ದನು. ಇವಳು ಕೂಡ ಯುದ್ಧದಲ್ಲಿ ಸೋತುಬಂದ ತನ್ನ ಪ್ರಾಣವಲ್ಲಭ

ಚಂದ್ರಾವತಿಯು ಇಂದಿರೆಯ ಯುಕ್ತಿಯುಕ್ತವಾದ ಹಿತಭೋಧೆಯನ್ನು ತಿರಸ್ಕರಿಸಲಾರದೆ ಸಮ್ಮತಿಸಿದಳು. ಇಂದಿರೆಯು ಚಂದ್ರಾವತಿಯು ಸಮ್ಮತಿಸಿದಳೆಂದೂ ಇನ್ನು ತಮ್ಮ ಕಾರ್ಯವು ಸಿದ್ಧಿಹೊಂದುವದೆಂದೂ ತಿಳಿದು ಸಂತೋಷದಿಂದಿದ್ದಳು. ದುರ್ಗಾದಾಸನು ಕಾರ್ಯಸಾಧನೆಗಾಗಿ ನಯನಪಾಲನೊಡನೆ ಅತಿಯಾದ ಸ್ನೇಹವನ್ನು ಬೆಳಿಸುವಂತೆ ನಟಿಸುತ್ತ ಬಂದನು ಈ ಇಬ್ಬರೂ ದಿನದಿನಕ್ಕೆ ಒಬ್ಬರನ್ನೊಬ್ಬರು ಬಿಟ್ಟಿರದೆ ಸಂಚರಿಸತೊಡಗಿದರು ಚಂದ್ರಾವತಿಯಿದ್ದ ಗುಡಾರಕ್ಕೆ ದುರ್ಗಾದಾಸ-ಇಂದಿರೆ ಇವರಿಬ್ಬರಲ್ಲದೆ ಮತ್ತಾರೂ ಹೋಗಗೊಡದೆಂದು ನಯನಪಾಲನು ಕಟ್ಟುಮಾಡಿದ್ದನು ಇಂದಿರೆಯು ಮಾತ್ರ ಎಷ್ಟು ಬಾರಿ ಅತ್ತಿತ್ತ ತಿರುಗಾಡುತ್ತಿದ್ದರೂ ಆಕೆಯನ್ನು ಅಡ್ಡಿಪಡಿಸುತ್ತಿರಲಿಲ್ಲ ಹೀಗೆ ಗುಡಾರದೊಳಕ್ಕೆ ಹೋಗುವದು, ಹೊರಗೆ ಬರುವದು ಅತ್ತಿತ್ತ ಹೋಗುವದು-ಇದೇ ದಿನವೆಲ್ಲಾ ಇಂದಿರೆಯು ಮಾಡುವ ಕೆಲಸವಾಗಿತ್ತು ಎಷ್ಟೋ ಸಾರಿ ತಿರುಗುತ್ತಿದ್ದರೂ ಅವಗುಂಠನವನ್ನು ಧರಿಸಿಯೇ ತಿರುಗುತ್ತಿದ್ದುದರಿಂದ ಕಾವಲಿದ್ದ ಭಟರಿಗೆ ಇಂದಿರೆಯ ಮುಖವು ಹೇಗಿರುವುದೆಂಬುದನ್ನು ತಿಳಿಯುವದಕ್ಕೂ ಅವಕಾಶವಿಲ್ಲದೆ ಹೋಯಿತು

# ಏಳನೆಯ ಪ್ರಕರಣ

ಚಂದ್ರಾವತಿ ಮತ್ತು ಪರಿವಾರಗಳು ಇಳಿದಿದ್ದ ಗುಡಾರಗಳಿಗೆ ಸಮೀಪದಲ್ಲಿ ಒಂದು ಗೊಲ್ಲರ ಹಳ್ಳಿಯಿದ್ದಿತು ಈ ಹಳ್ಳಿಯಲ್ಲಿ ತೆಂಗಿನಗರಿಗಳಿಂದಲೂ ಹುಲ್ಲಿನಿಂದಲೂ ಕಟ್ಟಲ್ಪಟ್ಟ ನಾಲ್ಕಯ್ದು ಸಾವಿರ ಮನೆಗಳು ಮಾತ್ರ ಇದ್ದುವು ಸುತ್ತಲೂ ಇದ್ದ ದೊಡ್ಡದೊಡ್ಡ ಊರುಗಳಿಗೆಲ್ಲಾ ಈ ಗೊಲ್ಲರೇ ಹಾಲು, ಮೊಸರು ಮೊದಲಾದುವುಗಳನ್ನು ಕೊಡುತ್ತಿದ್ದರು. ಆ ಹಳ್ಳಿಯಲ್ಲಿ ಎತ್ತ ನೋಡಿದರೂ ಹುಲ್ಲಿನ ರೊಪ್ಪಗಳೂ ಪಶುಶಾಲೆಗಳೂ ಕಾಣಬರುತ್ತಿದ್ದವು. ಅಕ್ಬರ್ ಚಕ್ರವರ್ತಿಯು ತನ್ನ ಸೇನಾನಾಯಕನಾದ ಮಾನಸಿಂಗನೊಡನೆ

೪೦,೦೦೦ ಸೇನೆಯನ್ನು ತೆಗೆದುಕೊಂಡು ಕಾಬೂಲಿನ ಮೇಲೆ ಯುದ್ಧಕ್ಕೆ ಹೊರಟಾಗ ಆ ಸೈನಿಕರಲ್ಲಿ ಕೆಲವರು ಹಿಂದುಗಳು ಯುದ್ಧವು ಮುಗಿದಮೇಲೆ ಗೊಲ್ಲರ ಹಳ್ಳಿಯಲ್ಲಿಯೇ ಕುಟುಂಬ ಸಮೇತರಾಗಿ ನಿಂತುಬಿಟ್ಟರು ಇದಕ್ಕೆ ಮೊದಲು ಈ ಹಳ್ಳಿಯಲ್ಲಿ ಕೆಲವರು ಮಹಮ್ಮದೀಯರು ಮಾತ್ರ ವಾಸವಾಗಿದ್ದರು ಈ ಮಹಮ್ಮದೀಯರ ಸಹವಾಸದಿಂದ ಇಲ್ಲಿಗೆ ಬಂದಿದ್ದವರೆಲ್ಲರೂ ಸ್ವಲ್ಪ ದಿವಸಗಳೊಳಗಾಗಿ ಮಹಮ್ಮದೀಯರಾಗಬೇಕಾಯಿತು ಹೀಗೆ ಅವರು ಮಹಮ್ಮದೀಯರಾದರೂ ತಮ್ಮ ಪೂರ್ವದ ಹಿಂದೂಮತವನ್ನು ದೂಷಿಸದೆ, ಯಾವ ಹಿಂದೂ ಅತಿಥಿಯಾಗಲೀ ತಮ್ಮ ಗ್ರಾಮಕ್ಕೆ ಬಂದರೆ ಅಂತಹನನ್ನು ಗೌರವಿಸಿ, ಆದರಿಸಿ ಅವರಿಗೆ ಬೇಕಾದ ಸಾಮುಗ್ರಿಗಳನ್ನು ಕೊಟ್ಟು ಉಪಚರಿಸುತ್ತಿದ್ದರು ಹೀಗೆ ಅವರು ಹೆಸರಿಗೆ ಮಾತ್ರ ಮಹಮ್ಮದೀಯರಾಗಿದ್ದರೂ ಅವರ ಆಚಾರ ನಡೆನುಡಿಗಳೆಲ್ಲ ಹಿಂದುಗಳಂತೆಯೇ ಇದ್ದು ಹಿಂದುಗಳೆಂದರೆ ತಮ್ಮ ಪ್ರಾಣವನ್ನಾದರೂ ಒಪ್ಪಿಸಲು ಸಿದ್ಧರಾಗಿದ್ದರು.

ಪ್ರಾತಃಕಾಲ, ಗೊಲ್ಲರು ತಮ್ಮ ಪಶುಗಳನ್ನು ಕರೆದುಕೊಂಡು ಬಂದು ಸಮೀಪದಲ್ಲಿಯ ಮೈದಾನದಲ್ಲಿ ಹುಲ್ಲು ಮೇಯಿಸುತ್ತ ನಿಂತರು ಪಶುಸಮೂಹದಲ್ಲಿ ಕರು-ತುರುಗಳೂ, ಗೂಳಿಗಳೂ ಇದ್ದವು ಇವರು ಮನೆಯಲ್ಲಿ ಹಾಲು ಕರೆಯುತ್ತಿರಲಿಲ್ಲ ಈ ಮೈದಾನದಲ್ಲಿ ಹಸುಗಳನ್ನು ಕರೆತಂದು ನಿಲ್ಲಿಸಿ ಇಲ್ಲಿಯೇ ಕರೆದು, ಸುತ್ತಲೂ ಇರುವ ಊರುಗಳಿಗೆ ಕಳುಹುತ್ತಿದ್ದರು ಎಂದಿನಂತೆ ಈ ದಿನವೂ ಹಾಲು ಮೊಸರು ಮಾರಲು ಹೊರಟ ಗೊಲ್ಲತಿಯರಲ್ಲಿ ಒಬ್ಬ ಗೊಲ್ಲತಿಯು ಮಾತ್ರ ಚಂದ್ರಾವತಿಯ ಗುಡಾರದ ಕಡೆಗೆ ಬರುತ್ತಿದ್ದಳು. ಹೀಗೆ ಬಂದ ಗೊಲ್ಲತಿ ಗುಡಾರದೊಳಕ್ಕೆ ಹೋಗುತ್ತಿದ್ದರೂ ಕಾವಲಿದ್ದ ಮಹಮ್ಮದೀಯ ಭಟರು ಇವಳು ಚಂದ್ರಾವತಿಯ ಮಗುವಿಗೆ ಹಾಲನ್ನು ಕೊಡುವುದಕ್ಕಾಗಿ ಬಂದಿರಬಹುದೆಂದು ತಿಳಿದು ಆಕೆಯನ್ನು ಯಾರೂ ಅಡ್ಡಿಮಾಡದೆ ಬಿಟ್ಟರು ಅಲ್ಲದೆ ಆ ಗೊಲ್ಲತಿಯ ಸೌಂದ

ಚಂದ್ರಾವತಿಯು ಇಂದಿರೆಯ ಯುಕ್ತಿಯುಕ್ತವಾದ ಹಿತಬೋಧೆಯನ್ನು ತಿರಸ್ಕರಿಸಲಾರದೆ ಸಮ್ಮತಿಸಿದಳು. ಇಂದಿರೆಯು ಚಂದ್ರಾವತಿಯು ಸಮ್ಮತಿಸಿದಳೆಂದೂ ಇನ್ನು ತಮ್ಮ ಕಾರ್ಯವು ಸಿದ್ಧಿಹೊಂದುವದೆಂದೂ ತಿಳಿದು ಸಂತೋಷದಿಂದಿದ್ದಳು. ದುರ್ಗಾದಾಸನು ಕಾರ್ಯಸಾಧನೆಗಾಗಿ ನಯನಪಾಲನೊಡನೆ ಅತಿಯಾದ ಸ್ನೇಹವನ್ನು ಬೆಳಸುವಂತೆ ನಟಿಸುತ್ತ ಬಂದನು ಈ ಇಬ್ಬರೂ ದಿನದಿನಕ್ಕೆ ಒಬ್ಬರನ್ನೊಬ್ಬರು ಬಿಟ್ಟಿರದೆ ಸಂಚರಿಸತೊಡಗಿದರು ಚಂದ್ರಾವತಿಯಿದ್ದ ಗುಡಾರಕ್ಕೆ ದುರ್ಗಾದಾಸ-ಇಂದಿರೆ ಇವರಿಬ್ಬರಲ್ಲದೆ ಮತ್ತಾರೂ ಹೋಗಕೂಡದೆಂದು ನಯನಪಾಲನು ಕಟ್ಟುಮಾಡಿದ್ದನು ಇಂದಿರೆಯು ಮಾತ್ರ ಎಷ್ಟು ಬಾರಿ ಅತ್ತಿತ್ತ ತಿರುಗಾಡುತ್ತಿದ್ದರೂ ಆಕೆಯನ್ನು ಅಡ್ಡಿಪಡಿಸುತ್ತಿರಲಿಲ್ಲ ಹೀಗೆ ಗುಡಾರದೊಳಕ್ಕೆ ಹೋಗುವದು, ಹೊರಗೆ ಬರುವದು ಅತ್ತಿತ್ತ ಹೋಗುವದು-ಇದೇ ದಿನವೆಲ್ಲಾ ಇಂದಿರೆಯು ಮಾಡುವ ಕೆಲಸವಾಗಿತ್ತು. ಎಷ್ಟೋ ಸಾರಿ ತಿರುಗುತ್ತಿದ್ದರೂ ಅವಗುಂಠನವನ್ನು ಧರಿಸಿಯೇ ತಿರುಗುತ್ತಿದ್ದುದರಿಂದ ಕಾವಲಿದ್ದ ಭಟರಿಗೆ ಇಂದಿರೆಯ ಮುಖವು ಹೇಗಿರುವುದೆಂಬುದನ್ನು ತಿಳಿಯುವದಕ್ಕೂ ಅವಕಾಶವಿಲ್ಲದೆ ಹೋಯಿತು

---

## ಏಳನೆಯ ಪ್ರಕರಣ.

ಚಂದ್ರಾವತಿ ಮತ್ತು ಪರಿವಾರಗಳು ಇಳಿದಿದ್ದ ಗುಡಾರಗಳಿಗೆ ಸಮೀಪದಲ್ಲಿ ಒಂದು ಗೊಲ್ಲರ ಹಳ್ಳಿಯಿದ್ದಿತು ಈ ಹಳ್ಳಿಯಲ್ಲಿ ತೆಂಗಿನಗರಿಗಳಿಂದಲೂ ಹುಲ್ಲಿನಿಂದಲೂ ಕಟ್ಟಲ್ಪಟ್ಟ ನಾಲ್ಕಯ್ದು ಸಾವಿರ ಮನೆಗಳು ಮಾತ್ರ ಇದ್ದುವು ಸುತ್ತಲೂ ಇದ್ದ ದೊಡ್ಡದೊಡ್ಡ ಊರುಗಳಿಗೆಲ್ಲಾ ಈ ಗೊಲ್ಲರೇ ಹಾಲು, ಮೊಸರು ಮೊದಲಾದುವುಗಳನ್ನು ಕೊಡುತ್ತಿದ್ದರು. ಆ ಹಳ್ಳಿಯಲ್ಲಿ ಎತ್ತ ನೋಡಿದರೂ ಹುಲ್ಲಿನ ರೊಪ್ಪಗಳೂ ಪಶುಶಾಲೆಗಳೂ ಕಾಣಬರುತ್ತಿದ್ದವು. ಅಕ್ಬರ್ ಚಕ್ರವರ್ತಿಯು ತನ್ನ ಸೇನಾನಾಯಕನಾದ ಮಾನಸಿಂಗನೊಡನೆ

೪೦,೦೦೦ ಸೇನೆಯನ್ನು ತೆಗೆದುಕೊಂಡು ಕಾಬೂಲಿನ ಮೇಲೆ ಯುದ್ಧ ಕ್ಕೆ ಹೊರಟಾಗ ಆ ಸೈನಿಕರಲ್ಲಿ ಕೆಲವರು ಹಿಂದುಗಳು ಯುದ್ಧವು ಮುಗಿದಮೇಲೆ ಗೊಲ್ಲರ ಹಳ್ಳಿಯಲ್ಲಿಯೇ ಕುಟುಂಬ ಸಮೇತರಾಗಿ ನಿಂತುಬಿಟ್ಟರು ಇದಕ್ಕೆ ಮೊದಲು ಈ ಹಳ್ಳಿಯಲ್ಲಿ ಕೆಲವರು ಮಹ ಮ್ಮದೀಯರು ಮಾತ್ರ ವಾಸವಾಗಿದ್ದರು ಈ ಮಹಮ್ಮದೀಯರ ಸಹವಾಸದಿಂದ ಇಲ್ಲಿಗೆ ಬಂದಿದ್ದವರೆಲ್ಲರೂ ಸ್ವಲ್ಪ ದಿವಸಗಳೊಳ ಗಾಗಿ ಮಹಮ್ಮದೀಯರಾಗಬೇಕಾಯಿತು ಹೀಗೆ ಅವರು ಮಹಮ್ಮ ದೀಯರಾದರೂ ತಮ್ಮ ಪೂರ್ವದ ಹಿಂದೂಮತವನ್ನು ದೂಷಿಸದೆ, ಯಾವ ಹಿಂದೂ ಅತಿಥಿಯಾಗಲೀ ತಮ್ಮ ಗ್ರಾಮಕ್ಕೆ ಬಂದರೆ ಅಂತಹ ನನ್ನು ಗೌರವಿಸಿ, ಆದರಿಸಿ ಅವರಿಗೆ ಬೇಕಾದ ಸಾಮಗ್ರಿಗಳನ್ನು ಕೊಟ್ಟು ಉಪಚರಿಸುತ್ತಿದ್ದರು ಹೀಗೆ ಅವರು ಹೆಸರಿಗೆ ಮಾತ್ರ ಮಹಮ್ಮದೀಯರಾಗಿದ್ದರೂ ಅವರ ಆಚಾರ ನಡೆನುಡಿಗಳೆಲ್ಲ ಹಿಂದು ಗಳಂತೆಯೇ ಇದ್ದು ಹಿಂದುಗಳೆಂದರೆ ತಮ್ಮ ಪ್ರಾಣವನ್ನಾದರೂ ಒಪ್ಪಿಸಲು ಸಿದ್ಧರಾಗಿದ್ದರು.

ಪ್ರಾತ ಕಾಲ, ಗೊಲ್ಲರು ತಮ್ಮ ಪಶುಗಳನ್ನು ಕರೆದುಕೊಂಡು ಬಂದು ಸಮೀಪದಲ್ಲಿಯ ಮೈದಾನದಲ್ಲಿ ಹುಲ್ಲು ಮೇಯಿಸುತ್ತ ನಿಂ ತರು ಪಶುಸಮೂಹದಲ್ಲಿ ಕರು-ತುರುಗಳೂ, ಗೂಳಿಗಳೂ ಇದ್ದವು. ಇವರು ಮನೆಯಲ್ಲಿ ಹಾಲು ಕರೆಯುತ್ತಿರಲಿಲ್ಲ ಈ ಮೈದಾನದಲ್ಲಿ ಹಸುಗಳನ್ನು ಕರೆತಂದು ನಿಲ್ಲಿಸಿ ಇಲ್ಲಿಯೇ ಕರೆದು, ಸುತ್ತಲೂ ಇರುವ ಊರುಗಳಿಗೆ ಕಳುಹುತ್ತಿದ್ದರು ಎಂದಿನಂತೆ ಈ ದಿನವೂ ಹಾಲು ಮೊಸರು ಮಾರಲು ಹೊರಟ ಗೊಲ್ಲತಿಯರಲ್ಲಿ ಒಬ್ಬ ಗೊಲ್ಲ ತಿಯು ಮಾತ್ರ ಚಂದ್ರಾವತಿಯ ಗುಡಾರದ ಕಡೆಗೆ ಬರುತ್ತಿದ್ದಳು. ಹೀಗೆ ಬಂದ ಗೊಲ್ಲತಿ ಗುಡಾರದೊಳಕ್ಕೆ ಹೋಗುತ್ತಿದ್ದರೂ ಕಾವ ಲಿದ್ದ ಮಹಮ್ಮದೀಯ ಭಟರು ಇವಳು ಚಂದ್ರಾವತಿಯ ಮಗುವಿಗೆ ಹಾಲನ್ನು ಕೊಡುವುದಕ್ಕಾಗಿ ಬಂದಿರಬಹುದೆಂದು ತಿಳಿದು ಅಕೆಯನ್ನು ಯಾರೂ ಅಡ್ಡಿಮಾಡದೆ ಬಿಟ್ಟರು ಅಲ್ಲದೆ ಆ ಗೊಲ್ಲತಿಯ ಸೌಂದ

ರ್ಯ-ಧೈರ್ಯ-ಶೌರ್ಯ-ಗಾಂಭೀರ್ಯಾದಿಗಳನ್ನು ನೋಡಿ ಬೆರಗಾಗಿ ತಮ್ಮಲ್ಲಿಯೇ ಹೀಗೆ ಮಾತಾಡಿಕೊಂಡರು —

"ಅರೆ, ಭಾಯಿ! ಈಕೆ ದಿನವೂ ಬರುತ್ತಿದ್ದ ಗೊಲ್ಲತಿಯಲ್ಲ. ಆಕೆ ಮುದುಕಿ, ಈಕೆ ಇನ್ನೂ ಚಿಕ್ಕವಳು. ಗೊಲ್ಲತಿಯಾದರೂ ಎಷ್ಟು ಚಲುವೆಯಾಗಿದ್ದಾಳೆ? ಇವಳ ಮುಖದ ಅಂದವೂ-ಈ ನಡಗೆಯು ಬೆಡಗೂ ಎಷ್ಟು ಸೊಗಸಾಗಿವೆ ನೋಡು"

ದ್ವಾರಪಾಲಕರು ಹೀಗೆ ಪರವಶರಾಗಿ ಸ್ತುತಿಸುತ್ತ ಕುಳಿತಿದ್ದಂತೆಯೇ ಗೊಲ್ಲತಿಯು ಗುಡಾರದ ಒಳಹೊಕ್ಕು ಚಂದ್ರಾವತಿಯ ದಾಸಿಯರ ಮುಂದೆ ನಿಂತಳು. ಆ ದಾಸಿಯರು ಇವಳನ್ನು ನೋಡಿ ಕೃತಕ ಕೋಪದಿಂದ ಘರ್ಜಿಸಿ—" ಎಲೆ-ಸೋಮಾರಿ ಹೆಂಗಸೆ? ಎಷ್ಟು ಹೊತ್ತಿಗೆ ಹಾಲನ್ನು ತರುತ್ತೀಯೆ? ಇಷ್ಟು ಹೊತ್ತಾದರೂ ಬಾರದಿದ್ದುದರಿಂದ ಮಗುವು ಅತ್ತು ಅತ್ತು ಮಲಗಿತು ನೋಡು? ನಿನಗೆ ಇಷ್ಟವಿಲ್ಲದಿದ್ದರೆ ಮತ್ತಾರಾದರೂ ಕೊಡುವರು. ಇಷ್ಟಲ್ಲದೆ ಈದಿನ ರಾಣಿಯವರ ಹನ್ನೊಂದನೆಯವಾದುದರಿಂದ ದಿನಕ್ಕಿಂತ ಹೆಚ್ಚಿನ ಹಾಲನ್ನು ತೆಗೆದುಕೊಂಡು ಕಾಲಕ್ಕೆ ಸರಿಯಾಗಿ ಬಾ ಎಂದು ಹೇಳಿ ಹೇಳಿರಲಿಲ್ಲವ? .. . . .. . . . "

ಎಂದು ಹಲವು ಬಗೆಯಾಗಿ ಗೊಲ್ಲತಿಯನ್ನು ನಿಂದಿಸುತ್ತ ಚಂದ್ರಾವತಿಯ ಬಳಿಗೆ ಗೊಲ್ಲತಿಯನ್ನು ಕರೆದೊಯ್ದರು

ಅದೇ ವೇಳೆಯಲ್ಲಿಯೇ ದುರ್ಗಾದಾಸನು ನಯನಪಾಲನೊಡನೆ ಮಾತಾಡುತ್ತ ಅವನನ್ನು ಮೋಸಗೊಳಿಸುವದಕ್ಕಾಗಿ ತನ್ನ ವಾಕ್ಚಾತುರ್ಯವನ್ನೆಲ್ಲಾ ಪ್ರಯೋಗಿಸಿ, ಮತ್ತೆಯೂ ಪ್ರಯೋಗಿಸುತ್ತಿದ್ದನು. ನಯನಪಾಲನು ದುರ್ಗಾದಾಸನ ಸದ್ಗುಣ ಪರಾಕ್ರಮಗಳನ್ನು ಸಿಜವಾಗಿ ತಿಳಿದಿದ್ದುದರಿಂದ ಆತನೊಡನೆ ಅತ್ಯಂತ ಸ್ನೇಹಿತನಂತೆ ನಟಿಸಿ, ತನ್ನ ಕೋರಿಕೆಯನ್ನು ಈಡೇರಿಸಿಕೊಳ್ಳುವದಕ್ಕೆ ಸಮಯ ನಿರೀಕ್ಷೆಯಲ್ಲಿದ್ದನು. ಹೀಗೆ ಇಬ್ಬರೂ ಸ್ವಾರ್ಥದೃಷ್ಟಿಯಿಂದ ಒಬ್ಬರನ್ನೊಬ್ಬರು ಸ್ಪರ್ಧಿಸುತ್ತ ಹೀಗೆ ಮಾತನಾಡಲಾರಂಭಿಸಿದರು —

ದುರ್ಗಾ—ನಯನಪಾಲಮಹಾರಾಜ! ಚಿಕ್ಕಂದಿನಿಂದ ಕಾಪಾಡಿದ ಆ ನಮ್ಮ ಯಶವಂತಸಿಂಹಮಹಾರಾಣಾಯವರಿಗೂ ನನಗೂ

ಈ ದಿನ ಋಣಾನುಬಂಧವು ತೀರಿಹೋಯಿತು ನನಗೆ ಇನ್ನು ಯಾರೂ ದಿಕ್ಕೇ ಇಲ್ಲ ಔರಂಗಜೇಬ ಬಾದಷಹರೊಡನೆ ನನ್ನ ವಿಷಯವನ್ನು ಹೇಳಿ ನನಗೆ ಒಂದು ಉದ್ಯೋಗವನ್ನು ಕೊಡಿಸಿಕೊಡ ಲಾರಿರೇ?

ನಯನ — ನೀನೇಕೆ ವಿಚಾರಮಾಡುವೆ ದುರ್ಗಾದಾಸ! ಇನ್ನು ಕೆಲವು ದಿನಗಳಲ್ಲಿಯೇ ನಾನು ಒಂದು ದೇಶಕ್ಕೆ ರಾಜನಾಗುವೆನು. ಆಗ ನಿನಗೆ ದೊಡ್ಡ ಉದ್ಯೋಗವನ್ನು ಕೊಡುವೆನು—ಚಿಂತಿಸಬೇಡ

ದುರ್ಗಾ —ಇದಕ್ಕೂ ಹೆಚ್ಚಾಗಿ ನನಗೇನು ಬೇಕು? ಹಾಗೆ ತಾವು ಮಾಡುವುದು ಖಂಡಿತವಾದರೆ ಇಂದಿನಿಂದಲೇ ತಮಗೆ ನಾನು ಸೇವಕನಾಗಿರುವೆನು

ನಯನ —ಹಾಗೆ ನೀನು ನಮ್ಮಲ್ಲಿರಲು ಸಮ್ಮತಿಪಟ್ಟು, ನಮ್ಮ ವಿಷಯದಲ್ಲಿ ಭರವಸೆಯಿಟ್ಟು, ಆಜ್ಞಾಬದ್ಧನಾಗಿ ನಡೆದುಬಂದರೆ, ನೀನು ಉನ್ನತಸ್ಥಿತಿಗೆ ಬರುವದರಲ್ಲಿ ಸಂದೇಹವೇ ಇಲ್ಲ

ದುರ್ಗಾ — ಸ್ವಾಮಿ ! ಶ್ರೀಮಂತರ ಕಟಾಕ್ಷವು ಬಿದ್ದರೆ ಎಷ್ಟು ಹೊತ್ತುಬೇಕು? ನನಗೆ ನೀವು ಪ್ರಭುಗಳಾಗುವ ಪಕ್ಷದಲ್ಲಿ ಯಶವಂತಸಿಂಹನು ಗತಿಸಿದ ಚಿಂತೆಯೇ ಉಳಿಯುವದಿಲ್ಲ

ನಯನ – ಓಹೋ! ದುರ್ಗಾದಾಸ! ಎಚ್ಚರಿಕೆ! ಆ ಯಶ ವಂತನನ್ನು ನನ್ನ ಯೋಗ್ಯತೆಗೆ ಸರಿಹೋಗುತ್ತಿರುವೆ! ಮುಖ್ಯ ವಾಗಿ ಚಂದ್ರಾವತಿಯ ಅದೃಷ್ಟವು ಚೆನ್ನಾಗಿರುತ್ತದೆ ಇನ್ನು ಸ್ವಲ್ಪ ಕಾಲದೊಳಗಾಗಿ ಆಕೆ ಪಾದಶಹರಿಗೆ .. . . .....

''ಪಾದಶಹರಿಗೆ' ಎಂದು ನಯನಪಾಲನು ಉಚ್ಚರಿಸಿ ಅಷ್ಟರಲ್ಲಿ ಎಚ್ಚತ್ತು ಸುಮ್ಮನಾದನು. ಆತನ ಕಡೆಯ ಮಾತನ್ನು ಕೇಳಿದ ಕ್ಷಣ ವೇ ದುರ್ಗಾದಾಸನ ಖಡ್ಗದ ಹಿಡಿ ಮೇಲಕ್ಕೆದ್ದಿತು ಮುಂದೆ ನಡೆ ಯಬೇಕಾಗಿರುವ ಕಾರ್ಯಗಳನ್ನು ನೆನೆದು ಅಷ್ಟರಲ್ಲಿ ಶಾಂತನಾಗಿ ನಯನಪಾಲನ ದುಷ್ಟಾಲಾಪಗಳನು ಕೇಳಿಯೂ ಸುಮ್ಮನಿದ್ದನು.

ಇಷ್ಟರಲ್ಲಿ ಗುಡಾರದೊಳಕ್ಕೆ ಹೋಗಿದ್ದ ಗೊಲ್ಲತಿಯು ಮೊದ ಲಿನಂತೆ ಹಾಲಿನ ಮಡಕೆಯನ್ನಿರಿಸಿದ್ದ ಗೂಡೆಯನ್ನು ತಲೆಯಮೇಲಿ ಟ್ಟುಕೊಂಡು ಹೊರಗೆ ಬಂದು ತನ್ನ ಹಳ್ಳಿಗೆ ಹೋಗುತ್ತಿದ್ದಳು.

ದ್ವಾರರಕ್ಷಕರಾಗಿದ್ದ ಆ ಸಿಪಾಯಿಗಳಿಬ್ಬರೂ ಗೊಲ್ಲತಿಯ ಸೌಂದರ್ಯಕ್ಕೆ ಮೋಹಿತರಾಗಿ ತಮ್ಮ ಕೈಯಲ್ಲಿದ್ದ ಬಂದೂಕುಗಳನ್ನು ಕೆಳಗೆ ಹಾಕಿ ಆವಳ ಹಿಂದೆಯೇ ಹೊರಟರು ಸ್ವಲ್ಪದೂರದವರೆಗೆ ಗೊಲ್ಲತಿಯು ಅತ್ತಿತ್ತ ನೋಡದೆ ತನ್ನ ದಾರಿಯನ್ನೇ ಹಿಡಿದು ಆ ಬಳಿಕ ಹಿಂದೆ ಸಿಪಾಯಿಗಳ ಮನೋಭಾವವನ್ನು ತಿಳಿದವಳಾಗಿ ಸ್ವಲ್ಪಹೊತ್ತು ಯೋಚಿಸಿ, ತಲೆದೂಗುತ್ತಾ ಅತ್ತಿತ್ತ ನೋಡಿ ಹಿಂತಿರುಗಿ ಆ ಇಬ್ಬರ ಮುಖವನ್ನೂ ನೋಡಿ ಕಿರುನಗೆಯಿಂದ ಮೆಲ್ಲನೆ ಕಣ್ಣುಸನ್ನೆ ಮಾಡಿ ಬೇಗ ನಡೆಯತೊಡಗಿದಳು ಆ ಭ್ರಾಂತರಾದ ಭಟರು ಗೊಲ್ಲತಿಯು ಮಾಡಿದ ಸನ್ನೆಯನ್ನು ನೋಡಿ, ತನ್ನನ್ನು ಬರಹೇಳಿದಳೆಂದು ಒಬ್ಬನೂ ನಿನ್ನನ್ನಲ್ಲ-ನನ್ನನ್ನು ಬರಹೇಳಿದಳೆಂದು ಮತ್ತೊಬ್ಬನೂ ವಾದಿಸುತ್ತ ಕಡೆಗೆ ಮುಷ್ಟಿಯುದ್ಧಮಾಡಲು ಆರಂಭಿಸಿದರು ಇವರ ದ್ವಂದ್ವಯುದ್ಧವನ್ನು ನೋಡಿ ಗೊಲ್ಲತಿ ಇದೇ ಸಮಯವೆಂದು ಶೀಘ್ರವಾಗಿ ನಡೆಯುತ್ತ ಅವರ ಕೈಗೆ ಸಿಕ್ಕದೆ ತನ್ನ ಹಳ್ಳಿಗೆ ಹೋಗಿ ಸೇರಿದಳು

ಇತ್ತ ನಯನಪಾಲನು ದುರ್ಗಾದಾಸನನ್ನು ತನ್ನ ಬಲೆಯಲ್ಲಿ ಸಿಕ್ಕಿಸಿಕೊಳ್ಳಬೇಕೆಂದು ಅನೇಕ ವಿಧವಾದ ಸರಸ ಸಲ್ಲಾಪಗಳನ್ನು ಬೆಳೆಯಿಸುತ್ತ ಕುಳಿತಿದನು ದುರ್ಗಾದಾಸನು ಈತನ ಉದ್ದೇಶವನ್ನು ಸಂಪೂರ್ಣವಾಗಿ ತಿಳಿದಿದ್ದರೂ ಯಾವ ವಿಷಯವನ್ನೂ ತಿಳಿಯದವನಂತೆ ನಟಿಸುತ್ತಿದ್ದನು ನಯನಪಾಲನ ಸೈನಿಕರು ಆತನ ಅಪ್ಪಣೆಯಂತೆ ಚಂದ್ರಾವತಿಯ ಗುಡಾರದೊಳಕ್ಕೆ ಇಂದಿರಾ, ದುರ್ಗಾದಾಸ ಇವರಿಬ್ಬರುಹೊರತು ಮತ್ತಾರನ್ನೂ ಬಿಡುತ್ತಿರಲಿಲ್ಲ ಈ ದಿನ ಪ್ರಾತಃಕಾಲ ಇಂದಿರೆಯು ಎಲ್ಲಿಗೋ ಹೋಗಿದ್ದವಳು ಸೂರ್ಯೋದಯವಾದ ಎರಡು ಗಳಿಗೆಯಮೇಲೆ ಚಂದ್ರಾವತಿಯ ಗುಡಾರದೊಳಕ್ಕೆ ಹೋದಳು ಸಿಪಾಯಿಗಳು ಎಂದಿನಂತೆ ಗುಡಾರದ ಸುತ್ತಲೂ ಕಾದಿದ್ದರು. ಸ್ವಲ್ಪ ಹೊತ್ತಾದ ಮೇಲೆ ಇಂದಿರೆಯು ಗುಡಾರದಿಂದ ಹೊರಗೆ ಹೊರಟು ಹೋದಳು

ದುರ್ಗಾದಾಸನೂ ನಯನಪಾಲನೂ, ಪರಸ್ಪರ ಸಂಭಾಷಿಸುತ್ತ ಸಂತೋಷಮಗ್ನರಾಗಿದ್ದರು ಅವರಿಬ್ಬರೂ ಒಂದು ರಹಸ್ಯ ಪ್ರದೇ

ಶದಲ್ಲಿ ನಿಂತು ಮಾತನಾಡುತ್ತಿದ್ದುದರಿಂದಲೂ, ರಾಜಪರಿವಾರವೆಲ್ಲವೂ ಯಶವಂತಸಿಂಹನ ಪರಲೋಕಕ್ರಿಯೆಯನ್ನು ಮಾಡುವಕೆಲಸದಲ್ಲಿದ್ದುದರಿಂದಲೂ ಇವರ ಸಂಭಾಷಣೆಯು ಯಾರಿಗೂ ತಿಳಿಯದೆ ಹೋಯಿತು. ಹೀಗೆ ಅವರಿಬ್ಬರು ಪ್ರಸಂಗ ಮಾಡುತ್ತಿದ್ದಾಗಲೇ ಚಂದ್ರಾವತಿಯು ಗುಡಾರದೊಳಗೆ—

'ಹಾ, ಅಯ್ಯೋ!—ಅಜಿತಸಿಂಗಾ—ನಮಗಿನ್ನಾರು ದಿಕ್ಕೋ ಅಪ್ಪ—" ಎಂದೀ ಬಗೆಯಾಗಿ ಸ್ತ್ರೀಯರೆಲ್ಲರೂ ಬಲವಾಗಿ ರೋದಿಸುವದಕ್ಕಾರಂಭಿಸಿದರು. ನಯನಪಾಲದನ್ನು ಕೇಳಿ ಗಾಬರಿಯಿಂದ ದುರ್ಗಾದಾಸನನ್ನು ನೋಡಿ "ಅಯ್ಯಾ ದುರ್ಗಾದಾಸ! ಈ ರೋದನವೇಕೆ? ಯಾವ ಉಪದ್ರವವು ಸಂಭವಿಸಿದೆಯೋ—ಜಾಗ್ರತೆಯಾಗಿ ತಿಳಿದು ಬಾ" ಎಂದು ಹೇಳಿ ಅತನನ್ನು ಕಳುಹಿದನು ದುರ್ಗಾದಾಸನು ಅತ್ಯಾತುರದಿಂದ ಗುಡಾರದೊಳಕ್ಕೆ ಹೋಗಿ ಸ್ವಲ್ಪಹೊತ್ತಿಗೆ ಹಿಂತಿರುಗಿ ಬಂದು ದುಗುಡದಿಂದ—'ನಯನಪಾಲಮಹಾರಾಜಾ! ನಮಗಿನ್ನೇನು ಗತಿ? ಕುಮಾರ ಅಜಿತಸಿಂಗನು ಪರಲೋಕಗತನಾದನು. ನಮ್ಮ ಅದೃಷ್ಟವು ಹೀಗಿರುವುದೇ!—"ಎಂದು ಕಣ್ಣೀರು ಸುರಿಸಿದನು. ನಯನಪಾಲನು ತನ್ನ ಮನಸ್ಸಿಗುಂಟಾದ ಆನಂದವನ್ನು ಹೊರಪಡಿಸದೆ ತಡೆದು ಕುಟಿಲಶೋಕದಿಂದ ಮುಖವನ್ನು ತಗ್ಗಿಸಿ—'ಅಯ್ಯಾ! ವಿವೇಕಿಗಳಾದ ನಿಮಗೆ ನಾನು ಹೇಳುವುದೇನಿದೆ? ವಿಚಾರವೇನೋ ಶೋಚನೀಯವೇ ಸರಿ , ಆದರೂ ದೈವೇಚ್ಛೆಯಲ್ಲಿದ್ದುದು ಆಗಿ ಹೋಯಿತು ಇನ್ನು ಅತ್ತು ಫಲವಿಲ್ಲ. ಎಲ್ಲರನ್ನೂ ಸಮಾಧಾನಪಡಿಸಿ—ಶವವನ್ನು ಸಾಗಿಸುವ ಪ್ರಯತ್ನಮಾಡು" ಎಂದನು ದುರ್ಗಾದಾಸನು—ನಿಟ್ಟುಸಿರಿಟ್ಟು—'ಅದನ್ನು ಕೇಳಿ ಬಂದೆನು ಚಂದ್ರಾವತಿದೇವಿಯು, ತನ್ನ ಮಗನನ್ನು ತನ್ನ ಹೊರತು ಮತ್ತಾರೂ ಮುಟ್ಟಲಾಗದೆಂದು ಹಟತೊಟ್ಟು ಕೂತಿರುವಳು" ಎಂದು ಹೇಳಿದನು. ನಯನಪಾಲನು ಆಕೆಯ ಇಷ್ಟದಂತೆಯೇ ಇತ್ಯರ್ಥಮಾಡಿ ಬರುವಂತೆ ಹೇಳಿ, ಅಜಿತಸಿಂಗನ ಮರಣವಾರ್ತೆಯಿಂದ ತನ್ನಲ್ಲಿ ತಾನೇನಲಿದಾಡುತ್ತಿದ್ದನು.

(ಮುಂದೆ ಸಾಗುವದು.)

## ಸ್ವೀಕಾರ ಮತ್ತು ಅಭಿಪ್ರಾಯ

(ಶ್ರೀಯುಕ್ತ, ಮ ರಾಮಬ್ರಹ್ಮ ಬಿ. ಏ ಎಲ್ ಟಿ. ಧಾರವಾಡ ಟ್ರೇ|| ಕಾ|| ಪ್ರಕೃತಿ ವಿಮರ್ಶೆಯ ಅಧ್ಯಾಪಕರು ಇವರ ಕಡೆಯಿಂದ )

೧ ಕೀಟಿಗಳು ರೇಶ್ಮೆಯ ಹುಳ— (ಪ್ರಕೃತಿವಿಮರ್ಶೆಯ ಪತ್ರಿಕೆಗಳು ನಂ ೧) ಬೆಲೆ ೦—೨—೦

೨ ಪ್ರಕೃತಿವಿಮರ್ಶೆಯ ಸುಲಭಪಾಠಗಳು— (ಕನ್ನಡ ಶಾಲಾ ಪತ್ರಕ ಗ್ರಂಥಮಾಲ) ಬೆಲ ೦—೬—೦

೩ ಶಾಲೆಯ ತೋಟ —ಬೆಲೆ ೦—೧೨—

( ಇವು ಮೂರು ಪೂರ್ಣ ಮತ್ತು ಸ್ವತಂತ್ರ ಪುಸ್ತಕಗಳಲ್ಲದೆ ಶಾಲಾಪತ್ರಕ ಪ್ರಕೃತಿ ಪಾಠಗಳು, ಅಂತರಿಕ್ಷದ ನಿರೀಕ್ಷಣೆ ಇವುಗಳ ಕೆಲಕೆಲವು ಭಾಗಗಳೂ ನಮಗೆ ಬಂದಿರುವುವು )

೪ ಕರ್ಣಾಟಕ ಸಾಹಿತ್ಯಪರಿಷತ್ತಿನ ದ್ವಿತೀಯ (?) (ತೃತೀಯ) ವಾರ್ಷಿಕ ಸಭೆಯಲ್ಲಿ ನಡೆಯುವ ವಿಚಾರಗಳ ವಿವರ

೫ ಧಾರವಾಡ ವಿದ್ಯಾವರ್ಧಕ ಸಂಘದ ೨೬ ಮತ್ತು ೨೩ (೧೯೧೨-೧೯೧೪) ನೆ ವರ್ಷಗಳ ರಿಪೋರ್ಟು

ಈ ಮೇಲ ಹೇಳಿ ವಿವರಿಸಿರುವ ಪುಸ್ತಕಗಳನ್ನು ನಾವು ವಂದನಾಪೂರ್ವಕವಾಗಿ ಸ್ವೀಕರಿಸಿರುವೆವಲ್ಲದೆ ಇವುಗಳನ್ನು ಕಳುಹಿದುದಕ್ಕಾಗಿ ಆ ಆ ಗ್ರಂಥಕರ್ತರಿಗೆ ಮತ್ತು ಪ್ರೇಕ್ಷಕರಾದ ನಮ್ಮ ಧರ್ಮಬಾಂಧವರಿಗೆ ಈ ಮೂಲಕ ಧನ್ಯವಾದಗಳನ್ನೊಪ್ಪಿಸುತ್ತಿರುವೆವು. ಮತ್ತು ಅವುಗಳ ವಿಷಯವಾದ ನಮ್ಮ ಅಭಿಪ್ರಾಯವನ್ನು ಅವಕಾಶವಾದಂತೆ ಪ್ರಕಟಿಸಬೇಕೆಂದಿರುವೆವು

---

## ಸು ಮಿ ತ್ರ

ಇದೊಂದು ಸನ್ಮಿತ್ರ ಕುಮಿತ್ರರ ಮತ್ತು ಸತ್ಯಾಸತ್ಯವಾದಿಗಳ ನಿಜಸ್ವರೂಪ ಫಲಗಳನ್ನು ತಿಳಿಯಿಸಬೇಕೆಂಬ ಉದ್ದೇಶದಿಂದ ಪ್ರಕಾಶಿ

ಕ್ಕೆ ಬಂದ ಕಾಲ್ಪನಿಕ ಕಾದಂಬರಿ ಇದರ ಕರ್ತರು ಮತ್ತು ಪ್ರಕಾಶಕರು ಶ್ರೀ ರಂಗಪ್ಪಯ್ಯ ಸೆಕ್ರೆಟರಿ, ಶ್ರೀಕೃಷ್ಣ ಲೈಬ್ರರಿ 'ಕೃಷ್ಣಾಪುರಂ' ಸುರತಕಲ್ ಪೋಸ್ಟ್ ಇವರು

ಪುಸ್ತಕವು ನಮ್ಮ ನಂದಿನಿಯಷ್ಟೇ ಆಕಾರದ ೨೪ ಪುಟಗಳ ಕಥಾಭಾಗವನ್ನೂ ಉಳಿದ ಪ್ರಕಟನೆ, ಪ್ರಸ್ತಾವನೆ, ಪ್ರಸಿದ್ಧ ಪತ್ರಿಕೆಗಳ ೧೬ ಪುಟಗಳನ್ನೂ ಒಳಕೊಂಡಿರುವುದು ಇದು ಬಂಟವಾಳದ ವಿಕ್ಟೋರಿಯಾ ಮುದ್ರಾಲಯದವರಿಂದ ಅಂದವಾಗಿ ಮುದ್ರಿಸಲ್ಪಟ್ಟಿದೆ ಇದರ ಕ್ರಯ ೦—೩—೦ ಮಾತ್ರ ಇದನ್ನು ಶ್ರೀ ರಂಗಪ್ಪಯ್ಯನವರು ತಮ್ಮ ಪುಸ್ತಕ ಭಾಂಡಾರಕ್ಕೆ ಸೇರಿದ ಸದ್ಬೋಧಕ ಗ್ರಂಥಮಾಲೆಯ ೨ನೆ ಪುಸ್ತಕವಾಗಿ ಪ್ರಸಿದ್ಧಪಡಿಸಿರುವರು (ಮೊದಲನೆ ಪುಸ್ತಕವಾದ 'ದೈವಭಕ್ತಿ' ಎಂಬ ನಿಬಂಧ ಪುಸ್ತಕವು ಇದಕ್ಕೆ ಮೊದಲೇ ಪ್ರಸಿದ್ಧವಾಗಿ ಅನೇಕ ಪತ್ರಕರ್ತರ ಮತ್ತು ಗ್ರಂಥಕರ್ತರ ಅಭಿಪ್ರಾಯಗಳನ್ನೂ ಪಡೆದಿರುತ್ತದೆ)

ಗ್ರಂಥಕರ್ತರು ಶಕ್ತಿವಂಚನೆ ಇಲ್ಲವೆ ದೇಶ ಮತ್ತು ಭಾಷಾಸೇವೆಯಲ್ಲಿ ಬದ್ಧದೀಕ್ಷರಾಗಿ ನಿಂತು, ದೇಶೀಯ ಬಂಧುಗಳು ಜ್ಞಾನ-ಭಕ್ತಿ ಪ್ರೇಮಗಳನ್ನು ಊರ್ಜಿತಪಡಿಸಿಕೊಳ್ಳಲು ತಕ್ಕಮಟ್ಟಿಗೆ ಅನುಕೂಲಿಸಲೆಂದು 'ಶ್ರೀಕೃಷ್ಣ ಲೈಬ್ರರಿ' ಎಂಬ ಹೆಸರಿನಿಂದ ಒಂದು ಪುಸ್ತಕ ಭಾಂಡಾರವನ್ನೂ 'ಶ್ರೀ ರಾಧಾ ಕೃಷ್ಣ ಉಪಾಸನಾ ಸಮಾಜ' ವೆಂಬ ಹೆಸರಿನಿಂದ ಒಂದು ಭಜನೆ ಕೂಟವನ್ನೂ ಏರ್ಪಡಿಸಿಕೊಂಡು ಅವುಗಳ ವ್ಯವಸ್ಥಾಪಕರಾಗಿರುವದಲ್ಲದೆ ಮೇಲೆ ಹೇಳಿದ 'ಸದ್ಬೋಧಕ ಗ್ರಂಥಮಾಲೆ' ಎಂಬ ಹೆಸರಿಂದ ಒಂದು ಪುಸ್ತಕಾವಳಿಯನ್ನು ಬೇರೆ ಹೊರಡಿಸುತ್ತಿರುವುದು ಶ್ಲಾಘನೀಯವಾದ ವಿಚಾರವು.

ಈ ಸಣ್ಣ ಪುಸ್ತಕದಲ್ಲಿ ಶೈಲಿಯವಿಚಾರವನ್ನಾಗಲಿ, ಭಾಷಾವಿಷಯದಲ್ಲಿ, ಕಥಾಸಂದರ್ಭ ಘಟನಾವಳಿಗಳನ್ನಾಗಲಿ, ಪ್ರಸ್ತಾವಿಸಲು ಇಷ್ಟಪಡುವದಿಲ್ಲವಾದರೂ ಈ ನಮ್ಮ ಭ್ರಾತೃಗಳನ್ನು ಕುರಿತು ಪ್ರಯತ್ನವನ್ನು ದೃಢವಾಗಿ ನಡೆಯಿಸಿಕೊಂಡು ಬರಬೇಕೆಂದೂ,

ಸದ್ಬೋಧಕ ಗ್ರಂಥಮಾಲೆಯ ಪ್ರತಿಯೊಂದು ಸಣ್ಣ-ದೊಡ್ಡ-ಪುಸ್ತಕಗಳೂ ನಮ್ಮ ದೇಶೀಯರಲ್ಲಿ ಸದಾಚರಣೆ-ಸ್ವಧರ್ಮಾನುಷ್ಠಾನ-ಸ್ವದೇಶಾಭಿಮಾನಗಳನ್ನು ಸ್ಫೂರ್ತಿಗೆ ತರುವಂತಹ ಸ್ವದೇಶಭಕ್ತರಾದ ಮಹನೀಯರ ಜೀವನ ಚರಿತೆಗಳಿಂದಲೂ ಭಗವದ್ಗುಣಕಥನ ರೂಪಗಳಾದ ದಿವ್ಯಪ್ರಬಂಧಗಳಿಂದಲೂ ಕೂಡಿ ತನ್ನ "ಸದ್ಬೋಧಕ" ನಾಮವನ್ನು ಸಾರ್ಥಕ್ಯಪಡಿಸಿಕೊಳ್ಳುವಂತೆ ಮಾಡಬೇಕೆಂದೂ ನಮ್ರಭಾವದಿಂದ ನಿವೇದಿಸುವೆವು

---

### ಕಾಶೀಯಾತ್ರಾ ಚಂದ್ರಿಕಾ.

ಇದು ಶ್ರೀಕಾಶೀ ಕ್ಷೇತ್ರ ಪುರೋಹಿತರಾದ ಕೆ. ನಂಜುಂಡಶಾಸ್ತ್ರಿಗಳಿಂದ ಯಾತ್ರಾರ್ಥಿಗಳ ಸಹಾಯಾರ್ಥವಾಗಿ ಬರೆಯಲ್ಪಟ್ಟು ಗ್ರಂಥಕರ್ತರಿಂದಲೇ ಪ್ರಚುರಿಸಲ್ಪಟ್ಟಿರುವ ಪುಸ್ತಕವಾಗಿದೆ (ಇದನ್ನು ವಿಮರ್ಶೆಗಾಗಿ ನಮ್ಮಲ್ಲಿಗೆ ಕಳುಹಿದ ಪರಮಾರ್ಥ ಮುದ್ರಾಲಯಾಧಿಕಾರಿಗಳೂ ಪರಮಾರ್ಥಪತ್ರಿಕಾ ಸಂಪಾದಕರೂ ಆಗಿರುವ ಶ್ರೀಯುಕ್ತ ಪಂಡಿತ ನಾರಾಯಣಶಾಸ್ತ್ರಿಗಳ ಸೌಜನ್ಯವು ನಮಗೆ ಚಿರಸ್ಮರಣೀಯವಾಗಿದೆ.) ಇದರ ಡೆಮ್ಮಿ ಅಷ್ಟಪತ್ರದ ಆಕಾರದಲ್ಲಿ ೧೩ + ೩೨ + ೪೧ + ೧೦-ಎಂದರೆ ಒಟ್ಟು ೯೬ ಪುಟಗಳುಳ್ಳದ್ದಾಗಿದೆ. ಈ ಪುಸ್ತಕದಲ್ಲಿ ಮೊದಲು ಕಾಶೀಯಾತ್ರೆಗಾಗಿ ಹೊರಡುವ ಪ್ರಯಾಣಿಕರಲ್ಲಿ ಗುಂತಕಲ್ಲುಮಾರ್ಗ, ಬೆಜವಾಡಮಾರ್ಗ, ಹರಿಹರದ ಮಾರ್ಗಗಳಿಂದ ಪ್ರಯಾಣಮಾಡುವವರು ಅಲ್ಲಲ್ಲಿ ಇಳಿಯಬೇಕಾದ ಸ್ಥಳಗಳನ್ನೂ ನೋಡಬೇಕಾದ ಪುಣ್ಯಕ್ಷೇತ್ರಗಳನ್ನೂ ಅಲ್ಲಲ್ಲಿ ಇವರು ಮಾಡಬೇಕಾದ ಕೆಲಸಗಳೂ ಮತ್ತು ಪಡಬೇಕಾದ ಜಾಗರೂಕತೆಗಳನ್ನೂ ವಿವರಿಸಿರುವರು. ಆ ಬಳಿಕ ಪ್ರಯಾಗಕ್ಷೇತ್ರ-ಯಾತ್ರಾಕ್ರಮ-, ಗಂಗೋತ್ಪತ್ತಿ ಗಂಗಾಷ್ಟೋತ್ತರ ಶತನಾಮಾವಳಿಗಳನ್ನೂ ಯಮುನೋತ್ಪತ್ತಿ- ತ್ರಿವೇಣೀವರ್ಣನೆ ಪ್ರಯಾಗಮಹಿಮೆ, ಕ್ಷೌರವಿಧಿ, ಶ್ರಾದ್ಧವಿಧಿ, ವೇಣೀದಾನವಿಧಿ, ಕಾಲನಿರ್ಣಯ, ದಾನ, ಪುಷ್ಕರನಿರ್ಣಯ, (ಪುಟ ೨೬ ಪ್ರಯಾಗಮಹಿಮಾಭಾಗ ಇದನ್ನು

ನೋಡಿ ತಿಳಿಯಬೇಕಾದುದು ಅವಶ್ಯವು) ಅರ್ಧೋದಯ ಮತ್ತು ಮಹೋದಯಗಳು, ಮಾಘಪರ್ವ, ದಶಾಹರಯೋಗಗಳು ಪದ್ಮಯೋಗ, ಕುಂಭಾರ್ಧ ಕುಂಭಯೋಗ, ಸೈಕತಲಿಂಗ ನಿರ್ಮಾಣ ವಿಧಿ, ಪ್ರಯಾಗಸಂಕಲ್ಪ, ಗಂಗಾಪೂಜಾವಿಧಿ, ಇತ್ಯಾದಿಗಳನ್ನು ಸೂತ್ರಗಳೊಡನೆ ವಿವರಿಸಿರುವರು ಮತ್ತು ಮೂರನೆಭಾಗವಾದ ಕಾಶೀ ಮಹಾತ್ಮೆಯಲ್ಲಿ ಯಾತ್ರಿಕರು ಅತ್ಯಾವಶ್ಯಕವಾಗಿ ಗಮನಿಸಬೇಕಾದ ಕ್ಷೇತ್ರಮಹಿಮೆ, ತೀರ್ಥಮಹಿಮೆ, ಸ್ಥಳಪುರಾಣ, ಇತಿಹಾಸ, ದಾನ ವಿಧಿ, ಸ್ನಾನವಿಧಿ, ಆಚರಣಾಕ್ರಮಗಳನ್ನೆಲ್ಲಾ ಸಾಂಗವಾಗಿಯೂ ಸುಲಭರೀತಿಯಿಂದಲೂ, ಸೂತ್ರಸಹಿತವಾಗಿಯೂ ವಿವರಿಸಿರುವರು ನಾಲ್ಕನೆಯದಾದ ಗಯಾಕ್ಷೇತ್ರಮಹಾತ್ಮೆಯಲ್ಲಿಯೂ ಅದಕ್ಕೆ ಸಂಬಂಧಿಸಿದ ಮಹತ್ವವಿಚಾರಗಳನ್ನೂ ವಿವರಿಸಿರುವರು ಅದೆಲ್ಲವನ್ನೂ ಇಲ್ಲಿ ಪ್ರಸ್ತಾಪಿಸಲು ಸ್ಥಳಾಭಾವವಾಗಿರುವುದು ಮುಖ್ಯವಾಗಿ ನಮ್ಮ ಕರ್ಣಾಟಕ ದೇಶೀಯರ ಸಹಾಯಾರ್ಥವಾಗಿ ಈ ಮಹನೀಯರು ಈ ಗ್ರಂಥವಿಲೇಖನ-ಪ್ರಸಾರಣಗಳಿಗಾಗಿ ಪಟ್ಟಿರುವ ಶ್ರಮವನ್ನೂ ತೀರ್ಥಯಾತ್ರೆ ಪುಣ್ಯಕ್ಷೇತ್ರವಾಸ, ಮಹಾತ್ಮರಸಂದರ್ಶನ ಲಾಭಗಳ ವಿಷಯದಲ್ಲಿ ಇವರಿಗಿರುವ ಶ್ರದ್ಧೆಯನ್ನೂ ನೋಡಿ ನಮ್ಮ ಬಾಂಧವರಲ್ಲಿ ಯಾತ್ರಾರ್ಥಿಗಳಾಗಿರುವ ಪ್ರತಿಯೊಬ್ಬರೂ ಈ ಪುಸ್ತಕವನ್ನು ಸಂಗ್ರಹಿಸಬೇಕಲ್ಲದೆ, ಅದರಲ್ಲಿ ಕೊಟ್ಟಿರುವ ಇವರ ಸೂಚನೆಗಳನ್ನು ಅನುಸರಿಸಬೇಕೆಂದು ನಿವೇದಿಸುವೆವು ಇಂತಹ ಮಹತ್ವದ ವಿಚಾರಗಳನ್ನು ವಿವರಿಸುವ ಈ ಪುಸ್ತಕದಲ್ಲಿ ನಾವು ಭಾಷಾಮರ್ಯಾದೆಯನ್ನು ನೋಡಬೇಕಾದುದಿಲ್ಲವಾಗಿ ಅದರ ಪ್ರಸ್ತಾವವನ್ನಿಲ್ಲಿ ಬಿಟ್ಟಿರುವೆವು.

॥ ಶ್ರೀ ॥

( ಕವಿಗಳ ಲೋಕೋಪಕಾರ )

## ಅತ್ತೆ-ಸೊಸೆಯರ ವಿಚಿತ್ರವಿಚಾರ *

ಲೋಕೋಪಕಾರಿಗಳೆಂದರೆ ಕವಿಗಳ ಅಥವಾ ಕಾವ್ಯಕಾರರ ಹೆಸರನ್ನು ಮೊದಲು ಹೇಳಬೇಕು ಯಾವ ದೇಶವು ಮಾರ್ಮಿಕರೂ ಧಾರ್ಮಿಕ ಬುದ್ಧಿಯುಳ್ಳವರೂ, ನಿಜವಾದ ದೇಶಾಭಿಮಾನಿಗಳೂ, ವಾಗ್ಮಿಯೂ ಆದ ಕವಿಗಳ ಕಾಲೋಚಿತ ವರ್ಣನಾತ್ಮಕಗಳಾದ ಗೀತರಾಗಗಳಿಂದ ವ್ಯಾವರ್ಣಿತವಾಗಿರುವುದೋ, ಯಾವ ದೇಶದ ಪ್ರಜೆಗಳು ಕಾವ್ಯಹೃದಯದ ಸಾರವನ್ನರಿತು ಆನಂದಪಡುತ್ತಿರುವರೋ— ಆ ದೇಶವೂ ಆ ಪ್ರಜೆಗಳೂ ಉನ್ನತ ಸ್ಥಿತಿಯಲ್ಲಿರುವಂತೆ ತಿಳಿಯಬಹುದು ಅವರ ಅಂತಹ ಉನ್ನತಿಗೆ ಸರಸವಾಗಿಯೂ ಸೂತ್ರಸಹಿತವಾಗಿಯೂ ಇರುವ ವಾಕ್ಸರಣಿಯಿಂದ ಸುಲಭಮಾರ್ಗದಲ್ಲಿ ಜನರನ್ನು ಎಚ್ಚರಿಸಿ, ಅವರ ನಡೆನುಡಿಗಳಲ್ಲಿಯ ದೋಷ ಲೋಪಗಳನ್ನು ಹೊರಗೆಡಹಿ ಪರಿಶುದ್ಧಭಾವವನ್ನು ಅವರಲ್ಲಿ ತುಂಬಿ, ಅವರ ಆಲೋಚನಾಶಕ್ತಿ, ಕ್ರಿಯಾಶಕ್ತಿ, ಉತ್ಸಾಹಶಕ್ತಿಗಳನ್ನು ಹೆಚ್ಚಿಸುವಂತೆ ಮಾಡಿದ ಕವಿಗಳು ಮತ್ತು ಕಾವ್ಯಕಾರರುಗಳೇ ಮುಖ್ಯರು

ಇವರು ಹೀಗೆ ಲೋಕೋಪಕಾರಿಗಳೆಂದು ತಿಳಿದಿದ್ದುದರಿಂದಲೇ ಆದಿಯಿಂದಲೂ ಈ ಮಹನೀಯರನ್ನು ಪಂಡಿತ ಪಾಮರರೂ, ದೀನ ಶ್ರೀನಿಧಾನರೂ ಪ್ರಜಾ-ಪ್ರಭುಗಳೂ ಕೂಡಿಯೇ ಸನ್ಮಾನಿಸುತ್ತಿದ್ದರು. ಇವರ ಕಲ್ಪನಾ ರಾಜ್ಯದಲ್ಲಿ ತೋರಿಬರುವ ವಿದ್ಯಮಾನಗಳೇ

---

* ನಂದಿನಿಯ ೪ ೫ ( ನಳ ಪುಷ್ಯ ಮಾಘ ) ಸಂಚಿಕೆಗಳಲ್ಲಿ ಸಾಂಪ್ರತದ ಸಾಧ್ವೀ ವರ್ತನವೆಂಬ ಹೆಸರಿನ ಲೇಖನ ಕಡೆಯಲ್ಲಿ ಸೂಚಿಸಿದ್ದಂತೆ ಅತ್ತೆಸೊಸೆಯರ ವಿಚಾರವು ನಂದಿನಿಯ ೬ನೆ ಸಂಚಿಕೆಯಲ್ಲಿ ಬರಲಿಲ್ಲವೆಂದೂ ಮತ್ತೆ ಬರುವುದಾವಾಗಲೆಂದು ನಮ್ಮ ಮಹಿಳೆಯರಲ್ಲಿ ಕೆಲವರು ಸಾಕ್ಷಾತ್ತಾಗಿ ಕೇಳಿದುದರಿಂದ ಈ ಸಂಚಿಕೆಯಲ್ಲಿಯೇ ಅದನ್ನು ಕೊಟ್ಟಿರುವೆವು (ಸಂ. ನಂ.)

ಅಭ್ಯುದಯ ಶಿಖರವನ್ನೇರಲಿಕ್ಕಿರುವವರಿಗೆ ಅನುಕರಣೀಯವೆಂಬ ಭಾವನೆಯು ಎಲ್ಲರ ಮನಸ್ಸಿನಲ್ಲಿಯೂ ಇದ್ದಿತು ಆದುದರಿಂದಲೇ ಕವಿ ಕಾವ್ಯಕಾರ್ಯರ ಆದಿಪುರುಷರಾದ ವಾಲ್ಮೀಕಿ, ವ್ಯಾಸ, ಕಾಳಿದಾಸ ಪ್ರಭೃತಿಗಳು ಲೋಕಮಾನ್ಯರಾಗಿರುವರು

ಆದರೆ ಕಾಲಭರದ ಪರಿವರ್ತನದಿಂದಲೋ ನಮ್ಮವರ ದೌರ್ಭಾಗ್ಯದಿಂದಲೋ ಇಲ್ಲವೇ ಮತ್ತಾವ ಕಾರಣದಿಂದಲೋ ನಾವು ನಿಜವಾದ ಕವಿಗಳನ್ನೂ ಮತ್ತು ಕಾವ್ಯಹೃದಯದ ಸಾರವನ್ನೂ ಗ್ರಹಿಸಲಾರದೆ ಮೂರ್ಖರಾಗಿರುವೆವು ಅವರ ಉಪಕಾರದಿಂದ ನಾವು ವಂಚಿತರಾಗಿರುವೆವು ಕೇವಲ ಕವಿಗಳ ಗೀತ ಪದ್ಯಗಳ ವರ್ಣನೆ ವಿಡಂಬನೆಗಳಿಂದ ನಮ್ಮ ಸಮಾಜವು ಹಿಗ್ಗಿ ಹಿಗ್ಗಿ ಕುಗ್ಗಿ ಹೋಗುತ್ತಿರುವುದು ಇಂತಹ ದುರ್ವಿಪಾಕದಲ್ಲಿ ನಮ್ಮ ಕರ್ತವ್ಯವೇನು? ನಮ್ಮನ್ನು ಕುರಿತು ಕವಿ ಹೃದಯವೇನೆನ್ನುತ್ತಿರುವದೆಂದು ತಿಳಿದು ಎಚ್ಚತ್ತು ನಡೆವುದಲ್ಲವೆ? ಹಾಗಾದರೆ ನೋಡಿರಿ! ಹಿಂದ ನಮ್ಮನ್ನು ಕುರಿತು ನಮ್ಮ ಪೂರ್ವಜರು ''ಚರಣಗಳನ್ನೊತ್ತುವದು ಮೊದಲಾಗಿರುವ ಸೇವೆಯೊಳತ್ತೆ ಮಾವರ...'' ಅತ್ತೆಮಾವರ ಸೇವ ಗೈಯಪ್ಪುದಿಯಾತ್ತುರಕೆ ತಲೆವಾಗಿ ನಡೆ " ಇತ್ಯಾದಿ ವಚನಗಳಿಂದ ಎಚ್ಚರಿಸಿದರು ನಮ್ಮ ದುರಭಿಮಾನದಿಂದ ನಾವದನ್ನು ನಿರಾಕರಿಸಿ ನಮಗೆ ನಾವೇ ಹಿರಿಯರೂ, ಅಧಿಕಾರಿಗಳೂ, ಸ್ವತಂತ್ರರೂ ಆದೆವೆಂದು ತಿಳಿದೆವು ಲಜ್ಜಾ ಮಾನ-ಭಯ- ಭಕ್ತಿ- ಶ್ರದ್ಧೆಗಳನ್ನು ತೊರೆದೆವು ನಿಜವಾದ ಪ್ರೇಮ- ದಯೆ ಅನುಕಂಪನಗಳನ್ನು ಮರತೆವು, ನಮ್ಮನ್ನು ನೋಡಿ ನೋಡಿ ನಮ್ಮ ಹಿರಿಯರು ಮರುಗಿದರು ನೆರೆಹೊರೆಯವರು ನಮ್ಮನ್ನು ಜರೆದರು ಇಷ್ಟು ಆದುದನ್ನು ನೋಡಿ ಲೋಕ ಹಿತೇಚ್ಛುಗಳಾದ ಆ ಕಾವ್ಯಕಾರರು ಅತ್ತೆಸೊಸೆಯಾಗಿ ಸೊಸೆಯತ್ತೆಯಾಗಿ, ಪುತ್ರಪಿತನಾಗಿ, ಪಿತಪುತ್ರನಾಗಿ ." ಇತ್ಯಾದಿ ಪರಿತಾಪ ವಾಕ್ಯಗಳನ್ನು ಸಿರಿಯಾದರೂ ನಮ್ಮವರಲ್ಲಿ ಪಶ್ಚಾತ್ತಾಪವುಂಟಾಗುವಂತೆ ಮಾಡಬೇಕೆಂದು ಪ್ರಯತ್ನಪಟ್ಟರು ಆದರೂ ಅವರು ಈ ಕಾರ್ಯದಲ್ಲಿ ಎಷ್ಟುಮಟ್ಟಿಗೆ ಕೃತಕಾರ್ಯರಾಗಿರಬಹುದೋ ತಿಳಿಯೆವು

ಪ್ರಕೃತದಲ್ಲಿ ನಮಗೆ ಬೇಕಾದುದು ಅತ್ತೆಸೊಸೆಯರ ವಿಚಾರವಲ್ಲವೆ? ಆಗಲಿ, ನಿಜವಾಗಿ ಅತ್ತೆಸೊಸೆಯರಿಗೆ ನಡೆದ ಕಲಹವನ್ನು ನೋಡಿ ಕವಿಹೃದಯವು ಹೇಗೆ ಪರಿಹಾಸಮಾಡಿ ಎಚ್ಚರಿಸಿರುವುದೆಂಬದನ್ನು ವಿಚಾರ ಮಾಡುವ (ಮೊದಲು ಅತ್ತೆಯು ತನ್ನ ಸೊಸೆಯ ಮೇಲೆ ಹೇಳುವ ದೂರನ್ನು ಕೇಳಿರಿ. ಅದರಿಂದಲಾದರೂ ತಿಳಿದೆಚ್ಚರಗೊಳ್ಳಿರಿ )

ರಾಗ॥ (ನಲಿದಾಡೆನ್ನ ನಾಲಿಗೆ ಮೇಲೆ)

* ನೀಸಲಾರೆನು ಈ ಸೊಸೆಯೊಡನೆ-ನೀ ಕೇಳು ನೀರೆ ॥ಪ॥
ಈ ಸೊಸೆಯಾದರೆ ವಾಸಿಯೆಂದು ನಾನಾಶಿಮಾಡಲು ರಕ್ಕಸಿಯಾ-
ಗಿಹಳಲ್ಲೆ ॥ಅ॥

ಬೆಳಗಾಗಿ ಜಾವ ಹೊತ್ತಾಯ್ತಲ್ಲೆ-ಗಂಡನ್ನ ಬಿಡದೆ-ಕಳೆದಪ್ಪಿಕೊಂಡು ಮಲಗಿಹಳಲ್ಲೆ ।

ಕಸಮುಸುರೆ--ಕೆಲಸವ ನಾನೆ ಮಾಡಿದೆನಲ್ಲೆ ॥ ಬಳೆಗಲಿರೆಂಬುವ ಲಲಿತವ ಕೇಳಿ, ಗಳಿಲನೆ ಬಾಗಿಲ ಬಳಿಯಲಿ ನಿಂದು , ಎಲೆ, ಬೆಳಗಾಯಿತು ಏಳೇಳೆಂದರೆ ಚಲಿಸದೆ ಚಲದಿಂ ಬಲಿದಿಹಳಲ್ಲೆ॥ನೀಸ॥೧॥
ಎದ್ದರೆ ಕೆಲಸಕೆ ಬಗ್ಗುವವಳಲ್ಲ-ಕನ್ನಡಿಯ ನೋಡಿ-ತಿದ್ದಿ ಮುಂಗುರುಳನು ತಿರಿವಳು ಹಲ್ಲು ಸಾರಿಸಿ ಗುಡಿಸು-ತ್ತಿದ್ದರು ನೋಡಿಮಣಿವವಳಲ್ಲ ॥ ಹೊದ್ದಿದ ನೆರೆಮನೆ ಮೂಗ್ದೆಯರಾರತಿ ವೃದ್ಧ ಕಲಹದ ಸುದ್ದಿಯು ಕೇಳುತ ಮುದ್ದಿನ ಬಾಲಕರಿದ್ದೆಡೆಗಾಗಿ ।ಹೊದ್ದಿ ಬೀದಿಯೊಳು ನಿಂದಿಹಳಲ್ಲೆ ॥ ನೀಸ ॥೨॥

---

* ಈ ಪದವನ್ನು ರಚಿಸಿದವರು ನಂದಿನಿಯ ೭ನೆ ಸಂಚಿಕೆಯಲ್ಲಿ ಉಲ್ಲೇಖಿತರಾಗಿರುವ ದಿವಂಗತ ಸರಗೂರು ವೆಂಕಟವರದಾಚಾರ್ಯರು ಇವರು ವಿಶ್ರಾಂತಿಯಲ್ಲಿರುವಾಗ ನೆರೆಮನೆಯಲ್ಲಿ ನಡೆದ ಅತ್ತೆಸೊಸೆಯರ ಜಗಳವನ್ನು ನೋಡಿ ಅದನ್ನು ಹಾಡಿ ಹೇಳುವಂತೆ ಈ ಪದವನ್ನು ಮಾಡಿದರೆಂದು ಕೇಳಿ ತಿಳಿದಿರುವೆವು (ಸಂ.ನಂ.)

ಅಡಿಗೆಯ ಮಾಡು ನೀನೆಂದೆನಲು–ಅಯ್ಯಯ್ಯೋ ಎನಗೆ-ಅಡಿಹೊಟ್ಟೆನೋವು ಘನವೆಂಬುವಳು । ನೊರೆ ಹಾಲು ಸಕ್ಕರೆ-ಕುಡಿಯ ಕೊಟ್ಟರೆ ಲೇಸೆನ್ನುವಳು ॥ ಅಡಿಗೆಯ ಮಾಡಲು ಸಿಡಿಮಿಡಿಗುಟ್ಟುತ । ಗಡಿಗೆಮಡಿಕೆಯ ಒಡೆದೊಡೆದೆಸೆಯುತ । ತಡೆಭಿಡೆಯಿಲ್ಲದೆ ಜಗಳವನಾಡುತ-ಕಡೆಗೆ ಯನ್ನನೆ ಕೆಡನುಡಿಯುವಳಮ್ಮ ॥ ನೀಸ ॥೩॥

ಎಂಟು ದಿನಕೆರಡು ಮೀಯೆನೋಣವಮ್ಮ-ಮಿಂದರೆ ಎರ-ಡೆಂಟು ಸೊಲಿಗೆಣ್ಣೆ ಸುರಿಯುವಳಮ್ಮ—ಉಂಡರೆ ತನ್ನ-ಗಂಟಲ ಮೀರಿ ನುಂಗುವಳಮ್ಮ ॥ *........ ........ . ತಂಟಲ ಮಾರಿಯ ತುಂಟುತನವು ಇನ್ನುಂಟೋ ಲೋಕದಿ ಕಂಟಕಿಯಮ್ಮ ।ನೀಸ॥೪ ಇರುಳು ಹಗಲೆಲ್ಲ ಮಂಚದ ಮೇಲೆ ... ................... . ...... .. . .. . ..... .. ...... ..... ......... ..... ..... . . . .. ....§ ಪರಿಯಲಿ ದೇಹವು ಕರಿಗಿತು ಮಗಸಿಗೆ । ದುರುಳೆಯ ಕೊಟ್ಟೆನು ಮುರಿವರೆ ಪುಲಿಗಿರಿ, ವರದ ವಿಠಲನೇ ಸರಿ ಕಾಣಮ್ಮ ॥ ನೀಸ ॥ ೫ ॥

-

(ಇನ್ನು ಸೊಸೆಯು ಅತ್ತೆಯ ಮೇಲಿನ ದೂರನ್ನು ಹೇಳುವುದು)

( ಹಳೆಯ ಮಟ್ಟು )

ಕೇಳಕೇಳಿರೆ ಸಮ ಪಾಳಿಯಾದವರೆನ್ನ ಹಾಳಿಸಿಕೊಂಬುವ ಚಾಳಿಯನು ॥ ಪ ॥

ಕತ್ತೆಯಂದದಿ ತಿಂದು ಮತ್ತೆ ದೂರುವಳೆನ್ನತ್ತೆಯಲ್ಲವೆ ಅಪಮೃತ್ಯು ಕಾಣಮ್ಮ ॥ ೧ ॥

ಹೊದ್ದಲೀಸಳು ಗಂಡ ನಿದ್ದೆದೆಗಾಗಿ ಮುದಿಹದ್ದಿನಂದದಿ ಕಾವಲಿದ್ದಿರ್ಪಳಮ್ಮ ॥ ೨ ॥

---

* ಈ ಚರಣವು ಬಿಟ್ಟುಹೋಗಿದೆ ನಮಗೆ ದೊರೆಕಿಲ್ಲ.—

§ ಈ ಚರಣಗಳು ಪ್ರಕಾಶಕ್ಕೆ ಯೋಗ್ಯವಲ್ಲವೆಂದು ಇಲ್ಲಿ ಕೊಡದೆ ಬಿಟ್ಟಿದೆ

ಉಪ್ಪು ಉಪ್ಪಿನಕಾಯಿ-ಹಪ್ಪಳ ಸಂಡಿಗೆ ಒಪ್ಪದಿಂದಲೆ ಅವಳಿಗೊ
ಪ್ಪಿಪರ್ವಮ್ಮ ॥ ೩ ॥

ಜಗಳದ ನೆವನಿಂದ-ಮಗಳ ಮನೆಗೆ, ವಸ್ತ್ರಗಳ ಸಾಗಿಸಿಕೊಂಬ-
ರಗಳೆ ಕಾಣಮ್ಮ ॥೪॥

ಮುಟ್ಟಾಗಿರೆ ನಾ ಬಲು ಗುಟ್ಟಾಗಿ ಕಜ್ಜಾಯ । ವಟ್ಟಿ ಮಗಳಮನೆ
ಗಟ್ಟುವಳಮ್ಮ ॥೫॥

ಊಟಕ್ಕೆ ಕುಳಿತರೆ-ಕಾಟಕಿಯುಂದದಿ-ಬೂಟಕ ಜಗಳಕೆ ನಾಟಿರ್ಪ
ಳಮ್ಮ ॥೬॥

ಮೂರು ದಿನಕೆ ಒಂದು ಬಾರಿಯು ತಪ್ಪದೆ । ನಾರಿಗೆ ಮಜ್ಜನವಾಂ
ಕಾಣಮ್ಮ ॥೭॥

ಅತ್ತೆಯು ಎಂದಿಗೆ ಸತ್ತಾಳೊ ಎನ್ನುತ ನೆತ್ತಿಗೆ ನೆಲ್ಲಿಪಾಲನೊತ್ತು
ಪಿಸವಮ್ಮ ॥೮॥

ಅತ್ತೆಯು ಸತ್ತರೆ ಚಿತ್ತಲಸಿಂದುರಿ — ಬತ್ತಿ ಸೇವೆಯಮಾಳ್ಪೆ — ಭಕ್ತಿ
ಯೊಳಮ್ಮ ॥೯॥

ಧರೆಯೊಳುತ್ತಮ-ಪುಲಿ, ಗಿರಿಯೊಳು ನೆಲಸಿದ ವರದ ವಿಠಲನೇ-
ವರವೀಯಲಮ್ಮ ॥೧೦॥

೧೯೧೭ ನೇ | ಕರ್ನಾಟಕ ವಂದಿನೀ | ಪಿಂಗಳ ಸಂ

ಜೂಲೈ | (ಸಂಪುಟ ೧ ಸಂಚಿಕೆ ೧೦) | ಆಷಾಢ



ಸತತೋದ್ಯಮಶೀಲರೂ ದೇಶಭಕ್ತರೂ ಆಗಿರುವ

ಶ್ರೀಯುತ ಎಚ್ ನಾರಾಯಣರಾಯರು

ಎಮ್ ಎ, ಎಫ್ ಜಿ ಎಸ್,

ಎಫ್ ಎಮ್ ಯು ಅವರು

ಕನ್ನಡ ರನ್ನಗನ್ನಡಿ, ಮಣಿ ೩.

|| ಶ್ರೀ ||

वन्देत्वां भूदेवि आर्यमातरम् ·

ಸ್ತ್ರೀಸಮಾಜದ ಸೌಜನ್ಯಾಭಿವೃದ್ಧಿಗಾಗಿ ಸ್ತ್ರೀಯರಿಂದಲೇ
ಪ್ರಕಟವಾಗುವ

ಕರ್ಣಾಟಕ

# ನಂದಿನಿ

( ಮಾಸಪತ್ರಿಕೆ )

---

" ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂ ತ್ವಂ ಚ ಯುಪ್ರಭು ।
ದುಸ್ಸಾಸ್ತ್ರಿ ಮಮುಯೋಚಾನ್ಯೇಹ್ಯದೃಷ್ಟ ಪಥಿ ಗೋಚರಃ ||"

---

ಸಂಪುಟ ೧ } ಪಿಂಗಳ ಆಷಾಢ ೧೮೩೯ (೧೯೧೭ ಜೂಲೈ) { ಸಂಚಿಕೆ ೧೦

---

## ಪ್ರಾರ್ಥನೆ

ರಾಗ — ( ಶ್ರೀ ಚಕ್ರವಾಕ )

ಪಾಲಿಸೈ ಶ್ರೀಧರ—ಬಾಲಾರ್ಕ ಭಾಸುರ ||ಪಲ್ಲ||
ಧರಚಕ್ರ ಭೂಷಿತ-ಸುರರಾಜ ಪೋಷಿತ-ಕರಿರಾಜವಂದಿತ ||೧||
ನತತಾಪಹಾರಕ ಪ್ರತಿಜಾ ವಿಮೋಚಕ-ಶತಮಂಗಳಾತ್ಮಕ ||೨||
ಕೃಷ್ಣೇಂದ್ರ ಭೂಪನ ಇಷ್ಟಾರ್ಥವೆಲ್ಲವಂ - ಕೊಟ್ಟು ನೀಂ
ಸಂತತಂ ||೩||

( ಶಿವಂಗಿ ವೆಂಕಟವರದಾಚಾರ್ಯಕೃತ
ತುಳಸೀ ಕಲ್ಯಾಣ ನಾಟಕದಿಂದ ಉದ್ಧೃತ )

# ವಂದನಾಪೂರ್ವಕ ಸ್ವೀಕಾರ

(ಈ ಮುಂದೆ ವಿವರಿಸುವ ಪುಸ್ತಕಗಳೂ ಪತ್ರಿಕೆಗಳೂ ನಮ್ಮ ನಂದಿನೀ ಮಾತೃಮಂದಿರದ ಭಾಂಡಾಗಾರವನ್ನು ಅಲಂಕರಿಸಲು ಬಂದಿರುವವು ಇವುಗಳನ್ನು ನಾವು ವಂದನಾಪೂರ್ವಕ ಸ್ವೀಕಾರಮಾಡುವೆವಲ್ಲದೆ ಇವುಗಳನ್ನು ಕಳುಹಿಕೊಟ್ಟ ನಮ್ಮ ಧರ್ಮಭ್ರಾತೃಗಳಾದ ಆ ಆ ಗ್ರಂಥಕರ್ತರಿಗೂ ಪತ್ರಸಂಪಾದಕರಿಗೂ ಈ ಮೂಲಕ ನಮ್ಮ ಕೃತಜ್ಞತಾಪೂರ್ವಕ ಧನ್ಯವಾದಗಳನ್ನರ್ಪಿಸುವೆವು ಮತ್ತು ಮುಂದೆ ಅವಕಾಶವಾದಂತೆ ಇವುಗಳ ಅಭಿಪ್ರಾಯವನ್ನು ಪ್ರಕಟಿಸಬೇಕೆಂದಿರುವೆವು (ಸಂ ನಂ)

ಶ್ರೀಯುತ್ ಆರ್. ತಾತಾಚಾರ್ಯ ಎಂ ಎ ಎಲ್ ಟಿ. ಪ್ರೊಫೆಸರ ಟೀಚರ್ಸ ಕಾಲೇಜು, ರಾಜಮಹೇಂದ್ರಿ ಇವರಿಂದ ಪ್ರೇಷಿತವಾದುದು

೧ ಉದ್ದಾಯನ ಚರಿತೆ— ("ಶ್ರೀಕೃಷ್ಣ ಸೂಕ್ತಿ"ಯ ಮುಕ್ತಾವಳಿ ಮಣಿ ೭ ಬೆಲೆ ೦-೨-೦ ಲಲಿತಬಂಧ ರಂಜಿತವಾದ ೧೧೩ ಭಾಮಿನಿಷಟ್ಪದಿಗಳನ್ನೊಳಕೊಂಡಿರುವುದು

ಶ್ರೀ ಪಂಡಿತರು ಕೆ ರಾಜಗೋಪಾಲ ಚಕ್ರವರ್ತಿ ಸರಳ ಕವಿಸೂರಿ ಮೈಸೂರ ವಿದ್ಯಾಖಾತೆಯ ಆ ಟ್ರಾ ಬೆಂಗಳೂರ ಅವರಿಂದ ಪ್ರೇಷಿತವಾದವು

೨ ಶೈವಲಿನಿ— (ದೇವನಾಗರಿಲಿಪಿಯಲ್ಲಿ ಶುದ್ಧ ಲಲಿತಶೈಲಿಯಿಂದ ಬರೆಯಲ್ಪಟ್ಟ ಕಾದಂಬರಿ ಬೆಲೆ ತಿಳಿಸಿಲ್ಲ)

೩ ಪದ್ಯಹರ್ಷಚರಿತ— (ಇದೂ ಮೇಲಿನಂತೆಯೇ ಸಂಸ್ಕೃತವಾಣಿಯಿಂದ ಆರ್ಯಾರೂಪದಲ್ಲಿ ವಿರಚಿತವಾಗಿರುವ ಗ್ರಂಥ ಇದಕ್ಕೂ ಬೆಲೆ ತಿಳಿಸಿಲ್ಲ)

೪ ಸ್ಮೃತಿರತ್ನಾಕರ— (ಅತ್ರಿಸ್ಮೃತಿ-ಲಿಖಿತಸ್ಮೃತಿ)— (ಸಂಸ್ಕೃತದಿಂದ ತಿಳಿಗನ್ನಡ ನುಡಿಗೆ ಪರಿವರ್ತಿಸಲ್ಪಟ್ಟ ಶಾಸ್ತ್ರಸಂಬಂಧವಾದ ಉತ್ತಮ ತರದ ವಚನಗ್ರಂಥ ಬೆಲೆ ೦-೮-೦

೫ ಲಕ್ಷ್ಮೀರಾಣಿ— (ಶ್ರೀಯುಕ್ತ ರಾಜಮಂತ್ರಪ್ರವೀಣ ದಿವಾನಬಹಾದ್ದೂರ ಟಿ. ಎಸ್ ಚಕ್ರವರ್ತಿ ಎಂ ಏ ಎಫ ಆರ ಏ ಎಸ್ ಫೈನಾನ್ಸಿಯಲ್ ಸೆಕ್ರೆಟರಿ ಬೆಂಗಳೂರು (ಮೈಸೂರ) ಅವರಿಂದ ರಚಿತವಾದ ವಂಗಭಾಷೆಯ ನಾಟಕದಿಂದ ಕನ್ನಡಕ್ಕೆ ಪರಿವರ್ತಿತವಾಗಿದೆ ಇದಕ್ಕೂ ಬೆಲೆ ತಿಳಿಸಿಲ್ಲ )

೬ ಚಿತ್ರಚರಿತ್ರ- (' ಭಾರತೀ ವಿಲಾಸ' ಗ್ರಂಥಮಾಲಾ ನಂ, ೪ ಬೆಲೆತಿಳಿಸಿಲ್ಲ)

೭ ಸುಮನೋರಮಾ-(ಕಾದಂಬರೀಸಂಗ್ರಹ ಗ್ರ ಮಾಲಾ ನಂ. ೭ ಬೆಲೆ ೦-[illegible]-೦

೮ ಹರಿಣಾಕ್ಷಿ- (ಕಾದಂಬರೀಸಂಗ್ರಹ ಗ್ರ ಮಾಲಾ ನಂ ೧೬ ಬೆಲೆ ೦-೧-೦)

ಶ್ರೀಯುಕ್ತ ಬಿ. ವೆಂಕಟರಮಣಪ್ಪನವರು ಎಂ ಏ ಸೆಕ್ರೆಟರಿ ವಿಜ್ಞಾನಪ್ರಸಾರಿಣಿ ಸಮಿತಿ, ಬಸವನಗುಡಿ, ಬೆಂಗಳೂರ ಇವರ ಕಡೆಯಿಂದ—

ವಿಜ್ಞಾನ- (ಮಾಸಪತ್ರಿಕೆ) (ಸಂಪುಟ ೧ ಸಂಚಿಕೆ ೨-೫ ಜ್ಯೇಷ್ಠದಿಂದ ಶ್ರಾವಣದ ವರೆಗೆ) ವಾರ್ಷಿಕ ಚಂದಾ ೩-೦-೦ (ಇದರ ವಿಷಯಕವಾದ ನಮ್ಮ ಅಭಿಪ್ರಾಯವನ್ನು ನಂದಿನಿಯ ಹಿಂಗಳ ಚೈತ್ರದ ಸಂಚಿಕೆಯಲ್ಲಿ ಪ್ರಕಟಿಸಿರುವೆವು ಸಂ ನಂ )

ಶ್ರೀ

# ದೇಶೋನ್ನತಿ

—— ✻ ——

( ಆರನ ಸಂಚಿಕೆಯಿಂದ ಮುಂದೆ ಸಾಗಿದುದು )

## III

**ದೇಶದೇಳಿಗೆಗೆ ಮೂಲಭೂತರಾದ ಪ್ರಿಯ ಭಗಿನಿಯರೇ!**

ಸಂಪದಭ್ಯುದಯ ಸಮಾಜದವರು ದೇಶೋನ್ನತಿಗೆಂದು ಶ್ರಮಪಡುತ್ತಿರುವುದು ಎಲ್ಲರಿಗೂ ತಿಳಿದೇ ಇರುವದು ಇಲ್ಲಿ ಸಂಪತ್ತೆಂದರೆ ಭಾಗ್ಯವೆಂದು ಹೇಳಬೇಕಾಗಿಲ್ಲ ಭಾಗ್ಯವೆಂಬ ಹೆಸರುಳ್ಳವುಗಳಲ್ಲಿ ಆರೋಗ್ಯಭಾಗ್ಯವೇ ಮೊದಲನೆಯದಾಗಿದೆ. ಆರೋಗ್ಯವು ದೇಹ-ಮನಸ್ಸು ಮತ್ತು ಇಂದ್ರಿಯಗಳು ಇವು ಮೂರನ್ನು ಒಳಗೊಂಡಿದೆ

ದೇಹಾರೋಗ್ಯವೆಂದರೆ ರೋಗಸಂಬಂಧವಾದ ಉಪಾಧಿಗೆ ಅವಕಾಶ ಸಿಕ್ಕದಂತೆ ಆಹಾರ-ನಿದ್ರಾ ವ್ಯಾಯಾಮಗಳಲ್ಲಿ ನಿಯಮದಿಂದ ವರ್ತಿಸಬೇಕು ಮನಸ್ಸಿನ ಆರೋಗ್ಯಕ್ಕೆ ಆಶಾ-ಕ್ರೋಧ-ಮೋಹಗಳಿಗೆ ಬೀಳದಂತೆ ಇರಬೇಕು ಇಂದ್ರಿಯಗಳ ಆರೋಗ್ಯಕ್ಕೆ, ಕಾಲಾಕಾಲ-ಪಾತ್ರಾಪಾತ್ರ ಭಕ್ಷ್ಯಾಭಕ್ಷ್ಯ-ಪೇಯಾಪೇಯಗಳನ್ನು ತಿಳಿದು, ಇಂದ್ರಿಯ ತೃಪ್ತಿಯೇ ಎಲ್ಲಾ ಸುಖಕ್ಕೂ ಕಾರಣವೆಂಬ ಭಾವನೆಯನ್ನು ಬಿಟ್ಟು ಇರಬೇಕು. ಸ್ತ್ರೀವರ್ಗಕ್ಕೆ ಸೇರಿದವರು ಇವು ಮೂರನ್ನು ಭದ್ರಪಡಿಸಿಟ್ಟರೆ ಪುರುಷವರ್ಗಕ್ಕೆ ಸೇರಿದವರನ್ನು ಎಚ್ಚರಿಸಬಹುದು. ಬಾಲ್ಯವಯಸ್ಸಿನ ಬಾಲಕ-ಬಾಲಿಕೆಯರನ್ನು ಪ್ರಾರಂಭದಿಂದಲೂ ಸನ್ಮಾರ್ಗದಲ್ಲಿಯೇ ಇರಿಸಬಹುದು. “ ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ ” ಎಂದು ಮಹನೀಯರೇ ಹೇಳುವರು. ಇಂದ್ರಿಯತೃಪ್ತಿಗೆ ಉಪಯೋಗಕರವಾದ ವಸ್ತುಗಳು ಸಮೀ

ಪದಲ್ಲಿದ್ದರೆ ವಿದ್ವಾಂಸನನ್ನಾದರೂ ಎಳೆಯದೆ ಬಿಡುವದಿಲ್ಲ ಸ್ತ್ರೀ ವ್ಯಕ್ತಿಯು ಬೆಂಕಿಯ ಕುಂಡವೆಂದೂ ಪುರುಷಹೃದಯವು ತುಪ್ಪದ ಹರಿವೆಯೆಂದೂ ಮಹನೀಯರು ಉದಹರಿಸುತ್ತಾರೆ ಈ ದೃಷ್ಟಾಂತದಿಂದ ತಡೆಯುವ ಶಕ್ತಿಯು ಪುರುಷವರ್ಗದವರಲ್ಲಿ ಹುಟ್ಟುವದೆಂಬುದು ವಿರಳವಾಗಿದೆ ಅಗ್ನಿಕುಂಡ ಸ್ವರೂಪಿಣಿಯರಾದ ಸ್ತ್ರೀವರ್ಗದವರು ಜಿತಮನಸ್ಕರಾದರೆ ಹರಿದುಹೋದ ಮನಸ್ಸುಳ್ಳ ಪುರುಷರನ್ನಾದರೂ ತಡೆದು ಕರ್ತವ್ಯಜ್ಞಾನವುಳ್ಳವರನ್ನಾಗಿ ಮಾಡಬಹುದು ಸ್ತ್ರೀ ವರ್ಗದವರು ಜಿತಮನಸ್ಕರಾಗದಿದ್ದರೆ ಅನರ್ಥವೇ ಸಂಭವಿಸುವುದು ಸ್ತ್ರೀವರ್ಗದವರು ಜಿತಮನಸ್ಕರಾಗಿ ತಮ್ಮ ದೇಹ ಮತ್ತು ಇಂದ್ರಿಯಗಳನ್ನು ವ್ಯಾಧಿಗೆ ಅವಕಾಶದೊರಕದಂತೆ ಕಾಪಾಡುವವರಾದರೆ ಪುರುಷವರ್ಗದವರು ರೋಗವಿಲ್ಲದ ದೃಢಕಾಯರೇ ಆಗುವರು

ವೃದ್ಧಿಗೆ ಬರುವುದಕ್ಕೆ ಕ್ಷೇತ್ರವು ಉತ್ತಮವಾಗಿರಬೇಕೆಂದೇ ಮಹನೀಯರು ಹೇಳುವರು ಮಹನೀಯರಲ್ಲೊಬ್ಬನಾದ ವಿಶಾಖದತ್ತನು "ಚೀಯತೇ ಬಾಲಿಶಸ್ಯಾಪಿ ಸುಕ್ಷೇತ್ರಪತಿತಾಕೃಷಿ । ನಶಾಲೇಸ್ತಂಬಕರಿತಾ ವಪ್ತುರ್ಗುಣಮಪೇಕ್ಷತೇ ॥" ಎಂದು ಹೇಳಿರುತ್ತಾನೆ ಕ್ಷೇತ್ರವು ಉತ್ತಮವಾಗಿದ್ದರೆ ವೃದ್ಧಿಯಾಗುವದೆಂದು ಹೇಳಬಹುದು ಆದರೆ ದೃಷ್ಟಾಂತದಲ್ಲಿ ಬೀಜವು ಚೆನ್ನಾಗಿ ಬಲಿತು ಇದ್ದರೆ ಅದರಿಂದ ಹುಟ್ಟುವ ಮೊಳಕೆಯು ದೊಡ್ಡ ಗಿಡವೊ-ಮರವೂ ಆಗಿ ಪುಷ್ಪಫಲಭರಿತವಾಗುತ್ತದೆ ಬೀಜವು ಎಡತರದದಾಗಿದ್ದರೆ ಮೊಳೆತನಂತರ ಸ್ವಲ್ಪಾವಕಾಶದಲ್ಲಿ ನಾಶವಾಗುತ್ತದೆ ಬೀಜವು ಎಳೆಯದಾದರೆ ಮೊಳಕೆಯಲ್ಲಿಯೇ ಸೀದು ಹೋಗುತ್ತದೆ ಇದರಂತೆ ಕ್ಷೇತ್ರದಲ್ಲಿಯೂ ವ್ಯತ್ಯಸ್ತವುಂಟು ಕ್ಷೇತ್ರವು ಅತ್ಯಂತ ಕರಳು-ಜೋಗು ಆಗಿದ್ದರೆ ಎಷ್ಟೇ ಉತ್ತಮ ತರದ ಬೀಜವಾದರೂ ವ್ಯರ್ಥವೇ ಆಗುತ್ತದೆ. ಈ ರೀತಿ ಬೀಜಕ್ಕೂ ಕ್ಷೇತ್ರಕ್ಕೂ ಪರಸ್ಪರ (ಒಂದಕ್ಕೊಂದು) ಆಶ್ರಯ ಆಶ್ರಿತಭಾವವಿರುತ್ತದೆ ಆದುದರಿಂದ ಎರಡೂ ಉತ್ತಮತರದುದಾದರೆ ಉನ್ನತಿಗೆ ಬರುವುದರಲ್ಲಿ ಅನುಮಾನವಿಲ್ಲ

ದೇಶದ ಅಭಿವೃದ್ಧಿಗೆ ಪ್ರಜಾವೃದ್ಧಿ ಮುಖ್ಯವಾದುದು ಪುರುಷ ವರ್ಗವು ಬೀಜಪ್ರಾಯವಾಗಿಯೂ ಸ್ತ್ರೀವರ್ಗವು ಕ್ಷೇತ್ರಪ್ರಾಯವಾಗಿಯೂ ಒಂದಕ್ಕೊಂದು ಆಶ್ರಯ-ಆಶ್ರಿತ ಭಾವದಿಂದ ಉತ್ತಮ ಸ್ಥಿತಿಯನ್ನು ಹೊಂದಬೇಕು

ಬೀಜವು ಉತ್ತಮವೆಂಬುವದಕ್ಕೆ ಕಾಲಮಾತ್ರವೆ ನಿಯಮವಲ್ಲ ರೋಗಾದಿಗಳು ಸ್ಥಾವರಪ್ರಾಣಿಗಳಿಗೂ ಇದ್ದೇ ಇರುವವು ರೋಗಾದ್ಯುಪದ್ರವಕ್ಕೆ ತಗಲದೆ ನಿಯಮಿತ ಕಾಲದ ವರೆಗೆ ಸಸ್ಯಲತಾ ವೃಕ್ಷಗಳಲ್ಲಿದ್ದರೆ ಮಾತ್ರವೆ ಬೀಜವು ಉತ್ತಮವಾಗುವುದು ಸುಕ್ಷೇತ್ರವೆಂಬುದಕ್ಕೆ ವರ್ಣಮಾತ್ರವೆ ಸಾಲದು ಸಸ್ಯಾದಿಗಳನ್ನು ನಾಶಮಾಡುವ ಗುಣವುಳ್ಳ ದುಷ್ಟಬೀಜ ಸಂಸರ್ಗವಿಲ್ಲದೆ, ಕರ್ಷಣಾದಿಗಳಿಂದ ಪರಿಷ್ಕರಿಸಲ್ಪಟ್ಟದ್ದಾಗಿದ್ದರೆ ಸುಕ್ಷೇತ್ರವೆನಿಸುವುದು ಹೀಗೆಂದ ಮೇಲೆ ಮನುಷ್ಯವರ್ಗಕ್ಕೆ ಸೇರಿದ ಬೀಜ ಮತ್ತು ಕ್ಷೇತ್ರವು ಉತ್ತಮವಾದುವುಗಳಾಗಿಯೇ ಇರಬೇಡವೆ? ಕ್ಷೇತ್ರವೆಂದರೆ ಭೂಮಿಯೆಂದು ಬೇರೆ ಹೇಳಬೇಕಾಗಿಲ್ಲ ಕ್ಷೇತ್ರದಲ್ಲಿ (ಭೂಮಿಯಲ್ಲಿ) ಇರುವ ಎಲ್ಲಾ ಗುಣಗಳೂ ಸ್ತ್ರೀವರ್ಗದಲ್ಲಿರಬೇಕಲ್ಲವೆ ಎನ್ನುವಿರಿ? ಸಹಜ ಸಮಸ್ತಪ್ರಾಣಿಗೂ ಆಶ್ರಯವಸ್ತುವಾಗಿಯೂ ಮಹಚ್ಛಬ್ದ ವಾಚ್ಯನಾದ ಪರಮಾತ್ಮ ಅಥವಾ ಜಲಕ್ಕೆ ಆಶ್ರಿತವಸ್ತುವಾಗಿಯೂ ಸಮಸ್ತ ಪ್ರಾಣಿಗಳೂ ಬಿಡುವ ಮಲ ಮೂತ್ರಾದಿಗಳಿಗೆ ಅಸಹ್ಯವಿಲ್ಲದೆ ತನ್ನಲ್ಲಿಯೇ ಅಡಗಿಸಿಕೊಂಡು ಕರ್ಷಣಾದಿ(ಉಳುವುದೇ ಮೊದಲಾದುದು)ಗಳನ್ನು ಸಹಿಸಿ ತನ್ನಲ್ಲಿ ಬೀಳುವ ಬೀಜಗಳು ಮೊಳಕೆಯಾಗಿ ಸಸ್ಯವೂ ಲತೆಗಳೂ ಮತ್ತು ವೃಕ್ಷಗಳೂ ಆಗಿ ಪ್ರಪಂಚದಲ್ಲಿರುವ ಪ್ರಾಣಿಗಳಿಗೆ ವಾಸಕ್ಕೂ ಜೀವನಕ್ಕೂ ಆಧಾರವಸ್ತುವಾಗುವಂತೆ ಮಾಡುವುದು ಭೂಮಿಯಹುದಲ್ಲವೆ? ಸ್ತ್ರೀವರ್ಗಕ್ಕೆ ಸೇರಿದ ನಮ್ಮ ಭಗಿನಿಯರು ತಮ್ಮ ಪೋಷ್ಯವರ್ಗಕ್ಕೆ ಸೇರಿದ ಶಿಶುಗಳ ಮಲಮೂತ್ರಾದಿಗಳಲ್ಲಿ ಅಸಹ್ಯ ಭಾವವನ್ನು ತೋರಿಸದೆ ಮತ್ತೊಬ್ಬರ ದೃಷ್ಟಿಪಥಕ್ಕೆ(ಕಣ್ಣನೋಟಕ್ಕೆ) ಬೀಳದಂತೆ ಅನಿಮಿಷವೇ ಅದನ್ನು ಅಡಗಿಸುವರಲ್ಲವೆ? ತಮ್ಮಲ್ಲಿ ಬೀ

ಳುವ ಬೀಜವನ್ನು ಯಥಾಯೋಗ್ಯವಾಗಿ ಧಾರಣಮಾಡಿ ಅದು ಮೊಳೆತು ಲೋಕೋಪಕಾರ ವಸ್ತುವಾಗುವಂತೆ ಮಾಡುವರಲ್ಲವೆ? ಅವರೇ ಪೋಷ್ಯವರ್ಗಕ್ಕೆ ಸೇರಿದವರೆಲ್ಲರಿಗೂ ಆಶ್ರಯಭೂತರಾಗಿದ್ದರೂ, ಭರ್ತೃನಾಮಕ ಪತಿಯಲ್ಲಿ ಆಶ್ರಿತರಾಗಿರುವರಲ್ಲವೆ? ಈ ರೀತಿ ಮೂಲಾಧಾರ ರೂಪಿಣಿಯರಾದ ಭಾಮಿನಿಯರನ್ನು ಸರ್ವಂಸಹಾ-ಕ್ಷಮಾ-ಧರಿತ್ರೀ-ಇತ್ಯಾದಿ ಪೂಜ್ಯನಾಮದಿಂದ ಕರೆಯುವದಕ್ಕೆ ತಡೆಯೇನಿದೆ? ಭೂಮಿ ಕಾರಣಾಂತರದಿಂದ ನಡುಗಿದರೆ-ಬಾಯಿಬಿಟ್ಟರೆ-ಹೇಗೆ ಪ್ರಪಂಚವೇ ಅಲ್ಲಕಲ್ಲೋಲವಾಗುತ್ತದೆಯೋ ಹಾಗೆಯೇ ಸ್ತ್ರೀವರ್ಗದವರು ದುಷ್ಪ್ರೇರಣೆಯಿಂದ ಕೋಪಿಸಿದರೆ ಸಂಸಾರವೇ ನಷ್ಟವಾಗುವುದರಲ್ಲಿ ಅಡ್ಡಿಯಿಲ್ಲ ಏಕೆ ಕುಲವೇ ನಾಶವಾಗುವುದೆಂದು ಕೂಡ ಹೇಳಬಹುದು

ಧರ್ಮಸೋದರಿಯರೇ! ತಾಯಂದಿರಾ! ಭ್ರಾತೃವರ್ಗೀಯನಾಗಿಯೂ ವೃದ್ಧನಾಗಿಯೂ ಇರುವ ನಾನು ಸ್ವಂತ ಅನುಭವದ ಕೆಲವು ಸಂಗತಿಗಳನ್ನು ನಿಮ್ಮ ಮುಂದಿಡುವೆನು ಸೋದರಿಯರಾದ ನೀವು ನಿಮ್ಮ ಅನುಭವವನ್ನು ಮುಂದಿಟ್ಟು ಸಮಾಲೋಚಿಸಿರಿ ನನ್ನ ಮಾತುಗಳಲ್ಲಿ ದೋಷಗಳಿದ್ದರೆ ತಿಳಿಸಿರಿ ಅತ್ಯಾದರದಿಂದ ತಿದ್ದಿಕೊಳ್ಳುವೆನು- ಏನೆನ್ನುವಿರಿ?—

ಲಜ್ಜೆ (ನಾಚಿಕೆ) ಎಂಬುದು ಮಾನಿನಿಯರಿಗೆ ಸಹಜವಾಗಿ ಹುಟ್ಟುವುದು ದೃಷ್ಟಾಂತಕ್ಕೆಂದರೆ ಅವರು ತಮ್ಮ ಮಕ್ಕಳಲ್ಲಿ ಗಂಡು ಕೂಸಾದರೆ ಕಡೆಯ ಪಕ್ಷ ಅಯ್ದು ವರ್ಷಗಳವರೆಗೆ ಯಾವಾಗಲಾದರೂ ಒಂದೊಂದು ವೇಳೆ ಬಟ್ಟೆಯ ಮರೆಯಿಲ್ಲದೆಯೆ ಬಿಟ್ಟಿರುವರು. ಹೆಣ್ಣು ಕೂಸನ್ನು ಕೇವಲ ಶೈಶವದಿಂದಲೂ-ಬಟ್ಟೆಯ ಮರೆಯಿಲ್ಲದೆ ಹಾಗೆಯೇ ಬಿಡಗೊಡರು ಈ ರೀತಿ ಬಟ್ಟೆಯನ್ನು ದೇಹಕ್ಕೆ ಮರೆ ಮಾಡಿದ ಮಾತ್ರದಿಂದ ಲಜ್ಜೆಯನ್ನು ಕಾಪಾಡಿದಂತೆ ಆಯಿತೆಂದು ಉದಾಸೀನದಲ್ಲಿ ಬಿಡಬಾರದು ಲಜ್ಜಾಸ್ವಭಾವವು, ಅದನ್ನು ಕೊನೆಯವರೆಗೂ (ಆಮರಣಾಂತ) ಕಾಪಾಡಿಕೊಂಡಿರುವುದರಿಂದ ಉಂಟಾಗುವ

ಮಹತ್ವವು ಅದನ್ನು ಮೋಹಾದಿಗಳಿಂದ ತ್ಯಾಗಮಾಡುವುದರಲ್ಲಿ ಸಂಭವಿಸುವ ಅನರ್ಥಗಳು ಬಾಲ್ಯದಿಂದಲೇ ಅವರ ಮನಸ್ಸಿಗೆ ಚೆನ್ನಾಗಿ ಬೋಧೆಯಾಗುವಂತೆ ಬೋಧಿಸಬೇಕು ಇದೇ ಮೊದಲನೆ ಶಿಕ್ಷಣವು ಬುದ್ಧಿ ತಿಳಿಯುತ್ತ ಬಂದಂತೆಲ್ಲಾ ಅವರ ಬಾಯಲ್ಲಿ ತುಚ್ಛ(ಅಲ್ಪ)ವಾದ ಮಾತು-ಬಯ್ಗಳು- ಹೊರಡದಂತೆ ನೋಡಿಕೊಳ್ಳಬೇಕು ಅವರ ಮನಸ್ಸು ಸ್ವಾರ್ಥದಲ್ಲಿ ಮಾತ್ರವೆ ಪ್ರವರ್ತಿಸದೆ ಪರೋಪಕಾರದಲ್ಲಿ ಪ್ರವರ್ತಿಸುವಂತೆ ಸಂಸ್ಕರಿಸಬೇಕು. ಜಾಗ್ರತೆ ಸ್ವಪ್ನ ಸುಷುಪ್ತಿಗಳಲ್ಲಿ ಕೂಡ ಅವರ ಬುದ್ಧಿ, ಗುರುಹಿರಿಯರಲ್ಲಿಯೂ, ದೇವಬ್ರಾಹ್ಮಣರಲ್ಲಿಯೂ ಭಕ್ತಿ ಶ್ರದ್ಧೆಗಳಿಂದ ಕೂಡಿರುವಂತೆ ತಿದ್ದಬೇಕು ಈ ರೀತಿ ಬಾಲ್ಯದಿಂದ ಉತ್ತಮ ಶಿಕ್ಷಣವನ್ನು ಕೊಡುವುದು ದೇಶೋನ್ನತಿಗೆ ಎರಡನೇ ಪಂಥವು

ಬುದ್ಧಿ ಪ್ರಾಚುರ್ಯಕ್ಕೆ ಬಂದಂತೆಲ್ಲಾ ತಮ್ಮ ಮತ ಧರ್ಮವನ್ನೂ ಗೃಹಕೃತ್ಯ (ಮನೆಯಲ್ಲಿ ಮಾಡಬೇಕಾದ ಕೆಲಸಗಳ) ವಿಚಾರವನ್ನೂ ಬೋಧಿಸುತ್ತ ಅವರ ಶಕ್ತಿಗೆ ಅನುಸಾರವಾದ ಕೆಲಸಗಳನ್ನು ಮಾಡಿಸುತ್ತ ಅವರು ಮಾಡುವ ಕೆಲಸಗಳಲ್ಲಿ ಕಾಣಬರುವ ಕುಂದು ಕೊರತೆಗಳಿಗೆ ಕೋಪಗೊಳ್ಳದೆ ಸಹನಭಾವನೆಯಿಂದ ತಿದ್ದಿತೋರಿಸುತ್ತ ಬರುವುದು ಮೂರನೆ ಪಂಥವು

ಜ್ಞಾನಾಂಕುರವಾದಂತೆಲ್ಲ ದೇಶಭಾಷೆ ದೇವಭಾಷೆಗಳ ಅಭ್ಯಾಸವನ್ನು ಮೊದಲು ಮಾಡಿಸಿ ಜ್ಞಾನಾಭಿವೃದ್ಧಿಗೆ ಆಕರಗಳಾದ ಇತಿಹಾಸಗಳನ್ನೂ ಪೂರ್ವಜರ ಚರಿತ್ರಗಳನ್ನೂ ಬೋಧಿಸುತ್ತ ವಿದ್ಯಾವತಿಯರನ್ನಾಗಿಯೂ ದೇಶಭಕ್ತಿ ರಾಜಭಕ್ತಿಯುಳ್ಳವರನ್ನಾಗಿಯೂ ಮಾಡುವದೇ ಪ್ರಧಾನಶಿಕ್ಷಣವು

ಈ ರೀತಿ ಬಾಲ್ಯದಿಂದಲೂ ಸುಶಿಕ್ಷಿತೆಯರಾಗಿ ಬೆಳೆದ ಮಹಿಳೆಯರ ಮನೋವೃತ್ತಿಯು ಯಾವುದೇ ಬಗೆಯ ದುರ್ಭಾವನೆಗೂ ಒಳಪಡುವದಿಲ್ಲ ಹೀಗೆ ಸುಶಿಕ್ಷಿತೆಯರಾದ ಕನ್ಯೆಯರಿಗೆ ವಿವಾಹಯೋ

ಗ್ಯತೆಯು ಬರುತ್ತದೆ. ಇದು ಎಂದರೆ ಈ ಯೋಗ್ಯತೆಯು ಕೇವಲ ವಯಸ್ಸಿನಲ್ಲಿಯೇ ಅಡಕವಾಗುವದಿಲ್ಲ. ೧೨ ವರ್ಷದೊಳಗಾಗಿಯೇ ಉತ್ತಮ ತರಗತಿಗೆ ಬರುವರು. ಹೀಗಿಲ್ಲದವರು ವೃದ್ಧೆಯರಾದರೂ ಮೂರ್ಖಭಾವದಲ್ಲಿಯೇ ಇರುವರು. ಇಂತಹರನು ನೆರೆಯುವರಲ್ಲಿಯೇ ನೋಡುವೆವು. ಈ ರೀತಿ ಸುಶಿಕ್ಷಿತೆಯರಾದ ಕನ್ಯೆಯರಿಗೆ ವಿವಾಹ ವಾಗಬಹುದು. ಮೇಲೆ ಹೇಳಿದಂತೆ ಬೀಜ ಧಾರಣಮಾಡಬೇಕಾದರೆ ಇಂದ್ರಿಯವು ಬಲಪಡಬೇಕು. ಅದು ಪ್ರಾಯಶ ಸ್ತ್ರೀಯರಿಗೆ ೧೬ ವರ್ಷದಲ್ಲಿ ಉಂಟಾಗುತ್ತದೆ. ಆಗಲೇ ಅವರು ಗೃಹಿಣಿಯರಾಗುವ ದಕ್ಕೆ ಅರ್ಹರಾಗುತ್ತಾರೆ. ಅದಕ್ಕೆ ಮೊದಲು ಎಂದರೆ ೧೨ ರಿಂದ ಮೇಲ ೧೬ರ ವರೆಗ ಅವರು ನಿಯಮದಿಂದ ಭರ್ತಾರರ ಮನೋ ಧರ್ಮ—ವೃತ್ತಿಧರ್ಮಗಳನ್ನು ತಿಳಿದು – ಅದಕ್ಕನುಗುಣವಾದ ಆಚ ರಣವನ್ನು ಅಭ್ಯಾಸಿಸಬೇಕಾದುದು ಅಗತ್ಯವಾಗಿದೆ. ಹಾಗೆ ಅಭ್ಯಾ ಸಮಾಡಿದರೆಂದರೆ ಪತಿಮನೋಧರ್ಮಕ್ಕೂ ಸತಿಮನೋಧರ್ಮಕ್ಕೂ ಪರಸ್ಪರ ಸಾಮ್ಯವು ದೃಢವಾಗಿ ಉಂಟಾಗುತ್ತದೆ.

ಮೇಲೆ ಹೇಳಿರುವ ಶಿಕ್ಷಣಭಾಗಗಳಲ್ಲಿ ಒಂದನೆ-ಎರಡನೆ ಮತ್ತು ನಾಲ್ಕನೆ ಅಂತರಗಳು ಪುರುಷವರ್ಗಕ್ಕೂ ಅವಶ್ಯಕವೇ ಸರಿ. ಮತ್ತು ಅವರಿಗೆ ಗೃಹಕೃತ್ಯಗಳ ಅಭ್ಯಾಸಕ್ಕೆ ಬದಲಾಗಿ ಆತ್ಮಾವಲಂಬನೆಗೂ, ದೇಶಸೇವೆಗೂ, ಸಮಾಜ ಹಿತಕ್ಕೂ ಅವಶ್ಯಕಗಳಾದ ಕಲೆಗಳನ್ನು ಅಭ್ಯಾಸಮಾಡಿಸುತ್ತ ಬರಬೇಕು. "ಸಂಗಾತ್ಸಂಜಾಯತೇ ಕಾಮ" ಎಂದು ಗೀತೆಯಲ್ಲಿ ಹೇಳಿರುತ್ತದೆ. ಬಾಲಕರಾಗಲಿ ಬಾಲಿಕೆಯರಾಗಲಿ ಅಶಿಕ್ಷಿತರ ಸಹವಾಸದಲ್ಲಿದ್ದರೆ ಮನೆಯಲ್ಲಿ ಕೊಡುವಸುಶಿಕ್ಷಣವು ಕಾಲಾಂತರದಲ್ಲಿ ಫಲಿಸದೆ ಬಾಯಿಮಾತ್ರದಲ್ಲಿ ನಿಲ್ಲುವ ಸಂಭವವು ಬರಬಹುದು. ಆದುದರಿಂದ ಸರ್ವ ಪ್ರಕಾರದಿಂದಲೂ ಪ್ರಬುದ್ಧರೂ ಜಿತಮನಸ್ಕರೂ ಆಗುವವರೆಗೂ ಬಾಲಕ ಬಾಲಿಕೆಯರು ಅಶಿಕ್ಷಿತರ ಸಂಪರ್ಕದಲ್ಲಿರದಂತೆ ಅವರನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತ

ಬಂದರೆ ಅವರ ಮನಸ್ಸು ಆರೋಗ್ಯಭಾಗ್ಯವನ್ನು ಹೊಂದುವುದು.

ಬಾಲಕ ಬಾಲಿಕೆಯರು ಆಟದಲ್ಲಿಯೂ ತಿಂಡಿಯಲ್ಲಿಯೂ ಊಟದಲ್ಲಿಯೂ ನಿರತರಾಗುವುದು ಸಹಜವಾಗಿದೆ. ತಿಂಡಿಗೂ ಊಟಕ್ಕೂ ಕಾಲವನ್ನು ಗೊತ್ತುಮಾಡಿ, ಮತಕ್ಕೆ ತಕ್ಕಂತೆ ಮಿತವಾಗಿಯೂ ಹಿತಕರವಾಗಿಯೂ ಕೊಡುತ್ತ, ನಿದ್ದೆಗೂ ಆಟಕ್ಕೂ ವ್ಯಾಯಾಮಕ್ಕೂ ತಕ್ಕಷ್ಟು ಅವಕಾಶವನ್ನು ಕಲ್ಪಿಸುತ್ತ ಬಂದರೆ ದೇಹಾರೋಗ್ಯವು ವೃದ್ಧಿಯಾಗುತ್ತದೆ. ಇವು ನಿಯಮದಲ್ಲಿಲ್ಲದಿದ್ದರೆ ಶೈಶವದಲ್ಲಿಯೇ ರೋಗಕ್ಕೆ ಆಕರವಾಗುತ್ತದೆ. ಆದುದರಿಂದ ಈ ವಿಚಾರದಲ್ಲಿ ತಾಯಿಯಾದವಳು ಎಚ್ಚರಿಕೆಯಿಂದ ನೋಡಿಕೊಳ್ಳುತ್ತ ಮಕ್ಕಳ ದೇಹಾರೋಗ್ಯವನ್ನು ಕಾಪಾಡಿಕೊಂಡು ಬರಬೇಕಾದುದು ಅತ್ಯಗತ್ಯವಾಗಿರುತ್ತದೆ.

ಇಂದ್ರಿಯ ಚಾಪಲ್ಯವು ಪ್ರಾಯದ ಪ್ರಾರಂಭದಲ್ಲಿ ದುಸ್ಸಹವಾಸದಿಂದ ಹುಟ್ಟುತ್ತದೆ. ಅದಿಲ್ಲದಿದ್ದರೆ ಹುಟ್ಟಲಾರದು. ಪುರುಷವರ್ಗದವರು ಕಡೆಯ ಪಕ್ಷ ಇಪ್ಪತ್ತು ವರ್ಷಗಳ ವರೆಗಾದರೂ ಇಂದ್ರಿಯ ಚಾಪಲ್ಯರೋಗಕ್ಕೆ ಸಿಕ್ಕದಿದ್ದರೆ ಕಡೆಯವರೆಗೂ ದೃಢಾಂಗರಾಗಿಯೇ ಇರಬಹುದು.

ಕನ್ಯೆಯರಿಗೆ ಬಾಲ್ಯದಲ್ಲಿ ವಿವಾಹಮಾಡುವ ದುಷ್ಪದ್ಧತಿಯಿಂದ ವಿಧವೆಯಾಗುವರೆಂದೂ ಅಂಥವರು ಅಭಾಗಿನಿಯರಾಗಿ ನಾನಾವಿಧ ಕಷ್ಟನಿಷ್ಠುರಗಳಿಗೆ ಗುರಿಯಾಗುವರೆಂದೂ ದಿಕ್ಕುದಿಕ್ಕುಗಳಿಂದಲೂ ಕೂಗು ಹೊರಡುತ್ತಿದೆ. ಬಾಲ್ಯದಲ್ಲಿ ವಿವಾಹವಾಗುವುದೇ ಅವರು ವಿಧವೆಯರಾಗುವುದಕ್ಕೆ ಕಾರಣವೆಂದರೆ ಒಪ್ಪತಕ್ಕದಲ್ಲ. ಯೌವನಕಾಲದಲ್ಲಿಯೂ ನಾಲ್ಕಾರು ಮಕ್ಕಳಾದ ಮೇಲೆಯೂ ವಿಧವೆಯರಾಗಿರುವುದು ಎಲ್ಲರ ದೃಷ್ಟಿಗೂ ಅಲ್ಲಲ್ಲಿ ಬೀಳುತ್ತಿಲ್ಲವೆ?

" ಗಂಡಸರಿಗೆ ಹೆಂಡತಿ ಸತ್ತರೆ ಎರಡನೆಯದಲ್ಲದೆ ಹೆಚ್ಚಾಗಿಯೂ ಮದುವೆ ಮಾಡಿಕೊಳ್ಳಬಹುದೆಂದೂ ಹೆಂಗಸರಿಗೆಮಾತ್ರ ಒಂದೇ

ಬಾರಿ ವಿವಾಹವಲ್ಲದೆ ಗಂಡಸತ್ತವರಿಗೆ ಮತ್ತೆ ಪತ್ಯಂತರವಿಲ್ಲವೆಂಬದೂ ಪಕ್ಷಪಾತವಲ್ಲವೆ? ಗಂಡಸರಿಗೆ ಹೇಗೋ ಹಾಗೆಯೋ ಹೆಂಗಸರಿಗೂ ಇರಬೇಕಾದುದು ನ್ಯಾಯವಲ್ಲವೆ? ಪತ್ನೀನಷ್ಟನಾದ (ವಿಧುರ) ವನಿಗೆ ದ್ವಿತೀಯಾದಿ ವಿವಾಹಕ್ಕೆ ಕನ್ಯೆಯನ್ನು ವಿವಾಹಮಾಡುವದು ಅನ್ಯಾಯವಲ್ಲವೆ? ಅಂಥವರು ವಿವಾಹ ಮಾಡಿಕೊಳ್ಳಬೇಕೆಂದು ಇಷ್ಟಪಟ್ಟರೆ ದ್ವಿತೀಯಾದಿ ವಿವಾಹಕ್ಕೆ ಅರ್ಹರಾದ ಎಂದರೆ ತಮ್ಮ ವಯಸ್ಸಿಗೆ ತಕ್ಕಂತಿರುವ ವಿಧವೆಯರನ್ನು ಮಾಡಿಕೊಳ್ಳಬೇಕೆಂದುವಿಧಿಸುವುದು ನ್ಯಾಯವಲ್ಲವೆ?.. . . ಇತ್ಯಾದಿ ಇತ್ಯಾದಿಗಳಾದ ವಾಕ್ಯತರಂಗಗಳು ಬಹುಮುಖದಿಂದ ಹೊರಡುತ್ತಿವೆ. ಕೆಳಗೆ ಕೊಡುವ ಉದಾಹರಣೆಯಿಂದೆ ಅವು ಎಷ್ಟರಮಟ್ಟಿಗೆ ಸಾಧ್ಯವೆಂಬುದನ್ನು ವಿಧಿವಶದಿಂದ ಅಭಾಗಿನಿಯರಾದ ಭಗಿನೀವರ್ಗದವರೂ ಅವರ ಹಿತಚಿಂತಕರೂ ಸಮಾಲೋಚಿಸಲಿ! ತಮಗೆ ತೋರಿದ ಸಮಾಧಾನವನ್ನು ಸಕಾರಣವಾಗಿ ತಿಳಿಸಲಿ! ಅತ್ಯಾದರದಿಂದ ಸ್ವೀಕಾರ ಮಾಡುವೆವು ಯುಕ್ತವಾಗಿದ್ದರೆ ಎಲ್ಲರೂ ಅನುಸರಿಸುವರು ಪುರುಷರು ಪತ್ನೀ ಜೀವಿತಳಾಗಿದ್ದರೆಕೂಡ ಬೇರೆ ವಿವಾಹ ಮಾಡಿಕೊಂಡಿರುವುದು ದೃಷ್ಟಾಂತದಲ್ಲದೆ ಹಿಂದಿನಿಂದಲೂ ನಡೆದುಬಂದಿರುವುದನ್ನು ಚರಿತ್ರೆಗಳಲ್ಲಿಯೂ ಓದುತ್ತೇವೆ ದ್ರೌಪದಿಯನ್ನು ಬಿಟ್ಟು ಮತ್ತಾವ ಸ್ತ್ರೀಯಾದರೂ ಅನೇಕ ಪತಿಗಳನ್ನು ಪರಿಗ್ರಹಿಸಿದಳು. ಯಾವುದರಲ್ಲಿಯಾದರೂ ತಿಳಿದುಬರುವುದೆ? ಅಥವಾ ಮತ್ತೆಲ್ಲಿಯಾದರೂ ಆಚರಣೆಯಲ್ಲಿ ಉಂಟೇ? ಹಾಗಿರಲು ಸಾಧ್ಯವೇ? ಪುರುಷನಿಗೆ ಕನ್ಯೆಯನ್ನು ಕೊಟ್ಟು ವಿವಾಹ ಮಾಡುತ್ತೇನೆಂಬುದು ವ್ಯವಹಾರದಲ್ಲಿದೆಯೆ? ಅಥವಾ ಕನ್ಯೆಗೆ ಪುರುಷನನ್ನು ಕೊಟ್ಟು ವಿವಾಹ ಮಾಡುತ್ತೇವೆಂಬುದು ವ್ಯವಹಾರದಲ್ಲಿದೆಯೆ? ಇದನ್ನು ಆಲೋಚಿಸಿದರೆ ಸಾಕಲ್ಲವೇ ಮತ್ತು ಮಹನೀಯರು ಒಂದು ಯೂಪಸ್ತಂಭಕ್ಕೆ ಅನೇಕ ಪಶುಗಳನ್ನು ಕಟ್ಟಬಹುದೆಂದೂ ಒಂದು ಪಶುವನ್ನು ಎರಡು ಯೂಪಸ್ತಂಭಕ್ಕೆ ಕಟ್ಟುವದು ಸಾಧ್ಯವಲ್ಲವೆಂದೂ ಹೇಳಿರುವುದು ಸಹಜವಾಗಿದೆಯಲ್ಲವೆ!

ರಕ್ಷಕರು ಅವಿವೇಕದಲ್ಲಿ ಬಿದ್ದು ಚಿಕ್ಕಂದಿನಲ್ಲಿ ಹುಡುಗಿಯರಿಗೆ ವಿವಾಹ ಮಾಡುತ್ತಾರೆ ಅವರು ಬಾಲ್ಯದಲ್ಲಿಯೇ ವಿಧವೆಯರಾಗುವರು. ಗಂಡನ ಮುಖವನ್ನು ಕೂಡ ತಿಳಿದುಕೊಳ್ಳದಿದ್ದವರು ಯಾವದ್ದೇಹವೂ ಬ್ರಹ್ಮಚರ್ಯಾಶ್ರಮದಲ್ಲಿದ್ದು ತೀರಬೇಕೆಂಬುವರು ಕರುಣೆಯಿಲ್ಲದವರೆಂಬುದಕ್ಕೆ ಸಂದೇಹವಿಲ್ಲವೆಂಬ ಸಿದ್ಧರ ವಾಕ್ಯವು ಹೊರಬೀಳುತ್ತದೆ ಇದು ಅವರ ಪ್ರಾರಬ್ಧವೆಂದು ಕೆಲವರು ಹೇಳುವರು ಅದು ಸಹ ...—ತಪ್ಪು - ಮತಸ್ತ್ರಾಬರು ಹೇಳುವಂತಿಲ್ಲ ಎಂದರೆ ಐಹಿಕ ಭೋಗವನ್ನು ಸ್ವಲ್ಪಮಟ್ಟಿಗೂ ಅನುಭವಿಸದಿದ್ದವರು ದುಸ್ಸಹವಾಸಕ್ಕೆ ಸಿಕ್ಕಿಬಿದ್ದರೆ ದೇಹಾವವು ಭೋಗವನ್ನು ಬಿಟ್ಟಿರುವುದು ಸುಲಭವಾಗಬಹುದೇ ಎಂದೂ ನಾಲ್ಕಾರು ಅಥವಾ ಎಂಟು ಹತ್ತು ವರುಷ ಐಹಿಕ ಸುಖವನ್ನನುಭವಿಸಿ ಆ ಬಳಿಕ ಅದನ್ನು ಒಂದೇ ಕಡೆಗೆ ಬಿಟ್ಟಿರುವುದು ಕಷ್ಟವೆಂದೂ ಹೊಸದಾಗಿ ಹೇಳಬೇಕಾಗಿಲ್ಲ ಸ್ವಲ್ಪಕಾಲವಾದರೂ ಒಂದು ಜನ್ಮದಲ್ಲಿ ಅನುಭವಿಸಿದರೆ ಅದನ್ನು ಬಿಡಬಹುದು ಎಂದು ಯಾರಾದರೂ ಹೇಳುವ ಪಕ್ಷದಲ್ಲಿ ಸರಿಯಾದುದೆಂದು ಒಪ್ಪುವಂತಿಲ್ಲ ಹಾಗೆ ಒಪ್ಪಲೇಬೇಕೆಂದರೆ ಗರ್ಭಸ್ರಾವಾದಿ ಪಾತಕಕೃತ್ಯಗಳು ನಡೆಯಬೇಕಾದುದೇ ಇಲ್ಲವೆನ್ನಬೇಕು ಸಕೃದಾವರ್ತಿ ಅನುಭವಿಸಿ ನಿವೃತ್ತರಾಗಬಹುದು ಇದಕ್ಕೆ ಇಷ್ಟೆಲ್ಲ ಆಲಾಪವೇಕೆ ಬೇಕು? ಮೇಲೆ ಹೇಳಿದ ವಿವಾಹ ನಿರ್ಬಂಧವೂ ವೈಧವ್ಯಾನುಭವ ನಿರ್ಬಂಧವೂ ಇಂಡಿಯಾ ದೇಶದಲ್ಲಿ ಅವರಲ್ಲಿಯೂ ಹಿಂದೂ ಮತದಲ್ಲಿ ಅದರಲ್ಲಿಯೂ ಬ್ರಹ್ಮ ಕ್ಷತ್ರಿಯ ವೈಶ್ಯರೆಂಬ ವರ್ಣಭೇದವನ್ನು ಇಟ್ಟುಕೊಂಡಿರುವವರಲ್ಲಿಯೇ ತೋರುತ್ತದೆ ಇತರರಲ್ಲಿ ಅಷ್ಟು ಪ್ರಬಲವಾಗಿ ಕಾಣುತ್ತಿಲ್ಲ ಇವರಲ್ಲಿಯೇ ಮೇಲೆ ಹೇಳಿದ ಆಲಾಪಗಳು ಹೊರಡುತ್ತಿವೆ ಈ ದೇಶದಲ್ಲಿಯೇ ವಸಿಸುವ ಇತರ ಪಂಗಡದವರು ಇಷ್ಟು ನಿರ್ಬಂಧವಾಗಿಟ್ಟುಕೊಂಡಿಲ್ಲ ಅವರು ಕೂಡ ಹೆಂಗಸಿಗೆ ಒಂದೇ ಆವರ್ತಿ ವಿವಾಹವೆಂದೂ ಅನಂತರ ತನ್ನ ಮತದವನಲ್ಲಿ ಕೂಡಿರುವುದು ನಿಂದ್ಯವಲ್ಲವೆಂದೂ ಇಟ್ಟುಕೊಂಡಿರುವರು;

ಆವರಲ್ಲಿ ಕೂಡ ಕೂಡಿಕೊಂಡವಳನ್ನು ಮದುವೆಯಾದವಳಿಗಿಂತಲೂ ಕೀಳು ತರದಲ್ಲಿಯೇ ಕಾಣುವರು. ಅಂಥವರನ್ನು ಆರತಕ್ಷತೆಗಳಿಗೂ ದೇವರನ್ನು ತರುವದೇ ಮೊದಲಾದ ಶುಭಕರ್ಮದಲ್ಲಿಯೂ ಮುಂದಾಗಿ ಬಿಡುವುದಿಲ್ಲ. ಇದನ್ನಾದರೂ ಯೋಚಿಸಿದರೆ ಪಶುಸಹಜವಾದ ವ್ಯಾಪಾರವೇ ಮುಖ್ಯವೆಂಬ ಆಲಾಪವನ್ನು ಬಿಟ್ಟಿರಬಹುದು.

ಪೂರ್ವದಿಂದಲೂ ನಡೆದು ಬಂಧ ಆಚಾರವು ಕುರುಡಪದ್ಧತಿಯೆಂದೂ ಸ್ತ್ರೀಪುರುಷರಿಗೆ ಸ್ವಾತಂತ್ರ್ಯದಲ್ಲಿ ಭೇದವಿಲ್ಲವೆಂಬ ಭಾವವನ್ನು ಆಚರಣೆಗೆ ತರಬೇಕಾದರೆ ಅಂಧಪರಂಪರೆಯಾಗಿ ನಡೆದುಬಂದ ವಿವಾಹವೆಂಬ ಕರ್ಮವನ್ನೇ ನಿವೃತ್ತಿಪಡಿಸಬೇಕು. ಹಾಗಾದರೆ ಪುರುಷವರ್ಗದಂತೆಯೇ ಸ್ತ್ರೀವರ್ಗವು ಸ್ವತಂತ್ರರಾಗಿಯೂ ಸ್ವಾವಲಂಬಿನಿಯರಾಗಿಯೂ ಸ್ವಸಂಕಲ್ಪದಿಂದ ಜೀವಿಸುವವರಾಗಿಯೂ ಅಪೇಕ್ಷೆ ಹುಟ್ಟಿದರೆ ಇಷ್ಟಪಟ್ಟ ಪುರುಷನನ್ನು ಸಮಾಧಾನವಿರುವವರೆಗೆ ಸೇರಿದ್ದು ಬೇಸರವಾದಾಗ ಬಿಟ್ಟು ಸುಖದಿಂದಲೂ ಸ್ವಾತಂತ್ರ್ಯದಿಂದಲೂ ಜೀವಿಸಬಹುದು. ಹಾಗಾಗುವುದರಿಂದ ವಿವಾಹ, ಶಾಂತಿ ಮೊದಲಾದ ಕರ್ಮಗಳಿಗಾಗಿ ಆಗುವ ದುಂದು ವೆಚ್ಚವೂ ತಪ್ಪುವದು. ಒಟ್ಟು ಗಂಡಸಾಗಲಿ ವಿದ್ಯಾವತಿಯರಾದ ಹೆಂಗಸರಾಗಲಿ ದುಡಿದು ಸಂಪಾದಿಸುವ ದ್ರವ್ಯವನ್ನು ದುರ್ವ್ಯಯ ಮಾಡಬೇಕಾದ ಸಂಭವವಿರುವದಿಲ್ಲ. ಆಗ ಪುರುಷವರ್ಗಕ್ಕಿಂತಲೂ ಸ್ತ್ರೀವರ್ಗಕ್ಕೆ ಹೆಚ್ಚು ಸ್ವಾತಂತ್ರ್ಯವೂ ದಕ್ಷತೆಯೂ ಉಂಟಾಗುವವು. ಇಷ್ಟು ಅನುಕೂಲಗಳ ಕಂಡುಬಂದರೂ ಆಚರಣೆಗೆ ತರಲು ಎಲ್ಲರೂ ಸಮ್ಮತಿಸುವರೇನೆಂಬ ಸಂದೇಹವುಮಾತ್ರ ಬಿಡುವಂತಿಲ್ಲ.

"ಅಹಲ್ಯಾ ದ್ರೌಪದೀ ಸೀತಾ ತಾರಾ ಮಂಡೋದರೀ ತಥಾ ।
ಪಂಚಕನ್ಯಾಸ್ಸ್ಮರೇನ್ನಿತ್ಯಂ ಮಹಾ ಪಾತಕನಾಶನಂ ॥"

ಎಂಬ ಈ ಶ್ಲೋಕವನ್ನು ಎಲ್ಲರೂ ಕೇಳಿರುವರು. ಅನೇಕರು ನಿತ್ಯ

ಪೂ ಸ್ಮರಿಸುತ್ತಿರುವರು. ಇವರ ಚರಿತ್ರೆಯನ್ನು ಆರ್ಯ ಭಗಿನಿಯರು ಕೇಳಿ ತಿಳಿದೇ ಇರುವರು. ಆದರೂ ನನ್ನ ಮನಸ್ಸಮಾಧಾನಕ್ಕಾಗಿ ಇಲ್ಲಿ ಮಾತ್ರ ನನಗೆ ತಿಳಿದುದನ್ನು ಹೇಳಬೇಕೆಂದಿರುತ್ತೇನೆ. ತಾಳ್ಮೆಯಿರಲಿ! ಪಂಚಕನ್ಯೆಯರಲ್ಲಿ ಮೊದಲನೆಯವಳಾದ ಅಹಲ್ಯೆಯು ಬ್ರಹ್ಮನ ಮಾನಸಪುತ್ರಿ. ಇವಳು ದೇಹಸೌಷ್ಠವದಲ್ಲಿ ತಿಲಮಾತ್ರ ಕೂಡ ದೋಷವಿಲ್ಲದವಳು. ಜಗನ್ಮೋಹಕಳಾದ ರೂಪವತಿಯಾಗಿದ್ದಳು. ಇವಳ ವಿವಾಹಕ್ಕಾಗಿ ಬ್ರಹ್ಮನು ಇಂದ್ರಾದಿ ದೇವತೆಗಳನ್ನೂ, ನಾರದಾದಿ ದೇವರ್ಷಿಗಳನ್ನೂ ವಸಿಷ್ಠಾದಿ ಬ್ರಹ್ಮರ್ಷಿಗಳನ್ನೂ ಬರಮಾಡಿಕೊಂಡು ಅವರನ್ನು ಕುರಿತು, ಮಾನುಷಮಾನದ ಒಂದು ಮುಹೂರ್ತ ಕಾಲದಲ್ಲಿ ಭೂಪ್ರದಕ್ಷಿಣ ಮಾಡಿದವರಿಗೆ ಈಕೆ ಪತ್ನಿಯಾಗುವಳು ಎಂದು ಸೂಚಿಸಿದನು. ಸೂರ್ಯನು ಕೂಡ ಒಂದು ದಿನದಲ್ಲಿ ಒಂದಾವರ್ತಿ ಭೂಪ್ರದಕ್ಷಿಣ ಮಾಡುವವನಾಗಿದ್ದಾನೆ. ಮುಹೂರ್ತಮಾತ್ರದಲ್ಲಿ ಇತರರು ಪ್ರದಕ್ಷಿಣೆ ಮಾಡುವುದು ಅಸಾಧ್ಯವೆಂದು ಎಲ್ಲರೂ ಮೌನಧಾರಣ ಮಾಡಿದರು. ತತ್ವಜ್ಞನಾದ ಗೌತಮ ಮಹರ್ಷಿಯು "ಅಸಾವಾದಿತ್ಯೋ ಬ್ರಹ್ಮ" ಎಂಬ ಮೂಲಮಂತ್ರದಿಂದ ನಿಂತಲ್ಲಿಯೇ ಬ್ರಹ್ಮದೇವನಿಗೆ ಪ್ರದಕ್ಷಿಣೆ ಮಾಡಿ ದೇವಪ್ರಮಾಣವಾಗಿದ್ದರೆ ನನಗೆ ಕೊಡಬೇಕೆಂದು ಕೇಳಿ ಕೈನೀಡಿದನು. ಬ್ರಹ್ಮದೇವನ ಆಜ್ಞೆಯಂತೆ ಅಹಲ್ಯೆಯು ಗೌತಮನಿಗೆ ಪತ್ನಿಯಾದಳು. ಅವಳಲ್ಲಿ ಮೋಹಿತನಾಗಿದ್ದ ಇಂದ್ರನು ಭಗ್ನಮನೋರಥನಾಗಿ ತೆರಳಿದನು. ಮತ್ತು ಸಮಯವನ್ನು ನಿರೀಕ್ಷಿಸುತ್ತಿದ್ದು ಒಂದು ರಾತ್ರಿ ಗೌತಮನಿಲ್ಲದ ಸಮಯವನ್ನು ತಿಳಿದು ಗೌತಮ ವೇಷದಿಂದ ಅಂತಃಪುರವನ್ನು ಪ್ರವೇಶಿಸಿದನು. ಅಹಲ್ಯೆಯು ತನ್ನ ತಪಃಪ್ರಭಾವದಿಂದ ಮರ್ಮವನ್ನು ತಿಳಿದವಳಾದರೂ ದೇವರಾಜನೆಂಬ ಕುತೂಹಲದಿಂದ ಸಂಪರ್ಕ ಮಾಡಿದಳು. ಇಂದ್ರನು ತನ್ನ ಅಕ್ರಮ ಕಾರ್ಯಕ್ಕೋಸ್ಕರ ಗೌತಮನಿಗೆ ಭಯಪಟ್ಟನು. ಅವನ ನಿರೀಕ್ಷಣೆಯಂತೆ ಗೌತಮನು ಬಂದೇಬಂದನು. ಇಂದ್ರನಿಗೂ ಅಹಲ್ಯೆಗೂ ದುಸ್ಸಹವಾದ ಶಾಪವನ್ನು ಕೊಟ್ಟು ತಪೋ

ವನಕ್ಕೆ ತೆರಳಿದನು.* ದ್ರೌಪದಿಯ ಜನ್ಮ ವಿಚಾರವನ್ನು ಎಲ್ಲರೂ ಇತಿಹಾಸದಲ್ಲಿ ತಿಳಿದೇ ಇರುತ್ತಾರೆ. ಇವಳನ್ನು ದ್ರುಪದರಾಯನು ಧರ್ಮಾದಿ ಅಯ್ವರಿಗೆ ದಾನಮಾಡಿದನೆಂಬುದೂ ಅಯ್ವರಿಗೂ ಪತ್ನಿಯಾಗಿದ್ದಳೆಂಬುದೂ ಪ್ರಸಿದ್ಧವಾಗಿದೆ.

ಬೃಹಸ್ಪತ್ಯಾಚಾರ್ಯರ ಪತ್ನಿಯೊಬ್ಬಳು ತಾರಾ, ವಾನರರಾಜ್ಯಾಧಿಪನಾದ ವಾಲಿಯ ಪತ್ನಿಯೊಬ್ಬಳು ತಾರಾ. ಬೃಹಸ್ಪತ್ಯಾಚಾರ್ಯರ ಪತ್ನಿ ತಾರೆಯು, ಬೃಹಸ್ಪತ್ಯಾಚಾರ್ಯರ ಶಿಷ್ಯನಾಗಿದ್ದ ಚಂದ್ರನನ್ನು ಮೋಹಿಸಿ ವಶಪಡಿಸಿಕೊಂಡು ಬುಧನನ್ನು ಪಡೆದಳೆಂಬುದು ಪ್ರಸಿದ್ಧವಾಗಿದೆ. ವಾಲಿಯ ಪತ್ನಿ ತಾರೆಯು ಕಿಷ್ಕಿಂಧಾ ರಾಜ್ಯಕ್ಕೆ ಸುಗ್ರೀವನು ಪಟ್ಟಾಭಿಷಿಕ್ತನಾಗಿದ್ದ ವೇಳೆ ಅವನಿಗೆ ಪತ್ನಿಯಾಗಿದ್ದಳೆಂಬುದೂ ರಾವಣನ ಪತ್ನಿಯಾದ ಮಂಡೋದರಿಯು ಲಂಕಾರಾಜ್ಯಕ್ಕೆ ವಿಭೀಷಣನು ಪಟ್ಟಾಭಿಷಿಕ್ತನಾದಾಗ ಅವನಿಗೆ ಪತ್ನಿಯಾಗಿದ್ದಳೆಂಬುದೂ ಪ್ರಸಿದ್ಧವಾಗಿದೆ.

ಇವರೈವರೂ ಚರಿತ್ರಾರ್ಹರೂ ಪಾವನಕರರೂ ಆದುದರಿಂದ ಸ್ತ್ರೀವರ್ಗದ ಪಾವನರೆಂದು ಭಾವಿಸುವಿರಾದರೆ ಅದು ತಪ್ಪೇ ಆಗುವುದು. ಏಕೆಂದರೆ ಇವರೈವರ ಚರಿತ್ರೆ ಎಂತಹದೆಂಬುದನ್ನು ತಿಳಿಯಬೇಕು. ಇವರ ಚರಿತ್ರೆಯೇ ಇವರನ್ನು ಪಾವನೆಯರನ್ನಾಗಿ ಮಾಡಿರುವುದು. ಇಷ್ಟು, ಇನ್ನೂ ಅನೇಕ ಕಾರಣಗಳೂ ಇವೆ. ಇರಲಿ ಸದ್ಯಕ್ಕೆ ಆ ವಿಚಾರವಷ್ಟಕ್ಕೆ ನಿಂತಿರಲಿ. ಮುಖ್ಯವಾಗಿ ಆರ್ಯಮಹ

* ಅಮುಂಕ್ಕೆ ಕಕ್ಕ ಫಲವ ಕಪದೆ ಬುದಕ್ಕೆ ಇದೇ ಕಶಪು ನಿದರ್ಶನವು. ಅಹಲ್ಯೆಯು ಬ್ರಹ್ಮನ ಮಾನಸಪುತ್ರಿಯಾಗಿ ಅಯೋನಿಜೆಯಾಗಿದ್ದು ಮುನಿಯ ಪತ್ನಿಯಾಗಿದ್ದು ಸತ್ಕೀರ್ತಿ ಪ್ರಖ್ಯಾತೆಯಾದ ಮಾತ್ರದಿಂದಲೇ ಆಚಂದ್ರಾರ್ಕವಾದ ಜನಮಾತೆಗೆ ಗುರಿಯಾಗಬೇಕಾಯಿತು. ಇದನ್ನರಿತೇ ನಮ್ಮವರೆಲ್ಲರೂ ಇವರ ಸ್ಮರಣದಿಂದಲ ಆಲೂ ಹುವ ನಷ್ಟಕು ಕರ್ಮಗದಂತೆ ಜಾಗ್ರತರಾಗಿರಬೇಕೆಂದು ಈ ಶ್ಲೋಕವು ಪ್ರಾತಸ್ಮರಣೀಯವಾಗಿದ್ದಿರಬೇಕೆಂದು ಭಾವಿಸಬಹುದಾಗಿದೆ. ಸಂ.

ನ್ನೀಯರಿಂದ ಆಚಾರದಲ್ಲಿ ಬಂದ ವಿವಾಹ ಪದ್ಧತಿಯನ್ನು ಸತೀ ಪತೀ ಸಂಬಂಧವನ್ನೂ ಅವರವರ ಕರ್ತವ್ಯವನ್ನೂ ಸಾಧುಸಮ್ಮತವೆಂತಲೂ ಉಲ್ಲಂಘಿಸತಕ್ಕದಲ್ಲವೆಂತಲೂ ಎಲ್ಲರೂ ಜಿತಮನಸ್ಸಿನಿಂದ ನಿರ್ಧರಿಸಿ ಲೋಕೋದ್ಧಾರಕರಾಗಿ ನಿಂತು ತಮ್ಮ ಸದಾಚಾರ ಸತ್ಯಸಂಕಲ್ಪಗಳಿಂದಲೇ ಆರ್ಯ ಭೂಮಾತೆಯನ್ನು ಉನ್ನತಿಗೆ ತರಬೇಕಾಗಿದೆ.

(ಸಶೇಷ)

ಇತಿ--ವೃತ್ತಮಣೆ ವೆಂಕಟಕೃಷ್ಣಯ್ಯಂಗಾರ್.

# ವಾಚಕರಿಗೆ ವಿಜ್ಞಪ್ತಿ.

ಈ ಸಂಚಿಕೆಯಲ್ಲಿ, ಕನ್ನಡದ ರಸ್ಕಿನ್ನರು" ಎಂಬ ಶಿರೋಲೇಖದ ಕೆಳಗೆ ಪ್ರಸಿದ್ಧವಾಗಿರುವ "ಶ್ರೀಯುತ ಎಸ್ ಎನ್ ನರಹರಯ್ಯನವರು" ಎಂಬ ಲೇಖದ ಪ್ರೂಫ್‌ಕಾಪಿಯು ಲೇಖಕರಿಂದ ತಿದ್ದಿ ಬರುವದರೊಳಗಾಗಿಯೇ ಪ್ರಮಾದದಿಂದ ಆ ಲೇಖವು ಮುದ್ರಿತವಾದ್ದರಿಂದ ಅದರಲ್ಲಿ ಕೆಲವು ತಪ್ಪುಗಳು ಸೇರಿವೆ ಆ ತಪ್ಪುಗಳನ್ನು ಕೆಳಗಿನ ಶುದ್ಧಿ ಪತ್ರಿಕೆಯಂತೆ ಸರಿಪಡಿಸಿಕೊಂಡು ಓದಬೇಕೆಂದು ಸೂಚನೆ ಯಿದೆ

| ಪುಟ | ಪಂಕ್ತಿ | ಅಶುದ್ಧ | ಶುದ್ಧ |
|---|---|---|---|
| ೨೯ | ೧ | Litton | Lytton |
| ,, | ೧೫ | Ceasor | Caesar |
| ,, | ೧೯ | ಸಿದ್ಧರ | ಸೀಜರ್ |
| ೩೦ | ೩ | ಕೃಷ್ಟಿಯನ್ | ಕ್ರಿಶ್ಚಿಯನ್ |
| ೩೦ | ೬ | ಹೇಸೂಂಗದ | ಹೇಮಾಂಗದ |
| ೩೧ | ೯ | Hallibuton's | Halliburton's |
| ೩೩ | ೧೩ | ಉದ [illegible]ತವ | ಉದ [illegible]ತವ |
| ೩೯ | ೫ | Instistute | Institute |
| ,, | ೨೨ | ಪ್ರೀಜಗಳಿಗೆ | ಮಾಲಗಳಿಗೆ |

॥ ಶ್ರೀ ॥

# ಕನ್ನಡದ ರನ್ನಗನ್ನಡಿ.

(ಮಣಿ ೩)

ಸುಪ್ರಸಿದ್ಧ ಕರ್ಣಾಟಕ ದೇಶಭಕ್ತರಾಗಿರುವ

ಶ್ರೀಯುತ ಎಸ್ ಎನ್ ನರಹರಯ್ಯನವರು, ಬಿ ಎ, ಎಲ್ ಎಲ್ ಬಿ. *

---

ನಾಸಾಧ್ಯಂ ವ್ಯವಸಾಯಿನ (ಕಥಾಸರಿತ್ಸಾಗರ)

---

ಕೆಲವು ವರ್ಷಗಳಿಂದೀಚೆಗೆ ಸಾಹಿತ್ಯ ನಭೋಮಂಡಲದಲ್ಲಿ ಮಿರುಗತೊಡಗಿರುವ ತಾರಕೆಗಳೊಳಗೆ ಶ್ರೀಮಾನ್ ನರಹರಯ್ಯನವರನ್ನು ಪ್ರಮುಖರಾದ ಒಬ್ಬರೆಂದು ಹೇಳಬಹುದಾಗಿದೆ. ಇವರ ದೇಶಭಾಷಾಭಿಮಾನವೂ, ಪೌರ್ವಾತ್ಯ ಪಾಶ್ಚಿಮಾತ್ಯ ಸಾಹಿತ್ಯಗಳೆರಡರಲ್ಲಿಯೂ ಇವರಿಗಿರುವ ಅದ್ಭುತವಾದ ವೈದುಷ್ಯವೂ, ತಡೆಯಿಲ್ಲದೆ ಧಾರಾಳವಾಗಿ ಗಂಗಾಪೂರದಂತೆ ಹರಿಯುತ್ತಿರುವ ಇವರ ಲೇಖನಶೈಲಿಯೂ, ಅಮೋಘವಾದ ಕಲ್ಪನಾಶಕ್ತಿಯೂ ಕನ್ನಡಿಗರ ಮನಸ್ಸನ್ನೆಲ್ಲಾ ಸೆಳೆದಿರುವುವು. ಇವರು ಕ್ಷಿಪ್ರದಲ್ಲಿಯೇ ಕರ್ಣಾಟಕ ಕವಿಮಂಡಳದಲ್ಲಿ ಉಚ್ಚಸ್ಥಾನವನ್ನೇರುವರೆಂಬುದಕ್ಕೆ ಇದನ್ನೇ ಶುಭಚಿಹ್ನವಾಗಿ ತಿಳಿಯಬಹುದಲ್ಲವೆ?

ಇರಲಿ, ಇವರ ಚರಿತ್ರಲೇಖನಾರಂಭಕ್ಕೆ ಮೊದಲು ಇವರ ಪೂರ್ವಿಕರ ವಿಷಯವಾಗಿ ತಿಳಿದುಕೊಳ್ಳಬೇಕಾದ ಅನೇಕ ಸಂಗತಿಗಳಿರುವುವು. ಅವುಗಳಲ್ಲಿ ಸ್ವಲ್ಪವನ್ನು ಇಲ್ಲಿ ಸಂಗ್ರಹಿಸಿ ಹೇಳುವೆವು.

---

* ಇವರ ಭಾವಚಿತ್ರವನ್ನು ಮುಂದಿನ ೯ನೇ ಸಂಚಿಕೆ (ತಿಂಗಳ ಪತ್ರಿಕೆ)ಯಲ್ಲಿ ಪ್ರಕಟಿಸುವೆವು. ಸಂ.

ವಿಜಯನಗರ ಚಕ್ರಾಧಿಪತ್ಯದ ಮಹೋನ್ನತಿಯ ಕಾಲದಲ್ಲಿ ರಾಜ್ಯಭಾರದ ಸೌಕರ್ಯಕ್ಕಾಗಿ ಅದನ್ನು ಅನೇಕ ಸಂಸ್ಥಾನ (Province) ಗಳಾಗಿ ಭಾಗಿಸಿ, ಒಂದೊಂದು ಸಂಸ್ಥಾನಕ್ಕೆ ಒಬ್ಬೊಬ್ಬ ನಾಯಕನನ್ನು ತಮಗೆ ಪ್ರತಿನಿಧಿ (Viceroy) ಯಾಗಿದ್ದುಕೊಂಡು ಒಳ ಆಡಳಿತಗಳನ್ನು ನಡೆಯಿಸುವಂತೆ ಆ ಸಮ್ರಾಟರು ನಿಯಮಿಸಿದ್ದರು ಇಂತಹ ಸಂಸ್ಥಾನಗಳಲ್ಲಿ ತನ್ನಪಟ್ಟಣವೂ ಒಂದು (ಇದು ಈಗ ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ತಾಲ್ಲೂಕುಗಳಲ್ಲಿ ಮುಖ್ಯಪಟ್ಟಣವಾಗಿರುವದು) ಕಾಲಕ್ರಮದಿಂದ ವಿಜಯನಗರವೇ ತುರುಕರಿಂದ ಹಾಳುಮಾಡಲ್ಪಟ್ಟು ನಾಮಾವಶೇಷವಾಗಲು ತುರುಕರ ಹೊಡೆತಕ್ಕೆ ಸಿಕ್ಕದೆ ಓಡಿಹೋಗಿ ಪೆನಗೊಂಡೆಯಲ್ಲಿಯೂ ಚಂದ್ರಗಿರಿಯಲ್ಲಿಯೂ ಸೇರಿಕೊಂಡ ವಿಜಯನಗರದ ರಾಜವಂಶದವರ ಕಯ್ ಜಿಗಿತಪ್ಪಲು ಉಳಿದ ಸಂಸ್ಥಾನಗಳ ಪ್ರತಿನಿಧಿಗಳು ತಮತಮಗೆ ಅಧೀನವಾಗಿದ್ದ ಸೀಮೆಗಳಿಗೆ ತಾವು ತಾವೇ ಸ್ವತಂತ್ರ ರಾಜರಾದರು ಹೀಗೆ ಹೊಸತಾಗಿ ಹುಟ್ಟಿದ ರಾಜ್ಯಗಳಲ್ಲಿ ತನ್ನಪಟ್ಟಣವೂ ಒಂದು. ಅಲ್ಲಿ ಜಗದ್ದೇವರಾಜ-(ಜಗದೇವ ರಾಯ ಎನ್ನುವದೂ ಉಂಟು) ನೆಂಬಾತನು ದೊಡ್ಡ ಹೆಸರಿನಿಂದ ಆಳಿದನಾದುದರಿಂದ ತನ್ನಪಟ್ಟಣ ರಾಜ್ಯಕ್ಕೆ ಜಗದ್ದೇವರಾಜ ಸೀಮೆಯೆಂದೇ ಹೆಸರಾಗಿದ್ದಿತು ಈ ರಾಜ್ಯವು ಒಂದು ಕಾಲದಲ್ಲಿ ಹೌಸ್ಟ್ರಿಗೂ ಒಂದುಕಾಲದಲ್ಲಿ ಕಂದುಕಲೂ ೨೦೦ವರ್ಷಗಳಷ್ಟು ಕಾಲವಿದ್ದು ಕಡೆಗೆ ಹೈದರಲ್ಲಿಯ ಕಯ್ಗೆ ಸಿಕ್ಕಿ ಮೈಸೂರ ರಾಜ್ಯದಲ್ಲಿ ಲೀನವಾಗಿ ಹೋಯಿತು

ಮೈಸೂರಿನಲ್ಲಿ ಸುಲ್ತಾನರ ಆಳಿಕೆಯಿರುವವರೆಗೂ ಸಮಯ ನೋಡಿ ತಮ್ಮ ರಾಜ್ಯವನ್ನು ತಾವು ಹಿಂದಕ್ಕೆ ತೆಗೆದುಕೊಳ್ಳಬೇಕೆಂಬ ಅಭಿಲಾಷೆ. ತನ್ನಪಟ್ಟಣದ ರಾಜಸಂತತಿಯವರಿಗೆ ನಿರವಗ್ರಹವಾಗಿ ಇದ್ದೇ ಇದ್ದಿತು ಆದರೆ ೧೭೯೯ರಲ್ಲಿ ಮೈಸೂರಿಗೆ ಕೃಷ್ಣರಾಜ ಒಡೆಯರು ರಾಜರಾದುದನ್ನೂ ಅವರ ರಕ್ಷಣೆಗೆ ಪ್ರಬಲರಾದ ಇಂಗ್ಲಿಷರು ಬದ್ಧರಾಗಿ ನಿಂತುದನ್ನೂ ತಮ್ಮ ಕ್ಷೀಣವಾದ ಸಹಾಯಸಂಪತ್ತಿಗಳನ್ನೂ

ನೋಡಿಕೊಂಡು, ಈ ರಾಜಸಂತತಿಯವರು ತಮ್ಮ ಉದ್ದೇಶವನ್ನು ಬಿಟ್ಟುಬಿಟ್ಟು ತಮ್ಮ "ಅರಸ"ರೆಂಬ ಹೆಸರನ್ನುಳಿಸಿಕೊಂಡು ತಮಗೆ ಉಳಿದಿದ್ದ ಕೆಲವು ಹಳ್ಳಿಗಳನ್ನೇ ರಾಜ್ಯವಾಗಿ ಭಾವಿಸಿ ರಾಜರಾಗಿರಬೇಕಾದ ಯಾವತ್ತಿನ ಪರಿವಾರವನ್ನು ಹೆಸರು ಮಟ್ಟಿಗಾದರೂ ಇರಬೇಕೆಂದ ಇಟ್ಟುಕೊಂಡಿದ್ದರಂತೆ! ಆ ಕಾಲದಲ್ಲಿ ಅವರ ಪ್ರಧಾನ ಮಂತ್ರಿತ್ವವು 'ಲಕ್ಷ್ಮೀಕಾಂತ ಭಟ್ಟ'ರೆಂಬುವರದಾಗಿತ್ತು. ರಾಜ್ಯವು ಎಷ್ಟು ಸಣ್ಣದೇ ಆಗಲಿ ಕೊನೆಗೆ ಒಂದು ಕ್ಷುದ್ರ ಗ್ರಾಮವೇ ಆಗಲಿ, ಮಂತ್ರಿತ್ವವನ್ನು ಯಾವಾಗಲೂ ವಂಶಪಾರಂಪರ್ಯವಾಗಿಯೇ ಕೊಡುವುದು ಪೂರ್ವಪದ್ಧತಿ* ಯಾದುದರಿಂದ ಈ ಜಗದೇವರಾಯ ಸೀಮೆಯ ಮಂತ್ರಿಪದವು ಈ ಮನೆತನಕ್ಕೇ ನಡೆದುಬಂದಿತ್ತೆಂದು ಊಹಿಸಲು ಆಸ್ಪದವಿದೆ. ಲಕ್ಷ್ಮೀಕಾಂತಭಟ್ಟರ ಪ್ರಪಿತಾಮಹರ (Great Grandfather) ಸದಾಶಿವದೇವ ಭಟ್ಟರಿಗೆ ಸಂತಾನವಿಲ್ಲದೆ ಇದ್ದುದಕ್ಕಿದ್ದು ಬಾಳಿನ ಅಂತ್ಯಕಾಲವೊದಗಲು ಸ್ವಗೋತ್ರದವರು ಯಾರೂ ಇಲ್ಲದೆ ಅನ್ಯಗೋತ್ರದಿಂದ 'ತಿರುಮಲದೇವ'ನೆಂಬ ಒಬ್ಬ ಹುಡುಗನನ್ನು ದತ್ತನನ್ನಾಗಿ ಮಾಡಿಕೊಂಡರು. ಈ ದತ್ತಪುತ್ರನೇ ಲಕ್ಷ್ಮೀಕಾಂತಭಟ್ಟರ ತಾತಂದಿರು (Grandfather) ವಂಶಾವಳಿಯನ್ನು ಪರಿಶೀಲಿಸಿದರೆ ಇವರು ದೀರ್ಘಾಯುಷಿಗಳಾಗಿದ್ದಂತೆ ತೋರುವುದಿಲ್ಲ. ಇವರ ಪುತ್ರರಾದ ನರಸಿಂಹದೇವಭಟ್ಟರೇ ಲಕ್ಷ್ಮೀಕಾಂತಭಟ್ಟರ ಜನಕರು. ಅವರು ಕೂಡ ಲಕ್ಷ್ಮೀಕಾಂತಭಟ್ಟರ ಕೇವಲ ಬಾಲ್ಯದಶೆಯಲ್ಲಿಯೇ ಸ್ವರ್ಗಸ್ಥರಾದರೆಂದು ಸ್ಪಷ್ಟವಾಗಿ ತಿಳಿದುಬಂದಿದೆ ಈ

---

* ಮೌಲಾನ್ ಶಾಸ್ತ್ರವಿದಃ ಶೂರಾನ್ ಲಬ್ಧಲಕ್ಷಾನ್ ಕುಲೋದ್ಗತಾನ್ ।
ಸಚಿವಾನ್ ಸಪ್ತ ಚಾಷ್ಟೌ ವಾ ಕುರ್ವೀತ ಸುಪರೀಕ್ಷಿತಾನ್ ॥ ಮನು ೭. ೫೪.
ಸಮಂತ್ರಿಣಃ ಪ್ರಕುರ್ವೀತ ಪ್ರಾಜ್ಞಾನ್ ಮೌಲಾನ್ ಸ್ಥಿರಾನ್ ಶುಚೀನ್ ।
(ಯಾಜ್ಞವಲ್ಕ್ಯ, ೧ ೩೧೨)

‡ ಈ ಮನೆತನದ ಪೂರ್ವಿಕರ ಹೆಸರಲ್ಲೆಲ್ಲಾ 'ದೇವ'-'ದೇವ' ಎಂಬ ಶಬ್ದವಿರುವುದು. ಇದು ಆ ಕಾಲದಲ್ಲಿ ದೊಡ್ಡವರ ಸಂಪ್ರದಾಯವಾಗಿರಬಹುದು

ಅಂಶಗಳನ್ನೆಲ್ಲಾ ಮುಂದಿಟ್ಟುಕೊಂಡು ಲಕ್ಷ್ಮೀಕಾಂತಭಟ್ಟರ ಪೂರ್ವಜರ(Ancestors)ವಯಸ್ಸೇ ಮೊದಲಾದುವನ್ನು ಹೆದ್ದಟ್ಟಾಗಿ ನಿರ್ಣಯಿಸಿ ಆ ಕಾಲದ ಚರಿತ್ರೆಗೆ ಸಂಬಂಧಪಟ್ಟ ಸಂದರ್ಭಗಳೊಡನೆ ಹೋಲಿಸಿ ನೋಡಿದರೆ ಈ ಮನೆತನದವರೇ ಚನ್ನಪಟ್ಟಣದಲ್ಲಿ ಮಂತ್ರಿಗಳಾಗಿರಬೇಕೆಂದೂ ಆ ರಾಜಸಂತತಿಗೆ ಶತ್ರುಗಳಿಂದ ಕಷ್ಟಬಂದ ಕಾಲದಲ್ಲಿ ಮಂತ್ರಿವಂಶದವರು ಬಾಲರೋ ಮುಮೂರ್ಷುಗಳೋ ಆಗಿದ್ದುದರಿಂದಲೇ ಆ ಸಮಯದಲ್ಲಿ ಸರಿಯಾದ ಆಲೋಚನೆಯನ್ನು ಹೇಳಿಕೊಡುವರಿಲ್ಲದೆ ಅವರ ಕಷ್ಟಕ್ಕೆ ನಿವೃತ್ತಿಯೇ ಇಲ್ಲದಂತಾಗಿರಬೇಕೆಂದೂ ಸ್ಥಿರವಾಗುವುದು ಈ ಲಕ್ಷ್ಮೀಕಾಂತಭಟ್ಟರು ಹೊಯ್ಸಲ* ಕರ್ಣಾಟಕ ವರ್ಗಕ್ಕೆ ಸೇರಿದ ಬ್ರಾಹ್ಮಣೋತ್ತಮರು ಸಕಲ ಶಾಸ್ತ್ರ ಪ್ರವರ್ತಕರಾಗಿ ಸಮಸ್ತವೇದಗಳಿಗೂ ಭಾಷ್ಯವನ್ನು ರಚಿಸಿ ವಿಜಯನಗರಕ್ಕೆ ಕುಲಗುರುಗಳೂ ಕುಲಕ್ರಮಾಗತಮಂತ್ರಿಗಳೂ ಆಗಿ ಆ ರಾಜ್ಯವನ್ನು ಅತ್ಯುಚ್ಛ ಸ್ಥಿತಿಗೆ ತಂದು ಲೌಕಿಕ ವೈದಿಕ ಮಾರ್ಗಗಳೆರಡರಲ್ಲಿಯೂ ಅದ್ವಿತೀಯರೆಂದು ಜಗದ್ವಿಖ್ಯಾತರಾಗಿರುವ ಶ್ರೀ ವಿದ್ಯಾರಣ್ಯರು

---

* ಈ 'ಹೊಯ್ಸಲ' ಶಬ್ದದ ವ್ಯುತ್ಪತ್ತಿಯನ್ನು ಎರಡು ಮೂರು ಪ್ರಕಾರವಾಗಿ ಹೇಳುವರು ವೃದ್ಧರೂ ಪ್ರಾಜ್ಞರೂ ಆದ ಕೆಲವರು ಹೇಳುವದು ಹೀಗೆ- "ಹೊಯ್" (ಹೊಯ್) ಎಂದರೆ ಹೊಡೆ' ಎಂದರ್ಥವು, ಸಲ ಎಂಬುದು ಆವೃತ್ತಿವಾಚಕಶಬ್ದವು. "ಹೊಯ್ಸಲ' ಎಂದರೆ ಇನ್ನೊಂದಾವೃತ್ತಿ ಹೊಡೆ ಎಂದರ್ಥವು ಎಂದರೆ ಇನ್ನು ಹೊಡೆ ಎಂಬ ಅಭಿಪ್ರಾಯವು ಈ ಹೊಯ್ಸಳರು ಯುದ್ಧಕಾಲದಲ್ಲಿ 'ಹೊಯ್ಸಲ' 'ಹೊಯ್ಸಲ' (ಇನ್ನು ಹೊಡೆ ಇನ್ನು ಹೊಡೆ) ಎಂದು ವೀರಾವೇಶವಾಕ್ಯವನ್ನು (warcry) ಮಾಡುತ್ತ ಶತ್ರುಗಳಮೇಲೆ ಬೀಳುತ್ತಿದ್ದರು ಆದರಿಂದ ಅವರಿಗೆ 'ಹೊಯ್ಸಲ ಎಂಬ ಹೆಸರು ಬಂದಿತು ಎಂದು ಇದಕ್ಕೆ ಆಧಾರವೇನಾದರೂ ಉಂಟೇ? ಎಂದು ನಾವು ಪ್ರಶ್ನೆಮಾಡಲು- ಅದೇನೋ ನಾವು ಕಾಣೆವು. ನಮ್ಮ ಯಜಮಾನರು ಹಾಗೆ ಹೇಳುತ್ತಿದ್ದರು ಅವರ ಯಜಮಾನರೂ ಹಾಗೆ ಹೇಳುತ್ತಿದ್ದರಂತೆ!' ಎಂದು ಹೇಳಿರುವರು ವಿಚಾರ ಮಾಡುವದರಲ್ಲಿ ಇದು ತೃಪ್ತಿಕರವಾಗಿಯೇ ತೋರುವುದು

ಹೊಯ್ಸಳ ಕರ್ಣಾಟಕರಾದುದರಿಂದಲೂ ಅವರ ಅನಂತರದಲಿ ಮಂತ್ರಿತ್ವಕ್ಕೆ ಬಂದ ಅವರ ಕುಲದವರೂ ವಿಜಯನಗರವನ್ನು ಮಹೋನ್ನತ ಸ್ಥಿತಿಯಲ್ಲಿಯೇ ಇಟ್ಟುಕೊಂಡಿದ್ದುದರಿಂದಲೂ ಮಂತ್ರಿತ್ವ ಮಾಡಬೇಕಾದರೆ 'ಹೊಯ್ಸಳ ಕರ್ಣಾಟಕರೇ ಸರಿ'ಯೆಂದು ಆ ಜನರಿಗೆ ಆ ಕಾಲದಲ್ಲಿ ಹೆಸರಾಗಿ ಯಾವ ಹೊಸ ರಾಜ್ಯವು ಹುಟ್ಟಿದರೂ ಅಲ್ಲಿಯು ಮಂತ್ರಿತ್ವವು ಅವರಿಗೆ ದೊರೆಯುತ್ತಿದ್ದಿತೆಂದೂ ಹೇಳುವರು. ಹೊಯ್ಸಳ ಕರ್ಣಾಟಕ*ರೆಂದರೆ 'ಪರಸ್ಪರ ಬಂಧುಗಳು' ಎಂಬುದಕ್ಕೆ ಪರ್ಯಾಯವಾದುದರಿಂದ ಚೆನ್ನಪಟ್ಟಣದ ತಮ್ಮ ರಾಜಪ್ರತಿನಿಧಿಗೂ ಒಳರಾಜ್ಯಗಳಲ್ಲಿ ಆಲೋಚನೆ ಹೇಳಿಕೊಡಲು ವಿಜಯನಗರದ ಮಂತ್ರಿಗಳೇ ಯಾರಾದರೂ ತಮ್ಮವರನ್ನು ಕಳುಹಿರಬಹುದೆಂದೂ ಹಾಗೆ ಬಂದವರೇ ಚೆನ್ನಪಟ್ಟಣವು ಸ್ವತಂತ್ರ ರಾಜ್ಯವಾದ ಮೇಲೆಯೂ ಮಂತ್ರಿತ್ವವನ್ನು ವಹಿಸಿರಬೇಕೆಂದೂ ಹೇಳಿದರೆ ಅಸಂಗತವೇನೂ ಆಗಲಾರದು ಇದರ ಮೇಲೆ ಲಕ್ಷ್ಮೀಕಾಂತಭಟ್ಟರು ಆತ್ರೇಯಸ

---

"ಹೊಯ್ಸಳ' ಅಲ್ಲ, "ಹೊಯ್ಸಾಳ" ಎಂದಿರಬೇಕೆಂದೂ ಯಾರೋ ಒಬ್ಬರು ಹುಲಿಬರುತ್ತಿದ್ದುದನ್ನು ನೋಡಿ, ತನ್ನ ಬಳಿಯಲ್ಲಿದ್ದ 'ಸಾಲ'ನೆಂಬವನನ್ನು ನೋಡಿ 'ಹೊಯ್ಸಾಳ' (ಸಾಲನೇ ಹುಲಿಯನ್ನು ಹೊಡೆ) ಎಂದರೆಂದೂ ಅದೇ ಪ್ರಕಾರವಾಗಿ ಹುಲಿಯನ್ನು ಹೊಡೆದ ಅವನು ತನ್ನ ಶೌರ್ಯವನ್ನು ಹೇಳಿಕೊಳ್ಳಲು 'ನಾನು ಯಾರೆಂದು ಬಲ್ಲಿ 'ಹೊಯ್ಸಾಳ' (ಹುಲಿ ಬಂದಾಗಲೆಲ್ಲ ಅವರ ಅಪ್ಪಣೆಯಾಗದೆ ತನ್ನಷ್ಟಕ್ಕೆ ಹೊಡೆಯಬಾರದು ನಾನು ಹೊಡೆದಿರುವೆನು' ಎಂದು ಅವನ ಅಭಿಪ್ರಾಯವಿರಬಹುದು) ಎಂದು ಹೇಳಿಕೊಳ್ಳುತ್ತ ಹೊರಟನೆಂದೂ ಅದರಿಂದ ಅದು ಮೊದಲು ಅವನಿಗೂ ಅವನ ವಂಶದವರಿಗೂ 'ಹೊಯ್ಸಾಳ' ಎಂಬ ಹೆಸರಾಯಿತೆಂದೂ ಕೆಲವರು ಹೇಳುವರು. ಹೊಯ್ಸಳ ರಾಜ್ಯವನ್ನು ಕಟ್ಟಿದವನು ಈ ಹೊಯ್ಸಾಳನೆಂದಾಗಲೀ ಅವನ ವಂಶದವರೊಬ್ಬರೆಂದಾಗಲೀ ಸ್ಥಾಪಿತವಾಗುವವರೆಗೆ ಇದನ್ನು ನಂಬುವಂತಿಲ್ಲ.

* ಇವರು ಭರತಖಂಡವನ್ನೆಲ್ಲಾ ತೆಗೆದುಕೊಂಡರೂ ಗಂಡಸರು, ಹೆಂಗಸರು, ಹುಡುಗರು- ಎಲ್ಲಾ ಸೇರಿ ೮೦೦ ಜನಕ್ಕೆ ಮೇಲಿಲ್ಲವೆಂದು ತಿಳಿಯ ಬರುವದು.

ಗೋತ್ರದವರು. ಆತ್ರೇಯುಸ ಗೋತ್ರವೆಂದರೆ ರಾಜಗೋತ್ರವೆಂದೂ ಆತ್ರೇಯುಸ ಗೋತ್ರದವರೆಂದರೆ ಪ್ರಭುತ್ವ ಮಾಡುವರೆಂದೂ ಸಕಲ ಜನಾಭಿಪ್ರಾಯವಾಗಿರುವುದರಿಂದ ಪೂರ್ವ ಸಂಪ್ರದಾಯವನ್ನರಿತವರು ಆತ್ರೇಯುಸ ಗೋತ್ರದವರನ್ನು ಕಂಡರೆ ಅವರು ವಯಸ್ಸಿನಲ್ಲಿ ತಮಗೆ ಚಿಕ್ಕವರಾದರೂ ಒದ್ದಿನಂತು ಕಯ್ಮುಗಿವ್ವದನ್ನು ಅನೇಕರು ನೋಡಿರಬಹುದು. ಚೆನ್ನಪಟ್ಟಣದಲ್ಲಿ ಈ ಲಕ್ಷ್ಮೀಕಾಂತಭಟ್ಟರದು ಹೊರತು ಇನ್ನು ಯಾವ [illegible] ಕರ್ಣಾಟಕದವರು [illegible] ಇರಲಿಲ್ಲ. ಆ [illegible] ತವರ ಬಂಧುವರ್ಗದವರದೇ ೨೩ ಮನೆಗಳಾದುವು.

ಆ ಕಾಲದಲ್ಲಿ ಮಂತ್ರಿತ್ವ ಮಾಡುವವರಿಗೆ ಸಂಬಳವಿರಲಿಲ್ಲ. ರಾಜರಿಂದ ದೊರೆತ ದಾನಮಾನ, ಸತ್ಕಾರಗಳಿಂದಲೂ ಸ್ವಸಾಂಪತ್ತ್ಯದಿಂದಲೂ ಅವರು ಜೀವಿಸಬೇಕಾಗಿತ್ತು. ತಮ್ಮ ಪ್ರಭುವಲ್ಲಾ ಹೋಗಿ ರಾಜ್ಯವು ನಾಮಮಾತ್ರಾವಶಿಷ್ಟವಾಗಿದ್ದರೂ ಆ ರಾಜಸಂತತಿಯವರು ತಮಗೆ ಬಳುವಳಿಯಾದುದರಲ್ಲಿಯೇ ಈ ಮನೆತನಕ್ಕೆ ಕೊಟ್ಟಮಾನ್ಯಗಳು ಒಂದೊಂದ, ಒಂದೊಂದು ಆ ಮಾನ್ಯ ಕುಟುಂಬಭರಣಕ್ಕೆ ಸಾಕಾಗುವಂತಹವು. ಲಕ್ಷ್ಮೀಕಾಂತಭಟ್ಟರ ದಿವಸಗಳಲ್ಲಿ ೧೧।೧೨ ಇದ್ದುವು. ಆ ಕಾಲಕ್ಕೆ ಬೇಕಾದ ಶಾಸ್ತ್ರಸಂಪ್ರದಾಯ, ವ್ಯವಹಾರ, ಇತ್ಯಾದಿಗಳಲ್ಲೆಲ್ಲಾ ಸಂಪೂರ್ಣ ನಿಷ್ಣಾತರಾದುದರಿಂದ ಯಾವ ಮುಖ್ಯ ಪ್ರಸಂಗವೊದಗಿದರೂ ಇವರ ಆಲೋಚನೆಯನ್ನು ಕೇಳಲು ಸುತ್ತಮುತ್ತಲ ಹನ್ನೆರಡು ಗಾವುದದಿಂದಲೂ ಜನರು ಬರುತ್ತಿದ್ದರಂತೆ. ಆ ಕಾಲದಲ್ಲಿದ್ದ ಕುಳಿತುಕೊಂಡರೆ ಕೇಳಬಂದವರಿಗೆಲ್ಲಾ ಬೇಕುಬೇಕಾದುದನ್ನು ಹೇಳಿ ಮುಗಿಸಿ ಅಲ್ಲಿಂದೇಳುವ ಹೊತ್ತಿಗೆ ಒಂದೊಂದು ದಿವಸ ಮಧ್ಯಾಹ್ನಾನಂತರ ೩ ಘಂಟೆಯಾದರೂ ಆಗುತ್ತಿದ್ದಿತಂತೆ. ಎಷ್ಟುಹೊತ್ತಿಗೆ ಕಾರ್ಯಾರ್ಥಕ್ಕಾಗಿ ಬಂದವರು ತೃಪ್ತರಾಗಿ ತಮ್ಮ ಶಕ್ತ್ಯನುಸಾರವಾಗಿ ಮುಂಬಿಟ್ಟುದೆಲ್ಲಾ ಸೇರಿ ಹಿಂದೆ ೧೦ ವರಹವಾಗುತ್ತಿದ್ದಿತಂತೆ. ಆ ಕಾಲದಲ್ಲಿ ಇದು ತುಂಬಾ ದೊಡ್ಡ ಸಂಪಾದನೆಯಾಗಿ ಭಾವಿಸಲ್ಪಡು

ತ್ರಿದ್ದಿತು. ಇವರ ಕುಟುಂಬ ಪರಿವಾರವು ದೊಡ್ಡದಾಗಿದ್ದುದರಿಂದ ಅಷ್ಟನ್ನೂ ಅದೇ ದಿವಸ ವ್ಯಯಮಾಡುತ್ತ ಬ್ರಾಹ್ಮಣರಿಗೆ ಅತ್ಯುತ್ತಮ ವೆಂದು ಶಾಸ್ತ್ರಗಳು ಹೇಳುವ ಅನ್ನದಾನ ವಿಧಾನದಿಂದ ವರ್ತಿಸುತ್ತಿ ದ್ದರು. ಲಕ್ಷ್ಮೀಕಾಂತಭಟ್ಟರ ಮಂತ್ರ, ಪಾಂಡಿತ್ಯದ ವಿಷಯದಲ್ಲಿ ಮೊದಲಿನಿಂದಲೂ ಬಹು ಪ್ರಸಿದ್ಧವಾಗಿದ್ದಿತು. ಕಾಲದುದಕ್ಕೆ ಈ ಮಹನೀಯರ ಅಗಾಧವಾದ ಹೃದಯವೈಶಾಲ್ಯ ಉದಾರಸ್ವಭಾವವು ಭೂತ ದಯೆಯೂ ದೃಢವಾದ ಚಾರಿತ್ರ್ಯ ಆಚಾರಶೀಲತೆಯೂ ಸಹಾಯ ವಾಗಿ ದೊರೆತು, ಅವರು ಗತಿಸಿ ಈಗ ೭೨ ವರ್ಷಗಳ ಕಾಲ ಕಳೆದು ಹೋದರೂ ಅವರ ಹೆಸರು ಇವರಿಗೂ ಬಹು ಗೌರವದೊಡನೆ ಸ್ಮರಿ ಸಲ್ಪಡುತ್ತಿದೆ. ಲಕ್ಷ್ಮೀಕಾಂತಭಟ್ಟರ ಕೇವಲ ಬಾಲ್ಯದಲ್ಲಿರುವಾಗಲೆ ಹೆತ್ತವರ ಸ್ವರ್ಗಕ್ಕೆ ಏರುವಾಗಿದ್ದರೆಂದ ಮೇಲೆಯೂ ಸಾಧಿಸಿದವಷ್ಟು! ಇವರ ವಿಷಯವಾಗಿ ಜನರೊಳಗೆ ಈಗಲೂ ಪ್ರಚಾರದಲ್ಲಿರುವ ಸಮಾ ಚಾರಗಳನ್ನು ಕೇಳಲಾಗಿ ಇವರು ಬಹುಮಟ್ಟಿಗೆ ಸ್ವಶಕ್ತಿಯಿಂದಲೇ ಅಷ್ಟು ಉನ್ನತಪದಕ್ಕೇರಿದರೆಂದು ಧಾರಾಳವಾಗಿ ಹೇಳಬಹುದಾಗಿದೆ ಇವರು ದೀರ್ಘಕಾಲದವರೆಗೆ ಬದುಕಿ ವೃದ್ಧರಾಗಿ ಸ್ವರ್ಗಸ್ಥರಾದರು ಇವರ ತಮ್ಮಂದಿರೊಬ್ಬರು ಮೈಸೂರು ರಾಜ್ಯದಲ್ಲಿ ಶಿಸ್ತೇದಾರರಾ ಗಿಯೂ ಸೇರಿದವರೊಬ್ಬರು ಆಗಿನ ಕಾಲದಲ್ಲಿ ಬಲು ದೊಡ್ಡ ದೆಂದು ತಿಳಿಯಲ್ಪಡುವ ಅಮಲ್ದಾರರಾಗಿಯೂ ಇದ್ದರಂತೆ!

ಲಕ್ಷ್ಮೀಕಾಂತಭಟ್ಟರಿಗೆ ಪ್ರಥಮ ಪತ್ನಿಯಲ್ಲಿ ಪುರುಷಸಂತಾನ ವಿರಲಿಲ್ಲ. ಆಕೆಯ ಕಾಲಾನಂತರದಲ್ಲಿ ಅವರು ತಮ್ಮ ಅಪರ ವಯಸ್ಸಿ ನಲ್ಲಿ ದ್ವಿತೀಯ ವಿವಾಹ ಮಾಡಿಕೊಂಡರು. ಆಕೆಯಲ್ಲಿ ರಾಮ ಅಥವಾ ನರಹರಿಭಟ್ಟ, ಸೂರ್ಯನಾರಾಯಣಭಟ್ಟರೆಂಬ ಪುತ್ರರಿಬ್ಬರೂ ಪುತ್ರಿಯ ರಿಬ್ಬರೂ ಹುಟ್ಟಿದರು. ಈ ಪುತ್ರರು ಇನ್ನೂ ಶೈಶವರಾಗಿದ್ದಾಗಲೇ ತಂದೆಯು ಕಾಲಗತಿ ಹೊಂದಿದುದರಿಂದ ಮಕ್ಕಳು ಪರಸ್ಥಳಕ್ಕೆ ಹೋಗಿ ವಿದ್ಯೆ ಕಲಿತು ಪ್ರವೀಣರಾಗಿ ಮುಂದಕ್ಕೆ ಬರುವುದು ಹಾಗಿ ರಲಿ, ತಂದೆಯ ಬಲವು ತಪ್ಪಿಹೋಗಿ ದೊಡ್ಡ ಕುಟುಂಬರಕ್ಷಣೆಯ

ಭಾರವು ಮೇಲೆ ಬಿದ್ದುದರಿಂದ ಈ ವಂಶದವರ ಅಭಿವೃದ್ಧಿಯು ಇಳಿಮುಖವಾಗಲು ಪ್ರಾರಂಭವಾಯಿತು ನರಹರಿಭಟ್ಟರಿಗೆ ನರಸಿಂಹಶಾಸ್ತ್ರಿ ಸುಬ್ಬಶಾಸ್ತ್ರಿಗಳೆಂಬ ಪುತ್ರರಿಬ್ಬರೂ ಸೂರ್ಯನಾರಾಯಣ§ಭಟ್ಟರಿಗೆ ಪುಟ್ಟಣ್ಣ*ನವರೆಂಬ ಪುತ್ರರೂ ಹುಟ್ಟಿದರು ಈ ನರಸಿಂಹಶಾಸ್ತ್ರಿಗಳೇ ನಮ್ಮ ಕಥಾನಾಯಕರ ಭಾಗ್ಯಶಾಲಿಗಳಾದ ಜನಕರು ಇವರ ಒಡಹುಟ್ಟಿದವರಲ್ಲಿ ಇವರಲ್ಲದೆ ಇನ್ನೂ ಮೂವರು ಗಂಡುಮಕ್ಕಳೂ ಇವರಿಗೆ ಹಿರಿಯರಾಗಿ ಇಬ್ಬರು ಹೆಣ್ಣುಮಕ್ಕಳೂ, ಕಿರಿಯಳಾಗಿ ಮಗಳೊಬ್ಬಳೂ ಹೀಗೆ ಇವರು ಸೇರಿ ನರಸಿಂಹಭಟ್ಟರಿಗೆ ೭ಃಲ ( ಆದ ಮಕ್ಕಳಲ್ಲಿ ಶೈಶವದಲ್ಲಿಯೇ ಕಳೆದುಹೋದವುಗಳಲ್ಲದೆ ಉಳಿದಿರುವವರ ) ಮಂದಿ ಮಕ್ಕಳಾದರು.

ನಮ್ಮ ಕಥಾನಾಯಕರೇ ಪುತ್ರರಲ್ಲಿ ಹಿರಿಯರು ಇವರ ತಮ್ಮಂದಿರ ಮೂವರಲ್ಲಿ ಮೊದಲನೆಯವರಾದ ಶ್ರೀ ನಾರಾಯಣಶಾಸ್ತ್ರಿಗಳು ಬಿ. ಎ., ಎಲ್ ಎಲ್ ಬಿ ಪರೀಕ್ಷೆಗಳಲ್ಲಿ ತೇರಿ ಅಲಹಾಬಾದಿನಲ್ಲಿ ಹೈಕೋರ್ಟ ವಕೀಲರಾಗಿಯೂ ಎರಡನೆ ಸೀತಾರಾಮ ಶಾಸ್ತ್ರಿಗಳು ತರೀಕೇರಿಯ ಎ ವಿ ಸ್ಕೂಲಿನ ಪ್ರಧಾನೋಪಾಧ್ಯಾಯರಾಗಿಯೂ ಮೂರನೆ ಕೃಷ್ಣಶಾಸ್ತ್ರಿಗಳು ಹಿರಿಯರೊಡನೆಯೂ ಇರುವರು

ಶ್ರೀ ನರಹರಯ್ಯನವರು ಶೈಶವದಿಂದಲೂ ಕುಶಾಗ್ರ ಬುದ್ಧಿಗಳಾಗಿದ್ದರೆಂದು ತಿಳಿಯಬರುತ್ತಿದೆ ಇವರ ಮೂರನೆ ವರ್ಷದಲ್ಲಿ ಚೌಲ

§ ಈ ಸೂರ್ಯನಾರಾಯಣಭಟ್ಟರಿಗೆ ಪ್ರಥಮ ಕಳತ್ರವಿಯೋಗವಾಗಿ ದ್ವಿತೀಯ ವಿವಾಹವಾಗಿತ್ತು ಆಕೆಯೂ ಇವರ ೩೮ ವರ್ಷ ವಯಸ್ಸಿನಲ್ಲಿಯೇ ಗತಿಸಲು ಕೆಲವು ವರ್ಷಗಳ ವರೆಗೆ ಹಾಗೆಯೇ ಇದ್ದು, ಬಳಿಕ ಕಾಶಿಗೆ ಹೋಗಿ ಸನ್ಯಾಸವನ್ನು ಸ್ವೀಕರಿಸಿ, ಪರಮಹಂಸರಾಗಿ ೨೫ ವರ್ಷಗಳ ಕಾಲವಿದ್ದು ಮಹಾಸಮಾಧಿ ಹೊಂದಿ ೨೦-೨೨ ವರ್ಷಗಳಾದುವು

* ಇವರೇ ಪ್ರಥಮತಃ ಉಪಾಧ್ಯಾಯರಾಗಿಯೂ ಮುಂದೆ ಅಮಲ್ದಾರರಾಗಿಯೂ ಈಗ ಚೀಫಕೋರ್ಟ ಅಡ್ವೋಕೇಟರಾಗಿಯೂ ಅನೇಕಾನೇಕ ಕರ್ಣಾಟಕ ಗ್ರಂಥಕರ್ತರಾಗಿಯೂ ಕನ್ನಡಿಗರಿಗೆ ಚಿರಪರಿಚಿತರಾಗಿರುವ ಶ್ರೀಯುತ ಎಮ್. ಎಸ್. ಪುಟ್ಟಣ್ಣ ಬಿ ಎ ಯವರು ಸಚಿತ್ರವಾದ ಇವರ ಜೀವನಚರಿತ್ರವು ಶೀಘ್ರದಲ್ಲಿಯೇ "ನಂದಿನಿ"ಯಲ್ಲಿ ಬರುವದೆಂದು ನಿರೀಕ್ಷಿಸಲ್ಪಟ್ಟಿದೆ.

ಕಾರ್ಯವು ವಿಜೃಂಭಣೆಯಿಂದ ನಡೆಯುತ್ತಿದ್ದಾಗ ನೂರಾರು ಮಂದಿ ಬ್ರಾಹ್ಮಣರು ಭೋಜನಕ್ಕಾಗಿ ಸೇರಿದ್ದರು ಭೋಜನಾದಿಗಳು ಮುಗಿದ ಬಳಿಕ ಬ್ರಾಹ್ಮಣರ ಆಶೀರ್ವಾದವನ್ನು ಪಡೆವುದಕ್ಕೆ ಇವರು ನಮಸ್ಕಾರ ಮಾಡಲು, ಇವರ ತಂದೆ ವೇದಮಂತ್ರವನ್ನು ಹೇಳಲು ಮೊದಲು ಮಾಡಿದರು ಆಗ ಬಾಲ ನರಹರಿಯು ತಾನೂ ಅವರಂತೆಯೇ ಸ್ವರ ತಪ್ಪದೆ ಆ ಮಂತ್ರಗಳನ್ನು ಹೇಳಿಬಿಟ್ಟನು ಇದನ್ನು ಕೇಳಿ ಸಮಸ್ತರಿಗೂ ಆಶ್ಚರ್ಯವುಂಟಾಯಿತು ನರಹರಿ ಶಾಸ್ತ್ರಿಗಳು ನಿತ್ಯವೂ ಬ್ರಾಹ್ಮಮುಹೂರ್ತದಲ್ಲೆದ್ದು ಶಿಷ್ಯರಿಗೆ ಮಂತ್ರಗಳನ್ನು ಹೇಳಿಕೊಡುವ ವಾಡಿಕೆಯಾಗಿದ್ದಿತು. (ಅವರು ಈಗಲೂ ಆ ಹೊತ್ತಿನಲ್ಲಿ ಯಾರಿಗಾದರೂ ಏನನ್ನಾದರೂ ಹೇಳಿಕೊಡುತ್ತಿರುವರು) ಅದಷ್ಟು ಕಿವಿಯ ಮೇಲೆ ಬಿದ್ದು ಆ ಮಂತ್ರಗಳನ್ನು ತಾನೂ ಕಲಿತುಕೊಂಡು ಆಟವಾಡುತ್ತಿದ್ದಾಗಲೂ ಅದನ್ನೇ ಹೇಳುತ್ತಲಿದ್ದನು ಇದೇ ಮೇಲೆ ಹೇಳಿದ ವೈಚಿತ್ರ್ಯದ ರಹಸ್ಯವು

ಇದರಿಂದ ತಂದೆಗೆ ತುಂಬ ಸಂತೋಷವಾಯಿತು ಮತ್ತು ಒಡನೆಯೆ ಮಗುವಿಗೆ ಅಮರಕೋಶವನ್ನು ಬಾಯಿಪಾಠ ಮಾಡಿಸಲು ತೊಡಗಿದರು ನಾಲ್ಕು ವರ್ಷ ತುಂಬುವದರೊಳಗೆ ಬಾಲ ನರಹರಿಗೆ ತ್ರಿಕಾಂಡ ಅಮರವೂ ಕಂಠಪಾಠವಾಗಿ ವಾಕೋವಿಧೇಯವಾಗಿ ಬರುತ್ತಿದ್ದಿತು ೫ನೆ ವರ್ಷದಲ್ಲಿಯೇ ಅಕ್ಷರಾಭ್ಯಾಸವಾಯಿತು ಆದರೂ ಅತಿ ಬಾಲ್ಯದಲ್ಲಿ ಅಧಿಕ ವಿದ್ಯೆ ಕಲಿಸಕೂಡದೆಂಬ ಭಾವನೆಯಿಂದ ಹಿರಿಯರು ಒಂದೆರಡು ವರ್ಷಗಳ ಕಾಲ ಸುಮ್ಮನಿದ್ದರು ಹೀಗಾಗಿ ಪ್ರಬಲವಾದ ಇವರ ಬುದ್ಧಿಶಕ್ತಿಯು ಸರಿಯಾದ ಮಾರ್ಗ ತಪ್ಪಿ ಅಡ್ಡದಾರಿಗೆ ತಿರುಗಿತು "ನರಸಿಂಹಶಾಸ್ತ್ರಿಗಳ ಮಗನು ಬಲು ತುಂಟನೆಂದೂ ಕೆಲಸಕ್ಕೆ ಬಾರದ ನಿರಕ್ಷರಕುಕ್ಷಿಯೆಂದೂ" ಜನರು, ಚಿಕ್ಕ ನರಹರಿಯ ಓರಿಗೆಯ ತಮ್ಮ ಮಕ್ಕಳ ಪ್ರೌಢಿಮೆಯನ್ನೂ ನರಹರಿಯ ಮೂರ್ಖತನವನ್ನೂ ಹೋಲಿಸಿ ಈತನ ತಂದೆಯ ಇದಿರಾಗಿಯೇ ಚುಚ್ಚುಮಾತನಾಡುವದಕ್ಕೆ ಮೊದಲಾಯಿತು. ಇದರಿಂದ ಶಾಸ್ತ್ರಿಗಳು

ತುಂಬ ನಿಂದು ಒಡನೆಯೇ ವಿದ್ಯಾಭ್ಯಾಸಕ್ಕೆ ಪ್ರಾರಂಭ ಮಾಡಿದರು ಎರಡು ದಿನದೊಳಗಾಗಿ ಕನ್ನಡ ಅಕ್ಷರಮಾಲೆಯನ್ನೂ ಮುಂದೆ ಒಂದು ವಾರದೊಳಗಾಗಿ ಕಾಗುಣಿತ ಒತ್ತಕ್ಷರಗಳನ್ನೂ, ಆ ತರುವಾಯ ೨ ವಾರಗಳಲ್ಲಿ ನಾಗರ ಅಕ್ಷರಗಳನ್ನು ಬರೆದು ಓದಿ ಮಾಡುವ ಮಟ್ಟಿಗೂ ಹೀಗೆ ಇತರರ ಮಕ್ಕಳು ಒಂದು ವರ್ಷದವರೆಗೆ ಮಾಡತಕ್ಕಷ್ಟು ಅಭ್ಯಾಸವನ್ನು ಸರಹರಿಯ ಒಂದು ತಿಂಗಳೊಳಗಾಗಿ ಮುಗಿಸಿಬಿಟ್ಟನು ಇದನ್ನು ನೋಡಿ ಕೇಳಿದ ಉಪಾಧ್ಯಾಯರಾದ ತ್ರಿಗ್ಸ್ವಲ್ಲರೂ ಆಶ್ಚರ್ಯಗೊಂಡು ತಮ್ಮ ಯಾಸ್ಥವತನಕ್ಕೆ ತಾವೇ ಲಜ್ಜಿತರಾದರು.

ಅಲ್ಲಿಂದ ಮುಂದ ಕನ್ನಡ ಶಾಲೆಯ ಅಭ್ಯಾಸಕ್ಕೆ ಪ್ರಾರಂಭ ವಾಯಿತು. ಯಾವ ಪಾಠವೇ ಆಗಲಿ ಸರಹರಿಗೆ ಲೀಲಾಜಾಲವಾಗಿ ಬರುತ್ತಿತ್ತು. ಈ ಸ್ಥಿತಿಯು ವಿದ್ಯಾರ್ಥಿಗಳಿಗೆ ತುಂಬಾ ಕ್ಲಿಷ್ಟವೆಂದು ಭಾವಿಸಲ್ಪಡುತ್ತಿದ್ದ ಲೆಕ್ಕಗಳನ್ನೆಲ್ಲಾ ಮಾನಸಿಕ ವೃತ್ತಿಯಿಂದಲೇ ಮಾಡಿ ಹೇಳುತ್ತಿದ್ದನು. ೧೫ನೆ ವರ್ಷದಲ್ಲಿಯೂ ಈತನು ಪ್ರಥಮ ಸ್ಥಾನದಲ್ಲಿರುತ್ತಿದ್ದನು. ೧೮೯೧ರಲ್ಲಿ ಕನ್ನಡ ಲೋವರ್ ಸೆಕಂಡರಿ ಪರೀಕ್ಷೆಯಾಯಿತು. ಆ ವರ್ಷವೇ ಇಂಗ್ಲಿಷು ಪ್ರೈಮರಿ ಕ್ಲಾಸಿಗೂ ಸೇರಿ ಅಲ್ಲಿಯೂ ಅಭ್ಯಸಿಸುತ್ತಿದ್ದನು. ನಾಲ್ಕು ವರ್ಷದ ಇಂಗ್ಲಿಷು ಅಭ್ಯಾಸವನ್ನು ಮೂರು ವರ್ಷದಲ್ಲಿಯೇ ಮುಗಿಸಿ ೧೮೯೪ರಲ್ಲಿ ಇಂಗ್ಲಿಷ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ತೇರಿದನು. ಮತ್ತು ತನ್ನ ಪಟ್ಟಣದಲ್ಲಿಯೇ ಹೈಸ್ಕೂಲಿನಲ್ಲಿ ಮೆಟ್ರಿಕ್ಯುಲೇಶನ್ (ಪ್ರವೇಶ) ಪರೀಕ್ಷೆಗೆ ಓದತೊಡಗಿದನು.

ಆಗ ಆ ಶಾಲೆಗೆ ಕರ್ಣಾಟಕ ಕವಿಗಳಲ್ಲಿ ಪ್ರಮುಖರಾಗಿ "ಇಂದ್ರಶೀಲ ವಿಜಯ' 'ಪಾರ್ವತೀ ಪರಿಣಯ' ಇತ್ಯಾದಿ ನಾಟಕ ಗ್ರಂಥಗಳನ್ನು ರಚಿಸಿ ಕೃತದಲ್ಲಿ ವಿಶೇಷ ಪ್ರಸಿದ್ಧರಾಗಿರುವ ಬ್ರ॥ ಶ್ರೀ॥ ಮೈಸೂರು ಸೀತಾರಾಮ ಶಾಸ್ತ್ರಿಗಳು * ಕರ್ಣಾಟಕ ಪಂಡಿತರಾಗಿ

* ಈ ಪಂಡಿತೋತ್ತಮರ ಚರಿತ್ರೆಯನ್ನು ಸಚಿತ್ರವಾಗಿ ಮುಂದೆ ಕೊಡಬೇಕೆಂದಿರುವೆವು

ಬಂದರು. ಇವರು ಕವಿತ್ವ ಮಾಡುತ್ತಿರುವದನ್ನು ನೋಡಿ ನರಹರಯ್ಯನವರಿಗೂ ಕವಿತಾರಚನೆಯಲ್ಲಿ ಕುತೂಹಲವುಂಟಾಯಿತು. ಹೀಗಾಗಿ ಕಂದಪದ್ಯಾದಿಗಳ ಛಂದಸ್ಸೇ ಮೊದಲಾದ ಕಾವ್ಯಲಕ್ಷಣಗಳನ್ನು ತಿಳಿದು ತಾವೂ ಪದ್ಯಗಳನ್ನು ಬರೆದು ಪಂಡಿತರಿಗೆ ತೋರಿಸಿ ಅವರಿಂದ ತಿದ್ದಿಸಿಕೊಳ್ಳುತ್ತ ಬಂದರು. ಇದರಿಂದ ಶಾಸ್ತ್ರಿಗಳಿಗೂ ಈತನಲ್ಲಿ ಪ್ರೇಮಾದರ ಬುದ್ಧಿಯುಂಟಾಗಿ 'ಬರಿಯ ಕವಿತಾಶಕ್ತಿಯಿಂದ ಪ್ರಯೋಜನವಿಲ್ಲ. ಭಾಷಾಸಾಹಿತ್ಯಗಳ ಜ್ಞಾನವು ಮೊದಲು ಉಂಟಾಗಬೇಕು, ಅದನ್ನು ಹೊಂದಲು ಓದಿಕೊಳ್ಳಬೇಕೆಂದು ಉಪದೇಶಿಸಿದರು.' ಅದರಂತೆಯೇ ಇವರು ಶಾಸ್ತ್ರಿಗಳ ಸಹಾಯದಿಂದ ಹಳಗನ್ನಡ ವ್ಯಾಕರಣವನ್ನೂ ಹಳಗನ್ನಡದ ಗ್ರಂಥಗಳನ್ನೂ ಅಭ್ಯಾಸಿಸತೊಡಗಿದರು. ಸಾಲದುದಕ್ಕೆ ರಾತ್ರಿಯ ಹೊತ್ತು ಬೇರೊಬ್ಬ ವಿದ್ಯಾರ್ಥಿಗೆ ಎರಡು ಗಂಟೆಗಳ ಕಾಲ ಪಾಠ ಹೇಳಿಕೊಡುವ ಕೆಲಸವೂ ಇದ್ದಿತು. ಹೀಗಾಗಿ ಸ್ವಂತದ ಆಟಪಾಟಗಳಿಗೆ ಬೇಕಾದಷ್ಟು ಸಮಯವು ದೊರೆಯದಂತಾದುದರಿಂದ ಚಿಕ್ಕತನದಲ್ಲಿ ಕಾಯಶಕ್ತಿ ವೃದ್ಧಿಯಾಗಿ ರೋಗಾದಿಗಳಿಗೆ ಆಸ್ಪದವಿಲ್ಲದ ಹಾಗೆ ಬೆಳೆಯಲು ಆಗದೆ ಹೋಯಿತು. ಹಾಗಾದರೂ ಇವರು ವರ್ಗದಲ್ಲಿ ಮೊದಲನೆಯವರಾಗಿಯೇ ಇರುತ್ತಿದ್ದರು.

೧೮೯೩ರಲ್ಲಿ ನರಹರಯ್ಯನವರು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪ್ರಥಮ ವರ್ಗದವರಾಗಿ ತೇರಿ ಮೈಸೂರು ಸರ್ಕಾರದವರಿಂದ ತಿಂಗಳಿಗೆ ೧೦ ರೂಪಾಯಿಯ ಒಂದು ವಿದ್ಯಾರ್ಥಿವೇತನವನ್ನು ಪಡೆದು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಎಫ್. ಎ. ಕ್ಲಾಸಿಗೆ ಸೇರಿದರು. ಕಾಲೇಜಿಗೆ ಸಂಬಳವನ್ನೂ ಕೊಡಬೇಕಾಗಿರಲಿಲ್ಲ. ಈ ವರೆಗೆ ಮೂರು ವರ್ಷಗಳ ಕಾಲ ಇವರು ಕನ್ನಡವನ್ನು ಚೆನ್ನಾಗಿ ಅಭ್ಯಸಿಸಿದ್ದರು. ಸಂಸ್ಕೃತವನ್ನು ಕಲಿಯಬೇಕೆಂದು ಇವರಿಗೂ ಇಚ್ಛೆಯಿದ್ದುದಲ್ಲದೆ ಇವರ ಹಿರಿಯರೂ ಅಪೇಕ್ಷಿಸಿದ್ದರು. ಕಾರಣಾಂತರಗಳಿಂದ ಕಾಲೇಜಿನಲ್ಲಿಯೇ ಸಂಸ್ಕೃತವನ್ನು ಓದಿಕೊಳ್ಳಲು ಸಾಧ್ಯವಾಗಲಿಲ್ಲ. ಆದರೂ ಸಂಸ್ಕೃತ ಜ್ಞಾನವಿಲ್ಲದೆ ಕನ್ನಡದ ಅಭ್ಯಾಸವು ಅಪೂರ್ಣವಾಗುವ

ದೆಂಬ ಭಾವನೆಯಿಂದ ಇವರು ಬೆಳಗಿನ ಹೊತ್ತು ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತವನ್ನು ಅಭ್ಯಸಿಸತೊಡಗಿದರು. ಸ್ವಲ್ಪ ಕಾಲದೊಳಗಾಗಿ ಸಾಹಿತ್ಯದಲ್ಲಿ ಕಾವ್ಯಭಾಗವೂ ಚಂಪೂಗಳೂ ವ್ಯಾಕರಣದಲ್ಲಿ ಸಿದ್ಧಾಂತ ಕೌಮುದಿಯ ಬಹು ಭಾಗವೂ ಮುಗಿಯಿತು ಇವರ ಜಿಜ್ಞಾಸೆಯನ್ನು ನೋಡಿ ಸಂಸ್ಕೃತ ಪಾಠಶಾಲೆಯವರು ಇವರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಕೊಟ್ಟು ತಕ್ಕಷ್ಟು ಮಟ್ಟಿಗೆ ವಿದ್ಯಾರ್ಥಿವೇತನವನ್ನೂ ಕೊಡಿಸಿದರು ಈ ಕಾಲದಲ್ಲಿಯೂ ಹಳಗನ್ನಡದ ಅಭ್ಯಾಸವು ಬಿಡದೆ ನಡೆಯುತ್ತಿದ್ದಿತು ಹೀಗಾಗಿ ಎಫ್ ಎ. ಪರೀಕ್ಷೆಯ ಅಭ್ಯಾಸಕ್ಕೆ ಬೇಕಾದಷ್ಟು ಸಮಯ ದೊರೆಯದೆ ಆ ವರ್ಷದ (೧೮೯೯) ಪರೀಕ್ಷೆಯಲ್ಲಿ ಕೃತಾರ್ಥರಾಗಲಿಕ್ಕಾಗದೆ ಹೋಯಿತು

೧೯೦೦ರಲ್ಲಿ ಈವರೆಗೆ ಕನ್ನಡದಲ್ಲಿ ಹುಟ್ಟಿರುತ್ತಿದ್ದ ಪತ್ರಿಕೆಗಳಲ್ಲೆಲ್ಲಾ ಶ್ರೇಷ್ಠವಾಗಿ, ಮಂಗಳೂರಿನಲ್ಲಿ 'ಸುವಾಸಿನಿ' ಎಂಬ ಸಚಿತ್ರ ಮಾಸಪತ್ರಿಕೆಯು ಹೊರಟಿತು. ಇದಕ್ಕೆ ಮ|| ಬಿ ರಾಮರಾವ ಎಮ್. ಎ, ಯವರು ಸಂಪಾದಕರಾಗಿದ್ದರು ಈ ಪತ್ರಿಕೆಯನ್ನು ನೋಡಿದ ಮಾತ್ರದಿಂದ ನರಹರಯ್ಯನವರ ಭಾಷಾವಾತ್ಸಲ್ಯವು ಉಕ್ಕೇರಿತು ಪ್ರಥಮತ ಲೇಖನಮೂಲವಾಗಿಯೂ ಮುಂದೆಮುಖತವೂ ಇವರಿಗೂ ರಾಮರಾಯರಿಗೂ ಪರಿಚಯವುಂಟಾಗಿ, ಇವರು ಸುವಾಸಿನಿಯ ಲೇಖಕರಲ್ಲಿಯೂ ಹಿತಚಿಂತಕರಲ್ಲಿಯೂ ಪ್ರಮುಖರಾದ ಒಬ್ಬರಾದರು ಶ್ರೀ|| ರಾಮರಾಯರೊಡನೆ ಇವರಿಗುಂಟಾದ ಸ್ನೇಹವು, ಈ ವರೆಗೂ ಅವ್ಯಾಹತವಾಗಿ ನಡೆದುಬಂದು ಕೇವಲ ಸಮೀಪ ಬಾಂಧವ್ಯದಂತೆ ದೃಢವಾಗಿ ನಿಂತಿರುವುದು. ನರಹರಯ್ಯನವರ ಲೇಖನಿಯಿಂದ 'ಹಾಲು' 'ಗುರುಭಕ್ತಿ' 'ಮೈತ್ರಿ' 'ಅಂಗಸಾಧನೆ' ಮುಂತಾದ ಉತ್ಕೃಷ್ಟವಾದ ಕೆಲವು ಪ್ರಬಂಧಗಳು ಸುವಾಸಿನಿ'ಯಲ್ಲಿ ಪ್ರಚುರವಾಗಿವೆ ಇತರ ಪತ್ರಿಕೆಗಳಿಗೂ ಇವರು ಆಗಿಂದಾಗ ಲೇಖನಗಳನ್ನು ಕಳುಹುತ್ತಿದ್ದರು ಇವರು ಈ ಕಾಲದಲ್ಲಿ ಇನ್ನೂರು ಕಂದಪದ್ಯಗಳುಳ್ಳ ಲಿಟ್ಲನ್

ಕವಿಯ (Litton) 'ಡೆತ್ ಎಂಡ್ ಸಿಸಿಪಸ್' (Death and Sisy-pus) ಎಂಬ ಗ್ರಂಥವನ್ನು 'ಸೈಸಿಪಸ ವೃತ್ತಾಂತ' ವೆಂಬ ಹೆಸರಿಂದ ಲೂ ಸುಮಾರು ಎಂಬತ್ತು ಕಂದಪದ್ಯಗಳಾಗಿ 'ಲಕ್ಷ್ಮೀ ನೃಸಿಂಹಸ್ತೋತ್ರ'*ವೆಂಬ ಚಿಕ್ಕಪುಸ್ತಕವನ್ನೂ ಬರೆದು ಮುಗಿಯಿಸಿದರಲ್ಲದೆ 'ಲಕ್ಷ್ಮೀ ನೃಸಿಂಹ ವಿಜಯ' ವೆಂಬ ಇಪ್ಪತ್ತುಮೂರು ಸರ್ಗಗಳಿರುವ ದೊಡ್ಡದಾದ ಒಂದು ಕಾವ್ಯವನ್ನೂ ಬರೆಯತೊಡಗಿದರು ಇದರ ಹತ್ತೊಂಬತ್ತು ಸರ್ಗಗಳು ಮುಗಿದು ಉಳಿದ ನಾಲ್ಕು ಇದುವರೆಗೂ ಬರೆಯಲ್ಪಟ್ಟಿರುವದಿಲ್ಲ ತ್ರ್ಯಾಹಿಕ ಶೀತಜ್ವರಬಾಧೆ, ವ್ಯಾಸಂಗ ಮುಂತಾದವುಗಳ ದೆಸೆಯಿಂದ ಈ ಕೆಲಸವು ಅಷ್ಟರಲ್ಲಿಯೇ ನಿಂತಿತು ಈ ವರ್ಷದಲ್ಲಿಯೇ ಇವರು ಎಫ್ ಎ, ಪರೀಕ್ಷೆಯಲ್ಲಿ ಕೃತಾರ್ಥರಾದರು

೧೮೯೦ರಲ್ಲಿ ನರಹರಯ್ಯನವರು ಬಿ ಎ ಕ್ಲಾಸಿನಲ್ಲಿ ಓದುವದಕ್ಕೆ ಪ್ರಾರಂಭಿಸಿ ಪುನ ಸಂಸ್ಕೃತ ಪಾಠಶಾಲೆಯಲ್ಲಿ ನಾಟಕ ಭಾಗವನ್ನು ಅಭ್ಯಸಿಸತೊಡಗಿದರು ಈ ವರ್ಷದಲ್ಲಿ 'ಚಂದ್ರಿಕಾವಿಜಯ' ಎಂಬ ಚಿಕ್ಕ ನಾಟಕವು ಬರೆಯಲ್ಪಟ್ಟಿತು ಮತ್ತು "ರೋಮಕಮಹಾವೀರಚರಿತ" (Julius Ceasor) ಮತ್ತು ಸಿಂಹಳೇಯ ಚರಿತೆ (King Lear ಎಂಬ ಷೇಕಸ್ಪಿಯರ್ ಕವಿಯ ನಾಟಕಗಳೆರಡರ ಅನುವಾದವು ನಾಟಕ ರೂಪದಲ್ಲಿ ಬರೆಯಲಾಯಿತು ಇದಲ್ಲದೆ ವಿಸ್ತಾರವಾಗಿ "ನೆಪೋಲಿಯನ ಚಕ್ರವರ್ತಿಯ ಚರಿತೆ"ಯೂ ಸಂಕ್ಷಿಪ್ತವಾಗಿ 'ಅಲೆಕ್ಸಾಂಡರ 'ಸೀಜರ್' ಮೊದಲಾದ ಚರಿತ್ರೆಗಳೂ ಹಳಗನ್ನಡದಲ್ಲಿ "ಸುಭದ್ರಾಪರಿಣಯ ನಾಟಕವೂ ಲಿಖಿತವಾದುವು" ಮತ್ತು ಆಗಿಂದಾಗ ಪತ್ರಿಕೆಗಳಿಗೂ ಬರೆಯುತ್ತಿದ್ದರು ಈ ವರ್ಷವೂ ತ್ರ್ಯಾಹಿಕ ಜ್ವರವು ಅಪರಾಹ್ನದಲ್ಲಿ ಪ್ರಾರಂಭವಾಗಿ ಹದಿನೈದು ತಿಂಗಳಕಾಲ ಬಿಡದೆ ಪೀಡಿಸುತ್ತಿದ್ದಿತು ಇನ್ನು ಸೀನಿಯರ್ ಬಿ ಎ ಕ್ಲಾಸಿನಲ್ಲಿ ಓದುತ್ತಿದ್ದಾಗ ಸಂಸ್ಕೃತ ಅಲಂಕಾರ ಶಾಸ್ತ್ರವನ್ನು ಅಭ್ಯಸಿಸುತ್ತಿದ್ದರಾಗಿ ಆ ವರ್ಷದ

* ಲಕ್ಷ್ಮೀನೃಸಿಂಹನು ಇವರಿಗೆ ಮನೆಯ ದೇವರು ಆದುದರಿಂದಲೇ ಇವರ ಮನೆಯಲ್ಲಿ 'ನರಸಿಂಹ' 'ನರಹರಿ' ಎಂಬ ಹೆಸರು ಹೆಚ್ಚು

ಬಿ. ಏ ಪರೀಕ್ಷೆಯಲ್ಲಿ ಭಾಷಾಭಾಗಗಳಲ್ಲಿ (ಇಂಗ್ಲಿಷ ಮತ್ತು ಸಂಸ್ಕೃತ) ಮಾತ್ರ ತೇರಲು ಸಾಧ್ಯವಾಯಿತು.

೧೯೦೩ ರಲ್ಲಿ ನರಹರಯ್ಯನವರು ಮದ್ರಾಸು ಕ್ರಿಶ್ಚಿಯನ್ ಕಾಲೇಜಿನಲ್ಲಿ ಕೆಲವು ತಿಂಗಳ ಕಾಲ ಕನ್ನಡ ಪಂಡಿತರಾಗಿ ಕೆಲಸಮಾಡಿದರು ಈ ಕಾಲದಲ್ಲಿಯೇ ಇವರು ಷೇಕ್ಸಪೀಯರ ಕವಿಯ 'ಹ್ಯಾಮ್ಲೆಟ್' (ಹೇಸಡಿಂಗದ ಚರಿತೆ) "ಟೆಲ್ವ್ಥ ಫ್ಸೈಟ್" ಎಂಬ ನಾಟಕಗಳ ಕೆಲಕೆಲವು ಭಾಗಗಳನ್ನು ಕನ್ನಡಿಸಿದರು ಈ ಪುಸ್ತಕಗಳು ಈಗಲೂ ಇನ್ನೂ ಅಪೂರ್ಣವಾಗಿಯೇ ಉಳಿದಿವ

ಬಿ ಏ. ಪರೀಕ್ಷೆಯನ್ನು ಪೂರ್ಣಗೊಳಿಸುವುದಕ್ಕೆ ಮೊದಲೇ ಎಲ್‌ಎಲ್ ಬಿ ಪರೀಕ್ಷೆಯ ಪ್ರಥಮ ಭಾಗದಲ್ಲಿ ತೇರುವದಕ್ಕೆ ಬೊಂಬಾಯಿಯಲ್ಲಿ ಅವಕಾಶವಿದ್ದಿತಾದುದರಿಂದ ೧೯೦೪ರಲ್ಲಿ ಆ ಪರೀಕ್ಷೆಗೆ ಓದುವ ಕುತೂಹಲವುಂಟಾಗಿ ನರಹರಯ್ಯನವರು ಬೊಂಬಾಯಿಗೆ ಹೊರಟು ಹೋಗಿ ಅಲ್ಲಿಯ 'ಲಾಸ್ಕೂಲ'ನ್ನು ಸೇರಿದರು ಮತ್ತು ಸಾಯಂಕಾಲ ಒಂದೆರಡು ತಾಸಿನ ಹೊತ್ತು ಶಾಲೆಯಲ್ಲಿರಬೇಕಾಗಿದ್ದು ಉಳಿದ ಸಮಯವೆಲ್ಲ ನಿರರ್ಥಕವಾಗಿ ಕಳೆಯುವಂತಿದ್ದುದರಿಂದ ಮಿತ್ರರಾದ ಶ್ರೀ ಬಿ ರಾಮರಾಯರ ಸೂಚನೆಯಂತೆ ಮೋಲಿಯರ' (Moliere) ಎಂಬ ಫ್ರೆಂಚುಕವಿಯ ಹಾಸ್ಯರಸ ಪ್ರಧಾನವಾದ "ಪ್ರಮಾದಕರಣ" (The mistake) "ಋಜುಕಚರಿತೆ" (The Plain Dealer) ಮತ್ತು ಕೃತ್ರಿಮ ಭಿಷಗ್ವಿಲಾಸ (The Mock Doctor) ಎಂಬ ಮೂರು ನಾಟಕಗಳನ್ನು ಒಟ್ಟು ಹದಿನೆಂಟು ದಿನಗಳೊಳಗಾಗಿಯೇ ಬರೆದು ಮುಗಿಸಿದರು

ಈ ಕಾಲದಲ್ಲಿ ಶ್ರೀ|| ರಾಮರಾಯರ ಮೂಲವಾಗಿ ನರಹರಯ್ಯನವರಿಗೂ ಬೊಂಬಾಯಿ ಹೈಕೋರ್ಟಿನ ಪ್ರಸಿದ್ಧವಕೀಲರೂ ಕರ್ಣಾಟ ಭಾಷಾಭಿಮಾನಿಗಳಲ್ಲಿ ಶ್ರೇಷ್ಠರೂ ಪೌರ್ವಾತ್ಯ ಪಾಶ್ಚಿಮಾತ್ಯ ಸಂಸ್ಕೃತಿಗಳಲ್ಲಿ ಉತ್ತಮವಾಗಿ ವ್ಯಾಸಂಗ ಮಾಡಿದವರೂ ಆದ ಶ್ರೀಯುತ 'ಶ್ಯಾಮರಾವ ವಿಠ್ಠಲ ಕಾಯಿಕಿಣಿ' ಎಂಬವರಿಗೂ ಸ್ನೇಹಸಂ

ಬಂಧವುಂಟಾಯಿತು. ಶ್ರೀ|| ಶಾಮರಾಯರು * ಇವರೊಡನೆ ಪಂಪ ಭಾರತಾದಿ ಹಳೆಗನ್ನಡ ಗ್ರಂಥಗಳನ್ನೋದುತ್ತಿದ್ದರು. ಮತ್ತು ಇವರ ಲೇಖನಶೈಲಿ, ಪಾಂಡಿತ್ಯವೇ ಮೊದಲಾದುವನ್ನು ನೋಡಿ ಪ್ರೀತರಾಗಿ "ನೀವು ಬಿಡದೆ ಗ್ರಂಥಗಳನ್ನು ಬರೆಯಿರಿ, ಅವನ್ನೆಲ್ಲ ನಾನೇ ವೆಚ್ಚವಿಟ್ಟು ಪ್ರಕಟಗೊಳಿಸುವೆನು, ಅಷ್ಟೇ ಅಲ್ಲ ನಿಮ್ಮ ವಿದ್ಯಾವ್ಯಾಸಂಗವು ನಿರಾತಂಕವಾಗಿ ನಡೆಯಲು ತಕ್ಕಂತೆ ಧನಸಹಾಯ ಮಾಡುವೆನು. ಮುಂದೆ ವಕೀಲರಾದ ಬಳಿಕವು ನಿಮ್ಮನ್ನು ಜತೆಗಾರನಾಗಿಟ್ಟು ಕೊಂಡು ಅಭಿವೃದ್ಧಿಗೆ ತರುವೆನು" ಎಂದು ಮಾತುಕೊಟ್ಟು, ಮಿಸೆಸ್ ಹೆನ್ರಿವುಡ್-ಎಂಬವರ "Mrs Halliburton's troubles" ಎಂಬ ಬಹು ಮನೋಹರವಾದ ಕಲ್ಪನಾಪ್ರಬಂಧವನ್ನು ಪರಿವರ್ತಿಸಬೇಕೆಂದು ಸೂಚಿಸಿದರು ನರಹರಯ್ಯನವರಿಗೆ ಈ ಶ್ರೀಮಂತರ ಸಹಾಯವು ಕಲ್ಪವೃಕ್ಷದಂತಾಯಿತು ಒಡನೆಯೇ ಇವರು ಭಾಷಾಂತರದ ಕಾರ್ಯವನ್ನು ಕೈಕೊಂಡು ಸ್ವಲ್ಪಕಾಲದೊಳಗಾಗಿ ಅರ್ಧಕ್ಕೂ ಹೆಚ್ಚು ಭಾಗವನ್ನು ಮುಗಿಸಿದರು ಆದರೆ "ತಾನೊಂದೆಣಿಸಿದರೆ ದೈವವು ಬೇರೊಂದೆಣಿಸಿತು" ಎಂಬ ಗಾದೆಗನುಸಾರವಾಗಿ ಶ್ಯಾಮರಾಯರು ಅಕಸ್ಮಾತ್ತಾಗಿ ಪ್ಲೇಗ ರೋಗಕ್ಕೆ ಬಲಿಬಿದ್ದು ತೀರಿಕೊಂಡರು, ಅವರ ವಿಯೋಗದಿಂದ ನರಹರಯ್ಯನವರ ಮನೋರಥಗಳೂ ಅಲ್ಲಿಂದಲ್ಲಿಯೇ ಕುಂಠಿತವಾದುವು

೧೯೦೬ರಲ್ಲಿ ದೇವಾಸ (Dewas)ಎಂಬ ದೇಶೀಯ ಸಂಸ್ಥಾನದ ರಾಜಕುಮಾರ 'ಸದಾಶಿವರಾವ್ ಪವಾರ' ಎಂಬವರ ಉಪಾಧ್ಯಾಯತ್ವದ ಕೆಲಸವು ದೊರೆತುದರಿಂದ ಮ|| ನರಹರಯ್ಯನವರು ಅಲ್ಲಿಗೆ ಹೊರಟು ಹೋದರು ಮುಂದೆ ಅಲ್ಲಿಯ ರಾಜರವರ ಪರಿವಾರದಲ್ಲಿಯೇ(Personal Staff)ಇವರಿಗೆ ಕೆಲಸ ಲಭಿಸಿತು ಇಲ್ಲಿ ೧೯೦೮ರ

---

* ಗುಣಗ್ರಾಹಿಗಳೂ ದೇಶಾಭಿಮಾನಿಗಳೂ ಆಗಿದ್ದ ಈ ಮಹನೀಯರ ಸಚಿತ್ರವಾದ ಚರಿತ್ರೆಯನ್ನು ಸಂಗ್ರಹಿಸಿರುವೆವು. ಇದು ಕ್ಷಿಪ್ರದಲ್ಲಿಯೇ "ನಂದಿನಿ"ಯಲ್ಲಿ ಪ್ರಚುರವಾಗುವದು

ಬಿ. ಏ ಪರೀಕ್ಷೆಯಲ್ಲಿ ಭಾಷಾಭಾಗಗಳಲ್ಲಿ (ಇಂಗ್ಲಿಷ ಮತ್ತು ಸಂಸ್ಕೃತ) ಮಾತ್ರ ಶೇರಲು ಸಾಧ್ಯವಾಯಿತು

೧೯೦೫ ರಲ್ಲಿ ನರಹರರಯ್ಯನವರು ಮದ್ರಾಸು ಕ್ರಿಶ್ಚಿಯನ್ ಕಾಲೇಜಿನಲ್ಲಿ ಕಲವು ತಿಂಗಳ ಕಾಲ ಕನ್ನಡ ಪಂಡಿತರಾಗಿ ಕೆಲಸಮಾಡಿದರು ಈ ಕಾಲದಲ್ಲಿಯೇ ಇವರು ಷೇಕ್ಸ್‌ಪೀಯರ ಕವಿಯ 'ಹ್ಯಾಮ್ಲೆಟ್' (ಹೇನಹೊಂಗದ ಚರಿತೆ) "ಟ್ವೆಲ್ವ್ತ್ ಫ್‌ನೈಟ್" ಎಂಬ ನಾಟಕಗಳ ಕೆಲಕೆಲವು ಭಾಗಗಳನ್ನು ಕನ್ನಡಿಸಿದರು ಈ ಪುಸ್ತಕಗಳು ಈಗಲೂ ಇನ್ನೂ ಅಪೂರ್ಣವಾಗಿಯೇ ಉಳಿದಿವೆ

ಬಿ ಏ ಪರೀಕ್ಷೆಯನ್ನು ಪೂರ್ಣಗೊಳಿಸುವುದಕ್ಕೆ ಮೊದಲೇ ಎಲ್ ಎಲ್ ಬಿ ಪರೀಕ್ಷೆಯ ಪ್ರಥಮ ಭಾಗದಲ್ಲಿ ತೇರುವದಕ್ಕೆ ಬೊಂಬಾಯಿಯಲ್ಲಿ ಅವಕಾಶವಿದ್ದಿತಾದುದರಿಂದ ೧೯೦೪ರಲ್ಲಿ ಆ ಪರೀಕ್ಷೆಗೆ ಓದುವ ಕುತೂಹಲವುಂಟಾಗಿ ನರಹರರಯ್ಯನವರು ಬೊಂಬಾಯಿಗೆ ಹೊರಟು ಹೋಗಿ ಅಲ್ಲಿಯ 'ಲಾಸ್ಕೂಲ'ನ್ನು ಸೇರಿದರು ಮತ್ತು ಸಾಯಂಕಾಲ ಒಂದೆರಡು ತಾಸಿನ ಹೊತ್ತು ಶಾಲೆಯಲ್ಲಿರಬೇಕಾಗಿದ್ದು ಉಳಿದ ಸಮಯವೆಲ್ಲ ನಿರರ್ಥಕವಾಗಿ ಕಳೆಯುತ್ತಿದ್ದುದರಿಂದ ಮಿತ್ರರಾದ ಶ್ರೀ ಬಿ ರಾಮರಾಯರ ಸೂಚನೆಯಂತೆ 'ಮೋಲಿಯರ' (Moliere) ಎಂಬ ಫ್ರೆಂಚುಕವಿಯ ಹಾಸ್ಯರಸ ಪ್ರಧಾನವಾದ "ಪ್ರಮಾದಕರಣ" (The mistake) "ಋಜುಕಚರಿತೆ" (The Plain Dealer) ಮತ್ತು ಕೃತ್ರಿಮ ಭಿಷಗ್ವಿಲಾಸ (The Mock Doctor) ಎಂಬ ಮೂರು ನಾಟಕಗಳನ್ನು ಒಟ್ಟು ಹದಿನೆಂಟು ದಿನಗಳೊಳಗಾಗಿಯೇ ಬರೆದು ಮುಗಿಸಿದರು

ಈ ಕಾಲದಲ್ಲಿ ಶ್ರೀ|| ರಾಮರಾಯರ ಮೂಲವಾಗಿ ನರಹರರಯ್ಯನವರಿಗೂ ಬೊಂಬಾಯಿ ಹೈಕೋರ್ಟಿನ ಪ್ರಸಿದ್ಧವಕೀಲರೂ ಕರ್ಣಾಟ ಭಾಷಾಭಿಮಾನಿಗಳಲ್ಲಿ ಶ್ರೇಷ್ಠರೂ ಪೌರ್ವಾತ್ಯ ಪಾಶ್ಚಿಮಾತ್ಯ ಸಂಸ್ಕೃತಿಗಳಲ್ಲಿ ಉತ್ತಮವಾಗಿ ವ್ಯಾಸಂಗ ಮಾಡಿದವರೂ ಆದ ಶ್ರೀಯುತ 'ಶ್ಯಾಮರಾವ ವಿಠ್ಠಲ ಕಾಯಿಕಿಣಿ' ಎಂಬವರಿಗೂ ಸ್ನೇಹಸಂ

ಬಂಧವುಂಟಾಯಿತು. ಶ್ರೀ|| ಶಾಮರಾಯರು * ಇವರೊಡನೆ ಪಂಪಭಾರತಾದಿ ಹಳೆಗನ್ನಡ ಗ್ರಂಥಗಳನ್ನೋದುತ್ತಿದ್ದರು ಮತ್ತು ಇವರ ಲೇಖನಶೈಲಿ, ಪಾಂಡಿತ್ಯವೇ ಮೊದಲಾದುವನ್ನು ನೋಡಿ ಪ್ರೀತರಾಗಿ "ನೀವು ಬಿಡದೆ ಗ್ರಂಥಗಳನ್ನು ಬರೆಯಿರಿ, ಅವನ್ನೆಲ್ಲ ನಾನೇ ವೆಚ್ಚವಿಟ್ಟು ಪ್ರಕಟಗೊಳಿಸುವೆನು, ಅಷ್ಟೇ ಅಲ್ಲ ನಿಮ್ಮ ವಿದ್ಯಾವ್ಯಾಸಂಗವು ನಿರಾತಂಕವಾಗಿ ನಡೆಯಲು ತಕ್ಕಂತೆ ಧನಸಹಾಯ ಮಾಡುವೆನು ಮುಂದೆ ವಕೀಲರಾದ ಬಳಿಕವೂ ನಿಮ್ಮನ್ನು ಜತೆಗಾರನಾಗಿಟ್ಟುಕೊಂಡು ಅಭಿವೃದ್ಧಿಗೆ ತರುವೆನು" ಎಂದು ಮಾತುಕೊಟ್ಟು, ಮಿಸೆಸ್ ಹೆನ್ರಿವುಡ್-ಎಂಬವರ "Mrs Halliburton's troubles" ಎಂಬ ಬಹು ಮನೋಹರವಾದ ಕಲ್ಪನಾಪ್ರಬಂಧವನ್ನು ಪರಿವರ್ತಿಸಬೇಕೆಂದು ಸೂಚಿಸಿದರು ನರಹರಯ್ಯನವರಿಗೆ ಈ ಶ್ರೀಮಂತರ ಸಹಾಯವು ಕಲ್ಪವೃಕ್ಷದಂತಾಯಿತು ಒಡನೆಯೇ ಇವರು ಭಾಷಾಂತರದ ಕಾರ್ಯವನ್ನು ಕೈಕೊಂಡು ಸ್ವಲ್ಪಕಾಲದೊಳಗಾಗಿ ಅರ್ಧಕ್ಕೂ ಹೆಚ್ಚು ಭಾಗವನ್ನು ಮುಗಿಸಿದರು ಆದರೆ "ತಾನೊಂದೆಣಿಸಿದರೆ ದೈವವು ಬೇರೊಂದೆಣಿಸಿತು" ಎಂಬ ಗಾದೆಗನುಸಾರವಾಗಿ ಶ್ಯಾಮರಾಯರು ಅಕಸ್ಮಾತ್ತಾಗಿ ಪ್ಲೇಗ ರೋಗಕ್ಕೆ ಬಲಿಬಿದ್ದು ತೀರಿಕೊಂಡರು, ಅವರ ವಿಯೋಗದಿಂದ ನರಹರಯ್ಯನವರ ಮನೋರಥಗಳೂ ಅಲ್ಲಿಂದಲ್ಲಿಯೇ ಕುಂಠಿತವಾದುವು

೧೯೦೬ರಲ್ಲಿ ದೇವಾಸ (Dewas) ಎಂಬ ದೇಶೀಯ ಸಂಸ್ಥಾನದ ರಾಜಕುಮಾರ 'ಸದಾಶಿವರಾವ್ ಪವಾರ' ಎಂಬವರ ಉಪಾಧ್ಯಾಯತ್ವದ ಕೆಲಸವು ದೊರೆತುದರಿಂದ ಮ|| ನರಹರಯ್ಯನವರು ಅಲ್ಲಿಗೆ ಹೊರಟು ಹೋದರು ಮುಂದೆ ಅಲ್ಲಿಯ ರಾಜರವರ ಪರಿವಾರದಲ್ಲಿಯೇ (Personal Staff) ಇವರಿಗೆ ಕೆಲಸ ಲಭಿಸಿತು ಇಲ್ಲಿ ೧೯೦೮ರ

* ಗುಣಗ್ರಾಹಿಗಳೂ ದೇಶಾಭಿಮಾನಿಗಳೂ ಆಗಿದ್ದ ಈ ಮಹನೀಯರ ಸಚಿತ್ರವಾದ ಚರಿತ್ರೆಯನ್ನು ಸಂಗ್ರಹಿಸಿರುವೆವು. ಇದು ಕ್ಷಿಪ್ರದಲ್ಲಿಯೇ "ನಂದಿನಿ"ಯಲ್ಲಿ ಪ್ರಚುರವಾಗುವದು.

ಪರ್ಯಂತವಿದ್ದಾಗ ಇವರು ಮರಾಠಿಯಿಂದ "ಝಾನ್ಸಿಯ ರಾಣಿ ಲಕ್ಷ್ಮೀಬಾಯಿಯ ಚರಿತ್ರೆ" ಯನ್ನು ಕನ್ನಡಿಸಿದರು ಮುಂದೆ ಪುನ: ಬೊಂಬಾಯಿಗೂ ಅಲ್ಲಿಂದ ಬೆಂಗಳೂರಿಗೂ ಅಲ್ಲಿಂದ ಮದರಾಸಿಗೂ ಬಂದು, ಪ್ರಸಿದ್ಧ ಎಡ್ವೋಕೇಟರಾದ ಶ್ರೀಮಾನ್ ಸೆಟ್ಲೂರು ಶ್ರೀನಿವಾಸಯ್ಯಂಗಾರ್ಯರವರ ಸಹಾಯಕರಾಗಿ (೧೯೦೯-೧೧) ಸಂಸ್ಕೃತದ "ಮಿತಾಕ್ಷರಾ" ಎಂಬ ಹಿಂದೂ ಧರ್ಮಶಾಸ್ತ್ರವನ್ನು ಅದರ ವ್ಯಾಖ್ಯಾನಾದಿಗಳೊಡನೆ ಪ್ರಚುರಪಡಿಸುವ ಕಾರ್ಯದಲ್ಲಿ ಉದ್ಯುಕ್ತರಾದರು. ಸಂಸ್ಕೃತ ಭಾಗವಲ್ಲ ಅಚ್ಚಾಯಿತು ಈ ಕಾಲದಲ್ಲಿ ಇವರಿಗೆ ಆರೋಗ್ಯವು ಚೆನ್ನಾಗಿರದೆ ಚಾತುರ್ಥಿಕ ಜ್ವರದ ಬಾಧೆಗೆ ಗುರಿಯಾಗಿದ್ದರು.

ಮೂರು ವರ್ಷಗಳ ಚಾತುರ್ಥಿಕ ಜ್ವರದ ಬಾಧೆಯನ್ನು ಸಹಿಸಿ, ಯಾವ ಔಷಧವನ್ನು ಮಾಡಿದರೂ ತತ್ಕಾಲದಲ್ಲಿ ಉಪಶಮನವಾಗುತ್ತಿದ್ದಿತೇ ಹೊರತು ಆರೋಗ್ಯವಾಗದೆ ಇದ್ದುದರಿಂದಲೂ, ಸಾಲದುದಕ್ಕೆ ಸಹಿಸಲಾರದ ಕೆಮ್ಮು ಪ್ರಾಪ್ತವಾದುದರಿಂದಲೂ ಕಡೆಗೆ ಗಂಗಾತೀರದಲ್ಲಿ ವಾಸಮಾಡುವದರಿಂದ ಜಾಡ್ಯನಿವೃತ್ತಿಯಾದೀತೆಂದು ಭಾವಿಸಿ ತಮ್ಮ ತಂದೆಯ ಅಪ್ಪಣೆಯನ್ನು ಬೇಡಿದರು ಅವರು ಅಸ್ವಸ್ಥದಲ್ಲಿದ್ದ ಮಗನನ್ನು ದೂರದೇಶಕ್ಕೆ ಕಳುಹಲು ಇಷ್ಟಪಡದಿದ್ದರೂ ನಿರ್ವಾಹವಿಲ್ಲದೆ ಕೊನೆಗೆ ಒಪ್ಪಿ, ಮಗನ ರಕ್ಷಣೆಗೆ ಬದ್ಧರಾದವರನ್ನು ಜತೆಮಾಡಿ ಕಳುಹಿಕೊಟ್ಟರು, ಆಗ (೧೯೧೧) ಇವರ ಸಹೋದರರಾದ ನಾರಾಯಣ ಶಾಸ್ತ್ರಿಗಳು ಅಲಹಾಬಾದಿನಲ್ಲಿ ಎಲ್ ಎಲ್ ಬಿ ಪರೀಕ್ಷೆಗೆ ಓದುತ್ತಿದ್ದುದರಿಂದ ಇವರೂ ಅಲ್ಲಿಗೆ ಹೋದರು ನಿತ್ಯವೂ ತಪ್ಪದೆ ಗಂಗಾಸ್ನಾನ-ಪಾನಗಳನ್ನು ಮಾಡುತ್ತ ಬಂದುದರಿಂದ ೩-೪ ತಿಂಗಳಲ್ಲಿ ಇವರಿಗೆ ಆರೋಗ್ಯವಾಯಿತು

ಈ ಕಾಲದಲ್ಲಿ ಅವರು ಅಲ್ಲಿಯ ಮೆಟ್ರಿಕ್, ಎಫ್ ಎ, ಪರೀಕ್ಷೆಗಳ ವಿದ್ಯಾರ್ಥಿಗಳಿಗಾಗಿ ಸಂಸ್ಕೃತ ಮತ್ತು ಇಂಗ್ಲಿಷ ಪಾಠಪುಸ್ತಕಗಳ ಟಿಪ್ಪಣಿಗಳನ್ನು ಬರೆದರು. ಇದರ ಮೇಲೆ ೧೯೧೩ರಲ್ಲಿ 'ಮಿತಾಕ್ಷರಾ' ಧರ್ಮಶಾಸ್ತ್ರದ ಮೂರನೆಯ ಕಾಂಡವನ್ನೂ ಪರಿವರ್ತಿಸಿದರು. ಅದು

ಪ್ರಚುರವಾಯಿತು ಈ ಪುಸ್ತಕವು ಸರ್ವಜನಾದರಣೀಯವಾಗಿ ಇವರ ಪರಿವರ್ತನೆಯ ಆಧಾರದ ಮೇಲೆ ಜರ್ಮನ್ ಭಾಷೆಗೂ ಪರಿವರ್ತಿಸಲ್ಪಡತೊಡಗಿ, ನಡುವೆ ಯುದ್ಧಪ್ರಸಂಗವು ಪ್ರಾಪ್ತವಾದುದರಿಂದ ಅಪೂರ್ಣವಾಗಿ ನಿಂತಿದೆ ೧೯೧೩ರಲ್ಲಿ ನರಹರಯ್ಯನವರು ಮದ್ರಾಸ ಬಿ ಏ ಪರೀಕ್ಷೆಯ ಮೂರನೆ ಭಾಗದಲ್ಲಿಯೂ ಕೃತಾರ್ಥರಾಗಿ ಅಲಹಾಬಾದು ವಿಶ್ವವಿದ್ಯಾನಿಲಯದ ಎಲ್‌ಎಲ್ ಬಿ ಪರೀಕ್ಷೆಗೆ ಅಭ್ಯಸಿಸಲು ಮೊದಲು ಮಾಡಿದರು ೧೯೧೪ರಲ್ಲಿ ಈ ಪರೀಕ್ಷೆಯ ಪ್ರಥಮ ಭಾಗದಲ್ಲಿಯೂ ೧೯೧೫ರಲ್ಲಿ ಎರಡನೆ ಭಾಗದಲ್ಲಿಯೂ ಉತ್ತೀರ್ಣರಾಗಿ ಡಿಗ್ರಿಯನ್ನು ಪಡೆದು ಅಂದಿನಿಂದೀಚೆಗೆ ಅದರ ಮೇಲಣ ಎಲ್‌ಎಲ್ ಎಮ್. (LL M) ಎಂಬ ಪರೀಕ್ಷೆಗಾಗಿ ಅಭ್ಯಸಿಸುತ್ತಿರುವರು

ಈ ಮಧ್ಯದಲ್ಲಿ 'ಮಿತಾಕ್ಷರಾ' ಗ್ರಂಥದ ಉಳಿದ ಎರಡು ಕಾಂಡ (ಆಚಾರಕಾಂಡ, ವ್ಯವಹಾರಕಾಂಡ) ಗಳನ್ನು ಪರಿವರ್ತಿಸತೊಡಗಿರುವರು ಮಿತಾಕ್ಷರಾ ಗ್ರಂಥಕ್ಕೆ ಬಾಲಂಭಟ್ಟಿಯೆಂಬ ಉದ್ಗ್ರಂಥವು ವ್ಯಾಖ್ಯಾನವಾಗಿರುವದು ಆಚಾರಕಾಂಡದ ೧೩ ಅಧ್ಯಾಯಗಳಲ್ಲಿ ಉಪೋದ್ಘಾತ, ವಿವಾಹ, ವರ್ಣ, ಜಾತಿವಿವೇಕ, ದಾನ, ಶ್ರಾದ್ಧ, ರಾಜಧರ್ಮ, ಈ ಆರು ಅಧ್ಯಾಯಗಳೂ ೨೫ ಅಧ್ಯಾಯಗಳುಳ್ಳ ಸಮಗ್ರ ವ್ಯವಹಾರಕಾಂಡವೂ ಹಿಂದೂಗಳ ಎಲ್ಲಾ 'ಲಾ' ಅನ್ನೂ ತಿಳಿಯಪಡಿಸುವ ಕಾರಣ, ಇವಿಷ್ಟಕ್ಕೂ ಸಂಬಂಧಪಟ್ಟ ಬಾಲಂಭಟ್ಟಿಯನ್ನು ಪರಿವರ್ತಿಸಿ ಸೇರಿಸುತ್ತಲಿರುವರು ಕೆಲಸವು ಮೂರು ಪಾಲಿಗೆ ಹೆಚ್ಚಾಗಿ ಮುಗಿದಿರುವುದು ಈ ಎರಡು ಕಾಂಡಗಳ ಪರಿವರ್ತನೆಯೂ ಸೇರಿ ಅಚ್ಚಿನಲ್ಲಿ ೩೦೦೦ ರಾಯಲ್ ಪುಟಗಳಿಗೆ ಮೇಲೆ ಆಗುವುದು ಇದಿಷ್ಟೆಲ್ಲವನ್ನೂ ಕಳೆದ ವರ್ಷವು ಮುಗಿವುದರೊಳಗಾಗಿ ಮುಗಿಸಿ ಮುದ್ರಿಸಿ ಪ್ರಚುರಪಡಿಸಬೇಕೆಂದು ಇವರ ಅಭಿಪ್ರಾಯವಿತ್ತು. ಆದರೆ ಪ್ರಕೃತದಲ್ಲಿ ಮುದ್ರಣದ ವ್ಯಯವು ಒಂದಕ್ಕೆ ಮೂರಾಗಿರುವುದರಿಂದಲೂ ಮತ್ತು ಕಾಗದ ಮೊದಲಾದುವು ಯಥೇಷ್ಟವಾಗಿ ದೊರೆವುದಿಲ್ಲವಾದುದರಿಂದಲೂ ಸ್ವಲ್ಪ ಸಾವಕಾಶವಾದರೂ ಚಿಂತೆಯಿಲ್ಲವೆಂದು

“ಹ್ಯೈಯರ್‌ಲಾ” ಅನ್ನು ವ್ಯಾಸಂಗ ಮಾಡುತ್ತಿರುವರು. ಎಲ್‌ಎಲ್ ಎಮ್. ಆದಬಳಿಕ ಯಾವುದಾದರೂ ಒಂದು ಹೈಕೋರ್ಟಿನಲ್ಲಿ ವಕಾಲತ್ತು ಮಾಡಬೇಕೆಂದು ಇವರ ಮನೋಗತವು

೧೯೧೬ನೆ ವರ್ಷದ ಕೊನೆಗೆ “ಕನ್ನಡ ನಾಡುಗಳಲ್ಲಿ ಪ್ರಚುರವಾಗಿರುವ ಗ್ರಾಂಥಿಕ ರೂಪಗಳನ್ನು ಏಕರೂಪತೆಗೆ ತರುವುದಕ್ಕಾಗಿ ಮಾಡಬಹುದಾದ ಉತ್ಕೃಷ್ಟೋಪಾಯಗಳು ಎಂಬ ವಿಷಯದಲ್ಲಿ ಅತ್ಯುತ್ತಮವಾದ ಉಪನ್ಯಾಸ ಬರೆದವರಿಗೆ ೧೦೦ ರೂ. ಬಹುಮಾನ ಕೊಡುವುದಾಗಿ ಬೆಂಗಳೂರಿನ ಕರ್ಣಾಟಕ ಸಾಹಿತ್ಯಪರಿಷತ್ತಿನವರು ಪ್ರಕಟಪಡಿಸಿದ ಮೇರೆಗೆ ಬಂದ ಒಂಬತ್ತು ಉಪನ್ಯಾಸಗಳಲ್ಲಿ ಮ॥ ನರಹರಯ್ಯನವರ ಉಪನ್ಯಾಸವೇ ಅತ್ಯುತ್ತಮವಾದುದೆಂದು ಪರೀಕ್ಷಕರಿಂದ ನಿರ್ಣಯಿಸಲ್ಪಟ್ಟು, ಆ ಬಹುಮತಿಯು ಒಂದು ಸುವರ್ಣ ಪದಕರೂಪದಲ್ಲಿ ಅವರಿಗೆ ಕೊಡಲ್ಪಡುವಂತೆ ನಿಷ್ಕರ್ಷವಾಯಿತು ಈ ಉಪನ್ಯಾಸವನ್ನು ಶ್ಲಾಘಿಸುವಲ್ಲಿ ‘ ಇವರ ಉಪನ್ಯಾಸವು ಇವರಿಗಿರುವ ಸಂಸ್ಕೃತದ ಪರಿಶ್ರಮವನ್ನೂ ಪ್ರಾಕೃತದ ಪರಿಶ್ರಮವನ್ನೂ ಮತ್ತು ಹಿಂದೀ, ಮರಾಟಿ, ತೆಲುಗು ಮೊದಲಾದ ದೇಶಭಾಷೆಗಳಲ್ಲಿರುವ ಪರಿಚಯವನ್ನೂ ಪ್ರದರ್ಶಿಸುವುದಾಗಿದೆ ” ಎಂದು ಕಾರ್ಯನಿರ್ವಾಹ ಮಂಡಲಿಯವರು ನಳಸಂವತ್ಸರದ ವಾರ್ಷಿಕ ವರದಿಯಲ್ಲಿ ಬರೆದಿರುವರು

ಮೇಲೆ ಹೇಳಿದಂತೆ ಮ॥ ನರಹರಯ್ಯನವರು ಬರೆದ ಹಲವು ಪುಸ್ತಕಗಳೊಳಗೆ ‘ಚಂದ್ರಿಕಾ ವಿಜಯ’ ಮತ್ತು ‘ಪ್ರಮಾದಕರಣ’ ವೆಂಬಿವೆರಡೇ ಈವರೆಗೆ ಪ್ರಚುರವಾಗಿವೆ ಇದಲ್ಲದೆ ಸನ್ಯಾಸಧರ್ಮ ಮತ್ತು ಆರ್ಯರ ಸದ್ವರ್ತನವೆಂಬವು ಪೂರ್ಣವಾಗಿಯೂ ‘ವಿವಾಹ ವಿಮರ್ಶೆ’ ಎಂಬುದು ಅಪೂರ್ಣವಾಗಿಯೂ ಶ್ರೀಕೃಷ್ಣಸೂಕ್ತಿಯಲ್ಲಿ, ಮತ್ತು ‘ಅಹಲ್ಯಾಬಾಯಿ’ ಎಂಬುದು ವಿವೇಕೋದಯದಲ್ಲಿ, ಹಾಗೂ ‘ಆರ್ಯರ ಶಿಕ್ಷಣಪದ್ಧತಿ’ ಎಂಬುದು ವಾಗ್ಭೂಷಣದಲ್ಲಿ ಪೂರ್ಣವಾಗಿ ಲೇಖನಗಳೆಂದು ಪ್ರಕಟವಾಗಿದೆ. ಉಳಿದುವೆಲ್ಲ ಪೂರ್ಣವಾಗಿಯೋ

ಅಪೂರ್ಣವಾಗಿಯೋ ಹಸ್ತಪ್ರತಿಗಳಾಗಿಯೋ ಈವರೆಗೂ ನಿಂತಿವೆ ಅಚ್ಚಾದ ಈ ಎರಡು ಪುಸ್ತಕಗಳು ಅವರ ಪಾಂಡಿತ್ಯವನ್ನೂ ಲೇಖನ ಕೌಶಲವನ್ನೂ ಚೆನ್ನಾಗಿ ತೋರಿಸುತ್ತಲಿವೆ ಇವರು ಇನ್ನೂ ವಿದ್ಯಾರ್ಥಿದಶೆಯಲ್ಲಿಯೇ ಇರುವದರಿಂದ ಸ್ವಂತ ವೆಚ್ಚದಿಂದ ಪುಸ್ತಕಗಳನ್ನು ಪ್ರಕಟಗೊಳಿಸಲು ಅನುಕೂಲವಿಲ್ಲದಿರುವ ಈ ಸ್ಥಿತಿಯಲ್ಲಿ ಭಾಷಾಭಿಮಾನಿಗಳಾದ ಮುದ್ರಾಶಾಲೆಗಳ ಯಜಮಾನರೂ, ಪತ್ರಿಕಾ ಸಂಪಾದಕರೂ ಆ ಕಾರ್ಯವನ್ನು ಕೈಕೊಂಡುಕೊಂಡ ಪಕ್ಷದಲ್ಲಿ ವಾಙ್ಮಯೋನ್ನತಿಗೆ ಎಷ್ಟೋ ಸಹಾಯವಾದಂತಿರುವುದು

ಮ|| ನರಹರಯ್ಯನವರು ಮುಖ್ಯವಾದ ಅನೇಕ ವಿಷಯಗಳಲ್ಲಿ ಕೇವಲ ಪೂರ್ವಾಚಾರಪರಾಯಣರಾಗಿರುವರು ಇವರಿಗೆ ವೇದಾಂತ ಶಾಸ್ತ್ರಗಳಲ್ಲಿ ಉತ್ತಮವಾದ ಪರಿಶ್ರಮವೂ ಯೋಗಮಾರ್ಗದಲ್ಲಿ ಕ್ರಮವಾದ ಪ್ರವೇಶವೂ ಉಂಟು ಮತವಿಷಯದಲ್ಲಿಯೂ ಸಾಮಾಜಿಕ ಮತ್ತು ರಾಜಕೀಯ ವಿಷಯಗಳಲ್ಲಿಯೂ ಇವರ ಅಭಿಪ್ರಾಯಗಳು ದೃಢವಾಗಿಯೂ ದೇಶಾಭಿಮಾನಪೂರ್ಣವಾಗಿಯೂ ಇರುವುವು. ತಥಾಪಿ ಯಾವ ವಿಷಯವನ್ನೂ ಇವರು ಅಂಧಭಕ್ತಿಯಿಂದ ಸಮ್ಮತಿಸುವವರಲ್ಲ. ಸ್ವಭಾವವು ಶಾಂತವಾಗಿಯೂ ಗಂಭೀರವಾಗಿಯೂ ವಿನಯಪೂರ್ಣವಾಗಿಯೂ ಇರುವುದು. ತಾನಾಗಿ ಮುಂದೆ ಬಿದ್ದು ಹೋಗುವವರಲ್ಲವಾದುದರಿಂದ ಇವರೊಡನೆ ಆಂತರಿಕವಾದ ಸ್ನೇಹಸಂಬಂಧವಿಲ್ಲದ ಇತರರು ಇವರ ಯೋಗ್ಯತೆಯನ್ನು ಅರಿಯಲಾರರು. ಇವರ ದೇಶಪ್ರೀತಿಯೂ ಭಾಷಾಭಿಮಾನವೂ ಅನನ್ಯಸಾಧಾರಣಗಳಾಗಿವೆ. ಉಡಿಗೆ-ತೊಡಿಗೆಗಳಲ್ಲಿಯೂ ಅನ್ನಪಾನಾದಿಗಳ ವಿಷಯದಲ್ಲಿಯೂ ಆಚಾರನಿಷ್ಠ ಬ್ರಾಹ್ಮಣಕುಲಕ್ಕೆ ಶೋಭಿಸುವ ರೀತಿಯಾಗಿ ತಮ್ಮ ವರ್ತನವನ್ನಿಟ್ಟುಕೊಂಡಿರುವರು ಭಾರತವರ್ಷದಲ್ಲಿ ಇಂಥ ಸತ್ಪುತ್ರರು ಸಾವಿರಗಟ್ಟಲೆಯಾಗಿ ಹುಟ್ಟಿಯೇ ನಮ್ಮ ಮಾತೃಭೂಮಿಯು ಉನ್ನತಿಗೆ ಬರಬೇಕಾಗಿರುವುದು.

ಮ|| ನರಹರಯ್ಯನವರಿಗೆ ಅವರ ೧೩ನೆ ವರ್ಷ ವಯಸ್ಸಿನಲಿ

ವಿವಾಹವಾಯಿತು. ಪರಂತು ಹುಟ್ಟಿದ ೨೩ ಮಕ್ಕಳಲ್ಲಿ ಒಂದೂ ಬದುಕದೆ ಹುಟ್ಟಿದೊಡನೆಯೇ ಮೃತಪಟ್ಟುವೆಂದು ತಿಳಿಯುತ್ತೇವೆ.

ಮ॥ ರಾ॥ ನರಹರಯ್ಯನವರಿಗೆ ಆರೋಗ್ಯ, ಸೌಭಾಗ್ಯ, ದೀರ್ಘಾಯುಷ್ಯವೇ ಮೊದಲಾದ ಸಮಸ್ತ ಸನ್ಮಂಗಳಂಗಳುಂಟಾಗಲೆಂದೂ ಅವರ ಕಯ್ಯಿಂದ ದೇಶ ಮತ್ತು ಭಾಷಾಸೇವೆಯು ಚಿರಕಾಲದ ವರೆಗೆ ತೃಪ್ತಿಕರವಾಗಿ ನಡೆಯುತ್ತ ಬರುವಂತೆಯೂ ಅನೇಕ ವಿಷಯ ಗಳೊಳಕೊಂಡಿರುವ ಈ ಚರಿತ್ರವು ನಮ್ಮ ದೇಶೀಯರೆಲ್ಲರಿಗೂ ಹೃದಯಂಗಮವಾಗಿ ಎಲ್ಲರಲ್ಲಿಯೂ ಉತ್ಕಟವಾದ ದೇಶಭಕ್ತಿ, ಭಾಷಾಭಿಮಾನ, ಸಾಮರಸ್ಯಭಾವಗಳುಂಟಾಗುವಂತೆಯೂ ಪರಮಾತ್ಮನನ್ನು ಪ್ರಾರ್ಥಿಸಿ, ನಮ್ಮ ಲೇಖಿನಿಗೆ ಇಲ್ಲಿಗೆ ವಿಶ್ರಾಂತಿ ಕೊಡುವೆವು.

(ಭಾರದ್ವಾಜ)

---

# ಕನ್ನಡದ ಗನ್ನಗನ್ನಡಿ.

(ಮಣಿ ೩)

## ಶ್ರೀಯುತ ಎಚ್ ನಾರಾಯಣರಾಯರು,

(ಎಮ್ ಎ, ಎಫ್ ಜಿ ಎಸ್, ಎಫ್. ಎಮ್ ಯು ಅವರು)

---

ಬಾಲ್ಯದಲ್ಲಿ ಕೇವಲ ದೈನ್ಯಾವಸ್ಥೆಯಲ್ಲಿದ್ದು ಸ್ವಪ್ರಯಾಸದಿಂದಲೇ ಉಚ್ಚವಾದ ವಿದ್ಯಾಭ್ಯಾಸವನ್ನು ಪಡೆದು ಉನ್ನತಪದವನ್ನೇರಿ ಕೀರ್ತಿಗೊಂಡಿರುವ ಕನ್ನಡಿಗರೊಳಗೆ ಈ ಲೇಖನದ ನಾಯಕರಾದ ಮ॥ ನಾರಾಯಣರಾಯರನ್ನು ಪ್ರಮುಖರಾದ ಒಬ್ಬರೆಂದು ಹೇಳಬಹುದಾಗಿದೆ

ಶ್ರೀಯುತ ನಾರಾಯಣರಾಯರು ಮೂವರು ಸೋದರರೊಳಗೆ ಕಿರಿಯರು ಇವರ ತೀರ್ಥರೂಪರಾದ ಸುಬರಾಯರೆಂಬವರು ದಕ್ಷಿಣ ಕನ್ನಡ ಜಿಲ್ಲಾ ಕಾಸರಗೋಡು ತಾಲೂಕು ಆಫೀಸಿ (ಕಚೇರಿ) ನಲ್ಲಿ ಸ್ವಲ್ಪ ಸಂಬಳದ ಮೇಲೆ ಗುಮಾಸ್ತೆಯಾಗಿದ್ದು ಸಾಮಾನ್ಯವಾದ ರೀತಿಯಲ್ಲಿ ಸಂಸಾರಭಾರವನ್ನು ಹೊತ್ತಿದ್ದರು ನಾರಾಯಣರಾಯರು ೧೮೭೭ನೇ ಇಸವಿಯ ಅಕ್ಟೋಬರು ತಿಂಗಳಲ್ಲಿ ಕಾಸರಗೋಡಿನಲ್ಲಿಯೇ ಹುಟ್ಟಿದರು. ನಾಲ್ಕು ವರ್ಷ ವಯಸ್ಸಿನಲ್ಲಿಯೇ ಇವರಿಗೆ ಪಿತೃವಿಯೋಗ ದುಃಖವು ಪ್ರಾಪ್ತವಾದುದರಿಂದ ವಿಧವೆಯಾದ ಇವರ ತಾಯಿಯವರು ಮಕ್ಕಳೊಡನೆ ಜೈನರಿಗೆ ಪವಿತ್ರಸ್ಥಾನವೆಂದು ಪ್ರಸಿದ್ಧವಾದ ಮೂಡಬಿದುರೆಯಲ್ಲಿರುವ ತಮ್ಮ ತವರ್ಮನೆಗೆ ಹೊರಟುಹೋದರು ಅಲ್ಲಿ ಸೋದರಮಾವನ ಮನೆಯಲ್ಲಿಯೇ ಕೆಲವು ಕಾಲ ಇವರೆಲ್ಲ ಉಳಿದುಕೊಂಡಿದ್ದರು ಮ॥ ನಾರಾಯಣರಾಯರ ಬಾಲ್ಯ ವಿದ್ಯಾಭ್ಯಾಸವು ಬಂಟವಾಳವೆಂಬ ಗ್ರಾಮದೊಳಗೆ ಆಯಿತು ಆಬಳಿಕ ಇವರ ಚುರುಕುಬುದ್ಧಿಯನ್ನೂ ಸಜ್ಜನಸ್ವಭಾವವನ್ನೂ ನೋಡಿ ಪ್ರೀತರಾದ ಇವರ ಮಾತೃಪಕ್ಷದ ಬಂಧುಗಳೊಬ್ಬರು ಇವರ ಮುಂದಿನ

ಅಭ್ಯಾಸದ ವೆಚ್ಚವನ್ನು ವಹಿಸಿದುದರಿಂದ ನಾರಾಯಣರಾಯರು ಮುಂದಿನ ಅಭ್ಯಾಸಕ್ಕಾಗಿ ಮಂಗಳೂರಿಗೆ ಹೋದರು ಅಲ್ಲಿ ೧೮೮೩ನೆಯ ಇಸವಿಯಲ್ಲಿ ಮಾಧ್ಯಮಿಕ ಶಾಲಾಪರೀಕ್ಷೆಯಲ್ಲಿ (Middle School Examination) ಮೊದಲನೆ ತರಗತಿಯಲ್ಲಿ ತೇರಿದುದರಿಂದ ಇವರಿಗೆ ಒಂದು ವಿದ್ಯಾರ್ಥಿವೇತನವು (Free Studentship) ದೊರೆಯಿತು. ಇದರ ಬಲದಿಂದ ಇವರು ಮಂಗಳೂರಿನ ಗವರ್ನಮೆಂಟ ಕಾಲೇಜು (Government College) ಗೆ ಸೇರಿ ೧೮೮೪ರಲ್ಲಿ ಪ್ರವೇಶ ( ಮೆಟ್ರಿಕ್ಯುಲೇಶನ್-Matriculation ) ಪರೀಕ್ಷೆಯಲ್ಲಿ ಪ್ರಥಮ ತರಗತಿಯವರಾಗಿ ನಿಂತರು ಇದರ ದೆಸೆಯಿಂದ ಆ ಕಾಲೇಜಿನಲ್ಲಿಯೇ ಎಫ್ ಎ, ಪರೀಕ್ಷೆಗೆ ಓದುವುದಕ್ಕೆ ಇವರಿಗೆ ಥಾಮಸ್ ಎಂಬವರ ಹೆಸರಿನ ಬೇರೊಂದು ವೇತನವು (Thomas Scholarship) ಕೊಡಲ್ಪಟ್ಟಿತು ಗವರ್ನಮೆಂಟು ಕಾಲೇಜಿನಲ್ಲಿಯೇ ಮುಂದರಿಸಿ ಓದಿ ಇವರು ೧೮೮೬ರಲ್ಲಿ ಎಫ್ ಎ, ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿ ಮೊದಲನೆಯ ಸ್ಥಾನವನ್ನು ಪಡೆದು ಪ್ರಥಮ ತರಗತಿಯಲ್ಲಿ ಉತ್ತೀರ್ಣರಾದರು ಬಳಿಕ ಜಿಲ್ಲೆಗೊಂದರಂತೆ ಮದ್ರಾಸು ಕ್ರಿಶ್ಚಿಯನ್ ಕಾಲೇಜಿನವರು ಇಟ್ಟ ಶಿಷ್ಯವೃತ್ತಿಯ ಹೋರಾಟದ ಪರೀಕ್ಷೆಯಲ್ಲಿ ಇವರು ಮೊದಲನೆಯವರಾಗಿ ನಿಂತುದರಿಂದ ಮಿಲ್ಲರ್ ಸ್ಕಾಲರಶಿಪ್-(Miller Scholarship) ಎಂಬ ವಿದ್ಯಾರ್ಥಿವೇತನವನ್ನು ಪಡೆದು ಮದ್ರಾಸಿಗೆ ಹೋಗಿ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ ಎ, ಪರೀಕ್ಷೆಗೆ ಓದತೊಡಗಿದರು

೧೮೮೯ರಲ್ಲಿ ಕ್ರಿಶ್ಚಿಯನ್ ಕಾಲೇಜಿನಿಂದ ಬಿ ಎ ಪರೀಕ್ಷೆಯ ಭಾಷಾಭಾಗಗಳಲ್ಲಿ ಜಯಿಸಿ ಶ್ರೀ॥ ನಾರಾಯಣರಾಯರು ಪ್ರೆಸಿಡೆನ್ಸಿ ಕಾಲೇಜಿಗೆ ಸೇರಿ ಅಲ್ಲಿಂದ ೧೮೯೦ರಲ್ಲಿ ಪ್ರಾಣಿಶಾಸ್ತ್ರ ಭಾಗದ ಪರೀಕ್ಷೆಯಲ್ಲಿ ಮೊದಲನೆ ತರಗತಿಯಲ್ಲಿ ಮೊದಲನೆಯವರಾಗಿ ತೇರ್ಗಡೆ ಹೊಂದಿದರು ಹೀಗಾಗಿ ಇವರಿಗೆ ಎಮ್. ಎ. ಓದಿಕೊಳ್ಳುವುದಕ್ಕಾಗಿ (ತಿಂಗಳಿಗೆ ೩೫ ರೂ. ಬರತಕ್ಕ) ಸರ್ಕಾರದವರ ವಿದ್ಯಾರ್ಥಿವೇತನವು

ಕೊಡಲ್ಪಟ್ಟಿತು ಆ ಕಾಲದಲ್ಲಿಯೇ ಇವರು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಹಾಯೋಪಾಧ್ಯಾಯ ( Demonstiator ) ರಾಗಿಯೂ ಕೆಲಸ ಮಾಡುತ್ತಿದ್ದರು ಮುಂದೆ ಕಾಲೇಜಿನ ಪ್ರಿನ್ಸಿಪಾಲರಾಗಿಯೂ ವಿದ್ಯಾ ಇಲಾಖೆಯ ಡೈರೆಕ್ಟರಾಗಿಯೂ, -ಈಗ ಬೆಂಗಳೂರಿನ ತಾತಾ ಇನ್‌ಸ್ಟಿಟ್ಯೂಶನಿನ (Tata Instistute) ಅಧ್ಯಕ್ಷರಾಗಿಯೂ ಇರುವ ಡಾ. ಸರ್ ಆಲ್ಫ್ರೆಡ್ ಬೋರ್ನ (Dr Sir Alfred bowine) ಅವರು ಇವರ ಮುಖ್ಯಾಧ್ಯಾಪಕರಾಗಿದ್ದರು ಅವರಿಗೆ ನಾರಾಯಣರಾಯರ ಕುಶಾಗ್ರಬುದ್ಧಿಯ ಮತ್ತು ವಿನಯಸ್ವಭಾವದ ವಿಷಯದಲ್ಲಿ ತುಂಬ ಅಭಿಮಾನವಿದ್ದಿತು ಮತ್ತು ಇವರ ಪ್ರೋತ್ಸಾಹದಿಂದಲೇ ನಾರಾಯಣರಾಯರು ಎಮ್ ಏ ಓದುವುದಕ್ಕೆ ಪ್ರವರ್ತಿಸಿದ್ದರು ೧೮೯೧ ರಲ್ಲಿ ಮ॥ ನಾರಾಯಣರಾಯರು ಖಾಸಗಿ (ಸ್ವಂತ) ಯಿಂದಲೇ ಭೂಗರ್ಭಶಾಸ್ತ್ರ ((Geology ) ಎಂಬ ವಿಷಯದಲ್ಲಿಯೂ ಬಿ ಏ ಪ್ರಶಸ್ತಿ (Degree) ಯನ್ನು ಪಡೆದರು ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ಈ ವಿಷಯವನ್ನು ಅಭ್ಯಸಿಸಿ ಜಯಿಸಿದವರೊಳಗೆ ಇವರೇ ಮೊದಲನೇಯವರು

ಈ ಮೇಲೆ ಸುಮಾರು ಒಂದುವರ್ಷ ಕಾಲ ಮ॥ ನಾರಾಯಣರಾಯರು ಮದ್ರಾಸಿನ ಲಿಟರರಿ ಸೊಸಾಯಿಟಿ (Madras Literary Society, Auxiliary of the Royal Asiatic Society) ಎಂಬ ಸಂಘದ ಲೈಬ್ರೇರಿಯನ್ನರಾಗಿ ೭೦ರೂ. ಸಂಬಳದ ಮೇಲೆ ಕೆಲಸ ನೋಡಿದರು ಕ್ಷಿಪ್ರದಲ್ಲಿಯೇ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಭೂಗರ್ಭಶಾಸ್ತ್ರಶಾಖೆಯ ವರ್ಗವನ್ನು ತೆರೆಯಲಾಗಿ ೧೮೯೫ರಲ್ಲಿ ನಾರಾಯಣರಾಯರನ್ನು ಪ್ರತಿ ಆರು ತಿಂಗಳಿಗೆ (೫೦ ಪೌಂಡಗಳಿಗೆ) ೭೦೦ ರೂ. ವೇತನ ಕೊಡುವ ಏರ್ಪಾಡಿನ ಮೇಲೆ ಆ ಶಾಖೆಗೆ ಉಪನ್ಯಾಸಕರಾಗಿ Lecturer in Geology ) ನೇಮಿಸಿದರು ಕಾರಣಾಂತರಗಳಿಂದ ಆವರೆಗೂ ಎಮ್ ಏ ಪರೀಕ್ಷೆಯಲ್ಲಿ ಕೇರಲು ಆಗದಿದ್ದ ಇವರು ೧೮೯೭ರಲ್ಲಿ ಆ ಪಟ್ಟವನ್ನೂ ಪಡೆದರು. ಕಿಂಚಿತ್ಕಾಲದೊಳಗಾಗಿ

ಇವರನ್ನು ಮೇಲೆ ಹೇಳಿದ ಉದ್ಯೋಗದಲ್ಲಿಯೇ ತಿಂಗಳಿಗೆ ೧೮೦ ರೂ ಸಂಬಳ ಗೊತ್ತುಮಾಡಿ ಸ್ಥಿರಪದದಲ್ಲಿಟ್ಟರು

ಈ ರೀತಿ ಸುಮಾರು ೧೦ ವರ್ಷಗಳ ಪರ್ಯಂತ ಕೆಲಸ ಮಾಡಿದ ಬಳಿಕ ಇವರನ್ನು ಒಡನೆಯೇ ಪ್ರಾವಿನ್ಸಿಯಲ್ ಸರ್ವೀಸ್ (Provincial Service) ಎಂಬ ಉಚ್ಚ ತರಗತಿಯಲ್ಲಿ ೨೫೦ ರೂ ಸಂಬಳಕ್ಕೆ ಏರಿಸಿದರು ಈಗ ಇವರು ೩ನೇ ಗ್ರೇಡಿನಲ್ಲಿ ೫೦೦ ರೂ ಸಂಬಳ ಪಡೆಯುತ್ತಿದ್ದು ಭೂಗರ್ಭಶಾಸ್ತ್ರದ ಮುಖ್ಯಾಧ್ಯಾಪಕರಾಗಿ (Acting Professor of Geology) ಕೆಲಸ ನೋಡುತ್ತಿರುವರು

ಕನ್ನಡದ ಉನ್ನತಿಯ ವಿಷಯದಲ್ಲಿ ಶ್ರೀಯುತ ನಾರಾಯಣರಾಯರು ಬದ್ಧಾದರರಾಗಿರುವರು ೧೯೦೦ ೧೯೦೧ ರಲ್ಲಿ "ಸುವಾಸಿನೀ" ಪತ್ರಿಕೆಯು ಮಂಗಳೂರಿಂದ ಹೊರಡುತ್ತಿದ್ದಾಗ ಇವರು, ಆ ಪತ್ರಿಕಾ ಸಂಪಾದಕರ ಪ್ರಾರ್ಥನೆಯಂತೆ ಭೂಗರ್ಭಶಾಸ್ತ್ರ (Geology) ವನ್ನು ಕುರಿತು ಉತ್ಕೃಷ್ಟವಾದ ಒಂದು ಕನ್ನಡ ಗ್ರಂಥವನ್ನು ಒರೆದರು. ಇದು ಸುವಾಸಿನಿಯಲ್ಲಿಯೂ ಆಗಳೇ ಸ್ವತಂತ್ರವಾಗಿ ಪುಸ್ತಕರೂಪದಿಂದಲೂ ಅಚ್ಚಾಯಿತು. ಈಚೆಗೆ ಇದರ ತಿದ್ದಿದ ಎರಡನೆಯ ಮುದ್ರಣವೂ ಆಗಿರುವುದು ಈ ಪುಸ್ತಕವು ಮದ್ರಾಸು ಬೊಂಬಾಯಿ ಮತ್ತು ಮೈಸೂರು ವಿದ್ಯಾಭ್ಯಾಸದ ಇಲಾಖೆಯವರಿಂದ ಸಮ್ಮತಿ (Recognition) ಪಡೆದಿದೆ ಈ ಪುಸ್ತಕವಷ್ಟೇ ಅಲ್ಲದೆ ಮ॥ ನಾರಾಯಣರಾಯರು ಮದ್ರಾಸು ಡೈರೆಕ್ಟರವರ ಅಪೇಕ್ಷೆಯಂತೆ (Life, light and cleanlines) ಎಂಬ ಬೇರೊಂದು ಪುಸ್ತಕವನ್ನೂ ಮೂಲ ಪಾಠಶಾಲೆಗಳಿಗಾಗಿ ಕನ್ನಡಿಸಿರುವರು ಮತ್ತು ಈಗಲೂ ಶಾಸ್ತ್ರ (Science) ವಿಷಯವಾದ ಬೇರೆ ಪುಸ್ತಕಗಳನ್ನೂ ಒರೆಯುವ ಪ್ರಯತ್ನದಲ್ಲಿರುವರು.

ಮ॥ ನಾರಾಯಣರಾಯರು ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿ (Text Book Committee) ಯಲ್ಲಿ ಶಾಸ್ತ್ರ ಮತ್ತು ಕನ್ನಡದ ಉಪಸಂಘಗಳ, ಹಾಗೆಯೇ ಮದ್ರಾಸು ವರ್ನಾಕ್ಯುಲರ್ ಲಿಟರೇಚರ ಸೊಸಾಯಿಟಿ (Vernacular Literature Society) ಎಂಬ

ಸಂಘದ ಸದಸ್ಯರಾಗಿರುವರು ಇನ್ನು ಮದ್ರಾಸು ಮತ್ತು ಮೈಸೂರು ಯೂನಿವರ್ಸಿಟಿಗಳ ಅಭ್ಯಾಸನಿಯಾಮಕ ಸಂಘಗಳಲ್ಲಿ (Board of Studies) ಪ್ರಾಣಿಶಾಸ್ತ್ರಶಾಖೆಗೂ, ಮದ್ರಾಸು ಯೂನಿವರ್ಸಿಟಿಯ ಅಂಥ ಬೋರ್ಡಿನ ದ್ರಾವಿಡ ಭಾಷಾಶಾಖೆಗೂ ಸದಸ್ಯರಾಗಿರುವರು ಕೆಲವು ವರ್ಷಗಳ ಪರ್ಯಂತ ಇವರು ಲಂಡನಿನ ಭೂಗರ್ಭಶಾಸ್ತ್ರಸಮಿತಿಯ (Geological Society of London) ಸದಸ್ಯರಾಗಿಯೂ ಮದ್ರಾಸು ಯೂನಿವರ್ಸಿಟಿಯು ಭೂಗರ್ಭಶಾಸ್ತ್ರ ಮತ್ತು ಕನ್ನಡ ಭಾಷಾಪರೀಕ್ಷಕ ಮಂಡಲ (Board of examination) ಗಳ ಅಧ್ಯಕ್ಷರಾಗಿಯೂ ಇದ್ದರು ಕಳೆದ ೧೯೧೬ನೇ ಇಸ್ವಿಯಲ್ಲಿ ಮದರಾಸು ಯೂನಿವರ್ಸಿಟಿಯು ಕಲಾಶಾಖೆ (Arts faculty) ಯವರು ಇವರನ್ನು ಸದಸ್ಯ (Fellow) ರಾಗಿ ಆರಿಸಿಕೊಂಡರು ಇನ್ನು ಇದೇ ವರ್ಷ ಮೈಸೂರಲ್ಲಿ ನಡೆದ ಕರ್ಣಾಟಕ ಸಾಹಿತ್ಯಪರಿಷತ್ತಿನ ವಾರ್ಷಿಕ ಸಭೆಯಲ್ಲಿ ಇವರನ್ನು ಮದ್ರಾಸು ಪ್ರಾಂತ್ಯದ ಪರವಾಗಿ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲದ ಸದಸ್ಯರಾಗಿಯೂ ಆಯ್ದುಕೊಂಡಿರುವರು ಮ|| ನಾರಾಯಣರಾಯರಿಗೆ ೧೮೯೧ರಲ್ಲಿ ವಿವಾಹವಾಯಿತು ಇವರಿಗೆ ಇಬ್ಬರು ಹೆಣ್ಣುಮಕ್ಕಳಿರುವವು ಇವರು ಕೇವಲ ಶಾಂತ ದಯಾಳು ಸ್ವಭಾವದವರಾಗಿಯೂ ಶಿಷ್ಯವತ್ಸಲರಾಗಿಯೂ ನಿರ್ವ್ಯಸನಿಗಳಾಗಿಯೂ ಇರುವರು. ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಸಾವಧಾನವಾಗಿ ಪ್ರಗತಿಮಾರ್ಗವನ್ನವಲಂಬಿಸಬೇಕೆಂಬ ಪಕ್ಷದವರು. ಯಾವ ಕಾರ್ಯದಲ್ಲಿಯೂ ದುಡುಕಿ ಹೋಗತಕ್ಕವರಲ್ಲ ಹೀಗೆ ತರುಣ ಮಂಡಲಿಗೆ ಉಪಾಧ್ಯಾಯರಾಗಿಯೂ ಮಾರ್ಗದರ್ಶಕರಾಗಿಯೂ ಇರಲು ಸರ್ವತೋಪರಿ ಯೋಗ್ಯರಾಗಿರುವರು.

ಶ್ರೀಯುತ ನಾರಾಯಣರಾಯರಿಗೆ ದೀರ್ಘಾಯುರಾರೋಗ್ಯಾದಿ ಸಮಸ್ತ ಸನ್ಮಂಗಳಂಗಳುಂಟಾಗಲೆಂದೂ ಅವರ ಮೂಲವಾಗಿ ದೇಶಸೇವೆಯೂ ಭಾಷಾಸೇವೆಯೂ ಯಥೇಷ್ಟವಾಗಿ ನಡೆಯಲೆಂದೂ ಪರಮಾತ್ಮನನ್ನು ಪ್ರಾರ್ಥಿಸಿ ಇಲ್ಲಿಗೆ ವಿರಮಿಸುವೆವು.

(ಭಾರದ್ವಾಜ)

ಇವರನ್ನು ಮೇಲೆ ಹೇಳಿದ ಉದ್ಯೋಗದಲ್ಲಿಯೇ ತಿಂಗಳಿಗೆ ೧೮೦ ರೂ. ಸಂಬಳ ಗೊತ್ತುಮಾಡಿ ಸ್ಥಿರಪದದಲ್ಲಿಟ್ಟರು

ಈ ರೀತಿ ಸುಮಾರು ೧೦ ವರ್ಷಗಳ ಪರ್ಯಂತ ಕೆಲಸ ಮಾಡಿದ ಬಳಿಕ ಇವರನ್ನು ಒಡನೆಯೇ ಪ್ರಾವಿನ್ಸಿಯಲ್ ಸರ್ವೀಸ್ (Provincial Service) ಎಂಬ ಉಚ್ಚ ತರಗತಿಯಲ್ಲಿ ೨೫೦ ರೂ ಸಂಬಳಕ್ಕೆ ಏರಿಸಿದರು ಈಗ ಇವರು ೩ನೇ ಗ್ರೇಡಿನಲ್ಲಿ ೫೦೦ ರೂ ಸಂಬಳ ಪಡೆಯುತ್ತಿದ್ದು ಭೂಗರ್ಭಶಾಸ್ತ್ರದ ಮುಖ್ಯಾಧ್ಯಾಪಕರಾಗಿ (Acting Professor of Geology) ಕೆಲಸ ನೋಡುತ್ತಿರುವರು

ಕನ್ನಡದ ಉನ್ನತಿಯ ವಿಷಯದಲ್ಲಿ ಶ್ರೀಯುತ ನಾರಾಯಣರಾಯರು ಬದ್ಧಾದರರಾಗಿರುವರು ೧೯೦೦-೧೯೦೧ ರಲ್ಲಿ "ಸುವಾಸಿನೀ" ಪತ್ರಿಕೆಯು ಮಂಗಳೂರಿಂದ ಹೊರಡುತ್ತಿದ್ದಾಗ ಇವರು, ಆ ಪತ್ರಿಕಾ ಸಂಪಾದಕರ ಪ್ರಾರ್ಥನೆಯಂತೆ ಭೂಗರ್ಭಶಾಸ್ತ್ರ (Geology) ವನ್ನು ಕುರಿತು ಉತ್ಕೃಷ್ಟವಾದ ಒಂದು ಕನ್ನಡ ಗ್ರಂಥವನ್ನು ಬರೆದರು. ಇದು ಸುವಾಸಿನಿಯಲ್ಲಿಯೂ ಆಗಳೇ ಸ್ವತಂತ್ರವಾಗಿ ಪುಸ್ತಕರೂಪದಿಂದಲೂ ಅಚ್ಚಾಯಿತು. ಈಚೆಗೆ ಇದರ ತಿದ್ದಿದ ಎರಡನೆಯ ಮುದ್ರಣವೂ ಆಗಿರುವುದು ಈ ಪುಸ್ತಕವು ಮದ್ರಾಸು ಬೊಂಬಾಯಿ ಮತ್ತು ಮೈಸೂರು ವಿದ್ಯಾಭ್ಯಾಸದ ಇಲಾಖೆಯವರಿಂದ ಸಮ್ಮತಿ (Recognition) ಪಡೆದಿದೆ ಈ ಪುಸ್ತಕವಷ್ಟೇ ಅಲ್ಲದೆ ಮ॥ ನಾರಾಯಣರಾಯರು ಮದ್ರಾಸು ಡೈರೆಕ್ಟರವರ ಅಪೇಕ್ಷೆಯಂತೆ (Life, light and cleanlines) ಎಂಬ ಬೇರೊಂದು ಪುಸ್ತಕವನ್ನೂ ಮೂಲ ಪಾಠಶಾಲೆಗಳಿಗಾಗಿ ಕನ್ನಡಿಸಿರುವರು ಮತ್ತು ಈಗಲೂ ಶಾಸ್ತ್ರ (Science) ವಿಷಯವಾದ ಬೇರೆ ಪುಸ್ತಕಗಳನ್ನೂ ಬರೆಯುವ ಪ್ರಯತ್ನದಲ್ಲಿರುವರು

ಮ॥ ನಾರಾಯಣರಾಯರು ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿ (Text Book Committee) ಯಲ್ಲಿ ಶಾಸ್ತ್ರ ಮತ್ತು ಕನ್ನಡದ ಉಪಸಂಘಗಳ, ಹಾಗೆಯೇ ಮದ್ರಾಸು ವರ್ನಾಕ್ಯುಲರ್ ಲಿಟರೇಚರ ಸೊಸಾಯಿಟಿ (Vernacular Literature Society) ಎಂಬ

ಸಂಘದ ಸದಸ್ಯರಾಗಿರುವರು ಇನ್ನು ಮದ್ರಾಸು ಮತ್ತು ಮೈಸೂರು ಯೂನಿವರ್ಸಿಟಿಗಳ ಅಭ್ಯಾಸನಿಯಾಮಕ ಸಂಘಗಳಲ್ಲಿ (Board of Studies) ಪ್ರಾಣಿಶಾಸ್ತ್ರಶಾಖೆಗೂ, ಮದ್ರಾಸು ಯೂನಿವರ್ಸಿಟಿಯ ಅಂಧ್ರ ಬೋರ್ಡಿನ ದ್ರಾವಿಡ ಭಾಷಾಶಾಖೆಗೂ ಸದಸ್ಯರಾಗಿರುವರು ಕೆಲವು ವರ್ಷಗಳ ಪರ್ಯಂತ ಇವರು ಲಂಡನಿನ ಭೂಗರ್ಭಶಾಸ್ತ್ರಸಮಿತಿಯ (Geological Society of London) ಸದಸ್ಯರಾಗಿಯೂ ಮದ್ರಾಸು ಯೂನಿವರ್ಸಿಟಿಯ ಭೂಗರ್ಭಶಾಸ್ತ್ರ ಮತ್ತು ಕನ್ನಡ ಭಾಷಾಪರೀಕ್ಷಕ ಮಂಡಲ (Board of examination) ಗಳ ಅಧ್ಯಕ್ಷರಾಗಿಯೂ ಇದ್ದರು ಕಳೆದ ೧೯೧೬ನೇ ಇಸ್ವಿಯಲ್ಲಿ ಮದರಾಸು ಯೂನಿವರ್ಸಿಟಿಯ ಕಲಾಶಾಖೆ (Arts faculty) ಯವರು ಇವರನ್ನು ಸದಸ್ಯ (Fellow) ರಾಗಿ ಆರಿಸಿಕೊಂಡರು ಇನ್ನು ಇದೇ ವರ್ಷ ಮೈಸೂರಲ್ಲಿ ನಡೆದ ಕರ್ಣಾಟಕ ಸಾಹಿತ್ಯಪರಿಷತ್ತಿನ ವಾರ್ಷಿಕ ಸಭೆಯಲ್ಲಿ ಇವರನ್ನು ಮದ್ರಾಸು ಪ್ರಾಂತ್ಯದ ಪರವಾಗಿ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲದ ಸದಸ್ಯರಾಗಿಯೂ ಆಯ್ದು ಕೊಂಡಿರುವರು ಮ॥ ನಾರಾಯಣರಾಯರಿಗೆ ೧೮೯೧ರಲ್ಲಿ ವಿವಾಹ ವಾಯಿತು ಇವರಿಗೆ ಇಬ್ಬರು ಹೆಣ್ಣುಮಕ್ಕಳಿರುವವು ಇವರು ಕೇವಲ ಶಾಂತ ದಯಾಳು ಸ್ವಭಾವದವರಾಗಿಯೂ ಶಿಷ್ಯವತ್ಸಲರಾಗಿಯೂ ನಿರ್ವ್ಯಸನಿಗಳಾಗಿಯೂ ಇರುವರು ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಸಾವಧಾನವಾಗಿ ಪ್ರಗತಿಮಾರ್ಗವನ್ನವಲಂಬಿಸಬೇಕೆಂಬ ಪಕ್ಷದವರು. ಯಾವ ಕಾರ್ಯದಲ್ಲಿಯೂ ದುಡುಕಿ ಹೋಗತಕ್ಕವರಲ್ಲ ಹೀಗೆ ತರುಣ ಮಂಡಲಿಗೆ ಉಪಾಧ್ಯಾಯರಾಗಿಯೂ ಮಾರ್ಗದರ್ಶಕರಾಗಿಯೂ ಇರಲು ಸರ್ವತೋಪರಿ ಯೋಗ್ಯರಾಗಿರುವರು

ಶ್ರೀಯುತ ನಾರಾಯಣರಾಯರಿಗೆ ದೀರ್ಘಾಯುರಾರೋಗ್ಯಾದಿ ಸಮಸ್ತ ಸನ್ಮಂಗಳಂಗಳುಂಟಾಗಲೆಂದೂ ಅವರ ಮೂಲವಾಗಿ ದೇಶಸೇವೆಯೂ ಭಾಷಾಸೇವೆಯೂ ಯಥೇಷ್ಟವಾಗಿ ನಡೆಯಲೆಂದೂ ಪರಮಾತ್ಮನನ್ನು ಪ್ರಾರ್ಥಿಸಿ ಇಲ್ಲಿಗೆ ವಿರಮಿಸುವೆವು.

(ಭಾರದ್ವಾಜ)

# ವಿವಾಹದ ವಯಸ್ಸನ್ನು ಹೆಚ್ಚಿಸುವುದು.

೧೯೨೭ನೇ ಇಸವಿ ಜೂನ ೩ನೇ ತಾರೀಖಿನಲ್ಲಿ ಮೈಸೂರಿನಲ್ಲಿ ನಡೆದ ಪೌರ ಮತ್ತು ಸಾಂಘಿಕ ಸಮಾಜದಲ್ಲಿ ಪರಿಶೀಲಿಸಿದ ವಿಷಯಗಳಲ್ಲಿ ಗಂಡುಮಕ್ಕಳಂತೆಯೇ ಹೆಣ್ಣುಮಕ್ಕಳ ವಿವಾಹದ ವಯಸ್ಸನ್ನು ಹೆಚ್ಚಿಸುವ ವಿಷಯವೇ ಮೊದಲನೆಯದು ಚೀಫಕೋರ್ಟ ಜಡ್ಜಿಯವರಾದ ಮಿ|| ಕೆ ಎಸ್ ಚಂದ್ರಶೇಖರ ಅಯ್ಯರವರ ಪತ್ನಿಯವರಾದ ಶ್ರೀಮತಿ ಸೌ|| ಪಾರ್ವತಿ ಅಮ್ಮನವರು ಸ್ಪಷ್ಟವಾಗಿಯೂ ಎಲ್ಲರ ಮನಸ್ಸಿಗೂ ಚನ್ನಾಗಿ ನಾಟುವಂತೆಯೂ ಕನ್ನಡದಲ್ಲಿ ಭಾಷಣಮಾಡಿ ಈ ವಿಷಯದಲ್ಲಿ ಸಲಹೆಯನ್ನು ಕೊಟ್ಟರು ಅಲ್ಲಿ ನೆರೆದಿದ್ದವರೆಲ್ಲರೂ ಈ ಭಾಷಣವನ್ನು ಕೇಳಿ ಬಹಳ ಸಂತೋಷಪಟ್ಟರು

(ಉಪನ್ಯಾಸ)

ಘನಹೊಂದಿದ ಶ್ರೀಮದ್ಯುವರಾಜರವರಿಗೂ ಶ್ರೀಮಾನ್ ದಿವಾನರವರಿಗೂ ಮತ್ತು ಸಭಿಕ ಮಹಾಶಯರಿಗೂ ವಿಜ್ಞಾಪನೆಗಳು —

" ಇಂತಹ ಸಭೆಗಳಲ್ಲಿ ಹೆಂಗಸರು ಮಾತನಾಡತಕ್ಕದ್ದು ನವೀನ ಪದ್ಧತಿಯೇನೂ ಅಲ್ಲ. ಪುರಾತನ ಕಾಲಗಳಿಂದಲೂ ಈ ಪದ್ಧತಿಯು ಅನುಸರಿಸಿಕೊಂಡು ಬಂದಿರುವುದು ಪುರಾಣಗಳಲ್ಲಿ ಗಾರ್ಗಿ, ಮೈತ್ರೇಯಿ, ಗಾಂಧಾರಿ ಮುಂತಾದ ಸ್ತ್ರೀಯರು ಸಭೆಗಳಲ್ಲಿ ನಿಂತು ಮಾತನಾಡಿದರೆಂದು ಓದಿರುವೆವು ಈ ಪೂರ್ವಪದ್ಧತಿಯನ್ನು ಅನುಸರಿಸಿಯೇ ನಮ್ಮೆಲ್ಲರಿಗೂ ಮಾನ್ಯರಾಗಿಯೂ ಹಿತಚಿಂತಕರಾಗಿಯೂ ಇರುವ ಮಿ|| ವೆಂಕಟಕೃಷ್ಣಯ್ಯನವರು ಅಪೇಕ್ಷಿಸಿದಂತೆ ನಾನು ನಿಮ್ಮೆದುರಿಗೆ ನಿಂತು ಮಾತನಾಡುತ್ತಿರುವೆನು ಇಂತಹ ಬಹು ಮುಖ್ಯವಾದ ಸಂಗತಿಯಲ್ಲಿ ನನಗೆ ತೋರಿದ ಅಂಶಗಳನ್ನು ತಮ್ಮಲ್ಲಿ ವಿಜ್ಞಾಪಿಸಲು ಅವಕಾಶ ಕೊಟ್ಟದಕ್ಕಾಗಿ ಅವರಿಗೆ ನಾನು ತುಂಬಾ ಕೃತಜ್ಞಳಾಗಿರುವೆನು "

“ಈಗ ನಾನು ಮಾತನಾಡಬೇಕಾಗಿರುವ ವಿಷಯವು ಹುಡುಗರಿಗೂ ಹುಡುಗಿಯರಿಗೂ ವಿವಾಹ ಮಾಡತಕ್ಕ ವಯಸ್ಸನ್ನು ಹೆಚ್ಚಿಸುವುದಕ್ಕೆ ಇರುವ ಅವಶ್ಯಕತೆ! ಈಗ ಇವರಿಗೆ ಬಹು ಚಿಕ್ಕ ವಯಸ್ಸಿನಲ್ಲಿಯೇ ಮದುವೆ ಮಾಡುತ್ತಿರುವುದು ಎಲ್ಲರಿಗೂ ವೇದ್ಯವೇ ಇದೆ ಇಂತಹ ವಿಷಯದಲ್ಲಿ ಪ್ರಥಮತ ನಾನು ಹೇಳಬೇಕಾದುದೇನೆಂದರೆ—

“ಯಾವ ಕೆಲಸ ಮಾಡಿದರೂ ಅದಕ್ಕೆ ಶಾಸ್ತ್ರಾಧಾರವಿದ್ದ ಹೊರತು ಅದಕ್ಕೆ ಭದ್ರವಾದ ಅಸ್ತಿವಾರವಿದ್ದಂತೆ ಆಗುವುದಿಲ್ಲ ಶಾಸ್ತ್ರಗಳನ್ನು ಪೂರಾ ಓದಿ ಅವುಗಳ ಆಧಾರದ ಮೇಲೆ ಆ ಕೆಲಸಗಳನ್ನು ಮಾಡಬೇಕಾಗಿದೆ ಅವುಗಳನ್ನು ಮೇಲೆಮೇಲೆ ಓದಿಕೊಂಡರೆ ಸಾಲದು ಶಾಸ್ತ್ರಗಳನ್ನು ಸಾಗರಕ್ಕೆ ಸಮಾನವಾಗಿ ಎಣಿಸಬಹುದು ಸಾಗರದಲ್ಲಿ ಮೇಲೆಮೇಲೆ ತೇಲಾಡುವವನಿಗೆ ಮೀನುಗಳು ಮಟ್ಟಿಗೆ ಸಿಕ್ಕುವುವು ಅದರ ತಳಕ್ಕೆ ಹೋಗಿ ಹುಡುಕುವವನಿಗಲ್ಲವೇ ಅಲ್ಲಿ ವಿಶೇಷವಾಗಿ ನೆರೆದಿರುವ ಅಪಾರವಾದ ಬೆಲೆಯುಳ್ಳ ಮುತ್ತುಗಳೂ ರತ್ನಗಳೂ ದೊರೆಯುವುವು ಶಾಸ್ತ್ರಗಳನ್ನು ಮೇಲೆಮೇಲೆ ಓದಿದರೆ ಅವುಗಳಲ್ಲಿ ಸಾಧಾರಣವಾದ ಮಾತುಗಳೂ ವಿವಾದಾಸ್ಪದವಾದ ವಾಕ್ಯಗಳೂ ಅನೇಕ ಕಂಡುಬರುವುವು ಆದರೆ ಬಹಳ ಜಾಗರೂಕತೆಯಿಂದಲೂ ತೆರವಾದ ಮನಸ್ಸಿನಿಂದಲೂ ಓದಿದ್ದೇ ಆದರೆ ನಿಜವಾದ ಅರ್ಥವೂ ಜ್ಞಾನಾಂಶವೂ ದೊರೆಯುವುವು ಸಣ್ಣ ವಯಸ್ಸಿನಲ್ಲಿ ಮದುವೆ ಮಾಡುವುದರಿಂದ ಉಂಟಾಗುವ ಅನರ್ಥಗಳನ್ನೂ ವಯಸ್ಸಾದ ಮೇಲೆ ವಿವಾಹ ಮಾಡತಕ್ಕದರ ಪ್ರಯೋಜನಗಳನ್ನೂ ಶಾಸ್ತ್ರಾಧಾರದ ಮೇಲೆ ೩।೪ ದಿವಸಗಳವರೆಗೂ ಅನುವಾದ ಮಾಡಬಹುದು ಆದರೆ ನನಗೆ ಕೆಲವು ನಿಮಿಷಗಳ ಮಟ್ಟಿಗೆ ಅವಕಾಶ ಕೊಟ್ಟಿರುತ್ತದೆ ಈ ವಿಚಾರದಲ್ಲಿ ಸಂಪೂರ್ಣವಾದ ತಿಳುವಳಿಕೆ ಬೇಕಾದರೆ ವೇದಶಾಸ್ತ್ರಗಳನ್ನು ಪರಿಶೋಧಿಸಿ, ಪಂಡಿತ ಬ್ರಹ್ಮಶ್ರೀ ಎ ಮಹದೇವ ಶಾಸ್ತ್ರಿಗಳವರು ಬರೆದಿರುವ ಪುಸ್ತಕವನ್ನು ಓದಿಕೊಳ್ಳಬಹುದು ಆದರೆ ವಿವಾಹದ ವಯಸ್ಸನ್ನು ಹೆಚ್ಚಿಸುವುದು ಶಾಸ್ತ್ರಕ್ಕೆ ವಿರೋಧವಾದುದಲ್ಲವೆಂದು ಮಟ್ಟಿಗೆ ಖಂಡಿತವಾಗಿ ಹೇಳಬಲ್ಲೆನು ”

" ಗಂಡು ಹುಡುಗರಿಗೆ ಅವರ ವಿದ್ಯಾಭ್ಯಾಸವು ಪೂರೈಸುವ ವರೆಗೂ ಮದುವೆ ಮಾಡದೆ ಇರುವುದು ಉತ್ತಮವೆಂದು ಶಾಸ್ತ್ರಗಳಲ್ಲಿ ಸ್ಪಷ್ಟವಾಗಿ ಹೇಳಿದೆ ಇದಕ್ಕೆ ಈಗಿನ ಕಾಲದಲ್ಲಿ ಯಾರೂ ಪ್ರತಿಯಾಗಿ ಹೇಳುವುದೂ ಇಲ್ಲ ವಿದ್ಯಾಭ್ಯಾಸ ಮುಗಿಸಿ ಪ್ರಾಪಂಚಿಕ ಜ್ಞಾನವನ್ನು ಸಂಪಾದಿಸಿ ಗೃಹಕೃತ್ಯ ವಿಚಾರಗಳನ್ನು ತಿಳಿದುಕೊಂಡ ನಂತರವೇ ಗೃಹಸ್ಥಾಶ್ರಮವನ್ನು ಸ್ವೀಕರಿಸಬೇಕು ಹೆಣ್ಣುಮಕ್ಕಳಿಗೂ ಹೀಗೆಯೇ ಅವರಿಗೂ ವಿವಾಹವಾಗುವುದಕ್ಕೆ ಮುಂಚಿತವಾಗಿ ಸಾಂಸಾರಿಕ ವ್ಯಾವಹಾರಿಕ ಮುಂತಾದವುಗಳ ತಿಳುವಳಿಕೆಯುಂಟಾಗತಕ್ಕದು ಅವಶ್ಯಕವು "

" ಬುದ್ಧಿವಂತರಾದ ಹುಡುಗರು ೨೨-೨೪ ವರ್ಷ ವಯಸ್ಸಿನಲ್ಲಿ ತಮ್ಮ ವಿದ್ಯೆಯನ್ನು ಪೂರೈಸುವರು ಸಾಧಾರಣವಾದ ಹುಡುಗರು ೨೬ ವರ್ಷಗಳ ವರೆಗೆ ವಿದ್ಯಾಕಾಲಕ್ಷೇಪ ಮಾಡುತ್ತಿರುವರು ಅನಂತರ ಅವರಿಗೆ ವಿವಾಹ ಮಾಡಬೇಕಾದರೆ ೧೦ ವರುಷ ಅಥವಾ ಅದಕ್ಕೆ ಕಡಮೆಯಾದ ಬಾಲಿಕೆಯರನ್ನು ಹುಡುಕಿ ಮದುವೆ ಮಾಡುವುದು ಯುಕ್ತವಲ್ಲವು ವಿದ್ಯೆ ಪೂರೈಸಿದ ನಂತರ ವಿವಾಹಿತರಾಗಬೇಕೆಂದು ಸಂಕಲ್ಪಿಸಿದ್ದ ಯುವಕರು ತಮ್ಮ ವಯಸ್ಸಿಗೆ ಸರಿಯಾದ ವಿದ್ಯಾವತಿಯರಾದ ಹೆಣ್ಣುಮಕ್ಕಳು ನಮ್ಮ ಜಾತಿಯಲ್ಲಿ ದೊರೆಯದೆ ಇದ್ದಕಾರಣ ಇತರ ಜಾತಿಗಳಲ್ಲಿ ವಿವಾಹ ಮಾಡಿಕೊಳ್ಳಬೇಕಾಗಿ ಬಂದುದು ನಮಗೆ ತಿಳಿದೇ ಇದೆ ಇದು ಬಹು ಶೋಚನೀಯವಾದ ಸಂಗತಿಯಲ್ಲವೇ ? '

" ಈಗಿನ ವಿವಾಹಕಾಲದೊಳಗಾಗಿ ನಮ್ಮ ಹೆಣ್ಣುಮಕ್ಕಳಿಗೆ ಸರಿಯಾಗಿ ವಿದ್ಯಾಭ್ಯಾಸ ಮಾಡಿಸುವುದಕ್ಕೆ ವ್ಯವಧಾನವು ಸುತರಾಂ ಸಾಲದು ಹೆಣ್ಣುಮಕ್ಕಳಿಗೆ ಸರಿಯಾಗಿ ವಿದ್ಯಾಭ್ಯಾಸ ಮಾಡಿಸಬೇಕಾದರೆ ಅವರಿಗೆ ಓದುಬರಹ, ಲೆಖ್ಖಾಚಾರ, ಮಕ್ಕಳ ಪೋಷಣೆ ತರಬೇತುಗಳು, ಗೃಹಕೃತ್ಯನಿರ್ವಾಹವು, ಅತ್ತೆಮಾವಂದಿರ ಶುಶ್ರೂಷೆ, ಹೊಲಿಗೆ, ಹೆಣಿಗೆ, ಮತ್ತು ಇನ್ನೂ ಉಪಯೋಗಕರವಾದ ಸಕಲ ಕುಶಲ

ವಿದ್ಯೆಗಳನ್ನು ಕಲಿಸಬೇಕಾಗುವುದು ಈಗಿನ ಸ್ಥಿತಿಯಲ್ಲಿ ಹೆಣ್ಣುಮಕ್ಕಳನ್ನು ೮ರಿಂದ ೧೨ ವರ್ಷ ವಯಸ್ಸಿನೊಳಗಾಗಿ ಮದುವೆ ಮಾಡಿ ಕಳುಹಿಸಿಕೊಟ್ಟು ಬಿಡಬೇಕಾದ ಸಂದರ್ಭದಲ್ಲಿ ಇವುಗಳನ್ನು ಕಲಿಸುವುದಕ್ಕೆ ಕಾಲವೆಲ್ಲಿಯದು? ಅವರಿಗೆ ಮದುವೆಯಾದ ನಂತರ ವಿದ್ಯಾಭ್ಯಾಸ ಮಾಡಿಸಬಹುದೆನ್ನುವದು ಅಸಾಧ್ಯ! ಏತಕ್ಕೆಂದರೆ ಕೆಲವು ಅತ್ತೆಯ ಮನೆಯವರು ವಿದ್ಯಾಭ್ಯಾಸಕ್ಕೆ ಅಡ್ಡಿಮಾಡುವರು ಆದುದರಿಂದ ಈಗಿನ ಸ್ಥಿತಿಯಿಂದ ಹೆಣ್ಣುಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ತರಬೇತುಗಳು ಉಂಟಾಗದಿರುವುದೇ ಒಂದು ದೊಡ್ಡ ಕೆಡುಕು"

"ವಿವಾಹಿತರಾದ ಬಾಲದಂಪತಿಗಳ ಅನಾರೋಗ್ಯವು ಮತ್ತೊಂದು ಕೆಡುಕು ವಿವಾಹವು ಬರಿಯ ಬಾಯಿಮಾತಿನ ವಿಷಯವಲ್ಲ ಆದರಿಂದ ವಿವಾಹಿತರಾದವರಿಗೆ ಬಹಳ ಜವಾಬ್ದಾರಿ(ಉತ್ತರವಾದಿತ್ವ) ಗಳು ಬಂದೊದಗುವುವು ಹೆಣ್ಣುಮಗುವಿನ ದೇಹವು ೧೨ರಿಂದ ೧೬ ವರ್ಷಗಳವರೆಗೂ ಗಂಡುಹುಡುಗರ ಶರೀರವು ೧೪ರಿಂದ ೨೦ನೆಯ ವರುಷಗಳ ವರೆಗೂ ಬೆಳೆಯುತ್ತದೆಂದು ವೈದ್ಯರು ತಿಳಿಸುತ್ತಾರೆ. ಶರೀರವು ಚನ್ನಾಗಿ ಬೆಳೆಯುವದಕ್ಕೆ ಮುಂಚಿತವಾಗಿ ವಿವಾಹಿತರಾದರೆ ಅನಾರೋಗ್ಯವು ತಲೆದೋರಿ ಸಣ್ಣ ವಯಸ್ಸಿನಲ್ಲಿ ಮಕ್ಕಳನ್ನು ಹೆರುವುದರಿಂದ ಆರೋಗ್ಯವು ಸಂಪೂರ್ಣವಾಗಿ ಕೆಟ್ಟುಹೋಗುವುದು. ೧೨-೧೩ ವರ್ಷ ವಯಸ್ಸಿನ ಸಣ್ಣ ಬಾಲಿಕೆಯು ಮಗುವನ್ನು ಹೆತ್ತು ತಾಯಿಯಾದರೆ ಮಗುವನ್ನು ಸರಿಯಾಗಿ ಸಾಕಿ ತಯಾರುಮಾಡುವುದಕ್ಕೆ ಬಾರದೆ ತಾಯಿಗೂ ಮಕ್ಕಳಿಗೂ ಅನೇಕ ವಿಧವಾದ ರೋಗಗಳು ಪ್ರಾಪ್ತವಾಗಿ ಅಕಾಲಮರಣಕ್ಕೆ ತುತ್ತಾಗುವುದಲ್ಲದೆ ನಮ್ಮ ಜನಾಂಗವೇ ಕಾಲಕ್ರಮದಲ್ಲಿ ಹೀನಸ್ಥಿತಿಗೆ ಬಂದು ಬಿಲವಾಗುವುದು."

"ಮತ್ತೊಂದು ಕೆಡಕುಂಟಾಗುವುದು ಯಾವುದೆಂದರೆ.— ಹೆಣ್ಣುಮಕ್ಕಳಿಗೆ ಇಷ್ಟು ವಯಸ್ಸಿನೊಳಗಾಗಿ ವಿವಾಹ ಮಾಡಲೇಬೇಕೆಂಬ ನಿರ್ಬಂಧದಿಂದ ತಾಯಿತಂದೆಗಳು ತಮ್ಮ ಮಗಳಿಗೆ ಯಾವ ವರನು ಮೊದಲು ಬಂದೊದಗುವನೋ ಅವನಿಗೆ ಕೊಟ್ಟು ಮದುವೆ ಮಾಡಿ

ಕೊಡಬೇಕಾಗಿ ಬರುವುದು ಇದರಿಂದ ಅನೇಕ ವೇಳೆ ಅವಳ ಜೀವಮಾನವೆಲ್ಲಾ ದುಃಖಸಾಗರದಲ್ಲಿ ಮುಳುಗಿ ಹೋಗುವುದು '

" ಇದೂ ಅಲ್ಲದೆ, ವಿದ್ಯಾವಂತರಾದ ವರನ ತಾಯಿತಂದೆಗಳು ಹೆಣ್ಣುಮಕ್ಕಳ ತಾಯಿತಂದೆಗಳಿಗಿಂತ ಬಹಳ ಭಾರಿ ಕನ್ಯಾಶುಲ್ಕವನ್ನು ಎಳೆಯುವದಕ್ಕೆ ಅವಕಾಶವಾಗಿದೆ. ಈಚೆಗೆ ಈ ರೀತಿ ರುಸು [ಶುಲ್ಕ-ಚೆತ್ತಿ-ಕಾಣಿಕೆ ಇತ್ಯಾದಿ) ಮನ್ನು ವಸೂಲ್ಮಾಡುವುದು ಪದ್ಧತಿಯಾಗಿ ಹೋಗಿದೆ ಮೆಟ್ರಿಕ್ಯುಲೇಶನ್ ಪಾಸಾದ ವರನಿಗೆ ೩೦೦೦ ರೂಪಾಯಿ, ಎಫ್ ಏ ಪರೀಕ್ಷೆಯಲ್ಲಿ ತೇರ್ಗಡೆಯಾದವನಿಗೆ ೪೦೦೦ ರೂಪಾಯಿ, ಬಿ ಎ ಮಾಡಿದವನಿಗೆ ೬೦೦೦ ರೂಪಾಯಿ ಈ ಪ್ರಕಾರವಾಗಿ ವರದಕ್ಷಿಣೆಯನ್ನು ಸುಲಿಯುವದಕ್ಕೆ ಪ್ರಾರಂಭವಾಗಿದೆ "

" ಭಾಗ್ಯವಂತರೇನೋ ಎಷ್ಟು ಕೇಳಿದರೆ ಅಷ್ಟು ಕೊಡಲುಳ್ಳವರು ಬಡವರ ಪಾಡು ಏನಾಗಬೇಕು? ಅವರು ಒಬ್ಬ ಮಗಳಿಗೆ ಮದುವೆಯಾಗುವುದರೊಳಗೆ ಮನೆ-ಮಾರಗಳನ್ನು ಮಾರಿಕೊಂಡು ದಿವಾಳಿಯಾಗುವರು ಅದಕ್ಕೂ ಗತಿಯಿಲ್ಲದವರು ಅವಿವಾಹಿತರಾದ ತಮ್ಮ ಹೆಣ್ಣುಮಕ್ಕಳನ್ನು ನೋಡಿ ತುಂಬಾ ದುಃಖಿಸುವರು ಇದನ್ನು ನೋಡಿ ಇಂಗಿತಜ್ಞರಾದ ಮಕ್ಕಳು ತಮ್ಮ ತಾಯಿತಂದೆಗಳಿಗೆ ದುಃಖವಾಯಿತಲ್ಲಾ ಎಂದು ಬಾವಿಯಲ್ಲಿ ಬಿದ್ದಾಗಲಿ, ಬೆಂಕಿಯಿಂದ ಸುಟ್ಟುಕೊಂಡಾಗಲಿ ತಮ್ಮ ಪ್ರಾಣವನ್ನು ಕಳೆದುಕೊಳ್ಳುವರು ಇಂತಹ ಸಂಗತಿಗಳು ನಡೆದಿವೆಯೆಂದು ನಮ್ಮೆಲ್ಲರಿಗೂ ಗೊತ್ತೇ ಇದೆ ಒಂದುವೇಳೆ ತಾಯಿತಂದೆಗಳು ಧೈರ್ಯಪಟ್ಟು ತಮ್ಮ ಹೆಣ್ಣುಮಕ್ಕಳ ವಿವಾಹವನ್ನು ಸಾವಕಾಶಪಡಿಸಿದರೆ ಅವರ ನೆರೆಹೊರೆಯವರು ತಾಯಿಯನ್ನು-- ಮಗಳ ಮದುವೆ ಮಾಡದೆ ಹೇಗೆ ಸಹಿಸುತ್ತಿರುವಿರಿ-- ಎಂದು ಕಾಟಕೊಟ್ಟು ನಿಂದೆ, ಆಕ್ಷೇಪಣೆ ಮುಂತಾದವುಗಳಿಂದ ಅವರ ಧೈರ್ಯವನ್ನು ನಾಶಪಡಿಸುವರು. ಹೇಗಾದರೂ ಆಗಲಿ, ಮದುವೆ ಮಾಡಲೇಬೇಕೆಂಬ ನಿರ್ಬಂಧದಿಂದ ಕೇವಲ ಬಾಲಿಕೆಯರಾದ ಹೆಣ್ಣುಮಕ್ಕಳನ್ನು ೫೦-೬೦ ವರುಷ ವಯಸ್ಸಿನ ಮುದಿವರನಿಗೆ ಕಟ್ಟಿ ಮದುವೆ ಮಾಡಿಬಿಟ್ಟು

ತಮ್ಮ ಮೇಲಿನ ಭಾರವನ್ನು ಇಳಿಸಿಕೊಂಡು ಬಿಡುವರು ಹಾ! ಏನು ಕಷ್ಟ!!"

"ಇಷ್ಟೇ ಅಲ್ಲ, ಇದೂ ಮತ್ತು ಇನ್ನೂ ಇತರ ದುಷ್ಪದ್ಧತಿಗಳು ಬ್ರಾಹ್ಮಣರಲ್ಲಿಯೇ ಇಲ್ಲದೆ ಇತರ ಜಾತಿಯವರೂ ಸಣ್ಣ ವಯಸ್ಸಿನಲ್ಲಿ ವಿವಾಹ ಮಾಡತಕ್ಕದು ಒಳ್ಳೆಯದೆಂದು ತಿಳಿದುಕೊಂಡು ಈ ಕೆಟ್ಟ ಪದ್ಧತಿಯನ್ನೇ ಅನುಸರಿಸುತ್ತಿರುವರು ಚಿಕ್ಕ ವಯಸ್ಸಿನಲ್ಲಿ ವಿವಾಹ ಮಾಡುವುದರ ಅನನುಕೂಲಗಳನ್ನು ತಿಳಿಸಿದೆನಷ್ಟೆ! ಈಗ ವಿವಾಹದ ವಯಸ್ಸನ್ನು ಹೆಚ್ಚಿಸುವುದರ ಪ್ರಯೋಜನವನ್ನೂ ಯೋಚಿಸಿ ನೋಡೋಣ—'

'ವಿದ್ಯಾವಂತರಾದ ತಾಯಿತಂದೆಗಳ ಅಹಂಕಾರವೂ ದುರಾಶೆಯೂ ಖಂಡಿತವಾಗಿಯೂ ಅಣಗಿ ಹೋಗಿ ವರದಕ್ಷಿಣೆಯ ದುಷ್ಟ ಪದ್ಧತಿಯು ಕಡಿಮೆ ಬೀಳುವುದು ಗಿಣಿಯಂತಹ ಹೆಣ್ಣುಮಗುವನ್ನು ಸಿಕ್ಕಿದವನ ಕುತ್ತಿಗೆಗೆ ಕಟ್ಟಿ ಆಮರಣಾಂತ ಕಷ್ಟನಿಷ್ಠುರಗಳಿಗೆ ಗುರಿಯಾಗುವುದು ತಪ್ಪಿಹೋಗುವುದು ಈ ನಮ್ಮ ದೇಶದಲ್ಲಿ ಈಗ ಕೋಟ್ಯಂತರ ಬಾಲವಿಧವೆಯರಿದ್ದಾರೆ ಅವರ ಸಂಖ್ಯೆಯು ಬಹುಮಟ್ಟಿಗೆ ಕಡಿಮೆ ಬೀಳುವುದು ವಿಧವಾ ವಿವಾಹದ ಅವಶ್ಯಕತೆಯೂ ಕಡಮೆಯಾಗುವುದು ಬಾಲಕ ಬಾಲಿಕೆಯರ ದೇಹದಾರ್ಢ್ಯ ಮತ್ತು ವಿದ್ಯಾಭ್ಯಾಸ ತರಬೇತುಗಳಿಗೆ ಬೇಕಾದಷ್ಟು ಅವಕಾಶ ದೊರೆಯುವುದು ಬಾಣಂತಿಯರ ಮತ್ತು ಮಕ್ಕಳ ಕಾಯಿಲೆಗಳೂ ಮರಣಗಳೂ ಕಡಿಮೆಯಾಗುವವು ಈ ರೀತಿಯಾಗಿ ವಿವಾಹದ ವಯಸ್ಸನ್ನು ಹೆಚ್ಚಿಸುವುದು ಬಹು ಶ್ಲಾಘ್ಯವಾದುದಲ್ಲದೆ ಶಾಸ್ತ್ರಸಮ್ಮತವಾಗಿಯೂ ವಾಸ್ತವವಾಗಿ ಸುಖವನ್ನುಂಟು ಮಾಡತಕ್ಕದಾಗಿಯೂ ಇರುವುದು."

"ಹೆಣ್ಣುಮಕ್ಕಳ ವಿವಾಹದ ವಯಸ್ಸನ್ನು ೧೬ ವರ್ಷಕ್ಕೂ ಗಂಡುಮಕ್ಕಳ ವಯಸ್ಸನ್ನು ಇದಕ್ಕೆ ತಕ್ಕಹಾಗೆಯೂ ಹೆಚ್ಚಿಸಿದ ಹೊರತು, ನಮ್ಮ ಹೆಂಗಸರನ್ನು ವಿದ್ಯಾವತಿಯರನ್ನಾಗಿ ಮಾಡಿ ಅವರು ಗಂಡಸರಿಗೆ ಪ್ರಾಪಂಚಿಕ ವ್ಯವಹಾರಗಳಲ್ಲಿ ಸಹಾಯಕರಾಗುವಂತೆ

ತರಬೇತು ಮಾಡಿದ ಹೊರತು ನಮ್ಮ ದೇಶವು ಉತ್ತಮ ಸ್ಥಿತಿಗೆ ಬರುವದಿಲ್ಲವೆಂದು ನಾನು ಖಂಡಿತವಾಗಿಯೂ ಹೇಳಬಲ್ಲೆನು ಹೀಗೆ ಮಾಡದೆ ನಮ್ಮ ವಿದ್ಯಾವಂತರಾದ ಗಂಡಸರನ್ನು ಜಪಾನ, ಚೀನಾ, ಇಂಗ್ಲಂಡ ಮುಂತಾದ ರಾಜ್ಯಗಳಿಗೆ ಹೊಸ ಹೊಸ ವಿಷಯಗಳನ್ನು ಕಲಿತುಕೊಂಡು ಬರಲು ಕಳುಹಿಸಿಕೊಟ್ಟಾಗ್ಗ್ಯೂ ಹೆಂಗಸರ ಸ್ಥಿತಿಯನ್ನು ವೃದ್ಧಿಪಡಿಸಿದ ಹೊರತು ದೇಶವನ್ನು ಏಳಿಗೆಗೆ ತಂದಂತೆ ಆಗುವ್ರದಿಲ್ಲ ಇದಕ್ಕೆ ವಿವಾಹದ ವಯಸ್ಸನ್ನು ಹೆಚ್ಚಿಸುವದೇ ಅತ್ಯಾವಶ್ಯಕವಾದ ಪ್ರಥಮ ಕಾರ್ಯವಾಗಿರುತ್ತದೆ ''

" ಮದುವೆಯ ವಯಸ್ಸನ್ನು ಹೆಚ್ಚಿಸಿದರೆ ವರನು ಸಿಕ್ಕದೆ ಮಗಳಿಗೆ ಮದುವೆಯಾಗದೆ ಹೋದೀತೆಂದು ಕೆಲವರು ಆಕ್ಷೇಪಿಸುಸರು ಹೀಗೆ ಎಂದಿಗೂ ಆಗಲಾರದು. ಒಂದುವೇಳೆ ಹಾಗೆ ಆದರೂ ಜೀವಾವಧಿ ಅಯೋಗ್ಯನಿಗೆ ಹೆಂಡತಿಯಾಗಿ ಕಷ್ಟಪಡುವ್ರದಕ್ಕೆ ಬದಲಾಗಿ ಗಾರ್ಗಿಯಂತೆ ವಿವಾಹವಿಲ್ಲದೆ ಇರುವುದೇ ಉತ್ತಮವೆಂದು ನನ್ನ ಅಭಿಪ್ರಾಯವು "

" ನಮ್ಮ ಹೆಂಗಸರು ನಮ್ಮ ಜನಾಂಗದಲ್ಲಿ ಅವರಿಗೆ ಯೋಗ್ಯವಾದ ಸ್ಥಾನವನ್ನು ಹೊಂದುವಂತೆ ಅವರ ಸ್ಥಿತಿಯನ್ನು ವೃದ್ಧಿಪಡಿಸುವದೆಂಬ ಅಭಿಪ್ರಾಯವು ಹೊಸ ಅಭಿಪ್ರಾಯವೇನೂ ಅಲ್ಲ ನಮ್ಮ ಶಾಸ್ತ್ರಪುರಾಣಾದಿಗಳನ್ನು ಚನ್ನಾಗಿ ಓದಿನೋಡಿದರೆ ಪೂರ್ವಕಾಲದಲ್ಲಿ ಸ್ತ್ರೀಯರು ಗಂಡಸರಂತೆಯೇ ವಿದ್ಯಾಪಾರಂಗತರಾಗಿ ಪ್ರಪಂಚದ ಕಾರ್ಯಗಳಿಗಾಗಿ ತರಬೇತು ಹೊಂದಿದ್ದರೆಂದು ಕಂಡುಬರುವದು. ಈಚೆಗೆ ಅಂದರೆ ೧೦೦೦ ವರುಷಗಳಿಂದೀಚೆಗೆ ಮುಹಮ್ಮದೀಯರ ಆಳ್ವಿಕೆಯಲ್ಲಿ ಇದೆಲ್ಲಾ ಬದಲಾಯಿಸಿ ಸ್ತ್ರೀಯರ ಸ್ಥಿತಿಯು ಹೀನವಾಯಿತು. ಈಗ ನಾಗರಿಕವಾದ ಇಂಗ್ಲಿಷ ಸಾರ್ವಭೌಮರವರ ಪ್ರಭುತ್ವದಲ್ಲಿ ಪೂರ್ವದಲ್ಲಿದ್ದಂತೆಯೇ ಹೆಂಗಸರನ್ನು ಉತ್ತಮಸ್ಥಿತಿಗೆ ತರಲು ಪ್ರಯತ್ನಪಡಬಹುದಾಗಿದೆ. ಕಾಲಚಕ್ರವು ತಿರುಗುತ್ತಾ ಹಳೇ ಪದ್ಧತಿಯು ಹೊಸದಾಗಿಯೂ ಹೊಸ ಪದ್ಧತಿಯು ಹಳೆಯದಾಗಿಯೂ ಪರಿಣಮಿಸಿದೆ."

(ಸ್ತ್ರೀ ಸಭಿಕರ ಕಡೆಗೆ ತಿರುಗಿಕೊಂಡು ಉಪನ್ಯಾಸಕರು ಈ ರೀತಿಯಾಗಿ ಹೇಳಿದರು )

" ಬಾಲಕಿಯರ ವಿವಾಹದ ವಯಸ್ಸನ್ನು ಹೆಚ್ಚಿಸಲು ಗಂಡಸರು ಅಡ್ಡಿ ಮಾಡುವುದಿಲ್ಲವೆಂದು ನಾನು ಖಂಡಿತವಾಗಿ ಹೇಳಬಲ್ಲೆನು. ಸಹೋದರಿಯರೇ! ನಾವು ಮನಸ್ಸನ್ನು ಸ್ಥಿರಪಡಿಸಿಕೊಂಡು ನಮ್ಮ ಹೆಣ್ಣುಮಕ್ಕಳಿಗೆ ಸಣ್ಣವಯಸ್ಸಿನಲ್ಲಿ ಮದುವೆ ಮಾಡಕೂಡದೆಂದು ನಾವು ಹೆಂಗಸರು ದೃಢಸಂಕಲ್ಪ ಮಾಡಿಕೊಳ್ಳಬೇಕು. ಮೊದಲು ಮೊದಲು ಯಾವ ಬದಲಾವಣೆಯಾಗಲೀ ಜನಗಳಿಗೆ ಅಭ್ಯಾಸವಿಲ್ಲದ್ದರಿಂದ ಅದು ಒಳ್ಳೆಯದಾದರೂ ಅದರ ವಿಷಯದಲ್ಲಿ ಆಕ್ಷೇಪಣೆ ಮಾಡುವರು ಆದರೆ ಕಾಲಕ್ರಮದಲ್ಲಿ ಅದರ ಉಪಯೋಗಗಳು ತಿಳಿಯುತ್ತಾ ತಿಳಿಯುತ್ತಾ ಅದನ್ನು ನಿರಾಕ್ಷೇಪವಾಗಿ ಒಪ್ಪಿಕೊಂಡು, ಕೊನೆಗೆ ಆ ಬದಲಾವಣೆಯುಂಟು ಮಾಡಿದವರನ್ನು ಸ್ತುತಿಸುವರು ಇವಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಅವುಗಳಲ್ಲಿ ಒಂದನ್ನು ತಿಳಿಸುತ್ತೇನೆ ......"

" ಕೆಲವು ವರ್ಷಗಳ ಕೆಳಗೆ ರಾಜಾ ರಾಮಮೋಹನರಾಯರೆಂಬವರು, ಸತ್ತುಹೋದ ಗಂಡನ ಶವದೊಡನೆ ಹೆಂಡತಿಯನ್ನು ಜೀವಸಹಿತ ಸುಟ್ಟುಬಿಡತಕ್ಕ "ಸತೀ" ಎಂಬ ಘೋರವಾದ ದುಷ್ಟ ಪದ್ಧತಿಯನ್ನು ತಪ್ಪಿಸಲು ಬಹು ಪ್ರಯಾಸಪಟ್ಟರು ಈ ಕಷ್ಟತರವಾದ ಕಾರ್ಯದಲ್ಲಿ ಯಾರೂ ಆತನಿಗೆ ಸಹಾಯಮಾಡಲಿಲ್ಲ ಆತನ ಅನುಬಂಧಿಗಳೂ ಸಹ ಆತನನ್ನು "ನಾಸ್ತಿಕ" ನೆಂದು ಬೈದು ಹೀಯಾಳಿಸಿದರು ಆದರೂ ಆತನ ಪ್ರಯಾಸವು ಕೊನೆಗೆ ಸಿದ್ಧಿಸಿತು. ಈಗ ನಾವು ಆತನು ಮಾಡಿದ ಮಹದುಪಕಾರವನ್ನು ಸಂತೋಷದಿಂದ ಸ್ಮರಿಸುತ್ತಿರುವೆವು. ತಂದೆಯನ್ನು ಕಳೆದುಕೊಂಡ ಮಕ್ಕಳಿಗೆ ತಾಯಿಯಾದರೂ ದಿಕ್ಕಾಗಿ ಪೋಷಿಸುವುದಕ್ಕಿರುವಳಲ್ಲಾ– ಎಂದು ನಾವು ಸಂತೋಷಪಡುತ್ತೇವಲ್ಲವೇ ? ಆದುದರಿಂದ ಒಳ್ಳೆ ಕೆಲಸ ಮಾಡುವವರು ಮೊದಲು ಮೊದಲು ಎಲರಿಂದಲೂ ಸತ್ಕೀರ್ತಿ ಪಡೆಯುವದು ಅಸಾಧ್ಯ. ಕಾಲಕ್ರಮ

ದಲ್ಲಿ ಒಳ್ಳೆ ಕಾರ್ಯವು ಸಫಲವಾಗುವದು ಆದುದರಿಂದ ಜನರ ಆಕ್ಷೇಪಣೆಗೂ ಅಧೈರ್ಯಕ್ಕೂ ಅಂಜದೆ ನಮ್ಮ ಕಾರ್ಯದಲ್ಲಿ ಮುಂದರಿಸಿ ಹೋಗಬೇಕು"

"ಬಾಲ್ಯವಿವಾಹದಿಂದುಂಟಾಗುವ ಕಷ್ಟದುಃಖಗಳನ್ನೂ ದೊಡ್ಡವರಾದ ನಂತರ ವಿವಾಹ ಮಾಡುವ್ವದರ ಅನುಕೂಲಗಳನ್ನೂ ಇಲ್ಲಿ ನೆರೆದಿರತಕ್ಕವರೆಲ್ಲರೂ ಯೋಚಿಸಿ ತಿಳಿದುಕೊಂಡು ವಿವಾಹದ ವಯಸ್ಸನ್ನು ಹೆಚ್ಚಿಸುವುದಕ್ಕಾಗಿ ನಾನು ಈಗ ಮಾಡಿರುವ ಸಲಹೆಯನ್ನು ಅನುಮೋದಿಸುವರೆಂದು ನಂಬುತ್ತೇನೆ."

(ಈ ಸಲಹೆಯನ್ನು ಶ್ರೀಮತಿ ವೆಂಕಟ ಸುಬ್ಬಮ್ಮನವರು ಅನುಮೋದಿಸಿ, ವಿ ಎನ್ ವೆಂಕಟೇಶ ಅಯ್ಯಂಗಾರ ಎಂಬವರು ಸ್ಥಿರೀಕರಿಸಿದ ನಂತರ ಅಲ್ಲಿದ್ದವರೆಲ್ಲರೂ ಏಕವಾಕ್ಯತೆಯಿಂದ ಸಮ್ಮತಿಸಿದರು

ವಿ ಸೂ — ಕನ್ಯೆಯರಿಗೆ ಅತ್ಯಂತ ಬಾಲ್ಯದಲ್ಲಿ ವಿವಾಹ ಮಾಡುವ ಪದ್ಧತಿಯು ನಾವು ನೋಡುವಂತೆ ಬಹು ಹಿಂದೆ ಬಿದ್ದೋ ಹೋಗಿರುವುದರಿಂದ ಈಗ ಅದರ ವಾದವಿವಾದದ ಅಗತ್ಯವೇನೂ ಉಳಿದಿಲ್ಲ ಈಗ ನಡೆಯುತ್ತಿರುವ ವಿವಾಹವು ಸಾಮಾನ್ಯವಾಗಿ ನೋಡುವುದರಲ್ಲಿ ಯುಕ್ತಕಾಲಿಕವಾಗಿಯೇ ಇರುವುದರಿಂದ ಇದಕ್ಕೂ ಹೆಚ್ಚಿಗೆ ಬೆಳೆಯಿಸಬೇಕಾದ ಆವಶ್ಯಕ ಕಾರಣಗಳು ಇರಲಾರವು. ಇದಕ್ಕೂ ಹೆಚ್ಚಿನ ವಿಷಯಗಳನ್ನು ಎಂದರೆ ಈ ಉಪನ್ಯಾಸದ ಸಂಬಂಧವಾದ ನಮ್ಮ ಅಭಿಪ್ರಾಯವನ್ನು ತಿಳಿಯಲೆಳಸುವ ನಮ್ಮ ಭಗಿನೀ ಬಂಧುಗಳು ಮಾತೃನಂದಿನಿ (ಸತೀಹಿತೈಷಿಣಿ ಗ್ರಂಥಮಾಲಾ ಸಂಖ್ಯೆ ೬) ಯ ನಾಲ್ಕು-ಏಳನೆ ಪರಿಚ್ಛೇದಗಳನ್ನು ಸಾದ್ಯಂತವಾಗಿ ಸಾವಧಾನದಿಂದ ಸಮಾಲೋಚಿಸಬೇಕೆಂದು ನಮ್ರಭಾವದಿಂದ ಸೂಚಿಸುವೆವು.

ಸಂ.

## ಮೈಸೂರು ವೀರಣ್ಣನ ಕ್ಯಾಂಪಿನಲ್ಲಿರುವ
# ಶ್ರೀಕೃಷ್ಣರಾಜ ಬಾಲಿಕಾ ಪಾಠಶಾಲೆಯೂ
## ಶ್ರೀಮತೀ ವೆಂಕಟ ಸುಬ್ಬಮ್ಮನವರೂ

ನಮ್ಮ ಆರ್ಯಭಗಿನಿಯರಲ್ಲಿ ಪರಿಗಣಿತೆಯರಾಗಿರುವ ಶ್ರೀಮತೀ ಎಮ್. ವೆಂಕಟ ಸುಬ್ಬಮ್ಮನವರು ಲೇಖನ-ಭಾಷಣಗಳಿಂದ ಸಾಧ್ವೀ ಸಂಪದಭ್ಯುದಯಗಳ ವಾಚಕವರ್ಗಕ್ಕೂ ಮತ್ತು ಸಭಾಮಧ್ಯದಲ್ಲಿ ಉಪನ್ಯಸಿಸುವದರಿಂದ ಮೈಸೂರು' ನಗರದ ಬಹುಮಂದಿ ಸೋದರ-ಸೋದರೀ ವರ್ಗಕ್ಕೂ ಪರಿಚಿತರಾಗಿರುವರು ಇವರ ಪರಿಚಯವು ನಮಗೆ ಕಳೆದ ವರ್ಷ ಎಂದರೆ ೧೯೧೬ನೆ ಇಸವಿ ಮಾರ್ಚ ತಿಂಗಳು ೧೯ನೆ ತಾರೀಖಿನಲ್ಲಿ ದೊರೆಯಿತು ಇವರು, ಆದಿನ ಈವೂರಿನಲ್ಲಿ ನಡೆದ ವಿದ್ಯಾವಿಚಾರ ಸಭೆಯಲ್ಲಿ ಸ್ತ್ರೀವಿದ್ಯಾಭ್ಯಾಸದ ವಿಚಾರವಾದ ಉಪನ್ಯಾಸವನ್ನು ಕೊಡಲು ವಿದ್ಯಾಖಾತೆಯವರಿಂದ ಪ್ರೇರಿಸಲ್ಪಟ್ಟು ಬಂದಿದ್ದರು. ಹಾಗೆಯೇ ತಮ್ಮ ಜತೆಯಲ್ಲಿ ಶ್ರೀಮತೀ ರಾಧಾಬಾಯಿಯವರನ್ನೂ ಕರೆದುಕೊಂಡು ನಮ್ಮ ಹಿತೈಷಿಣೀ ಮಾತೃಮಂದಿರಕ್ಕೂ ಬಂದು ನಮಗೆ ತಮ್ಮ ಪರಿಚಯ ಲಾಭವನ್ನುಂಟು ಮಾಡಿ ತೆರಳಿದರು. ಮತ್ತೆ ಅವರಿಂದ ನಿರ್ಬಂಧಿಸಲ್ಪಟ್ಟು ನಾವೂ ಅವರ ಭಾಷಣವನ್ನು ಕೇಳಿ ಸಂತೋಷಪಡಲು ವಿದ್ಯಾವಿಚಾರಸಭೆಗೆ ಹೋಗಿದ್ದು ಮತ್ತೆ ಅವರ ಮರುಭೇಟಿಯನ್ನೂ ಪಡೆದು ಬಂದೆವು *

---

* ವಿದ್ಯಾವಿಚಾರ ಸಭೆಯಿಂದ ನಮಗೆ ಸರಿಯಾದ ಆಹ್ವಾನವು ಬಾರದಿದ್ದರೂ, ನಮ್ಮ ಧರ್ಮಭಗಿನಿಯರ ಭಾಷಣವನ್ನು ಕೇಳುವ ಕುತೂಹಲದಿಂದಲೂ, ಮತ್ತು ಆ ನಮ್ಮ ಭಗಿನಿಯರ ಬಲವಂತದ ಮೇಲಿಂದಲೂ ಸಭೆಗೆ ಹೋಗಿದ್ದೆವು ಇವರ ಭಾಷಣವು ತಕ್ಕ ಮಟ್ಟಿಗೆ ತೃಪ್ತಿಕರವಾಗಿಯೇ ಇದ್ದಿತಾದರೂ, ಸ್ತ್ರೀವಿದ್ಯಾಭ್ಯಾಸದ ವಿಷಯವಾಗಿ ವಿದ್ಯಾವತಿಯರಾದ ಇವರು ಕೊಟ್ಟ ಭಾಷಣವನ್ನು ಕೇಳುವ ಸೌಭಾಗ್ಯ ವಿಶೇಷವು ನಮ್ಮ ಸ್ಥಳೀಯ ಸೋದರಿಯರಲ್ಲಿ ಒಬ್ಬಿಬ್ಬರ ಪಾಲಿಗೂ ದೊರೆಯದೆ ಹೋಯಿತೆಂದೂ, ಸ್ತ್ರೀವಿದ್ಯಾಭ್ಯಾಸಕ್ಕಾಗಿ ಪಾಡುಪಡುತ್ತಿರುವ ಈ ವಿದ್ಯಾವಿಚಾರ ಸಭೆಗೆ ಇಲ್ಲಿಯ ಬಾಲಿಕಾ ಪಾಠಶಾಲೆಯ ನಾಲ್ಕುಮಂದಿ ಬಾಲಕಿಯರನ್ನು ಬಿಟ್ಟು ಉಳಿದ ಉಪಾಧ್ಯಾಯಿನಿಯರಾಗಲೀ ವಿದ್ಯಾರ್ಥಿನಿಯರಾಗಲೀ ಬಾರದಿದ್ದ ಕಾರಣವೇನಿರಬೇಕೆಂದೂ ಚಿಂತಿಸುವೆವು. ಆದರೆ ಹಿಂದೆ ನಡೆದುಹೋದ ವಿಚಾರ ಈಗ ಪ್ರಸ್ತಾಪಿಸಿ ಫಲವಿಲ್ಲವೆಂದು ಸುಮ್ಮನಿರಬೇಕಾಗಿದೆ.

ಶ್ರೀಮತಿಯರು ಕನ್ನಡ-ಸಂಸ್ಕೃತ-ಇಂಗ್ಲಿಷ್ ಭಾಷೆಗಳಲ್ಲಿ ತಕ್ಕ ಮಟ್ಟಿಗೆ ಪಾಂಡಿತ್ಯವುಳ್ಳವರಾಗಿದ್ದಾರೆಂದು ತಿಳಿಯುತ್ತೇವೆ ಮತ್ತು ಶ್ರೀರಂಗಪಟ್ಟಣ ಮೈಸೂರು ಮೊದಲಾದ ಕಡೆಗಳಲ್ಲಿ ಆಲ್ಲಿಗಲ್ಲಿಗೆ ಉಪನ್ಯಾಸಗಳನ್ನು ಕೊಡುತ್ತಿರುವವರೆಂದೂ ಅವರ ಉಪನ್ಯಾಸವು ಪ್ರೌಢವಾಗಿಯೂ ಈ ಕಾಲದ ನಾಗರಿಕತೆಗೆ ತಕ್ಕಂತೆ ಉಪಯುಕ್ತವಾದುದಾಗಿಯೂ ಇರುವದೆಂದು ತಿಳಿಯುತ್ತೇವೆ (ಆದರೆ, ಸ್ತ್ರೀಯರ ಶಿಕ್ಷಣವಿಚಾರದಲ್ಲಿ ವ್ಯಾಯಾಮ ಸಂಬಂಧವಾದ ಇವರ ಮತವು ನಮ್ಮ ಸ್ತ್ರೀಪ್ರಕೃತಿ ಧರ್ಮಕ್ಕೆ ಮೀರಿದುದೆಂದೂ ಆ ವಿಷಯದಲ್ಲಿ ಇವರು ಭಾಷಣ ಮಾಡುವಾಗ ಸ್ವಲ್ಪ ತಡೆದು ನೋಡಿ ಹೇಳುವುದು ಅವಶ್ಯಕವೆಂದೂ ತೋರುತ್ತಿದೆ ಅದಿರಲಿ )

ಶ್ರೀಮತಿಯರು, ಮೈಸೂರು ಮೀವರ್ಸಿಟ್ಯನಿನಲ್ಲಿರುವ ಶ್ರೀಕೃಷ್ಣ ರಾಜ ಬಾಲಿಕಾ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿಯರಾಗಿ ಶ್ರದ್ಧೆಯಿಂದಲೂ ಜಾಗರೂಕತೆಯಿಂದಲೂ ತಮ್ಮ ಕೈಕೊಂಡ ಕಾರ್ಯವನ್ನು ನಿರ್ವಹಿಸುತ್ತಿರುವರು ಇವರ ಕರ್ತೃತ್ವಶಕ್ತಿಯಿಂದಲೂ ಇವರ ಸಹಾಯೋಪಾಧ್ಯಾಯಿನಿಯರಾದ ಶ್ರೀಮತಿ ರಾಧಾಬಾಯಿ, ಶ್ರೀಮತಿ ಸೌ ರುಕ್ಮಿಣಮ್ಮ, ಶ್ರೀ ರಂಗಮ್ಮ, ಶ್ರೀ ಸೌ ಕೆಂಪದೇವಮ್ಮ ಇವರುಗಳ ಸಹೃದಯದ ಸಮಯೋಚಿತ ಸಹಾಯ, ಕಾರ್ಯನಿರ್ವಾಹಗಳಿಂದಲೂ ಈ ಪಾಠಶಾಲೆಯು ತೃಪ್ತಿಕರವಾಗಿರುವದೆಂದು ಹೆಸರು ಪಡೆದಿರುತ್ತದೆ

ಈ ಪಾಠಶಾಲೆಯನ್ನು ನೋಡಲು ನಾವು ಜೂನ ತಿಂಗಳು ೧೨ ಮಂಗಳವಾರ ಮಧ್ಯಾಹ್ನ ೨ ಗಂಟೆಗೆ ಹೋಗಿ ಮೂರು ಗಂಟೆಯವರೆಗೂ ಅಲ್ಲಿದ್ದು ಬಂದೆವು ನಾವು ಹೋಗಿದ ವೇಳೆಯಲ್ಲಿ ಬಹು ಮಂದಿ ಬಾಲಕಿಯರು ಮನೆಗೆ ಹೋಗಿದ್ದುದರಿಂದ ಎಲ್ಲಾ ಬಾಲಕಿಯರನ್ನು ನೋಡುವುದಕ್ಕಾಗಲೀ ಮತ್ತು ನಮ್ಮ ಭಗಿನಿಯರ ಶಿಕ್ಷಣಾಕ್ರಮ ಕೌಶಲಗಳನ್ನು ಕಣ್ಣಾರೆ ನೋಡುವುದಕ್ಕಾಗಲೀ ನಮಗೆ ಅವಕಾಶವಾಗಲಿಲ್ಲವಾದರೂ ಶ್ರೀಮತಿಯರು ಆದರದಿಂದ ಪ್ರದರ್ಶಿಸಿದ

ಶಾಲೆಯ ಸ್ಥಿತಿಗತಿ-ವಿಚಾರಗಳನ್ನು ಸಾವಧಾನವಾಗಿ ನೋಡಿ ತಿಳಿದು ಸಂತೋಷಪಟ್ಟೆವು

ಈ ಶಾಲೆಯು ೧೯೧೨ನೆ ಜುಲೈ ೧ರಲ್ಲಿ ಮ್ಯುನಿಸಿಪಾಲಿಟಿಯವರ ವಿಚಾರಣೆಯ ಮೇಲಿಂದ ಸ್ಥಾಪಿತವಾಯಿತೆಂದೂ ಈಗ ಈ ಶಾಲೆಯಲ್ಲಿ ಬಾಲಕಿಯರು ೧೮೦ರ ವರೆಗೆ ಇರುವರೆಂದೂ ಇಲ್ಲಿ ೧೯೧೫ರ ವರೆಗೆ ಕನ್ನಡ ಲೋ|| ಸೆಕೆಂಡರಿ ಪರೀಕ್ಷೆಯವರೆಗೂ ಅವಕಾಶವಿತ್ತೆಂದೂ, ೧೯೧೫ರಿಂದೀಚೆಗೆ ಅದನ್ನು ತೆಗೆದು ಪ್ರಾಯಮರಿ ತರಗತಿಯಷ್ಟಕ್ಕೆ ಮಾತ್ರ ನಿಲ್ಲಿಸಿರುವರೆಂದೂ, ೧೫--೧೬ರಲ್ಲಿ ಶ್ರೀಮತಿಯವರು ಸ್ವಂತ ಪರಿಶ್ರಮದಿಂದ ಲೋ|| ಸೆ|| ಗೆ ಕಳುಹಿದ್ದ ಮೂವರಲ್ಲಿ ಇಬ್ಬರು ತೇರಿದಂತೆಯೂ, ಈ ಶಾಲೆಗೆ ಐವರು ಉಪಾಧ್ಯಾಯಿನಿಯರೂ ಒಬ ದಾದಿಯೂ ಇರುವಂತೆಯೂ ತಿಳಿಯುತ್ತದೆ ಕಟ್ಟಡವು ಇದ್ದುದರಲ್ಲಿ ದೊಡ್ಡದಾಗಿಯೂ ತಕ್ಕಂತೆ ಅನುಕೂಲವುಳ್ಳದಾಗಿಯೂ ಇದೆ ಶಾಲೆಯ ಮುಂದೆಯೂ ಹಿಂದೆಯೂ ವಿಸ್ತಾರವಾದ ಬೈಲು ಪ್ರದೇಶವಿದೆ ಈ ಸ್ಥಳವು ಬಾಲಕಿಯರ ನೈತಿಕ ಪ್ರಾಪಂಚಿಕ ಮತ್ತು ಸಾಂಸಾರಿಕ ಜ್ಞಾನಗಳನ್ನು ಹೆಚ್ಚಿಸಲನುಕೂಲವಾದ ಹೂದೋಟಕ್ಕೆ ತಕ್ಕ ಸ್ಥಳವಾಗಿದೆ ಇಂತಹ ಅನುಕೂಲ ಮತ್ತು ವಿಸ್ತಾರವಾದ ಪ್ರದೇಶವಿದ್ದು ಬಾಲಕಿಯರಿಗೆ ಅನುವನ್ನು ಕಲ್ಪಿಸದೆ ಬಿಟ್ಟಿರುವುದು ಸರಿಯಾಗಿ ತೋರುವುದಿಲ್ಲ ಈ ವಿಷಯವಾಗಿ "'ವ್ಯಾಯಾಮವನ್ನು ಕುರಿತು ಭಾಷಿಸುವ ನೀವು ಹೂದೋಟವನ್ನು ನಿರ್ಮಿಸಿ ಬಾಲಕಿಯರಿಗೆ ಉಚಿತವಾದ ಅಂಗಸಾಧನೆ ವಿಶ್ರಾಂತಿಗಳಿಗೇಕೆ ಅವಕಾಶವನ್ನು ಕಲ್ಪಿಸಬಾರದೆಂದು" ಪ್ರಸ್ತಾಪಿಸಿದುದರಲ್ಲಿ ಈ ವಿಚಾರದಲ್ಲಿ ಬಹು ಬಾರಿ ಪ್ರಯತ್ನಿಸಿ ನಿಷ್ಫಲವಾದಂತೆಯೂ ಮ್ಯುನಸಿಪಾಲಿಟಿಯವರೂ ವಿದ್ಯಾಖಾತೆಯವರೂ ಅನುಗ್ರಹಿಸಿದರೆ ಆಗುವದೆಂದೂ ತಿಳಿದೆವು. ಈ ವಿಚಾರವಾಗಿ ನಾವೂ ಮೇಲ್ಕಂಡವರಿಗೆ ಮೇಲ್ಕಂಡ ವಿಷಯದಲ್ಲಿ ಗಮನಿಸಬೇಕೆಂದು ನಮ್ರಭಾವದಿಂದ ಈ ಮೂಲಕ ನಿವೇದಿಸುತ್ತಿರುವೆವು. ಈ ಶಾಲೆಗೆ ಸಂಬಂಧಿಸಿದಂತೆಯೇ ಬಾಲಕಿಯರ ಉಪಯೋಗ

ಕ್ಕಾಗಿ ಶ್ರೀಮತಿಯರು ಒಂದು ಪುಸ್ತಕ ಭಂಡಾರವನ್ನೂ ಸ್ಥಾಪಿಸಿರುವರು ಈವರೆಗೆ ಇದಕ್ಕೆ ೧೦೦ ಪುಸ್ತಕಗಳು ಸೇರಿರುವವೆಂದು ತಿಳಿಯುತ್ತದೆ. ಶ್ರೀಮತಿಯರ ಶ್ರಮವೂ ಪ್ರಯತ್ನವೂ ಸ್ತುತ್ಯವಾಗಿದೆ ಅದಕ್ಕಾಗಿ ನಾವು ಅವರನ್ನು ಅಭಿನಂದಿಸುವೆವಲ್ಲದೆ ಅವರಿಗೆ ಇತೋಪ್ಯತಿಶಯವಾದ ಧರ್ಮಶ್ರದ್ಧೆ ದೇಶಭಕ್ತಿ, ಭಾಷಾಭಿಮಾನ, ಕರ್ತವ್ಯದಕ್ಷತೆ, ಪ್ರತಿಭಾಶಕ್ತಿಗಳನ್ನು ಅನುಗ್ರಹಿಸಿ ಚಿರಕಾಲ ದೇಶಸೇವೆ ಮಾಡುತ್ತಿರುವಂತೆ ಭಗವತಿಯು ಕೃಪೆಗೈಯಲೆಂದು ಕೋರುವೆವು

ಸಂ ನಂ



ರಾವಬಹಾದ್ದೂರ ಎಮ್. ಶ್ಯಾಮರಾವ, ಎಮ್. ಏ

ಇನ್‌ಸ್ಪೆಕ್ಟರ ಜನರಲ್ ಆಫ್ ಎಜುಕೇಶನ್ ಇನ್ ಮೈಸೂರ

||श्रीः||

वन्देत्वां भूदेवी आर्यमातरम्।

ಕರ್ಣಾಟಕ

# ನಂದಿನಿ

ಮಾಸಪತ್ರಿಕೆ

[illegible]

" ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂಚೈವ ಯಃಪ್ರಭುಃ |
ದಾಸ್ಯನ್ತು ಮಮಯೇಚಾನ್ಯೇ ಹ್ಯದೃಷ್ಟಾಃ ಪಥಿ ಗೋಚರಾಃ ||"

ಸಂಪುಟ ೧ } ಪಿಂಗಳ ಸಂ ಶ್ರಾವಣ ೧೮೩೯ (೧೯೧೭ ಆಗಸ್ಟು) } ಸಂಚಿಕೆ ೧೧

## ಕರ್ಣಾಟಕ ಮಾತೃಗೀತೆ

ರಾಗ.— (ಹರಿಯಧಿಕ ಹರನಧಿಕ)

ಕಣ್ದೆರೆದು ನೋಡಮ್ಮ ಕಲ್ಯಾಣಿ ಜನನೀ ||
ಕಣ್ಣಾಲೆಯಿಂದ್ಬಿಡುವೆವೆ ಕನ್ನಡದ ಜನನೀ || ಪಲ್ಲ ||
ಆರ್ಯ ಸನ್ನಿಭರುತರು ಕಾರ್ಯವೇನೆಂದೆಣಿಸರು—
ಧೈರ್ಯವು ತೊರೆದು ನಿರ್ವೀರ್ಯರೆನಿಸಿಹರು ||
ಆರ್ಯಧರ್ಮದಿ ಮನಃಸ್ಥೈರ್ಯವಿಸಲು ನಮ್ಮ |
ಆರ್ಯಮಹಿಳೆಯರು ಅನಿವಾರ್ಯದೊಳಿಹರು || ಕಣ್ದೆರೆ ||೧||
ಉಡುಪು ಕೊಡವೆಂದೆನುತ ತುರುಡಿಂದ ಕುಣಿಯುವರು |
ಕಡುಸಾಹಸಿಗಳು ನಾವೆಂದು ನಡಗರದೊಳಾಡುವರು ||
ದೃಢಭಕ್ತಿ ಭರವರ್ಗಗಳಡವಿ ಪಾಪಿಷ್ಟ್ರಕಟಿ |
ತಡೆಯಲಾಗದು ತಾಯೆ ಕೈಹಿಡಿದು ಕಾಯೆ || ಕಣ್ದೆರೆ ||೨||
ಚನ್ನಾಗಿ ಕಣ್ದೆರೆಯೆ ನನ್ನಿಯಿಂದಖುಗರಕಾಯೆ |
ಇನ್ನೇಳು ಎಲೆತಾಯೆ-ಕನ್ನಡದ ಜನನಿಯೇ ||
ಇನ್ನುಮಗೆ ಗತಿನೀನೆಯೆಂ- ದೆನ್ನುವಗೆ ಶಿಶಿಗಣ್ಣಿತ್ತು-|
ಮನ್ನಣೆಗೆ ಪಾತ್ರನೆನಿಸು -ಮೋಹಮಂ ಬಿಡಿಸು || ೩ ||

# ವರ್ಗಣೀದಾರರಲ್ಲಿ ವಿನಂತಿ.

ವಿಶ್ವಸನೀಯರಾದ ಭಗಿನೀ ಬಾಂಧವರೇ!

ನಂದಿನಿಯು ನಂದನಂದನನ ಕೃಪಾವಲೋಕನದಿಂದಲೂ ನಿಮ್ಮೆಲ್ಲರ ಪ್ರೋತ್ಸಾಹದಿಂದಲೂ ಇಂದಿನ ವರೆಗೆ ಯಥಾಮತಿ ಸೇವೆ ಮಾಡುತ್ತ ಬಂದಳು ಇನ್ನೊಂದು ಸಂಚಿಕೆಯನ್ನು ಒಪ್ಪಿಸುವುದರಿಂದ ನಿಮ್ಮ ದ್ರವ್ಯರೂಪದ ಸಾಲವನ್ನು ತೀರಿಸಿದಂತಾಗುವುದು ಮತ್ತು ಈ ವರ್ಷದ ದ್ವಿತೀಯ ಕಾಣಿಕೆಯಾಗಿ ನಿಮಗೆ "ಜಾನಕೀ ಕಲ್ಯಾಣ ನಾಟಕ ವನ್ನು ಒಪ್ಪಿಸುದುದಾದರೆ ಹಿಂದೆಮಾಡಿದ್ದ ನಮ್ಮ ವಾಗ್ದಾನದ ಸಾಲವೂ ತೀರಿದಂತಾಗುವದು ಆದರೂ, ಆ ನಿಮ್ಮ ನಿಷ್ಕಲ್ಮಷ ಹೃದಯದ ನಿರ್ವ್ಯಾಜ ಪ್ರೇಮ-ವಾತ್ಸಲ್ಯ-ಪರಿಪೂರಿತವಾದ ಪ್ರೋತ್ಸಾಹ ವಾಕ್ಯಗಳ ಸಾಲದ ದೊಡ್ಡ ಹೊರೆಯನ್ನು ನಾವು ಹೇಗೂ ತೀರಿಸಲಾರೆವು, ಎಂದರೆ ತೀರಿಸಲಾಗದೆಂದು ಸುಮ್ಮನಿರುವುದಲ್ಲ ಆ ನಿಮ್ಮ ಅವ್ಯಾಜ ವಾತ್ಸಲ್ಯವನ್ನು ಚಿರಕಾಲ ಸ್ಮರಿಸುತ್ತ ನಿಮ್ಮ ಸೇವೆಯಲ್ಲಿ ನಂದಿನಿಯನ್ನು ಶಕ್ತಿವಂಚನೆಯಿಲ್ಲದೆ ನಡೆಯಿಸಿಕೊಂಡು ಬರುವುದು ನಮ್ಮ ಕರ್ತವ್ಯವಾಗಿರುವುದು ತಾವುಕೂಡ, ಓರ್ವ ದೇಶಭಗಿನಿಯು,- ಕೇವಲ ಆರ್ಯರಮಣಿಯರ ಮಾರ್ಗಾನುಕರಣ ವೃತ್ತಿಯಲ್ಲಿರುವ ಸೋದರಿಯು—ಈ ವಿಧವಾದ ಸೇವಾಕಾರ್ಯದಲ್ಲಿ ನ್ಯೂನತೆಗಳೇನಾದರೂ ಕಂಡರೂ ಸಹಜಭಾವದಿಂದ ಕ್ಷಮಿಸಿ, ಸ್ಪಷ್ಟವಾಗಿ ತೋರಿಸಿ, ಎಚ್ಚರಿಸುವುದಲ್ಲದೆ ಪರೋಕ್ಷದಲ್ಲಿ ಹೆಸರನ್ನು ಮರೆಯಿಸಿಕೊಂಡು,- ಇಲ್ಲವೆ- ಇತರರ ಹೆಸರಿಂದ- ಇಲ್ಲದ ಸಲ್ಲದ ಶಂಕಾಪವಾದಗಳನ್ನು ಹೊರೆಯಿಸಿ ವೃಥಾ ಕ್ಲೇಶ ಪಡಬಾರದೆಂದು ಮಾತ್ರ ನಿವೇದಿಸುವೆವು.

ಜೂಲೈ ೧೦ರಿಂದ ಅನಿರೀಕ್ಷಿತವಾಗಿ ಸಂಘಟಿಸಿದ ವಿಷಮಶೀತಜ್ವರಬಾಧೆಯಿಂದ ಒಂದು ತಿಂಗಳವರೆಗೆ ನರಳುವಂತಾಗಿ ೧೦—೧೧-೧೨ನೇ ಸಂಚಿಕೆಗಳು ಸಕಾಲದಲ್ಲಿ ನಿಮ್ಮ ಕೈಸೇರಲಿಲ್ಲ. ಆದರೂ ಜೀವಿತಸಂಶಯದಲ್ಲಿದ್ದು ಭಗವತಿಯೊಲ್ಮೆಯಿಂದ ಚೇತರಿಸಿಕೊಳ್ಳುತ್ತಿರು

ವ ನಂದಿನಿಯನ್ನು ಇದೊಂದೇ ತಪ್ಪಿತಕ್ಕಾಗಿ ಆಗ್ರಹಿಸಿ ನಂದಿನಿಯನ್ನು ತಿರಸ್ಕರಿಸದೆ, ನಂದಿನಿಯ ಬಲವದುದ್ಯಮವನ್ನು ನೋಡಿ ಮನ್ನಿಸುವಿರೆಂದು ನಂಬಿರುವೆವು

ನಂದಿನಿಯ ಪ್ರಥಮವರ್ಷದ ದ್ವಿತೀಯಕಾಣಿಕೆಯಾದ "ಜಾನಕೀಕಲ್ಯಾಣ"ವು ಮುದ್ರಣದಲ್ಲಿದೆ ಭಗವತ್ಕೃಪೆಯಿದ್ದರೆ ಕಾರ್ತಿಕ ಅಥವಾ ಮಾರ್ಗಶಿರ ಮಾಸದಲ್ಲಿ ನಂದಿನಿಯ ದ್ವಿತೀಯ ವರ್ಷದ ಪ್ರಥಮಕಾಣಿಕೆಯೆಂದು ಗೊತ್ತಾಗಿರುವ "ಶ್ರೀ ಲಕ್ಷ್ಮೀ ನೃಸಿಂಹ ಸ್ತೋತ್ರ"ವೆಂಬ ಪುಸ್ತಕದೊಡನೆ ದ್ವಿತೀಯ ವರ್ಷದ ವಾರ್ಷಿಕ ವರ್ಗಣಿಗೆ ವ್ಹಿ. ಪಿ. ಮಾಡಲ್ಪಡುವುದು ವ್ಹಿ ಪಿ ಸ್ವೀಕರಿಸುವವರಿಗೆ ಬಹುಮಾನಗಳು ದೊರೆಯುವವು. ತಿರಸ್ಕರಿಸುವವರಿಗೆ ಇಲ್ಲ.

ನಂದಿನಿಯ ೧೨ನೆ ಸಂಚಿಕೆಯು ಇನ್ನು ೧೫-೨೦ ದಿನಗಳೊಳಗೆ ಕಳುಹಲ್ಪಡುವದು ನಂದಿನಿಯ ದ್ವಿತೀಯವರ್ಷದ ಕಾಣಿಕೆಗಳಾಗಿ,- 'ಶ್ರೀಲಕ್ಷ್ಮೀ ನೃಸಿಂಹಸ್ತೋತ್ರ'ವಲ್ಲದೆ, "ದ್ರೌಪದೀ ವಸ್ತ್ರಾಪಹರಣ" "ಭಾಗವತ"ಗಳೆಂಬ ಯಕ್ಷಗಾನಗ್ರಂಥಗಳೂ (ಕವಿವರರಿಂದ ವಿರಚಿತವಾಗಿರುವವು ) ಗೊತ್ತಾಗಿರುವವು

**ವಿ ಸೂ.**—ಮುಂದಬರುವ ಮಹನವಮಿ (ಆಶ್ವಯುಜ ಶುದ್ಧ ನವಮಿ) ದಿನವೇ ನಂದಿನಿಯ ವಾರ್ಷಿಕೋತ್ಸವವು ನಡೆಯುವಂತೆ ಗೊತ್ತಾಗಿರುವುದಲ್ಲದೆ, ವಿಜಯದಶಮಿಯಿಂದ ಒಂದು ಸಪ್ತಾಹವರೆಗೆ ವಿವಾಹವೊಂದರ ನಿಮಿತ್ತ ಪ್ರಯಾಣ (ಪ್ರವಾಸ)ಮಾಡುವವರಾಗಿದ್ದೇವೆ ಆದುದರಿಂದ ನಂದಿನಿಯ ದ್ವಿತೀಯವರ್ಷದ ಪ್ರಥಮ ಸಂಚಿಕೆಯು ನವೆಂಬರ್ ತಿಂಗಳಲ್ಲಿ ನಿಮ್ಮ ಕೈಸೇರಬೇಕಾಗುತ್ತದ ಆ ವರೆಗೆ ಅವಕಾಶವನ್ನು ಕೊಡಬೇಕಾಗಿ ನಮ್ರಭಾವದಿಂದ ಪ್ರಾರ್ಥಿಸುವೆವು.

ಸಂ ನಂ.

# ಕೃತಜ್ಞತೆ

ಪ್ರಜಾಕ್ಷೇಮ ಚಿಂತನೆ, ದೇಶಾಭ್ಯುದಯ, ಆರ್ಯ ಮಹಿಳಾ ಸಮಾಜೋತ್ಕರ್ಷತೆಗಳಲ್ಲಿಯೇ ತತ್ಪರರಾಗಿರುವ ನಮ್ಮ ಶ್ರೀಮನ್ಮಹಾರಾಣಿಯವರು ನಂದಿನಿಯ ಅಭ್ಯುದಯವನ್ನು ಬಯಸಿ ಅರಮನೆಯ ಕಂಟ್ರೋಲರವರ ಮೂಲಕ ಅನುಗ್ರಹಿಸಿ ಕಳುಹಿದ ಪ್ರೋಷಣಾದ್ರವ್ಯವನ್ನೂ ಚಂದಾಮೌಲ್ಯವನ್ನೂ ಅನೇಕಾನೇಕ ವಂದನೆಗಳೊಡನೆ ಸ್ವೀಕರಿಸಿರುವೆವಲ್ಲದೆ, ದಯಾಮಯಿಯಾದ ಭಗವತಿಯು ಪ್ರಜಾರಂಜನಶೀಲರಾದ ನಮ್ಮ ಶ್ರೀಮನ್ಮಹಾರಾಣಿಯವರ, ಶ್ರೀಮನ್ಮಹಾರಾಜರ ಸರ್ವಾಭೀಷ್ಟವನ್ನು ಸಲ್ಲಿಸಿ, ದೀರ್ಘಾಯುರಾರೋಗ್ಯ ಸತ್ಕೀರ್ತಿ ವೈಭವಗಳಿಂದ ಕಾಪಾಡುತ್ತಿರಬೇಕೆಂದು ತ್ರಿಕಾಲಪ್ರ[illegible]ನಸ್ಯ ಭಕ್ತಿಭಾವದಿಂದ ಪ್ರಾರ್ಥಿಸುತ್ತಿರುವೆವು

ಮತ್ತು— ದೇಶೋನ್ನತಿ, ಸಂಪದಭ್ಯುದಯಗಳಲ್ಲಿ ನಿರತರಾಗಿರುವ ನಮ್ಮ ಶ್ರೀಮಾನ್ ದಿವಾನರವರು ನಂದಿನಿಯ ಶ್ರೇಯೋಭಿವೃದ್ಧಿಯನ್ನು ಕೋರಿ, ವಾರ್ಷಿಕ ವರ್ಗಣಿಯಿಂದ ಅನುಗ್ರಹಿಸಿದ ದ್ರವ್ಯವನ್ನು ಕೃತಜ್ಞತಾಪೂರ್ವಕವಂದನೆಗಳೊಡನೆ ಸ್ವೀಕರಿಸಿರುವೆವು, ಭಗವತಿಯು ಶ್ರೀಮಾನ್ ದಿವಾನರವರಿಗೆ ದೀರ್ಘಾಯುರಾರೋಗ್ಯ ಸತ್ಕೀರ್ತಿ ಸಂಪದಗಳನ್ನಿತ್ತು ಸಲಹುತ್ತಿರಬೇಕೆಂದೂ, ಪ್ರಭುವರೇಣ್ಯರ ಪರಮಾನುಗ್ರಹ, ದೇಶ ಕಾಲ-ಸೂಕ್ಷ್ಮಜ್ಞರಾದ ದಿವಾನರವರ ಸಮಯೋಚಿತ ಪ್ರೋತ್ಸಾಹಗಳಿಂದಲೂ, ಹಿತಚಿಂತಕರಾದ ದೇಶಬಾಂಧವರ ಮತ್ತು ವಾತ್ಸಲ್ಯಪರಿಪೂರಿತರಾದ ಆರ್ಯಭಗಿನಿಯರ ಕಾಲೋಚಿತ ಸಹಾಯದಿಂದಲೂ ನಂದಿನಿಯು ಚಿರಕಾಲ ದೇಶಮಾತೃಸೇವೆಯನ್ನು ಮಾಡಿ ಕೃತಕೃತ್ಯಳಾಗುವಂತೆಯೂ ಅನುಗ್ರಹಿಸಬೇಕೆಂದು ಭಕ್ತಿಪುರಸ್ಸರವಾಗಿ ಪ್ರಾರ್ಥಿಸುತ್ತಿರುವೆವು.

ಸಂ. ನಂ



ದಿವಾನ ಬಹದ್ದೂರ ರಾಜಮಂತ್ರಪ್ರವೀಣ

ಶ್ರೀ ಪ್ರ. ನಂದಜೀ ಏಸ್. ಚಕ್ರವರ್ತಿ ಎಮ್. ಎ, ಎಫ್ ಆರ್ ಎ. ಎಸ್.

ಶ್ರೀ

# ಕನ್ನಡದ ರನ್ನಗನ್ನಡಿ

( ಮಣಿ ೪ )

(ವಂಗಮಾತೆಯ ಗರ್ಭಸಂಭವರೂ, ಕರ್ನಾಟ ಮಾತೆಯ ಪ್ರೇಮಪುತ್ರರೂ ಆಗಿರುವ)

ಶ್ರೀಯುಕ್ತ

## ದಿವಾನ್ ಬಹದೂರ್, ರಾಜಮಂತ್ರಪ್ರವೀಣ

## ಜ್ಞಾನ ಶರಣ ಚಕ್ರವರ್ತಿ ಕಾವ್ಯಾನಂದ

ಎಂ ಎ , ಎಫ್ ಆರ್ ಎ ಎಸ್ ಅವರು

ಶ್ರೀಯುತ ಜ್ಞಾನ ಶರಣ ಚಕ್ರವರ್ತಿಯವರು ೧೮೭೫ನೇ ಇಸವಿ ಜೂನ್ ತಿಂಗಳು ೧೨ನೇ ತಾರೀಖಿನಲ್ಲಿ ಚಂದ್ರನಗರದಲ್ಲಿ ಜನ್ಮವನ್ನೆತ್ತಿದರು. ಇವರ ಪೂಜ್ಯಪಾದರು ವೀರೇಶ್ವರ ಚಕ್ರವರ್ತಿಯವರು ಈ ಮಹನೀಯರು ತಮ್ಮ ಜನಾಂಗಕ್ಕೆ ಬೇಕಾದ ಅನೇಕ ಸತ್ಕಾರ್ಯಗಳನ್ನು ಮಾಡಿರುವರು ಇವರ ಸದ್ಗುಣ-ಸದುದ್ಯಮಗಳಿಗೆ ಸಂತುಷ್ಟರಾದ ನಮ್ಮ ಸಾರ್ವಭೌಮರುವರು ಇವರಿಗೆ "ರಾಯ್ ಬಹದ್ದೂರ್" ಎಂಬ ಬಿರುದನ್ನು ದಯಪಾಲಿಸಿದರು ಇವರು (ವೀರೇಶ್ವರಚಕ್ರವರ್ತಿ) ಛೋಟಾನಾಗಪುರದಲ್ಲಿ ವಾಸಿಸುತ್ತ ಅಲ್ಲಿ ವಿದ್ಯಾಭ್ಯಾಸ ಮುಂತಾದುವುಗಳಿಗೆ ವಿಶೇಷವಾಗಿ ಉತ್ತೇಜನವನ್ನು ಕೊಡುತ್ತ ಜನಸಾಮಾನ್ಯಕ್ಕೇ ಇಷ್ಟರಾಗಿದ್ದು ಪ್ರಕೃತ ಕೀರ್ತಿಶೇಷರಾಗಿರುವರು

ಅಂತಹ ಗುಣಾಢ್ಯರ ಪುತ್ರರಾದ ಶ್ರೀ॥ ಜ್ಞಾನಶರಣ ಚಕ್ರವರ್ತಿಯವರು 'ಪಿತು ಶತಗುಣಂ ಪುತ್ರ ' ಎಂಬಂತಿರುವರು. ಇವರು ಬಾಲ್ಯದಲ್ಲಿಯೇ ಅತ್ಯಂತ ಸೂಕ್ಷ್ಮಗ್ರಾಹಿಯಾಗಿಯೂ ಸಕಲ ಶಾಸ್ತ್ರಗಳಲಿಯೂ ಪ್ರವೇಶಿಸತಕ್ಕ ಬುದ್ಧಿಯುಳ ವರಾಗಿಯೂ ಇದ್ದುದನ್ನು ನೋಡಿ

ಇವರ ತಂದೆಯವರೂ ಮತ್ತು ಇವರ ಜ್ಯೇಷ್ಠ ಭ್ರಾತೃಗಳಾದ ಶ್ರೀಯುತ ಸಿದ್ಧೇಶ್ವರ ಚಕ್ರವರ್ತಿ, ಎಂ ಎ , ಬಿ ಎಲ್ ಅವರೂ ಇವರ ವಿದ್ಯಾಭ್ಯಾಸ ವಿಷಯದಲ್ಲಿ ವಿಶೇಷ ಗಮನವಿಟ್ಟು ಇವರು ಪುರೋವೃದ್ಧಿಗೆ ಬರತಕ್ಕ ಪ್ರಯತ್ನಗಳನ್ನು ಮಾಡಿದರು

ಚಕ್ರವರ್ತಿಯವರು ರಾಂಚಿ ಜಿಲ್ಲೆಯಲ್ಲಿರತಕ್ಕ ಪಾಠಶಾಲೆಗಳ ಸಣ್ಣಸಣ್ಣ ತರಗತಿಗಳಲ್ಲಿ ವ್ಯಾಸಂಗಮಾಡುತ್ತಿದ್ದು ಬಳಿಕ ಹೂಗ್ಲಿ ಕೊಲಿಜಿಯೇಟ್ ಸ್ಕೂಲಲ್ಲಿ ವ್ಯಾಸಂಗ ಮಾಡತೊಡಗಿದರು ಅಲ್ಲಿಯ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಬಳಿಕ ಕಲ್ಕತ್ತಾ ಪಟ್ಟಣದಲ್ಲಿರುವ ಪ್ರೆಸಿಡೆನ್ಸಿ ಕಾಲೇಜಲ್ಲಿ ತಮ್ಮ ಪ್ರೌಢವಿದ್ಯಾಭ್ಯಾಸವನ್ನು ಪೂರ್ತಿ ಮಾಡಿದರು ಇವರು ಪ್ರೆಸಿಡೆನ್ಸಿ ಕಾಲೇಜಲ್ಲಿ ವ್ಯಾಸಂಗಮಾಡುತ್ತಿದ್ದಾಗ ಸರಕಾರದಿಂದ ಅತ್ಯುತ್ತಮವಾದ ಅನೇಕ ವಿದ್ಯಾರ್ಥಿ ವೇತನಗಳನ್ನು ಪಡೆದುದು ಮಾತ್ರವೇ ಅಲ್ಲದೆ ಅನೇಕ ಯೋಗ್ಯತಾ ಪದಕಗಳನ್ನೂ (Medals) ಪಾರಿತೋಷಿಕಗಳನ್ನೂ ಯೋಗ್ಯತಾ ಪತ್ರಿಕೆಗಳನ್ನೂ (Certificates) ಪಡೆದರು ಇವುಗಳಲ್ಲಿ ಗ್ವಾಲಿಯರ್ ಸಂಸ್ಥಾನದ ಸುವರ್ಣಪದಕ, ವ್ಯಾಕ್ಕರ್ ಎಂಬವರ ರಜತಪದಕ, ವಿಶ್ವವಿದ್ಯಾಲಯದ 'ಎಂ ಎ. ಪರೀಕ್ಷೆಯ ರಜತಪದಕ, ಟ್ಯಾಗೋರರ ಸುವರ್ಣಪದಕ, ಇವು ಮುಖ್ಯವಾದುವು

ಸಾಮಾನ್ಯವಾಗಿ ಎಂ ಎ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದ ಬಳಿಕ ಮೂರುನಾಲ್ಕು ವರ್ಷಗಳ ವರೆಗೂ ಉಮೇದವಾರರಾಗಿದ್ದವರಿಗೆ ಮಾತ್ರ ದೊರೆಯತಕ್ಕ ಪ್ರೇಮಚಂದ ರಾಯಚಂದ ಎಂಬವರ ೭೦೦೦ ರೂಪಾಯಿಗಳ ವಿದ್ಯಾರ್ಥಿವೇತನವನ್ನು ತಾವು ಎಂ. ಎ ಪರೀಕ್ಷೆಯನ್ನು ಮಾಡಿದ ೧೨ ತಿಂಗಳೊಳಗಾಗಿಯೇ ಪಡೆದರು ಇದನ್ನು ಪಡೆದ ಕೆಲವು ದಿನಗಳಲ್ಲಿಯೇ ಇವರು ಪ್ರಾಚ್ಯಶಾಸ್ತ್ರ ಪರಿಶೀಲನಕ್ಕಾಗಿ ಬಂಗಾಳಾ ಏಷ್ಯಾಟಿಕ್ ಸೊಸೈಟಿಯಿಂದ ಕೊಡತಕ್ಕ ಎಲಿಯಟ್ ಎಂಬವರ ಸುವರ್ಣಪದಕದಿಂದಲೂ ಭೂಷಿತರಾದರು. ೧೮೯೬ನೆಯ ಜುಲೈ ತಿಂಗಳಲಿ ಚಕ್ರವರ್ತಿಯವರು ಲಕ್ನೊ

ಕ್ಯಾನಿಂಗ್ ಕಾಲೇಜಿನಲ್ಲಿ ಪ್ರೊಫೆಸರರಾಗಿ ನಿಯಮಿತರಾದರು ೧೮೯೭ನೆ ಏಪ್ರಿಲ್ ತಿಂಗಳಲ್ಲಿ ಹೂಗ್ಲಿ ಕಾಲೇಜಿಗೆ ವರ್ಗಾಯಿಸಲ್ಪಟ್ಟರು. ಅದೇ ಕಾಲೇಜಲ್ಲಿ ಬಿ ಏ ಮತ್ತು ಎಂ ಏ ತರಗತಿಗಳಿಗೆ ಗಣಿತಶಾಸ್ತ್ರ ಪಾಠಕರಾಗಿದ್ದ ಪ್ರೊಫೆಸರ್ ಬೂರ್ ಎಂಬವರ ಕೆಲಸವನ್ನು ಕೈಕೊಂಡರು ಇದೇ ೧೮೯೭ನೆಯ ಇಸವಿಯಲ್ಲಿ ಸಂಸ್ಕೃತ ಪ್ರಬಂಧವಿಷಯವಾಗಿ ಸಂಸ್ಕೃತ ಚಂದ್ರಿಕಾ ಮಂಡಲಿಯವರು ಒಂದು ಪರೀಕ್ಷೆಯನ್ನು ಏರ್ಪಡಿಸಿದರು ಆಗ ಅದರಲ್ಲಿ ಇವರು ಉತ್ತೀರ್ಣರಾಗಿ "ಕಾವ್ಯಾನಂದ" ಎಂಬ ಬಿರುದನ್ನು ಪಡೆದರು. ೧೮೯೮ನೇ ಮೇ ತಿಂಗಳಲ್ಲಿ ಇವರು ಸರ್ವಶ್ರೇಷ್ಠರಾದವರಿಗೆ ಲಭಿಸತಕ್ಕ ಇಂಡಿಯಾ ಸರಕಾರದ ಫೈನಾನ್ಷಿಯಲ್ ಸಿವಿಲ್ ಸರ್ವಿಸ್ ಮೆಂಬರುಗಳ ಪಟ್ಟಿಯಲ್ಲಿ ಸೇರಿಸಲ್ಪಟ್ಟರು. ತರುವಾಯ ಇಂಡಿಯಾದಲ್ಲಿ ರಂಗೂನ, ಅಲಹಾಬಾದ, ಕಲ್ಕತ್ತಾ ಮುಂತಾದ ಕಡೆಗಳಲ್ಲಿರುವ ಅಕೌಂಟ್ ಆಫೀಸುಗಳಲ್ಲಿ ದೊಡ್ಡದೊಡ್ಡ ಹುದ್ದೆಯಲ್ಲಿದ್ದರು

೧೯೦೮ನೆ ಇಸವಿಯಲ್ಲಿ ಇಂಡಿಯಾ ಸರಕಾರದವರು ಇವರನ್ನು ಕಲ್ಕತ್ತಾ ಪಟ್ಟಣದಿಂದ ಮೈಸೂರು ಸರಕಾರಕ್ಕೆ ಕಂಟ್ರೋಲರ್ ಮತ್ತು ಫೈನಾನ್ಷಿಯಲ್ ಸೆಕ್ರೆಟರಿಯಾಗಿರುವಂತೆ ನಿಯಮಿಸಿ, ಮೈಸೂರು ಸೀಮೆಗೆ ಕಳುಹಿಕೊಟ್ಟರು

ಚಕ್ರವರ್ತಿಯವರು ನಮ್ಮ ಮೈಸೂರು ಸಂಸ್ಥಾನಕ್ಕೆ ಬಂದ ಮೇಲೆ ಸರಕಾರದ ವೀಮಾ (Insurance) ಕಮಿಟಿಯ ಸೆಕ್ರೆಟರಿಯವರಾಗಿಯೂ ಮತ್ತು ಬೆಂಗಳೂರಲ್ಲಿರುವ ಕುಪ್ಪಟ, ನೂಲು, ರೇಷ್ಮೆ ಮುಂತಾದ ಕಾರಖಾನೆಗಳಿಗೆಲ್ಲ ಡೈರೆಕ್ಟರಾಗಿಯೂ ನಿಯಮಿತರಾದರು.

ಈ ಮಹನೀಯರು ವಿಜ್ಞಾನಶಾಸ್ತ್ರ, ಗಣಿತಶಾಸ್ತ್ರ ಮುಂತಾದವುಗಳ ವಿಚಾರವಾಗಿ ಬರೆದಿರತಕ್ಕ ಗ್ರಂಥಗಳಲ್ಲಿ "ಆನ್ ದಿ ಜನರಲ್ ಕಾರ್ಟೀಸಿಯನ್ ಈಕ್ವೇಷನ್ ಆಫ್ ದಿ ಸೆಕೆಂಡ್ ಡಿಗ್ರಿ" (on the General Cartesian Equation of the Second Degree)

ಎಂಬುದು ಒಂದು ಮುಖ್ಯವಾದ ಲೇಖನವು ಇದು "ಇಂಡಿಯುನ್ ಎಂಜನಿಯರಿಂಗ್" ಎಂಬ ಪತ್ರಿಕೆಯಲ್ಲಿ ಪ್ರಕಟಿತವಾಗಿದೆ ಬಂಗಾಳಾ ಪ್ರಾಂತದಲ್ಲಿ ಒಡವೆಗಳನ್ನು ತಯಾರು ಮಾಡುವಾಗ ವ್ಯರ್ಥವಾಗುತ್ತಿದ್ದ ಚಿನ್ನದ ವಿಷಯವಾಗಿ ಇವರು ಬರೆದಿರುವ ಉಪನ್ಯಾಸವು ಸರ್ವಜನ ವಿದಿತವೂ, ಸರ್ವ ಶ್ಲಾಘ್ಯವೂ ಆಗಿರುವುದು ಪ್ರೊಫೆಸರ ಸಿ ಪಿ. ರಾಯ್ ಎಂಬವರು ತಾವು ಬರೆದಿರುವ "ಹಿಂದೂ ರಸಾಯನಶಾಸ್ತ್ರ" ಎಂಬ ಗ್ರಂಥದಲ್ಲಿ ಈ ಲೇಖನದ ವಿಷಯವಾಗಿ ಒಂದು ಅಧ್ಯಾಯವನ್ನೇ ಬರೆದು ಪ್ರಶಂಸೆ ಮಾಡಿರುವರು "ಗುಡುಗು, ಬಿರುಗಾಳಿ, ಮಳೆ"–ಎಂಬುವುಗಳ ವಿಷಯವಾಗಿ ಇವರು ಬರೆದಿರುವ ಉಪನ್ಯಾಸವೇ ಎಲಿಯಟ್ಟರವರ ಪಾರಿತೋಷಕವನ್ನು ಕೊಡಿಸಿದುದು ಮತ್ತು ಇವರ ತಂದೆಯವರು ಇಂಗ್ಲೀಷಲ್ಲಿ ಪದ್ಯರೂಪವಾಗಿ ಬರೆದಿರುವ ಭಗವದ್ಗೀತೆಗೆ ಉಪೋದ್ಘಾತವಾಗಿ ಬರೆದಿರುವ ಇವರ ಲೇಖನವನ್ನು ಕೇವಲ ದೇಶೀಯ ದೃಕ್ಕುಗಳಾಗಿರುವ ಪಂಡಿತರು ಕೂಡ ಆನಂದ ಪರವಶರಾಗಿ ಬಹುಮುಖದಿಂದ ಪ್ರಶಂಸಿರುವರು. ಇವರು ಸಂಸ್ಕೃತ ಬಂಗಾಳಿ ಭಾಷೆಗಳಲ್ಲಿ "ಅಷ್ನಿಕೆ, ಗಚ್ಛ, ಲಕ್ಷ್ಮೀರಾಣಿ* (ನಾಟಕ), ಪೇವಾಜಿ (ನಾಟಕ), ಮಧ್ಯಲೀಲ (ನಾಟಕ), ಲೋಕಾಲೋಕ (ಕಾವ್ಯ)" ಮುಂತಾದ ಗದ್ಯಪದ್ಯಾತ್ಮಕವಾದ ಅನೇಕ ಗ್ರಂಥಗಳನ್ನು ಬರೆದಿರುವರು, ಮತ್ತು ಬರೆಯುತ್ತಲೂ ಇರುವರು

ನಮ್ಮ ಮೈಸೂರು ಸಂಸ್ಥಾನದಲ್ಲಿದ್ದುಕೊಂಡು ರಾಜಭಕ್ತಿ ವಿಶ್ವಾಸಗಳಿಂದ ರಾಜ್ಯದ ಆಡಳಿತಗಳಲ್ಲಿ ಮನ ಪೂರ್ವಕವಾಗಿ ಕೆಲಸ ಮಾಡಿರುವುದನ್ನು ನೋಡಿ ನಮ್ಮ ಶ್ರೀಮನ್ಮಹಾರಾಜರವರು ಪರಮ ಸಂತುಷ್ಟರಾಗಿ ೧೯೧೧ನೆಯ ಇಸವಿಯಲ್ಲಿ "ರಾಜಮಂತ್ರಪ್ರವೀಣ"

---

* ಇದನ್ನು ವಿದ್ಯಾಖಾತೆಯ ಇನ್ಸ್ಪೆಕ್ಟರ್ ಜನರಲ್‌ರವರ ಆಫೀಸಿನಲ್ಲಿ ಕನ್ನಡ ಟ್ರಾನ್ಸ್‌ಲೇಟರಾಗಿರುವ ಶ್ರೀಯುತ ಪಂಡಿತ, ಕೆ, ರಾಜಗೋಪಾಲಚಕ್ರವರ್ತಿಯವರು ಕನ್ನಡಕ್ಕೆ ಪರಿವರ್ತಿಸಿರುವರು ಕನ್ನಡದ ಒಂದು ಪ್ರತಿಯು ನಮ್ಮ ಮಾತೃಮಂದಿರವನ್ನೂ ಅಲಂಕರಿಸಿರುವುದು ಸಂ ನಂ.

ಎಂಬ ಬಿರುದನ್ನು ದಯಪಾಲಿಸಿದರು ೧೯೧೧ನೆಯ ಇಸವಿಯಲ್ಲಿ ಡಿಲ್ಲಿ ದರ್ಬಾರ್ ಮೆಡಲನ್ನೂ ೧೯೧೪ನೆಯ ಇಸವಿಯಲ್ಲಿ "ದಿವಾನ್ ಬಹದೂರ್" ಎಂಬ ಬಿರುದನ್ನೂ ಪಡೆದಿರುವರು

ನಮ್ಮ ಮೈಸೂರು ಯೂನಿವರ್ಸಿಟಿಯು (ವಿಶ್ವವಿದ್ಯಾಲಯ) ಸ್ಥಾಪಿತವಾಗುವದಕ್ಕೆ ಮೊದಲು 'ಕಾರ್ಯಕಾರಿ ಮಂಡಲಿ''ಗೆ ಮೆಂಬರರಾಗಿಯೂ ಯೂನಿವರ್ಸಿಟಿ ಸ್ಥಾಪಿತವಾದ ಬಳಿಕ ''ಯೂನಿವರ್ಸಿಟಿ ಕೌನ್‌ಸಿಲ್'' ಮೆಂಬರರಾಗಿಯೂ ನಿಯಮಿತರಾಗಿರುವರು.

ಸರಕಾರೀ ನೌಕರಿಯಲ್ಲಿರುವವರಿಗೆ ಮಾತ್ರ ಅನುಕೂಲವಾಗಿದ್ದ ಗೌರ್ನಮೆಂಟ ಲೈಫ್ ಇನ್‌ಶ್ಯೂರನ್ಸು ಪಬ್ಲಿಕ್ (ಸಾಮಾನ್ಯ) ಜನಗಳಿಗೂ ಅನುಕೂಲಿಸುವಂತೆ ಮಾಡಿದರು ಮತ್ತು ವಿಲೇಜಿಂಗ್ ಸೇವಿಂಗ್ಸ ಬ್ಯಾಂಕನ್ನು ಗ್ರಾಮಸ್ಥರ ಅನುಕೂಲಕ್ಕಾಗಿಯೂ ಮನೆಯಲ್ಲಿಯೇ ಇರತಕ್ಕ ಹೆಂಗಸರು ಮುಂತಾದವರು ತಮ್ಮಲ್ಲಿರತಕ್ಕ ದ್ರವ್ಯವನ್ನು ಜೋಪಾನವಾಗಿ ಇಟ್ಟುಕೊಂಡು ವೃದ್ಧಿಪಡಿಸಿಕೊಳ್ಳಲು ಅನುಕೂಲವಾಗುವಂತೆ "ಕಲೆಕ್ಟಿಂಗ್ ಸೇವಿಂಗ್ಸ್ ಬ್ಯಾಂಕ' ಎಂದರೆ "ಇದ್ದೆಡೆಯಲ್ಲಿಯೇ ಬಂದು ಹಣವನ್ನು ತೆಗೆದುಕೊಳ್ಳುವದೂ ಕೊಡುವದೂ" ಎಂಬ ಬ್ಯಾಂಕನ್ನೂ ನಿರ್ಮಿಸಿದರು ಮತ್ತು ಅವಕಾಶ ಬಿದ್ದಾಗ ಹೆಂಗಸರು, ಮಕ್ಕಳು, ವೃಥಾ ಕಾಲಹರಣವನ್ನು ಮಾಡದೆ ಮನೆಗೆ ಬೇಕಾದ ವಸ್ತುಗಳನ್ನು ತಯಾರಿಸಿಕೊಳ್ಳಲು ಅನುಕೂಲವಾಗುವಂತೆ " ಹೋಮ ಇಂಡಸ್ಟ್ರೀಸ್-ಮನೆಯ ಕೈಗಾರಿಕೆ " ಯನ್ನು ಅಲ್ಲಲ್ಲಿ ಉಚಿತವಾಗಿ ಏರ್ಪಡಿಸಿರುತ್ತಾರೆ ಈ ವಿಧವಾದ ಇನ್ನೂ ಅನೇಕ ಕೆಲಸಗಳನ್ನು ಮಾಡಿಯೂ ಮಾಡುತ್ತಲೂ ಸರ್ವಜನ ಹಿತ ಚಿಂತನೆಯಲ್ಲಿಯೇ ಇವರು ತಮ್ಮ ಕಾಲ-ಧನವನ್ನೂ ವಿನಿಯೋಗಿಸುತ್ತಿರುವರು

ಈ ಮಹನೀಯರಿಗೆ ಮೂವರು ಗಂಡುಮಕ್ಕಳಿರುವರು ಇವರ ಧರ್ಮಪತ್ನಿಯವರೂ ಇವರಂತೆಯೇ ನಮ್ಮ ದೇಶೀಯ ಸೋದರಿಯರ ವಿಷಯದಲ್ಲಿ ಸರ್ವದಾ ಹಿತಾಕಾಂಕ್ಷಿಣಿಯರಾಗಿರುತ್ತಾರೆ.

ಪ್ರಕೃತ ನಮ್ಮ ಧರ್ಮ ಭ್ರಾತೃಗಳಾದ ಶ್ರೀಯುತ ಜ್ಞಾನಶರಣ ಚಕ್ರವರ್ತಿಯವರು ಮೈಸೂರು ಸರ್ಕಾರಕ್ಕೆ ಫೈನಾನ್ಷಿಯಲ್ ಸೆಕ್ರೆಟರಿಯಾಗಿಯೂ ಎಕನಾಮಿಕ್ ಕಾನ್ಫರೆನ್ಸಿನ ವಿದ್ಯಾಭ್ಯಾಸದ ಕಮಿಟಿಗೆ ಅಧ್ಯಕ್ಷರಾಗಿಯೂ ನಿಯಮಿತರಾಗಿರುವರು.

ವಂಗಮಾತೆಯ ಸಂತಾನರಾಗಿ ಮಾತೃಸೇವಾ ತತ್ಪರತೆಯಲ್ಲಿರುವಂತೆಯೇ ಮಾತೃವಾಕ್ಯ ಪ್ರೇರಿತರಾಗಿ ಕರ್ಣಾಟ ಮಾತೆಯ ಅಭಿಮಾನಪುತ್ರರಾಗಿ ಬಂದು, ಅಭಿಮಾನವತೀ ಮಾತೆಯ ಅಭ್ಯುದಯಕ್ಕಾಗಿ ೮-೯ ವರ್ಷಗಳಿಂದ ಅವಿಶ್ರಾಂತ ಶ್ರಮದಿಂದ ಸೇವೆ ಮಾಡುತ್ತಿರುವ ಈ ನಮ್ಮ ಧರ್ಮಭಾತೃ- " ಜ್ಞಾನಶರಣ ಚಕ್ರವರ್ತಿ, ಕಾವ್ಯಾನಂದ " ರವರು ನಮ್ಮ ಕನ್ನಡಿಗರೆಲ್ಲರಿಗೂ ಚಿರಸ್ಮರಣೀಯರಾಗಿರುವರಲ್ಲದೆ ಇವರ ದೀರ್ಘಾಲೋಚನೆ, ಧರ್ಮಶ್ರದ್ಧೆ, ನ್ಯಾಯತತ್ಪರತೆ, ಕರ್ತವ್ಯದಕ್ಷತೆಗಳ ಸತ್ಫಲರೂಪವಾಗಿ ನಮ್ಮ ದೇಶೀಯರಲ್ಲಿ ದೇಶಭಕ್ತಿ, ಭಾಷಾಭಿಮಾನಗಳಂಕುರಿಸುವಂತೆ ನಮ್ಮವರಿಗೆಲ್ಲಾ ನೈತಿಕ ಶಿಕ್ಷಣವು ಸಹಜ ಮತ್ತು ಸರ್ವಜನಸಮ್ಮತ ರೀತಿಯಲ್ಲಿ ಕೊಡಲ್ಪಡುವಂತಾದೀತೆಂಬ ನಿರೀಕ್ಷೆಗೂ ಪಾತ್ರರಾಗಿರುತ್ತಾರೆ ಪತ್ನೀಪುತ್ರ ಪರಿವಾರಸಮೇತರಾದ ಇವರು ಸಮಸ್ತ ಸುಖಸೌಭಾಗ್ಯ ಸಂಪದಗಳಿಂದ ಚಿರಕಾಲ ಪ್ರಕಾಶಿಸುತ್ತಿರುವಂತೆಯೂ, ಇವರ ಮೂಲಕ ಚಿರಕಾಲ ದೇಶಸೇವೆಯು ನಡೆಯುತ್ತ ದೇಶಿಯರ ನಿರೀಕ್ಷೆಯು ಸಫಲಹೊಂದುವಂತೆಯೂ ಭಗವಂತನು ಇವರನ್ನು ಕಾಪಾಡುತ್ತ ಬರಬೇಕೆಂದು ನಾವು ಮನ ಪೂರ್ವಕವಾಗಿ ಪ್ರಾರ್ಥಿಸುವೆವು

—ಶ್ರೀ ಚರಣಧೂಳಿ—

ಶ್ರೀ

# ಕನ್ನಡದ ರನ್ನಗನ್ನಡಿ

( ಮಣಿ ೫ )

## ಶ್ರೀಯುತ
## ರಾವ್‌ಬಹದ್ದೂರ
## ಎಮ್ ಶಾಮರಾವ್, ಎಮ್ ಏ ಅವರು

ಈ ಮಹನೀಯರು ಮೈಸೂರು ದೇಶೀಯರು. ಇವರು ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಗುಂಡ್ಲುಪೇಟೆಯಲ್ಲಿ ೧೮೬೦ ನೆ ಇಸವಿ ಆಗಷ್ಟು ೩೦ನೆಯ ತಾರೀಖಿನಲ್ಲಿ ಜನಿಸಿದರು ಇವರ ತಾತಪಾದ (ತಂದೆ) ರು 'ನಾರಾಯಣರಾಯ' ರೆಂಬುವರು ಇವರು ಸತ್ಕುಲ ಜಾತರೂ ಸದಾಚಾರಸಂಪನ್ನರೂ ಮಹಾಪಂಡಿತರೂ ಆಗಿದ್ದರು. ಇವರ ವಾಸಸ್ಥಾನವು ತೀರ್ಥಹಳ್ಳಿಯ ಸಮೀಪದಲ್ಲಿರುವ 'ಮಹಿಷಿ' ಯೆಂಬ ಗ್ರಾಮವು ಇವರ ತಾಯಿತಂದೆಗಳು ಅಷ್ಟು ಐಶ್ವರ್ಯವಂತರಲ್ಲದಿದ್ದರೂ ಸತ್ಕುಲಪ್ರಸೂತರು ನಮ್ಮ ಕಥಾನಾಯಕರಾದ ಶ್ರೀ॥ ಶಾಮರಾಯರು ತಮ್ಮ ಬಾಲ್ಯದಲ್ಲಿಯೇ ತಂದೆತಾಯಿಯರಿಬ್ಬರನ್ನೂ ಕಳೆದುಕೊಂಡು ನಾನಾವಿಧ ಕ್ಲೇಶಗಳಿಗೆ ಗುರಿಯಾದರು. ಎಂದರೆ,— ಇವರ ಮಾತೃಶ್ರೀಯವರು ಇವರ ಆರನೆಯ ವರ್ಷದಲ್ಲಿಯೂ ಪಿತೃವು ಹದಿನಾರನೆಯ ವರ್ಷದಲ್ಲಿಯೂ ದಿವಂಗತರಾದರು. ಆದರೂ ಇವರು ತಮ್ಮ ವಿದ್ಯಾವ್ಯಾಸಂಗದಲ್ಲಿ ನಿರುತ್ಸಾಹಿಗಳಾಗದೆ ಬೆಂಗಳೂರು ಸೆಂಟ್ರಲ್ ಕಾಲೇಜದಲ್ಲಿ ಕಷ್ಟಪಟ್ಟು ಓದಿ ತಮ್ಮ ಹತ್ತೊಂಬತ್ತನೆಯ ವರ್ಷದಲ್ಲಿ ಬೀ ಏ ಪರೀಕ್ಷೆಯಲ್ಲಿ ಉತ್ತೀರ್ಣರಾದರು- ಇವರ ಬುದ್ಧಿಶಕ್ತಿಯೂ ಸ್ಥಿರಸಂಕಲ್ಪವೂ ಇವರನ್ನು ಎಂ ಏ. ಪರೀಕ್ಷೆಗೆ ಓದುವಂತೆ ಪ್ರೋತ್ಸಾಹಿಸಿದುವು. ಆ ಪರೀಕ್ಷೆಯಲ್ಲಿಯೂ

ಉತ್ತೀರ್ಣರಾದರು, ಅಲ್ಲದೆ ಅರ್ಥಶಾಸ್ತ್ರದಲ್ಲಿ ಪ್ರವೀಣರಾದವರಿಗೆ ಕೊಡಬೇಕೆಂದು ಗೊತ್ತಾಗಿದ್ದ ನಾರ್ಟನ್ನರವರ ಪಾರಿತೋಷಕವೂ ಇವರಿಗೇ ಲಭ್ಯವಾಯಿತು.

ಶ್ರೀಯುತ ರಾಮರಾಯರು ೧೮೮೫ನೇ ಇಸವಿಯಲ್ಲಿ ಮೈಸೂರ ಸರ್ಕಾರದಲ್ಲಿ ಉದ್ಯೋಗಕ್ಕೆ ಸೇರಿದರು. ಮೊದಲು ಇವರು ಬ್ರಿಟಿಷ್ ಸರಕಾರದಲ್ಲಿ ಕೆಲವು ಕಾಲ ಕೆಲಸ ಮಾಡಿದರು. ಮೈಸೂರು ಸರ್ಕಾರಕ್ಕೆ ಸೇರಿದ ಬಳಿಕ ಕೆಲವು ವರ್ಷಗಳ ಕಾಲ ವಿದ್ಯಾಭ್ಯಾಸದ ಇಲಾಖೆಯಲ್ಲಿ ಕೆಲಸಮಾಡಿದರು. ಬಳಿಕ ೧೮೯೨ನೇ ಇಸವಿಯಲ್ಲಿ ಏರ್ಪಟ್ಟ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಜಯಶಾಲಿಗಳಾದರು. ೧೮೯೫ನೆಯ ಇಸವಿಯಲ್ಲಿ ಪ್ರೊಬೆಶನರಿ ಅಸಿಸ್ಟಂಟ ಕಮೀಶನರರಾಗಿ ನಿಯಮಿತರಾದರು. ಅನಂತರ ಕೆಲವು ವರ್ಷಕಾಲ ರೆವಿನ್ಯು ಮತ್ತು ಇತರ ಇಲಾಖೆಗಳಲ್ಲಿ ಬೇರೆ ಬೇರೆ ಹುದ್ದೆಗಳನ್ನು ಮಾಡಿ ೧೯೦೧ನೆಯ ಇಸವಿಯಲ್ಲಿ ಮೈಸೂರು ದಿವಾನರಾಗಿದ್ದ ಶ್ರೀ|| ಸರ್, ಪಿ. ಎನ್. ಕೃಷ್ಣಮೂರ್ತಿಗಳಿಗೆ ಅಸಿಸ್ಟೆಂಟು ಸೆಕ್ರೆಟರಿಯವರಾಗಿ ಆದರು. ಹೀಗೆ ಕೆಲವು ವರ್ಷಗಳು ಕಳೆದ ತರುವಾಯ ೧೯೦೫ನೇ ಇಸವಿಯಲ್ಲಿ "ಪರಸ್ಪರ ಸಹಾಯ ಸಂಘಗಳ ರೆಜಿಸ್ಟ್ರಾರರಾಗಿ ನಿಯಮಿತರಾದರು. ಆಗ ಇವರು ಇಂಡಿಯವನ್ನೆಲ್ಲಾ ಸಂಚರಿಸಿ ಅಲ್ಲಿಯ ನಡೆವಳಿಕೆಗಳನ್ನು ಚೆನ್ನಾಗಿ ತಿಳಿದು ನಮ್ಮ ದೇಶಕ್ಕೆ ಬಂದು ಬಹು ಉತ್ಸಾಹದಿಂದ ಪರಸ್ಪರ ಸಹಾಯಸಂಘಗಳನ್ನು ನಮ್ಮ ಸಂಸ್ಥಾನದಲ್ಲಿ ಸರ್ವತ್ರ ಸ್ಥಾಪಿಸಿದರು. ಆಗಿನ ಇವರ ಸದುದ್ಯಮದಿಂದ ಅಂಕುರಿಸಿದ ಆ ಸಂಘವು ಈಗ ಶಾಖೋಪಶಾಖೆವಾಗಿ ನಮ್ಮ ಸಂಸ್ಥಾನವನ್ನೆಲ್ಲಾ ಆವರಿಸಿಕೊಂಡಿರುವುದು ಸರ್ವಜನ ವಿದಿತವಾಗಿರುವುದು.

೧೯೦೭ನೆಯ ಇಸವಿಯ ಆರಂಭದಲ್ಲಿ ಇವರಿಗೆ ತುಮಕೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮೀಷನರ ಕೆಲಸವಾಯಿತು. ಆ ಅಧಿಕಾರದಲ್ಲಿ ಒಂದು ವರ್ಷಕಾಲವಿದ್ದರು. ಅಷ್ಟರಲ್ಲಿ ನಮ್ಮ ಈಗಿನ ದಿವಾನರಾದ ಶ್ರೀಯುತ ಸರ್. ಎಮ್. ವಿಶ್ವೇಶ್ವರಯ್ಯನವರು ಇವರನ್ನು ೧೯೦೯ರಲ್ಲಿ

ವಿದ್ಯಾಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಆಗಿರಬೇಕೆಂಬ ಶ್ರೀಮನ್ಮಹಾರಾಜರ ಆಜ್ಞೆಯನ್ನು ತಿಳುಹಿ ಬೆಂಗಳೂರಿಗೆ ಕರೆಯಿಸಿಕೊಂಡರು.

ಇವರು ಈ ಕೆಲಸಕ್ಕೆ ಸೇರಿದುದು ಮೊದಲು ವಿದ್ಯಾಭ್ಯಾಸವು ಅನೇಕ ಭಾಗಗಳಲ್ಲಿ ಅಭಿವೃದ್ಧಿಗ ಬರುತ್ತಲಿದೆ. ಇವರು ಬರುವದಕ್ಕೆ ಮುಂಚೆ ನಮ್ಮ ಮೈಸೂರು ಸರ್ಕಾರದವರು ಈ ದೊಡ್ಡ ಇಲಾಖೆಗೆ ೫—೬ ಲಕ್ಷ ರೂಪಾಯಿಗಳನ್ನು ಮಾತ್ರವೇ ಖರ್ಚುಮಾಡುತ್ತಿದ್ದರು ನಮ್ಮ ಶ್ಯಾಮರಾಯರು ಬಂದಮೇಲೆ ಇಲಾಖೆಯ ಅಭಿವೃದ್ಧಿಕ್ರಮಗಳನ್ನು ಆಗಾಗ್ಗೆ ಸರ್ಕಾರಕ್ಕೆ ಶ್ರುತಪಡಿಸಿ, ಹೆಚ್ಚು ಹಣವನ್ನು ಸ್ಯಾಂಕ್ಷನ್ ಮಾಡಿಸಿಕೊಳ್ಳುತ್ತಾ ಬಂದು ಈಗ ಸುಮಾರು ೩೨ಲಕ್ಷ ರೂಪಾಯಿಗಳಷ್ಟು ಹೆಚ್ಚು ಮಾಡಿಸಿದರು ಆದರೂ ಇವರು ಇನ್ನೂ ವಿದ್ಯಾಭಿವೃದ್ಧಿಗೆ ಸಾಕಾದಷ್ಟು ಹಣವು ಸಾಲದೆಂದೇ ಹೋರಾಡುತ್ತಿರುವರು ಇವರು ಈ ಇಲಾಖೆಗೆ ಬರುವುದಕ್ಕೆ ಮೊದಲು ಈ ನಮ್ಮ ಸಂಸ್ಥಾನದಲ್ಲಿ ಒಟ್ಟು ಸುಮಾರು ೩೦೦೦ ಪಾಠಶಾಲಗಳಿದ್ದುವು ಈಗ ಸುಮಾರು ೭೫೦೦ ಪಾಠಶಾಲೆಗಳಿವೆ ಮೊದಲು ೧೦೦ಕ್ಕೆ ೨೫ ಬಾಲಕರೂ ಮತ್ತು ೩-೪ ಬಾಲಕೆಯರೂ ವಿದ್ಯೆಯನ್ನು ಕಲಿಯುತ್ತಿದ್ದರು ಈಗ ೧೦೦ಕ್ಕೆ ೪೬ಮಂದಿ ಬಾಲಕರೂ ೧೦ ಮಂದಿ ಬಾಲಿಕೆಯರೂ ವಿದ್ಯಾಭ್ಯಾಸವನ್ನು ಮಾಡುತ್ತಿರುವರು ಅಲ್ಲದೆ ಇವರು ಈ ಪದವಿಗೆ ಬಂದುದು ಮೊದಲು ಅನೇಕ ಗ್ರಾಮಪಾಠಶಾಲಗಳು ಉನ್ನತಸ್ಥಿತಿಗೆ ಬಂದವು ಅನೇಕ ಪಾಠಶಾಲೆಗಳಿಗೆ ಒಳ್ಳೆಯ ಕಟ್ಟಡಗಳು ಏರ್ಪಟ್ಟವು. ಮತ್ತು ಇವರ ಕಾಲದಲ್ಲಿ ಅನೇಕ ಕುಶಲ ವಿದ್ಯಾಶಾಲೆಗಳೂ ನಾರ್ಮಲ್ ಸ್ಕೂಲುಗಳೂ ಕೊಲಿಜಿಯೇಟ್ ಹೈಸ್ಕೂಲುಗಳೂ ಗ್ರಾಮವಾಚನಶಾಲೆಗಳೂ ಪುಸ್ತಕ ಭಂಡಾರಗಳೂ ಉಂಟಾದುವು ಮತ್ತು ಇವೆಲ್ಲಕ್ಕೂ ಮುಖ್ಯವಾಗಿ ಮೈಸೂರು ವಿಶ್ವವಿದ್ಯಾಲಯವು ಕೂಡ ಇವರ ಕಾಲದಲ್ಲಿಯೇ ಸ್ಥಾಪಿತವಾದುದು ಮಾತ್ರವೇ ಅಲ್ಲದೆ ಇವೆಲ್ಲವೂ ಅಭಿವೃದ್ಧಿ ಸ್ಥಿತಿಯಲ್ಲಿಯೂ ಇವೆ

ಸುಪ್ರಸಿದ್ಧ ದೇಶಭಕ್ತರೆನ್ನಿಸಿದ ಗೋಪಾಲ ಕೃಷ್ಣ ಗೋಖಲೆ

ಯವರು ಅನೇಕ ವರ್ಷಗಳ ಕಾಲ ಕಷ್ಟಪಟ್ಟು ಜಾರಿಗೆ ತರಬೇಕೆಂದಿದ್ದ 'ನಿರ್ಬಂಧ ಪ್ರಾಥಮಿಕ ಶಿಕ್ಷಣವು' ಇವರ ಉದ್ಯಮದಿಂದ ಇಲ್ಲಿ ಸ್ವಲ್ಪಕಾಲದಲ್ಲಿಯೇ ಸರ್ವಜನ ಸಮ್ಮತಿಯಿಂದ ಜಾರಿಗೆ ತರಲ್ಪಟ್ಟಿತು.

ಇವರು ಸ್ತ್ರೀವಿದ್ಯಾಭ್ಯಾಸಕ್ಕೆ ಬೇಕಾದಷ್ಟು ಅನುಕೂಲ್ಯಗಳನ್ನು ಕಲ್ಪಿಸಿರುವುದಲ್ಲದೆ ಬಾಲಿಕೆಯರಿಗೆ ವಿದ್ಯೆಯನ್ನು ಕಲಿಯಿಸತಕ್ಕ ಉಪಾಧ್ಯಾಯಿನಿಯರ ತರಬೇತನ್ನೂ (?) ಮಾಡಲು ಟ್ರೇನಿಂಗಕಾಲೇಜುಗಳನ್ನು ಏರ್ಪಡಿಸಿರುವರು *

ಸರ್ಕಾರದಿಂದ ಕೊಡತಕ್ಕ ಸಂಬಳವು ಸಾಲದೆ ಅಹನ್ಯಹನಿ ಕಾಲಕ್ಷೇಪ ಮಾಡುವುದಕ್ಕೂ ಕಷ್ಟಪಡುತ್ತಿದ್ದ ಅನೇಕ ಪಾಠಶಾಲೆಯ ಉಪಾಧ್ಯಾಯರಿಗೂ ಮತ್ತು ಇಲಾಖೆಯಲ್ಲಿರುವ ಬಡನೌಕರರಿಗೂ ಬೇಕಾದಷ್ಟು ಸಹಾಯವನ್ನೂ ಬಡತಿಯನ್ನೂ ಕೊಟ್ಟಿರುವರು

ಮತ್ತು ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ೧೫-೨೦ ವರ್ಷಗಳ ಕಾಲ ವ್ಯಾಸಂಗಮಾಡಿ ಪಂಡಿತರೆಂದು ಪ್ರಸಿದ್ಧಿಪಡೆದಿದ್ದರೂ ಜೀವನಕ್ಕಿಲ್ಲದೆ ತಾಪತ್ರಯಪಡುತ್ತಿದ್ದವರಿಗೆಲ್ಲಾ ವೇತನವನ್ನು ಬಹುಮಟ್ಟಿಗೆ ಹೆಚ್ಚಿಸಿ ಅವರ ದುರ್ದಶೆಯನ್ನು ದೂರಮಾಡಿದರು

ಇವರಿಗೆ ೧೯೧೪ನೆಯ ಇಸವಿಯ ಆದಿಭಾಗದಲ್ಲಿ ಬ್ರಿಟಿಷ್‌ಸಾರ್ವಭೌಮರವರು "ರಾವಬಹದ್ದೂರ" ಎಂಬ ಬಿರುದನ್ನೂ ದಯಪಾಲಿಸಿದರು

---

* ಬಾಲಿಕೆಯರ ವಿದ್ಯಾಭ್ಯಾಸಕ್ಕಾಗಿ ಟ್ರೆನಿಂಗ್ ಕಾಲೇಜಿನಿಂದ ಪ್ರಶಸ್ತಿ ಪತ್ರಿಕೆಯನ್ನು ಪಡೆದು ಬಂದ ಮಾತ್ರದಿಂದಲೇ ಆ ಉಪಾಧ್ಯಾಯಿನಿಯರ ಶಿಕ್ಷಣ ಕಾರ್ಯವ ಬಾಲಿಕಾ ಜನಕ್ಕೆ ಉತ್ತರೋತ್ತರಾಭಿವೃದ್ಧಿಯನ್ನುಂಟು ಮಾಡುವಂತಾದೀತೆಂದು ಸದ್ಯಸ್ಥಿತಿಯಲ್ಲಿ ನಂಬುವಂತಿಲ್ಲ ಉಪಾಧ್ಯಾಯಿನಿಯರ ಧ್ಯೇಯವು ಆರ್ಯ ಧರ್ಮ ಪ್ರತಿಪಾದನದಲ್ಲಿದ್ದು ಅವರು ಶೀಲವನ್ನು ಚನ್ನಾಗಿ ಕಾಪಾಡಿಕೊಂಡು ತಮ್ಮ ನಡೆಯನ್ನ ಮಾದರಿಯಾಗಿಟ್ಟು ಬಾಲಿಕೆಯರಿಗೆ ಹಿತಕರವಾಗುವಂತೆ ನಯ-ನೀತಿ-ರೀತಿಗಳಿಂದ ಕೊಡುವ ಶಿಕ್ಷಣವೇ ಶಿಕ್ಷಣವು ಹಾಗಾಗುವಂತ ಅವರ ವಿಷಯದಲ್ಲಿ ನಮ್ಮ ಧರ್ಮಭ್ರಾತೃಗಳು ಬೇಕಾದ ಏರ್ಪಾಡು ಮಾಡುವವರಾದಾರೆಂದು ನಿರೀಕ್ಷಿಸುವೆವು. ಸಂ. ನಂ.

ಶ್ರೀ|| ಶಾಮರಾಯರು ನಮ್ಮ ಮೈಸೂರು ಯೂನಿವ್ಹರ್ಸಿಟಿಯು ಸ್ಥಾಪಿತವಾಗುವದಕ್ಕೆ ಮೊದಲು ನಿಯಮಿತವಾಗಿದ್ದ 'ಕಾರ್ಯನಿರ್ವಾಹಕ ಸಂಘ' ಕ್ಕೆ ಸಾಮಾಜಿಕರಾಗಿದ್ದರು ಯುನಿವರ್ಸಿಟಿಯಾದ ಬಳಿಕ, ಎಂದರೆ ಪ್ರಕೃತ ಯೂನಿವರ್ಸಿಟಿ ಕೌನಸಿಲ್ ಮೆಂಬರರಾಗಿರುವರು ಮತ್ತು ಕೆಲವು ವರ್ಷಗಳಿಂದ ಇವರು ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯ ಕಾರ್ಯನಿರ್ವಾಹ ಸಂಘಕ್ಕೆ ಸೆಕ್ರೆಟರಿಯವರಾಗಿಯೂ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರರಾಗಿಯೂ ಎಕನಾಮಿಕ್ ಕಾನ್ಫರೆನ್ಸ್ ಮೆಂಬರರಾಗಿಯೂ ಟೆಕ್ಸ್ಟಬುಕ್ ಕಮೀಟಿ (Text book Committee) ಪ್ರಸಿಡೆಂಟರಾಗಿಯೂ ಲೋಕಲ್ ಎಗ್ಝಾಮಿನೇಷನ್ ಬೋರ್ಡ ಚೇರಮನ್ನರಾಗಿಯೂ ಇರುವರು ಇವರು ಇಷ್ಟು ಮಹೋನ್ನತ ಪದವಿಯಲ್ಲಿದ್ದರೂ ಅತಿ ಸುಲಭರಾಗಿರುವರು. ಮತ್ತು ವಿದ್ಯಾವಂತರಲ್ಲಿ ಅಭಿಮಾನಿಗಳಾಗಿರುವರು.

ಶ್ರೀಯುತ ಶಾಮರಾಯರು ಪೂರ್ಣ ವಿದ್ಯಾವಂತರು ನಿಸ್ಪೃಹರು ಮತ್ತು ನಿಷ್ಪಕ್ಷಪಾತಿಗಳು. ಇವರು ಮೈಸೂರು ದೇಶದಲ್ಲಿ ನಮ್ಮ ಹಿಂದುಗಳು ಆಳಿದ ರಾಜ್ಯಭಾರದವಿಷಯದಲ್ಲಿ ಒಂದು ಪುಸ್ತಕವನ್ನೂ ಮತ್ತು ಮೈಸೂರ ದೇಶದ ಚರಿತ್ರೆಯನ್ನೂ ಬರೆದಿರುತ್ತಾರೆ

ಇವರು ವಿದ್ಯಾಖಾತೆಗೆ ಬಂದ ೬ ವರ್ಷಗಳೊಳಗೆ ಈ ಇಲಾಖೆಯು ಮೂರರಷ್ಟು ಅಭಿವೃದ್ಧಿಗೆ ಬಂದಿರುವುದೆಂದು ಈ ಲೇಖನವನ್ನು ಓದುವವರಿಗೆ ನಾವು ಮತ್ತೆ ಹೊಸದಾಗಿ ಹೇಳಬೇಕಾಗಿಲ್ಲ ಈಗ ಬರುತಬರುತ್ತ ದಡಮೀರಿ ಹರಿಯುತ್ತಿರುವ ನವನಾಗರಿಕತೆಯೆಂಬ ಹುಚ್ಚು ಹೊಳೆಯ ಸೆಳೆತಕ್ಕೆ ಸಿಕ್ಕಿ ಪರವಶರಾಗಿರುವ ನಮ್ಮ ದೇಶದ ಬಾಲಕ-ಬಾಲಿಕೆಯರನ್ನು ಉದ್ಧರಿಸಬೇಕಾದರೆ ಸದ್ವಂಶ ಸಂಭೂತರೂ ಜ್ಞಾನವಯೋವೃದ್ಧರೂ, ಸೌಶೀಲ್ಯ ಧೈರ್ಯ-ಸ್ಥೈರ್ಯಾದಿ ಸದ್ಗುಣ ಸಂಪನ್ನರೂ ಸನ್ಮಾರ್ಗಗಾಮಿಗಳೂ ಸ್ವದೇಶಿಯರೂ ಸ್ವದೇಶವತ್ಸಲರೂ ಸ್ವಾಮಿಭಕ್ತರೂ ಶ್ರದ್ಧಾಳುಗಳೂ ನಿರಲಸರೂ ದಯಾದಾಕ್ಷಿಣ್ಯವುಳ್ಳವರೂ ಆಗಿರತಕ್ಕವರೇ ವಿದ್ಯಾ ಇಲಾಖೆಯಲ್ಲಿರಬೇಕು. ಇಲ್ಲವಾ

ದರೆ ಬಾಲ-ಬಾಲೆಯರು ನಿರಂಕುಶ ಪ್ರವರ್ತಕರಾಗಿ ಅನೇಕ ಕಷ್ಟ ನಷ್ಟಗಳಿಗೆ ಗುರಿಯಾಗಬೇಕಾಗುವುದು. ಆದುದರಿಂದ ದೇಶದ ಸಾಂಪತ್ತಿಕ ಸ್ಥಿತಿಗೂ ಜನಾಂಗದ ಕ್ಷೇಮಾಭ್ಯುದಯಗಳಿಗೂ ಹಾನಿಯೆಂಬುದನ್ನಿಲ್ಲಿ ನಾವೇಕೆ ಒತ್ತಿ ಹೇಳಬೇಕು? ಶಿಕ್ಷಣ ಪ್ರಸಾರಕ ಮಂಡಲಿಯವರೇ ಪರ್ಯಾಲೋಚಿಸಿ ಬಾಲ-ಬಾಲೆಯರ ಶೀಲಸೌಭಾಗ್ಯಗಳನ್ನು ಪಾಲಿಸುವ ಬಾಲ್ಯಸುಶಿಕ್ಷಣದಲ್ಲಿ ದಕ್ಷರಾದವರನ್ನೇ-ಎಂದರೆ-ಅವ್ಯವಸ್ಥಿತ ಚಿತ್ತರಾದ ತರುಣರ ಲೋಕಾನುಭವ ಜ್ಞಾನಶೂನ್ಯತೆಯ ಆಗ್ರಹಾಟೋಪಗಳಿಗಾಗಲೀ, ಸ್ವರೂಪಜ್ಞಾನವಿಲ್ಲದ, ಪರಾನುಕರಣವೆಂಬ ಕೇವಲ ಆಡಂಬರದಲ್ಲಿಯೇ ಕಾಲಕಳೆಯುತ್ತಿರುವ ಮಹಿಳೆಯರ ಹುರುಳಿಲ್ಲದ ಬಾಲಪಾಠಗಳ ಬೋಧನೆಗಾಗಲೀ ಒಪ್ಪಿಸದೆ ಪರಿಪಕ್ವ ಹೃದಯವುಳ್ಳ ಸ್ಥಿರಚಿತ್ತರ ವಿಚಾರಣೆಗೆ ಒಪ್ಪಿಸುವಂತೆ ಏರ್ಪಡಿಸುವರೆಂಬುದರಲ್ಲಿ ಸಂದೇಹವಾದರೂ ನಮಗೇಕೆ?

ಆದುದರಿಂದ ಸರ್ವಜ್ಞತಾಪದವಿಯಲ್ಲಿ ಅಧಿಷ್ಠಾತರಾಗಿಯೂ ಪ್ರಜಾರಂಜನಶೀಲರಾಗಿಯೂ ಪ್ರಕಾಶಿಸುತ್ತಿರುವ ನಮ್ಮ ಶ್ರೀಮನ್ಮಹಾರಾಜರವರು ನಮ್ಮ ಧರ್ಮಭ್ರಾತೃಗಳಾದ ಶ್ರೀಯುತ ಶಾಮರಾಯರವರ ಸಮಸ್ತ ಕುಶಲತೆಯನ್ನೂ ವಿದ್ಯಾಇಲಾಖೆಗೆ ಉಪಯೋಗಿಸುವಂತೆ ಅನುಗ್ರಹಿಸಿ ಕರ್ಣಾಟಕದಲ್ಲೆಲ್ಲಾ ನಿಷ್ಕಲಂಕವಾದ ಸತ್ಯ-ಜ್ಞಾನಗಳ ಜಯಧ್ವಜವನ್ನು ಎತ್ತಿ ನಿಲಿಸಿ, ಸತ್ಕೀರ್ತಿಯಿಂದ ರಾರಾಜಿಸಬೇಕೆಂದು ನಾವು ಪ್ರಾರ್ಥಿಸುತ್ತಿರುವೆವು

ದಯಾಮಯನಾದ ಭಗವಂತನು, ಬಹು ಬಲವತ್ತರ ಉತ್ತರವಾದಿತ್ವವನ್ನೊಳಕೊಂಡಿರುವ ವಿದ್ಯಾಇಲಾಖೆಯ ಅಧ್ಯಕ್ಷಸ್ಥಾನದಲ್ಲಿರುವ ಈ ನಮ್ಮ ಸನ್ಮಾನ್ಯ ಭ್ರಾತೃ ಶ್ರೀಯುತ ರಾವ್‌ಬಹದ್ದೂರ್ ಎಂ. ಶಾಮರಾಯರಿಗೆ ದೀರ್ಘಾಯುರಾರೋಗ್ಯ ಭಾಗ್ಯಂಗಳನ್ನಿತ್ತು ಇವರಿಂದ ಚಿರಕಾಲ ದೇಶಸೇವೆಯನ್ನು ನಡೆಯಿಸುತ್ತ ಬರಬೇಕೆಂದು ಅನವರತವೂ ಭಗವಂತನಲ್ಲಿ ಬೇಡುತ್ತಿರುವೆವು

ಇತಿ—ಚರಣಧೂಳಿ—

ಶ್ರೀ

# ಮಹಿಳಾ ಸೇವಾಸಮಾಜ.

( ಬೆಂಗಳೂರ )

ಬೆಂಗಳೂರು ಸಿಟಿ ಮಹಿಳಾಸೇವಾ ಸಮಾಜದ ಲೇಡಿ ಮೆಂಬರುಗಳೂ ಅಭಿಮಾನಿಗಳೂ ಇದೇ ತಿಂಗಳು (ಜೂಲೈ. ೭ನೆಯ ತಾ|| ಶನಿವಾರ ಮಧ್ಯಾಹ್ನ ಮೂರುವರೆ ಗಂಟೆಗೆ ಮೀಟಿಂಗನ್ನು ನಡೆಯಿಸಿ ದಿವಂಗತರಾದ ಮ|| ರಾ|| ದಾದಾಭಾಯಿ ನವರೋಜಿಯವರ ಮರಣದಿಂದ ತಮಗುಂಟಾದ ವಿಶೇಷ ವ್ಯಸನವನ್ನು ಸೂಚಿಸಿ, ಅವರ ಕುಟುಂಬಕ್ಕೆ ಸೇರಿದವರ ವ್ಯಸನದಲ್ಲಿ ತಾವೂ ಭಾಗಿಗಳಾಗಿರುವುದನ್ನು ತಂತಿ ಸಮಾಚಾರದ ಮೂಲಕ ಬೊಂಬಾಯಿಗೆ ತಿಳಿಸಿದರು ಆಗ ಸಮಾಜದ ಸೆಕ್ರೆಟರಿಯವರು ಮ|| ರಾ|| ದಾದಾಭಾಯಿ ನವರೋಜಿಯವರ ಜೀವನ ಚರಿತ್ರೆಯ ವಿಚಾರವಾಗಿ ಈ ಕೆಳಗೆ ಕಂಡಂತೆ ಉಪನ್ಯಾಸವನ್ನು ಓದಿದರು.

ಪ್ರಿಯ ಸೋದರಿಯರೇ!

ಈ ದಿನ ನಾವು ಇಲ್ಲಿ ಸೇರಿದಿರುವ ಉದ್ದೇಶವು ಸಕಲರಿಗೂ ತಿಳಿದೇ ಇದೆ ದಿವಂಗತರಾದ ಮಹನೀಯರಾದ ಮ| ರಾ| ದಾದಾಭಾಯಿ ನವರೋಜಿಯವರ ಜೀವನ ಚರಿತ್ರೆಯನ್ನು ಅನೇಕ ಪಂಡಿತರು ಅನೇಕ ಭಾಷೆಗಳಲ್ಲಿ ಬರೆದೂ ಉಪನ್ಯಸಿಸಿಯೂ ಇದ್ದಾರೆ ಅಂತಹ ಮಹನೀಯರ ಸದ್ಗುಣಗಳನ್ನು ಸಂಪೂರ್ಣವಾಗಿ ವರ್ಣಿಸಲು ಯಾರಿಗೂ ಸಾಧ್ಯವಲ್ಲವೆಂದೇ ನನ್ನ ಅಭಿಪ್ರಾಯ ಆದರೂ ನನಗೆ ತೋರಿದ ಮಟ್ಟಿಗೆ ಕೆಲವು ಮಾತುಗಳನ್ನು ನಿಮ್ಮ ಅವಗಾಹನೆ ಬಗ್ಗೆ ಇಲ್ಲಿ ತಿಳಿಸುತ್ತೇನೆ

ಮ|| ರಾ|| ದಾದಾಭಾಯಿ ನವರೋಜಿಯವರು ೧೮೨೫ ನೆಯ ಸೆಪ್ಟಂಬರ್ ೪ನೆಯ ತಾ|| ನಲ್ಲಿ ಕೇವಲ ಬಡವರಾದ ಆಚಾರ್ಯಪುರುಷರ ಸಂತತಿಯಲ್ಲಿ ಜನಿಸಿದರು ಇವರಿಗೆ ೪ವರ್ಷ ವಯಸ್ಸಿನಲ್ಲಿ

ಯೇ ಇವರ ತಂದೆಯವರು ಕಾಲಾಧೀನರಾದುದರಿಂದ ಇವರ ಪೋಷಣೆಯ ಭಾರವು ಇವರ ತಾಯಿಯವರ ಮೇಲೆಯೇ ಬಿತ್ತು. ಅವರು ಇಷ್ಟು ಪ್ರಸಿದ್ಧಿಗೆ ಬರಲು ಅವರ ತಾಯಿಯವರು ಕೊಟ್ಟ ಉತ್ತಮವಾದ ಶಿಕ್ಷಣವೇ ಕಾರಣವೆಂದು ಅವರೇ ಹೇಳಿದ್ದಾರೆ ಇವರು ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಪ್ರತಿ ತರಗತಿಯಲ್ಲಿಯೂ ಬಹು ಒಳ್ಳೆಯ ಹೆಸರಿಂದ ಜಯಶಾಲಿಗಳಾಗುತ್ತಾ ಬಂದರು ೨೦ನೇ ವಯಸ್ಸಿನಲ್ಲಿ ಇವರಿಗೆ ಬೇಕಾದಷ್ಟು ಉಪಯುಕ್ತವಾದ ಮತ್ತು ಶ್ರೇಷ್ಠವಾದ ವಿದ್ಯಾಭ್ಯಾಸವು ಮುಗಿದಿತ್ತು ಗಣಿತ ಶಾಸ್ತ್ರದಲ್ಲಿ ಇವರ ಉತ್ತಮ ಪಾಂಡಿತ್ಯಕ್ಕಾಗಿ ಇವರಿಗೆ ಒಂದು ಬಂಗಾರದ ಮೆಡಲೂ ಬಂದಿತು ಇತರ ವಿಷಯಗಳಲ್ಲಿಯೂ ಇವರಿಗೆ ಅಸಾಧಾರಣವಾದ ಪಾಂಡಿತ್ಯವಿತ್ತು.

ತಾವು ವಿದ್ಯಾಭ್ಯಾಸವನ್ನು ಮಾಡಿದ ಎಲ್ಫಿನ್‌ಸ್ಟನ್ ಸ್ಕೂಲಿನಲ್ಲಿಯೇ ಮೊಟ್ಟಮೊದಲು ಇವರು ಹೆಡ್ ಅಸಿಸ್ಟೆಂಟು ಮಾಸ್ಟರಾಗಿ ನಿಯಮಿಸಲ್ಪಟ್ಟು ತಮ್ಮ ಜೀವಮಾನವನ್ನು ಪ್ರಾರಂಭಿಸಿದರು. ಸ್ವಲ್ಪ ಕಾಲದಲ್ಲಿಯೇ ಗಣಿತಶಾಸ್ತ್ರದಲ್ಲಿ ಪ್ರೊಫೇಸರರಾಗಿದ್ದ ಒಬ್ಬ ಯುರೋಪಿಯನ್ ವಿದ್ವಾಂಸರು ಗತಿಸಿದಾಗ ಅವರ ಸ್ಥಾನಕ್ಕೆ ನಿಯಮಿಸಲ್ಪಟ್ಟರು ಚಿಕ್ಕ ವಯಸ್ಸಿನಲ್ಲಿಯೇ ಇವರು ಅನೇಕ ಉಪಯೋಗಕರವಾದ ಸಂಘಗಳನ್ನು ಸ್ಥಾಪಿಸಿ, ಎಲ್ಲಾ ತರಹೆಯ ಸಂಘ ಪರಿಷ್ಕರಣ, ವಿದ್ಯಾಭ್ಯಾಸ, ಮತನೀತಿ, ಮತ್ತು ರಾಜಕೀಯ ವಿಚಾರಗಳಲ್ಲಿ ಉಪನ್ಯಾಸಗಳನ್ನು ಮಾಡಿ ಪ್ರಾಮುಖ್ಯತೆಯನ್ನು ಪಡೆದು ಅನೇಕ ಲೋಕಸೇವಾಕಾರ್ಯಗಳನ್ನು ಕೈಕೊಂಡರು. ಆ ಕಾಲದಲ್ಲಿಯೇ ಗುಜರಾತಿ ಭಾಷೆಯಲ್ಲಿ ಒಂದು ವಾರಪತ್ರಿಕೆಯನ್ನು ಏರ್ಪಡಿಸಿ ಬಹಳ ಚಾಕಚಕ್ಯತೆಯಿಂದ ನಡೆಯಿಸಿದರು " ಜನಗಳಿಂದಲೇ ನನಗೆ ವಿದ್ಯಾಭ್ಯಾಸವುಂಟಾದುದರಿಂದ ನನ್ನ ಜೀವಮಾನವನ್ನೆಲ್ಲಾ ಜನಗಳ ಕೈಂಕರ್ಯಕ್ಕಾಗಿಯೂ ಅವರ ಏಳಿಗೆಗಾಗಿಯೂ ಕಳೆದು ಸಾರ್ಥಕಪಡಿಸಿಕೊಳ್ಳಬೇಕು. " ಎಂದು ಅವರು ಹೇಳಿದ್ದಾರೆ.

ಮೆಸರ್ಸ್ ಕಾಮ ಕಂಪೆನಿಯವರು ತಮ್ಮ ವ್ಯಾಪಾರದಲ್ಲಿ ಇವರನ್ನು ಭಾಗಸ್ಥರನ್ನಾಗಿ ಸೇರಿಸಿಕೊಂಡು ತಮ್ಮ ಕಡೆಯ ಏಜಂಟರನ್ನಾಗಿ ಲಂಡನ್ ಬ್ರಾಂಚ್ ಕಂಪನಿಗೆ ಕಳುಹಿದುದರಿಂದ ಇವರು ತಮ್ಮ ೩೦ನೆಯ ವರ್ಷದಲ್ಲಿ ಲಂಡನ್ ನಗರಕ್ಕೆ ಪ್ರಯಾಣ ಮಾಡಿದರು. ಅಲ್ಲಿದ್ದಾಗ ಕೇವಲ ವ್ಯಾಪಾರದಲ್ಲಿಯೇ ಮಗ್ನರಾಗಿರದೆ ಹಿಂದುಸ್ಥಾನದ ದುರವಸ್ಥೆಯು ವಿಚಾರವಾಗಿ, ಅಲ್ಲಿಯ ಜನಗಳಿಗೆ ತಿಳುವಳಿಕೆಯನ್ನು ಉಂಟುಮಾಡುವದಕ್ಕಾಗಿ ಕೆಲವು ಸಮಾಜಗಳನ್ನು ಏರ್ಪಾಡು ಮಾಡಿ ನಮ್ಮ ದೇಶೀಯರ ಅಭಿವೃದ್ಧಿಯಲ್ಲಿಯೇ ನಿರತರಾಗಿದ್ದರು ಆ ಕಾಲದಲ್ಲಿ ಲಂಡನ್ ನಗರದ ಸಕಲ ಕಲಾಶಾಲೆ (University) ಯ ಕಾಲೇಜಿನಲ್ಲಿ ಗುಜರಾತಿ ಭಾಷೆಯ ಪ್ರೊಫೆಸರರಾಗಿ ನಿಯಮಿಸಲ್ಪಟ್ಟರು

ಏಷ್ಯಾಟಿಕ್ ಮತ್ತು ಹಿಂದೂ ದೇಶೀಯರು ಕೀಳು ತರಗತಿಯ ಜನಗಳೆಂದು ಯುರೋಪಿಯನರಿಗಿದ್ದ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸುವುದಕ್ಕಾಗಿ ವರ್ತಮಾನಪತ್ರಿಕೆಗಳಲ್ಲಿ ಬರೆಯುವದರಿಂದಲೂ ಉಪನ್ಯಾಸಗಳನ್ನು ಹೇಳುವುದರಿಂದಲೂ ಬಹಳ ಮುತುವರ್ಜಿ ವಹಿಸಿ ಕೆಲಸಮಾಡಿದರು ಅವರ ಲಂಡನ್ ಬ್ರಾಂಚಿನ ವ್ಯಾಪಾರವು ಏಳಿಗೆಯಾಗಲಿಲ್ಲವಾದುದರಿಂದ ಹಿಂದುಸ್ಥಾನಕ್ಕೆ ೧೮೬೯ರಲ್ಲಿ ಅವರು ವಾಪಸು ಬರಬೇಕಾಗಿ ಬಂತು ಬೊಂಬಾಯಿಗೆ ಇವರು ಬಂದಾಗ ಇವರು ಸೀಮೆಯಲ್ಲಿ ಮಾಡಿದ ಘನವಾದ ಲೋಕಸೇವೆಗಾಗಿ ಸರ್ ಪಿ ಎಮ್ ಮೆಹತಾ ಮುಂತಾದ ಅನೇಕ ಮಂದಿ ದೊಡ್ಡ ಮನುಷ್ಯರು ಇವರಿಗೆ ಸ್ವಾಗತವನ್ನು ಬಯಿಸಿ ಅಡ್ರೆಸ್ ಒಪ್ಪಿಸಿ ೩೦,೦೦೦ ರೂಪಾಯಿಗಳ ಥೈಲಿಯನ್ನು ಬಹುಮಾನವಾಗಿ ಕೊಟ್ಟರು. ಆದರೆ ಈ ಮಹನೀಯರು ಆ ಹಣದಲ್ಲಿ ತಾವು ಒಂದು ಕಾಸನ್ನಾದರೂ ಸ್ವಂತ ಖರ್ಚಿಗೆ ತೆಗೆದುಕೊಳ್ಳದೆ ಎಲ್ಲವನ್ನೂ ಪ್ರಜಾಸೌಕರ್ಯಗಳಿಗಾಗಿಯೇ ವೆಚ್ಚ ಮಾಡಿದರು.

ಸ್ವಲ್ಪ ಕಾಲದಲ್ಲಿಯೇ ಪುನ ವಿಲಾಯಿತಿಗೆ ಹೋಗಿ ಹಿಂದೂ ದೇಶದ ಅತ್ಯಂತ ದರಿದ್ರಾವಸ್ಥೆಯನ್ನು ಸೊಟ್ಟಪೊದಲು ಅಲ್ಲಿನ ಜನಗಳ ಅವಗಾಹನೆಗೆ ತಂದವರೇ ಇವರು! ಬ್ರಿಟಿಷ್ ಇಂಡಿಯಾದೇಶದಲ್ಲಿ ತಲೆ ಒಂದಕ್ಕೆ ಸರಾಸರಿ ವಾರ್ಷಿಕ ಆದಾಯ ೨೦ ರೂಪಾಯಿಯೆಂತಲೂ ಇದರಲ್ಲಿ ಸರಾಸರಿ ತಲೆಗೆ ೩ ರೂಪಾಯಿನಂತೆ ಕಂದಾಯ, ಸುಂಕ ಮುಂತಾದುದನ್ನು ಕೊಡಬೇಕೆಂತಲೂ ಈ ಮೊದಲಾದ ಸಂಗತಿಗಳನ್ನು ಸಪ್ರಮಾಣವಾಗಿ ಸ್ಥಾಪಿಸಿದರು. ಆಂಗ್ಲೋ ಇಂಡಿಯನ್ ಪಕ್ಷದವರೂ ವೃತ್ತಪತ್ರಿಕೆಗಳವರೂ ಈ ಸಂಗತಿಗಳನ್ನು ಸಹ ಒಪ್ಪದೆ ಪ್ರತಿಭಟಿಸಿದರು. ಆದರೆ ಸ್ವಲ್ಪ ದಿನಗಳನಂತರ ಘನಪಂಡಿತರೆಲ್ಲರೂ ಇವರು ಹೇಳಿದ ಈ ಸಂಗತಿಗಳೆಲ್ಲವೂ ಸತ್ಯವಾದುವೆಂದು ಅನುಮೋದಿಸಿದರು.

೧೮೭೪ ರಲ್ಲಿ ಹಿಂದುಸ್ಥಾನಕ್ಕೆ ವಾಪಸು ಬಂದು ಬರೋಡಾ ದೇಶದ ದಿವಾನ್ ಪದವಿಗೆ ನೇಮಕವಾದರು. ಆಗ ಅಲ್ಲಿ ದೊರೆಗಳಾಗಿದ್ದ ಗಾಯಕವಾಡ್ ಮಲ್ಹಾರ್ ರಾವ್‌ರವರ ಅನಾಯಕಸ್ಥಿತಿಯಲ್ಲಿದ್ದ ಮತ್ತು ವಿಚಕ್ಷಣೆಯಿಲ್ಲದ ಪ್ರಭುತ್ವವನ್ನು ನೋಡಿ ದೇಶವನ್ನು ಅಭಿವೃದ್ಧಿಗೆ ತರುವದಕ್ಕಾಗಿ ರಾಜಕೀಯ ವಿಚಾರಗಳಲ್ಲಿ ಅನೇಕ ಪರಿಷ್ಕರಣಗಳನ್ನು ಏರ್ಪಾಡು ಮಾಡಿದರು. ಅಲ್ಲಿನ ಕೆಲವು ದೊಡ್ಡ ಮನುಷ್ಯರೂ ರೆಸಿಡೆಂಟರೂ ಸಹ ಇದನ್ನು ಸಹಿಸಲಾರದೆ ಇವರನ್ನು ಬಹಳವಾಗಿ ನಿಂದಿಸಿದರು. ಇವರು ಹಾಕಿದ ಅಸ್ತಿಭಾರದಿಂದಲೇ ಇವರ ನಂತರ ದಿವಾನ್ ಪದವಿಗೆ ಬಂದ ರಾಜಾ ಸರ್ ಟಿ ಮಾಧವರಾಯರವರು ರಾಜಕೀಯ ಕಾರ್ಯಗಳನ್ನು ನಡಿಸಿ ಬಹಳ ಹೆಸರುವಾಸಿಯನ್ನು ಪಡೆದರು. ಅನಂತರ ಬೊಂಬಾಯಿ ಕಾರ್ಪೊರೇಷನ್‌ನಲ್ಲಿ ಬಹಳ ಹೆಸರುವಾಸಿಯನ್ನು ಪಡೆದರು.

ಲಾರ್ಡ್ ರಿಪನ್ ದೊರೆಗಳವರು ವೈಸರಾಯ ಪಟ್ಟಕ್ಕೆ ಬಂದು ಹಿಂದೂ ದೇಶಿಯರ ನಂಬಿಕೆಗೆ ಪಾತ್ರರಾಗುವಂತೆ ಪ್ರಭುತ್ವಮಾಡಿದಾಗ ಇವರು ಸರ್ಕಾರೀ ಕೆಲಸವನ್ನು ಕೈಕೊಂಡರು. ೧೮೮೫ ರಲ್ಲಿ

ಬೊಂಬಾಯಿ ಲೆಜಿಸ್ಲೇಟಿವ್ಹ ಕೌನ್ಸಿಲಿನಲ್ಲಿ ಮೆಂಬರರಾಗಿ ನಿಯಮಿಸಲ್ಪಟ್ಟರು. ಅದೇ ವರುಷ ಹಿಂದುಸ್ಥಾನದ ನ್ಯಾಷನಲ್ಲ ಕಾಂಗ್ರೆಷ್ ಸಭೆಯ ಮೊದಲನೆಯ ಕೂಟವು ಮೆ॥ ಡಬ್ಲ್ಯು- ಸಿ ಬಾನರ್ಜಿಯವರ ಅಧ್ಯಕ್ಷತೆಯಲ್ಲಿ ಬೊಂಬಾಯಿ ಪಟ್ಟಣದಲ್ಲಿ ನಡೆದಾಗ ಇವರು ಅತ್ಯಂತ ಜವಾಬ್ದಾರಿಯ ಕೆಲಸಗಳನ್ನು ನಿರ್ವಹಿಸಿದರು.

ಇಂಗ್ಲೆಂಡಿನಲ್ಲಿ ಹೌಸ್ ಆಫ್ ಕಾಮನ್ಸ್ ( House of Commons ) ಎಂಬ ಪಾರ್ಲಿಮೆಂಟ ಕೂಟದಲ್ಲಿ ಮೆಂಬರರಾಗಬೇಕೆಂಬ ಕುತೂಹಲವು ಬಹಳ ದಿನದಿಂದಲೂ ಇವರಿಗಿತ್ತು. ೧೮೮೬ರಲ್ಲಿ ಲಿಬರಲ್ ಪಕ್ಷದಲ್ಲಿ ಹಾಲ್‌ಬೋರ್ನ್ (Holborn) ಎಂಬ ಸ್ಥಳಕ್ಕೆ ಉಮೇದುವಾರರಾದರು. ಅನೇಕ ವೋಟುಗಳು ಇವರ ಪಕ್ಷವಾಗಿ ದೊರೆದಾಗ್ಯೂ ಅದರಲ್ಲಿ ಇವರಿಗೆ ಚುನಾವಣೆಯಾಗಲಿಲ್ಲ.

ಮುಖ್ಯ ಮಂತ್ರಿ ( ಪ್ರೈಮ್ ಮಿನಿಸ್ಟರ್ ) ಗಳಾದ ಲಾರ್ಡ ಸ್ಯಾಲಿಸ್ಬರಿ ಎಂಬುವರು ಇವರನ್ನು 'ಕಪ್ಪು ಜನ' ಗಳೆಂದು ನಿರಾಕರಿಸಿದಾಗ ಇವರು ಪ್ರತಿಭಟಿಸಿ ಮೀಟಿಂಗುಗಳನ್ನು ನಡೆಸಿದುದರಿಂದ ಕೊನೆಗೆ ಮಂತ್ರಿಗಳು ಇವರ ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕಾಯಿತು. ೧೮೯೨ರಲ್ಲಿ ಸೆಂಟ್ರಲ್ ಫಿನ್ಸ್‌ಬರಿ ಎಂಬ ಸ್ಥಳಕ್ಕೆ ಹೌಸ್ ಆಫ್ ಕಾಮನ್ಸ್ ಪಾರ್ಲಿಮಂಟ ಕೂಟದಲ್ಲಿ ಮೆಂಬರರಾಗಿ ಚುನಾಯಿಸಲ್ಪಟ್ಟರು. ಇವರು ಮೂರೇ ವರ್ಷ ಮೆಂಬರರಾಗಿದ್ದಾಗ್ಯೂ ಇಂಡಿಯಾ ದೇಶದವರ ಏಳಿಗೆಗಾಗಿ ಬಹಳ ಚಟುವಟಿಕೆಯಿಂದಲೂ ಧೈರ್ಯದಿಂದಲೂ ಕೆಲಸಮಾಡಿದರು.

ಇವರ ಸಾಹಸದಿಂದ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯು ಇಂಡಿಯಾ ದೇಶದಲ್ಲಿಯೇ ನಡೆಯಬೇಕೆಂದು ಪಾರ್ಲಿಮೆಂಟಿನಲ್ಲಿ ರಿಜೊಲ್ಯೂಷನ್ ಪಾಸಾಯಿತು. ಆದರೆ ಅದು ಇನ್ನೂ ಜಾರಿಗೆ ಬಂದಿಲ್ಲ.

ಸರ್ ವಿಲಿಯಂ ವೆಡ್ಡರ್ ಬರ್ನ ಮತ್ತು ಮೆ॥ ಕೆಯಿನ್ (Caine) ಇವರ ಸಹಾಯದಿಂದ ಇಂಡಿಯಾ ದೇಶದ ಅಭಿವೃದ್ಧಿಯ ವಿಚಾರವ

ನ್ನು ಪಾರ್ಲಿಮೆಂಟಿನಲ್ಲಿ ನೋಡಿಕೊಳ್ಳುವುದಕ್ಕೋಸ್ಕರ "ಪಾರ್ಲಿಮೆಂಟರಿ ಕಮಿಟಿ' ಎಂಬ ಸಂಘವನ್ನು ಸ್ಥಾಪಿಸಿದರು ೧೮೮೬ರಲ್ಲಿ ಎರಡನೆಯ ಸಾರಿ ನ್ಯಾಷನಲ ಕಾಂಗ್ರೆಸ್ ಮಹಾಸಭೆಯು ಕೂಟವು ಕಲ್ಕತ್ತಾ ನಗರದಲ್ಲಿ ನಡೆದಾಗ ಇವರು ಅತ್ಯಂತ ಗೌರವದಾಯಕವಾದ ಸಭೆಯ ಅಧ್ಯಕ್ಷಪದವಿಯನ್ನೇ ಅಲಂಕರಿಸಿದ್ದರು

೧೮೯೩ ರಲ್ಲಿ ಲಾಹೋರಿನಲ್ಲಿ ಕಾಂಗ್ರೆಸ್ ಮಹಾಸಭೆಯು ನಡೆದಾಗಲೂ ಸಹ ಪ್ರಸಿಡೆಂಟರಾಗಿ ಮಾಡಿದ ಸಂಭಾಷಣದಲ್ಲಿ "ಈ ಹಿಂದೂ ದೇಶದ ಜನಗಳ ಅತ್ಯಂತ ದಾರಿದ್ರ್ಯಾವಸ್ಥೆ, ರಾಜ್ಯಭಾರಕ್ಕೆ ತಗಲುವ ಭಾರಿ ಖರ್ಚು ಭಾರತಪುತ್ರರಿಗೆ ರಾಜ್ಯಭಾರದಲ್ಲಿ ಯೋಗ್ಯತೆಗೆ ತಕ್ಕ ಅಧಿಕಾರ ದೊರೆಯದಿರುವುದು ರಾಜಕೀಯ ಅದಳಿತಗಳನ್ನು ಸರಿಯಾದ ಕ್ರಮದಲ್ಲಿ ನಡಸಲು ಇಲ್ಲಿನವರಿಗೆ ಯಾವ ಬಂಧವಾದ ಜವಾಬ್ದಾರಿಯೂ ಇಲ್ಲದಿರುವುದು," ಈ ಮೊದಲಾದ ಸಂಗತಿಗಳೆಲ್ಲವನ್ನೂ ಬಹಳ ಸ್ಪಷ್ಟವಾಗಿ ತಿಳಿಸಿದ್ದಾರ.

೧೯೦೬ ರಲ್ಲಿ ಕಲ್ಕತ್ತಾನಗರದಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮಹಾಸಭೆಯು ಕೂಟವು ನಡೆದಾಗ ಮೂರನೆಯ ಸಾರೆ ಇವರೇ ಪ್ರಸಿಡೆಂಟ್ (ಅಧ್ಯಕ್ಷ) ಪದವಿಯನ್ನು ವಹಿಸಿದ್ದರು ಆಗ ಇವರು ಮಾಡಿದ ಭಾಷಣದಲ್ಲಿ ಇಂಡಿಯಾದೇಶಕ್ಕೆ ಸ್ವರಾಜ್ಯದ ಅವಶ್ಯಕತೆಯನ್ನು ಕುರಿತು ಬಹಳವಾಗಿ ಒತ್ತಿ ಹೇಳಿದ್ದಾರೆ

ಕಳೆದ ವರ್ಷ ಎಂದರೆ ೧೯೧೬ ರಲ್ಲಿ ಬೊಂಬಾಯಿಯ ಸಕಲಕಲಾ ಶಾಲೆಯು (University of Bombay) ವರು ಅತ್ಯಂತಘನವಾದ (L L D) ಎಲ ಎಲ್ ಡಿ ಎಂಬ ಡಿಗ್ರೀ ಬಿರುದನ್ನು ಇವರಿಗೆ ದಯಪಾಲಿಸಿದರು ಈಚೀಚೆಗೆ ಇವರ ಶರೀರದ ಆರೋಗ್ಯ ಸ್ಥಿತಿಯು ಬಹುಮಟ್ಟಿಗೆ ಕೆಟ್ಟುಹೋಯಿತು ಆದರೆ ಒಂದು ವಾರದ ಕೆಳಗೆ ಎಂದರೆ ಜೂನ್ ೩೦ ನೆಯ ಶನಿವಾರ ಸಾಯಂಕಾಲ ೫ ಕಾಲು ಗಂಟೆಗೆ ಈ ಘನ ಸಚ್ಚಾರಿತ್ರರಾದ ಮಹನೀಯರು ದಿವಂಗತರಾದರು ದೇಹವನ್ನು ಬಿಟ್ಟು ಬಿಡುವ ಕೊನೆ ಕ್ಷಣದವರೆಗೂ ಅವರಿಗೆ ಪ್ರಜ್ಞೆಯು ಸಂಪೂರ್ಣವಾಗಿಯೇ ಇತ್ತು!!!

ಬ್ರಿಟಿಷ್ ಸರ್ಕಾರದವರಲ್ಲಿ ಅತ್ಯಂತ ರಾಜಭಕ್ತಿಯುಳ್ಳವರಾಗಿದ್ದುದೂ ಅಲ್ಲದೆ ಹಿಂದುಸ್ಥಾನದ ಸಂಪದಭಿವೃದ್ಧಿಗೂ ಹಿಂದೂ ದೇಶೀಯರ ಏಳಿಗೆಗೂ ಸ್ವರಾಜ್ಯಕ್ಕಾಗಿಯೂ ಬಹಳ ಕಷ್ಟವನ್ನು ವಹಿಸಿ ಕೆಲಸ ಮಾಡಿದರು ಹಿಂದೂ ಜನಗಳು ಐಕಮತ್ಯದಿಂದ ಇರಬೇಕೆಂದು ಇವರು ಸ್ಪಷ್ಟವಾಗಿ ತಿಳಿಸುತ್ತಲೇ ಇದ್ದರು

ಇವರ ಘನವಾದ ಇಂತಹ ಜೀವಮಾನ ಚರಿತ್ರೆಯು ಈ ಭಾರತಮಾತೆಯ ಪುತ್ರರೆಲ್ಲರಿಗೂ ಅತಿಶ್ರೇಷ್ಠವಾದ ಪ್ರೇರಣೆಯನ್ನೂ ಉತ್ಸಾಹವನ್ನೂ ಸರ್ವದಾ ಕೊಡತಕ್ಕದಾಗಲಿ!

ಅಜೇಯನಾದ ಕಾಲಪುರುಷನ ಕಟ್ಟಳೆಗೆ ಎಲ್ಲರೂ ಕಟ್ಟು ಬೀಳಲೇಬೇಕು ಈ ಸೃಷ್ಟಿನಿಯಮವನ್ನು ಅನುಸರಿಸಿ ಪರಮಾತ್ಮನ ಉದ್ದೇಶದಂತೆ ಮಹಾತ್ಮರು ಜನ್ಮವನ್ನೆತ್ತಿ ತಮ್ಮ ನಿರ್ದಿಷ್ಟಕಾರ್ಯವನ್ನು ಸಾಂಗಗೊಳಿಸಿ ಕಡೆಗೆ ಕಾಲಪುರುಷನಲ್ಲಿ ಲೀನರಾಗುವರು ಅವರ ಸ್ಥೂಲದೇಹವು ಅದೃಶ್ಯವಾದರೂ ಸೂಕ್ಷ್ಮದೇಹದಿಂದ ಅವರ ಯಶಶ್ಶರೀರವು ಸರ್ವತ್ರವ್ಯಾಪಿಸಿ ಜನಗಳಲ್ಲಿ ಸ್ಫೂರ್ತಿಯನ್ನುಂಟು ಮಾಡುತ್ತಿರುವುದು. ಹಾಗೆಯೇ ಕೀರ್ತಿಶೇಷರಾದ ದಾದಾಭಾಯಿಯವರ ಮರಣವು ವಿಷಾದಕರವಾಗಿದ್ದರೂ ಅವರ ಯಶಶ್ಶರೀರವು ಸಕಲ ಭಾರತೀಯರಿಗೂ ನಿರಂತರ ದರ್ಶನಾನಂದವನಿತ್ತು ಭಕ್ತಿ, ಪ್ರೀತಿ, ಗೌರವ, ಶ್ರದ್ಧಾ-ಉತ್ಸಾಹಗಳಿಂದ ಭಾರತಮಾತೃಸಂತಾನದಲ್ಲಿ ನೂರಾರು ಮುಂದಿ ದಾದಾಭಾಯಿಯವರ ಅಂಶಾವತಾರ ಪುರುಷರನ್ನು ನೋಡುವಂತಾದೀತೆಂದು ನಿರೀಕ್ಷಿಸಿ ಈ ಮಹನೀಯರ ಸಂಕ್ಷಿಪ್ತ ಚರಿತ್ರವನ್ನು ಪ್ರಕಟಿಸಿರುವೆವು

ಸಂಪಾದಕ ಸಮಿತಿ.

# ಮಹಿಲಾ ವಿದ್ಯಾಲಯಗಳು.

—— O ——

ಹಿಂದುಸ್ಥಾನದ ಆರ್ಯರು ಬಹುದಿವಸಗಳ ಹಿಂದೆ ಜಗತ್ತಿನೊಳಗಿನ ಎಲ್ಲ ಜನರಿಗೂ ಸುಧಾರಿಸಿದವರಾಗಿದ್ದರು ಐಶ್ವರ್ಯವೂ ಸೌಖ್ಯವೂ ಹೆಚ್ಚಾದಂತೆ ಆಲಸ್ಯವು ನೆಲೆಗೊಳ್ಳುವುದು ಎಲ್ಲ ಕಡೆಗೂ ಕಾಣಬರುವುದು ಚಕ್ರನೇಮಿಕ್ರಮದಂತೆ—'ಏಬೀದಿನ ಜಾಯಂಗಾ' ಸುಖದ ದಿವಸಗಳೂ ಬರಬಹುದು-ಎಂದು ಮೊದಲಾದ ಸಮಾಧಾನದ ಮಾತುಗಳನ್ನು ಹೇಳಿ ಕೆಲವರು ನಮ್ಮನ್ನು ಮೋಹಗೊಳಿಸುತ್ತಾರೆ ಆದರೆ, ನಾವು ಈ ಆಲಸ್ಯಪ್ರಧಾನವಾದ ದೈವವಾದವನ್ನು ಎಂದಿಗೂ ಕೇಳಬಾರೆವು "ಮನುಷ್ಯನ ಪ್ರಯತ್ನಗಳಿಗೆ ದೈವವು ಸಹಕಾರಿಯಾದರೆ ಏನು ಕೇಳಬೇಕು?" ಇತ್ಯಾದಿ ಇತ್ಯಾದಿ ಪ್ರತಿಪಾದನ ಮಾಡುತ್ತ ಹೋಗುವಲ್ಲಿ ನಮ್ಮ ಮೈಗಳ್ಳತನವೇ ವ್ಯಕ್ತವಾಗುವುದೆಂದು ನಾವು ಸ್ಪಷ್ಟವಾಗಿ ಹೇಳುತ್ತೇವೆ ಕಾಲಚಕ್ರವು ಬಹು ಭಯಪ್ರದ, ಈ ಮಾತು ನಿಜ. ಆದರ ಎಳತದಲ್ಲಿ ಅನೇಕ ದೇಶಗಳು ಸಿಕ್ಕಿ ನುಚ್ಚುನೂರಾಗಿಯೂ ಹೋಗಿರುವುದು, ಇತಿಹಾಸದಿಂದ ತಿಳಿದು ಬರುತ್ತಿದೆ ಆದರೆ ಆ ಕಾಲಚಕ್ರಕ್ಕೆ ಹೆದರಿ ಹೇಡಿಗಳಂತೆ ಅಳುತ್ತ ಕುಳಿತುಕೊಳ್ಳುವುದರಲ್ಲಿ ಅರ್ಥವೇನು? ಒಬ್ಬ ಸಾಧಾರಣ ಮನುಷ್ಯನು ಹೊಗೆಬಂಡಿಯ ಮಾರ್ಗದಲ್ಲಿಯ ಕೀಲುಗಳನ್ನು ತಿರುಗಿಸಿ ಗಾಡಿಯನ್ನೇ ಎರಡನೆಯ ಮಾರ್ಗಕ್ಕೆ ಹಚ್ಚುವಂತೆ, ಕುಶಲ ಮನುಷ್ಯನು ಆ ದುರ್ಧರವಾದ ಕಾಲಚಕ್ರಕ್ಕೇ ಗತಿಯನ್ನು ಕೊಟ್ಟರೆ ಅವನ ಮನುಷ್ಯತ್ವವು ಸಿದ್ಧವಾಗಬಹುದು ಇಲ್ಲದಿದ್ದರೆ ಅಜ್ಞಾನವೂ ಮೂಕವೂ ಆದ ಪಶುವಿನಲ್ಲಿಯೂ ಅವನಲ್ಲಿಯೂ ಭೇದವೇನು? ಕರ್ತೃತ್ವವಿಲ್ಲದೇ ಕೇವಲ ಮಾತನ್ನು ಕೇಳಲು ನಮಗೆ ಇನ್ನು ಮೇಲೆ ಹೊತ್ತೇ ಇಲ್ಲದಾಗಿದೆ.

ದೇಶೋನ್ನತಿಯ ವಿಷಯದಲ್ಲಿ ಇತ್ತಲಾಗಿ ಎಲ್ಲರೂ ವಿಚಾರ ಮಾಡುತ್ತಿರುವರು ಒತ್ತಾಯದ ಮುಕ್ತದ್ವಾರಾ ಶಿಕ್ಷಣಾಲಯದ

ವಿಷಯದಲ್ಲಿ ಕೆಲವು ಪ್ರಯತ್ನಗಳೂ ನಡೆದಿವೆ. ಏಕರಾಷ್ಟ್ರೀಯ ಭಾವನೆಯು ಬೇಕೆಂದಾದರೂ ಎಲ್ಲ ಕಡೆಯಿಂದ ಕೇಳಬರುತ್ತಿದೆ ಇಂತಹ ಉತ್ಸಾಹಕಾರಕವಾದ ಪ್ರಸಂಗದಲ್ಲಿ ನಮ್ಮ ಪ್ರಿಯ ಬಂಧು ಭಗಿನೀ ವರ್ಗಕ್ಕೆ ಒಂದು ಪ್ರಶ್ನೆ ಮಾಡಲು ಉದ್ಯುಕ್ತರಾಗಿರುವೆವು

ನಮ್ಮ ಸುಶಿಕ್ಷಿತ ಕನ್ನಡಿಗರಾದ ಪ್ರಿಯ ಜನರನ್ನು ನಾವು ಇಲ್ಲಿ ಆಹ್ವಾನಪೂರ್ವಕವಾಗಿ ಕೇಳುವದೇನೆಂದರೆ,— ' ಸದ್ಗೃಹಸ್ಥರೇ ! ನೀವು ದೇಶವನ್ನು ಸುಧಾರಿಸಲು ಹೊರಟಿರುವುದನ್ನು ಕೇಳಿ, ಆದಾವ ಪ್ರಾಣಿ ಸಂತೋಷಪಡದಿರುವುದು ? ಆದರೆ ನೀವು ದೇಶಕ್ಕೆಲ್ಲ ಬೆಳಕು ಮಾಡುವ ಮೊದಲು ನಿಮ್ಮ ಮನೆಗಳಲ್ಲಿಯೋ ಎಷ್ಟು ಬೆಳಕು ಮಾಡಿದಿರೆಂದು ಆರಾದರೂ ಪ್ರಶ್ನೆ ಮಾಡಿದರೆ ಏನು ಉತ್ತರ ಕೊಡುವಿರಿ? ನಮ್ಮ ಅರ್ಧ ಜನಾಂಗವಾದ ಭಗಿನೀ ವರ್ಗವೆಲ್ಲ ಸಾವಿರಾರು ವರ್ಷಗಳಿಂದ ಅಜ್ಞಾನಾಂಧಕಾರದಲ್ಲಿ ತೊಳಲುತ್ತಿರುವಾಗ ಕೇವಲ ನಿಮ್ಮ ದೇಹಗಳ ಚಿಂತೆಯನ್ನೇ ಹೊತ್ತಿರುವ ಸ್ವಾರ್ಥಪರಾಯಣರಾದ ನೀವು ಸಮಾಧಾನದಿಂದೆ ಹೇಗೆ ಮನೆಯ ಹೊರಗೆ ಬಂದು ದೊಡ್ಡಿಸ್ತನ ಹೇಳಿಕೊಳ್ಳುವಿರೋ ನಮಗೆ ತಿಳಿಯದ ಮಾತು ! ಆವ ಮಹಾತ್ಮಳು ನಿಮ್ಮೊಡನೆ ಹುಟ್ಟಿ ಬೆಳೆದು, ಚಿಕ್ಕಂದಿನಿಂದಲೂ ಆಡಿದವಳೋ, ಆವಳು ನಮ್ಮ ದೇಶದ ಮಾತೆಯಾಗುವಳೋ ಆ ನಿಮ್ಮ ಭಗಿನಿಯೋ ಅಕ್ಷರಶೂನ್ಯಳಾಗಿದ್ದು ನೀವು ಅವಳನ್ನು ನಿಮ್ಮ ಶುಷ್ಕ ಪಾಂಡಿತ್ಯದಿಂದಲೂ ಗರ್ವದಿಂದಲೂ ಆವಾಗಲೂ ಹೀಯಾಳಿಸುತ್ತಿರುವುದು ನಿಮ್ಮ ವಿದ್ವತ್ತಿಗೆ ಆದೆಂತು ಒಪ್ಪುವದೊ ನೋಡಿರಿ ಆಕಾಶಕ್ಕಿಂತಲೂ ಮಾತೆಯು ದೊಡ್ಡವಳೆಂದು ಅನೇಕ ದಿವಸಗಳಿಂದ ನೀವು ಕೇಳುತ್ತ ಬಂದಿಲ್ಲವೆ? ಜಗನ್ನಿಯಂತನ ನಿರ್ವ್ಯಾಜ ಪ್ರೇಮವನ್ನು ಆವ ಆದರ್ಶದಲ್ಲಿ ನೀವು ಕಾಣುವಿರೋ-ಆ ಮಾತೆಯು ನಿಮ್ಮ ಪ್ರಥಮ ಸದ್ಗುರುವಲ್ಲವೇ? ಮತ್ತು ಆದರಂತೆ ಆಸಾರವಾದ ಈ ಸಂಸಾರವೆಲ್ಲವೂ ಸಾರಮಯವೆನ್ನಿಸಿ ನೀವು ಇರುವ ಚಿಕ್ಕಮನೆಯೋ ಸ್ವರ್ಗಭವನದಂತೆ ಮಾಡುವ ಸಾಮರ್ಥ್ಯವು ನಿಮ್ಮ ಪತ್ನಿಯರಾದ ಆ ದೇವಿಯರಲ್ಲಿಲ್ಲವೊ !

ಆಹಾ! ಇಂತಹ ನಿಮ್ಮ ಜೀವನಸರ್ವಸ್ವವೆಂದರೂ ಸಲ್ಲುವ—ನಿಮ್ಮ ಮಾತೆಯವರೂ ಪತ್ನಿಯವರೂ ಜಗತ್ತಿನೊಳಗಿನ ಅನೇಕ ಸಾಧಾರಣ ಗಳನ್ನು ತಿಳಿಯದೆ ಅನೇಕ ಶತಮಾನಗಳಿಂದ ಅಕ್ಷರಶತ್ರುಗಳಾಗಿ ಕುಳಿತಿರಲು ನೀವು ನಿಮ್ಮ ಕೂಪಮಂಡೂಕ ಪ್ರಾಯವಾದ ಅಲ್ಪಜ್ಞಾನದ ಪ್ರಕಾಶದಿಂದ ಆ ಬಡಪ್ರಾಣಿಗಳ ಕಣ್ಣು ಕುಕ್ಕುವಂತೆ ಮಾಡಿ ಅದರಲ್ಲಿಯೇ ನಿಮ್ಮ ದೊಡ್ಡಸ್ತನವನ್ನು ತಿಳಿಯುತ್ತಿರುವಿರಿ! ಧಿಕ್ಕಾರವಿರಲಿ ಆ ದೊಡ್ಡಸ್ತನಕ್ಕೆ! ಎತ್ತಾಡಲಿಕ್ಕೆ ಬರುವ ಪಶುಗಳಂತೆಯೇ ನಮ್ಮ ಸುಶಿಕ್ಷಿತ ಜನರ ಮನೆಯಲ್ಲಿಯ ಮಹಿಳಾವರ್ಗವೆಲ್ಲವೂ ಇರುವಾಗ ನಾವು ಸ್ವಸ್ಥವಾಗಿ ಆಕಳಿಸುತ್ತ ಕುಳಿತಿರುವೆವು.

ಇದಕ್ಕೆ ವಿರೋಧವಾಗಿ ಜನರು ಆಗಾಗ ಕೇಳುತ್ತಿರುವರು—“ಸ್ತ್ರೀಶಿಕ್ಷಣವು ಅಷ್ಟೇನೂ ಮಹತ್ವದ್ದಲ್ಲ. ಸರಕಾರದವರು ಅದರ ವ್ಯವಸ್ಥೆಯನ್ನು ಅಲ್ಪವಾಗಿ ಮಾಡಿದ್ದು ಸಾಕು. ಮೇಲಾಗಿ ಅದು ಶ್ರೀಮಂತರ ಮಾತು. ಬಡವರ ಹೆಣ್ಣುಮಕ್ಕಳು ಪುಸ್ತಕ ವಾಚನ ಮಾಡುತ್ತ ಕುಳಿತುಕೊಂಡರೆ ಅಡಿಗೆ ಮಾಡುವವರಾರು? ಹೆಂಗಸರು ಅಷ್ಟು ಕಲಿತು ಮಾಡುವುದೇನು? ದೇಶಕ್ಕೆ ವಿಶೇಷವಾಗಿ ಬೇಕಾಗುವ ಮಾತುಗಳನ್ನು ನಾವು ಕೈಕೊಂಡಿರುವೆವು. ನಮಗೆ ವೇಳೆಯಾದರೂ ಎಲ್ಲಿಯದು?”

ಇನ್ನು ಈ ಸಮಾಧಾನದ ಪರಾಮರ್ಶವನ್ನು ತೆಗೆದುಕೊಳ್ಳಬೇಕು! ಇದರಲ್ಲಿ ಮೊದಲನೆಯ ಮಾತು ‘ಸ್ತ್ರೀಶಿಕ್ಷಣವು ಅಷ್ಟೇನೂ ಮಹತ್ವದ್ದಲ್ಲವೆಂಬುದು’ ನಮ್ಮ ಜನರ ಅವನತಿಗೆ ಕಾರಣವೇನೆಂದರೆ, ಅವರ ವೃಥಾಪ್ರಲಾಪವು. ಇದಕ್ಕೂ ಅವರು ತಮ್ಮ ಇಂಗ್ಲಿಷ-ಸಂಸ್ಕೃತಗಳ ಪಾಂಡಿತ್ಯದ ಗಂಭೀರತೆಯನ್ನು ವ್ಯಕ್ತಮಾಡುತ್ತ ತಣ್ಣಗೆ ಕುಳಿತರೆ ಎಷ್ಟು ಒಳ್ಳೆಯದು? ಮಹಾರಾಷ್ಟ್ರಭಾಷೆಯಲ್ಲಿ “ಸುಮ್ಮನೆ ಕುಳಿತುಕೊಳ್ಳಲು ಏನು ತಗೊಂಡಿ?” ಎಂಬ ನಾಣ್ಣುಡಿಯುಂಟು. ದೇಶೋದ್ಧಾರವೇ ಆಗುತ್ತಿದ್ದರೆ, ನಾವೂ ನಮ್ಮ ಸ್ತ್ರೀಶಿಕ್ಷಣದ ಮಾತನ್ನು ಹಿಂದೆ ತೆಗೆದುಕೊಳ್ಳುತ್ತೇವೆ. ಇಷ್ಟಕ್ಕಾಗಿ ಈ ಮಾತನ್ನು ಹೀ

ಯಾಳಿಸುವುದೆಂದರೆ ವಸ್ತುಸ್ಥಿತಿಯು ವಿಪರ್ಯಾಸ ಮಾಡಿದಂತಾಗು ವುದು. ಪರಮಪೂಜ್ಯರಾದ ಸದ್ಗುರು ಶ್ರೀ ಸಮರ್ಥ ರಾಮದಾಸ ಸ್ವಾಮಿಗಳಂತೆ, ಅರ್ಧ ಸುಖಸರ್ವಸ್ವವಾದ ಲಗ್ನಮಂಟಪದಲ್ಲಿ "ಸಾವಧಾನ"ವೆಂಬ ಶಬ್ದವನ್ನು ದ್ವಿಜರಿಂದ ಕೇಳಿಯೇ ಎಲ್ಲ ಸಂಸಾರ ಪಾಶಗಳನ್ನು ತೊರೆದು ದೇಶೋನ್ನತಿಯ ಕಂಕಣವನ್ನು ಕಟ್ಟಿಕೊಳ್ಳು ವರೋ, ಅಥವಾ ಸಾಧುಶಿರೋಮಣಿಗಳಾದ ತುಕಾರಾಮ ಮಹಾ ರಾಜರಂತೆ ಅವರಿಗೆ ಶ್ರೀ ಶಿವಾಜಿಯವರಿಂದ ಜಹಗೀರು ಮೊದಲಾದ ಪದವಿ ಬಂದಿರಲು, ಅವೆಲ್ಲವನ್ನೂ ತಿರುಗಿ ಕಳುಹಿಸಿ, "ರಾಜದ್ವಾರ ದಲ್ಲಿ ನಮ್ಮ ಬಡವರ ಪ್ರಯೋಜನವೇನು? ದೇವರು ಕೊಟ್ಟ ಭೂ-ವ್ಯಾಕಾಶಗಳು ನಮಗೆ ಸಾಕು! ನಮ್ಮ ಈ ಉತ್ತರವನ್ನು ಕೇಳಿ ತಾವು ಉದಾಸರಾಗದೆ [illegible] ನಮ್ಮ ಉಪೇಕ್ಷೆಯನ್ನು ಮಾಡಲಿಕ್ಕಿಲ್ಲ!" ಹೀಗೆ ಉತ್ತರ ಕೊಟ್ಟದ್ದರಿಂದ ಅರಸೆಂಬುವರು ವಾಕ್ಯಗಳು ಕಣ್ಣಿನ ನೀರು ಇಲ್ಲದೆ [illegible] ಶ್ರೀ [illegible] ಮಹಾತ್ಮರಿಗೆ ನಮ್ಮ ಸಹಸ್ರಶಃ ನಮೋ ನ್ನಾರ. [illegible] ಅವರೀಗಲೂ ಮನೆಗಳಲ್ಲಿ [illegible] ಸ್ತ್ರೀಯು ಹಾದಿಬಿಟ್ಟ [illegible] ಮತ್ತೆ ಹೇಗೆ ಜನರನ್ನು [illegible] ಒಳಿಸಿ ನಡಸಿ ತರಬೇಕಾಗುವುದು. ನಮ್ಮ [illegible] ದಾಸರು ಹೇಳುವಂತೆ ಲಕ್ಷಾವಧಿ ರೂಪಾಯಿಗಳಲ್ಲವೆ [illegible] ಅಷ್ಟರಲ್ಲಿ ಹೊಟ್ಟೆ ಉಪ್ಪು ಇಲ್ಲದೆಯೂ ಉಣ್ಣುವ [illegible] ತಿರುಗಬೇಕೆಂದು ಏಕಾ ರಾಮದೇವ ಮೊದಲಾದವರು ತಮ್ಮ ಸರ್ವಸ್ವವನ್ನು ಬಡವರಿಗೆ ದಾನ ಮಾಡಿರುವದು ಈ ದೃಷ್ಟಿಯಿಂದ [illegible] ತೋರುತ್ತದೆ. ಅದರೆ, ತಾವು ಏನೂ ಮಾಡದೆ ದೊಡ್ಡ ದೊಡ್ಡ ಮಾತು ಹೇಳುವುದು ಧಾರ್ಷ್ಟ್ಯವೇ ಸರಿ! ಇರಲಿ, ನಾವು ಇಲ್ಲಿ ಹೇಳ ಪ್ರದೇಶ ದ್ದು,— ಏನೋ ಸ್ವಲ್ಪ ಅಕ್ಷರಗಳು ಬಂದ ಮೇಲೆ ಅದೇ ಸ್ತ್ರೀ ಶಿಕ್ಷಣದ ಪರ ಮಾವಧಿಯೆಂದು ಹಿರಿಹಿರಿ ಹಿಗ್ಗುತ್ತ ನಮ್ಮ ಹುಡುಗಿಯರನ್ನು ಅವರು ಏನೂ ತಿಳಿಯದೆ ಇರುವಾಗಲೇ ಚತುರ್ಭುಜರನ್ನಾಗಿ ಮಾಡಿ ಅವರ ಋಣಗಳೊಳಗಿಂದ ಮುಕ್ತರಾದೆವೆಂದು ತಿಳಿದುಕೊಳ್ಳುವ ಮಹಾತ್ಮ

ರೂ ಹೀಗೆ ದೊಡ್ಡ ಮಾತು ಹೇಳುತ್ತ ಹೋದರೆ ಹೋಗಲಿ! ಅವರ ಮುಂಗಯ್ಯನ್ನು ಹಿಡಿದು ಕೇಳುವ ಸಾಮರ್ಥ್ಯವು ಆದಾರಿಗೆ! "ಮುಖ ಮಸ್ತೀತಿ ವಕ್ತವ್ಯಮ್!"

ಸರ್ಕಾರದವರು ಮಾಡುತ್ತಾರೆಂದು ಹೇಳುವಲ್ಲಿ, ಹೇಳುವವರ ಆಲಸ್ಯದ ಪ್ರದರ್ಶನವು ಈವರೆಗೆ ಅನೇಕ ರೀತಿಯಿಂದ ಆಗುತ್ತ ಬಂದಿರುವದು. ನಮ್ಮ ದಯಾಳುಗಳೂ ವಿಶಾಲಹೃದಯರೂ ಆದ ಸರಕಾರದವರು ಈ ಯುದ್ಧ ಪ್ರಸಂಗದ ಆಪತ್ತಿನಲ್ಲಿಯೂ ನಮ್ಮ ಅನೇಕ ತರದ ಉನ್ನತಿವಿಚಾರಗಳಲ್ಲಿ ಪಡುವ ಶ್ರಮವನ್ನು ನೋಡಿದರೆ ಆರಿಗಾದರೂ ಅವರ ವಿಷಯದಲ್ಲಿ ಪೂಜ್ಯಬುದ್ಧಿಯುತ್ಪನ್ನವಾಗದೆ ಇರದು. ಆದರೆ, ನಮ್ಮ ಜನರು ಮಾತ್ರ ಆವತರದ ಶ್ರಮಗಳನ್ನೂ ತೆಗೆದುಕೊಂಡಿಲ್ಲ! ಈ ಲಾಂಛನಾಸ್ಪದತೆಯು ಇನ್ನಾದರೂ ಹೋಗುವದೋ ಇಲ್ಲವೋ ದೇವರೇ ಬಲ್ಲ. ಉದ್ಯೋಗವೇನೂ ಮಾಡದೆ ನಾವು ದೈವದ ಹೆಸರಿಂದ ಆಕ್ರೋಶಿಸುತ್ತ ಕುಳಿತಿರುತ್ತೇವೆ. ದೈವವೇನು? ಪಾಪ! ನಾವು ಮಾಡಿದ ಕರ್ತೃತ್ವದ ಪರಿಣಾಮವೇ ದೈವವೆನಿಸುವುದು. ಒಂದು ವೇಳೆ ಮಹಾರಾಷ್ಟ್ರಜನಾಂಗವನ್ನೆಲ್ಲ ಗದಗದಿಸಿಬಿಟ್ಟ ಪರಮಪೂಜ್ಯ ವಿಷ್ಣುಶಾಸ್ತ್ರೀ ಚಿಪಳೂಣಕರರು ಹೇಳುವಂತೆ, ಹುಲಿಯ ಹಾಲಿನಂತಿದ್ದ ಇಂಗ್ಲಿಷ್ ವಿದ್ಯೆಯಿಂದ ಅಲಂಕೃತರಾದ ನಮ್ಮ ಜನರಿಗಂತೂ ಈ ಮಾತು ಇನ್ನು ಎಷ್ಟು ಮಾತ್ರವೂ ಶೋಭಿಸುವುದಿಲ್ಲ. ಮಾಡದೆ ಆವುದು ಆಗಬೇಕು? ಸ್ವಾರ್ಥತ್ಯಾಗವಿಲ್ಲದೆ ಏನಾಗಬೇಕು?

ಇನ್ನು ಸ್ತ್ರೀಶಿಕ್ಷಣವು ಶ್ರೀಮಂತರ ಮಾತೆಂದು ಹೇಳುವುದಕ್ಕೆ— ಹಾಗೆ ಹೇಳುವುದೆಂದರೆ ಆ ಮಾತಿನ ಖಂಡನವಾಗಿದೆ. ಮೊದಲು ಶ್ರೀಮಂತರು ಎಂದರೆ, ಎಷ್ಟುರವರೋ ಎಷ್ಟು ಯೋಗ್ಯತೆಯುಳ್ಳವರಿದ್ದರೆ ಅವರನ್ನು ಶ್ರೀಮಂತರೆನ್ನಬೇಕೋ ತಿಳಿಯದ ಮಾತು! ಲೋಕದಲ್ಲಿ ತಾರತಮ್ಯದಿಂದ ಹೆಚ್ಚು ಕಡಿಮೆ ಯೋಗ್ಯತೆಯ ಜನರು ಇದ್ದೇ ಇರುವರು. ಅವರಲ್ಲಿ ಎಲ್ಲರೂ ತಮ್ಮ ತಮ್ಮ ಅಳತೆಯನ್ನು ನೋಡಿಕೊಂಡೇ ಬಹುಶಃ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿರುವರು. ಅರ್ಥಜನಾಂ

ಗವಾದ ಪುರುಷವರ್ಗಕ್ಕಾಗಿ ವೈಮೂರಿ (?) ಅನೇಕ ಪ್ರಯತ್ನಗಳು ನಡೆದಿರಲು, ಸ್ತ್ರೀವರ್ಗಕ್ಕಾಗಿ ಅದರಲ್ಲಿಯು ಕೆಲವು ಅಂಶವಾದರೂ ಆಗಬೇಕೆಂದು ಸ್ತ್ರೀಯರು ಕೇಳಿಕೊಂಡರೆ ಅದೇನೂ ಅನ್ಯಾಯವಾಗಲಿಕ್ಕಿಲ್ಲ ಮೇಲಾಗಿ ಈಗ ಹಿಂದಿನ ಎಷ್ಟೋ ಸಂಕುಚಿತ ಕಲ್ಪನೆಗಳೂ ಹಿಂದೆ ಬೀಳುತ್ತ ಬಂದಿದ್ದು ಮುದ್ರಣದ ಕಲೆಯು ಎಲ್ಲರಿಗೂ ಜ್ಞಾನವನ್ನು ಅತ್ಯಂತ ಸುಲಭವಾಗಿ ಮಾಡಿದೆ ಎಡಗೈ ಬಿನ್ನಹ ಪತ್ರವನ್ನು ಅನೇಕ ಜನರು ಓದಿರಬಹುದು (?) ಇತ್ತಲಾಗಿ ನಮ್ಮ ಹೆಂಗಸರು ವಸ್ತ್ರ-ಒಡವೆಗಳಲ್ಲಿಯೇ ಲಕ್ಷ್ಯಹಾಕಿ ಸುಖದ ಪರಮಾವಧಿಯೆಂದರೆ ಹಗಲು ಹೊತ್ತಾದರೂ ಸ್ವಸ್ಥವಾಗಿ ಮಲಗಿಕೊಳ್ಳುವದೆಂದು ತಿಳಿದು, ಗೃಹಕಲಹವೇ ಮೊದಲಾದ ಅನೇಕ ತೊಂದರೆಗಳನ್ನು ಮಾಡುವುದನ್ನು ನೋಡಿಯಾದರೂ ಸ್ತ್ರೀಯರಿಗೆ ಸಂಸ್ಕೃತದ ವೈರಾಗ್ಯವೂ ಜಗನ್ಮಾನ್ಯವಾದ ನಿಷ್ಕಾಮಕರ್ಮಯೋಗವೇ ಮೊದಲಾದ ವೇದಾಂತವೂ, ಇಂಗ್ಲಿಷ್ ಭಾಷೆಯು ದೇಶಾಭಿಮಾನವೂ ಇವುಗಳ ಗುರ್ತು ಆದರೆ ಎಷ್ಟು ಉತ್ಕೃಷ್ಟವಾಗುತ್ತಿತ್ತೆಂದು ಅನೇಕರಿಗೆ ಅನಿಸುತ್ತಿರಬಹುದೆಂದು ನಮ್ಮ ಕಲ್ಪನೆಯಾಗಿದೆ ನಮ್ಮ ಹೆಣ್ಣುಮಕ್ಕಳು ಸುಶಿಕ್ಷಿತರಾಗಿದ್ದರಲ್ಲವೆ, ನಮಗೆ ಸೊಸೆ ಮಕ್ಕಳು ಸುಶಿಕ್ಷಿತರಾದವರು ದೊರೆಕುವರು ! ವಿದುಲಾ, ಕುಂತಿ, ಸುಲಭಾ ಮೊದಲಾದ ಪರಾಕ್ರಮಶಾಲಿಗಳೂ ಪಂಡಿತೆಯರೂ ಆದ ಸ್ತ್ರೀಯರ ಚರಿತೆಗಳನ್ನು ನಮ್ಮ ಪ್ರಿಯ ಕನ್ನಡ ಅಕ್ಕತಂಗಿ, ಅಣ್ಣತಮ್ಮಂದಿರಾದ ವಾಚಕರು ಬಲ್ಲವರಾಗಿರಬೇಕು ಅಷ್ಟು ಶಿಕ್ಷಣಸಂಪನ್ನೆಯರಾದ ಮಾತೆಯರ ಮಕ್ಕಳು ಎಷ್ಟು ತೇಜಸ್ವಿಗಳಾಗಬೇಕೆಂಬುದನ್ನೂ ಲಕ್ಷ್ಯದಲ್ಲಿ ತರಬೇಕಾಗಿದೆ ಈಗ ನಮ್ಮ ತಾಯಿಯರು "ಅಲ್ಲಿ ಹೋಗಬೇಡಪ್ಪಾ!" ಎಂದು ಹೆಜ್ಜೆ ಹೆಜ್ಜೆಗೂ ಮಕ್ಕಳನ್ನು ಬೆದರಿಸುತ್ತಿದ್ದಾರೆ ಅದೆಲ್ಲ ಹೋಗಿ ತಾಯಿಯರ ಸ್ವಾರ್ಥಪ್ರೇಮದಿಂದಲೇ ಉಚ್ಚವಿಚಾರಗಳು ನಮ್ಮ ಭಾವೀ ಪ್ರಜೆಗಳ ಕಿವಿಯ ಮೇಲಿಂದ ಹಾದುಹೋಗುತ್ತಿದ್ದರೆ ನಮ್ಮ ದೇಶೋನ್ನತಿಗಾದರೂ ಎಷ್ಟು ತಡೆ? ಬಡವರಾದವರ ಹೆಂಗಸರೂ ಸಮಯ

ಸಿಕ್ಕಿದಾಗ ಹರಟೆ ಕೊಚ್ಚುವದನ್ನು ನಾವು ನೋಡಿ ನೋಡಿ ನಮಗೆ ಅತೀವ ತಾಪವೆನ್ನಿಸಿ ಈ ಲೇಖನವನ್ನು ಬರೆಯತೊಡಗಿದೆವು ಅವರು ಪಂಡಿತೆಯರಾಗಿದ್ದು ಅಲ್ಪ ಬೆಲೆಯುಳ್ಳ ಈಗಿನ ಮುದ್ರಿಸಿದ ಪುಸ್ತಕಗಳು ಅವರ ಹತ್ತಿರವಿದ್ದರೆ, ಆಹಾ! ಎಷ್ಟು ಉಪಯೋಗವಾಗುತ್ತಿತ್ತು! ಎಂದು ನಮಗೆ ಎನಿಸುತ್ತದೆ ಈ ವಿಷಯವಾಗಿ ಬರೆದಷ್ಟು ಬೆಳೆಯುತ್ತಲೇ ಹೋಗಬಹುದು. ವಾಚಕ-ವಾಚಕಿಯರು, ಎಂದರೆ 'ಮೊಸರೂ ಅನ್ನ' ಎಂಬಂತೆ ಇಲ್ಲಿ ತಿಳಿದುಕೊಳ್ಳಬೇಕೆಂದು ವಿನಂತಿಯಾಗಿದೆ

ಸರಕಾರದವರು ಅನೇಕ ಸ್ಕೂಲುಗಳನ್ನು ತೆಗೆದಂತೆ ಮಹಿಳಾ ವಿದ್ಯಾಲಯಗಳನ್ನೂ ವಿಶೇಷ ಪ್ರಮಾಣದ ಮೇಲೆ ತೆಗೆಯುವರೋ ನೋಡುವ,— ಆಗ ನಮ್ಮ ಹುಡುಗಿಯರನ್ನು ಕಳುಹುವದೆಂದು ನಮ್ಮ ಜನರು ಮಾರ್ಗಪ್ರತೀಕ್ಷೆ ಮಾಡುತ್ತಿರುತ್ತಾರೆ ಒಮ್ಮೆ ಪುಟದ ಮೇಲೆ ನೇರಲೆಹಣ್ಣು ಬಂದುಬಿದ್ದರೂ ಅದನ್ನು ಆವ ಮಹಾತ್ಮನಾದರೂ ಒಳಗೆ ನೂಕಲೆಂದು ಮಲಗಿಕೊಂಡಿರುವ ಪಂಡಿತರಂತೆಯೇ ನಮ್ಮ ಗತಿಯಾಗಿರುವುದು ಎರೆಯುವ ಣ್ಣಿಂದ ಗೊಂಬೆಗಳನ್ನು ಮಾಡಿದಂತೆ ನಮ್ಮ ಸರ್ಕಾರವು ನಮ್ಮನ್ನು ಇನ್ನೂ ಎಷ್ಟು ದಿನ ತಿದ್ದುತ್ತ ಹೋಗಬೇಕೋ ಅದು ನಮಗೆ ತಿಳಿಯದು! ನಾವೆನ್ನುವುದು, ಸರಕಾರಕ್ಕಾದರೂ ವಿಶಿಷ್ಟ ಬಲವನ್ನು ಕೊಡುವುದು 'ಕೌನ್ಸಿಲು' ಮೊದಲಾದ ಜನಾಂಗವೇ ಅಲ್ಲವೇ?

ನಾವು ಇಲ್ಲಿಯೊಂದು ಹೆಸರು ಎತ್ತಿದರೆ, ನಮ್ಮ ಕಲ್ಪನೆಗಳೆಲ್ಲವೂ ಎಂಜಲೆಂದು ಎಲ್ಲಿ ನಮ್ಮ ಪ್ರಿಯ ಬಂಧು ಭಗಿನಿಯರು ತಿಳಿಯುವರೋ ಎಂದು ಅಂಜಿಕೊಳ್ಳುತ್ತಿರುವೆವು ಪುಣ್ಯಪತ್ತನದಲ್ಲಿ (Poona city) ಈ ಹೊತ್ತಿಗೆ ೨೦—೨೫ ವರ್ಷಗಳಿಂದ ತಮ್ಮ ಸರ್ವಸ್ವವನ್ನೂ ಒಪ್ಪಿಸಿ, ತನುಮನೋಧನಗಳಿಂದ ಸ್ತ್ರೀಶಿಕ್ಷಣಾರ್ಥವಾಗಿ ಕೆಲಸ ಮಾಡುತ್ತಿರುವ ಸ್ವಾರ್ಥತ್ಯಾಗ ಶಿರೋಮಣಿಯಾದ

ರಾ|| ರಾ|| ಧೊಂಡೋ ಕೇಶವ ಕರ್ವೆ ಅವರ ವಿಷಯವಾಗಿ ಆರಿಗೆ ಪೂಜ್ಯಬುದ್ಧಿಯುತ್ಪನ್ನವಾಗಲಿಕ್ಕಿಲ್ಲ? ಆ ವಿಷಯವಾಗಿ ಇಲ್ಲಿ ಬರೆಯಲು ಅವಕಾಶವಿಲ್ಲ. ಮುಖ್ಯವಾಗಿ ಬ್ರಾಹ್ಮಣ ಜಾತಿಯಲ್ಲಿ ಬಾಲ ವಿಧವೆಯರ ಜನ್ಮವೆಲ್ಲವು ವ್ಯರ್ಥವಾಗಿ ಅವರ ದುಃಖವು ನಾಯಿಗೂ ಅಸಹ್ಯವಾಗಿರುವುದನ್ನು ನೋಡಿಯೂ,— ಪುನರ್ವಿವಾಹವೆಂದರೆ, ಗೌಣವಿಷಯ, ಅದರ ಹೆಸರನ್ನೂ ಎತ್ತದೆ -- ಚಿಕ್ಕ ಹುಡುಗಿಯರಂತೂ ಸರಿಯೆ, ಸೌಭಾಗ್ಯವತಿಯರು ಕೂಡ ಅಭ್ಯಾಸ ಮಾಡುವಂತೆ ಮೇಲುಪಂಕ್ತಿಪ್ರಾಯವಾದ ಮಹಿಲಾ ವಿದ್ಯಾಲಯದ ಕಾರ್ಯಾರಂಭವನ್ನು ಅವರು ಹೂಡಿದುದನ್ನು ನೋಡಿ ಎಲ್ಲರಿಗೂ ತುಂಬ ಸಹಾನುಭೂತಿಯುಂಟಾಗಬಹುದು. ಮನೆಯಲ್ಲಿ ಹೆಂಗಸರು ಹುಡುಗರು ತೊಂದರೆಯಲ್ಲಿವೆ, ಹೊರಗೆ ಮಳೆ, ಓಣಿಯಲ್ಲಿ ಕೆಸರು, ಹುಡುಗರು ಜ್ವರದಲ್ಲಿ ಬಿದ್ದಿರುವರು, ಮನೆಯಲ್ಲಿ ಎಷ್ಟೋ ಜಿನಸು ತರಬೇಕು, ಆದರೆ ನಮ್ಮ ಧೋಂಡೋಪಂತರು ಆ ಮಾತನ್ನೆಲ್ಲ ಒತ್ತಟ್ಟಿಗಿಟ್ಟು ತಮ್ಮ ಪ್ರಿಯ ಸಂಸ್ಥೆಯ ಕಡೆಗೆ ತೆರಳುವರು! ಮತ್ತು ಅವರು ಹೇಳುವುದೇನಂದರೆ, ಈ ಕಾರ್ಯದಲ್ಲಿ ತಾವು ಸೇರಿಕೊಳ್ಳಲು ಅದೇ ಕೆಲಸವನ್ನು ಕೈಕೊಳ್ಳುವದಕ್ಕಾಗಿ ಅವರು ಮತ್ತೆ ಹುಟ್ಟಿ ಬರುವಂತೆ ಜಗನ್ನಿಯಂತನನ್ನು ಕೇಳಿಕೊಳ್ಳುತ್ತಿರುವರಂತೆ!! ಶಾಬಾಸ್! ಇದಕ್ಕೆನ್ನಬೇಕು ನಿಷ್ಕಾಮಕರ್ಮಯೋಗವೆಂದು! "ಕರ್ಮಣ್ಯೇವಾಧಿಕಾರಸ್ತೇ" ಎಂದು ಶ್ರೀಕೃಷ್ಣನು ಹೇಳಿದುದಾದರೂ ಇದೇ ತತ್ವವು. ಸಂಸ್ಥೆಯಿದ್ದರೆ ಬರಲಿ, ಇಲ್ಲದಿದ್ದರೆ ಹೋಗಲಿ ಎಂದು ಕರ್ವೆ ಅವರು ತಮ್ಮ ಅಲ್ಪ ದ್ರವ್ಯವೆಲ್ಲವನ್ನೂ ಸಂಸ್ಥೆಗೆ ಕಡವೆಂದು ಒಪ್ಪಿಸಿದ್ದರು. ಗಾಡಗೀಳರೆಂಬವರು ತಮ್ಮ ಪತ್ನಿಯ ಅನುಮತಿಯಿಂದ ಆ ಸಂಸ್ಥೆಗೆ ಹತ್ತುಸಾವಿರ ರೂ ದಾನ ಮಾಡಿರುವರು. ಕೇಸರಿಯ ಸಂಪಾದಕರು "ಹಳೆಯ ಜನರಿಗೆ ಸ್ತ್ರೀಶಿಕ್ಷಣವು ಬೇಕಾಗಿದ್ದು, ಅದರ ದುಷ್ಪರಿಣಾಮ ಬೇಡ ಅವರು ಇಲ್ಲಿ ಬಂದು ನೋಡಲಿ!" ಎಂದೆಂದಿರುವರು. ರಾ|ರಾ| ಕೇಳಕರರ ಈ ಅಭಿಪ್ರಾಯವು ಸ್ಮರಣೀಯವಾಗಿದೆ.

ಆ ವೈದ್ಯರ ಅಭಿಪ್ರಾಯಗಳು, ಮದ್ಯಪಾನದಿಂದ ಹಲವು ಪ್ರಯೋಜನಗಳುಂಟೆಂದು ಅನೇಕರು ರೂಢಿಯಾಗಿ ಹೇಳಿಂದಿರುವ ಭ್ರಾಂತಿಗೆ ಲೇಶವಾದರೂ ಅವಕಾಶ ಕೊಡುವುದಿಲ್ಲವೆಂದು ಸ್ಪಷ್ಟ ಪಡಿಸುತ್ತದೆ-

( ಪ್ರಶ್ನೋತ್ತರಗಳು )

ಪ್ರಶ್ನೆ ೧ – ಗರ್ಭಿಣಿಗೆ ಮಾದಕ ಪದಾರ್ಥಗಳ ಸೇವನೆಯಿಂದ ಯಾವುದಾದರೂ ಗುಣವುಂಟೆ? ಆಕೆಗೆ ಸಂಭವಿಸಬಹುದಾದ ಕಷ್ಟ ನಷ್ಟಗಳನ್ನು ಈ ಮೂಲಕ ತಪ್ಪಿಸಿಕೊಳ್ಳಬಹುದೆ?

ಉತ್ತರ – ಪ್ರತಿಯೊಬ್ಬ ವೈದ್ಯರೂ ಇಲ್ಲವೆಂದು ಒತ್ತಿಹೇಳು ತ್ತಾರೆ

ಪ್ರ ೨— ನಮ್ಮ ದೇಶೀಯರು ಅಭಿಪ್ರಾಯಪಡುವಂತೆ ಮಾದಕ ಪದಾರ್ಥವು ಉಷ್ಣಕಾರಿಯೆ? ಬಾಣಂತಿಗೆ ಸ್ನಾನಮಾಡಿಸಿದ ನಂತರ ಮಗುವಿಗಾಗಲಿ ಮಗುವಿನ ತಾಯಿಗಾಗಲಿ ಮಾದಕಪದಾರ್ಥಗಳನ್ನು ಸೇವಿಸಲು ಕೊಟ್ಟರೆ ಶೈತ್ಯವನ್ನು ಹೋಗಲಾಡಿಸುತ್ತದೆಯೆಂದು ಹೇಳು ವರು, ಇದು ನಿಜವೆ?

ಉ.— ಒಂಭತ್ತು ಮಂದಿ 'ಇಲ್ಲ'ವೆಂದೂ ಒಬ್ಬರು 'ಗುಣವಿದ್ದ ರೂ ಕ್ಷಣಿಕವಾದದ್ದು' ಎಂತಲೂ ಅಭಿಪ್ರಾಯಪಡುವರು "ಶಿಶು ಗಳಿಗೆ ಮದ್ಯವನ್ನು ಸೇವಿಸುವದು ಹಾನಿಕರವಾದ ದುರಭ್ಯಾಸ" ಎಂದು ಒಬ್ಬರು ಹೇಳುವರು.

ಪ್ರ. ೩— ಮದ್ಯಪಾನ (ಸೇವನೆಯು) ಮಕ್ಕಳ ಬೆಳವಳಿಗೆಗೆ ಯಾವ ವಿಧದಲ್ಲಿಯಾದರೂ ಸಹಕಾರಿಯೆ?

ಉ —ಇವರೆಲ್ಲರೂ ಏಕಧ್ವನಿಯಿಂದ 'ಇಲ್ಲ'ವೆಂದು ನುಡಿಯು ವರು. "ಬೆಳವಣಿಗೆಯನ್ನು ಹೆಚ್ಚಿಸುವುದಕ್ಕೆ ಬದಲಾಗಿ ಕಡಿಮೆ ಮಾ ಡುವದೆಂದು ನಾಲ್ವರು ಅಭಿಪ್ರಾಯಪಟ್ಟಿದ್ದಾರೆ.

ಪ್ರ ೪- ಸುರಾಪಾನ (ಸೇವನೆಯು) ಮಾನಸಿಕ ಶಕ್ತಿಯನ್ನು ಚುರುಕು ಮಾಡುವದೆ?

ಉ — ಆರು ಮಂದಿ "ಇಲ್ಲ"ವೆಂದೂ ನಾಲ್ವರು "ಅಲ್ಪಕಾಲ ಬುದ್ಧಿಯನ್ನು ಚುರುಕುಮಾಡಿ ನಂತರ ಕ್ಷೀಣದಸೆಗೆ ತರುವರು"ಎಂದೂ ಒಬ್ಬರು "ಅನಾರೋಗ್ಯವಾದ ರೀತಿಯಲ್ಲಿ ಬುದ್ಧಿಯನ್ನು ಚುರುಕು ಮಾಡುವುದು ಕೆಡುಕು" ಎಂದೂ ಅಭಿಪ್ರಾಯಪಡುವರು.

ಪ್ರ ೫ — ಹೆಂಡ ಸಾರಾಯಿ ಮುಂತಾದ ಮಾದಕ ಪದಾರ್ಥಗಳು ಹಸಿವೆಯನ್ನುಂಟುಮಾಡಿ ಜೀರ್ಣಶಕ್ತಿಯನ್ನು ಹೆಚ್ಚಿಸುವುವೆ?

ಉತ್ತರವಾಗಿ— ಮೂವ್ವರು 'ಇಲ್ಲ'ವೆಂದೂ ನಾಲ್ವರು "ಮಾದಕ ಪದಾರ್ಥಗಳನ್ನು ಪಾನದಂತೆ ಉಪಯೋಗಿಸಿದರೆ 'ಇಲ್ಲ'ವೆಂದೂ ಇಬ್ಬರು "ಇಂತಹ ಪ್ರಯೋಜನವು ಬಹಳ ಅಪರೂಪ" ಎಂದೂ ಒಂಭತ್ತು ಮಂದಿ ' ಜೀರ್ಣಶಕ್ತಿಯನ್ನು ಕೆಡಿಸುವುದು " ಎಂದೂ ಅಭಿಪ್ರಾಯಪಟ್ಟಿದ್ದಾರೆ

ಪ್ರ ೬ ಮಾದಕ ಪದಾರ್ಥವು ದೇಹಾಯಾಸವನ್ನು ಆರೋಗ್ಯಕ್ಕನುಸಾರವಾಗಿ ಹೋಗಲಾಡಿಸುವದೆ?

ಉ — ಒಂಭತ್ತು ಮಂದಿ 'ಇಲ್ಲ'ವೆಂದೂ, ಇಬ್ಬರು 'ಅಲ್ಪ ಕಾಲದ ವರೆಗೆ ಮಾತ್ರ' ಎಂದೂ ಹೇಳುತ್ತಾರೆ

ಪ್ರ ೭— ಮಾದಕ ಪದಾರ್ಥ ಸೇವನೆಯು ಸುಖನಿದ್ರೆಯನ್ನು ಕೊಟ್ಟು ದೇಹಕ್ಕೆ ಆರೋಗ್ಯವನ್ನುಂಟುಮಾಡುವುದೇ?

ಉತ್ತರವಾಗಿ— ಹನ್ನೊಂದು ಮಂದಿಯೂ " ಇಲ್ಲ" ವೆಂದು ಹೇಳುತ್ತಾರೆ

ಪ್ರಶ್ನೆ ೮— ಪಾನಪದಾರ್ಥಗಳ ಸೇವನೆಯು ಮೈನೋವು, ನರಗಳ ನೋವು ಮುಂತಾದುವುಗಳನ್ನು ಹೋಗಲಾಡಿಸುವುದೇ?

ಉತ್ತರ— ಆರು ಮಂದಿ 'ಇಲ್ಲ'ವೆಂದೂ ನಾಲ್ವರು 'ಕ್ಷಣಿಕ ಪರಿಹಾರ'ವೆಂದೂ ಒಬ್ಬರು 'ಕೆಲವು ಸಂದರ್ಭಗಳಲ್ಲಿ ಮಾತ್ರ'ಎಂದೂ

ನಾಲ್ವರು 'ಸೇವನೆ ಮಾಡಿದ ನಂತರ ಬಾಧೆಯು ಹೆಚ್ಚುವದು' ಎಂದೂ ಅಭಿಪ್ರಾಯಪಡುತ್ತಾರೆ

ಪ್ರಶ್ನೆ ೯— ಮಲೇರಿಯಾ, ಕೆಮ್ಮಲು, ನೆಗಡಿ ಮುಂತಾದ ವ್ಯಾಧಿಗಳನ್ನು ಮಾದಕಪದಾರ್ಥಗಳ ಸೇವನೆಯು ತಡೆಯುವದೆ? ಅಥವಾ ಹೋಗಲಾಡಿಸುವುದೆ?

ಈ ವೈದ್ಯರೆಲ್ಲರೂ ಇಲ್ಲವೆಂದು ಹೇಳುತ್ತಾರೆ

ಪ್ರ. ೧೦-- ಮಾದಕ ಪದಾರ್ಥವು ಬಲಕಾರಿಯೆ? ಅದನ್ನು ಕ್ರಮವಾಗಿ ಸೇವಿಸುತ್ತಾ ಬಂದರೆ ಶರೀರವು ಬಲಗೊಳ್ಳುವುದೆ?

ಈ ಹನ್ನೊಂದು ಮಂದಿಯೂ "ಅದು ಬಲಕಾರಿಯೂ ಅಲ್ಲ, ಶರೀರಕ್ಕೆ ಶಕ್ತಿಯನ್ನು ಹೆಚ್ಚಿಸುವುದೂ ಅಲ್ಲ" ಎಂಬ ಒಂದೇ ವಿಧವಾದ ಅಭಿಪ್ರಾಯವನ್ನು ಕೊಡುತ್ತಾರೆ.

(Published at the request of the Bangalore City Municipality Temperance and Social Purity Committee.)

# ಸ್ವೀಕಾರ ಮತ್ತು ಸದಭಿಪ್ರಾಯ

ಧನಕೀರ್ತಿ ನಾಟಕ — ಶ್ರೀಯುತ ಎಸ್. ಶಾಂತರಾಜಯ್ಯನವರಿಂದ ರಚಿಸಲ್ಪಟ್ಟು, ಶ್ರೀಯುತ ನೆಲ್ಲಿಕಾರು ಚಂದಪ್ಪ ಶೆಟ್ಟರು, ಕಾರ್ಕಳ (ದ. ಕ.) ಅವರಿಂದ ಪ್ರಕಾಶಪಡಿಸಲ್ಪಟ್ಟಿದೆ. ಉಡುಪಿಯ ಸದಾನಂದ ಮುದ್ರಾಲಯದ ಮುದ್ದಾದ ಮುದ್ರಣ, ಕ್ರೌನ್ ಅಷ್ಟಪತ್ರದ ೭೫ ಪುಟಗಳು, ಕ್ರಯ ೦—೬—೦ (ಪ್ರಕಾಶಕರಿಂದಲೇ ಕಳುಹಲ್ಪಟ್ಟಿದೆ) ಈ ಪುಸ್ತಕವು ಹೆಚ್ಚುಕಡಿಮೆ ಚಂದ್ರಹಾಸನ ಕಥೆಯನ್ನೇ ಹೋಲುತ್ತಿರುವುದಲ್ಲದೆ, ಸ್ತ್ರೀಬಾಲರೂ ಓದಿ ಕೇಳಲನುವಾಗುವಂತೆಯೂ, ನಾಟಕಾಭಿನಯಕ್ಕೆ ಅನುಕೂಲಿಸುವಂತೆಯೂ ಪದಪದ್ಯಗಳೊಡನೆ ರಚಿತವಾಗಿದೆ. ಪ್ರತಿಯೊಂದು ಪದ-ಪದ್ಯ-ವಾಕ್ಯಗಳಲ್ಲಿಯೂ ಉತ್ಕೃಷ್ಟವಾದ ಭಗವದ್ಭಕ್ತಿ, ವೈರಾಗ್ಯ—ನೀತಿತತ್ವಗಳನ್ನು ಬೋಧಿಸುವುದರಿಂದ ನಮ್ಮ ಸೋದರಿಯರೆಲ್ಲರೂ ತರಿಸಿನೋಡಲೆಂದಾಶಿಸುತ್ತೇವೆ.

---

೨ ಮದ್ರಾಸ ಸದರ್ನ ಮರಾಠಾ ರೇಲ್ವೆ ಕಂಪನಿಯ ನಿಯಮಗಳೂ ಮತ್ತು ಪ್ರವಾಸಿಕರ ಹಕ್ಕುಗಳೂ — ಈ ಪುಸ್ತಕವು ರಾ|| ರಾ|| ವಿಶ್ವನಾಥರಾವ ಜಾವದೇಕರ ಬಿ. ಏ., ಎಲ್‌ಎಲ್ ಬೀ. ವಕೀಲ ಧುಳೆ, ಇವರ ಮಹಾರಾಷ್ಟ್ರ ಪುಸ್ತಕವನ್ನವಲಂಬಿಸಿ ಕನ್ನಡಕ್ಕೆ ಪರಿವರ್ತಿಸಲ್ಪಟ್ಟಂತೆ ತಿಳಿಯುತ್ತದೆ. ಪುಸ್ತಕವು ಶೇವಡೆ ಟೇಂಬೆ ಕಂಪನಿ ಹುಬ್ಬಳ್ಳಿ ಅವರಿಂದ ಪ್ರಚುರಪಡಿಸಲ್ಪಟ್ಟಿದೆ.

ಪ್ರಯಾಣಿಕರು ರೈಲಲ್ಲಿ ಅಡಿಗಡಿಗೆ ಪಡುತ್ತಿರುವ ಕಷ್ಟನಷ್ಟಗಳನ್ನು ನೋಡಿ, ಅವರ ಹಕ್ಕು ಬಾಧ್ಯತೆಗಳೆಷ್ಟಿರುವವೆಂಬುದನ್ನೂ ರೇಲ್ವೆಯವರ ಜವಾಬ್ದಾರಿಯು ಎಷ್ಟು ಮಟ್ಟಿಗಿರವುದೆಂಬುದನ್ನೂ ತಿಳಿಯಪಡಿಸಿ ರೇಲ್ವೆ ಇಲಾಖೆಯು ಜನರಿಗೆ ಮಾಡುತ್ತಿರುವ ಉಪಕಾರವನ್ನು ಚೆನ್ನಾಗಿ ವಿವರಿಸುವ ಈ ಪುಸ್ತಕವು ಪ್ರತಿಯೊಬ್ಬ

ಪ್ರಯಾಣಿಕನಿಗೂ ಸಂಗ್ರಾಹ್ಯವಾಗಿದೆ. ಅಪೇಕ್ಷಕರು ಪ್ರಕಾಶಕರಿಗೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿಯಬಹುದು

---

೩ ಸಾದೀ ಸುಭಾಷಿತ — ಶ್ರೀಯುತ ಕಾವ್ಯಾನಂದ ನರಸಿಂಹಾಚಾರ್ಯ ಪುಣೇಕರ ಇವರು ಫಾರಸಿಭಾಷೆಯಿಂದ ಕನ್ನಡಕ್ಕೆ ಪರಿವರ್ತಿಸಿರುವರು. ಡೆಮ್ಮಿ ಅಷ್ಟಪತ್ರದ ಆಕಾರದ ೫೬ ಪುಟಗಳುಳ್ಳ ಇದರ ಕ್ರಯ ೦—೬—೦

ಈ ಪುಸ್ತಕವು ಎಂಟು ಪ್ರಕರಣಗಳನ್ನೂ ಸುಮಾರು ೨೨೪ ನೀತಿ ವಾಕ್ಯಗಳನ್ನೂ ಒಳಕೊಂಡಿರುವುದ ಇದರಲ್ಲಿರುವ ಪ್ರತಿಯೊಂದು ವಾಕ್ಯವೂ ಸಂಗ್ರಾಹ್ಯವಾಗಿರುವದು ಅದರಲ್ಲಿಯೂ ಭಾಷಾಂತರಕಾರರ ವಿಜ್ಞಾಪನೆ, ಮೂಲಗ್ರಂಥಕಾರರ ಪ್ರಸ್ತಾವನೆ, ಗ್ರಂಥರಚನೆಯ ಕಾರಣ ಈ ಮೂರು ಭಾಗಗಳೂ ಅವಶ್ಯವಾಗಿ ನೋಡತಕ್ಕಂತಿರುವುವು ಭಾಷಾಂತರಕಾರರು, ಸಾದಿಯತತ್ವಗಳು ವಾಚಕರ ಮನಸ್ಸಿನಲ್ಲಿ ಚನ್ನಾಗಿ ನಾಟುವಂತೆಯೂ ನಮ್ಮ ಆರ್ಯರ ಹಿತಸೂಚನೆಗಳು ಹೃದಯಂಗಮವಾಗುವಂತೆಯೂ ಅಲ್ಲಲ್ಲಿಗೆ ನೀತಿಪರವಾದ ಸಂಸ್ಕೃತ ಶ್ಲೋಕಗಳನ್ನೂ ಟಿಪ್ಪಣಿಗಳನ್ನೂ ಸೇರಿಸಿರುವುದು ಗ್ರಂಥಕ್ಕೆ ಮತ್ತಷ್ಟು ಪ್ರಾಶಸ್ತ್ಯವನ್ನುಂಟು ಮಾಡಿರುವುದು ಈ ಗ್ರಂಥಕ್ಕೆ ಧಾರವಾಡ ಕ. ವಿ. ವರ್ಧಕ ಸಂಘದಿಂದ ೩೦ರೂ. ಬಹುಮಾನವು ದೊರೆತಿರುವದೆಂದಬಳಿಕ ಇದರ ಪ್ರಾಶಸ್ತ್ಯವನ್ನು ಕುರಿತು ಹೆಚ್ಚು ಬರೆಯಬೇಕಾಗಿಲ್ಲ ಈ ಪುಸ್ತಕವನ್ನು ವಿಶ್ವಾಸಗೌರವದಿಂದ ಕಳುಹಿದುದಕ್ಕಾಗಿ ಗ್ರಂಥಪ್ರಕಾಶಕರ ಕಡೆಯವರಾದ ಶ್ರೀಯುತ ಚನ್ನಪ್ಪಾ ಫಕೀರಪ್ಪಾ ಪಾಟೀಲ ( ಸ್ಕೂಲ್ ಮಾಸ್ತರ ಚಚಡಿ, ಕಿತ್ತೂರು ಪೋಸ್ಟ ) ಇವರಿಗೂ-ಗ್ರಂಥಕಾರರಿಗೂ ನಮ್ಮ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಸಮರ್ಪಿಸಿರುವೆವು.

---

೪ ವಿದ್ಯಾಭಿವೃದ್ಧಿ.—(ಭಾರತೀ ವಿಲಾಸ ಗ್ರಂಥಮಾಲಾ ನಂ. ೪ ಡೆಮ್ಮಿ ಅಷ್ಟಪತ್ರದ ಆಕಾರದ ೨೦ ಪುಟಗಳು, ಕ್ರಯ ೦-೪-೦)

ಗ್ರಂಥಕರ್ತರು ಶ್ರೀಯುತ ಪಂಡಿತರು, ಕೆ. ರಾಜಗೋಪಾಲ ಚಕ್ರವರ್ತಿ ಸರಳಕವಿಸೂರಿ, ಆ ಟ್ರಾನ್ಸ್ಲೇಟರ್, ವಿದ್ಯಾಖಾತೆ, ಬೆಂಗಳೂರ ಇವರು.

ಈ ಪುಸ್ತಕವು ಸುಲಭರೀತಿಯಲ್ಲಿ, ವಿದ್ಯಾಭಿವೃದ್ಧಿ, ವಾಙ್ಮಯಾಭಿವೃದ್ಧಿಗಳಿಗೆ ಬೇಕಾದ ಅಗತ್ಯ ವಿಚಾರಗಳನ್ನು ಪ್ರತಿಪಾದಿಸುತ್ತಿರುವದರಿಂದ ಕನ್ನಡಿಗರೆಲ್ಲರೂ ನೋಡಿ ತಿಳಿಯತಕ್ಕುದಾಗಿದೆ ಅದಲ್ಲದೆ ಭಾಷಾಜನನಿಯ ಸದ್ಯಸ್ಥಿತಿಯನ್ನು ಕುರಿತು ತೋರಿಸಿರುವ ಪರಿತಾಪವೂ, ನೂತನ ಗ್ರಂಥ ಲೇಖಕರಿಗೆ ಕೊಟ್ಟಿರುವ ಸೂಚನೆಗಳೂ ಪುನಃ ಪುನಃ ನೋಡತಕ್ಕಂತಿವೆ

---

೫ ಸಾಧುಚರಿತ ( ಪ್ರಥಮ ಭಾಗ ) ಕ್ರೌನ್ ಅಷ್ಟಪತ್ರದ ಆಕಾರದ ೭೭ ಪುಟಗಳುಳ್ಳ ಈ ಪುಸ್ತಕವು, ಬೆಂಗಳೂರ ಐರಿಷ್ ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟು ಪ್ರಕಟವಾಗಿರುವುದು ಇದರ ಕ್ರಯ ಕೇವಲ ಎರಡೂವರೆ ಆಣೆಗಳು ಮಾತ್ರ (ಅತ್ಯಂತ ಸುಲಭ ಕ್ರಯ)

ಈ ಪುಸ್ತಕವೂ ಮೇಲೆ ಹೇಳಿದ ಗ್ರಂಥಕರ್ತರಿಂದಲೇ ಬರೆಯಲ್ಪಟ್ಟದಾಗಿದೆ ನಾಲ್ಕನೆ ತರಗತಿಯ ಬಾಲ-ಬಾಲಿಕೆಯರಿಗೆ ಬೋಧೆಯಾಗುವಂತೆ ಸುಲಭಶೈಲಿಯಲ್ಲಿ ಬರೆದುದಾಗಿದೆ ಇದರಲ್ಲಿ ೧೪ ಪ್ರಕರಣಗಳಿದ್ದು ಒಂದೊಂದು ಪ್ರಕರಣದಲ್ಲಿಯೂ ನಮ್ಮ ಭಾರತ ಮಹನೀಯರ ಪವಿತ್ರ ಜೀವಿತಗಳನ್ನು ಉದಹರಿಸಿ-ನೀತಿಯನ್ನು ಬೋಧಿಸುತ್ತಿರುವುದರಿಂದ ವಾಚಕವರ್ಗಕ್ಕೆ ಉತ್ಸಾಹವನ್ನುಂಟುಮಾಡುವಂತಿದೆ ಇತಿಹಾಸ-ಪುರಾಣಗಳ ಸಾರವನ್ನು ಸಂಗ್ರಹಿಸಿ ಉತ್ತಮವಿಚಾರಗಳನ್ನು ಪ್ರತಿಪಾದಿಸುವ ಇಂತಹ ಗ್ರಂಥಗಳನ್ನು ಓದುವುದರಿಂದ ನಮ್ಮ ಬಾಲ-ಬಾಲೆಯರಿಗೆ ನಮ್ಮ ದೇಶದ ವಿಷಯದಲ್ಲಿ ಅಭಿಮಾನವೂ, ನಮ್ಮ ಆರ್ಯರ ವಿಷಯದಲ್ಲಿ ನಿಜವಾದ ಭಕ್ತಿಗೌರವಗಳೂ, ತಮ್ಮ ತಮ್ಮ ಮತಗಳಲ್ಲಿ ದೃಢವಿಶ್ವಾಸವೂ ಉಂಟಾಗಿ, ಸತ್ಯ-ದಯೆ, ದಾಕ್ಷಿಣ್ಯ, ನಯ, ವಿನಯ, ಶ್ರದ್ಧೆ, ಉತ್ಸಾಹ, ಸ್ಥಿರಸಂಕಲ್ಪ, ಸತತೋ

ದ್ಯಮಗಳೇ ಮೊದಲಾದ ಸದ್ಗುಣಗಳೂ ಉಂಟಾಗುವವೆಂದು ಧಾರಾಳವಾಗಿ ಹೇಳಬಲ್ಲೆವು. ಘನತೆ ಹೊಂದಿದ ನಮ್ಮ ವಿದ್ಯಾಭ್ಯಾಸದ ಇಲಾಖೆಯವರು ಈ ಪುಸ್ತಕವನ್ನು ಬಾಲ್ಯ ವಿದ್ಯಾಭ್ಯಾಸದ ಪಾಠ ಪುಸ್ತಕವಾಗಿ ನಿಯಮಿಸಿ, ನಮ್ಮಲ್ಲಿ ನೈತಿಕ ಶಿಕ್ಷಣವನ್ನು ವಿಶೇಷವಾಗಿ ಪ್ರೋತ್ಸಾಹಿಸುವವರಾದಾರೆಂದು ನಂಬಿರುವೆವು

---

೬ ಪಂಯೋ(?)ದ್ಧಾರಕಳಾದ ಸಾಮಾಜಿಕ ಸಾವಿತ್ರಿ-(ಶ್ರೀ ಬಲಭೀಮವಾಜನಾಲಯ ಗ್ರಂಥಮಾಲಾ ಪುಷ್ಪ ( ) ಗ್ರಂಥಕರ್ತರು ಮತ್ತು ಪ್ರಕಾಶಕರು ಶ್ರೀಯುತ ಸದಾಶಿವ ದೇಶಪಾಂಡೆ, ಮಧುಪುರ (ಮದವಾಲ) ಪ್ರೇಷಕರು, ಶ್ರೀಯುತ, ಕೆ ಜಿ. ಬಿಜಾಪುರಕರ, ಮದವಾಲ ಇವರು ಡಮ್ಮಿ ೧೬ರ ಆಕಾರದ ೪೧ + ೪ ಪುಟಗಳು ಕ್ರಯ ೦-೨-೦ ಇದೊಂದು ಸಾಮಾಜಿಕ ಚಿತ್ರವನ್ನು ತೋರಿಸುವ ಕಲ್ಪಿತ ಕಾದಂಬರಿ ವಿದ್ಯಾವಿಹೀನರು ಪಶುಸಮಾನರೆಂಬುವದನ್ನೂ, ವಿದ್ಯಾವತಿಸ್ತ್ರೀಯರು ತಮ್ಮ ತಮ್ಮ ಪುರುಷರು ವಿದ್ಯಾವಿಹೀನರಾಗಿ ದುಸ್ಸಹವಾಸದಲ್ಲಿದ್ದರೂ ಅವರನ್ನು ಸನ್ಮಾರ್ಗಕ್ಕೆ ತಿರುಗಿಸಿ, ವಿದ್ಯಾವಂತರಾಗುವಂತೆ ಮಾಡಲು ಎಷ್ಟು ಪಾಡುಪಡುವರೆಂಬದನ್ನೂ ಇದರಲ್ಲಿ ಸಾಧ್ಯವಾದ ಮಟ್ಟಿಗೂ ವಾಚಕರ ಮನಸ್ಸಿಗ ಹಿಡಿಯುವ ರೀತಿಯಲ್ಲಿ ಅಡಕಮಾಡಿ ಬರೆದಿರುವರು ಲೇಖಕರ ಪ್ರಯತ್ನವು ಇದೇ ಪ್ರಥಮವಾಗಿರುವದರಿಂದ ಕನ್ನಡಿಗರ ಪ್ರೋತ್ಸಾಹಕ್ಕೆ ಅರ್ಹವಾದುದಾಗಿದೆ

---

೭ ಶ್ರೀ ಶಾರದಾ ಸ್ತ್ರೀಸಮಾಜದ ೪ನೆ ವರ್ಷದ ರಿಪೋರ್ಟು-ಈ ಸಮಾಜದ ವಿಷಯವಾಗಿ ಅನೇಕ ಪತ್ರಿಕೆಗಳು ಶ್ಲಾಘಿಸುತ್ತಿರುವದರಿಂದ ನಾವಿಲ್ಲಿ ವಿಶೇಷವಾಗಿ ಹೇಳಬೇಕಾಗಿಲ್ಲ ಈ ಸಮಾಜದ ಅಧ್ಯಕ್ಷರು ಶ್ರೀ ಲಕ್ಷ್ಮೀಪ್ರಸಾದ ಪಾತ್ರರೂ ವ್ಯವಹಾರಜ್ಞರೂ, ಘನತೆಹೊಂದಿದ ಮನೆತನದವರೂ ಆಗಿರುವರು ಉಪಾಧ್ಯಕ್ಷರು ವಿಶ್ವವಿದ್ಯಾಲಯದ ಪಟ್ಟಪರೀಕ್ಷೆಗಳಲ್ಲಿ ಜಯವನ್ನು ಸಂಪಾದಿಸಿರುವದರಿಂದ ಶಾರದಾ

ಪ್ರಸಾದ ಪಾತ್ರರಾದ ಪೂರ್ಣವಿದ್ಯಾವತಿಯರೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಸಮಾಜದ ಕಾರ್ಯದರ್ಶಿನಿಯರಾದ ಕಲ್ಯಾಣಮ್ಮನವರು, ಶ್ರಮಸಹಿಷ್ಣುತೆ, ಉದ್ಯೋಗತತ್ಪರತೆ, ದೇಶಭಾಷಾಭಿಮಾನ, ಸಮಾಜಸೇವೆಗಳಲ್ಲಿ ಅಗ್ರಗಣ್ಯೆಯರಾಗಿರುವರಲ್ಲದೆ, ಕರ್ಣಾಟಕಾಂಧ್ರ ಸಂಸ್ಕೃತಾಂಗ್ಲ ಭಾಷೆಗಳಲ್ಲಿ ಪರಿಶ್ರಮವುಳ್ಳವರೂ ದೂರದರ್ಶಿನಿಯರೂ ಆಗಿ, ಸಮಾಜದ ಅಭ್ಯುದಯ ಕಾರ್ಯದಲ್ಲಿಯೇ ತಮ್ಮ ತನು ಮನೋ ಧನಗಳನ್ನು ವಿನಿಯೋಗಿಸುತ್ತಿರುವರು. ಇಂತಹ ಸಮರ್ಥ ಮಹಿಳಾಮಣಿಯರಿಂದ ನಡೆಸಲ್ಪಡುವ ಸಮಾಜವು ಉತ್ತಮಸ್ಥಿತಿಯಲ್ಲಿರಲು ಏನೂ ಸಂಶಯಪಡಬೇಕಾಗಿಲ್ಲ.

ಈ ಸಮಾಜದ ಈ ವರ್ಷದ ವರದಿಯನ್ನು ನಾವು ಸಾವಧಾನದಿಂದ ನೋಡಿದೆವು. ಸಮಾಜದ ಉದ್ದೇಶ—ಕಾರ್ಯಕ್ರಮ, ಆಯ, ವ್ಯಯ, ಪ್ರಯತ್ನಗಳೇ ಮೊದಲಾದ ವಿಚಾರಗಳೆಲ್ಲವೂ ತಕ್ಕಮಟ್ಟಿಗೆ ತೃಪ್ತಿಕರವಾಗಿವೆ. ಆದರೆ, ವರದಿಯ ೧೦ನೆ ಪುಟದ ೮ನೆ ಕಟ್ಟಡದ ವಿಷಯಕವಾದ ವಾಕ್ಯಗಳಲ್ಲಿ,- 'ಹೊಸಕಟ್ಟಡವಾದನಂತರ ಟೆನ್ನಿಸ್-ಬ್ಯಾಡ್ಮಿಂಟನ್ ಮೊದಲಾದ ಆಟಗಳನ್ನು ಏರ್ಪಡಿಸಬೇಕೆಂಬುದು ನಮ್ಮಗಳ ಉದ್ದೇಶವಾಗಿರುವದರಿಂದ' ಎಂದೂ,-'ಹೊಸಕಟ್ಟಡವು ತಯಾರಾದ ನಂತರ ಮೆಂಬರುಗಳ ವ್ಯಾಯಾಮಕ್ಕನುಕೂಲವನ್ನು ಕಲ್ಪಿಸುವುದಲ್ಲದೆ ......'' ಎಂಬೀ ಎರಡು ವಾಕ್ಯಗಳು ನಮ್ಮ ಮನಸ್ಸಿಗೆ ತುಂಬಾ ಭೀತಿಯನ್ನೂ ವ್ಯಾಕುಲವನ್ನೂ ಉಂಟುಮಾಡಿರುವುವು. ದೇಶೋದ್ಧರಣಕಾರ್ಯವು ತೃಪ್ತಿಕರವಾಗಿ ನಡೆಯಬೇಕಾದರೆ, ಆ ಆ ದೇಶದ ಪರಿಸ್ಥಿತಿಗೆ ಅನುಕೂಲವಾಗಿಯೂ, ದೇಶೀಯರ ಮತ-ಧರ್ಮ ಆಚರಣಗಳಿಗೆ ಹಿತಕಾರಿಯಾಗಿಯೂ ಇರುವ ಮಾರ್ಗವನ್ನೇ ಅರಿಸಬೇಕಲ್ಲದೆ ಅವುಗಳಿಗೆ ಕಲಂಕವುಂಟಾಗುವ ದಾರಿಯನ್ನು ಹಿಡಿಯಬಾರದೆಂದು ಆ ನಮ್ಮ ಧರ್ಮಭಗಿನಿಯರಲ್ಲಿ ಸವಿನಯವಾಗಿ ನಿವೇದಿಸಿರುವೆವು. ಏಕೆಂದರೆ— ಶಾರದಾ ಸಮಾಜವು ಕರ್ಣಾಟ ಮಹಿಳೆಯರ ಅಭ್ಯುದಯಕ್ಕಾಗಿಯೇ ಹುಟ್ಟಿರುವುದು. ಮಹಿಳಾಭ್ಯು

ದಯುವಾಗಬೇಕಾದರೆ ನಮಗೆ ಉಚಿತವಾದ ನೀತಿಶಿಕ್ಷಣ, ಗೃಹಶಿಕ್ಷಣಗಳ ಪರವಾದ ಆಟಪಾಟಗಳೇ ಅವಶ್ಯಕವಾಗಿವೆ. ಅದನ್ನು ಬಿಟ್ಟು, ಕೇವಲ ಪಾಶ್ಚಾತ್ಯ ಪದ್ಧತಿಯನ್ನು ನಮ್ಮವರ ಆಚರಣದಲ್ಲಿ ತರಬೇಕೆಂದರೆ ಶುಭಕಾರಿಯಲ್ಲ. ಇದರಿಂದ ನಮ್ಮ ಮಹಿಳೆಯರ ಗೃಹಕಾರ್ಯಕ್ಕಾಗಲೀ ಸಮಾಜಸೇವೆಗಾಗಲೀ ಯಾವದೇ ಬಗೆಯ ಉಪಯೋಗವಿರುವದೆಂದು ಹೇಳುವಂತಿಲ್ಲ. ನಮ್ಮ ಮಹಿಳೆಯರ ದೇಹದಾರ್ಢ್ಯಕ್ಕೆ ಇವು ಅವಶ್ಯಕವಾದ ಅಂಗಸಾಧನೆ-ವ್ಯಾಯಾಮಗಳೆಂದಾಗಲೀ ಯಾರೂ ಹೇಳುವವರಾಗಿಲ್ಲ. ಏಕೆಂದರೆ ನಮ್ಮ ಮಹಿಳೆಯರು, ತಾವು ಕೈಕೊಂಡಿರುವ ಗೃಹರಾಜ್ಯ ನಿರ್ವಾಹಕಾರ್ಯಗಳಲ್ಲಿ ಒಂದೊಂದು ಚಿಲ್ಲರೆ ಕೆಲಸವು ಕೂಡ ಮೇಲೆಹೇಳಿದ ವ್ಯಾಯಾಮಕ್ಕೂ ಮಿಗಿಲಾದ ಅಂಗಸಾಧನೆಯ ಬಲವನ್ನುಂಟುಮಾಡುತ್ತಿದೆ. ಅಂತಹದರಲ್ಲಿ ಅವರು ಬೆಳಗಾದುದು ಮೊದಲು ರಾತ್ರಿ ಮಲಗುವವರೆಗೆ ಮಾಡುವ ಸಣ್ಣ-ದೊಡ್ಡ ಕೆಲಸಗಳೆಲ್ಲವೂ ಸೇರಿದರೆ ಅವರಿಗೆ ದಿನವೊಂದಕ್ಕೆ ಎಷ್ಟುಮಟ್ಟಿಗೆ ಅಂಗಸಾಧನೆಯಾಗಿರಬಹುದೆಂದು ಯೋಚಿಸಬೇಕಾಗಿದೆ. ಹೀಗಿರುವ ನಮ್ಮ ಅಂಗನೆಯರಿಗೆ ಮತ್ತೆ ಬೇರೆ ಅಂಗಸಾಧನೆಯ ಅವಶ್ಯಕತೆಯೇನು? ಬೇಸತ್ತ ಮನಸ್ಸಿಗೆ ವಿಶ್ರಾಂತಿಗಾಗಿ ಎಂದರೆ ವಿಶ್ರಾಂತಿಯು ಇದಲ್ಲ. ಸಮಾಜದಲ್ಲಿ ನಡೆಯುವ ಇತರ ಸದಸದ್ವಿಚಾರಗಳೂ-ದೈವಭಕ್ತಿಪರವಾದ ಗೀತೆಗಳೂ, ದೇಶಾಭಿಮಾನ, ಕರ್ತವ್ಯದಕ್ಷತೆಗಳನ್ನುಂಟುಮಾಡುವ ದೇಶಭಕ್ತರ ವ್ಯಾಖ್ಯಾನಗಳೂ ಸಾಕು-ಬೇಕಾದಷ್ಟು ವಿಶ್ರಾಂತಿ, ಮನೋಲ್ಲಾಸಗಳನ್ನುಂಟುಮಾಡುವವು. ಅತ್ತ ಗೃಹಕೃತ್ಯದ ಮೇಲಿನ ಅಭಿಮಾನವನ್ನು ತಪ್ಪಿಸಿ, ಇತ್ತ ಗುರುದೈವಭಕ್ತಿ, ಸ್ವರೂಪಜ್ಞಾನಗಳನ್ನು ತಪ್ಪಿಸಿ, ಪುರುಷವರ್ಗಕ್ಕೆ ಸಮಾನರಾಗಬೇಕೆಂದು ಸ್ಪರ್ಧಿಸುವಂತೆ ಮಾಡುವ ಇಂತಹ ವಿದೇಶೀ ಆಚರಣಗಳು ಮಾತ್ರ ನಮ್ಮ ಅಂಗನೆಯರ ಪಾಲಿಗೆ ಬಾರದಂತೆ ಶಾರದಾ ಸ್ತ್ರೀಸಮಾಜವು ನೋಡಿಕೊಂಡರೆ ಎಷ್ಟೋ ಉಪಕಾರ ಮಾಡಿದಂತಾಗುತ್ತದೆ. ವ್ಯಾಯಾಮ, ಅಂಗಸಾಧನೆಗಳೆಂಬ ವಿಹಾರ, ವಿಪರೀತ ನರ್ತನಗಳು, ನಮ್ಮ

ಆರ್ಯ ಮಹಿಳಾ ಮಂಡಲಿಯಿಂದ ನುಸುಳಿಹೋಗಿಯೂ, ಶ್ರೀಮಂತಿಕೆಯ ಅಟ್ಟಹಾಸದಿಂದ ಸ್ತ್ರೀಪ್ರಕೃತಿ ಧರ್ಮವನ್ನು ತೊರೆದೂ, ವಿಪರೀತ ಪ್ರಜ್ಞೆಯಿಂದ ವಸ್ತುವಿಚಾರವಿಮರ್ಶೆಯಿಲ್ಲದೆ ವ್ಯಾಖ್ಯಾನ ಮಾಡಿಯೂ ಪ್ರಸಿದ್ಧಿಗೆ ಬರಬೇಕೆಂದಿರುವವರ ಪಾಲಿಗೆ ಮಾತ್ರವೇ ಮೋಜಿನ ಆಟಪಾಟಗಳನ್ನೊಪ್ಪಿಸಿ, ಶಾರದಾ ಸಮಾಜವು ತನ್ನ ಸದಸ್ಯ (ಮೆಂಬರ)ರಾಗಿರುವ ಮಹಿಳಾ ಮಣಿಯರ ಮಾನಸಿಕ ಶಕ್ತಿಯನ್ನು ಸದಸದ್ವಿಚಾರದಿಂದ ಬೆಳೆಯಿಸುವಂತೆ ಕೃಪೆಮಾಡಲೆಂದೂ, ಈ ಸಮಾಜದ ಮಾದರಿಯಲ್ಲಿ ಐಕ್ಯಸಮಾಜವು ಅನುಕರಿಸುವ. ಹಾಗೆಂದೂ ಹಾರ ಯಿಸುವೆವು

ಸಂ ನಂ

---

(ಪತ್ರವು)

ನಂಬರ ೧೨೫ ) ಮುದ್ದೇಬಿಹಾಳ
ವಿದ್ಯಾರ್ಥಿಗಳ ಗ್ರಂಥಾಲಯ. ) ತಾ ೨೫ ೧೨-೧೬

ಶ್ರೀಮತಿ ದೇವಿ ತಿರುಮಲಾಂಬಾರವರು ಇವರ ಪಾದಸನ್ನಿಧಾನಕ್ಕೆ ಕಾರ್ಯದರ್ಶಿಯ ವಿಜ್ಞಾಪನೆಗಳು

ಶ್ರೀಮತ್ಪೂಜ್ಯಸ್ಥಾನವಾದ ಮಾತೃಮಂದಿರಕ್ಕೆ ವಿದ್ಯಾರ್ಥಿವರ್ಗದ ಬಾಲಕರಾದ ನಾವು ಮಾತೃವಾತ್ಸಲ್ಯದ ಕುರುಹೆಂದು ಅಲ್ಪಸೇವೆ (೧ರೂಪಾಯಿ)ಯನ್ನು ಕಾಣಿಕೆಯಾಗಿ ಅರ್ಪಿಸಿರುವೆವು ದಯವಿಟ್ಟು ಸ್ವೀಕರಿಸಬೇಕು

ಮಾತೃಮಂದಿರದ ಉತ್ಕರ್ಷವನ್ನು ಕುರಿತು ಚಿಂತಿಸುವ ಮಾತೃಮಂದಿರದ ಓರ್ವ ಬಾಲಕ,

ವ. ಮ ಇಟ್ಟಗಿ
ಕಾರ್ಯದರ್ಶಿ.

### ಶಾಲಾ ಮುದ್ದೇಬಿಹಾಳ

# ವಿದ್ಯಾರ್ಥಿಗಳ ಗ್ರಂಥಾಲಯದ

## ದ್ವಿತೀಯ ವಾರ್ಷಿಕ ವೃತ್ತವು

( ೧೯೧೬—೧೯೧೭. )

ಮಹಾನುಭಾವರುಗಳೇ!

ವಿದ್ಯಾರ್ಥಿಗಳ ಗ್ರಂಥಾಲಯದ ೨ನೆ ವರ್ಷದ ವೃತ್ತವನ್ನು ಹಿರಿಯರೂ ಪೂಜ್ಯರೂ ಆದ ತಮ್ಮ ಸನ್ನಿಧಿಯಲ್ಲಿ ಹೇಳಲು ಯತ್ನಿಸುವೆವು

ವಿದ್ಯಾರ್ಥಿಗಳ ಗ್ರಂಥಾಲಯವು, ಹಳೇ ಹೊಸ ವಿದ್ಯಾರ್ಥಿಗಳ ಸಂಘಶಕ್ತಿಯಿಂದೆ ಕೂಡಿಕೊಂಡು ಕನ್ನಡಭಾಷೆಯ ಮತ್ತು ವಿದ್ಯಾರ್ಥಿಗಳ ಸೇವೆಗಳಿಗಾಗಿ ಜನನ ಹೊಂದಿ ಮಹಾಜನರ ಆಶೀರ್ವಾದ-ಅನುಗ್ರಹಗಳಿಂದ ಸರಿಯಾಗಿ ನಾಗಿರುವದು

ವಿದ್ಯಾರ್ಥಿಗಳ ಸಮೂಹಶಕ್ತಿಯಿಂದೆ ಪ್ರಾರಂಭಕ್ಕೆ ೨೫ ಪುಸ್ತಕಗಳಿಂದ ಕೂಡಿ ಈ ಲಾಯಬ್ರರಿಯು ತಾರೀಖು ೨೦-೬-೧೫ ನೇ ದಿವಸ ಜನನ ಹೊಂದಿತು. ಕಾರ್ಯದರ್ಶಿಗಳಾಗಿದ್ದ ಮ|| ಗುಂಡೋ ನರಹರ ದೇಸಾಯಿ, ಮ|| ವೀರಪ್ಪಾ ಕೂಡ್ಲಪ್ಪಾ ನಾವದಗಿ-ಇವರ ಸ್ತುತ್ಯ ಪ್ರಯತ್ನದಿಂದ ಗ್ರಂಥಾಲಯವು ಮೂರ್ತಸ್ವರೂಪವನ್ನು ಹೊಂದಿತು

ಅಧ್ಯಕ್ಷ— ಶ್ರೀ ಮಲ್ಲಪ್ಪಾ ಬಸಪ್ಪಾ ಕೊರಬು, ಉಪಾಧ್ಯಕ್ಷ ಶ್ರೀ|| ವೆಂಕಟೇಶ ಭೀಮಾಚಾರ್ಯ ಗುಡಿ —

ಕೋಶಾಧ್ಯಕ್ಷ— ಶ್ರೀ. ಹೂಲೀ ಪದುಮಪ್ಪನವರು, ಕಾರ್ಯದರ್ಶಿ— ನಬಿಸಾ ಮಲಿಕಸಾ ಇಟ್ಟಗಿ

ಕಾರ್ಯದರ್ಶಿಯ ಸಹಾಯಕ್ಕೆ ವಿದ್ಯಾರ್ಥಿಗಳ ಕಾರ್ಯನಿರ್ವಾಹಕ ಮಂಡಲಿಯೊಂದುಂಟು ಕಾರ್ಯದರ್ಶಿಯು ವಿದ್ಯಾರ್ಥಿಗಳಲ್ಲಿ ಒಬ್ಬನು.

ರಿಜಿಸ್ಟರಾಗಿರುವ ಒಟ್ಟು ಪುಸ್ತಕ(೧೮೪)ಗಳಲ್ಲಿ ೧೮ ಇತಿಹಾಸಿಕ,

೪೪ ಕಥಾನಕ, ೪೯ ವಿವಿಧಜ್ಞಾನವಿಷಯಕ, ೭೭ ನಿಬಂಧ, ೯ ಗಣಿತ, ೧೯ ಪದ್ಯಾತ್ಮಕ, ೮ ಬೇಸಾಯ ಹೀಗೆ ಪುಸ್ತಕಗಳು ಇರುವವು ಹೋದವರ್ಷದ ಅಂತ್ಯಕ್ಕೆ ೧೨೪ ಪುಸ್ತಕಗಳು ಇದ್ದವು ಈ ವರ್ಷ ಶ್ರೀಮಾನ್ ಬಿ ಕೃಷ್ಣಪ್ಪನವರು ಎಂ ಏ, ಶ್ರೀಮತಿ ತಿರುಮಲಾಂಬಾ ರವರು ನಂಜನಗೂಡು ಇವರುಗಳು ಕ್ರಮವಾಗಿ ಅನುಗ್ರಹಿಸಿದ ೨೭ ಪುಸ್ತಕಗಳು ಮತ್ತು ೧೦ ಪುಸ್ತಕಗಳು ಗ್ರಂಥಾಲಯವನ್ನು ಅಲಂಕರಿಸಿ ಬಹು ಶೋಭೆಯನ್ನುಂಟು ಮಾಡಿರುವವು

ಹಣ— ಹೋದವರ್ಷದ ಶಿಲ್ಕು ೧೮-೮-೦ ಈ ವರ್ಷದ ಜಮೆ ೨೨-೧೦-೦ ಈ ವರ್ಷದ ಖರ್ಚು ೨೦-೧೦-೦ ಈ ಮುಂದಿನ ವರ್ಷದ ಶಿಲ್ಕು ೨೦-೮-೦ ಈ ಪ್ರಕಾರ ಇರುವದು

ಕರ್ಣಾಟಕ ನಂದಿನಿ, ಕರ್ನಾಟಕ ವೈಭವ, ಸವಿಗಾರಗಳ ಸಂಪಾದಕ ಮಹಾಶಯರು ತಮ್ಮ ಪತ್ರಿಕೆಗಳನ್ನು ಉಚಿತವಾಗಿ ಅನುಗ್ರಹಿಸಿ ಪ್ರೋತ್ಸಾಹಿಸುತ್ತಿರುವರು ಗು|| ಹೆಡ್ ಮಾಸ್ತರರು ಶಾಲಾ ಪತ್ರಿಕೆ, ಒಕ್ಕಲತನ, ವಾಗ್ಭೂಷಣಗಳನ್ನು ಕೊಡುವರು ಶ್ರೀ|| ಪದಮಪ್ಪನವರು, ಶ್ರೀ|| ದೊಡ್ಡ ಪತ್ತಾರರವರು, ಶ್ರೀ|| ಪಾಂಡುರಂಗರಾವ, ಶ್ರೀ|| ಮಲ್ಲಪ್ಪನವರು, ಶ್ರೀ|| ಶ್ರೀನಿವಾಸರಾವ ಇವರುಗಳು ಕ್ರಮವಾಗಿ ಅರ್ಥಸಾಧಕ ಪತ್ರಿಕ, ಪರಮಾರ್ಥ, ಅಕ್ಷರಾಂಜಲಿ, ಕರ್ಣಾಟಕ ಚಂದ್ರಿಕೆ, ವಿದ್ಯಾದಾಯಿನಿ, ಸದ್ಬೋಧಚಂದ್ರಿಕಗಳನ್ನು ಕೊಡುವರು

ರವಿವಾರಕ್ಕೊಮ್ಮೆ ವಾಚಕರಿಗೆ ಪುಸ್ತಕಗಳು ಸಿಕ್ಕುವವು ಒಂದು ವಾರ ಗಡುವುಂಟು ವಿದ್ಯಾರ್ಥಿಗಳಿಗೆ ಫೀ ಇಲ್ಲ

ಕರ್ನಾಟಕದ ಏಕೀಕರಣಕ್ಕಾಗಿ ಪ್ರಯತ್ನಿಸುವ ಲೋಕಮಾನ್ಯ ಕರ್ನಾಟಕ ಸಾಹಿತ್ಯ ಪರಿಷದವು ಇದರ ವೃತ್ತವನ್ನು ತಿಳಿದು ಪ್ರೋತ್ಸಾಹಿಸಿ ಪರಿಷತ್ಪತ್ರಿಕೆಯನ್ನು ಅನುಗ್ರಹಿಸುತ್ತಿರುವದು. ಶ್ರೀಮಾನ್ ರಾಜಮಂತ್ರ ಪ್ರವೀಣ ನಂಜುಂಡಯ್ಯನವರ ವರದ ಪಾಣಿಯಿಂದ ಗ್ರಂಥಾಲಯವು ಸ್ಥಿರತ್ವದ ಮೆಟ್ಟುಗಳನ್ನು ಹತ್ತುತ್ತಿರುವದು. ಶ್ರೀಮಾನ್

ಜಿ. ಕೃಷ್ಣಪ್ಪನವರು ಎಂ ಎ, ಕನ್ನಡ ಟ್ರಾನ್ಸಲೇಟರ್ ಮೈಸೂರು ವಿದ್ಯಾಖಾತೆ ಬೆಂಗಳೂರು ಇವರು ಗ್ರಂಥಾಲಯ ಶಿಶುವಿನ ಜನಕರೇ. ಶ್ರೀ ಗೋಪಾಳರಾವ ಜಮ್ಮನಾಳ, ಶ್ರೀ ಶಿವಪ್ಪನವರು ಪಾಟೀಲ ತಾಳೀಕೋಟಿ ಇವರು ಗ್ರಂಥಾಲಯದ ಪೋಷಕರಾಗಿರುವರು ಇವರುಗಳೆಲ್ಲರ ಉಪಕಾರವನ್ನು ಗ್ರಂಥಾಲಯವು ಮನಸಾ ಮನ್ನಿಸುತ್ತಿರುವದು

ಗ್ರಂಥಾಲಯ ಶಿಶುವಿನ ಬಾಲಲೀಲೆಗಳನ್ನು ನೋಡಿ ಸಂತೋಷಪಟ್ಟು ಪಾಡುವ ಶ್ರೀ|| ಹನುಮಂತರಾವ, ವಕೀಲ ಶ್ರೀ|| ದೊಡ್ಡಪತ್ತಾರರವರು, ವಿದ್ಯಾರ್ಥಿಗಳಲ್ಲಿ ವಿ|| ಲಾಡ್ಲೆ ಸಾ. ವಿ|| ಮ ಅ. ಕಡಿ ಇವರುಗಳು ಸ್ಥಳಿಕರಲ್ಲಿ ಉಂಟೆಂದು ತಿಳಿಸಲು ಪರಮಾನಂದವೆನಿಸುವದು

ಮಹನೀಯರೂ ಪೂಜ್ಯರೂ ಆದ ತಮ್ಮ ಆಶಿರ್ವಾದ ಅನುಗ್ರಹಗಳಿಂದ ವಿದ್ಯಾರ್ಥಿಗಳ ಗ್ರಂಥಾಲಯವು ಸ್ವೀಕೃತ ಲೋಕಕಾರ್ಯ ತತ್ಪರವಾಗಲಿ! ಪುರೋವೃದ್ಧಿಯನ್ನು ಹೊಂದಲಿ!!!

ಶಾಲಾ ಮುದ್ದೇಬಿಹಾಳ (ವಿಜಾಪೂರ)<br>
ತಾ ೨೦ ಜೂನ್ ೧೯೧೭

ನ. ಮ ಇಟ್ಟಗಿ<br>
ಕಾರ್ಯದರ್ಶಿ

[ ದೇಶಭಕ್ತಿ, ಭಾಷಾಭಿಮಾನಿಗಳು ಊರ್ಜಿತಸ್ಥಿತಿಗೆ ಬರಬೇಕೆಂದರೆ ಇಂತಹ ತರುಣ ವಿದ್ಯಾರ್ಥಿಗಳ ಅಂತಃಸ್ಫೂರ್ತಿದಾಯಕವಾದ ಸಂಘಶಕ್ತಿಯ ಉಜ್ವಲವಾದ ತೇಜಸ್ಸಿನಿಂದಲೇ ಬರಬೇಕು ಇದಕ್ಕಾಗಿ ಈ ನಮ್ಮ ಮುದ್ದೇಬಿಹಾಳದ ವಿದ್ಯಾರ್ಥಿಗಳು ಸ್ವಸಂತೋಷದಿಂದ ಕೈಕೊಂಡು ನಡೆಯಿಸುತ್ತಿರುವ ಕಾರ್ಯವು ನಮಗೆ ಅತ್ಯಂತ ಸಂತೋಷವನ್ನುಂಟು ಮಾಡುವುದಾಗಿದೆ. ಈ ವಿದ್ಯಾರ್ಥಿಗಳು ಇತರ ವಿದ್ಯಾರ್ಥಿವರ್ಗೀಯರಿಗೂ ಅನುಕರಣೀಯ ಮತ್ತು ಆದರ್ಶಯೋಗ್ಯವಾಗಿ ನಡೆಯಿಸುತ್ತಿರುವ ಈ ತಮ್ಮ ಪ್ರಯತ್ನವು ಜಾಗ್ರತೆಯಾಗಿ ಊರ್ಜಿತಾವಸ್ಥೆ ಹೊಂದಿ ಅದರಿಂದ ಸಂಘಶಕ್ತಿಯ ಮಹತ್ತತ್ವವು ನಿದರ್ಶನಕ್ಕೆ ಬರುವಂತೆ ಉತ್ತಮಫಲವನ್ನು ಹೊಂದಲೆಂದು ಭಗವತಿಯಲ್ಲಿ

ನಾವು ಮನಃಪೂರ್ವಕವಾಗಿ ಆಶಿಸುತ್ತೇವೆ. ಮತ್ತು ಹೀಗೆಯೇ ವಿದ್ಯಾರ್ಥಿಗಳು ಒಕ್ಕಟ್ಟಿನಿಂದಲೂ-ದೃಢಮನಸ್ಸಿನಿಂದಲೂ ಸ್ವಸಂತೋಷ--ಸ್ವಯಂ ಕೃಪಿಗಳಿಂದಲೂ ಅಲ್ಲಲ್ಲಿ ವಾಚನಶಾಲೆ ಪುಸ್ತಕಭಂಡಾರಗಳನ್ನು ಸ್ಥಾಪಿಸಿ ನಡೆಯಿಸಿಕೊಂಡು ಬರುವವರಾದಾರೆಂದು ನಿರೀಕ್ಷಿಸುವುದಲ್ಲದೆ ಅಂತಹ ವಿದ್ಯಾರ್ಥಿಗಳ ವಾಚನಾಲಯ - ಮತ್ತು ಪುಸ್ತಕ ಭಂಡಾರಕ್ಕೆ ಹಿತೈಷಿಣಿ-ನಂದಿನಿಯರು ಉಚಿತ ಸಹಾಯಮಾಡುವದಕ್ಕೆ ಸಂತೋಷವುಳ್ಳವರಾಗಿರುವರೆಂದೂ ಆಶ್ವಾಸನವನ್ನು ಕೊಡುತ್ತೇವೆ, ಮತ್ತು ಇಂತಹ ವಿದ್ಯಾರ್ಥಿಗಳ ಸ್ತುತ್ಯವಾದ ಪ್ರಯತ್ನಕ್ಕೆ ದೇಶಭಕ್ತರೆನ್ನಿಸಿದವರೆಲ್ಲರೂ ಸಹಕರಿಸುವರೆಂದು ದೃಢ [illegible] ನಂಬುತ್ತೇವೆ. ಈ ಮುದ್ದೇಬಿಹಾಳದ ವಿದ್ಯಾರ್ಥಿಗಳ ಗ್ರಂಥಾಲ[illegible]ಯೇ, ಚನ್ನಪಟ್ಟಣದ ದೊಡ್ಡ ಮಳೂರಿನಲ್ಲಿಯೂ ಶ್ರೀಪ್ರಸ[illegible]ಮೇಯಸ್ವಾಮಿ ವಾಚನಾಲಯ-ಮತ್ತು ಪುಸ್ತಕ ಭಂಡಾರಗಳು [illegible]ಟ್ಟಿರುವದನ್ನು ತಿಳಿದು ಅಲ್ಲಿಯವರನ್ನೂ ಈ ಮೂಲಕ ಅಭಿನಂ[illegible]ೇವೆ. ಭಗವತಿಯೂ ಅನುಗ್ರಹಿಸಲಿ!

ಮುದ್ದೇಬಿಹಾಳದ ವಿದ್ಯಾರ್ಥಿಗಳು ನಮ್ಮ [illegible]ಮಂದಿರಕ್ಕೆ ಭಕ್ತಿಪುರಸ್ಸರ ಒಪ್ಪಿಸಿರುವ ಕಾಣಿಕೆ, ಮತ್ತು ಪ[illegible]ತ್ರಗಳನ್ನು ಆದರದಿಂದ ಸ್ವೀಕರಿಸಿರುವುದಲ್ಲದೆ ಮಾತೃವಿಷ[illegible]ವಾಗಿರುವ ಭಕ್ತ್ಯತಿಶಯದ ದಿಗ್ದರ್ಶನಕ್ಕಾಗಿ ಆ ವಿಜ್ಞಾಪನ[illegible] ಇಲ್ಲಿ ಪ್ರಕಟಿಸುತ್ತೇವೆ ಮಾತೃದೈವವು ವಿದ್ಯಾರ್ಥಿವ[illegible] ಅನವರತವೂ ಬೆಂಬಿಡದೆ ಕಾಪಾಡುತ್ತಿರಲಿ!

ಸಂ ನ[illegible] ಹಿತೈಷಿಣಿ. ]

## "ಸತೀಹಿತೈಷಿಣೀ" ವರ್ಗಣೀದಾರರಲ್ಲಿ ನಿವೇದನ

ಉದಾರ ಹೃದಯರಾದ ಭಗಿನೀ ಭಾಂಧವರೇ

ಹಿಂದೆ ನಂದಿನಿಯ ಮೂಲಕ (ನಳ ಪೌಷ-ಮಾಘ) ನಿವೇದಿಸಿದ್ದಂತೆ ಭಯಂಕರವಾದ ಜಡರೋಗದಿಂದ ಇಂದಿಗೆ ಬಿಡುಗಡೆಯಾಗಿರುವುದನ್ನು ನಿವೇದಿಸಲು ಸಂತೋಷಪಡುವೆವು ಪೂರ್ಣಕಲೆಯ ಮುದ್ರಣಕಾರ್ಯವು ಪೂರ್ಣವಾಯಿತು ೨೬೦ ಪುಟಗಳಿಗೆ ಮೀರಿ, ಆರು ಚಿತ್ರಗಳೊಳಕೊಂಡು ಉತ್ತಮ ವಿಚಾರಗಳನ್ನು ಪ್ರತಿಪಾದಿಸುತ್ತಿರುವ "ಪೂರ್ಣಕಲೆಯು" ವಿದ್ಯಾರ್ಥಿನಿಗಳ ಕರ್ತವ್ಯದ ೧-೨-೩ ನೇ ಭಾಗಗಳ ಬಹುಮಾನ ಪುಸ್ತಕಗಳೊಡನೆ ಹಾಕಲು ಸೇರಿ ೧೫೦ ಗೆ (ಕ್ರಯ ಚಂದಾದಾರರಿಗೆ ೧-೨-೦ ವ್ಹಿ. ಪಿ ಹಾಕಲು ೦-೩-೬) ಈ ಅಕ್ಟೋಬರ್ ತಿಂಗಳಲ್ಲಿಯೇ ವ್ಹಿ. ಪಿ ಮಾಡಲ್ಪಡುವುದು ಇಷ್ಟವಿಲ್ಲದಿದ್ದವರು ಮುಂದಾಗಿ ಸೂಚಿಸಬಹುದು ಹಾಗಿಲ್ಲದೆ ಈಗ ಸುಮ್ಮನಿದ್ದು ಬಳಿಗೆಬಂದ ವ್ಹಿ. ಪಿ ಯನ್ನು ಹಿಂದಿರುಗಿಸುವ ಮಹನೀಯರೂ ಇರುವುದಾದರೆ, ಅಂತಹ ಉದಾರಚರಿತರಿಗೆ ಈಗಲೇ ವಂದನೆಗಳನ್ನೊಪ್ಪಿಸುವೆವಲ್ಲದ, ಪ್ರಕೃತಿ ಪಾರವನ್ನೂ, ವ್ಯಕ್ತಿಸ್ವಭಾವವನ್ನೂ ಬೋಧಿಸಿ ಎಚ್ಚರಿಸುವ ಅಂತಹರ ಉಪಕಾರವನ್ನು ಚಿರಕಾಲಸ್ಮರಿಸುವೆವು

ಇತಿ ಹಿತೈಷಿಣೀ.

ವಿ ಸೂ ಈ ಸಂಚಿಕೆಯೊಡನೆ ಬಂಟವಾಳದಲ್ಲಿ ಹೊರಡುಬೇಕೆಂದಿರುವ, ಮಂತ್ರಸಿದ್ಧಾಂತಸಾರವೆಂಬ ಮಾಸಪತ್ರಿಕೆಯ ಪ್ರಕಟಣ, ದರಖಾಸ್ತು ಕಾಗದಗಳನ್ನು ವರ್ಗಣೀ ದಾರರಿಗೆಲ್ಲ ಹಂಚಿರುವೆವು ಉದಾರ ಬುದ್ಧಿಯುಳ್ಳ ದೇಶ ಭಾಷಾಭಿಮಾನಿಗಳು ಆ ಪತ್ರಿಕೆಯನ್ನು ಪ್ರೋತ್ಸಾಹಿಸಬೇಕೆಂದು ನಿವೇದಿಸುವೆವು ಸಂ. ನ



ರಾವಬಹಾದ್ದೂರ, ಸೀ. ಹಣಮಂತಗೌಡರು. ಹೊಸಪೇಟೆ.

|| ಶ್ರೀ ||

वन्देत्वां भूदेवी आर्यमातरम्।

ಕರ್ಣಾಟಕ

# ನಂದಿನಿ

## ಮಾಸಪತ್ರಿಕೆ

" ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂಚೈವ ಯಃಪ್ರಭುಃ। |
ದಾಸ್ಯನ್ತಿ ಮಮಯೇಽನ್ಯೇಽಪ್ಯದೃಷ್ಟಾಃ ಪಥಿಗೋಚರಾಃ"

ಸಂಪುಟ ೧ { ಪಿಂಗಳ-ಭಾದ್ರಪದ ೧೮೩೯ ೧೯೧೭-ಸೆಪ್ಟಂಬರ್. } ಸಂಚಿಕೆ ೧

### ಪ್ರಾರ್ಥನೆ

ರಾಗ || (ತರಣಿವಂಶಾಬ್ಧಿಚಂದ್ರ)

ಪಾಲಿಸೆನ್ನನು ಜಾನಕಿ ಅರವಿಂದ ನಾಯಕಿ-ಪಾಲಿಸೆನ್ನನು ||ಪ||
ಫಾಲಲೋಚನನುತ, ತ್ರೈಲೋಕ್ಯ ವಿಖ್ಯಾತೇ ಬಾಲಾರ್ಕದ್ಯುತಿ ಭಾಸುರಾನನೆ|
ನೀಲಾಳಕೆ ನಿತ್ಯನಿರ್ಮಲೆ ||ಪಾಲಿ|| ಅನು ||
ಜನನಿಯಲ್ಲವೆ ನೀನು-ತನುಭವರೊಳು ಇನಿತು ನಿರ್ದಯವೇನು? |
ಮನಕೆತರಲು ನೀನು-ಕ್ಷಣದೊಳು ದೀನನಂ|| ಅನಘಸಂಪದದಿಂದ
ಮೆರೆಯಿಪ ಘನತೆಯಾಂತವಳಲ್ಲವೇನು? ಪಾಲಿಸೆನ್ನನು || ೧ ||
ಬಾಗುತ ಶಿರವಿಳೆಗೆ—ಬೇಡುವಬಗೆ—ಕೂಗುಬೀಳದೆ ಕಿವಿಗೆ|
ಭಾಗವತಾರ್ಚಿತೆ-ಭಾರ್ಗವೀನಾಮಖ್ಯಾತೆ || ಬೇಗಯಿಲ್ಲವ ತಂದು
ಎನ್ನ ಸರಾಗದಿಂದಲಿ ನೋಡುಭರದಲಿ || ಪಾಲಿಸೆನ್ನನು ||೨||
ನೀನಲ್ಲದನ್ಯರಂ-ಕಾಣೆನುಹಿತರಂ ಮಾನಿತಗುಣಯುತರಂ|
ಆನತರಾಗುವ—ಸೂನೃತವ್ರತಿಗಳಿ|| ಗಾನಂದವಿತ್ತು ಸಲಹುವ—ರಾಜೇಂದ್ರ
ನಾಥನ ರಾಣಿ ಶ್ರೀಮಣಿ || ಪಾಲಿಸೆನ್ನನು ||೩||

(ರಮಾನಂದ)

# ವಿನ್ನಪ.

ದೇಶ ಭಗಿನೀ-ಬಾಂಧವರೇ,

ಅಬದ್ಧೋವಾ-ಸುಬದ್ಧೋವಾ-ಎಂಬಂತೆ, ಪ್ರಕೃತವಾಗಿಯೋ ಅಥವಾ ಅಪ್ರಕೃತವಾಗಿಯೋ-ಹೇಗೂ-ನಂದಿನಿಯ ಒಂದು ವರ್ಷದ ದೇಶಸೇವೆಯು ಇಂದಿಗೆ ಸಾಂಗವಾಯಿತು ಅಂದು ತನ್ನ ಯಾತ್ರಾದಾನ ಮಹೋತ್ಸವ ಸಮಯದಲ್ಲಿ ಸಂಕಲ್ಪ ಪೂರ್ವಕವಾಗಿ ಕೈಕೊಂಡಿದ್ದ ಸೇವಾಕಾರ್ಯದಲ್ಲಿ ಶಕ್ತಿವಂಚನೆಯಿಲ್ಲದೆ ಈ ಮೊದಲ ವರ್ಷದಲ್ಲಿ ಸಾಧ್ಯವಾದಷ್ಟುಮಟ್ಟಿಗೂ ನಡೆಯಿಸಿ, ಈ ಸಂಚಿಕೆಯೊಡನೆ ನಿಮ್ಮ ಒಂದು ವರ್ಷದ ಚಂದಾದ್ರವ್ಯದ ಸಾಲವನ್ನು ತೀರಿಸಿದುದಾಯಿತು ಆದರೆ ಈ ವರೆಗೆ ಮಾಡಿರುವ ಈಸೇವಾಕಾರ್ಯದಲ್ಲಿ ಆವಾವ ಭಾಗದಲ್ಲಿ ಆವಾವ ನ್ಯೂನಾತಿರಿಕ್ತದೋಷಗಳಿರುವವೊ,- ಮತ್ತೆಲ್ಲೆಲ್ಲಿ ಮತ್ತಾವಾವ ರಸಾಭಾಸ, ಅರ್ಥವಿಪರ್ಯಾಸಗಳು ಸೇರಿರಬಹುದೊ,- ಆವಾವ ಲೇಖನವು ಆರಾರಿಗೆ ಎಂತೆಂತಹ ಅಭಿಪ್ರಾಯ (ಮಧುರವಾಣೀ ವಾಚಕನು "ವಾಚಕರಲ್ಲಿ ಬಲಾತ್ಕಾರದಿಂದಲಾದರೂ ಸದಭಿಪ್ರಾಯವು ಬೇರೂರುವ ಸಂಭವವಿದೆಯೋ?" ಎಂದು ಟೀಕಿಸುತ್ತಿರುವಂತೆ ನಂದಿನಿಯ ವಾಚನದಲ್ಲಿ ಸದಭಿಪ್ರಾಯವೊ-ದುರಭಿಪ್ರಾಯವೊ ಯಾರು ಬಲ್ಲರು?)ವನ್ನುಂಟುಮಾಡಬಹುದೂ-ತಿಳಿದುಹೇಳುವುದು ನಮ್ಮ ವಾಚಕವರ್ಗವನ್ನೇ ಸೇರಿರುವುದರಿಂದ, ನಿಮ್ಮಲ್ಲಿ— ಪ್ರತ್ಯಕ್ಷವಾಗಿಯಾಗಲೀ ಅಪ್ರತ್ಯಕ್ಷವಾಗಿಯಾಗಲೀ, ದೋಷೋದ್ಘಾಟನೆಗಳನ್ನು ಮಾಡಿ, ನಂದಿನಿಯನ್ನು ಎಚ್ಚರಿಸುವಷ್ಟು ಉದಾರ ಹೃದಯರಿದ್ದರೆ ಇದೋ ಈಗಲೇ ನಿಮ್ಮ ಹಿತೋಕ್ತಿಗೆ ಸ್ವಾಗತವನ್ನು ಕೋರುವೆವೆಂದು ನಿವೇದಿಸುವೆವು

ಇರಲಿ, ಈ ವರೆಗೆ ನಮ್ಮ ಅನುಭವದಲ್ಲಿ,- ನಮ್ಮನ್ನು ಕುರಿತು ವಿವಿಧವಾಗಿ ಟೀಕಿಸಿದವರೂ, ಕುತರ್ಕ, ಕುತ್ಸಿತಭಾಷಣ, ಕುಚೇಷ್ಟೆ

ಗಳಲ್ಲಿ ಪ್ರವರ್ತಿಸಿ, ಶೀಲ-ಸ್ವಭಾವ, ಕೃತಿಗಳನ್ನು ಪರೀಕ್ಷಿಸಲುದ್ಯುಕ್ತರಾದವರೂ, ಬಹು ಸಂಖ್ಯೆಯಿಂದ ಗೋಚರಿಸಿರುವರು ನಮ್ಮ ಪ್ರಯತ್ನ-ಸಂಕಲ್ಪ-ಮನೋದಾರ್ಢ್ಯಗಳನ್ನು ವಿಫಲಗೊಳಿಸಬೇಕೆಂದು ಪಾಪ! ಎಷ್ಟೋಮಂದಿ. ತಮ್ಮ ಶಕ್ತಿಮೀರಿ ಪ್ರಯತ್ನಪಟ್ಟು, ಅಪಲಪಿಸಿಯೂ, ಕ್ಷುದ್ರವನ್ನು ಹೇಳಿಯೂ- ಇನ್ನೂ ಜಯಶಾಲಿಗಳಾಗದೆ, ಅಸೂಯಾಗ್ರಸ್ತರಾಗಿರುವವರು ಕೂಡ ಕಂಡುಬಂದಿರುವರು ಅದರೇನು! "ಕಲಂಕವಿಲ್ಲದವರಿಗೆ ಕಳವಳದ ಮಾತೇ ಇಲ್ಲವೆಂಬಂತೆ ಭಗವತ್ಪ್ರೇರಿತವಾದ ಈ ಕಾರ್ಯದಲ್ಲಿ ಭಗವದರ್ಪಿತ ಬುದ್ಧಿಯಿಂದ-ಮಾರ್ಜಾಲಕಿಶೋರ ನ್ಯಾಯಭಕ್ತಿಯಿಂದ-ಎಂದರೆ "ಭಗವಂತನು ಮಾಡಿದಂತೆ ಮಾಡಲಿ, ಅವನೆಲ್ಲಿಗೆ ಕೊಂಡೊಯ್ಯುನೋ ಒಯ್ಯಲಿ, ಹೇಗೆ ಕುಣಿಸುವನೋ ಕುಣಿಸಲಿ-" ಎಂದು ಒಂದೇ ವಿಧವಾದ ದೃಢಭರವಸೆಯಿಂದ ಕಾರ್ಯವನ್ನು ಕೈಕೊಂಡು, ಕೇವಲ-ಕರ್ತವ್ಯ ದೃಷ್ಟಿಯಿಂದ ನೋಡುತ್ತ ಬರುತ್ತಿರುವ ನಾವು, ಆ ನಮ್ಮ ಬಂಧುವರ್ಗೀಯರ ನಿಂದಾಸ್ತುತಿಗಳಿಗೆ ಕುಗ್ಗಿ-ಹಿಗ್ಗಿ ನಡೆಯಲವಕಾಶವಾದರೂ ಇರುವುದೆ? ಇಲ್ಲ- ಏಕೆಂದರೆ ನಮ್ಮ ಈ ಸೇವಾವೃತ್ತಿಯಲ್ಲಿ ನಮಗೆ ಶ್ರದ್ಧಾ ಭಕ್ತ್ಯುತ್ಸಾಹಶಕ್ತಿಗಳು ಹೆಚ್ಚುವಂತೆ ನಮ್ಮ ಹಿತಚಿಂತಕ ಭ್ರಾತೃಗಳು ಅಡಿಗಡಿಗೂ ನಮಗೆ

"ರತ್ನೈರ್ಮಹಾರ್ಘೈಸ್ತುತುಷುರ್ನದೇವಾ।
ನಭೇಜಿರೇ ಭೀಮವಿಷೇಣ ಭೀತಿಮ್॥
ಸುಧಾಂವಿನಾ ನ ಪ್ರಯಯುರ್ವಿರಾಮಂ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥"

ಎಂಬೀ ಶ್ಲೋಕೋಕ್ತಿಯನ್ನು ಅನುಸರಿಸಿ,-

" ಕೀರ್ತಿಲತೆಗೆ— ನಿಜವನ್ನರಿಯದ ಹಗೆಗಳು ನಿಷ್ಕಾರಣವಾಗಿ ದೂರಿದರೆ ಭಂಗವಾಗದು. ಅಂತಹ ಸೊಕ್ಕಿನ ಮಕ್ಕಳಿಗೆ ಸ್ಮರಣೆಯಿಂದೆಯೂ ಸಾಹಸದಿಂದೆಯೂ ಗರ್ವಭಂಗ ಮಾಡಬೇಕು (ಏಕೆಂದರೆ)—

———ತ್ಯೂರೆಯುರಿಶಾಂತಕೃತ್ಯವಧೀರರ್ ॥ '— ಎಂದು
ಭರ್ತೃಹರಿ ಹೇಳಿರುವನು

ಎಂದಿಂತು ಎಚ್ಚರಿಸಿಯೂ,—

" ನಿಂದನ್ತು ನೀತಿ ನಿಪುಣಾಯದಿವಾಸ್ತುವನ್ತು
ಲಕ್ಷ್ಮೀ ಸಮಾ ವಿಶತು ಗಚ್ಛತುವಾಯಥೇಷ್ಟಮ್ ।
ಅದ್ಯೈವವಾ ಮರಣಮಸ್ತು ಯುಗಾಂತರೇವಾ
ನ್ಯಾಯಾತ್ಪಥಃ ಪ್ರವಿಚಲಂತಿ ಪದಂ ನಧೀರಾ ॥ "

ಎಂಬ ಭರ್ತೃಹರಿಯವಚನವನ್ನು ಮುಂದಿಟ್ಟುಕೊಂಡು, ಹಿರಿಯರ,--ಮಹನೀಯರ,–ನಯವಿಶಾರದರ--ಆಚಾರವನ್ನು ಅನುಕರಿಸಿ, ದೇಹಾವಧಿಯವರೆಗೆ ಪ್ರಯತ್ನವನ್ನು ಬಿಡದಿರಬೇಕೆಂದು ಹುರುಡಿಸಿಯೂ,—

" ಪ್ರಾರಭ್ಯತೇ ನಖಲು ವಿಘ್ನಭಯೇನ ನೀಚೈ ।
ಪ್ರಾರಭ್ಯ ವಿಘ್ನವಿಹತಾ ವಿರಮಂತಿ ಮಧ್ಯಾ ॥
ವಿಘ್ನೈ ಪುನ ಪುನರಪಿ ಪ್ರತಿ ಹನ್ಯಮಾನಾ ।
ಪ್ರಾರಬ್ಧಮುತ್ತಮಜನಾ ನಪರಿತ್ಯಜಂತಿ ॥

ಎಂಬ ನೀತಿವಿಶಾರದರ ವಾಕ್ಯವನ್ನು ಧ್ಯೇಯವಾಗಿಟ್ಟುಕೊಂಡು ಕ್ಷಣಿಕವಾಗಿ ಬಾಳುವ ಅಲ್ಪಜನರ ಕ್ಷುದ್ರ ವಿಚಾರಕ್ಕಾಗಿ ಹೇಗೂ ಕಾರ್ಯವನ್ನು ನಿಲ್ಲಿಸಬಾರದೆಂದು ಸೂಚಿಸುವೆನು " ಎಂದಿಂತು ನಮ್ಮ ಉತ್ಸಾಹಶಕ್ತಿಯುತ್ತೇಜನ ಹೊಂದುವಂತೆ ಬೋಧಿಸಿಯೂ,— ಹೀಗೆ ನಮ್ಮ ಉದ್ಯಮವನ್ನು ನಿರಾತಂಕವಾಗಿ ಸಾಗುವಂತೆ ಬೋಧನೆ ಮಾಡುತ್ತಿರುವಲ್ಲಿ ನಮಗೆ ಮತ್ತೇತರ ಭಯವು? ಒಂದುಕಡೆ ಹಿರಿಯರು ತತ್ತ್ವಬೋಧೆಮಾಡಲು ಸಿದ್ಧರಾಗಿರುವರು, ಇನ್ನೊಂದು ಕಡೆ ಭ್ರಾತೃಗಳು ಎಚ್ಚರಿಸುತ್ತಿರುವರು ಮತ್ತೊಂದುಕಡೆ ನಮ್ಮ ಕರ್ತವ್ಯ ಜ್ಞಾನವು ನಮ್ಮನ್ನು ನಡೆದಾಡಿಸುತ್ತಿರುವುದು ಮಗುಳಿನ್ನೊಂದೆಡೆ, ನಮ್ಮ ಭಗಿನಿಯರು ಹುರಿಗೊಳಿಸಿ, ಯಥಾಮತಿ ಸಹಕರಿಸುತ್ತಿರುವರು ಇದರಮೇಲೆ ಎಲ್ಲಾ ಕಡೆಯಲ್ಲಿಯೂ ನಮಗೆ ಆ ಜಗಜ್ಜನನೀ ಜನಕರೇ ರಕ್ಷಕರಾಗಿ

ಕಾವಲಿರುವರು. ಇಷ್ಟಾಗಿಯೂ ನಮಗೆ ಭೀತಿ ಕಳವಳವಿರುವುದೇ! ಇಲ್ಲ-ಇಲ್ಲ-ಇಲ್ಲ !!!

ಹೀಗಿರುವ ನಮ್ಮನ್ನು ನಿಂದಿಸಿದ,—ನಮ್ಮ ಮೇಲೆ ವಿವಿಧವಾಗಿ ಟೀಕಿಸಿದ—ಮತ್ತು ಅಸಂಬದ್ಧ ಪ್ರಲಾಪದಿಂದ,--ಅಲ್ಲ ಸಲ್ಲದ,-ನಿರಾಧಾರವಾದ ವ್ಯಾಖ್ಯಾನ ಮಾಲೆಗಳನ್ನು ರಚಿಸಿ, ಹೆಸರನ್ನು ಮರೆಯಿಸಿಕೊಂಡು, ಅದನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ-ಅದರಿಂದ ತಮ್ಮ ಪಾಂಡಿತ್ಯ ಪ್ರಭೆಯನ್ನು ಪ್ರಕಾಶಗೊಳಿಸಿಕೊಂಡೆವೆಂದು ಹಿಗ್ಗಿ, ತಾವಾಗಿ ತಮ್ಮ ಸ್ವಭಾವಗುಣಗಳನ್ನು ಸ್ಪಷ್ಟಪಡಿಸುತ್ತಿರುವ ಆ ನಮ್ಮ ಬಂಧುವಗಿರ್ಗೀಯರ ವಿಷಯ ವಾಗಿಯೂ ತಮ್ಮ ತಮ್ಮ ಪತ್ರಿಕೆಗಳಲ್ಲಿ ಸ್ವವಿಷಯವಾಗಿಯೋ-ಇತರ ಸಮಾಲೋಚನ ಸಂದರ್ಭಗಳಲ್ಲಿಯೋ-ಹೇಗೋ ಸ್ತ್ರೀಯರ ಹೆಸರನ್ನು ತೆಗೆದು, ವ್ಯಂಗವಾಗಿ ಕುತರ್ಕಗಳನ್ನು ಮಾಡಿ-ಮಾಡುತ್ತಿರುವ ಆ ನಮ್ಮ ಪತ್ರಕರ್ತ ಭ್ರಾತೃಗಳ ವಿಷಯವಾಗಿಯೂ ನಾವು ಹೇಳುವದೇನಿದೆ? 'ಮಾಡಿರಿ-ಮಾಡಿರಿ! ಬಂಧುಗಳೇ! ಮನದಣಿಯುವಂತೆ ವ್ಯಾಖ್ಯಾನ ಮಾಡಿರಿ! ನಿಮ್ಮನಿಮ್ಮಲ್ಲಿಯೇ ಹಿಗ್ಗಿ ಹಿಗ್ಗಿ ನಲಿದಾಡಿರಿ!!- ಇದರಿಂದ ನೀವು ಈ ದೇಶಭಗಿನಿಯ ದೃಢಸಂಕಲ್ಪವನ್ನು ಕೆಡಿಸುವೆವೆಂದು ಮಾತ್ರ ಸ್ವಪ್ನದಲ್ಲಿಯೂ ತಿಳಿಯಬೇಡಿರಿ ಇದರಿಂದ—ಈ ನಿಮ್ಮ ಪ್ರಯತ್ನದಿಂದ—ಈ ಧರ್ಮಭಗಿನಿಯ ದೃಢಪ್ರಯತ್ನವು ಮತ್ತೂ ದೃಢಮೂಲವಾಗಿ ಬೆಳೆದು, ಉದ್ದೇಶ ಸಾರ್ಥಕತೆ ಹೊಂದುವಂತಾಗುವದಲ್ಲದೆ, ಹೇಗೂ ವಿಫಲವಾಗುವಂತಿಲ್ಲ. ಆದರೆ ಈ ನಿಮ್ಮ ಇಂದಿನ ಟೀಕೆಗಳಿಗೂ ಈಗಿನ ನಿಮ್ಮ ಭಾವನೆಗಳಿಗೂ ತಕ್ಕ ಫಲಗಳು ಸಿದ್ಧವಾಗಿರವುವೆಂಬುದು ಮಾತ್ರ ನಿಮಗೆ ಈಗಲೆ ಹೇಗೆ ತಿಳಿಯಬೇಕು? ಬಂಧುಗಳೇ! ನಿಂದಿಸುವಿರಲ್ಲವೆ? ನಿಂದಿಸಿರಿ, ಆದರೆ, ನಿಂದಿಸುವಾಗ ನಿಮ್ಮ ಸ್ವರೂಪ, ಧರ್ಮ, ಕರ್ತವ್ಯ, ಪೂರ್ವಾಪರ ವಿಚಾರಗಳನ್ನು ಮಾಡಿಯಾದರೂ ನಿಂದಿಸಿದರೆ ನಿಮ್ಮ ಮರ್ಯಾದೆಯೂ ನಿಲ್ಲುವುದು, ನಿಂದೆಮಾಡಿದೆವೆಂದು ನಿಮ್ಮ ಮನಸ್ಸಿಗೆ ಸಮಾಧಾನವನ್ನೂ ಕೊಡಬಹುದು. ಹಾಗಲ್ಲದಿದ್ದರೆ, ಮಾಡುವ ನಿಂದೆಯು ವಿಪರೀತದಲ್ಲಿ

ತಿರುಗಿ ನಿಮ್ಮ ಮೇಲೆಯೇ ಬೀಳಬರುವುದು. ಇದು ಮಾತ್ರ ಖಂಡಿತ.” ಇಷ್ಟನ್ನು ಮಾತ್ರ ನಿವೇದಿಸುವೆವು ಇಷ್ಟಲ್ಲದೆ ಆ ನಮ್ಮ ಧರ್ಮ ಬಾಂಧವರ ಹೆಸರನ್ನೆತ್ತಿ ಹೇಳಿ ವಿಶೇಷವಾಗಿ ಹೇಳುವುದು ನಮಗೆ ತಕ್ಕುದಲ್ಲ. ಅಲ್ಲದೆ ಆ ನಮ್ಮ ಬಂಧುಗಳು ತಮ್ಮ ಅಮೌಲ್ಯಪತ್ರಿಕೆಗಳ ಅರ್ಧ ಭಾಗವನ್ನೇ ಈ ವಿಪರೀತ ಪ್ರಜ್ಞೆಯ ವಿಲಕ್ಷಣವ್ಯಾಖ್ಯಾನಕ್ಕಾಗಿ ವಿನಿಯೋಗಿಸಿ, ತಮ್ಮ ಔದಾರ್ಯಗುಣಾತಿಶಯವನ್ನು ಪ್ರದರ್ಶಿಸಿದಂತೆ ನಾವು ಮಾಡುವುದಕ್ಕೂ ನಮಗೆ ಸಾಧ್ಯವೂ ಇಲ್ಲ, ಇಷ್ಟವೂ ಇಲ್ಲ. ಮತ್ತು ನಂದಿನಿಯಲ್ಲಿ ಅದಕ್ಕೆಡೆಯೂ ಇರುವುದಿಲ್ಲ ನಂದಿನಿಯು ಪ್ರತಿಪಾದಿಸಬೇಕಾದ ವಿಚಾರಗಳು ಹೇರಳವಾಗಿರುವುವು ಇದರ ಮೇಲೆಯೂ—ನಮ್ಮ ಹಿತಚಿಂತಕ ಭ್ರಾತೃಗಳು ಕೂಡ—ಈ ವಿಚಾರವಾಗಿ ಹಿಂದೆ “ . . . ಅನಾಮಧೇಯ ಪತ್ರಿಕೆಯೊಡನೆ ಸರಿಗಟ್ಟಿಕೊಂಡು ಎರಡುಮಾತು . . . . . ವ್ಯದು ನಿನ್ನ ಗೌರವಕ್ಕೆ ಸರ್ವಾತ್ಮನಾ ತಕ್ಕುದಲ್ಲ....... .......” ಎಂದೂ, “....... ... ಆದೊಡಂ ದಿಟದ ಪೆಸರಂ ಕೆಡಲೊಲ್ಲದ ಪೇಡಿಯೋರ್ವ್ವಂ ಬರೆದಿರಲಕ್ಕುಂ ಅಂತುಮಲ್ಲದೆ ಕನ್ನಡ ನುಡಿಯೊಳಂ, ಬೊತ್ತಗೆಗಳೊಳಂ ಸೊಬಗನರಿಯಲಾರದಸಂದೆಯೋ ನಾನುಂ ಬರೆದಿರಲುಮಕ್ಕುಂ ಬರೆದವನಿನ್ನನೆಂದರಿತ ಬಳಿಕೇ ನಾನು ಮೊಂದುಬಟ್ಟೆಗೆ ತಂದಯ್ಯಲಕ್ಕುಮಲ್ಲದೆ, ಅಡಂಗಿದಂಚುಕುಳಿಗೆ ಗೆಯ್ವುದೇನುಂಟು? ಬೋಕೆ, ಅನ್ನರಸುದ್ದಿಯಿಂದೇಂ? ..... .......” ಎಂದೂ —

ಮತ್ತೊಂದು ಸಂದರ್ಭದಲ್ಲಿ ಮತ್ತೊಬ್ಬರಿಗಾಗಿ ಬೋಧಿಸಿದ—

ಕವಿಕವಿಗೆ ಮುಳಿಗುಮೆಂಬುದ ।
ನವಧಾರಿಸಿ ಮಾಣ್ದು ವಾಚಕರ ಕಣ್ಣನಕೊ ।
ಕ್ಕುವ ಸುದ್ದಿಯನಲ್ಲದೆ ಪೇ।
ಳೆವೆಂದು ಫಲಂ ಬೊಣ್ದು ಬರೆಯಲಾಗದೊ ದಿಟದಿಂ ॥ ಮತ್ತೊ-
ಸಮಯವಿರುದ್ಧಂ ಬೋ ಮಾ ।
ಣಿವೆಂದು ಪೆರಪೆರವರಾಡಿ ಪಲವೊರೆಯದ ಮು ।

ನ್ನುವೆ ನಿವೇದ್ಯಮಿಡ ವೃಟ್ಟಿದರಿಂ ।
ದವುಕ್ಕರ್ಯಂ ಮರೆದು ಮಾತೃಸೇವೆಗೆ ನೆರೆಯಿಂ ॥

ಎಂದೂ—ಇನ್ನೂ—

ಪೂರುಳಿಲ್ಲದೆ ಜಗಳಕೆ ನಿ ।
ಲ್ತಿರೆ ನಿಮ್ಮಂ ಕಂಡು ಕುಣಿದು ತಣಿದವಗುಣದಿ ।
ವ್ವರ್ರರೊಳಂ ಪೊಗೆವೊತ್ತಿಸ್ಟಿದ ।
ಳ್ಗುರಿಯೊಳ್ ಕಿಡೆ ನಲಿವವಂಗೆ ಪಂಗಿಗನಪ್ಪೋ ॥ ಎಂದೂ—

ಹೀಗೆ ನಮಗೆ ಹಿತವನ್ನು ಹೇಳಿರುವರು. ಇವೆಲ್ಲವನ್ನು ಮೀರಿ ನಾವು ಮುಂದರಿಯಬೇಕೆಂದು ಮನದಲ್ಲಿಯಾದರೂ ನೆನೆದಿಲ್ಲವಾದುದರಿಂದ ಆ ನಮ್ಮ ದೂಷಕ ಭ್ರಾತೃವರ್ಗೀಯರೆಲ್ಲರ ಮುಂದೆಯೂ ಮೇಲಿನ ನಮ್ಮ ಅಭಿಪ್ರಾಯಗಳನ್ನು ತಂದೊಪ್ಪಿಸಿ, ಅವರ ಈವರೆಗಿನ ಸಾಹಸ ಶ್ರಮಸಹಿಷ್ಣುತೆಗಳಿಗಾಗಿ ಈ ಮೂಲಕ ಧನ್ಯವಾದಗಳನ್ನೊಪ್ಪಿಸಿ ಮುಂದಿನ ನಮ್ಮ ಕರ್ತವ್ಯವನ್ನು ಗಮನಿಸುತ್ತಿರುವೆವು ಇದು ಇನ್ನು ಪ್ರಕೃತ ವಿಚಾರವನ್ನು ಕುರಿತು ಒಂದೆರಡು ಮಾತು—

ನಂದಿನಿಯು ಪ್ರಥಮತ ನಿವೇದಿಸಿದಂತೆ ಕೆಲವು ಕಡೆ ಎಡವಿ--ತಡವಿ ನಡೆದಿರಬಹುದು, ಕೆಲವೆಡೆಯಲ್ಲಿ ತಡೆತಡೆದೂ ನಿಂತಿರಬಹುದು ಆದರೂ, ಎಳೆ ಮಗುವೆಂದು ನೆನೆದು ನೀವು ಈ ವರೆಗೆ ಸಹಜಪ್ರೇಮದಿಂದ ನಂದಿನಿಯನ್ನು ಆದರಿಸುತ್ತ ಬಂದಿರಿ ಇನ್ನು ಮುಂದೆಯೂ ಆಡಿಸಲು ಸಿದ್ಧರಾಗಿಯೇ ಇರುವಿರಿ ಆದುದರಿಂದ ಆ ವಿಚಾರವಾಗಿ ಹೆಚ್ಚು ಹೇಳಲಾರೆವು ಏಕೆಂದರೆ, ನಮ್ಮ ಇತರ ಪತ್ರಕರ್ತ ಭ್ರಾತೃಗಳು ಹೇಳಿ ಕೇಳುವಂತೆ ನಾವು ಚಂದಾದಾರರನ್ನು ಸೇರಿಸಿಕೊಡಬೇಕೆಂದಾಗಲಿ, ದೇಶೀಯರು ಭಾಷಾಭಿಮಾನಶೂನ್ಯರೆಂದಾರೋಪಿಸಿಯಾಗಲಿ ನಮ್ಮ ದೇಶೋದ್ಧಾರಕರಾದ ಸರ್ಕಾರದವರನ್ನು ದೂರುವುದಾಗಲಿ ಇಲ್ಲ. ಆ ವಿಚಾರದಲ್ಲಿ ನಮ್ಮ ಅಭಿಪ್ರಾಯವೇ ಬೇರೆ; ಪ್ರೋತ್ಸಾಹಿಸುವವರು ನಮ್ಮ ಪ್ರಾರ್ಥನೆಯನ್ನು ಕೇಳಬೇಕೆಂದು ನಿರೀಕ್ಷಿಸುವುದಿಲ್ಲ. ತಾವಾಗಿ ಪ್ರೋತ್ಸಾಹಿಸಿಯೇ ಪ್ರೋತ್ಸಾಹಿಸುತ್ತಾರೆ. ಸಂಗ್ರಾಹ್ಯ

ವಾದ ಗುಣವು ಕಂಡುಬಂದುದಾದರೆ ತಾವಾಗಿ ಗ್ರಹಿಸಿ, ಸಹಾಯ ಮಾಡುವುದು ನಮ್ಮ ದೇಶೋದ್ಧಾರಕರ ಸಹಜ ಗುಣವಾಗಿದೆ ಇದಕ್ಕೆ ದೃಷ್ಟಾಂತವು ಬೇಕೆಂದರೆ ಬಹುದೂರ ಹೋಗಬೇಕಾಗಿಲ್ಲ ಕೇವಲ ಅವಗಾಹನೆಗೆಂದು ಕಳುಹುವ ಪುಸ್ತಕಗಳನ್ನೇ ಆ ನಮ್ಮ ದೇಶೋದ್ಧಾರಕರು ಸಮಾಲೋಚಿಸಿ ಅವುಗಳ ಯೋಗ್ಯತೆಗೆ ತಕ್ಕಂತೆ ಅವುಗಳನ್ನು ಹೆಚ್ಚು ಹೆಚ್ಚಾಗಿ ಸ್ವೀಕರಿಸಿ, ಪ್ರೋತ್ಸಾಹಿಸುತ್ತಿರುವುದು ಸಾಕಷ್ಟು ನಿದರ್ಶನವಾಗಿದೆ ಇದರ ಮೇಲೆ ಕರ್ನಾಟಕ ನಂದಿನಿಯು ಇನ್ನೂ ಅವರ ಪ್ರೋತ್ಸಾಹಕ್ಕೆ ಅರ್ಹವಾದುದಾಗಿಲ್ಲವೆಂದೂ ಅರ್ಹತೆಯನ್ನೊಂದಿತೆಂದು ನಿರ್ಧರವಾದ ಬಳಿಕ, ಆ ನಮ್ಮ ದೇಶೋದ್ಧಾರಕರ ಸನ್ನಿಧಾನಕ್ಕೆ ಕಳುಹುವುದೊಳ್ಳೆಯದೆಂದೂ ನಮ್ಮಲ್ಲಿ ನಾವೇ ತಿಳಿದು ಸುಮ್ಮನಿದ್ದರೂ ಆ ನಮ್ಮ ಗುಣಗ್ರಾಹಿಗಳೂ ವಿಚಾರಪರರೂ ದಕ್ಷರೂ ಆದ ವಿದ್ಯಾಂಗದವರು ತಾವಾಗಿ ನಂದಿನಿಯನ್ನು ಸ್ವೀಕರಿಸಿ, ವಿಶೇಷವಾಗಿ ಪ್ರೋತ್ಸಾಹಿಸುತ್ತಿರುವುದು ಮೇಲಿನ ನಮ್ಮ ಮಾತನ್ನು ದೃಢಪಡಿಸಲು ಸಾಲದೆ ?

ನಂದಿನಿ ಮತ್ತು ಹಿತೈಷಿಣಿಗೆ ಪ್ರೋತ್ಸಾಹ ಸಹಾಯ ಆಶ್ರಯಸಂಪತ್ತಿಗಳ ವಿಚಾರವಾಗಿ ನಮಗೆ ಯೋಚನೆಯಿಲ್ಲ ಸ್ವಸಂತೋಷದಿಂದ ಗ್ರಾಹಕರಾಗಿ ನಿಂತು ಪ್ರೋತ್ಸಾಹಿಸುವವರು ಪ್ರೋತ್ಸಾಹಿಸಬಹುದು. ಸಂಶಯಗ್ರಸ್ತರು ದೂರದಲ್ಲಿರಬಹುದು ಕುಚೋದ್ಯಗಾರರು ಈಗಲೇ ನಮ್ಮ ವಂದನೆಗಳೊಡನೆ ಈ ಸಂಚಿಕೆಯನ್ನು ಪಡೆದು ತೆರಳಬಹುದು ಅಂತಹರಿಗೆ ಇನ್ನು ಮುಂದೆ ನಂದಿನಿ-ಹಿತೈಷಿಣಿಯರು ಕಳುಹಲ್ಪಡಲಾರರು ಹಿಂದೆ ತಮ್ಮ ಮರ್ಯಾದೆ ಮೀರಿ ಕುಚೇಷ್ಟೆಗಳನ್ನು ಮಾಡಿದ್ದ ಕೆಲವು ವರ್ಗಣಿದಾರರ ಹೆಸರನ್ನು ಮುಂದಿನ ವರ್ಷದ ಚಂದಾಪಟ್ಟಿಯಿಂದ ತೆಗೆದಿರುವುದು ಇನ್ನೂ ಕೆಲವರ ಹೆಸರನ್ನು ತೆಗೆದು ಹಾಕುವ ಯೋಚನೆಯಲ್ಲಿರುವುದು

ಇನ್ನು ನಂದಿನಿಯ ಆಕಾರ-ವಿಚಾರಗಳ ಪರವಾಗಿ ಎರಡು ಮಾತುಗಳು:— ಆಕಾರವನ್ನು ಈಗಿರುವದಕ್ಕೆರಡಷ್ಟು ಹೆಚ್ಚಿಸುವ ವಿಚಾ

ರವಿತ್ತು ಪದ್ಯಕ್ಕೆ ಆಕಾರವನ್ನು ದೊಡ್ಡದನ್ನಾಗಿ ಮಾಡುವುದಕ್ಕೂ ಪುಟಸಂಖ್ಯೆಯನ್ನು ಹೆಚ್ಚಿಸುವುದಕ್ಕೂ ಸಾಧ್ಯವಿಲ್ಲ. ಇನ್ನು ಮುಂದೆ ನಂದಿನಿಯಲ್ಲಿ ಬಲುದೊಡ್ಡ ಕಾದಂಬರಿ—ಎಂದರೆ ಕಲ್ಪಿತಕಾದಂಬರಿಗಳ ಮಾತೇ ಬರುವಂತಿಲ್ಲ. ಕಾದಂಬರಿಯನ್ನು ಪ್ರಕಟಿಸುವ ಸಾಹಸಕ್ಕೆ ಹೋಗದೆ ಸಂದರ್ಭನ್ನೊದಗಿದಂತೆ ಸಣ್ಣ ಸಣ್ಣ ಐತಿಹಾಸಿಕ ಕಾದಂಬರಿಗಳನ್ನು ಪ್ರಕಟಿಸುವುದು, ಪುರಾಣಪ್ರಸಿದ್ಧರಾದ ನಮ್ಮ ಆರ್ಯಮಹನೀಯರ ಅದ್ಭುತಚರಿತೆಗಳನ್ನು ನಮ್ಮ ಬಾಲಿಕಾನಿವಹಕ್ಕೆ ಬೋಧೆಯಾಗುವಂತೆ ವಿವರಿಸುವದು ನಮ್ಮ ಬಾಲಬಾಲೆಯರ ಶಿಕ್ಷಣ ವಿಚಾರದಲ್ಲಿ ಉಪಯುಕ್ತ ವಿಚಾರಗಳನ್ನು ಪ್ರತಿಪಾದಿಸುವುದಕ್ಕಾಗಿ ಪ್ರತಿಸಂಚಿಕೆಯಲ್ಲಿಯೂ ಒಂದು ಭಾಗವೂ ಸ್ತ್ರೀಯರಜ್ಞಾನಾಭಿವೃದ್ಧಿಸಾಧನೆಗಾಗಿ ಪ್ರತಿಪಾದಿತವಾಗುವ ಲೇಖನಗಳಿಗೆ ಒಂದು ಭಾಗವೂ ಉಳಿದ ಭಾಗದಲ್ಲಿ ಇತರ ವಿಚಾರಗಳೂ ಬರುವಂತೆ ಯೋಚಿಸಿರುತ್ತದೆ

ಈವರೆಗೆ ನಂದಿನಿಯಲ್ಲಿ ಅಪೂರ್ಣವಾಗಿಯೇ ಉಳಿದಿರುವ— "ಭಾವನಾಲೋಕ" "ಅಬಲಾ ದೌರ್ಜನ್ಯ" "ನಾನು ಏನಾಗಿರುವೆನು" "ಸ್ತ್ರೀಯರ ನೈಸರ್ಗಿಕಸ್ನೇಹ" ಇತ್ಯಾದಿ ಲೇಖನಗಳೂ, "ಆಳ್ವಾರರ ವೈಭವವು" ಎಂಬ ಭಕ್ತರ ಚರಿತೆಗಳೂ, ಮುಂದಿನ ವರ್ಷದಲ್ಲಿ ಕ್ರಮವಾಗಿ ಪ್ರಕಟವಾಗುವವು 'ವಿವಲಾದೇವಿ" ಎಂಬ ಐತಿಹಾಸಿಕ ಕಾದಂಬರಿಯನ್ನು ಮಾತ್ರ ಪ್ರತ್ಯೇಕವಾಗಿ ಮುದ್ರಿಸುವ ಯೋಚನೆಯಾಗಿರುವದು ನಂದಿನಿಯು ಮುಂದೆಯೂ ಸಾಧ್ಯವಾದ ಮಟ್ಟಿಗೆ ಉಪಯುಕ್ತ ಚಿತ್ರಗಳೊಡನೆಯೇ ಪ್ರಕಟವಾಗುವುದೆಂದು ಹೇಳಬಲ್ಲೆವು ಆದರೆ ನಂದಿನಿಯಲ್ಲಿ ಪ್ರಕಾಶಗೊಳಿಸಲು ಲೇಖನಗಳನ್ನು ಕಳುಹುವೆವೆಂದು ತಾವಾಗಿ ಬರೆದಿದ್ದ ನಮ್ಮ ಆರ್ಯಭಗಿನಿಯರು ಇಷ್ಟು ದಿನಗಳಾದರೂ ಕಳುಹದಿರುವ ಕಾರಣವೇನೆಂಬುದು ಮಾತ್ರ ತಿಳಿಯಲಿಲ್ಲ. ಆ ನಮ್ಮ ಭಗಿನಿಯರು ನಂದಿನಿಯ ಕಾರ್ಯಭಾರವು ನಮ್ಮ ಪುರುಷವರ್ಗಕ್ಕೆ ಸೇರಿರಬಹುದೆಂದೇನಾದರೂ ತಿಳಿದು ಹೀಗೆ ಶಂಕಿಸುತ್ತಿದ್ದರೆ ಆ ತಮ್ಮ ಶಂಕೆಗಳನ್ನು ಇನ್ನಾದರೂ ಬಿಟ್ಟು ಧೈರ್ಯವಾಗಿ ಮುಂದೆಬಂದು

ನಂದಿನಿಗೆ ಹೇಳಬೇಕಾದ ಹಿತಗಳನ್ನು ಹೇಳಲುಳ್ಳವರಾದಾರೆಂದು ನಂಬಿ ನಿರೀಕ್ಷಿಸುವೆವು.

ಇನ್ನು—ನಂದಿನೀ—ಹಿತೈಷಿಣಿಯರನ್ನೂ ವಿಶೇಷವಾಗಿ ಅನುಗ್ರಹಿಸಿ, ಪ್ರೋತ್ಸಾಹಿಸಿದ ನಮ್ಮ ಪ್ರಭುವರೇಣ್ಯರಾದ ಶ್ರೀಮನ್ಮಹಾರಾಜರವರಿಗೂ, ಪ್ರಜಾವತ್ಸಲರಾಗಿರುವ ನಮ್ಮ ಶ್ರೀಮನ್ಮಹಾರಾಣಿಯವರಿಗೂ ಶ್ರೀಮನ್ ಯುವರಾಜರವರಿಗೂ ರಾಜ್ಯಕಾರ್ಯಧುರೀಣರಾದ ಶ್ರೀಮಾನ್ ದಿವಾನರವರಿಗೂ ನಮ್ಮ ಪ್ರಯತ್ನದಲ್ಲಿ ವಿಶೇಷವಾಗಿ ಉತ್ತೇಜನವನ್ನು ಕಲ್ಪಿಸುತ್ತಿರುವ ನಮ್ಮ ಮೈಸೂರು-ಮದ್ರಾಸ, ಧಾರವಾಡ ವಿದ್ಯಾಭ್ಯಾಸದ ಇಲಾಖೆಯವರಿಗೂ ಮುದ್ರಣ ಸಾಹಿತ್ಯಗಳನ್ನೊದಗಿಸಿ ಸಮಯೋಚಿತ ಸೂಚನೆಗಳನ್ನು ಕೊಡುತ್ತ ನಂದಿನಿಯ ಮುದ್ರಣಕಾರ್ಯದಲ್ಲಿ ವಿಶೇಷವಾಗಿ ಶ್ರದ್ಧೆಯನ್ನು ವಹಿಸಿರುವ ನಮ್ಮ ಶ್ರೀಕೃಷ್ಣ ಮುದ್ರಾಲಯದವರಿಗೂ ನಂದಿನಿಗೆ ಬೇಕಾದ ಬ್ಲಾಕುಗಳನ್ನು ತಯಾರಿಸಿಕೊಟ್ಟು ಸಹಕರಿಸಿದ ಮೈಸೂರು ವೆಸ್ಲಿಯನ್ ಮುದ್ರಾಲಯದವರಿಗೂ ಮದ್ರಾಸು ಗ್ರಾಫಟೋನ್ ಕಂಪನಿಯವರಿಗೂ ನಮಗೆ ಅಡಿಗಡಿಗೆ ಹಿತಸೂಚನೆಗಳನ್ನು ಕೊಡುವುದರ ಮೂಲಕವೂ ಇನ್ನೂ ಸಮಯೋಚಿತ ಸಹಾಯಗಳನ್ನು ಮಾಡುವುದರ ಮೂಲಕವೂ ನಮಗೆ ವಿಶೇಷವಾಗಿ ಉಪಕಾರ ಮಾಡಿರುವ ನಮ್ಮ ಸದ್ಧರ್ಮಭ್ರಾತೃಗಳೆಲ್ಲರಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನು ಸಮರ್ಪಿಸುವೆವಲ್ಲದೆ ಭಗವತ್ಸಾನ್ನಿಧ್ಯದಲ್ಲಿ ಅವರೆಲ್ಲರ ನಿರಂತರ ಶ್ರೇಯೋಭಿವೃದ್ಧಿ ಚಿಂತನೆಯನ್ನು ಮಾಡುತ್ತ ನಮ್ಮ ಬಿನ್ನಹವನ್ನು ಕುರಿತ ಇಂದಿನ ದೀರ್ಘಭಾಷಣಕ್ಕೆ ಇಲ್ಲಿಗೆ ವಿಶ್ರಾಂತಿ ಕೊಡುವೆವು

ಇತಿ ಭಗವದ್ಭಾಗವತ ಶ್ರೀಪಾದ ಧೂಳಿ

ಸಂ. ನಂದಿನೀ

---

# ಕನ್ನಡದ ರನ್ನಗನ್ನಡಿ

( ಮಣಿ ೫ )

### ಸುಪ್ರಸಿದ್ಧ ದೇಶಭಕ್ತರೂ, ಭಾಷಾಸೇವಕರೂ ಆಗಿರುವ

ಶ್ರೀಯುತ

## ರಾಯಬಹದ್ದೂರ ಹಣಮಂತಗೌಡರು

"ಉದಾರ ಚರಿತಾನಾಂತು ವಸುಧೈವ ಕುಟುಂಬಕಂ"

ಕೆಲವು ಶತಮಾನಗಳಿಗ ಹಿಂದೆ ದಕ್ಷಿಣ ಹಿಂದುಸ್ಥಾನವನ್ನೆಲ್ಲ ಆಕ್ರಮಿಸಿ ಅತ್ಯದ್ಭುತವಾದ ವಿಜಯನಗರ ಸಾಮ್ರಾಜ್ಯವೆಂಬ ಹೆಸರಿಂದ ಮೆರೆದು ಆಚಂದ್ರತಾರಕವಾಗಿ ಕೀರ್ತಿಗೊಂಡ ಕರ್ನಾಟಕ ರಾಜ್ಯವು ವರ್ತಮಾನ ಕಾಲದಲ್ಲಿ ಛಿನ್ನಭಿನ್ನವಾಗಿ ಮುರಿದು ಕೇವಲ ದೈನ್ಯಾವಸ್ಥೆಯಲ್ಲಿರುವ ಸಂಗತಿ, ಕನ್ನಡಿಗರಿಗೆ ತಿಳಿದೇ ಇರುವುದಲ್ಲವೆ? ಇಂತಹ ದೇಶಭಾಗಗಳೊಳಗೆ ಒಂದಾದ ಬಳ್ಳಾರಿ ಜಿಲ್ಲೆಯು ಪ್ರಕೃತದಲ್ಲಿ ಆಂಧ್ರರ ಪ್ರಾಬಲ್ಯಕ್ಕೆ ಒಳಪಟ್ಟು ಕನ್ನಡ ದೇಶವೇ ಅಲ್ಲವೆಂಬಂತೆ ವರ್ತಿಸತೊಡಗಿದೆ ಅಲ್ಲಿಯ ಕನ್ನಡಿಗರಿಗೆ—ಮುಖ್ಯವಾಗಿ ವಿದ್ಯಾವಂತರಾದವರಿಗೆ—ತಾವು ಕನ್ನಡಿಗರೆಂದು ಹೇಳಿಸಿಕೊಳ್ಳುವುದಕ್ಕೂ ನಾಚಿಕೆಯಾಗುತ್ತಿರುವುದೆಂದು ಕೇಳಬರುತ್ತಿದೆ. ಇಂತಹ ವಿಷಮಸ್ಥಿತಿಯಲ್ಲಿಯೂ ಮಾತೃಭಾಷಾ ಮಮತೆಯನ್ನು ಏಕರೂಪವಾಗಿಟ್ಟುಕೊಂಡು, ದೇಶಸೇವೆಯನ್ನೂ ಭಾಷಾಸೇವೆಯನ್ನೂ ಮಾಡುತ್ತಲಿರುವ ಆ ಪ್ರಾಂತದ ಕರ್ನಾಟಕ ಮಹನೀಯರೊಳಗೆ ನಮ್ಮ ಈ ಕಥಾನಾಯಕರಾದ ಶ್ರೀಯುತ ಹನುಮಂತಗೌಡರು ಒಬ್ಬರಾಗಿರುವರು. ಅನುಕರಣ ಯೋಗ್ಯವಾದ ಇವರ ಚರಿತ್ರವನ್ನು ಸಂಕ್ಷಿಪ್ತವಾಗಿ ಈ ಕೆಳಗೆ ಕೊಡುವೆವು

ಈ ವಂಶದ ಮೂಲಪುರುಷರಾದ ಲಿಂಗರಸರೆಂಬ ಮಹನೀಯರು ಶಾಲಿವಾಹನ ಶಕದ ೧೪೪೩ನೆ ವಿಕ್ರಮನಾಮ ಸಂವತ್ಸರ

ದಲ್ಲಿ ಚಿರಸ್ಮರಣೀಯರಾದ ಕೃಷ್ಣದೇವರಾಯರವರು ವಿಜಯನಗರದಲ್ಲಿ ಆಳುತ್ತಿದ್ದಾಗ ಅವರ ಅಳಿಯನೂ, ಚಂದ್ರಗಿರಿ, ಚಿತ್ರದುರ್ಗ ಮುಂತಾದ ಸೀಮೆಗಳ ಅಧಿಪತಿಯೂ ಆದ ಅಳಿಯ ರಾಮರಾಯರಿಗೆ ಆರನೂರ ಎಪ್ಪತ್ತು (೬೭೦) ವರಗಳನ್ನು ಕಪ್ಪಕಾಣಿಕೆಯಾಗಿ ಒಪ್ಪಿಸಿ ಅವರಿಂದ "ಚಿತ್ರವಾಡಿ" * ಎಂಬ ಗ್ರಾಮದ ಸ್ವಾಸ್ಥ್ಯ, ವೃತ್ತಿಗಳ ಮಿರಾಸೆಯನ್ನು ಪಡೆದಂತೆ ತಿಳಿಯಬರುತ್ತದೆ

ಮುಂದೆ ಕ್ರಿ ಶ ೧೮೦೨ರಲ್ಲಿ ಟಿಪ್ಪೂಸಾಹೇಬನ ಮರಣದಿಂದ ಚಿತ್ರವಾಡಿ ಗ್ರಾಮವು ಆಂಗ್ಲೇಯರ ಪ್ರಭುತ್ವದವರ ಕೈಸೇರಿತು ಆಗ ನಮ್ಮ ಚರಿತ್ರನಾಯಕರ ಪಿತಾಮಹರಾದ ಭೀಮನಗೌಡರೆಂಬುವರು ಮಿರಾಸೆದಾರರಾಗಿದ್ದರು ಇವರು ಆಂಗ್ಲೇಯ ಪ್ರಭುಗಳಿಗೆ ತಮ್ಮ ರಾಜಭಕ್ತಿಯನ್ನು ತೋರಿಸಿ, ಅವರ ಮನ್ನಣೆಗೆ ಪಾತ್ರರಾಗಿ, ತಮ್ಮ ಗ್ರಾಮದಲ್ಲಿ ಒಂದು ಸಂತೇ ಪೇಟೆಯನ್ನು ಕಟ್ಟಿಸಿ ಗ್ರಾಮವನ್ನು ಅಭಿವೃದ್ಧಿಗೊಳಿಸಿದ ವಿಷಯವು ಇವರಲ್ಲಿ ಇಂದಿಗೂ ಇರುವ ಕಾಗದ ಪತ್ರಗಳಿಂದ ತಿಳಿಯಬರುತ್ತದೆ

ಶ್ರೀಮಂತ ಹನುಮಂತಗೌಡರು ೧೮೫೭ನೆ ಇಸವಿ ನವಂಬರು ೧೦ನೆ ತಾರೀಖಿಗೆ ಸರಿಹೋಗುವ ಪಿಂಗಳ ಸಂವತ್ಸರದ ಆಶ್ವೀಜ ಬಹುಳ ಅಷ್ಟಮಿ ಸ್ಥಿರವಾರ, ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲೂಕಿಗೆ ಸೇರಿದ ಲಿಂಗಾಪುರವೆಂಬ ಗ್ರಾಮದಲ್ಲಿ ಶ್ರೀಯುತ ರಾಘವೇಂದ್ರಗೌಡ

---

* ಈ ಗ್ರಾಮವು ಅದಕ್ಕೆ ಮೊದಲು ಲೋಕನಾಥನೆಂಬುವನ ಗೌಡಿಕೆಯಲ್ಲಿತ್ತು ಈತನ ಮಗಳನ್ನು ಶಿಬುಚಿಯವನೊಬ್ಬನು ಬ್ರಾಹ್ಮಣವೇಷದಿಂದ ಬಂದು ಮದುವೆ ಮಾಡಿಕೊಂಡನು ಮುಂದೆ ಕಾರಣಾಂತರಗಳಿಂದ ಆತನ ನಿಜವಾದ ಕುಲವು ಪ್ರಕಟವಾಗಲು ಅಸಹ್ಯವಾದ ದುಃಖದಿಂದ ಲೋಕನಾಥನು ಸಹಕುಟುಂಬವಾಗಿ ಒಂದು ಜಲಪ್ರಪಾತಕ್ಕೆ (ದಬೆಸರಳಿಗೆ) ಹೋಗಿ ಆತ್ಮಹತ್ಯೆ ಮಾಡಿಕೊಂಡನು ಹೀಗಾಗಿ ಆ ಗ್ರಾಮವು ಗೌಡನಿಲ್ಲದೆ ಪಾಳು ಬಿದ್ದುದರಿಂದ ಅದರ ಗೌಡಿಕೆಯು ಲಿಂಗರಸನಿಗೆ ಕೊಟ್ಟಂತೆ ಹೇಳುವ ಒಂದು ಕನ್ನಡ ತಾಮ್ರ ಶಾಸನವು ಶ್ರೀ ಹನುಮಂತಗೌಡರಲ್ಲಿ ಈ ಹೊತ್ತಿಗೂ ಇದೆ.

ಮತ್ತು ಸರಸ್ವತೀಬಾಯಿ ಎಂಬ ದಂಪತಿಗಳಲ್ಲಿ ಹುಟ್ಟಿದರು ಇವರ ಜನಕರಿಗೆ ಇವರು, ಏಕಮಾತ್ರ ಪುತ್ರರೂ ಕೇವಲ ವೃದ್ಧಾಪ್ಯದಲ್ಲಿ ಹುಟ್ಟಿದವರೂ ಆದುದರಿಂದ ಇವರ ಜನನದಿಂದ ಇವರ ಹೆತ್ತವರಿಗೆ ಎಷ್ಟು ಆನಂದವಾಗಿರಬಹುದೋ ಅದನ್ನು ವರ್ಣಿಸಿ ಹೇಳುವುದು ಸಾಧ್ಯವಲ್ಲ ಹೀಗಾಗಿ ಪುತ್ರಜನನದಿಂದ ಕೃತಾರ್ಥರಾದ ಇವರ ತಂದೆಯವರು ತಮ್ಮ ಯೋಗ್ಯತೆಗ ಮೀರಿ ದಾನಧರ್ಮಾದಿಗಳನ್ನು ಮಾಡಿ, ಉತ್ಸವಗಳನ್ನು ನಡೆಯಿಸಿದರು

ಇವರ ವಿದ್ಯಾಭ್ಯಾಸವು ಮೊತ್ತಮೊದಲು ಬಳ್ಳಾರಿಯ ಪ್ರಾವಿನ್ಸಿಯಲ್ ಕಾಲೇಜಿ (Provincial College) ನಲ್ಲಿಯೂ ತರುವಾಯ ಕ್ರಿ. ಶ ೧೮೮೦ರ ಪರ್ಯಂತ ಮದ್ರಾಸ ಪ್ರೆಸಿಡೆನ್ಸಿ ಕಾಲೇಜಿ (Presidency College) ನಲ್ಲಿಯೂ ನಡೆಯಿತು. ಇವರು ಇಂಗ್ಲೀಷಿನಲ್ಲಿ ಪ್ರಥಮ ಶಾಸ್ತ್ರಪರೀಕ್ಷೆಯ (First Examination in Arts) ಪರ್ಯಂತ ಓದಿರುವುದಲ್ಲದೆ ಕಾಯದೆ ಕಾನೂನಿಗೆ ಸಂಬಂಧಪಟ್ಟ ಒಂದೆರಡು ಪರೀಕ್ಷೆಗಳಲ್ಲಿಯೂ ಜಯಿಸಿರುವರು ಅಸಾಧಾರಣ ಮೇಧಾವಿಗಳೆಂದು ಬಹು ಪ್ರಸಿದ್ಧರಾದ ಪ್ರೊಫೆಸರ್ ರಂಗನಾಥ ಮೊದಲಿಯಾರವರು ಇವರ ವಿದ್ಯಾಗುರುಗಳಲ್ಲಿ ಒಬ್ಬರಾಗಿದ್ದರು ಶ್ರೀಯುತ ಹನುಮಂತಗೌಡರಿಗೆ ಮೊದಲಿಂದಲೂ ಸರಕಾರದ ನವ್ರಕರಿಯಲ್ಲಿ ಇಷ್ಟವಿರಲಿಲ್ಲ ಹೊಟ್ಟೆಬಟ್ಟೆಗೆ ಸಾಕಾಗುವಷ್ಟು ಸಂಪನ್ನತೆಯನ್ನು ದೇವರು ದಯೆಪಾಲಿಸಿರುವಾಗ ತಮ್ಮ ಆಯುಷ್ಯವನ್ನೂ ಶಕ್ತಿಯನ್ನೂ ದೇಶಸೇವೆಗಾಗಿಯೇ ವಿನಿಯೋಗಿಸಬೇಕೆಂದೇ ಅಪೇಕ್ಷೆಯಿದ್ದಿತು ಹೀಗಾದುದರಿಂದ—

ಸಂತೋಷಂ ಜನಯೇತ್ಪ್ರಾಜ್ಞಸ್ತದೇವೇಶ್ವರ ಪೂಜನಂ ।
ಜನಾನುಮೋದಕಂ ಕಾರ್ಯಂ ಈಶ್ವರಾರಾಧನೈಸ್ಸಮಂ ॥

ಎಂದು ಭಾವಿಸಿ ಬಹು ಜನ ಸಮಾಜಕ್ಕೆ ಸಂಪದಭಿವೃದ್ಧಿಕರವಾದ ಪರಸ್ಪರ ಸಹಾಯ ನಿಧಿಗಳನ್ನು ಸ್ಥಾಪಿಸಿ, ಕೃಷಿಕರ್ಮಕ್ಕೆ ಅತ್ಯುಪಯುಕ್ತವಾದ ವಿಲಾಯತಿ ಯಂತ್ರಸಾಮಗ್ರಿಗಳನ್ನು ತರಿಸಿ, ಅವನ್ನು ಬಡ ಬೇಸಾಯಗಾರರಿಗೆ ಸುಲಭವಾದ ಕಂತುಗಳಿಂದ ಹಣ ಸಲ್ಲಿಸುವ

ಅನುಕೂಲತೆಯೇರ್ಪಡಿಸಿ ಕೊಡಿಸಿದರು. ಇವರ ಇಂತಹ ಪರೋಪಕಾರಬುದ್ಧಿಗೆ ಮೆಚ್ಚಿ ಮದ್ರಾಸ ರೆವಿನ್ಯೂ ಬೋರ್ಡಸವರು ಇವರನ್ನು ($\frac{1040}{16\ -1888}$ನೇ ಪ್ರೋಸೀಡಿಂಗ್ಸಿನಲ್ಲಿ) ಶ್ಲಾಘಿಸಿದರು, ಮತ್ತು ಈ ದೇಶದಲ್ಲಿ ಲೋಕಲ್ ಬೋರ್ಡುಗಳ ನಿಬಂಧನೆಯು (Local Board Act) ಏರ್ಪಟ್ಟೊಡನೆ ಸರಕಾರದವರು ಇವರನ್ನು ತಾಲೂಕ ಬೋರ್ಡು ಮೆಂಬರಾಗಿ ನೇಮಿಸಿ, ಗೌರವಿಸಿದರು ಅಂದಿನಿಂದ ಈವರೆಗೂ ಮೂವತ್ತು ವರ್ಷಗಳ ಕಾಲ ಶ್ರೀಯುತ ಗೌಡರವರು ಅವಿಚ್ಛಿನ್ನವಾಗಿ ಆ ಸ್ಥಾನದಲ್ಲಿದ್ದು ದೇಶಸೇವೆ ಮಾಡಿರುವರು

ಇಷ್ಟೇ ಅಲ್ಲದೆ, ಇವರು ಹೊಸಪೇಟೆಯ ಯೂನಿಯನ್ ಚೇರ್ಮನ್ (Union Chairman) ರಾಗಿಯೂ ಹಂಪೆಯ ದೇವಸ್ಥಾನದ ಕಮಿಟಿಯ ಮೆಂಬರರಾಗಿಯೂ ಹೊಸಪೇಟೆಯ ಸ್ಪೆಶಲ್ ಮೇಜಿಸ್ಟ್ರೇಟಾ (Special Magistrate) ಗಿಯೂ ಹೊಸಪೇಟೆಯ ತಾಲೂಕ ಬೋರ್ಡು ವೈಸ್-ಪ್ರೆಸಿಡೆಂಟಾಗಿಯೂ ಕೋಯಮುತ್ತೂರು ಅಗ್ರಿಕಲ್ಚರಲ್ (ವ್ಯವಸಾಯ) ಕಾಲೇಜಿನ ಆನರರಿ (ಸನ್ಮಾನಿತ) ವಿಜಿಟರಾ (Honorary Visitor) ಗಿಯೂ ಆರಾರು ವರ್ಷಗಳ ಕಾಲ ಕಾರ್ಯಭಾಗಗಳನ್ನು ಬಹು ಸಮರ್ಪಕವಾಗಿ ನೆರವೇರಿಸಿ ತುಂಬ ಗೌರವವನ್ನೂ ಜನಾನುರಾಗವನ್ನೂ ಸಂಪಾದಿಸಿರುವರು.

ಮದ್ರಾಸು ಸರಕಾರದವರು ನೀರಾವರೀ ವ್ಯವಸಾಯದ ( Irrigation Commission ), ಆರಕ್ಷಕ ಸೇನಾವ್ಯವಸ್ಥೆಯ (Police Commission), ಗ್ರಾಮ ನಿಧಿಗಳ ಸ್ಥಾಪನೆಯ (Institution of Rural Banks), ಪರಸ್ಪರ ಸಹಾಯ ಸಂಘಗಳ ಸ್ಥಾಪನೆಯ (Co-operative Credit Societies), ರಾಜ್ಯ ಪರಿಪಾಲನಾವ್ಯವಸ್ಥೆಯ (Royal Civil Service Commission) ವಿಷಯವೇ ಮುಂತಾದ ಮುಖ್ಯವಾದ ಅನೇಕ ವಿಷಯಗಳನ್ನು ಕುರಿತು ಇವರ ಅಭಿಪ್ರಾಯಗಳನ್ನು ಬರೆಹ ಮೂಲವಾಗಿ ತರಿಸಿಕೊಂಡಿರುವರು.

ಲಾರ್ಡ ಕರ್ಜನ್ (Lord Curzon) ರವರು ಈ ದೇಶದ ವೈಸರಾಯರಾಗಿದ್ದು ದೆಹಲಿಯು ದರ್ಬಾರು ನಡೆಯಿಸಿದ ಕಾಲದಲಿ ಶ್ರೀಯುತ ಗೌಡರಿಗೆ "ರಾಯ ಬಹದ್ದೂರ್" ಎಂಬ ಬಿರುದು ಕೊಡಲ್ಪಟ್ಟಿತು ಹಾಗೆಯೇ ಕಳೆದ ೧೯೧೧ನೇ ಇಸವಿಯಲ್ಲಿ ಜಾರ್ಜ ಸಾರ್ವಭೌಮರು ಇಲ್ಲಿಗೆ ದಯಮಾಡಿಸಿ ದೆಹಲಿಯಲ್ಲಿ ಪಟ್ಟಾಭಿಷೇಕ ಮಹೋತ್ಸವವು ನಡೆದಾಗ ಇವರಿಗೆ ದರ್ಬಾರು ಮೆಡಲು ಒಂದನ್ನೂ ರಾಜಸನ್ಮಾನ ಪತ್ರಿಕೆಯೊಂಧನ್ನೂ ಮದ್ರಾಸು ಸರಕಾರದವರು ಕೊಡಿಸಿ ಗೌರವಿಸಿದರು.

ಇಂಗ್ಲಿಷ್ ಸರಕಾರದವರಿಂದ ಈ ರೀತಿ ಸನ್ಮಾನ ಹೊಂದಿರುವುದಲ್ಲದೆ, ಶ್ರೀಯುತ ಗೌಡರವರು ಮೈಸೂರು ಮತ್ತು ಬರೋಡೆಯ ಮಹಾರಾಜರ ಹಾಗೂ ಗದ್ವಾಲ, ಆನೆಗೊಂದಿ ಮುಂತಾದ ಸಂಸ್ಥಾನಗಳ ಪ್ರಭುಗಳ ಗೌರವಕ್ಕೂ ಪಾತ್ರರಾಗಿ ಅವರುಗಳಿಂದ ಆಗಿಂದಾಗ ಶಾಲುಜೋಡಿಯೇ ಮುಂತಾದ ಮರ್ಯಾದೆಗಳನ್ನು ಹೊಂದಿರುವರು. ಯಾವ ದೊಡ್ಡ ಪಾಶ್ಚಿಮಾತ್ಯ ಅಥವಾ ದೇಶೀಯ ಅಧಿಕಾರಿಗಳು ಹೊಸಪೇಟೆಗೆ ಹೋದರೂ ನಮ್ಮ ಕಥಾನಾಯಕರ ಅತಿಥ್ಯವನ್ನು ಸ್ವೀಕರಿಸದೆ ಹೋಗುವುದೇ ಇಲ್ಲವು

ಶ್ರೀಯುತ ಗೌಡರವರಿಗೆ ಇಂಗ್ಲೀಷು, ಕನ್ನಡ ಮತ್ತು ತೆಲಗು ಭಾಷೆಗಳಲ್ಲಿ ಉತ್ತಮವಾದ ಪರಿಚಯವಿರುವುದು. ಮತ್ತು ಈಮೂರು ಭಾಷೆಗಳಲ್ಲಿಯೂ ಇವರು ಗ್ರಂಥಗಳನ್ನು ಬರೆದಿರುವರು

ಇವರು ತಾಲೂಕು ಬೋರ್ಡು ವಾಯಿಸ್ ಪ್ರೆಸಿಡೆಂಟರಾಗಿದ್ದಾಗ ಬರೆದ "ಸಾಂಕ್ರಾಮಿಕ ಜಾಡ್ಯಗಳು" ಮತ್ತು "ಪ್ಲೇಗು ನಿವಾರಣೋಪಾಯ"ವೇ ಮುಂತಾದ ಪುಸ್ತಕಗಳೂ, ಅಗ್ರಿಕಲ್ಚರಲ್ ಕಾಲೇಜಿನ ವಿಜಿಟರಾಗಿದ್ದಾಗ ಬರೆದ "ದಕ್ಷಿಣ ದೇಶದ ವ್ಯವಸಾಯ" ವಂಬ ಪುಸ್ತಕವೂ ತಜ್ಞರಿಂದ ಬಹುವಾಗಿ ಹೊಗಳಲ್ಪಟ್ಟಿವೆ.

ಇವರು ಕನ್ನಡದಲ್ಲಿ, ೧ ಭಕ್ತಿವಿಜಯ, ೨ ಪ್ರಮಿಲಾರ್ಜುನೀಯ, ೩ ಸುಭದ್ರಾರ್ಜುನೀಯ, ೪ ಪ್ರಚ್ಛನ್ನ ಪಾಂಡವೀಯ, ೫

ಉತ್ತರರಾಮ ಚರಿತ್ರ ೬ ಹರಿಶ್ಚಂದ್ರ, ೭ ಭೋಜಚರಿತ್ರೆ ಎಂಬ ನಾಟಕಗಳನ್ನೂ, ೧ ಕಮಲಾ ಸುಂದರಿ, ೨ ಕುಮುದ ಸುಂದರಿ ಎಂಬ ಕಲ್ಪನಾ ಪ್ರಬಂಧಗಳನ್ನೂ ಶ್ರೀರಾಘವೇಂದ್ರ ಸ್ವಾಮಿಗಳವರ ಮತ್ತು ಶ್ರೀವಿದ್ಯಾರಣ್ಯಸ್ವಾಮಿಗಳ ಚರಿತ್ರೆಗಳನ್ನೂ ಬರೆದಿರುವರು ಇದು ಇವರ ಭಾಷಾಭಿಮಾನವನ್ನು ಚೆನ್ನಾಗಿ ವ್ಯಕ್ತಪಡಿಸುವುದಾಗಿದೆ ಮೇಲ್ಕಂಡ ಪುಸ್ತಕಗಳಲ್ಲದೆ ತೆಲುಗಿನಲ್ಲಿ ೧ ಹಿರಣ್ಯಾಕ್ಷವ್ಯಾಯೋಗ ೨ ಭಕ್ತಿವಿಜಯ, ೩ ರುಕ್ಮಾಂಗದ, ೪ ಸುಭದ್ರಾ, ೫ ದ್ರೌಪದೀಸ್ವಯಂವರವೆಂಬ ನಾಟಕಗಳನ್ನೂ ಶಂತಸದ್ವೀಪ ಚಕ್ರವರ್ತಿ ಎಂಬ ರೂಪಾಂತರಿಕ (Adapted) ಕಲ್ಪನಾಪ್ರಬಂಧವನ್ನೂ ನರಪತಿವಂಶಾವಳಿ ಹಂಪೀದರ್ಶಿನೀ ಎಂಬ ಇತಿಹಾಸ ಪುಸ್ತಕಗಳನ್ನೂ ಬರೆದಿರುವರು. ಹಾಗೆಯೇ ಇಂಗ್ಲಿಷಿನಲ್ಲಿಯೂ ೧ Guide to the ruins of Ancient Vizayanagar, ೨ Life of Sri Madhwacharya, ೩ Life of Valmiki ಇತ್ಯಾದಿ ಪುಸ್ತಕಗಳನ್ನೂ ಬರೆದಿರುವರು ಹೀಗಾದುದರಿಂದ ಇತರ ಸತ್ಕಾರ್ಯಗಳೊಂದಿಗೆ ಇವರ ಭಾಷಾಸೇವೆಯು ಕೂಡ ಬಹುಕಾಲ ಜನರುಗಳ ಸ್ಮರಣೆಯಲ್ಲಿರದೆ ಹೋಗದೆಂದು ನಂಬುಗೆಯಾಗಿ ಹೇಳಬಹುದಾಗಿದೆ

ಶ್ರೀಯುತ ಗೌಡರವರು ಪಾಶ್ಚಿಮಾತ್ಯ ವಿದ್ಯಾಸುಸಂಸ್ಕೃತರಾಗಿಯೇ ಇರುವರಾದರೂ ಪೂರ್ವಾಚಾರಗಳಲ್ಲಿಯೂ ದೇವಗುರುಬ್ರಾಹ್ಮಣರಲ್ಲಿಯೂ ಇವರಿಗೆ ಅತ್ಯಧಿಕವಾದ ಭಕ್ತಿಯಿರುವುದು ಕಾಶಿ, ಗಯಾ, ಹರಿದ್ವಾರ, ರಾಮೇಶ್ವರವೇ ಮೊದಲಾದ ಕ್ಷೇತ್ರಗಳನ್ನೂ ಸಂದರ್ಶಿಸಿ ಬರುತ್ತ, ತಾವು ತಂದಿದ್ದ ಅಮೃತಶಿಲೆಯ ಶ್ರೀಮದಾಂಜನೇಯ ಪ್ರತಿಮೆಯನ್ನೂ ನರ್ಮದಾ ಶಿವಲಿಂಗವನ್ನೂ ಶ್ರೀರಾಮ ಲಕ್ಷ್ಮಣ ಸೀತಾಸಮೇತವಾಗಿ ಒಂದು ದೇವಾಲಯದಲ್ಲಿ ಪ್ರತಿಷ್ಠಿಸಿ, "ತಾರಾಬಾಯಿ ಅಗ್ರಹಾರ*" ವೆಂಬ 'ಒಂದು ಚಿಕ್ಕ ಅಗ್ರಹಾರವನ್ನು ಕಟ್ಟಿಸಿ, ವೇದಾಭ್ಯಾಸಕ್ಕೂ ದೇವಬ್ರಾಹ್ಮಣ ಅತಿಥಿಗಳ ಪೂಜೆಗೂ

* ಇದು ಚರಿತ್ರನಾಯಕರ ಸೋದರಿಯ ಹೆಸರು

ಅನುಕೂಲ ಪಡಿಸಿ, ಪ್ರತಿನಿತ್ಯವೂ ಸಂಜೆಯ ಹೊತ್ತು ಅಲ್ಲಿ ರಾಮ ಭಜನೆ ನಡೆಯಿಸುತ್ತಿರುವರು

ಶ್ರೀಯುತ ಗೌಡರ ವಂಶದವರು ಪ್ರಕೃತದಲ್ಲಿ ವೈಷ್ಣವ ಸಂಪ್ರದಾಯವನ್ನನುಸರಿಸುತ್ತಿರುವರಾದರೂ ಮೂಲದಲ್ಲಿ ಇವರ ಪೂರ್ವಜರು ದೇಶಸ್ಥಸ್ಮಾರ್ತ ಬ್ರಾಹ್ಮಣರಾಗಿದ್ದಂತೆಯೂ ಸುಮಾರು ೨೦೦ ವರ್ಷಗಳಿಗೆ ಹಿಂದೆ ಶ್ರೀರಾಘವೇಂದ್ರಸ್ವಾಮಿಗಳವರ ಮಠದಿಂದ ಮುದ್ರೆ ತೆಗಿದುಕೊಂಡಂತೆಯೂ ತಿಳಿಯ ಬರುತ್ತಿದೆ ಯಾವ ಸಂಪ್ರದಾಯವೇ ಆಗಲಿ, ಶ್ರೀಗೌಡರಲ್ಲಿ ಮತವೈಷಮ್ಯವು ಈಷತ್ತಾದರೂ ಇಲ್ಲವೆಂಬುದು ಅವರ ನಿಷ್ಪಕ್ಷಪಾತವರ್ತನೆ, ದಾನಧರ್ಮ, ಗ್ರಂಥ ಲೇಖನಾದಿಗಳಿಂದ ಸ್ಪಷ್ಟವಾಗಿ ತಿಳಿಯ ಬರುತ್ತಿದೆ

ಶ್ರೀಯುತ ಗೌಡರವರು ಮಾಡಿದ ಕೆಲಕೆಲವು ಜನೋಪಕಾರ ಕೃತ್ಯಗಳನ್ನು ಇಲ್ಲಿ ಹೇಳಬಹುದಾಗಿದೆ. ಇವರು ಬೇಸಾಯಗಾರರಿಗಾಗಿ ಸುಮಾರು ಮೂರುಸಾವಿರಕ್ಕಿಂತ ಹೆಚ್ಚು ಕಬ್ಬಿಣದ ಯಂತ್ರಗಳನ್ನು ತರಿಸಿ ಸುಲಭವಾದ ಕಂತುಗಳಿಂದ ಹಣ ಬರಮಾಡಿಕೊಳ್ಳುವ ಹಾಗೆ ಕೊಡಿಸಿದ ವಿಷಯವು ಈ ಮೊದಲೇ ಹೇಳಲಾಗಿದೆ. ಇಂದಿಗೂ ಈ ಯಂತ್ರಗಳು "ಗೌಡರ ಯಂತ್ರಗಳು" ಎಂದು ಕರೆಯಲ್ಪಡುತ್ತಿವೆ. ಹೊಸಪೇಟೆಯ ಉತ್ತರಭಾಗದಲ್ಲಿ "ವಿಕ್ಟೋರಿಯಾ ಪೇಟೆ" ಎಂಬುದಾಗಿ ಮಾಡಿದ ಬಡಾವಣೆಯು (Extension) ಶ್ರೀ ಗೌಡರ ಅಸಾಮಾನ್ಯ ಸಾಹಸದ ಫಲವಾಗಿದೆ. ನಾರಾಯಣ ದೇವರ ಕೆರೆಯಲ್ಲಿದ್ದ ಮುನ್ಸಿಫ್‌ಕೋರ್ಟನ್ನು ಹೊಸಪೇಟೆಗೆ ಬರುವಂತೆ ಮಾಡಿಸಬೇಕೆಂದು ಗವರ್ನರರನ್ನು ಪ್ರಾರ್ಥಿಸಿ ಸಾಧ್ಯಪಡಿಸಿಕೊಂಡವರೂ ಇವರೆ! ಇನ್ನು ವೆನಲಾಕ್ ಉದ್ಯಾನ(Wenlock Park), ಜಯಲಕ್ಷ್ಮೀಭವನ (Jayalaxmi Hall)ಮುಂತಾದ ಸಾರ್ವಜನಿಕ ವಿನೋದಸ್ಥಾನಗಳನ್ನು ಸ್ಥಾಪಿಸುವಲ್ಲಿಯೂ ಇವರ ಪ್ರಯತ್ನಗಳೇ ತುಂಬ ಸಹಾಯಕಾರಿಗಳಾಗಿರುವವು. ೧೮೯೯ರಲ್ಲಿ ಹೊಸಪೇಟೆಯೊಳಗೆ ಪ್ಲೇಗು ಪ್ರಾರಂಭವಾ

ದಾಗ ಬಡಜನರ ಸೌಕರ್ಯಕ್ಕಾಗಿ ಶ್ರೀಯುತ ಗೌಡರು ಪಟ್ಟ ಕಷ್ಟಗಳನ್ನು ಅಷ್ಟಿಷ್ಟೆಂದು ಹೇಳಬರುವಂತಿಲ್ಲ. ಹೀಗೆ ಕಳೆದ ಮುವ್ವತ್ತು (೩೦) ವರ್ಷಗಳಲ್ಲಿ ಯಾವ ಸಭೆಯೇ ಆಗಲಿ, ಯಾವ ಪರೋಪಕಾರ ಕೃತ್ಯವೇ ಆಗಲಿ, ನಡೆದಿದ್ದರೆ, ನಮ್ಮ ಕಥಾನಾಯಕರಿಗೆ ಅದರಲ್ಲಿ ಪ್ರಬಲವಾದ ಅಂಗವಿಲ್ಲದೆ ಇಲ್ಲ.

ಶ್ರೀಯುತ ಗೌಡರವರಿಗೆ ನಾಟಕಗಳಲ್ಲಿ ಪ್ರೀತಿ ಹೆಚ್ಚು. ಭೂಮಿಕೆಗಳನ್ನು ವಹಿಸಿ ಅಪ್ರತಿಮವಾಗಿ ನಟಿಸಬಲ್ಲರು. ಗಾನಜ್ಞಾನವೂ ಚೆನ್ನಾಗಿರುವದು. ಕಳೆದ ಮುವ್ವತ್ತು ವರ್ಷಗಳಿಂದ ಆಂಧ್ರ-ಕರ್ನಾಟಕ ದೇಶಗಳಲ್ಲಿ 'ಸರಸವಿನೋದಿನೀ ಸಭಾ' ಎಂಬುದಾಗಿ ಪ್ರಸಿದ್ಧಿಗೇರಿದ ಬಳ್ಳಾರಿಯ ನಾಟಕ ಸಭೆಗೆ ಇವರು ಮೊದಲು ಉಪಾಧ್ಯಕ್ಷರಾಗಿಯೂ ಈಗ ಅಧ್ಯಕ್ಷರಾಗಿಯೂ ಇದ್ದು ಅದನ್ನು ಉನ್ನತಪದವಿಯಲ್ಲಿ ಕಾಪಾಡಿಕೊಂಡಿರುವರು.

ಆಹಾರ-ಪಾನಗಳಲ್ಲಿಯೂ ಉಡಿಗೆ-ತೊಡಿಗೆಗಳಲ್ಲಿಯೂ ಅಭ್ಯಾಸಗಳಲ್ಲಿ ಶ್ರೀಯುತ ಗೌಡರವರು ಬಹು ಸರಳರು. ಇವರಲ್ಲಿ ಕೆಲವು ಶ್ರೀಮಂತ-ರಾಜಮಾನ್ಯರೊಳಗೆ ವಾಡಿಕೆಯಾಗಿ ಕಂಡುಬರುವ ಯಾವ ದುರ್ವ್ಯಸನವೂ ಕಂಡುಬರುವುದಿಲ್ಲ. ಈ ಹೊತ್ತಿಗೂ ಕೇವಲ ತರುಣರಿಗೂ ಹೆಚ್ಚಿನ ಚಟುವಟಿಕೆಯೊಡನೆ ಅಹೋರಾತ್ರಿ ವಾಚನ—ಲೇಖನಾದಿಗಳಿಂದ ಕಾಲಕ್ಷೇಪಮಾಡುತ್ತಿರುವರು. ನಿರ್ದುಷ್ಟವಾದ ದೇಶಭಕ್ತಿಯೂ ಅಕೃತ್ರಿಮವಾದ ರಾಜಭಕ್ತಿಯೂ ಯಥಾರ್ಥವಾದ ದೇವಗುರುಭಕ್ತಿಯೂ ಅಕುಟಿಲವರ್ತನವೂ ಸ್ನೇಹಿತರಲ್ಲಿ ಅಂತರಿಕವಾದ ಪ್ರೇಮವೂ-ಇವರ ವಿಷಯದಲ್ಲಿ ಹೇಳಬಹುದಾದ ಕೆಲಕೆಲವು ಸದ್ಗುಣಗಳಾಗಿವೆ. ಇವರ ಪತ್ನಿಯಾದ ಶ್ರೀಮತಿ, ಸೌಭಾಗ್ಯವತಿ, ಸುಂದರಾಬಾಯಿಯವರು ದೊಡ್ಡ ಕುಟುಂಬಕ್ಕೆ ಸೇರಿದವರು; ಪ್ರಕೃತಪಟ್ಟಣದಲ್ಲಿ ಸುಪ್ರಸಿದ್ಧ ಅಸಿಸ್ಟೆಂಟ್ ಕಮಿಶನರಾಗಿದ್ದ ಶ್ರೀನಿವಾಸರಾಯರಿಗೆ ಇವರು ಮೊಮ್ಮಗಳಾಗಬೇಕು. ಇವರು ಸರ್ವವಿಧದಲ್ಲಿಯೂ "ಪತಿಗೆ ಅನು

ಕೂಲಿಯಾದಸತಿ'' ಯೆನಿಸಿ ನಾಲ್ವರು ಗಂಡು ಮಕ್ಕಳನ್ನೂ ಮೂವರು ಹೆಣ್ಣುಮಕ್ಕಳನ್ನೂ ಪಡೆದು, ಕುಟುಂಬಭಾರವನ್ನು ಸಮರ್ಪಕವಾಗಿ ನಿರ್ವಹಿಸುತ್ತ ಪುತ್ರಪೌತ್ರಿಯರೊಡನೆ ಧನಧಾನ್ಯ ಸಂಪತ್ತುಗಳಿಂದ ಕೂಡಿ ಮೆರೆಯುತ್ತಿರುವರು.

ಶ್ರೀಯುತ ಗೌಡರವರಿಗೂ ಅವರ ಕುಟುಂಬದವರಿಗೂ ಪರಮಾತ್ಮನು ಸಮಸ್ತ ಸನ್ಮಂಗಳಂಗಳನ್ನೂ ದಯಪಾಲಿಸಲೆಂದು ಪ್ರಾರ್ಥಿಸಿ ಈ ಲೇಖನವನ್ನು ಇಲ್ಲಿಗೆ ಪೂರ್ಣಗೊಳಿಸುವೆವು

—ಭಾರದ್ವಾಜ—

# ಮಹಿಳಾ ಸೇವಾಸಮಾಜ.

(ಬೆಂಗಳೂರು)

ಈ ಸಮಾಜದ ೩ನೇ ವಾರ್ಷಿಕೋತ್ಸವವು ೧೯೧೭ನೆ ಸೆಪ್ಟಂಬರ್ ೨೯ನೆ ತಾ|| ಶನಿವಾರ ಸಾಯಂಕಾಲ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು ಹಾಲಿನಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ೨೫೦ಜನ ಸ್ತ್ರೀಯರಿಗಿಂತಲೂ ಹೆಚ್ಚಾಗಿಯೇ ಸಭೆಸೇರಿದ್ದರು ಮದ್ರಾಸು ಹೈಕೋರ್ಟು ಜಡ್ಜಿಯವರಾದ ಮ ರಾ ಶ್ರೀ ಟಿ ಸದಾಶಿವ ಅಯ್ಯರವರ ಪತ್ನಿಯವರಾದ ಶ್ರೀಮತಿ ಸೌಮಂಗಳಾಂಬಾಯವರು ಅಗ್ರಾಸನವನ್ನು ವಹಿಸಿದ್ದರು

ಸಾಯಂಕಾಲ ೪ ಘಂಟೆಗೆ ಸರಿಯಾಗಿ ಅಗ್ರಾಸನಾಧಿಪತಿಗಳವರು ಮೋಟಾರ್ ಗಾಡಿಯಿಂದ ಸಂಸ್ಕೃತ ಕಾಲೇಜ್‌ಹಾಲ್ ಬಳಿ ಇಳಿದರು ಅವರನ್ನು ಸಮಾಜದ ಪ್ರೆಸಿಡೆಂಟರವರಾದ ಶ್ರೀಮತೀ ಸೌ ಪಾರ್ವತಿ ಅಮ್ಮನವರೂ ಮತ್ತು ಸಮಾಜದ ಸೆಕ್ರೆಟರಿಯವರಾದ ಶ್ರೀ|| ಸೌ|| ರಂಗಮ್ಮನವರೂ ಬಹಳ ಆದರಪೂರ್ವಕವಾಗಿ ಬರಮಾಡಿಕೊಂಡು ಹಾಲಿನಲ್ಲಿ ಅವರಿಗಾಗಿ ಸಿದ್ಧಪಡಿಸಿದ್ದ ದಿವ್ಯಾಸನದಲ್ಲಿ ಕುಳ್ಳಿರಿಸಿದರು. ಅವರು ಹಾಲ್‌ನಲ್ಲಿ ಪ್ರವೇಶಿಸಿದೊಡನೆಯೇ ಚಿ|| ಸೌ|| ವೇಂಬು ಅಮ್ಮನವರೂ ಮತ್ತು ಸೌ|| ಲಕ್ಷ್ಮೀದೇವಮ್ಮನವರೂ ಸಹ ದೇವರ ಪ್ರಾರ್ಥನೆಯನ್ನೂ ಸ್ವಾಗತ ಕೀರ್ತನೆಯನ್ನೂ ಬಹು ಸ್ವಾರಸ್ಯವಾಗಿ ಹಾಡಿದರು ಅನಂತರ ಮ|| ರಾ|| ಶ್ರೀ ಚೆಂಗೈಯಶೆಟ್ಟರವರ ಕುಮಾರ್ತಿಯಾದ ಸೌ|| ಜೀವರತ್ನಮ್ಮನವರು ವೀಣೆಯನ್ನು ಬಹು ರಮಣೀಯವಾಗಿ ನುಡಿಸಿದರು ಸಮಾಜದ ಪ್ರೆಸಿಡೆಂಟರವರು ಅಗ್ರಾಸನಾಧಿಪತಿಗಳ ಸುಗುಣಾವಳಿಗಳನ್ನೂ ಅವರು ನೆರವೇರಿಸುತ್ತಿರುವ ಲೋಕೋಪಕಾರಕ ಕಾರ್ಯಗಳನ್ನೂ ಸ್ವಲ್ಪಮಟ್ಟಿಗೆ ವಿವರಿಸಿ, ಅವರು ಸಮಾಜಕ್ಕೆ ಬಂದು ಅಗ್ರಾಸನವನ್ನು ವಹಿಸಿದ್ದು ಸಮಾಜದ ಭಾಗ್ಯೋದಯವೆಂದೂ ತಿಳಿಸಿದರು

ಸಮಾಜದ ಸೆಕ್ರೆಟರಿಯವರಾದ ಶ್ರೀಮತಿ ಸೌ|| ರಂಗಮ್ಮನವರು ೧೯೧೬—೧೯೧೭ನೆ ವರ್ಷದ ರಿಪೋರ್ಟನ್ನು ಕನ್ನಡದಲ್ಲಿ ಓದಿದರು. ಅನಂತರ ಅಗ್ರಾಸನಾಧಿಪತಿಗಳು ಎದ್ದು ಇಲ್ಲಿ ನಡೆದ ಸಂಗತಿಗಳೆಲ್ಲವೂ ತಮಗೆ ಅಪಾರವಾದ ಸಂತೋಷವನ್ನು ಉಂಟುಮಾಡಿದವೆಂದೂ ಸಮಾಜದಿಂದ ಇಲ್ಲಿಯ ಹೆಣ್ಣುಮಕ್ಕಳಿಗೆ ಎಷ್ಟೋ ಉಪಕಾರವಾಗುತ್ತಿರುವುದೆಂದೂ ಸ್ತ್ರೀಯರಿಗೆ ವಿದ್ಯಾಭ್ಯಾಸವು ಬಹು ಮುಖ್ಯವಾಗಿಯೂ ಸ್ತ್ರೀವಿದ್ಯಾಭ್ಯಾಸವು ಮೈಸೂರುರಾಜ್ಯದಲ್ಲಿ ಪ್ರಾರಂಭಿಸಿದಾಗ್ಯೂ ಈ ವರೆಗೆ ಎಷ್ಟು ಮಟ್ಟಿನ ಅಭಿವೃದ್ಧಿಯನ್ನು ನಿರೀಕ್ಷಿಸಬಹುದೋ ಅಷ್ಟು ಅಭಿವೃದ್ಧಿ ಹೊಂದಿಲ್ಲವೆಂದೂ ವಿದ್ಯಾವತಿಯರಲ್ಲಿಯೂ ನಮ್ಮ ಉತ್ಕೃಷ್ಟವಾದ ಪುರಾತನ ಪದ್ಧತಿಗಳು ಕ್ರಮೇಣ ಲೀನವಾಗುತ್ತಿರುವುದು ಬಹು ಶೋಚನೀಯವಾಗಿರುತ್ತದೆಂದೂ ಇದಕ್ಕಾಗಿ ಇಂತಹ ಸಮಾಜಗಳು ಅತ್ಯವಶ್ಯಕವೆಂದೂ ಇದೂ ಅಲ್ಲದೆ ಈಗ ಸಮಾಜದ ಪ್ರೆಸಿಡೆಂಟರವರಾದ ಶ್ರೀ|| ಸೌ|| ಪಾರ್ವತಿಅಮ್ಮನವರು ತಮ್ಮದೇಹಾರೋಗ್ಯ ಸುಖಸಂಪತ್ತುಗಳನ್ನೂ ಲಕ್ಷ್ಯಮಾಡದೆ ಸಮಾಜಕ್ಕಾಗಿ ತನುಮನೋ-ಧನಗಳನ್ನು ವಿನಿಯೋಗಿಸುತ್ತಿರುವುದು ತುಂಬಾ ಶ್ಲಾಘನೀಯವಾದುದೆಂದೂ ಹೀಗೆಯೇ ಸಮಾಜವು ದಿನೇದಿನೇ ವೃದ್ಧಿಹೊಂದಿ ಏಳಿಗೆಗೆ ಬರಬೇಕೆಂದು ಭಗವಂತನಲ್ಲಿ ಪ್ರಾರ್ಥಿಸುವುದಾಗಿಯೂ ತಮಿಳಿನಲ್ಲಿ ಭಾಷಣಮಾಡಿದರು

ಸಮಾಜದ ಪ್ರೆಸಿಡೆಂಟರವರು ಅಗ್ರಾಸನಾಧಿಪತಿಗಳಿಗೆ ಸಮಾಜದ ಮೆಂಬರುಗಳ ಪರವಾಗಿ ಕೃತಜ್ಞತೆಯನ್ನೂ ವಂದನೆಗಳನ್ನೂ ಅರ್ಪಿಸಿದರು

ಅನಂತರ ಸಮಾಜದ ವಿದ್ಯಾರ್ಥಿನಿಯರೂ ಇನ್ನೂ ಇತರ ಹೆಣ್ಣುಮಕ್ಕಳೂ ಹಾರ್ಮೋನಿಯಂ ಬಾರಿಸಿ ಶ್ರೀಮನ್‌ಮಹಾರಾಜರವರಿಗೂ, ಶ್ರೀಮನ್ ಚಕ್ರವರ್ತಿಗಳವರಿಗೂ ಮಂಗಳ ಹಾಡಿದನಂತರ ಅಲ್ಲಿ ನೇರಿದ್ದ ಸ್ತ್ರೀಯರಿಗೆಲ್ಲಾ ಗಂಧಪುಷ್ಪ ತಾಂಬೂಲ ಸಮರ್ಪಣೆಯಾಗಿ ಸಭೆಯು ಮುಕ್ತಾಯವಾಯಿತು

---

# ದೇಶೋನ್ನತಿ

(೧೦ನೆ ಸಂಚಿಕೆಯಿಂದ ಮುಂದೆಸಾಗಿರುದು)

ಅಭ್ಯುದಯಾಕಾಂಕ್ಷಿಣಿಯರಾದ ಆರ್ಯ ಭಗಿನಿಯರೇ,

ನಮ್ಮ ಧರ್ಮಭಗಿನಿಯರಲ್ಲಿ ಸಭೆಸೇರಿಯೂ ಒಟ್ಟೊಟ್ಟಾಗಿಯೂ ದೇಶೋನ್ನತಿಗಾಗಿ ಹೆಣ್ಣು ಹುಡುಗಿಯರಿಗೆ ವಿವಾಹದ ವಯಸ್ಸನ್ನು ಹೆಚ್ಚಿಸಬೇಕೆಂದೂ, ಸ್ತ್ರೀಪುನರ್ವಿವಾಹವನ್ನು ಆಚರಣೆಗೆ ತರಬೇಕೆಂದೂ, ಅಭಿವಾ ಯಪಡುತ್ತಿರುವದೂ, ದೇಶಬಂಧುಗಳು ಮತುಮತೀ ವಿವಾಹವನ್ನು ಮಾಡಬೇಕೆಂದೂ, ಬಾಲಿಕಾವಿವಾಹವನ್ನು ನಿರೋಧಿಸಬೇಕೆಂದೂ, ಇತ್ಯಾದಿ ವಾದಗಳು ಬಹುಮುಖದಿಂದ ಹೊರಬೀಳುತ್ತಿರುವದು, ನಿಮ್ಮ ಅವಗಾಹನೆಗೆ ಬಂದೇ ಇರಬೇಕಲ್ಲವೆ! ಈ ವಿಷಯದಲ್ಲಿ ನನ್ನ ಅನುಭವದ ಒಂದೆರಡು ಮಾತುಗಳನ್ನು ನಿಮ್ಮ ಗೋಚರಕ್ಕೆ ತರಬೇಕೆಂದು ಪ್ರಯತ್ನಿಸಿರುವೆನು ವಿವೇಕಶಾಲಿಯರಾದ ನೀವು ಎರಡೂಪಕ್ಷದ ನುಡಿಗಳನ್ನು ಸಮಾಲೋಚಿಸಬೇಕೆಂದು ಕೋರುವೆನು

ನಮ್ಮ ಘನಸರಕಾರದವರು ವಿವಾಹ ವಿಧಿಯನ್ನು ಹಿಂದೆಯೇ ಜಾರಿಗೆ ತಂದಿರುವರು ಅದರಲ್ಲಿ ಹೆಂಣು ಹುಡುಗಿಯರಿಗೆ ೮ ವರುಷಕ್ಕೆ ಮೊದಲು ವಿವಾಹ ಮಾಡಕೂಡದೆಂದೂ ೫೦ ವಯಷಕ್ಕೆ ಮೀರಿದ ವಯುಸ್ಸಿನ ಪುರುಷನು ೧೪ ವರ್ಷಕ್ಕೆ ಒಳಪಟ್ಟ ಕನ್ಯೆಯನ್ನು ಮದುವೆಯಾಗಕೂಡದೆಂದೂ, ವಿಧಿಸಿರುವರು. ಈ ನಿಯಮಕ್ಕೆ ತಪ್ಪಿ ನಡೆದರೆ ಶಿಕ್ಷೆಯನ್ನು ವಿಧಿಸಿರುವರು.

೮ ವರ್ಷಕ್ಕೆ ಮೇಲ್ಪಟ್ಟ ಹುಡುಗಿಯರ ಮದುವೆಗೆ ನಿಷೇಧ ವಿಧಿಯಿಲ್ಲದಿದ್ದರೂ ಪ್ರತಿಯೊಂದು ಹಳ್ಳಿ, ಗ್ರಾಮ, ಪಟ್ಟಣಗಳಲ್ಲಿಯೂ, ೧೩–೧೪—೧೫ವರ್ಷ ವಯುಸ್ಸಿನ ಕನ್ಯೆಯರನ್ನೂ ವರನಿಗಾಗಿ

ಅಲೆಯುತ್ತಿರುವ ತಾಯಿ ತಂದೆಯರನ್ನು ಎಲ್ಲರೂ ನೋಡುತ್ತಿರುವಿರಲ್ಲವೆ?

ದೇಶದಲ್ಲಿ ವಿದ್ಯಾಭಿವೃದ್ಧಿಯಾಗಬೇಕೆಂದು ದೇಶೀಯರೂ, ಸರಕಾರದವರೂ, ಸಹ ಮಿತಿಯಿಲ್ಲದಷ್ಟು ಪ್ರಯತ್ನಪಟ್ಟಿರುವುದೂ, ಪಡುತ್ತಿರುವುದೂ, ದೇಶಕ್ಕೆ ಆನಂದಕರವಾಗಿದೆ

ನಮ್ಮ ಸರಕಾರದವರಾದರೂ ವ್ಯವಸಾಯವೇ ಜೀವನೋಪಾಯಕ್ಕೆ ಸಾಕೆಂದು ನಿರ್ಧರಿಸಿ ವಿದ್ಯೆಯಲ್ಲಿ ಹಿಂದುಳಿದವರು ಸಂಖ್ಯೆಯಲ್ಲಿ ಅಧಿಕರಾಗಿರುವದನ್ನು ನೋಡಿ, ಅವರ ವಿದ್ಯಾಭ್ಯಾಸದ ಅನುಕೂಲತೆಗಾಗಿ ಅವರಿಗೆ ವಿದ್ಯಾರ್ಥಿವೇತನಕ್ಕೆಂದು ವರ್ಷಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು, ಪಾಠಶಾಲೆಗಳನ್ನು ಹೇರಳವಾಗಿ ಸ್ಥಾಪಿಸಿರುವರು ಸರಕಾರದವರ ಪ್ರೋತ್ಸಾಹವನ್ನು ನೋಡಿ ಅನೇಕರು ವ್ಯಾಸಂಗಕ್ಕೆ ಉಪಕ್ರಮಿಸಿಯೂ ಇರುವರು ಈಗ ಸರಕಾರದವರು ಗೊತ್ತುಮಾಡಿರುವ ದ್ರವ್ಯವು ಅಲ್ಪವೆಂದೇ ಹೇಳಬಹುದಾಗಿದೆ ಇನ್ನು ಇಷ್ಟನ್ನಾದರೂ ದಯಪಾಲಿಸುವ ಪಕ್ಷದಲ್ಲಿ ಹಿಂದುಳಿದವರಲ್ಲಿ ಹೆಂಣು ಹುಡುಗಿಯರು ಗಂಡು ಹುಡುಗರು ಸೇರುವದರಲ್ಲಿ ಸಂದೇಹವಿಲ್ಲ

ಇಂಡಿಯಾ ಗವರ್ನಮೆಂಟಿಗೆ ಸೇರಿದ ಬೊಂಬಾಯಿ, ಮದ್ರಾಸು ಅಲಹಾಬಾದ, ಕಲಕತ್ತಾ, ಪಂಜಾಬ, ಮೊದಲಾದ ವಿದ್ಯಾಂಗದವರು ಗೊತ್ತುಮಾಡಿರುವ ' ಫೀ"ಗಿಂತಲೂ ನಮ್ಮ ಸರಕಾರದವರು ಅರೆವಾಸಿಯನ್ನು ಕಡಿಮೆಮಾಡಿರುತ್ತಾರಾದರೂ ನಿರುದ್ಯೋಗಿಗಳಾದವರು ಪ್ರೌಢ ವಿದ್ಯಾಭ್ಯಾಸಕ್ಕಾಗಿ ಶ್ರಮಪಡು
ಅಂಕವೇ ಆಗಿದೆ.

ವಿದ್ಯಾಭ್ಯಾಸಕ್ಕಾಗಿ ಖರ್ಚು, ಶ್ರಮವೂ, ಅಧಿಕವಾದುದರಿಂದ ಬಡವರು ಸುಲಭದಲ್ಲಿ ಒದಗುವಂತಿಲ್ಲ. ಶ್ರೀಮಂತರು ಯಾವಭಾಗದಲ್ಲಿ

ಯೂ ಹಿಂದೆಗೆಯುದೆ ಇರಬಹುದು  ಬಡವರಿಗೆಂತೂ ಅಸಾಧ್ಯವೇಸರಿ. ಸಾಮಾನ್ಯಸ್ಥಿತಿವಂತರೂ ವಿಶೇಷ ಶ್ರಮಪಡುತ್ತಿರುವರು. ಈ ಕಾರಣದಿಂದಲೇ ಸಕಾಲದಲ್ಲಿ ವರನು ದೊರೆಯುದೆ ಕನ್ಯಾಪಿತೃಗಳು ವರಾನ್ವೇಷಣದಲ್ಲಿ ಕಾಲವನ್ನು ಕಳೆಯುತ್ತಿರುವರು  ಕನ್ಯೆಯರಿಗೆ ವಿವಾಹಕಾಲವನ್ನು ಹೆಚ್ಚಿಸಬೇಕೆಂಬುವುದಕ್ಕಾಗಿ ಬೇರೊಂದು ಕಾರಣವನ್ನು ಹೇಳುತ್ತಿರುವರು ವಿಚಾರ ಮಾಡಿದರೆ ಆ ಕಾರಣವೂ ಸಮರ್ಪಕವಾಗಲಾರದು  ಸ್ತ್ರೀಯರಿಗೆ ಪ್ರೌಢವಿದ್ಯಾಭ್ಯಾಸವಾಗದಿದ್ದರೆ ದೇಶವು ಅಭಿವೃದ್ಧಿಗೆ ಬರುವದಿಲ್ಲವೆಂದು ಚಿಕ್ಕವಯಸ್ಸಿನಲ್ಲಿಯೇ ವಿವಾಹ ಮಾಡಿದರೆ ಗಂಡನ ಮನೆಯವರ ನಿರ್ಬಂಧವು ತಟ್ಟಿ ವಿದ್ಯಾಭ್ಯಾಸವು ನಿಂತು ಹೋಗುವ ಸಂಭವಗಳು ಒದಗುವವೆಂದೂ ಅಂತಹ ನಿರ್ಬಂಧವಿಲ್ಲದ ಪಕ್ಷದಲ್ಲಿ ವಿದ್ಯಾಭ್ಯಾಸವು ನಿರ್ವಿಘ್ನವಾಗಿ ನಡೆಯುವದೆಂಬ ಅಭಿಪ್ರಾಯವುಳ್ಳವರಾಗಿರುವರೆಂದೂ ಈ ಕಾರಣವನ್ನು ಹೇಳಿದರೆ ಗಂಡನ ಮನೆಯವರನ್ನು ದೂರಿಗೆಳೆದಂತಾಗುವದೆಂದೂ ಬಚ್ಚಿಟ್ಟಿರಬಹುದು.

ಗಂಡುಹುಡುಗರು ಪ್ರವೇಶ (ಮೆಟ್ರಿಕ್) ಪರೀಕ್ಷೆಗೆ ಸೇರಬೇಕಾದರೆ ೧೬ ವರುಷವಾಗಬೇಕಾಗುವುದು  ಆ ಬಳಿಕ ಪ್ರೌಢವಿದ್ಯಾಭ್ಯಾಸಕ್ಕೆ ತೊಡಗಿದರೆ ೪—೬ ವರ್ಷವಾದರೂ ವಿಚ್ಛಿತ್ತಿಯಿಲ್ಲದೆ ವ್ಯಾಸಂಗ ಮಾಡಬೇಕು  ಆದುದರಿಂದ ಹೆಂಣು ಹುಡುಗಿಯರಿಗೂ ಅಷ್ಟೇಕಾಲವು ಬೇಕಾಗಬಹುದು. ಆದುದರಿಂದ ವಿದ್ಯಾಭ್ಯಾಸದಲ್ಲಿ ತೊಡಗುವ ಬಾಲಕಿಯರಿಗಾಗಲಿ, ಅವರ ತಾಯಿತಂದೆಗಳಿಗಾಗಲಿ, ವಿವಾಹವಾಗಬೇಕೆಂಬ ಇಷ್ಟವಿರುವ ಪಕ್ಷದಲ್ಲಿ ಅಷ್ಟು ಕಾಲವನ್ನು ಕಳೆಯುವುದು ಈ ದೇಶದ ಆಚಾರಕ್ಕೆ ವಿರೋಧವಾಗುವುದು. ದೇಶಾಚಾರಕ್ಕೆ ವಿರೋಧವಾಗಿ ನಡೆಯಬೇಕೆನ್ನುವವರು ಹೇಗೂ ಊರ್ಜಿತಸ್ಥಿತಿಗೆ ಬರಲಾರರು. ಇದೆಲ್ಲವನ್ನು ವಿಚಾರಮಾಡಿ, ಸ್ತ್ರೀಯರಿಗೆ ಅವಶ್ಯಕವಾದ ಗೃಹಕಾರ್ಯನಿರ್ವಹಣಕ್ಕೆ ತಕ್ಕ ಶಿಕ್ಷಣವನ್ನು ಕೊಡುವುದು—ಅವರ ವಿರಾಮಕಾಲಗಳಲ್ಲಿ ಕಸೂತಿ, ಹೆಣಿಗೆ, ಕೆಲಸಗಳನ್ನು ಮಾಡಿಕೊಳ್ಳ

ವಂತೆ ಕಲಿಸುವುದು—ಇಷ್ಟು ಮಟ್ಟಿನ ವಿದ್ಯಾಭ್ಯಾಸವನ್ನು ಆಚರಣೆಯಲ್ಲಿಡುವುದಾದರೆ ೧೨—೧೩ ವಯಸ್ಸಿನ ಅವಧಿಯೇ ಸಾಕಾಗುವುದು. ಅಷ್ಟೇ ಮಟ್ಟಿನ ವಿದ್ಯಾಭ್ಯಾಸವು ಸಾಮಾನ್ಯ ಗ್ರಾಮಗಳಲ್ಲಿಯೇ ನಡೆಯಬಹುದು ಅಷ್ಟಕ್ಕಾಗಿ ಪ್ರತ್ಯೇಕವಾದ ಸರ್ಕಾರದ ನ್ಯಾಯ ನಿರ್ಬಂಧದ ಅವಶ್ಯಕತೆಯು ತೋರುವದಿಲ್ಲ

ಇನ್ನು—ಬಾಲ್ಯವಿವಾಹವನ್ನು ತಪ್ಪಿಸುವದಕ್ಕಾಗಿ ಹೇಳುವ ಕಾರಣವೆಂದರೆ, ಈ ಬಾಲ್ಯವಿವಾಹದಿಂದಲೇ ವಿತಂತುಗಳು ಹೆಚ್ಚಿ, ನಾನಾ ವಿಧವಾದ ಕಷ್ಟನಿಷ್ಠುರಕ್ಕೆ ಗುರಿಯಾಗುವರೆಂಬುದೇ ಅಲ್ಲವೆ! ಬಾಲ್ಯವಿವಾಹಿತೆಯರಲ್ಲದೆ ಇತರರು ವಿತಂತುಗಳಾಗುವುದೇ ಇಲ್ಲವೆಂಬ ನಿರ್ಣಯವಿದ್ದ ಪಕ್ಷದಲ್ಲಿ ಇವರು ಹೇಳುವುದೂ ನ್ಯಾಯವಾದ ಕಾರಣವಾಗಬಹುದು ಒಟ್ಟಿನಲ್ಲಿ ನೋಡಿದರೆ, ವಯಸ್ಕರಾದ ವಿತಂತುಗಳೇ ಹೆಚ್ಚಾಗಿ ಕಾಣುವರು ಮರಣಕ್ಕೆ ವಯಸ್ಸು ಕ್ಲಿಪ್ತವಿಲ್ಲದುದೇ ಇದಕ್ಕೆ ಕಾರಣವೇ ಹೊರತು ಬೇರೇನೂ ಇಲ್ಲ.

ಈ ದೇಶದಲ್ಲಿ ಬಾಲಿಕಾಪಾಠಶಾಲೆಗಳು ಏರ್ಪಟ್ಟು ೨೦—೨೫ ವರ್ಷವಾಗಿರಬಹುದು. ಅವರ ಪ್ರೌಢ ವಿದ್ಯಾಭ್ಯಾಸದ ಕಲಾಶಾಲೆ (ಕಾಲೇಜು) ಏರ್ಪಟ್ಟು ಅತ್ಯಲ್ಪಕಾಲವಾಗಿರಬಹುದು ಬಾಲಕರ ಪಾಠಶಾಲೆಗಳು ಏರ್ಪಟ್ಟು ಬಹು ದೀರ್ಘಕಾಲವಾಗಿರಬಹುದು. ಬಾಲಕರಿಗೆ ಪ್ರೌಢ ವಿದ್ಯಾಭ್ಯಾಸವು ಎಲ್ಲಾ ದೇಶದಲ್ಲಿಯೂ ಎಲ್ಲಾ ಜನಾಂಗದಲ್ಲಿಯೂ ಅವಶ್ಯಕವೆಂದೇ ಗೊತ್ತಾಗಿರುವುದು ಗಂಡು ಹುಡುಗರ ವಿದ್ಯಾಭ್ಯಾಸವು ಸಾಮಾನ್ಯವಾಗಿ ೧೬ ವರುಷಕ್ಕೆ ಮೊದಲು ನಿಲ್ಲುವದಿಲ್ಲ. ಅವರವರ ಅನುಕೂಲವೂ ಉತ್ಸಾಹವೂ ಇದ್ದಂತೆಲ್ಲಾ ಹೆಚ್ಚು ಕಾಲ ಹಿಡಿಯುತ್ತದೆ. ವಿದ್ಯಾಭ್ಯಾಸವನ್ನು ಮುಗಿಸಿಕೊಂಡೇ ವಿವಾಹ ಮಾಡಿಕೊಳ್ಳಬೇಕೆಂಬ ಮನೋಭಾವವು ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬರಿಗೂ ಹುಟ್ಟಿಯೂ ಹುಟ್ಟುತ್ತಲೂ ಇದೆ. ದೃಢಾಂಗರಾದ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆಯೇ ಮದುವೆಯಾದ

ರೂ ಅಕಾಲ ಮರಣ ಸಂಭವಿಸಿದರೆ ಅವಕ್ಕೆ ಬಾಲ್ಯವಿವಾಹವನ್ನು ಕಾರಣ ಮಾಡುವುದು ಸಮಂಜಸವಾಗಲಾರದು.

ಹೆಂಗಸರಾಗಲಿ, ಗಂಡಸರಾಗಲಿ, ಪ್ರತಿಯೊಬ್ಬರೂ ತಮ್ಮ ಜೀವನೋಪಾಯಕ್ಕೆ ಬೇಕಾದುದನ್ನು ವದಗಿಸಿಕೊಳ್ಳುವುದಕ್ಕೆ ಸಮರ್ಥರಾಗಿರಬೇಕೆಂದು ದೇಶಬಾಂಧವರು ಹೇಳುತ್ತಿರುವರು ಹಾಗಾದರೆ ಒಬ್ಬರ ಜೀವನೋಪಾಯದ ಚಿಂತೆ, ಮತ್ತೊಬ್ಬರ ಮೇಲೆ ಬೀಳದಂತೆ ಆಗುವದೆಂಬುದಕ್ಕೆ ಸಂದೇಹವಿಲ್ಲ ಅದರ ಜತೆಯಲ್ಲಿಯೇ ಒಬ್ಬರಅಧೀನದಲ್ಲಿ ಮತ್ತೊಬ್ಬರು ಇರಬೇಕೆಂಬ ನಿರ್ಬಂಧವೂ ತಪ್ಪುತ್ತದೆ ಆಗ ದೇಶಾಚಾರವೇ ನಿರ್ಮೂಲವಾಗುವುದೆಂದರೆ ಅತಿಶಯೋಕ್ತಿಯಲ್ಲ

ಋತುಮತೀವಿವಾಹವನ್ನೇ ಆಚರಣೆಗೆ ತರಬೇಕೆಂದೂ ಪ್ರತಿಯೊಬ್ಬಳಿಗೂ ಪ್ರೌಢವಿದ್ಯಾಭ್ಯಾಸವು ಅವಶ್ಯಕವೆಂದೂ ದೇಶೀಯರು ಮತ್ತು ದೇಶಬಾಂಧವರು ಏಕಮತ್ಯದಿಂದ ನಿರ್ಧರಿಸಿದ ಪಕ್ಷದಲ್ಲಿ ಪ್ರತಿಯೊಬ ಸ್ತ್ರೀಯೂ ತನಗೆ ಅನುರೂಪನಾದ ಪತಿಯನ್ನು ನಿಶ್ಚಯಪಡಿಸಿಕೊಳ್ಳುವುದಕ್ಕೋಸ್ಕರ ಪುರುಷ ವರ್ಗದಲ್ಲಿ ವಿದ್ಯಾ, ಬುದ್ಧಿ, ವಿವೇಕ, ದೇಹದಾರ್ಢ್ಯವೇ ಮೊದಲಾದುವನ್ನು ಪರೀಕ್ಷಿಸುವದಕ್ಕಾಗಿ ಹೊರಡುವುದರಲ್ಲಿಯಾವ ನಿರ್ಬಂಧವೂ ಇಲ್ಲದಂತೆ ಮಾಡಲೇಬೇಕು. ಅಥವಾ ಈಚೆಗೆ ಹೊಸದಾಗಿ ಹೊರಡುತ್ತಿರುವ ಅಭಿಪ್ರಾಯವೆಂದರೆ, " ಹೆಂಗಸರಾಗಲಿ, ಗಂಡಸರಾಗಲಿ, ವಿವಾಹ ಮಾಡಿಕೊಂಡರೆ ನಿರ್ಬಂಧಕ್ಕೊಳಪಡಬೇಕಾಗುವದು ತಕ್ಕಷ್ಟು ಸುಖ—ಸಂತೋಷಕ್ಕೆ ಅವಕಾಶವಿರುವುದಿಲ್ಲವಾದುದರಿಂದ ವಿವಾಹ ಪದ್ಧತಿಯನ್ನು ಬಿಡಬೇಕು. ಹಾಗಾದರೆ ಪ್ರತಿಯೊಬ್ಬರೂ ಸ್ವತಂತ್ರರೂ, ಇಷ್ಟಾನುಸಾರ ಸುಖ ಸಂತೋಷವುಳ್ಳವರೂ. ಆಗಿರಬಹುದು." ಎಂಬೀ ಪದ್ಧತಿಯನ್ನು ಆಚಾರಕ್ಕೆ ತಂದರೆ ವಿತಂತು ಅಥವಾ ವಿಧುರ ಶಬ್ದವೇ ಶೂನ್ಯವುದೆಂಬುದಕ್ಕೆ ಸಂದೇಹವಿಲ್ಲ. ಆಗ ಗರ್ಭಧಾರಣೆ, ಶಿಶುಸಂರಕ್ಷಣೆಯೂ

ಹೆಂಗಸರ ಮೇಲೆ ಮಾತ್ರವೇ ಬೀಳಬಹುದು ಆದುದರಿಂದ ತನ್ನ ಜೀವ
ನೋಪಾಯಕ್ಕೆ ಬೇಕಾದುದನ್ನು ಸಂಪಾದಿಸಿಕೊಳ್ಳುವಷ್ಟು ಯೋಗ್ಯ
ತೆಯು ಪ್ರತಿಯೊಬ್ಬಳಿಗೂ ಇರಲೇಬೇಕು. ಗಂಡಸರಿಗೆ ತಾಪತ್ರಯ
ವೂ ಕಡಿಮೆಯಾಗಬಹುದು. ಅವರ ಸಂಪಾದನೆಯನ್ನು ದೇಶಾಭ್ಯುದ
ಯ ಕಾರ್ಯಕ್ಕೇ ವಿನಿಯೋಗಿಸಲೂ ಬಹುದು; ಎಂದು ಕೂಡ ಕೆಲವರ
ಮುಖದಿಂದ ಹೊರಡುತ್ತಿರುವ ಸಲಹೆಯು ನಿಮಗೂ ತಿಳಿದಿರಬಹುದ
ಷ್ಟೇ? ಈ ಆಚರಣೆಯು ಬಾಯಿಮಾತಿನಲ್ಲಿ ಹೇಳುವದಕ್ಕೂ, ಕೇಳುವ
ದಕ್ಕೂ, ಚೆನ್ನಾಗಿಯೇ ಇದ್ದರೂ ಆರ್ಯ ಜನಾಂಗದ ವಿಚಾರಕ್ಕೂ
ಸಂಪ್ರದಾಯಕ್ಕೂ ವಿರೋಧವಾಗುವದು

ಆವ ಜನಾಂಗದಲ್ಲಿ ಐಕಮತ್ಯವೂ, ಪರಸ್ಪರಾನುರಾಗವೂ ರೂ
ಢಮೂಲವಾಗಿದ್ದು, ಪ್ರತಿಯೊಬ್ಬರೂ ಪರೋಪಕಾರ ನಿರತರಾಗಿರು
ವರೋ ಅವರು ಮಾತ್ರ, ತಮ್ಮ ಆಚರಣೆಯನ್ನು ಯುಕ್ತ ತೋರಿದಂ
ತೆಲ್ಲ ಮಾಡಿಕೊಂಡು ಪರೀಕ್ಷಿಸಬಹುದು ಆದರೆ, ಸದ್ಯಸ್ಥಿತಿಯಲ್ಲಿ ಈ
ಐಕಮತ್ಯ, ಪರಸ್ಪರಾನುರಾಗಗಳೆಂಬುಗು ಕೇವಲ ಸಭಾಮುಖದಲ್ಲಿ
ಮಾತ್ರವೇ ಅಡಗಿರುವುದೆಂದು ತಿಳಿದು ವಿಷಾದಿಸಬೇಕಾಗಿದೆ

ಆವ ದೇಶದಲ್ಲಿ—ಆವ ಜನಾಂಗದಲ್ಲಿಯೇ ಆಗಲಿ, ಎಲ್ಲರೂ ಎ
ಲ್ಲವನ್ನೂ ತಿಳಿದವರಾಗಿರುವುದಿಲ್ಲ ಹಾಗೆಯೇ ಎಲ್ಲರೂ ಐಶ್ವರ್ಯ
ವಂತರಾಗಿಯೂ ಇರುವದಿಲ್ಲ ಈ ದೇಶದಲ್ಲಿ ಸ್ತ್ರೀವರ್ಗದಲ್ಲಿಯಾಗ
ಲಿ, ಪುರುಷವರ್ಗದಲ್ಲಿಯಾಗಲಿ, ಆರಾದರೂ ಒಬ್ಬರು ಈಶ್ವರದತ್ತ
ವಾಗಿ ಬಂದ ಬುದ್ಧಿಯನ್ನು ಉಪಯೋಗಿಸಿ, ತನ್ನ ಸೋದರ ಸೋದ
ರಿಯರ ಸೇವೆಗೆ ಉಪಕ್ರಮಿಸಿ, ಕಷ್ಟನಷ್ಟಗಳನ್ನು ಗಣನೆಗೆ ತಾರದೆ
ನಿಂತರೆ ವಿದ್ಯಾವಂತರಾಗಿಯೂ ಉಪಪನ್ನರಾಗಿಯೂ ಇಂತಕ್ಕವರು
ಶಕ್ತ್ಯನುಸಾರ ಸಹಾಯ ಮಾಡುವದಕ್ಕೆ ಪ್ರತಿಯಾಗಿ ಅಂತಹರಮೇ
ಲೆ ದ್ವೇಷಾಸೂಯೆಗಳನ್ನು ಕಾರುವರು ಅದಕ್ಕೆ ಭಯಪಡದೆ ಮುಂ
ದರಿದರೆ, ಅವರಲ್ಲಿ ದೋಷಗಳನ್ನೇ ಹುಡುಕಿ ದೋಷವಿರಲಿ, ಇಲ್ಲ

ದಿರಲಿ, ತಮ್ಮ ದೂಷಣೆಯು ನಿರಾಧಾರವೇ ಆಗಿರಲಿ, ಹೇಗೂ ದೂಷಿಸುವದರಿಂದಲೇ ತಾವು ಕೃತಕೃತ್ಯರಾದಂತೆ ತಿಳಿದು ಆನಂದಿಸುವರು ತಮ್ಮ ಧರ್ಮಭಗಿನಿಯರಲ್ಲಿ ಆರಾದರೊಬ್ಬರು ವಿದ್ಯಾರ್ಜನೆಮಾಡಿ ಸೋದರಿಯರ ವೃದ್ಧಿಗೋಸ್ಕರ ಮುಂಪಾಳಾದರೆ, ಅವರು ಎಷ್ಟೇ ಪರಿಶುದ್ಧಾಂತಃಕರಣರಾಗಿ ನಡೆದುಕೊಳ್ಳುತ್ತಿದ್ದರೂ ದೂಷಕರ ನಾಲಿಗೆಯು ಅವರನ್ನು ಹೇಗಾದರೂ ದೂಷಿಸದೆ ಬಿಡುವದಿಲ್ಲವಾಗಿದೆ

ಆರ್ಯರೆಂದು ಪ್ರಸಿದ್ಧಿಯನ್ನು ಪಡೆದ ನಮ್ಮ ಪೂರ್ವಿಕರು ಸ್ತ್ರೀಯರಿಗೆ ವಿದ್ಯಾಭ್ಯಾಸವು ಆವಶ್ಯಕವೆಂದೇ ಭಾವಿಸಿದ್ದರೆಂಬುದು ಇತಿಹಾಸಗಳಿಂದ ತಿಳಿಯಬರುವುದು ಅದರಲ್ಲಿ ಅವರು ಪ್ರೌಢವಿದ್ಯಾಭ್ಯಾಸಕ್ಕೆ ಕೆಲವು ನಿಯಮಗಳನ್ನು ಏರ್ಪಡಿಸಿದ್ದರು ಅದರಂತೆ ಈಗಲೂ ಅನೇಕರು ಆಚರಣೆಯಲ್ಲಿಟ್ಟಿರುವರು ಅಷ್ಟಕ್ಕೆ ಅವಕಾಶವಿಲ್ಲದ ಕೆಲವರು ಸರ್ಕಾರದವರ ಸಹಾಯದಿಂದಲೆ ಪ್ರೌಢವಿದ್ಯಾಭ್ಯಾಸವನ್ನು ಮಾಡುತ್ತಿರುವರು ಇಂತಹರು ವಿದ್ಯಾಭ್ಯಾಸವೊಂದರಲ್ಲಿಯೇ ಗಮನವಿಡದೆ ಆರ್ಯರ ನಿಯಮದಂತೆ ತಮ್ಮ ತಮ್ಮ ಗೃಹಕಾರ್ಯನಿರ್ವಾಹದಲ್ಲಿಯೂ ದೇಶಭಕ್ತಿ ಆತ್ಮೋನ್ನತಿಗಳಲ್ಲಿಯೂ ಗಮನವಿಟ್ಟು ನಡೆದುಕೊಂಡರೆ ಅದು ದೂಷ್ಯವಾಗುವದಿಲ್ಲ. ಹಾಗಿಲ್ಲವಾದರೆ ಅವರವರ ಮನೋಭಾವದಂತೆ ವಿಕಲ್ಪವಾಗಿ ದೂಷಿಸಲ್ಪಡುತ್ತಾರೆ ಒಂದುವೇಳೆ ಮತ್ತೊಬ್ಬರ ದೂಷಣೆಯಾಗಲಿ, ಭೂಷಣೆಯಾಗಲಿ, ಬೇಕಾಗಿಲ್ಲವೆಂದೂ ತಮ್ಮ ಮನಸ್ಸು ಪರಿಶುದ್ಧವಾಗಿ ಮನವೊಪ್ಪಿದರೆ ಸಾಕೆಂದೂ ಹೇಳಬಹುದು ಆದರೆ ಜನಮೆಚ್ಚಿದರೆ ಜನಾರ್ದನನೂ ಮೆಚ್ಚುವನು ಎಂಬ ವಾಡಿಕೆಯ ಮಾತುಂಟು ಇದಕ್ಕೂ ಗಮನವನ್ನು ಕೊಡಬೇಕು

ಪೂರ್ವಿಕರಾದ ಆರ್ಯರು ಐಹಿಕ ( ಈ ಲೋಕದ ) ಸುಖದು:ಖ ಸಂಪದ—ದಾರಿದ್ರ್ಯವು ಸ್ಥಿರವಲ್ಲವಾದುದರಿಂದ ಕೇವಲ ಇದರಲ್ಲಿಯೇ ನಿರತರಾಗಿರದೆ, ಪ್ರತಿಯೊಬ್ಬರೂ ಆಮುಷ್ಮಿಕ (ಪರಲೋಕ ) ಸುಖ-ದು:ಖಗಳ ಜ್ಞಾನವನ್ನು ಹೊಂದಲು ಪ್ರಯತ್ನಪಡಬೇಕೆಂ

ದೂ ಇಲ್ಲಿಯ ವಿಷಯವಾಸನೆಯೇ ಆಧಾರವಾಗಿರುವ ಸುಖ-ಸಂತೋಷಗಳೆಂಬವುಗಳು ಪರಲೋಕ ಸುಖಕ್ಕೆ ವಿರೋಧವಾದುದೆಂದು ಕಂಡರೆ ಅದನ್ನು ಸರ್ವಪ್ರಯತ್ನದಿಂದಲೂ ಬಿಡಬೇಕಾದುದೆಂದೂ ಹೇಳಿರುವರು. ಅವ ಮತತತ್ವವನ್ನು ನೋಡಿದರೂ ಸತ್ಯಕ್ಕೆ ಪ್ರಾಶಸ್ತ್ಯವಿದ್ದೇ ಇದೆ ಈ ಸತ್ಯವೆಂಬುದು ಕೇವಲ ಬಾಯಿಮಾತಿನಲ್ಲಿ ಮಾತ್ರವೇ ಇದ್ದರೆ ಸಾಲದು ಮನಸ್ಸಿನಲ್ಲಿಯೂ ಬಾಯಿಮಾತಿನಲ್ಲಿಯೂ ಕೆಲಸದಲ್ಲಿಯೂ ( ತ್ರಿಕರಣದಲ್ಲಿಯೂ ) ಸ್ಥಿರವಾಗಿದ್ದರೆ ಪ್ರಯೋಜನಕಾರಿಯಾಗುವುದು.

ನಮ್ಮ ಕಣ್ಣೆದುರಿಗಿರುವ ದೃಷ್ಟಾಂತವನ್ನು ನೋಡಿದರೆ ಒಂದು ಮನೆಯ, ಗ್ರಾಮದ, ಪಟ್ಟಣದ, ದೇಶದ ಯಜಮಾನನಿಗಿರುವ ಕಷ್ಟಕ್ಕಿಂತಲೂ-ಆತನ ಉತ್ತರವಾದಿತ್ವಕ್ಕಿಂತಲೂ ಅಧೀನನ (ಹೇಳಿದ ಕೆಲಸ ಮಾಡುವವನ) ಕಷ್ಟವೂ ಉತ್ತರವಾದಿತ್ವವೂ ಎಷ್ಟೋ ಭಾಗ ಕಡಿಮೆಯಾಗಿರುವದು ಇದನ್ನು ನೋಡಿಯೇ ಗಂಡನಿಗೆ ಭರ್ತಾ (ಹೊರತಕ್ಕವನು) ಹೆಂಡತಿಗೆ ಭಾರ್ಯಾ (ಹೊರಿಸಿಕೊಳ್ಳಲ್ಪಡುವವಳು) ಎಂದು ಸಂಕೇತ ಮಾಡಿರುತ್ತಾರೆಂದು ತಿಳಿಯ ಬಹುದಾಗಿದೆ. ಪತಿಯ ಇಷ್ಟಾನುಸಾರ ನಡೆಯತಕ್ಕ ಪತ್ನಿಯು ಪತಿಯ ಪುಣ್ಯಕ್ಕೆ ಭಾಗಸ್ಥಳಾಗುವಳೆಂದೂ ಪತ್ನಿಯ ಪಾಪಕ್ಕೆ ಪತಿಯೇ ಹೊಣೆಯಾಗುವನೆಂದೂ ಆರ್ಯರು ನಿರ್ಧರರಾಗಿರುವರು ಪತ್ನಿಗೆ ಇದಕ್ಕೂ ಹೆಚ್ಚಿನ ಕರ್ತವ್ಯವನ್ನು ಇಟ್ಟಿಲ್ಲ ಆದುದರಿಂದಲೇ ಪುರುಷ ಜನ್ಮಧಾರಣೆಗಿಂತಲೂ ಸ್ತ್ರೀ ಜನ್ಮ ಧಾರಣೆಯು ಸಾಧುವಾದುದೆಂದು ವ್ಯಾಸರು ಉಪದೇಶಿಸಿರುವರು. ಸ್ತ್ರೀ ಜನ್ಮಸಾರ್ಥಕತೆಗಾಗಿಯೇ ಮಾತಾಪಿತೃಗಳ ಆಜ್ಞಾನುಸಾರವಾಗಿ ಸಕಾಲದಲ್ಲಿ ಪತಿಯನ್ನು ಪಡೆಯಬೇಕು

ಕಾರಣವಿಲ್ಲದೆ ಕಾರ್ಯವಾಗುವದಿಲ್ಲ ಅಕಾಲದಲ್ಲಿ ಪತಿವಿಯೋಗವಾಗಲಿ, ಪತ್ನೀವಿಯೋಗವಾಗಲಿ-ಆಗಬೇಕಾದರೆ ಅದಕ್ಕೂ ಒಂದು ಕಾರಣವಿದ್ದೇ ಇರಬೇಕು ದೃಷ್ಟಾಂತದಲ್ಲಿ ಅಂತಹ

ಕಾರಣವನ್ನೂ ಹೇಳುವುದಕ್ಕೆ ಸಾಧ್ಯವಿಲ್ಲ. ಬಾಲ್ಯವಿವಾಹವೆಲ್ಲ ಇಂತಹ ದು ಸ್ಥಿತಿಗೆ ಬರುವದೆಂದು ನಿರ್ಧರಿಸಲು ತಕ್ಕ ಆಧಾರವಾದ ಪಕ್ಷದಲ್ಲಿ ಆಗ ಅದನ್ನು ಸರಿಯಾದ ಕಾರಣವೆಂದು ಹೇಳಬಹುದು. ಹಾಗೂ ಇಲ್ಲ ಆದುದರಿಂದ ಆರ್ಯರು ಹೇಳುವಂತೆ ಜನ್ಮಾಂತರದ ಕರ್ಮಶೇಷವೆಂದೇ ಹೇಳಬೇಕಾಗುತ್ತದೆ. ಹೇಗೆಂದರೆ:— ನಮ್ಮ ಊಟಕ್ಕಾಗಿ ನಾವು ಮಾಡಿಕೊಳ್ಳುವ ಪದಾರ್ಥವು ನಮ್ಮ ಅವಿವೇಕದಿಂದಲೋ ಅಥವಾ ಅಜಾಗ್ರತೆಯಿಂದಲೋ ಕೆಟ್ಟರೆ ಅದನ್ನೇ ತಿನ್ನಬೇಕಾಗುತ್ತದೆ ಹಾಗೆಯೇ ಪೂರ್ವಜನ್ಮ ಕರ್ಮಫಲವನ್ನು ಅನುಭವಿಸಲೇಬೇಕು. ಅದರಲ್ಲಿಯೇ ಜಿತಮನಸ್ಕರಾಗದೆ ಬೇರೆ ರೀತಿ ಪ್ರವರ್ತಿಸಿದರೆ ಅದನ್ನು ಕೂಡ ಮುಂದೆ ಅನುಭವಿಸಬೇಕೆಂಬುದು ನಿರ್ಧಾರವಾಗುವದು ಅಂತಹರು ತಮಗೆ ಸಂಭವಿಸಿದ ದುಷ್ಫಲಕ್ಕಾಗಿ ಪಶ್ಚಾತ್ತಾಪದಿಂದ ಬೇಯುತ್ತಿರಬೇಕೆಂದು ಆರ್ಯರು ನಿರ್ಧರಿಸಿರುತ್ತಾರೆ

ಪತ್ನೀವಿಯೋಗವಾದ ಪುರುಷನಿಗೆ ದ್ವಿತೀಯಾದಿ ವಿವಾಹಕ್ಕೆ ಅಣಿರಣೆಯಿರುವಂತೆ ಪತಿವಿಯೋಗಿನಿಯರೂ ದ್ವಿತೀಯ ವಿವಾಹವನ್ನು ಮಾಡಿಕೊಳ್ಳಬಹುದೆಂದೂ ಶಾಸ್ತ್ರಸಮ್ಮತವನ್ನು ಕೆಲವರು ಹೇಳುತ್ತಾರೆ. ಈ ಜನ್ಮವು ಕೇವಲ ಸುಖಾನುಭವಕ್ಕೆಂದೂ ಅದಕ್ಕೆ ಭಂಗವಾಗಬಾರದೆಂದೂ ಭಾವಿಸುವ ವಿತಂತುಗಳು ತಮ್ಮ ಇಚ್ಛೆಯಂತೆಯೂ ನಡೆಯುವರು. ಅವಕಾಶವಿದ್ದರೂ ಶಾಸ್ತ್ರದಂತೆ ದ್ವಿತೀಯ ವಿವಾಹವನ್ನು ಮಾಡಿಕೊಳ್ಳದೆ ವಿಧುರನು ಸ್ವೇಚ್ಛೆಯಿಂದ ನಡೆಯುವನು. ಅಂತಹನಿಗೆ ಪ್ರತ್ಯೇಕ ಶಾಸ್ತ್ರದ ಅವಶ್ಯಕತೆಯೇ ಇಲ್ಲ ಆರ್ಯರ ನಿಬಂಧನೆಯೇ ಸತ್ಯವಾಗಿದ್ದರೆ ಪರ್ಯವಸಾನದಲ್ಲಿ ಅದರಂತೆ ಅನುಭವಿಸಲೇಬೇಕು. ಅದು ಪರೋಕ್ಷ (ಕಣ್ಣಿಗೆ ಕಾಣದ ವಿಚಾರ) ವಿಷಯವಾದುದರಿಂದ ಶೋಧಿಸುವುದಕ್ಕೆ ಸಾಧ್ಯವಿಲ್ಲ.

ನಿರಂಕುಶ ಪ್ರಭುವಿಲ್ಲದಿದ್ದರೂ ಪ್ರಜೆಗಳು ತಮ್ಮನ್ನು ಶಿಕ್ಷಿಸಲು ನಿರಂಕುಶ ಪ್ರಭುವೊಬ್ಬನಿರುವನೆಂದು ತಿಳಿದು ಭಯಪಟ್ಟು ನಡೆಯುತ್ತಿ

ಷ್ಟರಿ ಅದರಲ್ಲಿ ಬಾಧಕವೇನೂ ಇಲ್ಲ, ಪ್ರಭುವಿರುವ ಪಟ್ಟಣಕ್ಕೆ ಬಹುದೂರದಲ್ಲಿ ಪ್ರಭುವನ್ನೆಂದೂ ನೋಡದ ಸಾಮಾನ್ಯ ಗ್ರಾಮ್ಯನು (ಹಳ್ಳಿಗಾಡಿನವನು) ಶಿಕ್ಷಿಸುವ ಪ್ರಭುವೇ ಇಲ್ಲವೆಂದು ಭಾವಿಸಿನಡೆದರೆ, ಅವನಿಗೆ ಶಿಕ್ಷೆಯಾಗಿಯೇ ಆಗುವುದು. ಪ್ರಭುವಿನ ದೃಷ್ಟಿಯು ಪ್ರಭುತ್ವಕ್ಕೆ ಸೇರಿದ್ದ ಪ್ರದೇಶದಲ್ಲೆಲ್ಲಾ ಇದ್ದೇ ಇರುವುದು ಪ್ರಭುವಿನ ಆಜ್ಞಾನುಸಾರ ಕೆಲಸಮಾಡುವ ಪ್ರತಿಯೊಬ್ಬನೂ ಪ್ರಭುವಿಗೆ ತಿಳಿಸುವ ಇಂದ್ರಿಯಪ್ರಾಯನಾಗುವನು ಈ ನ್ಯಾಯವನ್ನು ಅನುಸರಿಸಿ ಜಗತ್ಕರ್ತನಾದ ಸರ್ವೇಶ್ವರನೊಬ್ಬನಿರುವನೆಂದೂ ಆತನ ಆಜ್ಞೆಯನ್ನು ಪಾಲಿಸುವ—ಎಂದರೆ ವಿಧೇಯನಾಗಿ ಕೆಲಸಮಾಡುವ ದೇವಾಂಶಸಂಭೂತರು ಎಲ್ಲೆಲ್ಲಿಯೂ ತಿರುಗುತ್ತಿರುವರೆಂದೂ—ಮಹರ್ಷಿಗಳಿಂದ ನಿರ್ಣಯಿಸಲ್ಪಟ್ಟಿರುವ ಧರ್ಮಶಾಸ್ತ್ರಗಳೇ ಸರ್ವೇಶ್ವರನ ಕಟ್ಟಳೆಯೆಂದೂ ತಿಳಿದು ಭಯದಿಂದ ದೇಹೇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡು—ಧರ್ಮಕ್ಕೂ ನೀತಿಗೂ ವಿರೋಧವಿಲ್ಲದಂತೆ ಪ್ರತಿಯೊಬ್ಬರು ತಮ್ಮ ಶಕ್ತ್ಯನುಸಾರ ದೇಶದ ಅಭಿವೃದ್ಧಿಗೆ ಸಹಕರಿಸುತ್ತ ಬರಬೇಕು ಹಾಗಾದರೆ ದೇಶವೂ ಉನ್ನತಿಗೆ ಬರುವುದು; ಭಾರತಭೂಮಾತೆಯೂ ಪೂರ್ವದಂತೆ ಪರಿಶೋಭಿಸುವಳು. ಭಗವಂತನು ಇಂತಹ ಅದೃಷ್ಟವನ್ನು ದಯಪಾಲಿಸಬೇಕೆಂಬುದೇ ನನ್ನ ನಿರಂತರ ಪ್ರಾರ್ಥನೆ.

ಸರ್ವೇ ಜನಾಸ್ಸುಖಿನೋ ಭವಂತು । ಸಮಸ್ತ ಸನ್ಮಂಗಳಾನಿ ಭವಂತು ॥

ಕೃಷ್ಣಾರ್ಪಣಮಸ್ತು.

(ವೃತ್ತಮಣಿ—ವೆಂಕಟ ಕೃಷ್ಣಯ್ಯಂಗಾರ್.)

# ಕೃತಜ್ಞತೆ.

(ಸಂಸ್ಮರಣೆ)

## ಮಹಿಳಾ ಸೇವಾಸಮಾಜದ ೧೯೧೬–೧೯೧೭ನೆ ವರ್ಷದ ರಿಪೋರ್ಟು—

ಈ ಸಮಾಜದ ವಿಷಯವಾಗಿ ನಾವು ಹಿಂದಿನ ಸಂಚಿಕೆಗಳಲ್ಲಿ ಪ್ರಸ್ತಾಪಿಸಿರುವೆವಾದುದರಿಂದ ಇಲ್ಲಿ ವಿಶೇಷವಾಗಿ ಹೇಳಬೇಕಾಗಿಲ್ಲ. ಸಮಾಜದ ಉನ್ನತಿಗಾಗಿ ನಮ್ಮ ಸನ್ಮಾನ್ಯ ಭಗಿನಿಯರು ಪಡುತ್ತಿರುವ ಶ್ರಮವನ್ನೂ ಉದ್ಯಮವನ್ನೂ ವಿದ್ಯಾರ್ಥಿನಿಯರಿಗೆ ಅಲ್ಲಿ ಲಭಿಸುತ್ತಿರುವ ನೈತಿಕ ಶಿಕ್ಷಣವನ್ನೂ ವಿದ್ಯಾರ್ಥಿನಿಯರು ಮುಂದೆ ಗೃಹಿಣಿಯರಾಗಲು ತಕ್ಕಂತೆ ಮಾಡುತ್ತಿರುವ ಅಭ್ಯಾಸವನ್ನೂ ನಾವು ಕಣ್ಣಾರೆ ನೋಡಿಬಂದಿರುವೆವು. ಅಲ್ಲಿಯ ವಿದ್ಯಾರ್ಥಿನಿಯರಿಗೆ ಕೊಡಲ್ಪಡುತ್ತಿರುವ ಶಿಕ್ಷಣದೊಡನೆ ಕೈಗಾರಿಕೆ, ಹೆಣಿಕೆ, ಕಸೂತಿ ಮೊದಲಾದ ಕುಶಲವಿದ್ಯೆಯನ್ನೂ ತಕ್ಕಂತೆ ಗಾನವನ್ನೂ ಕಲಿಸುತ್ತಿರುವುದು ಮತ್ತೂ ವಿಶೇಷವಾಗಿರುವುದು. ಈ ಸಮಾಜದ ಉದ್ದೇಶ ಸಾಫಲ್ಯಕ್ಕೂ ಸ್ವಂತತ್ರ ಕಟ್ಟಡಕ್ಕೂ ಬೇಕಾಗುವ ಸಹಾಯ ಸಂಪತ್ತಿಗಳನ್ನು ಒದಗಿಸಲು ನಮ್ಮ ವಂದನೀಯ ಭ್ರಾತೃಗಳು, ಸಹಾಯಕ ಸಂಘವೊಂದನ್ನು ಏರ್ಪಡಿಸಿ, ತಮ್ಮ ಅಧಿಕಾರ, ಉದ್ಯೋಗ, ಕಾರ್ಯಬಾಹುಲ್ಯಗಳಲ್ಲಿ ಇದನ್ನೂ ಮುಖ್ಯವೆಂದು ಭಾವಿಸಿ ಅವಿಶ್ರಾಂತ ಶ್ರಮದಿಂದ ನಡೆಯಿಸುತ್ತಿರುವ ಸಹಾಯವನ್ನು ನೋಡಿ ನಾವು ಅವರನ್ನು ಮನಃಪೂರ್ವಕವಾಗಿ ಅಭಿನಂದಿಸುವೆವು.

## ನಮ್ಮ ನೂತನ ಸೋದರಿ ಸರಸ್ವತಿಗೆ

# ಸುಸ್ವಾಗತವು.

ಶ್ರೀಶಾರದಾ ಸ್ತ್ರೀಸಮಾಜದ ಉದಾರಾಶ್ರಯದಿಂದ ಪ್ರಕಾಶಿಸಲ್ಪಡುವ ಪಕ್ಷಪತ್ರಿಕೆಯಾದ "ಸರಸ್ವತಿ"ಯ ಪ್ರಥಮ ಸಂಪುಟದ ಪ್ರಥಮ ಸಂಚಿಕೆಯನ್ನು ನಾವು ಸ್ವೀಕರಿಸಿದೆವು, ಸಾವಧಾನದಿಂದ ಸಮಾಲೋಚಿಸಿದೆವು, ಈ ಸಂಚಿಕೆಯಲ್ಲಿರುವ ಅವತಾರಿಕೆ, ಧರ್ಮಲಕ್ಷಣ, ಸುಭಾಷಿತಗಳು, ಸ್ತ್ರೀಶಿಕ್ಷಣಕ್ರಮ, ಶಿಶುಪೋಷಣ, ಅಷ್ಟವಿಧ ಪುಷ್ಪಗಳು ಎಂಬೀ ಲೇಖನಗಳನ್ನು ನೋಡಿ ಅತ್ಯಾನಂದಗೊಂಡೆವು. ಸಂಪಾದಿಕೆಯೂ-ಪ್ರಕಾಶಿಕೆಯೂ ಆದ ನಮ್ಮ ಧರ್ಮಭಗಿನಿ ಶ್ರೀಕಲ್ಯಾಣಮ್ಮನವರ ಸಾಹಸ, ಮನಸ್ಥೈರ್ಯ, ದೃಢಪ್ರಯತ್ನಗಳಿಗಾಗಿ ಅವರನ್ನು ಈ ಮೂಲಕ ಅಭಿನಂದಿಸುತ್ತಿರುವೆವು,

ಶ್ರೀಮತಿ ಕಲ್ಯಾಣಮ್ಮನವರ ವಿಚಾರವಾಗಿ ನಂದಿನಿಯ ೧೧ನೆ ಸಂಚಿಕೆಯಲ್ಲಿ ತಕ್ಕಷ್ಟು ಬರೆದಿರುವೆವಾದುದರಿಂದ ಇಲ್ಲಿ ಮತ್ತೆ ಬರೆಯಬೇಕಾಗಿಲ್ಲ ಇವರ ಲೇಖನವು ಸುಲಭವೂ ಸುಲಲಿತವೂ ಆಗಿದ್ದು, ಪತ್ರಿಕೆಯಲ್ಲಿ ಸ್ತ್ರೀಜನಾಭ್ಯುದಯವೇ ಪ್ರತಿಪಾದಿಸಲ್ಪಟ್ಟದೆ. ಸರಸತಿಯನ್ನು ನೋಡಿದ ನಮಗೆ ಆನಂದವೂ, ಜತೆಯಲ್ಲಿ-ಭಾಗ್ಯೋದಯ ಪತ್ರಿಕೆಯ ಸ್ಮರಣವುಂಟಾಗಿ ಅದಕ್ಕಾಗಿ ವಿಷಾದವೂ ಏಕಕಾಲದಲ್ಲಿ ಉಂಟಾದವು ಭಾಗ್ಯೋದಯವು ಹೊರಡುತ್ತಿದ್ದ ಪಕ್ಷದಲ್ಲಿ ಈ ವೇಳೆಗೆ ಎಷ್ಟೋ ಮೇಲಾಗುತ್ತಿದ್ದಿತು ಇಲ್ಲ,—ಭಗವತಿಯ ಇಚ್ಛೆ ಅದಾಗಿರಲಿಲ್ಲವಾದುದರಿಂದ ಆ ನಮ್ಮ ಆರ್ಯಭಗಿನಿ ಶ್ರೀಸಂಜೀವಮ್ಮನವರ ಪ್ರಯತ್ನವು ಪ್ರಥಮ ಸಂಚಿಕೆಗೇ ಪರ್ಯವಸಾಯಿಯಾಗಬೇಕಾಯಿತು. ಭಾಗ್ಯೋದಯದ ಅದೃಷ್ಟಕ್ಕಾಗಿ, ಶ್ರೀಯುತ ಶ್ರೀನಿವಾಸಸುತರೆಂಬ ನಮ್ಮಬಂಧುಗಳೊಬ್ಬರು ತಮ್ಮ ಪರಿತಾಪವನ್ನು ಕೂಡ ಭಾರತಕುಮಾರನ ಮೂಲಕ ಹೊರಗೆಡಹಿದ್ದರು. ಈಗ ನಮ್ಮ ಸ್ತ್ರೀ ಜನಾಂಗದವರ ಅದೃಷ್ಟವಿಶೇಷದಿಂದ ಈಗಲೇ ಜನ್ಮವೆತ್ತಿರುವ ನಮ್ಮ ಸೋದರಿ ಸರ

ಸ್ವತಿಯು ಬಾಲಗ್ರಹಪೀಡೆಗೆ ಸಿಕ್ಕದಂತೆ ಅವ್ಯಾಹತವಾಗಿ ನಡೆಯುತ್ತ ಬರುವಂತೆ ಅನುಗ್ರಹಿಸೆಂದು ಆ ನಮ್ಮ ಭಗವತಿಯಲ್ಲಿಯೇ ಪ್ರಾರ್ಥಿಸುವೆವು

**ವಿ ಸೂ** —ಪತ್ರಿಕೆಯು ಸದ್ಯಕ್ಕೆ ಮಾಸಪತ್ರಿಕೆಯಾಗಿ ಹೊರಟದ್ದರೆ ಭಗಿನಿಯರಿಗೆ ಶ್ರಮವು ಕಡಿಮೆಯಾಗಿ ವಿಶೇಷ ಪ್ರಯೋಜನವಾಗುತ್ತಿದ್ದಿತು. ಪಕ್ಷಪತ್ರಿಕೆಯಾದುದರಿಂದ ಶ್ರಮವು ಹೆಚ್ಚಾಗಿರಬಹುದು ಹೇಗಾದರೂ ಚಿರಕಾಲ ನಡೆಯುತ್ತ ಬಂದರೆ ಸಾಕು ವಾರ್ಷಿಕ ಚಂದಾ ೨—೦—೦ ಮಾತ್ರ ನಮ್ಮ ಸೋದರಿಯರೆಲ್ಲರೂ ತರಿಸಿ ನೋಡಿ ಪ್ರೋತ್ಸಾಹಿಸಲೆಂಬುದೇ ನಮ್ಮ ಅಭಿಪ್ರಾಯವು

## ಉಪಕಾರಸ್ಮರಣವು

ಘನಹೊಂದಿದ ನಮ್ಮ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಈ ವರೆಗ ನಮ್ಮ ಸತೀಹಿತೈಷಿಣಿಯವಿಚಾರದಲ್ಲಿ ತೋರಿಸಿರುವ ಉದಾರವಾದ ಆಶ್ರಯ-ಪ್ರೋತ್ಸಾಹಗಳನ್ನು ಕುರಿತು ಈ ಮೊದಲೇ ನಾವು ನಮ್ಮ ಕೃತಜ್ಞತೆಯನ್ನು ಪ್ರದರ್ಶಿಸಿದ್ದೆವಷ್ಟೆ? ಗುಣಗ್ರಹಣತತ್ಪರರಾದ ನಮ್ಮ ವಿದ್ಯಾಭ್ಯಾಸದ ಇಲಾಖಾ ಅಧ್ಯಕ್ಷರು ನಮ್ಮ ನಂದಿನಿಯ ವಿಷಯದಲ್ಲಿ ತೋರಿಸಿರುವ ಪ್ರೋತ್ಸಾಹಕ್ಕಾಗಿ ನಾವು ಅವರ ಸಹಾಯವನ್ನು ಕುರಿತು ನಿರಂತರವೂ ಕೃತಜ್ಞತೆಯಿಂದ ಅವರ ಶ್ರೇಯೋಭಿವೃದ್ಧಿ ಚಿಂತನಮಾಡುತ್ತ, ಆ ಪ್ರೋತ್ಸಾಹ-ಆಶ್ರಯಗಳನ್ನು ಸಾರ್ಥಕಪಡಿಸುವದಕ್ಕೆಂದು ಮುಂದಿನ ವರ್ಷದಿಂದ ಮತ್ತೆ ಕೆಲವು ಸುಧಾರಣೆಯನ್ನು ಕೈಕೊಳ್ಳಬೇಕೆಂದು ಯೋಚಿಸಿರುವೆವು ಇರಲಿ.

ಚಿರಸ್ಮರಣೀಯರಾದ ನಮ್ಮ ಮೈಸೂರು ವಿದ್ಯಾಂಗದವರು ಹಿತೈಷಿಣಿಗೆ ತೋರಿಸಿದ ಪ್ರೋತ್ಸಾಹಕ್ಕಾಗಿ ಅಸಹಿಷ್ಣುತೆಯಿಂದ ಮೈಸೂರಿನ ಪತ್ರಿಕಾಧಿಪತಿಗಳೊಬ್ಬಿಬ್ಬರು ಆ ಇಲಾಖೆಯವರ ಮೇಲೆಯೂ ನಮ್ಮ ಮೇಲೆಯೂ ನಮ್ಮ ಹಿರಿಯರ ಮೇಲೆಯೂ ಕುತ್ಸಿತ ವ್ಯಾಖ್ಯಾ

ನಗಳನ್ನು ಮೂಡಿ, ಶಂಕಾಪವಾದವನ್ನು ಆರೋಪಿಸಲು ಪ್ರಯತ್ನಿಸಿ, ಅದರಿಂದ ತಮ್ಮ ಯೋಗ್ಯತೆ-ಮನೋಭಾವಗಳನ್ನು ತಾವೇ ಪ್ರದರ್ಶಿಸಿ ಕೊಂಡಿರುವರು. ಪಾಪ! ಅವರೇನು ಮಾಡಬಲ್ಲರು? ಅವರು ಆ ಮನಸ್ಸನ್ನು- ಕ್ಷುದ್ರರ ಹೀನೋಕ್ತಿಗೆ ವಶವಾಗಿ ಕರ್ತವ್ಯತಾಮೂಢತೆ ಯಲ್ಲಿರುವ ತಮ್ಮ ಮನಸ್ಸನ್ನು- ಸ್ಥಿರತೆಯಲ್ಲಿರಿಸಿಕೊಳ್ಳುವಂತಾಗದ ವರೆಗೆ ಅವರಿಗೆ ತಾವು ಮಾಡುತ್ತಿರುವ ಕಾರ್ಯವಿಂತಹದೆಂದು ತಿಳಿ ಯುವದೆಂತು? ಹೇಗಾದರೂ ಆಗಲಿ, "ಮಾಡಿದ ಕರ್ಮಕ್ಕೆಮನವೇ ಸಾಕ್ಷಿ" ಯಷ್ಟೆ? ಪರಶ್ರೇಯೋಸಹಿಷ್ಣುತೆಯಿಂದ ತಮ್ಮ ಮನೋ ರಾಜ್ಯದಲ್ಲಿ ಮಾಡಿದ ಕಲ್ಪನೆಗಳ ಫಲವನ್ನು ತಾವೇ ಉಣಬೇಕಲ್ಲವೆ? ಅದಕ್ಕೆ ಹೊಣೆಗಾರರು ಬೇರೆ ಯಾರೂ ಇಲ್ಲ ಇಷ್ಟರಿಂದ ನಮ್ಮ ಉದ್ಯಮವೂ, ಸಂಕಲ್ಪವೂ, ದೃಢಭರವಸೆಯೂ ಕುಗ್ಗುವಂತೆಯೂ ಇಲ್ಲ ಈ ವಿಷಯದಲ್ಲಿ ಅವರು ನಮ್ಮನ್ನು ಧ್ವಂಸಪಡಿಸಲು ಮಾ ಡುವ ಪ್ರತಿಕೃತಿಗಳು ಹೆಚ್ಚಿದಂತೆಲ್ಲಾ ನಮ್ಮ ಅಭ್ಯುದಯವೂ ಅಷ್ಟಷ್ಟ ಕ್ಕೆ ಮೇಲೇರಿ ಬರುವುದೆಂದೂ, ತಾವು ಮಾಡುವ ಕರ್ಮದಫಲವು ತಮ್ಮನ್ನು ಎಂದೂ ಬಿಡದೆಂದು ನಂಬಿ ಅದನ್ನು ಅನುಭವಿ ಸಲು ಜಾಗರೂಕರಾಗಿರಬೇಕಾದೀತೆಂದೂ ಆ ನಮ್ಮ ದೂಷಕವೃತ್ತಿ ಯಲ್ಲಿರುವ ಪತ್ರಕರ್ತ ಭ್ರಾತೃಗಳಿಗೂ ಸ್ಥಳೀಯ ಬಂಧುಗಳಲ್ಲಿ ಯೂ ಕೇವಲ ಸಮೀಪ ಬಂಧುಗಳೆನ್ನಿಸಲ್ಪಡುವವರಲ್ಲಿ ಕೂಡ ಮರ್ಯಾದೋಲ್ಲಂಘನದ ಮಾತುಗಳಾಡಿಕೊಳ್ಳುತ್ತಿರುವ ಮಹಾಶ ಯರಲ್ಲಿಯೂ ಸೂಚಿಸಿ ಈ ಭಾಷಣವನ್ನಿಲ್ಲಿಗೆ ನಿಲ್ಲಿಸುವೆವು.

ಯಾರು ಹೇಗೆ ಹೇಳಿಕೊಂಡರೂ ಹೇಳಿಕೊಳ್ಳಲಿ,—ನಮ್ಮ ವಿದ್ಯಾಂಗದವರು ಸಹೃದಯ ಭಾವದಿಂದ ಕಲ್ಪಿಸಿರುವ ಪ್ರೋತ್ಸಾಹ-ಆಶ್ರಯಗಳಿಗಾಗಿ ನಾವು ಅವರ ಉಪಕಾರವನ್ನು ಚಿರಕಾಲ ಸ್ಮರಿಸು ವದು ನಮ್ಮ ಕರ್ತವ್ಯವು

ಇನ್ನು ಇಲಾಖಾ ಅಧ್ಯಕ್ಷರವರ ಸನ್ನಿಧಾನದಿಂದ ಬಂದಿರುವ ತಾ|| ೧೪-೯-೧೯೧೭ ನೇ ತಾರೀಖಿನ ೨೪೩೩-೪/೬೭೪ನೇ ಆಜ್ಞಾಪತ್ರದ ಪ್ರತಿಯನ್ನೇ ಈ ಮುಂದೆ ತಂದಿಟ್ಟು ವಿರಮಿಸುವೆವು.

'Has the honour to inform her that Government in their order No 2484-5—Edn 37-17-16 dated 5th September 1917, have been pleased to sanction the purchase of *50* copies of the journal "*Karnataka Nandini*" and to request that the copies of the journal may be sent to the Curator, Government Central Book Depot, Bangalore The Bill of cost may be sent to him after supplying next twelve issues of the journal ,,

ಶ್ರೀ

( ವಂದನಾಪೂರ್ವಕ )

# ಸ್ವೀಕಾರ ಮತ್ತು ಸ್ವಾಭಿಪ್ರಾಯವು.

(೧) ಭರತವ ಸಂಕ್ಷಿಪ್ತ ಇತಿಹಾಸ- (ಸದ್ಬೋಧಕ ಗ್ರಂಥಮಾಲೆ ಸಂಖ್ಯೆ ೩) ಗ್ರಂಥಕರ್ತರು ಮತ್ತು ಪ್ರಕಾಶಕರು, ಶ್ರೀಯುತರುಗಳಾದ ಎಸ್ ರಂಗಪ್ಪಯ್ಯ ಮತ್ತು ಎಸ್ ಸುಬ್ಬರಾವ ಇವರು ಮಂಗಳೂರು ಶಾರದಾ ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟು ಕ್ರೌನ್ ಅಷ್ಟಪತ್ರದ ಆಕಾರದ ೧೮ ಪುಟಗಳುಳ್ಳ ಈ ಪುಸ್ತಕದ ಕ್ರಯ ೦—೨—೦

ಈ ಪುಸ್ತಕವು ಇಹಜನ್ಮದ ನಿತ್ಯಾಸಕ್ತಿಯೆ ಬಹು ವಿಧದ ಪುನರ್ಜನ್ಮಗಳಿಗೆ ಕಾರಣವೆಂಬುದನ್ನು ಸಮರ್ಥಿಸಲು, ಮತ್ತು "ಭಾವನೆಯೆಂತಿಹುದಂತೆ ಫಲಂಗಳ್" ಎಂಬುದನ್ನು ನಿರ್ಧರಿಸಲು ಬರೆಯಲ್ಪಟ್ಟ ಪ್ರಬಂಧವು. ಇದರಲ್ಲಿ ಬಂದಿರುವ, ನಿತ್ಯಾನುಷ್ಠಾನದಲ್ಲಿಡಬಹುದಾದ,

ನಿತ್ಯವೂ ನಮಗೆ ಸಾಮಾನ್ಯವಾಗಿ ತಿಳಿದು ಬರಬಹುದಾದ ವಸ್ತುವಿಚಾರಗಳು, ವಾಚಕರ ಮನಸ್ಸಿನಲ್ಲಿ ಚೆನ್ನಾಗಿ ಬಿಂಬಿಸುವಂತೆಯೂ, ವಿವೇಚನಾಪರರ ಮನಸ್ಸಿಗೆ ಮತ್ತಷ್ಟು ಉತ್ಸಾಹ-ವಿಚಾರ-ಶಕ್ತಿಯನ್ನು ಹೆಚ್ಚಿಸುವಂತೆಯೂ ಉತ್ತಮರೀತಿಯಿಂದ ಬರೆಯಲ್ಪಟ್ಟವಾಗಿವೆ. ಅಲ್ಲದೆ ಮೊದಲಿನ ವಿಮರ್ಶಾಪೂರ್ವಕ ಪ್ರಸ್ತಾವನೆಗೆ, ಉತ್ತರದಲ್ಲಿ ಕೊಟ್ಟಿರುವ ಜಡಭಾರತ ಮಹರ್ಷಿಯ ಇತಿಹಾಸವು ವಿಶೇಷವಾದ ಕಾಂತಿಯನ್ನುಂಟು ಮಾಡುವಂತಿದೆ ಹೀಗೆ ಪುರಾಣ ಇತಿಹಾಸಗಳಲ್ಲಿ ನಿಕ್ಷಿಪ್ತವಾಗಿರುವ ಭಗವದ್ಭಕ್ತರ ಮಹಿಮೆಗಳನ್ನು ಈ ಕಾಲಕ್ಕೆ ತಕ್ಕಂಥ ಸರಣಿಯಲ್ಲಿ ವಿರಚಿಸಿ ಪ್ರಕಾಶಿಸಿರುವುದರಿಂದ ಆ ನಮ್ಮ ಧರ್ಮಬಾಂಧವರು ನಮ್ಮ ಕನ್ನಡಿಗರ ಕೃತಜ್ಞತೆಗೂ ಧನ್ಯವಾದಕ್ಕೂ ಪಾತ್ರರಾಗಿರುತ್ತಾರೆಂದು ಧಾರಾಳವಾಗಿ ಹೇಳಬಲ್ಲೆವು ಪುರಾಣ ಶ್ರವಣದಲ್ಲಿ ಉತ್ಸುಕರಾಗಿರುವ ನಮ್ಮ ಸೋದರಿಯರೆಲ್ಲರೂ ಈ ಗ್ರಂಥವನ್ನು ತರಿಸಿಕೊಂಡು ಗ್ರಂಥಕರ್ತರ ಉದ್ದೇಶ ಶ್ರಮಗಳನ್ನು ಸಾರ್ಥಕಪಡಿಸಬೇಕೆಂದು ಕೋರುವೆವು

ವಿಳಾಸ—ಶ್ರೀ ಎಸ್ ರಂಗಪ್ಪಯ್ಯನವರು
ಕಾರ್ಯದರ್ಶಿ—'ಸದ್ಬೋಧಕ ಗ್ರಂಥಮಾಲೆ'
— ಸುರತ್ಕಲ್, ದಕ್ಷಿಣ ಕನ್ನಡ.

(೨)ಶ್ರೀಭದ್ರಾಚಲ ರಾಮದಾಸ ಚರಿತ್ರೆ— (ರಾಜಹಂಸ ಗ್ರಂಥಮಾಲಾ ಪ್ರಥಮ ಕುಸುಮ) ಗ್ರಂಥಕರ್ತರು ಮತ್ತು ಪ್ರಕಾಶಕರು, ಶ್ರೀಯುತ ಕಾರುಪಲ್ಲಿ ಶಿವರಾಮಯ್ಯನವರು ಡೇಮಿ ಅಷ್ಟಪತ್ರದ ಆಕಾರದ ೨೨೭ + ೮ ಪುಟಗಳುಳ್ಳ ಇದರ ಕ್ರಯ ೧—೦—೦ ಮಾತ್ರ.

ಈ ಪುಸ್ತಕವು ಭಕ್ತಿರಸವೇ ಪ್ರಧಾನವಾಗಿ, ಹಾಸ್ಯ-ಕರುಣಾ-ರಸಗಳಿಂದೊಡಗೂಡಿ, ವಿದ್ಯಾ-ನೀತಿ-ಮತ-ಧರ್ಮ ವಿಷಯಗಳನ್ನು ಕಾಲಕ್ಕೆ ತಕ್ಕಂತೆ ವಿಮರ್ಶಿಸಿ, ಸಮಾಜದಲ್ಲಿ ಅಲ್ಲಲ್ಲಿ ತೋರಿಬರುತ್ತಿರುವ ನ್ಯೂನತೆಗಳನ್ನು ಸಾಧ್ಯವಾದಮಟ್ಟಿಗೆ ಎತ್ತಿತೋರಿಸಿ, ವಾಚಕರ ಮನಸ್ಸನ್ನು ಭಗವತ್ಸೇವೆಯಲ್ಲಿ ಅಭಿಮುಖವಾಗಿ ಮಾಡುವಂತೆ ಬರೆ

ಯಲ್ಪಟ್ಟಿದೆ. ಗ್ರಂಥಕರ್ತರು ತೆಲುಗುಭಾಷೆಯಲ್ಲಿರುವ "ಶ್ರೀಭದ್ರಾಚಲ ರಾಮದಾಸ ಚರಿತ್ರೆ"ಯನ್ನು ನಾಟಕ ರೂಪದಿಂದ ಕನ್ನಡಕ್ಕೆ ಪರಿವರ್ತಿಸಿರುವರು, ಅಭಿನಯಕ್ಕೆ ಅಷ್ಟು ಸುಲಭಸಾಧ್ಯವಲ್ಲವೆಂದು ಹೇಳಬಹುದಾದರೂ ಭಗವದ್ಗುಣಕಥನದಲ್ಲಿ ಉತ್ಸುಕರಾಗಿರುವ ನಮ್ಮ ಸೋದರಿಯರ ಪಠನಕ್ಕೆ ತುಂಬಾ ಸಹಕಾರಿಯಾಗಿದೆ. ಕಡೆಯಲ್ಲಿ ಅನುಬಂಧಗಳಾಗಿ ಕೊಟ್ಟಿರುವ ಹಾಡುಗಳೂ ನಮ್ಮ ಸೋದರಿಯರು ಹಾಡಲು ತಕ್ಕಮಟ್ಟಿಗೆ ಲಲಿತವಾಗಿಯೇ ಇವೆ.

ಪುಸ್ತಕವು ದೊರೆಯುವ ವಿಳಾಸ—ಶ್ರೀ. ಕಾ ಶಿವರಾಮಯ್ಯನವರು
ಪ್ರಕಾಶಕರು "ಆನಂದಚಂದ್ರಿಕಾ ಡಿಪೊ"
ಚಾಮರಾಜ ಪೇಟೆ, ಬೆಂಗಳೂರು ಸಿಟಿ.

—೦—

(೩) **ಸೊಬಗಿನಬಳ್ಳಿ** ( ಕಾದಂಬರೀ ಸಂಗ್ರಹ ಗ್ರಂಥಮಾಲಾ ನಂ. ೩೩. ) ಗ್ರಂಥಕರ್ತರು ಶ್ರೀ ಎಮ್ ಶಿವಪ್ಪಯ್ಯನವರು ಸಂಪಾದಕರು— ಕನ್ನಡಕೋಗಿಲೆ ಮಂಗಳೂರು ಇವರು ಡೆಮ್ಮಿ ಅಷ್ಟಪತ್ರದ ಆಕಾರದ ೨೦ ಪುಟಗಳು ಬೆಲೆ ೦—೨—೦.

ಈ ಪುಸ್ತಕವು ಭಾಗವತ ಪುರಾಣೋಕ್ತವಾಗಿರುವ ಪ್ರದ್ಯುಮ್ನನ ಇತಿಹಾಸವನ್ನು ಎಂದರೆ ಮನ್ಮಥನ ವಿಚಾರ, ಪ್ರದ್ಯುಮ್ನನ ಉತ್ಪತ್ತಿ, ಶಂಭರಾಸುರವಧೆ, ರತಿಯ ಕಲ್ಯಾಣ, ಇತ್ಯಾದಿ ಕಥಾ ಭಾಗಗಳನ್ನು ಒಳಕೊಂಡು ಶರಷಟ್ಪದಿ, ಸಾಂಗತ್ಯ ರಗಳೆಗಳರೂಪದಿಂದ ರಚಿಸಲ್ಪಟ್ಟಿರುವುದು ಇದರಲ್ಲಿ ೭ ಮುಗುಳುಗಳೂ, ಒಟ್ಟು ೧೨೪ ಪದ್ಯಗಳೂ ಇರುವವು ಪುಸ್ತಕದ ಕಡೆಯಲ್ಲಿ ಗದ್ಯಾನುವಾದವು ಕೊಡಲ್ಪಟ್ಟಿರುವದು. ಈ ಗ್ರಂಥರಚನೆಯಲ್ಲಿ ಈ ನಮ್ಮಧರ್ಮಬಂಧುಗಳು ಪಟ್ಟಿರುವ ಶ್ರಮವನ್ನು ವರ್ಣಿಸುವಂತಿಲ್ಲ ದೇಶಸೇವೆಗಾಗಿಯೂ ಭಾಷಾ ಉದ್ಧಾರಕ್ಕಾಗಿಯೂ, ಸೋದರಿಯರ ಸೌಜನ್ಯಾಭಿವೃದ್ಧಿಗಾ

ಗಿಯೂ, ಮಾಡುಪಡುತ್ತಿರುವವರು ಇಂತಹ ಪುರಾಣ, ಇತಿಹಾಸ, ವಿಚಾರಗಳನ್ನು ತಮ್ಮ ಸೋದರಿಯರು ಸುಲಭವಾಗಿ ಗ್ರಹಿಸುವಂತೆ ಗದ್ಯರೂಪವಾಗಿಯಾಗಲಿ, ಇಲ್ಲವೇ ಇನ್ನೂ ಅರ್ಥ ಪುಷ್ಟಿಯನ್ನುಂಟು ಮಾಡಬಹುದಾದ ಷಟ್ಪದಿಯ ಕಾವ್ಯ ರೂಪವಾಗಿಯಾಗಲಿ, ರಚಿಸಿದ್ದರೆ ನಮ್ಮವರಿಗೆ ಇನ್ನೂ ಹೆಚ್ಚಿನ ಪ್ರಯೋಜನವು ತೋರುತ್ತಿದ್ದಿತು. ಮುಖ್ಯವಾಗಿ ಪುಸ್ತಕವು ಅವಲೋಕನೀಯವೆಂದು ಹೇಳಿದರೆ ಸಾಕಾಗಿರುವುದು.

—೦—

(೪) ಪುಣೆಯ ದಕ್ಷಿಣ ವಿದ್ಯಾಲಯ ತ್ರೈಮಾಸಿಕ:—(ಸಂಪುಟ ೮ ಸಂಚಿಕೆ ೧,) ಬೆಲೆ ಪ್ರತಿ ಸಂಚಿಕೆಗೆ ೦—೮—೦

ಈ ತ್ರೈಮಾಸಿಕ ಪತ್ರಿಕೆಯನ್ನು ನಾವು ಅತ್ಯಾದರದಿಂದ ಓದಿದೆವು. ವಿದ್ಯಾರ್ಥಿಗಳ, ಕೇವಲ ಉಚ್ಚ ತರಗತಿಯ ವಿದ್ಯಾಭ್ಯಾಸದಲ್ಲಿರುವ ವಿದ್ಯಾರ್ಥಿಗಳ, ಕರ್ತೃತ್ವ ಶಕ್ತಿಯಿಂದ, ಇಂಗ್ಲೀಷು, ಮರಾಠಿ, ಕನ್ನಡಗಳೆಂಬ ಮೂರೂ ಭಾಷೆಗಳನ್ನು ಒಳಕೊಂಡು, ಒಂದೊಂದು ಭಾಷಾ ಭಾಗಕ್ಕೂ ಒಬ್ಬೊಬ್ಬರು ಸಂಪಾದಕರಾಗಿ ನಿಂತು, ಸೌಭ್ರಾತೃತ್ವದಿಂದ ವಿದ್ಯಾರ್ಥಿಗಳೆಲ್ಲರೂ ಏಕೀಭವಿಸಿ ಸೇವಿಸುತ್ತಿರಲು, ಸೇವಾಕಾರ್ಯದಲ್ಲಿ ಅತ್ಯಂತ ದಕ್ಷತೆಯನ್ನು ಪ್ರದರ್ಶಿಸುತ್ತಿರುವ ಈ ಪತ್ರಿಕೆಯಲ್ಲಿ ಈ ಸಂಚಿಕೆಯ ಕರ್ನಾಟಕ ಭಾಷಾಭಾಗದಲ್ಲಿ ಪ್ರಕಟವಾಗಿರುವ ಸ್ವವಿಷಯ, ಸಾದಿಯ ಬೋಧಪರನುಡಿಗಳು, ಜಗದೀಶನ ಮಹಿಮೆ, ಹರ್ಷರಾಜ ಬಾಣಕವಿಗಳ ವಿಚಾರ, ಮೃತ್ಯುವು ಸಮಕಾರಿಯು, ನಮ್ಮ ಜೀವಿತದ ಪ್ರಥಮಪುಟ ಈ ಲೇಖನಗಳು ನಮಗೆ ಅತ್ಯಾನಂದವನ್ನುಂಟುಮಾಡಿದುವು ಮುಖ್ಯವಾಗಿ ದಕ್ಷಿಣ ವಿದ್ಯಾಲಯದ ವಿದ್ಯಾರ್ಥಿಗಳಲ್ಲಿರುವ ದೇಶಭಕ್ತಿ, ಧರ್ಮಶ್ರದ್ಧೆ, ಭಾಷಾಭಿಮಾನ, ಸೌಭ್ರಾತೃತ್ವ, ಸಮತಾಭಾವ, ಐಕಮತ್ಯಗಳೆಂಬ ಷಡ್ಗುಣಗಳು ನಮ್ಮೆಲ್ಲರಿಗೂ ಅನುಕರಣೀಯವಾಗಿರುವುವು. ಎಂದರೆ ತಮ್ಮ ತಮ್ಮಲ್ಲಿ ಮನ ಕಷಾಯಗಳನ್ನು ಕಲ್ಪಿಸಿ, ಕೊರಚಾಡುತ್ತಿರುವ

ನಮ್ಮ ಬಂಧು-ಭಗಿನಿಯರೆಲ್ಲರಿಗೂ ಇದು ಮಾರ್ಗದರ್ಶಕವಾಗಿದ್ದು ನಮ್ಮಲ್ಲಿಯೂ, ಆ ಮೇಲಿನ ಗುಣಗಳು ರೂಢಮೂಲವಾಗಿ ಬೆಳೆಯು ವಂತಾಗಬೇಕೆಂಬುದೇ ನಮ್ಮ ಅಭಿಪ್ರಾಯವು

—o—

(೫) ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು—(ಸಂಪುಟ ೨ ಸಂಚಿಕೆ ೧—೩) ಸಾಹಿತ್ಯ ಪರಿಷತ್ತಿನವರಿಂದ ಪ್ರಕಾಶಿಸಲ್ಪಡುವ ತ್ರೈಮಾಸಿಕ ಪತ್ರಿಕೆ. ಪ್ರತಿ ಸಂಚಿಕೆಯೂ ೧೦೦ ಪುಟಗಳನ್ನೊಳಕೊಂಡು ಹೊರಡುವುದು ವಾರ್ಷಿಕ ವರ್ಗಣಿ ೩—೦—೦ ಬಿಡಿ ಸಂಚಿಕೆಗೆ ೧—೦—೦

ಕರ್ಣಾಟಕ ಭಾಷಾಸಂಸ್ಕರಣಕ್ಕಾಗಿಯೇ ಹೊರಟಿರುವ ಈ ಪತ್ರಿಕೆಯ ವಿಷಯದಲ್ಲಿಯಾಗಲಿ, ಭಾಷಾ ಏಕರೂಪತೆಗಾಗಿ ಸ್ಥಾಪಿತವಾಗಿರುವ ಸಾಹಿತ್ಯ ಪರಿಷತ್ತಿನ ವಿಚಾರವಾಗಿಯಾಗಲಿ, ನಾವು ಪ್ರಸ್ತಾಪಿಸುವವರಾಗಿಲ್ಲ ಏಕೆಂದರೆ ಅವೆರಡೂ ಭಾಗಗಳನ್ನು ಇನ್ನೂ ನಮ್ಮ ಸ್ತ್ರೀವರ್ಗದವರ ಪಾಲಿಗೆ ಸೇರಿದುದಾಗಿಲ್ಲವೆಂದೂ ಕೇವಲ ತಮಗೆ-ತಮ್ಮ ಪಾಲಿಗೆ ಮಾತ್ರವೇ ಸೇರಿದುದೆಂದು ತಿಳಿದು, ನಮ್ಮ ಬಾಂಧವರು ವಿಶೇಷ ಸಾಹಸ, ಪೌರುಷ, ಪಾಂಡಿತ್ಯಗಳಿಂದ ನಡೆಯಿಸುತ್ತಿರುವ ಈಬಲವತ್ಕಾರ್ಯವು ನಮ್ಮ ವಿಚಾರಕ್ಕೆ ಮೀರಿದುದೆಂದೂ ಹೇಳಬೇಕಾಗಿದೆ ಹಾಗಿಲ್ಲವೆಂದರೆ, ಈ ವರೆಗೆ ಹೊರಟಿರುವ ಇಷ್ಟು ಸಂಚಿಕೆಗಳಲ್ಲಿ ನಮ್ಮವರ ಉಪಯೋಗಕ್ಕಾಗಿಯಾಗಲಿ ನಮ್ಮವರ ಜ್ಞಾನಾರ್ಜನೆ-ಅಭ್ಯುದಯಗಳಿಗಾಗಿಯಾಗಲಿ, ಅಲ್ಪ ಸ್ವಲ್ಪ ಭಾಗವಾದರೂ ಉಪಯೋಗಿಸಲ್ಪಡುತ್ತಿದ್ದಿತು ಈಗ ಹಾಗಾಗಿಲ್ಲ ನಮ್ಮ ಭಂಧುಗಳ ಉದ್ದೇಶವೆಂದರೆ, ಕೇವಲ ಗ್ರಾಂಥಿಕ ರೂಪಗಳ ಏಕೀಕರಣ, ನಮ್ಮ ಕರ್ಣಾಟಕದಲ್ಲಿ ವಾಙ್ಮಯಾಭಿವೃದ್ಧಿ, ಇವೆರಡೇ ಆಗಿರುವದರಿಂದ ಮೇಲಿನ ವಿಚಾರಗಳು ಅವರಿಗೆ ಅಪ್ರಕೃತವೇ ಸರಿ. ಅದು ಹೇಗೂ ಇರಲಿ, ನಮ್ಮ ಬಾಂಧವರು ಪಡುತ್ತಿರುವ ಶ್ರಮಕ್ಕೂ, ಸಾಹಸಕ್ಕೂ, ನಾ

ವೃತ್ತಿಯನ್ನು ಮನಃಪೂರ್ವಕವಾಗಿ ವಂದಿಸುವೆವಲ್ಲದೆ ಈ ಮೂಲಕ ಧನ್ಯವಾದಗಳನ್ನೂ ಒಪ್ಪಿಸಿರುವೆವು

ಆದರೂ ಪರಿಷತ್ತಿನವರಲ್ಲಿಯೂ, ಪರಿಷತ್ಪ್ರಕಾಶ ವ್ಯವಸ್ಥಾಪಕರಲ್ಲಿಯೂ ನಮ್ಮ ನಮ್ರ ಪ್ರಾರ್ಥನೆಯೊಂದು —

'ಗೌರವಾನ್ವಿತರಾದ ಪ್ರಿಯ ಬಾಂಧವರೇ! ಭಾಷಾಭಿಮಾನಿಗಳೇ! ವಿಚಾರ ಮಾಡಿರಿ, ನಿಮ್ಮ ಅನೇಕ ವರ್ಷಗಳಿಂದ ನಿಮ್ಮ ದೇಶ ಮಾತೆಯು ಬೇರೆ ಬೇರೆಯವರ ಭಾಷಾ ಬಲದಿಂದ ದಿಗ್ವಿಜಯಕ್ಕೆ ಎಷ್ಟು ಮಾತ್ರ ಕೆಣಕಲ್ಪಟ್ಟು ದಣಿಸುತ್ತಿದ್ದಿರಾದರೂ ನಿಮ್ಮ ಸೋದರಿಯರ ಹಿತಾರ್ಥವಾಗಿ ದುಡಿಯಲು ಮನಸ್ಸನ್ನೇಕೆ ಕೊಡಲಿಲ್ಲ? ಭಾಷಾ ಸಂಸ್ಕರಣ ಮಾಡುವವರೆಂದು ಹೇಳಿಕೊಳ್ಳುವ ನೀವು, ತಮ್ಮ ತಮ್ಮ ಪತ್ನೀಪರಿವಾರದಲ್ಲಿಯಾದರೂ ಭಾಷಾಭಿಮಾನಗಳನ್ನುಂಟುಮಾಡುವ ಪ್ರಯತ್ನ ಮಾಡದೆ, ತಮ್ಮ ಪತ್ನಿಯರು, ತಮ್ಮ ಸೋದರಿಯರು ಅಕ್ಷರಸ್ಥರಲ್ಲವೆಂದೂ ಅಂತಹರಲ್ಲಿ ಸಾಹಿತ್ಯ ಕಲ್ಪನೆಯೆಂಬುದು ಉಚಿತಮೂಲಕವಾಗಿಯೂ ಪ್ರಾಪ್ತವಾಗಿಯೂ ಇಲ್ಲವೆಂದು ನಿರ್ಮಾತೃರನ್ನು ನೋಡಿಯೂ ಸುಮ್ಮನಿರುವಿರೇಕೆ? ಇದೇನು? ಭಾಷಾಜ್ಞಾನವು ನಿಮಗೆ ಮಾತ್ರವೇ ಆವಶ್ಯಕವೇ? ಅವರಿಗೆ ಆವಶ್ಯಕವಿಲ್ಲವೋ? ಅವಶ್ಯಕವಿದ್ದರೆ ಅವರಿಗೆ ಅನುಕೂಲಗಳನ್ನು ಕಲ್ಪಿಸುವುದನ್ನೇಕೆ ಬಿಟ್ಟಿರುವಿರಿ? ಮರೆತಿರುವಿರೆ? ಹಾಗಿದ್ದರೆ ನೆನಪು ಮಾಡಿಕೊಳ್ಳಿರಿ, ಭ್ರಾತೃವರ್ಗದವರೇ! ಇದೇ ಮತ್ತೆ ಬೇಡುವೆವು ನಮ್ಮ ಭಾಷೆಯು ಈವರೆಗೆ ಜೀವಿಸಿರುವುದು ನಮ್ಮ ಸ್ತ್ರೀಜನಾಂಗದವರಲ್ಲಿಯೇ ಮುಂದೆ ಸ್ಥಿರಪ್ರಕಾಶವನ್ನು ಹೊಂದಬೇಕಾದರೂ ಅವರ ಪ್ರೋತ್ಸಾಹವು ಒಲವಿಂದಲೇ, ಹೇಗನ್ನುವಿರೋ? ಉತ್ಪತ್ತಿಗೆ ನೀವು ಅಧಿಕಾರಿಗಳಾಗಿರುವಿರಾದರೂ ಸ್ಥಿತಿಗೆ ಸತಿಯರೇ ನಿಲ್ಲಬೇಕು. ಹಾಗಿಲ್ಲದಿದ್ದರೆ ನಿಮ್ಮ ನಿಮ್ಮ ಸಂತಾನ ಸಂರಕ್ಷಣೆಯ ಭಾರವು ನಿಮ್ಮ ನಿಮ್ಮ ಸ್ತ್ರೀಯರ ಪಾಲಿಗೆ ನೇ

ರಿದ. ದಾಗುತ್ತಿರಲಿಲ್ಲವಷ್ಟೆ! ಹಾಗೆಂದರೆ ಪೋಷಣೆಯೂ ಪ್ರಸಾರವೂ ಅವರನ್ನೇ ಸೇರಿದಂತಾಯಿತಲ್ಲವೆ? ಹಾಗಿದ್ದರೆ, ಇನ್ನು ನಮ್ಮ ಸ್ತ್ರೀವರ್ಗದವರ ಕರ್ತವ್ಯದ ವಿಚಾರದಲ್ಲಿಯೂ ಅವರ ಕರ್ತವ್ಯ ಸಿದ್ಧಿಗೆ ಬೇಕಾಗುವ ಸಾಧನ ಸಹಾಯಸಂಪತ್ತಿಗಳ ವಿಚಾರದಲ್ಲಿಯೂ ಚಿಂತಿಸುವಿರಲ್ಲವೆ? ಹಾಗೆ ಮಾಡಲುಳ್ಳವರಾಗಿದ್ದರೆ ನಮ್ಮ ಸನ್ಮಾನ್ಯಭ್ರಾತೃಗಳೇ!—"ಸಂಪಾದಕರಿಗೆ ಪರಸ್ಪರ ಮನಸ್ತಾಪವೆಂದೂ, ಒಬ್ಬರ ಅಭಿಪ್ರಾಯವನ್ನು ಮತ್ತೊಬ್ಬರು ಅನುಮೋದಿಸದೆ ಭಿನ್ನಭಿನ್ನ ಮತಗಳಿಂದ ಒಬ್ಬರೊಬ್ಬರು ಟೀಕೆಗಳನ್ನು ದೂರಿಸುತ್ತಿರುವರು" ಎಂಬ ಜನಾಪವಾದವನ್ನು ತೊಲಗಲಾಡಿಸಲು ದಯೆಯನ್ನು ತೋರಿಸಿ ಆ ನಿಮ್ಮ ಪರಸ್ಪರ ಐಕಮತ್ಯ, ಸೌಭ್ರಾತೃತ್ವ ಸಮತಾಭಾವಗಳನ್ನು ನೋಡಿ ನಮ್ಮವರೆಲ್ಲರೂ ಉತ್ಸಾಹಿತರಾಗಿ ಎದ್ದು ಬಂದು ನಿಮ್ಮನ್ನು ಧನ್ಯವಾದಗಳೊಡನೆ ಅಭಿನಂದಿಸುವಂತೆ ಮಾಡುವಿರೆಂದು ಸಂಕಲ್ಪಿಸಿರಿ."

ಇಷ್ಟನ್ನು ಮಾತ್ರ ನಿವೇದಿಸುವುದಲ್ಲದೆ ಮತ್ತಾವ ವಿಮರ್ಶೆಯನ್ನೂ ಮಾಡಲಾರೆವು. ಆದರೂ ಈಗಿನ ಈ ಎರಡು ಸಂಚಿಕೆಗಳಲ್ಲಿಯೂ ಬಂದಿರುವ ಲೇಖನಗಳೊಳಗೆ ಜಗದ್ವಿಖ್ಯಾತರಾದ ಮಹಾವರಕವಿಗಳು ಮಹಾಲಕ್ಷ್ಮೀಯ ಪ್ರಾಚೀನ ಸಾಹಿತ್ಯ ವಿಮರ್ಶೆ, ಗ್ರಂಥಕರ್ತರೂಪಗಳ ಪರಿಶೋಧನ, ಗೋಪಾಲರಾಯರ ಜೀವಿತಚರಿತ್ರೆಯ ಸಾರ, ಇಂತಿಷ್ಟು ಲೇಖನಗಳನ್ನೂ ಓದಿ ಆನಂದಪಟ್ಟೆವು. ಭಗವಂತನು ಆ ನಮ್ಮ ಸನ್ಮಾನ್ಯಭ್ರಾತೃಗಳ ತ್ರಿವರ್ಗ್ಯ ಉದ್ಯಮಶೀಲ್ಯ ಸಫಲವನ್ನು ಅನುಗ್ರಹಿಸಿ, ಆಮೂಲಕ ನಮ್ಮ ಸ್ತ್ರೀಜನಾಂಗದ ಸೌಜನ್ಯಾಭಿವೃದ್ಧಿಗೂ ಸಾಕಷ್ಟು ಪ್ರಯತ್ನಗಳು ನಡೆಯುವಂತಾಗಲೆಂದು ಮನಃಪೂರ್ವಕವಾಗಿ ಪ್ರಾರ್ಥಿಸುವೆವು.